
ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೧೧

ವಚನ ಸಾಹಿತ್ಯ : ಭಾಗ-೩



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩





ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೧೧ : ವಚನ ಸಾಹಿತ್ಯ : ಭಾಗ-೩

❖

• ಸಂಕೀರ್ಣ ವಚನ ಸಂಪುಟ : ಒಂದು

❖

ಪ್ರಧಾನ ಸಂಪಾದಕರು ಮತ್ತು ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

COMPLETE WORK OF DR. M.M.KALBURGI
VOLUME - 11 : VACHANA SAHITY : BHAGA-3
Edited by : Dr. Veeranna Rajur, Dharwad

Published by : Dr. P.G. Halakatti Research Centre
B.L.D.E. Association, Vijayapur, Karnatak

First Edition : 2019
Pages : xxxii + 660=692

Copies: 1000
Price Rs: 350/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : **The Print Point**, No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ. ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೧೧-ವಚನ ಸಾಹಿತ್ಯ : ಭಾಗ-೩
ಸಂಪಾದಕರು : ಡಾ. ವೀರಣ್ಣ ರಾಜೂರ, ಧಾರವಾಡ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೧೯
ಪುಟಗಳು: xxxii + ೬೬೦=೬೯೨

ಪ್ರತಿಗಳು: ೧೦೦೦
ಬೆಲೆ ರೂ: ೩೫೦/-

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು-೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ

ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ

ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ ಸಂಶೋಧನೆ, ವಿಮರ್ಶೆ, ನಾಡು–ನುಡಿ–ಸಂಸ್ಕೃತಿ–ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ–ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ–ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ–ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ'

ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ,

೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ-೧, ೧೮. ಶಾಸನ ವ್ಯಾಸಂಗ-೨. ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ-ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ-೧, ೩೧. ಮಾರ್ಗ-೨, ೩೨. ಮಾರ್ಗ-೩, ೩೩. ಮಾರ್ಗ-೪, ೩೪. ಮಾರ್ಗ-೫, ೩೫. ಮಾರ್ಗ-೬, ೩೬. ಮಾರ್ಗ-೭, ೩೭. ಮಾರ್ಗ-೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):
ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ-೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ-೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ-೨, ೫೦. ವಚನ ಸಂಕಲನ ಸಂಪುಟ-೪, ೫೧. ವಚನ ಸಂಕಲನ ಸಂಪುಟ-೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ-೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ-೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ-೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ-೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ-೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ-೨, ೯೧. ಬಸವ ಮಾರ್ಗ-೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧-೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ-೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು-ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ-ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ-ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ-ಕರ್ನಾಟಕ ಸರ್ಕಾರದ ಧನ ಸಹಾಯದಿಂದ-ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪-೭-೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ-ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩-೯-೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ-ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**
೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**
೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ
೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**
೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಲಿಂಗ ಕಾಪಸೆ**
೧. ಚೆನ್ನಬಸವಣ್ಣನವರ ವಚನ ಮಹಾಸಂಪುಟ
೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ **–ಸಂ. ಡಾ. ವೀರಣ್ಣ ರಾಜೂರ**
೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ **–ಸಂ. ಡಾ. ವೀರಣ್ಣ ರಾಜೂರ**
೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ **–ಸಂ. ಡಾ. ವೀರಣ್ಣ ರಾಜೂರ**
೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ **–ಸಂ. ಡಾ. ವೀರಣ್ಣ ರಾಜೂರ**
೧. ಪರಮಾನಂದ ಸುಧೆ
೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ –ಸಂ. ಶಶಿಧರ ತೋಡ್ಕರ

೧. ವಚನ ಸಂಕಲನ–೪
೨. ವಚನ ಸಂಕಲನ–೬
೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ –ಸಂ. ಡಾ. ವೀರಣ್ಣ ರಾಜೂರ

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ –ಸಂ. ಡಾ. ಬಿ.ವ್ಹಿ. ಶಿರೂರ

೧. ಮಲ್ಲಿನಾಥ ಪುರಾಣ ಸಂಗ್ರಹ
೨. ಶಬ್ದಮಣಿದರ್ಪಣ ಸಂಗ್ರಹ
೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ
೪. ಆದಯ್ಯನ ಲಘುಕೃತಿಗಳು
೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ –ಸಂ. ಡಾ. ಎಫ್. ಟಿ. ಹಳ್ಳಿಕೇರಿ

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ –ಸಂ. ಡಾ. ಎಫ್. ಟಿ. ಹಳ್ಳಿಕೇರಿ

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ-೬ –ಸಂ. ಡಾ. ಹನುಮಂತ ಮೇಲಿನಮನಿ

೧. ಹೊಸಕುಮಾರರಾಮನ ಸಾಂಗತ್ಯ
೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ-೭ –ಸಂ. ಡಾ. ಹನುಮಂತ ಮೇಲಿನಮನಿ

೧. ಕೊಮಾರ ರಾಮಯ್ಯನ ಚರಿತ್ರೆ
೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ-೮ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಸಿರುಮಣ ನಾಯಕನ ಸಾಂಗತ್ಯ
೨. ಸಿರುಮನ ಚರಿತೆ
೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ-೯ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ
೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ-೧೦ –ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ-೧
೨. ಕಿತ್ತೂರ ಸಂಸ್ಥಾನ ಸಾಹಿತ್ಯ-೨
೩. ಕಿತ್ತೂರ ಸಂಸ್ಥಾನ ಸಾಹಿತ್ಯ-೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ-೧ –ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ
೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ
೩. ಮಡಿವಾಳಪ್ಪ ಸಾಸನೂರ ಬದುಕು-ಬರಹ

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ-೨ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ-೩ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ **–ಸಂ. ಡಾ. ವಿ.ಎಸ್. ಮಾಳಿ**
೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ **–ಸಂ. ಡಾ. ಕೆ. ರವೀಂದ್ರನಾಥ**
ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ **–ಸಂ. ಡಾ. ಕೆ. ರವೀಂದ್ರನಾಥ**
ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ **–ಸಂ. ಡಾ. ಕೆ. ರವೀಂದ್ರನಾಥ**
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ **–ಸಂ. ಡಾ. ಕೆ. ರವೀಂದ್ರನಾಥ**
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ **–ಸಂ. ಡಾ. ಕೆ. ರವೀಂದ್ರನಾಥ**
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಚಿತ್ರ **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಪತ್ರ–ವರದಿಗಳು **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಆಡಿಯೋ–ವಿಡಿಯೋ **–ಡಾ. ವಿ.ಡಿ. ಐಹೊಳ್ಳಿ**

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ

ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ-೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು-ಪುನರುಕ್ತಿಕಾರಣವಾಗಿ- ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು-ಅವು ಅಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ-ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು-ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು-ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ-ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ-ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ–ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು–ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ–ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ–ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

‘ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ’ ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು

ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ-ವಿಶ್ವಾಸ-ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ-ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ-ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬುರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ–ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.

- ❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ–ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ,

ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ವೀರಣ್ಣ ರಾಜೂರ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ವೀರಣ್ಣ ರಾಜೂರ

'ಸಮಗ್ರ ವಚನ ಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟಣ ಯೋಜನೆ' ಡಾ. ಎಂ.ಎಂ. ಕಲಬುರ್ಗಿ ಅವರು ರೂಪಿಸಿದ ಒಂದು ಐತಿಹಾಸಿಕ ಮಹತ್ವದ ಪ್ರತಿಷ್ಠಿತ ಯೋಜನೆ. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ಕೈಕೊಂಡ ಮಹತ್ವಾಕಾಂಕ್ಷೆಯ ಯೋಜನೆಯಿದು. ಎಲ್ಲ ಶರಣರ ಎಲ್ಲ ವಚನಗಳನ್ನು ಒಳಗೊಂಡ ಇದು ಒಂದು ಕೃತಿಯ ಪ್ರಕಟಣೆಯಲ್ಲ; ಒಂದು ಸಾಹಿತ್ಯ ಪ್ರಕಾರದ ಪ್ರಕಟಣೆ. ಈ ಯೋಜನೆಯ ಅಡಿಯಲ್ಲಿ ಇದುವರೆಗೆ ದೊರೆತ ಎಲ್ಲ ವಚನಗಳನ್ನು ೧೪ ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಶಿವಶರಣೆಯರ ವಚನಗಳನ್ನು ಒಂದೊಂದು ಪ್ರತ್ಯೇಕ ಸಂಪುಟಗಳಲ್ಲಿ ಅಳವಡಿಸಿದರೆ, ಉಳಿದ ವಚನಕಾರರ ವಚನಗಳನ್ನು 'ಸಂಕೀರ್ಣ ವಚನ ಸಂಪುಟ' ಎನ್ನುವ ಹೆಸರಿನಲ್ಲಿ ಜೋಡಿಸಲಾಗಿದೆ. ಇವುಗಳ ಸಂಖ್ಯೆ ಒಂಬತ್ತು. ಒಟ್ಟು ವಚನಕಾರರನ್ನು 'ಬಸವಯುಗದ ವಚನಕಾರರು' ಮತ್ತು 'ಬಸವೋತ್ತರ ಯುಗದ ವಚನಕಾರರು' ಎಂದು ವಿಭಾಗಿಸಲಾಗಿದೆ. ಮೊದಲ ಒಂಬತ್ತು ಸಂಪುಟ ಬಸವಯುಗದ ವಚನಕಾರರಿಗೆ ಸಂಬಂಧಿಸಿದರೆ, ಉಳಿದ ಐದು ಬಸವೋತ್ತರಯುಗದ ವಚನಕಾರರಿಗೆ ಸಂಬಂಧಪಟ್ಟಿವೆ. ಸಂಕೀರ್ಣ ವಚನ ಸಂಪುಟಗಳು ಆರನೆಯ ಸಂಪುಟದಿಂದ ಆರಂಭವಾಗುತ್ತವೆ.

ಪ್ರಸ್ತುತ ಸಂಪುಟ ಈ ಯೋಜನೆಯ ಒಟ್ಟು ಸಂಖ್ಯೆಯಲ್ಲಿ ಆರನೆಯದು; ಸಂಕೀರ್ಣ ವಚನ ಸಂಪುಟಗಳಲ್ಲಿ ಮೊದಲನೆಯದು. ಇದರಲ್ಲಿ ೨೪ ಜನ ಶರಣರ ೧೭೩೧ ವಚನಗಳನ್ನು ಸಂಗ್ರಹಿಸಲಾಗಿದೆ. ವಚನಕಾರರನ್ನು ಅಕಾರಾದಿಯಾಗಿ ಯೋಜಿಸಲಾಗಿದೆ. ಇದರಲ್ಲಿ ಸ್ವರ ವರ್ಗದ ಶರಣರ ವಚನಗಳು–ಅಂದರೆ 'ಅ' ದಿಂದ 'ಒ' ದ ವರೆಗಿನ ಶರಣರ ವಚನಗಳು ಸಮಾವೇಶಗೊಂಡಿವೆ. ಅಂಗಸೋಂಕಿನ ಲಿಂಗತಂದೆಯ ವಚನಗಳಿಂದ ಒಕ್ಕಲಿಗ ಮುದ್ದಣ್ಣನ ವಚನಗಳವರೆಗೆ ಇಲ್ಲಿನ ವ್ಯಾಪ್ತಿ.

ವಚನಗಳನ್ನು ಒಬ್ಬೊಬ್ಬ ವಚನಕಾರನ ಹೆಸರಿನಡಿಯಲ್ಲಿ ಅಣಿಗೊಳಿಸಲಾಗಿದೆ. ಮೂಲದಲ್ಲಿ ವಚನಗಳು ಸ್ಥಲಕ್ರಮದಲ್ಲಿದ್ದರೆ ಹಾಗೆಯೇ ಉಳಿಸಿಕೊಳ್ಳಲಾಗಿದೆ. ಸ್ಥಲರಹಿತವಾಗಿದ್ದರೆ ಅಕಾರಾದಿಯಾಗಿ ಜೋಡಿಸಲಾಗಿದೆ. ಈ ವಚನಗಳನ್ನು ೬೪ ಪ್ರಾಚೀನ ಆಕರಗಳಿಂದ ಹೆಕ್ಕಿ ತೆಗೆಯಲಾಗಿದೆ.

ಜನಪ್ರಿಯ ಆವೃತ್ತಿ ಇದಾಗಿರುವುದರಿಂದ ವಚನಗಳಿಗೆ ಪಾಠಾಂತರಗಳನ್ನು ಗುರುತಿಸಿಲ್ಲ. ಎಲ್ಲ ಆಕರಗಳನ್ನು ಗಮನಿಸಿ, ಶುದ್ಧಪಾಠವನ್ನು ಮಾತ್ರ ನಿರ್ಣಯಿಸಿ ಸ್ವೀಕರಿಸಲಾಗಿದೆ. ಆರಂಭದ

ಪ್ರಸ್ತಾವನೆಯಲ್ಲಿ ಇಲ್ಲಿ ಅಳವಟ್ಟ ವಚನಕಾರರ ಸಂಕ್ಷಿಪ್ತ ಪರಿಚಯ, ವಚನಗಳ ವಿಶೇಷತೆ, ವಚನ ಪರಿಷ್ಕರಣದಲ್ಲಿ ಎದುರಾದ ಸಮಸ್ಯೆಗಳು, ಅದಕ್ಕೆ ತಾವು ಕಂಡುಕೊಂಡ ಪರಿಹಾರಗಳನ್ನು ಕುರಿತು ತಿಳಿಸಿದ್ದಾರೆ. ಅನುಬಂಧದಲ್ಲಿ ಸ್ಥಲಕ್ರಮದ ವಚನಗಳ ಅಕಾರಾದಿ, ಕಠಿಣ ಪದಕೋಶ, ಆಕರಗಳ ವಿವರ ಕೊಡಲಾಗಿದೆ.

ಈ ಸಂಪುಟಗಳು ಮೂರು ಆವೃತ್ತಿಗಳಲ್ಲಿ ಹೊರಬಂದಿವೆ: ಮೊದಲ ಆವೃತ್ತಿ ೧೯೯೩ ರಲ್ಲಿ; ಎರಡನೆಯದು ೨೦೦೧ ರಲ್ಲಿ; ಮೂರನೆಯದು ೨೦೧೬ ರಲ್ಲಿ. ಒಂದು ಆವೃತ್ತಿಯಿಂದ ಮತ್ತೊಂದಕ್ಕೆ ಬರುವಲ್ಲಿ ಕೆಲವು ವಚನಗಳು ಹೆಚ್ಚಿಗೆ ದೊರೆತು ಸೇರ್ಪಡೆಯಾದರೆ, ಮತ್ತೆ ಕೆಲವು ವಚನಗಳು ಪುನರುಕ್ತಿ ಅಥವಾ ಅಂಕಿತ ಪಲ್ಲಟದಿಂದ ಬೇರೆ ವಚನಕಾರನ ವಚನವಾಗಿದೆ ಎಂಬ ಕಾರಣಕ್ಕೆ ಕಡಿಮೆಯಾಗಿವೆ. ಹೀಗಾಗಿ ಈ ಸಂಪುಟದಲ್ಲಿ ಮೊದಲ ಆವೃತ್ತಿಯಲ್ಲಿ ೧೭೪೮ ವಚನಗಳಿದ್ದರೆ, ಎರಡನೆಯ ಆವೃತ್ತಿಯಲ್ಲಿ ೪ ವಚನ ಕಡಿಮೆಯಾಗಿ ೧೭೪೪ ಆಗಿವೆ. ಮೂರನೆಯ ಆವೃತ್ತಿಯಲ್ಲಿ ೬ ವಚನ ಕಡಿಮೆಯಾಗಿ ೧೭೩೮ ಆಗಿವೆ. ನಾಲ್ಕನೆಯದಾದ ಈ ಆವೃತ್ತಿಯಲ್ಲಿ ನಾವು ಮೂರನೆಯ ಆವೃತ್ತಿಯ ವಚನಗಳನ್ನು ಅಗತ್ಯ ತಿದ್ದುಪಡಿಯೊಂದಿಗೆ ಸ್ವೀಕರಿಸಿದ್ದೇವೆ.

ಪ್ರಥಮ ಆವೃತ್ತಿಯ ಪ್ರಸ್ತಾವನೆಯಲ್ಲಿ ಅಂಕಿತ ಪಲ್ಲಟ ಸಮಸ್ಯೆ, ಪಾಠಾಂತರ ಸಮಸ್ಯೆ ಕುರಿತು ಹೇಳುತ್ತ, ಅವುಗಳನ್ನು ಪರಿಹರಿಸಿಕೊಂಡ ರೀತಿಯನ್ನು ಉದಾಹರಣೆಗಳೊಂದಿಗೆ ಸ್ಪಷ್ಟಪಡಿಸಿದ್ದಾರೆ. ಆದರೆ ವಚನಗಳ ಆಕರ ಮತ್ತು ಪಾಠಾಂತರಗಳನ್ನು ಆಯಾ ವಚನಗಳ ಅಡಿಯಲ್ಲಿ ನಮೂದಿಸದ ಕಾರಣ ಯಾವ ಆಕರದಿಂದ ಯಾವ ಪಾಠ ಸ್ವೀಕರಿಸಲಾಗಿದೆ ಎಂಬುದು ಗೊತ್ತಾಗುವುದಿಲ್ಲ.

ಹಾಗೆಯೇ ದ್ವಿತೀಯ ಆವೃತ್ತಿಯ ಪ್ರಸ್ತಾವನೆಯಲ್ಲಿ "ಪ್ರಥಮ ಆವೃತ್ತಿಯ ಪಾಠವನ್ನು ಅಲ್ಲಲ್ಲಿ ಪರಿಷ್ಕರಿಸಿ, ಕೆಲವು ಪುನರುಕ್ತ ವಚನಗಳನ್ನು ಕೈಬಿಟ್ಟು, ಹೊಸದಾಗಿ ಲಭಿಸಿದ ಕೆಲವನ್ನು ಸೇರಿಸಿ ಈ ದ್ವಿತೀಯ ಆವೃತ್ತಿಯನ್ನು ರೂಪಿಸಲಾಗಿದೆ" ಎಂದು ಹೇಳಿದ್ದಾರೆ. ಆದರೆ ಕೈಬಿಟ್ಟ ವಚನಗಳಾವವು, ಸೇರಿಸಿಕೊಂಡವು ಯಾವವು ಎಂದು ತಿಳಿಸಿಲ್ಲ.

ಮೂರನೆಯ ಆವೃತ್ತಿಯ ಪ್ರಸ್ತಾವನೆಯಲ್ಲಿ "ಪ್ರಥಮ ಆವೃತ್ತಿಯಲ್ಲಿ ಉಳಿದುಕೊಂಡಿದ್ದ ದೋಷಗಳನ್ನು ದ್ವಿತೀಯ ಆವೃತ್ತಿಯಲ್ಲಿ ತಿದ್ದಿಕೊಂಡಿದ್ದೇವೆ. ಅಲ್ಲಿಯೂ ಉಳಿದುಕೊಂಡಿದ್ದ ದೋಷಗಳನ್ನು ಪ್ರಸ್ತುತ ಆವೃತ್ತಿಯಲ್ಲಿ ಸರಿಪಡಿಸಿಕೊಂಡಿದ್ದೇವೆ. ಹೀಗಿದ್ದೂ ಕೆಲವು ಸಮಸ್ಯೆಗಳು ಉಳಿದುಕೊಂಡಿವೆ" ಎಂದು ಸಮಸ್ಯೆಗೆ ಕಾರಣವಾದ ವಚನಗಳನ್ನು ಗುರುತಿಸಿದ್ದಾರೆ.

ಒಟ್ಟಿನಲ್ಲಿ ಕಾಲಕಾಲಕ್ಕೆ ಆದ ಬದಲಾವಣೆಗಳನ್ನು ಗುರುತಿಸಿ, ಅಳವಡಿಸಿಕೊಂಡು, ಹೆಚ್ಚು ಶುದ್ಧರೂಪದಲ್ಲಿ ವಚನಗಳನ್ನು ಪರಿಷ್ಕರಿಸಿಕೊಡುವಲ್ಲಿ ಈ ಸಂಪಾದನೆ ಯಶಸ್ವಿಯಾಗಿದೆ.

❖❖

ಸಮಗ್ರ ವಚನಸಾಹಿತ್ಯ ಜನಪ್ರಿಯ ಆವೃತ್ತಿ : ಸಂಪುಟ-೬

ಸಂಕೀರ್ಣ ವಚನಸಂಪುಟ : ಒಂದು

ಸಂಪಾದಕ

ಡಾ. ಎಂ. ಎಂ. ಕಲಬುರ್ಗಿ

ಕನ್ನಡ ಪ್ರಾಧ್ಯಾಪಕರು

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯೯೩

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬೆಂಗಳೂರು

*

ಪ್ರಸ್ತಾವನೆ

ಡಾ. ಎಂ. ಎಂ. ಕಲಬುರ್ಗಿ

"ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ" ಒಂದು ಕೃತಿಯ ಪ್ರಕಟನೆಯಲ್ಲ; ಎಂಟುನೂರು ವರ್ಷ ಕಾಲವ್ಯಾಪ್ತಿಯ ಒಂದು ಸಾಹಿತ್ಯಪ್ರಕಾರದ ಪ್ರಕಟನೆಯಾಗಿದೆ. ಪ್ರಕಟವಾಗಿ ಹತ್ತೂ ಕಡೆಗೆ ಹಂಚಿಹೋದ, ಅಪ್ರಕಟಿತ ಸ್ಥಿತಿಯಲ್ಲಿಯೂ ಉಳಿದ, ಪಾಠಾಂತರ-ಪ್ರಕ್ಷಿಪ್ತತೆಗಳ ದಾಳಿಗೆ ಗುರಿಯಾಗುತ್ತಲೂ ಬಂದ ಈ ಸಾಹಿತ್ಯವನ್ನು ಸಂಗ್ರಹಿಸುವುದು, ಸಂಸ್ಕರಿಸುವುದು, ಸಂಯೋಜಿಸುವುದು ಶ್ರಮ-ಶ್ರದ್ಧೆಗಳ ಕೆಲಸವಾಗಿದೆ. ಹೀಗಾಗಿ ಈ ಯೋಜನೆಗೆ ವಚನಸಾಹಿತ್ಯದ ಪ್ರಕಟನೆಯ ಇತಿಹಾಸದಲ್ಲಿ ಒಂದು ಐತಿಹಾಸಿಕ ಮಹತ್ವ ಸಲ್ಲುತ್ತದೆ.

ಹದಿನೈದು ಸಂಪುಟಗಳ ಈ ಯೋಜನೆಯಲ್ಲಿ ಇದು ಆರನೆಯ ಸಂಪುಟವಾಗಿದ್ದು, ಸ್ವರವರ್ಣಗಳಿಂದ ಪ್ರಾರಂಭವಾಗುವ ಹೆಸರಿನ ಬಸವಯುಗದ ಎಲ್ಲ ಶರಣರ ಎಲ್ಲ ವಚನಗಳನ್ನು ಇದರಲ್ಲಿ ಸಂಗ್ರಹಿಸಲಾಗಿದೆ. ಹೀಗೆ ಸಂಗ್ರಹಿಸಲಾದ ೨೪ ಜನ ವಚನಕಾರರ ಹೆಸರು ಮತ್ತು ಇಂದಿನ ಮಿತಿಗೆ ಸಿಗುವ ಇವರ ವಚನಗಳ ಸಂಖ್ಯಾ ಪ್ರಮಾಣ ಹೀಗಿದೆ :

೧. ಅಂಗಸೋಂಕಿನ ಲಿಂಗತಂದೆಗಳ ವಚನ	೧೧
೨. ಅಂಬಿಗ ಚೌಡಯ್ಯಗಳ ವಚನ	೨೭೫
೩. ಅಗ್ಘವಣಿ ಹಂಪಯ್ಯಗಳ ವಚನ	೪
೪. ಅಗ್ಘವಣಿ ಹೊನ್ನಯ್ಯಗಳ ವಚನ	೪
೫. ಅಜಗಣ್ಣ ತಂದೆಗಳ ವಚನ	೧೦
೬. ಅನಾಮಿಕ ನಾಚಯ್ಯಗಳ ವಚನ	೫
೭. ಅಪ್ಪಿದೇವಯ್ಯಗಳ ವಚನ	೧
೮. ಅಮರಗುಂಡದ ಮಲ್ಲಿಕಾರ್ಜುನತಂದೆಗಳ ವಚನ	೨
೯. ಅಮುಗಿದೇವಯ್ಯಗಳ ವಚನ	೩೧
೧೦. ಅರಿವಿನ ಮಾರಿತಂದೆಗಳ ವಚನ	೩೦೯
೧೧. ಅವಸರದ ರೇಕಣ್ಣಗಳ ವಚನ	೧೦೪

ಈ ೨೪ ಜನರಲ್ಲಿ ಅಂಗಸೋಂಕಿನ ಲಿಂಗತಂದೆ, ಅಂಬಿಗರ ಚೌಡಯ್ಯ. ಅನಾಮಿಕ ನಾಚಯ್ಯ, ಅಮರಗುಂಡದ ಮಲ್ಲಿಕಾರ್ಜುನತಂದೆ, ಅರಿವಿನ ಮಾರಿತಂದೆ, ಅವಸರದ ರೇಕಣ್ಣ, ಆನಂದಯ್ಯ, ಉಗ್ಘಡಿಸುವ ಗಬ್ಬಿದೇವಯ್ಯ, ಉಪ್ಪರಗುಡಿಯ ಸೋಮಯ್ಯ, ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ, ಎಲೆಗಾರ ಕಾಮಣ್ಣ–ಹೀಗೆ ೧೧ ಜನರ ಚರಿತ್ರೆಯ ವಿವರಗಳು ತಿಳಿದುಬರುವುದಿಲ್ಲ. ಇಲ್ಲಿಯ ಅಂಬಿಗ, ಅವಸರ, ಉಗ್ಘಡಣೆ, ಎಚ್ಚರಿಕೆ, ಎಲೆಗಾರ–ಇವು ಕಾಯಕಗಳೆಂಬುದು ಸ್ಪಷ್ಟ. ಉಪ್ಪರಗುಡಿಯೆಂದರೆ ಎತ್ತಿಕಟ್ಟಿದ ಧ್ವಜವೆಂದು ಅರ್ಥ. ಅಂಗಸೋಂಕು ಲಿಂಗಧಾರಣವನ್ನು, ಅರಿವಿನ ಎಂಬುದು ಮನಃಸ್ಥಿತಿಯನ್ನು ಸೂಚಿಸುತ್ತವೆ. ಅಮರಗುಂಡ(ಗುಬ್ಬಿ)ವು ಮಲ್ಲಿಕಾರ್ಜುನತಂದೆಗಳ ಗ್ರಾಮ. ಹೆಸರೇ ತಿಳಿಸುವಂತೆ ನಾಚಯ್ಯನು ಅನಾಮಿಕ ಅಂದರೆ ಶೂದ್ರ. ಆನಂದಯ್ಯನ ಬಗ್ಗೆ ಏನೂ ತಿಳಿದು ಬರುವುದಿಲ್ಲ. ಮಿಕ್ಕ ೧೩ ಜನರ ಸ್ಥೂಲ ಚರಿತ್ರೆ ಹೀಗೆ:

ಮುಕುಂದಪುರ ನಿವಾಸಿಯಾದ **ಅಗ್ಘವಣಿ ಹಂಪಯ್ಯ**ನು ಅಗ್ಘವಣಿಯನ್ನು ಹೊತ್ತು ತಂದು ಭಕ್ತರಿಗೆ ಪೂರೈಸುವ ಕಾಯಕದವನಾಗಿದ್ದನು. ಈ ಕಾಯಕದಿಂದ ಬಂದ ಹಣವನ್ನು ದಾಸೋಹಕ್ಕೆ ವ್ಯಯಿಸುವುದು ಇವನ ನಿತ್ಯವ್ರತವಾಗಿದ್ದಿತು. ಆಕಾಲದಲ್ಲಿ ಅಗ್ಘವಣಿ ದೊರೆಯದಿರಲು ಮನೆಯಲ್ಲಿಯ ಪಾತ್ರೆಗಳನ್ನು ಮಾರಿ ಚಿಲುಮೆ ತೋಡಿಸಿದ. ಸೆಲೆ ಕಾಣಿಸಲಿಲ್ಲ. ಕಾಯಕ ನಿಂತುಹೋಗಿ ಸಹಜವಾಗಿಯೇ ಆದಾಯ ಕಡಿಮೆಯಾಗಲು, ದಾಸೋಹ ನಿಲ್ಲುವ ಸ್ಥಿತಿ ಪ್ರಾಪ್ತವಾಯಿತು. ಆಗ ಎತ್ತರದ ಬೆಟ್ಟದಿಂದ ಅಗ್ಗವಣಿ ತಂದು ದಾಸೋಹ ಮುಂದುವರಿಸಿದ. ಇವನ **'ಕಾಯಕಭಕ್ತಿ'**ಗೆ

ಮೆಚ್ಚಿ ಶಿವನು ಗಣಪದವಿಯನ್ನಿತ್ತನು. ಈತನು 'ಹಂಪೆಯ ವಿರುಪ' ಮುದ್ರಿಕೆಯಿಂದ ಬರೆದ ನಾಲ್ಕು ವಚನಗಳು ಈವರೆಗೆ ಲಭ್ಯವಾಗಿವೆ.

ಪುಲಿಗೆರೆಯವನಾದ **ಅಗ್ಘವಣಿ ಹೊನ್ನಯ್ಯ** ಅಲ್ಲಿಯ ಸೋಮೇಶ್ವರ ದೇವರ ಭಕ್ತ. ದಿನಾಲು ತುಂಗಭದ್ರೆಯ ನೀರು ತಂದು ದೇವರನ್ನು ಪೂಜಿಸುವುದು ಇವನ ವ್ರತ. ಅಬ್ಬಲೂರಿನಲ್ಲಿ ಜರುಗಿದ ಶಿರಸ್ಸುಪವಾಡ ಪ್ರಸಂಗದಲ್ಲಿ ಏಕಾಂತರಾಮಯ್ಯನ ರುಂಡವನ್ನು ಹರಿವಾಣದಲ್ಲಿಟ್ಟು ಮೆರೆಸಿದವನೀತ. ಉತ್ತರಾರ್ಧ ಜೀವನದಲ್ಲಿ ಕಲ್ಯಾಣಕ್ಕೆ ಹೋಗಿ ಬಸವಣ್ಣನ ಮನೆಗೆ 'ನೀರು ಪೂರೈಸುವ ಕಾಯಕ'ವನ್ನು ಕೈಕೊಂಡಿದ್ದನು. ಕಲ್ಲೇದೇವರಪುರ (೧೧೭೯), ಮರಡಿಪುರ (೧೧೮೦) ಶಾಸನಗಳಲ್ಲಿ ಈತನ ಪ್ರಸ್ತಾಪ ಬರುತ್ತದೆ. 'ಹುಲಿಗೆರೆಯ ವರದ ಸೋಮನಾಥ' ಎಂಬುದು ಇವನ ಅಂಕಿತ. ಈವರೆಗೆ ಲಭ್ಯವಾದ ಇವನ ವಚನಗಳು ನಾಲ್ಕು.

ಶಿವಶರಣೆ ಮುಕ್ತಾಯಕ್ಕನ ಸೋದರನಾದ **ಅಜಗಣ್ಣನ** ಊರು, ಲಕ್ಕುಂಡಿ. ಇಲ್ಲಿ ಈಗಲೂ ಇರುವ ಸೋಮೇಶ್ವರ ಈತನ ಆರಾಧ್ಯದೈವತ. ಇಷ್ಟಲಿಂಗವನ್ನು ಅಮಳೋಕ್ಯದಲ್ಲಿ (ಬಾಯಿಯಲ್ಲಿ) ಧರಿಸುತ್ತಿದ್ದ ಇವನೊಬ್ಬ ಗುಪ್ತಭಕ್ತ. ಭಾವಲಿಂಗಪೂಜೆ ಇವನ ಮನಸ್ಥಿತಿ. ಹೀಗಾಗಿ ಇವನನ್ನು ಐಕ್ಯಸ್ಥಲವದವನೆಂದು ಅನೇಕ ವಚನಕಾರರು ಗುರುತಿಸಿದ್ದಾರೆ. ಮನೆಯ ತಲೆಬಾಗಿಲು ಬಡಿಯಲಾಗಿ ಮರಣವನ್ನಪ್ಪಿದ. ಹೀಗೆ ಆಕಸ್ಮಿಕವಾಗಿ ಸತ್ತ ಅಣ್ಣನಿಗಾಗಿ ಶೋಕಿಸಿದ ಮುಕ್ತಾಯಕ್ಕನಿಗೆ ಅಲ್ಲಮಪ್ರಭು ಸಮಾಧಾನ ಹೇಳಿದ. "ಅಂತರಂಗದಲ್ಲಿ ಅವಿರಳ ಲಿಂಗೈಕ್ಯನು, ಬಹಿರಂಗದಲ್ಲಿ ವ್ಯವಹಾರ ದೂರಸ್ಥನು" ಎಂದು ಶೂನ್ಯಸಂಪಾದನೆ ಈತನನ್ನು ಬಣ್ಣಿಸಿದೆ. "ಎನ್ನ ಅಜಗಣ್ಣತಂದೆ ಶಬುದಕ್ಕೆ ಹೇಸಿ ಮುಗುದನಾದವನು" ಎನ್ನುತ್ತಾಳೆ, ಮುಕ್ತಾಯಕ್ಕ. ಈ ಹೇಳಿಕೆಗಳಿಗೆ ಇವನ ಕೆಲವು ವಚನಗಳು ನಿದರ್ಶನವೆನಿಸಿವೆ. "ಮಹಾಘನ ಸೋಮೇಶ್ವರ" ಮುದ್ರಿಕೆಯಲ್ಲಿ ಈವರೆಗೆ ಇವನ ಹತ್ತು ವಚನಗಳು ಸಿಕ್ಕಿವೆ.

ಸೊಲ್ಲಾಪುರ ನಿವಾಸಿಯಾದ **ಅಮುಗಿದೇವನದು** ನೆಯ್ಗೆ ಕಾಯಕ. ಈ ಕಾಯಕದಿಂದ ಜಂಗಮದಾಸೋಹ ನಡೆಸುವುದು ಇವನ ವ್ರತವಾಗಿದ್ದಿತು. ಒಮ್ಮೆ ಕಪಿಲಸಿದ್ಧ ಮಲ್ಲಿಕಾರ್ಜುನನ ಪರ್ವಕ್ಕಾಗಿ ಕುಟ್ಟಿಕೊಡಲು ಸಿದ್ಧರಾಮ ಇವನ ಮನೆಗೆ ಹತ್ತು ಕೊಳಗ ಬತ್ತ ಕಳಿಸಿದ. ಸ್ಥಾವರಲಿಂಗ ಪೂಜಕನು ಕಳಿಸಿದ ಬತ್ತವನ್ನು ಕುಟ್ಟಿಕೊಡಲು ಇಷ್ಟಲಿಂಗ ಪೂಜಕನಾದ ಇವನು ನಿರಾಕರಿಸುವುದೇ ತಡ. ಊರು ಬಿಟ್ಟು ಹೋಗಲು ಸಿದ್ಧರಾಮನಿಂದ ಆಜ್ಞೆ ಬಂದಿತು. ಗೃಹೋಪಕರಣದ ಮೂರು ಗಂಟುಗಳಲ್ಲಿ ಎರಡನ್ನು ಅಮುಗಿದೇವ ಮತ್ತು ಅವನ ಸತಿ ವರದಾನಿಯಮ್ಮ ಹೊತ್ತುಕೊಂಡು, ಸಮೀಪದ ಶಿವಪುರಕ್ಕೆ ಹೋದರು. ಉಳಿದ ಒಂದು ಗಂಟನ್ನು ಕಪಿಲಸಿದ್ಧ ಮಲ್ಲಿಕಾರ್ಜುನದೇವರೇ ಹೊತ್ತು ಒಯ್ದು ಮುಟ್ಟಿಸಿದ. ಮರುದಿನ ಸಿದ್ಧರಾಮನು ಕಪಿಲಸಿದ್ಧಮಲ್ಲಿಕಾರ್ಜುನಲಿಂಗಕ್ಕೆ ಎಣ್ಣೆ ಮಜ್ಜನ ಮಾಡಿಸುತ್ತಿರಲು 'ತಲೆಯನ್ನು ಮುಟ್ಟಬೇಡ. ಗಂಟು ಹೊತ್ತ ಕಾರಣ ನೋಯುತ್ತಿದೆ' ಎಂದು ನುಡಿದ ಶಿವಲಿಂಗ, ಕಳೆದ ದಿನದ ಘಟನೆಯನ್ನು ವಿವರಿಸಲು ಸಿದ್ಧರಾಮನಿಗೆ ತನ್ನ ತಪ್ಪಿನ ಅರಿವಾಯಿತು. ಮರಳಿ ಸೊಲ್ಲಾಪುರಕ್ಕೆ ಬರಲು ಅಮುಗಿದೇವಯ್ಯನಿಗೆ ಬಿನ್ನವಿಸಿದ. ಅಮುಗಿದೇವ ಒಪ್ಪದೇ ಶಿವಪುರದಲ್ಲಿ ಉಳಿದು ದಾಸೋಹ ಮುಂದುವರಿಸಿದ. ಅಮುಗಿದೇವನನ್ನು ಕುರಿತ ಶಾಸನಗಳು ಮಹಾರಾಷ್ಟ್ರದ ಪುಳುಜೆಯಲ್ಲಿ ಸಿಗುತ್ತವೆ. ಒಂದು ಶಾಸನ, ಯಾದವಚಕ್ರವರ್ತಿ

ಸಿಂಘಣನಿಂದ ಅಮುಗಿದೇವನು ಪೂಜಿತನಾದುದನ್ನು ಹೇಳಿದರೆ. ಇನ್ನೊಂದು ಶಾಸನ ಇವನನ್ನು "ಮಹೇಶ್ವರಗಣ ಕುಲಾನ್ವಯ ದಿವಾಕರ, ಶರಣಸಂತಾನ. ಸಿದ್ಧಕುಲಾರ್ಣವಪ್ರವರ್ಧನ ಸುಧಾಕರ" ಎಂದು ಕರೆದಿದೆ. ಇಲ್ಲಿಯ ಮಹೇಶ್ವರ, ಶರಣ, ಸಿದ್ಧ ಶಬ್ದಗಳು ಅರ್ಥ ಸಂಬಂಧವನ್ನು ಬಯಸುತ್ತವೆ. 'ಸದ್ಗುರು ಸಿದ್ಧಸೋಮನಾಥ' ಮುದ್ರಿಕೆಯ ೩೦ ವಚನಗಳು ಇವನ ಹೆಸರಿನಲ್ಲಿ ಸಿಗುತ್ತವೆ.

ಆದಯ್ಯನ ರಗಳೆ(ಹರಿಹರ), ಸೋಮನಾಥ ಚಾರಿತ್ರ (ರಾಘವಾಂಕ) ಮೊದಲಾದ ಲಿಂಗಾಯತ ಕೃತಿಗಳಲ್ಲಿ ಚಿತ್ರಿತನಾದ **ಆದಯ್ಯ** ಮೂಲತಃ ಸೌರಾಷ್ಟ್ರದವ. ವ್ಯಾಪಾರ ನಿಮಿತ್ತ ಪುಲಿಗೆರೆಗೆ ಬಂದು ಜೈನಕನ್ಯೆ ಪದ್ಮಾವತಿಯನ್ನು ಪ್ರೇಮಿಸಿ, ಮದುವೆಯಾಗಿ ಮಾವನೊಂದಿಗೆ ವಾದಕ್ಕೆ ನಿಂತು, ಸೌರಾಷ್ಟ್ರದಿಂದ ಸೋಮೇಶ್ವರನನ್ನು ಕರೆತಂದು, ಪುಲಿಗೆರೆಯ ಸುರಹೊನ್ನೆ ಬಸದಿಯಲ್ಲಿ ಸ್ಥಾಪಿಸಿದ ಶಿವಭಕ್ತನೀತ. ಈತನೇ ವಚನಕಾರ ಆದಯ್ಯನೆಂದು ನಂಬಲಾಗಿದೆ. 'ಸೌರಾಷ್ಟ್ರ ಸೋಮೇಶ್ವರಾ' ಮುದ್ರಿಕೆಯಲ್ಲಿ ಇವನ ४೦೩ ವಚನಗಳು ಈವರೆಗೆ ಲಭ್ಯವಾಗಿವೆ. ಈ ಮುದ್ರಿಕೆಯ ಜೊತೆಗೆ ಕೆಲವೊಮ್ಮೆ 'ಮಲ್ಲಿಕಾರ್ಜುನ' ಎಂಬುದೂ ಕಂಡುಬರುತ್ತಿರುವುದು ಶೋಧನೀಯ ಅಂಶವಾಗಿದೆ. ವಚನಗಳನ್ನಲ್ಲದೆ ಇವನು ಕೆಲವು ಸ್ವರವಚನಗಳನ್ನು ಬರೆದಿದ್ದು,[೧] ಈ ಎರಡೂ ಬಗೆಯ ರಚನೆಗಳಲ್ಲಿ ಈತನ ಸಾಹಿತ್ಯಿಕ, ಇದಕ್ಕಿಂತ ತಾತ್ವಿಕ ಪ್ರೌಢಿಮೆ ಎದ್ದುಕಾಣುತ್ತದೆ. ವಚನಗಳಲ್ಲಿ ರೇವಣಸಿದ್ಧಯ್ಯ, ಮರುಳಸಿದ್ಧಯ್ಯ, ಏಕೋರಾಮಯ್ಯ, ಪಂಡಿತಾರಾಧ್ಯರ ಹೆಸರು ಉಕ್ತವಾಗಿರುವುದು ಗಮನಾರ್ಹ ಸಂಗತಿಯಾಗಿದೆ.[೨]

ಬೀದಿಯಲ್ಲಿ ಬಿದ್ದ ಅಕ್ಕಿಯನ್ನು ಆಯ್ದುತಂದು ದಾಸೋಹ ಮಾಡುವವ **ಆಯ್ದಕ್ಕಿ ಮಾರಯ್ಯ.** ಇವನ ಸತಿ ಲಕ್ಕಮ್ಮ. ಈತನಿಗೆ ಹೆಚ್ಚು ಧಾನ್ಯವನ್ನು ಒದಗಿಸುವ ಇಚ್ಛೆಯಿಂದ ಒಮ್ಮೆ ಬಸವಣ್ಣ ಬಹಳಷ್ಟು ಅಕ್ಕಿಯನ್ನು ಬೀದಿಯಲ್ಲಿ ಚೆಲ್ಲಿಸಿದ. ಅವೆಲ್ಲವನ್ನೂ ಆಯ್ದುಕೊಂಡು ಮನೆಗೆ ಬಂದ ಗಂಡನಿಗೆ "ಶರಣರು ಅತಿಯಾದ ಆಸೆ ಮಾಡಬಾರದು. ಹೆಚ್ಚಿನ ಅಕ್ಕಿ ತಂದುದಕ್ಕೆ ನನ್ನ ಸಮ್ಮತಿಯಿಲ್ಲ" ಎಂದು ಲಕ್ಕಮ್ಮ ಹೇಳಿದಳು. ಇಬ್ಬರಿಗೂ 'ಸಂಗ್ರಹತತ್ವ'ದ ಬಗ್ಗೆ ವಾದ, ಪ್ರತಿವಾದ ನಡೆಯಿತು. ಹೆಂಡತಿಯ ನಿಲವನ್ನು ಮನ್ನಿಸಿದ ಮಾರಯ್ಯ ಹೆಚ್ಚಿನ ಅಕ್ಕಿಯನ್ನು ಮರಳಿಸಿದ. ಬನವಾಸಿಯ ಮಧುಕೇಶ್ವರ ದೇವಾಲಯದ ಶಿವೋತ್ಸವ ಮಂಟಪದ ಅಡಿಯಲ್ಲಿ ಕೆತ್ತಲಾದ ಹಲವು ಜನ ಶರಣರ ವಿಗ್ರಹಗಳ ಜೊತೆ ಇವನ ವಿಗ್ರಹವೂ ಕಂಡುಬರುತ್ತದೆ. 'ಅಮರೇಶ್ವರಲಿಂಗ' ಎಂಬುದು ಇವನ ಮುದ್ರಿಕೆ. ಈವರೆಗೆ ಲಭ್ಯವಾದ ಇವನ ವಚನಗಳ ಸಂಖ್ಯೆ ೩೨.

ಉರಿಲಿಂಗದೇವನ ಶಿಷ್ಯ **ಉರಿಲಿಂಗಪೆದ್ದಿ**. ಇವರಲ್ಲಿ ಉರಿಲಿಂಗದೇವನು ಅವಸೆಕಂಧಾರ ಹೆಸರಿನ ಗ್ರಾಮದವನು. ಪುಲಿಗೆರೆಯ ಮಹಾಲಿಂಗದೇವನ ಗುರುಪರಂಪರೆಯಲ್ಲಿ ಐದನೆಯವನು. 'ಶರಣಸತಿ-ಲಿಂಗಪತಿ' ಭಾವದ ಈತನ ನಿಷ್ಠೆಯನ್ನು ಪರೀಕ್ಷಿಸಲು ಪರವಾದಿಗಳು ಗುಡಿಸಲಿಗೆ ಬೆಂಕಿಹಚ್ಚಿದರೂ ಚಲಿತನಾಗದೆ ಲಿಂಗಪೂಜಾನಿಷ್ಠೆ ಮೆರೆದ ಶರಣನೀತ. ನಂದಿವಾಡದ ಸೂರಯ್ಯ ಭಕ್ತನಿಗೆ ಗುಪ್ತರೀತಿಯಲ್ಲಿ ಈತನು ಲಿಂಗದೀಕ್ಷೆ ನೀಡುವುದನ್ನು ಚೋರವೃತ್ತಿಯ ಪೆದ್ದಣ್ಣ ನೋಡಿ, ತನಗೂ ಲಿಂಗ ಬೇಕೆಂಬ ಅಪೇಕ್ಷೆಯಿಂದ ನಿತ್ಯವೂ ಉರಿಲಿಂಗದೇವನ ಮನೆಗೆ ಹುಲ್ಲು-ಕಟ್ಟಿಗೆ ಹೊತ್ತು ತರುತ್ತಿದ್ದನು. ಇದಕ್ಕೆ ಪ್ರತಿಯಾಗಿ ಹಣ ಪಡೆಯದೆ ಲಿಂಗದೀಕ್ಷೆ ನೀಡಬೇಕೆಂದು ಪದೇ ಪದೇ ಕೇಳಲು, ಸಿಟ್ಟಿಗೆದ್ದ ಉರಿಲಿಂಗದೇವ 'ಘೇ ದಗಡಿ ಜಾ' ಎಂದು ಗದರಿಸಿ ಕಲ್ಲನ್ನು ಎಸೆಯಲು, ಆ ಶಬ್ದವನ್ನು ಮಂತ್ರವೆಂದು ಆ ಕಲ್ಲನ್ನು ಲಿಂಗವೆಂದು ಭಾವಿಸಿ ಶಿವಭಕ್ತನಾಗಿ ಪರಿವರ್ತನಗೊಂಡನು.

ನಂದರಾಜನು ಕಟ್ಟಿಸಿದ ಕೆರೆಯಲ್ಲಿ ಗುರು-ಶಿಷ್ಯರಿಬ್ಬರೂ ಸೆಲೆ ಕಾಣಿಸಿಕೊಳ್ಳುವಂತೆ ಮಾಡಿದರು. ಪೆದ್ದಣ್ಣನು ಉರಿಲಿಂಗದೇವನ ತರುವಾಯ ಗುರು ಪೀಠವೇರಿದನು. ಇವನು ಜಾತಿಯಿಂದ ಅಸ್ಪೃಶ್ಯನೆಂದು ತಿಳಿದುಬರುವುದರಿಂದ ಈ ಪೀಠಾರೋಹಣ ಒಂದು ವಿಶೇಷ ಘಟನೆಯೆಂದೇ ಹೇಳಬೇಕು. ಹರಿಜನ ವೀರಶೈವರ ಅನೇಕ ಮಠಗಳು ಕರ್ನಾಟಕದಲ್ಲಿದ್ದು, ಅವುಗಳನ್ನು ಉರಿಲಿಂಗಪೆದ್ದಿಮಠಗಳೆಂದು ಕರೆಯುತ್ತಾರೆ. ಉರಿಲಿಂಗದೇವನ ಮುದ್ರಿಕೆ 'ಉರಿಲಿಂಗದೇವಾ'. ಉರಿಲಿಂಗಪೆದ್ದಿಗಳ ಮುದ್ರಿಕೆ 'ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.' ಇವರಲ್ಲಿ ಒಬ್ಬನ ೪೮ ವಚನ, ಇನ್ನೊಬ್ಬನ ೩೬೬ ವಚನಗಳು ಲಭಿಸಿವೆ. ಉರಿಲಿಂಗದೇವನ ವಚನಗಳು 'ಸತಿಪತಿಭಾವ'ದಿಂದ ಕೂಡಿದರೆ, ಉರಿಲಿಂಗಪೆದ್ದಿಯ ವಚನಗಳಲ್ಲಿ ಸಂಸ್ಕೃತ ಉದ್ಧರಣೆಗಳನ್ನು ವಿಶೇಷವಾಗಿ ಬಳಸಿರುವುದು ಸವರ್ಣೀಯರಿಗೆ ತೋರಿಸಿದ ಒಂದು ಭಾಷಿಕ ಆಹ್ವಾನವೆಂಬಂತಿದೆ.

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ದೇವರಗುಡಿ ಗ್ರಾಮದವ **ಉಳಿಯುಮೇಶ್ವರ ಚಿಕ್ಕಣ್ಣ.**[೩] ಮೂಲತಃ ನೆರೆಯ ಮಲ್ಲಾಪುರ(ಮಲ್ಲಿಪಟ್ಟಣ?)[೪]ಗ್ರಾಮದ ಒಂದು ಭಾಗವಾಗಿರಬಹುದಾದ ದೇವರಗುಡಿ ಇಂದು ಸ್ವತಂತ್ರ ಗ್ರಾಮವಾಗಿ ನಿಂತಿದೆ. ಈ ದೇವರಗುಡಿ ಗ್ರಾಮದ ಇಂದಿನ ಮಲ್ಲಿಕಾರ್ಜುನ ದೇವರ ಪ್ರಾಚೀನ ಹೆಸರು ಹುಳಿಯುಮೇಶ್ವರ. ಇದು ಹುಳಿಯಮನೆಂಬವನು ಸ್ಥಾಪಿಸಿದ ಈಶ್ವರಲಿಂಗ. ಈ ಹೆಸರು ರೂಢಿಯಲ್ಲಿ ಉಳಿಯುಮೇಶ್ವರ ರೂಪಕ್ಕೆ ತಿರುಗಿರುವುದು ಸಹಜ. ಇಲ್ಲಿಯ ಒಂದು ಶಾಸನದಲ್ಲಿ ಬೇರೆ ಬೇರೆ ಕಾಲದ ೫ ದತ್ತಿಗಳಿವೆ. ಇವುಗಳಲ್ಲಿ ಮೊದಲನೆಯ ದತ್ತಿ (ಕ್ರಿ. ಶ. ೧೧೧೦) ಸ್ಥಾನಾಚಾರ್ಯ ಕೇದಾರಪಂಡಿತನನ್ನು, ೩ನೆಯ ದತ್ತಿ (೧೧೬೮), ೪, ೫ನೆಯ ದತ್ತಿಗಳು ಸ್ಥಾನಾಚಾರ್ಯ ಚಿಕ್ಕಯ್ಯಪಂಡಿತನನ್ನು ಉಲ್ಲೇಖಿಸುತ್ತವೆ. ಇನ್ನೊಂದು ಶಾಸನವೂ (೧೨೦೨) ಚಿಕ್ಕಯ್ಯಪಂಡಿತನನ್ನು ಉಲ್ಲೇಖಿಸುತ್ತದೆ. ಕಲ್ಲೇದೇವರಪುರ ಶಾಸನ (೧೨೭೯) ದಲ್ಲಿ ಶರಣರ ಹೆಸರುಗಳ ಮಧ್ಯದಲ್ಲಿ ಕಂಡುಬರುವ 'ಚಿಕ್ಕ' ಎಂಬವನು ಈತನೇ ಆಗಿರುವ ಸಾಧ್ಯತೆಯಿದೆ. ಕಾಳಾಮುಖ ಆಚಾರ್ಯನಾಗಿರುವ ಈ ಹುಳಿಯುಮೇಶ್ವರ ಚಿಕ್ಕಯ್ಯನೇ ವಚನಕಾರ ಉಳಿಯುಮೇಶ್ವರ ಚಿಕ್ಕಯ್ಯನಾಗಿದ್ದಾನೆ. ಕಾಳಾಮುಖನಾದ ಈತನು ವಚನ ಬರೆದಿರುವುದೂ, ಅಲ್ಲಿ ಬಸವಣ್ಣ, ಚೆನ್ನಬಸವಣ್ಣನವರನ್ನು ಸ್ಮರಿಸಿರುವುದೂ ಗಮನಿಸಬೇಕಾದ ಸಂಗತಿಯಾಗಿದೆ. 'ಉಳಿಯುಮೇಶ್ವರಾ' ಮುದ್ರಿಕೆಯಲ್ಲಿ ಈತನ ೧೨ ವಚನಗಳು ಸಿಗುತ್ತವೆ.

ಹರಿಹರನ ರಗಳೆ, ಅಬ್ಬಲೂರು ಶಾಸನಗಳಲ್ಲಿ ಉಲ್ಲಿಖಿತನಾದ **ಏಕಾಂತರಾಮಯ್ಯ** ಮತ್ತು ವಚನಕಾರ ಏಕಾಂತರಾಮಯ್ಯ ಒಬ್ಬನೇ ಎಂದು ಭಾವಿಸಲಾಗಿದೆ. ವೀರಶೈವ ಪಂಚಾಚಾರ್ಯರಲ್ಲಿ ಒಬ್ಬನಾಗಿರಬಹುದಾದ ಏಕೋರಾಮ ಬೇರೊಬ್ಬ ವ್ಯಕ್ತಿ. ಹರಿಹರನ ರಗಳೆ ಮೊದಲಾದ ಕೃತಿಗಳ ಪ್ರಕಾರ ಏಕಾಂತದ ರಾಮಯ್ಯ ಗುಲಬರ್ಗಾ ಜಿಲ್ಲೆಯ ಆಳಂದ ಗ್ರಾಮದವ. ಪುಲಿಗೆರೆಯ ಸೋಮೇಶ್ವರನು ಕನಸಿನಲ್ಲಿ ಹೇಳಿದ ಮೇರೆಗೆ ಪರಸಮಯಿಗಳನ್ನು ಜಯಿಸಲು ಅಬ್ಬಲೂರಿಗೆ ಬರುತ್ತಾನೆ. ಅಲ್ಲಿಯ ಬ್ರಹ್ಮೇಶ್ವರ ದೇವಾಲಯದಲ್ಲಿ ಶಿರಸ್ಸು ಕತ್ತರಿಸಿಕೊಂಡ ಪವಾಡ ಮೆರೆದು, ಬಸದಿಯಲ್ಲಿ ಸೋಮೇಶ್ವರನನ್ನು ಸ್ಥಾಪಿಸುತ್ತಾನೆ. ಈ ಸನ್ನಿವೇಶವು ಅಬ್ಬಲೂರಿನಲ್ಲಿಯ ಶಾಸನದಲ್ಲಿ ಸುಂದರವಾಗಿ ವಿವರಿಸಲ್ಪಟ್ಟಿದೆ. ಹೆಚ್ಚಿನದಾಗಿ ಈ ಸನ್ನಿವೇಶದ ವಿವಿಧ ಶಿಲ್ಪಗಳನ್ನು ಸೋಮೇಶ್ವರ ದೇವಾಲಯದ ಗೋಡೆಯ ಮೇಲೆ ಶೀರ್ಷಿಕೆ ಸಹಿತ ಕೆತ್ತಲಾಗಿದೆ. ತಾಳಿಕೋಟೆ. ಭೋಗಾವೆ.

ಕುಡುತಿನಿ, ಮರಡಿಪುರ, ಬಂದಳಿಕೆ, ಕೆಂಪನಪುರ ಗ್ರಾಮಗಳ ಶಾಸನದಲ್ಲಿ ಈತನ ಮತ್ತು ಈತನ ವಂಶಸ್ಥರ ಉಲ್ಲೇಖವಿದೆ. 'ಎನ್ನಯ್ಯ ಚೆನ್ನರಾಮ' ಮುದ್ರಿಕೆಯಿಂದ ಈತನು ಬರೆದ ಏಳು ವಚನಗಳು ಈವರೆಗೆ ಲಭ್ಯವಾಗಿವೆ.

ಯಾದಗಿರಿ ಜಿಲ್ಲೆಯ ಏಲೇಶ್ವರದವನಾಗಿರಬಹುದಾದ **ಏಲೇಶ ಕೇತಯ್ಯ**ನ ಹೆಂಡತಿ ಸಾಯಿದೇವಿಯಮ್ಮ. ಕೇತಯ್ಯ ೬೪ ಶೀಲಗಳನ್ನು ಪರಿಪಾಲಿಸುತ್ತ ಜೀವನ ಸಾಗಿಸುತ್ತಿದ್ದ ಶಿವಶರಣ. ಇವನು ಬಿತ್ತಬೇಕಾಗಿದ್ದ ಬೀಜವನ್ನು ಸುಟ್ಟು, ಸಾಕಿದ್ದ ಗೋವುಗಳನ್ನು ಕದ್ದು ತೊಂದರೆ ಕೊಟ್ಟ ಭವಿಗಳು ಭಂಗಿತರಾದರು. "ಆಚರಣೆ ತನುವಿಗಾಶ್ರಯ, ಅರಿವು ಮನಕಾಶ್ರಯ"ವೆಂಬ ನೀತಿಯಿಂದ ಬಾಳಿದ ಕೇತಯ್ಯನ ಮುದ್ರಿಕೆ "ಆಚಾರವೇ ಪ್ರಾಣವಾದ ರಾಮೇಶ್ವರ" ಎಂದು "ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರ" ತಿಳಿಸಿದರೆ, ಸಕಲ ಪುರಾತನರ ವಚನ ಕಟ್ಟಿನಲ್ಲಿ ಈ ಮುದ್ರಿಕೆಯ ಮತ್ತು 'ಏಲೇಶ್ವರಲಿಂಗ' ಮುದ್ರಿಕೆಯ ವಚನಗಳು ಇವನ ಹೆಸರಿನ ಕೆಳಗೆ ಸಿಗುತ್ತವೆ. "ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ"ವೆಂಬುದು ಅಕ್ಕಮ್ಮನ ಮುದ್ರಿಕೆಯೆಂದು ಅನ್ಯ ಆಧಾರಗಳೂ ತಿಳಿಸುವ ಕಾರಣ 'ಏಲೇಶ್ವರಲಿಂಗ'ವೆಂಬುದೇ ಇವನ ಮುದ್ರಿಕೆಯೆಂದು ವಿದ್ವಾಂಸರು ಭಾವಿಸಿದ್ದಾರೆ.[೫] ಈ ಮುದ್ರಿಕೆಯಲ್ಲಿ ೭೪ ವಚನಗಳೂ ಈವರೆಗೆ ಲಭ್ಯವಾಗಿವೆ.

ಜೋಳದಹಾಳೆಂಬ ಗ್ರಾಮದ ಭಕ್ತ **ಒಕ್ಕಲುಮುದ್ದಯ್ಯ**. ಕೃಷಿಕಾಯಕದ ಮೂಲಕ ಜಂಗಮ ದಾಸೋಹ ನಡೆಸುವುದು ಇವನ ವ್ರತ. ಹೊಲದಲ್ಲಿ ಹೂಡಿದ ನೇಗಿಲಿಗೆ ಹತ್ತಿದ ಲಿಂಗವನ್ನು ಹೊರತೆಗೆದು ಪೂಜಿಸಿ, ಲಿಂಗದೀಕ್ಷೆ ಪಡೆದ. ರಾಜನು ಕೇಳಿದ ಹೆಚ್ಚಿನ ತೆರಿಗೆಯನ್ನು ಕೊಡದೆ ಆ ಹಣವನ್ನು ದಾಸೋಹಕ್ಕೆ ವಿನಿಯೋಗಿಸಿದ ಈ ಶರಣನ ಮುದ್ರಿಕೆ "ಕಾಮಭೀಮ ಜೀವಧನದೊಡೆಯ." ಈವರೆಗೆ ಇವನ ೧೨ ವಚನಗಳು ಸಿಕ್ಕಿವೆ.

* * *

ಮೇಲೆ ಹೇಳಿದ ೨೪ ಜನರಲ್ಲಿ ಅನೇಕ ಜಾತಿಗಳಿಂದ ವೃತ್ತಿಗಳಿಂದ ಬಂದವರನ್ನು ಕಾಣಬಹುದಾಗಿದೆ. ಶೂದ್ರರು ಇಬ್ಬರು (ಅನಾಮಿಕ ನಾಚಯ್ಯ, ಉರಿಲಿಂಗಪೆದ್ದಿ). ಅಘವಣಿ ಕಾಯಕದವರು ಇಬ್ಬರು (ಹಂಪಯ್ಯ, ಹೊನ್ನಯ್ಯ) ಉಗ್ಘಡಿಸುವ ಕಾಯಕ, ಎಚ್ಚರಿಕೆಯ ಕಾಯಕ, ಎಲೆಯ ಕಾಯಕ, ಆಯ್ದಕ್ಕಿ ಕಾಯಕದವರು ಒಬ್ಬೊಬ್ಬರು ಇಲ್ಲಿದ್ದಾರೆ. ಒಕ್ಕಲಿಗ ಅಂಬಿಗ ಕುರುಬರಲ್ಲದೆ ಬೇರೆ ಬೇರೆ ನೆಲೆಗಳಿಂದ ಬಂದ ಹನ್ನೆರಡು ಜನ ಈ ಸಂಗ್ರಹದಲ್ಲಿ ಕಂಡುಬರುತ್ತಾರೆ. ಹೀಗಾಗಿ ವಿವಿಧ ಅನುಭವಗಳ ಮೂಲದಿಂದ ಬಂದವರ, ಲಿಂಗಾಯತ ವಿವಿಧ ತತ್ವಗಳ ಮೇಲೆ ಒತ್ತು ಕೊಟ್ಟು ಬದುಕಿದವರ ವೈವಿಧ್ಯಪೂರ್ಣ ಧ್ವನಿ ಈ ವಚನಗಳಲ್ಲಿದೆ.

ಇಲ್ಲಿಯ ವಚನಗಳು ಲೋಕನೀತಿ, ಸಮಾಜವಿಮರ್ಶೆ, ಲಿಂಗಾಯತತತ್ವ ನಿರೂಪಣೆ–ಹೀಗೆ ಮೂರು ವರ್ಗಗಳಲ್ಲಿ ವಿಂಗಡಣೆಗೊಳ್ಳುತ್ತವೆ.

ಸಾಮಾನ್ಯವಾಗಿ ಎಲ್ಲ ಧಾರ್ಮಿಕ ಮಹಾಪುರುಷರ ಸಾಹಿತ್ಯದಲ್ಲಿ ದಯೆ, ಅಹಿಂಸೆ, ಶಾಂತಿ ಇತ್ಯಾದಿ ಲೋಕನೀತಿ ಎದ್ದು ಕೇಳಿಸುತ್ತದೆ. ಏಸು, ಬುದ್ಧ, ಮಹಾವೀರ ಮೊದಲಾದವರಂತೆ ಶರಣರೂ ಈ ನೀತಿತತ್ವಗಳನ್ನು ಗಾಢವಾಗಿ ಪ್ರತಿಪಾದಿಸಿದ್ದಾರೆ. ಇದರ ಒಂದು ಅಂಗವಾಗಿ, ಆತ್ಮವಿಮರ್ಶೆಯು ಒಟ್ಟು ವಚನಸಾಹಿತ್ಯದಲ್ಲಿಯಂತೆ ಇಲ್ಲಿಯೂ ಪ್ರಧಾನವಾಗಿ ಮೂಡಿ ಬಂದಿದೆ. ಪ್ರತಿಯೊಬ್ಬ ವಚನಕಾರ ತನ್ನ ಒಳಗನ್ನು ಅದರಲ್ಲಿಯೂ ತನ್ನ ಒಳಗಿನ ಮನುಷ್ಯ ಸಹಜ ವಿಕಾರಗಳನ್ನು

ಪ್ರಾಮಾಣಿಕವಾಗಿ ಬಿಚ್ಚಿಡುವುದು ಇಲ್ಲಿ ಉದ್ದಕ್ಕೂ ನಡೆದಿದೆ. ಈ ಮಾತಿಗೆ ವಿಪುಲ ಉದಾಹರಣೆಗಳು ಈ ಸಂಗ್ರಹದ ವಚನಗಳಲ್ಲಿಯೂ ಇವೆ.

ಶರಣರ ಆಂದೋಲನದ ಪ್ರಧಾನಗುರಿ ಸಮಾಜ ಸುಧಾರಣೆಯೂ ಆಗಿರುವುದು ಒಂದು ವಿಶೇಷ. ಈ ಕಾರಣಕ್ಕಾಗಿಯೇ ಅವರು ಭಾರತದ ಇತರ ಧಾರ್ಮಿಕ ಮಹಾಪುರುಷರಿಂದ ಭಿನ್ನರಾಗಿ ತೋರುತ್ತಾರೆ. ಈ ಸಂಗ್ರಹದಲ್ಲಿಯ ಅಂಬಿಗರ ಚೌಡಯ್ಯ ಈ ಮಾತಿಗೆ ನಿದರ್ಶನವೆನಿಸಿದ್ದಾನೆ. ಆದರೆ ಅನಾಮಿಕ ನಾಚಯ್ಯ, ಉರಿಲಿಂಗಪೆದ್ದಿಗಳಂಥ ಕೆಳವರ್ಗದಿಂದ ಬಂದ ಶರಣರು ಸಮಾಜ ಸುಧಾರಣೆಯ ಬಗ್ಗೆ ಹೆಚ್ಚು ಮಾತನಾಡದಿರುವುದು ಇಲ್ಲಿ ಗಮನಿಸತಕ್ಕ ಸಂಗತಿಯಾಗಿದೆ.

ಸಾಮಾನ್ಯವಾಗಿ ಎಲ್ಲ ವಚನಕಾರರು ಲಿಂಗಾಯತ ತತ್ವಗಳನ್ನು ತಮ್ಮ ತಮ್ಮ ವಚನಗಳಲ್ಲಿ ಪ್ರತಿಪಾದಿಸಿದ್ದಾರೆ. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ಮೊದಲಾದ ಸಿದ್ಧಾಂತಗಳ ವ್ಯಾಪಕ ವಿವೇಚನೆ ಅಲ್ಲಿ ನೆಲೆನಿಂತಿದೆ. ಆದರೆ ಪಾಠಾಂತರ–ರೂಪಾಂತರ ದಾಳಿಗಳಿಗೆ ತುತ್ತಾದ ಸುಪ್ರಸಿದ್ಧ ಶರಣರ ವಚನಗಳಿಗಿಂತ, ಅಂಥ ದಾಳಿಗಳಿಂದ ದೂರ ಉಳಿದ ಇಲ್ಲಿಯ ಅರಿವಿನ ಮಾರಿತಂದೆ, ಅವಸರದ ರೇಕಣ್ಣ, ಆದಯ್ಯ, ಏಲೇಶ್ವರ ಕೇತಯ್ಯ ಇವರ ವಚನಗಳಲ್ಲಿ ಆ ತತ್ವಗಳ ನಿಜಸ್ವರೂಪ ಉಳಿದುಕೊಂಡಿರುವುದು ವಿಶೇಷ ಸಂಗತಿಯಾಗಿದೆ. ಶರಣಸಿದ್ಧಾಂತದ ನಿಜಸ್ವರೂಪದ ಅಧ್ಯಯನಕ್ಕೆ ಇನ್ನು ಮೇಲೆ ಇವುಗಳತ್ತ ವಿದ್ವಾಂಸರು ಗಮನ ಕೊಡುವುದು ಅವಶ್ಯವಿದೆ. ಈವರೆಗೆ ಪ್ರಸಿದ್ಧ ಶರಣರ ವಚನಗಳಲ್ಲಿ ಪ್ರಸಿದ್ಧ ತತ್ವಗಳನ್ನು ತಿಳಿದಿದ್ದ ನಮ್ಮ ಕಣ್ಣಿಗೆ ಈ ಅಪ್ರಸಿದ್ಧ ಶರಣರ ವಚನಗಳಲ್ಲಿ ಶರಣಸಿದ್ಧಾಂತದ ಹೊಸ ಹೊಸ ಮಗ್ಗಲುಗಳು ಕಂಡುಬರುತ್ತವೆ. ಇವುಗಳ ಅಭ್ಯಾಸದಿಂದ ಲಿಂಗಾಯತದ ತಿಳಿವಳಿಕೆ ಖಂಡಿತ ವರ್ಧಿಸುತ್ತದೆ.

* * *

ಇಲ್ಲಿಯ ಅಂಬಿಗರ ಚೌಡಯ್ಯನೇ ಒಂದು ವಿಧ, ಮಿಕ್ಕವರೇ ಒಂದು ವಿಧ. ಚೌಡಯ್ಯನಲ್ಲಿ ತಾತ್ವಿಕಕ್ಕಿಂತ ನೈತಿಕ ಮತ್ತು ಸಾಮಾಜಿಕ ವಿಚಾರಗಳೇ ಅಧಿಕ. ಹೀಗೆ ಲೋಕನೀತಿ ಸಮಾಜನೀತಿಗಳು ವಸ್ತುವಾದಲ್ಲಿ ಸಹಜವಾಗಿಯೇ ಸಾಹಿತ್ಯ ಬಂಡಾಯದ ಧ್ವನಿ ಪಡೆಯುತ್ತದೆ, ರಚನೆ ಸರಳತೆಗೆ ಹೊರಳುತ್ತದೆ. ಈ ಬಂಡಾಯಧ್ವನಿ –ಸರಳತೆಗಳು ಈತನ ವಚನಗಳ ಮುಖ್ಯ ಲಕ್ಷಣವಾಗಿವೆ.

ಇವರೆಲ್ಲರಿಗಿಂತ ತುಂಬ ಭಿನ್ನವ್ಯಕ್ತಿ ಉರಿಲಿಂಗದೇವ. ಈತನ ವಚನಗಳಲ್ಲಿ ಶರಣಸತಿ–ಲಿಂಗಪತಿ ತತ್ವ ತುಂಬಿ ಸೂಸುತ್ತದೆ. ಮಧುರವಾದ ಶೈಲಿಯಲ್ಲಿ ವಿರಹ, ವಿಪ್ರಲಂಭ, ಮಿಲನ ಇತ್ಯಾದಿ ಭಾವಗಳನ್ನು ಎರಕ ಹೊಯ್ದ ಬಗೆ, ರಮ್ಯ ಭಾವಗೀತೆಯಾಗಿ ಹೆಪ್ಪುಗಟ್ಟಿದೆ.

ಪ್ರಸ್ತುತ ೩ನೆಯ ಆವೃತ್ತಿಯ ಪರಿಷ್ಕರಣ

ಇಲ್ಲಿಯ ವರೆಗೆ ಪ್ರಸಿದ್ಧ ಶರಣರ ವಚನಗಳ ಸಂಪಾದನೆ, ವಿವೇಚನೆ ಇತ್ಯಾದಿ ಅಧ್ಯಯನಗಳು ನಡೆದು, ಅವುಗಳ ಪಾಠ ಆಗಾಗ ಪರಿಷ್ಕರಣಗೊಳ್ಳುತ್ತ ಬಂದಿದೆ. ಅಪ್ರಸಿದ್ಧ ಶರಣರ ವಚನಗಳಿಗೆ ಈ ಮಾತು ಅನ್ವಯಿಸುವುದಿಲ್ಲ. ಇವು ಒಂದು ಸಲ, ಬಹಳೆಂದರೆ ಎರಡು ಸಲ ಪ್ರಕಟವಾಗಿವೆ. ಪ್ರಾಚೀನ ಕಾಲದಲ್ಲಿ ಲಿಪಿಕಾರರ, ಅಭ್ಯಾಸಿಗಳ ದಾಳಿಗೂ ಇವು ಅಷ್ಟಾಗಿ ಗುರಿಯಾಗಿಲ್ಲವಾಗಿ

ಇವುಗಳ ಪಾಠ ಕೆಲಮಟ್ಟಿಗೆ ಸುರಕ್ಷಿತವಾಗಿದೆ. ಹೀಗಿದ್ದೂ ಈ ಸಂಪುಟದ ಉರಿಲಿಂಗಪೆದ್ದಿಯ ವಚನಗಳು ಸಂಸ್ಕೃತ ವಿದ್ವಾಂಸರ ಕೈವಾಡದಿಂದ ವಿರೂಪಗೊಳ್ಳುತ್ತ ಬಂದರೆ, ಅಂಬಿಗರ ಚೌಡಯ್ಯನ ವಚನಗಳು ಸಾಮಾನ್ಯರ ಕೈವಾಡದಿಂದ ವ್ಯತ್ಯಾಸಗೊಳ್ಳುತ್ತ ಬಂದಿವೆ. ಬಂಡಾಯಧ್ವನಿ, ಸರಳರಚನೆ ಕಾರಣವಾಗಿ ಜನರ ನಡುವೆ ಪ್ರವಹಿಸಿದ ಅಂಬಿಗರ ಚೌಡಯ್ಯನ ವಚನಗಳು ಸಹಜವಾಗಿಯೇ ಪಾಠಾಂತರದ ದಾಳಿಗೆ, ಪ್ರಕ್ಷಿಪ್ತತೆಯ ಅನ್ಯಾಯಕ್ಕೆ ಗುರಿಯಾಗಿವೆ. ಇದಲ್ಲದೆ ಇವನ ವಚನಗಳು ಪುರವಂತರ ಒಡಬುಗಳಾಗಿ ಬಳಕೆಗೊಳ್ಳುತ್ತಿರುವಲ್ಲಿ, ಬೇರೆ ಒಡಬುಗಳೂ ಚೌಡಯ್ಯನ ವಚನಗಳಾಗಿ ನಿಂತುದರಿಂದ, ಇವುಗಳ ಪರಿಷ್ಕರಣ ಜಟಿಲವೆನಿಸಿದೆ. ಈ ಎಲ್ಲ ತಿಳಿವಳಿಕೆಯ ಹಿನ್ನೆಲೆಯಲ್ಲಿ ೨೪ ಜನ ಶರಣರ ವಚನಗಳನ್ನು ಇಲ್ಲಿ ಪರಿಷ್ಕರಿಸಿ ಕೊಡಲಾಗಿದೆ.

ಈ ಕೆಲಸದಲ್ಲಿ ನಾವು ಎದುರಿಸಿದ ಸಮಸ್ಯೆ–ಪರಿಹರಿಸಿಕೊಂಡ ರೀತಿಗಳ ಬಗ್ಗೆ ಪ್ರಥಮ ಆವೃತಿಯಲ್ಲಿ ವಿವರವಾಗಿ ಚರ್ಚಿಸಿದ್ದೇವೆ. ಆಸಕ್ತರು ಆ ಆವೃತ್ತಿಯಲ್ಲಿ ನೋಡಬಹುದು. ಆ ಪ್ರಥಮ ಆವೃತ್ತಿಯಲ್ಲಿ ಉಳಿದುಕೊಂಡಿದ್ದ ದೋಷಗಳನ್ನು ದ್ವಿತೀಯ ಆವೃತ್ತಿಯಲ್ಲಿ ತಿದ್ದಿಕೊಂಡಿದ್ದೇವೆ. ಅಲ್ಲಿಯೂ ಉಳಿದುಕೊಂಡಿದ್ದ ದೋಷಗಳನ್ನು ಪ್ರಸ್ತುತ ಆವೃತ್ತಿಯಲ್ಲಿ ಸರಿಪಡಿಸಿಕೊಂಡಿದ್ದೇವೆ. ಹೀಗಿದ್ದೂ ಕೆಲವು ಸಮಸ್ಯೆಗಳು ಉಳಿದುಕೊಂಡಿವೆ. ಉದಾ: ಅರಿವಿನ ಮಾರಿತಂದೆ ೩೦೩ =ಪ್ರಸಾದಿ ಭೋಗಣ್ಣ ೨, ಉರಿಲಿಂಗದೇವ ೩=೪೬ ಇತ್ಯಾದಿ.

ಸಂಪಾದಕ ಸಮಿತಿಯ ಸಭೆಯಲ್ಲಿ ನಿರ್ಣಯಿಸಿದ ಮೇರೆಗೆ ಸ್ಥಲಕ್ರಮದ ವಚನಕೃತಿಗಳನ್ನು ಅದೇ ಕ್ರಮದಲ್ಲಿ ಇಟ್ಟುಕೊಂಡು, ಅವುಗಳಿಗೆ ಸಂಬಂಧಿಸಿದ ಹೆಚ್ಚಿನ ವಚನಗಳನ್ನು ಅಲ್ಲಲ್ಲಿಯೇ ಪರಿಶಿಷ್ಟವಾಗಿ ಕೊಟ್ಟಿದ್ದೇವೆ. ಈ ಸಂಪುಟದಲ್ಲಿ ಅಂಥವುಗಳೆಂದರೆ ಅರಿವಿನ ಮಾರಿತಂದೆಗಳ ವಚನ, ಅವಸರದ ರೇಕಣ್ಣಗಳ ವಚನ. ಮಿಕ್ಕ ೨೨ಜನ ಶರಣರ ವಚನಗಳನ್ನು ಅಕಾರಾದಿಯಾಗಿ ಸಂಯೋಜಿಸಿದ್ದೇವೆ. ಶೂನ್ಯಸಂಪಾದನೆಯಂಥ ಸಂವಾದರೂಪದ ಕೃತಿಗಳು ಪ್ರಶ್ನೋತ್ತರಗಳನ್ನು ಏರ್ಪಡಿಸುವ ಸಲುವಾಗಿ ವಚನದ ಆದಿಯನ್ನು ವ್ಯತ್ಯಾಸಮಾಡಿಕೊಂಡಂತಿವೆ. ಇಲ್ಲಿ ಅಕಾರಾದಿ ಕ್ರಮದಲ್ಲಿ ಜೋಡಿಸಿದ ಕಾರಣವಾಗಿ ಅಂಥ ವಚನಗಳು ಕೆಲವೊಮ್ಮೆ ಅರ್ಥ ಸಂದೇಹ ಹುಟ್ಟಿಸುತ್ತವೆ. ಒಬ್ಬ ಶರಣನ ವಚನಗಳನ್ನು ಒಂದೆಡೆಗೆ ತರುವಾಗ ಇದು ಅನಿವಾರ್ಯವೆಂದೇ ಹೇಳಬೇಕು.

ಇಂಥ ಏನೆಲ್ಲ ಸಮಸ್ಯೆಗಳನ್ನು ಪರಿಹರಿಸಿಕೊಂಡರೂ ಇನ್ನೂ ನಮಗೆ ಅತೃಪ್ತಿ ಉಳಿದುಕೊಂಡಿದೆ. ಎಷ್ಟೇ ಎಚ್ಚರವಹಿಸಿದರೂ ಕೆಲವು ಅಚ್ಚಿನ ದೋಷಗಳು ಉಳಿದುಕೊಂಡಿವೆ. ನಮ್ಮ ಶ್ರದ್ಧೆ–ಶ್ರಮಗಳನ್ನು ಮೀರಿಯೂ ಉಳಿದಿರುವ ಈ ದೋಷಗಳನ್ನು ವಿದ್ವಾಂಸರು ಮನ್ನಿಸಬೇಕಾಗಿ ಪ್ರಾರ್ಥನೆ.

ಕೃತಜ್ಞತೆ

“ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ”ಯಂಥ ಬಹುದೊಡ್ಡ ಯೋಜನೆಗೆ ಅನೇಕರ ಸಹಾಯಹಸ್ತ ಅಗತ್ಯವೆಂದು ಬೇರೆ ಹೇಳಬೇಕಿಲ್ಲ. ಈ ಅವಧಿಯಲ್ಲಿ ಸಲಹಾ ಸಮಿತಿಯ ಸದಸ್ಯರಾದ ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ.ಪಿ.ಕೃಷ್ಣಕುಮಾರ, ಡಾ. ಎಸ್. ವಿದ್ಯಾಶಂಕರ, ಶ್ರೀ ಬೆಲ್ದಾಳ ಶರಣರು ಉದ್ದಕ್ಕೂ ಮಾರ್ಗದರ್ಶನ ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಬಂಜಗೆರೆ ಜಯಪ್ರಕಾಶ ಮತ್ತು ಅವರ ಕಾರ್ಯಾಲಯ ಸಿಬ್ಬಂದಿ ವರ್ಗದವರು ಉದ್ದಕ್ಕೂ ನೆರವಾಗಿದ್ದಾರೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

❖❖

ಅಡಿಟಿಪ್ಪಣಿ :

೧. ಆದಯ್ಯನ ಲಘು ಕೃತಿಗಳು(ಸಂ. ಎಂ.ಎಂ. ಕಲಬುರ್ಗಿ).

೨. ವಚನಗಳಲ್ಲಿ ಚತುರಾಚಾರ್ಯರ ಉಲ್ಲೇಖ: ಒಂದು ಪ್ರಕ್ಷಿಪ್ತತೆ(ಮಾರ್ಗ-೪.ಪುಟ.೬೪).

೩. ಈತನು ಲಿಂಗಸೂಗೂರ ತಾಲೂಕಿನ ಉಳಿಯುಮೇಶ್ವರ ಗ್ರಾಮದವನೆಂದು ಡಾ. ಎಚ್. ಚಂದ್ರಶೇಖರ ಹೇಳುತ್ತಾರೆ. (ನೋಡಿ : ಬಸವಪಥ ೨೫-೧೧೧).

೪. ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಮಲ್ಲಿಪಟ್ಟಣ ಉಳಿಮೇಶ್ವರದೇವರೊಂದಿಗೆ ಈ ಚಿಕ್ಕಯ್ಯನ ಸಂಬಂಧವನ್ನು ಡಾ. ಚೆನ್ನಬಸಯ್ಯ ಹಿರೇಮಠ ಕಲ್ಪಿಸುತ್ತಾರೆ.(ನೋಡಿ : ಸತ್ಯದ ಹಾದಿ, ಪುಟ. ೯೪).

೫. ಈ ಮುದ್ರಿಕೆಗಳ ಸಮಸ್ಯೆಗಾಗಿ ಡಾ ಬಸವಲಿಂಗ ಸೊಪ್ಪಿಮಠ ಅವರ 'ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ-ಅಂಕಿತದ ವಚನಕಾರ ಯಾರು?' ಲೇಖನ ನೋಡಿರಿ(ಸಂಕ್ರಮಣ ೪೦೪-೪೦೬).

*

ಪರಿವಿಡಿ

*

ಅಂಗಸೋಂಕಿನ ಲಿಂಗತಂದೆಯ ವಚನ

೧

ಅಂಗಕ್ಕೊಂದು ಸುಗುಣ ದುರ್ಗುಣ ಸೋಂಕುವಲ್ಲಿ
ಸೋಂಕಿದ ಕಲೆ ಅಂಗಕ್ಕೋ ಆತ್ಮಂಗೋ?
ಅಂಗಕ್ಕೆಂದಡೆ ಚೇತನವಿಲ್ಲದೆ ಒಂದನೂ ಮುಟ್ಟದಾಗಿ,
ಆತ್ಮಂಗೆಂದಡೆ ಒಂದು ಲಕ್ಷ್ಮದ ಮರೆಯಲಲ್ಲದೆ ಲಕ್ಷಿಸಿಕೊಳದು.
ಇಂತೀ ಕಾಯವೂ ಆ[ತ್ಮ]ವೂ ಒಡಗೂಡಿ ಅರಿವಲ್ಲಿ
ಆ ಅರಿವು ಲಿಂಗವನೊಡಗೂಡಿಯಲ್ಲದೆ ಬೇರೆ ಒಡಲುವಿಡಿಯದು.
ಇಂತೀ ಅಂಗ ಆತ್ಮ ಲಿಂಗಮೂರ್ತಿ ತ್ರಿವಿಧ ಸಂಗವಾದಲ್ಲದೆ
ಮುಂದಣ ಅರಿವಿನ ಕುರುಹು ನಿರಿಗೆಯಾಗದು.
ಆ ನಿರಿಗೆಯ ಅಂಗ ಸುಸಂಗವಾದಲ್ಲಿ
ಭೋಗಬಂಕೇಶ್ವರಲಿಂಗವು ಅಂಗಸೋಂಕಿನಲ್ಲಿ ಅಡಗಿದ ತೆರ. ॥೧॥

೨

ಅಪ್ಪುವಿನ ಸಂಯೋಗದಿಂದ ಮೃತ್ತಿಕೆ ಮಡಕೆಯಾಗಿ,
ಮತ್ತೆ ಅಪ್ಪುವಿನೊಡಗೂಡಿ ತುಂಬಲಿಕ್ಕಾಗಿ,
ಮತ್ತಾ ಅಪ್ಪುವಿನ ದ್ರವಕ್ಕೆ ಮೃತ್ತಿಕೆ ಕರಗಿದುದಿಲ್ಲ.
ಅದೇತಕ್ಕೆ? ಅನಲ ಮುಟ್ಟಿದ ದೆಸೆಯಿಂದ.
ಅದು ಕಾರಣ, ಇಂತೀ ವಸ್ತುವಿನ ದೆಸೆಯಿಂದ
ಸತ್ಕ್ರಿಯಾಮಾರ್ಗಂಗಳು ಭವದ ತೊಟ್ಟುಬಿಟ್ಟವು.
ಇಂತೀ ದೃಷ್ಟವರಿದು ಸರ್ವಕ್ರೀಗಳೆಲ್ಲವೂ ವಸ್ತುವ ಮುಟ್ಟಲಿಕ್ಕಾಗಿ
ಪೂರ್ವಗುಣ ತನ್ನಷ್ಟವಾಯಿತ್ತು.
ಭೋಗಬಂಕೇಶ್ವರಲಿಂಗವನರಿದ ಕಾರಣ. ॥೨॥

೩

ಆವಂಗದ ಮರೆಯಲ್ಲಿದ್ದು ಕಾದುವ ಭಟನು;
ಆ[ವಂಗ]ದ ಮರೆಯ ಸತ್ವವೋ? ತನ್ನ ಹೃದಯದ ಸತ್ವವೋ?
ಒಂದನಹುದು ಒಂದನಲ್ಲಾ,
ಎಂದಡೆ ಕ್ರೀ ನಿಃಕ್ರೀಯೆಂಬ ಉಭಯವಿಲ್ಲ.
ಎರಡನೊಡಗೂಡಿ ಒಂದನರಿದಿಹೆನೆಂದಡೆ
ಸಾಕಾರವೊಂದು, ನಿರಾಕಾರವೊಂದು.
ಸಾಕಾರವನು ನಿರಾಕಾರವನು ಏಕೀಕರಿಸಿ ಕಂಡೆಹೆನೆಂದಡೆ
ಅದು ಒಂದು ದೃಷ್ಟ, ಒಂದು ತನ್ನಷ್ಟ.
ಆ ಉಭಯದಂಗ ಒಂದಂಗವಾಗಿ
ಕರ್ಪುರದ ಗಿರಿಯಲ್ಲಿ ಉರಿಯುದಿಸಿದ ತೆರನಂತೆ
ಉಭಯ ಏಕವಾಗಿಯಲ್ಲದೆ ಭೋಗಬಂಕೇಶ್ವರಲಿಂಗವನರಿಯಬಾರದು. ॥೩॥

೪

ಎನ್ನ ಕಾಯದ ಕದಳಿಯೆ ಸಂಗಬಸವಣ್ಣನು,
ಎನ್ನ ಜೀವದ ಸುಮನವೆ ಚೆನ್ನಬಸವಣ್ಣನು.
ಎನ್ನ ಭಾವದ ಬಲುಹೆ ಪ್ರಭುದೇವರು,
ಎನ್ನ ತನುವಿನ ಮೂರ್ತಿಯೆ ಚಂದಯ್ಯನು,
ಎನ್ನ ಮನದ ನಿಶ್ಚಯವೆ ಮಡಿವಾಳಯ್ಯನು,
ಎನ್ನ ಪ್ರಾಣದ ಪರಿಣಾಮವೆ ಹಡಪದಪ್ಪಣ್ಣನು,
ಎನ್ನ ಅರುಹಿನ ನೈಷ್ಠೆಯೆ ಸೊಡ್ಡಳ ಬಾಚರಸನು,
ಎನ್ನಾಚಾರದ ದೃಢವೆ ಮೋಳಿಗೆಯ ಮಾರಯ್ಯನು,
ಎನ್ನ ನೋಟದ ನಿಬ್ಬೆರಗೆ ಅನಿಮಿಷದೇವರು.
ಎನ್ನ ಶ್ರೋತ್ರದ ಕೇಳಿಕೆಯೆ ಮರುಳಶಂಕರದೇವರು,
ಎನ್ನ ಹೃದಯದ ಜ್ಯೋತಿಯೆ ಘಟ್ಟಿವಾಳಯ್ಯನು,
ಎನ್ನಂತರಂಗದ ಬೆಳಗೆ ಅಜಗಣ್ಣಯ್ಯನು,
ಎನ್ನ ಬಹಿರಂಗದ ನಿರಾಳವೆ ನಿಜಗುಣದೇವರು,
ಎನ್ನ ಸರ್ವಾಂಗದ ಕಳೆಯೆ ಸಿದ್ಧರಾಮಯ್ಯನು,
ಎನ್ನ ಗತಿಮತಿಚೈತನ್ಯವೆ ಏಳ್ನೂರೆಪ್ಪತ್ತಮರಗಣಂಗಳು,
ಭೋಗಬಂಕೇಶ್ವರಾ, ನಿಮ್ಮ ಶರಣರ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು. ॥೪॥

೫

ಪೂರ್ವ ಆದಿಯಂತ ಸಿದ್ಧಾಂತವಾದ ತೆರ:
ಆವ ಬೀಜವೂ ಅಪ್ಪುಸಾರವಿಲ್ಲದೆ ಪ್ರತ್ಯಕ್ಷ ದೃಷ್ಟವುಂಟೆ?
ಸರ್ವಕ್ರೀಗಳೆಲ್ಲವೂ ಜ್ಞಾನವಿಲ್ಲದಿರೆ ಕ್ರೀದೃಷ್ಟಸತ್ಯವಪ್ಪವೆ?
ಇಂತೀ ಜ್ಞಾನಸರ್ವಗುಣನಾಗಿ ಸತ್ಕ್ರೀಮಾರ್ಗಗಳಿಂದ
ಒಪ್ಪಲ್ಪಟ್ಟುದು ಲಿಂಗದ ಅಂಗದ ಸೋಂಕಿನ ಸಂಗ,
ಈ ಗುಣವು ಭೋಗಬಂಕೇಶ್ವರಲಿಂಗದೊಲವು. ॥೫॥

೬

ಭರಿತಾರ್ಪಣವೆಂದು ಅಪೇಕ್ಷಿಸುವಲ್ಲಿ
ಸೂಚನೆಯರಿತು ಒಂದನೊಂದು ಇರಿಸೆಂದು ಸಂದಣಿಗೊಳುತ್ತ,
ಬಂದ ದ್ರವ್ಯವೆಯ್ದದೆಂದು ತಂದು ಸುರಿಯೆನುತ್ತ,
ಸಂದ ದ್ರವ್ಯವ ಮತ್ತೆ ಉಲ್ಲಂಘಿಸಿ ಇರುತ್ತ, ಮತ್ತೆ
ಮಿಶ್ರದಿಂದ ದ್ರವ್ಯಂಗಳು ಬಿಸುರಿಬಂದು ಸೋಂಕಲಿಕೆ ಮತ್ತಿರಿಸಬಹುದೆ?
ಕಟ್ಟಳೆಯ ಮೀರಿ ಸೋಂಕಿದುದ ಮತ್ತೆ ಅರ್ಪಿಸಬಹುದೆ?
ಇದು ಕಾರಣದಲ್ಲಿ ಕೆರಹಿನಳೆತಕ್ಕೆ ಕಾಲ ಕಡಿಸಿಕೊಳ್ಳದೆ,
ಬಸುರಿಂಗಾಗಿ ಬಣಬೆಯ ಸುಡದೆ,
ಕಿಂಚಿತ್ತು ವಿಷಯಲಂಪಟಕ್ಕಾಗಿ
ಸಹಪಙ್ತಿಗಳಲ್ಲಿ ವಿಶೇಷವನೆಂದೂ ಮುಟ್ಟದೆ,
ಅವರು ತಮ್ಮಾಳಿಯನರಿದು ಮಾಡಿದಂತೆ,
ತಾ ತನ್ನ ವೇಳೆಯನರಿದು ಅರ್ಪಿತವ ಮಾಡಿಕೊಂಡು
ಮಹಾನದಿಗಳಲ್ಲಿ ಸ್ಥೂಲ ಸೂಕ್ಷ್ಮ ಅತಿಸೂಕ್ಷ್ಮ ಕುಂಭಗಳನದ್ದಿ ತೆಗೆದಲ್ಲಿ
ಕುಂಭಕ್ಕೆ ತಕ್ಕ ಅಂಬು, ಅಂಗಕ್ಕೆ ತಕ್ಕ ದ್ರವ್ಯಪದಾರ್ಥಂಗಳ
ಅಂಗೀಕರಿಸುವುದು ಭರಿತಾರ್ಪಣದ ಸಂಗ.
ಇದು ಲಿಂಗಸೋಂಕಿನ ಅಂಗದ ವಿವರ.
ಹೀಂಗಲ್ಲದೆ ತಂದು ಸುರಿಯಿಸಿಕೊಂಡು, ಕೊಂಡಷ್ಟು ಕೊಂಡು,
ಇಂತೀ ಭರಿತಾರ್ಪಣಲಿಂಗಪ್ರಸಾದವ
ಕಂಡವರು ಕೊಂಡುಹೋಗಿ ಎಂದು ಕೊಡುವ
ಭಂಡನ ಭರಿತಾರ್ಪಣ ಲಿಂಗಕ್ಕೆ ಸಲ್ಲದಾಗಿ,
ಇದು ಕಾರಣದಲ್ಲಿ ತುಂಬಿದ ಶಕಟಕ್ಕೆ
ಅಂಗುಲದಷ್ಟು ತೃಣಭಾರವಾದಂತೆ,
ಇದು ಶಿವಲಿಂಗಾಂಗಿಗಳು ಒಪ್ಪದ ತೆರ.
ಇಂತೀ ಗುಣ ಭರಿತಾರ್ಪಣಂಗಳಲ್ಲಿ

ನಿಂದುದ ಸಂದುದ ಬಂಧಂಗಳಲ್ಲಿ ಆತ್ಮವಿಚ್ಛಂದವಿಲ್ಲದೆ
ಆ ಲಿಂಗಘಟಕ್ಕೆ ಸಲುವ ಪ್ರಮಾಣಂಗಳನರಿದು
ಅರ್ಪಿತವ ಮಾಡುವುದು ಭರಿತಾರ್ಪಣ.
ಈ ಗುಣ ಭೋಗಬಂಕೇಶ್ವರಲಿಂಗಕ್ಕೆ ಸಮರ್ಪಣ. ॥೬॥

೭

ಭರಿತಾರ್ಪಣವೆಂದು ಲಿಂಗಕ್ಕೆ ಸಮರ್ಪಿಸಿದ ಮತ್ತೆ
ಪ್ರತಿಪ್ರಸಾದವೆಂದು ಕೊಂಬಲ್ಲಿ ಭರಿತಾರ್ಪಣವೆಂತುಟಾಯಿತ್ತು?
ತನ್ನಯ ಘಟದ ಹೆಚ್ಚುಗೆಯೊ?
ಅಲ್ಲಾ, ಭರಿತಾರ್ಪಣದ ವ್ರತದ ನಿಶ್ಚಯವೊ?
ಕಟ್ಟಿನ ವ್ರತಕ್ಕೆ ಪುನರಪಿ ಕ್ರೀಯುಂಟೆ?
ಸತ್ಯ ಜಾರಿದ ಮತ್ತೆ ಮುಕ್ತಿಯ ಪಥ ಅವಂಗುಂಟೆ?
ಇಂತೀ ಕಂಡವರ ಕಂಡು, ಕೈಕೊಂಡು, ಅವರೊಂದಾಗಿ ಆಡಿ,
ಅವರ ಸಂಸರ್ಗದಿಂದವ ಕಲಿತು, ಅವರು ಹಿಂಗಿದ ಮತ್ತೆ
ತಾನೆಂದಿನಂತಹ ಕ್ರಿಯಾಭಂಡನ ಭರಿತಾರ್ಪಣಲಂಡನ
ಮತ್ತಾವ ಕ್ರೀಯಲ್ಲಿಯೂ ತಪ್ಪಿ,
ಆ ತಪ್ಪಿಗೆ ವ್ರತವ ಹೆಚ್ಚಿಸಿಕೊಂಡಹೆನೆಂಬ
ದುರ್ಮತ್ತ ಸುರಾಪಾ[ನಿಯಿಂ]ದತ್ತ ಕಾಣದಿರ್ದಡೆ
ಭಕ್ತಿಗೆ ಸಲ್ಲ, ಮುಕ್ತಿಯವಂಗಿಲ್ಲ,
ಸದ್ಭಕ್ತರೊಳಗಲ್ಲ, ಮಿಕ್ಕಾದ ಕೃತ್ಯ ಅವಂಗಿಲ್ಲ,
ಇದು ಸತ್ಯ, ಭೋಗಬಂಕೇಶ್ವರಲಿಂಗ ಸಾಕ್ಷಿಯಾಗಿ. ॥೭॥

೮

ಮನದ ಕೈಯಿಂದರಿದು, ಬುದ್ಧಿಯ ಕೈಯಿಂದ ವಿಚಾರಿಸಿ,
ಚಿತ್ತದ ಕೈಯಿಂದ ಅರ್ಪಿಸಿಕೊಂಬುದು
ಜ್ಞಾತೃವೋ ಜ್ಞಾನವೋ ಜ್ಞೇಯವೋ?
ಇಂತೀ ತ್ರಿವಿಧದ ಕೈಯಲ್ಲಿ ತ್ರಿವಿಧಮುಖಂಗಳಿಂದ ಅರ್ಪಿಸಿಕೊಂಬುದು
ಅಂಗದ ಮೇಲಿದ್ದ ಲಿಂಗಸೋಂಕೊ?
ಆ ಲಿಂಗದ ಒಳಗಣ ಕಳಾಸ್ವರೂಪೊ?
ಅಲ್ಲಾ, ತನ್ನ ಅರಿದ ಅರುಹಿಸಿಕೊಂಬ ನಿರುಗೆಯ ಕುರುಹೊ?
ಇಂತೀ ಅಂಗದಲ್ಲಿ, ಭಾವದಲ್ಲಿ, ಅರಿದ ಅರಿಕೆಯಲ್ಲಿ
ತ್ರಿವಿಧ ಕುರುಹಳಿದು ಒಡಗೂಡಿದಲ್ಲಿ ಅಂಗಸೋಂಕು,
ಅಲ್ಲಿಯೇ ನಿರಾಳ ಭೋಗಬಂಕೇಶ್ವರಲಿಂಗವಲ್ಲಿಯೇ. ॥೮॥

೯
ಮರದೊಳಗಣ ಬೆಂಕಿ ತನ್ನ ತಾನೇ ಉರಿಯಬಲ್ಲುದೆ?
ಶಿಲೆಯೊಳಗಣ ದೀಪ್ತಿ ಆ ಬೆಳಗ ತನ್ನ ತಾನೆ ಬೆಳಗಬಲ್ಲುದೆ?
ಆ ತೆರನಂತೆ ಕುಟಿಲನ ಭಕ್ತಿ, ಕಿಸುಕುಳನ ವಿರಕ್ತಿ
ಮಥನಿಸಿಯಲ್ಲದೆ ದಿಟಹುಸಿಯ ಕಾಣಬಾರದು.
ಸತ್ಯವನು ಅಸತ್ಯವನು ಪ್ರತ್ಯಕ್ಷ ಪ್ರಮಾಣಿಸಿದಲ್ಲದೆ
ನಿಶ್ಚಯವನರಿಯಬಾರದು,
ಗುರುವಾದಡೂ ಲಿಂಗವಾದಡೂ ಜಂಗಮವಾದಡೂ
ಪರೀಕ್ಷಿಸಿ ಹಿಡಿಯದವನ ಭಕ್ತಿ, ವಿರಕ್ತಿ,
ತೂತಕುಂಭದಲ್ಲಿಯ ನೀರು, ಸೂತ್ರ ತಪ್ಪಿದ ಬೊಂಬೆ,
ನಿಜನೇತ್ರ ತಪ್ಪಿದ ದೃಷ್ಟಿ;
ಬೇರು ಮೇಲಾದ ಸಸಿಗೆ ನೀರಿನಾರೈಕೆಯುಂಟೆ?
ಇಂತು ಆವ ಕ್ರೀಯಲ್ಲಿಯೂ ಭಾವಶುದ್ಧಾತ್ಮನಾಗಿ ಆರೈಕೆ ಬೇಕು,
ಭೋಗಬಂಕೇಶ್ವರಲಿಂಗದ ಸಂಗದ ಶರಣನ ಸುಖ. ॥೯॥

೧೦
ಲಿಂಗಪ್ರಸಾದವ ಕೊಂಬುತಿದ್ದು ಮತ್ತೆ,
ಪದಾರ್ಥದ್ರವ್ಯಂಗಳು ಇದಿರೆಡೆಯಾಗಿ ಬರಲಿಕಾಗಿ
ಆ ಕರದಲ್ಲಿಯೆ ದ್ರವ್ಯವ ಸಮರ್ಪಿಸಬಹುದೆ?
ಅಹುದೆಂದಡೆ ಕ್ರೀ ಸೂತಕ,
ಅಲ್ಲಾ ಎಂದಡೆ ಪ್ರಥಮಪ್ರಸಾದ ಅವರಿಗಿಲ್ಲ.
ಇಂತೀ ಉಭಯವರಿದು ಅರ್ಪಿಸಬಲ್ಲಡೆ ಲಿಂಗಾಂಗ ಸಹಭೋಜನವೆಂಬೆ.
ಅಲ್ಲದಿರ್ದಡೆ ಪಡುವಿಂಗೆ ನೆರೆದ ತುಡುಗುಣಿಗಳಂತೆ
ಬಾಯೊಳಗಣ ಕಚ್ಚು ದೇಹದೊಳಗಣ ಮುರುಗು
ಅವಂಗಾವ ನಿತ್ಯನೇಮವೂ ಇಲ್ಲ, ಇದು ಸತ್ಯ.
ಭೋಗಬಂಕೇಶ್ವರಲಿಂಗ ಸಾಕ್ಷಿಯಾಗಿ. ॥೧೦॥

೧೧
ಸಕಲಪದಾರ್ಥದ್ರವ್ಯಂಗಳೆಲ್ಲವ ಲಿಂಗಕ್ಕೆ ಮುಟ್ಟಿಸಿ
ಪ್ರಸಾದ ಮುಂತಾಗಿ ತಾ ಮುಟ್ಟಿಹೆನೆಂಬಲ್ಲಿ ತನ್ನ ಸಂಕಲ್ಪದ ಗುಣವೋ?
ಘನಲಿಂಗಕ್ಕೆ ತೃಪ್ತಿಮಾಡಿ ಒಕ್ಕುದ ಕೊಂಡಿಹೆನೆಂಬ ಕಟ್ಟಳೆಯ ಗುಣವೊ?
ಇಂತೀ ಸತ್ಕ್ರೀಮಾರ್ಗಂಗಳನರಿದು ಅರ್ಪಿಸುವಲ್ಲಿ
ಲಿಂಗಮುಂತಾಗಿ ತಾ ಕೊಂಬನಾಗಿ,

ಲಿಂಗಕ್ಕೆ ಮರೆದು ತಾಕೊಂಡಿಹೆನೆಂಬಲ್ಲಿ
ಲಿಂಗಕ್ಕೆ ತಾನೊಳಗೊ ಹೊರಗೊ-ಎಂಬುದು ತಿಳಿದು,
ಸಂದುದ ಕೈಕೊಂಡು ಸಲ್ಲದೆ ಮರವೆಯಿಂದ ಬಂದುದ
ಚರಲಿಂಗದ ಮುಖದಿಂದ ಸಂದುದ ಕೈಕೊಂಬುದು
ಅಂಗಸೋಂಕು, ಆತ್ಮಸೋಂಕು ಅರಿವುಸೋಂಕು.
ಈ ತ್ರಿವಿಧ ಸೋಂಕು ಪರಿಪೂರ್ಣವಾದುದು ಅರ್ಪಿತ, ಅವಧಾನಿಯ ಕಟ್ಟು,
ಹೀಂಗಲ್ಲದೆ ಮಿಕ್ಕಾದುದೆಲ್ಲವೂ ವಾಚಾಲಕರ ಕಟ್ಟುಕದ ಮಾತು.
ಆ ಮಾತಿನ ಮಾಲೆಯೆಲ್ಲವೂ ಭ್ರಷ್ಟ.
ಭೋಗಬಂಕೇಶ್ವರಲಿಂಗದಲ್ಲಿ ನಿಹಿತಾಚಾರಿಗಳ ಕಟ್ಟು. ॥೧೧॥

*

ಅಂಬಿಗರ ಚೌಡಯ್ಯಗಳ ವಚನ

೧೨

ಅಂಗದ ಗುಣವನರತು ಲಿಂಗವನರಿಯಬೇಕೆಂಬರು
ಅಂಗವರತ ಮತ್ತೆ ಲಿಂಗಕ್ಕೆ ಕುರುಹುಂಟೆ?
ಅಂಗವೆ ಲಿಂಗ, ನಿರಂಗವೆ ಸಂಗ.
ಈ ಭಾವದ ಅಂಗವನರಿಯಬೇಕೆಂದನಂಬಿಗ ಚೌಡಯ್ಯ. ॥೧॥

೧೩

ಅಂಗದೊಳಗಿಪ್ಪುದು ಲಿಂಗವಲ್ಲ, ಅಂಗದ ಹೊರಗಿಪ್ಪುದು ಲಿಂಗವಲ್ಲ.
ಎಲ್ಲ ಅಂಗಂಗಳನೊಳಕೊಂಡಿಪ್ಪ ಲಿಂಗ, ಹೋಗುತ್ತ ಬರುತ್ತ ಇಪ್ಪುದಲ್ಲ!
ಚಲನೆಯಿಲ್ಲದ ಅಚಲವಪ್ಪ ಲಿಂಗಕ್ಕೆ,
ಹೋಯಿತ್ತು ಎಂಬ ಸಂದೇಹವಿಲ್ಲವೆಂದನಂಬಿಗ ಚೌಡಯ್ಯ. ॥೨॥

೧೪

ಅಂಗವ ಅಂದ ಮಾಡಿಕೊಂಡು ತಿರುಗುವ
ಭಂಗಗೇಡಿಗಳು ನೀವು ಕೇಳಿರೋ.
ಅಂಗಕ್ಕೆ ಅಂದವಾವುದೆಂದರೆ:
ಗುರುವಿಗೆ ತನುವ ಕೊಟ್ಟಿರುವುದೆ ಚೆಂದ,
ಲಿಂಗಕ್ಕೆ ಮನವ ಕೊಟ್ಟಿರುವುದೆ ಚೆಂದ,
ಜಂಗಮಕ್ಕೆ ಧನವ ಕೊಟ್ಟಿರುವುದೆ ಚೆಂದ.
ಅಷ್ಟಾವರಣದಲ್ಲಿ ನಿಬ್ಬೆರಗಿನಿಂದ ಕೂಡಿ

ಭಕ್ತಿಯೆಂಬ ಸಮುದ್ರದಲ್ಲಿ ಈಸಾಡುವುದೆ ಚೆಂದ.
ಶಿವನ ಪಾದವ ಹೊಂದುವುದೆ ಚೆಂದ.
ಈ ಮಾರ್ಗವ ಬಿಟ್ಟು, ಸಂಸಾರವೇ ಅಧಿಕವೆಂದು
ತನ್ನ ಹೆಂಡಿರು ಮಕ್ಕಳು ಸಂಪತ್ತು ಇವು [ತ]ನಗೆ ಶಾಶ್ವತವೆಂದು ತಿಳಿದು,
ಒಂದು ಕಾಸನಾದರೂ ಪರರಿಗೆ ಕೊಡದೆ,
ತಾನೇ ತಿಂದು, ನೆಲದಲ್ಲಿ ಮಡಗಿ, ಕಡೆಗೆ ಯಮನ ಕೈಯಲಿ ಸಿಲ್ಕಿ
ನರಕ ಕೊಂಡದಲ್ಲಿ ಮುಳುಗೇಳುವುದೇ ನಿಶ್ಚಯ.
ಇಂತಹ ಅಂದಗೇಡಿಗಳ ಮುಖವ ನೋಡಲಾಗದೆಂದಾತ,
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. ॥೩॥

೧೫

ಅಂದ ಚಂದವ ಬಿಟ್ಟು, ಮಂಡೆ ಬೋಳಾದ ಮತ್ತೆ
ಅಂಗಕ್ಕೆ ಚಂದ ಅಲಂಕಾರವುಂಟೆ?
ತಮ್ಮಂಗದ ಸಂಗವನರಿಯದೆ ಲಿಂಗಸಂಗಿ ಎಂಬ
ಭಂಡರನೇನೆಂಬೆನೆಂದನಂಬಿಗ ಚೌಡಯ್ಯ. ॥೪॥

೧೬

ಅಂದಾದಿಬಿಂದುವಿನೊಳೊಂದಿದ ಹುಟ್ಟು,
ಆ ಹುಟ್ಟನೆ ಹಿಡಿದು ಅಂದ ಚೆಂದದಲ್ಲಿ ತೊಳಲಿ ಆಡುತ್ತೈದಾರೆ ಜಗವೆಲ್ಲಾ!
ಅಂದಗೆಟ್ಟವರೆಲ್ಲಾ ಬಂದೇರಿ ಹರುಗೋಲ,
ಒಂದೆ ಹುಟ್ಟಿನಲ್ಲಿಳುಹುವೆನೆಂದಾತನಂಬಿಗ ಚೌಡಯ್ಯ. ॥೫॥

೧೭

ಅಂಬಿಗ ಅಂಬಿಗ ಎಂದು ಕುಂದ ನುಡಿಯದಿರು,
ನಂಬಿದರೆ ಒಂದೆ ಹುಟ್ಟಲ್ಲಿ ಕಡೆಯ ಹಾಯಿಸುವನಂಬಿಗರ ಚೌಡಯ್ಯ. ॥೬॥

೧೮

ಅಂಬಿಗನು ಜಗದೊಳಗೆ ಇಂಬಿನಲೋಲಾಡುವನು;
ತುಂಬಿದ ಸಾಗರದೊಳಗೆ ನೋಡಯ್ಯ.
ನಿಂದ ದೋಣಿಯನೇರಿದಂದಿನ ಹುಟ್ಟ
ಕಂಡವರಂದವನರಿದಾತ ತೊಳಸುತ್ತಿದ್ದನು.
ಭಂದಗೆಟ್ಟವರೆಲ್ಲಾ ಬಂದೇರಿ ದೋಣಿಯನು
ಶಿವನೊಂದೆ ಠಾವಿಗೊಯ್ದಿಳುಹುವೆನೆಂದನಂಬಿಗ ಚೌಡಯ್ಯ. ॥೭॥

೧೯
ಅಂಬಿನ ಹಿಳಿಕಿನಲ್ಲಿ ಕಟ್ಟಿದ ವಿಹಂಗನ ಗರಿಯಂತೆ,
ತಾಗುವ ಮೊನೆಗಾಧಾರವಾಗಿ ದೂರ ಎಯಿದುವುದಕೆ
ಸಾಗಿಸುವ ಗುಣ ತಾನಾಗಿ
ಕ್ರೀ ಅರಿವಿನ ಭೇದದ ನೆರಿಗೆಯ ಕಾಬನ್ನಕ್ಕ,
ಅರಿವು ಕುರುಹು ಎರಡು ಬೇಕೆಂದನಂಬಿಗ ಚೌಡಯ್ಯ. ॥೮॥

೨೦
ಅಖಂಡಪರಿಪೂರ್ಣ ನುಡಿಗೆಡೆಯಿಲ್ಲದ, ಎಡೆಗೆ ಕಡೆಯಿಲ್ಲದ,
ಏಕೋಭರಿತ ಲಿಂಗವು ತಾನಾಗಿದ್ದ ಬಳಿಕ,
ಮತ್ತೆ ಲಿಂಗವು ಹೋಯಿತ್ತು, ಇದ್ದಿತ್ತೆಂದಾಡಿಕೊಂಡ
ಸೂತಕದ ಯೋಗಭ್ರಮಿತರ ಮಾತ ಕೇಳಲಾಗದು,
ಅ[ದ]ಂತಿರಲಿ, ಅದು ಎಂತಿದ್ದುದಂತೆ.
ಅದಕ್ಕೆ ಕ್ರೀಯಿಲ್ಲ, ನಿಃಕ್ರಿಯೆ ಒಡಲು ಆಯಿತ್ತಾಗಿ.
ಅದನಂತಿಂತೆಂದು ದೂಷಿಸಿ ನುಡಿವ ಅನಾಚಾರಿಗಳಿಗೆ
ಲಿಂಗವೆಲ್ಲಿಯದೊ? ನಿಜವೆಲ್ಲಿಯದೊ?
ಅವರು ಲಿಂಗಕ್ಕೆ ದೂರ, ಅವರು ತಮ್ಮ ತಾವರಿಯದೆ
ಕೆಟ್ಟರೆಂದಾತನಂಬಿಗ ಚೌಡಯ್ಯ. ॥೯॥

೨೧
ಅಗ್ನಿ ದಿಟವೆಂದಡೆ ತಾ ಹುಸಿ, ಕಾಷ್ಠವಿಲ್ಲದೆ.
ಕಾಷ್ಠದಲ್ಲಿ ಅಡಗಿ ಸುಡದಿಪ್ಪ ಭೇದವನರಿತಡೆ,
ಪ್ರಾಣಲಿಂಗಿಯೆಂದೆಂಬೆನೆಂದನಂಬಿಗ ಚೌಡಯ್ಯ. ॥೧೦॥

೨೨
ಅಜಾತನನೊಲಿಸದೊಡೆ ಅದೇತರ ಮಂತ್ರ,
ಅದೇತರ ಆಗಮ ಹೇಳಿರೋ,
ಆಚಾರ್ಯ ಕೊಟ್ಟ ಸಲಾಕಿ ಯಾತರಲ್ಲಿ ನಚ್ಚುವಿರಿ?
ಅದಾವ ಮುಖದಲ್ಲಿ, ಲಿಂಗ ಬಂದಿಪ್ಪುದು?
ರೂಪಿಲ್ಲದಾತ ನಿಮ್ಮ ಮಾತಿಂಗೆ ಬಂದಡೆ,
ಅದೇತರ ಮಾತೆಂದನಂಬಿಗ ಚೌಡಯ್ಯ. ॥೧೧॥

೨೩

ಅಡವಿಯ ತೊಪ್ಪಲ ತರತರ ತಂದು ತಿಂದು
ಒಡಲ ದಂಡಿಸಿಕೊಂಡು,
ಪಡೆ, ಗವಿಯೊಳಗೆ ತಪಸ್ಸಿದ್ದೇವೆಯೆಂದು
ಕಡು ಹೆಮ್ಮೆಯಲ್ಲಿ ನುಡಿವ ಅಣ್ಣಗಳು ನೀವು ಕೇಳಿರೋ.
ಷಡುರಸಂಗಳು ಹುಟ್ಟಿದವು ಶಿವನ ಕರುಣರಸದಲ್ಲಿ,
ಆ ರುಚಿಗಳ ಸುಖಮಂ ಪಡೆವುದಕ್ಕೆ
ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧಪದಾರ್ಥವ ಹಿಡಿದ ಭಕ್ತನ ಮನೆಯಲ್ಲಿ
ಗುರುಲಿಂಗಜಂಗಮಕ್ಕೆ ನೀಡಿ ಮಾಡುವ
ಭಕ್ತಿಪದಾರ್ಥವಾದ ಷಡುರುಚಿಯ ಕೊಂಬುದಕ್ಕೆ
ನಿಮ್ಮಲ್ಲಿಯೆ ಷಡ್ವಿಧಲಿಂಗಂಗಳುಂಟು.
ಅವ ನೋಡಿ ಎಚ್ಚತ್ತು ಸವಿಸವಿದರ್ಪಿಸಬಲ್ಲಡೆ ಮಹಾಮಹಿಮ,
ತಾನೇನ ಮಾಡಲು ಜಡನಲ್ಲ,
ಅಜಡನು ತಾನೆಂದಾತನಂಬಿಗರ ಚೌಡಯ್ಯ. ॥೧೨॥

೨೪

ಅಡವಿಯ ಹೊಗಿಸಿತ್ತು, ಹುಡುಕುನೀರಲದ್ದಿತ್ತು,
ಜಡೆಗಟ್ಟಿ ಭಸ್ಮವ ತೊಡಿಸಿತ್ತು, ಉಡೆವುಚ್ಚುಗೊಳಿಸಿತ್ತು,
ಹಿಡಿದೊತ್ತಿ ಕೇಶವ ಕೀಳಿಸಿತ್ತು, ಪಡಿಪುಚ್ಚಗೊಳಿಸಿತ್ತು ಊರೊಳಗೆಲ್ಲ.
ಈ ಬೆಡಗಿನ ಮಾಯೆಯ ಬಡಿಹಾರಿ ಸಮಯಿಗಳ ನುಡಿಗೆ
ನಾಚುವೆನೆಂದನಂಬಿಗ ಚೌಡಯ್ಯ. ॥೧೩॥

೨೫

ಅಡವಿಯೊಳಗರಸುವಡೆ ಸಿಡಿಗಂಟಿ ತಾನಲ್ಲ.
ಮಡುವಿನೊಳಗರಸುವಡೆ ಮತ್ಸ್ಯಮಂಡೂಕನಲ್ಲ.
ತಪಂಬಡುವಡೆ ವೇಷಕ್ಕೆ ವೇಳೆಯಲ್ಲ.
ಒಡಲ ದಂಡಿಸುವಡೆ ಕೊಡುವ ಸಾಲಿಗನಲ್ಲ.
ಅಷ್ಟತನುವಿನೊಳಗೆ ಹುದುಗಿದ್ದ ಲಿಂಗವ
ನಿಲುಕಿ ನೋಡಿಯೆ ಕಂಡನಂಬಿಗ ಚೌಡಯ್ಯ. ॥೧೪॥

೨೬

ಅಡ್ಡಬಿದ್ದ ಶಿಷ್ಯನ ಮಾಡಿಕೊಂಬ ದಡ್ಡ ಪ್ರಾಣಿಗಳನೇನೆಂಬೆನಯ್ಯ.
ಏನೇನೂ ಅರಿಯದ ಎಡ್ಡ ಮಾನವರಿಗೆ ಉಪದೇಶವ ಮಾಡುವ

ಗೊಡ್ಡ ಮಾನವನ ಮುಖವ ತೋರದಿರಯ್ಯಾ.
ಅದೇನು ಕಾರಣವೆಂದಡೆ:
ಆ ಮೂಢಜೀವಿಯ ಪ್ರಪಂಚವ ಕಳೆಯಲಿಲ್ಲ.
ಅವನ ಪಂಚೇಂದ್ರಿಯಂಗಳು, ಸಪ್ತವ್ಯಸನಂಗಳು, ಅಷ್ಟಮದಂಗಳೆಂಬ
ಖೊಟ್ಟಿ ಗುಣಂಗಳ ಬಿಡಿಸಲಿಲ್ಲ.
ಸೂತಕ ಪಾತಕಂಗಳ ಕೆಡಿಸಿ, ಮೂರು ಮಲಂಗಳ ಬಿಡಿಸಿ
ಮುಕ್ತಿಪಥವನರುಹಲಿಲ್ಲ.
ಮಹಾಶೂನ್ಯ ನಿರಾಳ ನಿರಂಜನಲಿಂಗವ
ಕರ-ಮನ-ಭಾವ ಸರ್ವಾಂಗದಲ್ಲಿ ತುಂಬಿ ನಿತ್ಯನೆಂದೆನಿಸಲಿಲ್ಲ.
ಇದನರಿಯದ ವ್ಯರ್ಥಕಾಯರುಗಳ ಗುರುವೆಂದಡೆ ಪ್ರಮಥರು ಮೆಚ್ಚುವರೆ?
ಇಂತಪ್ಪ ಗುರು ಶಿಷ್ಯರೀರ್ವರು ಅಜ್ಞಾನಿಗಳು.
ಅವರು ಇಹಲೋಕ ಪರಲೋಕಕ್ಕೆ
ಹೊರಗೆಂದಾತನಂಬಿಗ ಚೌಡಯ್ಯ. ॥೧೫॥

೨೭

ಅತ್ಯಾಹಾರವನುಂಡು ಹೊತ್ತುಗಳೆದು, ಹೋಕಿನ ಮಾತನಾಡುತ್ತ
ಚಿತ್ತ ಬಂದ ಪರಿಯಲ್ಲಿ ವ್ಯವಹರಿಸಿಕೊಳ್ಳುತ್ತ,
ಮತ್ತೆ ಶಿವನ ನೆನೆದೆನೆಂದಡೆ ಶಿವನ ವರ ಎತ್ತಲೆಂದರಿಯದೆಂದಾತ,
ನಮ್ಮಂಬಿಗರ ಚೌಡಯ್ಯ. ॥೧೬॥

೨೮

ಅದ್ವೈತವ ನುಡಿದು, ಅಬದ್ಧ ಅಂಗಕ್ಕಾಗಿ
ಬದ್ಧರ ಬಾಗಿಲಲ್ಲಿ ಹೊದ್ದುಕೊಂಬ[ರ]ಲ್ಲಾ ಎಂದು
ಮತ್ತೆ ಅದ್ವೈತಕ್ಕೆ ಕದ್ದೆಹತನವೆ?
ಇಂತೀ ಅಬದ್ಧರ ಕಂಡು ಮುನ್ನವೆ ಹೊದ್ದಬೇಡ,
ಎಂದನಂಬಿಗ ಚೌಡಯ್ಯ. ॥೧೭॥

೨೯

ಅನಾದಿಪರಶಿವನಿಂದ ಸಾಕಾರಲೀಲೆಯ ಧರಿಸಿ, ಮರ್ತ್ಯಕ್ಕವತರಿಸಿ,
ಶ್ರೀಗುರುಲಿಂಗಜಂಗಮದಿಂದ ವೇಧಾ-ಮಂತ್ರ-ಕ್ರಿಯಾದೀಕ್ಷೆಯ ಪಡೆದು,
ಲಿಂಗಾಂಗಸಮರಸಾನಂದವನರಿದು,
ತನ್ನ ಸ್ವಸ್ವರೂಪ ನಿಲುಕಡೆಯ ತಿಳಿದು,
ಸತ್ಯ-ಸದಾಚಾರ-ಸನ್ಮಾರ್ಗದ ಗೊತ್ತನರಿದು,

ಪಂಚಸೂತಕಪಾತಕ, ಆರುವೈರಿ, ಅಷ್ಟಮದಂಗಳಡಿಮೆಟ್ಟಿ,
ಆಚರಿಸುವ ಭಕ್ತಗಣಂಗಳು
ಇಂತಿಷ್ಟು ಸತ್ತುಚಿತ್ತಾನಂದನಿತ್ಯಪರಿಪೂರ್ಣ ಅವಿರಳಾನಂದ
ನಿಜಾಚರಣೆಯನರಿಯದ
ಗುರುವಾಗಲಿ, ಲಿಂಗವಾಗಲಿ, ಜಂಗಮವಾಗಲಿ,
ಶರಣನಾಗಲಿ, ಭಕ್ತನಾಗಲಿ, ಪ್ರಸಾದಿಯಾಗಲಿ,
ಅವರಿಂದ ಪಾದೋದಕಪ್ರಸಾದವ ಕೊಂಡರೆ
ಯಮದಂಡಣೆಗೊಳಗು ನೋಡಾ,
ಅಂತ್ಯದಲ್ಲಿ ರೌರವ, ಎಂದಾತನಂಬಿಗರ ಚೌಡಯ್ಯ. ॥೧೮॥

೨೦
ಅಯ್ಯ! ಅಂಗಾಚಾರವುಳ್ಳ ಶಕ್ತಿ–ಭಕ್ತ–ಜಂಗಮದ ಗೃಹದಲ್ಲಿ
ಲಿಂಗಾಚಾರವುಳ್ಳ ಶಿವಭಕ್ತಿ–ಶಿವಭಕ್ತ–ಶಿವಜಂಗಮವು ಜಿಹ್ವಾಲಂಪಟಕಿಚ್ಛೈಸಿ
ಅವರ ಗೃಹದಲ್ಲಿ ಲಿಂಗಾರ್ಚನೆ–ಲಿಂಗಾರ್ಪಣವ ಮಾಡಲಾಗದು.
ಇದ ಮೀರಿ ಅಂಗಭೋಗಿಗಳ ಸಮಪಾಕ, ಸಮಭಾಜನ, ಸಮಪಜ್ತೆ
ಶಿವಮಂತ್ರ, ಶಿವಪ್ರಸಾದ, ಶಿವಾನುಭಾವಗೋಷ್ಠಿಯ ಮಾಡಿದಡೆ
ಬಸವ ಮೊದಲಾದ ಸಮಸ್ತಗಣಸಾಕ್ಷಿಯಾಗಿ
ಶಿವಲೋಕ, ಶಾಂಭವಲೋಕ, ರುದ್ರಲೋಕ, ದೇವಲೋಕ, ಮರ್ತ್ಯಲೋಕ
ಮೊದಲಾದ ಸಮಸ್ತಲೋಕಪಾವನಾರ್ಥ ಮಹಾಗಣಂಗಳ ಸಮಯಾಚಾರಕ್ಕೆ
ಹೊರಗೆಂದಾತನಂಬಿಗರ ಚೌಡಯ್ಯನು. ॥೧೯॥

೨೧
ಅಯ್ಯ! ಅಚ್ಚಪ್ರಸಾದಿ, ನಿಚ್ಚಪ್ರಸಾದಿ,
ಸಮಯಪ್ರಸಾದಿಗಳೆಂದು ಒಪ್ಪವಿಟ್ಟು ನಿಚ್ಚ ನಿಚ್ಚ ನುಡಿವ ಅಣ್ಣಗಳಿರಾ!
ನೀವು ಅಚ್ಚಪ್ರಸಾದ, ನಿಚ್ಚಪ್ರಸಾದ, ಸಮಯಪ್ರಸಾದವಾದ ವಿಚಾರವ ಹೇಳಿರಣ್ಣ!
ಅರಿಯದಿರ್ದಡೆ ಕೇಳಿರಣ್ಣ!
ಸಮಸ್ತಪದಾರ್ಥವ ಗುರುಲಿಂಗಜಂಗಮದಿಂದ ಪವಿತ್ರವ ಮಾಡಿ
ಅವರವರ ಪದಾರ್ಥವ ಅವರವರಿಗೆ ವಂಚಿಸದೆ
ನಿರ್ವಂಚಕತ್ವದಿಂದ ಸಮರ್ಪಿಸುವುದೆ ತ್ರಿವಿಧಪ್ರಸಾದಸ್ವರೂಪ ನೋಡಾ!
ಕ್ರಿಯಾಮುಖದಲ್ಲಿ ಇಷ್ಟಲಿಂಗಕ್ಕೆ ಸಮರ್ಪಿಸುವ
ಪೃಥ್ವಿಸಂಬಂಧವಾದ, ಅಷ್ಟತನುಗಳಿಂದುದಯವಾದ,
ಗಂಧರಸರೂಪಸ್ಪರ್ಶಶಬ್ದ ಮೊದಲಾದ ಸಮಸ್ತಪದಾರ್ಥಂಗಳ
ಆ ಕ್ರಿಯಾಗುರುಲಿಂಗಜಂಗಮಕ್ಕೆ ಸಮರ್ಪಿಸಿ,

ಅವರೊಕ್ಕುಮಿಕ್ಕ ರೂಪರುಚಿತೃಪ್ತಿಪ್ರಸಾದವ ಭೋಗಿಸುವಾತನೆ
ತ್ರಿವಿಧಪ್ರಸಾದಿ ನೋಡ!
ಜ್ಞಾನಮುಖದಲ್ಲಿ ಪ್ರಾಣಲಿಂಗಕ್ಕೆ ಸಮರ್ಪಿಸುವ
ಮನಸಂಬಂಧವಾದ ಸ್ತ್ರೀಯಳೆಂಬ
ರೂಪರುಚಿತೃಪ್ತಿ ಮೊದಲಾದ ಪದಾರ್ಥಂಗಳ
ಸತ್ಕ್ರೀಯಾಗುರುಲಿಂಗಜಂಗಮವನೆ ಜ್ಞಾನಗುರುಲಿಂಗಜಂಗಮವೆಂದು ಭಾವಿಸಿ
ತನ್ನ ವಿವಾಹಸಮಯದಲ್ಲಿ ಗುರುಲಿಂಗಜಂಗಮಕ್ಕೆ ಭಕ್ತಗಣಸಾಕ್ಷಿಯಾಗಿ
ತನ್ನ ಕೂಟದ ಶಕ್ತಿಯ ಗುರುಲಿಂಗಜಂಗಮಕ್ಕೆ ಕೊಡುವ ಭಕ್ತಿ ಮೊದಲಾಗಿ,
ಆ ಶಕ್ತಿಯರ ಅಂತರಂಗದಲ್ಲಿ ಬೆಳಗುವ
ಪರಂಜ್ಯೋತಿರ್ಲಿಂಗವ ಬಹಿಷ್ಕರಿಸಿ
ಸದ್ಗುರುಮುಖದಿಂ ಹಸ್ತಮಸ್ತಕಸಂಯೋಗವ ಮಾಡಿಸಿ,
ಆ ಲಿಂಗಾಂಗಕ್ಕೆ ಪಾಣಿಗ್ರಹಣವ ಮಾಡಿಸಿ, ಮಂತ್ರದೀಕ್ಷೆಯ ಬೋಧಿಸಿ,
ಪಾದೋದಕಪ್ರಸಾದವ ಕೊಡಿಸಿ,
ಸದಾಚಾರ–ಸದ್ಭಕ್ತಿ–ಸತ್ಕ್ರಿಯಾ–ಸಮ್ಯಜ್ಞಾನವ ಬೋಧಿಸಿ,
ಶಕ್ತಿಭಾವವಳಿದು ಕ್ರಿಯಾಶಕ್ತಿಯರೆಂದು ಭಾವಿಸಿ,
ಪ್ರಥಮದಲ್ಲಿ ಗುರುಲಿಂಗಜಂಗಮಕ್ಕೆ ಆ ಕ್ರಿಯಾಶಕ್ತಿಯ
ಭಕ್ತಗಣಸಾಕ್ಷಿಯಾಗಿ, ಪ್ರಮಾಣದಿಂದ ಕಂಕಣವ ಕಟ್ಟಿ,
ಶರಣಾರ್ಥಿಯೆಂದು ಒಪ್ಪದಿಂದ ಒಪ್ಪಿಸಿ,
ಅದರಿಂ ಮೇಲೆ, ಆ ಗುರುಲಿಂಗಜಂಗಮದ ಕರುಣವ ಹಡೆದು,
ಆ ಕ್ರಿಯಾಶಕ್ತಿಯ ಭಕ್ತಗಣಮಧ್ಯದಲ್ಲಿ ಕೂಡಿ,
ಸೆರಗ ಹಿಡಿದು ಗಣಪದಕ್ಕೆ ಶರಣೆಂದು ವಂದಿಸಿ
ಅವರ ಕರುಣವ ಹಾರೈಸಿ ನಿಜಭಕ್ತಿಜ್ಞಾನವೈರಾಗ್ಯವ ಬೆಸಗೊಂಡು
ಸಚ್ಚಿದಾನಂದಲಿಂಗನಿಷ್ಠಾಪರತ್ವದಿಂದ ಗುರುಲಿಂಗಜಂಗಮಭಕ್ತಿ ಮೊದಲಾಗಿ
ಗುರುಭಕ್ತಿಯಿಂದ ಆಚರಿಸುವರೆ ತ್ರಿವಿಧಪ್ರಸಾದಿಗಳು ನೋಡ!
ಮಹಾಜ್ಞಾನಮುಖದಲ್ಲಿ ಭಾವಲಿಂಗಕ್ಕೆ ಸಮರ್ಪಿಸುವ
ಧನಸಂಬಂಧವಾದ ದ್ರವ್ಯವನ್ನು
ಆ ಕ್ರಿಯಾಜ್ಞಾನಯುಕ್ತವಾದ ಗುರುಲಿಂಗಜಂಗಮವನೆ
ಮಹಾಜ್ಞಾನಗುರುಲಿಂಗಜಂಗಮವೆಂದು ಭಾವಿಸಿ,
ತಾ ಧರಿಸುವಂಥ ವಸ್ತ್ರಾಭರಣರಕ್ಷೆ ಮೊದಲಾಗಿ ಪ್ರತಿಪದಾರ್ಥವ
ವಿಚಾರಮುಖದಲ್ಲಿ ಪಾತ್ರಾಪಾತ್ರವ ತಿಳಿದು ಸಮರ್ಪಿಸಿ, ನಿಜನೈಷ್ಠೆಯಿಂದ,
ಪರದ್ರವ್ಯವ ತಂದು ಗುರುಲಿಂಗಜಂಗಮವ ಒಡಗೂಡಿ ಋಣಭಾರಕ್ಕೊಳಗಾಗದೆ,
ನಡೆ ನುಡಿ ಒಂದಾಗಿ ಆಚರಿಸುವರೆ ತ್ರಿವಿಧಪ್ರಸಾದಿಗಳು ನೋಡ!
ಈ ವಿಚಾರವ ಸದ್ಗುರುಮುಖದಿಂದ ಬೆಸಗೊಂಡು ಆಚರಿಸುವರೆ

ಅಚ್ಚಪ್ರಸಾದಿ, ನಿಚ್ಚಪ್ರಸಾದಿ, ಸಮಯಪ್ರಸಾದಿ ನೋಡ!
ಈ ವಿಚಾರವನರಿಯದೆ, ಶ್ರುತಿ–ಗುರು–ಸ್ವಾನುಭಾವವ ತಿಳಿಯದೆ,
ವಾಚಾಳಕತ್ವದಿಂದ ನುಡಿದು,
[ತಾವು] ಗುರು ಲಿಂಗ ಜಂಗಮ ಪ್ರಸಾದಿಗಳೆಂಬ ಮೂಳರ
ಬಾಯ ಮೇಲೆ ಗಣಂಗಳು ಮೆಟ್ಟಿದ ಚಮ್ಮಾವುಗೆಯ
ತೆಗೆದುಕೊಂಡು ಪಟಪಟನೆ ಹೊಡೆಯೆಂದಾತನಂಬಿಗರ ಚೌಡಯ್ಯನು ನೋಡ,
ಸಂಗನ ಬಸವೇಶ್ವರ. ॥೨೦॥

೩೨

ಅಯ್ಯಾ, ಆಚಾರವುಳ್ಳ ಕಾಂಚೀಪಟ್ಟಣದಲ್ಲಿ
ಒಂದು ಗಂಡುಕತ್ತೆಯು ಸತ್ತುಬಿದ್ದಿರಲು,
ಕತ್ತೆಯಂ ಕೈಲಾಸದ ಪಾಲುಮಾಡಬೇಕೆಂದಿದ್ದರಯ್ಯಾ,
ಯಾರಾರು ಎಂದರೆ:
ಶೆಟ್ಟಿಗಾದರಿ, ಪೃಥ್ವಿಶೆಟ್ಟಿ, ಕೋರಿಶೆಟ್ಟಿ, ಬಳೇಶೆಟ್ಟಿ,
ನಾಡನಾಲಗೆ, [ಮಿಂಡ]ಗುದ್ದಲಿ, ಬಡವ, ಬೋವಿ
ಇಂತಪ್ಪ ಎಂಟು ಕಟ್ಟೆಯವರು ಕೂಡಿಕೊಂಡು
ಆ ಕತ್ತೆಯಂ ಮಂಚದ ಮೇಲೆ ಇಟ್ಟುಕೊಂಡು
ಕಮ್ಮೆಣ್ಣೆ, ಕಸ್ತೂರಿ, ಗಂಧ, ಪುನುಗು, ಜವ್ವಾಜಿ,
ಬುಕ್ಕಹಿಟ್ಟು, ಊದಿನಕಡ್ಡಿ–ಇಂತಪ್ಪ ಅಷ್ಟಗಂಧದಿಂದ
ಮೇಳ ಭಜಂತ್ರಿಯಿಂದ ಒಯ್ದು, ನರಿ ಪಾಲು ಮಾಡಿ ಬಂದರಯ್ಯಾ.
ಛೇ, ಛೇ ಎಂದು ಕಣ್ಣಯ್ಯಗಳ ಎಡದ ಪಾದರಕ್ಷೆಯಂ ತೆಗೆದುಕೊಂಡು
ಅವರ ಮುದ್ದುಮುಖದ ಮೇಲೆ
ಕುಟ್ಟಿದಾತನೆ ನಮ್ಮ ಅಂಬಿಗರ ಚೌಡಯ್ಯನೆಂಬೊ ಶಿವಶರಣನು. ॥೨೧॥

೩೩

ಅಯ್ಯಾ, ನಾವು ಪರಮವಿರಕ್ತರು, ಪಟ್ಟದ ಅಯ್ಯನವರು,
ಚರಮೂರ್ತಿಗಳು, ಪರದೇಶಿಗಳು ಎಂದು
ಶಂಖ ಗಿಳಿಲು ದಂಡಾಗ್ರ ಎಂಬ ಬಿರುದು ಪಿಡಿದು,
ಕಾವಿ ಕಾಷಾಯಾಂಬರವ ಹೊತ್ತು,
ಸರ್ವಕಾರ್ಯದಲ್ಲಿ ಶ್ರೇಷ್ಠರೆಂದು ಗರ್ವದಲ್ಲಿ ಕೊಬ್ಬಿ,
ಕಾಮನಾಟದಲ್ಲಿ ಕಲಕಿ, ಮನಸ್ಸಿನಲ್ಲಿ ದುರ್ಗುಣವನ್ನಿಟ್ಟುಕೊಂಡು
ಮಾತಿನಲ್ಲಿ ನೀತಿಯ ಸೇರಿಸುತ್ತ ಕಪಟದಲ್ಲಿ ಚರಿಸುವಂತಹ
ತೊನ್ನ ಹೊಲೆಮಾದಿಗರ ಸಂಗಮಾಡಲಾಗದು,

ಅವರ ಪ್ರಸಂಗವ ಕೇಳಲಾಗದು. ಅದೇನು ಕಾರಣವೆಂದಡೆ:
ಗುರುಲಿಂಗಜಂಗಮವಾದ ಬಳಿಕ
ಅಷ್ಟಾವರಣದಲ್ಲಿ ನಿಷ್ಠಾಪರವಾಗಿರಬೇಕು.
ಪರಧನ ಪರಸತಿಯರ ಹಿಡಿಯೆನೆಂಬ ನೇಮದಲ್ಲಿ ಬಲ್ಲಿದರಾಗಿರಬೇಕು.
ಶಿವಭಕ್ತರಾದವರ ಭವವ ಗೆಲಿಸಿ ಮೋಕ್ಷವ ಹೊಂದಿಸಬೇಕು.
ಶಿವಲಾಂಛನವ ಹೊತ್ತ ಬಳಿಕ ಶಿವನಂತಿರಬೇಕು.
ಬರಿದೆ, ನಾನು ಮಾಹೇಶ್ವರನೆಂದು, ನಾನು ಶಿವಭಕ್ತನೆಂದು
ತನ್ನ ಹೃನ್ಮಂದಿರದಲ್ಲಿ ನೆಲಸಿದ ಚಿನ್ಮಯಜಂಗಮಲಿಂಗಕ್ಕೆ
ತನು-ಮನ-ಧನವೆಂಬ ತ್ರಿವಿಧಪದಾರ್ಥವನರ್ಪಿಸಿ,
ತ್ರಿವಿಧಪ್ರಸಾದವ ಗರ್ಭೀಕರಿಸಿಕೊಂಡು, ಪ್ರಸನ್ನಪ್ರಸಾದವ ಸ್ವೀಕರಿಸಿ
ಪರತತ್ವಪ್ರಸಾದದಲ್ಲಿ ತಾನು ತಾನಾಗಲರಿಯದೆ
ಉಚ್ಚಂಗಿದುರ್ಗಿಗೆ ಬಿಟ್ಟ ಪೋತರಾಜನಂತೆ
ಮೂರು ಮೂರು ಜಡೆಗಳ ಬಿಟ್ಟು,
ಆಡಿನೊಳಗಿರುವ ಹಿರಿಯ ಹೋತಿನಂತೆ
ಮೊಳ ಮೊಳ ಗಡ್ಡವ ಬಿಟ್ಟು,
[ಡಂ]ಬ ಜಾತಿಗಾರನಂತೆ ವೇಷವ ತೊಟ್ಟು,
ಮೀಸೆಯ ಬೋಳಿಸಿಕೊಂಡು, ಕೈಪವ ಧರಿಸಿ,
ಸಂಸ್ಕೃತ ಗೀರ್ವಾಣಭಾಷೆಯ ಕಲಿತು,
ಕಾಕು ಕುಟಿಲ ಕುಹಕದ ಗಾಳಿಪೂಜೆಯಿಂದ ಬಂದ
ಸುಡಗಾಡು ಸಿದ್ಧಯ್ಯಗಳಂತೆ,
ಗಿಡಮೂಲಿಕೆಗಳು ತಂತ್ರ ಮಂತ್ರ ಯಂತ್ರದ ಭಾಷೆಗಳ ಕಲಿತುಕೊಂಡು
ಪುರಜನರ ಮೆಚ್ಚಿಸಬೇಕೆಂದು
ಅಯ್ಯಾ, ನಾವು ಕೆರೆ ಭಾವಿಯನಗೆಸಬೇಕೆಂದು,
ಮಠ ಗುಡಿಯ ಕಟ್ಟಿಸಬೇಕೆಂದು,
ಮಾನ್ಯದಲಿ ಬಿಲ್ವಗಿಡಗಳ ಹಚ್ಚಬೇಕೆಂದು,
ಮದುವೆ ಅಯ್ಯಾಚಾರವ ಮಾಡಬೇಕೆಂದು,
ಅನ್ನಛತ್ರ ಅರವಟ್ಟಿಗೆಯ ಇಡಿಸಬೇಕೆಂದು,
ಪುರಾಣಗಳ ಹಚ್ಚಿಸಬೇಕೆಂದು,
ಇಂತಪ್ಪ ದುರಾಸೆಯ ಮುಂದುಗೊಂಡು ನಾನಾ ದೇಶವ ತಿರುಗಿ,
ಅರಸರ ಮದದಂತೆ ಗರ್ವದಿಂದ ಹೆಚ್ಚಿ,
ಹೇಸಿ ಹೊಲೆ ಮಾದಿಗರ ಕಾಡಿ ಬೇಡಿ,
ಹುಸಿಯನೆ ಬೊಗಳಿ ಒಬ್ಬನ ಒಲವ ಮಾಡಿ[ಕೊಂ]ಡು,
ವ್ಯಾಪಾರ ಮರ್ಯಾದೆಯಲ್ಲಿ ಪೇಟೆಯಲ್ಲಿ ಕುಳಿತು

ಅನಂತ ಮಾತುಗಳನಾಡುತ್ತ,
ಸೆಟ್ಟಿ ಮುಂತಾದ ಅನಂತ ಕಳ್ಳ ಹಾದರಗಿತ್ತಿಯ ಮಕ್ಕಳ ಮಾತಿನಿಂದೊಲಿಸಿ,
ಅವರು ಕೊಟ್ಟಡೆ ಹೊಗಳಿ, ಕೊಡದಿರ್ದಡೆ ಬೊಗಳಿ,
ಆ ಭ್ರಷ್ಟ ಹೊಲೆಮಾದಿಗರು ಕೊಟ್ಟ ದ್ರವ್ಯಗಳ ತೆಗೆದುಕೊಂಡು ಬಂದು
ಕಡೆಗೆ ಚೋರರು ಒಯ್ದರೆಂದು ಮಠದೊಳಗೆ ಮಡಗಿಕೊಂಡು,
ಪರಸ್ತ್ರೀಯರ ಹಡಕಿ ಯೋನಿಯೊಳಗೆ ಇಂದ್ರಿಯ ಬಿಟ್ಟು,
ಕಾಮಕ್ರೋಧದಲ್ಲಿ ಮುಳುಗಿ ಮತಿಗೆಟ್ಟು,
ಶಿವಪಥಕ್ಕೆ ದೂರಾಗಿ, ದುರಾಚಾರವ ಆಚರಿಸಿ,
ನಡೆನುಡಿಗಳ ಹೊರತಾಗಿ, ವ್ಯರ್ಥ ಹೊತ್ತುಗಳೆದು,
ಸತ್ತುಹೋಗುವ ಜಡದೇಹಿ ಕಡುಪಾತಕ ಕತ್ತೆ ಹಡಿಕರಿಗೆ
ಪರಮ ನಿರಂಜನ ಜಂಗಮಲಿಂಗದೇವರೆಂದು ಕರೆತಂದು,
ಪಾದತೀರ್ಥ ಪ್ರಸಾದವ ತೆಗೆದುಕೊಂಬವರಿಗೆ
ಇಪ್ಪತ್ತೊಂದು ಯುಗಪರಿಯಂತರ ನರಕಕೊಂಡದಲ್ಲಿಕ್ಕುವ.
ಇಂತಪ್ಪ ಜಂಗಮವನು ಪೂಜೆ ಮಾಡುವಂತಹ ಶಿವಭಕ್ತನ
ಉಭಯತರ ಮೂಗ ಸೀಳಿ ಮೆಣಸಿನ ಹಿಟ್ಟು ತುಪ್ಪವ ತುಂಬಿ,
ಪಡಿಹಾರಿ [ಉತ್ತಣ್ಣ]ಗಳೆಡದ ಪಾದುಕೆಯಿಂದ
ಪಡಪಡನೆ ಹೊಡಿ ಎಂದಾತ
ನಮ್ಮ ಅಂಬಿಗರ ಚೌಡಯ್ಯನಿಜಶರಣನು. ॥೨೨॥

೩೪

ಅಯ್ಯ! ಪಾಷಾಣಕ್ಕೆ ಗಿರಿ ಸವೆದವು. ಪತ್ರೆಗೆ ತರು ಸವೆದವು.
ಸಪ್ತಸಾಗರಂಗಳು ಮಜ್ಜನಕ್ಕೆ ಸವೆದವು. ಅಗ್ನಿ ಧೂಪಕ್ಕೆ ಸವೆಯಿತ್ತು.
ವಾಯು ಕಂಪಿತಕ್ಕೆ ಸವೆಯಿತ್ತು.
ಉಘೆ! ಚಾಂಗು ಭಲಾ! ಎಂಬ ಶಬ್ದ ಸವೆಯಿತ್ತು. ಎನಗಿನ್ನೆಂತೊ,
ಉಮೇಶನ ಶರಣರು ಮಹಾಮನೆಯಲ್ಲಿ ಶಿವಲಿಂಗಾರ್ಚನೆಗೆ ಕುಳ್ಳಿದ್ದಡೆ, ನಾನವರ
ಪಾದರಕ್ಷೆಯ ಕಾಯ್ದುಕೊಂಡಿದ್ದೇನೆಂದನಂಬಿಗ ಚೌಡಯ್ಯ. ॥೨೩॥

೩೫

ಅಯ್ಯ! ಶ್ರೀಗುರುಲಿಂಗಜಂಗಮದ
ವೇಧಾಮಂತ್ರಕ್ರಿಯಾದೀಕ್ಷೆಗೆ ಹೊರಗಾದ
ಭುವನದ ಶೈವದೈವದಾರ್ಚನೆ ಪೂಜೆಯ ಮಾಡಿ,
ಅದರುಚ್ಛಿಷ್ಟವ ಭುಂಜಿಸುವದಂಗಾಚಾರ.
ಅದನುಳಿದು ಶುದ್ಧಸಿದ್ಧಪ್ರಸಿದ್ಧಪ್ರಸಾದಸ್ವರೂಪವಾದ

ಅನಾದಿಗುರುಲಿಂಗಜಂಗಮದ ಅರ್ಚನೆ ಪೂಜೆಯ ಮಾಡಿ
ಕಿಂಕುರ್ವಾಣದಿಂದ ಅವರ ಒಕ್ಕುಮಿಕ್ಕ ಪ್ರಸಾದವ ಹಾರೈಸುವುದೆ ಲಿಂಗಾಚಾರ.
ಈ ಭೇದವ ತಿಳಿದು ಪಂಚಾಚಾರ ಆಚರಣೆಗೆ ತಂದು,
ಸಪ್ತಾಚಾರವ ಸಂಬಂಧವಿಟ್ಟು,
ಅಷ್ಟಾವರಣದ ಕಲೆನೆಲೆಗಳ ಒಳಗು-ಹೊರಗು ಎನ್ನದೆ,
ಸದ್ಗುರುಮುಖದಿಂದ ಆಚರಣೆ-ಸಂಬಂಧವ ತಿಳಿದು,
ಸದ್ಭಕ್ತಿ-ಸಮ್ಯಜ್ಞಾನ-ವೈರಾಗ್ಯ-ಷಟ್ಸ್ಥಲಮಾರ್ಗವ ಹಿಡಿದು,
ನಿಜಾಚರಣೆಯಲ್ಲಿ ಆಚರಿಸುವರೆ ಶಿವಶಕ್ತಿ, ಶಿವಭಕ್ತ, ಶಿವಜಂಗಮವಲ್ಲದೆ,
ಉಳಿದ ವೇಷಧಾರಿಗಳೆಲ್ಲ ಎನ್ನೊಡೆಯ ಪ್ರಮಥಗಣಾಚಾರಕ್ಕೆ
ಹೊರಗೆಂದಾತನಂಬಿಗರ ಚೌಡಯ್ಯನು. ॥೨೪॥

೩೬
ಅರಳೆಯ ಮರನು ವಿಷ್ಣುಕಾಂತಿ ಬನ್ನಿ ಮುತ್ತಕ ತೊಳಚಿ
ಹರಿ ಹರಿಯೆಂದು ಹೊಡ[ವ]ಡುವಿರಿ.
ಎಲ್ಲಿ ಭೋ! ಎಲ್ಲಿ ಭೋ!
ನಿಮ್ಮ ನಿಮ್ಮ ಹೊಡವಡುವ ದೈವಗಳೆಲ್ಲಾ ಗಿಡುಮರನಾಗಿ ಹೋದವಲ್ಲಾ!
ನಿಮ್ಮ ನಡೆಯೆಲ್ಲಾ ಅನಾಚಾರ, ನುಡಿಯೆಲ್ಲಾ ಶಿವದ್ರೋಹ!
ಇವದಿರ ಗಡಣ ಬೇಡೆಂದನಂಬಿಗ ಚೌಡಯ್ಯ. ॥೨೫॥

೩೭
ಅರಿದೆಹೆನೆಂಬನ್ನಬರ ಅಸಗ ನೀರಡಿಸಿ ಸತ್ತಂತಾಯಿತ್ತು.
ಕಟ್ಬೋಗರವ ಹೊತ್ತು ಉಂಡೆಹೆ ಉಂಡೆಹೆನೆಂದು
ಆಪ್ಯಾಯನವಡಸಿ ಸತ್ತಂತಾಯಿತ್ತು.
ಅರಿದೆಹೆನೆಂದು ಕೇಳಿಹೇಳಿಹೆನೆಂಬನ್ನಬರ
ಆತನು ಶಿಲೆಯ ರೇಖೆಯೆ? ಬಯಲ ಬ್ರಹ್ಮವೆ?
ತಾನಳಿವುದಕ್ಕೆ ಮುನ್ನವೆ ಅರಿದು ಕೂಡಬೇಕೆಂದನಂಬಿಗ ಚೌಡಯ್ಯ. ॥೨೬॥

೩೮
ಅರಿಯದ ಗುರು ಅರಿಯದ ಶಿಷ್ಯಂಗೆ
ಅನುಗ್ರಹವ ಮಾಡಿದಡೇನಪ್ಪುದೆಲವೋ.
ಅಂಧಕನ ಕೈಯನಂಧಕ ಹಿಡಿದಡೆ
ಮುಂದನಾರು ಕಾಬರು ಹೇಳಲೆ ಮರುಳೆ.
ತೊರೆಯಲದ್ದವನನೀಸಲರಿಯದವ
ತೆಗೆವ ತೆರನಂತೆಂದನಂಬಿಗ ಚೌಡಯ್ಯ. ॥೨೭॥

೩೯
ಅರಿವನರಿದಲ್ಲಿ ತಾನೆನ್ನದೆ ಇದಿರೆನ್ನದೆ,
ಮತ್ತೇನುವ ಉಳಿದುವ ಸಂಪಾದಿಸದೆ,
ಅರುಣನ ಕಿರಣದಲ್ಲಿ ಅರತ ಸಾರದಂತೆ, ಕಾದ ಹಂಚಿನಲ್ಲಿ ನೀರ ಬಿಟ್ಟಂತೆ,
ಬಧಿರನ ಕಾವ್ಯದಂತೆ, ಚದುರನ ಒಳುಪಿನಂತೆ
ತಲೆದೋರದೆ ನಿಂದಾತನ ಅಡಿಗೆರಗುವೆನೆಂದನಂಬಿಗ ಚೌಡಯ್ಯ. ॥೨೮॥

೪೦
ಅರಿವಿನ ಪಥವನರಿಯದಿರ್ದಡೆ,
ಮುಂದೆ ಹೆರರಿಗೆ ದೀಕ್ಷೆಯ ಮಾಡಲೇಕೆ?
ತೊರೆಯಲದ್ದವನನೀಸಲರಿಯದವ
ತೆಗೆಯ ಹೋದಂತಾಯಿತ್ತೆಂದನಂಬಿಗ ಚೌಡಯ್ಯ. ॥೨೯॥

೪೧
ಅರಿವುದೊಂದು ವಾಯು, ಮರೆವುದೊಂದು ವಾಯು.
ಉಭಯದಿಂ ತೋರುವ ವಾಯು ಒಂದೆಯಾಗಿ,
ವಾಳುಕದ ಒಳ ಹೊರಗಿನ ನೀರಿನಂತೆ
ವೆಗ್ಗಳಿಸಿದಡೆ ನಿಂದು ತೆಗೆದಡೆ ಅಲ್ಲಿಯೆ ಅಡಗುವಂತೆ,
ಅರಿದು ನುಡಿದು ನಡೆದಡೆ ಜ್ಞಾನಿ,
ನುಡಿದ ನುಡಿಗೆ ನಡೆಯಡಗೆ ಆತನೆ ಜೀವಭಾವಿ
ಎಂದನಂಬಿಗ ಚೌಡಯ್ಯ. ॥೩೦॥

೪೨
ಅರುಹಿರಿಯರ ದೈವ ಅಗಲ [ತೈಲವಿ]ಲ್ಲಾ ಎಂದಡೆ
ಹೊಲೆಯರ ಬೊ[ಮ್ಮ]ಗ ತೊಗೆ ತುಪ್ಪವ ಬೇಡುವಂತೆ
ಬ್ರಹ್ಮವಿಷ್ಣುಗಳೆಂಬರಿನ್ನು ಕಾಣರು,
ವೇದಂಗಳು ನಾಚದೆ ನುಡಿವ ಪರಿಯ ನೋಡಾ!
ಗಂಗೆವಾಳುಕಸಮಾರುದ್ರುರು ಲಿಂಗವ ಕಂಡರೈಸೆ,
ಸ್ವಯಂಭುವ ಕಾಣರೆಂದನಂಬಿಗ ಚೌಡಯ್ಯ. ॥೩೧॥

೪೩
ಅರ್ಚನೆಯ ಮಾಡುವಲ್ಲಿ ಆವೇಶ ಅರತಿರಬೇಕು.
ಪೂಜೆಯ ಮಾಡುವಲ್ಲಿ ಪುಣ್ಯಮೂರ್ತಿಯಾಗಿರಬೇಕು.

ಕೊಡುವ ಕೊಂಬಲ್ಲಿ ಸರ್ವಭೂತಹಿತನಾಗಿರಬೇಕು.
ಇಂತೀ ಸಡಗರಿಸಿಕೊಂಡಿಪ್ಪಾತನ ಅಡಿಗೆರಗುವೆನೆಂದನಂಬಿಗಚೌಡಯ್ಯ. ॥೩೨॥

೪೪
ಅಲ್ಲಲ್ಲಿಗೆ ತಕ್ಕ ಹಾಗೆ ಎಲ್ಲರಿಗೂ ಬೋಧಿಸಲಾಗದು.
ಬಲ್ಲವರಲ್ಲಿ ನುಡಿದು, ಅರಿಯದವರಲ್ಲಿ ಗೆಲ್ಲ ಸೋಲಕ್ಕೆ ನುಡಿದಡೆ,
ಅವರು ಕಲ್ಲೆದೆಯವನೆಂಬರು.
ಒಳ್ಳಿತು ಹೊಲ್ಲವೆನಬೇಡ ಆರಿಗೂ.
ತನ್ನಲ್ಲಿಯೆ ಅರಿಕೆಯೆಂದನಂಬಿಗ ಚೌಡಯ್ಯ. ॥೩೩॥

೪೫
ಅಷ್ಟಮದಂಗಳ ಘಟ್ಟಿಯನೆ ಕರಗಿಸಿ,
ಸತ್ವ ರಜ ತಮಂಗಳ ಬಿಟ್ಟು ಕಳೆದು, ಸುತ್ತುವ ಮನದ ಸುಳಿಯ ತಪ್ಪಿಸಿ
ಮುಂದೆ ಹುಟ್ಟದೆ ಹೋಗೆಂದನಂಬಿಗ ಚೌಡಯ್ಯ. ॥೩೪॥

೪೬
ಅಸುರ ಮಾಲೆಗಳಿಲ್ಲ, ತ್ರಿಶೂಲ ಡಮರುಗವಿಲ್ಲ,
ಬ್ರಹ್ಮಕಪಾಲವಿಲ್ಲ, ಭಸ್ಮಭೂಷಣನಲ್ಲ,
ವೃಷಭವಾಹನನಲ್ಲ, ಋಷಿಯರುಗಳೊಡನಿದ್ದಾತನಲ್ಲ.
ಎಸಗುವ ಸಂಸಾರದ ಕುರುಹಿಲ್ಲದಾಂತಗೆ
ಹೆಸರಾವುದಿಲ್ಲೆಂದನಂಬಿಗರ ಚೌಡಯ್ಯ. ॥೩೫॥

೪೭
ಅಳುಪೆಂಬ ನಾಯ ಕಳವಳದರ್ಥವ ಇದ ಬಿಡೈ, ನಿನಗೆ ಸಂಗಡವಲ್ಲ.
ಬಂದ ಹೊಲೆಯನ, ನಿಂದ ಹಾರುವನ
ಇವರಿಬ್ಬರ ಕೂಡಿಕೊಂಡು ನಿನಗೆ ದೇಹಾರವಾಗದಣ್ಣಾ.
ಇವರ ಹಿಂಗಿಸಿ ನಿಜವರಿದು, ನಿಂದಲ್ಲಿ ನೆನೆದಡೆ
ಅಂದಿಂಗಲ್ಲದೆ ಶಿವನಿರನೆಂದಾತನಂಬಿಗ ಚೌಡಯ್ಯ. ॥೩೬॥

೪೮
ಆತ್ಮಂಗೆ ದಶವಾಯು ಉಂಟೆಂಬರು.
ಊರ್ಧ್ವನಾಳವೈದು, ಅಧೋನಾಳವೊಂದು,

ವಾಯುವೊಂದು ಭೇದ, ಆತ್ಮವೊಂದರಲ್ಲಿ ಒಡೆಯದಿದೆ,
ಇದೇ ನಿರಂತರ ಸುಖ, ಎಚ್ಚರಿಕೆಯ ಕೂಟ.
ಮಿಕ್ಕಾದ ನಾಲ್ಕರಲ್ಲಿ ತಿರುಗಿ ಜೀವರುಗಳ ವಾಯು ನಾಲ್ಕು ಮುಚ್ಚಿ
ಅಧೋಮುಖಕ್ಕಿಳಿದಲ್ಲಿ ಕೀಳುಜೀವವೆಂದನಂಬಿಗ ಚೌಡಯ್ಯ. ॥೩೭॥

೪೯

ಆದಿ ಅನಾದಿಯಿಂದತ್ತಣ ಶರಣನ ಷಡಾಧಾರಚಕ್ರದೊಳಗೆ
ಷಡುಲಿಂಗವು, ಷಡುಮಂತ್ರವು, ಷಡುಭಕ್ತರು, ಷಡುಶಕ್ತಿಗಳು ಇದ್ದುವಯ್ಯ.
ಆ ಶರಣನ ಜ್ಞಾನಕ್ರೀ ಅರುವತ್ತುನಾಲ್ಕು ಭೇದವಾಯಿತ್ತಯ್ಯ,
ಒಬ್ಬ ಶರಣನು ಅನಂತ ಶರಣರಾದುದ ಕಂಡೆನೆಂದಾತ
ನಮ್ಮ ಅಂಬಿಗರ ಚೌಡಯ್ಯ. ॥೩೮॥

೫೦

ಆದಿಶಕ್ತಿವಿಡಿದಾಡುವರೆಲ್ಲರು ಜಂಗಮವಲ್ಲ,
ಅನಾದಿಶಕ್ತಿವಿಡಿದಾಡುವರೆಲ್ಲರು ಜ್ಞಾನಿಗಳಲ್ಲ,
ಆದಿ ಅನಾದಿಯೆಂಬೀ ಎರಡ ಭೇದಿಸಿ ದಾಂಟಿ,
ಇಚ್ಛಾಶಕ್ತಿಯ ಇಚ್ಛೆಯ ಮರೆದು, ಕ್ರಿಯಾಶಕ್ತಿಯ ಭಾವವ ಬಿಟ್ಟು,
ಜ್ಞಾನಶಕ್ತಿಯ ಠಾವವನೊಲ್ಲದೆ, ತಾನು ತಾನಾದವಂಗೆ ಏನೂ ಇದಿರಿಲ್ಲಾ,
ಎಂದನಂಬಿಗ ಚೌಡಯ್ಯ. ॥೩೯॥

೫೧

ಆನೆಂಬುದೇನು? ಇದಿರಿಟ್ಟು ತೋರೂದಿದೇನು?
ಇದೆಲ್ಲಿಂದಲೊದಗಿತ್ತು?
ಇದರ ಲಯವು ತಾನೆಲ್ಲಿ ಎಂದು ಅನುಮಾನಿಸಿ,
ಶ್ರೀಗುರುಚರಣವಂ ನಂಬಿ,
ಅಂತರ್ಮುಖದಲ್ಲಿ ವಿಚಾರಿಸಿ, ಅಲ್ಲೊಂದು ಮಾರ್ಗವ ಕಂಡು,
ಆ ಮಾರ್ಗವ ಬಳಿವಿಡಿದು ತಲೆ ಹೊಲಕ್ಕೆ ಹೋಗಿ
ಹಿಂದು ಮುಂದ ಮರೆದು, ಮಹಾಬೆಳಗಿನ ಬೆಳಗಿನಲ್ಲಿ ನಿಂದು,
ಪರಮಾನಂದಸಾಗರದೊಳಗೆ ಸಮರಸನಾದವಂಗೆ
ಇಹಪರವಿಲ್ಲೆಂದಾತನಂಬಿಗ ಚೌಡಯ್ಯ. ॥೪೦॥

೫೨

ಆಯತಲಿಂಗದಲ್ಲಿ ಅನುಭಾವ ಸಾಹಿತ್ಯವಾಗದು.
ಸ್ವಾಯತಲಿಂಗದಲ್ಲಿ ನಿರ್ಗಮನ ಸಾಹಿತ್ಯವಾಗದು.
ಇದೆಂತಯ್ಯಾ ಆಯತವು? ಇದೆಂತಯ್ಯಾ ಸ್ವಾಯತವು?
ಆಯತ ಸ್ವಾಯತವೆಂಬ ಉಭವ ಕುಳಸ್ಥಳವರಿಯದಿದ್ದಡೆ
ಅನಾಯತವಾಗಿ ಹೋಯಿತ್ತೆಂದನಂಬಿಗ ಚೌಡಯ್ಯ. ॥೪೧॥

೫೩

ಆರಿಕೆ ಬಿತ್ತಿದ ಗಿಡುವಿನ ಹೂವ ಕೊಯಿದು,
ಊರೆಲ್ಲರೂ ಕಟ್ಟಿಸಿದ ಕೆರೆಯ ನೀರ ತಂದು,
ನಾಡೆಲ್ಲರೂ ನೋಡಿಯೆಂದು ಪೂಜಿಸುತ್ತ,
ಪೂಜಿಸಿದ ಪುಣ್ಯ ಹೂವಿಗೋ? ನೀರಿಗೋ?
ನಾಡೆಲ್ಲಕ್ಕೋ ಪೂಜಿಸಿದಾತಗೋ?
ಇದ ನಾನರಿಯೆ, ನೀ ಹೇಳೆಂದನಂಬಿಗ ಚೌಡಯ್ಯ. ॥೪೨॥

೫೪

ಆರು ಲಿಂಗ ಮೂರು ಲಿಂಗವೆಂಬರು, ನಮಗುಳ್ಳುದೊಂದೆ ಲಿಂಗ,
ಒಂದು ಲಿಂಗದಲ್ಲಿ ಒಂದು ಮನ ಸಿಕ್ಕಿದಡೆ ಮರಳಿ
ಒಂದು ಲಿಂಗವ ನೆನೆಯಲಿಲ್ಲವೆಂದಾತನಂಬಿಗ ಚೌಡಯ್ಯ. ॥೪೩॥

೫೫

ಆರೂ ಇಲ್ಲದಂದು ತಾನಹ ದೆವಸ, ತನಗೆ [ಅ]ನಾಧಾರವಾದೆ ನೋಡಾ.
ಭೂಮಿಯಾಕಾಶ ಐದನೆಯ ಭೂತ ಒಳಗಾಗಿ
[ಅಂ] ಬೇರೆ ತಾ ಬೇರೆ ಬಳಿಕಾದ ದೆವಸ,
ತಾ ತೋರಿದಂದಹ ಆ ನೂಲ ಹಿಡಿದೆನು.
ತೀವಿದ ಒಂಬತ್ತು ದ್ವೀಪಕ್ಕೆ ಭಾವವಿರಹಿತನಾಗಿ ತಾ ಹೊರಗಾದಡೆ,
[ಅಂ] ಹಿಡಿದೊಳಗುಮಾಡಿದನೆಂದನಂಬಿಗ ಚೌಡಯ್ಯ. ॥೪೪॥

೫೬

ಆರೂಢಜ್ಞಾನಿಯಾದವಂಗೆ ಅನುಭಾವವೇಕಯ್ಯಾ?
ಮೀರಿದ ಸ್ಥಲದಲ್ಲಿ ನಿಂದವಂಗೆ ನೀರೇನು, ನೆಲವೇನು?
ಎಂದಾತನಂಬಿಗ ಚೌಡಯ್ಯ. ॥೪೫॥

೫೭
ಆವ ಪದಾರ್ಥವ ಮೋಹಿಸಿ ಲವಲವಿಸಬೇಡ.
ಬಪ್ಪುದು ಬಪ್ಪುದಲ್ಲದೆ ಬಾರದ್ದು ಬಪ್ಪುದೆ?
ಬಪ್ಪುದು ತಪ್ಪದು, ಬಾರದುದು ಬಾರದು, ಅಹದಹದಾಗದ್ದಾಗದು.
ಬಹುದುಃಖಂಗೊಳಲೇಕೆ? ಬಪ್ಪುದು ತಪ್ಪದು, ಸಹಜವೆಂತಾಗುವದಲ್ಲದೆ.
ವಿಹಿತವ ತಾ ಬರೆವುತಿಹನು ಪಣೆಯೊಳು ಶಿವನು.
ಇಂತಿದು ನಿನ್ನ ಭೋಗವೆಲ್ಲಿದ್ದಡೂ ಬಿಡದೆಂದಾತ
ನಮ್ಮಂಬಿಗರ ಚೌಡಯ್ಯ. ॥೪೬॥

೫೮
ಆವಾವ ತ್ರಿಗುಣಭೇದದಲ್ಲಿ ವಿಶ್ವಾಸವ ಮಾಡಿದಡೂ ಭಾವಶುದ್ಧವಾಗಿರಬೇಕು.
ಯೋಗಿಯಾದಲ್ಲಿ ದೇಹಧರ್ಮವ ಮರೆದು,
ಭೋಗಿಯಾದಲ್ಲಿ ಸಂಚಿತವ ಮರೆದು,
ತ್ಯಾಗಿಯಾದಲ್ಲಿ ನೆನಹು ಹಿಂಚು ಕೊಡುವುದು ಮುಂಚಾಗಿರಬೇಕು.
ಇಂತೀ ಯೋಗಿ ಭೋಗಿ ತ್ಯಾಗಿ,
ಇಂತೀ ತ್ರಿವಿಧವನೊಳಕೊಂಡು ವಿರಕ್ತನಾದಲ್ಲಿ
ಆತನ ಅಡಿಗೆರಗುವೆನೆಂದನಂಬಿಗ ಚೌಡಯ್ಯ. ॥೪೭॥

೫೯
ಆಶೆಯಲಿದ್ದವನ ತಲೆಯನರಿದು,
ಆಶೆಯ ಹರಿಯಲೊದ್ದವನನೊಂದೆ ಹುಟ್ಟಿನಲ್ಲಿ ಒಯ್ದು
ಕೈಲಾಸಕ್ಕೆ ಹೋದಾತ ಅಂಬಿಗ ಚೌಡಯ್ಯ. ॥೪೮॥

೬೦
ಆಶೆಯುಳ್ಳಾತನೊಬ್ಬರಾಧೀನದಲ್ಲಿಪ್ಪನು.
ಆಶೆಯ ಮನದ ಕೊನೆಯನರಿದಾತ ಕೈಲಾಸದಾಚೆಯಲ್ಲಿಪ್ಪನೆಂದಾತ
ನಮ್ಮ ಅಂಬಿಗ ಚೌಡಯ್ಯ! ॥೪೯॥

೬೧
ಆಳಾಪದ ಸೊಬಗು, ಘಂಟೆ ವಾದ್ಯದ ಕೂಗಿನ ಕೊರಚು,
ಪರಿಚಾರಕರ ಎಡೆಯಾಟದಿಂದ ಸೊಬಗು ಮೆರೆದಿತ್ತು.
ಎನಗೆ ಇನ್ನಾವುದು ಇಲ್ಲ, ಇನ್ನೇವೆನೆಂದನಂಬಿಗ ಚೌಡಯ್ಯ. ॥೫೦॥

೬೨

ಈರೇಳು ಭುವನವನೊಳಕೊಂಡ ಮಹಾಘನಲಿಂಗವು
ಶಿವಭಕ್ತನ ಕರಸ್ಥಲದಾಲಯಕ್ಕೆ ಬಂದು, ಪೂಜೆಗೊಂಬ ಪರಿಯ ನೋಡ!
ಅಪ್ರಮಾಣ–ಅಗೋಚರವಾದ ಲಿಂಗದಲ್ಲಿ
ಸಂಗವ ಬಲ್ಲಾತನೆ ಸದಾಚಾರಸದ್ಭಕ್ತನು!
ಹೀಂಗಲ್ಲದೆ ಹಣವಿನಾಸೆಗೆ ಹಂಗಿಗನಾಗಿ,
ಜಿಹ್ವಾಲಂಪಟಕ್ಕೆ ಅನಾಚಾರದಲ್ಲಿ ಉದರವ ಹೊರೆದು ಬದುಕುವಂಥ
ಭಂಡರು ಭಕ್ತರಾದವರುಂಟೆ? ಹೇಳ!
ಅಂಥ ಅನಾಚಾರಿ ಶಿವದ್ರೋಹಿಗಳ ಮುಖವ ನೋಡಲಾಗದು!
ಅದೆಂತೆಂದಡೆ:
ಕತ್ತೆ ಭಕ್ತನಾದಡೆ ಕಿಸುಕುಳವ ತಿಂಬುದ ಮಾಣ್ಬುದೆ?
ಹಂದಿ ಭಕ್ತನಾದಡೆ ಹಡಿಕೆಯ ತಿಂಬುದ ಮಾಣ್ಬುದೆ?
ಬೆಕ್ಕು ಭಕ್ತನಾದಡೆ ಇಲಿಯ ತಿಂಬುದ ಮಾಣ್ಬುದೆ?
ಸುನಕಗೆ ಪಂಚಾಮೃತವ ನೀಡಲು ಅಡಗ ತಿಂಬುದ ಮಾಣ್ಬುದೆ?
ಇಂತೀ ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ
ಮರಳಿ ತನ್ನ ಜಾತಿಯ ಕೂಡಿದಡೆ
ಆ ಕತ್ತೆ–ಹಂದಿ–ಬೆಕ್ಕು–ಸುನಕಗಿಂದತ್ತತ್ತ ಕಡೆ ಕಾಣಿರೊ!
ಹೊನ್ನಬೆಟ್ಟವನೇರಿ ಕಣ್ಣುಕಾಣದಿಪ್ಪಂತೆ,
ಗಣಿಯನೇರಿದ ಡೊಂಬ ಮೈಮರೆದಿಪ್ಪಂತೆ,
ಅಂಕವನೇರಿದ ಬಂಟ ಕೈಮರೆದಿಪ್ಪಂತೆ!
ಇಂತಿವರು ಮಾಡುವ ಭಕ್ತಿಯೆಲ್ಲವು
ನಡುನೀರೊಳು ಹೋಗುವ ಹರುಗೋಲು
ಹೊಡೆಗೆಡೆದಂತಾಯಿತ್ತೆಂದಾತನಂಬಿಗರ ಚೌಡಯ್ಯನು! ॥೫೧॥

೬೩

ಈಶಲಾಂಛನವ ತೊಟ್ಟು ಮನ್ಮಥವೇಷಲಾಂಛನವ ತೊಡಲೇತಕ್ಕೆ?
ಇದು ನಿಮ್ಮ ನುಡಿ ನಡೆಗೆ ನಾಚಿಕೆಯಲ್ಲವೆ?
ಅಂದಳ, ಛತ್ರ, ಆಭರಣ, ಕರಿತುರಗಂಗಳ ಗೊಂದಣವೇತಕ್ಕೆ?
ಅದು ಘನಲಿಂಗದ ಮೆಚ್ಚಲ್ಲ, ಎಂದನಂಬಿಗ ಚೌಡಯ್ಯ. ॥೫೨॥

೬೪

ಈಶ್ವರನ ಕಾಬುದೊಂದಾಸೆಯುಳ್ಳೊಡೆ ಪರದೇಶಕ್ಕೆ ಹೋಗಿ ಬಳಲದಿರು,
ಕಾಶಿಯಲ್ಲಿ ಕಾಯವ ವಿನಾಶವ ಮಾಡಲುಬೇಡ.

ನಿನ್ನಲ್ಲಿ ನೀ ತಿಳಿದು ನೋಡಾ. ಸರ್ವೇಶ ಮುಳ್ಳಗುತ್ತ ತೆರಹಿಲ್ಲೆಂದಡೆ,
ಒಂದು ಗೋಂಟ ಸಾರಿರ್ದನೆ? ಎಂದನಂಬಿಗ ಚೌಡಯ್ಯ. ॥೫೩॥

೬೫

ಉಂಡರೆ ಭೂತನೆಂಬರು, ಉಣದಿದ್ದರೆ [ಚಾತಕ]ನೆಂಬರು.
ಭೋಗಿಸಿದರೆ ಕಾಮಿಯೆಂಬರು,
ಭೋಗಿಸದಿದ್ದರೆ ಮುನ್ನಮಾಡಿದ ಕರ್ಮಿಎಂಬರು.
ಊರೊಳಗಿದ್ದರೆ ಸಂಸಾರಿ ಎಂಬರು,
ಅಡವಿಯೊಳಗಿದ್ದರೆ ಮೃಗಜಾತಿ ಎಂಬರು.
ನಿದ್ರೆಗೈದರೆ ಜಡದೇಹಿ ಎಂಬರು, ಎದ್ದಿದ್ದರೆ ಚಕೋರನೆಂಬರು.
ಇಂತೀ ಜನಮೆಚ್ಚಿ ನಡೆದವರ
ಎಡದ ಪಾದ ಕಿರಿ ಕಿರುಗುಣಿಯಲ್ಲಿ ಮನೆ ಮಾಡು,
ಮನೆ ಮಾಡು ಎಂದಾತ ನಮ್ಮ ಅಂಬಿಗರ ಚೌಡಯ್ಯ. ॥೫೪॥

೬೬

ಉಡುವಿನ ಕಣ್ಣು, ಪಡಿಯ ಅಡಿ, ಕೀಟಕನ ಮುಟ್ಟು,
ಘಾತಕನ ಸ್ನೇಹ, ವೇಸಿಯ ಮೋಹದ ಆಸೆ,
ಸುಜಾತಿಯಲ್ಲದವನ ಕೊಳುಕೊಡೆ,
ನಿರಾಸೆಯಿಲ್ಲದವನ ಮಾತಿನ ಮಾಲೆ ಅದೇತಕ್ಕೆ
ಬಾ[ತೆ]ಯೆಂದನಂಬಿಗಚೌಡಯ್ಯ. ॥೫೫॥

೬೭

ಉಪ್ಪಿಲ್ಲದ ಮೇಲೋಗರ ತುಪ್ಪದಲ್ಲಿ ಬೆಂದಡೆ,
ತುಪ್ಪ ಲೇಸೆಂದಡೆ ಸಪ್ಪೆಯಾಗಿ ತೋರಿತ್ತು.
ಅರಿವು ಶುದ್ಧವುಳ್ಳವನೆಂದಡೆ,
ಕುರುಹಿನ ಬೆಂಬಳಿಯಲ್ಲಿ ಅಡಗಿದಡೆ ಅರಿವಿಗೆ ದೂರವೆ?
ಅರಿವು ಕುರುಹು ನಿಃಪತಿಯಹನ್ನಕ್ಕ
ಆರನೂ ಕೆಡೆನುಡಿಯಬೇಡೆಂದನಂಬಿಗ ಚೌಡಯ್ಯ. ॥೫೬॥

೬೮

ಊರ ಸುತ್ತಿ ಬಂದ[ಡೇ]ನಯ್ಯ, ಸೇರಬೇಕು ಹೆಬ್ಬಾಗಿಲಲ್ಲಿ.
ಹೊರಬೇಕು, ಗುರುಲಿಂಗಜಂಗಮದ ಪಾದವ.

ಶ್ವಾನಜ್ಞಾನದ ಮಾತ ಕಲಿತು
ಅರಿಕೆಯ ಮಾತಿಗೆ ಹೋರಾಟಕ್ಕೆ ಹೋದರೆ,
ಸೇರಿದ್ದ ಲಿಂಗ ದೂರವಾಯಿತು, ಎಂದ ನಮ್ಮ ಅಂಬಿಗರ ಚೌಡಯ್ಯ ॥೫೭॥

೬೯
ಊರೆಲ್ಲಾ ಏರಿದ ಹರುಗುಲವ,
ನೀರಿನಲ್ಲಿ ದಾರಿಯ ಕೊಂಡು ಹೋಹವನ ಆರೈಕೆಯಲ್ಲದೆ
ಏರಿದವರೆಲ್ಲಕ್ಕೂ ಆರೈಕೆವುಂಟೆ?
ಹೇಳುವಾತನ ವಿರಕ್ತಿ, ಕೇಳುವಾತನ ಸದ್ಭಕ್ತಿ
ಉಭಯದ ನೆಲೆಯ ಆರಿಂದ ಅರಿಯಬೇಕೆಂದನಂಬಿಗ ಚೌಡಯ್ಯ. ॥೫೮॥

೭೦
ಎತ್ತ ಸುತ್ತಿ ಬಂದಡೂ ಊರಿಗೆ ಬಪ್ಪುದು ತಪ್ಪದು.
ಹಲವು ಮಾತನಾಡಿದಡೇನು? ಮೂರು ಮಲವ ಮರೆದಿರಬೇಕು.
ಹೊಲಬುದಪ್ಪಿದ ಮೃಗ ಬಲೆಯೊಳಗೆ ಬಿದ್ದಂತಾಗಬೇಡ.
ಇದನರಿತು ಬದುಕೆಂದನಂಬಿಗ ಚೌಡಯ್ಯ. ॥೫೯॥

೭೧
ಎರಡು ಗ್ರಾಮದ ನಡುವೆ ಕಡೆದ ಸೀಮೆಯ ಕಲ್ಲು.
ಅದ ಕಟ್ಟಿದಾತ ಗುರುವಲ್ಲ, ಕಟ್ಟಿಸಿಕೊಂಡಾತ ಶಿಷ್ಯನಲ್ಲ.
ಆದಿಯನರಿಯದ ಗುರುವು, ಭೇದಿಸಲರಿಯದ ಶಿಷ್ಯ,
ಇವರಿಬ್ಬರೂ ಉಭಯಭ್ರಷ್ಟರೆಂದಾತನಂಬಿಗ ಚೌಡಯ್ಯ. ॥೬೦॥

೭೨
ಎಲ್ಲರೊಳಗೆ ಗೆಲ್ಲ ಸೋಲಕ್ಕೆ ಹೋರಬಂದೆನೆ?
ಬೆಲ್ಲವ ಮೆದ್ದಡೆ ತಮ್ಮ ತಮ್ಮ ಬಾಯಲ್ಲಿಗೆಲ್ಲ ಸಿಹಿ.
ಬಲ್ಲವನಾದ ಮತ್ತೆ ನಾಡೆಲ್ಲರೂ ಕೂಡಿ ಬಾಳದ ಹೆಣ್ಣಿಗೆ ನ್ಯಾಯವನಾಡುವಂತೆ,
ಅರಿದ ಅರಿವಿಂಗೆ ಮರೆದ ಮರವೆಗೆ ತನ್ನಲ್ಲಿದ್ದು ಕರಿಗೊಂಡವನೆ
ಸಾಕ್ಷಿಯೆಂದನಂಬಿಗ ಚೌಡಯ್ಯ. ॥೬೧।

೭೩
ಎಲ್ಲವ ಕಳಿದುಳಿದ ಹೂವತಂದು, ಗೆಲ್ಲಸೋಲಕ್ಕೊಳಗಾಗದ ನೀರತುಂಬಿ,
ಕರಣಂಗಳೆಲ್ಲವು ಕಂಗಳ ತುಂಬಿ ನಿಂದು ನೋಡಿ,

ಎಂದೂ ತನ್ನಂಗದಿಚ್ಛೆಯ ಮರೆದು,
ಲಿಂಗವ ಪೂಜಿಸಬೇಕೆಂದನಂಬಿಗ ಚೌಡಯ್ಯ. ॥೬೨॥

೭೪
ಎಲ್ಲಾ ದೇವರಿಗೆ ಮಸ್ತಕದ ಪೂಜೆ,
ನಮ್ಮ ಗುರುಲಿಂಗಜಂಗಮದೇವರಿಗೆ
ಪಾದಾಂಗುಷ್ಠದ ಪೂಜೆಯೆಂದು
ಸಕಲ ವೇದಶಾಸ್ತ್ರಪುರಾಣಾಗಮಂಗಳು,
ಶ್ರುತಿಸ್ಮೃತಿಗಳು ಸಾರುತ್ತಿರಲು,
ಅದನರಿತು ಓದುತ್ತ ಓದುತ್ತ ಹಾಡುತ್ತ ಹಾಡುತ್ತ
ಅದಕ್ಕೆ ಅಪಖ್ಯಾತಿಯ ತರುವವನೆಂತು ಜಂಗಮವೊ?
ಅವನೆಂತು ಭಕ್ತನೊ? ತಾನೊಡೆಯ[ನ]ಂತೆ, ತಾ ಭಕ್ತನಂತೆ,
ತನ್ನೆಡೆಯ ಗುಡಿಯ ಲಿಂಗದ ಮುಂದಿಟ್ಟು
ತನ್ನಿಷ್ಟಲಿಂಗಕ್ಕೆ ಕೊಟ್ಟು ಕೊಂಬ
ತುಡುಗುಣಿ ನಾಯ ಮೂಳಹೊಲೆಯರ ಕಂಡಡೆ
ನಡುವಿನ ಮೇಲೆ ಒದೆಯೆಂದಾತ ನಮ್ಮ ಅಂಬಿಗರ ಚೌಡಯ್ಯ. ॥೬೩॥

೭೫
ಎಲುವೆಂಬ ಹಂಜರ ಥಟ್ಟಾಗಿ, ಉಭಯವ ಘಟಿಸಿದ ತೊಗಲು
ಬ್ರಹ್ಮವೆಂಬ ಅಳಿಲೆಯ ಕಾಯಲ್ಲಿ ವಿಷ್ಣುವೆಂಬ ನೀರ ಹೊಯಿದು,
ರುದ್ರನೆಂಬ ಚೂರ್ಣದಲ್ಲಿ ಖಾರಕ್ಕೆ ಮೆಟ್ಟಲಾಗಿ,
ತೊಗಲ ಹೊಲಸು ಕೆಟ್ಟಿತ್ತು, ಹರುಗುಲ ಹುದುಗಿತ್ತು.
ವರ್ತನವೆಂಬ ಹುಟ್ಟ ಹಿಡಿದು,
ಮಾಟಕೂಟವೆಂಬ ಹೊಳೆಯಲ್ಲಿ ಕೂಟದವರು ದಾಟುತ್ತಿದ್ದಾರೆ,
ಎಂದನಂಬಿಗ ಚೌಡಯ್ಯ. ॥೬೪॥

೭೬
ಎಲೋ ಮಾನವ ಕೇಳೆಲೊ, ಶೀಲದಲ್ಲಿ ಸಂಪನ್ನರಾದವರು ನೀವು ಕೇಳಿರೊ:
ಹಣ್ಣುಗಳು ಸಣ್ಣ ಜಾತಿಯ ಎಂಜಲು, ಹಾಲು ಕರುವಿನ ಎಂಜಲು,
ಮೊಸರು ಗೊಲ್ಲತಿಯ ಎಂಜಲು,
ಅಕ್ಕಿ, ಗೋದಿ, ಬೇಳೆ, ಬೆಲ್ಲಗಳು ನೊಣದ ಎಂಜಲು,
ನೀರು ಮೀನು ಕಪ್ಪೆಗಳ ಎಂಜಲು, ಉಪ್ಪು ಉಪ್ಪಾರನ ಎಂಜಲು,
ಎಣ್ಣೆ ಸರ್ವಮಾನವರ ಎಂಜಲು,

ಸಕಲಪದಾರ್ಥವು ಅನಂತ ಹುಳುಗಳ ಎಂಜಲು.
ಇಂತಹ ಎಂಜಲವು ಎಂದು ಕಣ್ಣಾರೆ ನೋಡಿ, ಕಿವಿಯಾರೆ ಕೇಳಿ,
ಮಾಡುವ ದುರಾಚಾರವ ಆರು ಬಣ್ಣಿಸಬಹುದು?
ಅರಿವು ಇಲ್ಲದವರು ಅರಮನೆಗೆ ಮಾಡಿದರು,
ಭಕ್ತಿಯಿಲ್ಲದವರು ತಮ್ಮ ಗುರುಲಿಂಗಜಂಗಮಕ್ಕೆ ಮಾಡಿದರು.
ಇಂತಪ್ಪ ಸರ್ವರ ಎಂಜಲು ತಿಂದು
ಶಿವಲಿಂಗವ ಧರಿಸಿಕೊಂಡು, ಶಿವಭಕ್ತರೆಂದು ಹೇಳಿಸಿ,
ಕಾಲಿಗೆ ಬಂದಂತೆ ಕುಣಿದು, ಬಾಯಿಗೆ ಬಂದಂತೆ ಅಂದು,
ಮನಬಂದಂತೆ ಸ್ತ್ರೀಸಂಗದಲ್ಲಿ ಆಚರಿಸುವ
ಭ್ರಷ್ಟ ಹೊಲೆಮಾದಿಗರಿಗೆ ಶೀಲವು ಎಲ್ಲಿಹುದು?
ಆಚರಣೆ ಎಲ್ಲಿಹುದು? ಕುಲವೆಲ್ಲಿಹುದು?
ಇಂತಪ್ಪ ಮೂಳಹೊಲೆಯರ ಮೂಗ ಕೊಯ್ದು
ಪಡಿಹಾರಿ ಉತ್ತಣ್ಣಗಳ ಪಾದುಕದಿ ಹೊಡೆ ಎಂದಾತ
ನಮ್ಮ ಅಂಬಿಗ ಚೌಡಯ್ಯ. ॥೬೫॥

೭೭

ಎಸವಿನ ಗುರು ಹೋಗಿ ಶಿಶುವಧೆಯ ಮಾಡಿದ.
ಶಿಶು ಹೋಗಿ ಮರಳಿ ಗುರುವ ಕೊಂದಡೆಯು,
ಹೆಸರುಗೊಂಬ ಅಣ್ಣಗಳು ನೀವು ಕೇಳಿರೋ:
ಅವರಿಬ್ಬರೂ ಸತ್ತ ಠಾವನೊಬ್ಬರೂ ಅರಿಯರು,
ನಿರ್ವಯಲೆಂದಾತನಂಬಿಗ ಚೌಡಯ್ಯ. ॥೬೬॥

೭೮

ಏಕಾದಶ ರುದ್ರರು ಹೊರಗಾದ,
ಈರೇಳು ಲೋಕ ಹದಿನಾಲ್ಕು ಭುವನ ಯುಗಜುಗಂಗಳಲ್ಲಿ ಒಳಗಾಗಿ
ತಿರುಗುವುದೊಂದು ಶಕ್ತಿಯ ಭೇದ.
ದಶಾವತಾರವಾಗಿ ಕಾಲಕರ್ಮಂಗಳಲ್ಲಿ ಓಲಾಡುತ್ತಿಪ್ಪುದು
ಒಂದು ಶಕ್ತಿಯ ಭೇದ.
ಉಂಟು ಇಲ್ಲಾ ಎಂದು ನಿಶ್ಚಿಂತಕ್ಕೆ ಹೋರುವುದೊಂದು ಶಕ್ತಿಯ ಭೇದ.
ಇಂತೀ ತ್ರಿವಿಧಶಕ್ತಿಯ ಆದಿ ಆಧಾರವನರಿದು
ಕರ್ಮವ ಕರ್ಮದಿಂದ ಕಂಡು, ಧರ್ಮವ ಧರ್ಮದಿಂದ ಅರಿದು,
ಜ್ಞಾನವ ಜ್ಞಾನದಿಂದ ವಿಚಾರಿಸಿ, ಇಂತೀ ತ್ರಿಗುಣದಲ್ಲಿ ತ್ರಿಗುಣಾತ್ಮಕನಾಗಿ,
ದರ್ಪಣದಿಂದ ಒಪ್ಪಂಗಳನರಿವಂತೆ

ಅರಿವು ಕುರುಹಿನಲ್ಲಿ ನಿಂದು, ಕುರುಹು ಅರಿವನವಗವಿಸಿದಲ್ಲಿ
ತ್ರೈಮೂರ್ತಿ ನಷ್ಟವೆಂದನಂಬಿಗ ಚೌಡಯ್ಯ. ॥೬೭॥

೬೮

ಐಶ್ವರ್ಯದುಃಖದಲ್ಲಿ ಬೇಯುವ
ಹೊಲೆ ಸಂಸಾರವನೆ ಕಚ್ಚಿ ಕೊಲೆಗೀಡಾಗದೆ,
ಸಲೆ ಸತ್ಯ ಸದಾಚಾರದಲ್ಲಿ ನಡೆ, ಸಟೆಯನು ಬಿಡು, ದಿಟವನೆ ಹಿಡಿ.
ಈ ಘಟವುಳ್ಳನಕ ಕಾಲದಲ್ಲಿ ಶಿವಭಕ್ತಿಯ ನಟಿಸಿ
ನಡೆ ಎಂದಾತ ನಮ್ಮ ಅಂಬಿಗರ ಚೌಡಯ್ಯ. ॥೬೮॥

೬೯

ಒಂದನರಿದು ಒಂದ ಮರೆದೆಹೆನೆಂಬ ಸಂದೇಹದವನಲ್ಲ.
ಸರ್ವರ ಕೂಡಿಕೊಂಡು ಅರಿದೆಹೆನೆಂಬ ಬಂಧಮೋಕ್ಷದವನಲ್ಲ.
ಆಗಿಗೆ ಮುಯ್ಯಾಂತು, ಚೇಗೆಗೆ ಮನಗುಂದುವನಲ್ಲ.
ಸುಖದುಃಖವೆಂಬ ಉಭಯವ ಸರಿಗಾಬವ[ನ]ಲ್ಲ.
ನಿಂದ ನಿಜವೆ ತಾನಾಗಿದ್ದವಂಗೆ
ಬೇರೆ ಬಂಧವೊಂದೂಯಿಲ್ಲ, ಎಂಬನಬಿಂಗ ಚೌಡಯ್ಯ. ॥೬೯॥

೭೦

ಒಂದ ಬಿಟ್ಟು ಒಂದನರಿದೆಹೆನೆಂಬನ್ನಕ್ಕ ಮರದ ಸಂದಿನ ಬೊಂಬೆಯೆ?
ಅರಿವುದು ಕುರುಹೊ ಅರಿವೊ? ಸುಡುವುದು ಮರನೊ ಬೆಂಕಿಯೊ?
ಎರಡರ ಹೆಚ್ಚು ಕುಂದ ತಿಳಿದು ಹೇಳೆಂದನಂಬಿಗ ಚೌಡಯ್ಯ. ॥೭೦॥

೭೧

ಒಡಲಿಂಗಾರು ಬಾಯಿ, ನಡುವೆ ಮೂರು ದೇಹ,
ಹಿಡಿದ ಪ್ರಣತೆ ಹದಿನಾರು. ಆ ಸೊಡರಿಂಗೆರೆದೆಣ್ಣೆ ಬಯಲೆಣ್ಣೆ.
ಆ ಸೊಡರೊಳಗಳ ಬೆಳಗ ದೃಢವಾಗಿ
ಹಿಡಿದು ಕಡೆಗಾಣಿಸೆಂದಂಬಿಗ ಚೌಡಯ್ಯ. ॥೭೧॥

೭೨

ಒಬ್ಬ ತಂದೆಯ ಬಸಿರಿನಲ್ಲಿ ಒಂಬತ್ತು ಮಕ್ಕಳು ಹುಟ್ಟಿದಡೇನಯ್ಯ?
ಅವರೊಳಗೊಬ್ಬಾತಂಗೆ ಸೆರಗ ಕಟ್ಟಿ ಮದುವೆಯ ಮಾಡಿದ ಬಳಿಕ,
ಆತಂಗೆ ತನ್ನಂಗದ ಸುಖವನೊಪ್ಪಿಸಬೇಕಲ್ಲದೆ,

ಉಳಿದಿರ್ದವರೆಲ್ಲ ತನ್ನ ಮಾವನ ಮಕ್ಕಳೆಂದು
ಅವರಿಗೆ ಸೆರಗು ಹಾಸುವವಳನು ಒಪ್ಪುವರೆ ಲೋಕದೊಳು ?
ಪರಮಾತ್ಮನೆಂಬ ಶಿವನಿಗೆ ಆಶ್ರಯವಾಗಿ ಹುಟ್ಟಿತ್ತು ಲಿಂಗ,
ಆತಂಗೆ ವಾಹನವಾಗಿ ಹುಟ್ಟಿದಾತ ವೃಷಭ,
ಆತಂಗೆ ಯೋಗವಾಗಿ ಹುಟ್ಟಿದಾತ ವಿನಾಯಕ,
ಆತಂಗೆ ಯುದ್ಧಕ್ಕೆ ಸರಿಯಾಗಿ ಹುಟ್ಟಿದಾತ ವೀರಭದ್ರ.
ಇಂತಿವರೆಲ್ಲ ಶಿವನ ಮಕ್ಕಳಾದರೆ,
ತನಗೊಂದು ಪ್ರಾಣಲಿಂಗವೆಂದು ಕಂಕಣ ಕಟ್ಟಿ,
ಕರಸ್ಥಲಕ್ಕೆ ಬಂದ ಬಳಿಕ ಅದನು ನಂಬಲರಿಯದೆ
ಮತ್ತನ್ಯದೈವಕ್ಕೆರಗಿದಡೆ ನಾಯಕನರಕವೆಂದಾತ
ನಮ್ಮ ಅಂಬಿಗಚೌಡಯ್ಯ. ॥೭೨॥

೮೪

ಓಂಕಾರವೆಂಬಾಕಾರದಲ್ಲಿ ನಾಲ್ಕು ವೇದ, ನಾಲ್ಕು ವೇದದಲ್ಲಿ ಇಪ್ಪತ್ತೆಂಟಾಗಮ,
ಇಪ್ಪತ್ತೆಂಟಾಗಮದಲ್ಲಿ ಹದಿನೆಂಟು ಪುರಾಣ,
ಹದಿನೆಂಟು ಪುರಾಣದಲ್ಲಿ ಹದಿನಾರು ಶಾಸ್ತ್ರವಡಗಿದವು.
ಆ ಶಾಸ್ತ್ರದ ಕೊನೆಯ ಮೊನೆಯ ಮೇಲಿಪ್ಪ
ಷಡ್ದರ್ಶನದ ಕಹಿಯ ಬೇರಹಿಡಿದು, ವೀರಶೈವನೆಂಬ ಸಿದ್ಧನು ಕೀಳುವಾಗ,
ಕಾಯಯ್ಯ ಎಂದು ಬಾಯ ಬಿಟ್ಟವು.
ಅವಕ್ಕೆ ಕರುಣಿಸಿ ಬಿಟ್ಟಾತನಂಬಿಗಚೌಡಯ್ಯ. ॥೭೩॥

೮೫

ಓದಿ ಬೋಧಿಸಿ ಇದಿರಿಗೆ ಹೇಳುವನ್ನಬರ ಚದುರತೆಯಲ್ಲವೆ?
ತಾ ತನ್ನನರಿದಲ್ಲಿ, ಆ ಅರಿಕೆ ಇದಿರಿಗೆ ತೋ[ರ]ದಲ್ಲಿ
ಅದೆ ದೇವತ್ವವೆಂದನಂಬಿಗಚೌಡಯ್ಯ. ॥೭೪॥

೮೬

ಓದಿಹೆನೆಂಬ ಒಡಲು, ಕಂಡೆಹೆನೆಂಬ ಭ್ರಾಂತು,
ಸರ್ವರಿಗೆ ಹೇಳಿಹೆನೆಂಬ ತೇಜಸ್ಸು, ಇಂತಿವೆಲ್ಲವು ಇದಿರಿಗೆ ಹೇ[ಳೆ]
ತನ್ನ ಉದರದ ಕಕ್ಕುಲತೆಯಲ್ಲದೆ ಆತ ಅರಿವಿಂಗೆ ಒಡಲಲ್ಲ
ಎಂದನಂಬಿಗ ಚೌಡಯ್ಯ . ॥೭೫॥

೮೭

ಕಂಗಳ ನಾಮ ಹರುಗುಲವಾಗಿ, ನೋಡುವ ದೃಷ್ಟಿ ಅಂಬಿಗನಾಗಿ,
ಕರಣೇಂದ್ರಿಯವೆಂಬ ಬಹುಜನಂಗಳ ಕೂಡಿ,
ಆಸೆಯೆಂಬ ಹೊಳೆಯ ದಾಟುವುದಕ್ಕೆ ಹುಟ್ಟ ಕಾಣದೆ
ಹರುಗುಲು ಈಚೆ ಉಳಿಯಿತ್ತೆಂದನಂಬಿಗ ಚೌಡಯ್ಯ. ॥೭೬॥

೮೮

ಕಂಡು ಕೊಟ್ಟೆಹೆನೆಂಬುದು ಖಂಡಿತಂಗಲ್ಲದೆ ಪರಿಪೂರ್ಣಂಗುಂಟೆ?
ಉಂಡು ತೇಗಿಹೆನೆಂಬುದು ನಿತ್ಯತೃಪ್ತಂಗುಂಟೆ?
ಒಂದನರಿದು ಒಂದ ಮರೆದೆನೆಂದು ಸಂದೇಹಕ್ಕೊಳಗಾದವಂಗೆ
ಲಿಂಗವಿಲ್ಲ, ಎಂದನಂಬಿಗ ಚೌಡಯ್ಯ. ॥೭೭॥

೮೯

ಕಂಥೆ ತೊಟ್ಟವ ಗುರುವಲ್ಲ, ಕಾವಿ ಹೊತ್ತವ ಜಂಗಮವಲ್ಲ,
ಶೀಲ ಕಟ್ಟಿದವ ಶಿವಭಕ್ತನಲ್ಲ,
ನೀರು ತೀರ್ಥವಲ್ಲ, ಕೂಳು ಪ್ರಸಾದವಲ್ಲ.
ಹೌದೆಂಬವನ ಬಾಯ ಮೇಲೆ
ಅರ್ಧಮಣದ ಪಾದರಕ್ಷೆಯ ತೆಗೆದುಕೊಂಡು
ಮಾಸಿ ಕಡಿಮೆಯಿಲ್ಲದೆ ತೂಗಿ ತೂಗಿ ಟೊಕಟೊಕನೆ
ಹೊಡೆ ಎಂದಾತ ನಮ್ಮ ಅಂಬಿಗರ ಚೌಡಯ್ಯ. ॥೭೮॥

೯೦

ಕಟ್ಟಿ ಕಳೆ ಪಾಪವ, ಬಿಟ್ಟು ಕಳೆ ಪುಣ್ಯವ.
ಒತ್ತು ರೋಷವ, ಸಮತೆಯ ಪಸರಿಸಾ. ಎತ್ತಿದರ್ಥವನು ಬೈಚಿಟ್ಟು,
ಮನದಲ್ಲಿ ಚಕ್ಕನೆ ತೀವು ಪರಿಣಾಮವನು, ಇದು ಬಟ್ಟೆ,
ದೇವತತ್ವದವ ಮುಟ್ಟಲುಪದೇಶವ ಕೊಟ್ಟನಂಬಿಗ ಚೌಡ ತನ್ನನೊಲಿವರಿಗೆ. ॥೭೯॥

೯೧

ಕಟ್ಟಿಗೆಯ ಹೊರೆಯ ಹೊತ್ತು,
ಬಟ್ಟೆಯಲ್ಲಿ ಬಳಲಿ ಬರುವ ಮನುಜನಂ ಕಟ್ಟಿದಿರಿನಲ್ಲಿ ಕಂಡು,
ಆ ಹೊರೆಗೆ ತಲೆಗೊಟ್ಟವರಿಗೆ ಪುಣ್ಯವುಂಟು.
ಇದ್ದ.........ಭಕ್ತ ವಿರಕ್ತರಿಗೆ ಮುಟ್ಟಾಳಾಗಿ,
ಅವರ ಅನುವರಿತು ತಾ ನಡೆಯಬೇಕು.

ನಡೆಯದಿರ್ದಡೆ ಹೋಗಲಿ, ಅರ.......... ಯಿಪ್ಪ ಇಲ್ಲದೆ,
ಇದ ತನ್ನ ಕಟ್ಟುಮಾಡಿಕೊಳ್ಳ ಹೇಳಿದವರಾರೋ ಎಂದು,
ತನ್ನ ನಷ್ಟಕ್ಕೆ ತಾನೇ ಎಯ್ದಿದ್ದಾನೆಂ[ಬ] ವಿಶ್ವಾಸಹೀನನ ಕೊರಳಲ್ಲಿ
ಶಿವಲಿಂಗವು ಕಟ್ಟಿರ್ದಡೇನಯ್ಯಾ?
ಪಡುವಲದ ಕಾಯಿಗೆ ಕ[ಲ್ಲ] ಕಟ್ಟಿ ಇಳಿಯ ಬಿಟ್ಟಂತೆ.
ಮೈತುಂಬ ವಿಭೂತಿಯನಿಟ್ಟುಕೊಂಡಿರ್ದಡೇನಯ್ಯಾ?
ಕೊಟ್ಟಿಗೆಯ ಮೇಗಣ ಕಗ್ಗುಂಬಳ ಕಾಯಂತೆ......ವೇನಯ್ಯಾ?
ಹುತ್ತದೊಳಗಣ ನಿಧಾನದಂತೆ.
ಈ ಕೆಟ್ಟತನವುಳ್ಳ ಭಂಡರ ಕಂಡು ಹೊಟ್ಟೆಯ
ಹೊಯ್ದುಕೊಂಡು ನಗುತಿರ್ದ ಅಂಬಿಗ ಚೌಡಯ್ಯ. ॥೮೦॥

೯೨

ಕಟ್ಟಿದ ಲಿಂಗವ ಕಿರಿದು ಮಾಡಿ,
ಬೆಟ್ಟದ ಲಿಂಗವ ಹಿರಿದು ಮಾಡುವ ಪರಿಯ ನೋಡ!
ಇಂತಪ್ಪ ಲೊಟ್ಟಿಮೂಳರ ಕಂಡರೆ ಗಟ್ಟಿವುಳ್ಳ ಪಾದರಕ್ಷೆಯ ತೆಗೆದುಕೊಂಡು
ಲೊಟಲೊಟನೆ ಹೊಡೆಯೆಂದಾತ ನಮ್ಮ ಅಂಬಿಗರ ಚೌಡಯ್ಯ. ॥೮೧॥

೯೩

ಕಟ್ಟಿಹೆ ಬಿಟ್ಟಿಹೆನೆಂಬ ದಂದುಗ ನಿಮಗೇಕೆ?
ತೆರನನರಿಯದೆ ಹಲವು ತಪ್ಪಲ ತರಿ ತಂದು ಮೇಲೊಟ್ಟಲೇಕೆ?
ಜಂಗಮ ಬಂದರೆ ತೆರನರಿತು ಅರ್ಪಿಸಬಲ್ಲಡಲ್ಲಿ
ತಾನೆ ಶಿವನು ತೆರಹಿಲ್ಲದಿಪ್ಪನೆಂದಾತ ನಮ್ಮಂಬಿಗ ಚೌಡಯ್ಯ. ॥೮೨॥

೯೪

ಕತ್ತೆಯ ಮೇಲೆ ತಿತ್ತಿಯ ಮಾಡಿ ಕಳ್ಳು ಹೇರುವರು, ಅದಕ್ಕದು ಸತ್ಯವಯ್ಯ.
ಎತ್ತಿನ ಮೇಲೆ ತಿತ್ತಿಯ ಮಾಡಿ ತೈಲ ತುಪ್ಪವ ಹೇರುವರು,
ಅದಕ್ಕದು ಸತ್ಯವಯ್ಯ. ಆ ತಿತ್ತಿಯ ಒಳಗಣ ತೈಲ ತುಪ್ಪವ ತಂದು,
ನಿತ್ಯ ಗುರು-ಲಿಂಗ-ಜಂಗಮಕ್ಕೆ ನೀಡುವ ಭಕ್ತನ ಭಕ್ತಿ ಎಂತಾಯಿತ್ತೆಂದಡೆ:
ಆ ಕತ್ತೆಯ ಮೇಲೆ ಹೇರುವ ಕಳ್ಳುಗುಂಡಿಗಿಂದ
ಕಡೆಯೆಂದಾತ ನಮ್ಮ ಅಂಬಿಗಚೌಡಯ್ಯ. ॥೮೩॥

೯೫
ಕರದಲ್ಲಿ ಲಿಂಗವ ಪಿಡಿದುಕೊಂಡು,
ಕಣ್ಣುಮುಚ್ಚಿ ಸರ ಜಪಮಾಲೆಯ ಬೆರಳಿಂದ ಎಳೆದೆಳೆದು ಎಣಿಸುತ್ತ,
ಗುರುಮೂರ್ತಿಯ ಧ್ಯಾನಿಸುತ್ತ ಕಂಡೆನೆಂಬುತ್ತ ಇರುವರೆ
ಮೂಳರಿರಾ ನಿಮಗೆಲ್ಲಿಯದೊ ಗುರುಧ್ಯಾನ?
ವರ ಪರವಸ್ತುವಿಂಗೆ ಸರಿ ಎನಿಸಿಕೊಂಬ ಗುರುಸ್ವಾಮಿ
ನಿಮ್ಮ ನೆರೆಹೊರೆಯ ಸರಿಸಮೀಪ ಗ್ರಾಮದಲ್ಲಿರಲು
ಅವರನ್ನು ಲೆಕ್ಕಿಸದೆ, ಉದಾಸೀನವ ಮಾಡಿ ಕಂಡು,
ನಿನ್ನ ಉಂಬ ಉಡುವ ಸಿರಿ ಸಂಪತ್ತಿನೊಳು ಅವರನು ಸತ್ಕರಿಸದೆ,
ಕರದಲ್ಲಿ ನೋಡಿ ಕಂಡಿಹೆನೆಂದು, ಶಿರವಂ ಬಿಗಿದು, ಕಣ್ಣನೆತೆರೆಯದೆ,
ಸ್ವರದಲಾಗ ಪಿಟಿಪಿಟಿ ಎನ್ನುತ್ತ ಅರಿದೆವೆಂಬ ಅರಿವಿಂಗೆ
ಶಿರದೂಗಿ ಬೆರಗಾಗಿ ನಗುತಿರ್ದ ನಮ್ಮ ಅಂಬಿಗರ ಚೌಡಯ್ಯ. ॥೮೪॥

೯೬
ಕರ್ಮೇಂದ್ರಿಯ ಕಾಯವ ಕೂಡಿಪ್ಪುದು,
ಜ್ಞಾನೇಂದ್ರಿಯ ಜೀವವ ಕೂಡಿಪ್ಪುದು,
ಭಾವೇಂದ್ರಿಯ ಪರಮನ ಕೂಡಿಪ್ಪುದು.
ಕಾಯ ಜೀವ ಪರಮನ ಕೂಡುವ
ಠಾವನರಿಯಬೇಕೆಂದನಂಬಿಗ ಚೌಡಯ್ಯ. ॥೮೫॥

೯೭
ಕರ್ಮೇಂದ್ರಿಯವಯಿದು, ಭಾವೇಂದ್ರಿಯವಾರು, ಜ್ಞಾನೇಂದ್ರಿಯ ಮೂರು.
ಅಯಿದು ಆರು ಮೂರನೊಂದು ಮಾಡಿ
ಬೇರೊಂದ ತಿಳಿಯಬೇಕೆಂದನಂಬಿಗ ಚೌಡಯ್ಯ. ॥೮೬॥

೯೮
ಕಲ್ಲದೇವರ ಪೂಜೆಯ ಮಾಡಿ, ಕಲಿಯುಗ[ದಿ] ಕತ್ತೆಗಳಾಗಿ ಹುಟ್ಟಿದರು.
ಮಣ್ಣದೇವರ ಪೂಜಿಸಿ ಮಾನಹೀನರಾದರು.
ಮರನ ದೇವರೆಂದು ಪೂಜಿಸಿ ಮಣ್ಣ ಕೂಡಿದರು.
ದೇವರ ಪೂಜಿಸಿ ಸ್ವರ್ಗಕ್ಕೇರದೆ ಹೋದರು!
ಜಗದ್ಭರಿತವಾದ ಪರಶಿವನೊಳಗೆ ಕಿಂಕರನಾದ
ಶಿವಭಕ್ತನೆ ಶ್ರೇಷ್ಠನೆಂದಾತ ನಮ್ಮ ಅಂಬಿಗರ ಚೌಡಯ್ಯ. ॥೮೭॥

೯೯
ಕಲಿತು ಹೇಳಿಹೆನೆಂಬ ಕರ್ಕಶ ಬೇಡ,
ಅರಿಕೆಯಾದೆನೆಂಬ ಅರುಹಿರಿಯತನ ಬೇಡ,
ಅರಿದು ಮರೆದೆನೆಂಬ ಸಂದೇಹ ಬೇಡ.
ದರ್ಪಣದಲ್ಲಿ ತೋರುವ ತನ್ನ ಒ[ಪ್ಪಾ]ದ ಬಿಂಬದಂತೆ,
ಅದ ನಿಶ್ಚಯವಾಗಿ ನಿಶ್ಚಯಿಸಿದಲ್ಲಿ ಬೇರೊಂದಿಪ್ಪುದಿಲ್ಲ,
ಎಂದನಂಬಿಗ ಚೌಡಯ್ಯ. ॥೮೮॥

೧೦೦
ಕಲ್ಲಿನಲ್ಲಿ ಕಠಿಣ, ಖಿಲ್ಲರಲ್ಲಿ ದುರ್ಗುಣ,
ಬಲ್ಲವರಲ್ಲಿ ಸುಗುಣ ಉಂಟೆಂದೆಲ್ಲರೂ ಬಲ್ಲರು.
ಇಂತೀ ಇವು ಎಲ್ಲರ ಗುಣ.
ಅಲ್ಲಿಗಲ್ಲಿಗೆ ಸರಿಯೆಂದು ಗೆಲ್ಲ ಸೋಲಕ್ಕೆ ಹೋರದೆ ನಿಜವೆಲ್ಲಿತ್ತು
ಅಲ್ಲಿಯೆ ಸುಖವೆಂದನಂಬಿಗ ಚೌಡಯ್ಯ. ॥೮೯॥

೧೦೧
ಕಷ್ಟಜೀವನ ಮನುಜರಿರಾ,
ನೀವು ಹುಟ್ಟಿದ ಮೊದಲು, ಎಷ್ಟು ಮಂದಿ ನಿಮ್ಮ ಕಣ್ಣ ಮುಂದೆ
ನಷ್ಟವಾಗಿ ಹೋದುದ ಕಂಡು ಕಂಡೂ ಹೆಂಡಿರು ತನ್ನವರೆಂ[ಬಿರೆ]?
ಮಿಂಡಿಯಾಗಿ ಹಲವರ ಬಯಸುವವಳ ಮಕ್ಕಳ ತನ್ನವರೆಂ[ಬಿರೆ?
ಕೂಡುವಾಗ ದುಃಖ, ಕೂಡಿದ ಒಡವೆಯ ಮಡಗುವಾಗ ದುಃಖ,
ಮಡಗಿದ ಒಡವೆಯ ತೆಗೆವಾಗ ದುಃಖ, ಪ್ರಾಣವ ಬಿಡುವಾಗ ದುಃಖ,
ಹೊಲೆ ಸಂಸಾರವ ನಚ್ಚಿ ಕಾಲನ ಬಲೆಗೆ ಈಡಾ[ಗ]ದಿರೊ,
ಪತಿಭಕ್ತಿ, ಮುಕ್ತಿಯೆಂಬುದ ಗಳಿಸಿಕೊಳ್ಳಿರೊ,
ಸಟೆಯಂ ಬಿಡಿ, ದಿಟವಂ ಹಿಡಿ,
ಘಟವುಳ್ಳ ಕಾಲದಲ್ಲಿ ಶಿವಭಕ್ತಿಯ ನಟಿಸಿ ನಡೆ,
ಎಂದಾತ ನಮ್ಮ ಅಂಬಿಗಚೌಡಯ್ಯ. ॥೯೦॥

೧೦೨
ಕಷ್ಟನ ಮನೆಯಲ್ಲಿ ಸೃಷ್ಟಿಗೀಶ್ವರನುಂಬಾಗ
ಎತ್ತ ಹೋದವು ನಿಮ್ಮ ಶಾಸ್ತ್ರಂಗಳು?
ಕೆತ್ತ ಮುಚ್ಚಳು [ಜೇ]ಡಗಚ್ಚರಿದೆರೆವಾಗ
ಇಕ್ಕಿದ ಜನ್ನಿವಾರ ಭಿನ್ನವಾದವು.

ಮುಕ್ಕುಳಿಸಿದುದಕವ ತಂದೆರೆದಡೆ
ಎತ್ತಲಿದ್ದವು ನಿಮ್ಮ ವೇದಂಗಳು?
ನಿಮ್ಮ ವೇದದ ದುಃಖ ಬೇಡೆಂದಾತನಂಬಿಗ ಚೌಡಯ್ಯ. ॥೯೧॥

೧೦೩
ಕಳವು ಪಾರದ್ವಾರಕ್ಕೆ ಪರಾಕುಂಟೆ? ಅದು ತನ್ನ ಒಡಲಳಿವ ಇರವು.
ವರ್ಮ, ಧರ್ಮ, ವಚನಾನುಭವಂಗಳ ಮಾಡುವಲ್ಲಿ
ಪರಚಿಂತೆ ಪರಾಕು ಪರಿಭ್ರಮಣ–ಈ ಗುಣ
ತನ್ನರಿವಿಂಗೆ ಕೇಡೆಂದನಂಬಿಗ ಚೌಡಯ್ಯ. ॥೯೨॥

೧೦೪
ಕಳ್ಳ, ಹಾದರಿಗ, ಸೂಳೆಗಾರ, ತಳವಾರನಲ್ಲಿ ಮಿಥ್ಯವಿಲ್ಲದಿರಬೇಕು.
ಸತ್ಯಸದಾಚಾರಿಗಳಲ್ಲಿ ಸದ್ಭಕ್ತಿ ಮಿಥ್ಯತಥ್ಯವಿಲ್ಲದಿರಬೇಕು.
ಈ ಗುಣ ನಿತ್ಯ ನಿಜೈಕ್ಯನ ಯುಕ್ತಿಯೆಂದನಂಬಿಗ ಚೌಡಯ್ಯ. ॥೯೩॥

೧೦೫
ಕಾಮವ ಕಳೆದು, ಕ್ರೋಧವ ದಾಂಟಿ,
ಲೋಭವ ಹಿಂಗಿ, ಮೋಹಾದಿಗಳಲ್ಲಿ ಮನವಿಕ್ಕದೆ,
ಆ ಕಾಮವ ಲಿಂಗದಲ್ಲಿ ಮರೆದು,ಕ್ರೋಧವ ಕರಣಂಗಳಲ್ಲಿ ಬೈಚಿಟ್ಟು,
ಲೋಭವ ಸರ್ವೇಂದ್ರಿಯಂಗಳಲ್ಲಿ ಸಂಬಂಧಿಸಿ,
ಮೋಹಾದಿ ಗುಣಂಗಳ ಸ್ವಯಚರಪರದಲ್ಲಿ ಗರ್ಭೀಕರಿಸಿ,
ನಿಜನಿವಾಸಿಯಾಗಿ ನಿಂದಾತನ
ಅಡಿಗೆರಗುವೆನೆಂದನಂಬಿಗ ಚೌಡಯ್ಯ . ॥೯೪॥

೧೦೬
ಕಾಯ ಜೀವವೆಂಬ ಹೆಚ್ಚು ಕುಂದನರಿಯದೆ,
ಕ್ರೀ ಜ್ಞಾನ....ನಾನೀನೆಂಬ ಭಾವದ ಭ್ರಮೆಯು
ಆರಿಗೆಂದನಂಬಿಗ ಚೌಡಯ್ಯ. ॥೯೫॥

೧೦೭
ಕಾಯದ ಶೃಂಗಾರ ಕಾಮಿನಿಯರ ಕೂಟಕ್ಕೊಳಗು,
ಜೀವನ ಬಾಳುವೆ ಸಕಲಜೀವಂಗಳಲ್ಲಿ ಸಾಧನ.
ಕಾಯದ ಶೃಂಗಾರ, ಜೀವನ ಭವ–
ಎರಡರ ಠಾವನರಿಯಬೇಕೆಂದನಂಬಿಗ ಚೌಡಯ್ಯ. ॥೯೬॥

೧೦೮
ಕಾಯದಿಂದ ಕಂಡೆಹೆನೆಂದಡೆ ಬ್ರಹ್ಮನ ಹಂಗು,
ಜೀವದಿಂದ ಕಂಡೆಹೆನೆಂದಡೆ ವಿಷ್ಣುವಿನ ಹಂಗು,
ಅರಿವಿನಿಂದ ಕಂಡೆಹೆನೆಂದಡೆ ರುದ್ರನ ಹಂಗು,
ಕಾಬ ಕಾಬಲ್ಲಿ ಕಂಡೆಹೆನೆಂದಡೆ ನಾಡೆಲ್ಲರ ಹಂಗು.
ಇವನೆಲ್ಲವನಲ್ಲಾ ಎಂದು ನಿಲಿಕಿ ನೋಡಿ ಕಂಡ
ಅಂಬಿಗ ಚೌಡಯ್ಯ. ॥೯೭॥

೧೦೯
ಕಾಲ ವೇಳೆಯನರಿತು ಕೂಗಿದ ಕೋಳಿಯ ಕಂಡು,
ಊರೆಲ್ಲರು ಬೆಳಗಾಯಿತ್ತೆಂದು ಏಳುವರಿಂದ ಕಡೆಯೆ?
ಹೇಳುವ ಕೇಳುವ ಮಾತ ಕೇಳಿ ಆರ ಮರೆದು ಮೂರನರಿದು
ಈರೈದು ಕಂಡು ಬೇರೈದರಲ್ಲಿ ಗಾರಾಗದೆ, ಸಾರಿದೆ,
ಕೆಡಬೇಡೆಂದನಂಬಿಗಚೌಡಯ್ಯ. ॥೯೮॥

೧೧೦
ಕಾಶಿಯಾತ್ರೆಗೆ ಹೋದೆನೆಂಬ ಹೇಸಿಮೂಳರ ಮಾತ ಕೇಳಲಾಗದು!
ಕೇತಾರಕ್ಕೆ ಹೋದೆನೆಂಬ ಹೇಸಿಹೀನರ ನುಡಿಯ ಲಾಲಿಸಲಾಗದು!
ಸೇತುಬಂಧ ರಾಮೇಶ್ವರಕ್ಕೆ ಹೋದೆನೆಂಬ
ಸರ್ವಹೀನರ ಮುಖವ ನೋಡಲಾಗದು!
ಪರ್ವತಕ್ಕೆ ಹೋದೆನೆಂಬ
ಪಂಚಮಹಾಪಾತಕರ ಮುಖವ ನೋಡಲಾಗದು!
ಅದೆಂತೆಂದಡೆ:
ಕಾಯವೇ ಕಾಶಿ, ಒಡಲೇ ಕೇತಾರ,
ಮಾಡಿನೀಡುವ ಹಸ್ತವೇ ಸೇತುಬಂಧರಾಮೇಶ್ವರ,
ಮಹಾಲಿಂಗವ ಹೊತ್ತಿರುವ ಶಿರಸ್ಸೇ ಶ್ರೀಶೈಲಪರ್ವತ ನೋಡಾ.
ಇಂತಿವನರಿಯದೆ ಪರ್ವತಕ್ಕೆ ಹೋಗಿ, ಪಾತಾಳಗಂಗೆಯ ಮುಳುಗಿ,
ತಲೆಯ ಬೋಳಿಸಿಕೊಂಡು, ಗಡ್ಡವ ಕೆರೆಸಿಕೊಂಡು,
ಮೀಸೆಯ ತರಿಸಿಕೊಂಡು,
ಗಂಗೆಯೊಳು ಕೋಣನ ಹಾಂಗೆ ಮೈಗೆಟ್ಟು ಫಕ್ಕನೆ ಮುಳುಗಿ,
ಅಲ್ಲಿಂದ ಬಂದು ಅನ್ನವಸ್ತ್ರವಂ ಕಾಸುವೀಸವಂ ಕೊಟ್ಟು,
ಪಾಪ ಹೋಯಿತ್ತೆಂದು,
ಅಲ್ಲಿಂದ ಬಂದು ಲಿಂಗವಡಿಗಡಿಗೆ ಹಾಯ್ದು,
ಬಾರದ ಪಾಪವ ತಾವಾಗ ಬರಸಿಕೊಂಡು,

ತಗರ ಜನ್ಮದಲ್ಲಿ ಹುಟ್ಟುವರಯ್ಯ.
ಕೋಲು ಪುಟ್ಟಿಯಂ ಕೊಟ್ಟು ಅಟ್ಟಿಸಿ ಬಿಟ್ಟ ಬಳಿಕ,
ಅಲ್ಲಿಂದ ಬಂದವರಿಗೆ ಇಲ್ಲಿದ್ದವರು ಹೋಗಿ,
ಇದಿರುಗೊಂಡು ಕರೆತರುವುದಕ್ಕೆ!
ಕತ್ತೆ ಮೂಳಹೊಲೆಯರಿರ, ನೀವು ಕೇಳಿರೋ,
ಅದೆಂತೆಂದಡೆ:
ಶ್ರೀಮಹಾಪರ್ವತಕ್ಕೆ ಹೋದವರು ತಿರಿಗಿಬಪ್ಪರೆ?
ಶ್ರೀಮಹಾಮೇರುವಿಗೆ ಹೋದವರು ಮರಳಿಬಪ್ಪರೆ?
ಛೀ! ಛೀ! ನೀಚ ಮೂಳ ದಿಂಡೆಯ ನೀಳಹೊಲೆಯರೆಂದಾತ
ನಮ್ಮ ದಿಟ್ಟ ವೀರಾಧಿವೀರನಂಬಿಗರ ಚೌಡಯ್ಯನು. ॥೯೯॥

೧೧೧

ಕಾಷ್ಠದಲ್ಲಿ ನಿಂದಗ್ನಿಮಥನ
ಘಟವಾರಿಯಿಂದ ಅಡಗಿ ಸುಡುವುದು, ಅದರ ಭೇದ.
ಇಂತಿ ಚತುಷ್ಟಯವನರಿದು ಕಂಡಲ್ಲಿ
ಪ್ರಾಣಲಿಂಗಿಯೆಂದನಂಬಿಗಚೌಡಯ್ಯ. ॥೧೦೦॥

೧೧೨

ಕಾಸಿನ ಕಲ್ಲ ಕೈಯಲ್ಲಿ ಕೊಟ್ಟು, ಹೇಸದೆ ಕೊಂದ ಗುರುವೆಂಬ ದ್ರೋಹಿ.
ಬಿಟ್ಟಡೆ ಸಮಯವಿರುದ್ಧ, ಹಿಡಿದಡೆ ಜ್ಞಾನವಿರುದ್ಧ.
ಇದ್ದಂತೆಂಬೆನಯ್ಯ ಅಂಬಿಗರ ಚೌಡಯ್ಯ. ॥೧೦೧॥

೧೧೩

ಕಾಳಗದಲ್ಲಿ ಹೋಗದಿರಯ್ಯ, ಕೋಲು ಬಂದು ನಿಮ್ಮ ತಾಗುಗು.
ಆರು ದರುಶನಕ್ಕೆ ತೋರದಿರಿ, ಸೂರೆಗೊಂಡಹವು ನಿಮ್ಮುವ.
ನಾಲ್ಕು ವೇದ ಹದಿನಾರು ಶಾಸ್ತ್ರವೆಂಬರ ಬೆನ್ನುಹತ್ತದಿರು,
ಬೇರೆ ತೀರ್ಥ ಜಾತ್ರೆಯೆಂಬವರ ಕೊಂ[ಡು] ಆರಡಿತನ ಬೇಡ,
ಪುಣ್ಯಪಾಪವೆಂಬೆರಡು ಭಂಡವ ಬೆನ್ನಿಲಿಕ್ಕಿಕೊಂಡು ಬಾರದಿರು.
ನಿನ್ನಾತ್ಮನ ನೀ ತಿಳಿ,
ಜಗ ನಿನ್ನೊಳಗೆಂದನಂಬಿಗ ಚೌಡಯ್ಯ. ॥೧೦೨॥

೧೧೪

ಕುಡಿವ ನೀರೆನ್ನಬಹುದೆ, ಹುಡುಕುನೀರಲದ್ದುವಾಗ?
ಅಡುವ ಕಿಚ್ಚೆನ್ನಬಹುದೆ, ಮನೆಯ ಸುಡುವಾಗ?

ಒಡಲು ತನ್ನದೆನ್ನಬಹುದೆ, ಪುಣ್ಯ-ಪಾಪವನುಂಬಾಗ?
ಒಡಲಜೀವವೆನ್ನಬಹುದೆ, ಇಕ್ಕಿ ಹೋಹಾಗ?
ಇವನೊಡೆಬಡಿದು ಕಳೆಯೆಂದಾತನಂಬಿಗ ಚೌಡಯ್ಯ. ॥೧೦೩॥

೧೧೪
ಕುರಿಕೋಳಿ ಕಿರುಮೀನ ತಿಂಬವರ ಊರೊಳಗೆ ಇರು ಎಂಬರು.
ಅಮೃತಾನ್ನವ ಕರೆವ ಗೋವ ತಿಂಬವರ ಊರಿಂದ ಹೊರಗಿರು ಎಂಬರು.
ಆ ತನು ಹರಿಗೋಲಾಯಿತ್ತು,
ಬೊಕ್ಕಣ, ಸಿದ್ದಲಿಕೆ, ಬಾರುಕೋಲು, ಪಾದರಕ್ಷೆ,
ದೇವರ ಮುಂದೆ ಬಾರಿಸುವುದಕ್ಕೆ ಮದ್ದಳೆಯಾಯಿತ್ತು.
ಈ ಸಿದ್ಧಲಿಕೆಯೊಳಗಣ ತುಪ್ಪವ ಶುದ್ಧಮಾಡಿ
ತಿಂಬ ಗುಜ್ಜ ಹೊಲೆಯರ ಕಂಡಡೆ
ಉದ್ದನ ಚಮ್ಮಾವಿಗೆಯ ತೆಕ್ಕೊಂಡು ಬಾಯ ಕೊ[ಯ್ಯು]ವೆನು
ಎಂದಾತ ನಮ್ಮ ಅಂಬಿಗರ ಚೌಡಯ್ಯ. ॥೧೦೪॥

೧೧೬
ಕುರುಹೆಂಬೆನೆ ಕಲ್ಲಿನಲ್ಲಿ ಹತ್ತಿದ ಹಾವಸೆ,
ಅರಿವೆಂಬೆನೆ ಕಾಣಬಾರದ ಬಯಲು,
ಒಂದನಹುದು ಒಂದನಲ್ಲಾಯೆಂದು ಬಿಡಬಾರದು.
ಬಿಟ್ಟಡೆ ಸಮಯವಿಲ್ಲ, ಜಿಡ್ಡ ಹಿಡಿದಡೆ ಜ್ಞಾನವಿಲ್ಲ,
ಉಭಯದ ಗುಟ್ಟಿನಲ್ಲಿ ಕೊಳೆವುತ್ತಿದೇನೆ
ಎಂದನಂಬಿಗ ಚೌಡಯ್ಯ . ॥೧೦೫॥

೧೧೭
ಕುಲವಾದ ಛಲವಾದ ವಾಗ್ವಾದಂಗಳಲ್ಲಿ
ಹೋರುವನ್ನಬರ ಅರುಹಿರಿಯರಪ್ಪರೆ?
ಹಸುಳೆಯ ಕನಸಿನಂತೆ, ಹುಸಿಮಾತಿನ ಮಂತ್ರದಂತೆ,
ಎಸಕವಿಲ್ಲದ ಅರಿಕೆಯಂತಿರಬೇಕೆಂದನಂಬಿಗ ಚೌಡಯ್ಯ. ॥೧೦೬॥

೧೧೮
ಕುಲ ಹಲವಾದಡೇನು? ಉತ್ಪತ್ಯ ಸ್ಥಿತಿ ಲಯ ಒಂದೆ ಭೇದ.
ಮಾತಿನ ರಚನೆಯ ಬೇಕಾದಂತೆ ನುಡಿದಡೇನು?
ಬಿಡುಮುಡಿಯಲ್ಲಿ ಎರಡನರಿಯಬೇಕೆಂದನಂಬಿಗಚೌಡಯ್ಯ. ॥೧೦೭॥

೧೧೯
ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ,
ತಿರುಗಿ ಅವನ ಮನೆಯಲ್ಲಿ ಉಣ್ಣಬಾರದೆಂದು
ಅಕ್ಕಿ ಕಣಕವ ಕೊಂಡುಹೋಗುವ ಗುರುವಿನ ಕಂಡರೆ,
ಕೆಡವಿ ಹಾಕಿ ಮೂಗನೆ ಕೊಯ್ದು ಇಟ್ಟಂಗಿಯ ಕಲ್ಲಿಲೆ ತಿಕ್ಕಿ
ಸಾಸಿವೆಯ ಹಿಟ್ಟನೆ ತಳಿದು, ಮೇಲೆ ಲಿಂಬಿಯ ಹುಳಿಯನೆ
ಹಿಂಡಿ ಪಡುವ ಗಾಳಿಗೆ ಹಿಡಿಯೆಂದಾತ ನಮ್ಮ ಅಂಬಿಗರಚೌಡಯ್ಯ. ॥೧೦೮॥

೧೨೦
ಕೂಡಿದ ಧನವೆಲ್ಲವನು ಗುರುಲಿಂಗಜಂಗಮಕ್ಕೆ
ವಂಚನೆಯ ಮಾಡಿ ಒಳಗಿಟ್ಟುಕೊಂಡು, ನೆಲನ ತೋಡಿ ಬಚ್ಚಿಟ್ಟುಕೊಂಡು.
ಹಲವು ತೆರದ ಆಭರಣಂಗಳ ಮಾಡಿಸಿ,
ಕರ ಚರಣ ಉರ ಕರ್ಣಂಗಳೊಳಗಿಟ್ಟುಕೊಂಡು,
ಮತ್ತಿಷ್ಟು ಬದುಕಾಗಲೆಂದು ತನ್ನ ಕೈಯೊಳಗಿನ ಇಷ್ಟಲಿಂಗಕ್ಕೆ
ಅಷ್ಟವಿಧಾರ್ಚನೆಯಂ ಮಾಡುವ ಲಿಂಗಪೂಜಕನ
ಪರಿ ಎಂತೆಂದೊಡೆ;
ಆ ಭಕ್ತನು ಪಂಚಾಭಿಷೇಕದಿಂದ ಲಿಂಗಕ್ಕೆ ಮಜ್ಜನವ ನೀಡಿದಡೆ
ಲಿಂಗದ ಚಿತ್ತದಲ್ಲಿ ಸುಣ್ಣ ನೀರನೆತ್ತಿ ಬಾಧಿಸಿದಂತಾಯಿತ್ತಯ್ಯಾ!
ಆ ಭಕ್ತನು ವಿಭೂತಿಯ ಧರಿಸಿದಡೆ
ಲಿಂಗದ ಚಿತ್ತದಲ್ಲಿ ಬೂದಿಯ ಬೊಕ್ಕಣವ ಕಟ್ಟಿ ಬಾಧಿಸಿದಂತಾಯಿತ್ತಯ್ಯಾ!
ಆ ಭಕ್ತನು ಗಂಧವ ಧರಿಸಿದರೆ
ಲಿಂಗದ ಚಿತ್ತದಲ್ಲಿ ಚಂಡಿಟ್ಟು ಬಾಧಿಸಿದಂತಾಯಿತ್ತಯ್ಯಾ!
ಆ ಭಕ್ತನು ಅಕ್ಷತೆಯನೇರಿಸಿದರೆ
ಲಿಂಗದ ಚಿತ್ತದಲ್ಲಿ ಕಲ್ಲು ಹೊರಿಸಿ ಬಾಧಿಸಿದಂತಾಯಿತ್ತಯ್ಯಾ!
ಆ ಭಕ್ತನು ಪುಷ್ಪವ ಧರಿಸಿದರೆ
ಲಿಂಗದ ಚಿತ್ತದಲ್ಲಿ ಬೆನ್ನ ಮೇಲೆ ಹೇರು ಹೊರಿಸಿದಂತಾಯಿತ್ತಯ್ಯಾ!
ಆ ಭಕ್ತನು ಧೂಪವ ಬೀಸಿದರೆ
ಲಿಂಗದ ಚಿತ್ತದಲ್ಲಿ ಅರವನಿಕ್ಕಿ ಬಾಧಿಸಿದಂತಾಯಿತ್ತಯ್ಯಾ!
ಆ ಭಕ್ತನು ದೀಪಾರತಿಯನೆತ್ತಿದರೆ
ಲಿಂಗದ ಚಿತ್ತದಲ್ಲಿ ಪಂಜುಗಳ್ಳರು ಬಂದು ಮೋರೆಯ ಸುಟ್ಟು
ಬಾ[ಧಿ]ಸಿದಂತಾಯಿತ್ತಯ್ಯಾ !
ಆ ಭಕ್ತನು ಸ್ತೋತ್ರಮಂತ್ರವ ನುಡಿದರೆ
ಲಿಂಗದ ಚಿತ್ತದಲ್ಲಿ ಕರ್ಣದೊಳಗೆ ತೊಣಚಿ ಹೊಕ್ಕು ಗೋಳಿಟ್ಟು

ಬಾಧಿಸಿದಂತಾಯಿತ್ತಯ್ಯಾ !
ಇಂತಪ್ಪ ಲಿಂಗಬಾಧಕರನು ಲಿಂಗಪೂಜಕರೆನಬಹುದೆ ?
ಆತನ ಅಂಗಳವ ಮೆಟ್ಟಬಹುದೆ ?
ಇದರ ಇಂಗಿತವ ನಿಜಭಾವವುಳ್ಳ ಶರಣರು
ನೀವೇ ತಿಳಿದು ನೋಡಿರೆಂದಾತ ನಮ್ಮ ಅಂಬಿಗರ ಚೌಡಯ್ಯ ॥೧೧೯॥

೧೨೧
ಕೂರ್ಮನ ಭಾವ ನಿಂದಲ್ಲಿ, ಮೋಹವಾಗಿಪ್ಪುದು.
ಮರ್ಕಟಭಾವ ನಿಂದಲ್ಲಿ, ಹೆಚ್ಚುಗೆ ತಗ್ಗನರಸುತ್ತಿಪ್ಪುದು.
ವಿಹಂಗಜ್ಞಾನ ನಿಂದಲ್ಲಿ, ಅಡಿ ಆಕಾಶ ಉಭಯವನರಸುತ್ತಿಪ್ಪುದು.
ಪಿಪೀಲಿಕಭಾವ ನಿಂದಲ್ಲಿ, ಮೂರ್ತಿಧ್ಯಾನವಾಗಿಪ್ಪುದು.
ಧ್ಯಾನ ನಿಷ್ಪತ್ತಿಯಾಗಬೇಕೆಂದನಂಬಿಗ ಚೌಡಯ್ಯ. ॥೧೧೦॥

೧೨೨
ಕೇಳಿರಯ್ಯಾ ಮಾನವರೆ,
ಗಂಡ ಹೆಂಡಿರ ಮನಸ್ಸು ಒಂದಾಗಿದ್ದರೆ
ದೇವರ ಮುಂದೆ ನಂದಾದೀವಿಗೆಯ ಮುಡಿಸಿದ ಹಾಗೆ.
ಗಂಡ ಹೆಂಡಿರ ಮನಸ್ಸು ಬೇರಾದರೆ ಗಂಜಳದೊಳಗೆ ಹಂದಿ ಹೊರಳಾಡಿ
ಒಂದರ ಮೇಲೆ ಒಂದು ಬಂದು ಮೂಸಿದ ಹಾಗೆ.
ಛೇ, ಛೇ, ಇದು ಭಕ್ತಿಯಲ್ಲಣ್ಣ.
ಅದೇನು ಕಾರಣವೆಂದೊಡೆ,
ಕಾಶಿಗೆ ಹೋದೆನೆಂಬವರು ಹೇಸಿ ತೊತ್ತಿನ ಮಕ್ಕಳಯ್ಯ.
ಮೈಲಾರಕ್ಕೆ ಹೋದೆನೆಂಬವರು ಮಾದಗಿತ್ತಿಯ ಮಕ್ಕಳಯ್ಯ.
ಪರ್ವತಕ್ಕೆ ಹೋದೆನೆಂಬವರು ಹಾದರಗಿತ್ತಿಯ ಮಕ್ಕಳಯ್ಯ.
ರಾಚೋಟಗೆ ಹೋದೆನೆಂಬವರು ಲಜ್ಜೆಮಾರಿ ತೊತ್ತಿನ ಮಕ್ಕಳಯ್ಯ.
ಛೇ, ಛೇ, ಇದು ಭಕ್ತಿಯಲ್ಲವಯ್ಯ.
ಅದೆಂತೆಂದೊಡೆ;
ಪರಬ್ರಹ್ಮ ಮೂರುತಿಯಾದ ಪರಶಿವನೆ ಗುರುನಾಮದಿಂ ಬಂದು
ಇಷ್ಟಲಿಂಗವ ಧರಿಸಿ, ಪಂಚಾಕ್ಷರಿಯ ಬೋಧಿಸಿದ ಮೇಲೆ
ಆ ಭಕ್ತನ ಕಾಯವೇ ಕೈಲಾಸ.
ಅವನ ಒಡಲೆ ಸೇತುಬಂಧ ರಾಮೇಶ್ವರ.
ಅವನ ಶಿರವೇ ಶ್ರೀಶೈಲ.
ಆತ ಮಾಡುವ ಆಚಾರವೇ ಪಂಚಪರುಷ.

ಇದು ತಿಳಿಯದೆ ಶಾಸ್ತ್ರದಿಂದ ಕೇಳಿ,
ಅರಿಯದೆ ಮಂದಬುದ್ಧಿಯಿಂದ ಪರ್ವತಕ್ಕೆ ಹೋಗಿ
ಪಾತಾಳಗಂಗೆಯಲ್ಲಿ ಮುಳುಮುಳುಗೆದ್ದರೆ,
ಛೀ, ಛೀ, ನಿನ್ನ ದೇಹದ ಮೇಲಣ ಮಣ್ಣು ಹೋಯಿತಲ್ಲದೆ,
ನಿನ್ನ ಪಾಪವು ಹೋಗಲಿಲ್ಲವು.
ಅಲ್ಲಿಂದ ಕಡೆಗೆ ಬಂದು, ಕೆಟ್ಟ ಕತ್ತಿಯ ಕೊಂಡು
ಕೆರವಿನಟ್ಟೆಯ ಮೇಲೆ ಮಸೆದು
ಮಸ್ತಕವ ತೋಯಿಸಿ ತಲೆಯ ಬೋಳಿಸಿಕೊಂಡರೆ,
ನಿನ್ನ ತಲೆಯ ತಿಂಡಿ ಹೋಯಿತಲ್ಲದೆ ನಿನ್ನ ಪಾಪವು ಬಿಡಲಿಲ್ಲವಯ್ಯ!
ಅಲ್ಲಿಂದ ಕೋಲು ಬುಟ್ಟಿಯ ತೆಗೆದುಕೊಂಡು ಬರುವಂತಹ
ದಿಂಡೆತೊತ್ತಿನ ಮಕ್ಕಳ ಕಣ್ಣಲಿ ಕಂಡು,
ಪಡಿಹಾರಿ ಉತ್ತಣ್ಣನ ಎಡದ ಪಾದ ಎಕ್ಕಡದಿಂದೆ
ಪಟಪಟನೆ ಹೊಡೆ ಎಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. ॥೧೧೧॥

೧೨೩

ಕೇಳು ನೀನೆಲೊ ಮಾನವಾ,
ಸೋಮವಾರ ಅಮಾವಾಸ್ಯೆ ಹುಣ್ಣಿಮೆ ಎಂಬ
ದೊಡ್ಡ ಹಬ್ಬಗಳು ಬಂದಿಹವೆಂದು
ಮನೆಯ ಸಾರಿಸಿ, ರಂಗವಾಲೆಯನಿಕ್ಕಿ, ಆಸನವ ಬಲಿದು,
ಪತ್ರೆ ಪುಷ್ಪ ಮೊದಲಾದ ಅನಂತ ಸೌರಂಭವ ಸವರಿಸಿ,
ವಿರಕ್ತನ ಕರೆತಂದು ಪೂಜೆಯ ಮಾಡುವುದಕ್ಕಿಂತಲೂ
ಹೊರೆಯಲ್ಲಿ ಚರಿಸಾಡುವ ಕಾಳ ಶುನಕನ ತಂದು
ಆ ಗದ್ದುಗೆಯಲ್ಲಿ ಪೂಜೆ ಮಾಡುವುದು ಮಹಾ ಲೇಸಯ್ಯಾ.
ಅದೇನು ಕಾರಣವೆಂದರೆ:
ಆಣವಮಲ ಮಾಯಾಮಲ ಕಾರ್ಮಿಕಮಲಕ್ಕೆ ಹೊರತೆಂದು,
ಅಷ್ಟಮದ ವಿರಹಿತನೆಂದು, ಷಡ್ಗುಣವ ಸಂಹರಿಸಿದವನೆಂದು,
ಶಾಸ್ತ್ರದಲ್ಲಿ ಸಂಪನ್ನನೆಂದು,
ಕ್ರಿಯೆಯಲ್ಲಿ ವೀರಶೈವನೆಂದು, ನಿರಾಭಾರಿಯೆಂದು,
ಬಾಯಿಲೆ ಬೊಗಳಿ ಲೌಕಿಕದಲ್ಲಿ ಮಠವ ಮಾಡಿಕೊಂಡು,
ಮಾನ್ಯವ ಸಂಪಾದಿಸಿಕೊಂಡು,
ಅಶನಕ್ಕಾಶ್ರಯನಾಗಿ, ವ್ಯಸನಕ್ಕೆ ಹರಿದಾಡಿ, ವಿಷಯದಲ್ಲಿ ಕೂಡಿ,
ಸರ್ವವು ಎನಗೆ ಬೇಕೆಂದು ತಮೋಗುಣದಿಂದ ದ್ರವ್ಯವ ಕೂಡಿಸಿ

ವಿರತಿಸ್ಥಲವು ಹೆಚ್ಚೆಂದು ಕಾವಿಯ ಹೊದೆದು, ಕೌಪೀನವ ಕಟ್ಟಿ,
ವೇಷ ಡಂಭಕದಿಂದ ತಿರುಗುವ ಭ್ರಷ್ಟರ ಮುಖವ ನೋಡಲಾಗದು.
ಇಂತಪ್ಪ ವಿರತರ ಪೂಜೆಯ ಮಾಡುವುದಕ್ಕಿಂತಲೂ
ಕರೇನಾಯಿಯ ತಂದು ಪೂಜೆಯ ಮಾಡುವುದು
ಮಹಾ ಲೇಸು ಕಂಡಯ್ಯ.
ಪಂಚಾಮೃತವ ಮುಂದಿಟ್ಟರೆ ಕಣ್ಣು ನೋಡುವುದು,
ದ್ರವ್ಯ ಮುಂದಿಟ್ಟರೆ ಕೈಯು ಮುಟ್ಟುವುದು,
ಎಂದು ಪೇಳುವ ವಿರತರ ನಾಲಗೆಯು
ಆ ನಾಯ ಬಾಲಕ್ಕಿಂತಲು ಕರ ಕಷ್ಟವು.
ಇಂತಹ ವಿರತರ ಪೂಜೆಯ ಮಾಡುವಾತನು, ಆ ಜಂಗಮವು
ಉಭಯತರ ಮೂಗು ಸವರಿ ಕತ್ತೆಯನೇರಿಸಿ
ಪಡಿಹಾರಿಕೆಗಳ ಪಾದುಕೆಯಿಂದ ಪಡಪಡ ಹೊಡಿ ಎಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. ॥೧೧೨॥

೧೨೪
ಕೈ ಮುಟ್ಟುವಲ್ಲಿ, ಕಿವಿ ಕೇಳುವಲ್ಲಿ, ಬಾಯಿ ಕೊಂಬಲ್ಲಿ,
ಮೂಗು ವಾಸಿಸುವಲ್ಲಿ, ಕಣ್ಣು ನೋಡುವಲ್ಲಿ–
ಇಂತೀ ಐದರ ಗುಣ ಎಡೆಯಾಟ ಅದಾರಿಂದ ಎಂಬುದ ತಾ ವಿಚಾರಿಸಿದಲ್ಲಿ,
ಪಂಚಕ್ರೀಯಲ್ಲಿ ಸಂಚಿತ ಪ್ರಾರಬ್ಧ ಆಗಾಮಿಯೆಂಬ
ಹಿಂಚುಮುಂಚಿಗೆ ಸಿಕ್ಕದೆ, ಕುಡಿವೆಳಗಿನ ಮಿಂಚಿನ
ಸಂಚದಂತಿರಬೇಕೆಂದನಂಬಿಗ ಚೌಡಯ್ಯ. ॥೧೧೩॥

೧೨೫
ಕ್ರೀ ಜ್ಞಾನವೆಂಬ ಉಭಯವ ತಾವರಿಯದೆ,
ಕಾಯಜೀವವೆಂಬ ಹೆಚ್ಚು ಕುಂದನರಿಯದೆ,
ನಾನೀನೆಂಬ ಭಾವದ ಭ್ರಮೆ ಆರಿಗೆಂದನಂಬಿಗ ಚೌಡಯ್ಯ. ॥೧೧೪॥

೧೨೬
ಕ್ರೀಯನರಿದವಂಗೆ ಗುರುವಿಲ್ಲ, ಆಚಾರವನರಿದವಂಗೆ ಲಿಂಗವಿಲ್ಲ,
ಉತ್ಪತ್ತಿ ಸ್ಥಿತಿ ಲಯವನರಿದವಂಗೆ ಜಂಗಮವಿಲ್ಲ,
ಪರಬ್ರಹ್ಮವನರಿದವಂಗೆ ಸರ್ವೇಂದ್ರಿಯವಿಲ್ಲ,
ತನ್ನನರಿದವಂಗೆ ಹಿಂದೆ ಮುಂದೆ ಎಂಬುದೊಂದೂಯಿಲ್ಲ,
ಎಂದನಂಬಿಗ ಚೌಡಯ್ಯ. ॥೧೧೫॥

೧೨೭
ಕ್ಷೀರದಿಂದಾದ ತುಪ್ಪ ಕ್ಷೀರವಪ್ಪುದೇ? ನೀರಿನಿಂದಾದ ಮುತ್ತು ನೀರಪ್ಪುದೇ?
ವೀರಿ ಪೂರ್ವಕರ್ಮವನು ಹರಿದ ಭಕ್ತಗೆ
ಬೇರೆ ಮತ್ತೆ ಜನ್ಮವುಂಟೆ ಲಿಂಗವಲ್ಲದೆ?
ಕಟ್ಟಿಹೆ ಬಿಟ್ಟಿಹೆವೆಂಬ ದಂದುಗ ನಿಮಗೇಕೆ?
ತೆರನನರಿಯದೆ ಹಲವು ತೊಪ್ಪಲ ತರಿತಂದು ಮೇಲೊಟ್ಟಲೇಕೊ?
ಜಂಗಮ ಬಂದರೆ ತೆರನರಿತು ಅರ್ಪಿಸಬಲ್ಲಡಲ್ಲಿ
ಶಿವ ತೆರಹಿಲ್ಲದಿಪ್ಪನೆಂದಾತನಂಬಿಗರ ಚೌಡಯ್ಯ. ॥೧೧೬॥

೧೨೮
ಗಂಡನೆಂಜಲಿಗೆ ಹೇಸುವಳು
ಮಿಂಡನ ತಂಬುಲವ ತಿಂಬುವ ತೆರನಂತೆ,
ಗುರುವಿನುಪದೇಶವ ಕೊಂಡು,
ಅನೀತಿ ದೇವರುಗಳ ಎಡೆಯ ತಿನ್ನುವಂತಹ ಮಾದಿಗರು
ನೀವು ಕೇಳಿರೊ.
ಅಂಡಜ ಉತ್ಪತ್ತಿ ಎಲ್ಲ ದೇವರಿಂದಾಯಿತ್ತು.
ಮೈಲಾರ, ಬೀರ, ಭೈರವ, ಧೂಳ, ಕೇತನೆಂಬ ಕಿರಿ ದೈವಕ್ಕೆರಗಿ,
ಭಕ್ತರೆನಿಸಿಕೊಂಬುವ ಚಂಡಿನಾಯಿಗಳ ಕಂಡು
ಮನ ಹೇಸಿತ್ತೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. ॥೧೧೭॥

೧೨೯
ಗಂಧವ ವಾಯು ಕೊಂಬಾಗ ಅದ ತಂದು ಕೂಡಿದವರಾರು?
ನಿಂದ ಮರಕ್ಕೆ ಸುಗಂಧ ಹುಟ್ಟುವಾಗ
ಅದ ಬಂಧಿಸಿ ತಂದು ಇರಿಸಿದವರಾರು?
ಅವು ತಮ್ಮ ಅಂಗದ ಸ್ವಭಾವದಂತೆ.
ನಿಂದ ನಿಜವೆ ತಾನಾಗಿ ಅಲ್ಲಿ ಬೇರೊಂದು
ಸಂದೇಹವ ಸಂಧಿಸಲಿಲ್ಲ ಎಂದನಂಬಿಗ ಚೌಡಯ್ಯ. ॥೧೧೮॥

೧೩೦
ಗಾಳಿಯ ಹಡೆದಲ್ಲಿ ತೂರಿಕೊಳ್ಳಯ್ಯಾ,
ಗಾಳಿ ನಿನ್ನಾಧೀನವಲ್ಲಯ್ಯಾ. ನಾಳೆ ತೂರಿಹೆನೆಂದಡೆ. ಇಲ್ಲಯ್ಯಾ.
ಶಿವಶರಣೆಂಬುದೊಂದು ಗಾಳಿಯ ಹಡೆದಲ್ಲಿ,
ಬೇಗ ತೂರೆಂದನಂಬಿಗ ಚೌಡಯ್ಯ. ॥೧೧೯॥

೧೩೧
ಗಿಡುವಿನ ಪುಷ್ಪವ ಕೊಯ್ಯೆನು, ಮಡುವಿನಗ್ಘವಣಿಯ ತುಳುಕೆನು,
ಸ್ಥಾವರಂಗಳ ಪೂಜಿಸೆನು. ಕೇಳು ಕೇಳು ನಮ್ಮಯ್ಯಾ;
ಮನದಲ್ಲಿ ನೆನೆಯೆ, ವಚನಕ್ಕೆ ತಾರೆ, ಹೊಡವಂಟು ಬೇರುಮಾಡುವವನಲ್ಲ.
ಬಸುರೊಳಗಿರ್ದು ಕಾಲನಿಡುವ ಬುದ್ಧಿ
ಕೂಡದೆಂದನಂಬಿಗ ಚೌಡಯ್ಯ. ॥೧೨೦॥

೧೩೨
ಗಿಣಿಯಿಲ್ಲದ ಪಂಜರ ಹಲವು ಮಾತನಾಡಬಲ್ಲುದೆ?
ದೇವರಿಲ್ಲದ ದೇಗುಲಕ್ಕೆ ಮಂತ್ರ, ಅಭಿಷೇಕವುಂಟೆ?
ಅರಿವು ನಷ್ಟವಾಗಿ ಕುರುಹಿನ ಹಾವಚೆಯ
ನಾನರಿಯೆನೆಂದನಂಬಿಗ ಚೌಡಯ್ಯ. ॥೧೨೧॥

೧೩೩
ಗುರುಲಿಂಗಜಂಗಮಕ್ಕೆ ಆಧಾರ ಬಸವಣ್ಣ,
ಪಾದೋದಕ ಪ್ರಸಾದಕ್ಕೆ ಆಧಾರ ಬಸವಣ್ಣ,
ಸರ್ವಾಪತ್ತಿಗಾಧಾರ ಬಸವಣ್ಣ,
[ಸ್ವರ್ಗ] ಮರ್ತ್ಯ ಪಾತಾಳಕ್ಕೆ ಬಸವಣ್ಣನ ಚೈತನ್ಯವಲ್ಲದಿಲ್ಲ.
ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ
ಎನುತಿರ್ದಾತನಂಬಿ[ಗ] ಚೌಡಯ್ಯ. ॥೧೨೨॥

೧೩೪
ಗುರು-ಲಿಂಗ-ಜಂಗಮವೆಂದರಿಯದ ಗೊಡ್ಡುಗಳ
ಶಿಷ್ಯನ ಮಾಡಿಕೊಂಬುವ ಹೆಡ್ಡಜಡಜೀವಿಗಳನೇನೆಂಬೆನಯ್ಯ!
ಆಚಾರ-ಅನಾಚಾರದ ಭೇದವನರಿಯದ ಹೆಡ್ಡ ಮಾನವರಿಗೆ
ಉಪದೇಶವ ಕೊಡುವ ಮತಿಭ್ರಷ್ಟರನೇನೆಂಬೆನಯ್ಯ!
ಅವನ ಅಜ್ಞಾನವನಳಿಯದೆ, ಅವನ ನಡೆನುಡಿಯ ಹಸ ಮಾಡದೆ,
ಅವನ ಆದಿ-ಅಂತ್ಯವ ತಿಳಿಯದೆ,
ಧನಧಾನ್ಯದ್ರವ್ಯದಾಸೆಗೆ ಶಿವದೀಕ್ಷೆಯ ಮಾಡುವನೊಬ್ಬ ಗುರುವ
ಹುಟ್ಟಂಧಕನೆಂಬೆನಯ್ಯ!
ತನ್ನ ಗುರುತ್ವವನರಿಯದ ಗುರುವಿಂದ
ಉಪದೇಶವ ಪಡವನೊಬ್ಬ ಶಿಷ್ಯನ ಕೆಟ್ಟಗಣ್ಣವನೆಂಬೆನಯ್ಯ!
ಇಂತಿವರ ಗುರು-ಶಿಷ್ಯರೆಂದಡೆ ನಮ್ಮ ಪ್ರಮಥರು ಮಚ್ಚರಯ್ಯ!

ನಮ್ಮ ಪ್ರಮಥರು ಮಚ್ಚದಲ್ಲಿ ಇಂತಪ್ಪ ಗುರುಶಿಷ್ಯರಿಬ್ಬರಿಗೆಯೂ
ಯಮದಂಡಣೆ ತಪ್ಪದೆಂದಾತನಂಬಿಗರ ಚೌಡಯ್ಯನು. ॥೧೨೩॥

೧೩೪
ಗುರುವಿನೊಳಡಗಿದ ಭಕ್ತ ಪರವ ಕಂಡುದಿಲ್ಲ,
ಲಿಂಗದೊಳಡಗಿದ ಭಕ್ತ ಜಂಗಮವ ಕಂಡುದಿಲ್ಲ.
ಇವರಿಬ್ಬರ ಭಕ್ತಿಯು ಹುರಿಗೂಡದ ಹಗ್ಗದಂತಾಯಿತ್ತು ನೋಡಯ್ಯ.
ಅರಿವು ಆಚಾರವಿಡಿದು ಆಚರಿಸಿದ ಸದ್ಭಕ್ತನು.
ಗುರು ಲಿಂಗ ಜಂಗಮವ ನೆರೆ ಕಂಡು ಸನ್ಮತನಾಗಿ
ಇ[ಹ] ಪರವೆಂಬುಭಯ ಸಂಕಲ್ಪವರತದಲ್ಲದಿಲ್ಲವೆಂದಾತ
ನಮ್ಮ ಅಂಬಿಗ ಚೌಡಯ್ಯ. ॥೧೨೪॥

೧೩೫
ಗುರುವೆಂಬ ಭಾವ ಬ್ರಹ್ಮಮೂರ್ತಿ,
ಲಿಂಗವೆಂಬ ಭಾವ ವಿಷ್ಣುಮೂರ್ತಿ, ಜಂಗಮವೆಂಬ ಭಾವ ರುದ್ರಮೂರ್ತಿ.
ಅದೆಂತೆಂದಡೆ;
ಅನಾದಿವಸ್ತು ರೂಪಾಗಬೇಕಾದ ಕಾರಣ,
ಅಹಂ ಬ್ರಹ್ಮವೆಂಬ ಆಕಾರವಿಡಿದು ಬ್ರಹ್ಮಮೂರ್ತಿಯಾದ,
ಜ್ಞಾನರುದ್ರ ಪೀಠಸಂಬಂಧಿಯಾದ ಕಾರಣ ವಿಷ್ಣುಮೂರ್ತಿಯಾದ,
ಚಿದ್ಘನರುದ್ರ ಚತುರ್ವಿಧಫಲಂಗಳೊಳಗಾದ ಕಾರಣ
ಸಂಹಾರರುದ್ರನಾದ.
ಸಂಹಾರ ಅಡಗಿ ನಿಂದು, ಉಮಾಪತಿತತ್ವವ ಬಿಟ್ಟು ಸ್ವಯಂಭುಲಿಂಗವಾದ.
ಆ ಸ್ವಯಂಭು ಜಂಗಮವೆಂಬಲ್ಲಿ ನಿಂದು ನಿಜವ ಕಂಡಲ್ಲಿ ಲಿಂಗವಾದ.
ಲೀಯವಾಗಿ ಕಾಣಲ್ಪಟ್ಟುದ ನಿಲಿಸಿ
ಭಾವರಹಿತನಾಗಬೇಕೆಂದನಂಬಿಗ ಚೌಡಯ್ಯ. ॥೧೨೫॥

೧೩೬
ಗುರುವೆಂಬೆನೆ ಹಲಬರ ಮಗ, ಲಿಂಗವೆಂಬೆನೆ ಕಲುಕುಟಿಕನ ಮಗ,
ಪ್ರಸಾದವೆಂಬೆನೆ ಒಕ್ಕಲಿಗನ ಮಗ,
ಪಾದೋದಕವೆಂಬೆನ ದೇವೇಂದ್ರನ ಮಗ.
ಈಸುವ ಹಿಡಿಯಲೂ ಇಲ್ಲ, ಬಿಡಲೂ ಇಲ್ಲ.
ತನ್ನೊಳಗ ನೋಡೆಂದನಂಬಿಗ ಚೌಡಯ್ಯ. ॥೧೨೬॥

೧೩೮
ಘಟದ ಮಧ್ಯದಲ್ಲಿ ನಿಂದವನ, ಆತ್ಮನ ಚಿತ್ತದಲ್ಲಿ ಅರಿದವನ,
ಅಲ್ಲ ಅಹುದೆಂದು ಗೆಲ್ಲ ಸೋಲಕ್ಕೆ ಹೋರದವನ,
ಎಲ್ಲಾ ಜೀವಂಗಳಲ್ಲಿ ದಯವುಳ್ಳವನ,
ಆತನೆಲ್ಲಿಯೂ ಸುಖಿಯೆಂದನಂಬಿಗ ಚೌಡಯ್ಯ. ॥೧೨೭॥

೧೩೯
ಚಿತ್ರವ ಬರೆವ ಲೆಕ್ಕಣಿಕೆಯ ಕಟ್ಟಿಗೆಯಂತೆ
ನೋಡಿದಡೆ ರೋಮ ಹಲವಾಗಿ,
ಕೂಡಿಹ ದಾರಿ ಒಂದೆಯಾಗಿ ತೋರುವೊಲು
ತನ್ನಿಚ್ಛೆಗೆ ಪ್ರಕೃತಿ ಹಲವಾಗಿ
ವಸ್ತುವ ಮುಟ್ಟುವಲ್ಲಿ ಏಕಚಿತ್ತವಾಗಿರಬೇಕೆಂದನಂಬಿಗ ಚೌಡಯ್ಯ. ॥೧೨೮॥

೧೪೦
ಜಂಗಮದ ಪಾದತೀರ್ಥ ಎನ್ನಂಗದೋಷವ ಕಳೆಯಿತ್ತಯ್ಯ,
ಜಂಗಮದ ಪಾದತೀರ್ಥ ಎನ್ನ ಲಿಂಗಕೆ ಪ್ರಾಣಪ್ರತಿಷ್ಠೆಯಾಯಿತ್ತಯ್ಯ,
ಜಂಗಮದ ಪಾದತೀರ್ಥ ಸಂಗನ ಶರಣರಿಗೆ
ಮುಕ್ತಿಯ ಪಥವ ತೋರಿತ್ತಯ್ಯ.
ಇಂತಪ್ಪ ಜಂಗಮದ ಪಾದತೀರ್ಥಕ್ಕೆ
ಎಂತಪ್ಪ ಹಿರಿಯರಾದರು ತಮ್ಮ ಗರುವಿಕೆಯ ಬಿಟ್ಟು,
ದೀರ್ಘದಂಡಪ್ರಣಾಮಂಗೆಯ್ದು ನಮಸ್ಕರಿಸಿ, ಸಾಕ್ಷಿ–
"ಉತ್ತಮಂ ದೀರ್ಘದಂಡಂ ಚ ಮಧ್ಯಮಂ ಶಿರೋ ವಂದನಂ
ಕನಿಷ್ಠಂ ಕರ [ಮೇಲನಂ] ವಾಗ್ವಂದನಂ ಮಹಾ[ಧಮಂ]" ಎಂದುದಾಗಿ
ಜಂಘೆಯಿಕ್ಕಿ ನಡೆದುಬಂದು ಕೊಂಡಡೆ
ಕಂಗಳ ಮೂರುಳ್ಳ ದೇವನೆಂಬೆ, ಹಿರಿಯ ಮಹೇಶ್ವರನೆಂಬೆ.
ಹಾಂಗಲ್ಲದೆ ಕಂಗಳು ಹೋದ ಅಂಧಕನಂತೆ,
ಕಾಲಿಲ್ಲದ ಪಂಗುಳನಂತೆ, ತಾನಿದ್ದಲ್ಲಿಯೇ ಇದ್ದು
ಅಯ್ಯಾ ಶರಣಾರ್ಥಿಯೆಂದು ಇದ್ದೆಡೆಗೆ [ಕರೆ]ಸಿಕೊಂಡು,
ಅಂಗಯ್ಯಾಂತು ಕೊಂಬ ಚೆಂಗಿಮೂಳ ಹೊಲೆಯರ ಕಂಡಡೆ
ನೆತ್ತಿಯ ಮೇಲೆ ಚೊಂಗ ಚೊಂಗನೆ ಹೊಡಿ,
ಒದ್ದೊದ್ದು ತುಳಿಯೆಂದು [ಹೇಳಿ]ದಾತನಂಬಿಗ ಚೌಡಯ್ಯ. ॥೧೨೯॥

೧೪೧
ಜಂಗಮವ ಕರೆತಂದು ಮನೆಯಲ್ಲಿ ಕುಳ್ಳಿರಿಸಿ,
ಅಂಗದ ಮೇಲಣ ಜಪವನೆಣಿಸುವ

ಭಕ್ತನ ಜಪದ ಬಾಯಲ್ಲಿ ಕೆರಹನಿಕ್ಕಲಿ!
ಅವನ ಲಿಂಗಾರ್ಚನೆಯ ಬಾಯಲ್ಲಿ ಹುಡಿಯ ಹೊಯ್ಯಲಿ!
ಜಂಗಮದ ತೃಪ್ತಿಯನರಿಯದೆ ಲಿಂಗವಂತನೆಂತಾದನೊ? ಮರುಳೆ!
ಅವ ಪಿಸುಣ, ಹೊಲೆಯನೆಂದಾತನಂಬಿಗರ ಚೌಡಯ್ಯ. ॥೧೩೦॥

೧೪೨

ಜಂಗಮವೆಂದಡೆ ನಡೆನುಡಿ ಸಿದ್ಧಿಯಾಗಿರಬೇಕು.
ಮೂರು ಮಲಕ್ಕೆ ಸಿಕ್ಕದೆ, ಆರರಡಿಗೆ ಅ[ಡಿ]ಮೆಯಾಗದೆ,
ಆ ಗುಣ ತೋರುವುದಕ್ಕೆ ಮೊದಲೆ
ಮೀರಿ ಇರಬೇಕೆಂದನಂಬಿಗ ಚೌಡಯ್ಯ. ॥೧೩೧॥

೧೪೩

ಜನನ ಸೂತಕ ಮರಣ ಸೂತಕಂಗಳ ಕಳೆದು
ಶುದ್ಧವಾದೆನೆಂಬ ಅಜ್ಞಾನಿ ಜಡಜೀವಿಗಳು ನೀವು ಕೇಳಿರೋ!
ಪೃಥ್ವಿ ಶುದ್ಧವೆಂಬಿರಿ,
ಇಪ್ಪತ್ತೊಂದು ಲಕ್ಷ ಜೀವರಾಶಿಗಳು
ಅಲ್ಲಿಯೇ ಹುಟ್ಟಿ, ಅಲ್ಲಿಯೇ ಹೊಂದಿದವಾಗಿ ಪೃಥ್ವಿ ಶುದ್ಧವಲ್ಲ.
ಅಪ್ಪು ಶುದ್ಧವೆಂಬಿರಿ,
ಇಪ್ಪತ್ತೊಂದು ಲಕ್ಷ ಜೀವರಾಶಿಗಳು
ಅಲ್ಲಿಯೇ ಹುಟ್ಟಿ, ಅಲ್ಲಿಯೇ ಹೊಂದಿದವಾಗಿ ಅಪ್ಪು ಶುದ್ಧವಲ್ಲ.
ಅಗ್ನಿ ಶುದ್ಧವೆಂಬಿರಿ,
ಇಪ್ಪತ್ತೊಂದು ಲಕ್ಷ ಜೀವರಾಶಿಗಳು
ಅಲ್ಲಿಯೇ ಹುಟ್ಟಿ, ಅಲ್ಲಿಯೇ ಹೊಂದಿದವಾಗಿ ಅಗ್ನಿ ಶುದ್ಧವಲ್ಲ.
ವಾಯು ಶುದ್ಧವೆಂಬರಿ,
ಇಪ್ಪತ್ತೊಂದು ಲಕ್ಷ ಜೀವರಾಶಿಗಳು
ಅಲ್ಲಿಯೇ ಹುಟ್ಟಿ, ಅಲ್ಲಿಯೇ ಹೊಂದಿದವಾಗಿ ವಾಯು ಶುದ್ಧವಲ್ಲ.
ಆಕಾಶ ಶುದ್ಧವೆಂಬಿರಿ,
ಈ ಚತುರ್ವಿಧ ತತ್ವಂಗಳ ಒಳಗಿಟ್ಟುಕೊಂಡು
ಈ ಪ್ರಕಾರವಾದ ಕಾರಣ ಆಕಾಶ ಶುದ್ಧವಲ್ಲ.
ಇವು ಶುದ್ಧವಹ ಪರಿ ಎಂತೆಂದೊಡೆ:
ಈ ಪಂಚತತ್ವಂಗಳು ಹುಟ್ಟಿದವು
ನಮ್ಮ ಸದಾಶಿವನ ಸಿರಿಯಪ್ಪುದೊಂದು ಇಷ್ಟಲಿಂಗದಲ್ಲಿ.
ಆ ಲಿಂಗಕ್ಕೆ ಅಷ್ಟವಿಧಾರ್ಚನೆಯ ಮಾಡಿ ಸರ್ವ ರುಚಿಪದಾರ್ಥವನು ತಂದು

ಆ ಲಿಂಗಕ್ಕೆ ಕೊಟ್ಟಲ್ಲಿ,
ಲಿಂಗಪ್ರಸಾದವದು ಅಂಗಕ್ಕೆ ಲೇಸಾಗಲೆಂದು,
ಕೊಂಬಾತನ ಸರ್ವಾಂಗವೆಲ್ಲ ಶುದ್ಧವಯ್ಯಾ.
ಆತನಿಪ್ಪ ಗೃಹವೇ ಪುಣ್ಯಕ್ಷೇತ್ರವು, ಅಂತಹವರ ಪಾದಕ್ಕೆ ಶರಣಾರ್ಥಿ.
ಈ ವಿವರವನರಿಯದೆ
ತನ್ನ ಕರದ ಲಿಂಗಕ್ಕೆ ಅಷ್ಟವಿಧಾರ್ಚನೆಯ ಮಾಡದೆ,
ಭೋಜನ ಪದಾರ್ಥ ನೀರು ರೊಟ್ಟಿ ಮುಟ್ಟಿಗೆ ಗುಗ್ಗರಿ
ಸೀತೆನಿ ಬೆಳಸಿ ಕಾಯಿ ಕಸಿಕು ಹಣ್ಣು ಹಂಪಲ
ಹಾಲು ಮೊಸರು ಮಜ್ಜಿಗೆ ತುಪ್ಪ ಸಕ್ಕರೆ ಹೋಳು ವೀಳೆಯ
–ಇವನೆಲ್ಲವನು ತನ್ನ ಲಿಂಗಕ್ಕೆ ಕೊಡದೆ,
ಅಂಗಕ್ಕೆ ಲೇಸಾಗಲೆಂದು ತಿಂಬುವನು
ಅವನೀಗ ತಾನೇ ಶುದ್ಧ ಹೊಲೆಯನೆಂದಾತ
ನಮ್ಮ ಅಂಬಿಗರ ಚೌಡಯ್ಯ. ॥೧೩೨॥

೧೪೪
ಜಾತಿಭ್ರಮೆ, ನೀತಿಭ್ರಮೆ ಎಂಬ ಕರ್ಮಂಗಳನು
ಘಾತಿಸಿ ಕಳೆಯಬಲ್ಲಡಾತ ಯೋಗಿ.
ಕ್ಷೇತ್ರಭ್ರಮೆ, ತೀರ್ಥಭ್ರಮೆ, ಪಾಷಾಣಭ್ರಮೆ ಎಂಬ ಕರ್ಮಂಗಳನು
ನಿಃಕರಿಸಿ ಕಳೆಯಬಲ್ಲಡಾತ ಯೋಗಿ.
ಲೋಕಕ್ಕಂಜಿ ಲೌಕಿಕವ ಮರೆಗೊಂಡು ನಡೆವಾತ ತೂತಯೋಗಿ
ಎಂದಾತನಂಬಿಗಚೌಡಯ್ಯ. ॥೧೩೩॥

೧೪೫
ಜಾತಿವಿಚಾರ, ನೀತಿವಿಚಾರ,
ಸಮಯವಿಚಾರವೆಂಬ ತ್ರಿವಿಧವ ಹಿಡಿದು, ಬಿಡದೆ
ಉತ್ತಮ ಮಧ್ಯಮ ಕನಿಷ್ಠವೆಂಬವ ಕಾಲಿಗೆ ಮಾಯವ ಕಟ್ಟಿ ಸಿಕ್ಕಿಸಿ,
ಸರ್ವಸೂತಕದೊಳಗಿರ್ದಜಾತನಾದೆ.
ಕ....ಗವನೆಂದಡಾತ ಸಾಧ್ಯವಾದಾತನೆ?
ಸಿಕ್ಕನೆಂದ ಅಂಬಿಗ ಚೌಡಯ್ಯ . ॥೧೩೪॥

೧೪೬
ಜೇಡಂಗೆ ಬೇಡಂಗೆ ಡೋಹಾರಂಗೆ ಹೊಲೆಯಂಗೆ
ರೂಢಿಗೀಶ್ವರನೊಲಿದ ಪರಿಯ ನೋಡಾ ಅಯ್ಯಾ!

ಲೋಕದ ಮನುಜರು ಮಾಡುವರು, ಸಮಯಂಗಳನು.
ಮಾಡಲಿಕ್ಕೆ ಅವರು ಸ್ವತಂತ್ರರು.
[ಅ]ವರು ಹೋದ ಠಾವಿನಲ್ಲಿ ಕಲ್ಲು ಮುಳ್ಳು ಮೂಡವು.
ಅವರ ಕೂಡ ಕೂರದಾತನಂಬಿಗ ಚೌಡಯ್ಯ. ॥೧೩೫॥

೧೪೭

ಜ್ಞಾನಾಜ್ಞಾನವೆಂಬ ಉಭಯವ ನಾನರಿಯದೆ,
ಕಾಯ ಜೀವವೆಂಬ ಹೆಚ್ಚು ಕುಂದರಿಯದೆ,
ನಾನು ನೀನು ಎಂದೆಂಬ ಭ್ರಮೆ ಇನ್ನಾರಿಗೆ?
ಹೇಳೆಂದಾತ ನಮ್ಮಂಬಿಗ ಚೌಡಯ್ಯ. ॥೧೩೬॥

೧೪೮

ಜ್ಞಾನಿಯಾದಲ್ಲಿ ಧ್ಯಾನ ಮೋನಂಗಳಲ್ಲಿರಲೇತಕ್ಕೆ?
ಅರಿವು ಕರಿಗೊಂಡಲ್ಲಿ ಸುರುಳಿ ಸುರುಳಿ ಬಿಡಲೇತಕ್ಕೆ?
"ತಲೆಯೊಡೆಯಂಗೆ ಕಣ್ಣು ಹೊರತೆ" ಎಂಬ ತುಡುಗುಣಿತನವೆ?
ಆ ಗುಣ ಬಿಡುಮುಡಿಯಲ್ಲ ಎಂದನಂಬಿಗ ಚೌಡಯ್ಯ. ॥೧೩೭॥

೧೪೯

ಜ್ಯೋತಿ ನಾಲ್ಕರೊಳಗೆ ಆತ್ಮನೈದಾನೆ. ಆತ್ಮನೊಳಗೆ ಸಾಕಾರನೈದಾನೆ.
ಸಾಕಾರನೊಳಗೆ ಸೂಕ್ಷ್ಮನೈದಾನೆ.
ಈಸುವನರಿದಾತಂಗೆ ಆ ಕಾಯ ಕೆಡದೆಂದನಂಬಿಗ ಚೌಡಯ್ಯ. ॥೧೩೮॥

೧೫೦

ತಟಾಕ ಒಡೆದಡೆ ಕಟ್ಟುವಡೆವುದಲ್ಲದೆ,
ಅಂಬುಧಿ ತುಂಬಿ ಮೇರೆದಪ್ಪಿದಲ್ಲಿ ಕಟ್ಟಂಗೆ ಹಿಂಗಿ ನಿಂದುದುಂಟೆ?
ಅರಿಯದವಂಗೆ ಅರಿಕೆಯ ಹೇಳಿದಡೆ ಅರಿವನಲ್ಲದೆ,
ಅರಿದು ಮರೆದವಂಗೆ ಬೇರೊಂದೆಡೆಯ ಹೇಳಿಹೆನೆಂದಡೆ,
ಕಡೆ ನಡು ಮೊದಲಿಲ್ಲ ಎಂದನಂಬಿಗ ಚೌಡಯ್ಯ. ॥೧೩೯॥

೧೫೧

ತಟ್ಟು ಗೋಣಿಸೊಪ್ಪು ಸಕಲಾತಿ ಅಲ್ಲ[ವಯ್ಯಾ],
ತೊತ್ತಿನ ಮಗ ಭಕ್ತನಲ್ಲವಯ್ಯಾ,
ಹಿರಿಯ ದೇವತೆಗೆ ಬಿಟ್ಟ ಕೋಣ ಗೂಳಿಯಲ್ಲವಯ್ಯಾ.

ಕಂಡ ತೊತ್ತಿಗೆ ಹುಟ್ಟಿದವ ಜಂಗಮವಲ್ಲವಯ್ಯಾ.
ಹಣತಿ ನೆಕ್ಕುವ ಮಠಪತಿ ಪಂಚಮಠಕ್ಕೆ ಸಲ್ಲ.
ಈ ಮೂ[ಳ]ರಿಗೆ ಆದಿಯಲ್ಲಿ ಗುರು ಉಪದೇಶ[ವ] ತುಂಬಿಲ್ಲ.
ಈ ಮೂ[ಳ]ರ ಮೂಗು ಕೊಯ್ದು ಉಪ್ಪು ಸಾರು ತುಂಬಿ,
ನೆತ್ತಿಯ ಬೋಳಿಸಿ ಕತ್ತೆಯನೇರಿಸಿ,
ಮೇಲೆ ನಿಂಬೆಯ ಹುಳಿಯ ಬಿಟ್ಟು,
ಪಡುವ ದಾರಿಗೆ ಹೊಡೆಯೆಂದಾತ ನಮ್ಮ ಅಂಬಿಗರ ಚೌಡಯ್ಯ ॥೧೪೦॥

೧೫೨
ತಡಿ ನೆಲೆ ಇಲ್ಲದ ಮಹಾನದಿಯಲ್ಲಿ ಒಡಲಿಲ್ಲದಂಬಿಗ ಬಂದೈದಾನೆ.
ಹಿಡಿವ ಬಿಡುವ ಮನವ ಬೆಲೆಗೊಟ್ಟಡೆ
ಗಡಣವಿಲ್ಲದೆ ಹಾಯಿಸುವ ಹೊಳೆಯ, ನುಡಿಯಿಲ್ಲದ ನಿಸ್ಸೀಮ
ಗ್ರಾಮದಲಿರಿಸು[ವ]ನೆಂದಾತನಂಬಿಗ ಚೌಡಯ್ಯ. ॥೧೪೧॥

೧೫೩
ತನ್ನ ತನ್ನಿಚ್ಛೆಗೆ ಬಹಲ್ಲಿ ಪಿನಾಕಿ ಬೋಸರಗಿತ್ತಿಯ ಹಾಸೆ?
ಮನವ ಕಟ್ಟಿ, ಐದನೆಯ ಭೂತವ ಸುಟ್ಟಡೆ.
ಎನ್ನ ದೇವನುಂಟಿಲ್ಲೆನ್ನಬೇಡ.
ಮನಗಾಯಲಾರದೆ ತನುಗಾಯಹೋದಡೆ,
ಎನ್ನ ದೇವ ಸೆರೆಯಲ್ಲೆಂದಾತನಂಬಿಗ ಚೌಡಯ್ಯ. ॥೧೪೨॥

೧೫೪
ತನ್ನ ಬುದ್ಧಿ ತನ್ನ ಚಿತ್ತದಲ್ಲಿ ಅಡಗಿದ ಮತ್ತೆ
ನಾಡೆಲ್ಲರ ಕೂಡಿ ಓದಿ ಹಾಡಿ ಹೇಳಲೇತಕ್ಕೆ?
ತನ್ನ ತಾನರಿದಲ್ಲಿ ಕಾಬ ಇದಿರು
ತನಗೆ ಅನ್ಯಭಿನ್ನವಿಲ್ಲ ಎಂದನಂಬಿಗ ಚೌಡಯ್ಯ. ॥೧೪೩॥

೧೫೫
ತನ್ನುವ ಮರೆದು ದೇವರ ಕಂಡೇನೆಂಬ ಕಾರಣ,
ಹರಿ ಸುರ ಬ್ರಹ್ಮಾದಿಗಳೆಲ್ಲರು ತಲೆ ಕೆಳಗಾಗಿ ಹೋದರು!
ಆ ದೇವರ ಮರೆದು ತನ್ನುವನರಿದುದುಂಟಾದರೆ,
ತಾನೆ ದಿಟವೆಂದನಂಬಿಗ ಚೌಡಯ್ಯ. ॥೧೪೪॥

೧೫೬

ತನ್ನುವ ಹುಸಿ ಮಾಡಿ, ಇನ್ನೊಂದು ದಿಟಮಾಡುವ ಅಣ್ಣಂಗೆ
ನಂಬುಗೆ ಇನ್ನಾವುದಯ್ಯಾ?
ತನ್ನೊಳಗಿರ್ದ ಘನವ ತಾ ತಿಳಿಯಲರಿಯದೆ,
ಪರಬ್ರಹ್ಮಕ್ಕೆ ತಲೆಯಿಕ್ಕಿ ತೆಗೆದೆನೆಂಬ ಅಣ್ಣ ಗಾವಿಲನೆಂದನಂಬಿಗ ಚೌಡಯ್ಯ. ॥೧೪೫॥

೧೫೭

ತರು, ನೀರು, ಕಲ್ಲಿನ ಘಟದ ಮಧ್ಯದಲ್ಲಿ ತೋರುವ ಅಗ್ನಿ
ಕೆಡದೆ ಉರಿಯದೆ ಅಡಗಿಪ್ಪ ಭೇದವನರಿತಡೆ
ಪ್ರಸಾದಲಿಂಗಿಯೆಂದನಂಬಿಗ ಚೌಡಯ್ಯ. ॥೧೪೬॥

೧೫೮

ತಾನು ಮಾಡುವ ಭಕ್ತಿ, ಲಿಂಗದ ಉಪದೇಶವನರಿಯದ ಕಾರಣ
ಕಂಡ ಕಂಡ ದೈವಕ್ಕೆ ಹೋಗಿ,
ಮಂಡೆ ಮುಂದಲೆಯ ಕೊಟ್ಟನಾದಡೆ ಆತ ಭಕ್ತನಲ್ಲ,
ಆತನ ಸಂಗಡ ಹೋಗಿ ಉಪದೇಶವ ಮಾಡಿದಾತನು ಗುರುವಲ್ಲ,
ಅಂಥವರ ಮನೆಯಲ್ಲಿ ಹೊಕ್ಕು ಉಂಬಾತ ಜಂಗಮವಲ್ಲ.
ಈ ಭಕ್ತ ಜಂಗಮದ ಭೇದವೆಂತೆಂ[ದ]ಡೆ:
ಒಡಲ ಕಿಚ್ಚಿಗೆ ಹೋಗಿ ತುಡುಗುಣಿನಾಯಿ ಹೊಕ್ಕು,
ತನ್ನ ಒಡಲ ಹೊರೆದಂತಾಯಿತಯ್ಯ [ಎಂದು]
ಪೊಡವಿಯೊಳಗೆ ಡಂಗುರವನಿಕ್ಕಿ ಸಾರಿದಾತ
ನಮ್ಮ ಅಂಬಿಗ ಚೌಡಯ್ಯ. ॥೧೪೭॥

೧೫೯

ತಿಂಬ ಜಾತಿಗೆ ಮೇವ ಹಾಕಿ,
ಹೇರಳ ಖಂಡವ ಕೊಯಿದು ತಿಂಬವನಂತೆ,
ದಾತನಿಗೆ ಛಂದದ ಮಾತನಾಡಿ
ಮೂರು ಮಲದಂದವ ಸಂಧಿಸಿಕೊಂಬವಂಗೆ,
ಲಿಂಗವಿಲ್ಲ ಎಂದನಂಬಿಗ ಚೌಡಯ್ಯ. ॥೧೪೮॥

೧೬೦
ತಿರುಳು ಒಡೆದ ಬಿತ್ತು ಮರಳಿ ಪಯಿರಪ್ಪುದೆ?
ತ್ರಿವಿಧಕ್ಕೆ ಮನವೊಡ್ಡದೆ ತೆರಳಿ ತೀರ್ಚಿದವಂಗೆ
ಮರಳಿ ಮುಟ್ಟಿದಡೆ, ಆಚಾರಕ್ಕೆ ಹುರುಳಿಲ್ಲ ಎಂದನಂಬಿಗ ಚೌಡಯ್ಯ. ॥೧೪೯॥

೧೬೧
ತುತ್ತಿನಾಸೆಗೆ ಲಿಂಗವ ಕೊಟ್ಟುಹೋಹ ವ್ಯರ್ಥ ಮೂಳ
ನಿಮಗೆ ಗುರುವಾದನ್ಯೆಸೆ?
ಸತ್ಯಸದಾಚಾರವ ಬಲ್ಲಡೆ ತತ್ವಜ್ಞಾನವ ಬೋಧಿಸಿ,
ಆ ಮಹಾಲಿಂಗಕ್ಕೂ ನಿಮಗೂ ಸಂಬಂಧವ ಮಾಡದಿಹ
ಕತ್ತೆ ಗುರುವಿನ ಪಾದವ ಹಿಡಿದು ಕೆಟ್ಟಿರಲ್ಲಾ!
ಹತ್ತಿಲಿದ್ದ ಲಿಂಗವ ಕಿರಿದು ಮಾಡಿ,
ಕ್ಷೇತ್ರದ ಲಿಂಗವ ಹಿರಿದು ಮಾಡಿ;
[ಕಂಕುಳ ಹತ್ತಿದ] ಲಿಂಗವ ಕಿರಿದು ಮಾಡಿ,
ಕೊಂಕಣ ಹತ್ತಿ ಲಿಂಗವ ಹಿರಿದು ಮಾಡಿ;
ಎಂತುಟೋ ನಿನ್ನ ಲಿಂಗವ ಕೊಡಲಾರದಿದ್ದಡೆ!
ಹರುಗೋಲು ಹೊರಲಾರ, ಭೋಂಕನೆ
ಮುಳುಗುವನೆಂದಾತ ನಮ್ಮ ಅಂಬಿಗರ ಚೌಡಯ್ಯ. ॥೧೫೦॥

೧೬೨
ತೋಯವಿಲ್ಲದ ಕುಂಭ, ಜ್ಞಾನವಿಲ್ಲದ ಘಟ, ದೇವರಿಲ್ಲದ ಗುಡಿ
ಇವು ಹಾಳು ದೇಗುಲ ಸಮವು.
ಎಲೆ ಪರವಾದಿಗಳಿರಾ:
ಗುರುವು ಎಂಬ ನಾಮವು ಪರಶಿವನು, ಪರಶಿವನೆ ಇಷ್ಟಲಿಂಗವು.
ಆ ಇಷ್ಟಲಿಂಗದ ಪೂಜೆಯಲ್ಲಿ ಲೋಲುಪ್ತನಾಗಿರಬೇಕು,
ಆ ಗುರುಮಂತ್ರದಲ್ಲಿ ಮಗ್ನನಾಗಿರಬೇಕು,
ಚರಭಕ್ತಿಯಲ್ಲಿ ಯುಕ್ತನಾಗಿರಬೇಕು.
ಈ ತ್ರಿವಿಧವ ಬಿಟ್ಟು, ಮಲತ್ರಯಕ್ಕೆ ಒಳಗಾಗಿ
ಬಂಧನಕ್ಕೆ ಹೋಗುವರ ನೋಡಿ ಮನ ನಾಚಿತ್ತೆಂದ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. ॥೧೫೧॥

೧೬೩
ದೃಷ್ಟವ ಕಂಡುದಕ್ಕೆ ಮತ್ತೆ ಮೂದಲೆ ಉಂಟೆ?
ವ್ರತಗೆಟ್ಟವಂಗೆ ಆಚಾರಭ್ರಷ್ಟಂಗೆ ಪರಸತಿ ಪರಧನ ದುರ್ಭಿಕ್ಷಂಗೆ

ಪರ ಅಪರವನರಿಯದ ಪಾತಕಂಗೆ
ಅಘೋರ ನರಕಕ್ಕೆಡೆಯಿಲ್ಲ ಎಂದನಂಬಿಗ ಚೌಡಯ್ಯ. ॥೧೫೨॥

೧೬೪
ದೇಹಾರವ ಮಾಡುವಣ್ಣಗಳಿರಾ, ಒಂದು ತುತ್ತು ಆಹಾರವನಿಕ್ಕಿರೆ.
ದೇಹಾರಕ್ಕೆ ಆಹಾರವೆ ನಿಚ್ಚಣಿಕೆ.
ದೇಹಾರವ ಮಾಡುತ್ತ ಆಹಾರವನಿಕ್ಕದಿರ್ದಡೆ,
ಆ ಹರನಿಲ್ಲೆಂದನಂಬಿಗ ಚೌಡಯ್ಯ. ॥೧೫೩॥

೧೬೫
ದೊಡ್ಡ ದೊಡ್ಡ ಶೆಟ್ಟಿಗಳ ಕಂಡು ಅಡ್ಡಗಟ್ಟಿ ಹೋಗಿ, ಶರಣಾರ್ಥಿ ಎಂಬರು.
ಎಡ್ಡುಗಳ್ಳತನಕ್ಕೆ ತಮ್ಮ ಮಠಕ್ಕೆ ಬನ್ನಿ ಹಿರಿಯರೇ ಎಂಬರು.
ಹೋಗಿ ಶರಣಾರ್ಥಿ ಭಕ್ತನೆಂದೊಡೆ ಕೇಳದ ಹಾಗೆ
ಅಡ್ಡ ಮೋರೆಯನಿಕ್ಕಿಕೊಂಡು ಸುಮ್ಮನೆ ಹೋಗುವ
ಹೆಡ್ಡ ಮೂಳರಿಗೆ ದುಡ್ಡೇ ಪ್ರಾಣವಾಯಿತ್ತು.
ದುಡ್ಡಿಸ್ತರ ಕುರುಹನರಿಯದೆ ಮೊಳಪಾದದ ಮೇಲೆ
ಹೊಡಹೊಡಕೊಂಡು ನಗುತಿರ್ದಾತ ನಮ್ಮ ಅಂಬಿಗರ ಚೌಡಯ್ಯ. ॥೧೫೪॥

೧೬೬
[ನಂಬಿಯಣ್ಣ] ಮಾಡುವ ಭಕ್ತಿ ನಾಡೆಲ್ಲ ಮಾಡಬಹುದಯ್ಯಾ,
ಕುಂಬಾರ ಗುಂಡಯ್ಯ ಮಾಡುವ ಭಕ್ತಿ ಊರೆಲ್ಲ ಮಾಡಬಹುದಯ್ಯಾ,
ಬಸವಣ್ಣ ಮಾಡುವ ಭಕ್ತಿ ಶಿಶುವೆಲ್ಲ ಮಾಡಬಹುದಯ್ಯಾ,
ಇದೇನು ದೊಡ್ಡಿತ್ತೆಂಬರು.
ಸರ್ವರಿಗೆ ವಶವಾಗದ ಭಕ್ತಿ ಅವರ ಮನ-ಜ್ಞಾನದಂತೆ ಇರಲಿ ಶರಣಾರ್ಥಿ.
ಈ ವಸುಧೆಯೊಳಗೆ ಶುದ್ಧಭಕ್ತಿಯನರಿತು
ನಡೆದುದು ಬಟ್ಟೆಯಾಗದೆ? ನುಡಿದುದು ಸಿದ್ಧಿಯಾಗದೆ?
ದೇಹಕ್ಕೆ ಕಷ್ಟ-ನಷ್ಟ, ರೋಗ-ರುಜೆಗಳು ಬಂದು ಅಟ್ಟಿ ಮುಟ್ಟಿದವಾಗಿ,
ದೃಢವಾಗಿದ್ದು ಶರಣನ ಮನವು ನಿಶ್ಚಯಿಸಿ,
ದೃಢಶೀಲಂಗಳಂ ಬಿಡದೆ ನಡೆವಾತ ದೊಡ್ಡ ಭಕ್ತನೆಂದಾತ
ನಮ್ಮ ಅಂಬಿಗರ ಚೌಡಯ್ಯ. ॥೧೫೫॥

೧೬೭
ನಮಗೊಬ್ಬರೆಂಜಲು ಸೇರದೆಂದು, ಶುಚಿತನದಲ್ಲಿ ಬದುಕುತ್ತೈ[ದೇ]ನೆ
ಎಂಬ ಬರಿಯ ಮಾತಿನ ರಂಜಕರು
ನೀವು ಕೇಳಿರೋ ಅಣ್ಣಗಳಿರಾ:
ನೀವು ತಂದು ಕುಡಿವ ನೀರು ಜಲಚರದೆಂಜಲು,
ಮೃಗಪಶುಪಕ್ಷಿಯ ಎಂಜಲು.
ಭಾವಿಗೆ ಹೋಗಿ ಕೈಕಾಲು ತೊಳೆದು
ಬಾಯಿ ಮುಕ್ಕಳಿಸುವಲ್ಲಿ ಮಾನವರೆಂಜಲು.
ಇಂತೀ ಹಲವೆಂಜಲ ಬೆರಸಿದ
ಆ ಎಂಜಲ ತಿಂದು ಬೆಳೆದು, ಬೆ[ಳೆ]ಸಿದ
ಆ ಎಂಜಲಿಂದ ಬೆಳೆವ ಪದಾರ್ಥಂಗಳು,
ಆ ಎಂಜಲಿಂದಾದ ಪಾಕವನು,
ನಲಿನಲಿದುಂಡು ಕುಡಿವಲ್ಲಿ ಎಂಜಲು ಹಿಂಗಿದ ಠಾವ ತೋರಿರಣ್ಣಾ!
ಇದ ಬಲ್ಲ ಭಕ್ತರು ಸರ್ವಪದಾರ್ಥಂಗಳನು
ಶಿವಮಂತ್ರದಲೆ ಹಸ್ತಸ್ಪರ್ಶನವ ಮಾಡಿ, ವಿಭೂತಿಯಿಂದ ಶುದ್ಧಮಾಡಿ,
ಲಿಂಗಕ್ಕೆ ಕೊಟ್ಟು ಕೊಂಬಲ್ಲಿ ಗುರುಪ್ರಸಾದವಾಯಿತ್ತು.
ಇಂತೀ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವ ಕೊಂಬಲ್ಲಿ
ಸರ್ವ ಎಂಜಲ ಹೊಲೆಯವ ನೀಗಿದ.
ಇದನರಿಯದಿರ್ದಡೆ ಮಿಕ್ಕಿನವರೆಲ್ಲರು
ಹಲವರೆಂಜಲ ಹೊಲೆಯೊಳಗೆ ಮುಳುಗಿ ಉಂಡರೆಂದಾತ
ನಮ್ಮ ಅಂಬಿಗರ ಚೌಡಯ್ಯ. ॥೧೫೬॥

೧೬೮
ನವನಾಳಪದ್ಮದ ಅಷ್ಟದಳದೊಳಗೆ ಎಪ್ಪತ್ತುಮೂರು ನಾಳ ನೋಡಾ.
ಸುಳಿದು ಬೀಸುವ ವಾಯು, ಒಳಗೆ ಆತ್ಮಜ್ಯೋತಿ,
ಅಲ್ಲಿಂದೊಳಗಿಪ್ಪ ಹಂಸನ ಗೃಹವ ನೋಡಾ.
ಹಿರಿದೊಂದು ಭೂತನು ಹುದುಗಿಪ್ಪ ಭೇದವ
ನಿಲುಕಿ ನೋಡಿಯೆ ಕಂಡನಂಬಿಗರ ಚೌಡಯ್ಯ. ॥೧೫೭॥

೧೬೯
ನಾದದ ಬಲದಿಂದ ವೇದಂಗಳಾದವಲ್ಲದೆ, ವೇದ ಸ್ವಯಂಭುವಲ್ಲ, ನಿಲ್ಲು.
ಮಾತಿನ ಬಲದಿಂದ ಶಾಸ್ತ್ರಂಗಳಾದವಲ್ಲದೆ, ಶಾಸ್ತ್ರ ಸ್ವಯಂಭುವಲ್ಲ, ನಿಲ್ಲು.
ಪಾಷಾಣದ ಬಲದಿಂದ ಸಮಯಂಗಳಾದವಲ್ಲದೆ

ಸಮಯ ಸ್ವಯಂಭುವಲ್ಲ ನಿಲ್ಲು.
ಇಂತೀ ಮಾತಿನ ಬಣಬೆಯ ಮುಂದಿಟ್ಟುಕೊಂಡು
ಆತನ ಕಂಡೆಹೆನೆಂದಡೆ,
ಆತನತ್ಯತಿಷ್ಠದ್ದಶಾಂಗುಲ,
ಆತನೆಂತು ಸಿಲುಕುವನೆಂದಾತನಂಬಿಗ ಚೌಡಯ್ಯ. ॥೧೫೮॥

೧೭೦
ನಾದ ಬಿಂದುವಿನಲ್ಲಿ ಸಾಧಿಸಿದ ಹದಿನಾರು
[ದಳ] ಕಳೆಯ ಸುಳಿಯೊಳಗೆ ತಾವರೆಯ ಪದ್ಮದ ಜ್ಞಾನಮೇಲುದ ಹಾಸಿ,
ದೇವನಾತ್ಮನಲ್ಲಿ ಕುಳ್ಳಿರ್ದ ಭಾವ ಮುಂದಟ್ಟಿ, ಕಾಯವ ನಿಲಿಸಿ
ದೇವನೋಲಗದೊಳಗಿರ್ದನಂಬಿಗ ಚೌಡಯ್ಯ. ॥೧೫೯॥

೧೭೧
ನಾಯಿ ಬಲ್ಲುದೆ ದೇವರ ಬೋನವ?
ದ್ರೋಹಿ ಬಲ್ಲನೆ ಗುರು-ಲಿಂಗ-ಜಂಗಮದ ನೆಲೆಯ?
ಅಜ್ಞಾನಿ ಬಲ್ಲನೆ ಸುಜ್ಞಾನಿಯ ನೆಲೆಯ?
ಕುಕ್ಕುರ ಬಲ್ಲುದೆ ಸುಭಿಕ್ಷದ ಸವಿಯ?
ಇಂತಪ್ಪ ಆಚಾರಭ್ರಷ್ಟರ ಕಡೆಗೆ ನೋಡೆ[ನೆಂ]ದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. ॥೧೬೦॥

೧೭೨
ನಾರಿವಾಳವ ತಂದು ನಾಯಮುಂದೆ ಹಾಕಿದಡೆ,
ಒಡೆಯಲರಿಯದು, ತಿನಲರಿಯದು.
ಅದರವೊಲು ಜಂಗಮದೊಳಗೆ ಲಿಂಗವನರಿ[ಯ]ದವ ಭಂಗಿಯ ತಿಂದಂತೆ.
ತನ್ನ ಹೊದ್ದಿದ್ದ, ತನ್ನ ತಾ ತಿಳಿಯಲರಿಯದಿದ್ದಡೆ
ತೆಂಗ ತಿನಲರಿಯದ ನಾಯಂತೆ ಎಂದನಂಬಿಗ ಚೌಡಯ್ಯ. ॥೧೬೧॥

೧೭೩
ನಾಲ್ಕು ವೇದವನೋದಿದನಂತರ ಮನೆಯ ಬೋನವ
ಶಿವಭಕ್ತರ ಮನೆಯಲ್ಲಿರುವ ನಾಯಿ ಮೂಸಿ ನೋಡಲಾಗದು.
ಸಾಮವೇದಿ ಹೋಗುತ್ತಿರಲು
ಶ್ವಪಚಯ್ಯಗಳು ತಮ್ಮ ಪಾದುಕದಿಂದ ಪಾಕವ ಮುಚ್ಚಿದರು.
"ಶ್ವಾನೋ ಶ್ರೇಷ್ಠ"ವೆಂದು ಇಕ್ಕಿದೆನು ಮುಂಡಿಗೆಯ.

ಎತ್ತಿರೋ ಜಗದ ಸಂತೆಯ ಸೂಳೆಯ ಮಕ್ಕಳು.
ಜಗಕ್ಕೆ ಪಿತನೊಬ್ಬನಲ್ಲದೆ ಇಬ್ಬರೆಂದು ಬೊಗಳುವರ
ಮೋರೆಯ ಮೇಲೆ ಹೊಡೆ ಎಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. ॥೧೬೨॥

೧೭೪

ನಾಲ್ಕೈದು ಹದಿನೆಂಟು ಪುರಾಣ,ಇಪ್ಪತ್ತೆಂಟು ದೇವತಾಗಮಂಗಳು
ಚೌಷಷ್ಟಿ ಅಖಿಳ ವಿದ್ಯಂಗಳ ಸಾಧಿಸಿ
ನನಗಾರು ಸರಿ ಎಂಬ ಹೊಲೆಮಾದಿಗರ ಎನಗೊಮ್ಮೆ ತೋರದಿರಯ್ಯಾ.
ಅದೇನು ಕಾರಣವೆಂದಡೆ: ಸಕಲಶಾಸ್ತ್ರಂಗಳಿಗೆ ಚೌಷಷ್ಟಿ ಕಳಾವಿದ್ಯಕ್ಕೆ ನಿಲುಕದ ಪರಶಿವನ
ಕಾಯ ಜೀವ ಪ್ರಸಾದದಲ್ಲಿ ನೆಲೆಗೊಳಿಸಲರಿಯದೆ
ಒಡಲ ಹೊರೆವ ಹೊಲೆ ಮಾದಿಗರಾದಂತಾಯಿತ್ತೆಂದಡೆ
ಶುಕ ನುಡಿದಂತಾಯಿತ್ತೆಂದಾತ ನಮ್ಮ ಅಂಬಿಗರ ಚೌಡಯ್ಯ. ॥೧೬೩॥

೧೭೫

ನಿಜಗಂಡನ ಸಂಗವನೊಲ್ಲದೆ ಬೊಜಗರ ಸಂಗ ಮಾಡುವ
[ಬೋಸ]ರಿ ತೊತ್ತಿಗೆಲ್ಲಿಯದೊ ನಿಜಮುತ್ತೈದೆತನ?
ತ್ರಿಜಗವಂದಿತ ಲಿಂಗವ ಕರಕಮಲದಲ್ಲಿ ಹಿಡಿದುಕೊಂಡಿರ್ದ ಬಳಿಕ
ಅಲ್ಲಿ ನಂಬಿ ಪೂಜಿಸಿ ಮುಕ್ತಿಯ ಪಡೆಯಲರಿಯದೆ
ಲೋಕದ ಗಜಬಿಜಿ ದೈವಂಗಳಿಗೆರಗುವ ಕುನ್ನಿ ಮಾನವರ ಕಂಡರೆ
ಯಮನು ಜಿಗಿದೆಳೆದೊಯ್ದು ಕೊಲ್ಲದಿಪ್ಪನೆ?
ಹಾಗೆ ಸಾಯಲೆಂದಾತ ನಮ್ಮ ಅಂಬಿಗರ ಚೌಡಯ್ಯ. ॥೧೬೪॥

೧೭೬

ನಿಲ್ಲಿಸಬಹುದಯ್ಯ ಒಂದೇ ಮಂತ್ರದಲ್ಲಿ ಕಾಳೋರಗನ,
ನಿಲ್ಲಿಸಬಹುದಯ್ಯ ಒಂದೇ ಮಂತ್ರದಲ್ಲಿ ಹಾರುವ ಪಕ್ಷಿಯನು,
ನಿಲ್ಲಿಸಬಹುದಯ್ಯ ಒಂದೇ ಮಂತ್ರದಲ್ಲಿ ಹೆಬ್ಬುಲಿಯ,
ನಿಲ್ಲಿಸಬಹುದಯ್ಯ ಒಂದೇ ಮಂತ್ರದಲ್ಲಿ ಹೊಯ್ವ ಹೆಮ್ಮಾರಿಯ,
ನಿಲ್ಲಿಸಬಹುದಯ್ಯ ಒಂದೇ ಮಂತ್ರದಲ್ಲಿ ಬರುವ ಉರಿ ಬಾಣವ.
ಇಂತಿವೆಲ್ಲವನು ಒಂದೇ ಮಂತ್ರದಲ್ಲಿ ನಿಲ್ಲಿಸಬಹುದು,
ಲೋಭವೆಂಬ ಗ್ರಹಣ ಹಿಡಿದವರ ಏತರಿಂದಲೂ ನಿಲ್ಲಿಸಲಾಗದು.
ಈ ಲೋಭಕ್ಕೆ ದಾರಿದ್ರ್ಯವೇ ಔಷಧವು.
ಹೇಳಿದರೆ ಕೇಳರು, ತಾವು ತಿಳಿಯರು,

ಶಾಸ್ತ್ರವ ನೋಡರು, ಭಕ್ತಿಯ ಹಿಡಿಯರು.
ಇಂತಹ ಗೊಡ್ಡು ಮೂಳ ಹೊಲೆಯರಿಗೆ
ಕರ್ಮವೆಂಬ ಶರಧಿಯಲ್ಲಿ ಬಿದ್ದು ಉರುಳಾಡುವುದೆ
ಸತ್ಯವೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. ॥೧೬೫॥

೧೭೭
ನೀರೊಳಗಣ ನೆಯಿದಲು ತಾವರೆಯಂತೆ,
ಅದಾರಿಗೆ ಸುಖ, ಅದಾರಿಗೆ ದುಃಖವೆಂಬುದ ಆರೈದಲ್ಲಿ,
ಆ ಉಭಯವು ನೀರಿನ
ಆರೈಕೆಯಿಂದ ಲೇಸೆಂದನಂಬಿಗ ಚೌಡಯ್ಯ. ॥೧೬೬॥

೧೭೮
ನೀರೊಳಗಿಕ್ಕಿದ ಕೋಲಿನಂತೆ, ಭೇದವನೊಳಗೊಂಡ ವಾದ್ಯದಂತೆ,
ನಾದದಲ್ಲಿ ಸೋಂಕಿದ ಶೂನ್ಯದಂತೆ,
ಭೇದಾಭೇದಂಗಳಲ್ಲಿ ಅಭೇದ್ಯವ ಭೇದಿಸಬಲ್ಲಡೆ,
ನಾದ ಬಿಂದು ಕಳೆಗೆ ಅತೀತವೆಂದನಂಬಿಗ ಚೌಡಯ್ಯ. ॥೧೬೭॥

೧೭೯
ನುಡಿವ ಶಬ್ದವೆ ಕಾಯದ ಕಳವಳ, ಒಡಲುಗೊಂಡವರೆಲ್ಲಾ ಕೇಳಿರಯ್ಯಾ.
ಸಂಜೆ ನೇಮ ನಿತ್ಯ ಜಪ ತಪ ಸಮಾಧಿ
ಏನೆಂದಡೇನೆಂದು ಬರೆವಂತೆ ಬರೆವ
ನುಡಿಯೊಳಗಿರ್ದು, ನುಡಿ ತಪ್ಪಿದೆನೆಂಬ
ಈ ನುಡಿಗೆ ನಾಚುವೆನೆಂದನಂಬಿಗ ಚೌಡಯ್ಯ. ॥೧೬೮॥

೧೮೦
ನೆನೆವೆನೆ? ಮರೆದವನಲ್ಲ. ನೆನೆದುಸೆ? ಉದಾಸೀನಿಯಲ್ಲ.
ಕುರುಹೆಂಬೆನೆ? ತೆರಹಿಲ್ಲವಾಗಿ, ಅರಿಯೆನಿನ್ನಾವ ಭಾವಂಗಳೆಂಬವನು.
ಎರಡಳಿದು ಒಂದುಳಿದ ಕಾರಣ
ನೆನೆಯಲಿಲ್ಲೆಂದನಂಬಿಗ ಚೌಡಯ್ಯ. ॥೧೬೯॥

೧೮೧
ನೇಮಸ್ಥನೆಂಬವ ಕ್ರೂರಕರ್ಮಿ, ಶೀಲವಂತನೆಂಬವ ಸಂದೇಹಧಾರಿ.
ಭಾಷೆವಂತನೆಂಬವ ಬ್ರಹ್ಮೇತಿಕಾರ.

ಇವರು ಮೂವರು ಕುಳ್ಳಿರ್ದಲ್ಲಿ ಕುಳ್ಳಿರಲಾಗದು.
ಇವರು ಹೋದ ಬಟ್ಟೆಯ ಹೊಗಲಾಗದು. ಇವರು ಮೂವರಿಗೂ
ಗುರುವಿಲ್ಲ, ಲಿಂಗವಿಲ್ಲೆಂದಾತನಂಬಿಗ ಚೌಡಯ್ಯ. ॥೧೭೦॥

೧೮೨
ನೇಮಸ್ಥನೇನು ಬಲ್ಲನಯ್ಯ ಲಿಂಗದ ಕುರುಹ?
ಸೂಳೆಯ ಮಗನೇನು ಬಲ್ಲನಯ್ಯ ತಂದೆಯ ಕುರುಹ?
ಜಂಗಮದ ಅನುವ ತೊತ್ತಿನ ಮಗನೇನು ಬಲ್ಲನಯ್ಯ?
ಇಂತಪ್ಪ ಅಂಗವೇ ಲಿಂಗ, ಲಿಂಗವೇ ಅಂಗ,
ಲಿಂಗವೇ ಜಂಗಮವು, ಜಂಗಮವೇ ಲಿಂಗವೆಂದರಿಯದವನ
ಭಕ್ತರೆಂದರೆ ಅಘೋರನರಕವೆಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. ॥೧೭೧॥

೧೮೩
ಪನ್ನಗಂಗೆ ನನ್ನಿಯ ಗಾರುಡವಲ್ಲದೆ ಮಿಕ್ಕಾದ ದ್ವಯಜಿ[ಹ್ವೆ]ಗಳಿಗುಂಟೆ?
ತಿಳಿದ ಸದ್ಯೆವಂಗೆ ಸದ್ಭಕ್ತಿ ಸದಾಚಾರವಲ್ಲದೆ,
ವಿಶ್ವಾಸಘಾತಕಂಗೆ ಅಪ್ರಮಾಣಂಗೆ ಮುಕ್ತಿ ವಿರಕ್ತಿಯಿಲ್ಲ,
ಎಂದನಂಬಿಗ ಚೌಡಯ್ಯ. ॥೧೭೨॥

೧೮೪
ಪರಧನ-ಪರಸತಿ-ಪರನಿಂದೆಗಳಿರೆ
ಮುಂದೆ ನರಕವು ಎಂದು ಗುರುವಾಕ್ಯ ಸಾರುತ್ತಿದೆ.
ಪರಧನ ಪರಸತಿ ಪರಭೂಮಿಗಳುಪಿ ಹತವಾಗಿ ಹೋದ ದುರ್ಯೋಧನ.
ಹರಿವ ನದಿಯ ಮಿಂದು ಗೋದಾನ ಮಾಡುವ
ನರಕಿಗಳ ನುಡಿಯ ಕೇಳಲಾಗದು.
ಹದಿನಾಲ್ಕು ಲೋಕಕ್ಕೆ ಕರ್ತೃ ಶಿವನೊಬ್ಬನೇ
ಎಂದು ಶ್ರುತಿಗಳು ಪೊಗಳುತ್ತಿಹವು.
ಅರತ ದೇವರ ಪೂಜೆಯ ಮಾಡಿ, ಇಷ್ಟಲಿಂಗವ ಮರೆವ
ಮೂಳ ಹೊಲೆಯರಿಗೆ ಮುಕ್ತಿ ಆಗದೆಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. ॥೧೭೩॥

೧೮೫
ಪರಪುರುಷಾರ್ಥವನರಿಯದೆ ಕೆಟ್ಟ ನರಗುರಿಗಳು ನೀವು ಕೇಳಿರೋ:
ಪರಪುರುಷಾರ್ಥಕ್ಕೆ ಪ್ರಾಣವ ಕೊಟ್ಟವರುಂಟು.

ಮರಳಿ ಕೊಟ್ಟದ್ದಕ್ಕೆ ಕೀರ್ತಿದೇಹವ ಪಡೆದವರ
ಪರಿಯ ಕೇಳು ಎಲೆ ಮನವೆ:
ಪರಪುರುಷಾರ್ಥಿಯಾದರೆ, ವೀರವಿಕ್ರಮನಂತಾಗಬೇಕು,
ಪರಪುರುಷಾರ್ಥಿಯಾದರೆ, ಬಸವಕುಮಾರನಂತಾಗಬೇಕು,
ಪರಪುರುಷಾರ್ಥಿಯಾದರೆ, ಕಪೋತಪಕ್ಷಿಯಂತಾಗಬೇಕು,
ಇಂತೀ ಪರಪುರುಷಾರ್ಥಕ್ಕೆ ಪ್ರಾಣವ ಕೊಟ್ಟವರುಂಟು.
ಹಣವೇನು ದೊಡ್ಡಿತ್ತು? ಹೆಣ್ಣೇನು ದೊಡ್ಡಿತ್ತು?
ಮಣ್ಣೇನು ದೊಡ್ಡಿತ್ತು? ಅನ್ನವೇನು ದೊಡ್ಡಿತ್ತು?
ಇಂತಿವುಗಳೊಳು ಒಂದನಾದರೂ ಪರಪುರುಷಾರ್ಥಕ್ಕೆ ನೀಡದೆ ಮಾಡದೆ,
ತನ್ನ ಶರೀರವ ಹೊರೆದುಕೊಂಡು ಬದುಕುವೆನೆಂಬ
ಹೊಲೆ ಮಾದಿಗರುಗಳಿಗೆ ಇಹ–ಪರ ನಾಸ್ತಿ
ಎಂದಾತ ನಮ್ಮ ಅಂಬಿಗರ ಚೌಡಯ್ಯ. ॥೧೭೪॥

೧೮೬

ಪಿಸಿತ ನಡುವೆ ಇದ್ದ ಕಿರಾತ ಹೊಸ ವಾಸನೆಯ ಬಲ್ಲನೆ?
ಸಕಲವ್ಯಾಪಾರದಲ್ಲಿ ಮೂಡಿ ಮುಳುಗುವವ ಸುಖದ ತದ್ರೂಪ[ವ] ಬಲ್ಲನೆ?
ವಿಕಳತೆಗೊಂಡು ಅಖಿಳರ ಕೂಡಿ ಸುಖದುಃಖದಲ್ಲಿ ಬೇವವಂಗೆ
ಅಕಳಂಕತನವುಂಟೆ? ಎಂದನಂಬಿಗ ಚೌಡಯ್ಯ. ॥೧೭೫॥

೧೮೭

ಪುಣ್ಯಪಾಪವಿರಹಿತ ಕಂಡಾ, ಕ್ರೀಯೇಕೆ?
ಒಬ್ಬನೇ ಕಂಡಾ, ಆರು ದರ್ಶನವೇಕೆ?
ಮಾಟವೆಂಬುದೆಲ್ಲವು ಕೋಟಲೆ ಎಂದು ಕಳೆದು
ದೂಟಿಸಿ ನುಡಿದಾತನಂಬಿಗ ಚೌಡಯ್ಯ. ॥೧೭೬॥

೧೮೮

ಪೃಥ್ವಿಯನೆತ್ತಿತ್ತು ಬಿಂದು, ಬಿಂದುವನೆತ್ತಿತ್ತು ಶಬ್ದ.
ಶಬ್ದವನೆತ್ತಿತ್ತು ರೇಚಕ ಪೂರಕ ಕುಂಭಕ.
ಈ ರೇಚಕ ಪೂರಕ ಕುಂಭಕ, ಈಡ ಪಿಂಗಳ ಸುಷುಮ್ನವನೆತ್ತಿತ್ತು.
ಈ ಈಡ ಪಿಂಗಳ ಸುಷುಮ್ನೆಯನೆತ್ತಿತ್ತು ರಜ್ಜು, ರಜ್ಜುವನೆತ್ತಿತ್ತು ರೇಣು.
ಸಾಕಾರ ನಿರಾಕಾರ ಮೂರು ಲೋಕವ ನಿಲಿಸಿ ನೋಡೆ,
ಕಂಡೆನೆಂದಾತನಂಬಿಗರ ಚೌಡಯ್ಯ. ॥೧೭೭॥

೧೮೯
ಪೃಥ್ವಿ ಶುದ್ಧವೆಂಬೆನೆ? ಪೃಥ್ವಿ ಶುದ್ಧವಲ್ಲ. ಜಲ ಶುದ್ಧವೆಂಬೆನೆ? ಜಲಶುದ್ಧವಲ್ಲ.
ಅಗ್ನಿ ಶುದ್ಧವೆಂಬೆನೆ? ಅಗ್ನಿ ಶುದ್ಧವಲ್ಲ.
ವಾಯು ಶುದ್ಧವೆಂಬೆನೆ? ವಾಯು ಶುದ್ಧವಲ್ಲ.
ಆಕಾಶ ಶುದ್ಧವೆಂಬೆನೆ? ಆಕಾಶ ಶುದ್ಧವಲ್ಲ. ಗುರುವೆ ನೀ ಕೇಳಯ್ಯ,
ಹುಸಿ ನುಸುಳ ಕಳೆದು ಜ್ಞಾನವೆಂಬ ಬೆಳಗ ಸಾಧಿಸಬಲ್ಲಡೆ
ಇದೊಂದೆ ಶುದ್ಧವೆಂದನಂಬಿಗ ಚೌಡಯ್ಯ. ॥೧೭೮॥

೧೯೦
ಪೊಡವಿಗೀಶ್ವರ ಗೌರಿಯೊ[ಡನೆ] ಮದುವೆಯಾದಂದು,
ಒಡನಾಡಿದ ಮಾಧವ ಗೋವನಾದ,
ಮಿಗೆ ಓದಿದ ಬ್ರಹ್ಮ ಹೋತನ ತಿಂದ,
ಎಡೆಯಲಾದ ಜಿನ್ನ ಉಟ್ಟುದ ತೊರೆದ.
ಇವರ ಪೊಡಮಟ್ಟು ಪೊಡಮಟ್ಟು ಧಾತುಗೆಟ್ಟವರ
ಕೇಡಿಂಗೆ ಕಡೆಯಿಲ್ಲೆಂದನಂಬಿಗ ಚೌಡಯ್ಯ. ॥೧೭೯॥

೧೯೧
ಪ್ರಸಾದವ ನಂಬಿದಡೆ ಭಿಲ್ಲಮರಾಯನಂತೆ ನಂಬಬೇಕಯ್ಯಾ,
ಪ್ರಸಾದವ ನಂಬಿದಡೆ ಬಿಬ್ಬಬಾಚಯ್ಯಗಳಂತೆ ನಂಬಬೇಕಯ್ಯಾ,
ಪ್ರಸಾದವ ನಂಬಿದಡೆ ವಾಮನಮುನೀಶ್ವರನ ಶಿಷ್ಯನಂತೆ ನಂಬಬೇಕಯ್ಯಾ,
ಪ್ರಸಾದವ ನಂಬಿದಡೆ ಮರುಳುಶಂಕರದೇವರಂತೆ ನಂಬಬೇಕಯ್ಯಾ.
ಇಂತು ನಂಬಿ ಕೊಂಡಡೆ ಮಹಾಪ್ರಸಾದ!
ನಂಬದೆ ಸಮಯದಾಕ್ಷಿಣ್ಯಕ್ಕೆ ಮನದಳುಕಿನಿಂ ಕೊಂಡಡೆ
ಅದು ತನಗೆ ಸಿಂಗಿಯ ಕಾಳಕೂಟವಿಷವೆಂದಾತನಂಬಿಗ ಚೌಡಯ್ಯ. ॥೧೮೦॥

೧೯೨
ಪ್ರಾಣ ಪ್ರಣವವೆಂಬರು, ಪ್ರಾಣಕ್ಕೂ ಪ್ರಣವಕ್ಕೂ ಏನು ಸಂಬಂಧ?
ಪ್ರಾಣವೆ ಪ್ರಳಯಕ್ಕೊಳಗಾಗಿ ತಿರುತಿರುಗಿ ಬಪ್ಪುದಕ್ಕೆ ಒಡಲಾಯಿತ್ತು.
ಪ್ರಣವವೆ ಪ್ರಸನ್ನವಾಗಿಪ್ಪುದೆಂದನಂಬಿಗ ಚೌಡಯ್ಯ. ॥೧೮೧॥

೧೯೩
ಬಡತನಕ್ಕೆ ಉಂಬುವ ಚಿಂತೆ, ಉಣಲಾದರೆ ಉಡುವ ಚಿಂತೆ,
ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡಿರ ಚಿಂತೆ,

ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ,
ಬದುಕಾದರೆ ಕೇಡಿನ ಚಿಂತೆ, ಕೇಡಾದರೆ ಮರಣದ ಚಿಂತೆ,
ಇಂತೀ ಹಲವು ಚಿಂತೆಯಲ್ಲಿ ಇಪ್ಪವರ ಕಂಡೆನು.
ಶಿವನ ಚಿಂತೆಯಲ್ಲಿದ್ದವರೊಬ್ಬರನೂ ಕಾಣೆನೆಂದಾತ
ನಮ್ಮ ಅಂಬಿಗರ ಚೌಡಯ್ಯ [ನಿಜ]ಶರಣನು. ॥೧೮೨॥

೧೯೪
ಬಯಲ ಉದಕವ ಹಿಡಿದು ಮಜ್ಜನಕ್ಕೆರೆವೆನಯ್ಯಾ.
ಸಕಲವನುಳಿದೊಂದು ಪುಷ್ಪದ ಪೂಜೆಯ ಮಾಡುವೆನಯ್ಯಾ.
ಸುಗಂಧ ದುರ್ಗಂಧವ ಕಳೆದು ಧೂಪಾರತಿಯ ಮಾಡುವೆನಯ್ಯಾ.
ಪರಬ್ರಹ್ಮವ ಹಿಡಿದು ನಿವಾಳಿಯನೆತ್ತುವೆನಯ್ಯಾ.
ಪುಣ್ಯಪಾಪವ ಕಳೆದು ಓಗರವನಿಕ್ಕುವೆನಯ್ಯಾ.
ಹದಿನಾಲ್ಕು ಭುವನವನೊಳಗುಮಾಡಿ ಹೊರಗೆ ನಿಂದು
ಸದಾಶಿವನ ಪೂಜಿಸಿದಾತನಂಬಿಗ ಚೌಡಯ್ಯ. ॥೧೮೩॥

೧೯೫
ಬರೆದು ಓದಿಸುವ ಅಕ್ಕರಿಗಳೆಲ್ಲ ನೀವು ಕೇಳಿರೋ:
ತರ್ಕ ವ್ಯಾಕರಣ ಛಂದಸ್ಸು ನಿಘಂಟು ವೇದಶಾಸ್ತ್ರವನೋದಿ ಕೇಳಿ
ಗಂಗೆಗೆ ಹರಿವವರನೇನೆಂಬೆ?
ಪರವಧುವೆಂಬುದನರಿಯಿರಲ್ಲಾ!
ನೆರೆದಿರ್ದ ಪಾಪವ ಹೊನಲಿನಲ್ಲಿ ಕಳೆದೆನೆಂಬ
ಅಣ್ಣಗಳ ಬೆಡಗು ಬೇಡೆಂದಾತನಂಬಿಗ ಚೌಡಯ್ಯ. ॥೧೮೪॥

೧೯೬
ಬೀಜ ಮೊಳೆವುದಲ್ಲದೆ ಮೊಳೆ ಮೊಳೆತುದುಂಟೆ?
ಕ್ರೀಗೆ ಅರಿವಿಲ್ಲದೆ ಅರಿವಿಗೆ ಅರಿವುಂಟೆ?
ಮೊಳೆ ಮೊಳೆತು ಪುನರಪಿ ಬೀಜವಾದಂತೆ,
ಅರಿವು ಕ್ರೀಯಲ್ಲಿ ನಿಂದು ಉಭಯವು ತಾನಾದ ತೆರದಂತೆ,
ಆ ಎರಡರಲ್ಲಿ ಕೂಡಿದ
ಉಳುಮೆಯನರಿಯಬೇಕೆಂದನಂಬಿಗ ಚೌಡಯ್ಯ. ॥೧೮೫॥

೧೯೭
ಬೆಟ್ಟದ ಲಿಂಗವ ಹಿರಿದು ಮಾಡಿ[ಕೊಂ]ಡು ಪರಿವ ಕೊಟ್ಟಿ ಮೂಳರಿರಾ,
ಬಿಟ್ಟುಕೊಡಿ ನಿಮ್ಮ ಇಷ್ಟಲಿಂಗವ.
ನಮ್ಮ ಕೈಗೆ ಕೊಡದಿದ್ದಡೆ, ನಟ್ಟನಡುನೀರೊಳಗೊಯ್ದಿ, ಕಟ್ಟಿ ಮುಳುಗಿಸಿ
ನಿಮ್ಮನು ಲಿಂಗೈಕ್ಯರ ಮಾಡುವೆನೆಂದಾತ ನಮ್ಮಂಬಿಗ ಚೌಡಯ್ಯ. ॥೧೮೬॥

೧೯೮
ಬೆಟ್ಟದ ಲಿಂಗವ ಹಿರಿದುಮಾಡಿ,
ತನ್ನ ಇಷ್ಟಲಿಂಗವ ಕಿರಿದುಮಾಡುವ ಮೂಳಹೊಲೆಯರಿರಾ,
ಅಣುರೇಣುತೃಣಕಾಷ್ಠ ಮೊದಲಾದ
ಬ್ರಹ್ಮಾಂಡ ಪರಿಪೂರ್ಣವಾದ
ಮಹಾಲಿಂಗವೆ ಅಂಗಕ್ಕೆ ಗುರುವು ಎಂದು ಸಂಬಂಧಿಸಿ
ಸರ್ವಸಂ[ಕು]ಲವ ತೋರಿದ ಬಳಿಕ,
ಇಂತಪ್ಪ ಮೋಕ್ಷಕ್ಕೆ ಕಾರಣವಾದ ಲಿಂಗವನು ಅಡಿಮಾಡಿ
ನಟ್ಟ ಕಲ್ಲಿಂಗೆ ಅಡ್ಡಬೀಳುವ
ಹೊಲೆಯರಿಗೆ ಲಿಂಗ ಕಟ್ಟುವುದು ಕಿರಿದು,
ಗೊಡ್ಡೆಮ್ಮೆಗೆ ಲಿಂಗವದು ಕರ ಲೇಸು.
ಇಂಥ ಮೂಳ ಹೊಲೆಯರು ಶಿವಭಕ್ತರೆಂದು ನುಡಿದ ಭ್ರಷ್ಟರನು
ಕತ್ತೆಯನೇರಿಸಿ ಕೆರಹಿನಟ್ಟೆಯಲಿ ಹೊಡೆಯೆಂದಾತ
ನಮ್ಮ ಅಂಬಿಗರ ಚೌಡಯ್ಯನೆಂಬ ನಿಜಶರಣನು. ॥೧೮೭॥

೧೯೯
ಬೆಲ್ಲಕ್ಕೆ ಚದುರಸವಲ್ಲದೆ ಸಿಹಿಗೆ ಚದುರಸವುಂಟೆ?
ಕುರುಹಿಂಗೆ ಪೂಜೆಯಲ್ಲದೆ, ಅರಿವಿಂಗೆ ಪೂಜೆ ಉಂಟೆ?
ಅರಿವು ಕರಿಗೊಂಡಲ್ಲಿ ಕೈಯ ಕುರುಹು
ಅಲ್ಲಿಯೆ ಲೋಪವೆಂದನಂಬಿಗ ಚೌಡಯ್ಯ. ॥೧೮೮॥

೨೦೦
ಬೆಲ್ಲದ ಹೊಗೆಯನಿಕ್ಕಿ, ಭರಣಿಯ ಹೊರೆವಂತೆ
ಇರಬೇಡವೆ ಗುರುವಿನುಪದೇಶ?
ದಾರಿಯ ಹಸಮಾಡಿ ನೀರ ತಿದ್ದುವಂತೆ ಇರಬೇಡವೆ ಗುರುವಿನುಪದೇಶ?
ಹಾಲುಂಬ ಹಸುಳೆಗೆ ಕೂಳು ಮೈಯಕ್ಕುವುದೆ?
ಬುದ್ಧಿಹೀನರು ಬಲ್ಲರೆ ಪರಬ್ರಹ್ಮದ ಸುಖವ?

ಈ ಭೇದವನರಿಯದ ಗುರುಶಿಷ್ಯರಿಬ್ಬರೂ
ಇದ್ದ ಊರೊಳಗಿರೆನೆಂದನಂಬಿಗ ಚೌಡಯ್ಯ. ॥೧೮೯॥

೨೦೧
ಬೇಗ ಬೇಗನೆ ಗತಿಪಥದ ಜ್ಞಾನವ ಮಾಡಿಕೊಂಡು
ನೀಗಿರೊ ನಿಮ್ಮ ಭವಬಂಧನದ ಸಾಗರವನು.
ಪ್ರಾಣತ್ಯಾಗವು ಈಗಲೋ ಆಗಲೋ ಯಾವಾಗಲೋ
ಎಂದರಿಯಬಾರದು.
ರೋಗ ರುಜೆಗಳಿಗೆ ಆಗರವು ನಿಮ್ಮ ಒಡಲು.
ತನು-ಮನ-ಪ್ರಾಣವ ನೆಚ್ಚದಿರು,
ನಾಗಭೂಷಣನ ಪಾದಪೂಜೆಯ ಮಾಡಿ,
ಶಿವಯೋಗದಲಿ ಲಿಂಗವನೊಡಗೂಡಿ ಸಾಗಿ ಹೋಗುವವರನು
ಭವಗೇಡಿ ಎಂದಾತ ನಮ್ಮ ಅಂಬಿಗರ ಚೌಡಯ್ಯ. ॥೧೯೦॥

೨೦೨
ಬ್ರಹ್ಮ ಕುಮಾರ, ವಿಷ್ಣು ಅಬಳ, ಲೆಕ್ಕವಿಲ್ಲದ ರುದ್ರರು ನೋಡಾ.
ದೇವರ್ಕಳೆಲ್ಲಾ ಗರ್ವದಲೈದಾರೆ, ಅವರೆತ್ತ ಬಲ್ಲರು ಶಿವನಾದಿಯಂತುವ?
ಶಾಶ್ವತಪದಕ್ಕೆ ಸಲ್ಲದ ಕಾರಣ,
ಇವರು ವೇಷಧಾರಿಗಳೆಂದಾತನಂಬಿಗ ಚೌಡಯ್ಯ. ॥೧೯೧॥

೨೦೩
ಬ್ರಹ್ಮಕ್ಕೆ ಬಾಯಿ ತೆರೆದು ಮಾತನಾಡಿ, ಪರಬೊಮ್ಮದ ವಶ್ಯವ ನುಡಿದು,
ಒಮ್ಮನ ಅಂಬಲಿಯನಿಕ್ಕೆಂದು ಹಲುಬುವ
ಹೊಲಬುಗೆಟ್ಟವರ ಕಂಡು ಅವರಿಗೆ ಒಲವರವಿಲ್ಲ ಎಂದನಂಬಿಗ ಚೌಡಯ್ಯ. ॥೧೯೨॥

೨೦೪
ಬ್ರಹ್ಮದ ಮಾತನಾಡಿ, ಕನ್ನೆಯರ ಕಾಲದೆಸೆಯಲ್ಲಿ ಕುಳಿತಡೆ
ಪರಬೊಮ್ಮದ ಮಾತು ಅಲ್ಲಿಯೆ ನಿಂದಿತ್ತೆಂದನಂಬಿಗ ಚೌಡಯ್ಯ ॥೧೯೩॥

೨೦೫
ಬ್ರಹ್ಮನ ಘನವೆಂತೆಂಬಿರಯ್ಯ, ಬ್ರಹ್ಮನು ಘನವಲ್ಲ, ಬ್ರಹ್ಮನು ಕಮಲದಲ್ಲಿ ಹುಟ್ಟಿದ.
ಆ ಕಮಲವು ಘನವೆಂತೆಂಬಿರಯ್ಯ, ಕಮಲವು ಘನವಲ್ಲ,
ಕಮಲ ಕೆಸರಿನಲ್ಲಿ ಹುಟ್ಟಿತು.

ಕೆಸರು ಘನವೆಂತೆಂಬಿರಯ್ಯಾ, ಕೆಸರು ಘನವಲ್ಲ, ಕೆಸರು ನೀರಿನಲ್ಲಿ ಹುಟ್ಟಿತು.
ನೀರು ಘನವೆಂತೆಂಬಿರಯ್ಯ, ನೀರು ಘನವಲ್ಲ, ನೀರು ಸಮುದ್ರದಲ್ಲಿ ಹುಟ್ಟಿತು.
ಸಮುದ್ರವು ಘನವೆಂತೆಂಬಿರಯ್ಯ, ಸಮುದ್ರವು ಘನವಲ್ಲ,
ಸಮುದ್ರವು ಅಗಸ್ತ್ಯಮುನಿಯ ಕುಡಿತೆಗೆ ಸಾಲದಾಗಿ ಹೋಯಿತ್ತು.
ಅಗಸ್ತ್ಯನು ಘನವೆಂತೆಂಬಿರಯ್ಯ, ಅಗಸ್ತ್ಯನು ಘನವಲ್ಲ,
ಅಗಸ್ತ್ಯನು ಕುಂಭದಲ್ಲಿ ಹುಟ್ಟಿದ.
ಕುಂಭವು ಘನವೆಂತೆಂಬಿರಯ್ಯ, ಕುಂಭವು ಘನವಲ್ಲ,
ಕುಂಭವು ಭೂಮಿಯಲ್ಲಿ ಹುಟ್ಟಿತು.
ಭೂಮಿಯು ಘನವೆಂತೆಂಬಿರಯ್ಯ, ಭೂಮಿಯು ಘನವಲ್ಲ,
ಭೂಮಿಯು ಆದಿಶೇಷನ ತಲೆಗೆ ಸಾಲದಾಗಿ ಹೋಯಿತ್ತು.
ಆದಿಶೇಷನು ಘನವೆಂತೆಂಬಿರಯ್ಯ, ಆದಿಶೇಷ ಘನವಲ್ಲ,
ಆದಿಶೇಷನು ಪಾರ್ವತಿದೇವಿಯ
ಕಿರುಬೆರಳಿನುಂಗುರಕೆ ಸಾಲದಾಗಿ ಹೋಗಿದ್ದ.
ಪಾರ್ವತಿದೇವಿಯು ಘನವೆಂತೆಂಬಿರಯ್ಯ, ಪಾರ್ವತಿದೇವಿ ಘನವಲ್ಲ,
ಪಾರ್ವತಿದೇವಿಯು ಪರಮೇಶ್ವರನ ಎಡಗಡೆಯ ತೊಡೆಯ ಬಿಟ್ಟು
ಬಲಗಡೆಯ ತೊಡೆಯನರಿಯಳು,
ಪರಮೇಶ್ವರನು ಘನವೆಂತೆಂಬಿರಯ್ಯ, ಪರಮೇಶ್ವರನು ಘನವಲ್ಲ,
ನಮ್ಮ ಪರಮೇಶ್ವರನು ಭಕ್ತನಾದ ಬಸವಣ್ಣನ ಎದೆಯೊಳಗೆ
ಅಡಗಿರ್ದನೆಂದು ವೇದಗಳು ಸಾರುವವು ಎಂದಾತ
ನಮ್ಮ ಅಂಬಿಗರಚೌಡಯ್ಯ. ॥೧೯೪॥

೨೦೬
ಬ್ರಹ್ಮನ ನಾವು ಬಲ್ಲೆವು, ವಿಷ್ಣುವ ನಾವು ಬಲ್ಲೆವು,
ತೆತ್ತೀಸಕೋಟಿ ದೇವತೆಗಳ ನಾವು ಬಲ್ಲೆವು. ಅದೇನುಕಾರಣವೆಂದಡೆ:
ಇವರು ಹಲವು ಕಾಲ ನಮ್ಮ ನೆರೆಮನೆಯಲ್ಲಿದ್ದರಾಗಿ.
ಇವರು ದೇವರೆಂಬುದ ನಾ ಬಲ್ಲೆನಾಗಿ,
ಒಲ್ಲೆನೆಂದಾತನಂಬಿಗ ಚೌಡಯ್ಯ. ॥೧೯೫॥

೨೦೭
ಬ್ರಹ್ಮ ನಿಮ್ಮ ಬಲ್ಲಡೆ ನಿರ್ಮಾಲ್ಯವಹನೆ?
ವಿಷ್ಣು ನಿಮ್ಮ ಬಲ್ಲಡೆ ಗೋಪಾಲನಹನೆ?
ರುದ್ರ ನಿಮ್ಮ ಬಲ್ಲಡೆ ಜಡೆಯ ಕಟ್ಟುವನೆ?
ಪಶುಪತಿ ನಿಮ್ಮ ಬಲ್ಲಡೆ ವೇಷವ ಹೊತ್ತು ತೊಳಲುವನೆ?

ಗಂಗೆವಾಳುಕರು ನಿಮ್ಮ ಬಲ್ಲಡೆ ಲಿಂಗವ ಪೂಜಿಸುವರೆ?
ತಮ್ಮ ಬಲ್ಲಡೆ, ನಿಮ್ಮ ಬಲ್ಲರು,
ಅನ್ನಕ ತಡವೆಂದಾತ ನಮ್ಮಂಬಿಗ ಚೌಡಯ್ಯ. ॥೧೯೬॥

೨೦೮
ಬ್ರಹ್ಮ ಮೊದಲನರಿಯ, ವಿಷ್ಣು ತುದಿಯನರಿಯ,
ಎಡೆಯಣ ಮಾನವರೆತ್ತ ಬಲ್ಲರೊ ಮೃಡನಂತುವ?
ಇತ್ತಣ ಮನ[ದ]ವರಿತ್ತಿತ್ತ ಕೇಳಿ, ಅತ್ತಣ ಸುದ್ದಿ ನಿಮಗೇತಕ್ಕೆ?
ನಿಸ್ಸಂಗಿ ನಿರೂಪದ ಮಹಾತ್ಮರೆ ಬಲ್ಲರೆಂದನಂಬಿಗ ಚೌಡಯ್ಯ. ॥೧೯೭॥

೨೦೯
ಭಕ್ತ ಜಂಗಮದ ಪರಿಯ ಹೇಳಿಹೆನು ಕೇಳಿರಣ್ಣಾ:
ಭಕ್ತರು ಜಂಗಮವಿದ್ದೆಡೆಗೆ ಹೋಗಿ, ದೀರ್ಘದಂಡ ನಮಸ್ಕಾರವಂ ಮಾಡಿ,
ವಿಭೂತಿಯಂ ಕೊಟ್ಟು,
ಎಲೆ ದೇವ, ನಿಮ್ಮ ತೊತ್ತುಭೃತ್ಯನೆಂದು ಕಿಂಕುರ್ವಾಣತೆಯಂ ನುಡಿದು,
ತೀರ್ಥಪ್ರಸಾದವನಿತ್ತು, ರಕ್ಷಿಸಬೇಕೆಂದು ಬಿನ್ನಪವನಿತ್ತು,
ಕೊಂಡು ತನ್ನ ಗೃಹಕ್ಕೆ ಹೋಗಿ ಸಕಲಪದಾರ್ಥಂಗಳು ಆಯಿತ್ತಾದ ಬಳಿಕ
ಬಂದು ನಮಸ್ಕಾರವಂ ಮಾಡಿ, ದೇವರಾಯವಾಯಿತ್ತು ಚಿತ್ತೈಸಿಯೆನೆ,
ಒಳಿತೆಂದು ಆ ಜಂಗಮವು ಆ ಭಕ್ತನೊಡಗೂಡಿ ಗೃಹಕ್ಕೆ ಬಂದು
ಉಲ್ಲಾಸದಿಂ ಆ ಭಕ್ತನು ಪಾದಾರ್ಚನೆಯ ಮಾಡಿ
ಅಗ್ರ ಗದ್ದಿಗೆಯನಿಕ್ಕಿ ಮೂರ್ತಮಾಡಿಸಿ
ಮರಳಿ ದೀರ್ಘದಂಡನಮಸ್ಕಾರಮಂ ಮಾಡಿ
ತೀರ್ಥಪ್ರಸಾದಕ್ಕೆ ನಿರೂಪವೆ ಅಯ್ಯ? ಎಂದು ಎದ್ದು ಬಂದು
ಆ ಜಂಗಮಕ್ಕೆ ನಮಸ್ಕರಿಸಿ ದಿವ್ಯಪಾದಮಂ ಪಿಡಿದು, ಸಾಕ್ಷಿ:
"ದೇಶಿಕಂ ಚರಣಾಂಗುಷ್ಠಂ [ಭಸಿ]ತಂ ಪ್ರಣಾಮಸ್ತಥಾ
ಪಾದಪೂಜಾಮಿಮಾಂ ಕುರ್ಯಾತ್ ಗೋಪ್ಯಂ ಗೋಪ್ಯಂ ವರಾನನೇ"
ಎಂದು ವಿಭೂತಿಯಂ ಧರಿಸಿ, ಪತ್ರಿಪುಷ್ಪಗಳಿಂದ ಪೂಜೆಯಂ ಮಾಡಿ
ತಾಂಬೂಲ ನೆನೆಗಡಲಿ ಮುಖ್ಯವಾದ ಫಲಾಹಾರಂಗಳನರ್ಪಿಸಿ
ಪ್ರದಕ್ಷಿಣವಂ ಮಾಡಿ, ಸ್ತುತಿಸಿ, ನಮಸ್ಕರಿಸಿ
ಹಸ್ತಪರುಶಮಂ ಮಾಡಿಕೊಂಡು, ಸಕಲಪದಾರ್ಥಂಗ[ಳ] ನೀಡಿ,
ವಿಭೂತಿಯಂ ಮುಂದಿಟ್ಟು ನಮಸ್ಕರಿಸಿ
ಕರವಂ ಮುಗಿದು ನಿಲ್ಲುವುದು ಭಕ್ತನಿಗೆ ಕರ್ತವ್ಯ.
ಇನ್ನು ಜಂಗಮದ ಪರಿಯ ಹೇಳಿಹೆನು ಕೇಳಿರಣ್ಣಾ:

ಜಂಗಮವೆ ಪರಾತ್ಪರ, ಜಂಗಮವೆ ಪರವಸ್ತು,
ಇಂತಪ್ಪ ಜಂಗಮ ಭಕ್ತನ ಮೇಲಣ ಕರುಣದಿಂ ತೀರ್ಥವನಿತ್ತ ಬಳಿಕ
ತಮ್ಮಿಷ್ಟಲಿಂಗ[ಕ್ಕೆ] ಕೊಟ್ಟುಕೊಂಬುದೆ ಜಂಗಮಕ್ಕೆ ಕರ್ತವ್ಯ. ಸಾಕ್ಷಿ:
"ಜಂಗಮಂ ಪರಾತ್ಪರಂ ಪಾದಾಂಗುಷ್ಠ ತೀರ್ಥಂ ತಥಾ
ಸ್ವಯಂ ಲಿಂಗಾರ್ಪಿತ ಪೀತ್ವಾ ಜಂಗಮಃ ಪರಮೇಶ್ವರಃ"
ಮತ್ತಂ
"ಸ್ವಪಾದೋದಕ ತೀರ್ಥಾಂ ಚ ಸ್ವಲಿಂಗಸ್ಯ ಸಮರ್ಪ[ಣಂ]
ಕೃತ್ವಾ ್ಯ ವಿಭೇದವದ್ಭಕ್ತಾ ್ಯ ಅರ್ಪಣೀಯಮನಂತರಂ"
ಇಂತೆಂಬ ಶ್ರುತ್ಯರ್ಥವನರಿಯದೆ ಬೇರೆ ತನಗೊಂದೆಡೆಯೆಂದು
ಗೊಣಸೆ ತೆಗೆದುಕೊಂಡು ಎಡೆಮಾಡು ಭಕ್ತಾ
ಎಂಬುದು ಜಂಗಮಕ್ಕೆ ಕ್ರಮವೆ? ಅಲ್ಲ.
ಅದು ಗಣಸಮೇಳಕ್ಕೆ ಅಲ್ಲದ ಮಾತು.
ಆತನ ಮಾತ ಕೇಳಿ ಎಡೆಮಾಡುವಾತ ಭಕ್ತನೆ? ಅಲ್ಲ.
ಇವರಿಬ್ಬರ ಮುಖವ ನೋಡಲಾಗದೆಂದನಂಬಿಗ ಚೌಡಯ್ಯ ॥೧೯೮॥

೨೧೦
ಭಕ್ತ ನಂಬಿದರೆ ಕೊಪ್ಪದ ರಾಮಯ್ಯನಂತೆ ನಂಬಬೇಕಯ್ಯಾ,
ಭಕ್ತ ನಂಬಿದರೆ ಕೆಂಭಾವಿ ಭೋಗಣ್ಣನಂತೆ ನಂಬಬೇಕಯ್ಯಾ,
ಭಕ್ತ ನಂಬಿದರೆ ಚೇದಿರಾಜಯ್ಯನಂತೆ ನಂಬಬೇಕಯ್ಯಾ,
ಭಕ್ತ ನಂಬಿದರೆ ಏಣಾದಿನಾಥನಂತೆ ನಂಬಬೇಕಯ್ಯಾ.
ಇಂತಪ್ಪ ನಂಬಿಗೆಗೆ ತಾನು ಸರಿಯೆಂದು, ಬೀದಿಯ ಪೋರನಂತೆ
ತನ್ನಯ ಮನದೊಳಗೊಂದು ಮಾತು, ಹೊರಗೊಂದು ಮಾತು,
ತುದಿನಾಲಗೆಯಲ್ಲಿ ಭಕ್ತರ ನಂಬಿದೆನೆಂದು ಗಳಹುವ
ಗೊಡ್ಡ ಹೊಲೆಯನ ಕಂಡೊಡೆ
ಎದೆ ಎದೆಯನು ಒದ್ದೊದ್ದು ತುಳಿಯೆಂದಾತ
ನಮ್ಮ ಅಂಬಿಗರ ಚೌಡಯ್ಯ. ॥೧೯೯॥

೨೧೧
ಭಟಂಗೆ ಭೀತಿ ಉಳ್ಳನ್ನಕ್ಕ ರಣವ ಹೊಗಬಲ್ಲನೆ?
ಬಲ್ಲವ ಅರಿಯದವರಲ್ಲಿ ಗೆಲ್ಲ ಸೋಲಕ್ಕೆ
ಹೋರುವನ್ನಬರ ಬಲ್ಲವನಹನೆ?
ಅರಿದು ನುಡಿಯಲಿಲ್ಲ, ಮರೆದು ಸುಮ್ಮನಿರಲಿಲ್ಲ.
ಆರು ಎಂದಂತೆ ಎನಲಿಲ್ಲ ಎಂದನಂಬಿಗ ಚೌಡಯ್ಯ. ॥೨೦೦॥

೨೧೨
ಭವವಿರಹಿತಂಗೆ ಕರ್ಮಂಗಳ ಕೇಳಲೇತಕ್ಕೆ?
ಕ್ರೀ ನಷ್ಟವಾದವಂಗೆ ಕೊಡುವ ಕೊಂಬುದನರಸಲೇತಕ್ಕೆ?
ನೋಡಿದಲ್ಲಿಯೆ ಸಂದಗುಣ,
ಮುಟ್ಟಿದಲ್ಲಿಯೇ ಅರ್ಪಿತವೆಂದನಂಬಿಗ ಚೌಡಯ್ಯ. ॥೨೦೧॥

೨೧೩
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಕೊರಳಿಗೆ ಕವಡೆಯ ಕಟ್ಟಿ ನಾಯಾಗಿ ಬೊಗಳುವರು!
ಅದಾವ ವಿಚಾರವಯ್ಯ?
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಬೇವಿನುಡಿಗೆಯನುಟ್ಟು ಹಡಲಿಗೆಯ ಹೊತ್ತು
'ಉಧೋ ಉಧೋ' ಎಂಬರು! ಅದಾವ ವಿಚಾರವಯ್ಯ?
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಹಗ್ಗಹುರಿ–ಬೆನ್ನಸಿಡಿ–ಬಾಯಬೀಗದಲ್ಲಿ ಹೋಗುವರು!
ಅದಾವ ವಿಚಾರವಯ್ಯ?
ಇಂಥ ಭವಿಮಾರ್ಗದಲ್ಲಿ ಚರಿಸುವ ಶಿವದ್ರೋಹಿಗಳಿಗೆ
ಲಿಂಗಧಾರಣವ ಮಾಡುವನೊಬ್ಬ ಗುರುದ್ರೋಹಿ,
ಅವರಿಗೆ ಚರಣೋದಕವ, ತಾ ಧರಿಸುವ ವಿಭೂತಿ–ರುದ್ರಾಕ್ಷಿಯ
ಕೊಡುವನೊಬ್ಬ ಲಿಂಗದ್ರೋಹಿ!
ಅವನು ಭಕ್ತನೆಂದು ಅವನ ಮನೆಯ ಹೊಕ್ಕು, ಮಂತ್ರವ ಹೇಳಿ,
ಅನ್ನವ ತಿಂದವನೊಬ್ಬ ಜಂಗಮದ್ರೋಹಿ!
ಇಂತೀ ನಾಲ್ವರಿಗೆ ಸೂರ್ಯಚಂದ್ರರುಳ್ಳನ್ನಕ್ಕ
ಎಕ್ಕಲಕೊಂಡದಲ್ಲಿಕ್ಕದೆ ಮಾಣ್ಬನೆ ಅಂಬಿಗರ ಚೌಡಯ್ಯನು? ॥೨೦೨॥

೨೧೪
ಭೂತ ಭೂತ ಹೊಡೆಯಿತೆಂದು ಬಾಯಿಗೆ ಬಂದ ಹಾಗೆ ಕೆಲೆದಾಡಿ
ಹಲಬರು ಮಂತ್ರಿಸಿ ಥೂಥೂ ಎಂದು ಉಗುಳಿ,
ಛೀ ಛೀ ಎಂದು ಉಗುಳಿ, ಜರಿದು ಝುಂಕಿಸಿ ಲಜ್ಜೆಗೆಡಿಸಿಕೊಂಬ
ಪಾತಕ ಕರ್ಮಿಗಳಿಗ್ಯಾಕೊ ಶಿವಸ್ತೋತ್ರ, ಶಿವಭಕ್ತಿ?
....ಬೆಂದು ನಾರು
ಬೇರು.. ॥೨೦೩॥

೨೧೫
ಭೇದವ ಭೇದಿಸುವ ಚಿತ್ತವ, ನಾದಬಿಂದು ಕಳೆಗೆ ಅತೀತವಪ್ಪ ಆತ್ಮನ,
ಅಡಗಿ ರಂಜಿಸುವ ಠಾವ ಕುರುಹುಗೊಂಡವನ
ಯೋಗಿಯೆಂದನಂಬಿಗ ಚೌಡಯ್ಯ. ॥೨೦೪॥

೨೧೬
ಭೋಗಕ್ಕೆ ಸಾಧನದ್ರವ್ಯ ಬಂದರೆ ಬೇಗ ಬೇಗ ಸಂಭ್ರಮಿಸುವರು,
ಬಾರದಿರ್ದರೆ ಕಂದುವರು ಕುಂದುವರು.
ಈ [ಉ]ಭಯದ ಸಂದಿನಲ್ಲಿ ಸಿಕ್ಕಿ ದಂದುಗಕ್ಕೊಳಗಾಗಿ
ಸಂದ[ಣಿ]ಗೊಂಬಾತಗೆಂದೆಂದಿಗೂ ಸಂಸಾರ ಬಿಡದು.
ಬೆಂದೊಡಲಿಗೇಕೆ ಈಸು ಸಡಗರವೆಂದಾತ
ನಮ್ಮಂಬಿಗರ ಚೌಡಯ್ಯ. ॥೨೦೫॥

೨೧೭
ಮಕ್ಕಳು ಮರಿಗಳು ಸತ್ತು ನಷ್ಟವಾಗಿ, ಕಷ್ಟ ದುಃಖ ನೆಲೆಗೊಂಡಿತ್ತೆಂದು
ತನ್ನಿಷ್ಟಲಿಂಗಪೂಜೆಯನಗಲಿಸಿ, ಬಿಟ್ಟಿಯ ಮಾಡಬಹುದೇನಯ್ಯಾ?
ಜಂಗಮವು ಬಂದು ತನ್ನ ವ್ರತ ನೇಮಕ್ಕೆ ಬೇಡಿದಡೆ
ನಿಮ್ಮ ಉಪದ್ರವೇನೆಂದು ಭಕ್ತಿಯ ಮಾಡಬಹುದೇನಯ್ಯಾ?
ಸಕಲದುಃಖಂಗಳು ತಮ್ಮಿಂದ ತಾವೇ ಬರಲರಿಯವು.
ಭಕ್ತಿಯನ್ನು ಮರೆದು, ಮರವೆಯಲ್ಲಿ ಬೆರೆದು,
ಭವಭವದಲ್ಲಿ ಬರುವುದು ಅದೇ ದುಃಖವು,
ನಿಶ್ಚಯವೆಂದಾತ ನಮ್ಮ ಅಂಬಿಗರ ಚೌಡಯ್ಯ. ॥೨೦೬॥

೨೧೮
ಮಡುವಿನಲ್ಲಿ ಮೊಗೆತಹೆನೆ? ಅಗ್ಗವಣಿ ಶುದ್ಧವಲ್ಲ.
ಗಿಡುವಿನ ಪುಷ್ಪವ ತಹೆನೆ? ಹೂ ನಿರ್ಮಾಲ್ಯ.
ಅಟ್ಟ ಅಡಿಗೆಯನಾದಡೆ ಮನ ಮುನ್ನವೆ ಉಂಡಿತ್ತು.
ನುಡಿವ ಶಬ್ದ ಎಂಜಲಾಯಿತ್ತು.
ಹಿಡಿಯೊಳಯಿಂಕೆ ಒಂದ ಕೊಂಡುಬಂದು
ಲಿಂಗವೆಂದು ಸಂಕಲ್ಪವ ಮಾಡಿದಡೆ
ಅದಕ್ಕೆ ಬೋನವ ಕೊಡಲೊಲ್ಲೆನೆಂದನಂಬಿಗ ಚೌಡಯ್ಯ. ॥೨೦೭॥

೨೧೯
ಮದ್ದ ತಿನ್ನಬೇಕಾದರೆ ವೈದ್ಯನಿದ್ದೆಡೆಗೆ ಹೋಗಿ,
ಹಣ ಹೊನ್ನು ಕೊಟ್ಟು, ದೈನ್ಯಂಬಟ್ಟು, ಮದ್ದ ತಿಂಬರು ನೋಡಯ್ಯ.
ಇದು ಶುದ್ಧಸಿದ್ಧಪ್ರಸಿದ್ಧಪ್ರಸಾದಕ್ಕೆ-ಎಂದು ಬಿನ್ನಹವ ಮಾಡದೆ,
ಅಹಂಕಾರದಲ್ಲಿ ತರಿಸಿಕೊಂಡುಂಬ ಗೊಡ್ಡಮೂಳನ
ಕಂಡಡೆ ಒದ್ದೊದ್ದು ಕೊಲ್ಲೆಂದಾತ ನಮ್ಮ ಅಂಬಿಗರ ಚೌಡಯ್ಯ. ॥೨೦೮॥

೨೨೦
ಮನ ಮಗ್ನವಾಗಿ, ಅರಿವನು ಘನಪ್ರಾಣಲಿಂಗದಲ್ಲಿ ಸವೆದು,
ತನುವನು ಕ್ರಿಯಾಚಾರವಿಡಿದು, ಇಷ್ಟಲಿಂಗದಲ್ಲಿ ಸವೆದು,
ಮಹಾನುಭಾವವನರಿತಂತಹ ವೀರಶೈವಸಂಪನ್ನರಾದ
ಶಿವಶರಣರಿಗೆ ಸಂಸಾರಿಗಳೆನ್ನಬಹುದೆ ಅಯ್ಯ?
ಹೊನ್ನು-ಹೆಣ್ಣು-ಮಣ್ಣೆಂಬ ತ್ರಿವಿಧಪದಾರ್ಥಂಗಳ ವಿವರಿಸಿ,
ಇಷ್ಟ-ಪ್ರಾಣ-ಭಾವವೆಂಬ ಮೂರು ಲಿಂಗದ ಮುಖವನರಿದರ್ಪಿಸಿ,
ಆರು ಲಿಂಗದನುವಿನಲ್ಲಿ ಕೈಕೊಂಡು,
ಬಂದ ಬಂದ ಸಕಲಪದಾರ್ಥವನು ಅದರ ಪೂರ್ವಾಶ್ರಯವಳಿದು,
ಶಿವಪ್ರಸಾದವೆಂದು ಅನುಭವಿಸುತಿರ್ಪರು.
ಅಂತಪ್ಪ ನಿರುಪಮ, ನಿರ್ಭೇದ್ಯ, ನಿರಾಳ, ನಿಃಶೂನ್ಯಪರಮಪ್ರಸಾದಿಗಳಿಗೆ
ಸಂಸಾರಿಗಳೆಂದು ನುಡಿವ ಅಜ್ಞಾನಿಸಂದೇಹಿಗಳು
ಅಘೋರನರಕದಲ್ಲಿ ಮುಳುಗುವರೆಂದಾತನಂಬಿಗರ ಚೌಡಯ್ಯ ॥೨೦೯॥

೨೨೧
ಮರ ಬೇರು ಸಾರದಿಂದ ನಾನಾ ಶಾಖೆಗಳು ಪ[ಲ್ಲವಿ]ಸುವ ತೆರನಂತೆ,
ಜೀವಭಾವಮೂಲದಿಂದ ಸಕಲೇಂದ್ರಿಯ ಹೆಚ್ಚುಗೆ ಅಹಂತೆ,
ಮರಕ್ಕೆ ಬೇರು ನಷ್ಟದಿಂದ ಶಾಖೆ ನಷ್ಟ,
ಜೀವಕ್ಕೆ ಪ್ರಕೃತಿ ನಷ್ಟದಿಂದ ಇಂದ್ರಿಯ ನಷ್ಟ
ಎಂದನಂಬಿಗ ಚೌಡಯ್ಯ. ॥೨೧೦॥

೨೨೨
ಮರುಳ ಕಂಡ ಕನಸಿನಂತೆ, ಆಕಾಶದಲ್ಲಿ ತೋರುವ ಲಿಪಿಯಂತೆ,
ಕಂಡುದಕ್ಕೆ ರೂಪಾಗಿ, ಹಿಡಿವುದಕ್ಕೆ ಒಡಲಿಲ್ಲದೆ ನಿಂದ
ಭಾವ ನಿರಂತರ ಸುಖಿಯೆಂದನಂಬಿಗ ಚೌಡಯ್ಯ. ॥೨೧೧॥

೨೨೩
ಮಸ್ತಕದಲ್ಲಿ ರುದ್ರಾಕ್ಷಿಯಂ ಧರಿಸಿ
ಅನ್ಯದೈವದ ಗುಡಿಯ ಹೊಗಲಾಗದು ಶರಣ.
ಕರಣಂಗಗಳಲ್ಲಿ ರುದ್ರಾಕ್ಷಿಯಂ ಧರಿಸಿ
ಹರನಿಂದೆ ಗುರುನಿಂದೆಯ ಕೇಳಲಾಗದು ಶರಣ.
ತೋಳುಗಳಲ್ಲಿ ರುದ್ರಾಕ್ಷಿಯಂ ಧರಿಸಿ
ಪರಸತಿಯನಪ್ಪಲಾಗದು ಶರಣ.
ಮುಂಗೈಯಲ್ಲಿ ರುದ್ರಾಕ್ಷಿಯಂ ಧರಿಸಿ
ಅನ್ಯರಿಗೆ ಕೈಮುಗಿಯಲಾಗದು ಶರಣ.
ಇದನರಿದು ಧರಿಸಿದಡೆ ಶ್ರೀರುದ್ರಾಕ್ಷಿಯಹುದು.
ಅಂತಲ್ಲದಿರ್ದಡೆ, [ಡ]ಂಬ ಹಗರಣವ ಹೊತ್ತು ಬಂದಂತೆ
ಎಂದಾತನಂಬಿಗರ ಚೌಡಯ್ಯ. ॥೨೧೨॥

೨೨೪
ಮಹಾಘನಲಿಂಗದ ನಿಜಘನವೆಂಬ ಚಿದ್ಘನಾತ್ಮಕ
ಶರಣನ ಲೀಲೆಯಿಂದ ಮಹಾಜ್ಯೋತಿ ಹುಟ್ಟಿತ್ತು,
ಆ ಜ್ಯೋತಿಯ ಬೆಳಗಿನಲ್ಲಿ
ಅರಿವು ಮರವೆಂಬ ಭೂತಾತ್ಮ ಮಹಾತ್ಮಂಗಳು ಹುಟ್ಟಿದವು.
ಆತ್ಮಂಗಳಿಂದ ಜ್ಞಾನಾತ್ಮ, ಶುದ್ಧಾತ್ಮ, ನಿರ್ಮಲಾತ್ಮ,
ಪರಮಾತ್ಮ, ಅಂತರಾತ್ಮ, ಜೀವಾತ್ಮಂಗಳು ಹುಟ್ಟಿದವು.
ಆ ಜ್ಞಾನಾತ್ಮನಲ್ಲಿ ಮಹಾನುಭಾವಜ್ಞಾನಂಗಳು ಹುಟ್ಟಿ ತ್ರಿಯಕ್ಷರಾದವು.
ಆ ತ್ರಿಯಕ್ಷರಂಗಳಲ್ಲಿ ಓಂಕಾರ ಹುಟ್ಟಿತ್ತು.
ಆ ಓಂಕಾರದಲ್ಲಿ ಪಂಚಾಕ್ಷರಂಗಳು ಹುಟ್ಟಿದವು.
ಆ ಪಂಚಾಕ್ಷರಂಗಳಲ್ಲಿ ಐವತ್ತೆರಡು ಅಕ್ಷರಂಗಳು ಹುಟ್ಟಿದವು.
ಇಂತೀ ಅಕ್ಷರಂಗಳೆಲ್ಲವನು ಷಡಾತ್ಮಕರ ಪ್ರಾಣವೆಂದಾತ
ನಮ್ಮ ಅಂಬಿಗರ ಚೌಡಯ್ಯ. ॥೨೧೩॥

೨೨೫
ಮಳಲ ಮರೆಯ ನೀರ ಒಲವರವಿಲ್ಲದೆ ತೋಡಿ,
ಚಿಲುಮೆಯ ಶೀಲವಂತರೆಂದು ಹಲುಬುತ್ತಿರಲೇತಕ್ಕೆ?
ಸಲೆ ವಸ್ತುವನರಿತು ತ್ರಿವಿಧದ ಹೊಲಬಿನಾಸೆಯ ಬಿಟ್ಟು ಸಲೆ ಗೆದ್ದಡೆ,
ಬೇರೊಂದು ಹೊಲಬ ತೋರಿಹೆನೆಂದನಂಬಿಗ ಚೌಡಯ್ಯ. ॥೨೧೪॥

೨೨೬
ಮಾಡುವ ಭಕ್ತಂಗೆ ಮನವೆ ಸಾಕ್ಷಿ,
ಹೊರಹೊಮ್ಮಿ ಬಯಲ ಹರಹಲೇನು?
ಹಮ್ಮಿಲ್ಲದೆ ಮಾಡಿ, ಮನದಲ್ಲಿ ಮರುಗದಿದ್ದಡೆ,
ಅಲ್ಲಿ ತಾ ತೆರಹಿಲ್ಲದಿಪ್ಪನಂಬಿಗ ಚೌಡಯ್ಯ. ॥೨೧೫॥

೨೨೭
ಮಾತಿನ ವೇದ, ನೀತಿಯ ಶಾಸ್ತ್ರ, ಘಾತಕದ ಕಥೆ
ಕಲಿವುದಕ್ಕೆ ಎಷ್ಟಾದಡೂ ಉಂಟು.
ಅಜಾತನ ಒಲುಮೆ, ನಿಶ್ಚಯವಾದ ವಾಸನೆಯ ಬುದ್ಧಿ,
ತ್ರಿವಿಧದ ಆಸೆಯಿಲ್ಲದ ಚಿತ್ತ, ಸರ್ವರಿಗೆ ಹೇಸಿಕೆಯಿಲ್ಲದ ನಡೆನುಡಿ
ಇಷ್ಟಿರಬೇಕೆಂದನಂಬಿಗ ಚೌಡಯ್ಯ. ॥೨೧೬॥

೨೨೮
ಮಾತುಗಂಟಿತನದಿಂದ ಎಷ್ಟು ಮಾತನಾಡಿದಡೇನು?
ಕಾಮಿನಿಯರ ಕಾಲದೆಸೆ ಸಿಕ್ಕಿ, ಕ್ರೋಧದ ದಳ್ಳುರಿಯಲ್ಲಿ ಬೆಂದು,
ಆಸೆಯೆಂಬ ಪಾಶ ಕೊರಳಲ್ಲಿ ಸುತ್ತಿ,
ಅದೇಕೊ, ಅದೇತರ ಮಾತೆಂದನಂಬಿಗ ಚೌಡಯ್ಯ. ॥೨೧೭॥

೨೨೯
ಮಾತೆ ಸೂತಕವಾಗಿ ಸಂದೇಹವ ಮಾಡುವಲ್ಲಿ
ಅದೇತರಿಂದ ಒದಗಿದ ಕುರುಹು?
ಶಿಲೆಯ ಪ್ರತಿಷ್ಠೆಯ ಮಾಡಿ,
ತನ್ನ ಒಲವರ ವಿಶ್ವಾಸದಿಂದ ಬಲಿಕೆಯನರಿವುದು
ಶಿಲೆಯೊ? ಮನವೊ? ಎಂದನಂಬಿಗ ಚೌಡಯ್ಯ. ॥೨೧೮॥

೨೩೦
ಮಾಯೆಯ ಬಸುರಲ್ಲಿ ಬಂದಾತ ಮಹೇಶ,
ದೇವಕಿಯ ಬಸುರಲ್ಲಿ ಬಂದಾತ ವಿಷ್ಣು,
ಹೂವಿನ ಬಸುರಲ್ಲಿ ಬಂದಾತ ಬ್ರಹ್ಮ,
ಮರುತದೇವಿಯ ಬಸುರಲ್ಲಿ ಬಂದಾತ [ಅರುಹ].
ಇವರು ದೇವರೆಂದು ನಂಬಿ ಪೂಜಿಸಿದಡೆ ಭವ ಅಳಿಯದು,
ಮುಕ್ತಿಯಾಗದೆಂದಾತನಂಬಿಗ ಚೌಡಯ್ಯ. ॥೨೧೯॥

೨೩೧
ಮೂರುವ ಮುಟ್ಟದೆ, ನಾಲ್ಕುವನಂಟದೆ, ಐದುವನೆಯ್ದಲುಬೇಡ ಕಂಡಾ.
ಆರುವ ಜಾಳಿಸಿ, ಏಳುವ ಹಿಡಿಯದೆ, ಎಂಟುವ ಗಂಟಿಕ್ಕಬೇಡ ಕಂಡಾ.
ಒಂಬತ್ತು ಬಾಗಿಲ ಹಿಂದಿಕ್ಕಿ ಹೋದಡೆ
ಅಂಬಿಗ ಚೌಡಯ್ಯನ ಉಪದೇಶವಯ್ಯಾ. ॥೨೨೦॥

೨೩೨
ಮೂರು ಸ್ಥಲದ ಮೂಲವನರಿಯರು,
ಪುಣ್ಯಪಾಪವೆಂಬ ವಿವರವನರಿಯರು.
ಇಹಪರವನರಿಯದೆ ಚರ್ಮದ ಬೊಂಬೆಯ ಮೆಚ್ಚಿ
ಉಚ್ಚೆಯ ಬಚ್ಚಲಲ್ಲಿ ಬಿದ್ದಿರ್ಪ
ಕರ್ಮದ ಸುನಿಗಳನೆಂತು ದೇವರೆಂಬೆನಯ್ಯಾ ?
ಹೊನ್ನು ವಸ್ತ್ರವ ಕೊಡುವವ[ನ] ಬಾಗಿಲ ಕಾಯ್ವ
ಪಶುಪ್ರಾಣಿಗಳಿಗೆ ದೇವರೆನ್ನಬಹುದೇನಯ್ಯಾ ?
ಜಗದ ಕರ್ತನಂತೆ ವೇಷವ ಧರಿಸಿಕೊಂಡು ಸರ್ವವನು ಬೇಡಲಿಕೆ
ಕೊಟ್ಟರೆ ಒಳ್ಳಿದನು, ಕೊಡದೆ ಇದ್ದರೆ
ಪಾಪಿ, ಚಾಂಡಾಲ, ಅನಾಚಾರಿ ಎಂದು ದೂಷಿಸಿ
ಒಳಹೊರಗೆಂದು ಬೊಗಳುವ ಮೂಳಮಾನವರಿಗೆ
ಮಹಾಂತಿನ ಆಚರಣೆ ಎಲ್ಲಿಯದೊ ?
ಇಲ್ಲವೆಂದಾತ ನಮ್ಮಂಬಿಗರ ಚೌಡಯ್ಯ. ॥೨೨೧॥

೨೩೩
ಮೃಡನನೊಲಿಸಿ[ಹೆ]ನೆಂದು ನುಡಿವ ನಾಲಗೆಯೆಡಹಿತೆಯಲ್ಲಿ ಕಲ್ಲು ಕೊರಡೆ?
ಒಡಲಿಂಗೆ ಹೆಣ್ಣು ಹೊನ್ನು ಮಣ್ಣು ಅಡ್ಡಬಿದ್ದು ಕೊಲುವಾಗ,
ನಡೆವ ಗಂಡರುಂಟೇ ಶಿವಪಥಕ್ಕೆ?
ತನ್ನೊಡಲೊಳಗಣನ್ನವು ಮರಳಿದೆಡೆಗೆ ಹೇಸುವಂತೆ ಹೇಸಿ ಬಿಟ್ಟಡೆ,
ನಡೆದು ಶಿವನ ಕೂಡು[ವ]ನೆಂದಾತನಂಬಿಗ ಚೌಡಯ್ಯ. ॥೨೨೨॥

೨೩೪
ಮೊಟ್ಟೆ ಮೊಟ್ಟೆ ಪತ್ರೆಯ ತಂದು ಒಟ್ಟಿ,
ಪೂಜಿಸಿದ[ಡೇ]ನು ಮನಶುದ್ಧವಿಲ್ಲದನ್ನಕ್ಕರ ?
ಮನಮಗ್ನವಾಗಿ ಶಿವಧ್ಯಾನದಲ್ಲಿ ಕೂಡಿ,
ಒಂದೇ ದಳವ ಧರಿಸಿದರೆ ಶಿವನು ಒಲಿಯನೆ?
ಇಂತು ಪೂಜೆಯ ಮಾಡುವುದಕ್ಕಿಂತಲು

ಅದೇ ತೊಪ್ಪಲನು ಕುದಿಸಿ ಪಾಕವ ಮಾಡಿದಲ್ಲಿ
ಆ ಲಿಂಗವು ತೃಪ್ತಿಯಾಯಿತ್ತು.
ಬರಿದೆ ಲಿಂಗವ ಪೂಜಿಸಿ ಜಂಗಮಕ್ಕೆ ಅನ್ನವ ಕೊಡದೆ,
ಲಿಂಗದ ಮುಖವು ಜಂಗಮವು ಎಂದು ತಿಳಿಯದೆ,
ತನು-ಮನ-ಧನವನು ಗುರು-ಲಿಂಗ-ಜಂಗಮಕ್ಕೆ ಸವೆಸದೆ,
ಬಾಗಿಲಿಗೆ ಕಾವಲಿಕ್ಕಿ, ಹೆಂಡಿರು ಮಕ್ಕಳು ಕೂಡಿಕೊಂಡು,
ತನ್ನ ತಾನೇ ತಿಂಬುವಂಥ ನೀಚ ಹೊಲೆಯರ ಮೂಗ ಸವರಿ
ಮೆಣಸಿನ ಹಿಟ್ಟು ತುಪ್ಪವ ತುಂಬಿ,
ಪಡಿಹಾರಿ ಉತ್ತಣ್ಣಗಳ ಪಾದುಕೆಯಿಂದ ಹೊಡಿ ಎಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. ||೨೨೩||

೨೩೫

ರತಿಯಿಂದ ರತ್ನ, ಗತಿಯಿಂದ ವಾದ್ಯ,
ಸದ್ಗತಿಯಿಂದ ಮುಕ್ತಿ, ನಿರ್ಗತಿಯಿಂದ ವಿರಕ್ತಿ.
ಈ ನಾಲ್ಕರ ಮತಿಯ ತಿಳಿಯಬೇಕೆಂದನಂಬಿಗ ಚೌಡಯ್ಯ. ||೨೨೪||

೨೩೬

ರತಿಯೆಂಬುದೆ ಪ್ರಾಣ, ಘಟವೆಂಬುದೆ ಕಲ್ಲು.
ಪ್ರಾಣವಿಲ್ಲದ ಘಟ, ಜ್ಞಾನವಿಲ್ಲದ ಕ್ರೀ,
ಈ ಉಭಯಕ್ಕೂ ನಾನಾರೆಂಬುದ
ತಾನರಿಯಬೇಕೆಂದನಂಬಿಗ ಚೌಡಯ್ಯ. ||೨೨೫||

೨೩೭

ಲಿಂಗತನುವಿಗೆ ಆತ್ಮತೇಜದ ಅಹಂಕಾರವುಂಟೆ?
ಸದ್ಭಕ್ತಂಗೆ ಹುಸಿ, ಕುಹಕ, ಕ್ಷಣಿಕತ್ವ, ಅಸಿಘಾತಕದ ದೆಸೆವುಂಟೆ?
ಇಂತಿವರ ದೆಸೆಯ ಹೊದ್ದನೆಂದನಂಬಿಗ ಚೌಡಯ್ಯ. ||೨೨೬||

೨೩೮

ಲಿಂಗತನುವಿಂಗೆ ಶೃಂಗಾರವಪ್ಪ ತೆರನಾವುದೆಂದಡೆ:
ಕಾಮ ಕ್ರೋಧ ಲೋಭ ಮೋಹಾದಿಗಳಲ್ಲಿ ತೆರಪುಗೊಡದಿಪ್ಪುದು.
ಲಿಂಗವೆ ಅಂಗವಾಗಿ, ಧ್ಯಾನ ಧಾರಣ ನಿಜವಾಸ ನಿವಾಸವಾಗಿ,
ನಿಶ್ಚಯ ನಿಜತತ್ವವಾಗಿ ನಿಂದುದೆ
ಆಭರಣವೆಂದನಂಬಿಗ ಚೌಡಯ್ಯ. ||೨೨೭||

೨೩೯

ಲಿಂಗದೊಳಗೆ ಜಂಗಮ ಸಲೆ ಸಂದಿರಬೇಕು,
ಜಂಗಮದೊಳಗೆ ಲಿಂಗವು ಸಲೆ ಸಂದಿರಬೇಕು.
ಅಂಗ–ಪ್ರಾಣಂಗಳಲ್ಲಿ ಲಿಂಗವ ಹಿಂಗಿರ್ದ ಜಂಗಮವು
ಮುಂದೆ ಚರ–ಪರವಲ್ಲ.
ಹಿಂದೆ ಗುರುಕರುಣಕ[ನ]ಲ್ಲವೆಂದನಂಬಿಗರ ಚೌಡಯ್ಯ. ॥೨೨೮॥

೨೪೦

ಲಿಂಗ ಬಿತ್ತು ಎತ್ತು ಎಂಬಿರಿ, ಆ ಲಿಂಗ ಬಿದ್ದರೆ ಈ ಭೂಮಿ ತಾಳಬಲ್ಲುದೆ?
ಲಿಂಗವಿರುವುದು ಹರಗುರು ಪಾರಾಯಣ,
ಲಿಂಗವಿರುವುದು ತೆಂಗಿನ ಮರದಲ್ಲಿ,
ಲಿಂಗವಿರುವುದು ಜಂಗಮನ ಅಂಗುಷ್ಠದಲ್ಲಿ,
ಲಿಂಗವಿರುವುದು ಊರ ಹಿರೇ ಬಾಗಿಲಲ್ಲಿ.
ಇಂತಿಪ್ಪ ಲಿಂಗ ಬಿಟ್ಟು, ಸಂತೆಗೆ ಹೋಗಿ
ಮೂರು ಪಾಕಿ ಲಿಂಗವ, ಆರು ಪಾಕಿ ವಸ್ತ್ರವ ತಂದವಂಗೆ
ಪಾದೋದಕವಿಲ್ಲ, ಪ್ರಸಾದವಿಲ್ಲ, ಮಂತ್ರವಿಲ್ಲ, ವಿಭೂತಿಯಿಲ್ಲ, ರುದ್ರಾಕ್ಷಿಯಿಲ್ಲ.
ಇಂತಪ್ಪ ಲಿಂಗ ಕಟ್ಟಿದವನೊಬ್ಬ ಕಳ್ಳನಾಯಿ,
ಕಟ್ಟಿಸಿಕೊಂಡವನೊಬ್ಬ ಕಳ್ಳನಾಯಿ.
ಇಂತಪ್ಪ ನಾಯಿಗಳನು ಹಿಡಿತಂದು ಮೂಗನೆ ಕೊಯ್ದು,
ನಮ್ಮ ಕುಂಬಾರ ಗುಂಡಯ್ಯನ ಮನೆಯ
ಕರಿ ಕತ್ತೆಯನು ತಂದು ಊರಲ್ಲೆಲ್ಲ ಮೆರೆಯಿಸಿ
ನಮ್ಮ ಮಾದಾರ ಹರಳಯ್ಯನ ಮನೆಯ
ಹನ್ನೆರಡು ಜೋಡು ಹಳೆಯ ಪಾದರಕ್ಷೆಗಳನು ತಂದು
ಮುದ್ದುಮುಖದ ಮೇಲೆ ಶುದ್ಧವಾಗಿ ಹೊಡೆಯೆಂದಾತ
ನಮ್ಮ ಅಂಬಿಗರ ಚೌಡಯ್ಯ. ॥೨೨೯॥

೨೪೧

ಲಿಂಗವನರಿದೆಹೆನೆಂದಡೆ ಗುರುವಿಗೆ ಹಂಗು,
ಗುರುವನರಿದೆಹೆನೆಂದಡೆ ಲಿಂಗದ ಹಂಗು,
ಉಭಯವ ಮೀರಿ ಕಂಡೆಹೆನೆಂದಡೆ ಬೇರೊಂದೊಡಲುಂಟು.
ಒಡಲು ಒಡೆದಲ್ಲದೆ ಬೇರೊಂದೆಡೆಯಿಲ್ಲ ಎಂದನಂಬಿಗಚೌಡಯ್ಯ ॥೨೩೦॥

೨೪೨

ಲಿಂಗವೆಂಬುದು ಕಾಯದ ತೊಡಕು,
ಗುರುವೆಂಬುದು ಭಾವದ ತೊಡಕು,
ಜಂಗಮವೆಂಬುದು ಮೂರರ ತೊಡಕು,
ಜ್ಞಾನಮಯವೆಂಬುದು ಸರ್ವಮಯವೆಲ್ಲರ ತೊಡಕು.
ಒಂದ ಮೆಟ್ಟಿ, ಒಂದ ಕಂಡು, ಒಂದಕ್ಕೆ ಸಂದೇಹವಿಲ್ಲದೆ ನಿಂದುದು.
ಹಿಂದಳ ಮುಂದಳ ದಂದುಗವಿಲ್ಲ ಎಂದನಂಬಿಗ ಚೌಡಯ್ಯ ॥೨೩೧॥

೨೪೩

ಲಿಂಗವೆಲ್ಲಿರದು, ವೇಶಿಯ ಭುಜದಲ್ಲಿರದೆ?
ಲಿಂಗವೆಲ್ಲಿರದು, ಪಶುವಿನ ತೊಡೆಯಲ್ಲಿರದೆ?
ಲಿಂಗವೆಲ್ಲಿರದು, ಸೀಮೆಯ ಕಲ್ಲಿನಲ್ಲಿರದೆ?
ಲಿಂಗವೆಲ್ಲಿರದು, ತರುವಿನ ಬುಡದಲ್ಲಿರದೆ?
ಲಿಂಗವಿದ್ದಲ್ಲಿ ಫಲವೇನು? ಆಚಾರವಿಲ್ಲದನ್ನಕ್ಕ.
ಆಚಾರವಿದ್ದು ಫಲವೇನು? ಲಿಂಗವಿಲ್ಲದನ್ನಕ್ಕ.
ಅಂಗದ ಮೇಲೆ ಲಿಂಗವುಳ್ಳವರ ಭಕ್ತರೆಂಬವರ
ಬಾಯಲ್ಲಿ ಹೇಲಡಿಯ ಹುಡಿಯ ಹಾಕದೆ ಮಾಣ್ಬನೆ
ಎಂದನಂಬಿಗರ ಚೌಡಯ್ಯ. ॥೨೩೨॥

೨೪೪

ಲೋಹ ಗುಂಡಾದಲ್ಲಿ ಇರಿಯಬಲ್ಲುದೆ?
ಮುದ್ರೆಯ ಪಶು ದಿಟ ಪ್ರಾಣಲಿಂಗಿಯಾಗಬಲ್ಲನೆ?
ಡಾಗಿನ ಪಶುಗಳೆಲ್ಲರೂ ಭೇದವನರಿಯಬಲ್ಲರೆ?
ಎಂದನಂಬಿಗ ಚೌಡಯ್ಯ. ॥೨೩೩॥

೨೪೫

ವಚನಾರ್ಥವ ಕಂಡಹರೆಂದು ರಚನೆಯ ಮರೆಮಾಡಿ ನುಡಿಯಲೇತಕ್ಕೆ?
ದಾರಿಯಲ್ಲಿ ಸರಕು ಮರೆಯಲ್ಲದೆ, ಮಾರುವಲ್ಲಿ ಮರೆ ಉಂಟೆ?
ತಾನರಿವಲ್ಲಿ ಮರೆಯಲ್ಲದೆ
ಬೋಧೆಗೆ ಮರೆಯಿಲ್ಲ, ಎಂದನಂಬಿಗ ಚೌಡಯ್ಯ. ॥೨೩೪॥

೨೪೬

ವಸ್ತುವ ಕಾಬರೆಲ್ಲರು
ಆತ್ಮ ಹಲವು ಬಗೆ ಎಂದಡೆ, ಹಲವಾದುದುಂಟೆ?
ಒಂದು ಕುಂಭದ ನೀರು ಹಲವು ರಂಧ್ರಗಳಲ್ಲಿಳಿವುದು.
ಅದು ಕುಂಭದ ಭೇದವೋ? ಜಲದ ಭೇದವೋ?
ಈ ಉಭಯ ಭೇದವ ತಿಳಿದಲ್ಲಿ
ಆತ್ಮನೊಂದೆಯೆಂದನಂಬಿಗ ಚೌಡಯ್ಯ. ॥೨೩೫॥

೨೪೭

ವಿಹಂಗಂಗೆ ಗುರಿಯಾಸೆಯೆಂದಡೆ ಸಂಚಾರವಿಲ್ಲದೆ ಚರಿಸಬಹುದೆ?
ಅರಿವಿಂಗೆ ಕುರುಹಿನಾಸೆಯೆಂದಡೆ,
ಆ ಅರಿವು ಕುರುಹಿನೊಳಗಾದ ಮತ್ತೆ,
ಬೇರೊಂದು ಕುರುಹೆಂಬ ನಾಮವುಂಟೆ?
ಚಿತ್ರದ ಬೊಂಬೆಗಳಿದ್ದ ಮನೆ ಕಿಚ್ಚೆದ್ದು ಬೇವಲ್ಲಿ
ಬೊಂಬೆಯ ಹೊತ್ತಿದ ಕಿಚ್ಚು ಚಿತ್ರವಾಗಿ ಉರಿವುದೆ?
ನಿಶ್ಚಯವನರಿದ ನಿಜಾತ್ಮನು
ಮತ್ತೆ ಕತ್ತಲೆಯ ಹೊಗನೆಂದನಂಬಿಗ ಚೌಡಯ್ಯ. ॥೨೩೬॥

೨೪೮

ವೀರಂಗೆ ರಣಾಗ್ರದ ಕದನ ಭೋರೆಂದು ಕಟ್ಟಿದಲ್ಲಿ
ದೂರದಲ್ಲಿರ್ದೆಸೆವನೊಂದಂಬಿನಲ್ಲಿ. ಸೇರಿಬಂದರೆ ಹೊಯಿವ ಬಿಲ್ಲಿನಲ್ಲಿ.
ಅವು ಮೀರಿ ಬಂದಲಿ ಇರಿವ ಕಠಾರಿಯಲ್ಲಿ.
ಅದು ತಪ್ಪಿದಲ್ಲಿ ತೆಕ್ಕೆಯಲ್ಲಿ ಪಿಡಿವ, ಯುದ್ಧದಲ್ಲಿ ಬಿದ್ದಲ್ಲಿ ಕಡಿವ ಬಾಯಲ್ಲಿ.
ಇಂತೀ ಅವರ ಪ್ರಾಣಕ್ಕೆ ಬಂದಲ್ಲಿ ಅವ ತನ್ನ ಧೈರ್ಯ, ವ್ರತವರತುದಿಲ್ಲ.
ಹೀಂಗಿರಲಿಲ್ಲವೆ ಸದ್ಭಕ್ತನ ಗುಣ?
ಹೊನ್ನು ಹೆಣ್ಣು ಮಣ್ಣುಳ್ಳ ಕಾಲದಲ್ಲಿಯೇ ಪನ್ನಗಧರನ ಶರಣರಿಗೆ
ಅನ್ನೋದಕ ವಸ್ತ್ರಂಗಳಿಂದುಪಚಾರವ ಮಾಡುವುದು. ಅದು ಖಂಡಿತವಾದರೆ
ನೀಡಿ ಮಾಡುವ ಭಕ್ತರ ಮಠದ ಒಡಗೊಂಡು ಹೋಗಿ ತೋರುವುದು.
ಅದಕ್ಕಾಗದಿರ್ದಡೆ ಹರಶರಣರ ಕಮಂಡಲ ಕೊಂಡುಹೋಗಿ
ಮಡುವಿನಲ್ಲಿ ಅಗ್ಘವಣಿಯ ತಂದು, ಪಾದವ ತೊಳವುದು.
ಅದಕ್ಕಾಗದಿರ್ದಡೆ ಶಿವಶರಣರ ಕಂಡು, ಇದಿರೆದ್ದು ನಮಸ್ಕರಿಸುವುದು.
ಇಷ್ಟರೊಳಗೊಂದು ಗುಣವಿಲ್ಲದಿರ್ದರೆ ಅವ ಭಕ್ತನಲ್ಲ,
ಅವ ಹೊಲೆಯನೆಂದಾತ ನಮ್ಮ ಅಂಬಿಗರ ಚೌಡಯ್ಯ. ॥೨೩೭॥

೨೪೯

ವೇದಂಗಳೆಲ್ಲ ಬ್ರಹ್ಮನೆಂಜಲು, ಶಾಸ್ತ್ರಂಗಳೆಲ್ಲ ಸರಸ್ವತಿಯೆಂಜಲು,
ಆಗಮಂಗಳೆಲ್ಲ ರುದ್ರನೆಂಜಲು, ಪುರಾಣಂಗಳೆಲ್ಲ ವಿಷ್ಣುವಿನೆಂಜಲು,
ನಾದಬಿಂದುಕಳೆಗಳೆಂಬವು ಅಕ್ಷರತ್ರಯದೆಂಜಲು,
ಅಕ್ಷರತ್ರಯಂಗಳು ಪ್ರಕೃತಿಯ ಎಂಜಲು.
ಇಂತಿವೆಲ್ಲವ ಹೇಳುವರು ಕೇಳುವರು
ಪುಣ್ಯಪಾಪಂಗಳೆಂಜಲೆಂದಾತನಂಬಿಗರ ಚೌಡಯ್ಯ. ॥೨೩೮॥

೨೫೦

ವೇದದಲುಳ್ಳಡೆ ಪ್ರಾಣಿವಧೆಯಪ್ಪುದೆ? ಶಾಸ್ತ್ರದಲುಳ್ಳಡೆ ಸಮಯವಾದವಪ್ಪುದೆ?
ಪರ್ವತದಲುಳ್ಳಡೆ ಹೋದವರು ಬಹರೆ? ನಿರ್ಬುದ್ಧಿಮಾನವರನೇನೆಂಬೆ!
ಮನ, ವಚನ, ಕಾಯಶುದ್ಧಿಯಾಗಿಪ್ಪಾತನ ಹೃದಯದಲಿ
ನಿಮ್ಮ ಕಂಡೆನೆಂದನಂಬಿಗ ಚೌಡಯ್ಯ. ॥೨೩೯॥

೨೫೧

ವೇದವನೋದಿದವರು ವಿಧಿಗೊಳಗಾದರಲ್ಲದೆ
ದೇವರಿಹ ಠಾವನರಿದಿಪ್ಪುದಿಲ್ಲ.
ಶಾಸ್ತ್ರವನೋದಿದವರು ಸಂಶಯಕ್ಕೊಳಗಾದವರಲ್ಲದೆ
ಸದ್ಗುರುವನರಿದುದಿಲ್ಲ.
ಆಗಮವನೋದಿದವರೆಲ್ಲರು ಆಗುಚೇಗಿಗೆ ಒಳಗಾದರಲ್ಲದೆ
ಆದಿ ಅನಾದಿಯಿಂದತ್ತಣ ಶರಣ-ಲಿಂಗ ಸಂಬಂಧವನರಿದುದಿಲ್ಲ.
ಪುರಾಣವನೋದಿದವರೆಲ್ಲರು ಪೂರ್ವದ ಬಟ್ಟೆಗೊಳಗಾದವರಲ್ಲದೆ
ಪೂರ್ವದ ಕರ್ಮವ ಹರಿದು ಪುರಾತನರನರಿದುದಿಲ್ಲ.
ಇಂತಿವರೆಲ್ಲರು ಚರಶೇಷವ ಲಿಂಗಕ್ಕರ್ಪಿಸಲರಿಯರಾಗಿ
ಇವರಿಗೆ ಲಿಂಗವು ಕಾಣಿಸದೆಂದಾತ ನಮ್ಮ ಅಂಬಿಗರ ಚೌಡಯ್ಯ. ॥೨೪೦॥

೨೫೨

ವೇದವ ಪಠಿಸುವಲ್ಲಿ, ಶಾಸ್ತ್ರವನೋದುವಲ್ಲಿ,
ಆಗಮಂಗಳ ತಿಳಿವಲ್ಲಿ, ಶಿವಜ್ಞಾನ ಅನುಭಾವವ ಮಾಡುವಲ್ಲಿ,
ಪಗುಡಿ ಪರಿಹಾಸಕರ ಅರ್ತಿಕಾರರ
ಹೊತ್ತಹೋಕರಿಗಾಗಿ ಸಂಘಟ್ಟುವರ ಕೂಡಲುಂಟೆ?
ಇಂತಿವರಲ್ಲಿ ಚಚ್ಚಗೊಟ್ಟಿಯ ಮಾಡುವ
ಮಿಟ್ಟೆಯ ಭಂಡರನೊಪ್ಪನೆಂದನಂಬಿಗ ಚೌಡಯ್ಯ. ॥೨೪೧॥

೨೫೩
ವೇದವೇದಾಂತರ, ಶಾಸ್ತ್ರಸಂಪದರ, ಆಗಮಕ್ಕತೀತರ,
ಪರಬ್ರಹ್ಮಸ್ವರೂಪರ, ಪರಮವಿರಕ್ತರ ಕೂಡಿಕೊಂಡು ತಾನರಿವಲ್ಲಿ,
ಅರಿವ ಕೇಳುವಲ್ಲಿ ಎಡೆದೆರಪಿಲ್ಲದೆ,
ಪದಪದಾರ್ಥಂಗಳಲ್ಲಿ, ಕ್ರೀ ಕ್ರಿಯಾರ್ಥದಿಂದ
ತತ್ವತತ್ವಾರ್ಥಂಗಳಲ್ಲಿ ಪದಚ್ಛೇದವ ಮಾಡುವ
ಪರಮಾರ್ಥಿಕರ ಪಾದವ ಪದವೆಂದನಂಬಿಗ ಚೌಡಯ್ಯ. ॥೨೪೨॥

೨೫೪
ಶರಣ ಸತಿ, ಲಿಂಗ ಪತಿ ಎಂಬರು.
ಶರಣ ಹೆಣ್ಣಾದ ಪರಿಯಿನ್ನೆಂತು?
ಲಿಂಗ ಗಂಡಾದ ಪರಿಯಿನ್ನೆಂತು?
ನೀರು ನೀರು ಕೂಡಿ ಬೆರೆದಲ್ಲಿ, ಭೇದಿಸಿ ಬೇರೆ ಮಾಡಬಹುದೆ?
ಗಂಡು ಹೆಣ್ಣು ಯೋಗವಾದಲ್ಲಿ
ಆತುರ ಹಿಂಗೆ ಘಟ ಬೇರಾಯಿತ್ತು.
ಇದು ಕಾರಣ, ಶರಣ ಸತಿ, ಲಿಂಗ ಪತಿ ಎಂಬ ಮಾತು
ಮೊದಲಿಂಗೆ ಮೋಸ, ಲೋಭಕ್ಕಧೀನವುಂಟೆ?
ಎಂದನಂಬಿಗ ಚೌಡಯ್ಯ ॥೨೪೩॥

೨೫೫
ಶಿಖಿಯನೆ ಕಟ್ಟಿ, ಮಾಹೇಶ್ವರಿಕೆಯನೆ ಕೊಡುವರೆ,
ಆತನ ವೃತ್ತಿಗಳ ತಿಳಿಯಬೇಕಯ್ಯಾ.
ಜಾತಿಸೂತಕವ ನೇತಿಗಳೆಂದಾತಂಗೆ ದೀಕ್ಷೆಯ ಕೊಟ್ಟಡೆ
ಸುಸರ ನೋಡಾ.
ಈಸುವನತಿಗಳೆಯದೆ ಉಪದೇಶವ ಮಾಡಿದ ಆಚಾರ್ಯಂಗೆ
ಮಾರಿಯೆಂದಾತನಂಬಿಗ ಚೌಡಯ್ಯ. ॥೨೪೪॥

೨೫೬
ಶಿವಭಕ್ತನಾದ ಬಳಿಕ ಅನ್ಯಭಜನೆಯ ಮಾಡದಿರಬೇಕು.
ಶಿವಭಕ್ತನಾದ ಬಳಿಕ ಪರಸತಿ, ಪರನಿಂದೆ,
ಪರಧನವ ಹಿಡಿಯದಿರಬೇಕು.
ಶಿವಭಕ್ತನಾದ ಬಳಿಕ ಲಿಂಗಕ್ಕೆ ತೋರದೆ ಪ್ರಸಾದವ ಮುಟ್ಟದಿರಬೇಕು.
ಅಂಗಲಿಂಗವು ಸಮರಸವಾಗಿರಬೇಕು.

ದಾರಿದ್ರ್ಯವು ಬಂದರೆ [ಲಿ]ಂಗವೇ ನಿನ್ನದೆಂದರಿಯಬೇಕು.
ಸಂಪತ್ತು ಬಂದರೆ ನಿನ್ನದೆಂದು ಭಾವಿಸಬೇಕು.
ಲಿಂಗಬಾಹ್ಯರಿಗೆ ನರಕ ತಪ್ಪದು.
'ಇಷ್ಟಲಿಂಗಮವಿಶ್ವಸ್ಯ ಅನ್ಯಲಿಂಗಮುಪಾಸತೇ
ಶ್ವಾನಯೋನಿಶತಂ ಗತ್ವಾ ಚಂಡಾಲಗೃಹಮಾಚರೇತ್'
ಇದು ಕಾರಣ, ಪ್ರಾಣಲಿಂಗದ ಭಕ್ತಿಯ ಮರೆದು
ಯಮಪಟ್ಟಣಕ್ಕೆ ಹೋಹರೆಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. ॥೨೪೫॥

೨೫೭

ಶಿವಭಕ್ತರ ಮನೆಗೆ ಹೋಗಿ ಒರಳಕ್ಕಿಯನಾಯ್ದು ತಂದು,
ಲಿಂಗಕ್ಕೆ ಬೋನವ ಮಾಡಿ, ಜಂಗಮಕ್ಕೆ ನೀಡಿ,
ಒಕ್ಕುದ ಕೊಂಡವ ಪೋಪನ್ನೆ ಕೈಲಾಸಕ್ಕೆ.
ಅವರಿಗೆ ಮುಕ್ಕಣ್ಣನಲ್ಲದೆ ಉಳಿದ ಭುವನತ್ರಯದವರು
ಸರಿಯಲ್ಲೆಂದಾತನಂಬಿಗ ಚೌಡಯ್ಯ. ॥೨೪೬॥

೨೫೮

ಶಿವಭಕ್ತಿ ಶಿವಾಚಾರ ಬೇಕಾದ ಭಕ್ತನು
ತನ್ನ ಮಠಕ್ಕೆ ಬಂದ ಲಿಂಗಜಂಗಮದ
ಸಮಯಾಚಾರ ಸಮಯಭಕ್ತಿಯ ನಡೆಸಬೇಕಯ್ಯ.
ಬಂದ ಲಿಂಗಜಂಗಮದ ಸಮಯಭಕ್ತಿಯ ತಪ್ಪಿಸಿ
ಮುಂದೆ ಶಿವಪೂಜೆಯ ಮಾಡಿ ಫಲಪದವ ಪಡೆವೆನೆಂಬ
ಹಂದಿಗಳೆತ್ತ ಬಲ್ಲರಯ್ಯಾ ಸತ್ಯರ ನೆಲೆಯ.
ಮುಂದಿರ್ದ ನಿಧಾನವ ಕಾಣಲರಿಯದೆ
ಸಂದಿಗೊಂದಿಯ ಹೊಕ್ಕು ಅರಸಿ ಬಳಲುವ ಅಂಧಕನಂತೆ,
ಎಂದಾದರೂ ತನ್ನ ವ್ಯಸನವೆತ್ತಿದಾಗ
ಒಂದೊಂದು ಪರಿಯಲ್ಲಿ ಸಿದ್ಧಾನ್ನಂಗಳಂ ಮಾಡಿ,
ಚೆಂದ ಚೆಂದದಲಿ ಬೋನ ಪದಾರ್ಥಂಗಳಂ ಮಾಡಿ,
ತಮ್ಮ ಹಿಂದಣ ಮುಂದಣ ಹರಕೆಯನೊಡಗೂಡಿ,
ಬಂಧುಬಳಗವ, ಮುಯ್ಯೂಟವ ಕೂಡಿ
ಆ ದಿನದಲ್ಲಿ ಚಂದ್ರಶೇಖರನ ಭಕ್ತರಿಗೆ ದಣಿ[ಯೆ] ಉಣಲಿಕ್ಕಿದೆನೆಂಬ
ಅಂಧಕ ಮೂಳಹೊಲೆಯರಿಗೆ ಎಂದೆಂದಿಗೂ
ಮುಕ್ತಿಯಿಲ್ಲವೆಂದಾತ ನಮ್ಮ ಅಂಬಿಗರ ಚೌಡಯ್ಯ. ॥೨೪೭॥

೨೫೯
ಶೀಲವಂತನೆಂಬವ ಶಿವದ್ರೋಹಿ, ಭಾಷೆವಂತನೆಂಬವ ಬ್ರಹ್ಮೇತಿಕಾರ,
ನೇಮಸ್ತನೆಂಬವ ನೇಮಕ್ಕೆ ಗುರಿಯಾದ, ಅಚ್ಚ ಪ್ರಸಾದಿ ನಿಚ್ಚ ಕುನ್ನಿ.
ಇವರು ನಾಲ್ವರು ಹೋದಲ್ಲಿ ಹೊಗಲಾಗದು,
ಬಂದಲ್ಲಿ ಬರಲಾಗದು,
ನಿಂತಲ್ಲಿ ನಿಲಲಾಗದು, ಕುಳಿತಲ್ಲಿ ಕುಳ್ಳಿರಲಾಗದು.
ಈ ನಾಲ್ವರಿಗೂ ಲಿಂಗವಿಲ್ಲ, ಗುರುವಿಲ್ಲ, ಜಂಗಮವಿಲ್ಲ,
ಪಾದೋದಕ ಪ್ರಸಾದವಿಲ್ಲ, ನಾ ಮೊದಲೇ ಇಲ್ಲ.
ಅದೇನು ಕಾರಣವೆಂದಡೆ,
ನಿರಂಜನ ಜಂಗಮ ಕೈ ಕಡ[ವಸ]ವಾಗಿ ಬರುತ್ತಿರಲು
ಅವರ ಕಪ್ಪರ ಬಟ್ಟಲು
ನಮ್ಮ ಭಾಜನ ಭಾಂಡವ ಮುಟ್ಟಬಾರದು ಎಂಬ
[ಮನದ] ಹೊಲೆಯರಿಗೆಲ್ಲಿಯ ಶೀಲವೋ
ಅಂಬಿಗರ ಚೌಡಯ್ಯ ॥೨೪೮॥

೨೬೦
ಶೀಲವಂತರು ಶೀಲವಂತರು ಎಂದು ಶೀಲದಲ್ಲಿ ಆಚರಿಸುವ
ಅಣ್ಣಗ[ಳೇ] ನಿಮ್ಮ ಶೀಲವಾವುದು ಹೇಳಿರೋ,
ಅರಿಯದಿದ್ದರೆ ಕೇಳಿರೋ:
ಶಿರಸ್ಸಿನಲ್ಲಿ ಶಿವನಿಪ್ಪ, ಕಟಿಯಲ್ಲಿ ವಿಷ್ಣುವಿಪ್ಪ, ಆಧಾರದಲ್ಲಿ ಬ್ರಹ್ಮನಿಪ್ಪ,
ಲಲಾಟದಲ್ಲಿ ವಿಭೂತಿ ರುದ್ರಾಕ್ಷಿ, ಜಿಹ್ವೆಯಲ್ಲಿ ಪಂಚಾಕ್ಷರಿಯು.
ಇಂತಪ್ಪ ಅಷ್ಟಾವರಣದಲ್ಲಿ ಸವೆಯದೆ,
ಸಂಸಾರವೆಂಬ ಶರಧಿಯಲ್ಲಿ ಮುಳುಗೇಳುವರು ಶೀಲವಂತರಲ್ಲ.
ಬರಿದೆ ನಾವು ಶೀಲವಂತರೆಂಬುವ ಮನುಜ ಕೇಳು:
ಕಣ್ಣೇ ಕಂಚುಗಾರ, ಕರ್ಣವೇ ಬಣಜಿಗ, ಮೂಗೇ ಈಳಿಗ,
ಕೊರಳೇ ಕುಂಬಾರ, ತುಟಿಯೇ ಹೆಂಡಗಾರ, ಹಲ್ಲೆ ಕಲ್ಲುಕುಟಿಗ,
ತಲೆಯೇ ಮೋಪುಗಾರ, ಬೆನ್ನೇ ಜೇಡ, ಅಂಗೈಯೇ ಅಕ್ಕಸಾಲಿಗ,
ಮುಂಗೈಯೇ ಬಡಿಗ, ಕರವೇ ಕೋಮಟಿಗ,
ಕಣಕಾಲೇ ಕಾಳಿಂಗ, ಕುಂಡಿಯೇ ಕುಡುವೊಕ್ಕಲಿಗ,
ಒಳದೊಡೆಯೇ ಸಮಗಾರ, ಹೊರದೊಡೆಯೇ ಮಚ್ಚಿಗ,
ಮೇಗಾಡಿ ಹೊಲೆಯ, ಬುದ್ಧಿಯೇ ಬಯಲಗಂಬಾರ.
–ಇಂತಪ್ಪ ಕುಲ ಹದಿನೆಂಟು ಜಾತಿ
ಎಲು ಮಾಂಸವನು ತುಂಬಿಟ್ಟುಕೊಂಡು

ನನ್ನ ಕುಲ ಹೆಚ್ಚು, ನಿನ್ನ ಕುಲ ಕಡಿಮೆ ಎಂದು
ಹೊಡೆದಾಡುವಂತಹ ಅಣ್ಣಗಳನ್ನು ಹಿಡಿತಂದು
ಮೂಗನೆ ಸವರಿ ಮೆಣಸಿನ ಹಿಟ್ಟು ತುಪ್ಪವ ತುಂಬಿ
ನಮ್ಮ ಪಡಿಹಾರಿ ಉತ್ತಣ್ಣನ ವಾಮಪಾದುಕೆಯಿಂದ
ಪಡಪಡನೆ ಹೊಡಿ ಎಂದಾತ,
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. ||೨೪೯||

೨೬೧
ಶುಕ್ಲಶೋಣಿತಪಿಂಡೈಕ್ಯನ ಚಿತ್ತವಾಯು ಆರು ದಳದ ಪದ್ಮದಲ್ಲಿಹುದು.
ಮೊಲೆ ಮುಡಿ ಬಂದರೆ ಆ ಪಿಂಡವನು ಹೆಣ್ಣೆಂಬರು.
ಗಡ್ಡ ಮೀಸೆಗಳು ಬಂದರೆ ಆ ಪಿಂಡವನು ಗಂಡೆಂಬರು,
ಆ ಇಬ್ಬರ ನಡುವೆ ಸುಳಿದ ಆತ್ಮನು ಹೆಣ್ಣು ಅಲ್ಲ, ಗಂಡು ಅಲ್ಲ ನೋಡಾ.
ಇದರಂತುವ ತಿಳಿದು ನೋಡಿಹೆನೆಂದರೆ
ಶ್ರುತಿಗಳಿಗಗೋಚರೆಂದ ನಮ್ಮ ಅಂಬಿಗರ ಚೌಡಯ್ಯ. ||೨೫೦||

೨೬೨
ಶ್ರೀಗುರುಲಿಂಗಜಂಗಮದ ಲೀಲೆಯ ಧರಿಸಿ,
ಪರಸ್ತ್ರೀಯಳೆಂಬ ಹಡಿಕೆಯ ಯೋನಿದ್ವಾರದಲ್ಲಿ ತೊಳಲುವ
ಜಡಜೀವಿಡಂಬಕನಲ್ಲಿ ಸಮಯಾಚಾರವ ಮಾಡುವಾತಂಗೆ
ಭವಿಜನ್ಮ ತಪ್ಪದು ನೋಡ!
ತಾನಿದ್ದಲ್ಲಿಗೆ ಪ್ರಸಾದಪುಷ್ಪತೀರ್ಥದೆಡೆ ಪ್ರಸಾದವ
ತರಿಸಿಕೊಂಡಾತಂಗೆ ಶುನಿಸೂಕರಜನ್ಮ ತಪ್ಪದು ನೋಡ!
ಸಮಪಂಕ್ತಿಯಲ್ಲಿ ವಾಮನವಾದ ಉಕ್ಕಳವ ಕೊಟ್ಟುಕೊಂಡಾತ
ದೀಕ್ಷಾಹೀನ, ಆಚಾರಭ್ರಷ್ಟ!
ತನ್ನ ಪವಿತ್ರಕರ್ತುವಾದ ಗುರುವಿನಾಜ್ಞೆಯ ಮೀರಿ
ಗುರುನಿಂದ್ಯವ ಮಾಡುವ ಗುರುದ್ರೋಹಿ,
ಪರದೈವ-ಪರದ್ರವ್ಯಾಪಹಾರಕನ ಕೂಡೆ ಪಾದೋದಕ-ಪ್ರಸಾದವ
ಏಕಭಾಜನವ ಮಾಡಿದಾತಂಗೆ
ಶತಸಹಸ್ರಜನ್ಮಾಂತರದಲ್ಲಿ ಕ್ರಿಮಿಕೀಟಕಜನ್ಮ ತಪ್ಪದು ನೋಡ!
ಸತ್ಯಸದಾಚಾರದ ವರ್ಮಾವರ್ಮವ ಭೇದಿಸಿ,
ಹರಗುರುವಚನೋಕ್ತಿಯಿಂದ ಪ್ರಮಾಣಿಸಿ,
ಬುದ್ಧಿಯ ಹೇಳುವಾತನೆ ಮಹಾಪ್ರಭುವೆಂದು ಭಾವಿಸುವಾತನೆ
ಸದಾಚಾರಿ ಸನ್ಮಾರ್ಗಿ ನೋಡ!

ಇದ ಮೀರಿ ಆಜ್ಞೋಪದೇಶವ ಕೇಳದೆ ತನ್ನ ಮನಬಂದಂತೆ ಚರಿಸುವ
ಭ್ರಷ್ಟನ ಮೋರೆಯ ಮೇಲೆ ಶರಣಗಣಂಗಳ ಪಾದರಕ್ಷೆಯಿಂದ ಹೊಡೆದು,
ಆ ಮೇಲೆ ಗಾರ್ದ[ಭ]ಜನ್ಮದಲ್ಲಿ ಜನಿಸೆಂದಾತನಂಬಿಗರ ಚೌಡಯ್ಯನು.
ನೋಡ, ಸಂಗನಬಸವೇಶ್ವರಾ. ॥೨೫೧॥

೨೬೩

ಸಂದೇಹ ಮಾಡುವಲ್ಲಿ ಮಾತೇ ಸೂತಕವಾಗಿ
ಅದೇತರಿಂದೊದಗಿದ ಶಿಲೆಯ ಪ್ರತಿಷ್ಠೆಯ ಮಾಡಿ,
ತನ್ನ ಒಲವರ ವಿಶ್ವಾಸದಿಂದ ಕುಱುಹ ಅಱಿವುದು
ಶಿಲೆಯೊ? ಮನವೊ? ಎಂದನಂಬಿಗ ಚೌಡಯ್ಯ. ॥೨೫೨॥

೨೬೪

ಸಕಲಭೋಗ ವಿಲಾಸಿತ ಲಿಂಗಕ್ಕೆಂದಲ್ಲಿ ತನ್ನಂಗಕ್ಕೆ ಶೃಂಗಾರವುಂಟೆ?
ಶ್ರೀರುದ್ರಾಕ್ಷಿವಿಭೂತಿಯ ಸ್ವಸ್ಥಾನದಲ್ಲಿ ತನ್ನಂಗಕ್ಕೆ ಶೃಂಗಾರವೆಂದು ಮಾಡಿದಡೆ,
ಆ ನಿಜಪದದಂಗವೊಂದು ಇಲ್ಲ ಎಂದನಂಬಿಗ ಚೌಡಯ್ಯ. ॥೨೫೩॥

೨೬೫

ಸತ್ತಡೆ ಸಂಗಡ ಹೂಳಿಸಿಕೊಂಬ ಲಿಂಗವು
ತನ್ನ ಕೊರಳಲ್ಲಿ ಹತ್ತೆಯಾಗಿ ಕಟ್ಟಿರಲು,
ನಾನು ಸತ್ಯಶುದ್ಧಶಿವಭಕ್ತನೆಂದರಿಯದೆ
ಮತ್ತೆ ಅನ್ಯದೈವಕ್ಕೆರಗುವ ಕತ್ತೆಮೂಳರು ನೀವು ಕೇಳಿರೊ!
ಗಂಡನ ಕೂಡೆ ಸಮಾಧಿಯ ಕೊಂಬ ಹೆಂಡತಿ ಅಪೂರ್ವ!
ಹೆಂಡಿರ ಕೂಡೆ ಸಮಾಧಿಯ ಕೊಂಬ ಗಂಡರುಂಟೆ ಲೋಕದೊಳು?
ಛೀ ಛೀ ಹಂದಿಮೂಳರಿರ! ಈ ದೃಷ್ಟವ ಕಂಡಾದರೂ ನಾಚಲಿಲ್ಲವೆ?
ಭವಬಂಧನಂಗಳನಳಿಯಬೇಕೆಂದು ಬಹುದೈವಕ್ಕೆರಗಿದಡೆ,
ಅವು ನಿಮ್ಮ ಸಂಗಡ ಒಂದಾದಡೂ ಹೂಳಿಸಿಕೊಂಬವೆ?
ನೀವು ಗಳಿಸಿದ ಅರ್ಥವನುಂಡುಂಡು, ನಿಮ್ಮ ಭವದೊಳಗೆ ನೂಂಕಿದ
ಪಿಶಾಚಿಗಳ ನೋಡಿಕೊಂಡು ಪ್ರಮಾಣಿಸಿ,
ಮರಳಿ ಲಿಂಗಭಕ್ತಿಯನರಿಯದೆ,
ಬರಿದೆ ಶಿವಭಕ್ತರೆಂದು ಬೊಗಳುವ ಕುನ್ನಿಗಳು ಪರಿಭವಕ್ಕೆ
ಒಳಗಾಗುವರೆಂದಾತನಂಬಿಗರ ಚೌಡಯ್ಯನು. ॥೨೫೪॥

೨೬೬
ಸತ್ತರೆ ಸಂಗಾತ ಹೂಳಿಸಿಕೊಂಬ ಇಷ್ಟಲಿಂಗವ ಸಟೆಮಾಡಿ,
ಮತ್ತೆ ಅನ್ಯದೈವಕ್ಕೆರಗುವ ಕತ್ತೆ ಹೊಲೆಯರು ನೀವು ಕೇಳಿರೊ,
ತನ್ನ ಪುರುಷನಿರಲು ಅನ್ಯಪುರುಷನ ಕೂಡಿಹ ಸ್ತ್ರೀಗೆ ನರಕವಲ್ಲವೆ?
ಮೋಕ್ಷಾ[ರ್ಥ] ಎಂದು ಗುರುವು ಕೊಟ್ಟ ಇಷ್ಟಲಿಂಗವು
ಅಂಗಕ್ಕೆ ಸಂಬಂಧಿಸಿದ ಬಳಿಕ
ಹಲವು ದೇವರೆಂದು ಭಾವಿಸಿ ಪೂಜೆಯ ಮಾಡುವ ಭ್ರಷ್ಟರು ನೀವು ಕೇಳಿರೊ.
ನೀವು ಮಾಡಿದ ಪೂಜೆಯು ಹಾದರಿಯ ಸ್ತ್ರೀಯಳಂತೆ ಕಾಣಿರೊ.
ಕಡೆಗೆ ಅದೇ ಲಿಂಗವೆ ಮುಂದೆ ಮಾರಿಯಾಗಿ
ಮೋಕ್ಷಕ್ಕೆ ದೂರಮಾಡುವದೆಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. ॥೨೫೫॥

೨೬೭
ಸಪ್ತಸಾಗರಗಳ ನಿಲ್ಲೆಂದು ನಿಲ್ಲಿಸಿ, ಭೂಮಿಗೆ ಕೆಸರುಗಲ್ಲನಿಕ್ಕುವ ದೆವಸ,
ಏಳುಭೂಮಂಡಲವ ಜೋಳಿಗೆಗೊಳಿಸಿ ಗಾಳಿಯನಾಹಾರಗೊಂಬ ದೆವಸ,
ಒಂಬತ್ತು ದ್ವೀಪಕ್ಕೆ ನೂಲ ಹಿಡಿದಂದು,
ಅಂಬಿಗ ಚೌಡಯ್ಯನ ಕೆಳೆಗೊಂಡನುಮೇಶ್ವರ. ॥೨೫೬॥

೨೬೮
ಸಮಯವ ಮಾಡಿ ಹಣವ ತೆಗೆಯಲೇತಕ್ಕೆ?
ಆಚಾರಕ್ಕೂ ಹಣದಾಸೆಗೂ ಸರಿಯೆ?
ಎಂದನಂಬಿಗ ಚೌಡಯ್ಯ . ॥೨೫೭॥

೨೬೯
ಸರ್ವಾಂಗಲಿಂಗವಾದ ಶರಣನ ಕಾಯ ಆವ ದೇಶದಲ್ಲಿ ಅಳಿದಡೇನು?
ಎಲ್ಲಿ ಅಳಿದಡೇನು? ಉಳಿದಡೇನು?
ಕಾಯ ಉಳಿಯದೆ ಬಯಲಾದಡೇನು?
ಅದೇತರಲ್ಲಿ ಹೋದಡೂ
ಲಿಂಗೈಕ್ಯಪದಕ್ಕೆ [ಕುತ್ತ] ಕೊಡಲಿಲ್ಲವೆಂದನಂಬಿಗ ಚೌಡಯ್ಯ. ॥೨೫೮॥

೨೭೦
ಸಸಿಗೆ ನೀರೆರೆದಡೆ ಹಸುರಾದಂತೆ,
ಬೇರಿನ ಬಾಯಿ ತುಂಬಿ, ಸಸಿಯ ಒಡಲು ತುಂಬಿ,

ಆ ಎಸಕದ ತೆರದಂತೆ
ಇಷ್ಟಪ್ರಾಣಯೋಗವೆಂದನಂಬಿಗ ಚೌಡಯ್ಯ. ॥೨೫೯॥

೨೬೧

ಸಹಜವಯ್ಯ ಶಿವಗಣಂಗಳ ನುಡಿ ಸತ್ಯವು.
ಪಾಷಂಡಿ ಪ್ರಪಂಚಿಗಳ, ದಾಸಿ, ವೇಶಿಯರ,
ಕಾಸಿಗಾಸೆಮಾಡುವ ಮೂಷಕರ,
ಪಶುಭಕ್ಷಕರನೆಂತು ಮಹಂತಿನ ದೇವರೆನಬಹುದಯ್ಯ?
ವೇಶಿಯಂತೆ ವೇಷವ ಹಲ್ಲಣಿಸಿಕೊಂಡು,
ಸರ್ವರಿಗೆ ಸುಮತ ಸುವಚನವ ನುಡಿದು, ಶಿವಭಕ್ತರ[ನ]ಣ್ಣಿಸಿ ಬಣ್ಣಿಸಿ,
ಕಾಸುವೀಸಗಳನಿಸಿದುಕೊಂಡು ಪಾಶಬದ್ಧರಾಗಿ
ಹೇಸಿಕೆಯ ಕಿಸುಕುಳದ ಮೂತ್ರದ ಕುಳಿಯಲ್ಲಿ ಹೊರಳುವ
ಧೂರ್ತ ಲಾಂಛನಿಗಳು
ಯಮಪುರದಲ್ಲಿ ಲೋಲರಾಗಿಪ್ಪರೆಂದಾತನಂಬಿಗ ಚೌಡಯ್ಯ. ॥೨೬೦॥

೨೬೨

ಸೃಷ್ಟಿಯ ಕಲ್ಪಿಸುವ ಕರ್ತ ಬ್ರಹ್ಮಂಗೆ ಶತಾಯುಗನೆಂಬ ಗಣಿತವಿದೇನು?
ಸಕಲಜೀವಿಗಳ ರಕ್ಷಿಸುವ ವಿಷ್ಣುವಿಂಗೆ ದಶಾವತಾರವೆಂಬ ಗಣಿತವಿದೇನು?
ಕೋಪಾಗ್ನಿರುದ್ರನೆಂಬ ಜಮದಗ್ನಿಯ ತಲೆಯನರಿದವರಾರು?
ಮೂವತ್ತುಮೂರು ಕೋಟಿ ದೇವರ್ಕಳನಾಳಿದ
ರಾವಣಂಗೆ ಅಳಿವೆಂಬುದೇನು?
ಹರಸಿ ಲಕ್ಷವಿಪ್ರರು ನಿಚ್ಚ ಮಂತ್ರಾಕ್ಷತೆಯನಿಡುತ್ತಿರಲು
ದುರ್ಯೋಧನಂಗೆ ಸಾವೆಂಬುದೇನು?
ಹರನೆ ನೀ ಹರಸಿ ಪಟ್ಟವ ಕಟ್ಟಿಕೊಟ್ಟಂತಲ್ಲದೆ ಇಲ್ಲ.
ಎಲ್ಲರಿಗೆಯೂ ಮೂರು ಲೋಕದೊಳಗೆ
ನೀನೊಬ್ಬನೆ ಒಡೆಯನೆಂದನಂಬಿಗ ಚೌಡಯ್ಯ. ॥೨೬೧॥

೨೬೩

ಸೋಮವಾರ, ಹುಣ್ಣಿಮೆ, ಅಮವಾಸ್ಯೆ ಎಂದು ಉಪವಾಸವಿರ್ದು
ಶಿವನಿಗೆ ಅರ್ಪಿತ ಎಂದು ನುಡಿವರು.
ಕಾಮ ಕ್ರೋಧ [ಲೋಭ] ಮೋಹ ಮದ ಮತ್ಸರವನಳಿಯರು.
ಶಿವನ ನೆಲೆಯನರಿಯದೆ,
ಎನಗೆ ಗತಿಕೊಡುವ ಲಿಂಗವಿದೇ ಎಂದು ತಿಳಿಯದೆ,

ಗ್ರಾಮದ ಹೊರತಾಯದಲ್ಲಿರುವ ದೇವರುಗಳು ಅಧಿಕವೆಂದು ಪೂಜಿಸಿ,
ಅವಕಿಕ್ಕಿದ ಕೂಳ ತಾ ತಿಂಬುವನು.
ಇನ್ನು ಸೋಮಧರಗರ್ಪಿತವೆಂದು ಭುಂಜಿಸುವವರ ತೆರನಂತೆ
ದೊಡ್ಡ ಗ್ರಾಮದ ಸೂಕರನು ಗಂಗೆಯಲ್ಲಿ ಮಿಂದು ಬಂದು
ಅಮೇಧ್ಯವ ಭುಂಜಿಸಿದ ತೆರನಾಯಿತೆಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು. ॥೨೭೩॥

೨೭೪
ಸ್ಥಲಂಗಳ ನೋಡಿ ಕಂಡೆಹೆನೆಂದಡೆ, ಅಡಗಿದ ಮಡಕೆಯಲ್ಲ.
ಆಚಾರದಲ್ಲಿ ನೋಡಿ ಕಂಡೆಹೆನೆಂದಡೆ, ಸಂಕಲ್ಪದೇಹಿಯಲ್ಲ.
ಸಕಲ ಆಗಮಂಗಳಲ್ಲಿ ನೋಡಿ ಕಂಡೆಹೆನೆಂದಡೆ,
ಮಾತಿನ ಮಾಲೆಯವನಲ್ಲ.
ತನುವ ದಂಡಿಸಿ ಕಂಡೆಹೆನೆಂದಡೆ ಬಂಧನದವನಲ್ಲ.
ಏತರಲ್ಲಿಯೂ ತೊಡಕಿಲ್ಲದೆ
ಸರ್ವವ ನೇತಿಗಳೆಯದೆ ಅಜಾತನಾಗಿ ನಿಂದವಂಗೆ
ಆತನೇತರಲ್ಲಿಯೂ ಸುಖಿಯೆಂದನಂಬಿಗ ಚೌಡಯ್ಯ. ॥೨೭೪॥

೨೭೫
ಸ್ವಲ್ಪ ಅಮೃತಾನ್ನವನೊಯ್ದು ಹುತ್ತವೆಂದು
ಬಿಲದ್ವಾರದಲ್ಲಿ ಹೊಯ್ವ ತೊತ್ತಿಂಗೆಲ್ಲಿಯದೊ ಶಿವಾಚಾರ!
ಅದೆಂತೆಂದಡೆ–
ಕಲ್ಲನಾಗರ ಕಂಡಡೆ ಹಾಲು ಹೊಯ್ಯೆಂಬಳು,
ಬದುಕಿದ ನಾಗರ ಕಂಡಡೆ ಕೊಲ್ಲು ಕೊಲ್ಲೆಂಬಳು.
ಉಂಬ ದೇವರು ಬಂದಡೆ ಇಲ್ಲವೆಂದಟ್ಟುವಳು,
ಉಣ್ಣದ ಕಲ್ಲುಪ್ರತಿಮೆಯ ಮುಂದಿಟ್ಟು ಉಣ್ಣೆಂಬಳು.
ಇಂತಹ ವೇಷದ [ಡ]ಂಬ ತೊತ್ತಿಂಗೆ
ವಿಚಾರಿಸದೆ ಲಿಂಗವ ಕೊಡಲಾಗದೆಂದಾತನಂಬಿಗ ಚೌಡಯ್ಯ. ॥೨೭೫॥

೨೭೬
ಹರಿಗೆ ಚಕ್ರ ಡಾಣೆ, ಬ್ರಹ್ಮಂಗೆ ವೇದ ಪಾಶ,
ಹಿರಿಯ ರುದ್ರಂಗೆ ಜಡೆ ಜಪಮಣಿ ನೋಡಾ.
ಧರೆಯವರೆಲ್ಲಾ ನೆರೆದು ಇವರ ದೇವರೆಂಬರು.
ಪರದೈವ ಬೇರೆಂದಾತನಂಬಿಗ ಚೌಡಯ್ಯ. ॥೨೭೬॥

೨೭೭
ಹಸಿಯ ಸೊಪ್ಪು ಮುರಿದು ತರುವಾಗನೀವೇನು ಆಡಿನ ಮಕ್ಕಳೆ?
ಹಸಿಯ ಸೊಪ್ಪು ತಂದು ಬಿಸಿಮಾಡಿ ಶಶಿಧರನೆಂಬ ಜಂಗಮಕ್ಕೆ ನೀಡಲು,
ಆ ಲಿಂಗದ ಹಸಿವು ಹೋಯಿತ್ತೆಂದಾತ
ನಮ್ಮಂಬಿಗ ಚೌಡಯ್ಯ. ॥೨೬೭॥

೨೭೮
ಹಾಡಿ ಮಾಡುವ ಹರಕೆಯ ಕೇಡು,
ಕೂಡಿಮಾಡುವ ಕೂಡಿಕೆಯ ಕೇಡು,
ಹಾಡಿ ಮಾಡಿ, ಕೂಡಿ ಮಾಡಿ ಬದುಕಿಗೆ ಕೇಡುತಂದುಕೊಳ್ಳಲೇತಕೊ?
ತನ್ನ ಬೇಡಲಿಕ್ಕೆ ಬಂದ ಜಂಗಮದ ಇರವನರಿತು,
ನೀಡ ಕಲಿತರೆ ರೂಢಿಯೊಳಗೆ ಆತನೆ ಜಾಣನೆಂದಾತ
ನಮ್ಮ ಅಂಬಿಗರ ಚೌಡಯ್ಯ. ॥೨೬೭॥

೨೭೯
ಹಿಂದಣ ಜನ್ಮದಲ್ಲಿ ಹಲವು ಸುಕೃತಂಗಳಂ
ಮಾಡಿಕೊಂಡ ದೆಸೆಯಿಂದ ನೀವು ಹುಟ್ಟಿದಿರಯ್ಯ.
ನೀವು ಮುಂದಕ್ಕೆ ಶಿವಭಕ್ತಿ ದೊಡ್ಡಿತ್ತೆಂದು ನಂಬಲರಿಯದೆ ಭ್ರಮಿತರಾಗಿ,
ಘನತರಸುಖವಂ ನೀಗಿ ಭಕ್ತಿಪಾಶದೆಶೆಯೊಳು ಇರಲೊಲ್ಲದೆ
ಹಿಂದಣ ಅರಿಕೆಯಂ ಮರೆದು, ಮುಂದಣ ಅರಿಕೆಯಂ ತೊರೆದು
ಕಂಡ ಕಂಡ ಹಂದಿಯೊಳಾಡಿ ನರಕವ ತಿಂಬಂತೆ
ಬೆಂದ ಸಂಸಾರವೆಂಬ ಹೃದಯಕೂಪದೊಳು
ಮುಳುಗಾಡುವ ಲೋಕದ ಮಂದಿಯಂತೆ
ಹೊನ್ನೆನ್ನದು ಹೆಣ್ಣೆನ್ನದು ಮಣ್ಣೆನ್ನದೆಂಬ ಭಿನ್ನಭಾವದೊಳು ಮನಸಂದು,
ಹೆಂಡರಿಗಾಗಬೇಕು ಮಕ್ಕಳಿಗಾಗಬೇಕೆಂಬ
ಭಂಡ ಮೂಕೊರೆಯ ಮೂಳಹೊಲೆಯರಿರಾ, ನೀವು ಕೇಳಿರೋ.
ನೀವು ಶಿವಭಕ್ತರ ಬಸುರಲ್ಲಿ ಹುಟ್ಟಿ ಫಲವೇನು?
ಮಾತಿಂಗೆ ಲಿಂಗವ ಕಟ್ಟಿದಿರಿ, ವರ್ತನೆಗೊಬ್ಬ ಗುರುವೆಂಬಿರಿ.
ಆ ಗುರು ತೋರಿದ ಚರಲಿಂಗಕ್ಕೆ ಬೋನವಿಲ್ಲ, ಆಚಾರವಿಲ್ಲ.
ಕೀಳು ದೈವದ ಬೆನ್ನೊಳು ಹರಿದಾಡುವ ನರಕಿಯ
ಯಮನವರು ಕೊಂಡೊಯ್ದು
ನಡುವಿಂಗೆ ಗಿರಿಕಿಯನಿಕ್ಕಿ ಮೆಟ್ಟಿ ಮೆಟ್ಟಿ ಬೀಗುವಾಗ

ಹಲುಗಿರಿಕೊಂಡು ಹೋಗುವ ಮಾನವರು
ಜಗದರಿಕೆಯಲ್ಲಿ, ನರಕದಲ್ಲಿ ಬೀಳುವದ ಕಂಡು
ನಗುತಿರ್ದ ಎನ್ನೊಡೆಯನಂಬಿಗರ ಚೌಡಯ್ಯನು. ॥೨೬೮॥

೨೮೦
ಹಿಡಿ ಪುಣ್ಯವ, ಬಿಡು ಪಾಪವ,
ಸತ್ವ ರಜ ತಮ, ಒಡಲೈದು ಇಂದ್ರಿಯವ, ಏಳನೆಯ ಧಾತುವ,
ಒಡಲಷ್ಟ ತನುವನು ಕೆಡೆ ಮೆಟ್ಟಿ ಶಿಖರದ ತುದಿಯ ಮೇಲೇರಿಸು,
ಮತ್ತೆರಡಿಲ್ಲದೆ ನಡೆ, ಅಲ್ಲಿಂದ ಹಿಡಿದು ಲಂಘನೆ ಮಾಡೆ,
ಹಡೆವೆ ಮೋಕ್ಷವನೆಂದನಂಬಿಗ ಚೌಡಯ್ಯ. ॥೨೭೯॥

೨೮೧
ಹಿತ್ತಿಲ ಸೊಪ್ಪಿಂಗೆ ನೀರ ಹೊಯಿದು,
ಮತ್ತೆ ಪುನರಪಿಯಾಗಿ ಕೊಯಿವವನಂತೆ,
ಭಕ್ತರಿಗೆ ಬೋಧೆಯ ಹೇಳಿ ಚಿತ್ತವೃತ್ತಿಯನರಿದು
ಬೇಡುವಂಗೆ ಇನ್ನೆತ್ತಣ ಮುಕ್ತಿಯೆಂದನಂಬಿಗ ಚೌಡಯ್ಯ. ॥೨೮೦॥

೨೮೨
ಹೂವ ಕೊಯ್ವ ಕುಕ್ಕೆ ಹರಿದು, ನೀರ ಹೊಯಿವ ಕುಡಿಕೆ ಒಡೆದು,
ನೋಡುವ ಕಣ್ಣು ತೆರೆ ಗಟ್ಟಿ, ರಜ ತಾಗಿ ಸೈವೆರಗಾಗಿ
ಲಿಂಗವನಾರೂ ಕಂಡುದಿಲ್ಲ ಎಂದನಂಬಿಗ ಚೌಡಯ್ಯ. ॥೨೮೧॥

೨೮೩
ಹೇಳುವ ಕೇಳುವ ಮಾತ ಕೇಳಿ,
ನಾನಯ್ಯನಾದೆನೆಂದು ಬೇಳುಗರೆಯಲೇತಕ್ಕೆ?
ವೇಣು ಚಂದನದ ಯೋಗದಲ್ಲಿದ್ದಡೆ
ಗಂಧ ತಾನಾಗಬಲ್ಲುದೆ? ಎಂದನಂಬಿಗ ಚೌಡಯ್ಯ. ॥೨೮೨॥

೨೮೪
ಹೊಡವೊಂಟು ದೇವರ ತಲೆಯ ತಾಟಿಸಿಕೊಂಬರು.
ನೆಲಕೆಯೂ ತಲೆಗೆಯೂ ನಂಟೊಳವೆ?
ಕೊಲಬೇಡ ಪ್ರಾಣಿಯ, ಗೆಲಬೇಡ ನಂಬಿದರ,
ಛಲವ ಸಾಧಿಸಬೇಡ ಗೋತ್ರದಲ್ಲಿ.
ಕೊಲುವವ ಗೆಲುವವ ಛಲವ ಸಾಧಿಸುವವ
ಹೊಲೆಯ[ರು] ಮಾದಿಗರೆಂದನಂಬಿಗ ಚೌಡಯ್ಯ. ॥೨೮೩॥

೨೮೫
ಹೊಡವಡಲೇಕೆ, ಹಿಡಿದು ಪೂಜಿಸಲೇಕೆ,
ಎಡೆಯಾಡಲೇಕೆ ದೇಗುಲಕ್ಕಯ್ಯಾ?
ಬಡವರಂಧಕರಿಂಗೆ ಒಡಲಿಗನ್ನವನಿಕ್ಕಿದಡೆ,
ಹೊಡವಂಟನಾದ ಮೂರು ಲೋಕಕ್ಕೆ[ಯಿದೆ].
ಬಡವರಂಧಕರಿಗೆ ಒಡಲಿಗನ್ನವನಿಕ್ಕದಿದ್ದರೆ,
ಹೊಡೆವಡಲಿಕೆ ಹುರುಳಿಲ್ಲವೆಂದನಂಬಿಗ ಚೌಡಯ್ಯ. ॥೨೮೫॥

೨೮೬
ಹೊಲೆಯ ಹೊಲೆಯ ಎಂದಡೆ ಹೊಲೆಯರೆಂತಪ್ಪರಯ್ಯಾ?
ಹೊಲೆಯ ಹೊರಕೇರಿಯಲ್ಲಿರುವನು,
ಊರೊಳಗಿಲ್ಲವೆ ಅಯ್ಯಾ, ಹೊಲೆಯರು?
ತಾಯಿಗೆ ಬೈದವನೇ ಹೊಲೆಯ, ತಂದೆಗೆ ಉತ್ತರಕೊಟ್ಟವನೆ ಹೊಲೆಯ,
ತಂದೆಗೆ ಬೈದವನೇ ಹೊಲೆಯ,
ಕೊಡುವ ದಾನಕ್ಕೆ ಅಡ್ಡ ಬಂದವನೆ ಹೊಲೆಯ,
ನಡೆವ ದಾರಿಗೆ ಮುಳ್ಳ ಹಚ್ಚಿದವನೇ ಹೊಲೆಯ,
ಬ್ರಾಹ್ಮಣನ ಕುತ್ತಿಗೆಯ ಕೊಯ್ದವನೇ ಹೊಲೆಯ,
ಹತ್ತು ಆಡಿದರೆ ಒಂದು ನಿಜವಿಲ್ಲದವನೇ ಹೊಲೆಯ,
ಚಿತ್ತದಲ್ಲಿ ಪರಸತಿಯ ಬಯಸಿದವನೇ ಹೊಲೆಯ,
ಲಿಂಗಮುದ್ರೆಯ ಕಿತ್ತಿದವನೇ ಹೊಲೆಯ,
ಲಿಂಗವ ಬಿಟ್ಟು ತಿರುಗುವವನೇ ಹೊಲೆಯ,
ಧರ್ಮವ ಮಾಡದವನೇ ಹೊಲೆಯ, ಬಸವನ ಕೊಂದವನೇ ಹೊಲೆಯ,
ಬಸವನ ಇರಿದವನೇ ಹೊಲೆಯ,
ಲಿಂಗಪೂಜೆಯ ಮಾಡದವನೇ ಹೊಲೆಯ.
ಇಂತಪ್ಪ ಹೊಲೆಯರು ಊರ ತುಂಬ ಇರಲಾಗಿ
ಹೊರಕೇರಿಯವರಿಗೆ ಹೊಲೆಯರೆನಬಹುದೆ?
ಹೊಲೆ ಹುಟ್ಟಿದ ಮೂರು ದಿನಕ್ಕೆ ಪಿಂಡಕ್ಕೆ ನೆಲೆಯಾಯಿತ್ತು,
ಹಿಪ್ಪೆಯನುಂಡ ತೊಗಲು ಹರಿಗೋಲವಾಯಿತ್ತು.
ಗುರುಗಳಿಗೆ ಚಮ್ಮಾವುಗೆಯಾಯಿತ್ತು.
ಹೂಡಲಿಕ್ಕೆ ಮಿಣಿಯಾಯಿತ್ತು.
ಹೊಡೆಯಲಿಕ್ಕೆ ಬಾರುಕೋಲವಾಯಿತ್ತು.
ಬಂಡಿಗೆ ಮಿಣಿಯಾಯಿತ್ತು.
ಅರಸರಿಗೆ ಮೃದಂಗವಾಯಿತ್ತು. ಡೋಲು ನಗಾರಿಯಾಯಿತ್ತು.

ತುಪ್ಪ ತುಂಬಲಿಕ್ಕೆ ಸಿದ್ದಲಿಕೆ, ಎಣ್ಣೆ ತುಂಬಲಿಕ್ಕೆ ಬುದ್ದಲಿಕೆಯಾಯಿತ್ತು.
ಸಿದ್ದಲಿಕೇನ ತುಪ್ಪ, ಬುದ್ದಲಿಕೇನ ಎಣ್ಣೆ
ಕಲ್ಲಿಶೆಟ್ಟಿ ಮಲ್ಲಿಶೆಟ್ಟಿಗಳು ಕೂಡಿ, ನಾ ಶೀಲವಂತ ತಾ ಶೀಲವಂತ ಎಂದು
ಶುದ್ಧೈಸಿಕೊಂಡು ತಿಂದು ಬಂದು,
ಜಗಳ ಬಂದಾಗ ನನ್ನ ಕುಲ ಹೆಚ್ಚು, ನಿನ್ನ ಕುಲ ಹೆಚ್ಚು
ಎಂದು ಬಡಿದಾಡುವ ಕುನ್ನಿ ನಾಯಿಗಳ ಮೋರೆಯ ಮೇಲೆ
ನಮ್ಮ ಪಡಿಹಾರಿ ಉತ್ತಣ್ಣಗಳ ವಾಮಪಾದುಕೆಯ ಕೊಂಡು
ಅವರ ಅಂಗಳ ಮೆಟ್ಟಿ ಫಡಫಡನೆ ಹೊಡಿ ಎಂದಾತ
ನಮ್ಮ ದಿಟ್ಟ ಅಂಬಿಗರ ಚೌಡಯ್ಯ ನಿಜಶರಣನು. ॥೨೭೫॥

*

ಅಘವಣಿ ಹಂಪಯ್ಯಗಳ ವಚನ

೨೮೭

ಭಕ್ತ್ಯಾನಂದವನದಲ್ಲಿ ಜ್ಞಾನಾಂಕುರವ ಮೆಲಿದು,
ಆನಂದವೆಂಬ ಜಲವನೀಂಟಿ,
ಸಮತೆಯೆಂಬ ನೆಳಲಲ್ಲಿರ್ಪುದ ನೆನೆಯಾ ಮನವೆ!
ಮಹಾಮಂತ್ರ ಶಿವಧ್ಯಾನವನೆ ಸವಿದು, ಮೆಲುಕುತ್ತಿರ್ಪುದು.
ಧರ್ಮಾರ್ಥಕಾಮಮೋಕ್ಷವೆಂಬ ಮೊಲೆ ತೊರೆಯಲು
ಹಂಪೆಯ ವಿರುಪನ ಕರೆವ ಕಾಮಧೇನು
ಪಂಚಾಕ್ಷರಿಯೆಂಬುದು. ॥೧॥

೨೮೮

ವಿಪುಳ ವೇದವೇದಾಂತಸಾರ, ಸಕಲಲೋಕಜನಹಿತಾಧಾರ,
ಸಪ್ತಕೋಟಿ ಮಹಾಮಂತ್ರಂಗಳ ತವರುಮನೆ, ಭಕ್ತಜನಜೀವಾನಂದ,
ಅಖಿಳಾಗಮ ಸಂತಾನದ ಹರಣ, ಮುಕ್ತಿಗೆ ಕಾರಣ ಸೋಪಾನ,
ಪ್ರಣವಾಂಕುರ ಪಲ್ಲವ ಫಲರೂಪ,
ತ್ರಿಣಯನೊಲಿಸುವ ಕರ್ಣಾಭರಣ,
ಹರನ ನಾಮದ ಸಾಕಾರದ ನಿಲವು,
ಪರಮಪಂಚಬ್ರಹ್ಮಾನಂದ, ಪರತತ್ತ್ವದ ನಿತ್ಯದ ನೆಲೆ,
ಹಂಪೆಯ ವಿರುಪನ ತೋರುವ ಗುರು ಪಂಚಾಕ್ಷರಿ. ॥೨॥

೨೮೯
ಹಂಸಪತಿ ಗರುಡಪತಿ ವೃಷಭಪತಿ ಮೊದಲಾದ ಸರ್ವಜೀವಾಧಿಪತಿ
ದೇವರಾಯ ಮಹಾರಾಯನ ಅರಸುತನ ಹೊಸತು:
ಓಲಗಕ್ಕೆ ಬಾರ, ಸಿಂಹಾಸನದಲ್ಲಿ ಕುಳ್ಳಿರ,
ಸ್ತ್ರೀಲಂಪಟನಾಗಿ ಅಂತಃಪುರವ ಬಿಟ್ಟು ಹೊರವಂಡ.
ಕಪ್ಪಕಾಣಿಕೆಯನೊಪ್ಪಿಸಿಕೊಂಬವರಿಲ್ಲ,
ಗುರುವೆಂಬ ತಳವಾರನ ಆಜ್ಞೆ ಕೆಟ್ಟಿತ್ತು,
ತೆರೆದ ಬಾಗಿಲ ಮುಚ್ಚುವರಿಲ್ಲ, ಮುಚ್ಚಿದ ಬಾಗಿಲ ತೆರೆವವರಿಲ್ಲ.
ಹಂಪೆಯ ವಿರುಪಯ್ಯನ ಅರಸುತನ ಕೆಟ್ಟಿತ್ತು,
ಭಕ್ತರೆಂಬವರಿನ್ನು ಬದುಕಲೇ ಬಾರದು. ॥೩॥

೨೯೦
ಹುಸಿಯ ನುಡಿಯನು ಭಕ್ತ, ವ್ಯಸನಕ್ಕೆಳಸನು ಭಕ್ತ,
ವಿಷಯಂಗಳಾತಂಗೆ ತೃಣವು ನೋಡಾ, ಬಯಸುವವನಲ್ಲ ಭಕ್ತ.
ದಯೆಯೆಂಬುದು ತನ್ನ ಕೈಯಲ್ಲಿ,
ಸ್ಮರಣೆಯೆಂಬುದು ತನಗೆ ತೊತ್ತಾಗಿಪ್ಪುದು.
ಕೋಪವೆಂಥದೆಂದರಿಯ, ತಾಪತ್ರಯಂಗಳು ಮುಟ್ಟಲಮ್ಮವು,
ವ್ಯಾಪ್ತಿಗಳಡಗಿದವು. ಲಿಂಗವನೊಳಕೊಂಡ ಪರಿಣಾಮಿ.
ಆತನ ಪಥ ಲೋಕಕ್ಕೆ ಹೊಸತು,
ಲೋಕದ ಪಥವಾತನಿಗೆ ಹೊಸತು.
ತನಗೊಮ್ಮೆಯು ಲಿಂಗಧ್ಯಾನ, ಲಿಂಗಕೊಮ್ಮೆಯು ತನ್ನ ಧ್ಯಾನ.
ಘನಘನಮಹಿಮೆಯ ಹೊಗಳಲೆನ್ನಳವಲ್ಲ.
ಪನ್ನಗಧರ ಕೇಳಯ್ಯಾ, ಚೆನ್ನ ಹಂಪೆಯ ವಿರುಪಯ್ಯಾ,
ನಿಮ್ಮ ನಂಬಿದ ಸತ್ಯಶರಣ ಪರಿಣಾಮಿ. ॥೪॥

*

ಅಘವಣಿ ಹೊನ್ನಯ್ಯಗಳ ವಚನ

೨೯೧
ಆದಂತೆ ಆಗಲಿ, ಮಾದಂತೆ ಮಾಣಲಿ ಎನಲಾಗದು,
ನೇಮದಾತಂಗೆ ಛಲ ಬೇಕು, ಛಲ ಬೇಕು.
ಹಿಡಿದುದ ಬಿಡಲಾಗದಯ್ಯಾ.

ಹುಲಿಗೆರೆಯ ವರದ ಸೋಮನಾಥನು
ಮನಮುಟ್ಟಿದ ಧೀರಂಗಲ್ಲದೆ ಸೋಲುವನಲ್ಲ. ॥೧॥

೨೯೨
ಚರ ಪರ ವಿರಕ್ತರಾಗಿ,
ಹಿಂದೆ ಶ್ರೀಗುರುದೇವನ ಬಿಟ್ಟು, ಮುಂದೆ ಲಿಂಗವ ಹೋಗಲಾಡಿ,
ಲಿಂಗದೊಳಗೆ ಲೀಯವಹ ಭೇದವನರಿಯದೆ,
ಮರಳಿ ಗುರುವಿದ್ದೆಡೆಗೆ ಹೋಗಿ
ಲಿಂಗವ ಸಾಹಿತ್ಯವ ಮಾಡಿಸಿಕೊಂಬ
ಉಭಯ ಭ್ರಷ್ಟರ ಹುಲಿಗೆರೆಯ ವರದ ಸೋಮೇಶನೊಪ್ಪನು. ॥೨॥

೨೯೩
ವಿಶ್ವವೆಲ್ಲ ಪಶುವು, ಶಿವನೊಬ್ಬನೆ ಪತಿ, ಬೇರೊಬ್ಬ ಪತಿಯಿಲ್ಲ.
ಇದು ಸತ್ಯವಿದು ಸತ್ಯ.
ನಮ್ಮ ಹುಲಿಗೆರೆಯ ವರದ ಸೋಮನಾಥನಲ್ಲದೆ
ಬೇರೊಬ್ಬರುಂಟಾದರೆ ತೋರಿಕೊಡಿ ಭೋ, ನೀವು ಬಲ್ಲರೆ. ॥೩॥

೨೯೪
ಹೊರಗೆಂಟು ತನು, ಒಳಗೆ ನಿರಂಜನ ಜ್ಯೋತಿ,
ತೆರಹಿಲ್ಲದಿಪ್ಪವನನಾ[ರೂ] ಬಲ್ಲವರಿಲ್ಲ ಕೇಳಿರೇ.
ಶಿವನಲ್ಲದೆ ಬೇರೆ ದೈವವಿಲ್ಲ. ಹುಲಿಗೆರೆಯ ವರದ ಸೋಮನಾಥನು
ಏಕೋರುದ್ರನದ್ವಿತೀಯನೆಂದುದು ಶ್ರುತಿ. ॥೪॥

*

ಅಜಗಣ್ಣ ತಂದೆಗಳ ವಚನ

೨೯೫
ಅಂಗದ ಬೆಂಬಳಿಯಲು ಭಂಗವೆಂದರಿಯರು.
ಲಿಂಗದ ಬೆಂಬಳಿಯಲಾದ ಪ್ರಸಾದಿಯು ಅರ್ಪಿತವನರಿಯ.
ಪ್ರಸಾದದಲ್ಲಿ ಪರಿಣಾಮಿಯಾಗಿ, ಮಹಾಘನಸೋಮೇಶ್ವರನು ಮುಂತಾಗಿ,
ಅರಿವೇ ಅನುಭಾವವಾದ ಪ್ರಸಾದಿ. ॥೧॥

೨೯೬

ಅಂಗದಾಶ್ರಯವ ಕಳೆದು, ಲಿಂಗದಾಶ್ರಯವ ಮಾಡಿದ
ಗುರುವೆ ಶರಣು, ಶ್ರೀಗುರುಲಿಂಗವೆ ಶರಣು,
ಪರಮಸುಖವ ತೋರಿದೆಯಾಗಿ.
ಮಹಾಘನ ಸೋಮೇಶ್ವರನ ಸಾಹಿತ್ಯವ ಮಾಡಿ
ನಿಜ ನಿವಾಸದಲ್ಲಿರಿಸಿದೆಯಾಗಿ ಗುರುವೆ ಶರಣು. ||೨||

೨೯೭

ಅಷ್ಟತನುಮೂರ್ತಿ ಶಿವನೆಂಬ ಕಷ್ಟಜೀವಿಗಳನೇನೆಂಬೆನಯ್ಯಾ?
ಯುಗಜುಗಂಗಳು ಪ್ರಳಯವಹಲ್ಲಿ ಧರೆ ಜಲದಲ್ಲಿ ಅಡಗಿತ್ತು,
ಜಲ ಅಗ್ನಿಯಲ್ಲಿ ಅಡಗಿತ್ತು, ಅಗ್ನಿ ವಾಯುವಿನಲ್ಲಿ ಅಡಗಿತ್ತು,
ವಾಯು ಆಕಾಶದಲ್ಲಿ ಅಡಗಿತ್ತು, ಆಕಾಶ ಅತೀತನಲ್ಲಿ ಅಡಗಿತ್ತು,
ಅತೀತ ಆದಿಯೊಳಗಡಗಿತ್ತು, ಆದಿ ಅನಾದಿಯೊಳಡಗಿತ್ತು,
ಅನಾದಿ ನಿಜದೊಳಡಗಿತ್ತು.
ಇಂತೀ ಅಷ್ಟತನು ಒಂದರೊಳಗೊಂದಳಿವಲ್ಲಿ, ಒಂದರೊಳಗೊಂದು ಹುಟ್ಟುವಲ್ಲಿ,
ಎಂದಳಿದನೆಂದು, ಹುಟ್ಟಿದನೆಂದು ಬಲ್ಲವರುಂಟೆ?
ಹುಟ್ಟಿದನಳಿದವನೆಂಬ ಶಬ್ದವ ನುಡಿಯಲಾಗದು. ಇದು ಕಾರಣ,
ನಮ್ಮ ಮಹಾಘನ ಸೋಮೇಶ್ವರನು ಮಾಡಿದಡಾದವು,
ಬೇಡಾ ಎಂದಡೆ ಮಾದವು. ||೩||

೧೯೮

ಅಂತರಂಗದಲ್ಲಿ ಆಯತವನರಿದವಂಗೆ,
ಬಹಿರಂಗದಲ್ಲಿ ಹಮ್ಮಿಲ್ಲಿಯದಯ್ಯ.
ಅಂತರಂಗದಲ್ಲಿ ಅನಿಮಿಷನಾಗಿ
ನಿರಂತರ ಲಿಂಗಸುಖಿ ನೋಡಯ್ಯಾ.
ಸರ್ವೇಂದ್ರಿಯ ಸಮ್ಮತವಾಯಿತ್ತು
ಮಹಾಘನ ಸೋಮೇಶ್ವರ ಮುಂತಾಗಿ. ||೪||

೨೯೯

'ಆಯುಃ ಕರ್ಮ ಚ ವಿತ್ತಂ ಚ ವಿದ್ಯಾ ನಿಧನಮೇವ ಚ'– ಎಂದು,
ಇದಕ್ಕಂಜಿ ಉಮ್ಮಳಿಸುವ ಮಾಯಾಪ್ರಸೂತ ಮನವ ನೋಡ!
ಆಯುಷ್ಯವೇ ಲಿಂಗ, ಶ್ರೀಯೇ ಜಂಗಮ! ನಿಧನವೆ ಸುಜ್ಞಾನ,
ವಿದ್ಯವೆ ಶಿವಮಂತ್ರ, ದೇಹವೆ ದಾಸೋಹಮ್ಮೆಂದು ಶ್ರೀಗುರು ಬರೆದನಾಗಿ!

ಹೊಟ್ಟೆಯ ಶಿಶುವಿಂಗೆ ಬೇರೆ ಬಟ್ಟಲ ಬಯಸುವರೊಳರೆ?
ಮಹಾಘನ ಸೋಮೇಶ್ವರನಲ್ಲಿ
ಅಯೋನಿಸಂಭವನಾದ ಶರಣಂಗೆ ॥೫॥

೩೦೦
ಇನನ ಕಂಡ ತಮದಂತಾಯಿತ್ತೆನ್ನ ಗುರುವಿನುಪದೇಶ,
ವಾಯುವಿನ ಕೈಯ ಸೊಡರಿನಂತಾಯಿತ್ತೆನ್ನ ಗುರುವಿನುಪದೇಶ,
ಉರಿಯ ಮುಖದೊಳಗಿಪ್ಪ
ಕರ್ಪುರದಂತಾಯಿತ್ತೆನ್ನ ಗುರುವಿನುಪದೇಶ.
ಮಹಾಘನ ಸೌರಾಷ್ಟ್ರ ಸೋಮೇಶ್ವರನ
ಸದ್ಗುರುವೆನ್ನ ಕರಸ್ಥಲಕ್ಕೆ ಕೃಪೆಮಾಡಿದ ಕಾರಣ
ಸಕಲಪ್ರಪಂಚು ಬಿಟ್ಟೋಡಿತ್ತು. ॥೬॥

೩೦೧
ಗುರುಲಿಂಗದ ಕೃಪೆಯಿಂದ ಸಜ್ಜನ ಶರಣರ ಸಂಗಸುಖವ ಕಂಡೆ.
ಏನೆಂದುಪಮಿಸುವೆನಯ್ಯಾ, ಗುರುಲಿಂಗದ ಮಹಿಮೆಯನು?
ಮಹಾಘನ ಸೋಮೇಶ್ವರನೆಂಬ
ಗುರುಲಿಂಗವ ತೋರಿದನಾಗಿ. ॥೭॥

೩೦೨
ಗುರುಶಿಷ್ಯರಿಬ್ಬರೂ ಸಹಪಜ್ತೆಯಲ್ಲಿ ಲಿಂಗಾರ್ಚನೆ ಮಾಡಿಹೆವೆಂಬರಯ್ಯಾ!
ಹೋ! ಹೋ! ಬಾಲಭಾಷೆಯ ಕೇಳಲಾಗದು.
ಅಲ್ಲಲ್ಲ, ಮಾಡಬಹುದು. ಅದೇನು ಕಾರಣ?
ಗುರುವಿನ ಅರಿವಿನ ಹರಿವನರಿಯಬಲ್ಲಡೆ
ಮಾಡಬಹುದು, ಮಾಡಬಹುದು.
ಶಿಷ್ಯ ಪ್ರಸಾದವೆಂಬುಭಯಸಂದೇಹ ಹಿಂದುಳಿಯಬಲ್ಲಡೆ,
ಮಾಡಬಹುದು, ಮಾಡಬಹುದು.
ಇದಲ್ಲದೆ ಲಿಂಗಪ್ರಸಾದದ ಮೇಲೆ ಗುರುಪ್ರಸಾದವನಿಕ್ಕಿಹೆನೆಂಬ
ಶಿವದ್ರೋಹಿಗಳನೇನೆಂಬೆ!
ಕೊಂಡೆಹೆನೆಂಬ ಗುರುದ್ರೋಹಿಗಳನೇನೆಂಬೆ!
ಇದು ಕಾರಣ, ಮಹಾಘನಸೋಮೇಶ್ವರಾ,
ನಿಮ್ಮಲ್ಲಿ, ಇವರಿಬ್ಬರ ಗುರು ಶಿಷ್ಯರೆಂದೆನಾದಡೆ,
ಎನ್ನನದ್ದಿ ನೀನೆದ್ದು ಹೋಗಯ್ಯಾ. ॥೮॥

೩೦೩
ವ್ಯಾಪ್ತಾವ್ಯಾಪ್ತಿಯೆಂಬುದು ಲಿಂಗಭಾವ, ತನ್ನಲ್ಲಿ ತಾ ನಿಂದುದು,
ದೃಷ್ಟವಾಗಿ, ಮೋಹವಾಗಿ, ತನ್ನಲ್ಲಿ ತಾ ನಿಂದುದು,
ಅರಸುವ ಬೆರಸುವ ಭೇದವು ತಾನಾಗಿ ನಿಂದುದು,
ಮಹಾಘನಸೋಮೇಶ್ವರನೆಂಬ ಶಬ್ದವನೊಳಕೊಂಡಿತ್ತು. ॥೯॥

೩೦೪
ಸಜ್ಜನವೆ ಮಜ್ಜನ, ಸದಾಚಾರವೆ ಧೂಪಾರತಿ,
ಆಗಮವೆ ಪೂಜೆಯಾಗಿ ಅಂಗವಿರಹಿತವಾದಲ್ಲಿ
ಉದಯಾಸ್ತಮಾನವಿಲ್ಲದ ಲಿಂಗಾರ್ಚನೆ,
ಮಹಾಘನಸೋಮೇಶ್ವರಾ, ನಿಮ್ಮ ಶರಣಂಗೆ. ॥೧೦॥

*

ಅನಾಮಿಕ ನಾಚಯ್ಯಗಳ ವಚನ

೩೦೫
ಏಕಾಕ್ಷರ ದ್ವ್ಯಕ್ಷರ ತ್ರ್ಯಕ್ಷರ ಪಂಚಾಕ್ಷರ.
ಅಕಾರವೇ ಬೀಜ, ಆಕಾರವೇ ಮೂರ್ತಿ.
ಕಕಾ ಕಿಕೀ ಕುಕೂ ಥಾಂ ಧೀಂ ಧೋಂ ಧೌಂ
ಎಂಬ ಶಬ್ದದೊಳಗೆ ತ್ರೈಜಗವೆಲ್ಲಾ.
ಈ ನಾಮನಷ್ಟವಾದಂಗೆ ನಾಮ ಸೀಮೆಯೆಂಬುದೇನು,
ಅನಾಮಿಕ ನಾಚಯ್ಯಪ್ರಿಯ ಚೆನ್ನರಾಮೇಶ್ವರ? ॥೧॥

೩೦೬
ಒಂದೆಂದರಿದಂಗೆ ಎರಡೆಂಬುದಿಲ್ಲ, ಎರಡೆಂದರಿದಂಗೆ ಮೂರೆಂಬುದಿಲ್ಲ,
ಮೂರೆಂದರಿದಂಗೆ ಮುಟ್ಟಿದ, ನಾಲ್ಕೆಂದರಿದಂಗೆ ನಗುತಿರ್ದ,
ಐದೆಂದರಿದಂಗೆಯ್ದಿದ, ಆರೆಂದರಿದಂಗೆ ಮೀರಿದ,
ಏಳೆಂದರಿದಂಗೆ ಎಚ್ಚರಿಸಿದ, ಎಂಟೆಂದರಿದಂಗೆ ಕಂಟಕವಿಲ್ಲ,
ಒಂಬತ್ತೆಂದರಿದಂಗೆ ಸಂಭಾವಿತ, ಹತ್ತೆಂದರಿದಂಗೆ ಒಂದೆಂಬುದಿಲ್ಲ.
ಮಾಟ ಕೂಟ ನೋಟ ಶೃಂಗಾರಬೇಟ
ಷೋಡಶೋಪಚಾರ ಕೂಟಕ್ಕೆಂದು ಮಾಡಿದ
ನಾಚಯ್ಯಪ್ರಿಯ ಚೆನ್ನರಾಮೇಶ್ವರ. ॥೨॥

೩೦೭

ಜಂಬೂದ್ವೀಪ, ಕಡವರದ್ವೀಪ, ಮಧ್ಯಗಿರಿ, ಪಾತಾಳಕ್ಕೆ
ಬೇರುವರಿದು ಈರೆಂಟು ಲಕ್ಷಯೋಜನ ಪರಿಪ್ರಮಾಣ,
ಮೇಲೇಳಿಗೆಯಲ್ಲಿ ಎಂಬತ್ತುನಾಲ್ಕು ಲಕ್ಷ ಯೋಜನ ಪರಿಪ್ರಮಾಣ,
ನಾಚಯ್ಯಪ್ರಿಯ ಚೆನ್ನರಾಮನಾಥನ ಗಣಂಗಳ ಒಡ್ಡೋಲಗ
ಮೂವತ್ತಾರುಲಕ್ಷ ಯೋಜನ ವಿಸ್ತೀರ್ಣ. ॥೩॥

೩೦೮

ವರ್ಮವ ನುಡಿ[ವ]ರೆಂದು ಸಮನಿಸಲಾರೆ.
ತಮ್ಮಾ ನಿಮ್ಮನೆತ್ತಿಕೊಂಡು ನೊಂದೆ, ತಮ್ಮಾ ನಿಮ್ಮ ನಿಳುಹಲಾರದೆ ನೊಂದೆ.
ತಮ್ಮಾ ಅಗಮ್ಯ ನಾಚಯ್ಯಪ್ರಿಯ ಚೆನ್ನರಾಮೇಶ್ವರನ ನೆಮ್ಮಿ ತಮ್ಮನನಿಳುಹಿದೆ. ॥೪॥

೩೦೯

ಹಸಿವಿಂಗೆ ಲಯವಿಲ್ಲ, ವಿಷಯಕ್ಕೆ ಕುಲವಿಲ್ಲ;
ಮರಣಕ್ಕೆ ಮನ್ನಣೆಯಿಲ್ಲ, ಆಸೆಗೆ ಹವಣಿಲ್ಲ,
ವಂಚಕನನಾಮಿಕ ನಾಚಯ್ಯಪ್ರಿಯ ಚೆನ್ನರಾಮಯ್ಯ. ॥೫॥

*

ಅಪ್ಪಿದೇವಯ್ಯಗಳ ವಚನ

೩೧೦

ಹೊನ್ನು ಹೆಣ್ಣು ಮಣ್ಣು ಬಿಡಿಸದ ಗುರುವಿನ ಉಪದೇಶವನೊಲ್ಲೆ,
ರೋಷ ಹರುಷವ ಕೆಡಿಸದ ಲಿಂಗಕ್ಕೆ ದಾಸೋಹವ ಮಾಡೆ,
ಪರಮಾನಂದವಲ್ಲದ ಪಾದೋದಕವಕೊಳ್ಳೆ,
ಪರಿಣಾಮವಲ್ಲದ ಪ್ರಸಾದವನುಣ್ಣೆ,
ಆನೆಂಬುದನಳಿಯದ ಈಶ್ವರೀಯ ವರದ ಮಹಾಲಿಂಗನನೇನೆಂದೆಂಬೆ! ॥೧॥

*

ಅಮರಗುಂಡದ ಮಲ್ಲಿಕಾರ್ಜುನತಂದೆಗಳ ವಚನ

೩೧೧

ಕಾಯವೆಂಬ ಪಟ್ಟಣಕ್ಕೆ ಸತ್ಯವೆಂಬ ಕೋಟೆಯನಿಕ್ಕಿ.
ಧರ್ಮಾರ್ಥಕಾಮಮೋಕ್ಷಂಗಳೆಂಬ ಉಕ್ಕಡದವರೆಚ್ಚತ್ತಿರಿ! ಎಚ್ಚತ್ತಿರಿ!

ಭಯ ಘನ! ಭಯ ಘನ!
ಅಜ್ಞಾನವೆಂಬ ತೀವ್ರ ಕತ್ತಲೆ ಕರ ಘನ! ಕರ! ಘನ!
ಒಂಬತ್ತು ಬಾಗಿಲ ಜತನವ ಮಾಡಿ! ಜತನವ ಮಾಡಿ!
ಜ್ಞಾನಜ್ಯೋತಿಯ ಪ್ರಬಲವ ಮಾಡಿ! ಪ್ರಬಲವ ಮಾಡಿ!
ಐವರು ಕಳ್ಳರು ಕನ್ನವ ಕೊರೆವುತ್ತೈದಾರೆ,
ಸುವಿಧಾನವಾಗಿರಿ! ಸುವಿಧಾನವಾಗಿರಿ!
ಜೀವಧನವ ಜತನವ ಮಾಡಿ! ಜತನವ ಮಾಡಿ!
ಭಳಿರೆಲಾ! ಭಳಿರೆಲಾ!
ಆ ಪಟ್ಟಣದ ಮೂಲಾಸ್ಥಾನದ ಶಿಖರದ ಮೇಲಣ
ಬಾಗಿಲ ತೆರೆದು, ನಡೆವುದೆ ಸುಪಥ ಸ್ವಯಂಭುನಾಥನಲ್ಲಿಗೆ
ಇದನರಿತು ಮಹಾಮಹಿಮ ಮಾಗುಡದ ಮಲ್ಲಿಕಾರ್ಜುನದೇವರಲ್ಲಿ
ಎಚ್ಚರಿಕೆಗುಂದದಿರಿ! ಎಚ್ಚರಿಕೆಗುಂದದಿರಿ! ॥೧॥

೩೧೨
ವರ್ಣವಿಲ್ಲದ ಲಿಂಗಕ್ಕೆ
ರೂಪ ಪ್ರತಿಷ್ಠೆಯ ಮಾಡುವ ಪರಿಯಿನ್ನೆಂತೋ?
ಪ್ರಳಯವಿಲ್ಲದ ಲಿಂಗಕ್ಕೆ
ಪ್ರಾಣಪ್ರತಿಷ್ಠೆಯ ಮಾಡುವ ಪರಿಯಿನ್ನೆಂತೊ?
ನೆನೆಯಬಾರದ ಲಿಂಗಕ್ಕೆ
ಅನುಗ್ರಹವ ಮಾಡುವ ಪರಿಯಿನ್ನೆಂತೊ?
ನುಡಿಯಬಾರದ ಲಿಂಗಕ್ಕೆ
ಜಪಪೂಜೆಯದೆಂತೊ?
ಇಲ್ಲದ ಲಿಂಗವ ಧರಿಸುವ ಪರಿಯಿನ್ನೆಂತೊ?
ಮಹಾಮಹಿಮ ಮಾಗುಡದ ಮಲ್ಲಿಕಾರ್ಜುನಾ
ಇದರಂತುವ ನೀವೆ ಬಲ್ಲಿರಿ. ॥೨॥

*

ಅಮುಗಿದೇವಯ್ಯಗಳ ವಚನ

೩೧೩
ಅಂಗ ಅನಂಗವೆಂಬೆರಡರ ಸಂದಳಿದ ಮಹಂತನ
ಅಂಗ ಸೋಂಕಿತ್ತೆಲ್ಲಾ ಪವಿತ್ರ ಕಾಣಿರೇ.
ಪವಿತ್ರವಿರ್ದಲ್ಲಿ ಪದಾರ್ಥವಿಹುದು,

ಪದಾರ್ಥವಿರ್ದಲ್ಲಿ ಮನವಿಹುದು.
ಮನವಿರ್ದಲ್ಲಿ ಹಸ್ತವಿಹುದು, ಹಸ್ತವಿರ್ದಲ್ಲಿ ಜಿಹ್ವೆಯಿಹುದು.
ಜಿಹ್ವೆಯಿರ್ದಲ್ಲಿ ರುಚಿಯಿಹುದು, ರುಚಿಯಿರ್ದಲ್ಲಿ ಅವಧಾನವಿಹುದು.
ಅವಧಾನವಿರ್ದಲ್ಲಿ ಭಾವವಿಹುದು, ಭಾವವಿರ್ದಲ್ಲಿ ಲಿಂಗವಿಹುದು.
ಲಿಂಗವಿರ್ದಲ್ಲಿ ಅರ್ಪಿತವಿಹುದು, ಅರ್ಪಿತವಿರ್ದಲ್ಲಿ ಪ್ರಸಾದವಿಹುದು.
ಪ್ರಸಾದವಿರ್ದಲ್ಲಿ ಪರಿಣಾಮವಿಹುದು.
ಇದು ಕಾರಣ ಮಹಾಘನ ಸದ್ಗುರು ಸಿದ್ಧಸೋಮನಾಥಾ,
ನಿಮ್ಮ ಶರಣರು ಪ್ರಾಣಲಿಂಗಪ್ರವೇಶಿಗಳಾಗಿ ಪರಿಣಾಮಪ್ರಸಾದಿಗಳಯ್ಯಾ. ॥೧॥

೩೧೪

ಅರಿವನ್ನಕ್ಕ ಭೃತ್ಯಾಚಾರಿ, ಮೀರಿ ಮಿಕ್ಕು ಶರಣಪಥ ಸೋಂಕು
ತಾನಾಗಿದ್ದ ಸುಖವು ಕೂಡುವನ್ನಕ್ಕ ಪ್ರಾಣಲಿಂಗಿ.
ಕೊಡಲಿಲ್ಲ ಕೊಳಲಿಲ್ಲ, ಲಿಂಗಪ್ರಾಣಿಯಾದವಂಗೆ
ಸಿದ್ಧಸೋಮನಾಥಲಿಂಗದಲ್ಲಿ ಅರಿವಿದ್ದ ಬಳಿಕ. ॥೨॥

೩೧೫

ಅರ್ಪಿತವಿಲ್ಲದ ಲಿಂಗಕ್ಕೆ ಅನರ್ಪಿತವಿಲ್ಲದ ಶರಣಪ್ರಸಾದಿ.
ರೂಪಿಲ್ಲದ ಲಿಂಗಕ್ಕೆ ರುಚಿಯಿಲ್ಲದ ಪ್ರಸಾದಿ[ಪ್ರಸಾದಿ]
ಅರ್ಪಿಸಲರಿಯದ ಶರಣ, ಅನರ್ಪಿತವನೊಲ್ಲದ ಪ್ರಸಾದಿ.
ಇದುಕಾರಣ ಮಹಾಘನ ಸದ್ಗುರು ಸಿದ್ಧಸೋಮನೆಂಬ
ಲಿಂಗವಿರ್ದು, ತಾನಿಲ್ಲದ ಸುಯಿದಾನಿ. ॥೩॥

೩೧೬

ಅಲಗಿನಮೊನೆಯನೇರಬಹುದು, ಹುಲಿಯಬಲೆಯಹೊಗಬಹುದು,
ಸಿಂಹದ ಕೊರಳಿಗೆ ಹಾಯಬಹುದು,
ಸಿದ್ಧಸೋಮನಾಥಾ, ನಿಮ್ಮ ಮುಟ್ಟದೆ ನಿಮಿಷ ಕುಳ್ಳಿರಬಾರದು. ॥೪॥

೩೧೭

"ಆಯುಃ ಕರ್ಮಂ ಚ ವಿತ್ತಂ ಚ ವಿದ್ಯಾ ನಿಧಾನಮೇವಚಃ।"
ಎಂದು ಇದಕಂಜಿ ಉಮ್ಮಳಿಸುವ
ಮಾಯಾಪ್ರುಸೂತ ಮನವ ನೋಡಾ!
ಆಯುಷವೆ ಲಿಂಗ, ಶ್ರೀಯೆ ಜಂಗಮ, ನಿಧಾನವೆ ಸುಜ್ಞಾನ,
ವಿದ್ಯವೆ ಶಿವಮಂತ್ರ, ದೇಹವೆ ದಾಸೋಹವೆಂದು ಶ್ರೀಗುರು ಬರದನಾಗಿ

ಹೊಟ್ಟೆಯ ಶಿಶುವಿಂಗೆ ಬೇರೆ ಬಟ್ಟಲ ಬಯಸಿದರೊಳರೆ
ಮಹಾಘನ [ಸಿದ್ಧ]ಸೋಮೇಶ್ವರನಲ್ಲಿ
ಅಯೋನಿಸಂಭವನಾದ ಶರಣಂಗೆ. ॥೫॥

೩೧೮
ಆಲಿಕಲ್ಲ ಕಡಿದು ಪುತ್ಥಳಿಯ ಕಂಡರಿಸುವಂತೆ,
ಉಪ್ಪಿನ ಪೊಟ್ಟಣವನುದಕದಲದ್ದುವಂತೆ,
ಕರ್ಪುರದ ಪ್ರಣತೆಯಲ್ಲಿ ಜ್ಯೋತಿಯ ಬೆಳಗುವಂತೆ
ಸಿದ್ಧಸೋಮನಾಥಲಿಂಗ ಗ್ರಾಹಿ ಅಗ್ರಾಹಿ ತಾ. ॥೬॥

೩೧೯
ಇಹಪರನಲ್ಲ, ಪರಾಪರನಲ್ಲ, ಭಾವಿಸಿ ಭಾವಿಯಲ್ಲ, ಕಾಮಿಸಿ ಕಾಮಿಯಲ್ಲ.
ಅನಾಮಯ ನಿರಂಜನನು ಸಿದ್ಧಸೋಮನಾಥಲಿಂಗಾ
ನಿಮ್ಮ ಶರಣ ಬಳಸಿ ಬಳಸುವನಲ್ಲ. ॥೭॥

೩೨೦
ಊಷ್ಮದೊರತೆಯಂತೆ, ಬಿಸಿಲ ನೆಳಲಿನಂತೆ,
ಬೆಟ್ಟದ ಶಬ್ದ, ಉರಿಯ ನೆಳಲು, ಮಂಜಿನ ಮಳೆಯಂತೆ ಸುಳಿವ,
ಸಿದ್ಧಸೋಮನಾಥಾ ನಿಮ್ಮ ಶರಣ. ॥೮॥

೩೨೧
ಎಮ್ಮ ನಲ್ಲನ ಬಯಲ ಬಣ್ಣವ ಕಂಡು
ಎನ್ನ ಮನ ಬೆರಗಾಯಿತ್ತವ್ವಾ,
ಇದು ಕಾರಣ ನೋಡದೆ ನೋಡುತಿರ್ದೆನು.
ಆತನ ನೋಡುವ ತವಕದಿಂದ ಮುಂದೆ ಬಂದೆನ್ನ ಕೂಡಿದನಾಗಿ,
ಕೂಡದೆ ಕೂಡುತಿರ್ದೆನು.
ಆತನ ಬೆರಸುವ ಭೇದದಿಂದ ಆನೆನ್ನ ಮರೆದರೆ
ಮೆಚ್ಚಿ ತಾನೆನಗೊಲಿದನಾಗಿ ಬೆರಸದೆ ಬೆರಸುತಿರ್ದೆ!
[ತಾ]ನೆನ್ನ ಹರಣ ಹಾರದಂತೆನ್ನ ತನುವನಾರಡಿಗೊಂಡನಾಗಿ
ಜ್ಞಾನಾಂಗನೆಯೆಂದೆನಿಸು.
ಇದು ಕಾರಣ, ಮಹಾಘನ ಸಿದ್ಧಸೋಮನಾಥನ
ಅಂಗಸುಖದ ಸಂಗವ ಮೆಚ್ಚಿ ನೆನೆಯದೆ ನೆನೆವುತ್ತಿದ್ದೆನು. ॥೯॥

೩೨೨

ಕಂಗಳ ಕತ್ತಲೆಯ ಕೆಡಿಸಿದ ರವಿಯ ಚಂದದಂತಾಯಿತ್ತೆನ್ನ ಗುರುವಿನುಪದೇಶ.
ಕನ್ನಡಿ ರವಿಯ ತನ್ನೊಳಗೆ ಇರಿಸಿದಂತಾಯಿತ್ತೆನ್ನ ಗುರುವಿನುಪದೇಶ.
ಜಲದ ನಿರ್ಮಳ ಗಗನವನೊಳಕೊಂಡ ಪರಿಯಂತಾಯಿತ್ತೆನ್ನ ಗುರುವಿನುಪದೇಶ.
ಚಂದ್ರಕಾಂತದಶಿಲೆಯಬಂದು ಚಂದ್ರಮಸೋಂಕಿದಂತಾಯಿತ್ತೆನ್ನ
ಗುರುವಿನುಪದೇಶ.
ಕೊಡನೊಳಗಣ ಬಯಲ ಹಂಚಿಕೊಂಡ ಪರಿಯಂತಾಯಿತ್ತೆನ್ನ
ಗುರುವಿನುಪದೇಶ. ಇದು ಕಾರಣ,
ದರ್ಪಣಕೆ ದರ್ಪಣವ ತೋರಿದಂತಾಯಿತ್ತೆನ್ನ ಗುರುವಿನುಪದೇಶ.
ಮಹಾಘನ ಸದ್ಗುರು ಸಿದ್ಧಸೋಮನಾಥನೆಂಬ ಲಿಂಗದಂತಾಯಿತ್ತೆನ್ನ
ಗುರುವಿನುಪದೇಶ. ॥೧೦॥

೩೨೩

ಕಕ್ಕಯ್ಯನ ಪ್ರಸಾದವ ಕೊಂಡೆನ್ನ ಕುಲಸೂತಕ ಹೋಯಿತ್ತಯ್ಯಾ,
ಚೆನ್ನಯ್ಯನ ಪ್ರಸಾದವ ಕೊಂಡೆನ್ನ ಛಲಸೂತಕ ಹೋಯಿತ್ತಯ್ಯಾ,
ದಾಸಯ್ಯನ ಪ್ರಸಾದವ ಕೊಂಡೆನ್ನ ತನುಸೂತಕ ಹೋಯಿತ್ತಯ್ಯಾ,
ಚಂದಯ್ಯನ ಪ್ರಸಾದವ ಕೊಂಡೆನ್ನ ಮನಸೂತಕ ಹೋಯಿತ್ತಯ್ಯಾ,
ತೆಲುಗ ಜೊಮ್ಮಯ್ಯನ ಪ್ರಸಾದವ ಕೊಂಡೆನ್ನ ನೆನಹುಸೂತಕ ಹೋಯಿತ್ತಯ್ಯಾ,
ಬಿಬ್ಬ ಬಾಚಯ್ಯನ ಪ್ರಸಾದವ ಕೊಂಡೆನ್ನ ಭಾವಸೂತಕ ಹೋಯಿತ್ತಯ್ಯಾ,
ಮೋಳಿಗಯ್ಯನ ಪ್ರಸಾದವ ಕೊಂಡೆನ್ನ ಜನನಸೂತಕ ಹೋಯಿತ್ತಯ್ಯಾ,
ಕೋಲ ಶಾಂತಯ್ಯನ ಪ್ರಸಾದವ ಕೊಂಡೆನ್ನಂತರಂಗದ ಸೂತಕ ಹೋಯಿತ್ತಯ್ಯಾ,
ಮೇದಾರ ಕೇತಯ್ಯನ ಪ್ರಸಾದವ ಕೊಂಡೆನ್ನ
ಬಹಿರಂಗದ ಸೂತಕ ಹೋಯಿತ್ತಯ್ಯಾ,
ಘಟ್ಟಿವಾಳಯ್ಯನ ಪ್ರಸಾದವ ಕೊಂಡೆನ್ನ
ಸರ್ವಾಂಗದ ಸೂತಕ ಹೋಯಿತ್ತಯ್ಯಾ.
ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರು, ಮಡಿವಾಳಯ್ಯ, ಸಿದ್ಧರಾಮಯ್ಯ,
ಸೊಡ್ಡಳ ಬಾಚರಸರು, ಹಡಪದಪ್ಪಣ್ಣ, ಶಂಕರ ದಾಸಿಮಯ್ಯ,
ಹೆಂಡದ ಮಾರಯ್ಯ, ಗಾಣದ ಕಣ್ಣಪ್ಪಯ್ಯ, ಕೈಕೂಲಿ ಚಾಮಯ್ಯ,
ಬಹುರೂಪಿ ಚೌಡಯ್ಯ, ಕಲಕೇತ ಬ್ರಹ್ಮಯ್ಯ ಮೊದಲಾದ
ಶಿವಗಣಂಗಳ ಪರಮಪ್ರಸಾದವ ಕೊಂಡು ಬದುಕಿದೆನಯ್ಯಾ,
ಮಹಾಘನ ಸದ್ಗುರು ಸಿದ್ಧಸೋಮನಾಥಲಿಂಗವೆ
ನಿಮ್ಮ ಧರ್ಮ, ನಿಮ್ಮ ಧರ್ಮ. ॥೧೧॥

೩೨೪
ಕಾಯ ಲಿಂಗಕ್ಕರ್ಪಿತವಾದಡೆ ಕರ್ಮವಿಲ್ಲ,
ಜೀವ ಲಿಂಗಕ್ಕರ್ಪಿತವಾದಡೆ ಜನಿತವಿಲ್ಲ,
ಭಾವಲಿಂಗಕ್ಕರ್ಪಿತವಾದಡೆ ಭ್ರಮೆಯಿಲ್ಲ,
ಅರಿವು ಲಿಂಗಕ್ಕರ್ಪಿತವಾದ ಬಳಿಕ
ಪ್ರಸಾದವ ಗ್ರಹಿಸಿದನಾಗಿ, ಕುರುಹಿಲ್ಲ,
ಮಾಯಾಪ್ರಪಂಚನತಿಗಳೆದು ನಿಮಗರ್ಪಿಸಬಲ್ಲನಾಗಿ,
ಆತನು ಶರಣನು–
ಬೆಚ್ಚಂತೆ, ಬೆರಸಿ ಅಚ್ಚೊತ್ತಿದಂತೆ, ಅಪ್ಪು ಒಳಕೊಂಡ ವಾರಿಕಲ್ಲಂತೆ,
ಜ್ಯೋತಿಯುಂಡ ತೈಲದಂತೆ, ಜಲವುಂಡ ಮುತ್ತಿನಂತೆ,
ಬಯಲುಂಡ ಬೆಳಗಿನಂತೆ ಇರ್ದನಾಗಿ
ಮಹಾಘನ ಸದ್ಗುರು ಸಿದ್ಧಸೋಮನಾಥಾ
ನಿಮ್ಮ ಶರಣರ ಹೆಸರಡಗಿದ ಲಿಂಗೈಕ್ಯರೆಂದೆ. ॥೧೨॥

೩೨೫
ಕ್ಷುತ್ತು ಪಿಪಾಸೆಯರತಡೇನು, ಭಕ್ತನಪ್ಪನೆ?
ಸ್ವೇಚ್ಛಾಗಮನಿಯಾದಡೇನು, ಭಕ್ತನಪ್ಪನೆ?
ತನು ಬಯಲಾದಡೇನು, ಭಕ್ತನಪ್ಪನೆ?
ಅಷ್ಟಮಹಾಸಿದ್ಧಿಯುಳ್ಳರೇನು, ಭಕ್ತನಪ್ಪನೆ?
ಚತುರ್ವಿಧಪದವ ಪಡೆದು ಕೈಲಾಸದಲ್ಲಿದ್ದಡೇನು, ಭಕ್ತನಪ್ಪನೆ?
ಮಹತ್ವವ ಹಲವು ತೋರಿ ಮೆರೆದಡೇನು, ಭಕ್ತನಪ್ಪನೆ?
ಅಲ್ಲಲ್ಲ, ಭಕ್ತಿಯ ಪರಿ ಎಂತೆಂದಡೆ:
ಅಂಗತ್ರಯದಲ್ಲಿ ಲಿಂಗತ್ರಯಸಂಬಂಧವಾಗಿ, ಗುರುಲಿಂಗಜಂಗಮವನಾರಾಧಿಸಿ
ಲಿಂಗತ್ರಯದಲ್ಲಿ ಸಮವೇಧಿಸಿ,
ಆ ತ್ರಿವಿಧಲಿಂಗ ಜಂಗಮವನಾರಾಧಿಸಿ,
ಪ್ರಸಾದಗ್ರಾಹಿಯಾದಲ್ಲದೆ ಭಕ್ತನಲ್ಲವೆಂದು
ಸಿದ್ಧಸೋಮನಾಥನ ಶರಣರು ನುಡಿವರಯ್ಯಾ ಪ್ರಭುವೆ. ॥೧೩॥

೩೨೬
ಗುರುಕಾರುಣ್ಯವ ಪಡೆದು ಲಿಂಗದೊಳವಗ್ರಾಹಕನಾಗದೆ,
ಅಂಗಲಿಂಗ, ಪ್ರಾಣಲಿಂಗ, ಆತ್ಮಲಿಂಗಸಂಬಂಧದ ವಿಚಾರವಿಲ್ಲದೆ,
ಬರಿಯ ಜ್ಞಾನಯೋಗವೆಂಬ ಶೂನ್ಯದನುಭಾವಿಗೆ ಗುರುಭಕ್ತಿ ಇಲ್ಲ,
ಗುರುಭಕ್ತಿ ಇಲ್ಲವಾಗಿ ಲಿಂಗಭಕ್ತಿ ಇಲ್ಲ,

ಲಿಂಗಭಕ್ತಿಯಿಲ್ಲವಾಗಿ ಜಂಗಮಭಕ್ತಿ ಇಲ್ಲ,
ಜಂಗಮಭಕ್ತಿ ಇಲ್ಲವಾಗಿ ಪ್ರಸಾದವಿಲ್ಲ,
ಪ್ರಸಾದಪ್ರಸನ್ನವಿಲ್ಲವಾಗಿ ಮೋಕ್ಷವಿಲ್ಲ. ಇದು ಕಾರಣ,
ಸದ್ಗುರು ಸಿದ್ಧಸೋಮನಾಥನಲ್ಲಿ ಗುರುಕರಜಾತರಾದ
ಲಿಂಗಾಂಗಸಂಬಂಧಿಗಳಪೂರ್ವವಯ್ಯಾ ಪ್ರಭುವೆ. ॥೧೪॥

೩೨೭
ಗುರುಲಿಂಗ ಸಂಯೋಗವಾದಲ್ಲಿ ಶಿವಲಿಂಗದುದಯ.
ಶಿವಲಿಂಗ ಸಂಯೋಗವಾದಲ್ಲಿ ಜಂಗಮಲಿಂಗದುದಯ.
ಜಂಗಮಲಿಂಗ ಸಂಯೋಗವಾದಲ್ಲಿ ಪ್ರಸಾದದುದಯ.
[ಪ್ರಸಾದ ಸಂಯೋಗವಾದಲ್ಲಿ ಪ್ರಾಣದುದಯ].
ಪ್ರಾಣಸಂಯೋಗವಾದಲ್ಲಿ ಜ್ಞಾನದುದಯ.
ಜ್ಞಾನಾನುಭಾವ ಸಂಯೋಗವಾದಲ್ಲಿ ಸುಜ್ಞಾನದುದಯ.
ಇಂತೀ ಗುರುವಿನ ಘನವ, ಲಿಂಗದ ನಿಜವ,
ಜಂಗಮದ ಮಹಿಮೆಯ,
ಪ್ರಸಾದದ ರುಚಿಯ, ಪ್ರಾಣನ ನೆಲೆಯ, ಸುಜ್ಞಾನದ ನಿಲವ,
ಮಹಾನುಭಾವದ ಸುಖವನರಿದು ಮರೆದಲ್ಲಿ,
ಮಹಾಘನ ಸದ್ಗುರು ಸಿದ್ಧಸೋಮನಾಥನೆಂಬ ಲಿಂಗದಲ್ಲಿ
ಜ್ಞಾನಭರಿತವಾದಂದು ಸುಜ್ಞಾನ. ॥೧೫॥

೩೨೮
ಗುರುವಿನ ಕರುಣದಿಂದ
ಲಿಂಗಜಂಗಮವ ಕಂಡೆನಯ್ಯಾ.
ಇಂದಿನ ಸುಖಕ್ಕೆ ಹವಣಿಲ್ಲೆಂದು ಕಂಡೆನಯ್ಯಾ,
ಸಿದ್ಧಸೋಮನಾಥಲಿಂಗವಲ್ಲದಿಲ್ಲೆಂದು ಕಂಡೆನಯ್ಯಾ. ॥೧೬॥

೩೨೯
ಗುರುಶಿಷ್ಯಸಂಬಂಧದನುಭಾವವ ಕೇಳಿರಯ್ಯ:
ಗುರುವೆಂಬ ಪರಾಪರ, ಶಿಷ್ಯನೆಂಬ ಇಹಪರ,
ಗುರುವೆಂಬ ಪರಮಾರ್ಥ, ಶಿಷ್ಯನೆಂಬ ಏಕಾರ್ಥ,
ಗುರುವೆಂಬನಲ್ಲ, ಶಿಷ್ಯನೆಂಬನಲ್ಲ
ಏಕೈಕ ಸಿದ್ಧಸೋಮನಾಥನಲ್ಲಿ ಶಬ್ದಕಿಂಬಿಲ್ಲ. ॥೧೭॥

೩೩೦
ಜಟಾಜೂಟ ಮಕುಟಕೋಟಿಗಳಾದಡೇನು?
ನೊಸಲ ಕಣ್ಣು ಚತುರ್ಭುಜದವರಾದಡೇನು?
ಅಂಗದ ಮೇಲೆ ಲಿಂಗವಿಲ್ಲದವರ ಕಂಡಡೆ
ಬರುಕಾಯರೆಂಬೆನು, ಬರುಮುಖರೆಂಬೆನು.
ಸಿದ್ಧಸೋಮನಾಥಲಿಂಗವಾದೊಡೆಯು ನಮಗೇನು?
ಕೊಂದಡೆ ಕೊಲಲಿ, ಇಂತೆಂಬುದ ಮಾಣೆನಯ್ಯಾ. ॥೧೮॥

೩೩೧
ಜ್ಞಾನದಲರಿದಡೇನಯ್ಯ, ಕ್ರೀಯನಾಚರಿಸದನ್ನಕ್ಕ?
ನೆನೆದ ಮಾತ್ರದಲ್ಲಿ ಅಹುದೆ, ಕಾರ್ಯದಲಲ್ಲದೆ?
ಕುರುಡ ಕಾಣ ಪಥವ, ಹೆಳವ ನಡೆಯಲರಿಯ. ಒಂದಿಲ್ಲದಿರ್ದಡೊಂದಾಗದು.
ಜ್ಞಾನವಿಲ್ಲದಿರ್ದ ಕ್ರೀ ಜಡನು, ಕ್ರೀಯಿಲ್ಲದ ಜ್ಞಾನ ವಾಗ್ಜಾಲ ಭ್ರಾಂತು.
ಇದು ಕಾರಣ, ಸಿದ್ಧಸೋಮನಾಥಲಿಂಗವ
ಕೂಡುವ ಶರಣಂಗೆ ಎರಡೂ ಬೇಕು. ॥೧೯॥

೩೩೨
ಜ್ಞಾನಸೂತಕ, ಮೋನಸೂತಕ, ಜಪತಪ ಅನುಷ್ಠಾನಸೂತಕ,
ಸೋಹಂ ಎಂಬ ಸೂತಕ,
ಸಿದ್ಧಸೋಮನಾಥಪ್ರಾಣಲಿಂಗವಾಗಿಸೂತಕಹಿಂಗಿತ್ತು ಯಥಾಸ್ವೇಚ್ಛೆ ॥೨೦॥

೩೩೩
ನೆಲವಾಗಿಲ ಮುಚ್ಚಿ, ತಲೆವಾಗಿಲ ತೆರದು,
ಎವೆ ಮಿಡುಕದಂತೆ ನಿಮ್ಮ ನೋಡುತ್ತಿಪ್ಪ ಸುಖವೆಂದಪ್ಪುದೊ?
ಎನಗೆ ಗುರುವಿನುಪದೇಶವ ಹಿರಿದು ಪರಿಯಲಿ ನಂಬಿ,
ಎರಡು ಪುರ್ಬಿನ ನಡುವೆ ಹರಿವ ಮನವ ನಿಲಿಸಿ,
ಪರಿಣಾಮ ಪರವಶದೊಳೆಂದಿಪ್ಪೆನಯ್ಯಾ?
ಹೋದ ಹೊತ್ತನರಿಯದೆ, ಆದ ದುಃಖವನರಿಯದೆ,
ಬೆರಗು ನಿಂದು ನಿಮ್ಮನೆಂದಿಂಗೊಮ್ಮೆ ನೆರೆವೆ?
ಸದ್ಗುರು ಸಿದ್ಧಸೋಮನಾಥಾ,
ಇಂದು ಕಾಣದ ಮುಕ್ತಿ ಎಂದಿಗೂ ಇಲ್ಲ. ॥೨೧॥

೩೩೪

ಪೃಥ್ವಿ ಅಪ್ಪು ತೇಜ ವಾಯು ಆಕಾಶ ಚಂದ್ರ ಸೂರ್ಯ ಆತ್ಮರೆಂಬ
ಅಷ್ಟತನುವಿಡಿದು ಜಗಕ್ಕೆ ದೃಷ್ಟನಾಗಿ
ತೋರುವ ಕರ್ಮರೂಪವೆಂಬುದು ಶಿವನ ಸ್ಥೂಲತನುವೆನಿಸುವುದು.
ಸಕಲಲೋಕಕ್ಕೆ ಆಧಾರಾಧೇಯವಾಗಿ,
ಕಮಲಲೋಚನರೊಳಗಾದ ದೇವ ದಾನವ
ಮಾನವಮನುಮುನಿಗಳಿಗೊಡೆಯನಾಗಿ,
ವರದಾಭಯಕರನೆನಿಸಿ ಮೂರ್ತಿಸಹಿತ ತೋರುವ.
ಪ್ರಕೃತಿವಿಡಿದು ನಿತ್ಯವೆನಿಸಿ, ಕೈಲಾಸಪತಿ ಪಶುಪತಿಯಾಗಿ,
ನಂದಿನಾಥ ಭೃಂಗಿನಾಥ ಮೊದಲಾದ ಗಣನಾಥರ ಕಣ್ಗೆ ಮಂಗಳವಾಗಿ ತೋರುವ.
ಸದಾಶಿವಮೂರ್ತಿಯೆಂಬುದು ಶಿವನ ಸೂಕ್ಷ್ಮತನುವೆನಿಸುವುದು.
ಅತ್ಯತಿಷ್ಠದ್ದಶಾಂಗುಲವೆಂಬ ಶ್ರುತಿತಾರ್ಕಣೆಯಾಗಿ,
ಅಕಾಯಚರಿತನಾಗಿ, ಕಾಲಕರ್ಮಕ್ಕಗೋಚರನಾಗಿ,
ತೋರಿಯೂ ತೋರದೆ, ಮುಟ್ಟಿಯೂ ಮುಟ್ಟದೆ,
ಆಗಿಯೂ ಆಗದೆ, ಇರ್ದೂ ಇಲ್ಲದೆ, ಬೆರಸಿಯೂ ಬೆರಸದೆ,
ಆಕಾಶದಂತೆ ಭರಿತನಾಗಿ, ಅವಿನಾಶಿಯಾಗಿ,
ಅಭಾವಿಯಾಗಿ, ತತ್ವಮಸಿವಾಕ್ಯಲೀನವಾಗಿ,
ಜ್ಞಾತೃ ಜ್ಞಾನ ಜ್ಞೇಯವಿಹೀನವಾಗಿ ತೋರಿದನೆನ್ನ ಸ್ವಾಮಿ.
ಶ್ರೀಗುರುಕಾರುಣ್ಯದಿಂದಳವಟ್ಟು,
ಜ್ಞಾನಿಯ ಹೃದಯದೊಳಗೆ ದರ್ಪಣದ ಛಾಯೆಯಂತೆ ತೋರಿ ಹಿಡಿಯಲಿಲ್ಲದ
ಒಳಗಣ ಬಯಲು ಮುಸುಕಿದ ಮಹಾಬಯಲಿನಂತೆ ಮುಟ್ಟಲಿಲ್ಲದ
ಸ್ವಯಂವೇದ್ಯವಾದ ಘನತತ್ವದ ರೂಪೆಂಬುದು
ಮಹಾಘನ ಸದ್ಗುರು ಸಿದ್ಧಸೋಮನಾಥಾ,
ನಿಮ್ಮ ಕಾರಣತನುವೆನಿಸುವುದು. ॥೨೨॥

೩೩೫

ಪೃಥ್ವಿ ಸಕಲವ ಧರಿಸಿಕೊಂಡಿಪ್ಪಂತೆ
ಶಿವಶರಣ ಸಮಾಧಾನಿಯಾಗಿರಬೇಕಯ್ಯಾ.
ಅಪ್ಪುವಿನ ನಿರ್ಮಳದಂತೆ ಶಿವಶರಣ ನಿರ್ಮಳನಾಗಿರಬೇಕಯ್ಯಾ.
ಪಾವಕನು ಸಕಲದ್ರವ್ಯಂಗಳ ದಹಿಸಿಯು ಲೇಪವಿಲ್ಲದ ಹಾಂಗೆ
ಶಿವಶರಣ ನಿರ್ಲೇಪನಾಗಿರಬೇಕಯ್ಯಾ.
ವಾಯು ಸಕಲದ್ರವ್ಯಂಗಳಲ್ಲಿಯು ಸ್ಪರ್ಶನವ ಮಾಡಿಯು
ಆ ಸಕಲದ ಗುಣವ ಮುಟ್ಟದ ಹಾಂಗೆ

ಶಿವಶರಣ ಸಕಲಭೋಗಂಗಳನು ಭೋಗಿಸಿಯು
ಸುಗಂಧ ದುರ್ಗಂಧಂಗಳನು ಮುಟ್ಟಿಯುನಿರ್ಲೇಪಿಯಾಗಿರಬೇಕಯ್ಯ!
ಆಕಾಶವು ಸಕಲದಲ್ಲಿ ಪರಿಪೂರ್ಣವಾಗಿಹ ಹಾಂಗೆ
ಶಿವಶರಣ ಸಕಲದಲ್ಲಿ ಪರಿಪೂರ್ಣನಾಗಿರಬೇಕಯ್ಯಾ.
ಇಂದುವಿನಂತೆ ಶಿವಶರಣ ಸಕಲದಲ್ಲಿ ಶಾಂತನಾಗಿರಬೇಕಯ್ಯಾ.
ಭಾನುವು ತಮವನಳಿಸಿ ಪ್ರಕಾಶವ ಮಾಡುವ ಹಾಂಗೆ
ಶಿವಶರಣ ಅವಿದ್ಯವ ತೊಲಗಿಸಿ ಸುವಿದ್ಯವ ಮಾಡಬೇಕಯ್ಯಾ.
ಇದು ಕಾರಣ, ಸದ್ಗುರುಪ್ರಿಯ ಸಿದ್ಧಸೋಮನಾಥಾ,
ನಿಮ್ಮ ಶರಣ ನಿರ್ಲೇಪನಯ್ಯಾ. ॥೨೩॥

೩೩೬

ಪ್ರಾಣಲಿಂಗವೆಂಬುದೊಂದು ಮಾತಿನಂತುಟಲ್ಲ.
ಲೋಗರ ಸುಖದುಃಖ ತನ್ನದೆನ್ನದನ್ನಕ್ಕ
ಚೆನ್ನ ಸಿದ್ಧಸೋಮನಾಥನೆಂಬ ಲಿಂಗ ಬರಿದೆ ಒಲಿವನೆ? ॥೨೪॥

೩೩೭

ಮಂಗಳ ಮಣ್ಣ ಬೆರಸದಂತೆ, ಬಯಲು ಮೂರ್ತಿಯಾಗದಂತೆ,
ಬಿಸಿಲು ಮಳೆಯಲ್ಲಿ ನಾಂದದಂತೆ, ಗಾಳಿ ಧೂಳ ಹತ್ತದಂತೆ,
ಸಿದ್ಧಸೋಮನಾಥಲಿಂಗಾ ನಿಮ್ಮ ಶರಣ ಬಳಸಿ ಬೇರಿಪ್ಪ. ॥೨೫॥

೩೩೮

ಮರುಳ ಮದ್ದುಕುಣಿಕೆಯ ಕಾಯ ತಿಂದು,
ಮರುಳೇರಿತ್ತ ಹೇಳಲುಂಟೆ? ಶಿವಶಿವಾ!
ಲಿಂಗ ತನ್ನನವಗ್ರಹಿಸಿದ ಬಳಿಗ ಅಂಗವಿಕಾರವೆಂಬುದನರಿಯರು,
ಸಿದ್ಧಸೋಮನಾಥನೆಂಬ ಶಬ್ದಭಂಗವಳಿದು
ಸಂಗವುಳಿದ ಬಳಿಕ. ॥೨೬॥

೩೩೯

[ಮೋಹ]ರಹಿತ, ಕೋಪದಲಗು [ಮುಟ್ಟ],
ಜಾಗ್ರ ಸ್ವಪ್ನ ಸುಷುಪ್ತಿಯ ತಟ್ಟಲೀಯ.
ಧನ ಪ್ರಾಣ ಹೆಣ್ಣು ಮಣ್ಣನು ಮರಳಿಸ,
ಸಿದ್ಧ ಸೋಮನಾಥಲಿಂ[ಗಾ ಶಿವ]ಯೋಗಿ ಸಿದ್ಧರಾಮ. ॥೨೭॥

೩೪೦
ಶಿವನ ನೆನೆದಡೆ ಭವ ಹಿಂಗೂದೆಂಬ
ವಿವರಗೇಡಿಗಳ ಮಾತ ಕೇಳಲಾಗದು.
ಹೇಳದಿರಯ್ಯಾ, ಜ್ಯೋತಿಯ ನೆನೆದಡೆ ಕತ್ತಲೆ ಕೆಡುವುದೆ?
ಇಷ್ಟಾನ್ನವ ನೆನೆದಡೆ ಹೊಟ್ಟೆ ತುಂಬುವುದೆ?
ರಂಭೆಯ ನೆನೆದಡೆ ಕಾಮದ ಕಳವಳವಡಗುವುದೆ ಅಯ್ಯಾ?
ನೆನೆದರಾಗದು, ನಿಜದಲ್ಲಿ ನಿರ್ಧರಿಸಿ ತಾನು ತಾನಾಗದನ್ನಕ್ಕರ,
ಸದ್ಗುರು ಸಿದ್ಧಸೋಮನಾಥಲಿಂಗನ ನೆನೆಯಬಾರದು. ॥೨೮॥

೩೪೧
ಸಾವಯನಲ್ಲ, ಸ್ವರೂಪ ಕುರುಹಿಡಿಯನಾಗಿ.
ನಿರವಯನಲ್ಲ, ನಿರೂಪ ಭಾವಿಸನಾಗಿ.
ದ್ವೈತಿಯಲ್ಲ, ಸೇವ್ಯಸೇವಕನೆಂಬ ಉಭಯವಳಿದುಳಿದನಾಗಿ.
ಅದ್ವೈತಿಯಲ್ಲ, 'ನಾಹಂ-ಕೋಹಂ-ಸೋಹಂ'ವೆಂಬ ಭ್ರಮೆಯಳಿದುಳಿದನಾಗಿ.
ಇಂತೀ ಸಕಲಭ್ರಮೆಯಳಿದು ಮಹಾಘನದಲ್ಲಿ ನಿಷ್ಪತಿಯಾಗಿಪ್ಪ
ಸಿದ್ಧಸೋಮನಾಥಲಿಂಗಾ, ನಿಮ್ಮ ಶರಣ. ॥೨೯॥

೩೪೨
ಸುಳುಹೆಂಬುದನರಿಯ, ಸೂಕ್ಷ್ಮವೆಂಬುದನರಿಯ,
ಒಳಗೆಂಬುದನರಿಯ, ಹೊರಗೆಂಬುದನರಿಯ.
ಇರ್ದುದು ಇರ್ದಂತೆ ಇರ್ದಿತ್ತು ಕಾಣಾ.
ಸಿದ್ಧಸೋಮನಾಥನೆಂಬಲಿಂಗವು ಶಬ್ದಮುಗ್ಧವಾದುದನೇನೆಂಬೆನಯ್ಯಾ ॥೩೦॥

೩೪೩
ಹುಡಿ ಹತ್ತದ ಗಾಳಿಯಂತೆ, ಕಾಡಿಗೆ ಹತ್ತದಾಲಿಯಂತೆ,
ನೆಯ್ ಹತ್ತದ ನಾಲಗೆಯಂತೆ, ಮಂಗಳ ಮಣ್ಣ ಬೆರಸದಂತೆ,
ಸಿದ್ಧಸೋಮನಾಥಾ,
ನಿಮ್ಮ ಶರಣನು ಸಕಲಸುಖಂಗಳ ಸುಖಿಸಿಯೂ ಬೇರಿಪ್ಪನು ॥೩೧॥

*

ಅರಿವಿನ ಮಾರಿತಂದೆಗಳ ವಚನ

೩೪೪
ಕಾಲವನರಿತು ನೇಮವ ಮಾಡಲಿಲ್ಲ, ಉಚಿತವನರಿತು ಕೃತ್ಯವ ಮಾಡಲಿಲ್ಲ,
ಮನ ನೆನೆದಂತೆ ತನು ಆಡಲಿಲ್ಲ,
ಆ ನೆನಹೆ ಘನಲಿಂಗಮೂರ್ತಿ[ಯ ಕುರುಹು].
ಆ ಕುರುಹು ಅರಿವಿನಲ್ಲಿ ನಿಂದಿತ್ತು, ಆ ಅರಿವೇ ಕುರುಹಾಗಿ ಬೆಳಗುತ್ತದೆ,
ಸದಾಶಿವಮೂರ್ತಿನಿಷ್ಕಲಲಿಂಗವು ತಾನಾಗಿ. ॥೧॥

೩೪೫
ಬಾರದಿರು ಬ್ರಹ್ಮನ ಅಂಡದಲ್ಲಿ, ಬೆಳೆಯದಿರು ವಿಷ್ಣುವಿನ ಕುಕ್ಷಿಯಲ್ಲಿ,
ಸಾಯದಿರು ರುದ್ರನ ಹೊಡೆಗಿಚ್ಚಿನಲ್ಲಿ.
ಹುಟ್ಟಿದ ಅಂಡವನೊಡೆ, ಬೆಳೆದ ಕುಕ್ಷಿಯ ಕುಕ್ಕು,
ಹೊಯ್ವ ಹೊಡೆಗಿಚ್ಚ ಕೆಡಿಸು. ಮೂರುಬಟ್ಟೆಯ ಮುದುಡು,
ಒಂದರಲ್ಲಿ ನಿಂದುನೋಡು. ಆ ಒಂದರಲ್ಲಿ ಸಂದಿಲ್ಲದ ಅಂಗವೇ ನೀನಾಗು
ಸದಾಶಿವಮೂರ್ತಿಲಿಂಗಕ್ಕೆ. ॥೨॥

೩೪೬
ಕಲ್ಲು ಮರ ಮಣ್ಣಿನ ಮರೆಯಲ್ಲಿ ಪೂಜಿಸಿಕೊಂಬುದು ವಸ್ತುವೇ?
ತನ್ನ ಮನಸ್ಸಿನ ಗೊತ್ತಲ್ಲದೆ.
ಅಲ್ಲಿಪ್ಪುದನರಿವ ಅರಿವು ತಾನೆ ನಿಜವಸ್ತುವಾಗಿ ಬೆಳಗುತ್ತದೆ,
ಸದಾಶಿವಮೂರ್ತಿಲಿಂಗವೆಯಾಗಿ. ॥೩॥

೩೪೭
ಕಲ್ಲಿನೊಳಗಳ ಜ್ಯೋತಿ, ಉರಿಯೊಳಗಳ ಉಷ್ಣ,
ಹಣ್ಣಿನೊಳಗಳ ಸಾರದ ಸವಿಯಂತೆ,
ಸವಿ ಲೇಪವಾದ ಚಿತ್ತದ ವಿಲಾಸಿತದಂತೆ,
ನಿಜಲಿಂಗದಲ್ಲಿ ಘನಬೆಳಗು ತೋರುತ್ತಲಿದೆ,
ಸದಾಶಿವಮೂರ್ತಿಲಿಂಗದಲ್ಲಿ. ॥೪॥

೩೪೮
ಆಕಾಶದಲ್ಲಿ ತೋರುವ ಮೋಡದ ಮುಗಿಲಿನಂತೆ,
ಶಶಾಂಕನ ಕಾಬ ಅಂಬುಧಿಯಂತೆ,

ವಿಷಧರನ ಕಾಬ ವಿಷಜದಂತೆ ಹೆಚ್ಚುಗೆಯಾಗಿ
ಆತ್ಮಭೇದದಲ್ಲಿ ಕುರುಹಿಟ್ಟುದ ಕಂಡು
ಮನವುಣ್ಮಿ ತನುಕರಗಿ ನಿಶ್ಚಯ ನಿಜತತ್ತ್ವದಲ್ಲಿ ಬೆಳಗುತ್ತದೆ
ಸದಾಶಿವಮೂರ್ತಿಲಿಂಗದಲ್ಲಿ. ॥೫॥

೩೪೯

ಮಲಯಜದ ಮಧ್ಯದಲ್ಲಿ ವಂಶ ಪುದಿದಿರೆ ಮುಟ್ಟದು ಗಂಧ ಅದೇಕೆ?
ಮಧ್ಯದ ದ್ವಾರದ ಲಕ್ಷಣದಿಂದ, ಪಾದಪದ ಜಾತಿಭಿನ್ನದಿಂದ.
ಆ ತೆರನನರಿದಲ್ಲಿ ಇದಿರಿಟ್ಟು ಕುರುಹು ಭಿನ್ನವಾಯಿತ್ತು.
ಆತ್ಮಂಗೆ ಅರಿವು ಸೂಜಿಯ ಮೊನೆಯಂತೆ,
ಕುರುಹು ಹಿಂಗಿದ ದ್ವಾರದಂತೆ,
ಉಭಯವ ಭೇದಿಸಿ ಆ ದ್ವಾರದಲ್ಲಿ ಎಯ್ದುವ
ನೂಲು ಮುಂದಳ ಹರಿಯ ಮುಚ್ಚುವಂತೆ
ಕುರುಹಿನ ಭಿನ್ನ ನಾಮನಷ್ಟವಾಗುತ್ತದೆ,
ನಿಜತತ್ವದ ಬೆಳಗು ತೋರುತ್ತದೆ, ಸದಾಶಿವಮೂರ್ತಿಲಿಂಗದಲ್ಲಿ. ॥೬॥

೩೫೦

ಅರುಣಕಿರಣ ಮಂದಿರದ ಕಂಡಿಯಲ್ಲಿ ತೋರುತ್ತದೆ,
ಆ ಘಟದಲ್ಲಿ ಎಡೆಯಾಡುವ "ಅಣೋರಣೀಯಾನ್" ಎಂಬಂತೆ,
ಅಂಗಮಧ್ಯದ ಚಿತ್ತದ ದ್ವಾರದಲ್ಲಿ ಅರಿದಡೆ ತಾಕುವ ಜ್ಞಾನ.
"ಅಣೋರಣಿಯಾನ್" ಎಂಬುದರಿದ ತನ್ನಯ ಅರಿವು
ನಿಂದ ಘಟದಲ್ಲಿ ಬೆಳಗುತ್ತದೆ, ಸದಾಶಿವಮೂರ್ತಿಲಿಂಗದಲ್ಲಿ. ॥೭॥

೩೫೧

ಉದಕ ನಿಂದಲ್ಲಿ ಪ್ರತಿಬಿಂಬ ನಿಶ್ಚಯವಾಯಿತ್ತು.
ಆ ಜಲ ಸಂಚಾರದಿಂದ ಕದಲೆ ಮತ್ತೆ
ಪ್ರತಿರೂಪಿಂಗೆ ಎಡೆಯುಂಟೆ?
ಚಿತ್ತ ಸಂಚಾರಿಸುವಲ್ಲಿ ಕುರುಹಿನ ಗೊತ್ತಿಗೆ ಒಡೆತನವುಂಟೆ?
ಇಂತೀ ಉಭಯದ ಸಕೀಲ ನಿಂದು, ಕಳೆ ಬೆಳಗುತ್ತದೆ
ಸದಾಶಿವಮೂರ್ತಿಲಿಂಗದಲ್ಲಿ. ॥೮॥

೩೫೨
ಚಕ್ಷುಮಯನಾಗಿ, ಚಕ್ಷುರೂಪನಾಗಿ,
ಚಕ್ಷುವಿಮುಕ್ಷನಾಗಿ, ವಿಮುಕ್ಷ ಸುಕ್ಷೇತ್ರವಾಗಿ,
ವಾಸಮಧ್ಯದಲ್ಲಿ ಆ ಮೂರ್ತಿಯ ಬೆಳಗು ತೋರುತ್ತದೆ,
ಸದಾಶಿವಮೂರ್ತಿಲಿಂಗದಲ್ಲಿ. ॥೯॥

೩೫೩
ಮಹಾವಾರಿಧಿಯ ತೆರೆಯ ಮಧ್ಯದಲ್ಲಿ
ಹುಟ್ಟುವ ಹೊಂದುವ ದಿನಮಣಿಯ ಭೇದದಂತೆ,
ತನ್ನ ಚಿತ್ತದ ಅರಿವು ಮರವೆ ಕುರುಹೆಂದು ಪ್ರಮಾಣಿಸದೆ,
ಅರಿವೆಂದು ನಿರ್ಧರಿಸದೆ
ಎರಡರ ಭೇದದಲ್ಲಿ ಕಂಡು ನಿಂದ ಉಳುಮೆ ಬೆಳಗುತ್ತದೆ,
ಸದಾಶಿವಮೂರ್ತಿಲಿಂಗದಲ್ಲಿ. ॥೧೦॥

೩೫೪
ಮಂಜಿನ ಉದಕ ವಾಯುಸಂಚಾರ ಮೋಡವಿಲ್ಲದೆ ಕರೆವಂತೆ
ಮನಪ್ರಕೃತಿ ಸಂಚಾರ ಹಿಂಗಿ,
ಕಲೆದೋರದ ಕುರುಹಿನಲ್ಲಿ ಸಲೆ ನಿಂದು ಉಭಯವಳಿದು
ಉಳುಮೆ ತಲೆದೋರಿ ಕಲೆ ಅಳಿದು ಬೆಳಗು ತೋರುತ್ತದೆ,
ಸದಾಶಿವಮೂರ್ತಿಲಿಂಗದಲ್ಲಿ. ॥೧೧॥

೩೫೫
ಕಲ್ಪತರುವಿಂಗೆ ಅಪ್ಪು ಎಯ್ದುವಂತೆ, ಇಕ್ಷುದಂಡಕ್ಕೆ ಮಧುರರಸ ಬೆಚ್ಚಂತೆ,
ಕ್ಷೀರವಿರೋಧಿಗೆ ಹಗೆ ಸ್ನೇಹವಾದಂತೆ, ಆ ಉಭಯದ ಭೇದ.
ಇದಿರಿಟ್ಟು ಕುರುಹು ಅರಿವ ಮನ ಎರಡಳಿದಲ್ಲಿಯೇ
ಕುರುಹಳಿದು ನಿಂದುಳುಮೆ ಬೆಳಗು ತೋರುತ್ತದೆ,
ಸದಾಶಿವಮೂರ್ತಿಲಿಂಗದಲ್ಲಿ. ॥೧೨॥

೩೫೬
ಕಲ್ಲು ಕಲ್ಲು ತಾಕಿದಲ್ಲಿ ಕಿಚ್ಚಿನ ಕಿಡಿಯಲ್ಲದೆ,
ಹೆಂಟೆ ಶಿಲೆ ಹೋರಿದಲ್ಲಿವುಂಟೆ?
ಅರಿದವನಲ್ಲಿ ಒಡಗೂಡುವ ಸುಖವಲ್ಲದೆ,
ಬರಿಯನಲ್ಲಿ, ಅರಿವು ಹೀನನಲ್ಲಿ,

ಅರಿವಿನ ಕುರುಹ ಮರೆದಾಡುವನಲ್ಲಿ,
ಸುರೆಯ ಮಡಕೆಯ ಪೂಜಿಸಿ ಕುಡಿವವನಂತಾಗಬೇಡ.
ಬರಿಯ ವಾಚಾಸಿದ್ಧಿಯಲ್ಲಿ ಅರಿದೆಹೆನೆಂದು
ಅವ ಕೊಟ್ಟರಿವಿನ ಕುರುಹ ಮರೆಯಬೇಡ.
ಆ ಮರೆಯಲ್ಲಿ ಬೆಳಗು ತೋರುತ್ತದೆ
ಸದಾಶಿವಮೂರ್ತಿಲಿಂಗದಲ್ಲಿ ಅದೆ. ॥೧೩॥

೩೫೭

ಶಿರಪಾದದೊಳಗಾದ ಅಂಗದ ಸುಖದುಃಖವ ಆತ್ಮನರಿವಂತೆ,
ಅರಿವೇ ಕುರುಹಾಗಿ ನಿಂದಲ್ಲಿ
ಆ ಉಭಯದ ಅಳಿವುಳಿವನರಿಯಬೇಕು.
ಆ ಭೇದವನರಿದಲ್ಲಿ ಆ ಅರಿವಿನ ಕುರುಹು ಚಿದ್ಘನದಲ್ಲಿ ನೆಲೆನಿಂದು,
ಉಳಿದ ಬೆಳಗು ಕಳೆದೋರುತ್ತದೆ, ಸದಾಶಿವಮೂರ್ತಿಲಿಂಗದಲ್ಲಿ .॥೧೪॥

೩೫೮

ಶರೀರಘಟಕ್ಕೆ ಶಿಲೆಮೂರ್ತಿ ವಸ್ತುವಾಯಿತ್ತು,
ಆತ್ಮಘಟಕ್ಕೆ ಅರಿವುಮೂರ್ತಿ ವಸ್ತುವಾಯಿತ್ತು.
ನೇಮಘಟ ನಿತ್ಯಲಿಂಗವನರಿತು, ನಿತ್ಯಲಿಂಗ ಅನಿತ್ಯಲಿಂಗವನರಿತು,
ಅನಿತ್ಯ ಚಿತ್ಪ್ರಕಾಶವನೆಯ್ದಿ, ಅದರ ಮರೆಯಲ್ಲಿ ಕುಡಿವೆಳಗು ತೋರುತ್ತದೆ,
ಸದಾಶಿವಮೂರ್ತಿಲಿಂಗದಲ್ಲಿ. ॥೧೫॥

೩೫೯

ಮರನ ತಾಳೂದಕ್ಕೆ ಪೃಥ್ವಿ ಆಧಾರವಾಗಿ,
ಶಾಖೆಯ ತಾಳೂದಕ್ಕೆ ಮರನಾಧಾರವಾಗಿ,
ಲತೆಯ ತಾಳೂದಕ್ಕೆ ಶಾಖೆ ಆಧಾರವಾಗಿ,
ಲತೆಯ ಬಿಡುಮುಡಿಯಲ್ಲಿ ಕುಸುಮತೋರಿ
ಕುಸುಮದ ತೊಟ್ಟಿನಲ್ಲಿ ಕುಸುಮವಳಿದು,
ಕಾಯಿ ಬಲಿದು ರಸ ಬಲಿದು ಹಣ್ಣಾದಂತೆ,
ತೊಟ್ಟು ಬಿಡುವನ್ನಕ್ಕ
ಕಾಯ ಶಿಲೆಯ ಪೂಜೆ, ಆತ್ಮ ಅರಿವಿನ ಪೂಜೆ.
ಉಭಯಸ್ಥಲ ನಿರುತವಾಗಿ ಬಿಟ್ಟು ನಿಂದುದು ವಸ್ತುವಿನ ಉಳುಮೆ.
ಆ ಉಳುಮೆ ಲೇಪವಾಗಿ ಬೆಳಗು ತೋರುತ್ತದೆ,
ಸದಾಶಿವಮೂರ್ತಿಲಿಂಗದಲ್ಲಿ, ॥೧೬॥

೩೬೦
ಬೇರಿಗೆ ನೀರನೆರೆದಲ್ಲಿ ಆ ಗಿಡುವಿಗೆ ಕಡೆ ನಡು ಮೊದಲೆನ್ನದೆ
ಸರ್ವಾಂಗವ ವೇಧಿಸಿ ಸಂಪನ್ನಿಕೆಯ ದೃಕ್ಕಿಂಗೆ ತೋರುವಂತೆ,
ಚಿತ್ತುವಿನ ಎರಕ ನಿಜತತ್ವದ ಕುರುಹಿನಲ್ಲಿ ಪರಿಪೂರ್ಣವಾಗಿ
ಸಂಪದ ತೋರುತ್ತದೆ.
ಕುರಿತ ಕುರುಹಿನ ಮರೆಯಲ್ಲಿ ಅರಿವು ನಿಂದು
ಕುರುಹು ನಿಷ್ಪತ್ತಿಯಾಗುತ್ತದೆ ಎಂಬ ಸಂದೇಹ ನಿಂದಿತ್ತು.
ಎಂಬುದನರಿತಾಗ ಬೆಳಗು ತೋರುತ್ತದೆ
ಸದಾಶಿವಮೂರ್ತಿಲಿಂಗದಲ್ಲಿ. ॥೧೭॥

೩೬೧
ಅಕ್ಷಿಯ ಮಧ್ಯದ ಕಾಳಿಕೆಯ ನಟ್ಟನಡುವಳ
ಸೂತ್ರ[ದೋ]ರುವ ಚಿಹ್ನ ಉಡುಗಿದ ಮತ್ತೆ
ಅಕ್ಷಿಯ ತೆರಪು ಎಷ್ಟಾದಡೇನು?
ಆ ತೆರದಂತೆ, ಲೌಕಿಕದಲ್ಲಿ ಮಾಡುವ ವರ್ತಕ
ವಸ್ತುವನರಿಯದ ಜ್ಞಾನ ಧನಕನಕ ವಾಜಿವಾಹನಂಗಳಿಂದ ಲೇಪನ ಅಂಬರ
ತಸ್ಯಾಂತರ ನಿಳಯಂಗಳಿಂದ ಕೀರ್ತಿಭೂಷಣಕ್ಕೆ ಮಾಡಿದಡೇನು?
ಇದನಳಿದು ಅದನರಿತು ಉಭಯ ತನ್ಮಯ ನಷ್ಟವಾಗಿ
ಅದರ ಮರೆಯಲ್ಲಿ ಬೆಳಗು ತೋರುತ್ತದೆ
ಸದಾಶಿವಮೂರ್ತಿಲಿಂಗದಲ್ಲಿ. ॥೧೮॥

೩೬೨
ಹರಿವ ಶಕಟಂಗೆ ಕಡೆಗೀಲು ಕಡೆಯಾದಲ್ಲಿ
ಆ ಗಾಲಿ ಅಡಿಯಿಡಬಲ್ಲುದೆ?
ಕುರುಹಿನ ಮೂರ್ತಿಯಲ್ಲಿ ಅರಿವು ಒಡಗೂಡದಿರೆ
ಆ ಜ್ಞಾನ ಹಿಂದ ಮರೆದು ಮುಂದಕ್ಕಡಿಯಿಡಲಿಲ್ಲ.
ತಡಿಯಲ್ಲಿ ನಿಂದು ಮಡುವಿನಲ್ಲಿದ್ದ ಹರುಗೋಲಕ್ಕೆ ಅಡಿಯಿಟ್ಟು
ಅದುವೊಡಗೂಡಿ ಎಯ್ದುವಂತೆ
ಕುರುಹಿನ ತಡಿ, ಮರವೆಯ ಮಡು, ಮಾಡುವ ವರ್ತಕ ಹರುಗೋಲಾಗಿ,
ಅರಿಕೆ ಅಂಬಿಗನಾಗಿ ಸಂಸಾರ ಸಾಗರವ ದಾಂಟಿ,
ಆ ತಡಿಯ ಮರೆಯಲದೆ ನಿಜನೆಮ್ಮುಗೆಯ ಕಳೆಬೆಳಗು ಬೆಳಗುತ್ತದೆ
ಸದಾಶಿವಮೂರ್ತಿಲಿಂಗದಲ್ಲಿ. ॥೧೯॥

೩೬೩
ಮಣಿಯ ವೇಜ್ಜದಲ್ಲಿ ಎಯ್ದುವ ರಜ್ಜು, ಮೊನೆ ಮಣಿದಲ್ಲಿ ನಿಂದಿತ್ತು.
ಅದರಿರವು ಲಕ್ಷಿಸುವ ಲಕ್ಷ್ಯದಲ್ಲಿ ಅಲಕ್ಷ್ಯಮಯ ಅಭಿಮುಖವಾಗಲಾಗಿಸಿಕ್ಕಿತ್ತು,
ಮಾಡುವ ಸತ್ಕ್ರೀ ವಸ್ತುವ ಮುಟ್ಟಲಿಲ್ಲದೆ
ಇಂತೀ ಯುಗಳ ನಾಮವಳಿದು ಲಕ್ಷ್ಯ ಅಲಕ್ಷ್ಯಕ್ಕೆ ಬೆಚ್ಚಂತಿರಬೇಕು.
ಬೆಸುಗೆಯ ನಡುವೆ ಬೆಳಗುತ್ತದೆ, ಸದಾಶಿವಮೂರ್ತಿಲಿಂಗ. ॥೨೦॥

೩೬೪
ಕಸುಗಾಯಲ್ಲಿ ಹಣ್ಣಿನ ರಸವನರಸಿದರುಂಟೆ, ಅಯ್ಯಾ?
ಶಿಶು ಗರ್ಭದಲ್ಲಿ ಬಲಿವುದಕ್ಕೆ ಮೊದಲೆ
ಅಸು ಘಟಿಸಿದುದುಂಟೆ, ಅಯ್ಯಾ?
ಮಾಡುವ ಆಚರಣೆಮಾರ್ಗ ಭಾವಶುದ್ಧವಾಗಿ ನೆಲೆಗೊಳ್ಳದೆ
ಕಾಮ್ಯದಲ್ಲಿ ಕಾಮ್ಯಾರ್ಥ ನೆಲೆಗೊಂಬ ಪರಿಯಿನ್ನೆಂತೊ?
ಸೂಜಿಕಲ್ಲು ಸೂಜಿಯನರಸುವಂತೆ,
ಉಭಯಕ್ಕೆ ಬಾಯಿಲ್ಲದೆ ಕಚ್ಚುವ ತೆರನ ನೋಡಾ, ಅಯ್ಯಾ!
ಶಿಲೆ ಲೋಹದಿಂದ ಕಡೆಯೆ ನಿಮ್ಮಯ ಅರಿವಿನ ಭೇದ?
ಅದರ ಮರೆಯ ಬೆಳಗು ತೋರುತ್ತದೆ
ಸದಾಶಿವಮೂರ್ತಿಲಿಂಗದಲ್ಲಿ. ॥೨೧॥

೩೬೫
ಹೃದಯದಲ್ಲಿ ತೋರುವ ಅರಿವು ತನ್ಮಯವಾಗಿ,
ಇದಿರಿಟ್ಟ ಭಾವಕ್ಕೆ ನೆಲೆಗೊಂಡು, ಭಾವ ತುಂಬಿ
ಕಂಗಳ ಮಧ್ಯದಲ್ಲಿ ಹಿಂಗದೆ ನಿಶ್ಚೈಸಿ,
ಅನಿಮಿಷನಂಗದಂತೆ, ಕೂರ್ಮನ ಸ್ನೇಹದಂತೆ,
ಅಂಬು ಅಂಬುಜದಂತೆ,
ಉಭಯ ಸಂಗದಲ್ಲಿ ನಿಸ್ಸಂಗನ ಬೆಳಗು ತೋರುತ್ತದೆ,
ಸದಾಶಿವಮೂರ್ತಿಲಿಂಗದಲ್ಲಿ. ॥೨೨॥

೩೬೬
ಶಶಿಕಾಂತದ ಶಿಲೆ ಒಸರುವಂತೆ,
ಕುಸುಮ ಋತುಕಾಲಕ್ಕೆ ದೆಸೆಗೆ ಪಸರಿಸುವಂತೆ,
ಅಂಗ ಸಂಬಂಧಕ್ಕೆ, ಆತ್ಮನ ಅರಿವಿಂಗೆ, ಮಾಡುವ ತತ್ಕಾಲಕ್ಕೆ,
ಆ ಭಾವದಲ್ಲಿ ಭಾವಿಸಿ ನಾನೆಂಬುದನಳಿದು

ನೀನೆಂಬುದಕೆ ತಾವಿಲ್ಲದೆ, ಆ ಭಾವವೆ ಬೆಳಗುತ್ತದೆ
ಸದಾಶಿವಮೂರ್ತಿಲಿಂಗದಲ್ಲಿ. ॥೨೩॥

೩೬೭

ಭೂಮಿಯ ಬಡತನಕ್ಕೆ ಗೆಯ್ದರುಂಟೆ?
ತಳಿಗೆ ಹಸಿಯಿತ್ತೆಂದು ಇಕ್ಕಿದರುಂಟೆ?
ಅಂಗಕ್ಕೆ ಉಪಚಾರವ ಮಾಡುವಾಗ ಆ ಅಂಗ ಏತರಿಂದವೊದಗಿತ್ತೆಂಬುದನರಿ.
ತನ್ನ ಕುರಿತು ಮಾಡುವ ಸುಖಭೋಗಂಗಳಿಗೆ
ಅಂಗಕ್ಕೆಂದು ಪ್ರಮಾಳಿಸಲಿಲ್ಲ.
ಅದೆಂತೆಂದಡೆ:
ಬಯಲರಿಯದ ಜಗವುಂಟೆ? ವಾಯುವರಿಯದ ಗಂಧವುಂಟೆ?
ಅಪ್ಪುವರತ ಸಕಲ ಚೇತನವುಂಟೆ?
ದೃಷ್ಟವನೆ ಕಂಡು, ಇದಿರಿಟ್ಟು ಶ್ರೋತ್ರದಲ್ಲಿ ಕೇಳಿ,
ಇಷ್ಟನರಿಯದೆ ನಾ ಕೊಟ್ಟೆ-ವಸ್ತು ಕೊಂಡಿತ್ತೆಂಬ ಭಾವವಳಿದು,
ಅರಿದ ಮರೆಯಲ್ಲಿ ಬೆಳಗುದೋರುತ್ತದೆ, ಸದಾಶಿವಮೂರ್ತಿಲಿಂಗದಲ್ಲಿ. ॥೨೪॥

೩೬೮

ಕಾಮಧೇನುವೆಂದಡೆ ಇಹುದಕ್ಕೆ ನೆಲೆ ಬೇಕು,
ಕಲ್ಪತರುವೆಂದಡೆ ಹುಟ್ಟುವುದಕ್ಕೆ ಭೂಮಿ ಬೇಕು,
ಚಿಂತಾಮಣಿಯೆಂದಡೆ ತಾನೊಂದ ಚಿಂತಿಸಿ ಬೇಡಿಯಲ್ಲದೆ ಕೊಡದೊಂದುವ.
ಇವಕ್ಕೆಲ್ಲಕ್ಕೂ ಒಂದೊಂದು ನಿಂದ ನೆಲೆ ವಾಸವಾಯಿತ್ತು.
ಮನದರಿವಿಂಗೆ, ಕೈಯ ಕುರುಹಿಂಗೆ,
ವಿಚಾರದಿಂದ ಒಳಹೊಕ್ಕು ನಿಂದು ನೋಡಲಾಗಿ,
ಹಿಂದಳ ಕತ್ತಲೆಯ ಮುಂದಳ ಬೆಳಗಿನ ಉಭಯದ ಸಂಧಿಯಲ್ಲಿ
ಸಲೆ ಸಂದು ತೋರುತ್ತದೆ, ನಿಜದ ಬೆಳಗು ತೋರುತ್ತದೆ,
ಸದಾಶಿವಮೂರ್ತಿಲಿಂಗದಲ್ಲಿ. ॥೨೫॥

೩೬೯

ಅಂಬರದಲ್ಲಿ ತೋರುವ ಚಾಪದ ಬಹುವರ್ಣದ ಸಂಭ್ರಮ
ಕುಂಭಿನಿಯ ಜಲದಲ್ಲಿ ತೋರುತ್ತಿರೆ ಉಭಯದಲ್ಲಿಯೂ ಬಯಲು.
ಆ ರಂಜನೆಯಂತೆ ಚಿತ್ತದ ಕಲೆ ಚಿತ್‌ಶಕ್ತಿಯ ಅರಿವು
ಮರ್ತ್ಯರಿಗೆ ಅಗೋಚರ.
ಚಿತ್ತಜನ ಬಿಲ್ಲನೆತ್ತುವಾತ ಅನಿತ್ಯದ ಗೊತ್ತಿನಲ್ಲೈದಾನೆ.

ನಿತ್ಯದ ಗೊತ್ತ ಮುಟ್ಟಿ, ಉಭಯದ ಗೊತ್ತ ಬಚ್ಚಬಯಲಾಯಿತ್ತು.
ಬಯಲ ಬೆಳಗಿನಲ್ಲಿ ಹೊಳಹುದೋರುತ್ತದೆ,
ಸದಾಶಿವಮೂರ್ತಿಲಿಂಗದಲ್ಲಿ, ॥೨೬॥

೩೭೦
ರೂಪಿಗೆ ನಿರೂಪೆಂದು ಕುರುಹಿಟ್ಟುಕೊಂಡಿಪ್ಪರು,
ರೂಪಿನೊಳಗೆ ತಿರುಗಾಡುವ ನಿರೂಪೆಂದರಿಯದೆ,
ರೂಪಡಗಿದಲ್ಲಿ ಹಿಡಿದೆ ಬಿಟ್ಟೆನೆಂಬ ಸಂದೇಹವಡಗಿತ್ತು.
ಅಡಗುವನ್ನಬರ ತಾನೆ ಕುರುಹೆ?
ಬೇವಿಂಗೆ ಕಹಿ, ಬೆಲ್ಲಕೆ ಸಿಹಿ ಇವ ಎರಡಳಿದಲ್ಲಿ
ನಾನೀನೆಂಬನ್ನಕ್ಕ ಏನೂ ಎನಲಿಲ್ಲ.
ಅದು ನಾಮ ನಷ್ಟವಾಗೆ, ಆದಲ್ಲಿ ಅದೆ ಕಳೆಬೆಳಗು ತೋರುತ್ತದೆ
ಸದಾಶಿವಮೂರ್ತಿಲಿಂಗದಲ್ಲಿ. ॥೨೭॥

೩೭೧
ಅಂಗವ ಮರೆದು ಲಿಂಗವನರಿಯಬೇಕೆಂಬರು,
ಕರಣಂಗಳರತು ಘನಲಿಂಗವನರಿಯಬೇಕೆಂಬರು.
ಅದು ನಾನಿಕ್ಕಿದ ತಡೆ ಕೇಳಿರಣ್ಣಾ.
ಆಕಾಶ ಬಯಲಾದಡೆ ಮುಗಿಲು ರೂಪ ತೋರಿ ಅಳಿವ ಪರಿಯಿನ್ನೆಂತೊ?
ನಕ್ಷತ್ರ ಚಂದ್ರ ಸೂರ್ಯಾದಿಗಳು ಗ್ರಹ ಪ್ರವರ್ತನವಹ ಪರಿಯಿನ್ನೆಂತೊ?
ಅವು ವಾಯುಮಯ ಆಧಾರವಾಗಿ ತೋರುತ್ತಿಹ ನೆಮ್ಮುಗೆಯ ಇರವು.
ಅದು ಕಾರಣದಲ್ಲಿ ಅಂಗವಿದ್ದಂತೆ ಲಿಂಗವನರಿಯಬೇಕು,
ಕರಣಂಗಳಿದ್ದಂತೆ ಘನಲಿಂಗವ ಭೇದಿಸಬೇಕು.
ಹೀಗಲ್ಲದೆ ಮರೆದರಿಯಲಿಲ್ಲ, ಅರಿದು ಮರೆಯಲಿಲ್ಲ
ಉಭಯದ ಅಭಿಸಂಧಿಯಲ್ಲಿ ಬೆಳಗು ತೋರುತ್ತದೆ
ಸದಾಶಿವಮೂರ್ತಿಲಿಂಗದಲ್ಲಿ. ॥೨೮॥

೩೭೨
ನಾರಿಯಲ್ಲಿ ಕೋಲ ಹೂಡಿ, ಆರೈಕೆಯ ಮಾಡಿ ಎಸೆಯಲಿಕ್ಕೆ
ತಾಗಿತು ಮನ ಸಂದ ಗುರಿಯ. ಅದೇತರ ಗುಣದಿಂದ?
ಮರ ಬಾಗಿ ನಾರಿಯ್ಯೆದಿ ಬಾಣ ಶರಸಂಧಾನವಾಗಿ ತಾಗಿದಂತೆ
ಚಿತ್ತ ಹಸ್ತದ ಲಿಂಗದ ದೃಷ್ಟ.
ಮನ ವಚನ ಕಾಯ ತ್ರಿಕರಣದಲ್ಲಿ ಕರಣಂಗಳಿಂದ ಅರಿತು,

ಕಾಯದ ನೆಮ್ಮುಗೆಯಲ್ಲಿ ಕಾಣಬೇಕು.
ಕಾಬ ತೆರದ ಮರೆಯಲ್ಲಿ ಕಳೆ ತೋರುತ್ತದೆ,
ಕುಡಿವೆಳಗು ಕಳಕಳಿಸುತ್ತದೆ, ಸದಾಶಿವ[ಮೂರ್ತಿ]ಲಿಂಗದಲ್ಲಿ, ॥೨೯॥

೩೭೩
ಕಾಯವಿದ್ದು ಕಾಬುದು ವಿಜ್ಞಾನ, ಜೀವವಿದ್ದು ಕಾಬುದು ಸುಜ್ಞಾನ,
ಎರಡಳಿದು ತೋರಿಕೆಯಲ್ಲಿ ಕಾಬುದು ಪರಂಜ್ಯೋತಿಜ್ಞಾನ,
ಇಂತೀ ಮೂರು ಮುಖವ ಏಕವ ಮಾಡಿ
ಬೇರೊಂದು ಕಾಬುದು ಪರಮಪ್ರಕಾಶಜ್ಞಾನ.
ಇಂತೀ ಅಂತರ ಪಟಂತರದಲ್ಲಿ ನಿಂದು ನೋಡುವ
ಸಂದೇಹವ ಹರಿದ ಸಂದಿನಲ್ಲಿ
ಕುಂದದ ಬೆಳಗು ತೋರುತ್ತದೆ, ಸದಾಶಿವಮೂರ್ತಿಲಿಂಗದಲ್ಲಿ, ॥೩೦॥

೩೭೪
ಅಗ್ನಿ ಅಂಗವಾಗಿ, ವಾಯು ಪ್ರಾಣವಾಗಿ,
ಉಭಯ ಸಂಗದಂತಿರಬೇಕು,
ಅಂಗಲಿಂಗ ಪ್ರಾಣಯೋಗ ಸಂಬಂಧ.
ಅಗ್ನಿ ಮರೆದರೆ ವಾಯುವೆಚ್ಚರಿಕೆಯ ಮಾಡುವಂತೆ,
ಅಗ್ನಿ ಮುಟ್ಟಿದ ಕಾಷ್ಠದೊಳಗಾದ ದ್ರವ್ಯಂಗಳು, ಹಿಂದಳ ನಾಮವುಂಟೆ?
ವಸ್ತುಲೇಪವಾದ ಅಂಗಪ್ರಾಣ ಬೇರೊಂದಿದಿರಿಡಲಿಲ್ಲ.
ಅಂಗಭಾವ ನಿಶ್ಚಯವಾಯಿತ್ತು,
ಸದಾಶಿವಮೂರ್ತಿಲಿಂಗದಲ್ಲಿ ಲೀಯವಾಗಲಿಕ್ಕೆ. ॥೩೧॥

೩೭೫
ಕಾಯವಳಿಯಲಾಗಿ ಜೀವನ ಚೇತನಕ್ಕೆ ಸ್ಥಾಪ್ಯವಿಲ್ಲ.
ಜೀವ ಹಿಂಗೆ ಘಟವೊಂದು ದಿನಕ್ಕೆ ಆಶ್ರಯಿಸಿ ನಿಲಲರಿಯದು.
ಒಂದ ಬಿಟ್ಟೊಂದ ಹಿಡಿವುದಕ್ಕೆ ಎಡೆತೆರಪಿಲ್ಲ.
ಇದು ಕಾರಣದಲ್ಲಿ, ಇಷ್ಟಕ್ಕೂ ಪ್ರಾಣಕ್ಕೂ ಬೆಚ್ಚಂತಿರಬೇಕು.
ನಿಂದ ಇರವಿನಲ್ಲಿ ಸಂದು,
ಮತ್ತೊಂದು ವಿಚಾರಿಸಿಹೆನೆಂಬ ಸಂದೇಹವಳಿದಲ್ಲಿ
ತೋರುತ್ತದೆ ಬೆಳಗು, ಸದಾಶಿವಮೂರ್ತಿಲಿಂಗದಲ್ಲಿ ॥೩೨॥

೩೭೬

ಚಿತ್ತದಲ್ಲಿ ನೆನೆದ ಲೆಕ್ಕವ ಇದಿರಿಟ್ಟು ಬರೆದಲ್ಲದೆ ಅರಿಯಬಾರದು.
ಅರಿವು ಘನದಲ್ಲಿ ನಿಂದೆನೆಂದಡೆ
ದೃಷ್ಟವಾದ ಲಿಂಗದಲ್ಲಿ ನಿಂದಲ್ಲದೆ ಕಾಣಬಾರದು.
ಹೀಗಲ್ಲದೆ, ಆಧ್ಯಾತ್ಮದಲ್ಲಿ ಹೊದ್ದಿನೋಡಿ ಕಂಡೆನೆಂಬ
ಬದ್ಧರ ಮಾತ ಹೊದ್ದದಿರಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೩೩॥

೩೭೭

ಉಂಟು ಇಲ್ಲಾ ಎಂಬುದನರಿತು ನುಡಿವುದು ಕ್ರೀಯೊ? ನಿಃಕ್ರೀಯೊ?
ಇವೆಲ್ಲವನರಿತು ನುಡಿವುದು ಘಟದೊಳಗಳ ಮಾತಲ್ಲದೆ
ಅದು ಮಾಯಾವಾದದ ಇರವು.
ಭಾವ ಕಾಯದಲ್ಲಿ ಸಿಕ್ಕಿ ಸಕಲವನೊಡಗೂಡಿ ಭೋಗಂಗಳನುಣುತ
ನಾನಲ್ಲ ಎಂಬ ಮಾಯಾವಾದಿಗಳ ಮಾತು,
ಕನ್ನದ ಬಾಯಲ್ಲಿ ಸಿಕ್ಕಿದ ಕಳ್ಳನ ಬಾಯಾಲಿನಂತೆ ಬಲ್ಲವರು ಮೆಚ್ಚುವರೆ?
ಶರೀರವುಳ್ಳನ್ನಕ್ಕ ಇಷ್ಟಪ್ರಾಣ ಮುಕ್ತನಾಗಬೇಕು.
ಇದೆ ನಿಶ್ಚಯ, ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೩೪॥

೩೭೮

ತಲೆಯೊಳಗಳ ಬಾಯಲ್ಲಿ ಹಲವು ರುಚಿಯಿಲ್ಲದೆ
ಕೆಳಗಳ ದ್ವಾರದಲ್ಲಿ ಉಣಬಹುದೆ ಅಯ್ಯಾ?
ಹಿಡಿವುದನರಿತು, ಹಿಡಿದು ಬಿಡುವುದನರಿತು,
ಬಿಟ್ಟು ಇಷ್ಟಪ್ರಾಣವನೊಡಗೂಡಬೇಕಲ್ಲದೆ,
ಇಷ್ಟವಿಲ್ಲದ ಪ್ರಾಣ ವಸ್ತುವೆಂಬ ಮಿಟ್ಟೆಯ ಭಂಡರ ಮೆಚ್ಚುವನೆ,
ಎನ್ನ ಸದಾಶಿವಮೂರ್ತಿಯನರಿತ ನಿರಂಗ? ॥೩೫॥

೩೭೯

ಬೀಜವಿಲ್ಲದೆ ಬೆಳೆವುಂಟೆ, ಅಯ್ಯಾ? ನಾದವಿಲ್ಲದೆ ಶಬ್ದವುಂಟೆ, ಅಯ್ಯಾ?
ದೃಷ್ಟಿಯಿಲ್ಲ[ದೆ] ಕಳೆ ಉಂಟೆ, ಅಯ್ಯಾ?
ಅಂಗಸಹಿತವಾಗಿ ಸರ್ವಸಂಗವನರಿಯಬೇಕಲ್ಲದೆ,
ನಿರಂಗ ಅಂಗದಲ್ಲಿ ಹೊಕ್ಕು ಸರ್ವಭೋಗಂಗಳ ಕಾಬುದಕ್ಕೆ ಇದೇ ದೃಷ್ಟ.
ಬಂಗಾರದ ಒಡಲಿನಲ್ಲಿ ಬಣ್ಣ ನಿಂದು ಲೆಕ್ಕವಟ್ಟಂತೆ ಬಾಹಂತೆ,

ಆತ್ಮನ ದೃಷ್ಟನ ಕಂಡು ಮತ್ತೆ ಆಧ್ಯಾತ್ಮವೆನಲೇಕೆ?
ಘಟದ ಮಧ್ಯದಲ್ಲಿ ನಿಂದು ನುಡಿವುದೆ ಕ್ರೀಯೆಂದೆ,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೩೬॥

೩೮೦
ವಾಯು ಬಯಲೆಂದಡೆ ತಿರುಗುವ ಆಲವಟ್ಟದಲ್ಲಿ ಸಿಕ್ಕಿ
ಕುರುಹುಗೊಂಬುತಿದ್ದಿತ್ತು.
ಇಂತೀ ಕುರುಹಿಲ್ಲದೆ ಅರಿವ ಪರಿಯಿನ್ನೆಂತೊ?
ಅರಿವ ಆತ್ಮ, ನಿಂದು ನುಡಿವಂಗದ ಕುರುಹಿನಲ್ಲಿದ್ದು
ಮತ್ತೆ ತತ್ವವಾದ ಪರಿಯಿನ್ನೆಂತೊ?
ತೋರುವ ತೋರಿಕೆ ಅಂಗಮಯವಾದ
ಮತ್ತೆ ಕುರುಹ ಹಿಂಗಿ ಅರಿವ ಪರಿಯಿನ್ನೆಂತೊ?
ಮೀರಿ ಕಾಬುದು ಮೂರು ತತ್ವದಿಂದ ಆಚೆಯಲ್ಲಿ.
ಅಷ್ಟನರಿವ ತನಕ ಇಷ್ಟನರಿಯಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ . ॥೩೭॥

೩೮೧
ವಸ್ತು ಸ್ವಯಂಭುವಾಗಿದ್ದಲ್ಲಿ ನಾಮರೂಪುಕ್ರೀಗೆ ಹೊರಗಾಗಿದ್ದಿತ್ತು.
ತನ್ನಯ ಸುಲೀಲೆ ಹಿಂಗಿ ಜಗಹಿತಾರ್ಥವಾಗಿ ಉಮಾಪತಿಯ ಧರಿಸಿದಲ್ಲಿ
ತ್ರಿವಿಧಮೂರ್ತಿಯ ಭಾವ ಕಲ್ಪಿಸಿದಲ್ಲಿ, ಕ್ರಿಯಾಸಂಪದಕ್ಕೆ ಒಳಗಾಗಿ,
ಅಷ್ಟವಿಧಾರ್ಚನೆ ಷೋಡಶ ಉಪಚರ್ಯವ ಮಾಡಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೩೮॥

೩೮೨
ಪ್ರಾಣಕ್ಕೆ ಉಪದೇಶವ ಮಾಡಿ, ಕಾಯಕ್ಕೆ ಲಿಂಗವ ಕೊಡಬೇಕು.
ಕಾಯಶುದ್ಧವ ಮಾಡಿ, ಪ್ರಾಣಕ್ಕೆ ಅರಿವ ತೋರಬೇಕು.
ಇಷ್ಟನರಿಯದೆ ದೀಕ್ಷೆಯ ಮಾಡಬಾರದು.
ಕುರುಡನ ಕೈಯ್ಯಲ್ಲಿ ಕೂಳ ಕಲಸಿ, ಪ್ರತಿ ಕುರುಡಂಗೆ ಊಡಿಸಿದಂತಾಯಿತ್ತು.
ಮಲಭಾಂಡ ಜೀವಿಯ ಕೈಯಲ್ಲಿ ಅನುಜ್ಞೆಯಾದ ಶಿಷ್ಯಂಗೆ
ಉಭಯದ ಕೇಡಾಯಿತ್ತು, ಇದನರಿತು ನಡೆಯಿರಣ್ಣಾ,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೩೯॥

೩೮೩

ಗುರುಮಾರ್ಗವನರಿಯದೆ ಆತ್ಮತೇಜದಿಂದ ಪೀಳಿಗೆ ಶುದ್ಧವೆಂದು,
ಆಗುಚೇಗೆಯನರಿಯದೆ ಉಪದೇಶವ ಮಾಡೂದಕ್ಕೊಡಲಾಹ,
ಕಂಬಳಕ್ಕೆ [ಅಪೇಯವ] ತಿಂಬ,
ದುರ್ಗುಣ ಕಾಯ ವಿಕಾರಿಗಳನೊಲ್ಲರು
ಸದಾಶಿವಮೂರ್ತಿಲಿಂಗವನರಿದ ಶರಣರು. ॥೪೦॥

೩೮೪

ಲಿಂಗ ಹೊರತೆಯಾಗಿ, ವಿಭೂತಿ ರುದ್ರಾಕ್ಷಿಯ ಕೊಟ್ಟು,
ಗುರುವಾಗಬಹುದೆ ಅಯ್ಯಾ? ಬೀಜವಿಲ್ಲದೆ ಅಂಕುರವಾಗಬಲ್ಲುದೆ?
ಗಂಡನಿಲ್ಲದ ಮುಂಡೆಗೆ ಗರ್ಭನಿಂದಡೆ ಅವಳಾರಿಗೆ ಯೋಗ್ಯ?
ಉಭಯವು ಕೇಡಾಯಿತ್ತು.
ಇದನರಿತು ಮಾಡಿ, ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೪೧॥

೩೮೫

ತನ್ನ ಕೈಯಲ್ಲಿ ಲಿಂಗವಿದ್ದು
ತಾನಿದಿರಿಗೆ ಸ್ಮಶಾನದೀಕ್ಷೆಯ ಮಾಡಬಹುದೆ ಅಯ್ಯಾ?
ಇಂತೀ ಉದರಘಾತಕ ಗುರು, ಶರೀರದಹನ ಶಿಷ್ಯ
ಇಂತೀ ಉಭಯ ಪಾತಕರು,
ಸದಾಶಿವಮೂರ್ತಿಲಿಂಗಕ್ಕೆ ಸ್ವಪ್ನದಲ್ಲಿ ದೂರ. ॥೪೨॥

೩೮೬

ಅಂಗದ ಮೇಲೆ ಲಿಂಗವಿಲ್ಲದೆ ವಿಭೂತಿ ರುದ್ರಾಕ್ಷಿಯ ಧರಿಸಲಾಗದು.
ಅದೆಂತೆಂದಡೆ:
ಸತಿಪುರುಷರಿಗೆ ಸಂಯೋಗವಲ್ಲದೆ,
ಸತಿ ಸತಿಗೆ, ಪುರುಷ ಪುರುಷಗೆ ಸಂಯೋಗವುಂಟೆ?
ಅಂಗಹೀನಂಗೆ ಹಿಂಗದ ನವರಸವುಂಟೆ ಅಯ್ಯಾ?
ಇಂತೀ ಲಿಂಗಬಾಹ್ಯಂಗೆ ವಿಭೂತಿಯ ಪಟ್ಟವೆಂದು ಕಟ್ಟಿದ ಗುರು
ಕುಂಭೀಘೋರಕ್ಕೆ ಒಳಗು, ಸದಾಶಿವಮೂರ್ತಿಲಿಂಗಕ್ಕೆ ದೂರ. ॥೪೩॥

೩೮೭

ವೀರಶೈವ ಗುರುವಾಗಿ ಶುದ್ಧಶೈವಕ್ಕೆ ಹೊರಗಾಗಬೇಕು,
ಶುದ್ಧಶೈವ ಗುರುವಾಗಿ ಮಾರ್ಗಶೈವಕ್ಕೆ ಹೊರಗಾಗಬೇಕು,

ಮಾರ್ಗಶೈವ ಗುರುವಾಗಿ ಪೂರ್ವಶೈವಕ್ಕೆ ಹೊರಗಾಗಬೇಕು.
ಇಂತೀ ಶೈವಂಗಳಲ್ಲಿ ಸನ್ನದ್ಧನಾಗಿ ತಿಳಿದು,
ಅಂಗಲಿಂಗ ಆತ್ಮನಲ್ಲಿ ನಿಂದು ಸಂಯೋಗವ ಮಾಡಬೇಕು.
ಮಾಡಿದಲ್ಲಿ ಕೂಡಿದ ಕಾರಣ ವೀರಶೈವವೆಂಬ ಹೆಸರಾಯಿತ್ತು.
ಸದಾಶಿವಮೂರ್ತಿಲಿಂಗವನರಿತಲ್ಲಿ. ॥೪೪॥

೩೮೮
ಸ್ಥಾವರಲಿಂಗಪೂಜೆ ಶುದ್ಧಶೈವ, ಮಾರ್ಗಶೈವ ಲಿಂಗಪೂಜೆ ಸಿಂಹಾಸನ.
ಪೂರ್ವಶೈವಪೂಜೆ ಸಂಕಲ್ಪನಿರಾವರಣ,
ವೀರಶೈವ ಲಿಂಗಪೂಜೆ ಅಂಗದ ಮೇಲೆ ಹಿಂಗದೆ ಧರಿಸಿಹುದು.
ಇವೆಲ್ಲವು ಸರಿ, ಶೈವಪೂಜೆ ಅದೆಂತೆಂದಡೆ:
ಇಷ್ಟಲಿಂಗ ಜೀವನ ಅಂಗ ಉಭಯವ ಕೂಡಿ ಲೀಯವಾಗಿದ್ದುದು
ಶೈವಭೇದಂಗಳಿಗೆ ಹೊರಗು ಸದಾಶಿವಮೂರ್ತಿಲಿಂಗಕ್ಕೆ ಒಳಗು. ॥೪೫॥

೩೮೯
ಅರಿವ ಮರೆದ ಪೂಜೆ ಸ್ಥಾವರಲಿಂಗಕ್ಕೆ ಸರಿ,
ಅರಿಯದೆ ಮರೆಯದೆ ಕರಿಗೊಂಡ ನೆನಹು,
ಅದು ಪರಿಪೂರ್ಣ ಪ್ರಾಣಲಿಂಗ ಸಂಬಂಧ.
ಇಂತಿವರಲ್ಲಿ ಭೇದಂಗಳನರಿತು
ಪರತತ್ವ ಕೊಡುವ ಪರಮಗುರುವಾಗಬೇಕು,
ಸದಾಶಿವಮೂರ್ತಿಲಿಂಗವು ತಾನಾಗಬೇಕು. ॥೪೬॥

೩೯೦
ಪ್ರಥಮದೀಕ್ಷೆ, ಪರಬ್ರಹ್ಮದೀಕ್ಷೆ, ಅಂಗಲಿಂಗದೀಕ್ಷೆ, ಪುನರ್ದೀಕ್ಷೆ:
ಇಂತೀ ದೀಕ್ಷೆಗಳಲ್ಲಿ ತಿಳಿಯಬೇಕು.
ಪ್ರಥಮದೀಕ್ಷೆಯ ಮಾಡುವಲ್ಲಿ ಬ್ರಹ್ಮನ ಪಾಶವ ಹರಿಯಬೇಕು.
ಪರಬ್ರಹ್ಮದೀಕ್ಷೆಯ ಮಾಡುವಲ್ಲಿ ವಿಷ್ಣುವಿನ ಪಾಶವ ಹರಿಯಬೇಕು;
ಅಂಗಲಿಂಗದೀಕ್ಷೆಯ ಮಾಡುವಲ್ಲಿ ರುದ್ರನ ಪಾಶವ ಹರಿಯಬೇಕು;
ಪುನರ್ದೀಕ್ಷೆಯ ಮಾಡುವಲ್ಲಿ ಆ ಘಟದಲ್ಲಿದ್ದ ಆತ್ಮನ ಕಳೆದು
ಪುನರಪಿಯ ಮಾಡಿ ಪುನರ್ದೀಕ್ಷೆಯ ಮಾಡಬೇಕು.
ಅದೆಂತೆಂದಡೆ, ಅದಕ್ಕೆ ದೃಷ್ಟ:
ದ್ವಿಜರ ಗರ್ಭದಲ್ಲಿ ಜನಿಸಿದ ಪಿಂಡಕ್ಕೆ

ಮಂತ್ರೋಚ್ಚರಣೆ ಮುಂಜಿಯಿಂದಲ್ಲದೆ ಭೂಸುರಕುಲವಿಲ್ಲ.
ಇದನರಿತು ವಿಚಾರವ ಮಾಡಿ ಕೇಳಿ ಕಂಡು
ಉಪದೇಶಗುರುವಾಗಬೇಕು.ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೪೭॥

೩೯೧
ಲಿಂಗಕ್ಕೆ ಜಂಗಮಪ್ರಸಾದವ ಕೊಡುವಲ್ಲಿ
ಹೆಣ್ಣು ಹೊನ್ನು ಮಣ್ಣಿನ ಹಂಗಿಲ್ಲದಂತಿರಬೇಕು.
ಗುರುವಿಂಗೆ ತನುವ ಸವೆದು ಮಾಡುವಲ್ಲಿ
ಕೇಣಸರ ಆತ್ಮತೇಜವಿಲ್ಲದಿರಬೇಕು.
ಲಿಂಗಕ್ಕೆ ಮನವ ಮುಟ್ಟಿಸುವಾಗ
ಸರ್ವಮಯದಾಸೆಯ ಪಾಶ ತಲೆದೋರದಿರಬೇಕು.
ಇಂತೀ ನಿಶ್ಚಯವನರಿತವಂಗೆ
ಸದಾಶಿವಮೂರ್ತಿಲಿಂಗದಂಗವೆ ಆಶ್ರಯ. ॥೪೮॥

೩೯೨
ಸಹಪಜ್ತೆಯಲ್ಲಿ ತನ್ನ ಗುರುವೆಂದು ವಿಶೇಷವ ಮಾಡಲಾಗದು.
ಅದೆಂತೆಂದಡೆ:
ಆ ಗುರುವಿಂಗೂ ಆ ಶಿಷ್ಯಂಗೂ ಎರಡಿಟ್ಟು ಮಾಡೂದಕ್ಕೆ
ದೃಷ್ಟವ ತೋರಿದ ಮತ್ತೆ,
ದ್ರವ್ಯಂಗಳಲ್ಲಿ ವಿಶೇಷವಾಗಿ ಕೈದುಡುಕಿದಡೆ, ಮನ ಕೂರ್ತಡೆ
ಅದೆ ಕಿಲ್ಬಿಷ, ಸದಾಶಿವಮೂರ್ತಿಲಿಂಗಕ್ಕೆ ಹೊರಗು. ॥೪೯॥

ಮಾಡುವ ಭಕ್ತನ ವಿವರ:

೩೯೩
ತ್ರಾಸಿನ ನಾಲಗೆಯಂತೆ ಹೆಚ್ಚು ಕುಂದನೊಳಕೊಳ್ಳದೆ,
ಗುರುಲಿಂಗಜಂಗಮ ತ್ರಿವಿಧಮುಖವು ಒಂದೆಯೆಂದು ಪ್ರಮಾಳಿಸಿ,
ಮಾಡುವ ದ್ರವ್ಯ ಕೇಡಿಲ್ಲದಂತೆ ಮಾಡುವುದು ಸದ್ಭಕ್ತಿಸ್ಥಲ.
ಹೀಗಲ್ಲದೆ ಗುರುವಿನ ಆಧ್ಯಕ್ಕಂಜಿ,
ಜಂಗಮದ ಸಮೂಹದ ವೆಗ್ಗಳವ ಕಂಡು ಅಂಜಿ ಮಾಡಿದಡೆ,
ಭಕ್ತಿಗೂಣೆಯ, ದ್ರವ್ಯದ ಕೇಡು, ಸತ್ಯಕ್ಕೆ ಹೊರಗು,
ಸದಾಶಿವಮೂರ್ತಿಲಿಂಗಕ್ಕೆ ದೂರ. ॥೫೦॥

೩೯೪
ಗುರುಮೂರ್ತಿಯ ಕಳೆ ಜಂಗಮದಲ್ಲಿಪ್ಪುದು,
ಜಂಗಮಮೂರ್ತಿಯ ಕಳೆ ಲಿಂಗದಲ್ಲಿಪ್ಪುದು,
ಆ ಲಿಂಗದ ಕಳೆ ಅರಿದು ಮಾಡುವ ಭಕ್ತನಲ್ಲಿ
ನಿತ್ಯನಿರಂಜನವಾಗಿ ಬೆಳಗುತ್ತಿಪ್ಪುದು,
ಸದಾಶಿವಮೂರ್ತಿಲಿಂಗದ ಹೃದಯವು ತಾನಾಗಿ. ॥೫೧॥

೩೯೫
ದೀಕ್ಷಾಗುರುವಾದಲ್ಲಿ ತ್ರಿವಿಧದ ಆಸೆಯಿಲ್ಲದಿರಬೇಕು.
ಶಿಕ್ಷಾಗುರುವಾದಲ್ಲಿ ಅರಿಗಳಿಗಂಜದೆ ಪ್ರಾಣತ್ಯಾಗನಿಶ್ಚಯನಾಗಿರಬೇಕು.
ಮೋಕ್ಷಗುರುವಾದಲ್ಲಿ ಸರ್ವದೋಷ ಸರ್ವೇಂದ್ರಿಯ ನಾಶನಾಗಿರಬೇಕು.
ಇಂತೀ ಮೂರು ಮೀರಿ, ಬೇರೊಂದರಲ್ಲಿ ನಿಂದು
ತ್ಯಾಗಾಂಗ ಭೋಗಾಂಗ ಯೋಗಾಂಗ
ತ್ರಿವಿಧಲೇಪವಾಗಿ ನಿಂದುದು ನಿಜಗುರುಸ್ಥಲ.
ಆ ಗುರುವಿನ ಕೈಯ ಅನುಜ್ಞೆ ಪರಂಜ್ಯೋತಿ ಪ್ರಕಾಶ.
ಅದು ನಿರವಯತತ್ವ, ಸದಾಶಿವಮೂರ್ತಿಲಿಂಗವು ತಾನೆ. ॥೫೨॥

೩೯೬
ಕಾಯಕ್ಕೆ ಕರ್ಮ ಗುರುವಾಗಬೇಕು,
ಜೀವಕ್ಕೆ ಮೋಕ್ಷ ಗುರುವಾಗಬೇಕು,
ಉಭಯ ವೇಧಿಸಿ ನಿಂದಲ್ಲಿ ಸ್ವಾನುಭಾವ ಸನ್ನದ್ಧನಾಗಿ ಗುರುವಾಗಬೇಕು.
ಆತನನುಜ್ಞೆಯಿಂದ ಬಂದ ಚಿತ್ತದ ಗೊತ್ತಿನ ಕುರುಹು,
ಅದೆ ವಸ್ತು ನಿಶ್ಚಯ, ಸದಾಶಿವಮೂರ್ತಿಲಿಂಗವು ತಾನಾಗಿ. ॥೫೩॥

೩೯೭
ಇಷ್ಟಲಿಂಗ ಪ್ರಾಣಲಿಂಗವೆಂದು
ಬೇರೊಂದು ಕಟ್ಟಳೆಯ ಮಾಡಬಹುದೆ ಅಯ್ಯಾ?
ಬೀಜವೊಡೆದು ಮೊಳೆ ತಲೆದೋರುವಂತೆ,
ಬೀಜಕ್ಕೂ ಅಂಕುರಕ್ಕೂ ಭಿನ್ನವುಂಟೆ ಅಯ್ಯಾ?
ಇಷ್ಟದ ಕುರುಹಿನಲ್ಲಿ ಚಿತ್ತ ನಿಂದು ಮಿಕ್ಕ ಗುಣಂಗಳನರಿಯಬೇಕು.
ಇದೆ ನಿಶ್ಚಯ, ಸದಾಶಿವಮೂರ್ತಿಲಿಂಗವು ತಾನಾಗಿ. ॥೫೪॥

೩೯೮

ತನ್ನ ಶರೀರದ ಗುಣವನಳಿದು, ಕರಣೇಂದ್ರಿಯದ ಗುಲ್ಮದ ಗಲಗ ಕಿತ್ತು,
ಉಚ್ಚೆಯ ಬಚ್ಚಲ ಕೊಚ್ಚೆಯ ಕೊಳಕ ತೊಡೆದು,
ತ್ರಿಸಂಧಿಯಲ್ಲಿ ತ್ರಿಗುಣದ ತ್ರಿಕಾಲವ ಭೇದಿಸುತ್ತ,
ತನ್ನಯ ಕರಕಮಲದಲ್ಲಿ ಒದಗಿದ ಶಿಷ್ಯವರ್ಗದ
ಅಸ್ತಿ ನಾಸ್ತಿಯನರಿತು ಬಿಡುಮುಡಿಯಲ್ಲಿ ಇರಬೇಕು.
ಹೀಗಲ್ಲದೆ, ತೆಂಗನೇರಿದ ಲಂಡನಂತೆ ಎಲ್ಲವು ತನಗೆ ಸರಿಯೆಂದಡೆ,
ಬಲ್ಲವರೊಪ್ಪುವರೆ ಅಯ್ಯಾ? ಅವನ ಗುರುತನದ ಇರವು.
ಬಟ್ಟೆಯ ಬಡಿದು ಉಂಬವಂಗೆ ಸತ್ಕರ್ಮದ ಜೀವದ ದಯವುಂಟೆ ಅಯ್ಯಾ?
ಇದು ಕಾರಣದಲ್ಲಿ,
ಸದ್ಭಾವ ಗುರುವಾಗಬೇಕು, ನಿರ್ಮಲಾತ್ಮಕ ಶಿಷ್ಯನಾಗಬೇಕು.
ಇಂತೀ ಉಭಯವನರಿತಲ್ಲಿ ಉರಿ ಕರ್ಪುರದಿರವಿನಂತಾಗಬೇಕು,
ಸದಾಶಿವಮೂರ್ತಿಲಿಂಗವನರಿವ ಭೇದಕ್ಕೆ. ||೫೫||

೩೯೯

ಗುರುವಾದಲ್ಲಿ ಭವಂ ನಾಸ್ತಿಯಾಗಬೇಕು,
ಚರವಾದಲ್ಲಿ ಆಚಾರ ಮೂರ್ತಿಯಾಗಬೇಕು,
ಲಿಂಗವಾದಲ್ಲಿ ನಿರಂಗಮಯ ಅವಿರಳ ತತ್ವಸ್ವರೂಪವಾಗಬೇಕು.
ಇಂತಿ ಮೂರು ಗುಣ ಭಾವಶುದ್ಧವಾದಲ್ಲಿ ಭಾವಿಸಿ ಅರಿವ ಸದ್ಭಕ್ತನಾಗಬೇಕು,
ಆತನಂಗದಿರವು ಸದಾಶಿವಮೂರ್ತಿಲಿಂಗವು ತಾನೆ. ೫೬||

೪೦೦

ಉಪಾಧಿ ಉಳ್ಳನ್ನಕ್ಕ ಗುರುವಲ್ಲ,
ವೇಷವ ಹೊತ್ತು ಬಾಗಿಲ ಕಾಯುವನ್ನಕ್ಕ ಜಂಗಮವಲ್ಲ,
ಶಕ್ತಿಸಮೇತವುಳ್ಳನ್ನಕ್ಕ ಲಿಂಗವಸ್ತುವಲ್ಲ.
ಅದೆಂತೆಂದಡೆ:
ಏತರಲ್ಲಿದ್ದಡೂ ಅಹಿಶರೀರವ ಬಲಿದು ತದ್ರೂಪ ಹಾಕಿದಂತಿರಬೇಕು.
ಇದು ಅರಿವಿನ ಒಡಲು, ಸದಾಶಿವಮೂರ್ತಿಲಿಂಗದ ಇರವು. ||೫೭||

೪೦೧

ಗುರು ಚರ ಪರದ ಇರವು ಹೇಗಿರಬೇಕೆಂದಡೆ:
ಉರಿಯನೊಳಕೊಂಡ ಕಲ್ಲಿನಂತಿಬೇಕು,
ತೈಲವನೊಳಕೊಂಡ ತಿಲದಂತಿರಬೇಕು,

ದ್ರವವನೊಳಕೊಂಡ ಅರಗಿನಂತಿರಬೇಕು,
ಬಯಲನೊಳಕೊಂಡ ಕರ್ಪುರದಂತಿರಬೇಕು.
ನೋಡಿದಡಂಗವಾಗಿ, ಮಥನಕ್ಕೆ ಬಯಲಾಗಿ ತೋರುತ್ತಿಹ ಮೂರ್ತಿ ತಾನೆ,
ನಿರಂಗ ಸದಾಶಿವಮೂರ್ತಿಲಿಂಗವು ತಾನೆ. ॥೫೮॥

೪೦೨
ಹಾವು ಹುಲಿ ಕಳ್ಳರ ಭಯವೆಂದು ಹೇಳಿದವರ ಮೇಲೆ ನೋವುಂಟೆ?
ನೋವಾದಡಾಗಲಿ, ಇದರಿಂದ ಎನಗೆ ಕೇಡಿಲ್ಲ.
ಕಂಡು ಸುಮ್ಮನಿದ್ದಡೆ, ಆ ಗುರುವಿನ ಸುಖದುಃಖ ಎನ್ನದಾಗಿ,
ಸಮಯಕ್ಕಂಜಿದಡೆ ಎನ್ನ ಮಾಡುವ ಮಾಟ ಎನ್ನ ಕೇಡು,
ಎನ್ನ ಅರಿವು ಮರವೆಯಲ್ಲಿದ್ದಡೆ, ಭವದುಃಖಕ್ಕೆ ಬೀಜ.
ಎನ್ನ ಕೈಯಲ್ಲಿ ಎನ್ನಂಗವ ತೊಳೆಯಬೇಕಲ್ಲದೆ ಅನ್ಯರಿಗೆ ಹೇಳಲೇಕಯ್ಯಾ?
ಇಂತೀ ಮೂರರೊದಗ ನಾ ಮಾಡಿ ಹಾನಿಯ ಪಡೆವುದಕ್ಕೇನು?
ಅಂದಿಗೇನಾದಡಾಗಲಿ ಇಂದಿಗೆ ಶುದ್ಧ,
ಸದಾಶಿವಮೂರ್ತಿಲಿಂಗದಲ್ಲಿ. ॥೫೯॥

೪೦೩
ಬಯ್ಚಿಟ್ಟ ಬಯ್ಕೆಯ ಒಡೆಯ ಬೇಡಿದಡೆ ಕೊಡದಿರ್ದಡೆ
ಸ್ವಾಮಿದ್ರೋಹಿಕೆಯಲ್ಲವೆ?
ಅಟ್ಟ ಅಡಿಗೆಯ ಪತಿಗಿಕ್ಕದೆ ಸತಿ ಉಂಡಡೆ ನೆಟ್ಟನೆ ಕಳ್ಳಿಯಲ್ಲವೆ?
ಕೊಟ್ಟಾತ ಒಡವೆಯ ಬೇಡಿದಡೆ
ಕಟ್ಟಿ ಹೋರುವ ಕಷ್ಟಜೀವಿಗೇಕೆ ತ್ರಿವಿಧಭಕ್ತಿ, ಸಜ್ಜನಯುಕ್ತಿ?
ಇಂತೀ ಸಜ್ಜನಗಳ್ಳರ ಬಲ್ಲನಾಗಿ
ಸದಾಶಿವಮೂರ್ತಿಲಿಂಗವು ಒಲ್ಲನು. ॥೬೦॥

೪೦೪
ಗುರುಚರಮೂರ್ತಿ ಪೂಜಿಸಿಕೊಂಬಲ್ಲಿ
ತಮ್ಮ ವಿವರವ ತಾವರಿಯಬೇಕು.
ಹೆಣ್ಣು ಹೊನ್ನು ಮಣ್ಣು ಹೊರಗೆಂದು ಕೆಲವರಿಗೆ ಹೇಳಿ
ಗನ್ನದಿಂದ ತಾವು ಗಳಿಸಿ ಕೂಡುವುದು, ಅದು ತಾನೆ ಅನ್ಯಾಯವಲ್ಲವೆ?
ಬಿರಿದ ಕಟ್ಟಿದ ಬಂಟ ಭಾಷೆಗೆ ತಪ್ಪಿದಡೆ,
ರಾಜನ ಮುಖಕ್ಕೆ ಏರಿದಡೆ, ಅದೇ ಭಂಗ.
ಇಂತಿವನರಿಯದೆ ಮೂಗ ಕೊಯಿದು ಮಾರಿ,

ಹಣ್ಣ ಮೆಲುವ ಅಣ್ಣಗಳಿಗೇಕೆ ಗುರುಚರಸ್ಥಲ?
ಇಂತಿವರೆಲ್ಲರು ಸದಾಶಿವಮೂರ್ತಿಲಿಂಗಕ್ಕೆ ಹೊರಗು. ॥೬೧॥

೪೦೫

ತನ್ನ ತಾನರಿತು ಮಾಡುವಲ್ಲಿ
ತಾ ಬೇಡದೆ ಅನ್ಯರಿಗೆ ಹೇಳಿ ಈಸಿಕೊಂಬ ಡಾಳಕತನವೇಕೆ?
ಅದು ಗುರುಚರಕ್ಕೆ ಅರಿವಿನ ಮತವಲ್ಲ.
ಇಂತಿವನರಿದು ಮರಳಿ ಕಾಡುವ ಶಬರವೇಷಿಗಳು
ಸದಾಶಿವಮೂರ್ತಿಲಿಂಗಕ್ಕೆ ಹೊರಗು. ॥೬೨॥

೪೦೬

ಓಗರ ಹಸಿಯಿತ್ತೆಂದು ಉಂಬವರಿಲ್ಲ, ನೀರು ಬಾಯಾರಿತ್ತೆಂದು ಕುಡಿವರಿಲ್ಲ,
ಭೂಮಿಗೆ ಬಡತನವೆಂದು ಬಿತ್ತುವರಿಲ್ಲ.
ತಮ್ಮ ಒಲವರಕ್ಕೆ ತಾವು ಮಾಡುವಲ್ಲಿ ಗನ್ನದ ಆಸೆ ಬೇಡ,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೬೩॥

೪೦೭

ಇರು[ಹೆ] ಕಡೆ ಎಂಬತ್ತುನಾಲ್ಕು ಲಕ್ಷ ಜೀವ
ಅವು ಹುಟ್ಟುವಾಗಲೆ ಸುಖದುಃಖ
ಭೋಗಂಗಳ ಕೊಂಡು ಹುಟ್ಟಿದವು. ಇದು ತಪ್ಪದ ದೃಷ್ಟ.
ಅರುಹಿರಿಯರೆಲ್ಲರು ಮರೆಯಬೇಡಿ.
ಅರಿವಿನ ಹೊನಲ ನೋಡಿಕೊಳ್ಳಿ.
ವೇಷಕ್ಕೆ ತಪ್ಪದಂತಾಡಿ ಹೋಗಿ,
ಪುರುಷ ಸತ್ತಡೆ ಸತಿ ಮುಂಡೆತನದಂತೆನಿಸಲಾರೆ,
ಕಳ್ಳನ ಹೆಂಡತಿಯಂತೆ ತಲ್ಲಳಿಸಲಾರೆ.
ನಿಮ್ಮ ಅರಿವಿನ ಹಾನಿ ಎನ್ನ ಇಹಪರದ ಕೇಡು.
ಈ ಪದಕ್ಕೆ ನೋಯಬೇಡ,
ನೊಂದಡೆ ಸದಾಶಿವಮೂರ್ತಿಲಿಂಗಕ್ಕೆ ಹೊರಗು. ॥೬೪॥

೪೦೮

ಭಕ್ತನಾದಲ್ಲಿ ಅರ್ಥಪ್ರಾಣ ಅಭಿಮಾನವೆನ್ನದೆ,
ಮಾಡಿ ನೀಡಿ ಸಂದೇಹವ ಮಾಡಿದಲ್ಲಿಯೆ ಸಿಕ್ಕಿತ್ತು ಭಕ್ತಿಗೆ ಹಾನಿ,
ಸತ್ಯದ ಬಾಗಿಲು ಮುಚ್ಚಿತ್ತು.

ಆರೇನಾದಡೂ ಆಗಲಿ, ಭಕ್ತಂಗೆ ಸತ್ಯವೆ ನಿತ್ಯದ ಬೆಳಗು.
ಆ ಭಕ್ತನಂಗ ಸದಾಶಿವಮೂರ್ತಿಲಿಂಗದ ಘಟಸಂಭವ ಪ್ರಾಣ ॥೬೫॥

೪೦೯
ತನ್ನ ಕುರಿತು ಪರಿಹರವ ಮಾಡಿಕೊಂಬಲ್ಲಿ
ಅನ್ಯರ ಗುಣದೋಷವ ಸಂಪಾದಿಸಲಿಲ್ಲ.
ಅದು ಒಡೆದ ಠಾವಿನಲ್ಲಿ ಒಸರುವುದಲ್ಲದೆ ಬೇರೊಂದೆಡೆಯಲ್ಲಿಲ್ಲ.
ಇದು ಕಾರಣ, ಉಭಯವ ಅಲ್ಲ–ಅಹುದೆಂದೆನಲಿಲ್ಲ.
ಸದ್ಭಕ್ತ ಮಾಡುವ ಸನ್ನದ್ಧ ಭಕ್ತಿ
ಸದಾಶಿವಮೂರ್ತಿಲಿಂಗದ ಕೈಲೆಡೆಯ ಪ್ರಾಣ . ॥೬೬॥

೪೧೦
ಭಕ್ತ ಗುರುಚರವ ನುಡಿದಲ್ಲಿ ನೋವುಂಟೆ ಅಯ್ಯಾ?
ಪುರುಷ ಕಳ್ಳನಾದಲ್ಲಿ ಸತಿಗೆ ಸೆರೆ ಉಂಟು,
ಸೂಳೆಯ ಮಿಂಡ ಸತ್ತಡೆ ಅವಳನಾರು ಸೆರೆಯ ತೆಗೆವರುಂಟೆ?
ಸಜ್ಜನಭಕ್ತ ಏನೆಂದಡೂ ಸದಾಶಿವಮೂರ್ತಿಲಿಂಗಕ್ಕೆ ಒಳಗು. ॥೬೭॥

೪೧೧
ಗಂಡ ತಪ್ಪಿ ನಡೆದಲ್ಲಿ ಹೆಂಡತಿ ಬಾಯಾಲುವುದೆ ಕಾರಣ.
ಅದೆಂತೆಂದಡೆ:
ಪುರುಷನ ಬಾಧೆಗೆ ಸತಿ ಸೆರೆಯೊಳಗಾದ ಕಾರಣ.
ಗುರುಚರದ ಆಗು ಚೇಗೆಯನರಿವುದೆ ಲಕ್ಷಣ, ಸದ್ಭಕ್ತಿಯ ಭಾವ,
ಸದಾಶಿವಮೂರ್ತಿಲಿಂಗದ ಪ್ರಾಣ. ॥೬೮॥

೪೧೨
ಸದ್ಭಕ್ತನ ಆಚರಣೆಯ ಕ್ರೀಯೆಂತುಂಟೆಂದಡೆ:
ಜಂಗಮದ ಪಾದೋದಕ ಲಿಂಗಕ್ಕೆ ಮಜ್ಜನವ ಮಾಡುವಲ್ಲಿ
ಜಂಗಮದ ಕುಂದು ನಿಂದೆಯ ಕೇಳಬಾರದು.
ಜಂಗಮಪ್ರಸಾದವ ಲಿಂಗಕ್ಕೆ ಕೊಡುವಲ್ಲಿ
ಅರ್ಥ ಪ್ರಾಣ ಅಭಿಮಾನವ ಮುಟ್ಟಿದಲ್ಲಿ
ಚಿತ್ತದಲ್ಲಿ ಹೆಚ್ಚು ಕುಂದು ತೋರಿದಾಗಲೆ ಪ್ರಸಾದಕ್ಕೆ ದೂರ.
ಇದು ಕಾರಣ, ದೇಹಭಾವವಳಿದವಂಗಲ್ಲದೆ
ಪಾದೋದಕ ಪ್ರಸಾದವಿಲ್ಲ ಎಂದೆ.
ವಿಶ್ವಾಸವುಂಟಾದಲ್ಲಿ ಕುರುಹಿನ ಮುದ್ರೆಯ ಬಯಕೆ ಉಂಟೆ ಅಯ್ಯಾ?

ಅವಿಶ್ವಾಸವುಳ್ಳವಂಗೆ ಗುರುಚರದ ಮಾರ್ಗವಿಲ್ಲಾಯೆಂದೆ.
ಸದಾಶಿವಮೂರ್ತಿಲಿಂಗವ ಹೀಗರಿವುದಕ್ಕೆ ಠಾವ ಕಾಣೆ. ॥೯॥

೪೧೩
ಗುರುಚರದಲ್ಲಿ ಸೇವೆಯ ಮಾಡುವನ್ನಕ್ಕ
ಮೂರಕ್ಕೆ ಹೊರಗಾಗಿರಬೇಕು, ಮೂರಕ್ಕೆ ಒಳಗಾಗಿರಬೇಕು.
ಮೂರರ ಒಳಗೆ ಕಂಡು ಮೂರರ ಹೊರಗನರಿತು,
ನೆರೆ ನೀರನಾಗಿರಬೇಕು,
ಸದಾಶಿವಮೂರ್ತಿಲಿಂಗವ ಮೀರಬೇಕು. ॥೨೦॥

೪೧೪
ಭಕ್ತಂಗೆ ವಿಶ್ವಾಸ, ಗುರುಚರಕ್ಕೆ ವಿರಕ್ತಿ,
ಭಕ್ತಂಗೆ ತ್ರಿವಿಧ ಕೂಡಿದ ಮಾಟ, ವಿರಕ್ತಂಗೆ ತ್ರಿವಿಧ ಹೊರಗಾಗಿ ಆಟ,
ಭಕ್ತನ ನೆಮ್ಮುಗೆ ಗುರುಲಿಂಗಜಂಗಮದಲ್ಲಿ.
ಗುರುಚರವಿರಕ್ತನ ನೆಮ್ಮುಗೆ
ಸದಾಶಿವಮೂರ್ತಿಲಿಂಗದಲ್ಲಿ ಬೆಚ್ಚಂತಿರಬೇಕು. ॥೨೧॥

೪೧೫
ದಿವರಾತ್ರಿ ಕೂಡಿ ದಿನ ಲೆಕ್ಕಕ್ಕೆ ಸಂದಂತೆ,
ಭಕ್ತಜಂಗಮದ ಯೋಗ ಸಂಭವವಾಗಿ ವಸ್ತುವ ಮುಟ್ಟಿದಲ್ಲಿ,
ಕರ್ತೃ ಭೃತ್ಯ ಸಂಬಂಧವಡಗಿತ್ತು
ಸದಾಶಿವಮೂರ್ತಿಲಿಂಗದಲ್ಲಿ. ॥೨೨॥

೪೧೬
ಸಹಭೋಜನ ಮಾಡುವ ಸಾಧನೆವಂತರು ಕೇಳಿರೊ:
ಲಿಂಗ ಕರ್ತೃವಾಗಿ ನೀ ಭೃತ್ಯನಾಗಿದ್ದಲ್ಲಿ
ಲಿಂಗ ಅಮಲ, ನೀ ಮಲದೇಹಿ,
ನಿನಗೆ ಪ್ರಪಂಚು, ಲಿಂಗವು ನಿಃಪ್ರಪಂಚು,
ನೀ ಅಂಗ, ಲಿಂಗವು ನಿರಂಗ.
ಲಿಂಗಕ್ಕೂ ನಿನಗೂ ಸಹಭೋಜನವೆಂತುಟಯ್ಯಾ?
ಜಾಗ್ರದಲ್ಲಿ ತೋರಿ, ಸ್ವಪ್ನದಲ್ಲಿ ಕಂಡುದ
ಲಿಂಗಕ್ಕೆ ಸಹಭೋಜನವ ಮಾಡುವ ಪರಿಯಿನ್ನೆಂತೊ?
ಸಾಕು ಕುಟಿಲದ ಊಟ,
ಸದಾಶಿವಮೂರ್ತಿಲಿಂಗವು ಮುಟ್ಟದ ಅರ್ಪಿತ. ॥೨೩॥

೪೧೭
ಬಂಟ ಒಡೆಯನೊಡನೆ ಉಂಡಲ್ಲಿ ದಾಸತನವಳಿಯಿತ್ತು.
ನೀ ಮರೆದು ಮಲಗಿದ್ದಲ್ಲಿ, ಸ್ವಪ್ನವ ಕಾಬಲ್ಲಿ, ಲಿಂಗದ ಕೂಟವೆಲ್ಲಿದ್ದಿತ್ತು?
ನೀ ಸ್ತ್ರೀಸಂಭೋಗವ ಮಾಡುವಲ್ಲಿ
ಲಿಂಗ ನಿನ್ನಲ್ಲಿ ಸಹಕೂಟದಿ ಇದ್ದ ಠಾವಾವುದು?
ಸಾಕು, ಅರ್ತಿಕಾರರ ಹೊತ್ತುಹೋಕನ ಅರ್ಪಿತ!
ಲಿಂಗ ಅಂಗದಿಂದ ಹಿಂಗಿದಾಗವೆ ಸ್ವಪ್ನದ ಮರವೆ,
ಮುಟ್ಟದ ಅರ್ಪಿತ.
ಇದು ನಿಶ್ಚಯವಲ್ಲ, ಸದಾಶಿವಮೂರ್ತಿಲಿಂಗಕ್ಕೆ ಹೊರಗು. ॥೭೪॥

೪೧೮
ತನ್ನಯ ಬಾಯ ಶೇಷವ ಲಿಂಗಕ್ಕೆ ತೋರಿ,
ಲಿಂಗದ ಶೇಷವ ತಾ ಕೊಂಡೆನೆಂದು ಕೊಂಡುದು ಪ್ರಸಾದ.
ಇದ್ದುದು ಸಯಿದಾನವೆಂದು
ಉಂಡು ಉಂಡು ಲಿಂಗಕ್ಕೆ ಕೊಡಬಹುದೆ ಅಯ್ಯಾ?
ಅದು ಮುನ್ನವೆ ಲಿಂಗಾರ್ಪಿತ.
ತನ್ನಯ ಸಂದೇಹಕ್ಕೆ ಕೊಟ್ಟುಕೊಂಡೆನೆಂಬ ಭೇದವಲ್ಲದೆ,
ಇಂತೀ ಗುಣ ಸದಾಶಿವಮೂರ್ತಿಲಿಂಗಕ್ಕೆ ಹೊರಗು. ॥೭೫॥

೪೧೯
ಸಹಭೋಜನವ ಮಾಡುವನ ಇರವು ಹೇಗೆಂದಡೆ:
ದಗ್ಧಪಟದಂತೆ, ಮಂಜಿನ ರಂಜನೆಯ ವಾರಿಯ ಧೂಮದಂತೆ,
ಒಡಲಿನ ಆತ್ಮನ ಭೇದದಂತಿರಬೇಕು.
ಆಕಾಶದ ಸಾಕಾರದಲ್ಲಿ ತೋರುವ ನಾನಾ ಛಾಯದಂತೆ,
ಒಂದು ವರ್ಣದಲ್ಲಿ ನಿಲ್ಲದೆ ತೋರುವ ತೋರಿಕೆಯಂತೆ,
ಕಾಯದ ಛಾಯವ ತೊಟ್ಟಿದ್ದಲ್ಲಿ
ಲಿಂಗಕ್ಕೂ ತನಗೂ ಸಹಭೋಜನ ಸಲವುದೆಂದೆ.
ಅದು ಉರಿಯೊಳಗಳ ಕರ್ಪುರದಂತೆ, ಕರ್ಪುರದೊಳಗಳ ಉರಿಯಂತೆ.
ಅನ್ಯಭಿನ್ನವಿಲ್ಲದಿರಬೇಕು, ಸದಾಶಿವಮೂರ್ತಿಲಿಂಗದಲ್ಲಿ. ॥೭೬॥

೪೨೦
ಲಿಂಗಕ್ಕೆ ಸಹಭೋಜನವಾದಲ್ಲಿ
ಕೂರ್ಮನ ಶಿಶುವಿನ ಸ್ನೇಹದಂತಿರಬೇಕು,

ಅಯಸ್ಕಾಂತದ ಶಿಲೆ ಲೋಹದಂತಿರಬೇಕು,
ಶಶಿಶಿಲೆಯಂತೆ ಒಸರುವ ಅರ್ಪಿತ, ಕೂಡುವ ಕೂಟ.
ಭ್ರಮರ ಚಂಪಕದಂತೆ ಒಡಗೂಡಿ ಲಿಂಗವ
ಎಡೆ ತೆರಪಿಲ್ಲದ ಸಹಭೋಜನಕ್ಕೆ ಕೊಡುವಾತನ ಅಡಿಗೆ
ಕಡೆ ನಡು ಮೊದಲಿಲ್ಲದೆರಗುವೆ. ಆತ ಸದಾಶಿವಲಿಂಗವು ತಾನೆ. ॥೭೭॥

೪೨೧
ಭರಿತಾರ್ಪಣವೆಂಬುದು ಲಿಂಗಕ್ಕೊ ನಿನಗೊ?
ಲಿಂಗಕ್ಕೆ ಸಂಕಲ್ಪ, ನಿನಗೆ ಮನೋಹರ.
ಈ ಗುಣ ಓಗರ ಮೇಲೋಗರದ ಅಪೇಕ್ಷೆಯಲ್ಲದೆ,
ಲಿಂಗದ ಒಡಲಲ್ಲ, ಸದಾಶಿವಮೂರ್ತಿಲಿಂಗಕ್ಕೆ ಸಲ್ಲ. ॥೭೮॥

೪೨೨
ಭರಿತಾರ್ಪಣವ ನೈವೇದ್ಯವ ಮಾಡಿದಲ್ಲಿ
ಲಿಂಗಪ್ರಸಾದವ ಮಿಗಿಸಬಹುದೆ ಅಯ್ಯಾ?
ಲಿಂಗಕ್ಕೂ ತನಗೂ ಭರಿತವಾದಲ್ಲಿ
ಶರಣರ ನಡುವೆ ಸುರಿಸಿಕೊಂಡು ಸೂಸಿದಡೆ
ಸದಾಶಿವಮೂರ್ತಿಲಿಂಗಕ್ಕೆ ಹೊರಗು. ॥೭೯॥

೪೨೩
ಬಿಟ್ಟು ಕಟ್ಟಿ ಅರ್ಪಿಸಲಾರದೆ ಗುಪ್ಪೆಯಾಗಿ ಸುರಿಯಿಸಿಕೊಂಡು,
ಲಿಂಗದಿಚ್ಛೆಯನರಿಯದೆ ತನ್ನಂಗದ ಆರಜಕ್ಕಾಗಿ
ಗಂಗಳ ತುಂಬಿ ಸುರಿಸಿಕೊಂಬ
ಲೆಂಗಿಗಳನೊಲ್ಲ ಸದಾಶಿವಮೂರ್ತಿಲಿಂಗ. ॥೮೦॥

೪೨೪
ಎಲ್ಲವು ಲಿಂಗಕ್ಕೆ ಸಲ್ಲುವದೆಂಬುದನರಿದು, ಸಂಕಲ್ಪಸೂತಕವಳಿದು,
ಬಂದ ಪದಾರ್ಥವ ಲಿಂಗಭಾಜನದಲ್ಲಿ
ಸಹಭೋಜನವ ಮಾಡುವುದು ಲಿಂಗಭರಿತಾರ್ಪಣ.
ಲಿಂಗಕ್ಕೂ ತನಗೂ ಭಿನ್ನಭಾವವಿಲ್ಲದೆ
ಲಿಂಗದೊಳಗೆ ಸಲೆ ಸಂದು ಒಂದಾಗಿ
ಕೂಡಿದುದು ಶರಣಭರಿತಾರ್ಪಣ, ಸದಾಶಿವಮೂರ್ತಿಲಿಂಗಕ್ಕೆ ತೃಪ್ತಿ. ॥೮೧॥

೪೨೫
ಎನಗೆ ಭರಿತಾರ್ಪಣವೆಂದು ಹೇಳಿದಾಗವೆ,
ಲಿಂಗಕ್ಕೊ? ನಿನಗೊ? ಎಂಬುದ ನಿನ್ನ ನೀನರಿ,
ಅನ್ಯರ ಕೈಯಿಂದ ಹೇಳಿಸಿ ಚೆನ್ನಾಗಿ ಇಕ್ಕಿಸಿಕೊಂಡು ಉಂಬುದು
ಲಿಂಗಕ್ಕೊ? ನಿನಗೊ? ಎಂಬುದು ನಿನ್ನ ನೀನರಿ.
ಸಂದುದನೆ ಪರಿಣಾಮಿಸಿ ಬಾರದುದಕ್ಕೆ ಸಂದೇಹವಿಲ್ಲದೆ
ಸಂದನಳಿದುದು ಭರಿತಾರ್ಪಣ, ಸದಾಶಿವಮೂರ್ತಿಲಿಂಗಕ್ಕೆ ತೃಪ್ತಿ. ॥೮೨॥

೪೨೬
ಬಂದಿತ್ತು ಬಾರದೆಂಬ ಸಂದೇಹವನಳಿದು ನಿಂದುದು,
ಲಿಂಗಕ್ಕೆ ಭರಿತಾರ್ಪಣ.
ಶರಣರ ಮುಖದಿಂದ ಸಂದುದು, ಲಿಂಗಕ್ಕೆ ಭರಿತಾರ್ಪಣ.
ತನ್ನಂಗಕ್ಕೆ ಕೊರತೆಯಾಗಿ ಶರಣರ ಪಂತಿಯಲ್ಲಿ
ಸಮಗ್ರವಾಗಿ ಸಂದುದು, ಲಿಂಗಕ್ಕೆ ಭರಿತಾರ್ಪಣ.
ಜಗಭರಿತನ ತೃಪ್ತಿ ಇಹಪರದ ಮುಕ್ತಿ,
ಸದಾಶಿವಮೂರ್ತಿಲಿಂಗದ ಅರ್ಪಿತದ ಗೊತ್ತು. ॥೮೩॥

೪೨೭
ಲಿಂಗಕ್ಕೆ ಅರ್ಪಿತವ ಮಾಡುವಲ್ಲಿ
ಸಕಲಪದಾರ್ಥದ ಗುಣ ವಿವರನರಿದು,
ತನ್ನಯ ಕ್ಷುಧೆಯ ಮರೆದು, ಲಿಂಗದ ಆಪ್ಯಾಯನದ ಮುಖವಾಗಿ,
ರೂಪುರುಚಿಯಿಂದ, ಅರ್ಪಿತಭೇದಮುಖದಿಂದ
ನಿಶ್ಚಯವಾಗಿ ನಿಂದುದು, ಲಿಂಗಭರಿತಾರ್ಪಣ.
ಸದಾಶಿವಮೂರ್ತಿಲಿಂಗಕ್ಕೆ ಭಾವವಳಿದ ಭರಿತಾರ್ಪಣ. ॥೮೪॥

೪೨೮
ಕಂಗಳಲ್ಲಿ ನೋಡಿ, ಕೈಯ್ಯಲ್ಲಿ ಮುಟ್ಟಿ, ನಾಸಿಕ ವಾಸನೆಯನರಿದು
ಜಿಹ್ವೆಗೆ ರುಚಿ ಮುಟ್ಟುವುದಕ್ಕೆ ಮುನ್ನವೆ
ಮೃದು ಕಠಿಣ ಕಠಿಣ[ತರ] ತಾನರಿವುದಕ್ಕೆ ಮೊದಲೆ,
ಲಿಂಗ ಮುಂತಾಗಿ ಅರ್ಪಿಸಿಕೊಂಬುದು ಅರ್ಪಿತ ಅವಧಾನಿಯ ಯುಕ್ತಿ.
ರಸಘಟಿಕೆಯ ಮಣಿ ಅಸಿಯ ಮೊನೆಗೆ ನಿಲುವಂತೆ,
ಲಿಂಗ ಅರ್ಪಿತಕ್ಕೂ ಅರಿವ ಚಿತ್ತಕ್ಕೂ ಎಡೆಬಿಡುವಿಲ್ಲದ

ಪರಿಪೂರ್ಣವಾಗಿ ನಿಂದುದು ಭರಿತಾರ್ಪಣ,
ಸದಾಶಿವಮೂರ್ತಿಲಿಂಗವು ತಾನಾಗಿ. ॥೮೫॥

೪೨೯
ಭಕ್ತಂಗೆ ಕ್ರೀ, ಜಂಗಮಕ್ಕೆ ನಿಃಕ್ರೀಯೆಂದೆನಬಾರದು.
ಜಂಗಮಕ್ಕೆ ಸದ್ಭಕ್ತಿ, ಸದಾಚಾರ, ಸತ್ಕ್ರೀ ಇಂತೀ ಆಚಾರದಲ್ಲಿ ಇರಬೇಕು.
ಅದೆಂತೆಂದಡೆ: ಪುರುಷನ ಆಚಾರ ಸತಿಗೆ ಕಟ್ಟು,
ಜಂಗಮದ ಆಚಾರ ಭಕ್ತಂಗೆ ಸಂಪದದ ಬೆಳೆ.
ಅವತಾರಕ್ಕೆ ವೇಷ, ಅರಿವಿಂಗೆ ಆಚಾರ.
ಆ ಜಂಗಮಭಕ್ತನ ಇರವು ಘಟಪ್ರಾಣದಂತೆ.
ಸದಾಶಿವಮೂರ್ತಿಲಿಂಗವು ತಾನೆ. ॥೮೬॥

೪೩೦
ಶಿವ ಭಕ್ತನಾಗಿ ಮುಂದೆ ಬಂದು ಮಂದಿರವ ಕಟ್ಟಿದ,
ಶಿವ ಜಂಗಮವಾಗಿ ಕರ್ತುರೂಪ ತಾಳಿ ಹಿಂದುಳಿದು ಬಂದ,
ಉಭಯವು ಒಂದಾಗಿ ಜಗಹಿತಾರ್ಥವಾಗಿ ಬಂದ ಅಂದ,
ಸದಾಶಿವಮೂರ್ತಿಲಿಂಗವು ತಾನೆ. ॥೮೭॥

೪೩೧
ಪಾದವ ಕೊಡುವಲ್ಲಿ ಪದಂ ನಾಸ್ತಿಯಾಗಿರಬೇಕು.
ಪೂಜಿಸುವಲ್ಲಿ ಮೂರರರತು, ಮೂರನರಿದು,
ಆರರಲ್ಲಿ ಆಶ್ರಯಿಸಿ, ತೋರಿಕೆ ಒಂದರಲ್ಲಿ ನಿಂದು,
ಆ ಒಡಲಳಿದು ಸದಾಶಿವಮೂರ್ತಿಲಿಂಗದ ಒಡಲಾಗಬೇಕು. ॥೮೮॥

೪೩೨
ಕೈ ಕಲಸಿ ಬಾಯಿ ಉಂಡಲ್ಲಿ ಅದಾವ ಹಂಗೆಂದೆನಬಹುದೆ?
ಪೂಜಿಸಿಕೊಂಬಲ್ಲಿ ಕರ್ತು, ಪೂಜಿಸುವಾತ ಭೃತ್ಯನೆ?
ಅದು ಜಗದ ಆಗುಚೇಗೆಯನರಿವುದಕ್ಕೆ ಉಭಯ ನಾಮವಾಯಿತ್ತು.
ಹಣ್ಣು ರಸದಂತೆ ಭಿನ್ನವಿಲ್ಲ. ಸದಾಶಿವಮೂರ್ತಿಲಿಂಗ ತಾನೆ. ॥೮೯॥

೪೩೩
ಆಚಾರವೆಂಬ ಭಕ್ತ ಘಟವಾಗಿ, ಅರಿವೆಂಬ ಮೂರ್ತಿ ಜಂಗಮಪ್ರಾಣವಾಗಿ,
ಉಭಯವು ಕೂಡಿ ಕಾಯಜೀವನಾಗಿ ನಡೆವಂತೆ,

ಆಚಾರಕ್ಕೊಡಲಾಗಿ, ಅರಿವಿಂಗೆ ಆಶ್ರಯವಾಗಿ,
ಈ ಉಭಯಗೂಡಿಪ್ಪ ಅಂಗವು
ಸದಾಶಿವಮೂರ್ತಿಲಿಂಗವು ತಾನಾಗಿ. ||೯೦||

೪೩೪

ಭಕ್ತ ಭೂಮಿಯಾಗಿ, ಜಂಗಮ ಬೀಜವಾಗಿ,
ಆ ಜಂಗಮದರಿವು ಅಪ್ಪುವಾಗಿ, ಆ ಸುಭೂಮಿಯ ಬೀಜದ ಮೇಲೆ ಸುರಿಯೆ,
ಆ ಭೂಮಿ ಶೈತ್ಯವಾಗಿ, ಆ ಬೀಜದ ಒಳಗು ಒಡೆದು ಅಂಕುರ ತಲೆದೋರಿ,
ಭಕ್ತಿ ಜ್ಞಾನ ವೈರಾಗ್ಯವೆಂಬ ಮರ ಶಾಖೆ
ಫಲ ಬಲಿದು ತುರೀಯ ನಿಂದು ಹಣ್ಣಾಯಿತ್ತು.
ಆ ಹಣ್ಣ ಮೇಲಣ ಜಡವ ಕಳೆದು ಒಳಗಳ ಬಿತ್ತ
ಮುಂದಕ್ಕೆ ಹುಟ್ಟದಂತೆ ಹಾಕಿ
ಉಭಯದ ಮಧ್ಯದಲ್ಲಿ ನಿಂದ ಸವಿಸಾರವ
ಸದಾಶಿವಮೂರ್ತಿಲಿಂಗಕ್ಕೆ ಅರ್ಪಿತವ ಮಾಡು. ||೯೧||

೪೩೫

ಅಜ ಕೊಂಡ ಗ್ರಾಸದ ಮಲವ
ಕುಕ್ಷಿಯಲ್ಲಿ ಹೊಕ್ಕು ಉರುಳಿಸಿದವರುಂಟೆ ಅಯ್ಯಾ?
ಚೂರ್ಣಶಿಲೆಗೆ ಶ್ವೇತವ ಹೂಸಿದವರುಂಟೆ ಅಯ್ಯಾ?
ಮುಳ್ಳಿಗೆ ಮೊನೆಯ, ಎಳ್ಳಿಗೆ ಎಣ್ಣೆಯ ತಂದಿರಿಸಿದವರುಂಟೆ ಅಯ್ಯಾ?
ಅವು ತಮ್ಮ ಗೋತ್ರದ ವರ್ತನದ ಇರವು.
ಇವಕ್ಕಿಂದವು ಕಡೆಯೆ?
ಗುರುವಾದಡೆ ಗುರುಸ್ಥಲಕ್ಕೆ ತಪ್ಪದಂತಿರಬೇಕು.
ಜಂಗಮವಾದಡೆ ತನ್ನಯ ಇರವು ಇದಿರಿನ ಇಂಗಿತವನರಿದು,
ಅಂಬುಜಪತ್ರದಲ್ಲಿದ್ದ ಬಿಂದುವಿನಂತೆ ಅಲೇಪವಾಗಿರಬೇಕು.
ಭಕ್ತನಾಗಿದ್ದಲ್ಲಿ ಉಭಯದ ಮಾರ್ಗವ, ಗುರುವಿನ ಚೊಕ್ಕೆಯವ,
ಆ ಜಂಗಮದ ಅಪೇಕ್ಷೆಯ ಇದಿರಿಟ್ಟು ಕಾಣಿಸಿಕೊಂಡು,
ಅವ ತಾನರಿಯದಂತಿರಬೇಕು.
ಅದು ಭಕ್ತಿಮಾರ್ಗಕ್ಕೆ ತಲೆದೋರದ ಇರವು.
ಆ ಗುಣ ಸದ್ಗತಿಯ ಸಾಧನ,
ಸದಾಶಿವಮೂರ್ತಿಲಿಂಗದ ಅರಿಕೆ ತಾನೆ. ||೯೨||

೪೩೬

ವಸ್ತು ತ್ರಿವಿಧರೂಪಾದ ಪರಿ ಎಂತೆಂದಡೆ:
ಕಾಯದ ಕರ್ಮವ ಕಳೆವುದಕ್ಕೆ ಗುರುರೂಪಾಗಿ,
ಜೀವನ ಭಾವವ ಕಳೆವುದಕ್ಕೆ ಲಿಂಗರೂಪಾಗಿ,
ಭಾವದ ಪ್ರಕೃತಿಯ ಕಳೆವುದಕ್ಕೆ ಚರರೂಪಾಗಿ,
ಇಂತೀ ಮೂರರ ಗುಣವನರಿದು ಆಶ್ರಯಿಸುವ ಸದ್ಭಕ್ತನೆ,
ಸದಾಶಿವಮೂರ್ತಿಲಿಂಗವು ತಾನೆ. ||೯೩||

೪೩೭

ಒಂದಂಗಕ್ಕೆ ಮೂರು ಯುಕ್ತಿ ಭಿನ್ನವಾದಂತೆ,
ಭಿನ್ನವೊಂದಂಗದಲ್ಲಿ ಕೂಡಿ ಚಕ್ಷುವಿನಲ್ಲಿ ಕಂಡು ನಡೆವಂತೆ,
ಅದೆಂತೆಂದಡೆ:
ನಡೆವ ಚರಣ ಗುರುಮಾರ್ಗವಾಗಿ,
ಕೊಡುವ ಕರ ಚರಮಾರ್ಗವಾಗಿ,
ಕೊಂಬ ಜಿಹ್ವೆ ಲಿಂಗದ ಒಡಲಾಗಿ,
ನೋಡುವ ಚಕ್ಷು ತ್ರಿವಿಧವ ಕೂಡಿದ ಪರಮಪ್ರಕಾಶವಾಗಿ,
ಇಂತಿವನೊಡಗೂಡಿ ಕಾಬ ಸದ್ಭಕ್ತನಂಗ
ಸದಾಶಿವಮೂರ್ತಿಲಿಂಗವು ತಾನೆ. ||೯೪||

೪೩೮

ಗುರುವಾದಲ್ಲಿ, ಶಿಷ್ಯನ ಅಂಗದಲ್ಲಿ ಶಿಲೆಯಲ್ಲಿ ಉರಿಯಡಗಿದಂತಿರಬೇಕು.
ಜಂಗಮವಾದಡೆ, ಭಕ್ತನಂಗದಲ್ಲಿ
ಬಂಗಾರದಲ್ಲಿ ಬಣ್ಣವಡಗಿದಂತೆ ಅಡಗಿರಬೇಕು.
ಲಿಂಗವಾದಡೆ, ಭಕ್ತನ ಚಿತ್ತದಲ್ಲಿ
ಅರಗಿನಲ್ಲಿ ಅಪ್ಪುವಡಗಿ ಉರಿಯ ತೋರಿದಡೆ
ಕರಗಿ ಉರಿಯಡಗಿ ಅಪ್ಪುವಲ್ಲಿಯೆ ಅರತಂತಿರಬೇಕು.
ಇಂತೀ ಭೇದಂಗಳಲ್ಲಿ ಭೇದಿಸಿ ವರ್ಮವ ವರ್ಮದಿಂದರಿದು,
ಕರ್ಮವ ಕರ್ಮದಲ್ಲಿ ಮಾಡಿ, ಕ್ರೀಯ ಕ್ರೀಯಲ್ಲಿ ಕಂಡು,
ಭಾವಶುದ್ಧವಾಗಿ ನಿಂದಸದ್ಭಕ್ತನಂಗವೆ
ಸದಾಶಿವಮೂರ್ತಿಲಿಂಗವು ತಾನೆ. ||೯೫||

೪೩೯

ಮಾಡುವ ಸೇವೆಯನರಿತು ಮಾಡಿಸಿಕೊಂಬುದು ಗುರುಸ್ಥಲ.
ನೆಮ್ಮಿದ ನೆಮ್ಮುಗೆಯನರಿತು ಚರಿಸುವುದು ಜಂಗಮಸ್ಥಲ.
ಇಂತೀ ಉಭಯದ ಒಡಲನರಿತು ಮಾಡುವುದು ಸದ್ಭಕ್ತಿಸ್ಥಲ.
ಆ ಸದ್ಭಕ್ತನಂಗವೆ ಸದಾಶಿವಮೂರ್ತಿಲಿಂಗದ ಒಡಲು. ॥೯೬॥

೪೪೦

ತನ್ನಾಸೆಯ ಹರಿದು ಶಿಷ್ಯಂಗೆ ಅನುಜ್ಞೆಯ ಮಾಡಿದಾಗವೆ
ಬ್ರಹ್ಮಪಾಶ ಹರಿದುದು.
ವೇಷಧಾರಿಗಳಲ್ಲಿ ಹೊಗದೆ ಈಷಣತ್ರಯವ ಬಿಟ್ಟು
ನೆರೆ ಈಶನನರಿತುದೆ ಆ ಭಕ್ತಂಗೆ ವಾಸವನ ಲೇಸಕಿತ್ತುದು.
ಇಂತೀ ಗುರುಚರದ ಉಭಯವನರಿತ ಸದ್ಭಕ್ತನ ಶರೀರವು
ಸದಾಶಿವಮೂರ್ತಿಲಿಂಗವು ತಾನೆ. ॥೯೭॥

೪೪೧

ತನ್ನಯ ವಿಶ್ವಾಸದಿಂದ ಗುರುವ ಮುಕ್ತನ ಮಾಡಿದ ಭಕ್ತನು,
ತನ್ನಯ ವಿಶ್ವಾಸದಿಂದ ಚರವ ವಿರಕ್ತನ ಮಾಡಿದ ಭಕ್ತನು,
ತನ್ನಯ ವಿಶ್ವಾಸದಿಂದ ಶಿಲೆಯ ಕುಲವನಳಿದು
ಸದಮಲದ ಬೆಳಗ ತಂದಿಟ್ಟ ಸದ್ಭಕ್ತನು,
ಆ ಭಕ್ತನಂಗವೆ ಸದಾಶಿವಮೂರ್ತಿಲಿಂಗವು ತಾನೆ. ॥೯೮॥

೪೪೨

ಬಯ್ಚಿಟ್ಟ ಬಯ್ಕೆಯ ಒಡೆಯ ಕೊಂಡುಹೋದಲ್ಲಿ
ನೆಲ ಉಮ್ಮಳಿಸಿದರುಂಟೆ ಅಯ್ಯಾ?
ತನ್ನ ವಿಶ್ವಾಸಕ್ಕೆ ಗುರುವೆಂದು ಕಂಡಡೆ,
ನಿನ್ನಯ ಗುರುತನದ ಹರವರಿಯೆಂತಯ್ಯಾ?
ಅಮೃತವ ಹೊಯಿದಿದ್ದ ಕುಡಿಕೆಯಂತಾಗಬೇಡ,
ಗುರುತನವಳಿದು ಸ್ವಯಗುರುವಾಗು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೯೯॥

೪೪೩

ನಿಜಗುರುವಿನ ಇರವು ಹೇಗಿರಬೇಕೆಂದಡೆ:
ನಿರ್ಮಲ ಸುಚಿತ್ತನಾಗಿ ತನ್ನ ಸೋಂಕುವ

ಸುಖದುಃಖಗಳು ಬಂದಲ್ಲಿ ಆಗುಚೇಗೆಯನರಿಯದೆ,
ಫಲವ ಹೊತ್ತ ತರುವಿನಂತೆ, ಕೆಚ್ಚಲ ಕ್ಷೀರದಂತೆ,
ಕಪಿತ್ಥದ ಪಳ ಗಟ್ಟಿಗೊಂಡಂತೆ.
ಹೊರಗಳ ಇರವು, ಒಳಗಳ ನಿಜ.
ಲೌಕಿಕಕ್ಕೆ ಗುರುವಾಗಿ ಪರಮಾರ್ಥಕ್ಕೆ ಸದ್ಗುರುವಾಗಿ
ಡುಂಡುಫಳದಂತೆ ಹೊರಗಳ ಬಿರುಬು,
ಒಳಗಳ ಮಧುರಸಾರದಂತಿರಬೇಕು.
ಕರು[ಣಿ] ಕಾರುಣ್ಯಾಂಬುಧಿ ಸದ್ಗುರುವಿನ ಇರವು
ಸದಾಶಿವಮೂರ್ತಿಲಿಂಗವು ತಾನೆ. ॥೧೦೦॥

೪೪೪

ಗುರುಶಿಷ್ಯನ ಇರವಿನ ಸ್ಥಲವೆಂತುಟೆಂದಡೆ:
ಮಣಿ ದಾರವ ನುಂಗಿ ಸರವಾಗಿ ನಿಂದು ಕಾಣಿಸಿಕೊಂಡಂತಿರಬೇಕು,
ರತ್ನಪುಂಜ ಕುಂದಣದ ಮೇಲೆ ನಿಂದು ಚಂದವ ಕಾಣಿಸಿಕೊಂಡಂತಿರಬೇಕು,
ಶಂಖದ ಮೇಲೆ ಸಂಭ್ರಮದ ಜಾತಿ ಉತ್ತರ ನಿಂದು ತೋರಿದಂತಿರಬೇಕು, ಇಂತೀ ಭೇದ.
ಘಟ ಗುರು, ಆತ್ಮ ಶಿಷ್ಯನಾಗಿ ತೋರುವ ಬೆಳಗು ತಾನೆ,
ಸದಾಶಿವಮೂರ್ತಿಲಿಂಗವು. ॥೧೦೧॥

೪೪೫

ಗುರುಜಂಗಮಲಿಂಗ ಭಕ್ತಿಮಾರ್ಗಸ್ಥಲ ಸಮರ್ಪಣ:
ಪೃಥ್ವಿಜ್ಞಾನ, ಅಪ್ಪುಜ್ಞಾನ, ತೇಜಜ್ಞಾನ, ವಾಯುಜ್ಞಾನ,
ಆಕಾಶಜ್ಞಾನ, ತಮಜ್ಞಾನ, ಪರಿಪೂರ್ಣಜ್ಞಾನ, ದಿವ್ಯಜ್ಞಾನ,
ಇಂತೀ ಜ್ಞಾನಂಗಳಲ್ಲಿ ಕಂಡು ದೇಹಧರ್ಮಗಳನರಿತು,
ಪಿಂಡಪ್ರಾಣ ಅಂಗಲಿಂಗ ಸಂಯೋಗಸಂಪದದಲ್ಲಿ ನಿಂದು ನೋಡು,
ಸದಾಶಿವಮೂರ್ತಿಲಿಂಗದಲ್ಲಿ ಕಳೆ ಬೆಳಗುತ್ತದೆ. ॥೧೦೨॥

೪೪೬

ಪೃಥ್ವಿಜ್ಞಾನ ಪಿಪೀಲಿಕಾಸಂಬಂಧವಾಗಿಹುದು,
ಅಪ್ಪುಜ್ಞಾನ ಮರ್ಕಟಸಂಬಂಧವಾಗಿಹುದು,
ತೇಜಜ್ಞಾನ ಅಗ್ನಿಸಂಬಂಧವಾಗಿಹುದು,
ವಾಯುಜ್ಞಾನ ಗಂಧಸಂಬಂಧವಾಗಿಹುದು,
ಆಕಾಶಜ್ಞಾನ ವಿಹಂಗಸಂಬಂಧವಾಗಿಹುದು,
ತಮಜ್ಞಾನ ಮಾರ್ಜಾಲಸಂಬಂಧವಾಗಿಹುದು,

ಪರಿಪೂರ್ಣಜ್ಞಾನ ಕೂರ್ಮಸಂಬಂಧವಾಗಿಹುದು,
ದಿವ್ಯಜ್ಞಾನ ಸರ್ವಮಯವಾಗಿ ನಾನಾಭೇದಂಗಳ ಭೇದಿಸುತ್ತಿಹುದು.
ಇಂತೀ ಮನಜ್ಞಾನಭರಿತನಾಗಿ ದಶಗುಣಮರ್ಕಟನ ಮೆಟ್ಟಿನಿಂದು,
ಬಟ್ಟಬಯಲ ತುಟ್ಟತುದಿಯ ಸದಾಶಿವಮೂರ್ತಿಲಿಂಗದ ಕಳೆ
ಕಳಕಳಿಸುತ್ತದೆ, ಚಿತ್ತದ ನೆನಹಿನಲ್ಲಿ. ॥೧೦೩॥

೪೪೭
ಉರಿಯ ಮಡುವಿನಲ್ಲಿ ಒಂದು ಜಲದ ಕುಸುಮ ಹುಟ್ಟಿ,
ಹರಿಹರಬ್ರಹ್ಮಾದಿಗಳಿಗೆ ವಶವಲ್ಲ ನೋಡಾ.
ಆ ಕುಸುಮದ ಎಸಳಿನ ಕೂಟಸ್ಥಲದಲ್ಲಿ ಕಪ್ಪು,
ನಡುಮಧ್ಯದಲ್ಲಿ ತಮ ಕಪೋತವರ್ಣ,
ಅದರ ತುದಿಯಲ್ಲಿ ನಾನಾ ವರ್ಣದ ಛಾಯೆ ಕೂಡಿ ಅಳಿವುತ್ತಿಹುದು.
ಆ ಹೂವ ಒಂದೆ ಭೇದದಲ್ಲಿ ಕಿತ್ತು ಸದಾಶಿವಲಿಂಗದ ಪಾದದಲ್ಲಿರಿಸಲಾಗಿ,
ಪದಕ್ಕೆ ಹೊರಗೆಂದು ಮಕುಟದ ಮೇಲೇರಿತ್ತು.
ಇದು ಬಲ್ಲವರಾರು ಚೋದ್ಯವ ಹೇಳಿರಣ್ಣಾ! ॥೧೦೪॥

೪೪೮
ಊರ ಹೊರಗಳ ಹೊಲತಿಯ ಹಾರುವ ನೆರೆದು
ತನ್ನಯ ಸೂತಕ ಹೋಯಿತ್ತು.
ಹೊಲತಿಯ ಕುಲ ಹರಿದು ಹಾರುವ ಹೊಲೆಯನಾಗಿ,
ಆ ಹಾರುವ ಹಾರದೆ ಸದಾಶಿವಮೂರ್ತಿಲಿಂಗಕ್ಕೆ ಒಳಗಾದ. ॥೧೦೫॥

೪೪೯
ಧರೆಯ ಹಾವು ಆಕಾಶದೊಳಗಳ ಕಪ್ಪೆ ಒಳಗೂಡಿ ಒರುಮೆಯಾಗಿ,
ಹಾವು ಗಾರುಡನ ನುಂಗಿ, ಕಪ್ಪೆ ಹಿಡಿವ ಜೋಗಿಯ ನುಂಗಿ,
ಮತ್ತೆ ಕಪ್ಪೆಗೆ ಸರ್ಪಗೆ ವಿರೋಧವಾಗಿ,
ಕಪ್ಪೆ ಜೋಗಿಯನುಗುಳಿ, ಸರ್ಪನ ನುಂಗಿತ್ತು.
ಕಪ್ಪೆಯ ವಿಷ ತಾಗಿ ಜೋಗಿ ಮತ್ತನಾದ.
ಇಂತೀ ಭೇದದಿಂದ ಅರಿವು ತಾನೆ;
ಸದಾಶಿವಮೂರ್ತಿಲಿಂಗವು ತಾನು ತಾನೆ. ॥೧೦೬॥

೪೫೦
ಕೊಂಬಿನ ಮೇರಳ ಹಕ್ಕಿಯ ಆಕಾಶದ ಮೇರಳ ಗಿಡುಗ ಹಿಡಿಯಿತ್ತು.
ಕೊಂಬು ಹಕ್ಕಿಯ ಕುಡದೆ ಗಿಡುಗನ ಕಡಿಯಿತ್ತು.

ಹಕ್ಕಿಯ ಗಿಡುಗನ ಕೂಡಿ ಕಡಿವ ಕೊಂಬ ಚಿಟ್ಟೆಯ ಮರಿ ನುಂಗಿತ್ತು,
ಸದಾಶಿವಮೂರ್ತಿಲಿಂಗವನರಿತು. ॥೧೦೭॥

೪೫೧

ಮೂರು ಲೋಕವನೆಲ್ಲವ ಗಾಳಿಯಲ್ಲಿ ತೂರಿಬಂದ ಗುಂಗುರು ನುಂಗಿತ್ತು.
ಮೂರು ಲೋಕದ ರಾಯರು ಕೂಡಿ
ಗುಂಗುರ ಕೊಂದಹೆನೆಂದಡೆ, ಆರಿಗೂ ಅಸಾಧ್ಯ.
ಆ ಗುಂಗುರ ಬಾಯಲ್ಲಿ ಕತ್ತರಿವಾಣಿ, ಕಾಲಿನಲ್ಲಿ ಕಂಡೆಹ,
ಅಂಡದಲ್ಲಿ ಕಾಳಕೂಟ, ಪಿಂಡವೆಲ್ಲವೂ ಅಸಿಯ ಬಳಗ.
ಅದ ಕೊಂದು ನಿಂದವಗಲ್ಲದೆ
ಸದಾಶಿವಮೂರ್ತಿಲಿಂಗದ ಬೆಳಗಿಲ್ಲ. ॥೧೦೮॥

೪೫೨

ಕೋಣೆಯೊಳಗಳ ಮಿಂಡ, ನಡುಮನೆಯೊಳಗಳ ಗಂಡ,
ಇವರಿಬ್ಬರ ಒಡಗೂಡುವಳ ಚಂದವ ನೋಡಾ.
ಕೈಯ್ಯಲ್ಲಿ ಕಣ್ಣು ಹುಟ್ಟಿ, ಬಾಯಲ್ಲಿ ಬಸುರು ಹುಟ್ಟಿ,
ಮೊಲೆ ತಲೆಯಲ್ಲಿ, ಭಗ ಬೆನ್ನಿನಲ್ಲಿ
ಈ ಹಾದರಗಿತ್ತಿಯ ಅಂದವ ಸದಾಶಿವಲಿಂಗವೆ ಬಲ್ಲ. ॥೧೦೯॥

೪೫೩

ಪಂಚಾಕ್ಷರಿಯ ಮಣಿಮಾಲೆಯಲ್ಲಿ
ಸಂಚಿತ ಪ್ರಾರಬ್ಧ ಕರ್ಮವೆಂಬ ದಾರ ನಡುವೆ ಸಿಕ್ಕಿ,
ಮಣಿಯ ತಿರುಗಾಡಿಸುತ್ತದೆ.
ದಾರವ ಹರಿದು ಮಣಿಯ ದ್ವಾರವ ಮುಚ್ಚಿ ಉಲುಹಡಗಿ ನಿಲಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೧೧೦॥

೪೫೪

ಕಂಗಳ ದೃಷ್ಟಿ ಪುರುಷನಾಗಿ, ಕೈಯ ದೃಷ್ಟಿ ಸತಿಯಾಗಿ,
ಕೂಡಿಹೆನೆಂಬ ತವಕ ಉಭಯದ ಬಿಂದುವಾಗಿ ನಿಂದುದು,
ಸದಾಶಿವಮೂರ್ತಿಲಿಂಗದ ತದ್ರೂಪ. ॥೧೧೧॥

೪೫೫

ಊರ ಬಾಗಿಲ ಕಂಬದಲ್ಲಿ ಮೂರು ಮುಖದ ಕೋಡಗ
ಬಂದವನಿವನಾರೆಂದು ನೋಡುತ್ತ,

ಮತ್ತೊಂದು ಮುಖ ನಿಂದವನ ಏಡಿಸುತ್ತ,
ಮತ್ತೊಂದು ಮುಖ ಹಿಂದೆ ಒಂದಿದವನ ನೆನೆವುತ್ತ,
ಇಂತೀ ಮೂರು ಚಂದ,
ಹಿಂದಳ ಅಧೋಮುಖಕ್ಕೆ, ನಡುವಳ ಅಭಿಮುಖಕ್ಕೆ,
ಕಡೆಯ ಊರ್ಧ್ವಮುಖಕ್ಕೆ
ಕುಂಡಲಿಯ ಹಾವೆದ್ದು ಕೋಡಗವ ಒಂದೆ ಬಾರಿ ನುಂಗಿತ್ತು.
ಸದಾಶಿವಮೂರ್ತಿಲಿಂಗವನರಿತಲ್ಲಿ. ॥೧೧೨॥

೪೫೬

ಉರಿಯ ಸಿರಿಯ ನಡುವೆ ಒಂದು ಸರೋವರದಲ್ಲಿ ನರಿ ತಿರುಗಾಡುತ್ತದೆ.
ಬಾಲ ಉಡುವಿನಂದ, ನಡು ಬಳ್ಳುವಿನ ಚೊಲ್ಲೆಪದಂದ, ತಲೆ ಕೋಡಗದಂದ.
ರೂಪ ನರಿಯಾಗಿ, ಆತ್ಮ ಕುಕ್ಕುರನಾಗಿ,
ಏತಕ್ಕೂ ಸಿಕ್ಕದೆ ಸರೋವರದಲ್ಲಿ ಹರಿದಾಡುತ್ತದೆ.
ಅದು ಸದಾಶಿವಮೂರ್ತಿಲಿಂಗವನರಿದವರಿಗಲ್ಲದೆ
ಸಿಕ್ಕದು ಜೀವ. ॥೧೧೩॥

೪೫೭

ಹರಿವ ಹಾವು ಕೊಂಬಿನ ಕೋಡಗ ಸಂಧಿಸಿ,
ಒಂದಕ್ಕೊಂದಂಜಿ ನಿಂದ್ಯೆದಾವೆ.
ಕೋಡಗ ನೋಡಲಮ್ಮದು, ಹಾವು ಹೋಗಲಮ್ಮದು.
ಎರಡು ನಿಂದು ಜೋಗಿಗೆ ಲೇಸಾಯಿತ್ತು.
ಸದಾಶಿವಮೂರ್ತಿಲಿಂಗವನರಿತು. ॥೧೧೪॥

೪೫೮

ಕೋಡಗದ ಚೇಷ್ಟೆ ಉಡುಗಿ, ಹಾವಿನ ಹಲ್ಲು ಮುರಿದು,
ಆಡಿಸುವ ಜೋಗಿಯ ನಾಮ ನಷ್ಟವಾಗಿ,
ಸದಾಶಿವಮೂರ್ತಿಯ ಲಿಂಗದ ಇರವು ನಿರಾಳವಾಯಿತ್ತು. ॥೧೧೫॥

೪೫೯

ಬ್ರಹ್ಮಾಂಡದ ಧರೆಯ ಮೇಲೆ
ಅರಿಬಿರಿದಿನ ಮಂತಣದ ಗಿರಿ ಹುಟ್ಟಿತ್ತು.
ಆ ದುರ್ಗಕ್ಕೆ ಮೂವರು ದೊರೆಗಳು ಹುಟ್ಟಿದರು.
ಒಬ್ಬ ನರಪತಿ, ಒಬ್ಬ ಸುರಪತಿ, ಒಬ್ಬ ಸಿರಿವುರಿಗೊಡೆಯ,

ಮೂವರ ದುರ್ಗವೊಂದೆಯಾಗಿ ಸಂದೇಹಕ್ಕೆ ಈಡಾಗುತ್ತದೆ.
ಸದಾಶಿವಮೂರ್ತಿಲಿಂಗ ಸಂಗವಾಗಿಯಲ್ಲದೆ ಆಗದು. ॥೧೧೬॥

೪೬೦

ಆ ದುರ್ಗದಲ್ಲಿದ್ದ ದೊರೆಗಳ ವಿರೋಧವನರಿದು,
ಇದೆ ದುರ್ಗಕ್ಕೆ ಸಾಧ್ಯ ವೇಳೆಯೆಂಬುದನರಿತು,
ಮಾಯಾಮಲಂ ನಾಸ್ತಿಯೆಂಬ ಮನ್ನೆಯ ಕಾಳಗವ ಹಿಡಿದು,
ದುರ್ಗವ ಮುತ್ತಿ, ಕೈಯೊಳಗಾದರು ಮೂವರು ದೊರೆಗಳು.
ನರಪತಿಯ ಅಂಡವ ಕಿತ್ತು, ಸುರಪತಿಯ ಕೈಯ್ಯ ಕಡಿದು,
ಸಿರಿವುರಿಯೊಡೆಯನ ಕಣ್ಣ ಕಳೆದು,
ಅರಿಗಳಿಲ್ಲಾ ಎಂದು ಅಭಿಮುಖವ ನಷ್ಟವ ಮಾಡಿ,
ಊರ್ಧ್ವಮುಖವಾದ ಮಾಯಾಕೋಳಾಹಳಮಲಂ ನಾಸ್ತಿ,
ಮನೆಯ ಭಾವರಹಿತ, ಅನುಪಮಭರಿತ
ಸದಾಶಿವಮೂರ್ತಿಗಳಿಲ್ಲದೆ ನಿರಾಳವಾಯಿತ್ತು. ॥೧೧೭॥

೪೬೧

ನಿರಾಳದಲ್ಲಿ ನೀರಕೋಟೆಯನಿಕ್ಕಿ, ಬಯಲ ಅಗಳ ತೆಗೆದು,
ವಾಯುವ ತೆನೆ ಹೂಡಿ,
ಅಶ್ವರಾಜನೆಂಬ ಅರಸು ಪಟ್ಟಕ್ಕೊಡೆಯನಾಗಿ,
ಸೋಮಸೂರ್ಯವೀಧಿಗಳಲ್ಲಿ ಪಶ್ಚಿಮ ಕೇರಿಯ ಪೊಕ್ಕು,
ದಕ್ಷಿಣದಲ್ಲಿ ನಿಂದು, ಪೂರ್ವದಲ್ಲಿ ಪರಸ್ಥಾನವ ಮಾಡಿ,
ಉತ್ತರದ ಮಧ್ಯದಲ್ಲಿ ಸಿಂಹಾಸನಂ ಗೆಯಿದು,
ಸಕಲೇಂದ್ರಿಯ ನಾನಾ ವಿಷಯ ಪರಿವಾರದಲ್ಲಿ,
ಅರಿಗಳಿಗೆ ವಶವಲ್ಲದೆ ಸುಖಮಯನಾಗಿದ್ದ.
ಸದಾಶಿವಮೂತಿಲಿಂಗವು ನಿರಾಳವಾಯಿತ್ತು. ॥೧೧೮॥

೪೬೨

ನಂಜಿನ ಭೂಮಿಯ ಮೇಲೆ ಸಂದೇಹದ ಕವರವ ನೆಟ್ಟು,
ಮಂಜುಳದ ಮೂರಂಗದ ಮುಂಡಿಗೆಯ ನೆಟ್ಟು,
ಸರಂಗದ ಸುಮನದ ಡೊಂಕರತ ಬೆಮ್ಮರನ ಹಾಕಿ,
ಗತಿಮತಿಯೆಂಬ ಇಕ್ಕೆಲದ ಸೂರಿಗೆ
ನಿಶ್ಚಯವೆಂಬ ಹುಲುಬಡುವ ಹಾಕಿ ಏರಿಸಿದ ಗಳು
ಚಿತ್ತಶುದ್ಧವೆಂಬ ಮೂಗುತಿ ಕೋಲಿನಲ್ಲಿ ನಿಂದಿತ್ತು.

ಗಳು ತೊಲಗದ ಕಟ್ಟು ವಿಶ್ವಾಸ ನಿಶ್ಚಯದಲ್ಲಿ ನಿಂದಿತ್ತು.
ಸಂದೇಹ ನಿಂದು ಹಂಜರವೇರಿತ್ತು.
ಕಡೆ ನಡು ಮೊದಲೆನ್ನದ ತ್ರಿಗುಣದ ಕಂಥೆ ಕಟ್ಟಿ,
ಅರಿದು ಮರೆಯದ ಹುಲ್ಲು ಕವಿಸಿತ್ತು.
ಮನೆಯಾಯಿತ್ತು, ಮನದ ಕೊನೆಯ ಬಾಗಿಲು ಬಯಲಾಯಿತ್ತು,
ಸದಾಶಿವಮೂರ್ತಿಲಿಂಗವು ನಿರಾಳವಾಯಿತ್ತು. ॥೧೧೯॥

೪೬೩

ಕಣ್ಣಿನ ಮನೆಯಲ್ಲಿ ಗನ್ನದ ಗರತಿ ಹಡೆದುಂಬುತ್ತೈದಾಳೆ.
ಅವಳ ಕೂಟವ ಕೂಡುವುದಕ್ಕೆ,
ತಲೆ ಕೆಳಗಾಗಿ, ಕಾಲು ಮೇಲಾಗಿ, ಕೈ ಅಪ್ರದಕ್ಷಿಣವಾಗಿ ತಕ್ಕೈಸಿಕೊಂಡು,
ಹಿಂದುಮುಂದಾಗಿ ಮುತ್ತನಿಕ್ಕೆ, ಶಕ್ತಿಯ ಸುಖ ಲೇಸಾಯಿತ್ತು.
ಸದಾಶಿವಮೂರ್ತಿಲಿಂಗ ಬಚ್ಚಬಯಲು. ॥೧೨೦॥

೪೬೪

ಸುಖದುಃಖದ ನಡುವೆ ಒಂದು ಅತಿರೇಕದ ಕೂಸು ಹುಟ್ಟಿ,
ಹಾಲನೊಲ್ಲದೆ ಮೂರು ಕೂಳ ಬೇಡುತ್ತದೆ.
ಕೂಳು ಕುದಿಯುವುದಕ್ಕೆ ಮೊದಲೆ ಗಂಜಿಯ ಕುಡಿದು
ಕೂಸು ಹೇಳದೆ ಹೋಯಿತ್ತು, ಸದಾಶಿವಮೂರ್ತಿಲಿಂಗವನರಿದು .॥೧೨೧॥

೪೬೫

ಶ್ರೀಶೈಲದ ಮಧ್ಯದಲ್ಲಿ ಒಂದು ಪರುಷರಸದ ಬಾವಿ ಹುಟ್ಟಿತ್ತು,
ಆ ಬಾವಿಯೊಳಗೆ ಕಬ್ಬುನದ ಅದಿರು ಹುಟ್ಟಿ ಸಿದ್ಧರಸವ ನುಂಗಿತ್ತು.
ಇದ್ದವನ ಸುದ್ದಿಯ ಸತ್ತವ ಹೇಳಿ, ಕಾಣದವ ಕೇಳಿ ಹೋದ,
ಸದಾಶಿವಮೂರ್ತಿಲಿಂಗ ಬಚ್ಚಬರಿಯ ಬಯಲು. ॥೧೨೨॥

೪೬೬

ಸೂಜಿಯ ಮೊನೆಯಲ್ಲಿ ದಾರವೇರಿ ಹಿನ್ನೆಯ ಹಂಗ ಬಿಡಿಸಿತ್ತು.
ಉಂಬ ಹಂಗ ಕಣ್ಣು ಕಂಡು, ಬಾಯ ಹಂಗ ಬಿಡಿಸಿತ್ತು.
ಮನ ಕಂಡು ಕೈಯ್ಯ ಸಂದೇಹವ ಬಿಡಿಸಿತ್ತು,
ಮನ ಘನದಲ್ಲಿ ನಿಂದು
ಸದಾಶಿವಮೂರ್ತಿಲಿಂಗದ ಕುರುಹಳಿಯಿತ್ತು. ॥೧೨೩॥

೪೬೭

ಕುರಿಯೊಡೆಯ ಹಲಬರ ನಡುವೆ ನಿಂದಿರೆ ತನ್ನ ಒಡೆಯನನರಿವಂತೆ,
ಸಕಲೇಂದ್ರಿಯ ಬಹುದುಃಖದಲ್ಲಿದ್ದಡೂ
ತತ್ಕಾಲಕ್ಕೆ ಅರ್ಚನೆ ನೇಮ ಕೃತ್ಯ ತಪ್ಪದೆ ಮಾಡಬೇಕು.
ಇದು ನಿಶ್ಚಯದ ಇರವು,
ಸದಾಶಿವಮೂರ್ತಿ ಲಿಂಗವನರಿವುದಕ್ಕೆ ಕಟ್ಟಿದ ಗೊತ್ತು. ॥೧೨೪॥

೪೬೮

ಕ್ರೀಯಲ್ಲಿ ಕಾಬುದ ಕ್ರೀಯಲ್ಲಿ ಕಂಡು, ಅರಿಕೆಯಲ್ಲಿ ಕಾಬುದ ಅರಿವಿನಲ್ಲಿ ಕಂಡು,
ಮುಳ್ಳು ತಾಗಿದಡೆ ಮೊನೆಯಿಂದ ಕಳೆವಂತೆ,
ತನ್ನಯ ಮರವೆಯ ತನ್ನ ಅರಿವಿನಿಂದ ಅರಿದು,
ಸದಾಶಿವಮೂರ್ತಿಲಿಂಗದ ಕುರುಹಡಗಿತ್ತು . ॥೧೨೫॥

೪೬೯

ಮಹಾಮನೆಯೊಳಗೊಂದು ಮಂದಿರವಾಡ:
ಅದರೊಳಗೆ ಹದಿನಾರು ಕೋಣೆ,
ಒಂಬತ್ತು ಬಾಗಿಲು ಮುಚ್ಚಿ, ಒಂದು ಬಾಗಿಲು ತೆಗೆದಿಹುದು.
ತೆಗೆದ ಬಾಗಿಲಲ್ಲಿ ಮೂರು ಮುಖದ ಸರ್ಪ,
ಊರ್ಧ್ವಮುಖವಾಗಿ ತಿರುಗಾಡುತ್ತಿಹುದು.
ಮಿಕ್ಕ ಆರು ಬಾಗಿಲಲ್ಲಿ ಮೂರು ಬಾಗಿಲು ಕೀಳಾಗಿ,
ಕೀಳಿನೊಳಗೆ ಅಧೋಮುಖದ ಸರ್ಪವುಡುಗಿಹುದು.
ಮೇಲಣ ಮೂರು ಬಾಗಿಲು ಊರ್ಧ್ವದ ತ್ರಿಗುಣದ ಸರ್ಪ
ಬಾಲ ಮೊದಲು ತಲೆ ಕಡೆಯಾಗಿ ಎದ್ದು ನಿಂದಾಡುತ್ತಿರಲಾಗಿ,
ವಿಶ್ವಮಯವೆಂಬ ಆಕಾಶದ ಹದ್ದು ಹೊಯಿದು ಎತ್ತಿತ್ತು,
ಅದರೊಳಗೆ ಎರಡು ತಲೆಯ ಮರೆದು, ಒಂದು ತಲೆಯೆಚ್ಚತ್ತು,
ಹದ್ದಿನ ಕೊಕ್ಕ ತಪ್ಪಿ, ಕಾಲುಗುರ ಹೆಜ್ಜೆಯ ಘಾಯವ ತಪ್ಪಿ,
ಗರಿಯ ಅಡುಹ ತೊಲಗಿಸಿ ಹಿಡಿಯಿತ್ತು.
ಅಡಿಹೊಟ್ಟೆಯ ನೋಡಿಯೇರಿತ್ತು, ವಿಷ ಹದ್ದಿನ ಅಸುವ ಬಿಡಿಸಿತ್ತು,
ಹದ್ದು ಹಾವು ಕೂಡಿ ಘಟಕರ್ಮಕ್ಕೊಳಗಾಯಿತ್ತು.
ಕರ್ಮದ ಒಳಗಾದ ಜ್ಞಾನ
ಸದಾಶಿವಮೂರ್ತಿಲಿಂಗವ ಮುಟ್ಟಿದುದಿಲ್ಲ. ॥೧೨೬॥

೪೭೦

ಹುವ್ವಿನ ಮೇರಳ ತುಂಬಿ ಹುವ್ವ ತಿಂದು ಗಂಧವನುಳುಹಿತ್ತು.
ಉಳುಹಿದ ಗಂಧ ತುಂಬಿಯ ತಿಂದು,
ತುಂಬಿ ಗಂಧವೊಂದೆಯಾಯಿತ್ತು.
ಅದು ನಿರಂಗದಿರವು, ಸದಾಶಿವಮೂರ್ತಿಲಿಂಗವು ತಾನೆ. ॥೧೨೭॥

೪೭೧

ಇನ್ನೇವೆ? ನಾ ತಂದ ಬೆಂಕಿಯಲ್ಲಿ
ಸರ್ವಾಂಗ ವಿಷದ ಚೇಳು ಬಿದ್ದು ಬೇವುತ್ತಿದೆ.
ಹಿಡಿದು ತೆಗೆದೆಹೆನೆಂದಡೆ ಉರಿ ತಾಗಿದ ಚೇಳು ಎನ್ನ ಹೊಯ್ದಿತ್ತು.
ಸತ್ತಿತ್ತೆಂಬ ನೋವು ಬಿಡದು, ಎನಗೆ ವಿಷ ತಾಗಿತ್ತೆಂಬ ಆಸೆ ಬಿಡದು.
ಬಿಟ್ಟಡೆ ಸಮಯಕ್ಕೆ ದೂರ, ಹಿಡಿದಡೆ ಜ್ಞಾನಕ್ಕೆ ದೂರ,
ಉಭಯದ ಬೇನೆಯಲ್ಲಿ ಬೇವುದು
ಸದಾಶಿವಮೂರ್ತಿಲಿಂಗಕ್ಕೆ ದೂರ. ॥೧೨೮॥

೪೭೨

ನಾ ತೋಡಿದ ಬಾವಿಯಲ್ಲಿ ಡುಂಡುಕ ಭೇಕವೊಂದಾಗಿ ಇದ್ದವು.
ಡುಂಡುಕ ಹಸಿದು ಭೇಕನ ನುಂಗಿತ್ತು.
ಭೇಕ ಸಾಯದೆ ಡುಂಡುಕನ ಕರುಳ ತಿಂದು,
ಡುಂಡುಕ ಸತ್ತು ಒಣಗಲಾಗಿ, ಅಂಗ ಬಿಗಿದು ಭೇಕನಲ್ಲಿಯೆ ಸತ್ತಿತ್ತು.
ಎನ್ನ ಬಾವಿ ಕೆಟ್ಟಿತ್ತು, ಸದಾಶಿವಮೂರ್ತಿಲಿಂಗದ ಕುರುಹಡಗಿತ್ತು ॥೧೨೯॥

೪೭೩

ಎನ್ನ ಮಡದಿ ಹಾಲ ಕಾಸುವಾಗ, ಹಾಲಿನ ಕುಡಿಕೆಯಲ್ಲಿ ಹಾವು ಬಿದ್ದು ಸತ್ತಿತ್ತು.
ಮಡದಿಯ ಬಿಡಬಾರದು, ಹಾಲ ಚೆಲ್ಲಬಾರದು.
ಹಾವಿನ ವಿಷ ಹಾಲಿನಲ್ಲಿ ಸೋರಿತ್ತು, ಇದಕಿನ್ನಾವುದು ತೆರ?
ಕ್ರೀಯ ಬಿಡಬಾರದು, ಅರಿವಿಂಗೆ ಆಶ್ರಯ ಬೇಕು.
ಅರಿವನರಿದೆಹೆನೆಂದಡೆ ಪ್ರಪಂಚಕ್ಕೆ ಒಡಲಾಯಿತ್ತು.
ಹುಲಿ ಬಾವಿ ಹಾವಿನ ಎಡೆಯಲ್ಲಿ ಸಿಕ್ಕಿದ ತೆರ ಎನಗಾಯಿತ್ತು.
ಈ ಸಂದೇಹವ ಬಿಡಿಸು,
ಸದಾಶಿವಮೂರ್ತಿಲಿಂಗವೆ, ನಿನ್ನ ಧರ್ಮ. ॥೧೩೦॥

೪೭೪
ಬೀಜ ಹುಟ್ಟುವ ತಿರುಳು ಒಳಗಿದ್ದಲ್ಲಿ,
ಮೇರಳ ಸಿಪ್ಪೆ ಮುಚ್ಚಿಯಲ್ಲದೆ ಅಂಕುರದ ತಿರುಳಿಗೆ ಆದಿಯಿಲ್ಲ.
ತಿರುಳು ಅಂಕುರ ನಾಸ್ತಿಯಾದಲ್ಲಿ
ಸಿಪ್ಪೆ ಹುಟ್ಟುವುದಕ್ಕೆ ಉಭಯದ ತತ್ತಿಲ್ಲದಾಗದು.
ಅಲ್ಲಾ ಎಂದಡೆ ಕ್ರೀವಂತರೊಪ್ಪರು, ಅಹುದೆಂದಡೆ ಅಮಲಿನ ಮಲಿನವಾಗದು.
ದಗ್ಧವಾದ ಪಟ ಸಾಭ್ರಕ್ಕೊದಗದು.
ಒಂದೆಂದು ಎರಡ ಕೂಡಿ ಸಂದನಳಿದಲ್ಲಿ ಲೆಕ್ಕ ನಿಂದಿತ್ತು.
ಸದಾಶಿವಮೂರ್ತಿಲಿಂಗವೆಂದಲ್ಲಿ
ಉಭಯನಾಮ ಲೀಯವಾಯಿತ್ತು. ॥೧೩೧॥

೪೭೫
ಇರುಹೆ ಅಂಜದೆ ಮದ ಸೊಕ್ಕಿದ ಐದಾನೆಯ ತನ್ನ ಕಡೆಗಾಲಿನಲ್ಲಿ ಕಟ್ಟಿ
ಸದಮದದಲ್ಲಿ ಎಳೆವುತ್ತದೆ.
ಆನೆಯ ಕೊಂಬು ಮುರಿದು, ಸುಂಡಿಲುಡುಗಿ,
ಮದ ಸೋರಿ, ಗಜಘಟವಳಿದು ಹೋಯಿತ್ತು.
ಇರುಹಿನ ಕಾಲು ಐಗಜವ ಕೊಂದು, ಮೂರು ಹುಲಿಯ ಮುರಿಧು,
ನನಗಿನ್ನಾರೂ ಅಡಹಿಲ್ಲಾಯೆಂದು ಹೋಯಿತ್ತು,
ಸದಾಶಿವಮೂರ್ತಿಲಿಂಗದಲ್ಲಿಗೆ ಎಯ್ದಿತ್ತು. ॥೧೩೨॥

೪೭೬
ಎರಳೆಯ ಕೊಂಬಿನ ನುಲಿಯ ಬಳಸಿನಲ್ಲಿ
ಅರುಹಿರಿಯರೆಲ್ಲರು ಬಳಸಿ ಆಡುತ್ತೈದಾರೆ.
ಎರಳೆ ಸತ್ತು ಕೋಡಳಿದು ಕೊಂಬಿನ ನುಲುಹು ನೇರಿತವಾಗಿ,
ಬಳಸುವ ಅರುಹಿರಿಯರೆಲ್ಲರು ಒಬ್ಬುಳಿತವಾಗಿ ಸುಳುಹು ನಿಂದಾಗವೆ,
ಸದಾಶಿವಮೂರ್ತಿಲಿಂಗದ ಅಂಗದಲ್ಲಿ ಲೀಯವಾಯಿತು. ॥೧೩೩॥

೪೭೭
ಕ್ಷೀರಕ್ಕೆ ವಾರಿ ಅರತಲ್ಲದೆ ಮಧುರಗುಣವಿಲ್ಲ.
ಶರೀರವಿಡಿದಿದ್ದಲ್ಲಿ ಅಂಗಕ್ಕೆ ಆಸೆ ಅರತು, ರೋಷ ಹಿಂಗಿ,
ಈಷಣತ್ರಯದ ಲೇಸು ಕಷ್ಟವನರಿತು,
ಈಶನ ವೇಷದ ಭಾಷೆಗೆ ತಪ್ಪದೆ ಇಪ್ಪುದು ಗುರುಚರಮತ,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೧೩೪॥

೪೭೮
ಕಾಮನ ಅಂಬಿನ ಕಣೆಯಲ್ಲಿ
ಮೂವರು ಬಾಲೆಯರು ಹುಟ್ಟಿದ ವಿವರ :
ಹಿಳಿಕಿನಲ್ಲಿ ತಾಯಿ ಹುಟ್ಟಿದಳು, ಮಧ್ಯದಲ್ಲಿ ಮಗಳು ಹುಟ್ಟಿದಳು,
ಮೊನೆಯಲ್ಲಿ ಮೊಮ್ಮಗಳು ಹುಟ್ಟಿ
ಹೆತ್ತಾಯ ತಿಂದು ತಾಯಿಗೆ ಎಸರನೆತ್ತುತ್ತೈದಾಳೆ.
ಅವಳ ಕೊಲುವ ಧೀರರ ಇನ್ನಾರನು ಕಾಣೆ.
ಎನಗೆ ಗಂಡ ಎಮ್ಮವ್ವೆಯ ಮಗನೆಂದು ಸಂದಣಿಗೊಳುತ್ತವಳೆ.
ನಾವೆಲ್ಲರೂ ಕೇಳುವ ಬನ್ನಿ, ಸದಾಶಿವಮೂರ್ತಿಲಿಂಗವ. ॥೧೩೫॥

೪೭೯
ಭಕ್ತಿಯ ನುಡಿವಲ್ಲಿ ಬಾಹ್ಯವಾಗಿರಬೇಕು,
ಸತ್ಯವ ನುಡಿವಲ್ಲಿ ಮರೆಯಾಗಿರಬೇಕು.
ವೇಶಿ ತಿರುಗಾಡುವಲ್ಲಿ ತನ್ನಯ ವೇಷವ ತೋರಬೇಕು,
ಗರತಿಯಿಹಲ್ಲಿ ತನ್ನ ಪುರುಷನ ಅಡಕದಲ್ಲಿ ಅಡಗಬೇಕು.
ದಿವ್ಯಜ್ಞಾನವ ದಿವಿಜರಲ್ಲಿ ಹೇಳುವ ತ್ರಿವಿಧ ಗುಡಿಹಿಂಗಳಿಗೆ ಅರುಹಿನ ಪಥವಿಲ್ಲ,
ಸದಾಶಿವಮೂರ್ತಿಲಿಂಗಕ್ಕೆ ದೂರವಾಗಿಹರು. ॥೧೩೬॥

೪೮೦
ವೇದವ ನುಡಿವಲ್ಲಿ ವಿಪ್ರರು
ಮತ್ತಾರೂ ಶೂದ್ರಜಾತಿ ಕೇಳದಂತೆ ನುಡಿವರದೇತಕ್ಕೆ?
ಅದು ಈಚೆಯ ಮಾತು.
ಕಂಡಕಂಡವರೊಡನೆ ಹೇಳಿಕೊಂಡಾಡುತ್ತಿಪ್ಪ
ದಿವ್ಯಜ್ಞಾನ ಪರಮಪ್ರಕಾಶ[ವು],
ಭಂಡರಿಗೇಕೆ ಸದಾಶಿವಮೂರ್ತಿಲಿಂಗದ ಅರಿವು. ॥೧೩೭॥

೪೮೧
ನಿಕ್ಷೇಪವ ನೀಕ್ಷೆಪಿಸುವಲ್ಲಿ ಮತ್ತಾರೂ ಅರಿಯದಂತೆ
ಇರಿಸಬೇಕೆಂಬುದಕ್ಕಿಂದವು ಕಡೆಯೆ ಶಿವತತ್ವಪರಮಜ್ಞಾನ?
ಇಂತಿದನರಿತು ಲಿಂಗಬಾಹಿರರಲ್ಲಿ, ಕಂಡ ನಿಂದ ಠಾವಿನಲ್ಲಿ,
ಬಂದಂತೆ ಬಾಯ ಬಡಿವರಲ್ಲಿ
ಶಿವಪ್ರಸಂಗವನೊಂದನೂ ನುಡಿಯಲಾಗದು.
ಮೀರಿ ನುಡಿದಡೆ ಸದಾಶಿವಮೂರ್ತಿಲಿಂಗಕ್ಕೆ ದೂರ. ॥೧೩೮॥

೪೮೨

ಬ್ರಹ್ಮವನರಿತ ಮತ್ತೆ ಸುಮ್ಮನೆ ಇರಬೇಕು.
ಬ್ರಹ್ಮಪ್ರಸಂಗವ ಮಾಡುವಲ್ಲಿ ಪರಬ್ರಹ್ಮಿಗಳಲ್ಲಿ ಪ್ರಸಂಗವ ಮಾಡಬೇಕು.
ತನ್ನ ಅಗಮ್ಯವ [ಮೆ]ರೆಯಬೇಕೆಂದು
ಬೀದಿಯ ಪಸರದಂತೆ, ಲಾಗನಾಡುವ ವಿಧಾತನಂತೆ ಆಗಬೇಡ.
ಕಳ್ಳನ ಚೇಳೂರಿದಂತಿರು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೧೩೯॥

೪೮೩

ಮಹಾಪರಂಜ್ಯೋತಿಪ್ರಕಾಶವ ಕಂಡನಿಂದವರಲ್ಲಿ ಹೇಳಬಹುದೆ?
ಸ್ವಸ್ತ್ರೀಯ ವಿಷಯಸುಖಕ್ಕಿಂದವು ಕಡೆಯೆ ವಚನಾನುಭಾವ, ಸಮ್ಯಜ್ಞಾನ.
ತನ್ನ ತಾನರಿದವರಲ್ಲಿ ತಾನರಿದು, ಉಭಯವಲ್ಲದೆ ತ್ರಿವಿಧಭಿನ್ನವಿಲ್ಲದೆ ಇರಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೧೪೦॥

೪೮೪

ವಚನರಚನೆಯ ಬಲ್ಲ ಅರುಹಿರಿಯರೆಲ್ಲರು
ಮೂರುಳ್ಳವನ ಬಾಗಿಲ ಕಾಯಿದ್ದೈದಾರೆ.
ಹೇಳಿ ಕೇಳಿ ಬಲ್ಲತನವಾದೆಹೆನೆಂಬವರೆಲ್ಲರು ಬಾಗಿಲಲ್ಲಿಯೆ ಸಿಕ್ಕಿದರು.
ಸ್ಥಾವರಾದಿಗಳು ಮೊದಲಾಗಿ ಇದಿರಿಟ್ಟ ಕುರುಹೆಲ್ಲವು
ತಾವಿದ್ದ ಠಾವಿಗೆ ತಂದುಕೊಂಬವರಿಂದ ಕಡೆಯೆ
ಅರಿವುಳ್ಳ ಜ್ಞಾನಿಗಳೆಂಬವರು?
ಇದು ಕಾರಣ, ಸಂಚಿತ ಆಗಾಮಿ ಪ್ರಾರಬ್ಧ ಎಲ್ಲಿದ್ದಡೂ ತಪ್ಪದು.
ಹಲುಬಿ ಹರಿದಾಡಬೇಡ,
ಸದಾಶಿವಮೂರ್ತಿಲಿಂಗವ ಒಲವರವಿಲ್ಲದೆ ನೆರೆ ನಂಬು. ॥೧೪೧॥

೪೮೫

ಒಂದನಹುದು ಒಂದನಲ್ಲಾ ಎಂಬುದಕ್ಕೆ ಎಲ್ಲಕ್ಕೂ ಸಂದೇಹಪದವಾದಿಹಿತು.
ನಿಂದ ನಿಂದ ಸ್ಥಲಕ್ಕೆ ಕುಂದಿಲ್ಲದೆ ಸಂದಿಲ್ಲದೆ,
ಸದಾಶಿವಮೂರ್ತಿಲಿಂಗವನರಿಯಬೇಕು. ॥೧೪೨॥

೪೮೬

ಒಡೆಯ ನೋಡುತ್ತಿದ್ದಲ್ಲಿ ಅಸುವಿನಾಸೆಯಿಲ್ಲದೆ ಅವಸರಕ್ಕೊದಗಬೇಕು.
ಭಕ್ತನಾದಲ್ಲಿ ತಾ ಮಾಡುವ ಕೃತ್ಯಕ್ಕೆ ನಿಶ್ಚಯನಾಗಿರಬೇಕು.
ಬಂಟಂಗಾ ಗುಣ ಭಕ್ತಂಗೀ ಗುಣ.

ಇದು ಸತ್ಯವೆಂದು ಅರಿತು
ಸದಾಶಿವಮೂರ್ತಿಲಿಂಗವನರಿಯಬೇಕು. ॥೧೪೩॥

೪೮೭

ವರ್ತಕದಲ್ಲಿ ವರ್ತಿಸುವನ್ನಕ್ಕ ಸತ್ಕ್ರೀಯ ಮಾಡಬೇಕು,
ಅದು ಲೇಪವಾಗಿ ನಿಂದಲ್ಲಿ ಆತ್ಮನ ಅಳಿವ ಉಳಿವನರಿಯಬೇಕು.
ಅದನರಿತು ನಿಂದು ಸ್ವಸ್ಥವಾದಲ್ಲಿ ತುರೀಯ.
ಆ ತುರೀಯ ಸಮೇತ ಸಂತೋಷದಲ್ಲಿ ನಿಂದು
ಸುಖನಿಶ್ಚಯವಾದುದೆ ಪರಮನಿರ್ವಾಣ,
ಸದಾಶಿವಮೂರ್ತಿಲಿಂಗದ ಬೆಳಗಿನ ಕಳೆ. ॥೧೪೪॥

೪೮೮

ಆತ್ಮ ವಸ್ತುವೆಂದು ಅರಿತಲ್ಲಿ ಆತ್ಮನ ಅಳಿವ ಉಳಿವನರಿತು,
ತಾನಿದಿರಿಟ್ಟು ಕಾಬುದಕ್ಕೆ ದೃಷ್ಟವರತು ಸರ್ವಸಂಪದನಾಗಿ,
ಮಿಥ್ಯ ತಥ್ಯ ತಲೆದೋರದೆ ಹಿಂದೆ ಬಂದ ಸಂದೇಹವನರಿತು,
ತಾ ನಿಂದ ನೆಲೆಯ ನೆಮ್ಮುಗೆಯ ಕಂಡು,
ಮುಂದಕ್ಕೆ ಬಹ ಸುಖದುಃಖವ ಇಂದೆ ಕಂಡು,
ಸಂದೇಹವಳಿದು ಸದಾ ಅಮಲಿನನಾಗಿ,
ಮತ್ತೆ ಮುಂದಕ್ಕೊಂದುಂಟೆಂದು ಕಲ್ಪನೆಯ ಸಂಕಲ್ಪ ಹರಿದು ನಿಂದು,
ಮತ್ತೊಂದರಲ್ಲಿ ನಿಂದು ಅಳಿಯಬೇಕು.
ಅಳಿವ ಕಾಯವುಳ್ಳನ್ನಕ್ಕ ಅರಿವಿಂಗೆ ಕುರುಹು ಇರಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೧೪೫॥

೪೮೯

ಪಂಚತತ್ವದಲ್ಲಿದ್ದು ಪರತತ್ವವನರಿಬೇಕು. ಅದಕ್ಕೆ ದೃಷ್ಟ:
ಪಶುವಿನ ಹೊಟ್ಟೆಯಲ್ಲಿ ಕರುವಿದ್ದಡೆ ಕರೆವುದಕ್ಕೆ ಮನೋಹರವುಂಟೆ?
ಅದು ಭಿನ್ನಭಾವವಾಗಿ ಇದಿರಿಟ್ಟು ಉಂಡಲ್ಲದೆ ಮೊಲೆ ತೊರೆಯವು.
ಆ ತೆರನನರಿದಲ್ಲಿ ಅರಿವುದಕ್ಕೊಂದು ಕುರುಹು ಬೇಕು.
ಬಲ್ಲಿದ ವೀರನೆಂದಡೂ ಅಲಗಿನ ಮೊನೆಯಿಲ್ಲದೆ ಗೆಲಬಹುದೆ?
ಆ ಅರಿವ ಚಿತ್ತ ಕುರುಹಿನ ಘಟದಲ್ಲಿದ್ದು ಅರಿವುತಿದ್ದಿಹಿತಾದ ಕಾರಣ.
ಇದನರಿತು ಆತ್ಮವಾದವೆಂದು ಎನಲಿಲ್ಲ.
ಸದಾಶಿವಮೂರ್ತಿಲಿಂಗವನರಿವುದಕ್ಕೆ
ಇದಿರಿಟ್ಟು ಕ[ಳ]ದುಳಿಯಬೇಕು. ॥೧೪೬॥

೪೯೦
ಅಪ್ಪು ಆಧಾರವಾಗಿ, ಕಮಠ ಶೇಷ ನೇಮ್ಮಿಗೆಯಿಂದ
ಪೃಥ್ವಿ ಆ[ಧೇಯ]ವಾಗಿ ನಿಂದು ತೋರುವಂತೆ,
ವಸ್ತುವಿನ ಹಾಹೆಯಿಂದ ಕಾಯ ನಿಂದು ತೋರುತ್ತಿಹುದೇ ದೃಷ್ಟ.
ಒಂದಕ್ಕೊಂದು ನೆಮ್ಮಿ ಕಾಣುವ ಅರಿವಿಂಗೆ ಕುರುಹು ಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೧೪೭॥

೪೯೧
ಪಾಷಾಣದ ಘಟದಲ್ಲಿ, ರತ್ನದ ಜ್ಯೋತಿಯ ಬೆಳಗು ತೋರುವಂತೆ,
ಆ ಬೆಳಗಿನ ಕುರುಹು ಘಟದಲ್ಲಿ ನಿಂದು ಇದಿರಿಂಗೆ ಕುರುಹಿಟ್ಟಿತ್ತು.
ಆ ಬೆಳಗನೊಳಕೊಂಡ ಕಾರಣ ಪಾಷಾಣವೆಂಬ ಕುಲ ಹರಿದು,
ರತ್ನವೆಂಬ ನಾಮವಾಯಿತ್ತು.
ಇಂತೀ ಭೇದವನರಿದು ಉಭಯನಾಮ ನಷ್ಟವಾಹನ್ನಕ್ಕ
ಸದಾಶಿವಮೂರ್ತಿಲಿಂಗವನರಿಯಬೇಕು. ॥೧೪೮॥

೪೯೨
ಆತ್ಮ ಘಟಮಧ್ಯದಲ್ಲಿ ನಿಂದು,
ಕೈಯ್ಯಲ್ಲಿ ಮುಟ್ಟಿ, ಕಿವಿಯಲ್ಲಿ ಕೇಳಿ, ನಾಸಿಕದಲ್ಲಿ ವಾಸಿಸಿ,
ಕಣ್ಣಿನಲ್ಲಿ ನೋಡಿ, ಬಾಯಲ್ಲಿ ಉಂಬಂತೆ,
ಪಂಚೇಂದ್ರಿಯಕ್ಕೆ ತತ್ತಾಗಿ ಹಂಚಿಕೊಂಡಿಹುದು ಒಂದೆ ಆತ್ಮ.
ಅವರವರ ಮುಖಂಗಳಿಂದ ಗುಣವನರಿವನ್ನಕ್ಕ,
ಇಷ್ಟದ ಮರೆಯಲ್ಲಿ ಚಿತ್ತ ನಿಂದು, ವಸ್ತುನಾಮವಾಗಬೇಕು.
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೧೪೯॥

೪೯೩
ಪೃಥ್ವಿಯ ಅಪ್ಪುವಿನ ಆಧಾರದಿಂದ ಬೀಜವೊಡೆದು ಬೆಳೆವಂತೆ,
ಅರಿದು ಅರಿಹಿಸಿಕೊಂಬ ಉಭಯದ ಮಧ್ಯದಲ್ಲಿ
ಜ್ಞಾನಶಕ್ತಿ ಕುರುಹಾಗಿ ಚಿದ್ಘನವಸ್ತು ಪತಿಯಾಗಿ.
ಉಭಯದಿಂದ ಕೂಡಿ ಮೇಲನರಿತಲ್ಲಿ
ಸದಾಶಿವಮೂರ್ತಿಲಿಂಗ ಬಚ್ಚಬಯಲು. ॥೧೫೦॥

೪೯೪
ಹಾಲು ಬತ್ತಿದ ಹಸುವಿಂಗೆ ಕರುವ ಬಿಟ್ಟಡೆ
ಒದೆಯುವುದಲ್ಲದೆ ಉಣಲೀಸುವುದೆ?
ಅರಿವು ನಷ್ಟವಾದವ ಕ್ರೀಯ ಬಲ್ಲನೆ?

ಕ್ರೀಯೆಂಬುದೆ ಹಸು, ಅರಿವೆಂಬುದೆ ಹಾಲು, ಬಯಕೆಯೆಂಬುದೆ ಕರು.
ಇಂತೀತ್ರಿವಿಧವನರಿದಲ್ಲಿ ಸದಾಶಿವಮೂರ್ತಿಲಿಂಗವು ತಾನೆ. ॥೧೫೧॥

೪೯೫
ಆಡಿನ ಮೊಲೆವಾಲ ಕೋಡಗವುಂಡು, ಹಾಲ ಸಿಹಿ ತಲೆಗೇರಿ,
ಬಂದವರ ಏಡಿಸುತ್ತ, ನಿಂದವರ ಕಚ್ಚುತ್ತ,
ಹಿಂಗದು ನೋಡಾ, ಕೋಡಗದಂದ.
ಕೋಡಗವ ತಿಂದು ಆಡುವನೆ ಆರೂಢವಸ್ತು,
ಸದಾಶಿವಮೂರ್ತಿಲಿಂಗಕ್ಕೆ ಎರವಿಲ್ಲದಂಗ. ॥೧೫೨॥

೪೯೬
ಮಹಾಧರೆಯಲ್ಲಿ ಮನೆಯ ಕಟ್ಟುವುದಕ್ಕೆ,
ಕಾವಿಲ್ಲದ ಕೊಡಲಿಯಲ್ಲಿ, ಹುಟ್ಟದ ಮರನ ತರಿದು,
ಎತ್ತಿಲ್ಲ[ದೆ] ಏರಿನಲ್ಲಿ ಹೂಡಿ ತಂದವನಿವನಾರಣ್ಣಾ?
ನಾನೆಂಬುದಕ್ಕೆ ಮೊದಲೆ ನಾಮ ನಷ್ಟವಾಯಿತ್ತು.
ಸದಾಶಿವಮೂರ್ತಿಲಿಂಗ ಅಲ್ಲಿ ಸತ್ತು, ಇಲ್ಲಿ ಹೆಣನಾಯಿತ್ತು. ॥೧೫೩॥

೪೯೭
ಹಸಿದ ಹಾವಿನ ಹೆಡೆಯಲ್ಲಿ ಇಲಿ ಬಿಲನ ತೋಡುತ್ತದೆ.
ಹೆಡೆಯಲ್ಲಿ ಹೆಬ್ಬಿಲ, ಕಣ್ಣಿನ ಓಹರಿಯಲ್ಲಿ ಹುಲ್ಲಿನ ಹಾಸಿಕೆಯ
ಶಯನದ ಮನೆ,
ಮೂಗಿನ ವಾಸದಲ್ಲಿ ತಪ್ಪು ದಾರಿ, ಬಾಲದ ತುದಿಯಲ್ಲಿ ಹುಡುಪ.
ಹಾವ ಹಿಡಿದಲ್ಲಿಯೇ ಸಿಕ್ಕಿತ್ತು.
ಸದಾಶಿವಮೂರ್ತಿಲಿಂಗವನರಿದಲ್ಲಿ ಚಿತ್ತ ನಿಂದಿತ್ತು. ॥೧೫೪॥

೪೯೮
ತಾವರೆಯ ನಾಳದ ತೆರಪಿನಲ್ಲಿ,
ಮೂರು ಲೋಕವನೊಳಕೊಂಡ ಗಾತ್ರದಾನೆ ಎಡತಾಕುತ್ತದೆ.
ನಾಳ ಹರಿಯದು ಆನೆಯಂಗಕ್ಕೆ ನೋವಿಲ್ಲ.
ಇದೇನು ಚೋದ್ಯವೆಂದು ಕೇಳುವ ಬನ್ನಿ,
ಸದಾಶಿವಮೂರ್ತಿಲಿಂಗವ. ॥೧೫೫॥

೪೯೯
ಜೇನುತುಪ್ಪವ ಹೊತ್ತು ಮಾರುವವಳ ಮಡಕೆಯ ಮೇಲೆ
ಮೂರು ತುಂಬಿ ಕುಳಿತೈದಾವೆ.

ಒಂದು ತುಂಬಿ ಇದ್ದಿತ್ತು, ಒಂದು ತುಂಬಿ ಹಾರಿತ್ತು,
ಒಂದು ತುಂಬಿ ಸತ್ತಿತ್ತು.
ಮೂರು ತುಂಬಿ ಅಂದವ ಕಂಡುದಿಲ್ಲ.
ಮಡಕೆ ಒಡೆಯಿತ್ತು, ತುಪ್ಪವೊಕ್ಕಿತ್ತು, ಹೊತ್ತವ[ಳು] ಸತ್ತ[ಳು].
ಇದೇನು ಕೃತ್ರಿಮವೆಂದು
ಕೇಳುವ ಬನ್ನಿ, ಸದಾಶಿವಮೂರ್ತಿಲಿಂಗವ. ॥೧೫೬॥

೫೦೦

ಕೊಟ್ಟ ಕೂಗಿತ್ತು, ಹಾಲುವಕ್ಕಿ ಬಳಿಯಿತ್ತು, ಹಂಗ ಕಟ್ಟಿತ್ತು;
ಅವನ ಅವಳ ಮದುವೆ ನಿಂದಿತ್ತು, ಇವನಿಗಾಯಿತ್ತು.
ತಂದ ಮರುದಿನಕ್ಕೆ ಸತ್ತಳವಳು.
ಮದುವಳಿಗ ಮಂಡೆಯ ಮೇಲೆ ಸೀರೆಯ ಹಾಕಿಕೊಂಡು,
ಕೆಟ್ಟೆ ಕೆಟ್ಟೆ ಕೆಟ್ಟೆನೆಂದು ಹೋಗುತ್ತಿದ್ದನು,
ಸದಾಶಿವಮೂರ್ತಿಲಿಂಗದಲ್ಲಿಗೆ. ॥೧೫೭॥

೫೦೧

ಮೂಳಿಯ ಮೊದಲಿನಲ್ಲಿ ಮೂವರು ಮಕ್ಕಳು ಹುಟ್ಟಿ.
ಒಬ್ಬ ಕಾಲಿನಲ್ಲಿ ಬಲ್ಲಿದ, ಒಬ್ಬ ಕೈಯ್ಯಲ್ಲಿ ಬಲ್ಲಿದ,
ಒಬ್ಬ ಬಾಯಲ್ಲಿ ಬಲ್ಲಿದ.
ಇಂತೀ ಮೂವರು ಮಕ್ಕಳು ಹೆತ್ತ ತಂದೆಯ ಆಳವಾಡುತ್ತಿರಲಾಗಿ,
ಇವರು ಎನಗೆ ಮಕ್ಕಳಲ್ಲಾಯೆಂದು ಹಗೆಯೆಂಬುದನರಿದು,
ಹಿರಿಯ ಮಗನ ಕಾಲ ಮುರಿದು,
ನಡುವಳ ಮಗನ ಕೈಯ್ಯ ಮುರಿದು,
ಕಿರಿಯ ಮಗನ ಬಾಯ ಮುಚ್ಚಿ ಗೋಣ ಮುರಿದು,
ಅವರು ಹಿಂಗಿ ನಾ ಬದುಕಿದೆನೆಂದು ತ್ರಿವಿಧದ ಸಂದ ಬಿಟ್ಟು,
ಸದಾಶಿವಮೂರ್ತಿಲಿಂಗದಲ್ಲಿಗೆ ಸಂದಿತ್ತು ಚಿತ್ತ. ॥೧೫೮॥

೫೦೨

ಮಹಾಮಾಯವೆಂಬ ಶಕ್ತಿರೂಪಿನಲ್ಲಿ
ತ್ರಿವಿಧಮೂರ್ತಿ ಜನಿಸಿದವು ಎಂಬುದ ತಾನರಿತಲ್ಲಿ,
ತಾ ಪಿತನಾಗಿ ತ್ರಿವಿಧಮೂರ್ತಿ ಸುತರಾಗಿ
ಬ್ರಹ್ಮನ ಉತ್ಪತ್ಯವ ಕೆಡಿಸಿ,

ವಿಷ್ಣುವಿನ ಸ್ಥಿತಿಗೊಳಗಾಗದೆ, ರುದ್ರನ ಲಯದ ಬಾಯಲ್ಲಿ ಸಿಕ್ಕದೆ,
ಮೀರಿದ ಘನವಸ್ತು ತಾನೆ, ಸದಾಶಿವಮೂರ್ತಿಲಿಂಗವು ತಾನೆ. ॥೧೫೯॥

೫೦೩
ಕಲ್ಲ ಗಿರಿಯ ಹುಲ್ಲಿನ ಮೊನೆಯಲ್ಲಿ ಕುಕ್ಕಿ,
ಹುಲ್ಲೆಯ ಮರಿ ಹುಲಿ ಒಂದಾಗಿ ಚಲ್ಲವಾಡುತ್ತಿದ್ದಿತ್ತು.
ಬಲ್ಲವನ ಬಲುಹ ಏನೂ ಇಲ್ಲದವ ಮುರಿದ.
ಈ ಸೊಲ್ಲಿನ ವಿವರವ ಕೇಳುವ ಬನ್ನಿ,
ಸದಾಶಿವಮೂರ್ತಿಲಿಂಗದಲ್ಲಿಗೆ. ॥೧೬೦॥

೫೦೪
ಹುತ್ತದೊಳಗಳ ಹಾವು ಹದ್ದಿನ ಹೊಟ್ಟೆಯೊಳಗಳ ತತ್ತಿ ನುಂಗಿತ್ತು.
ಗಿಡುಗನ ಉಡು ನುಂಗಿ, ಹೊಡೆವವನ ದಡಿ ನುಂಗಿತ್ತು.
ಹಾವನು ಹದ್ದಿನ ತತ್ತಿಯ, ಗಿಡುಗನ ಉಡುವ,
ಹೊಡೆವವನ ಡೊಣ್ಣೆಯ ಬಾಯಿಲ್ಲದ ಇರುಹೆ ನುಂಗಿತ್ತ ಕಂಡೆ.
ಸದಾಶಿವಮೂರ್ತಿಲಿಂಗವು ಬಚ್ಚಬಯಲಾಯಿತ್ತು. ॥೧೬೧॥

೫೦೫
ಒಂದು ಹರಿವ ಹಾವು, ಒಂದು ದನಿ ಸರಕ್ಕೆ ನಿಂದ ಹಾವು,
ಒಂದು ಉರಿವ ಹಾವು.
ಮೂವರ ನಡುವೆ ನಿಂದು ಆಡುವ ಕೋಡಗದಿರವು ಎಂತೆಂದಡೆ:
ಹರಿವ ಹಾವ ಮೆಟ್ಟಿ, ನಿಂದ ಹಾವ ಕೈಯ್ಯಲ್ಲಿ ಹಿಡಿದು,
ಉರಿವ ಹಾವ ಬಾಯಲ್ಲಿ ಕಚ್ಚಿ ಆಡುತ್ತಿರಲಾಗಿ,
ಕೋಡಗನೊಡೆಯ ಬಂದು ನೋಡಿ, ಕೋಲ ಹಿಡಿದು ಕುಟ್ಟೆ,
ಮೂರು ಹಾವ ಬಿಟ್ಟು, ಕುಟ್ಟಿದ ಕೋಲ ನುಂಗಿತ್ತು.
ಆ ಕೋಲು ಕೋಡಗದ ಒಡಲೊಳಗೊಡೆದು ಕೋಡಗ ಸತ್ತಿತ್ತು.
ದಡಿ ಒಡೆಯನ ನುಂಗಿ ಒಡೆಯನಡಗಿ,
ಸದಾಶಿವಮೂರ್ತಿಲಿಂಗವ ಒಡಗೂಡಿ ಬಚ್ಚಬಯಲಾಯಿತ್ತು. ॥೧೬೨॥

೫೦೬
ಮಹಾವಿಕಾರ ರಣಮಯವಾದಲ್ಲಿ
ಹರಿವ ಶೋಣಿತದಲ್ಲಿ ಒಂದು ನೊಣ ಹುಟ್ಟಿತ್ತು.
ಕಾಲೊಂದು, ಅಂಗ ಮೂರು, ಹಾರುವ ರಟ್ಟೆ ಒಂದೆ.

ಅದರ ನಾಲಗೆಯಲ್ಲಿ ನಾರಾಯಣ ಹುಟ್ಟಿ, ನೊಣ ಸತ್ತಿತ್ತು.
ಬ್ರಹ್ಮನ ಇರವಾಯಿತ್ತು, ವಿಷ್ಣುವಿನ ಲೋಕವಾಯಿತ್ತು. ರುದ್ರನ ಕಪಾಲತುಂಬಿ,
ಬುದ್ಧಿವಂತರೆಲ್ಲರು ಕಪಾಲದ ಕೂಳನುಂಡು ಬುದ್ಧಿವಂತರಾಗಿರಿ.
ಎನಗಾ ಹೊದ್ದಿಗೆ ಬೇಡ, ಸದಾಶಿವಮೂರ್ತಿಲಿಂಗವಿದ್ದಂತೆಯೆ ಸಾಕು. ॥೧೬೩॥

೫೦೭
ಶರೀರವ ಕುರಿತಲ್ಲಿ ಸಾಧಕಾಂಗವ ನುಡಿಯಬೇಕು.
ಆತ್ಮನ ಕುರಿತಲ್ಲಿ ಚಿದ್ಘನದಲ್ಲಿ ನಿಂದು
ಒದಗಿ ಅಡಗಿರುವ ಠಾವ ನುಡಿಯಬೇಕು.
ಇಂತೀ ಉಭಯದಿರವ ತಾನರಿತು
ಅಂಗಕ್ಕೆ ಶಿಲೆ, ಆತ್ಮಂಗೆ ಓಗರವಾದಂತೆ,
ಲೌಕಿಕಕ್ಕೆ ಆಚರಣೆ, ಪರಮಾರ್ಥಕ್ಕೆ ಪರಂಜ್ಯೋತಿಪ್ರಕಾಶವಾಗಿರಬೇಕು,
ಸದಾಶಿವಮೂರ್ತಿಲಿಂಗಕ್ಕೆ ಅಂಗವಾಗಿ
ನಿರಂಗಕ್ಕೆ ಸಂಗವನೆಯ್ದಬೇಕು. ॥೧೬೪॥

೫೦೮
ಉಪ್ಪಿನ ನೀರು ಹೆಪ್ಪ ಬಲಿದು ಘಟ್ಟಿಯಾದಂತೆ,
ಮತ್ತೆ ಅಪ್ಪುವ ಬೆರಸಿ ತನ್ನಂಗ ತಪ್ಪದಂತೆ,
ಸಕಲ ಶಾಕಂಗಳಲ್ಲಿ ತನ್ನಯ ಇರವ ತೋರಿ ಕುರುಹಿಂಗೆ ಬಾರದಂತೆ
ವಸ್ತು ಅಂಗದಲ್ಲಿ ತನ್ಮಯವಾಗಿ ವೇಧಿಸಿ ಉಭಯ ನಾಮವಳಿದು,
ಸದಾಶಿವಮೂರ್ತಿಲಿಂಗದಲ್ಲಿ ಕೂಟಸ್ಥವಾಗಿರಬೇಕು. ॥೧೬೫॥

೫೦೯
ಬೇರಿನ ಬಣ್ಣ ಇಂದುವಿನ ಕಳೆಕೊಂಡಂತಿರಬೇಕು.
ಶುಭ್ರದ ಪಟ ಷಡುವರ್ಣಕ್ಕೆ ಬಂದಂತೆ,
ಘಟದ ಸಂಗದಿಂದ ಸುವಸ್ತು ಇಂದ್ರಿಯಂಗಳಿಗೆ ಮುಖವಾಗಿ,
ಅರ್ಪಿಸಿಕೊಂಬವ ನೀನಾದೆಯಲ್ಲಾ
ಸದಾಶಿವಮೂರ್ತಿಲಿಂಗವೆ. ॥೧೬೬॥

೫೧೦
ಒಂದು ಶರೀರ ನಾನಾ ಲಾಗ ಕಲಿತು,
ಆಡುವ ಭೇದ ಬೇರಾದಂತೆ,
ಆಡುವವ ತಾನೊಬ್ಬನೆಯಾಗಿ, ಆದುದ ಕಂಡು

ಅನ್ಯರ ಕೇಳಲೇಕೆ? ಇದಿರಿಗೆ ಹೇಳಲೇಕೆ?
ವಸ್ತುವಾಟ ಒಂದು, ವರ್ತನ ಬೇರೆ,
ಉಭಯವೂ ತಾನೆ ಸದಾಶಿವಮೂರ್ತಿಲಿಂಗದ ಅಂಗ. ॥೧೬೭॥

೫೧೧
ಮದ್ದ ಕೂಡಿ ತುಂಬಿದ ನಾಳಿಯಲ್ಲಿದ್ದ ಕಲ್ಲು
ಆ ನಾಳಿಯ ಹೊದ್ದದೆ ಹೋದ ಪರಿಯ ನೋಡಾ.
ಕಾಯ ಜೀವದ ಭೇದ,
ಕಾಯವ ಬಿಟ್ಟು ಜೀವ ಎಯ್ದುವಾಗ ಆತ್ಮನ ಹೊರಡಿಸಿದ ಒಡೆಯನನರಿ
ಸದಾಶಿವಮೂರ್ತಿಲಿಂಗವನೊಡಗೂಡು. ॥೧೬೮॥

೫೧೨
ಕಾಯವಿದ್ದಲ್ಲಿಯೇ ಸಕಲಕರ್ಮಂಗಳ ಮಾಡು,
ಜೀವವಿದ್ದಲ್ಲಿಯೇ ಅಳಿವ ಉಳಿವನರಿ.
ಉಭಯವು ಕೂಡಿದಲ್ಲಿ ಹಿಡಿವುದ ಹಿಡಿದು, ಬಿಡುವುದ ಬಿಟ್ಟು,
ಸದಮಲಾಂಗನಾಗಿ ಒಡಗೂಡು,
ಸದಾಶಿವಮೂರ್ತಿಲಿಂಗವನರಿ. ॥೧೬೯॥

೫೧೩
ಅಸಿಯ ಮೊನೆಯು ಮುರಿದಡೆ ಮಸೆದಡೆ ಮೊನೆಯಾಗದೆ ಅಯ್ಯಾ?
ಅಸು ಮರೆದಡೆ ಆತ್ಮನನರಿದಡೆ ಕೇಡುಂಟೆ ಅಯ್ಯಾ?
ಮರೆವುದು ಅರಿವುದು ಎರಡುಳ್ಳನ್ನಕ್ಕ,
ಮರೆಯದೆ ಪೂಜಿಸು ಸದಾಶಿವಮೂರ್ತಿಲಿಂಗವ. ॥೧೭೦॥

೫೧೪
ಅರಿವಾಗ ಆ ತನುವಿನಲ್ಲಿದ್ದೆ ಅರಿಯಿತ್ತು,
ಮರೆವಾಗ ಆ ತನುವಿನಲ್ಲಿದ್ದೆ ಮರೆಯಿತ್ತು.
ಅರಿವು ಮರವೆ ಎರಡಾಯಿತ್ತು,
ಉಭಯವ ತಾಳಿದ ಘಟವೊಂದಾಯಿತ್ತು, ಇಂತೀ ಭೇದ.
ವಿಷಬೇರಿನಂತೆ ಸಂಚಾರಕ್ಕೆ ಒಳಗಾದುದು ವಿಷಮಯವಾಯಿತ್ತು.
ಗೌಪ್ಯಕೊಳಗಾದುದು ಅಮೃತಮಯವಾಯಿತ್ತು .
ಇಂತೀ ಸಂಚಾರವುಳ್ಳನ್ನಕ್ಕ ಸಂಚಿತ ಕರ್ಮ,
ಸಂಚಾರ ನಿಲೆ ಆತ್ಮ ನಿರ್ಮುಕ್ತವಾದಲ್ಲಿಯೆ
ಸದಾಶಿವಮೂರ್ತಿಲಿಂಗವು ತಾನೆ. ॥೧೭೧॥

೫೧೫

ಕರೆವ ಪಶುವಿಂಗೆ ತೃಣ ದವಸ ಎಯ್ದಾದಲ್ಲಿ ಹಾಲ ವೆಗ್ಗಳವ ಕಾಬಂತೆ,
ಕ್ರೀಶುದ್ಧತೆಯಾಗಿ ಮನ ವಚನ ಕಾಯ ತ್ರಿಕರಣ ಶುದ್ಧವಾಗಿ ಇದ್ದಲ್ಲಿಯೆ
ವಸ್ತುವಿನ ಹೆಚ್ಚುಗೆಯ ಒದಗು, ಅನಿತ್ಯವ ನೀಗಿ ನಿಂದ ಬೆಳಗು,
ಸದಾಶಿವಮೂರ್ತಿಲಿಂಗದ ಸಂಗದ ಸಂತೋಷದ ಇರವು ॥೧೭೨॥

೫೧೬

ಗಂಡನಿಲ್ಲದ ಸತಿ ಯೋನಿಯಿಲ್ಲದೆ ಮಕ್ಕಳ ಹಡೆದು,
ನಾಲಗೆಯಲ್ಲದ ಬಾಯಲ್ಲಿ ಜೋಗುಳವಾಡುತ್ತೈದಾಳೆ.
ತೊಟ್ಟಿಲಿಲ್ಲದೆ ನೇಣು ಹೊರತೆಯಾಗಿ ಗಂಟಕಟ್ಟಿ,
[ಮೊಗ]ವಿಲ್ಲದೆ ಶಿಶು ಅಳುತ್ತದೆ. ಅದಕ್ಕೆ ಮೊಲೆಯಿಲ್ಲದ ಹಾಲು ಬೇಕು,
ಸದಾಶಿವಮೂರ್ತಿಲಿಂಗವನರಿತಲ್ಲದಾಗದು. ॥೧೭೩॥

೫೧೭

ಕಣ್ಣಿಲ್ಲದ ಕುರುಡ ಕನ್ನಡಿಯ ನೋಡಿ ಮೂರು ಕಣ್ಣ ಕಂಡ.
ಒಂದು ಧರೆಯ ಕಣ್ಣು, ಒಂದು ಸಿರಿಯ ಕಣ್ಣು,
ಒಂದು ಉರಿಯ ಕಣ್ಣು.
ಉರಿ ಸಿರಿಯ ನುಂಗಿ, ಸಿರಿ ಧರೆಯ ನುಂಗಿ,
ಧರೆ ಅರುಹಿರಿಯರ ನುಂಗಿತ್ತು.
ಆ ಗುಣವನರಿಯಬೇಕು,
ಸದಾಶಿವಮೂರ್ತಿಲಿಂಗವ ಭೇದಿಸಬೇಕು. ॥೧೭೪॥

೫೧೮

ಕಾದ ಕಬ್ಬುನವ ಕಾಯದ ಕಬ್ಬುನದಲ್ಲಿ ಹಿಡಿದು,
ಅಡಿಯಲ್ಲಿಯೂ ತಾನಾಗಿ, ಮೇಲೆತ್ತಿ ಹೊಡೆವುದೂ ತಾನಾಗಿ,
ಹಿಡಿವುದೂ ತಾನಾಗಿ, ಮೂರರ ಭೇದದಿಂದ ತನ್ನಂಗಕ್ಕೆ ತಾನಂಜಿ,
ಅವರ ಚಿತ್ತದ ಬಿನ್ನಾಣಕ್ಕೆ ಬಂದ ತೆರ, ಲಿಂಗಮಯ.
ಸರ್ವಾಂಗದಲ್ಲಿ ನಿಂದು, ಚಿತ್ತದ ಗೊತ್ತಿಗೆ ಸಿಕ್ಕಿ,
ಅವರಿಚ್ಛೆಯಲ್ಲಿ ತನ್ಮಯನಾದೆಯಲ್ಲಾ,
ಸದಾಶಿವಮೂರ್ತಿಲಿಂಗವೆ ತಾನು ತಾನಾದ ಕಾರಣ. ॥೧೭೫॥

೫೧೯

ಸಿದ್ಧರಸ ಲೇಸೆಂದಡೆ ತಾನಿದ್ದ ಕುಡಿಕೆ ಹೇಮವಾದುದಿಲ್ಲ.
ಲೋಹಕ್ಕಲ್ಲದೆ ವೇಧಿಸುವುದಿಲ್ಲ.

ವಸ್ತು ಸರ್ವಮಯದಲ್ಲಿ ಸಂಪೂರ್ಣವಾಗಿದ್ದಡೇನು,
ತನ್ನ ಅರಿವವರ ಹೃದಯದಲ್ಲಿಯಲ್ಲದೆ ಇರ,
ಸದಾಶಿವಮೂರ್ತಿಲಿಂಗದಿರವು. ॥೧೭೬॥

೫೨೦
ರಸದ ಬಾವಿಯ ಚೆಲ್ಲಿ, ಅಸಿಯ ಮಡುವ ಕಲಕಿ,
ಕತ್ತರಿವಾಣಿಯ ಗೊತ್ತ ಕೊಯಿದು,
ಕರೋತಿಯ ಕಣ್ಣ ಕುತ್ತಿ, ಅಶ್ವನ ಚಿತ್ತವ ಕಿತ್ತು,
ನಿಶ್ಚಯದಲ್ಲಿ ಆಡುವವ ತಾನೆ,
ನಿಜವಸ್ತು ಸದಾಶಿವಮೂರ್ತಿಲಿಂಗ. ॥೧೭೭॥

೫೨೧
ಕಾಳಿಯ ಕಡೆಗಣ್ಣ ಕಿತ್ತು, ಏಡಿಯ ಸರ್ವಾಂಗವ ಸೀಳಿ,
ಅಚ್ಚ ಬೆಳ್ಳಿಗೆಯ ಹಾಲ ನಿಶ್ಚಯದಲ್ಲಿ ತೆಗೆದು,
ತೃಪ್ತಿಯಾಗಿ ಕೊಳ್ಳಬಲ್ಲಡೆ, ಆತನೆ ಸದಾಶಿವಮೂರ್ತಿಲಿಂಗವು. ॥೧೭೮॥

೫೨೨
ಅಂಗವರಿಯದೆ ಲಿಂಗವಿದ್ದಲ್ಲಿಯೆ ಸಂಗವ ಮಾಡಿ,
ಹಿಂದು ಮುಂದಳ ಸಂದೇಹವ ಮರೆಯಬೇಕು.
ಅಂಗವರತಲ್ಲಿಯೆ ಲಿಂಗವ ಮರೆಯಿತ್ತು.
ಸೆಲೆಯಿಲ್ಲದ ಬಾವಿಯ ತೋಡಿ, ಸಂದೇಹಕ್ಕೊಳಗಾಹನಂತಾಗಬೇಡ.
ಉಭಯವು ರೂಪಾಗಿದ್ದಲ್ಲಿ ಅರಿ ಸದಾಶಿವಮೂರ್ತಿಲಿಂಗವ. ॥೧೭೯॥

೫೨೩
ಮೂವರ ಹಂಗಿಂದ ಬಂದುದು ಲಿಂಗವಲ್ಲಾ ಎಂದು,
ಸರ್ವಭವದಲ್ಲಿ ಬಂದ ಆತ್ಮ ವಸ್ತುವಲ್ಲಾ ಎಂದು,
ಮತ್ತಿನ್ನೇನನರಿವಿರಣ್ಣಾ?
ಭಾವ ಬಯಲೆಂದಲ್ಲಿ, ಕುರುಹು ಶಿಲೆಯೆಂದಲ್ಲಿ,
ಸಿಕ್ಕಿತ್ತು ಮನ ಸಂಕಲ್ಪದಲ್ಲಿ,
ಸದಾಶಿವಮೂರ್ತಿಲಿಂಗವನರಿವ ಬಟ್ಟೆಯ ಕಾಣೆ. ॥೧೮೦॥

೫೨೪
ಶೈವಕ್ಕೆ ಕೈಲಾಸ, ವೈಷ್ಣವಕ್ಕೆ ವೈಕುಂಠ,
ಬೌದ್ಧಂಗೆ ಮೋಕ್ಷಗಾಮಿನಿಯೆಂಬ ಗೊತ್ತುಗಳು ಬೇರಾದಲ್ಲಿ,

ಪೃಥ್ವಿ ಅಪ್ಪು ತೇಜ ವಾಯು ಆಕಾಶ ಬೇರಾದುದಿಲ್ಲ.
ಸುವರ್ಣ ಒಂದು ಆಭರಣ ಹಲವಾದಂತೆ.
ಪರಬ್ರಹ್ಮವಸ್ತುವೊಂದೆಂಬುದಕ್ಕೆ ಇದೆ ದೃಷ್ಟ.
ಮತ್ತಿದಿರು ದೈವವುಂಟೆಂದು ಗದಿಯಬೇಡ.
ನೆರೆ ನಂಬಿ, ಸದಾಶಿವಮೂರ್ತಿಲಿಂಗವಲ್ಲದಿಲ್ಲಾಯೆಂದೆ. ॥೧೮೧॥

೫೨೫
ಶೈವವಾದ, ತತ್ತ್ವವಾದ, ಮಾಯಾವಾದ
ಇಂತೀ ವಾದಂಗಳಲ್ಲಿ ಹೋರುವಾಗ ವೇದ ಹೇಳುತ್ತದೆ :
ಓಂ ಎಂಬಲ್ಲಿ ಎರಡಳಿದು ಒಂದೇ ಉಳಿಯಿತ್ತು.
ಕೆಲವಸ್ತು ದೇವಂಗೆ ಸರಿಯೆಂದಡೆ
ಅದು ನಿಮ್ಮ ಒಲುಮೆಯ ಒಲವರವೈಸಲ್ಲದೆ ಬಲುಹಿನ ಮಾತು ಬೇಡ.
ಕಾಲಾಂತಕನ ಕರದಲ್ಲಿ ಕಪಾಲವದೆ, ಪಾದಯುಗಳದಲ್ಲಿ ಅಕ್ಷಿಯದೆ.
ಮಿಕ್ಕಾದ ಅರಿಕುಲ ದೈವಂಗಳ ಶಿರ ಮಾಲೆಯಲ್ಲಿ ಸಿಕ್ಕಿ ಅದೆ.
ಮತ್ತಿನ್ನು ಒರಲಲೇಕೆ?
ಸದಾಶಿವಮೂರ್ತಿಲಿಂಗವಲ್ಲದಿಲ್ಲ ಎಂದೆ. ॥೧೮೨॥

೫೨೬
ಬ್ರಹ್ಮ ಸೋರೆಯಾಗಿ, ವಿಷ್ಣು ದಂಡವಾಗಿ,
ಸಕಲದೇವತಾಕುಲ ದಾರವಾಗಿ, ಶ್ರುತಿನಾದ ವಸ್ತುವಾಗಿ ತ್ಥೋರುತ್ತಿರೆ,
ತನ್ನ ಲೀಲೆಯಿಂದ, ಜಗಕ್ರೀಡಾಭಾವದಿಂದ ಒಂದಕ್ಕೊಂದು ಸೇರಿಸಿ,
ಉತ್ತಮ ಕನಿಷ್ಠ ಮಧ್ಯಮವೆಂಬ ತ್ರಿವಿಧಮೂರ್ತಿಯಾಗಿ,
ಕಲ್ಪಿಸಿದ ಜಗ ಹಾಹೆಯಿಂದ ಎಂಬುದನರಿಯದೆ,
ಮಲಕ್ಕೂ ನಿರ್ಮಲಕ್ಕೂ ಸರಿಯೆನಬಹುದೆ?
ವಾದಕ್ಕೆ ಈ ತೆರ, ಅರಿದಡೆ ಆ ತೆರ.
ಸದಾಶಿವಮೂರ್ತಿಲಿಂಗವು ಅತ್ಯತಿಷ್ಠದ್ದಶಾಂಗುಲವು. ॥೧೮೩॥

೫೨೭
ಆದಿಯೆಂಬ ಅಂತರಾದಿಯಲ್ಲಿ ಅನಾದಿಯ ವಸ್ತುವನರಿತು,
ಆದಿಯ ಬ್ರಹ್ಮಂಗೆ ಕೊಟ್ಟು, ಅಂತರಾದಿಯ ವಿಷ್ಣುವಿಂಗೆ ಕೊಟ್ಟು,
ಅನಾದಿಯ ರುದ್ರನ ಗೊತ್ತ ಮಾಡಿ,
ಗೊತ್ತನರಿದವರಲ್ಲಿ ಇಚ್ಛೆಗೆ ತಪ್ಪದೆ ಬೆಚ್ಚಂತಿರಬೇಕು.
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೧೮೪॥

೫೨೮

ಬ್ರಹ್ಮಂಗೆ ಸರಸ್ವತಿಯಾಗಿ ಕಾಡಿತ್ತು ಮಾಯೆ.
ವಿಷ್ಣುವಿಂಗೆ ಲಕ್ಷ್ಮಿಯಾಗಿ ಕಾಡಿತ್ತು ಮಾಯೆ.
ರುದ್ರಂಗೆ ಉಮಾದೇವಿಯಾಗಿ ಕಾಡಿತ್ತು ಮಾಯೆ.
ಎನಗೆ ನಿಮ್ಮನರಿವ ಬಯಕೆ ಭವಮಾಯೆಯಾಗಿ ಕಾಡುತ್ತದೆ.
ನೀನಾನುಳ್ಳನ್ನಕ್ಕ ಉಭಯವು ಮಾಯೆಯಾಗಿದೆ,
ಸದಾಶಿವಮೂರ್ತಿಲಿಂಗವು ನಾ ನೀನೆಂಬುದೆ ಮಾಯೆ. ॥೧೮೫॥

೫೨೯

ಐದು ಬಹಲ್ಲಿ ಒಂದಾಗಿ ಬಂದ ಮಾಯೆಯ,
ಮೂರು ಬಹಾಗ ಮುಂದೆ ಬಂದ ಮಾಯೆಯ,
ಆರೂ ಹಿಂಗಬಾರದು.
ಒಂದು ಎಂಬನ್ನಕ್ಕ ಸಂದೇಹದ ಮಾಯೆ ಕೊಂದು ಕೂಗುತ್ತಿದೆ.
ಇನ್ನೆಂದಿಂಗೆ ನೀನಳಿವೆ? ಇನ್ನೆಂದಿಂಗೆ ನಾನುಳಿವೆ?
ಎಂಬ ಸಂದೇಹ ಸದಾಶಿವಮೂರ್ತಿಲಿಂಗದಲ್ಲಿಯೆ ಅಳಿಯಿತ್ತು. ॥೧೮೬॥

೫೩೦

ಸಕಲವೆಂಬನ್ನಕ್ಕ ನಿಃಕಲವುಂಟು, ನಿಃಕಲವೆಂಬುದು ನಾಮರೂಪು.
ಅದೆಂತೆಂದಡೆ:
ತ್ರಿವಿಧವ ಕೂಡಿ ಬೆಳಗುವ ಜ್ಯೋತಿಯ ಒಡಲೆ ಘಟವಾಗಿ ಬೆಳಗೆ,
ಪ್ರಾಣವಾಗಿ ತೋರುವನ್ನಕ್ಕ ಮಾಯೆ ಸಂಗಲೇಪವಾಗಿಹುದು.
ಅದರ ಬೆಡಗಡಗೆ ಸದಾಶಿವಮೂರ್ತಿಲಿಂಗವು ನಿರ್ಮಾಯ. ॥೧೮೭॥

೫೩೧

ನೀತಿ ಲಿಂಗವಾಗಿ, ಸದ್ಗುಣ ಕಳೆಯಾಗಿ,
ಆಚಾರವಿಡಿದು ತೋರುವ ಬೆಳಗು ವಸ್ತುವಾಗಿ,
ಸ್ಫಟಿಕದ ಘಟವ ಹೊಳಚಿದಂತೆ,
ಒಳಹೊರಗೆನ್ನದೆ ನಿರ್ಮಲ ತೋರುವಂತೆ,
ಅದರಿರವು ಸುಚಿತ್ತನಾಗಿ ನಿಂದುದು ನಿರ್ಮಾಯ.
ಸದಾಶಿವಮೂರ್ತಿಲಿಂಗವು ನಿರಂಜನಮಯಸ್ವರೂಪ. ॥೧೮೮॥

೫೩೨

ವಾರಿಯ ಸಾರದ ಶೈತ್ಯದ ಇರವು.
ವಹ್ನಿಯ ಜ್ವಾಲೆಯ [ಆ]ಟೋಪದ ಅಗ್ರದ

ಲಯಭೇದದ ಧೂಮದಂತೆ.
ಅರಿಕೆ ಒಡಲಾದ ಅಂಗ ಅರಿದು ಭೇದಿಸುವನ ಚಿತ್ತದ ಯೋಗ.
ಇಂತೀ ಉಭಯವನರಿತಲ್ಲಿ ಇಷ್ಟ ಪ್ರಾಣ ಸಂಬಂಧ,
ಸದಾಶಿವಮೂರ್ತಿಲಿಂಗ ಉಭಯವು ತಾನಾದ ಕಾರಣ. ॥೧೮೯॥

೫೩೩

ಅಪ್ಪು ಚಿಪ್ಪಿನಲ್ಲಿ ನಿಂದು [ಚಿಪ್ಪ]ವ ಬೆರಸದಂತೆ,
ಮೃತ್ತಿಕೆ ತೇಜದಲ್ಲಿ ಬೆಂದು ಪೃಥ್ವಿಯ ಕೂಡದಂತೆ,
ಹಾಗಿರಬೇಕು ಭಕ್ತವಿರಕ್ತನ ಭೇದ, ಇಷ್ಟ ಪ್ರಾಣದಿರವು.
ಇದು ನಿಶ್ಚಯ ಲಿಂಗಾಂಗ.
ಕಾಯ ಭಕ್ತ, ಪ್ರಾಣ ಜಂಗಮವಾದ ಸ್ವಾನುಭಾವಸಿದ್ಧಿ.
ಈ ತೆರ ತಾನೆ ಸದಾಶಿವಮೂರ್ತಿಲಿಂಗವು. ॥೧೯೦॥

೫೩೪

ಮಹದಾಕಾಶದ ಮನೆಯಲ್ಲಿ ಪಂಚಕಾಲಿನ ನೆಲಹು ಕಟ್ಟಿರಲಾಗಿ,
ಅದಕ್ಕೆ, ಜಲತ್ಕಾರನೆಂಬ ಗಡಿಗೆ ಇದ್ದಿತ್ತು.
ಅದರೊಳಗೆ ಮಧುರ ಮಾಂದಿರ ವಿಮಲ ಜಲತುಂಬಿ.
ಒಂದಕ್ಕೊಂದು ಹೊದ್ದದೆ ಕುಂಭವೊಂದರಲ್ಲಿ ನಿಂದ ಭೇದವ ನೋಡಾ.
ಆ ಗಡಿಗೆಯ ತೆಗೆವುದಕ್ಕೆ ಮಹದಾಕಾಶವನೇರುವುದಕ್ಕೆ ನೆಲೆಯಿಲ್ಲ.
ನೆಲಹಿಂಗೆ ಮೊದಲಿಲ್ಲ, ಕುಂಭಕ್ಕಂಗವಿಲ್ಲ,
ಒಳಗಳ ಭೇದವ ವಿವರಿಸಬಾರದು.
ಇಂತೀ ಘಟಮಠ ಆಧಾರದಲ್ಲಿ ಪರಿಪೂರ್ಣನಾದೆಯಲ್ಲಾ,
ಸದಾಶಿವಮೂರ್ತಿಲಿಂಗವೆ ಅವಿರಳನಾಗಿ. ॥೧೯೧॥

೫೩೫

ಅಂಧಕಾರವೆಂಬ ಮನೆಯ ಬಾಗಿಲಲ್ಲಿ ಆರಂಗದ ಕರಡಿ ಕಟ್ಟಿ,
ಮೂರಂಗದ ಕೋಡಗ ಏಡಿಸಿ ಕಾಡುತ್ತಿದೆ.
ಮೀರಿದೆನೆಂಬವರೆಲ್ಲರು ಕರಡಿಯ ಗಿಲಗಿನಲ್ಲಿ ಸತ್ತು,
ಕೋಡಗದ ಚೇಷ್ಟೆಯಲ್ಲಿ ಸಿಕ್ಕಿ,
ಬೇಡ ನಿಮಗೆ ಆರೂಢದ ಮಾತು.
ಇಂತಿವ ಮೀರಿ ಅರಿದವಂಗಲ್ಲದೆ
ಸದಾಶಿವಮೂರ್ತಿಲಿಂಗವಿಲ್ಲ. ॥೧೯೨॥

೫೩೬

ಹರಿವ ಹಾವಿಂಗೆ ಕಾಲ ಕೊಟ್ಟು, ಉರಿವ ಕಿಚ್ಚಿಗೆ ಕಯ್ಯನಿಕ್ಕಿ,
ಅರಿವ ಆಯುಧಕ್ಕೆ ಕೊರಳ ಕೊಟ್ಟು, ಮತ್ತೆಂತೊ ಅರುಹಿರಿಯರಾದಿರಿ?
ಮುಂದಕ್ಕಾತನನರಿಯಬಲ್ಲಡೆ, ಹರಿವ ಚಿತ್ತವ ನಿಲಿಸಿ,
ಕುದಿವ ಆಸೆಯ ಕೆಡಿಸಿ,
ಸರ್ವವ್ಯಾಪಾರವೆಂಬ ಗೊತ್ತಿಗೆ ಚಿತ್ತವನಿಕ್ಕದೆ ನಿಶ್ಚಯನಾಗಿ ನಿಂದುದು
ಆತನಿರವೆ ಸದಾಶಿವಮೂರ್ತಿಲಿಂಗವು ತಾನೆ. ॥೧೯೩॥

೫೩೭

ಹುಲಿ ಹುತ್ತವ ಹೊಕ್ಕು ಹಾವಾದ ಭೇದವನಾರು ಬಲ್ಲರು?
ಹಾವು ಹುತ್ತವ ಬಿಟ್ಟು ಹದ್ದಾದ ಭೇದವನಾರು ಬಲ್ಲರು?
ಹುಲಿ ಹಾವು ಹದ್ದು ಕೂಡಿ ಕುಲವ ಹೊರಗಿಟ್ಟು
ಒಳಗಾದ ಭೇದವನಾರು ಬಲ್ಲರು?
ಇಂತೀ ಸ್ಥೂಲ ಸೂಕ್ಷ್ಮ ಕಾರಣತ್ರಯ ಕೂಡಿ ತತ್ವದಲ್ಲಿ ನಿಂದು,
ಬಚ್ಚಬಯಲಾಯಿತ್ತು, ಸದಾಶಿವಮೂರ್ತಿಲಿಂಗದಲ್ಲಿ. ॥೧೯೪॥

೫೩೮

ಹಾವಿನ ಹುತ್ತದಲ್ಲಿ ಹದ್ದು ತತ್ತಿಯನಿಕ್ಕಿ,
ಹಾವು ಹಸಿದು ತತ್ತಿಯ ಮುಟ್ಟದು ನೋಡಾ.
ಹಾವಿನ ವಿವರ, ಹದ್ದಿನ ಭೇದ, ತತ್ತಿಯ ಗುಣ ಆವುದೆಂದರಿತಲ್ಲಿ,
ಜೀವ ಪರಮ ಸ್ವಯಜ್ಞಾನ ಭೇದವನರಿಯಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೧೯೫॥

೫೩೯

ಹುಲ್ಲು ಕೆಂಡವ ಮುಟ್ಟಿ ಹೊತ್ತದ ಪರಿಯ ನೋಡಾ,
ಹಸಿದ ಸರ್ಪನ ಹೆಡೆಯ ನೆಳಲಲ್ಲಿ ಮಂಡೂಕ ನಿಂದ ತೆರನ ನೋಡಾ.
ಜೀವ ಪರಮನಲ್ಲಿ ಬಂದುನಿಂದು ಒಂದಾಗದ ಸಂದೇಹವ ನೋಡಾ.
ಇಂತೀ ಸಂದನರಿದಲ್ಲದೆ ಅಂಗ–ಲಿಂಗ–ಪ್ರಾಣ–
ಪರಮವೊಂದಾಗಲಿಲ್ಲ, ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೧೯೬॥

೫೪೦

ಮೂಷಕ ಮಾರ್ಜಾಲ ಕೂಡಿ ಭೇಕನ ಕಂಡು ನೀತಿಯ ಕೇಳಿ,
ಮೂಷಕನ ನೆರೆದಲ್ಲಿ ಅಳಿಯಿತ್ತು, ಮಾರ್ಜಾಲ ಮನೆಗೆ ಹೋಯಿತ್ತು.
ನಾನೀನೆಂಬುದು ನಿಂದಿತ್ತು, ಸದಾಶಿವಮೂರ್ತಿಲಿಂಗವರಿತಲ್ಲಿ. ॥೧೯೭॥

೫೪೧

ದತ್ತೂರದ ಬಿತ್ತಿನಲ್ಲಿ ಕಲ್ಪತರು ಹುಟ್ಟಿ,
ಕಲ್ಪತರುವಿನ ಅಗ್ರದಲ್ಲಿ ಇಟ್ಟೆಯ ಹಣ್ಣಾಯಿತ್ತು,
ಇಟ್ಟೆಯ ಹಣ್ಣು ತೊಟ್ಟುಬಿಟ್ಟು ಬಿದ್ದಲ್ಲಿ ಅಮೃತಮಯವಾಯಿತ್ತು,
ಸದಾಶಿವಮೂರ್ತಿಲಿಂಗವನರಿತಲ್ಲಿ. ॥೧೯೮॥

೫೪೨

ಹೊಲದೊಳಗಳ ಹುಲ್ಲೆ, ಗವಿಯೊಳಗಳ ಹುಲಿ,
ಕೊಂಬಿನ ಮೇಲಣ ಕೋಡಗ, ಅಂಬರದಲಾಡುವ ಹಾವು,
ನಾಲ್ಕರ ಅತಿಮಥನ ಬಿಟ್ಟು ಒಂದೆ ಗೂಡಿನಲ್ಲಿ ಅಡಗಿದವು.
ಆ ಚತುಷ್ಟಯದ ಅಂಗದ ಭೇದವನರಿತಲ್ಲಿ
ಸದಾಶಿವಮೂರ್ತಿಲಿಂಗವು ತಾನೆ. ॥೧೯೯॥

೫೪೩.

ಹುತ್ತದೊಳಗಳ ಉಡು, ಹೊಳೆಯೊಳಗಳ ಮೊಸಳೆಯ ನುಂಗಿತ್ತು.
ನುಂಗಿ ಹೋಹಾಗ ಅಂಗನೆಯೆಂಬ ಹೆಂಗೂಸು ಆ ಉಡುವ ಕಂಡು,
ತಾ ಹೊತ್ತಿದ್ದ ಕೊಡನ ಕೂಡಿ ಮಂಡೆಯ ಮೇಲೆ ಇರಿಸಲಾಗಿ,
ತಾ ಸತ್ತು, ಕೊಡನೊಡೆದು, ಉಡುವಡಗಿತ್ತು.
ಹಿಡಿಯಲಿಲ್ಲ, ಬಿಡಲಿಲ್ಲ, ಬೇರೊಂದಡಿಯಿಡಲಿಲ್ಲ,
ಸದಾಶಿವಮೂರ್ತಿಲಿಂಗವನರಿತಲ್ಲಿ. ॥೨೦೦॥

೫೪೪

ಜೀವಜ್ಞಾನ ಭಾವಜ್ಞಾನ ಯುಕ್ತಿಜ್ಞಾನ ಚಿತ್ತಜ್ಞಾನ ಶಕ್ತಿಜ್ಞಾನ
ಪರಾಶಕ್ತಿಜ್ಞಾನ ಪರಮಜ್ಞಾನ ಪ್ರಕಾಶಜ್ಞಾನ ಪ್ರಜ್ವಲಿತಜ್ಞಾನ
ಪ್ರಭಾವಜ್ಞಾನ ತೇಜೋಮಯಜ್ಞಾನ ಪರಂಜ್ಯೋತಿಜ್ಞಾನ ದಿವ್ಯಜ್ಞಾನ
ಸರ್ವಮಯ ಸಂಪೂರ್ಣಂಗಳಲ್ಲಿ ತೋರುತ್ತಿಹ ತೋರಿಕೆ,
ಆಕಾಶಮಂಡಲದಲ್ಲಿ ತೋರುವ [ಅ]ರುಣನ ಕಿರಣ,
ಸರ್ವಜೀವಜ್ಞಾನ ಪರಿಪೂರ್ಣ ದೃಷ್ಟಿಯಾಗಿ ಕಾಬ ತೆರದಂತೆ,
ಎನ್ನ ಪಿಂಡಮಂಡಲದಲ್ಲಿ ದಿವ್ಯತೇಜೋವರುಣ ಕಿರಣಮಯವಾಗಿ,
ಒಂದರಲ್ಲಿ ನಿಂದು ಕಾಬುದು ಹಲವಾದಂತೆ,
ಎನ್ನ ಮನದ ಮಂದಿರದಲ್ಲಿ ನಿಂದವ ನೀನೊಬ್ಬ ವಿಶ್ವರೂಪಾದೆಯಲ್ಲಾ!
ಭೇದಕ್ಕೆ ಅಭೇದ್ಯನಾದೆಯಲ್ಲಾ! ನಿನ್ನನೇನೆಂಬುದಕ್ಕೆಡೆದೆರಪಿಲ್ಲ.
ಭಾಗೀರಥಿಯಂತೆ ಆರು ನಿಂದಡೂ ಪ್ರಮಾಳಾದೆಯಲ್ಲಾ!
ಎನ್ನ ಮನಕ್ಕೆ ಕಟ್ಟಾಗಿ ನಿಂದೆಯಲ್ಲಾ ಸದಾಶಿವಮೂರ್ತಿಲಿಂಗವೇ !॥೨೦೧॥

೫೪೫

ಉತ್ಪತ್ಯಕ್ಕೆ ಬ್ರಹ್ಮಂಗೆ ಸೃಷ್ಟಿಯ ಕೊಟ್ಟು,
ಸ್ಥಿತಿಗೆ ವಿಷ್ಣುವಿಂಗೆ ಅವತಾರಲಕ್ಷ್ಮಿಯ ಕೊಟ್ಟು,
ಲಯಕ್ಕೆ ರುದ್ರಂಗೆ ಉರಿಗಣ್ಣು, ಹತಕ್ಕೆ ಕರದಲ್ಲಿ ಖಂಡೆಯವ ಕೊಟ್ಟು,
ತ್ರೈಮೂರ್ತಿಗೆ ನಿನ್ನ ವರ ಶಕ್ತಿಯನಿತ್ತು,
ನೀ ತ್ರಿವಿಧ ನಾಸ್ತಿಯಾದೆಯಲ್ಲಾ.
ಅನಾದಿಶಕ್ತಿಯ ಭಾವವನೊಡೆದು
ಸದಾಶಿವಮೂರ್ತಿಲಿಂಗ ನೀನಾದೆಯಲ್ಲಾ. ॥೨೦೨॥

೫೪೬

ವೇದ ಪ್ರಣವದ ಮೂಲ, ಶಾಸ್ತ್ರ ಪ್ರಣವದ ಶಾಖೆ,
ಪುರಾಣ ಪ್ರಣವದ ಪರ್ಣ,
ಪರಾಶಕ್ತಿಭೇದ ಪ್ರಣವದ ಒಡಲಾಗಿ ಶಕ್ತಿಸಮೇತವಾದೆಯಲ್ಲಾ.
ಎನ್ನಂಗಕ್ಕೆ ಕುರುಹಾಗಿ, ಮನಕ್ಕೆ ಅರಿವಾಗಿ, ಬೆಳಗಿಂಗೆ ಕಳೆಯಾಗಿ,
ನಿಂದು ತೋರುತ್ತಿದ್ದವ ನೀನೆ,
ಸದಾಶಿವಮೂರ್ತಿಲಿಂಗವು ನಾಮರೂಪಾಗಿ. ॥೨೦೩॥

೫೪೭

ಅಪ್ಪು ಮಣ್ಣು ಕೂಡಿ ಘಟವಾದಂತೆ,
ಚಿತ್ತು ಶಕ್ತಿ ಕೂಡಿ ಎನಗೆ ಇಷ್ಟವಾಗಿ ಬಂದು ನಿಂದೆಯಲ್ಲಾ!
ಚಿತ್ತ ನಿಲುವುದಕ್ಕೆ ಗೊತ್ತಾಗಿ,
ಗೊತ್ತಿನ ಮರೆಯಲ್ಲಿ ನಾ ಹೊತ್ತ ಸಕಲೇಂದ್ರಿಯವನೀಸುವುದಕ್ಕೆ ತೆಪ್ಪವಾಗಿ
ಭವಸಾಗರವ ದಾಂಟಿಸಿದೆಯಲ್ಲಾ!
ಭಕ್ತಿಪ್ರಿಯ ಸತ್ಯಕರಂಡಮೂರ್ತಿ
ಸದಾಶಿವಮೂರ್ತಿಲಿಂಗವೆ ಎನ್ನಂಗದಲ್ಲಿ ಹಿಂಗದಿರು. ॥೨೦೪॥

೫೪೮

ಅನಲ ನಂದಿದ್ದಲ್ಲಿ ವಾಯು ಸಂಗವಲ್ಲದೆ,
ದೀಪದ ಅಂಗಕ್ಕೆ ಬಂದು ನಿಂದಲ್ಲಿ ವಾಯುಸಂಗ ನಾಸ್ತಿಯಾಗಿರಬೇಕು.
ಹಿಡಿವಲ್ಲಿ ಆ ಭೇದ, ಒಡಗೂಡುವಲ್ಲಿ ಈ ಭೇದ.
ಇಂತೀ ತೊಡಿಗೆಯನರಿಯಬೇಕು ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೨೦೫॥

೫೪೯
ಆದಿ ಮಧ್ಯ ಅವಸಾನವರಿಯಬೇಕೆಂಬರು,
ಆದಿಯಲ್ಲಿ ನಿಂದು, ಮಧ್ಯದಲ್ಲಿ ಕಂಡು,
ಅವಸಾನದಲ್ಲಿ ಅರಿದು ಇರಬೇಕೆಂಬರು.
ಅರಿವುದು ಒಂದೊ, ಮೂರೊ ಎಂದಲ್ಲಿ ನಿಂದಿತ್ತು.
ನಿಂದುದ ಕಳೆದು ಸಂದ ಹರಿ,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೨೦೬॥

೫೫೦
ದರ್ಪಣದ ಒಪ್ಪ ಅತ್ತರೆ ಅತ್ತು, ನಕ್ಕರೆ ನಕ್ಕು
ತಾನಾಡಿದಂತೆ ಆಡುವುದು.
ಅದು ಒಂದೊ ಎರಡೊ ಎಂಬುದನರಿತಲ್ಲಿ
ಸದಾಶಿವಮೂರ್ತಿಲಿಂಗವೊಂದೆ. ॥೨೦೭॥

೫೫೧
ಬೀಜದ ನೆಲೆಯಲ್ಲಿ ಹಲವು ತೋರುವವೊಲು,
ಮೂಡಿ ಮೊಳೆತಲ್ಲಿ ಉಲುಹಿಗೆ ಅಲರಾಯಿತ್ತು.
ನಾನೆಂಬಲ್ಲಿ ನೀನಾದೆ, ನೀನಾನೆಂಬಲ್ಲಿ ಉಲುಹಾದೆಯಲ್ಲಾ!
ಉಲುಹಿನ ನೆಲೆಯ ಕಡಿದು, ಗಲಭೆಯ ಗ್ರಾಮವ ಬಿಟ್ಟು,
ನೆಲೆಯಾಗು ಮನದ ಕೊನೆಯಲ್ಲಿ.
ಒಲವರ ಬೇಡ, ಸದಾಶಿವಮೂರ್ತಿಲಿಂಗವೆ. ॥೨೦೮॥

೫೫೨
ಮಾತಿಗೆ ಸಿಕ್ಕೆ, ಅವರ ನೀತಿಯ ಬಲ್ಲೆಯಾಗಿ,
ಭಾವಕ್ಕೆ ಸಿಕ್ಕೆ, ಅವರ ಭ್ರಮೆಯ ಬಲ್ಲೆಯಾಗಿ,
ಜಿಡ್ಡಿಗೆ ಸಿಕ್ಕೆ, ಅವರ ಬುದ್ಧಿಯ ಬಲ್ಲೆಯಾಗಿ.
ಇಂತೀ ಭಾವಂಗಳಲ್ಲಿ ಅಭಾವಿಯಾಗಿ
ಅವರು ಮಾಡುವ ಕಳವಿಂಗೆ ಮೈದೋರದೆ.
ಮೀರಿ ನಿಂದೆಯಲ್ಲಾ, ಸದಾಶಿವಮೂರ್ತಿಲಿಂಗವಾಗಿ. ॥೨೦೯॥

೫೫೩
ವೇದಪಾಠಕ ಶಾಸ್ತ್ರವಿತ್ತು ಪುರಾಣಬಹುಶ್ರುತಿವಂತ ವಾಚಕ
ಆಡಂಬರಭೇದಕ ಸಂಸ್ಕೃತ ಪ್ರಾಕೃತ ಅಪಭ್ರಂಶಿಕ ದೇಶಿಕ

ಇವು ಮೊದಲಾದ ವಾಚಕ ಚಾರ್ವಾಕ ಮುಖಂಗಳಿಂದ
ಹೋರುವ ಮಾಯಾವಾದದ ತೆರದವನಲ್ಲ.
ಮೂಲಸಿದ್ಧಿ ರಸಸಿದ್ಧಿ ಅಂಜನಸಿದ್ಧಿ ಅದೃಶ್ಯೀಕರಣ ಕಾಯಸಿದ್ಧಿ
ಇಂತೀ ಕುಟಿಲಂಗಳ ತೆರಕ್ಕಗೋಚರ, ಅಪ್ರಮಾಳ,
ಅಂಗಲಿಂಗಸಂಬಂಧವಾದ ಶರಣನ ಇರವು ಎಂತೆಂದಡೆ:
ಶಬ್ದ ಹತ್ತದ ಅಲೇಖದಂತೆ, ಅನಿಲ ಮುಟ್ಟದ ಕುಂಪಟೆಯಂತೆ,
ಶ್ರುತಿ ಮುಟ್ಟದ ಕಡ್ಡಿಯಂತೆ, ಕೈಮುಟ್ಟದ ಗತಿಯಂತೆ,
ನೆಯಿ ಮುಟ್ಟದ ದುಗ್ಧದಂತೆ, ಪವನ ಮುಟ್ಟದ ಪರ್ಣದಂತೆ,
ಭಾವ ಭ್ರಮೆಯೊಳಗಿದ್ದು ಇಲ್ಲದ ಶರಣನ ಇರವು,
ಸದಾಶಿವಮೂರ್ತಿಲಿಂಗದ ಅಂಗವು ತಾನೆ. ॥೨೧೦॥

೫೫೪

ಶೇಷ ಲಂಪಟಕೆಯ್ದುವ ಮುಖದಂತಿರಬೇಕು,
ವ್ಯಾಘ್ರನ ಗತಿ ನಖದಂತಿರಬೇಕು, ಪುಳಿಂದನ ಚಿತ್ತದ ಗೊತ್ತಿನಂತಿರಬೇಕು.
ಹಿಡಿವಲ್ಲಿ ಬಿಡುವಲ್ಲಿ ವಾಯುವಿನ ತೆರಪಿನಿಂದ ಕಡೆಯಾಗದೆ,
ಅರಿಯಬೇಕು ಸದಾಶಿವಮೂರ್ತಿಲಿಂಗವ. ॥೨೧೧॥

೫೫೫

ಪಾತಾಳದ ನೀರ ಹುರಿ ಸಂಚದಿಂದ ಧರೆಗೆ ತಾಹಂತೆ
ಅರಿವು ಆತ್ಮನಲ್ಲಿ ಅಡಗಿದ್ದುದ ತಂದೆಯಲ್ಲಾ!
ಕರದಿ ಕುರುಹಾಗಿ, ಅಡಗಿದೆಯಲ್ಲಾ!
ಶೃಂಗಾರದ ನಿಳಯದ ಮುಚ್ಚುಳು
ಕೀಲಿನಿಂದ ಕಡೆಗಾಣಿಸಿದಂತೆ ಅಡಗಿದೆಯಲ್ಲಾ!
ಕುರುಹು ಭಿನ್ನವಿಲ್ಲದೆ ಎನ್ನೊಡಗೂಡು,
ಸದಾಶಿವಮೂರ್ತಿಲಿಂಗವೆ. ॥೨೧೨॥

೫೫೬

ಮೊನೆ ತಪ್ಪಿದಲ್ಲಿ ಅಲಗಿನ ಘನವೇನ ಮಾಡುವುದು?
ಅರಿವು ಹೀನವಾದಲ್ಲಿ ಕ್ರೀಯ ಹರವರಿಯೇನ ಮಾಡುವುದು?
ವರ್ತನ ಶುದ್ಧವಿಲ್ಲದೆ ಲಾಂಛನದ ಉತ್ಕೃಷ್ಟವೇನ ಮಾಡುವುದು?
ತ್ರಿಕರಣ ಶುದ್ಧವಿಲ್ಲದ ಮಾಟ ದ್ರವ್ಯದ ಕೇಡು, ಭಕ್ತಿಗೆ ಹಾನಿ.
ಇಂತೀ ಗುಣಾದಿಗುಣಂಗಳಲ್ಲಿ ಅರಿಯಬೇಕು,
ಸದಾಶಿವಮೂರ್ತಿಲಿಂಗವನರಿಯಬೇಕು. ॥೨೧೩॥

೫೫೭
ಯತಿಗುಣದ್ವೇಷ, ಸಮಯಗುಣದ್ವೇಷ, ಆಚಾರಗುಣದ್ವೇಷ,
ಸಕಲಶಾಸ್ತ್ರಯುಕ್ತಿಗುಣದ್ವೇಷ,
ಸಮತೆ ಗುಣಶಾಂತಿಯಲ್ಲಿ ನಿಂದು ವಿರಕ್ತಿದ್ವೇಷ.
ಇಂತೀ ದ್ವೇಷನಾಮನಷ್ಟವಾಗಿ ಸ್ವಯಂಭುವಾಗಿ ನಿಂದುದು,
ಸದಾಶಿವಮೂರ್ತಿಲಿಂಗವು ತಾನೆ. ॥೨೧೪॥

೫೫೮
ಪಂಚವಿಷಯಂಗಳೆಂದು, ಅಷ್ಟಮದಂಗಳೆಂದು,
ಚತುಷ್ಟಯಭಾವಂಗಳೆಂದು, ಷೋಡಶಭೇದಂಗಳೆಂದು,
ಸದ್ಗುಣಸಾಧಕಂಗಳೆಂದು, ತ್ರಿಗುಣಭೇದ ಆತ್ಮಂಗಳೆಂದು
ಕಲ್ಪಿಸಿಕೊಂಡಿಪ್ಪ ಆತ್ಮನೊಂದೆ ಭೇದ.
ಅದ ವಿಚಾರಿಸಿದಲ್ಲಿ ಅರಿದಡೆ ತಾ, ಮರೆದಡೆ ಜಗವಾಯಿತ್ತು.
ಉಭಯವನಳಿದು ನಿಂದಲ್ಲಿ
ಸದಾಶಿವಮೂರ್ತಿಲಿಂಗವಾಯಿತ್ತು. ॥೨೧೫॥

೫೫೯
ಆತ್ಮಗುಣ ವಿವರದ ಪರಿಯೆಂತುಟೆಂದಡೆ:
ತರುವಿನ ಪರಿಭೇದದಂತೆ,
ಮರ ಬಲಿದು ಋತುಕಾಲಕ್ಕೆ ಪಲ್ಲವದ ಮಧ್ಯದಲ್ಲಿ,
ಹೂ ಮಿಡಿ ಬಲಿದು ರಸನಿಂದು ಫಳವಾದಂತೆ,
ಆತ್ಮನ ವಿವೇಕ ಸ್ವಸ್ಥದಲ್ಲಿ ನಿಂದು ತನ್ನಿರವ ತಾ ವಿಚಾರಿಸಿ,
ಮಹವನೊಡಗೂಡಿ, ಮಲತ್ರಯ ದೂರವಾಗಿ,
ಚಿಚ್ಛಕ್ತಿಯ ಹೃದಯದಲ್ಲಿ ಚಿದ್ಘನ ಬಲಿದು ಸ್ವರೂಪವಾಗಿ ನಿಂದು,
ಆತ್ಮನ ಅಳಿವನರಿದು ಅಧ್ಯಾತ್ಮಯೋಗಸಂಬಂಧ,
ಸದಾಶಿವಮೂರ್ತಿಲಿಂಗವನರಿದುದು. ॥೨೧೬॥

೫೬೦
ಮೂಲದ ಜ್ವಾಲೆಯೆತ್ತಿ, ಕಮಲವ ತಾಳಿ, ಮೇಲೊಂದು ಕೊಡನಿಪ್ಪುದು.
ಆ ಕೊಡನುಕ್ಕಿ ಅಮೃತವನುಣ್ಣಬೇಕೆಂಬ ಯೋಗಿಗಳು ಕೇಳಿರೋ,
ಅದು ಶರೀರದ ಮಾತಲ್ಲ.
ಮೂಲದ ದ್ವಾರವೆಂಬುದು ಬಂದ ಬಟ್ಟೆ, ಕೊಡನೆಂಬುದು ಶರೀರ,
ಆ ಶರೀರವನುಂಟುಮಾಡದೆ ಮೇಲಿಪ್ಪ ರಂಧ್ರಪದವನೊಡೆದು

ಭಾವಕ್ಕೆ ಬಾರದ ಪರಿಯಲ್ಲಿ ನಿಂದುದು ಅಮೃತಸೇವನೆ.
ಆ ಭಾವದಲ್ಲಿ ಅರಿದು ನಿಂದು ತನ್ನಯ ಕುರುಹಿನ ಸುಖವ ವೇಧಿಸಿ
ಪರಿಭ್ರಮಣಕ್ಕೆ ಸಿಕ್ಕದೆ ನಿಂದ ನಿಜವು
ಸದಾಶಿವಮೂರ್ತಿಲಿಂಗವು ತಾನೆ. ॥೨೧೭॥

೫೬೧
ಶರೀರದಲ್ಲಿ ಷಡಾಧಾರಚಕ್ರವುಂಟೆಂಬರು.
ಆಧಾರವೊಂದರಿಂದ ಆದುದನರಿಯದೆ
ಆರುಂಟೆಂದು ಬೇರೆ ಕಲ್ಪಿಸಬಹುದೆ?
ಅದಕ್ಕೆ ದೃಷ್ಟ:
ಹುತ್ತದ ಬಾಯಿ ಹಲವಾದಡೆ ಒಡಲೊಂದೆ ಘಟಭೇದ.
ಆಧಾರ ನಾನೆಂಬುದನರಿತಲ್ಲಿ ಷಡಾಧಾರ ನಿಂದಿತ್ತು.
ಅದು ತನ್ನಯ ಚಿತ್ತದ ಭೇದವಲ್ಲದೆ ವಸ್ತುವನರಿವ ಭೇದವಲ್ಲ.
ಹಲವು ಓಹರಿಯಲ್ಲಿ ತಿಳಿದು ನೋಡುವ ಒಬ್ಬನೆ ಮನೆಯೊಡೆಯ.
ಆ ಹೊಲಬನರಿತಲ್ಲಿಯೆ ನಿಂದುದು,
ಸದಾಶಿವಮೂರ್ತಿಲಿಂಗದ ಅಂಗ ॥೨೧೮॥

೫೬೨
ಅರಸು ಆಲಯವ ಹಲವ ಕಟ್ಟಿಸಿದಂತೆ,
ಶರೀರದಲ್ಲಿ ಆತ್ಮನು ಹಲವು ನೆಲೆವುಂಟೆಂದು
ತಿರುಗುತ್ತಿಹ ಭೇದವಾವುದು ಹೇಳಿರಯ್ಯಾ?
ಆ ಘಟದೊಳಗಳ ಭೇದ:
ಅಸು ಹಿಂಗಿದಾಗ ಘಟವಡಗಿತ್ತು, ಅರಸಿಲ್ಲದಾಗ ಆಲಯ ದೆಸೆಗೆಟ್ಟಿತ್ತು.
ಅಳಿವುದೊಂದು, ಉಳಿದಿಹಲ್ಲಿ ಕಾಬುದೊಂದೆ ಭೇದ,
ಸದಾಶಿವಮೂರ್ತಿಲಿಂಗವನರಿತಲ್ಲಿ. ॥೨೧೯॥

೫೬೩
ವೇದವೇದಾಂತಂಗಳಿಂದ ಸಿದ್ಧಸಿದ್ಧಾಂತಂಗಳಿಂದ
ಎಲ್ಲಿ ನೋಡಿದಡೂ ವಿಚಾರವೊಂದೆ ಭೇದ.
ಅರಿದಲ್ಲಿ ಮಲಕ್ಕೆ ಹೊರಗು, ಮರೆದಲ್ಲಿ ಮಲಕ್ಕೆ ಒಳಗು.
ಅರಿವು ಮರವೆ ನಿಂದಲ್ಲಿ ಸದಾಶಿವಮೂರ್ತಿಲಿಂಗದ ಬೆಳಗು.॥೨೨೦॥

೫೬೪

ಸಕಲವನರಿದಡೂ ಮಲತ್ರಯ ನಾಸ್ತಿಯಾಗಿರಬೇಕು.
ಅರಿತು ನಿಂದುದಕ್ಕೆ ಅದೆ ಮುಖ್ಯ.
ಮೃತ್ತಿಕೆಯ ಕೂಡಿದ ಜಲ ಆರದಿದ್ದಡೆ ಅದೆ ಪಂಕದೋರುವಂತೆ.
ಏನನರಿತು ನುಡಿದಡೂ ಕುಲಛಲ ಮಲಂ ನಾಸ್ತಿಯಾಗಿರಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೨೨೧॥

೫೬೫

ಒಂದಾಸೆಯ ಕುರಿತು ಸರ್ವಮಾತಿಂಗೆ ಒಡಲಾಯಿತ್ತು,
ಒಂದಾಸೆ ಅರತು ನಿಂದಡೆ ಈಶಮೂರ್ತಿ ತಾನಾಗಿಪ್ಪ.
ಇಂತೀ ಉಭಯದ ಆಸೆಯಲ್ಲಿ ಘಾಸಿಯಾಗುತ್ತ, ಮಾತಿನ ಮಾಲೆ ಬೇಡ.
ಆಸೆಯ ಪಾಶವ ಹರಿದು ಈಷಣತ್ರಯವ ಕಿತ್ತು,
ನಿರ್ಜಾತನಾಗಿದ್ದಲ್ಲಿ ಸದಾಶಿವಮೂರ್ತಿಲಿಂಗವು ತಾನೆ. ॥೨೨೨॥

೫೬೬

ಉಂಟೆಂಬ ದೃಢ, ಇಲ್ಲ ಎಂಬ ಸಂದೇಹ ತಾನಲ್ಲಿಯೇ ತೋರಿ,
ಅಳಿವುತ್ತಿಪ್ಪ ಭೇದವನರಿತಾಗ ಮಲತ್ರಯ ನಾಸ್ತಿ,
ಸದಾಶಿವಮೂರ್ತಿಲಿಂಗವನರಿತುದು. ॥೨೨೩॥

೫೬೭

ಕಯ್ಯೊಳಗಳ ಸಂಚ ಕಣ್ಣಿಗೆ ಮರೆಯಾದಂತೆ,
ಎಲ್ಲರಿಗೆ ಚೋದ್ಯವಾಗಿ ತೋರುತ್ತಿಹುದು.
ಆ ಪರಿಯಲ್ಲಿ ಅಸು ಘಟದ ಸಂಚವನರಿವ ಸಂಚಿತಾರ್ಥಿಗಳಂಗ,
ಮಿಕ್ಕಾದ ಅಸು ಲೆಂಕರಿಗಿಲ್ಲ,
ನಿಸ್ಸೀಮರಿಗಲ್ಲದೆ ಸದಾಶಿವಮೂರ್ತಿಲಿಂಗವಿಲ್ಲ. ॥೨೨೪॥

೫೬೮

ಕಾಯದ ಕಕ್ಕುಲತೆಗಾಗಿ ಜೀವಿಗಳ ಬಾಗಿಲ ಕಾಯದೆ,
ಈಷಣತ್ರಯಕ್ಕಾಗಿ ಭವದುಃಖಿಗಳ ಬಾಗಿಲಲ್ಲಿ ನಿಂದು
ವೇಳೆಯ ಕಾವಂಗೆ ಭಾವರಹಿತ ಬ್ರಹ್ಮವೇಕೆ?
ಅದು ನಾಣ್ನುಡಿಗಳೊಳಗು,
ಸದಾಶಿವಮೂರ್ತಿಲಿಂಗಕ್ಕೆ ಹೊರಗು. ॥೨೨೫॥

೫೭೯
ವೇಷದಲ್ಲಿ ತಿರುಗುವುದು ಸಮಯದ ಹಂಗು.
ಮಾತಿನಲ್ಲಿ ತಿರುಗುವರೆಲ್ಲರು ಶಾಸ್ತ್ರದ ಹಂಗು.
ಯತಿಭೇದದಲ್ಲಿ ತಿರುಗುವರೆಲ್ಲರು ಮನಸಿಜನ ಹಂಗು.
ಆಸೆ ಅರತು ನಿಬ್ಬೆರಗಾಗಿ ತಿರುಗುವರೆಲ್ಲರು ಶರೀರದ ಹಂಗು.
ಹಿಂದ ಮರೆದು ಮುಂದಳ ಮೋಕ್ಷವನರಸುವರೆಲ್ಲರು ರುದ್ರನ ಹಂಗು.
ಇಷ್ಟಾರ್ಥ ಕಾಮ್ಯಾರ್ಥ ಮೋಕ್ಷಾರ್ಥವೆಂಬ ಬಟ್ಟೆಯ ಮೆಟ್ಟದೆ,
ಹಿಂದಳ ಇರವು ಮುಂದಳ ಸಂಶಯವೆಂಬುದ ಏನೆಂದರಿಯದೆ ನಿಂದುದು,
ಸದಾಶಿವಮೂರ್ತಿಲಿಂಗದಲ್ಲಿ ಸಂದ ಮನ. ॥೨೨೬॥

೫೮೦
ಕಾಯವುಳ್ಳನ್ನಕ್ಕ ಮಾಡುವುದು ಲಿಂಗಪೂಜೆಯ,
ಜೀವವುಳ್ಳನ್ನಕ್ಕ ಅರಿವುದು ಅಭೇದ್ಯ ವಸ್ತುವ.
ಉಭಯವ ಕಡೆಗಾಣಿಸಿ ನಿಂದಲ್ಲಿ
ಸದಾಶಿವಮೂರ್ತಿಲಿಂಗವೆಂದು ಕುರುಹಿಡಲಿಲ್ಲ. ॥೨೨೭॥

೫೮೧
ಜಲದೊಳಗಳ ಮತ್ಸ್ಯದ ನೆಲೆಯ, ಮುಗಿಲೊಳಗಳ ಮಿಂಚಿನ ನೆಲೆಯ,
ವಾರಿಯ ಸರಲೆಕ್ಕವ ಭೇದಿಸಬಹುದೆ?
ಆ ತೆರದಲ್ಲಿ ನಿಂದಾತ್ಮನ ಒದಗನರಿವ ಭೇದವೆಂತುಟಯ್ಯಾ?
ವಾಯು ಬಯಲಲ್ಲಿ ಅಡಗಿ ಆವ ಠಾವಿನಲ್ಲಿ ಬೀಸಿದಡೆ ಕಲೆದೋರುವಂತೆ,
ಆತ್ಮನ ಭೇದವ ಭೇದಿಸುವ ಪರಿ ತನ್ನನರಿತಲ್ಲದಾಗದು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೨೨೮॥

೫೮೨
ಮಠದಲ್ಲಿ ತೋರುವ ಜ್ಯೋತಿ ಅಂಗ ಚಿಕ್ಕಿತ್ತಾಗಿ,
ಬೆಳಗು ಪರಿಪೂರ್ಣವಾಗಿ ನಿಳಯವ ತುಂಬಿದಂತೆ
ಘಟದೊಳಗಳ ಸ್ವಯಂಜ್ಯೋತಿ ಸರ್ವಾಂಗ ಪರಿಪೂರ್ಣವಾಗಿ ಬೆಳಗುತ್ತಿಹ.
ಅರಿವಾತ್ಮನ ಭೇದವ ಅರಿತಲ್ಲಿಯೆ
ಸದಾಶಿವಮೂರ್ತಿಲಿಂಗ ನೆಲೆಗೊಂಡುದು. ॥೨೨೯॥

೫೮೩
ಗಂಧವನೊಳಕೊಂಡ ಕುಸುಮವ ಕೊಯ್ಯಬಹುದಲ್ಲದೆ
ಗಂಧವನೊಳಕೊಂಡ ವಾಯುವ ಕೊಯ್ಯಬಹುದೆ?

ಘಟವನೊಳಕೊಂಡಿದ್ದಾತ್ಮನನರಿಯಬಹುದೆ,
ಆತ್ಮನನೊಳಕೊಂಡಿದ್ದ ಘಟವನರಿಯಬಹುದಲ್ಲದೆ
ವಸ್ತು ಅಂಗವಾದಲ್ಲಿ ಅರಿಯಬಹುದಲ್ಲದೆ
ಅಂಗ ವಸ್ತುವಾದಲ್ಲಿ ಹಿಂಗಿ ಅರಿವ ಠಾವಿನ್ನಾವುದು?
ಕುಸುಮಕ್ಕೆ ಕಡೆ ನಡು ಮೊದಲಲ್ಲದೆ
ಗಂಧಕ್ಕೆ ಕಡೆ ನಡು ಮೊದಲುಂಟೆ?
ಅರಿವುದಕ್ಕೆ, ಅರುಹಿಸಿಕೊಂಬುದಕ್ಕೆ, ಕುರುಹನರಿತಲ್ಲಿಯೆ
ಸದಾಶಿವಮೂರ್ತಿಲಿಂಗವೆಂಬ ರೂಪ ನಿಂದಿತ್ತು. ॥೨೩೦॥

೫೭೪

ಗಂಧವೊಂದೆಂದಡೆ ಹಲವು ವಾಸನೆಯ ಕುಸುಮದಲ್ಲಿ ಸಿಕ್ಕಿ,
ವಾಸನೆ ಭಿನ್ನವಾಗಿ ತೋರುವಂತೆ,
ಆತ್ಮನೊಂದೆಂದಡೆ, ಹಲವು ಘಟದಲ್ಲಿ ಸಿಕ್ಕಿ,
ಅವರವರ ನೆಲಹೊಲಂಗಳಲ್ಲಿ ಸಿಕ್ಕಿ,
ಫಲಭೋಗಂಗಳಿಗೆ ಒಳಗಾಯಿತ್ತು.
ಆತ್ಮನ ಒಲವರವೊಂದೆನಬಹುದೆ?
ಸುಗಂಧಕ್ಕೂ ದುರ್ಗಂಧಕ್ಕೂ ಒಂದೆ ವಾಯು.
ಅರಿವಾತ್ಮವೊಂದೆಂದಡೆ, ಉಭಯವನರಿಯಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೨೩೧॥

೫೭೫

ಉರಿಯಂಗವೆಲ್ಲ ಆಪೋಶನಕ್ಕೊಡಲು,
ಒಡಲುಗೊಂಡವರೆಲ್ಲರು ಅಪೇಕ್ಷೆಗೆ ಮೊದಲು.
ಇಂತೀ ಬಿಡುಮುಡಿಯ ಬಲ್ಲವರಾರೊ?
ತನುಧರ್ಮವನರಿತು ಚರಿಸಬಲ್ಲಡೆ ಜಂಗಮ,
ಮನಧರ್ಮವನರಿತು ಅಡಗಬಲ್ಲಡೆ ಗುರುಮೂರ್ತಿ.
ಇಂತೀ ಉಭಯದ ಭೇದವ ವೇದಿಸಬಲ್ಲಡೆ ಸದ್ಭಕ್ತ.
ಇಂತೀ ತ್ರಿವಿಧಭಾವ ಚಿನ್ನ ಬಣ್ಣ ವಾಸನೆಯಂತೆ,
ಸದಾಶಿವಮೂರ್ತಿಲಿಂಗವು ತಾನೆ. ॥೨೩೨॥

೫೭೬

ಪಾದಪ ಗುರುಭಾವ, ಶಾಖೆ ಚರಭಾವ, ಲಿಂಗ ಫಲಭಾವ,
ರಸ ವಸ್ತುಭಾವ, ಭುಂಜಿಸುವಾತ ಭಕ್ತಿಭಾವ,
ಭಕ್ತನಂಗ ಸದಾಶಿವಮೂರ್ತಿಲಿಂಗಭಾವ. ॥೨೩೩॥

೫೭೭
ಕೋಟಿ ಗುರುವಾಗಬಹುದು, ಭಕ್ತನಾಗಬಾರದು.
ಕೋಟಿ ಲಿಂಗವಾಗಬಹುದು, ಭಕ್ತನಾಗಬಾರದು.
ಕೋಟಿ ಚರವಾಗಬಹುದು, ಭಕ್ತನಾಗಬಾರದು.
ತ್ರಿವಿಧಕ್ಕಾಧಾರ ಭಕ್ತನ ವಿಶ್ವಾಸ, ತ್ರಿವಿಧದ ಪ್ರಾಣ ಭಕ್ತನ ಚಿತ್ತ.
ಭಕ್ತನ ಬಾಗಿಲಲ್ಲಿ ಈಶ್ವರನಿಪ್ಪ, ಭಕ್ತನ ಅಂಗಳದಲ್ಲಿ ಮಹಾಲಿಂಗವಿಪ್ಪುದು.
ಭಕ್ತನ ಆಶ್ರಯದಲ್ಲಿ ಪ್ರಸಾದಕ್ಕೆ
ಸದಾಶಿವಮೂರ್ತಿಲಿಂಗವು ಕಾಯಿದುಕೊಂಡಿಪ್ಪನು. ॥೨೩೪॥

೫೭೮
ಗುರುವಿಂಗೂ ಲಿಂಗಕ್ಕೂ ಜಂಗಮಕ್ಕೂ ಭಕ್ತನಂಗವೆ ಮಂದಿರವಾಗಿ,
ಮನದ ವಿಶ್ರಾಂತಿಯೆ ಸುಖಭೋಜನ ಭೋಗಂಗಳಾಗಿ ತಾಳುವ ಕಾರಣ,
ಭಕ್ತನಂಗವೆ ಸದಾಶಿವಮೂರ್ತಿಲಿಂಗದ ಅಂಗ. ॥೨೩೫॥

೫೭೯
ತ್ರಿವಿಧಮೂರ್ತಿಯು ಕೂಡಿ ಭಕ್ತನ ಅಂಗದಲ್ಲಿ ನಿಂದು,
ತಮ್ಮ ಸಂದನಳಿವುದಕ್ಕೆ ಮಂದಿರವ ಕಟ್ಟಿದ ಅಂದವನರಿಯದೆ,
ಕರ್ತೃ ಭೃತ್ಯನೆಂದು ಕೊಂಡಾಡಲೇತಕ್ಕೆ?
ಕಾಯ ಜೀವಕ್ಕೆ ಹಂಗುಂಟೆ ಅಯ್ಯಾ?
ಭಕ್ತನ ಸತ್ಯ ಸದಾಶಿವಮೂರ್ತಿಲಿಂಗದ ಕೃತ್ಯ. ॥೨೩೬॥

೫೮೦
ಆಗಮಂಗಳ ಶೋಧಿಸಿ ಮಾತಿನ ನೀತಿಯ ಹೇಳುವರೆಲ್ಲರು ಹಿರಿಯರೆ?
ಖ್ಯಾತಿಯ ಘಟಧರ್ಮಕ್ಕೆ ಮಾಡುವರೆಲ್ಲರು ಭಕ್ತರೆ?
ವೇಷವ ಬಿಟ್ಟು ಮೈವಾಸನವನೊಲ್ಲದೆ
ವೇಷದಲ್ಲಿ ತಿರುಗುವ ವಿರಕ್ತರೆಂದು ಮತ್ತೆ,
ಭವಪಾಶದಲ್ಲಿ ಬೀಳುತ್ತಿಹ ಪಾಷಂಡಿಗಳಿಗೇಕೆ ಸತ್ಪಥನೀತಿ?
ಇಂತೀ ತ್ರಿವಿಧವ ನೇತಿಗಳೆದಲ್ಲದೆ
ಸದಾಶಿವಮೂರ್ತಿಲಿಂಗವನರಿಯಬಾರದು. ॥೨೩೭॥

೫೮೧
ಸ್ವಪ್ನದ ಮಂದಿರದಲ್ಲಿ ನಿಃಕಲದ ಕೊಡಗೂಸು,
ಬಚ್ಚಬಯಲ ಕೊಡನ ಹೊತ್ತು ಕೈಬಿಟ್ಟಾಡುತ್ತೈದಾಳೆ.

ಆ ಆಟ ದೇಹಿಕರಿಗೆ ಅಸಾಧ್ಯ. ಭಾವಭ್ರಮೆಯಳಿದಲ್ಲದೆ ವಿರಕ್ತಿಭಾವವಿಲ್ಲ.
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೨೩೮॥

೫೮೨
ಕಾಳೋರಗನ ಹೆಡೆಯ ಮೇಲೆ
ಮಧ್ಯದಲ್ಲಿ ಒಂದು ಕೋಳು ಸಿಕ್ಕದ ಹೆಣ್ಣು.
ಕಾಲು ಮೇಲಾಗಿ ತಲೆ ಕೆಳಕಾಗಿ ಅಳುವರನೆಲ್ಲರ ಕಾಲಸಂಧಿಯಲ್ಲಿರಿಸಿ,
ಭಾಳಾಂಬಕನ ಲೀಲೆಯ ಹೊತ್ತು ಆಡುವರನೆಲ್ಲರ
ತನ್ನ ಶುಕ್ಲದ ಪದರದಲ್ಲಿ ಬೈಚಿಟ್ಟೈದಾಳೆ.
ಆ ಹೊರೆಯ ಹರಿದಲ್ಲದಾಗದು, ಸದಾಶಿವಮೂರ್ತಿಲಿಂಗಕ್ಕೆ. ॥೨೩೯॥

೫೮೩
ಯೋಗದಲ್ಲಿ ಕಾಬುದು ಶರೀರಕ್ಕೆ ಹೊರಗು.
ಕರ್ಮದಲ್ಲಿ ಕಾಬುದು ಸಂಕಲ್ಪಕ್ಕೆ ಹೊರಗು.
ಬಟ್ಟಬಯಲಲ್ಲಿ ಕಾಬುದು ಲಕ್ಷ್ಯಕ್ಕೆ ಹೊರಗು.
ಉಭಯದ ಸಂದನಳಿದು ನಿಂದಲ್ಲಿ
ಸದಾಶಿವಮೂರ್ತಿಲಿಂಗಕ್ಕೆ ಒಳಗು. ॥೨೪೦॥

೫೮೪
ಮತಿಯಿಂದ ಕಾಬುದು ಚಿತ್ತದ ಹಂಗು,
ಪೂಜೆಯಿಂದ ಕಾಬುದು ಪುಣ್ಯದ ಹಂಗು.
ಉಭಯವನಳಿದು ಕಾಬುದಕ್ಕೆ, ಚಿತ್ತ ನೆಮ್ಮುವುದಕ್ಕೆ ಗೊತ್ತಿಲ್ಲ.
ಏನೂ ಎನಬಾರದುದಕ್ಕೆ,
ಸದಾಶಿವಮೂರ್ತಿಲಿಂಗವನರಿವುದಕ್ಕೆ ತಾವ ಕೇಳಾ? ॥೨೪೧॥

೫೮೫
ಬಯಲು ಬಯಲ ನೋಡಿ ಕಾಬುದಿನ್ನೇನು?
ರೂಪ ರೂಪ ನೋಡಿ ಕಾಬುದಿನ್ನೇನು?
ರೂಪ ಹಿಡಿಯಬಾರದು, ಬಯಲನರಿಯಬಾರದು.
ಬಯಲು ರೂಪಿಂಗೆ ಹೊರಗು, ರೂಪು ಬಯಲಿಂಗೆ ಹೊರಗು.
ಉಭಯವನರಿತಲ್ಲಿ ಸದಾಶಿವಮೂರ್ತಿಲಿಂಗಕ್ಕೆ ಒಳಗು. ॥೨೪೨॥

೫೮೬
ಸಕಲಜ್ಞಾನಸಂಪನ್ನ ಕಲೆಯನರಿತೆನೆಂಬ ಅರುಹಿರಿಯರು ಹೇಳಿರಣ್ಣಾ.
ಸಕಲ ಅರ್ಪಿತದಲ್ಲಿ ಲಿಂಗಮುಖವಾಗಿ ಇರಬೇಕೆಂಬ
ಸಂದೇಹಿಗಳು ಹೇಳಿರಣ್ಣಾ.
ಇಂದ್ರಿಯಂಗಳ ಮುಖದಿಂದ ಲಿಂಗವನರಿಯಬೇಕೋ?
ಲಿಂಗದ ಮುಖದಿಂದ ಇಂದ್ರಿಯಂಗಳನರಿಯಬೇಕೊ?
ಒಂದ ಬಿಟ್ಟು ಒಂದನರಿತಲ್ಲಿ ಹಿಂಗಬಾರದ ತೊಡಕು.
ಉಭಯದ ಸಂದೇಹ ನಿಂದಲ್ಲಿ ಸದಾಶಿವಮೂರ್ತಿಲಿಂಗವನರಿತುದು. ॥೨೪೩॥

೫೮೭
ಚಿತ್ತ ನೆನೆದು ವಸ್ತುವೆಂದು ಪ್ರಮಾಣಿಸುವಲ್ಲಿ
ವಸ್ತುವಿಗೂ ಚಿತ್ತಕ್ಕೂ ಬಿಟ್ಟಿಹ ಠಾವಾವುದಯ್ಯಾ?
ಉರಿ ಕಾಷ್ಠದ ಇರವಿನಂತೆ, ಒಡಲಿಂಗೆ ಎಡೆಯಿಲ್ಲ.
ಸದಾಶಿವಮೂರ್ತಿಲಿಂಗಕ್ಕೆ ಉಭಯ ನಾಮವಿಲ್ಲ. ॥೨೪೪॥

೫೮೮
ಕೆಚ್ಚಲೊಳಗೆ ಕ್ಷೀರವಿಪ್ಪಂತೆ ಚಿತ್ತದೊಳಗೆ ವಸ್ತುವಿಪ್ಪ ಭೇದವನರಿಯಬೇಕು.
ಕೆಚ್ಚಲ ಹೆರೆ ಹಿಂಗಿಯಲ್ಲದೆ ಹಾಲಿಗೊಪ್ಪವಿಲ್ಲ.
ಚಿತ್ತದ ಕಲೆಯ ಬಿಟ್ಟು ವಸ್ತುಮಯ ತಾನಾಗಿ
ಉಭಯ ರೂಪಿನಲ್ಲಿ ಅಡಗಿದ ವಸ್ತುವ ಹೆರೆ ಹಿಂಗಿದಲ್ಲಿ
ಸದಾಶಿವಮೂರ್ತಿಲಿಂಗವನರಿತುದು. ॥೨೪೫॥

೫೮೯
ವಸ್ತುಲೀಲಾಲೋಲನಾಗಿ ಅವತಾರಮೂರ್ತಿಯಾದಲ್ಲಿ
ತ್ರಿಗುಣ ಸಂಭವವಾಯಿತ್ತು.
ಪಂಚಭೌತಿಕ ಬಲಿದು ಪಂಚವಿಂಶತಿತತ್ವವಾಯಿತ್ತು.
ಈ ಭೇದವ ಜಗಕ್ಕೆ ತೋರಿ, ತಾ ಹೊರಗಾದ
ಸದಾಶಿವಮೂರ್ತಿಲಿಂಗದ ಬೆಡಗು. ॥೨೪೬॥

೫೯೦
ನಾದ ಬ್ರಹ್ಮಶಕ್ತಿಯಾಗಿ, ಬಿಂದು ವಿಷ್ಣುಶಕ್ತಿಯಾಗಿ,
ಕಳೆ ರುದ್ರಶಕ್ತಿಯಾಗಿ, ತ್ರಿವಿಧ ಪ್ರಾಣ ಅತೀತ ಭೇದ ಚೇತನನಾಗಿ,
ಉಮಾಪತಿ ನಿರಸನ ಸ್ವಯಂಭು ಸದಾಶಿವಮೂರ್ತಿಲಿಂಗವು,
ತ್ರಿವಿಧನಾಮ ನಷ್ಟವಾಯಿತ್ತು. ॥೨೪೭॥

೫೯೧
ಯೋಗಿ ಜೋಗಿ ಶ್ರಾವಕ ಸನ್ಯಾಸಿ ಪಾಶುಪತಿ ಕಾಳಾಮುಖಿ
ಆರು ಭೇದ ಮೂರರಲ್ಲಿ ಅಡಗಿ ಎರಡು ಅಳಿವಿಂಗೆ ಒಳಗಾಯಿತ್ತು.
ಒಂದು ನಿಂದು ಸಮಯ ರೂಪಾಯಿತ್ತು.
ಸಮಯಕ್ಕೆ ಹೊರಗಾದುದು,
ಸದಾಶಿವಮೂರ್ತಿಲಿಂಗಕ್ಕೆ ಶಕ್ತಿನಾಮವಿಲ್ಲ. ॥೨೪೮॥

೫೯೨
ವಸ್ತುವಿನ ಪಾದಮಂಡಲ ಬ್ರಹ್ಮಲೋಕವಾಯಿತ್ತು,
ವಸ್ತುವಿನ ದೇಹಮಂಡಲ ಶಕ್ತಿಲೋಕವಾಯಿತ್ತು,
ವಸ್ತುವಿನ ಶಿರಮಂಡಲ ರುದ್ರಲೋಕವಾಯಿತ್ತು.
ತ್ರಿವಿಧಾಂಗ ತ್ರಿಕೂಟವಾಗಿ ತಿರುಗುವುದಕ್ಕೆ ಹೊರಗು,
ಸ್ವಸ್ಥವಾಗಿ ನಿಂದಲ್ಲಿ ಸದಾಶಿವಮೂರ್ತಿಲಿಂಗಕ್ಕೆ ಒಳಗು. ॥೨೪೯॥

೫೯೩
ಯೋಗಿ ಪಾಶುಪತಿ ಕಾಳಾಮುಖಿ ಈ ಮೂರು ಶೈವಪಕ್ಷವಾಗಿಹವು.
ಜೋಗಿ ತ್ರಿದಂಡಿ ಬೌದ್ಧ ಈ ಮೂರು ವಿಷ್ಣುಪಕ್ಷವಾಗಿಹವು.
ಇಂತೀ ಆರು ಅವತಾರಕ್ಕೆ ಸಂಬಂಧವಾಗಿಹವು.
ಆರರಿಂದ ಮೀರಿದ ದರ್ಶನಕ್ಕೆ ತೋರಲಿಲ್ಲದ ಸುವಸ್ತು ತಾನಾಗಿ,
ರೂಪಿಂಗೆಡೆಯಿಲ್ಲ ಸದಾಶಿವಮೂರ್ತಿಲಿಂಗವು ತಾನಾಗಿ. ॥೨೫೦॥

೫೯೪
ಶರೀರ ದಹನ ಮುಖವೆಲ್ಲವು ರುದ್ರತತ್ವ ಆಧೀನವಾಗಿಹುದು.
ಶರೀರಮುಖ ಸಮಾಧಿ ಆಧೀನವಾಗಿಹುದೆಲ್ಲವು ವಿಷ್ಣುಪಕ್ಷವಾಗಿಹವು.
ಇಂತೀ ಉಭಯ ಲಯವನರಿತಲ್ಲಿ ಪೂರ್ವಕಕ್ಷೆಯಾಗಿಹುದು.
ಇಂತೀ ಉಭಯವ ಮರೆದಲ್ಲಿ ಉತ್ತರಕಕ್ಷೆಯಾಗಿಹುದು.
ಇಂತೀ ಭೇದಂಗಳನರಿತು ಹೊರಗಾಗಿ ನಿಂದಲ್ಲಿ
ಸದಾಶಿವಮೂರ್ತಿಲಿಂಗದ ಅರಿವು ಒಳಗಾಗಿಹುದು. ॥೨೫೧॥

೫೯೫
ತನುಸಂಬಂಧ ಬ್ರಹ್ಮನ ತೊಡಕಾದಲ್ಲಿ,
ವಿಕಾರಸಂಬಂಧ ವಿಷ್ಣುವಿನ ತೊಡಕಾದಲ್ಲಿ,
ಜೀವಸಂಬಂಧ ರುದ್ರನ ತೊಡಕಾದಲ್ಲಿ,

ಇಂತೀ ಮೂರರ ಹಿಂಗುವ ಹಿರಿಯರ ಆರನೂ ಕಾಣೆ.
ಇಂತೀ ತ್ರಿವಿಧಕ್ಕೆ ಹೊರಗಾದಲ್ಲಿ ಮೀರಿ ಕಾಬ ತೆರ ಸಮಯಕ್ಕೆ ಹೊರಗು,
ಸದಾಶಿವಮೂರ್ತಿಲಿಂಗವೆ ಅಂಗವಾದವನ ಇರವು. ॥೨೫೨॥

೫೯೬
ಜಗದ ವರ್ತಕದ ಇರವು ಎಂತೆಂದಡೆ:
ಶೈವ ನೇಮಸ್ಥ ಎರಡೇ ಭೇದ.
ದಿವಾರಾತ್ರಿ ಉಭಯ ಕೂಡಿ ದಿನ ಲೆಕ್ಕಕ್ಕೆ ಬಂದಂತೆ,
ಶಕ್ತಿ ಸಾಕಾರವಾಗಿ, ನಿಶ್ಶಕ್ತಿ ವಸ್ತುರೂಪಾಗಿ,
ಉಭಯವು ಕೂಡಿ ಘಟ ನಡೆವಂತೆ ನಡೆವುದು ಜಗ ಸಂಬಂಧ,
ಭಯಕ್ಕೆ ಹೊರಗಾದುದು,
ಸದಾಶಿವಮೂರ್ತಿ ಲಿಂಗದ ಭಾವ ಸಂಬಂಧ. ॥೨೫೩॥

೫೯೭
ಶಕ್ತಿರೂಪು ವಿಷ್ಣುವಿನ ಅವತಾರವಾಯಿತ್ತು.
ಅಸ್ಥಿಮಯ ರುದ್ರನ ವಂಶೀಭೂತವಾಯಿತ್ತು.
ಆತ್ಮಮಯ ವಸ್ತುಸಂಬಂಧವಾದಲ್ಲಿ
ಮಾಯೆಯ ಮರೆದು ಕಲ್ಪಿತವ ಹರಿದು ಏಕಮಯವಾಗಿ,
ಖಂಡನಪತ್ರದಲ್ಲಿ ತೋರುವ ಚಂಡಿಕಾಕಿರಣದಂತೆ.
ಒಂದು ಹಲವಾದ ವಸ್ತುವನರಿತಲ್ಲಿ ಹಿಂಗಿತು ಮಲ ಈಚೆಯಲ್ಲಿ,
ಆ ಮಲದ ಆಚೆಯಲ್ಲಿ ನಿಂದು ನೋಡಲಾಗಿ,
ಸದಾಶಿವಮೂರ್ತಿಲಿಂಗದ ಕಳೆ ಕಾಣಬಂದಿತ್ತು. ॥೨೫೪॥

೫೯೮
ಯೋನಿಜನಾಗಿ ದಶ ಅವತಾರಕ್ಕೆ ಒಳಗಾದಲ್ಲಿ ದೇವಪದ ಹಿಂಗಿತ್ತು.
ನಾಭಿ ಅಂಬುಜದಲ್ಲಿ ಹುಟ್ಟಿ ಪಿತಭವಕ್ಕೆ ಬಾಹಾಗ
ಸುತಂಗೆ ಸುಖವಿಲ್ಲವಾಗಿ ಬ್ರಹ್ಮಪದ ನಿಂದಿತ್ತು.
ಸಂಹಾರಕಾರಣನಾಗಿ ಕಪಾಲಶೂಲನಾಟ್ಯಾಡಂಬರನಾಗಿ ಇದ್ದುದರಿಂದ,
ಈಶ್ವರಪದ ನಿಂದು ರುದ್ರಪದವಾಯಿತ್ತು.
ಇಂತೀ ತ್ರಿವಿಧವನರಿದು ತೊಲಗಿ ನಿಂದಲ್ಲಿ
ಸದಾಶಿವಮೂರ್ತಿಲಿಂಗದ ನೆಲೆಯಾಯಿತ್ತು. ॥೨೫೫॥

೫೯೯
ಪೃಥ್ವಿ ಅಪ್ಪು ತೇಜ ವಾಯು ಆಕಾಶ ಪಂಚಭೌತಿಕಕ್ಕೆ
ಮುನ್ನವೆ ವಿಷ್ಣುಮಯ ಹುಟ್ಟಿದ ಠಾವಾವುದು?
ಕಾಲಾಂಧರ ಕಲ್ಪಿತಕ್ಕೆ ಮುನ್ನವೆ ಬ್ರಹ್ಮನ ಉತ್ಪತ್ಯದ ನೆಲೆ ಯಾವುದು?
ರೂಪು ನಿರೂಪಿಗೆ ಮುನ್ನವೆ ರುದ್ರನ ಲೀಲಾಭಾವವಾದ ಠಾವಾವುದು?
ಇಂತಿವೆಲ್ಲವು ಅನಾದಿ ವಸ್ತು ಆದಿಶಕ್ತಿಯ ಈ ಈಚೆಯಿಂದಾದ
ದೇವವರ್ಗ ಸಂತತಿ.
ಯುಗಜುಗಂಗಳಲ್ಲಿ ಪರಿಭ್ರಮಣಕ್ಕೆ ತಿರುಗುವುದಕ್ಕೆ ಒಡಲಾಯಿತ್ತು.
ಇಂತೀ ಭೇದಂಗಳನರಿತು ಘನಕಿರಿದಿಂಗೆ ತೆರಪುಂಟೆ ಅಯ್ಯಾ?
ಸುರಾಳ ವಿರಾಳ ನಿರಾಳಕ್ಕೆ ಮುನ್ನವೆ ಅಭೇದ್ಯಅಗೋಚರಮಯ
ಲೋಕಕ್ಕೆ ಸದಾಶಿವಮೂರ್ತಿಲಿಂಗವೊಂದೆಯಲ್ಲದೆ
ಹಲವು ಇಲ್ಲಾ ಎಂದೆ. ॥೨೫೬॥

೬೦೦
ವಿಷ್ಣುಮಯ ಜಗವೆಂದಡೆ ಮಹಾಪ್ರಳಯದಲ್ಲಿ ವಟಪತ್ರಶಯನನಾದ.
ಸೃಷ್ಟಿಗೆ ಅಜನೆಂದಡೆ ಹುಟ್ಟಿದುದಿಲ್ಲ ಶಿರ.
ಲಯಕ್ಕೆ ರುದ್ರನಾದಡೆ ಕರದ ಕಪಾಲ ಬಿಟ್ಟುದಿಲ್ಲ,
ಇಂತೀ ಮೂರು ಭೇದವನರಿತು ಮೀರಿದ ತತ್ವ,
ಸದಾಶಿವಮೂರ್ತಿಲಿಂಗವೊಂದೆ ಭಾವ. ॥೨೫೭॥

೬೦೧
ವಿಷ್ಣು ದೈವವೆಂದಡೆ ಪಾಂಡವರ ಬಂಡಿಯ ಬೋವನಾದ,
ಬ್ರಹ್ಮದೈವವೆಂದಡೆ ಆ ಬೋವಂಗೆ ಕಂದನಾದ,
ಜಿನ ದೈವವೆಂದಡೆ ಆ ಬೋವನ ಅವತಾರವಾದ,
ಮುಪ್ಪುರವ ಕೆಡಿಸುವಲ್ಲಿ ಕುಟ್ಟಿಲ ಬೌದ್ಧನಾದ,
ರುದ್ರ ದೈವವೆಂದಡೆ ಅರ್ಧನಾರಿಗೆ ಸಿಕ್ಕಿದ.
ಇಂತೀ ಸಮಯ ಕುಲಕ್ಕೆ ಹೊರಗಾಗಿ,
ಶಕ್ತಿ ಸಮಯ ನಿರಸನವಾಗಿ ನಿಂದುದ
ಸದಾಶಿವಮೂರ್ತಿಲಿಂಗವೊಂದಲ್ಲದಿಲ್ಲಾ ಎಂದೆ. ॥೨೫೮॥

೬೦೨
ವಿಷ್ಣು ಆದಿಶಕ್ತಿಯ ಕಂದನಾಗಿ ಬಂದುದನಾರೂ ಅರಿಯರು.
ಆ ಕಂದನ ಬೆಂಬಳಿಯಲ್ಲಿ

ಕ್ರಿಯಾಶಕ್ತಿಗೆ ಬ್ರಹ್ಮ ಕಂದನಾಗಿ ಬಂದುದನಾರೂ ಅರಿಯರು.
ಈ ಉಭಯದ ಆಧಾರವಾಗಿ ಜ್ಞಾನಶಕ್ತಿಯ ಬೆಂಬಳಿಯಲ್ಲಿ ಬಂದ
ರುದ್ರನ ಆರೂ ಅರಿಯರು.
ಇಂತೀ ತ್ರಿವಿಧಭೇದ ಪ್ರಳಯಕ್ಕೆ ಹೊರಗಾದ
ಸದಾಶಿವಮೂರ್ತಿಲಿಂಗವನಾರೂ ಅರಿಯರು. ॥೨೫೯॥

೬೦೩

ಸೀತೆ ಸೆರೆಹೋಹಾಗ, ವಾಣಿಯ ನಾಸಿಕ ಅರಿವಾಗ,
ಉಮಾದೇವಿಯ ಅಸುರನರಸುವಾಗ,
ಉತ್ಪತ್ಯದಾತ, ಸ್ಥಿತಿಗೆ ಕರ್ತ, ಲಯಕ್ಕೊಡೆಯ ಎಲ್ಲಿ ಹೋದ[ರೆ]ಂದರಿ[ಯೆ].
ಇಂತಿವ ಬಲ್ಲವ ಕಲ್ಲಿಗೆ ಹೊರಗಾದ ಸದಾಶಿವಮೂರ್ತಿಲಿಂಗವಲ್ಲದಿಲ್ಲ. ॥೨೬೦॥

೬೦೪

ಧ್ಯಾನದಿಂದ ಕಾಬುದು ಬ್ರಹ್ಮನ ಕಲ್ಪಾಂತರಕ್ಕೊಳಗು.
ಧಾರಣದಿಂದ ಕಾಬುದು ವಿಷ್ಣುವಿನ ಭೋಗಾಂತರಕ್ಕೊಳಗು.
ಸಮಾಧಿಯಿಂದ ಕಾಬುದು ರುದ್ರನ ಕರಪಾಶಕ್ಕೊಳಗು.
ಇಂತೀ ತ್ರಿವಿಧನಾಸ್ತಿಯಾದಲ್ಲದೆ
ಸದಾಶಿವಮೂರ್ತಿಲಿಂಗವನರಿಯಬಾರದು. ॥೨೬೧॥

೬೦೫

ಸ್ಥೂಲದಲ್ಲಿ ಸಿಕ್ಕಿ, ಸೂಕ್ಷ್ಮದಲ್ಲಿ ಕಂಡು, ಕಾರಣದಲ್ಲಿ ಅರಿವುದು
ಒಂದೊ ಮೂರೊ ಎಂಬುದನರಿತಲ್ಲಿ
ಸದಾಶಿವಮೂರ್ತಿಲಿಂಗಸಂಗವಾದುದು. ॥೨೬೨॥

೬೦೬

ವಾಗದ್ವೈತದಲ್ಲಿ ನುಡಿದು ಸ್ವಯಾದ್ವೈತದಲ್ಲಿ ನಡೆದು ತೋರಬೇಕು.
ಊರೊಳಗೆ ಪಂಥ ರಣದೊಳಗೆ ಓಟವೆ?
ಮಾತಿನಲ್ಲಿ ರಚನೆ ಮನದಲ್ಲಿ ಆಸೆಯೆ?
ಈ ಘಾತಕರ ಶಾಸ್ತ್ರ, ವಚನ ರಚನೆಗೆ ಮೆಚ್ಚಿ ಮಾಡುವನ ಭಕ್ತಿ,
ಅಲಗಿನ ಘೃತವ ಶ್ವಾನ ನೆಕ್ಕಿ ನಾಲಗೆ ಹರಿದು
ಮತ್ತಲಗ ಕಂಡು ತೊಲಗುವಂತಾಯಿತ್ತು, ಉಭಯದ ಇರವು.
ಇಂತೀ ಭೇದಂಗಳಲ್ಲಿ ಅರಿತು ನಿರತನಾಗಿರಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೨೬೩॥

೬೦೭
ವೇದವನೋದಿದಲ್ಲಿ ಪ್ರಣವವನರಿಯಬೇಕು.
ಶಾಸ್ತ್ರವ ಹೇಳಿದಲ್ಲಿ ಸಂಚಿತ ಕರ್ಮವನರಿಯಬೇಕು.
ಪುರಾಣವನೋದಿದಲ್ಲಿ ಪುಣ್ಯತಮಭೇದಂಗಳಲ್ಲಿ
ಸನ್ನದ್ಧವ ತಿಳಿಯಬೇಕು.
ಪನ್ನಗಫಲದಂತಾಗದೆ ಉಭಯಶುದ್ಧವಾಗಿರಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೨೬೪॥

೬೦೮
ಕೆಯಿ ಬೆಳೆವಲ್ಲಿ ಸದೆಗೆ ಮುನಿವರಲ್ಲದೆ ಬೆಳೆಗೆ ಮುನಿದವರುಂಟೆ ಅಯ್ಯಾ?
ಅರಿದಂಗವ ತಾಳಿದವರಲ್ಲಿ ಮರವೆಗೆ ಮುನಿವರಲ್ಲದೆ
ಅರಿವಿಗೆ ಮುನಿವರುಂಟೆ ಅಯ್ಯಾ?
ಕೊಲ್ಲಿ ಆವಿಂಗೆ ಕಾಲ ಕಟ್ಟುವರಲ್ಲದೆ ಮೊಲೆಯ ಕಟ್ಟಿದರುಂಟೆ ಅಯ್ಯಾ?
ಗುರುವಾದಡೂ ಆಗಲಿ, ಲಿಂಗವಾದಡೂ ಆಗಲಿ,
ಜಂಗಮವಾದಡೂ ಆಗಲಿ,
ಅರಿವಿಂಗೆ ಶರಣು ಮರವಿಂಗೆ ಮಥನವ ಮಾಡಿದಲ್ಲದೆ ಇರೆ.
ಇದು ನೀವು ಕೊಟ್ಟ ಅರಿವಿನ ಮಾರನ ಇರವು,
ಸದಾಶಿವಮೂರ್ತಿಲಿಂಗದ ಬರವು. ॥೨೬೫॥

೬೦೯
ವಂದಿಸಿ ನಿಂದಿಸಬಾರದೆಂಬುದೆ ಕ್ರೀವಂತನ ಇರವು.
ವಂದಿಸುವುದಕ್ಕೆ ಮುನ್ನವೆ ನಿಂದೆಗೊಡಲು ಮಾಡದೆ,
ಆ ಗುಣವ ಹಿಂಗಿಸಿ ವಂದಿಸುವುದೆ ಸದ್ಭಕ್ತನ ಇರವು, ಸನ್ಮತಿಯ ಪದವು.
ಸದಾಶಿವಮೂರ್ತಿಲಿಂಗದ ಇರವು. ॥೨೬೬॥

೬೧೦
ಉಭಯಚಕ್ಷು ಗುರುಚರವಾದಲ್ಲಿ ಹಿಡಿವ ಬಿಡುವ ಕರ ಸದ್ಭಕ್ತ.
ವರ್ತನ ಶುದ್ಧವಾದಲ್ಲಿ ಕಣ್ಣಿನಲ್ಲಿ ಕಸ ಹೊಕ್ಕಡೆ
ಕರ ಆರೈದು ಕಸನ ತೆಗೆವಡೆ ದೋಷವುಂಟೆ?
ಕಾಯ ಜೀವ ಉಭಯವು ಕೂಡಿದಲ್ಲಿ ಒಂದಕ್ಕೊಂದು ಪ್ರಳಯವಿಲ್ಲ.
ಒಂದಳಿದು ಒಂದುಳಿದಲ್ಲಿ ಉಭಯದ ಕೇಡು.
ಇಂತೀ ಅಭಿಸಂಧಿಯಲ್ಲಿ ಸಂದೇಹದಲ್ಲಿ ಹೊಂದಬೇಡ.
ಸದಾಶಿವಮೂರ್ತಿಲಿಂಗ ನೊಂದಡೂ ನೋಯಲಿ,
ಅರಿವಿನ ಮಾರನ ಅಂಗ ಹಿಂಗದ ಭಾವ. ॥೨೬೭॥

೬೧೧

ಕನ್ನಡಿಯಲ್ಲಿ ಕಪ್ಪು ಹುಟ್ಟಿದಾಗ ಕಪ್ಪ ಕಳೆದಲ್ಲದೆ ಒಪ್ಪವ ಕಾಣಬಾರದು.
ತನ್ನ ಭಾವಶುದ್ಧಕ್ಕೆ ದರ್ಪಣದ ಒಪ್ಪವನರಸಬೇಕು.
ಎನ್ನಯ ಮನದ ಕಪಟಕ್ಕೆ ನಿಮ್ಮಯ ಚಿತ್ತಶುದ್ಧವನರಸಬೇಕು.
ನಿಮ್ಮಯ ನಿರ್ಮಲ ಎನ್ನಯ ಮಲದೇಹವ ತೊಳೆಯಬೇಕು ಎಂಬುದಕ್ಕೆ
ಅರಿವಿನ ಮಾರನ ಬಿನ್ನಹ,
ಸದಾಶಿವಮೂರ್ತಿಲಿಂಗಕ್ಕೆ ತೆರಹಿಲ್ಲದ ಭಾವ. ॥೨೬೮॥

೬೧೨

ಎನಗೆ ಗುರುವಾಗಬೇಡ ಹೆಣ್ಣು ಹೊನ್ನು ಮಣ್ಣಿನ ಆಸೆ ಉಳ್ಳನ್ನಕ್ಕ,
ಎನಗೆ ಲಿಂಗವಾಗಬೇಡ ಶಕ್ತಿಸಂಪರ್ಕವುಳ್ಳನ್ನಕ್ಕ.
ಎನಗೆ ಜಂಗಮವಾಗಬೇಡ ಕಂಡಕಂಡವರ ಮಂದಿರದಲ್ಲಿ ಹೊಕ್ಕು
ಅಶನ ವಿಷಯಕ್ಕಾಗಿ ಹುಸಿವೇಷವ ತೊಟ್ಟು ಗಸಣಿಗೊಳಬೇಡ,
ಎಂದು ಹೇಳಿದ ಮಾತಿಗೆ ನೊಂದ ನೋವು,
ನಿಮ್ಮ ದೇವತ್ವದ ಹಾನಿ ಎನ್ನ ಸಜ್ಜನದ ಕೇಡು.
ಎನ್ನ ಹೊದ್ದಡೆ ಮಾಣೆ, ಇದ್ದುದ ಹೇಳಿದೆ, ನೊಂದಡೆ ನೋಯೆ,
ಸದಾಶಿವಮೂರ್ತಿಲಿಂಗವೆ ನಿನ್ನ ನಾ ಹಿಂಗದ ತೊಡಕು. ॥೨೬೯॥

೬೧೩

ವೇಷವ ತೊಟ್ಟಡೆ ಜಗಕ್ಕಳುಕಲ್ಲದೆ ಎನಗಳುಕಿಲ್ಲ.
ನೀ ಲಿಂಗವ ಕೊಟ್ಟಡೆ ನೀ ನಿನ್ನನರಿದು, ನೀ ಭವಪಾಶಕ್ಕೆ ಹೊರಗಾಗಿ
ಎನ್ನ ಹೊರಗು ಮಾಡಬೇಕಲ್ಲದೆ,
ಕುರುಡನ ಕಯ್ಯ ಕೋಲ ಕುರುಡಹಿಡಿದಂತೆ
ನೀ ಕರ್ತನಲ್ಲ ನಾ ಭೃತ್ಯನಲ್ಲ, ನೀ ಮುಕ್ತನಲ್ಲ ನಾ ಸತ್ಯನಲ್ಲ,
ನಿಮ್ಮಯ ಚಿತ್ತ ನೊಂದಡೆ ನಿಮ್ಮಲ್ಲಿಯೆ ಇರಲಿ, ಎನಗಾ ನೋವಿಲ್ಲ.
ನೀನರಿದು ಬದುಕು, ಸದಾಶಿವಮೂರ್ತಿಲಿಂಗವಾಗಬಲ್ಲಡೆ. ॥೨೭೦॥

೬೧೪

ಪಾಶವರತು ಗುರುವಾಗಬೇಕು, ವೇಷವರತು ಚರವಾಗಬೇಕು,
ಭ್ರಾಮಕವರತು ಲಿಂಗವಾಗಬೇಕು,
ಸಕಲಕೃತಭೇದವರತು ವಿರಕ್ತನಾಗಬೇಕು.
ಇಂತೀ ಸಕಲಭ್ರಮೆ ಅಡಗಿ ನಿಂದಲ್ಲಿ
ಸದಾಶಿವಮೂರ್ತಿಲಿಂಗವನರಿತುದು. ॥೨೭೧॥

೬೧೫

ಭಕ್ತಿಹೀನ ಭಕ್ತಿಯ ಮಾಡುವಲ್ಲಿ
ಗುರುಲಿಂಗಜಂಗಮದ ಇರವ ಸಂಪಾದಿಸಲಿಲ್ಲ.
ಭಕ್ತಿಯುಳ್ಳವ ಅರಿತು ಭಕ್ತಿಯ ಮಾಡುವಲ್ಲಿ
ಗುರುವಿನಲ್ಲಿ ಗುಣವನರಸಬೇಕು, ಲಿಂಗದಲ್ಲಿ ಲಕ್ಷಣವನರಸಬೇಕು,
ಜಂಗಮದಲ್ಲಿ ವಿರಕ್ತಿಯನರಸಬೇಕು. ಅದೆಂತೆಂದಡೆ:
ಈ ತ್ರಿವಿಧವು ತನ್ನಯ ಪ್ರಾಣವಾದ ಕಾರಣ.
ಪರುಷ ಶುದ್ಧವಾಗಿಯಲ್ಲದೆ ಲೋಹದ ಕುಲವ ಕೆಡಿಸದು.
ತಾ ಹಿಡಿದು ಆರಾಧಿಸುವ ವಸ್ತು ಶುದ್ಧವಾಗಿಯಲ್ಲದೆ
ಪೂಜಿಸುವ ಭಕ್ತನ ಚಿತ್ತಶುದ್ಧವಿಲ್ಲ.
ಸದಾಶಿವಮೂರ್ತಿಲಿಂಗ ಶುದ್ಧವಾಗಿಯಲ್ಲದೆ ಎನ್ನಂಗ ಶುದ್ಧವಿಲ್ಲ. ॥೨೭೨॥

೬೧೬

ಭಕ್ತ ತನ್ನಯ ಪಾಶವ ಗುರುವಿನ ಮುಖದಿಂದ ಕಳೆವ,
ಆ ಗುರು ತನ್ನಯ ಪಾಶವ ಏತರಿಂದ ಕಳೆಯಬೇಕೆಂಬುದನರಿಯಬೇಕು.
ಹಾಗರಿಯದೆ ಶಾಸ್ತ್ರಪಾಠಕನಾಗಿ ಮಾತಿನ ಮಾಲೆಯ ನುಡಿ[ವ]
ಜ್ಞಾತೃ ಜ್ಞಾನ ಜ್ಞೇಯವನರಿಯ[ದ],
ಭಾವಶುದ್ಧವಿಲ್ಲದ ಆಚಾರ್ಯನ ಕೈಯಿಂದ ಬಂದ ಪಾಷಾಣದ ಕುರುಹು
ಅದೇತಕ್ಕೂ ಯೋಗ್ಯವಲ್ಲಾ ಎಂದೆ.
ಅದು ಪುನಃ ಪ್ರತಿಷ್ಠೆಯಿಂದಲ್ಲದೆ ಲಿಂಗಚೇತನವಿಲ್ಲಾ ಎಂದೆ,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೨೭೩॥

೬೧೭

ಜಂಗಮಲಿಂಗವಾದಲ್ಲಿ ಜಂಗುಳಿಗಳ ಬಾಗಿಲ ಕಾಯದಿರಬೇಕು.
ಒಡೆಯನ ಓಲಗವ ಬಂಟ ಕಾಯಬೇಕಲ್ಲದೆ,
ಬಂಟನ ನಿಳಯವ ಒಡೆಯ ಕಾಯಬಲ್ಲನೆ?
ಇಂತಿವನರಿದು ರಾಜಮಂದಿರದಲ್ಲಿ, ಗೃಹಸ್ಥ ಆಶ್ರಮದಲ್ಲಿ
ವೇಳೆಯನರಿದು ಭುಂಜಿಸಿಹೆನೆಂಬ
ದರಿಸಿನ ಜಂಗುಳಿಗೆ ಜಂಗಮಸ್ಥಲವಿಲ್ಲಾ ಎಂದೆ.
ಸದಾಶಿವಮೂರ್ತಿಲಿಂಗವು
ಅವರಂಗಕ್ಕೆ ಮುನ್ನವೆ ಇಲ್ಲಾ ಎಂದೆ. ॥೨೭೪॥

೬೧೮
ಬಾಗಿಲಲ್ಲಿ ತಡೆವಾತನ ಮನೆಯ ಬಾಗಿಲ ಹೊಕ್ಕು ಉಂಡ ಜಂಗಮದ
ಪಾದೋದಕ ಪ್ರಸಾದವೆಂದು ಕೊಂಡಾತಂಗೆ ಅಘೋರ ಪಾತಕವೆಂದೆ.
ಅದೆಂತೆಂದಡೆ: ತಾ ಸರ್ವಸಂಗವನರಿತು ಭಕ್ತಿವಿರಕ್ತಿಯ ಕಂಡು
ಇಂತೀ ಗುಣಂಗಳಲ್ಲಿ ಸನ್ನದ್ಧನಾಗಿ ಅರಿತು
ಮತ್ತೆ ಉದರದ ಕಕ್ಕುಲಿತೆಗೆ ಸದನವ ಹೊಗಬಾರದು ಇಂತೀ ವಿವರ,
ದರ್ಶನದ ಮರೆಯಲ್ಲಿ ಆಡುವ ಪರಮವಿರಕ್ತನ ಸ್ಥಲ.
ಸದಾಶಿವಮೂರ್ತಿಲಿಂಗದಲ್ಲಿ ಆಗುಚೇಗೆಯನರಿಯಬೇಕು. ॥೨೭೫॥

೬೧೯
ರಾಜಸ ತಾಮಸ ಸಾತ್ವಿಕವನರಿದು ಪೂಜಿಸಿಕೊಂಬುದು ಗುರುಚರದ ಇರವು.
ಕೊಟ್ಟಿಹರೆಂದು ಬೇಡದೆ, ಇಕ್ಕಿಹರೆಂದು ಉಣ್ಣದೆ,
ಭಕ್ತನಲ್ಲಿ ಅರಿದು ಬಂದುದ ಅನುಕರಿಸಿ,
ಮರವೆಯಿಂದ ಬಂದುದ ತೆರದರಿಸಿನವ ಮಾಡಿ,
ಉಭಯಕ್ಕೆ ಕೇಡಿಲ್ಲದಂತೆ ಇಪ್ಪುದು ಗುರುಚರದ ಇರವು,
ಸದಾಶಿವಮೂರ್ತಿಲಿಂಗದ ಅರಿವು. ॥೨೭೬॥

೬೨೦
ಮುನ್ನವೆ ಮೂರ ಹರಿದು, ಗುರುಚರವಾಗಿ
ಬಂದಲ್ಲಿ ಇನ್ನು ಮೂರರಾಸೆಯೇಕೆ?
ಆವ ಜೀವವು ತಮ್ಮ ಮಲವ ತಾವು ಮುಟ್ಟವಾಗಿ.
ಬಿಟ್ಟುದ ಹಿಡಿವ ಮಿಟ್ಟೆಯ ಭಂಡರನೊಪ್ಪ,
ಸದಾಶಿವಮೂರ್ತಿಲಿಂಗವು ನಿರ್ಧರವಿಲ್ಲದವರನೊಲ್ಲ. ॥೨೭೭॥

೬೨೧
ಗುರುವಿನ ಉಪಾಧಿಕೆಯ ಶಿಷ್ಯನರಿತಲ್ಲಿ
ಆ ಗುರುವಿಂಗೆ ಹೇಳದೆ ಸುಮ್ಮನಿದ್ದಲ್ಲಿ ಗುರುದ್ರೋಹ ತನಗಾಯಿತ್ತು.
ಹೇಳಿದ ಮಾತ ಕೇಳಿ ಆ ಸ್ಥಲಕ್ಕೆ ಭಿನ್ನಭಾವಿಯಾಗಲಾಗಿ,
ಲಿಂಗಜಂಗಮದ ದ್ರೋಹ ಆ ಗುರುವಿಂಗಾಯಿತ್ತು.
ಆ ಭಕ್ತಂಗೆ ಚಿತ್ತ ಮುಟ್ಟಿದಲ್ಲಿ ಗುರುವೆಂದು ಪ್ರಮಾಳಿಸಲಿಲ್ಲ.
ಪ್ರಮಾಳಿಸದಿದ್ದಲ್ಲಿ ಆಚರಣೆಯ ತೊಡಕು.
ಇಂತೀ ಉಭಯದ ಏರಿನಲ್ಲಿ ನೋವುತ್ತಿದೇನೆ?
ಭಾವದ ಭ್ರಮೆಯ ಬಿಡಿಸು, ಸದಾಶಿವಮೂರ್ತಿಲಿಂಗವೆ. ॥೨೭೮॥

೬೨೨

ವಂದಿಸಿ ನಿಂದಿಸಲಿಲ್ಲ, ನಿಂದಿಸಿ ವಂದಿಸಲಿಲ್ಲ.
ಮಡಿಲೊಳಗಳ ಸರ್ಪನಂತೆ ಸಂದೇಹಕ್ಕೊಡಲಾಯಿತ್ತೆನ್ನ ಮನ.
ಅನುಸರಣೆಗೊಳಗಾಗದು, ವರ್ತಕವ ಬಿಡಲಾರದು.
ಇನ್ನೆಂದಿಗೆ ಗುರುಶಿಷ್ಯನೆಂಬ ನಾಮ ನಷ್ಟವಹುದು?
ಸದಾಶಿವಮೂರ್ತಿಲಿಂಗವು ನಿರೂಪಾಗಿಯಲ್ಲದೆ ಆಗದು. ॥೨೭೯॥

೬೨೩

ಭಕ್ತಂಗೆ ವಿಶ್ವಾಸ, ಗುರುವಿಂಗೆ ಅರಿವು,
ಉಭಯದ ಭೇದವೊಂದೆಯಾದ ಕಾರಣ.
ಕಾಯಜೀವದ ತೆರದಂತೆ, ಕಾಯದ ರುಜೆಯ
ಜೀವ ಅನುಭವಿಸುವಂತೆ, ಉಭಯ ನಿರ್ಧಾರವಾಗಿಯಲ್ಲದೆ,
ಸದಾಶಿವಮೂರ್ತಿಲಿಂಗವನರಿಯಬಾರದು. ॥೨೮೦॥

೬೨೪

ಮಾತಿನ ಮಾಲೆಯ ಕಲಿತು ಹೋರುವಾತ ಗುರುವಲ್ಲ;
ಘಾತಕತನದಿಂದ ಮಾಡುವಾತ ಶಿಷ್ಯನಲ್ಲ.
ಅಂಗದ ತಿಮಿರವ ಆತ್ಮನರಿದು ಕರದಲ್ಲಿ ಪರಿಹರಿಸುವಂತೆ,
ಆರಿಂದ ಬಂದಡೂ ಉಭಯದ ಕೇಡು.
ಗುರು ಶಿಷ್ಯ ಶುದ್ಧತೆಯಾಗಿಲ್ಲದೆ
ಸದಾಶಿವಮೂರ್ತಿಲಿಂಗವನರಿಯಬಾರದು. ॥೨೮೧॥

೬೨೫

ಕಂಚುಕೆಖಚಿತ ಆಭರಣ ವಿಲಾಸಿತಂಗಳಿಂದ ಸತಿ
ಪತಿಯ ಮುಂದೆ ಬಂದು ನಿಂದಿರೆ,
ಕಂಗಳು ತುಂಬಿ ನೋಡಿ ಮನಸಿಜ ಮುಯ್ಯಾಂತಂತೆ
ಕೂಟದ ಉಚಿತಕ್ಕೆ ತೊಟ್ಟ ತೊಡಿಗೆ ಹೊರಗಾಗಿ
ಉಭಯವು ನಿರ್ವಾಣವಾಯಿತ್ತು.
ಮಾಡುವ ಕ್ರೀಭಾವ ಹೊರಗಳ ವರ್ತನಶುದ್ಧ ಹೊರಗೆ ನಿಂದಿತ್ತು.
ಕೂಡಿಕೊಂಬ ವಸ್ತು, ಕೂಡುವ ಚಿತ್ತ, ಉಭಯಕಲೆಯಿಲ್ಲದಿರಬೇಕು
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೨೮೨॥

೬೨೬

ದಿನದಿನಕ್ಕೆ ಫಲರಸ ಬಲಿವಂತೆ ಮಾಡುವ ಕ್ರೀ ಸನ್ನದ್ಧನಾಗಿ,
ಅರಿವ ಅರಿವು ಫಲರಸ ಬಲಿದು ಫಳವಾದಂತೆ
ಕ್ರೀ ಜ್ಞಾನದಲ್ಲಿ ನಿಂದು, ಜ್ಞಾನ ಕ್ರೀಯನವಗವಿಸಿದಲ್ಲಿ,
ಉಭಯನಾಮ ನಷ್ಟವಾಯಿತ್ತು, ಸದಾಶಿವಮೂರ್ತಿಲಿಂಗವನರಿತಲ್ಲಿ ||೨೮೩||

೬೨೭

ಅನುವನರಿವನ್ನಕ್ಕ ಅರ್ಚನೆ, ಪುಣ್ಯವನರಿವನ್ನಕ್ಕ ಪೂಜೆ,
ಶರೀರವುಳ್ಳನ್ನಕ್ಕ ಸುಖದುಃಖವ ಸಂತಾಪಿಸಬೇಕು.
ತೆಪ್ಪದಲ್ಲಿ ನಿಂದು ಒತ್ತಿ ಹೊಳೆಯ ದಾಟುವಂತೆ.
ಕ್ರೀಶುದ್ಧವಾದಲ್ಲಿ ಜ್ಞಾನದ ಗೊತ್ತು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ||೨೮೪||

೬೨೮

ತೆಪ್ಪದ ಮೇಲೆ ನಿಂದು ಒತ್ತುವ ಕ್ರೀಯೇ ಲಿಂಗವಾಗಿ,
ಹಿಡಿವ ಕಣೆಯೇ ಅರಿವ ಮುಖವಾಗಿ,
ವ್ಯಾಪಕವೆಂಬ ಹೊಳೆ ದಾಂಟುವುದಕ್ಕೆ ಇದೆ ಪಥ,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ||೨೮೫||

೬೨೯

ಮಣ್ಣಿನೊಳಗೆ ಚಿನ್ನ ಹುಟ್ಟಿ ಮಣ್ಣ ಬಿಟ್ಟಂತಿರಬೇಕು,
ಕಲ್ಲಿನೊಳಗೆ ಕಾಂತಿ ಹುಟ್ಟಿ [ಕಲ್ಲ] ಬಿಟ್ಟಂತಿರಬೇಕು,
ಕ್ರೀ ಭಾವದಲ್ಲಿ ಅರಿವು ನೆಲೆಗೊಂಡು.
ಸಾಳಿಸಸಿಯ ತುದಿಯಲ್ಲಿ ತುಷ ಮೇಲುಗಳೆದು ನಿಂದಂತೆ,
ಕ್ರೀ ನಿಂದು ಅರಿವು ತಲೆದೋರಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ||೨೮೬||

೬೩೦

ಅರಿವು ಘಟದಲ್ಲಿ ನಿಂದು ನುಡಿವನ್ನಕ್ಕ
ಗುರುಲಿಂಗಜಂಗಮದ ಪೂಜೆಯ ಮಾಡಬೇಕು.
ನಾಮರೂಪು ಎಂಬನ್ನಕ್ಕ ಉಭಯವನರಿಯಬೇಕು,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ||೨೮೭||

೬೩೧
ಗುರುಭಕ್ತನಾಗಿದ್ದಲ್ಲಿ ಆ ಗುರುವಿನ ಗುಣವ ವಿಚಾರಿಸಬೇಕು,
ಲಿಂಗಭಕ್ತನಾಗಿದ್ದಲ್ಲಿ ಲಿಂಗದ ಮುಖವನರಿತು ಅರ್ಪಿತ ಅವಧಾನವರಿತಿರಬೇಕು.
ಜಂಗಮಭಕ್ತನಾದಲ್ಲಿ ವಿರಕ್ತಭಾವವನರಸಬೇಕು.
ಇಂತೀ ತ್ರಿವಿಧಗುಣವನರಿದು ಮಾಡುವ ಸದ್ಭಕ್ತನಂಗವೆ
ಸದಾಶಿವಮೂರ್ತಿಲಿಂಗದ ಅಂಗ. ॥೨೮೮॥

೬೩೨
ದಾತ ಗುಣ ವರ್ತಕ ಮಾಟ, ಅರಿವ ಗುಣ ವಿಚಾರ ಮಾಟ.
ಇಂತೀ ದ್ವಯವನರಿತು.
ಕ್ರೀಗೆ ಪದವಾಗಿ ಅರಿವಿಂಗೆ ಆಶ್ರಯವಾಗಿ ಮಾಡುವ ಭಕ್ತನ ಅಂಗ
ಸದಾಶಿವಮೂರ್ತಿಲಿಂಗವು ತಾನೆ. ॥೨೮೯॥

೬೩೩
ಮಾಡುವಂಗೆ ಅರಿವೆ ಕಾರಣ, ಮಾಡಿಸಿಕೊಂಬವಂಗೆ ಅರಿವೆ ಕಾರಣ,
ಸರ್ವಮಯವೆಲ್ಲಕ್ಕು ಅರಿವೆ ಮುಖ್ಯ,
ಸದಾಶಿವಮೂರ್ತಿಲಿಂಗಕ್ಕು ಅರಿವೆ ಕಾರಣ. ॥೨೯೦॥

೬೩೪
ಮರವೆಯಿಂದ ಬ್ರಹ್ಮ ಶಿರವ ಹೋಗಾಡಿಕೊಂಡ,
ಮರವೆಯಿಂದ ನಾರಸಿಂಹ ಶರೀರವ ಸೀಳಿಸಿಕೊಂಡ,
ಮರವೆಯಿಂದ ರುದ್ರ ಅರ್ಧನಾರೀಶ್ವರನಾದ,
ಮರವೆಯಿಂದ ನರಸುರಾದಿಗಳೆಲ್ಲರು ಮರಣಕ್ಕೊಳಗಾದರು.
ಇದು ಕಾರಣ, ಅರಿದು ಉತ್ಪತ್ಯಕ್ಕೊಳಗಾಗದೆ,
ಅರಿದು ಸ್ಥಿತಿಯ ಸುಖಕ್ಕೆ ಸಿಕ್ಕದೆ, ಅರಿದು ಮರಣಕ್ಕೊಳಗಾಗದೆ,
ಅರಿವನರಿವರನರಿ, ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೨೯೧॥

೬೩೫
ಅರಿದು ಮಾಡುವುದು ಗುರುಭಕ್ತಿ, ಅರಿದು ಮಾಡುವುದು ಲಿಂಗಭಕ್ತಿ,
ಅರಿದು ಮಾಡುವುದು ಜಂಗಮಭಕ್ತಿ.
ಅರಿಕೆಯಿಂದ ಕಾಬುದು, ಸದಾಶಿವಮೂರ್ತಿಲಿಂಗವನರಿವುದಕ್ಕೆ ॥೨೯೨॥

೬೩೬

ಗುರುವಿಂಗೆ ಗುರುವಿಲ್ಲದೆ ಅರಿದ ಪರಿಯಿನ್ನೆಂತೊ?
ಲಿಂಗಕ್ಕೆ ಕಳೆ ಶಕ್ತಿಸಂಪುಟವು ಇಲ್ಲದೆ ಅರಿದ ಪರಿಯಿನ್ನೆಂತೊ?
ಜಂಗಮಕ್ಕೆ ಪದಫಲನಾಸ್ತಿಯಾಗಿಲ್ಲದೆ ಪ್ರಸಿದ್ಧನಹ ಪರಿಯಿನ್ನೆಂತೊ?
ಇಂತೀ ಅರಿವನರಿದಲ್ಲಿ ಸದಾಶಿವಮೂರ್ತಿಲಿಂಗವನರಿತುದು. ॥೨೯೩॥

೬೩೭

ಗುರುವಾದಡೂ ಮಲತ್ರಯದಾಸೆ ಉಳ್ಳನ್ನಕ್ಕ ಮಲದೇಹಿ.
ಲಿಂಗವಾದಡೂ ಶಕ್ತಿಸಂಪುಟವುಳ್ಳನ್ನಕ್ಕ ಭವಕ್ಕೊಳಗು.
ಜಂಗಮವಾದಡೂ ತನ್ನಿರವ ತಾನರಿಯದನ್ನಕ್ಕ ಪ್ರಸಿದ್ಧಭಾವಿಯಲ್ಲ.
ಇಂತೀ ಇದನರಿತು ಪೂಜಿಸಬೇಕು,
ತನ್ನಯ ಜನ್ಮವ ನಿವೃತ್ತಿಯ ಮಾಡಿಕೊಳಬಲ್ಲಡೆ.
ಇದೆ ಸದ್ಭಕ್ತನಿರವು, ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೨೯೪॥

೬೩೮

ಗುರುವೆಂದು ಅನುಸರಣೆಯ ಮಾಡಿದಲ್ಲಿ ಲಿಂಗವಿಲ್ಲ,
ಲಿಂಗವೆಂದು ಅನುಸರಣೆಯ ಮಾಡಿದಲ್ಲಿ ಜಂಗಮವಿಲ್ಲ,
ಜಂಗಮವೆಂದು ಅನುಸರಣೆಯ ಮಾಡಿದಲ್ಲಿ ಪಂಚಾಚಾರಶುದ್ಧಕ್ಕೆ ಹೊರಗು.
ತಾ ಮಾಡುವ ಭಕ್ತಿ ತನಗೆ ಹಾನಿಯಾದ ಕಾರಣ,
ತ್ರಿವಿಧಕ್ಕೆ ಅನುಸರಣೆಯ ಮಾಡಲಿಲ್ಲ,
ಸದಾಶಿವಮೂರ್ತಿಲಿಂಗವನರಿವುದಕ್ಕೆ. ॥೨೯೫॥

೬೩೯

ಕುಂಭಕ್ಕೆ ಜಲವ ತುಂಬುವಲ್ಲಿ ಶೋಧಿಸಿದಲ್ಲದೆ ಶುದ್ಧವಿಲ್ಲ.
ತಾ ಭುಂಜಿಸುವ ದ್ರವ್ಯಕ್ಕೆ ಕಲ್ಲು ಕಡ್ಡಿ ಮುಳ್ಳು ಮೊದಲಾಗಿ
ಶೋಧಿಸಿಕೊಂಡಲ್ಲದೆ, ಶುದ್ಧವಿಲ್ಲ[ದೆ] ಕಂಡುಕೊಳಬಹುದೆ?
ಇಂತಿವನರಿತು ಸಂದೇಹದಲ್ಲಿ ಮಾಡುವ ಭಕ್ತಿ
ಅಂಧಕ ಕಣ್ಣಿಯ ಹೊಸದಂದವಾಯಿತ್ತು.
ಸಂದೇಹವ ಬಿಟ್ಟರು,
ಅದು ನಿನ್ನಂಗ, ಸದಾಶಿವಮೂರ್ತಿಲಿಂಗದ ಸಂಗ. ॥೨೯೬॥

೬೪೦

ಗುರುವಿಂಗಾಸೆಯ ಕಲಿಸದೆ,
ಲಿಂಗವ ಬಿಂದುವಿನಲ್ಲಿ ಸಂದೇಹವ ಮಾಡಿಸದೆ,

ಜಂಗಮವ ಸಕಲಸಂಕಲ್ಪದಲ್ಲಿ ಸಂದೇಹವ ಮಾಡಿಸದೆ ನಿಂದುದು
ಪರಮವಿರಕ್ತ ಭಕ್ತನ ಸ್ಥಲ.
ಅದು ತನ್ನಯ ಅಂಗ ಕಾಯ ಜೀವಜ್ಞಾನ ತ್ರಾಣದ ಭೇದ,
ಸದಾಶಿವಮೂರ್ತಿಲಿಂಗಸಂಗದ ಸುಖ. ॥೨೯೭॥

೬೪೧

ತನ್ನ ಅಂಗದ ಮಲಿನವ ತಾನರಿದಂತೆ, ತನ್ನ ಕಂಗಳ ಕಸನ ತಾ ಕಳೆದಂತೆ,
ಗುರುಲಿಂಗಜಂಗಮದ ಅಂಗವೆಂದು ತಾನೆಂದು ಭಿನ್ನಭಾವವ ಮಾಡಲಿಲ್ಲ.
ಅದು ತಾ ಗಳಿಸಿದ ಧನ. ಈ ಮೂರು ತನ್ನಯ ಪ್ರಾಣ,
ಈ ಗುಣ ಸದಾಶಿವಮೂರ್ತಿಲಿಂಗವು ತಾನೆ. ॥೨೯೮॥

೬೪೨

ಏಕಮೂರ್ತಿತ್ರಯೋಭಾಗವಾದುದ ತಾನರಿತ ಮತ್ತೆ,
ತಾನಾರಾಧಿಸುವ ವಸ್ತು ಶುದ್ಧತೆ ಆದಾಗ
ತಾ ಶುದ್ಧವಾಯಿತ್ತೆಂಬುದಕ್ಕೆ ಪ್ರಸಿದ್ಧ.
ಆ ತ್ರಿವಿಧ ತನ್ನಯ ಭಾವಮೂರ್ತಿ ಆದ ಕಾರಣ,
ಹೇಳಿದೆ ಕೇಳಿದೆನೆಂಬುದಿಲ್ಲ,
ಆ ಅಂಗ ಸದಾಶಿವಮೂರ್ತಿಲಿಂಗವು ತಾನೆ. ॥೨೯೯॥

೬೪೩

ಅಂಗದ ಆಪ್ಯಾಯನವ ಆತ್ಮನರಿವಂತೆ,
ಆತ್ಮನ ಸುಖದುಃಖವ ಅಂಗ ತಾಳುವಂತೆ,
ಅಂಗಕ್ಕೂ ಆತ್ಮಕ್ಕೂ ಅನ್ಯಭಿನ್ನವಿಲ್ಲ.
ಪೂಜಿಸುವ ಭಕ್ತ, ಪೂಜಿಸಿಕೊಂಬ ವಸ್ತು ಉಭಯವು
ಸದಾಶಿವಮೂರ್ತಿಲಿಂಗವು ತಾನೆ. ॥೩೦೦॥

೬೪೪

ಸಕಲಬ್ರಹ್ಮಾಂಡ ವಿಷ್ಣುಮಯ, ಉಭಯದ ಆತ್ಮಮಯ ಮಹಾಪ್ರಳಯ,
ಕಾಲಾಂತಕ ರುದ್ರನು ಅನಾದಿವಸ್ತುವ ಅಂಶೀಭೂತವಾಗಿ,
ತ್ರಿವಿಧಮಾರ್ಗಂಗಳಲ್ಲಿ ಜಗದ ಆಗುಚೇಗೆಯನರಿವುದಕ್ಕೆ
ಸದಾಶಿವಮೂರ್ತಿ ಉಮಾಪತಿಯಾದ ಗುಣ ವಿವರ:
ಭಕ್ತಿಭಾವದೇಹಿಕನಾಗಿ ಸಚ್ಚಿದಾನಂದ ನಿಃಕಲಬ್ರಹ್ಮಮೂರ್ತಿ
ಸದಾಶಿವಮೂರ್ತಿಯಲ್ಲದಿಲ್ಲ. ॥೩೦೧॥

೬೪೫

ಅಂಬು ಅಂಬುಜದು[ಭ]ಯ[ದ] ಸಂಗದಲ್ಲಿ
ನಿಃಸಂಗ ಬೆಳಗುತೋರುತ್ತಿದೆ,
ಸದಾಶಿವಮೂರ್ತಿಲಿಂಗದಲ್ಲಿ. ॥೩೦೨॥

೬೪೬

ಅನಾದಿಯಿಂದತ್ತಲಾದ ಅಂತರಾದಿಮಧ್ಯದಲ್ಲಿ,
ನಿಜಸ್ವರೂಪ ನಿಃಕಲ[ವಸ್ತು ಜಗಲೀ]ಲಾಭಾವಿಯಾಗಿ
ತ್ರಿಗುಣಾತ್ಮಕವಾದ ಭೇದಪೂರ್ವಕ ಮುಂತಾದ
ಷಡ್ದರ್ಶನದಲ್ಲಿ ವಿವರಂಗಳಿಗೆ,
ಶೈವ ವೈಷ್ಣವ ಉಭಯಂಗಳಲ್ಲಿ ಶೈ[ವರಾರು], ವೈಷ್ಣವರಾರು,
ಇಂತೀ ಉಭಯರಲ್ಲಿ ಅಡಗುವ ಗುಣ ವಿವರ:
ಶೈವಕ್ಕೆ ಮೂರು, ವೈಷ್ಣವಕ್ಕೆ ಮೂರು, ಉಭಯನಾಮಕುಲಲಯ[ವಹಲ್ಲಿ]
ಶೈವಕ್ಕೆ ದಹನ, ವೈಷ್ಣವಕ್ಕೆ ಸಮಾಧಿ,
ಶರೀರದಹನ ಮುಖವೆಲ್ಲವೂ ರುದ್ರತತ್ವಾಧೀನವಾಗಿಹುದು.
ಶರೀರ ಮುಖ ಸಮಾ[ಧಿ ಆಧೀನ]ವಾಗಿಹುದೆಲ್ಲವೂ ವಿಷ್ಣುಪಕ್ಷವಾಗಿಹುದು.
ಇಂತೀ ಉಭಯಲಯವನರಿತಲ್ಲಿ ಪೂರ್ವಕಕ್ಷೆಯಾಗಿಹುದು.
ಇಂತೀ ಉಭಯವ ಮರೆತಲ್ಲಿ ಉತ್ತ[ರಕಕ್ಷೆಯಾಗಿ]ಹುದು.
ಇಂತೀ ಭೇದಂಗಳರಿತು ಹೊರಗಾಗಿ ನಿಂದಲ್ಲಿ,
ಸದಾಶಿವಮೂರ್ತಿಲಿಂಗದರಿವು ಒಳಗಾಯಿತ್ತಾಗಿಹುದು. ॥೩೦೩॥

೬೪೭

ಗುರುಲಿಂಗಜಂಗಮವೆಂಬ ತ್ರಿವಿಧಮೂರ್ತಿ ಕೂಡಿ
ಭಕ್ತನಂಗದಲ್ಲಿ ನಿಂದು
ತಮ್ಮ ಸಂದನಳಿವುದಕ್ಕೆ ಮಂದಿರವ ಕಟ್ಟಿದ ಅಂದವನರಿಯದೆ,
ಕರ್ತೃಭೃತ್ಯರೆಂದು ಕೊಂಡಾಡಲೇತಕೆ?
ಕಾಯ ಜೀವಕ್ಕೆ ಹಂಗುಂಟೆ ಪ್ರಭುವೇ?
ಭಕ್ತನ ಸತ್ಯಸದಾಚಾರವೆ
ಸದಾಶಿವಮೂರ್ತಿಲಿಂಗದ ಕೃತ್ಯವಾಚರಣೆಯಯ್ಯಾ ಪ್ರಭುವೆ ॥೩೦೪॥

೬೪೮

ನೋಡಿಹೆನೆಂದಡೆ ನೋಡಲಿಲ್ಲ, ಕೂಡಿಹೆನೆಂದಡೆ ಕೂಡಲಿಲ್ಲ.
ಮುಂದೆ ಬೇಡಿಹೆನೆಂದಡೆ ಮೂರ್ತಿಯಲ್ಲದ ಕಾರಣ,
ಸದಾಶಿವಮೂರ್ತಿಲಿಂಗವು ತಾನೆ. ॥೩೦೫॥

೬೪೯

ಮುನ್ನ ಬಯಲೆಂಬುದೇನೋ?
ತನ್ನಲ್ಲಿ ತಾನಾದವಂಗೆ ಮುಂದು ಹಿಂದೆಂಬುದಿಲ್ಲ.
ಸಂಗನಿಸ್ಸಂಗವೆಂಬುದುನಿಂದಲ್ಲಿ, ಸದಾಶಿವಮೂರ್ತಿಲಿಂಗವ ತಾನೆ. ॥೩೦೬॥

೬೫೦

ವೇಷವರಿತು ಗುರುವಾಗಬೇಕು, ವೇಷವರಿತು ಚರವಾಗಬೇಕು,
ಬ್ರಹ್ಮವರಿತು ಲಿಂಗವಾಗಬೇಕು, ಸಕಲಕೃತಭೇದವರಿತು ವಿರಕ್ತನಾಗಬೇಕು.
ಇಂತೀ ಸಕಲಭ್ರಮೆಯನಡಗಿಸಿ ನಿಂದಲ್ಲಿ
ಸದಾಶಿವಮೂರ್ತಿಲಿಂಗವನರಿದುದು. ॥೩೦೭॥

೬೫೧

ಶಿವನಿಂದಲುದಯಿಸಿತ್ತು ವಿಶ್ವ, ವಿಶ್ವದಿಂದಲುದಯಿಸಿತ್ತು ಸಂಸಾರ,
ಸಂಸಾರದಿಂದಲುದಯಿಸಿತ್ತಜ್ಞಾನ, ಅಜ್ಞಾನದಿಂದಲುದಯಿಸಿತ್ತು ಮರವೆ,
ಮರವೆಯಿಂದಲುದಯಿಸಿತ್ತು ಆಸೆ, ಆಸೆಯಿಂದಲುದಯಿಸಿತ್ತು ರೋಷ,
ರೋಷದಿಂದಲುದಯಿಸಿತ್ತು ದುಃಖ,
ದುಃಖದಿಂದ ಮೂರೂ ಲೋಕವೆಲ್ಲವು ಮೂರ್ಛೆಯಾಗಿ
ಭವಬಂಧನಕ್ಕೊಳಗಾದರು,
ಅಲ್ಲಿ ನಮ್ಮ ಸದಾಶಿವಮೂರ್ತಿಲಿಂಗವನರಿಯದ ಕಾರಣ. ॥೩೦೮॥

೬೫೨

ಸದ್ಯೋಜಾತಮುಖವೆ ಎನಗೆ ಬಸವಣ್ಣನಯ್ಯಾ,
ವಾಮದೇವಮುಖವೆ ಎನಗೆ ಚೆನ್ನಬಸವಣ್ಣನಯ್ಯಾ,
ಅಘೋರಮುಖವೆ ಎನಗೆ ಮಡಿವಾಳಯ್ಯನಯ್ಯಾ,
ತತ್ಪುರುಷಮುಖವೆ ಎನಗೆ ಸಿದ್ಧರಾಮಯ್ಯನಯ್ಯಾ,
ಈಶಾನಮುಖವೆ ಎನಗೆ ಪ್ರಭುದೇವರಯ್ಯಾ,
ಹೃದಯದ ಮುಖವೆ ಎನಗೆ ಗಣಂಗಳಯ್ಯಾ.

ಇಂತಿವರ ಶ್ರೀಚರಣದಲ್ಲಿ ಉರಿಯುಂಡ ಕರ್ಪುರದಂತೆ
ಬೆರಸಿದೆನಯ್ಯಾ ಸದಾಶಿವಮೂರ್ತಿಲಿಂಗದಲ್ಲಿ. ॥೩೦೯॥

*

ಅವಸರದ ರೇಕಣ್ಣಗಳ ವಚನ

೬೫೩

ಭಕ್ತಸ್ಥಲಕ್ಕೆ ವಿಶ್ವಾಸ ಶ್ರದ್ಧೆ ಸನ್ಮಾರ್ಗ,
ಮಾಹೇಶ್ವರಸ್ಥಲಕ್ಕೆ ಅಪರಾಧವಂ ಮಾಡದೆ
ನಿಂದೆಗೆ ಒಡಲಲ್ಲದೆ ಅನುಸರಣೆಯ ಕಂಡು ಕೇಳಿ ತಾಳದೆ,
ಪ್ರಸಾದಿಸ್ಥಲಕ್ಕೆ ಶುದ್ಧ-ಸಿದ್ಧ-ಪ್ರಸಿದ್ಧ-ಪ್ರಸನ್ನವೆಂಬುದನರಿಯದೆ
ಮಲಿನ ಅಮಲಿನವೆಂಬುದ ಕಾಣದೆ
ಚಿಕಿತ್ಸೆ ಜುಗುಪ್ಸೆಯೆಂಬುದ ಭಾವಕಿಲ್ಲದೆ,
ಪ್ರಾಣಲಿಂಗಿಸ್ಥಲಕ್ಕೆ ಅರ್ಪಿತ ಅನರ್ಪಿತಂಗಳನರಿದು
ರಸವನೀಂಟಿದ ಘಟದಂತೆ,
ಅಸಿಯ ಮೊನೆಗೆ ಬಂದು ನಿಲುವಂತೆ,
ಶರಣಸ್ಥಲಕ್ಕೆ ತೊಟ್ಟುಬಿಟ್ಟ ಫಳ
ಮರುತ ಸಂಚಾರಿಸಿದಲ್ಲಿಯೆ ಶಾಖೆಯ ಬಿಡುವಂತೆ,
ಸ್ತುತಿನಿಂದೆಗಳಲ್ಲಿ ರಾಗವಿರಾಗನಾಗಿ,
ಐಕ್ಯಸ್ಥಲಕ್ಕೆ ಉರಿಕೊಂಡ ಕರ್ಪುರದಂತೆ,
ಭ್ರಮರ ಅನುಭವಿಸಿದ ಗಂಧದಂತೆ,
ಭೂಸ್ಥಾಪಿತದಂತೆ, ಅನಲಕಾಷ್ಠಪಾಷಾಣದಂತೆ,
ದೃಷ್ಟವ ಕಾಬನ್ನಕ್ಕ ಷಟ್‌ಸ್ಥಲಸಂಬಂಧ.
ಇಂತೀ ಸ್ಥಲಂಗಳನಾರೋಪಿಸಿದಲ್ಲಿ ಸದ್ಯೋಜಾತಲಿಂಗವು ಸಂಬಂಧವಪ್ಪನು ॥೧॥

೬೫೪

ಭಕ್ತಸ್ಥಲ ಪೃಥ್ವಿಯಂತೆಂದಲ್ಲಿ, ಮಾಹೇಶ್ವರಸ್ಥಲ ಅಪ್ಪುವಿನಂತೆಂದಲ್ಲಿ,
ಪ್ರಸಾದಿಸ್ಥಲ ಅಗ್ನಿಯಂತೆಂದಲ್ಲಿ, ಪ್ರಾಣಲಿಂಗಿಸ್ಥಲ ವಾಯುವಿನಂತೆಂದಲ್ಲಿ,
ಶರಣಸ್ಥಲ ಆಕಾಶ ಆವರಣದಂತೆಂದಲ್ಲಿ,
ಐಕ್ಯಸ್ಥಲ ಮಹದಾಕಾಶದ ಮಹಾಬೆಳಗಿನ
ಕಳೆಯ ಒಳಕೊಂಡಿಪ್ಪುದೆಂದಲ್ಲಿ-
ಇಂತೀ ಷಟ್ಸ್ಥಲಕ್ಕೆ ಒಂದ ನೆಮ್ಮಿ ಒಂದನತಿಗಳೆದೆಹೆನೆಂದಡೆ,
ಸಂಶಯಕ್ಕೆ ಸಂಬಂಧ,
ಅದು ಸದ್ಯೋಜಾತಲಿಂಗಕ್ಕೆ ಅಸಂಬಂಧವಾಗಿಹುದು. ॥೨॥

೬೫೫

ಭಕ್ತಸ್ಥಲ ಘಟರೂಪ, ಮಾಹೇಶ್ವರಸ್ಥಲ ಆತ್ಮರೂಪ,
ಪ್ರಸಾದಿಸ್ಥಲ ಜ್ಞಾನರೂಪ,
ಇಂತೀ ತ್ರಿವಿಧಸ್ಥಲ ಭಕ್ತಿರೂಪ.
ಪ್ರಾಣಲಿಂಗಿಸ್ಥಲ ಜ್ಞಾತೃರೂಪು, ಶರಣಸ್ಥಲ ಜ್ಞೇಯರೂಪ,
ಐಕ್ಯಸ್ಥಲ ಸರ್ವಮಯಜ್ಞಾನರೂಪ.
ಇಂತೀ ತ್ರಿವಿಧಸ್ಥಲ ಏಕವಾಗಿ ನಿಂದುದು ಕರ್ತೃಸ್ವರೂಪ.
ಇಂತೀ ಷಟ್ಸ್ಥಲ ಉಭಯವಾಗಿ ಕಾಯದಲ್ಲಿ ಆತ್ಮ ಘಟಿಸಿಪ್ಪಂತೆ,
ಆತ್ಮನ ಚೇತನದಿಂದ ಘಟ ಅನುಭವಿಸುವಂತೆ,
ಇಂತೀ ದ್ವಂದ್ವವೊಂದಾಗಿ ನಿಂದರಿದಲ್ಲಿ
ಷಟ್ಸ್ಥಲ ಆರೋಪ ಸದ್ಯೋಜಾತಲಿಂಗಕ್ಕೆ. ॥೩॥

೬೫೬

ಭಕ್ತಸ್ಥಲ ಪೃಥ್ವಿರೂಪೆಂದಲ್ಲಿ ಸರ್ವಮಯ ಅಧೀನನಾಗಿರಬೇಕು.
ಮಾಹೇಶ್ವರಸ್ಥಲ ಅಪ್ಪುರೂಪೆಂದಲ್ಲಿ ಚರಸ್ಥಾವರಾದಿಕಂಗಳಲ್ಲಿ
ಸರ್ವಸಾರಮಯನಾಗಿರಬೇಕು.
ಪ್ರಸಾದಿಸ್ಥಲ ಅಗ್ನಿರೂಪಾದಲ್ಲಿ ತಾನೆನ್ನದೆ ಸೋಂಕಿದುದೆಲ್ಲ
ದಗ್ಧಸ್ವರೂಪವಾಗಿರಬೇಕು.
ಪ್ರಾಣಲಿಂಗಿಸ್ಥಲ ವಾಯುವಂತಾಗಬೇಕೆಂಬಲ್ಲಿ
ಸುಗುಣ ದುರ್ಗುಣ ರೋಚಕ ಅರೋಚಕವಿಲ್ಲದೆ
ಆವಾವ ರೂಪಿನಲ್ಲಿಯೂ ಸಂಚರಿಸಲಿಕ್ಕೆ ಪರಿಪೂರ್ಣವಾಗಿಪ್ಪ ತೆರದಂತೆ.
ಶರಣಸ್ಥಲ ಆಕಾಶದಂತೆ ಆಗಬೇಕೆಂದಲ್ಲಿ
ಕುಶಬ್ದ ಸುಶಬ್ದಂಗಳೆಂಬಲ್ಲಿ ಭಿನ್ನಭಾವವಿಲ್ಲದೆ
ಉಭಯ ಧೂಮ್ರಂಗಳ ಕವಳೀಕರಿಸಿಕೊಂಡು ಭಾವರಹಿತವಾಗಿಪ್ಪುದು.
ಐಕ್ಯಸ್ಥಲ ಮಹದಾಕಾಶದಂತೆ ಆಗಬೇಕೆಂಬಲ್ಲಿ
ಬೆಳಗಿನ ಕಳೆ ಆವರಣದಲ್ಲಿ ಅಳಿದಂತೆ
ಕುಂಭದ ವೆಜ್ಜದಲ್ಲಿ ನೀರು ಇಂಗಲಿಕ್ಕೆ ತನ್ನ ಬಿಂಬ ಅಲ್ಲಿಯೆ ಹಿಂಗಿದಂತೆ
ಸ್ವಪ್ನದಲ್ಲಿ ದೃಷ್ಟವ ಕಂಡು ಎಚ್ಚತ್ತಲ್ಲಿ ಅದೃಶ್ಯವಾದಂತೆ
ವಾಯು ಬೆಳಗಕೊಂಡು ಎಯ್ದೆ
ವಾಯುವಿನ ಅಂಗದಲ್ಲಿಯೆ ನಿಶ್ಚಯವಾದಂತೆ,
ಇದು ಷಟ್‌ಸ್ಥಲನಿರ್ವಾಹ, ಸದ್ಯೋಜಾತ ಲಿಂಗಕ್ಕೆ ಏಕೀಕರಕೂಟ. ॥೪॥

೬೫೭

ಏಕರೂಪವಾದ ತೆರನ ತಿಳಿದು,
ಆ ಏಕರೂಪ ತ್ರಿವಿಧಸಂಬಂಧಿಯಾಗಿ,
ಆ ತ್ರಿವಿಧಸ್ಥಲದಲ್ಲಿ ಕರ್ತೃ ತ್ರಿವಿಧ ಕೂಡಲಾಗಿ
ಕಾಯ ಜೀವದಂತೆ ಉಭಯಸ್ಥಲವಾಯಿತ್ತು.
ಉಭಯಸ್ಥಲ ಪ್ರಥಮಸ್ಥಲದಲ್ಲಿ ಕೂಡಲಿಕ್ಕೆ ಏಕಸ್ಥಲ,
ಐಕ್ಯ ಸದ್ಯೋಜಾತಲಿಂಗದಲ್ಲಿ. ॥೫॥

೬೫೮

ಅಂಡ ಪಿಂಡವಾಗಿ, ಪಿಂಡಾಂಡವನೊಳಕೊಂಡು
ವಿಚ್ಛಿನ್ನವಾದ ಭೇದವ ತಿಳಿದು,
ತ್ರಿಗುಣಭೇದದಲ್ಲಿ ಪಂಚಭೂತಿಕದಲ್ಲಿ ಪಂಚವಿಂಶತಿತತ್ವಂಗಳಲ್ಲಿ,
ಏಕೋತ್ತರಶತಸ್ಥಲ ಮುಂತಾದ ಭೇದಂಗಳ ತಿಳಿದು,
ಆವಾವ ಸ್ಥಲಕ್ಕೂ ಸ್ಥಲನಿರ್ವಾಹವ ಕಂಡು,
ಬಹುಜನಂಗಳು ಒಂದೆ ಗ್ರಾಮದ ಬಾಗಿಲಲ್ಲಿ ಬಂದು
ತಮ್ಮ ತಮ್ಮ ನಿಳಯಕ್ಕೆ ಸಂದು
ಗ್ರಾಮದ ಸುಖ-ದುಃಖವ ಅನುಭವಿಸುವಂತೆ,
ಇಂತೀ ಪಿಂಡಸ್ಥಲವನ್ನಾಚರಿಸಿ ಆತ್ಮ ವೃಥಾ ಹೋಹುದಕ್ಕೆ ಮೊದಲೆ
ಸದ್ಯೋಜಾತಲಿಂಗವ ಕೂಡಬೇಕು. ॥೬॥

೬೫೯

ಸದ್ಗುರುವಪ್ಪ ಅಂಡದಲ್ಲಿ ಸದಾತ್ಮವಪ್ಪ ಶಿಷ್ಯ ಪಿಂಡಿತವಾಗಿ,
ಆ ಪಿಂಡಕ್ಕೆ ದಿವ್ಯತೇಜೋಪ್ರಕಾಶವಪ್ಪ ಆತ್ಮ ಪುಟ್ಟಲಿಕ್ಕಾಗಿ,
ಗುರುವಿನ ಕರಂಡವಳಿದು, ಆ ಶಿಷ್ಯನ ಪಿಂಡವಳಿದು,
ಮರದಲ್ಲಿ ಉರಿಹುಟ್ಟಿ ಮರನೆಂಬುದು ಕೆಟ್ಟು ಕೆಂಡವಾದಂತೆ,
ಕೆಂಡದ ಬೆಂಬಳಿಯಲ್ಲಿ ನಂದದ ದೀಪವ ಕಂಡು.
ಕುಂದದ ಬೆಳಗಿನಲ್ಲಿ ಕೂಡಬೇಕು ಸದ್ಯೋಜಾತಲಿಂಗವ. ॥೭॥

೬೬೦

ಸ್ವಯದಿಂದ ಪ್ರಕಾಶ, ಪ್ರಕಾಶದಿಂದ ಲಿಂಗ, ಲಿಂಗದಿಂದ ಶಿಷ್ಯ,
ಶಿಷ್ಯನಿಂದ ಗುರು, ಗುರುವಿನಿಂದ ಗುರುತ್ವ,
ಗುರುತ್ವದಿಂದ ಸಕಲವೈಭವಂಗಳ ಸುಖ.
ಈ ಗುಣ ಅವರೋಹಾರೋಹಾಗಿ ಬಂದು,

ಆ ವಸ್ತು ವಸ್ತುಕವಾಗಿ ಬಂದುದನರಿದು, ಪಿಂಡಜ್ಞಾನಸ್ಥಲವ ಕಂಡು,
ರತ್ನ ರತ್ನ ಕೂಡಿದಂತೆ, ರತಿ ರತಿ ಬೆರಸಿದಂತೆ,
ಸುಖ ಸುಖವನಾಧರಿಸಿದಂತೆ, ಬೆಳಗು ಬೆಳಗಿಂಗೆ ಇದಿರಿಟ್ಟಂತೆ,
ಅಂಡಪಿಂಡಜ್ಞಾನತ್ರಿವಿಧ ನೀನಲಾ, ಸದ್ಯೋಜಾತಲಿಂಗದ ಲೀಲಾಭಾವ ||೮||

೭೬೧
ಗುರುವಿಂಗೆ ಲಿಂಗ ಬಂದು ಗುರುವಾದುದನರಿದು
ಮತ್ತರಿಯದೆ ಕೊಟ್ಟನಲ್ಲಾ, ಶಿಷ್ಯನೆಂದು ಆ ಲಿಂಗವ.
ಗುರುವಾರೆಂಬುದನರಿಯದ ನಾ, ಶಿಷ್ಯನೆಂದು ಕಟ್ಟಿದೆನಲ್ಲಾ ಆ ಲಿಂಗವ.
ಆವ ಬೀಜವ ಬಿತ್ತಿದಡೂ ಆ ಬೀಜವಪ್ಪುದಲ್ಲದೆ ಬೇರೊಂದಪ್ಪುದೆ?
ಜ್ಯೋತಿ ಜ್ಯೋತಿಯ ಮುಟ್ಟಿದಂತೆ ಇದಿರೆಡೆಯಿಲ್ಲದೆ
ಗುರುಕರಜಾತನ ಮಾಡಬೇಕು.
ನಾನು ಕರ್ತು, ಅವನು ಭೃತ್ಯನೆಂದಲ್ಲಿ ಗುರುವಾದನಲ್ಲದೆ,
ಅಘಹರ ಶ್ರೀಗುರುವಾದುದಿಲ್ಲ.
ಜ್ಞಾನದೀಕ್ಷೆ ಸಂಬಂಧ ಸದ್ಯೋಜಾತಲಿಂಗಕ್ಕೆ. ||೯||

೭೬೨
ಪರುಷ ಲೋಹವ ಸೋಂಕಿದಲ್ಲಿ, ಆ ಗುಣವಳಿದು, ಹೇಮವಾಯಿತ್ತಲ್ಲದೆ,
ಪುನರಪಿ ಶುದ್ಧಾತ್ಮವಾದುದಿಲ್ಲ.
ಗುರು ಲಿಂಗವೆಂದು ಕೊಟ್ಟಡೆ ಅಂಗದಲ್ಲಿ ಬಂಧವಾಯಿತ್ತಲ್ಲದೆ,
ಸರ್ವಾಂಗ ಆತ್ಮನಲ್ಲಿ ಲೀಯವಾದುದಿಲ್ಲ.
ಇಂತಿದು ಕಾರಣದಲ್ಲಿ,
ಕೆಂಡದ ಮೇಲೆ ಕಟ್ಟಿಗೆಯ ಹಾಕಿದಡೆ ಮೊತ್ತುವುದಲ್ಲದೆ,
ನಂದಿದ ಪ್ರಕಾಶಕ್ಕೆ ಅರಳೆಯ ತಂದಿರಿಸಿದಡೆ ಹೊತ್ತಿದುದುಂಟೆ?
ಇದು ಕಾರಣ,
ಸಂಸಾರಪಾಶದಲ್ಲಿ ಬಿದ್ದ ಗುರು ಶಿಷ್ಯನ ಈಷಣತ್ರಯವ ಬಿಡಿಸಬಲ್ಲನೆ?
ಇಂತೀ ಗುರುಸ್ಥಲನಿರ್ವಾಹಸಂಪಾದನೆ,ಸದ್ಯೋಜಾತಲಿಂಗಕ್ಕೆ. ||೧೦||

ಶಿಷ್ಯನ ವಿಶ್ವಾಸಸ್ಥಲ:

೭೬೩
ಬೇವಿನ ಮರದಲ್ಲಿ ಕುಳಿತು ಬೆಲ್ಲವ ಮೆದ್ದಡೆ ಕಹಿಯಪ್ಪುದೆ?
ಅಂಧಕ ಅಮೃತವನೀಂಟಿದಲ್ಲಿ ಹುಳಿಯಪ್ಪುದೆ?

ಪಂಗುಳ ಪಯಣಕ್ಕೆ ಬಟ್ಟೆ[ಯಿ]ಲ್ಲಾ ಎಂದಡೆ ಕೊಂದವರುಂಟೆ ಅವನನು?
ಇದು ಕ್ರಿಯಾಶ್ರದ್ಧೆ, ಶುಶ್ರೂಷಾಭಾವ ಸದ್ಯೋಜಾತಲಿಂಗಕ್ಕೆ. ॥೧೧॥

೬೬೪

ಮಧುರ ಚೂರ್ಣಕ್ಕೆ ಕಠಿಣದ ಪದರ ಉಂಟೆ?
ವಿಶ್ವಾಸದಲ್ಲಿ ಪೂಜಿಸುವಾತಂಗೆ
ಉತ್ತಮ ಕನಿಷ್ಠ ಮಧ್ಯಮವೆಂದು ಲಕ್ಷಿಸಲುಂಟೆ?
ಮಾಹೇಶ್ವರ ಅರ್ಚನೆಯ ಮಾಡುವಲ್ಲಿ ಮಹಾದೇವ ತಪ್ಪದೆಯಿಪ್ಪ,
ಇದು ಭಕ್ತಿವಿಶ್ವಾಸಸ್ಥಲ ಸದ್ಯೋಜಾತಲಿಂಗಕ್ಕೆ. ॥೧೨॥

೬೬೫

ಮೊನೆಯಿಲ್ಲ[ದೆ] ಮುಂಡವ ಹಿಡಿದು ಇರಿದಲ್ಲಿ
ಗಾಯಕ್ಕೆ ಕುರುಹುಂಟೆ?
ದೇವಪದನಿಷ್ಠೆಯಿಲ್ಲದಲ್ಲಿ ಅರ್ಚಿಸಿ ಪೂಜಿಸಲಿಕ್ಕೆ ದೃಷ್ಟವುಂಟೆ?
ಇದು ಕಾರಣದಲ್ಲಿ
ಕ್ಷುಧೆಗೆ ಅನ್ನ, ಸಮಯಕ್ಕೆ ಕ್ಷಮೆ, ನೆರೆ ಅರಿದವರಲ್ಲಿ ಹೊರೆಯಿಲ್ಲದ ಕೂಟ,
ಭಕ್ತಿ ಜ್ಞಾನ ಉಭಯಸ್ಥಲಲೇಪ ಸದ್ಯೋಜಾತಲಿಂಗಕ್ಕೆ. ॥೧೩॥

೬೬೬

ಶುದ್ಧಕರ್ಮವಿಲ್ಲದ ಭಕ್ತಿ, ವರ್ಮವಿಲ್ಲದ ವಿರಕ್ತಿ,
ಸದಾಸನ್ನದ್ಧವಿಲ್ಲದ ಪೂಜೆ, ವೃಥಾಹೋಹುದಕ್ಕೆ ಇದೆ ಪಥ.
ಅನ್ನ ಉದಕ ಹೆಣ್ಣು ಹೊನ್ನು ಮಣ್ಣನಿತ್ತು
ವರ್ಮವ ಮುಟ್ಟದೆ ಸತ್ಕರ್ಮವನರಿಯದೆ
ಕುನ್ನಿ ಧ್ಯಾನಿಸಿ ಹೇಯವೆಂದರಿದು ತಲೆಗೊಡಹಿದಲ್ಲಿ ಮರೆದಂತಾಗದೆ,
ನಿಜನಿಶ್ಚಯವನರಿದು ಕುರುಹಿಡಬೇಕು, ಸದ್ಯೋಜಾತಲಿಂಗವ. ॥೧೪॥

ಪೂರ್ವಕಕ್ಷೆ:

೬೬೭

ಷಟ್‌ಸ್ಥಲ ಮುಂತಾದ ಪಂಚವಿಂಶತಿತತ್ವ,
ಏಕೋತ್ತರಶತಸ್ಥಲ ಮುಂತಾದ ಕ್ರಿಯಾಧರ್ಮಂಗಳಲ್ಲಿ
ಆಚರಿಸುವುದು ಪೂರ್ವಕಕ್ಷೆಯ ಭೇದ.
ಉತ್ತರಕಕ್ಷೆಯಲ್ಲಿ ಲಕ್ಷಿಸಿ ನೋಡಿಹೆನೆಂದಡೆ,
ದ್ವೈತಾದ್ವೈತಂಗಳ ತಿಳಿದು, ಸಕಲ ನಿಃಕಲವ ವಿಚಾರಿಸಿ,

ಸ್ಥೂಲ ಸೂಕ್ಷ್ಮ ಕಾರಣ ತನುತ್ರಯಂಗಳ ಕಂಡು,
ಇಷ್ಟಕಾಮ್ಯಮೋಕ್ಷಂಗಳ ಗೊತ್ತಗೆಟ್ಟು
ತೂರ್ಯಾತುರೀಯವೆಂಬವ ಪರಿಹರಿಸಿ,
ತೀತ ಅತೀತವಪ್ಪುದನು ಕುರುಹಿಟ್ಟು,
ಸುರಾಳ ನಿರಾಳ ನಿರವಯಸ್ಥಾನವ ಭೇದಿಸಿ ವೇದಿಸಿ,
ಘೃತಪಾನವ ಸ್ವೀಕರಿಸಿದ ನಾಲಗೆಯಂತೆ ಬಂಧವಿಲ್ಲದೆ
ತತ್ವಮಸಿಯೆಂಬ ಭಿತ್ತಿಯ ಮೆಟ್ಟದೆ
ಜಲವ ಹೊಯಿದಡೆ ಆ ಜಲಕ್ಕೆ ಆಯುಧದ ಕಲೆದೋರದಂತೆ
ನಿಂದ ನಿಜದೊಳಗು ಉತ್ತರಕಕ್ಷೆಯ ಭೇದ.
ಇಂತೀ ಉಭಯಕಕ್ಷೆಯಲ್ಲಿ ರಾಗವಿರಾಗವನರಿದು,
ನಿಶ್ಶಬ್ದ ನಿರ್ಲೇಪವಾಗಿ ಸದ್ಯೋಜಾತಲಿಂಗವ ಕೂಡಬೇಕು. ॥೧೫॥

೬೬೮

ಇಂತೀ ವರ್ಮಭೇದಂಗಳ ಸ್ಥಲವಿವರಂಗಳ,
ತತ್ವಭೇದಂಗಳ ನಿರೀಕ್ಷಿಸಿ ನೋಡಿಹೆನೆಂದಡೆ,
ಭೇದಕ್ಕೆ ವಿಭೇದವಾಗಿ ಕಾಬ ಹೊರೆಗೆ ಕಟ್ಟಣೆಯಿಲ್ಲ.
ಹಿಡಿವಲ್ಲಿ ಅಡಿಯ ಕಂಡು, ಬಿಡುವಲ್ಲಿ ಬೇರ ಕಿತ್ತು,
ಬಿಡುಮುಡಿಯನರಿದಲ್ಲಿ ಉಭಯಕಕ್ಷೆಯೆ ಲೋಪ
ಸದ್ಯೋಜಾತಲಿಂಗವನರಿದಲ್ಲಿ. ॥೧೬॥

೬೬೯

ತಡೆ ದಾಡಾಬಂಧನಗಳಿಂದ ಹೋಗ[ದ], ಹಲುದಾಗದ ಸರ್ಪನಂತೆ,
ಕ್ರಿಯಾಧರ್ಮಂಗಳಲ್ಲಿ ಆವರ್ಚಿಸಿ ಕಟ್ಟಿಗೆ ತಪ್ಪದಿಪ್ಪುದು ಸದ್ಭಕ್ತಿಸ್ಥಲ.
ಆ ಭಕ್ತನ ಹೃತ್ಕಮಲಮಧ್ಯದಲ್ಲಿ ನಿಂದು, ತ್ರಿವಿಧಮಲತ್ರಯವ ನಿವಾರಿಸಿ,
ಆಗು ಚೇಗೆಯ ಮರೆದು, ವಂದನೆ ನಿಂದೆಗೆ ಮೈಗೊಡದೆ,
ಕುಸುಮ-ಗಂಧದಂತೆ, ರ[ವಿ]-ಶಿಲೆಯಂತೆ, ಸವಿ-ಸಾರದಂತೆ
ತಲೆದೋರದೆ ನಿಂದುದು ವಿರಕ್ತವೇಷ.
ಅದು ಕಾಯ-ಜೀವದಂತೆ, ಜ್ಞಾತೃ-ಜ್ಞೇಯಭೇದದಂತೆ,
ಪೂಜಕ-ಪೂಜೆಗೈತ ಉಭಯದ ಭೇದ ಐಕ್ಯ,
ಸದ್ಯೋಜಾತಲಿಂಗದಲ್ಲಿ. ॥೧೭॥

೬೭೦

ಭಕ್ತಿಯೆಂಬುದು ಅಪ್ರಮಾಣು ನೋಡಾ.
ಭಕ್ತನಾದಡೆ ಸರ್ವಗುಣಸಂಪನ್ನನಾಗಿ

ಕರ್ತೃ ಕಾಮಿಸಿದಲ್ಲಿ ಕಾಣದಂತಿರಬೇಕು.
ಕರ್ತೃ ಕ್ರೋಧಿಸಿದಲ್ಲಿ ಎನ್ನ ನಲ್ಲ ಪರಾಧೀನವೆಂದಂತಿರಬೇಕು.
ಕರ್ತೃ ಲೋಭಿಸಿದಲ್ಲಿ ತನ್ನ ಬೈಕೆಯ ತಾನೊಯ್ದನೆಂದರಿಯದಿರಬೇಕು.
ಹೀಗಲ್ಲದೆ, ಇವ ತಾಳಲರಿಯದೆ ಮಾಡುವ ಮಾಟ
ಆತ ಭಕ್ತನಲ್ಲ, ದಾತೃಸಂಬಂಧಿ.
ಇದು ಕಾರಣ ಸದ್ಯೋಜಾತಲಿಂಗವನರಿದು ಮುಟ್ಟಬೇಕು. ॥೧೮॥

೬೭೧
ಒಡೆಯನಂತೆ! ತುಡುಗುಣಿಯಂತೆ ಕಳಬಲ್ಲನೆ?
ಹಿರಣ್ಯಕ್ಕೆ ಒಡೆಯನಂತೆ! ಉಪಮೆಯಿಂದ ಅಪಹರಿಸಬಲ್ಲನೆ?
ಸುಚಿತ್ತನಂತೆ! ದುರ್ವಾಸನೆಯಲ್ಲಿ ಲಕ್ಷಿತನಪ್ಪನೆ?
ಇದು ಕರ್ತೃಭಾವವಲ್ಲ, ಭಕ್ತಧ್ಯಾನಭೇದ.
ಈ ಗುಣ ಸದ್ಯೋಜಾತಲಿಂಗಕ್ಕೆ ದೂರವಪ್ಪುದು. ॥೧೯॥

೬೭೨
ಲಿಂಗವೆ ಅಂಗವಾದ ಮತ್ತೆ ಮುಟ್ಟಿಸಿಕೊಂಬುವರಿನ್ನಾರು?
ಲಿಂಗವೆ ಪ್ರಾಣವಾದ ಮತ್ತೆ ಅರ್ಪಿಸಿಕೊಂಬುವರಿನ್ನಾರು?
ಅಂಗ ಲಿಂಗವೆಂದಡೆ ತನು ಪ್ರಾಪ್ತಿಗೆ ಒಳಗು.
ಮನ ಲಿಂಗವೆಂದಡೆ ಅದು ಭವಕ್ಕೆ ಬೀಜ.
ಈ ಉಭಯದ ಅಳಿವುಳಿವ ತಿಳಿದು, ಅಂಗ ಮನಸ್ಸು ಒಂದುಗೂಡಿ,
ಪುಂಜವ ಬೆಗಡಿಸುವ ವಜ್ರದ ಮೊನೆಯಂತೆ
ಲಿಂಗದ ಭೇದಗೂಡಿಯೆ ಅಂಗ ನಿರಿಯಾಣವಾದಲ್ಲಿ
ಅದು ಲಿಂಗಾಂಗಿಯ ಸ್ಥಲ ಸದ್ಯೋಜಾತಲಿಂಗಕ್ಕೆ. ॥೨೦॥

೬೭೩
ಮುಟ್ಟುವುದು ತಟ್ಟುವುದು ಸೋಂಕುವುದು ಸುಳಿವುದು
ಲಿಂಗ ಮುಂತೆಂಬಲ್ಲಿ ಅಂಗ ಹಿಂಚೆಂಬಲ್ಲಿ,
ಮುಂದುಹಿಂದಣ ಉಭಯವನರಿವುದಕ್ಕೆ ಸಂದೇಹಾಸ್ಪದವಾದಲ್ಲಿ
ಅದು ಅನರ್ಪಿತಭೇದ ಸದ್ಯೋಜಾತಲಿಂಗಕ್ಕೆ. ॥೨೧॥

೬೭೪
ಪರುಷರಸ ಲೋಹವ ವೇಧಿಸಬಲ್ಲುದಲ್ಲದೆ
ಹೇಮವ ವೇಧಿಸಬಲ್ಲುದೆ?

ಅದು ಲೋಹಕ್ಕೆ ಅರಸಲ್ಲದೆ ಹೇಮಕ್ಕೆ ಅರಸಲ್ಲ.
ಇಂತೀ ಉಭಯಸ್ಥಲ.
ಅಂಗ ಲಿಂಗವಾಗಬಲ್ಲಡೆ, ಲಿಂಗ ಅಂಗವ ಗ್ರಹಿಸಬಲ್ಲಡೆ
ಅದು ಸದ್ಯೋಜಾತಲಿಂಗದ ಕೂಟ. ॥೨೨॥

೬೭೫
ಪರುಷರಸ ನಿರ್ಧರವಾದಲ್ಲಿ ಹೇಮವ ವೇಧಿಸಿ,
ಹೇಮವಳಿದು ಪರುಷ ತಾನಾಗಬಲ್ಲಡೆ ಅದು ಪರುಷರಸಸಿದ್ಧಿ.
ಗುರು ಮುಟ್ಟಿದ ಶಿಷ್ಯ ಗುರುವಾಗಬಲ್ಲಡೆ,
ಲಿಂಗ ಮುಟ್ಟಿದ ಆತ್ಮ ಲಿಂಗವಾಗಬಲ್ಲಡೆ,
ಆ ಅರಿವು ಅರಿವ ಭೇದಿಸಿದಂತೆ,
ದೃಗ್ದೃಶ್ಯಕ್ಕೆ ಒಡಲು ಏಕವಾಗಿ ಕಾಬಂತೆ.
ಆ ಗುಣ ಸದ್ಯೋಜಾತಲಿಂಗವ ಕೂಡಿದ ಭೇದ. ॥೨೩॥

೬೭೬
ಕಳ್ಳನ ದೃಷ್ಟವ ದಿವ್ಯದೃಷ್ಟದಿಂದ ಅರಿವಂತೆ,
ವಂಚಕನ ಸಂಚವ ಹೆಣ್ಣು ಹೊನ್ನು ಮಣ್ಣು ತೋರಿ ಗನ್ನದಲ್ಲಿ ಅರಿ[ವಂತೆ],
ಕಾಣಿಸಿಕೊಂಬ ಆತ್ಮ ಬಿನ್ನಾಣಿಗೆ ಸೋಲದೆ,
ಬಿಟ್ಟುದ ಹಿಡಿಯದೆ, ಹಿಡಿದುದು ಬಿಟ್ಟೆಹೆನೆಂಬ ದ್ವೇಷವಿಲ್ಲದೆ,
ಅವು ಬಿಡುವಾಗ ತನ್ನಿಚ್ಛೆಗೆ ಪ್ರಮಾಣಲ್ಲ.
ತೊಟ್ಟುಬಿಟ್ಟ ಹಣ್ಣ ಇದಿರಿಕ್ಕಿ ಕರ್ಕಶದಲ್ಲಿ ಸಿಕ್ಕಿಸಲಿಕ್ಕೆ ಮತ್ತೆ
ಮುನ್ನಿನಂತೆ ಸಹಜದಲ್ಲಿಪ್ಪುದೆ?
ವಸ್ತುವ ಮುಟ್ಟಿದ ಚಿತ್ತ ತ್ರಿವಿಧಮಲವ ಲಕ್ಷಿಸಬಲ್ಲುದೆ?
ಇದು ವಿರಕ್ತನ ಮುಟ್ಟು, ಸದ್ಯೋಜಾತಲಿಂಗವ ಬಿಚ್ಚಿಹ ಭೇದ. ॥೨೪॥

೬೭೭
ವಮನವ ಮಾಡಿದ ಅಪೇಯವ ಕ್ಷುಧೆಯಾಯಿತೆಂದು ಮುಟ್ಟದು ಕುನ್ನಿ.
ಅಮಲವಸ್ತು ತ್ರಿವಿಧವ ಮಲವೆಂದು ಕಳೆದು, ಮತ್ತಾಗೆ ತಲೆದೋರಿ,
ಲಿಂಗ ಮುಂತಾಗಿ ಕೊಟ್ಟುಕೊಳಬಹುದೆಂದು ಸಂದೇಹವನಿಕ್ಕಬಹುದೆ?
ಬಿಟ್ಟೆನೆಂಬಭ್ರಾಮಕವಿಲ್ಲದೆ, ಹಿಡಿದಲ್ಲಿಕಲೆದೋರದೆ, ಸುಖದುಃಖವೆಂಬುದನರಿಯದೆ,
ನೆರೆ ಅರಿದು ಹರಿದು, ಆ ಹರಿದರಿವೆ ಕರಿಗೊಂಡು ನಿಂದಲ್ಲಿ
ಆತ ಉಂಡು ಉಪವಾಸಿಯಪ್ಪ, ಬಳಸಿ ಬ್ರಹ್ಮಚಾರಿಯಪ್ಪ,
ಸದ್ಯೋಜಾತಲಿಂಗದಲ್ಲಿ ಉಭಯವಳಿದ ಶರಣ. ॥೨೫॥

೬೭೮
ಇಂದ್ರಿಯಂಗಳಲ್ಲಿ ಲಿಂಗವು ಅರ್ಪಿತವ
ಸಂಧಿಸಿಕೊಂಡು ಉಂ[ಬು]ದೆಂಬ ತ್ರಿಭಂಗಿ ಗ್ರಹಿತವ ನೋಡಾ.
ಇಂದ್ರಿಯಂಗಳ ಮುಖದಲ್ಲಿ ಲಿಂಗವು ಬಂದು ಉಂಬಾಗ
ಇಂದ್ರಿಯವೆ ಲಿಂಗಕ್ಕೆ ಬೀಜವೆ?
ಅದು ಗರಿಗೋಲಿನ ಮೊನೆಯಂತೆ, ಲಿಂಗದಿಂದ ಸರ್ವೇಂದ್ರಿಯನಿಶ್ಚಯ.
ಇದು ಲಿಂಗವ್ಯವಧಾನಿಯ ಅಂಗ,
ಸದ್ಯೋಜಾತಲಿಂಗದ ಸಂಗ. ॥೨೬॥

೬೭೯
ನೀತಿಭಕ್ತಿ ಕ್ರಿಯಾಭಕ್ತಿ ಭಾವಭಕ್ತಿ ಸದ್ಭಾವಭಕ್ತಿ ಜ್ಞಾನಭಕ್ತಿ
ಇಂತೀ ಭಕ್ತಿಯ ವಿವರ:
ನೀತಿಭಕ್ತಿಗೆ ಸರ್ವಗುಣಪ್ರೀತಿವಂತನಾಗಿ,
ಕ್ರಿಯಾಭಕ್ತಿಗೆ ಬಿಡುಮುಡಿ ಉಭಯವನರಿದು,
ಭಾವಭಕ್ತಿಗೆ ಸಂಕಲ್ಪವಿಕಲ್ಪ ದೋಷವ ಕಂಡು,
ಸದ್ಭಾವಭಕ್ತಿಗೆ ಮನ ವಚನ ಕಾಯ ತ್ರಿಕರಣವನರಿದು,
ಜ್ಞಾನಭಕ್ತಿಗೆ ಜ್ಞಾತೃ ಜ್ಞಾನ ಜ್ಞೇಯ ಮುಂತಾದ
ಮರ್ಕಟ ವಿಹಂಗ ಪಿಪೀಲಿಕ
ಸಂಚಿತ ಪ್ರಾರಬ್ಧ ಆಗಾಮಿಗಳೆಂಬ ತೆರನ ತಿಳಿದು,
ವಿಷ ಚರಣಾಂಗುಲದಲ್ಲಿ ವೇಧಿಸಿ, ಕಪಾಲದಲ್ಲಿ ನಿಂದು
ಅಂಗ ಮೂರ್ಛೆಗೊಂಡಂತೆ, ಇಂತೀ ಭಕ್ತಿಸ್ಥಲದ ವಿವರ.
ಹೆಚ್ಚು ಕುಂದನರಿದು ಕೊಡುವಲ್ಲಿ ಕೊಂಬಲ್ಲಿ
ತಟ್ಟುವಲ್ಲಿ ಮುಟ್ಟುವಲ್ಲಿ, ತಾಗುವಲ್ಲಿ ಸೋಂಕುವಲ್ಲಿ ನಾನಾ ಗುಣಂಗಳಲ್ಲಿ
ವಿವರವನರಿತು ವರ್ಮಜ್ಞನಾಗಿಪ್ಪ ಭಕ್ತನಂಗ,
ಆ ಸುಖದ ಸಂಗ ಸದ್ಯೋಜಾತಲಿಂಗದ ನಿರಂಗ. ॥೨೭॥

೬೮೦
ಮುಟ್ಟಿದಲ್ಲಿ ಬ್ರಹ್ಮನ ಕೊಂದು, ಅರ್ಪಿತದಲ್ಲಿ ವಿಷ್ಣುವ ಕೊಂದು,
ತೃಪ್ತಿಯಲ್ಲಿ ರುದ್ರನ ಕೊಂದು,
ಇಂತೀ ತ್ರಿವಿಧ ಭೇದ ಸತ್ತು ತಾನುಳಿದ ಭೇದವ ಕಂಡುನಿಂದ
ನಿಜಲಿಂಗಪ್ರಾಣ ಸದ್ಯೋಜಾತಲಿಂಗದಲ್ಲಿ. ॥೨೮॥

೬೮೧

ಬ್ರಹ್ಮನ ಕಾಲಿನಲ್ಲಿ ಬಂದು, ವಿಷ್ಣುವಿನ ಕೈಯಲ್ಲಿ ಬೆಳೆದು,
ರುದ್ರನ ಹಣೆಗಿಚ್ಚಿನಲ್ಲಿ ಬೇವುತ್ತ ನೋವುತ್ತ ಜೀವಹೋಗದೆ ನೋವವನಂತೆ,
ಈ ಗುಣ ಪ್ರಾಣಲಿಂಗಿಯ ಭೇದ ಸದ್ಯೋಜಾತಲಿಂಗವನರಿವುದಕ್ಕೆ. ॥೨೯॥

೬೮೨

ಲಿಂಗಪ್ರಾಣ ಪ್ರಾಣಲಿಂಗ ಎಂಬ ಉಭಯದ ಮಧ್ಯದಲ್ಲಿ ನಿಂದು
ಅರಿದರಿಹಿಸಿಕೊಂಬ ಪರಿಯಿನ್ನೆಂತೊ?
ಅದು ತತ್ತಿಯೊಳಗಿದ್ದ ಶುಕ್ಲಶೋಣಿತದಂತೆ.
ಆ ತತ್ತಿಯ ಭಿತ್ತಿಯ ಮರೆಯಲ್ಲಿ ಪಕ್ಷಿಯ ಸ್ಪರ್ಶನದಿಂದ ಬಲಿದು,
ಭಿತ್ತಿ ಒಡೆದು ಪಕ್ಷಿ ತದ್ರೂಪಾಗಿ ರಟ್ಟೆ ಬಲಿವನ್ನಕ್ಕ.
ಇಂತಪ್ಪ ಠಾವಿನಲ್ಲಿದ್ದು
ತಾಯಿಯಿತ್ತ ಕುಟುಕ ಕೊಂಡು, ಆ ಘಟ ಬಲಿದು,
ರಟ್ಟೆಯ ಲಕ್ಷಣ ಯುಕ್ತಿಗೊಂಡು ಚರಿಸಿದ ಭೇದ ಪಿಂಡಜ್ಞಾನಸಂಬಂಧ.
ಆ ಗುಣ ಅಭಿಮುಖವಾಗಿ ಚರಿಸಲಿಕ್ಕೆ ಜ್ಞಾನಪಿಂಡಸಂಬಂಧ.
ಇಂತು ಪಿಂಡಜ್ಞಾನ ಜ್ಞಾನಪಿಂಡ ಉಭಯಲೇಪ
ಸದ್ಯೋಜಾತಲಿಂಗದಲ್ಲಿ. ॥೩೦॥

೬೮೩

ಗೂಡಿನೊಳಗಿದ್ದು ಕಾಲ ವೇಳೆಯನರಿದು ಕೂಗುವ ಕುಕ್ಕುಟ
ತಾ ಸಾವುದ ಬಲ್ಲುದೆ?
ತನ್ನ ಶಿರವನರಿದು ಶಿರ ಬೇರೆ ಅಂಗ ಬೇರಾದಲ್ಲಿ,
ಆ ಅಂಗ ಪುಟನೆಗೆವಲ್ಲಿ ಆತ್ಮಸಂಗವೆಲ್ಲಿದ್ದಿತ್ತು?
ಶಿರಚ್ಛೇದವಾದಲ್ಲಿ ಮತ್ತಾವ ಘಟಕ್ಕೂ ಶಿರಬಂಧವಾಗಲಿಕ್ಕೆ
ಆ ಘಟ ಚೇತನವಡಗಿ ಅಲ್ಲಿಯೆ ಮೃತವಾಗಿಪ್ಪುದು.
ಇಂತೀ ಘಟ–ಆತ್ಮನ ಉಭಯದ ಭೇದವ ಬಲ್ಲಡೆ
ಪಿಂಡಜ್ಞಾನಸಂಬಂಧಿ, ಸದ್ಯೋಜಾತಲಿಂಗವ ಬಲ್ಲವ. ॥೩೧॥

೬೮೪

ಆತ್ಮಕ್ಕೂ ಘಟಕ್ಕೂ ಶರಸಂಧಾನದಿಂದ
ಆತ್ಮ ಬ್ರಹ್ಮರಂಧ್ರಕ್ಕೆ ಎಯ್ದುವುದಕ್ಕೆ ಮುನ್ನವೆ ಶಿರಚ್ಛೇದನವಾಗಲಿಕ್ಕೆ
ಆ ಹಾಹೆ ಆತ್ಮ ಬಯಲ ಕೂಡುವುದನ್ನಕ್ಕ ಅದುವೆ ಭೇದ.
ಇಂತೀ ಭೇದ.

ಜೀವದ ಆಗುಚೇಗೆಯನರಿದು ಷಡಾಧಾರ
ಮುಂತಾದ ದಶವಾಯುವ ಕಂಡು,
ನವದ್ವಾರವ ಭೇದಿಸಿ, ಷೋಡಶ ಕಳೆಯಲ್ಲಿ ಮಗ್ನನಾಗಿ ನಿಂದಲ್ಲಿ,
ತ್ರಿವಿಧಾತ್ಮದೊಳಗಾದ, ಪಂಚಭೂತಿಕದೊಳಗಾದ, ಪಂಚವಿಂಶತಿತತ್ವದೊಳಗಾದ,
ಕ್ರೀ ನಿಃಕ್ರೀ ಧರ್ಮಂಗಳಲ್ಲಿ ಅರಿದೆ ಮರದೆನೆಂಬುದ ಸಾಧನೆಗೊಂಡು,
ಪಿಂಡದಲ್ಲಿ ಅರಿದುನಿಂದುದು ಪಿಂಡಜ್ಞಾನ.
ಆ ಜ್ಞಾನದಲ್ಲಿ ಸೂಕ್ಷ್ಮಾಂಗನಾಗಿ ಕಾರಣವ ಕೂಡಿಕೊಂಡು,
ಆ ಕಾರಣವಾದುದು ಜ್ಞಾನಪಿಂಡದ ಭೇದ.
ಇಂತೀ ಪಿಂಡಜ್ಞಾನ ಜ್ಞಾನಪಿಂಡದ ಕೂಟ
ಸದ್ಯೋಜಾತಲಿಂಗದ ನಿರುತದಾಟ. ॥೩೨॥

೬೮೫
ಭೂಪುಡಿ ಅಪ್ಪುವ ಕೂಡಿದಲ್ಲಿ ಮೃತ್ಪಿಂಡವಾದಂತೆ,
ಅಪ್ಪು ಆರಲಿಕ್ಕೆ ಮೃತ್ಪಿಂಡವ ಒಡೆದಲ್ಲಿ
ಅಪ್ಪು ಎಲ್ಲಿ ಅಡಗಿತ್ತೆಂಬುದನರಿದಲ್ಲಿ ಪಿಂಡಜ್ಞಾನಸಂಬಂಧಿ.
ಈ ಸಂಪುಟದಿಂದ ಆತ್ಮಘಟದ ಸಂಜ್ಞೆ,
ಈ ಸಂಚದಿಂದ ಸದ್ಯೋಜಾತಲಿಂಗದಲ್ಲಿ ಮುಂಚಬೇಕು. ॥೩೩॥

೬೮೬
ಶಿಲೆಯ ಘಟಂಗಳಲ್ಲಿ ಪ್ರಜ್ವಲಿತದ ರ[ವಿ]
ಸ್ಥೂಲಕ್ಕೆ ಸ್ಥೂಲವಾಗಿ, ಸೂಕ್ಷ್ಮಕ್ಕೆ ಸೂಕ್ಷ್ಮವಾಗಿ ಇಪ್ಪ ಭೇದದಂತೆ,
ಅರಿದು ಕೂಡುವ ಜ್ಞಾನದ ಸತ್ವ ಜಾತಿಕುಲವಾದಡೆ ಸಾಕು, ವಿಜಾತಿಯ ಬೆರಸದೆ.
ಸತ್ವಕ್ಕೆ ತಕ್ಕ ಸಾಮರ್ಥ್ಯ ನಡೆ, ಸತ್ವಕ್ಕೆ ತಕ್ಕ ನುಡಿ,
ನುಡಿ ಸತ್ವಕ್ಕೆ ತಕ್ಕ ಜ್ಞಾನ, ಜ್ಞಾನಸತ್ವಕ್ಕೆ ತಕ್ಕ ಏಕೀಕರ.
ಇಂತೀ ಜ್ಞಾನೋದಯಭೇದ,
ಸದ್ಯೋಜಾತಲಿಂಗವ ಭೇದಿಸಿದ ಅಂಗ. ॥೩೪॥

೬೮೭
ಅಗ್ನಿಯಂತೆ ಬಾಲವೃದ್ಧತ್ವದಂತೆ ಅಪ್ಪುದಲ್ಲ ಸುರತ್ನದ ಕಳೆ.
ಅಲ್ಪನದಿಗಳ ಬಾಲವೃದ್ಧತ್ವದಂತಪ್ಪುದಲ್ಲ ಮಹಾರ್ಣವ ಸಿಂಧು.
ಆವೇಶದಿಂದ ನಡೆದು, ಆವೇಶದಿಂದ ನುಡಿದು, ಆವೇಶದಲ್ಲಿ ಪೂಜಿಸಿ,
ಆವೇಶದಿಂದ ಸರ್ವಜ್ಞಾನಿ ನಾನೆಂದು
ಆವೇಶನಿಂದು ಹಿರಣ್ಯದ ವಿಷಕ್ಕೆ ಕೈಯಾಂತು,

ದತ್ತೂರದ ಬಿತ್ತ ಮೆದ್ದವನಂತೆ, ಲಹರಿಯ ದ್ರವ್ಯವ ಕೊಂಡವನಂತೆ,
ಲಹರಿ ತಿಳಿಯೆ ನಾನಲ್ಲ ಎಂಬವನಂತಾಗದೆ,
ಸ್ವಯ ನಡೆಯಾಗಿ, ಸ್ವಯ ನುಡಿಯಾಗಿ, ಸ್ವಯಜ್ಞಾನಿ ಸಂಬಂಧಿಯಾಗಿ
ಸದ್ಯೋಜಾತಲಿಂಗವ ಕೂಡಬೇಕು. ॥೩೫॥

೬೮೮

ಜಾತಿರತ್ನವ ಸುಟ್ಟಡೆ ಪ್ರಭೆ ಪ್ರಜ್ವಲಿಸುವುದಲ್ಲದೆ,
ವಿಜಾತಿಯ ರತ್ನ ಬೆಂಕಿಯಲ್ಲಿ ಬೆಂದಡೆ ಹೊರೆಗಳೆದು,
ಪ್ರಭೆಯ ತೆರೆ ನಿಂದು, ತಾ ಜಜ್ಜರಿಯಾಗಿ ನಷ್ಟವಾಗುತಿಪ್ಪುದು.
ನಡೆ ನುಡಿ ಶುದ್ಧಾತ್ಮಂಗೆ ಆಗುಚೇಗೆ ಸೋಂಕಿದಲ್ಲಿ,
ವಂದನೆ ನಿಂದೆ ಬಂದಲ್ಲಿ, ತನುವಿನ ಪ್ರಾಪ್ತಿ ಸಂಭವಿಸಿದಲ್ಲಿ,
ಲಿಂಗವಲ್ಲದೆ ಪೆರತೊಂದನರಿಯ.
ಆತ್ಮತೇಜಿಗೆ, ಅಹಂಕಾರಿಗೆ, ದುರ್ವಿಕಾರವಿಷಯಾಂಗಿಗೆ,
ಒಂದು ವ್ರತವ ಯತಿಯೆಂದು ಹಿಡಿದು
ಮತ್ತೊಂದು ವ್ರತದ ತ್ರಿವಿಧಮಲವೆಂದು ಬಿಟ್ಟು
ಮತ್ತೊಬ್ಬ ದಾತೃ ಇತ್ತೆಹೆನೆಂದಲ್ಲಿ ಭಕ್ಷಿಸಿ,
ತ್ರಿವಿಧವ ಹಿಡಿದು ಮತ್ತನಪ್ಪವಂಗೆ ವಿರಕ್ತಿ ಎತ್ತಣ ಸುದ್ದಿ?
ಇಂತೀ ಉಭಯಸ್ಥಲಭೇದವನರಿದಾಚರಿಸಬೇಕು,
ಸದ್ಯೋಜಾತಲಿಂಗವನರಿವುದಕ್ಕೆ. ॥೩೬॥

೬೮೯

ಧರಿತ್ರಿಯಲ್ಲಿ ಹರಿವ ಜಲ
ತನಗೆ ಭೇದವಲ್ಲದುದ ಭೇದಿಸಿ ಹರಿಯದಾಗಿ,
ಮರ್ಕಟನ ಲಂಘನ ಚಿತ್ತಕ್ಕೆ ಎಟ್ಟದುದನೊಲ್ಲದಾಗಿ,
ಮೆತ್ತದ ಹೇತುವಿನಲ್ಲಿದ್ದ ದಂಷ್ಟ್ರ ಚಿತ್ತವೆದ್ದ ಠಾವಿಗೆ ಜಂಘೆಯ ತೂಗಿ,
ಜಡನಾದಡೆ ಚಿತ್ತವತ್ತ ಬಿಟ್ಟು ಇಪ್ಪುದರಿಂದ ಕಡೆಯೆ ನಿಮ್ಮ ವಿರಕ್ತಿ?
ಇದು ಜ್ಞಾನಹೇಯಭಾವ,
ಇದು ದೃಷ್ಟ ಸದ್ಯೋಜಾತಲಿಂಗವನರಿವುದಕ್ಕೆ. ॥೩೭॥

೬೯೦

ಪಿಂಡಜ್ಞಾನ ಜ್ಞಾನಪಿಂಡವಾದ ವಿವರ:
ಗಂಡಭೇರುಂಡನಪಕ್ಷಿಯಂತೆ ಆವ ಬಾಯಲ್ಲಿ ಆಹಾರವ ಕೊಂಡಡೂ
ಘಟವೊಂದರಲ್ಲಿ ಆತ್ಮಸುಖವನೆಯ್ದುವಂತೆ,

ಪಿಂಡದಿಂದ ಜ್ಞಾನವನರಿದಡೂ, ಜ್ಞಾನದಿಂದ ಪಿಂಡ ಇಪ್ಪುದಾದ ಕಾರಣ
ಜ್ಞಾನದಿಂದ ಪಿಂಡವನರಿದಡೂ, ಉಭಯಮುಖ ಗೊತ್ತು ಒಂದಾಗಿ
ವಿಷ್ಣಿಸುವ ಪೃಷ್ಟದಂತೆ ಅರಿವುದು ನಾನಾಮುಖ
ಬಿಡುವುದು ಒಂದೆ ತೆರನಾದ ಕಾರಣ,
ಚಿತ್ರವಿಚಿತ್ರಂಗಳನರಿವ ನಯನ ಮುಚ್ಚಿದಲ್ಲಿ
ಒಂದೆ ದೃಷ್ಟ, ಸದ್ಯೋಜಾತಲಿಂಗವನರಿವುದಕ್ಕೆ. ॥೩೮॥

೬೯೧

ಹಲವು ಪಥದಿಂದ ಬಂದ ಜಲ ನಿಲುವುದೊಂದು ಸ್ಥಾಯಿಯಾಗಿ,
ಕಟ್ಟು[ವಡೆ]ದಲ್ಲಿ ಒಂದೆ ದ್ವಾರದಿಂದ ಸೂಸಿ
ಹಲವು ಸ್ಥಲಂಗಳ ಬೆಳೆಗೆ ಹೊಲಬಾದುದಾಗಿ.
ಇಂತೀ ಗುಣದಲ್ಲಿ ನಾನಾ ವಿವರ:
ಇಂದ್ರಿಯಂಗಳನೊಂದುಗೂಡಿ, ಸತ್ಕ್ರೀಮಾರ್ಗಂಗಳೆಂಬ
ಘಟತಟಾಕಂಗಳಲ್ಲಿ ವಿಶ್ರಮಿಸಿ, ಏಕಚಿತ್ತದಲ್ಲಿ ನಾನಾಸ್ಥಲಂಗಳನಾರೋಪಿಸಿ,
ವಿಶ್ವಸ್ಥಲಂಗಳಲ್ಲಿ ಪರಿಪೂರ್ಣವಾಗಿ,
ವಸ್ತುವನೊಡಗೂಡಿಪ್ಪುದು ಕ್ರಿಯಾಪಿಂಡ ಜ್ಞಾನಪಿಂಡವಾದ ಭೇದ.
ಉಭಯಲೇಪವಾದಲ್ಲಿ ಪಿಂಡಜ್ಞಾನ, ಜ್ಞಾನಲೇಪವಾದಲ್ಲಿ ಶಬ್ದಮುಗ್ಧ,
ಸದ್ಯೋಜಾತಲಿಂಗದಲ್ಲಿ ಐಕ್ಯಭಾವ. ॥೩೯॥

೬೯೨

ಸತ್ತು ಜೀವನೆಂದು ಆತ್ಮ ಕುರುಹಾಗಿ
ಅರಿವು ತಲೆದೋರಿ ಅಂಗದ ಕುರುಹ ನುಂಗಿತ್ತು.
ನುಂಗಿದ ಅರಿವ ನುಂಗಿಸಿಕೊಂಡು ಕುರುಹ ಆನಂದ ನುಂಗಿತ್ತು.
ಆನಂದದ ಬೆಂಬಳಿಯಲ್ಲಿ ನಂದಿ
ಸದ್ಯೋಜಾತಲಿಂಗವ ಕೂಡಿಕೊಂಡಿತ್ತು. ॥೪೦॥

೬೯೩

ಅರಿದೆಹೆನೆಂಬುದು, ಅರುಹಿಸಿಕೊಂಬುದಕ್ಕೆ ಕುರುಹಾವುದು?
ಜ್ಞಾತೃವೆ ಅರಿವುದು, ಜ್ಞೇಯವೇ ಅರುಹಿಸಿಕೊಂಬುದು.
ಇಂತೀ ಉಭಯದ ಭೇದದ ಮಾತು ತತ್ವಜ್ಞರ ಗೊತ್ತು.
ಅಕ್ಷಿಯಿಂದ ನಿರೀಕ್ಷಿಸಿ ನೋಡುವಲ್ಲಿ, ಪ್ರತಿದೃಷ್ಟವ [ನೆ]ಟ್ಟು ನೋಡೆ ಕಾಬುದು
ಅಕ್ಷಿಯ ಭೇದವೊ? ಇದಿರಿಟ್ಟ ದೃಷ್ಟದ ಭೇದವೊ?
ಅಲ್ಲ, ಆ ಘಟದ ವಯಸ್ಸಿನ ಭೇದವೋ?

ಇಂತೀ ದೃಷ್ಟಕ್ಕೆ ಏನನಹುದೆಂಬೆ? ಏನನಲ್ಲೆಂಬೆ?
ಪ್ರತಿದೃಷ್ಟವಿಲ್ಲಾಯೆಂದಡೆ ದೃಷ್ಟಿಗೆ ಲಕ್ಷಣದಿಂದ ಲಕ್ಷಿಸುತ್ತಿಹುದು.
ಇಂತೀ ಉಭಯದಲ್ಲಿ ನಿಂದು ನೋಡುವ ಆತ್ಮನು ಅರಿವುಳ್ಳುದೆಂದಡೆ
ಪೂರ್ವಾಂಗವ ಘಟಿಸಿದಲ್ಲಿ ಯೌವನವಾಗಿ,
ಉತ್ತರಾಂಗ ಘಟಿಸಿದಲ್ಲಿ ಶಿಥಿಲವಾಗಿ,
ಘಟದ ಮರೆಯಿದ್ದು ಪಲ್ಲಟಿಸುವ ಆತ್ಮನ
ಹುಸಿಯೆಂದಡೆ ದೃಷ್ಟನಿಗ್ರಹ, ದಿಟವೆಂದಡೆ ಕಪಟ ಸ್ವರೂಪ.
ಇಂತೀ ದ್ವಯದ ಭೇದಂಗಳ ತಿಳಿದು, ಇಷ್ಟತನುವಿನ ಅಭೀಷ್ಟವನರಿತು,
ಆ ಅಭೀಷ್ಟದಲ್ಲಿ ದೃಷ್ಟವಾದ ವಸ್ತುವ ಕಂಡು,
ಇಷ್ಟೆಡೆಯ ಲಕ್ಷಿಸಿಕೊಂಡು
ಶ್ರುತಕ್ಕೆ ಶ್ರುತದಿಂದ, ದೃಷ್ಟಕ್ಕೆ ದೃಷ್ಟದಿಂದ,
ಅನುಮಾನಕ್ಕೆ ಅನುಮಾನದಿಂದ–
ಇಂತೀ ಗುಣಂಗಳ ವಿವರಂಗಳ ವೇಧಿಸಿ ಭೇದಿಸಿ
ಇಷ್ಟವಸ್ತುವಿನಲ್ಲಿ ಲೇಪವಾದುದ ಕಂಡು,
ವಸ್ತು ಇಷ್ಟವ ಕಬಳೀಕರಿಸಿ
ವೃಕ್ಷದೊಳಗಣ ಬೀಜ ಬೀಜದೊಳಗಣ ವೃಕ್ಷ
ಇಂತೀ ಉಭಯದ ಸಾಕಾರಕ್ಕೂ ಅಂಕುರ ನಷ್ಟವಾದಲ್ಲಿ
ಇಂದಿಗಾಹ ವೃಕ್ಷ ಮುಂದಣಕ್ಕೆ ಬೀಜ.
ಉಭಯವಡಗಿದಲ್ಲಿ ಅಂಡದ ಪಿಂಡ, ಪಿಂಡದ ಜ್ಞಾನ,
ಇಂತಿವು ಉಳಿದ ಉಳುಮೆಯನರಿದು
ಸದ್ಯೋಜಾತಲಿಂಗವ ಕೂಡಬೇಕು. ॥೪೧॥

೬೩೪

ಅಮೃತ ಸ್ವಯಂಭುವೆಂದಡೂ ಎಂಬವರೆನ್ನಲಿ, ನಾನೆನ್ನೆ.
ಅದೆಂತೆಂದಡೆ:
ಅದು ಪಾಕಪ್ರಯತ್ನದಿಂದ ಮಾಡುವ ಕ್ರಮಂಗಳಿಂದ
ಮಧುರರಸವಿಶೇಷವಾಯಿತು.
ಅಂಡಪಿಂಡಗಳಲ್ಲಿ ಜ್ಞಾನವಿದ್ದಿತ್ತೆಂದಡೆ,
ಜ್ಞಾನ ಸ್ವಯಂಭುವೆಂದು ಎಂಬವರೆನ್ನಲಿ, ನಾನೆನ್ನೆ.
ಅದೆಂತೆಂದಡೆ,
ನಾನಾ ವ್ಯಾಪಾರಕ್ಕೆ ತೊಳಲಿ ಬಳಲುವುದಾಗಿ.
ಇಂತೀ ಪರಿಭ್ರಮಣ ನಿಂದು,
ಸ್ವಸ್ಥವಸ್ತು ಭಾವದಲ್ಲಿ ನಿಶ್ಚಯವಾದಲ್ಲಿ, ಜ್ಞಾನ ಸ್ವಯಂಭುವೆಂಬೆ.

ಇಂತೀ ಅಂಗಕ್ರೀಯಲ್ಲಿ ಶುದ್ಧವಾಗಿ, ಆತ್ಮನರಿವಲ್ಲಿ ಪ್ರಸಿದ್ಧಪ್ರಸನ್ನವಾಗಿ
ಸದ್ಯೋಜಾತಲಿಂಗದಲ್ಲಿ ಎರಡಳಿದ ಕೂಟ. ॥೪೨॥

೬೯೫
ಅಮೃತದ್ರವ್ಯದಲ್ಲಿ ಅಮೃತವಿಶೇಷವ ಮಾಡಲಿಕ್ಕಪ್ಪುದಲ್ಲದೆ
ಕಹಿ ಕಟುಕಂಗಳಲ್ಲಿ ಮಧುರಸಾರಕ್ಕೆ ಕ್ರಮಗುಣವುಂಟೆ ?
ಇಂತೀ ಭಾವಕ್ರೀ ವರ್ತನಶುದ್ಧವುಳ್ಳವರಲ್ಲಿ ಅಲ್ಲದೆ
ವರ್ತನಹೀನರಲ್ಲಿ ಉಂಟೆ ಸ್ವಯಜ್ಞಾನಸಂಬಂಧ ?
ಇಂತಿವು ಕುಲವಂಶದಲ್ಲಿ ಅಲ್ಲದೆ ಸತ್ಕುಲ ತದ್ರೂಪಿಲ್ಲ.
ಇಂತೀ ಆಚರಣೆ ಆಶ್ರಿತದ ಭೇದ.
ಈ ಆತ್ಮನ ಭೇದವನರಿತು ಭೇದಿಸಬೇಕು,
ಸದ್ಯೋಜಾತಲಿಂಗದಲ್ಲಿ. ॥೪೩॥

೬೯೬
ನವನೀತವ ಅರೆದು ಸಣ್ಣಿಸಬೇಕೆಂದಡೆ
ಅದು ಉಭಯ ಪಾಷಾಣದ ಮಧ್ಯದಲ್ಲಿ,
ಜ್ವಾಲೆಯ ಡಾವರಕ್ಕೆ ಕರಗುವದಲ್ಲದೆ ಅ[ರೆ]ಪುನಿಂದುಂಟೆ?
ನೆರೆ ಅರಿದು ಹರಿದವನಲ್ಲಿ ಪರಿಭ್ರಮಣವ ವಿಚಾರಿಸಲಿಕ್ಕೆ
ಆ ವಿಚಾರದಲ್ಲಿಯೆ ಲೋಪವಾಯಿತ್ತು, ಸದ್ಯೋಜಾತಲಿಂಗದಲ್ಲಿ. ॥೪೪॥

೬೯೭
ಲಿಂಗವನರಿದು ಮುಟ್ಟಬೇಕೆಂಬಲ್ಲಿ ಅರಿವುದು ಲಿಂಗಕ್ಕೆ ಹೊರಗೆ?
ಲಿಂಗದಿಂದ ಅರಿದ ಅರಿವು ತಾನಾಗಿ
ಬೇರೆ ದ್ವೈತವೆನಲಿಲ್ಲ, ಅದ್ವೈತವೆನಲಿಲ್ಲ.
ಅದು ತರುವಿನ ತಿಗುಡಿನ ಸಾರದಂತೆ,
ಆ ತರುವಿನ ಒಡಗೂಡಿಯೆ ಸುಖದುಃಖವ ಅನುಭವಿಸುವಂತೆ,
ಅರಿದು ಅರ್ಪಿಸುವ ಕ್ರೀ ಸದ್ಯೋಜಾತಲಿಂಗದಲ್ಲಿ ಲೇಪ. ॥೪೫॥

೬೯೮
ಆವ ವಾಯು ಎತ್ತಿದಲ್ಲಿ ಆ ದಳಗೂಡಿ ಆತ್ಮ ಆಡುತಿಪ್ಪುದೆಂಬರು.
ಶರೀರದಲ್ಲಿ ಎಂಟುಕೋಟಿ ರೋಮ, ಮುನ್ನೂರರುವತ್ತು ನಾಡಿ,
ಒಂದು ನಾಡಿಗೆ ಮೂರು ಭೇದ, ಮೂರು ಭೇದಕ್ಕೆ ಐದು ಗುಣ.
ಇಂತಿವನರಿದು ಇರಬೇಕೆಂಬಲ್ಲಿ,

ಇಂತೀ ಶರೀರಕ್ಕೆ ಕರಣ ನಾಲ್ಕರಿಂದ, ಮದವೆಂಟರಿಂದ, ವ್ಯಸನವೇಳರಿಂದ,
ಅರಿವರ್ಗದಿಂದ, ಐದು ಇಂದ್ರಿಯದಿಂದ, ಹದಿನಾರು ಕಳೆಯಿಂದ,
ಮೂರು ವಿಷಯದಿಂದ, ತ್ರಿವಿಧ ಆತ್ಮಗಳಿಂದ, ತ್ರಿಶಕ್ತಿಭೇದದಿಂದ.
ಇಂತೀ ವಿವರಂಗಳೆಲ್ಲವ ತಿಳಿದು ಏಕಮುಖವ ಮಾಡಿ
ವರ್ಣಕ ವಸ್ತುಕ ಉಭಯವನೊಡಗೂಡಿ ವಸ್ತುವ ಕೂಡಬೇಕೆಂಬನ್ನಕ್ಕ
ಈ ದೇಹ ಸಂಜೀ[ವಿನಿ]ಯೆ? ಶಿಲೆಯ ಸುರೇಖೆಯೆ?
ತ್ರಿವಿಧಕ್ಕೆ ಅಳಿವಿಲ್ಲದ ಘಟವೆ?
ಇಂತಿವೆಲ್ಲವು ಕಥೆ ಕಾವ್ಯದ ವಿಶ್ವಮಯವಪ್ಪ ಕೀಲಿಗೆ ಕೀಲಿನ ಭಿತ್ತಿ.
ಇವ ಮರೆದು ಅರಿದವನ ಯುಕ್ತಿ,
ತರುವಿನ ಬೂರದ ಹೊರೆಯಲ್ಲಿ ಹೊತ್ತಿದ ಪಾವಕ ಮುಟ್ಟುವುದಕ್ಕೆ
ಮುನ್ನವೆ ಗ್ರಹಿಸುವಂತೆ,
ಹೇರಂಡದ ಘಟ ಫಲವ ಗ್ರಹಿಸಿ, ಫಲ ಪಕ್ವಕ್ಕೆ ಬಂದಲ್ಲಿ ಭಿನ್ನವಾಗುತಲೆ
ಬಿಣ್ಣುವ ತೆರೆದಂತೆ.
ಇಂತೀ ಶರೀರ ಘಟಂಗಳಲ್ಲಿ ಅನುಭವಿಸುವ ಆತ್ಮ ಜಡವೆಂದರಿದು
ಒಡೆದಲ್ಲಿಯೇ ನಿಜಾತ್ಮವಸ್ತುವನೊಡಗೂಡಬೇಕು
ಸದ್ಯೋಜಾತಲಿಂಗದಲ್ಲಿ. ॥೪೬॥

೬೯೯
ದಾಕ್ಷಿಣ್ಯದ ಭಕ್ತಿ, ಕಲಿಕೆಯ ವಿರಕ್ತಿ, ಮಾತಿನ ಮಾಲೆಯ ಬೋಧೆ,
ತೂತ ಜ್ಞಾನಿಗಳ ಸಂಸರ್ಗ.
ಬೀತಕುಂಭದಲ್ಲಿ ಅಮೃತವ ಹೊಯಿದಿರಿಸಲಿಕ್ಕೆ
ಅದು ಎಷ್ಟು ದಿವಸ ಇರಲಾಪುದು?
ಇಂತಿವ ಕಳೆದುಳಿದು ನಡೆನುಡಿ ಸಿದ್ಧಾಂತವಾಗಿ ಕೂಡಬೇಕು
ಸದ್ಯೋಜಾತಲಿಂಗವ. ॥೪೭॥

೭೦೦
ಬೆಂಕಿಯ ಬೈಕೆಗೆ ಕಲ್ಲ ಮುಚ್ಚಿದಡೆ ನಲವಿಂದ ಇರಬಲ್ಲುದೆ, ಕಾಷ್ಠಕಲ್ಲದೆ?
ಬಲು ಶಾಸ್ತ್ರವ ಕಲಿತು ವಾಗ್ವಾದದ ಬಲುಮೆಯಿಂದ ನುಡಿದಡೆ
ಸಲೆ ನೆಲೆಯಲ್ಲಿದ್ದವ ಅವರಿಗೊಲವರವಪ್ಪನೆ, ತನ್ನ ನಿಳಯರಿಗಲ್ಲದೆ?
ಇಂತೀ ಜಡ ಅಜಡವೆಂಬ ಉಭಯವನರಿದು ಹರಿದು ಕೂಡಬೇಕು,
ಸದ್ಯೋಜಾತಲಿಂಗವ. ॥೪೮॥

೭೦೧
ಜಿಹ್ವೆ ಅಮೃತಾನ್ನವಾದಡೆ ಇದಿರಿಟ್ಟುಕೊಳ್ಳಲೇತಕ್ಕೆ?
ನೋಡುವ ಅರ್ಪಿತ ದ್ರವ್ಯಂಗಳೆಲ್ಲವೂ ಲಿಂಗಾರ್ಪಿತವಾದ ಮತ್ತೆ

ಅರ್ಪಿತ ಆರಲ್ಲಿ ಮುಟ್ಟಿಹುದು ಹೇಳಾ?
ದೃಷ್ಟಕ್ಕೆ ದೃಷ್ಟವ ಕೊಟ್ಟು, ತೃಪ್ತಿಯ ಆತ್ಮಂಗಿತ್ತು
ಆತ್ಮನಲ್ಲಿದ್ದ ಅರ್ಪಿತವಾರಿಗೆಂದರಿಯಬೇಕು,
ಸದ್ಯೋಜಾತಲಿಂಗವ ಇದಿರಿಟ್ಟ ತೆರದಲ್ಲಿ. ॥೪೯॥

೭೦೨

ಸಕಲಪದಾರ್ಥ ರಸದ್ರವ್ಯಂಗಳ ಲಿಂಗಕ್ಕೆಂದು ಕಲ್ಪಿಸಿ ಅರ್ಪಿಸುವಲ್ಲಿ
ಮೃದು ಕಠಿಣ ಮಧುರ ಸವಿಸಾರಂಗಳ ರುಚಿ ಮುಂತಾದುದ
ತನ್ನಂಗವರಿದು ಲಿಂಗವ ಮುಟ್ಟಬೇಕು.
ಹಾಗಲ್ಲದೆ ತನ್ನ ಜಿಹ್ವೆಯಲ್ಲಿ ಮಧುರ ಮೃದು ಸವಿಸಾರ ರುಚಿಗಳನರಿದು,
ಆತ್ಮಲಿಂಗಕ್ಕೆ ಅರ್ಪಿತವೆಂದಲ್ಲಿ ದೃಷ್ಟಲಿಂಗದ ಅರ್ಪಿತ ಇತ್ತಲೆ ಉಳಿಯಿತ್ತು.
ರೂಪ ಇಷ್ಟಲಿಂಗಕ್ಕೆಂದು, ರುಚಿ ಪ್ರಾಣಲಿಂಗಕ್ಕೆಂದು
ಅರ್ಪಿತದ ಭೇದವನರಿಯದೆ
ಇದಿರಿಟ್ಟು ಉಭಯವ ತಮ್ಮ ತಾವೆ ಕಲ್ಪಿಸಿಕೊಂಡು
ಮೊದಲಿಗೆ ಮೋಸ, ಲಾಭಕ್ಕಧೀನವುಂಟೆ?
ಸ್ವಯಂಭು ಹೇಮಕ್ಕೆ ಒಳಗು ಹೊರಗುಂಟೆ?
ಎಡಬಲದಲ್ಲಿ ಒಂದಕ್ಷಿ ನಷ್ಟವಾದಡೆ ಅದಾರ ಕೇಡೆಂಬರು?
ಬಿಡುಮುಡಿಯಲ್ಲಿ ಕ್ರೀ ನಷ್ಟವಾದಲ್ಲಿ ಅರಿವಿಂಗೆ ಹೀನ.
ಅರಿದು ಆಚರಿಸದಿದ್ದಡೆ ಕ್ರೀಗೆ ಒಡಲೆಡೆಯಿಲ್ಲ.
ಘಟಾಂಗಕ್ಕೆ ನೋವು ಬಂದಲ್ಲಿ ಆ ಘಟಗೂಡಿಯೆ
ಆತ್ಮ ಅನುಭವಿಸುವಂತೆ. ಇಂತೀ ಇಷ್ಟ ಪ್ರಾಣವೆಂದು ಕಟ್ಟಿಲ್ಲ.
ಇಂತೀ ಉಭಯವನರಿಯಬೇಕು, ಅರ್ಪಿಸಬೇಕು,
ಸದ್ಯೋಜಾತಲಿಂಗದಲ್ಲಿ. ॥೫೦॥

೭೦೩

ಪೃಥ್ವಿಯ ಗುಣ ಸೋಂಕಿದಲ್ಲಿ ಅದಾವ ಭೇದದಿಂದ ಅರ್ಪಿತ?
ಅಪ್ಪುವಿನ ಗುಣ ಆವರ್ಜಿಸಿದಲ್ಲಿ ಅದಾವ ಭೇದದಿಂದ ಅರ್ಪಿತ?
ತೇಜದ ಗುಣದಿಂದ ಪ್ರಕಾಶ ಅದಾವ ಭೇದದಿಂದ ಅರ್ಪಿತ?
ವಾಯುವಿನ ಸುಗುಣ ದುರ್ಗುಣದ ಸುಳುಹಿನ ಸಂಚಾರದ ಭೇದ
ಅದಾವ ನಿಶ್ಚಯದಿಂದ ಅರ್ಪಿತ?
ಆಕಾಶದ ಗಮ್ಯದ ಒಳಗಾದ ಸರ್ವನಾದಮಯ–
ಪರಿಪೂರ್ಣತ್ವ ತೆರಹಿಲ್ಲದ ತನ್ಮಯ ಅದಾವ ಲಿಂಗಕ್ಕರ್ಪಿತ?

ಇಂತೀ ಪಂಚೀಕರಣಂಗಳಲ್ಲಿ ಭೇದಕ್ರಮದಿಂದ ಅರ್ಪಿಸಬೇಕು.
ಸದ್ಯೋಜಾತಲಿಂಗದ ಅರ್ಪಿತದ ಮುಖವನರಿತು ಕೊಡಬೇಕು. ॥೫೧॥

೭೦೪
ರಸದಲ್ಲಿ ಒಂದು ಲಿಂಗ ಅರ್ಪಿಸಿಕೊಂಬುದು,
ಎನಬಹುದು, ಎನಬಾರದು.
ಗಂಧದಲ್ಲಿ ಒಂದು ಲಿಂಗ ಅರ್ಪಿಸಿಕೊಂಬುದು,
ಎನಬಹುದು, ಎನಬಾರದು.
ರೂಪಿನಲ್ಲಿ ಒಂದು ಲಿಂಗ ಅರ್ಪಿಸಿಕೊಂಬುದು,
ಎನಬಹುದು, ಎನಬಾರದು.
ಶಬ್ದಂಗಳಲ್ಲಿ ಒಂದು ಲಿಂಗ ಅರ್ಪಿಸಿಕೊಂಬುದು,
ಎನಬಹುದು, ಎನಬಾರದು.
ಸ್ಪರ್ಶನದಲ್ಲಿ ಒಂದು ಲಿಂಗ ಅರ್ಪಿಸಿಕೊಂಬುದು
ಎನಬಹುದು, ಎನಬಾರದು.
ಇಂತೀ ಪಂಚೇಂದ್ರಿಯಂಗಳಲ್ಲಿ ಬಹುದು ಬಾರದು ಎಂಬ
ಉಭಯವನರಿದು ಅರ್ಪಿಸಬೇಕು, ಸದ್ಯೋಜಾತಲಿಂಗದಲ್ಲಿ. ॥೫೨॥

೭೦೫
ಸ್ಪರ್ಶನದಲ್ಲಿ ಇಂಬಿಟ್ಟ ಭೇದವ ಕಂಡು, ಶಬ್ದದಲ್ಲಿ ಸಂಚಾರಲಕ್ಷಣವನರಿತು,
ರೂಪಿನಲ್ಲಿ ಚಿತ್ರ ವಿಚಿತ್ರವಪ್ಪ ಲಕ್ಷಣವ ಲಕ್ಷಿಸಿ,
ಗಂಧದಲ್ಲಿ ಸುಗುಣ ದುರ್ಗಣವನರಿವುದು ಒಂದೆ ನಾಸಿಕವಪ್ಪುದಾಗಿ
ಒಳಗಿರುವ ಸುಗುಣವ ಹೊರಗೆ ನೇತಿಗಳೆವ ದುರ್ಗಣ[ವು]
ಮುಟ್ಟುವುದಕ್ಕೆ ಮುನ್ನವೇ ಅರಿಯಬೇಕು.
ಅರಿಯದೆ ಸೋಂಕಿದಲ್ಲಿ ಅರ್ಪಿತವಲ್ಲಾ ಎಂದು,
ಅರಿದು ಸೋಂಕಿದಲ್ಲಿ ಅರ್ಪಿತವೆಂದು
ಕುರುಹಿಟ್ಟುಕೊಂಡು ಇಪ್ಪ ಅರಿವು ಒಂದೊ, ಎರಡೊ ಎಂಬುದನರಿದು,
ರಸದಲ್ಲಿ ಮಧುರ, ಕಹಿ, ಖಾರ, ಲವಣಾಮ್ರ
ಮುಂತಾದವನರಿವ ನಾಲಗೆ ಒಂದೊ? ಐದೊ?
ಇಂತೀ ಭೇದವ ಶ್ರುತದಲ್ಲಿ ಕೇಳಿ, ದೃಷ್ಟದಲ್ಲಿ ಕಂಡು,
ಅನುಮಾನದಲ್ಲಿ ಅರಿದು
ಸದ್ಯೋಜಾತಲಿಂಗದ ಜಿಹ್ವೆಯನರಿತು ಅರ್ಪಿಸಬೇಕು. ॥೫೩॥

೭೦೬

ಇಂತೀ ಭೇದಂಗಳಲ್ಲಿ ಅರ್ಪಿಸಿಕೊಂಬ ವಸ್ತು
ಗುರುಲಿಂಗಕ್ಕೆ ಒಡಲಾಗಿ, ಆದಿಯಾಗಿಪ್ಪ ಶಿವಲಿಂಗವನರಿತು,
ಶಿವಲಿಂಗಕ್ಕಾದಿಯಾಗಿಪ್ಪ ಚರಲಿಂಗವನರಿತು,
ಆ ಚರಲಿಂಗಕ್ಕಾಗಿಯಪ್ಪ ಪ್ರಸಾದಲಿಂಗವನರಿತು,
ಪ್ರಸಾದಲಿಂಗಕ್ಕಾದಿಯಾಗಿಪ್ಪ ಮಹಾಲಿಂಗವನರಿತು,
ಆ ಮಹಾಲಿಂಗ ಮಹದೊಡಗೂಡುವ ಬೆಳಗಿನ ಕಳೆಯನರಿತು
ಸದ್ಯೋಜಾತಲಿಂಗದ ಜಿಹ್ವೆಯನರಿತವಂಗಲ್ಲದೆ
ಅರ್ಪಿಸಬಾರದು. ॥೫೪॥

೭೦೭

ರಸದ ಸಾರ, ಗಂಧದ ಸುಗುಣ, ರೂಪಿನ ಚಿತ್ರ, ಶಬ್ದದ ಘೋಷ,
ಸ್ಪರ್ಶನದ ಮೃದು ಕಠಿಣಂಗಳ ಅರಿದರ್ಪಿಸಬೇಕು.
ಅರಿದರ್ಪಿಸುವುದಕ್ಕೆ ಸಂದೇಹವ ಗಂಟನಿಕ್ಕಿ
ಒಂದೊಂದೆಡೆಯ ಅರಿದೆಹೆನೆಂದಡೆ,
ಭಿತ್ತಿ ಮೂರು, ಲಕ್ಷಣವೈದು,
ಮಾರ್ಗವಾರು,ವಿಭೇದ ಮೂವತ್ತಾರು, ತತ್ವವಿಪ್ಪತ್ತೈದು,ಸ್ಥಲನೂರೊಂದರಲ್ಲಿ
ಹೊರಳಿ ಮರಳಿ ಮತ್ತೊಂದರಲ್ಲಿಯೆ ಕೂಡುವುದಾಗಿ
ಒಂದೆ ಎಂದು ಸಂದೇಹವ ಬಿಟ್ಟಲ್ಲಿ, ಉತ್ತರಾಂಗಿಯ ಅರ್ಪಿತ.
ಉಭಯವೆಂದಲ್ಲಿ ಪೂರ್ವಾಂಗಿಯ ಉಭಯದೃಷ್ಟ.
ಇವು ಅಲಕ್ಷ್ಯವಾದಲ್ಲಿ ಸದ್ಯೋಜಾತಲಿಂಗವಿಪ್ಪ ಭೇದ. ॥೫೫॥

೭೦೮

ಬ್ರಹ್ಮಾಂಡದಲ್ಲಿ ಪುಟ್ಟಿಹ ಲಕ್ಷಣ ಪಿಂಡಾಂಡದಲ್ಲಿ ಉಂಟೆಂಬರು.
ಆ ಬ್ರಹ್ಮಾಂಡಕ್ಕೆ ತ್ರಿಜಾತಿವರ್ಗ, ಚರಸ್ಥಾವರ ಮೂಲಾದಿಭೇದ,
ಸಪ್ತಸಿಂಧು ಸವಾಲಕ್ಷ ಮುಂತಾದ ಮಹಾಮೇರುವೆ
ಅಷ್ಟಾಷಷ್ಟಿ ಗಂಗಾನದಿಗಳು ಮುಂತಾದ
ನವಪಾಷಾಣದೊಳಗಾದ ರತಿಸಂಭವ ಮುಂತಾದ
ಷಟ್ಕರ್ಮ ಆಚರಣೆ ಮುಂತಾದ
ಇಂತೀ ಬ್ರಹ್ಮಾಂಡದೊಳಗಾದ ವಸ್ತುಕ ವರ್ಣಕ
ಇವು ಎಲ್ಲವು, ಲಕ್ಷಿಸಿಕೊಂಡು ಪ್ರಮಾಣಾದವು.
ಈ ಪಿಂಡಾಂಡಕ್ಕೆ ಬ್ರಹ್ಮಾಂಡವ ಸರಿಗಾಬಲ್ಲಿ
ನಾನಾ ವರ್ಣದ ಭೇದಂಗಳೆಲ್ಲವ ವಿಚಾರಿಸಲಿಕ್ಕೆ ಉಂಟು.
ಘಟಭೇದದಲ್ಲಿ ಇಲ್ಲ, ಜ್ಞಾನಭೇದದಲ್ಲಿ ಉಂಟೆಂದು ಕರ್ಮವ ವಿಚಾರಿಸಲಿಕ್ಕೆ

ಪೃಥ್ವೀತತ್ವದೊಳಗಾದುದೆಲ್ಲವೂ ವಸ್ತುಕರೂಪ.
ಅಪ್ಪುತತ್ವದೊಳಗಾದುದೆಲ್ಲವೂ ವರ್ಣಕರೂಪ.
ತೇಜತತ್ವದೊಳಗಾದುದೆಲ್ಲವೂ ದೃಶ್ಯಾಂತರಭಾವ.
ವಾಯುತತ್ವದೊಳಗಾದುದೆಲ್ಲವೂ ಖೇಚರಸಂಚಾರಭಾವ.
ಆಕಾಶತತ್ವದೊಳಗಾದುದೆಲ್ಲವೂ ಇಂತೀ ಚತುರ್ಗುಣ ಭಾವವನೊಳಗೊಂಡು
ಶಬ್ದಗಮ್ಯವಾಗಿ ಮಹದಾಕಾಶವ ಎಯ್ದುತ್ತಿಹುದಾಗಿ.
ಇಂತೀ ಅಂಡಪಿಂಡವ ವಿಸ್ತರಿಸಿ ನೋಡಿಹೆನೆಂದಡೆ
ಅಗ್ನಿಗೆ ಆಕಾಶದ ಉದ್ದ ಕಾಷ್ಠವನೊಟ್ಟಿದಡೂ
ಅಲ್ಲಿಗೆ ಹೊತ್ತುವದಲ್ಲದೆ ಸಾಕೆಂದು ಒಪ್ಪುವದಿಲ್ಲ.
ಇಂತೀ ಭೇದದಂತೆ ಸಕಲವ ನೋಡಿಹೆನೆಂದಡೆ
ನಾಲ್ಕು ವೇದ ಒಳಗಾಗಿ ಹದಿನಾರು ಶಾಸ್ತ್ರ ಮುಂತಾಗಿ
ಇಪ್ಪತ್ತೆಂಟು ದಿವ್ಯಾಗಮಂಗಳು ಕಡೆಯಾಗಿ,
ಇಂತಿವರೊಳಗಾದ ಉಪಮನ್ಯು, ಶಾಂಕರಸಂಹಿತೆ,
ಚಿಂತನೆ, ಉತ್ತರ ಚಿಂತನೆ, ಪ್ರತ್ಯುತ್ತರ ಚಿಂತನೆ, ಸಂಕಲ್ಪಸಿದ್ಧಿ
ಇಂತಿವರೊಳಗೆ ತಿಳಿದೆಹೆನೆಂದಡೆ ಕಲಿಕೆಗೆ ಕಡೆಯಿಲ್ಲ,
ಅರಿವಿಗೆ ತುದಿ ಮೊದಲಿಲ್ಲ.
ಇಂತಿವೆಲ್ಲವ ಕಳೆದುಳಿದು ನಿಲಬಲ್ಲಡೆ
ವರ್ಮಸ್ಥಾನ ಶುದ್ಧಾತ್ಮನಾಗಿಪ್ಪ ಭೇದವ ಹಿಡಿದು ಮಾಡುವಲ್ಲಿ ದೃಢಾತ್ಮನಾಗಿ,
ಲಿಂಗವನರ್ಚಿಸಿ ಪೂಜಿಸುವಲ್ಲಿ ನೈಷ್ಠಿಕವಂತನಾಗಿ,
ತ್ರಿವಿಧವ ಕುರಿತು ಅರಿದು ಮಾಡುವಲ್ಲಿ ನಿಶ್ಚಯವಂತನಾಗಿ,
ಅಶ್ವತ್ಥವೃಕ್ಷದ ಪರ್ಣದ ಅಗ್ರದ ತುದಿಯ ಮೊನೆಯಲ್ಲಿ
ಬಿಂದು [ಸಾ]ರಕ್ಕೆ ಮುನ್ನವೆ ಬಿದ್ದಂತೆ,
ಇಂತೀ ಕರ್ಮಕಾಂಡದಲ್ಲಿದ್ದ ಆತ್ಮನು ಹಾಗಾಯಿತ್ತೆಂಬುದ ಹೀಗರಿದು
ಇಂತೀ ಉಭಯದಲ್ಲಿ ಚೋದ್ಯನಾಗಿ
ಸದ್ಯೋಜಾತಲಿಂಗವ ಕೂಡಬೇಕು. ॥೫೬॥

೭೦೯

ಪೃಥ್ವೀತತ್ವಕ್ಕೆ ಅಪ್ಪುತತ್ವ ಸಂಘಟ್ಟವಾಗಿ
ಆಕಾಶತತ್ವ ಬೆರಸಲಿಕ್ಕಾಗಿ ಘಟರೂಪ.
ಆ ಘಟರೂಪಿನಲ್ಲಿ ವಾಯುತತ್ವ ಕೂಡಲಿಕ್ಕೆ ಆತ್ಮರೂಪ.
ಈ ನಾಲ್ಕರ ಮಧ್ಯದಲ್ಲಿ ತೇಜತತ್ವ ರೂಪವಾಗಲಿಕ್ಕೆ
ಪಂಚಭೂತಿಕ ಘಟವಾಯಿತ್ತು.
ಕಠಿಣಭೇದವೆಲ್ಲವು ಪೃಥ್ವಿಯ ವಂಶಿಕ,

ಸಾರಭೇದವೆಲ್ಲವು ಅಪ್ಪುವಿನ ವಂಶಿಕ,
ಜ್ವಾಲೆ ವಂಶಿಕವೆಲ್ಲವು ತೇಜವಂಶಿಕ,
ವಾಯು ವಂಶಿಕವೆಲ್ಲವು ಆತ್ಮವಂಶಿಕ,
ನಾದವಂಶಿಕವೆಲ್ಲವು ಮಹದಾಕಾಶದ ಒಳಗು.
ಇಂತೀ ಪಿಂಡಭೇದಂಗಳ ಹಲವು ತೆರನನರಿತು
ಪಂಚೀಕರಣದ ನಾನಾ ಸಂಚುಗಳ ಸಂಧಿಸಿ
ಮುಮುಕ್ಷುವಾಗಿ ಕೂಡಬೇಕು, ಸದ್ಯೋಜಾತಲಿಂಗವ. ॥೫೭॥

೭೧೦

ಇಂದ್ರ ಕಪಾಲ, ಅಗ್ನಿ ನಯನ, ಯಮ ಬಾಯಿ,
ನೈಋತ್ಯ ಕರ, ವರುಣ ಹೃತ್ಕಮಲ,
ವಾಯವ್ಯ ನಾಭಿ, ಕುಬೇರ ಗುಹ್ಯ, ಈಶಾನ ಜಂಘೆ,
ಇಂತೀ ಅಷ್ಟತನುಮೂರ್ತಿ ರೋಹವಾಹ ಪ್ರಮಾಣು.
ಅವರೋಹವಾಗಿ ಮುಮುಕ್ಷುವಾಗಿ
ಅಷ್ಟತನುವಿನಲ್ಲಿ ಆತ್ಮನು ನಿಶ್ಚಯವಾದುದನರಿದು
ಸದ್ಯೋಜಾತಲಿಂಗವ ಹೊರೆಯಿಲ್ಲದೆ ಕೂಡಬೇಕು ॥೫೮॥

೭೧೧

ಪಿಂಡದ ಸರ್ವಾಂಗದಲ್ಲಿ ಆತ್ಮನು ವೇಧಿಸಿ ಇದ್ದಿಹಿತ್ತೆಂಬರು.
ಕರ ಚರಣ ಕರ್ಣ ನಾಸಿಕ ನಯನ ಇವನರಿದು
ಕಳೆದಲ್ಲಿ ಆತ್ಮ ಘಟದಲ್ಲಿದ್ದಿತ್ತು.
ಶಿರಚ್ಛೇದನವಾದಲ್ಲಿ ಆತ್ಮ ಎಲ್ಲಿ ಅಡಗಿತ್ತು ?
ಇದನರಿತು ಆತ್ಮ ಪೂರ್ಣನೊ, ಪರಿಪೂರ್ಣನೊ ಎಂಬುದ ತಿಳಿದು
ನಿಶ್ಚಯದಲ್ಲಿ ನಿಂದುದು ಪಿಂಡಜ್ಞಾನಸಂಬಂಧ.
ಇದು ಸದ್ಯೋಜಾತಲಿಂಗವ ಕೂಡುವ ಕೂಟ. ॥೫೯॥

೭೧೨

ತ್ರಿಗುಣಾತ್ಮನೆಂದು, ಪಂಚಭೂತಿಕಾತ್ಮನೆಂದು,
ಅಷ್ಟತನುಮೂರ್ತಿಯಾತ್ಮನೆಂದು
ಇಂತಿವರೊಳಗಾದ ಮರ್ಕಟ ವಿಹಂಗ ಪಿಪೀಲಿಕ ಜ್ಞಾನಂಗಳೆಂದು,
ತ್ರಿಶಕ್ತಿಯೊಳಗಾದ ನಾನಾ ಶಕ್ತಿಭೇದಂಗಳೆಂದು,
ಇಂದ್ರಿಯ ಐದರಲ್ಲಿ ಒದಗಿದ ನಾನಾ ಇಂದ್ರಿಯಂಗಳೆಂದು,
ಷಡುವರ್ಣದೊಳಗಾದ ನಾನಾ ವರ್ಣಂಗಳೆಂದು,

ಸಪ್ತಧಾತುವಿನೊಳಗಾದ ನಾನಾ ಧಾತುಗಳೆಂದು,
ಅಷ್ಟಮದಂಗಳೊಳಗಾದ ನಾನಾ ಮದಂಗಳೆಂದು,
ಇಂತೀ ನಾನಾ ವರ್ತನಂಗಳನರಿವ ಚಿತ್ತದ ಗೊತ್ತದಾವುದು?
ಒಂದು ಗಿಡುವಿನಲ್ಲಿ ಹುಟ್ಟಿದ ಮುಳ್ಳ
ಒಂದೊಂದ ಮುರಿದು ಸುಡಲೇತಕ್ಕೆ?
ಬುಡವ ಕಡಿದು ಒಡಗೂಡಿ ಸುಡಲಿಕ್ಕೆ ವಿಶ್ವಮಯ ಮೊನೆ ನಷ್ಟ.
ಇದು ಪಿಂಡಜ್ಞಾನ, ಶುದ್ಧಜ್ಞಾನೋದಯಭೇದ,
ಸದ್ಯೋಜಾತಲಿಂಗವ ಕೂಡುವ ಕೂಟ. ॥೬೦॥

೭೧೩

ಜೀವ ಆತ್ಮನನರಿಯಬೇಕೆಂಬರು, ಆತ್ಮ ಪರಮಾತ್ಮನನರಿಯಬೇಕೆಂಬರು.
ಇಂತೀ ಆತ್ಮಭೇದವನರಿವುದಕ್ಕೆ ಪದರದ ಹೊರೆಯೆ? ಅಟ್ಟಣೆಯ ಸಂದೆ?
ಅರಿದಲ್ಲಿ ಪರಮ, ಮರೆದಲ್ಲಿ ಜೀವನೆಂಬುದು.
ಆ ಉಭಯವ ಸಂಪಾದಿಸುವುದು ಅರಿವೊ? ಮರವೆಯೊ?
ಬಯಲ ಮರೆಮಾಡಿ ತೆರೆಗಟ್ಟಲಿಕ್ಕೆ ಅವರೊಳಗಾದ ದೃಷ್ಟವ ಕಾಬುದು,
ತೆರೆಯ ತೆಗೆಯಲಿಕ್ಕೆ ಬಯಲ ಕಾಬುದು.
ದೃಕ್ಕಿಂಗೆ ದೃಶ್ಯ ಒಂದೊ ಎರಡೊ ಎಂಬುದ ತಿಳಿದಲ್ಲಿ
ಸದ್ಯೋಜಾತಲಿಂಗದ ಕೂಟ. ॥೬೧॥

೭೧೪

ಸ್ಥೂಲತನುವಿನಲ್ಲಿ ಸೂಕ್ಷ್ಮತನು ಆಧೀನವಾಗಿಪ್ಪುದನರಿದು,
ಸೂಕ್ಷ್ಮತನುವಿನಲ್ಲಿ ಕಾರಣತನು ಆಧೀನವಾಗಿಪ್ಪುದನರಿದು ಇರಬೇಕು ಎಂಬಲ್ಲಿ
ಜಾಗ್ರದಲ್ಲಿ ಸ್ಥೂಲತನು ಕಂಡು, ಸೂಕ್ಷ್ಮತನುವಿಗೆ ಹೇಳಿತ್ತೆ ಸ್ವಪ್ನವ?
ಆ ಸ್ವಪ್ನ ಕಾರಣತನುವಿನಲ್ಲಿ ಅಳಿಯಿತ್ತೆ ಕೂಡಿಕೊಂಡು ?
ಕಟ್ಟಿಗೆಯ ಹಿಡಿಯಬಹುದಲ್ಲದೆ ಕೆಂಡವ ಹಿಡಿಯಬಹುದೆ?
ಕೆಂಡವ ಒಂದರಲ್ಲಿ ಬಂಧಿಸಿ ಹಿಡಿಯಬಹುದಲ್ಲದೆ
ಉರಿಯ ಬಂಧಿಸಿ ಹಿಡಿಯಬಹುದೆ?
ಆ ಉರಿ ಕೆಂಡದಲ್ಲಿ ಅಡಗಿ, ಕೆಂಡ ಕಾಷ್ಠದಲ್ಲಿ ಅಡಗಿ,
ಆ ಕಾಷ್ಠ ಆ ಕೆಂಡ ಉರಿಯ ದೆಸೆ, ಆ ಉರಿ ಕಾಷ್ಠದ ದೆಸೆ.
ಆ ಕಾಷ್ಠದಿಂದ ಕೆಂಡವಾಗಿ,
ಆ ಕೆಂಡಕ್ಕೆ ಪ್ರತಿರೂಪಿನಿಂದ ಉರಿ ಪಲ್ಲಯಿಸುವಂತೆ
ಇಂತೀ ಸ್ಥೂಲ ಸೂಕ್ಷ್ಮ ಕಾರಣ ತನುತ್ರಯದ ಭೇದ
ಸದ್ಯೋಜಾತಲಿಂಗವನರಿವುದಕ್ಕೆ. ॥೬೨॥

೭೧೫

ಪೃಥ್ವಿಯಲ್ಲಿ ಅಪ್ಪು ಕೂಡಲಿಕ್ಕೆ ಅಗ್ನಿ ಕೂಡಿ ನಾಲ್ಕು ಭೇದವಾಗಿಪ್ಪುದು.
ಆ ಅಗ್ನಿಯಲ್ಲಿ ವಾಯು ಕೂಡಿ ಏಳು ಭೇದವಾಗಿಪ್ಪುದು.
ಆ ವಾಯುವಿನಲ್ಲಿ ಆಕಾಶ ಕೂಡಿ ಹದಿನಾರು ಭೇದವಾಗಿಪ್ಪುದು.
ಇಂತೀ ಪೃಥ್ವಿಯ ಭೇದ, ಅಪ್ಪುವಿನ ಸರ್ವಸಾರ, ಅಗ್ನಿಗೆ ತನ್ಮಯ ಜಿಹ್ವೆ,
ವಾಯುವಿಗೆ ಸರ್ವಗಂಧ, ಆಕಾಶಕ್ಕೆ ಆವರಣ ಅಲಕ್ಷ,
ಇಂತೀ ಪಂಚೀಕರಣಂಗಳ ವಿಭಾಗಿಸಿ ಸೂತ್ರವಿಟ್ಟು
ಒಂದರಿಂದ ಹಲವು ಲೆಕ್ಕವ ಸಂದಣಿಸುವಂತೆ,
ಲೆಕ್ಕವ ಹಲವ ಕಂಡು ಒಂದರಿಂದ ವಿಭಾಗಿಸಿದರೆಂಬುದನರಿದು,
ತಾಯ ಗರ್ಭದ ಶಿಶು ಭಿನ್ನವಾದಂತೆ ಸುಖದುಃಖವ ವಿಚಾರಿಸಬೇಕು.
ಸದ್ಯೋಜಾತಲಿಂಗವೆಂದರಿವನ್ನಕ್ಕ ಉಭಯವ ವಿಚಾರಿಸಬೇಕು. ॥೬೩॥

೭೧೬

ಪೃಥ್ವಿಯ ವಂಶಿಕದಲ್ಲಿ ಆತ್ಮನು ಬಂದಿರಲಿಕ್ಕಾಗಿ
ಗುಣಗಂಭೀರದಲ್ಲಿ ಇದ್ದಿತೆಂಬರು.
ಅಪ್ಪುವಿನಂಶಿಕದಲ್ಲಿ ಆತ್ಮನು ಬಂದಿರಲಿಕ್ಕಾಗಿ ಸರ್ವಸಾರಮಯವಾಗಿದ್ದಿತ್ತೆಂಬರು.
ತೇಜದಂಶಿಕದಲ್ಲಿ ಆತ್ಮ ಬಂದಿರಲಿಕ್ಕಾಗಿ
ಸರ್ವದೀಪ್ತವಾಗಿದ್ದಿತ್ತೆಂಬರು.
ವಾಯುವಿನಂಶಿಕದಲ್ಲಿ ಆತ್ಮನು ಬಂದಿರಲಿಕ್ಕಾಗಿ
ಸರ್ವಸಂಚಲಮಯವಾಗಿದ್ದಿತ್ತೆಂಬರು.
ಆಕಾಶದಂಶದಲ್ಲಿ ಆತ್ಮನು ಬಂದಿರಲಿಕ್ಕಾಗಿ
ಶಬ್ದ ಮುಗ್ಧವಾಯಿತೆಂಬರು.
ಇಂತೀ ಐದು ಭೇದದಲ್ಲಿ ದಶವಾಯುವ ಕಲ್ಪಿಸಿಕೊಂಡು,
ಹೆಸರ ರೂಹಿಟ್ಟು ಅಸುನಾಥನ ಒಡಗೂಡಬೇಕೆಂಬಲ್ಲಿ
ಇದು ಸಂದಿಲ್ಲದ ಸಂಶಯ.
ನಾನಾರು ಇದೇನೆಂಬುದು ಏಕೀಕರಿಸಿದಲ್ಲಿ ಸರ್ವೇಂದ್ರಿಯ ನಾಶನ,
ಸದ್ಯೋಜಾತಲಿಂಗವನರಿವುದು ವಿನಾಶನ. ॥೬೪॥

೭೧೭

ತತ್ವಂಗಳ ಹೊತ್ತು ವಿಸ್ತರಿಸಿ ಸ್ಥಲಂಗಳನಾಧರಿಸಿ
ನಾನಾ ಭೇದಂಗಳಲ್ಲಿ ಹೊಕ್ಕು ವೇಧಿಸಿಹೆನೆಂದಡೂ,
ಕಾಯ ಕರ್ಮವ ಅನುಭವಿಸುವುದ ಕಂಡು,

ಜೀವ ನಾನಾ ಭವಂಗಳಲ್ಲಿ ಬರುತ್ತಿಹುದ ನೋಡಿ,
ಇನ್ನಾವುದ ಶ್ರುತದಲ್ಲಿ ಕೇಳಲೇತಕ್ಕೆ?
ಇನ್ನಾವುದ ಇದಿರಿಟ್ಟು ದೃಷ್ಟವ ನೋಡಲೇತಕ್ಕೆ?
ಇನ್ನಾವ ಮನುವಿಂದ ಅನುಮಾನವನರಿಯಲೇತಕ್ಕೆ?
ಹಿಡಿದುದ ಬಿಡದೆ ಬಿಟ್ಟುದ ಹಿಡಿಯದೆ
ಉಭಯದ ಒಳಗು ನಿರಿಯಾಣವಾದಲ್ಲಿ ತಾ ನಾಶನ
ಉದ್ಯೋಜಾತಲಿಂಗವು ವಿನಾಶನ. ॥೬೫॥

೭೧೮

ಪೂರ್ವದಿಂದ ಉತ್ತರಕ್ಕೆ ಬಂದ ಸೂರ್ಯನು
ಅಸ್ತಮಯವಾಯಿತ್ತೆಂದು ಜಾಹ್ಯಗೆ ಒಡಲಾಗಿ,
ಮತ್ತಾ ವರುಣಪ್ರದಕ್ಷಿಣದಿಂದ ಬಂದು ಪೂರ್ವದಲ್ಲಿ ಹುಟ್ಟಲಿಕ್ಕೆ
ನಿನ್ನಿಂಗೆ ಇಂದಿಂಗೆಯೆಂಬುದು ಒಂದೊ ಎರಡೊ?
ಅಂದಿಗೆ ಜ್ಞಾನ, ಇಂದಿಗೆ ಮರವೆ, ಎಂಬುದು ಒಂದೊ ಎರಡೊ?
ಅದು ಘಟದ ಪ್ರವೇಶದಿಂದ.
ಪೂರ್ವ ಉತ್ತರಕ್ಕೆ ಬಂದಾತ್ಮನನರಿದು
ಉಭಯವ ತಿಳಿದು ಸಂದು ನಾಶನವಾದಲ್ಲಿ
ಸದ್ಯೋಜಾತಲಿಂಗವು ವಿನಾಶವಾದ. ॥೬೬॥

೭೧೯

ಕಾಯಹೇಯಸ್ಥಲವೆಂದು, ಜೀವಹೇಯಸ್ಥಲವೆಂದು,
ಭಾವಹೇಯಸ್ಥಲವೆಂದು,
ಇಂತಿವರೊಳಗಾದ ಸರ್ವಹೇಯಸ್ಥಲವೆಂದು ನುಡಿವಾಗ
ಜ್ಞಾನವೇತರ ನೆಮ್ಮುಗೆಯಿಂದ ರೂಪಾಯಿತ್ತು?
ತೊರೆಯ ಹಾವುದಕ್ಕೆ ಹರುಗೋಲು,
ಲಘು ನೆಮ್ಮುಗೆಗಳಲ್ಲಿ ಹಾಯ್ವ ತೆರದಂತೆ.
ಅವು ಹೇಯವೆಂಬುದಕ್ಕೆ ತೆರಹಿಲ್ಲ.
ಅವು ತೊರೆಯ ತಡಿಯಲ್ಲಿಯ ಲಘು ಹರುಗೋಲು ಉಳಿದ ಮತ್ತೆ
ಅಡಿವಜ್ಜೆಗುಂಟೆ ಅವರ ಹಂಗು?
ತಾನರಿದಲ್ಲಿ ಅಹುದಲ್ಲವೆಂದು ಪಡಿಪುಚ್ಚವಿಲ್ಲ.
ತಾ ಸದ್ಯೋಜಾತಲಿಂಗದಲ್ಲಿ ನಾಶವಾಗಿ
ತನ್ನಲ್ಲಿ ವಸ್ತು ವಿನಾಶವಾದ ಕಾರಣ. ॥೬೭॥

೭೨೦
ಬೆಳಗಿನ ತುದಿಯಲ್ಲಿ ತಮ ಸೇರಿಪ್ಪಂತೆ,
ಬೆಳಗಿನ ಬುಡವು ತಮದ ಒಡಲೆಂದು ಅರಿತಲ್ಲಿ
ಅರಿವು ಮರವೆಯಲ್ಲಿಂದ ಬಂದಿತ್ತೆಂದು ಆರಡಿಗೊಳಲೇತಕ್ಕೆ?
ಈ ದ್ವಂದ್ವವ ತಿಳಿದು ನಿಜವೊಂದರಲ್ಲಿ ನಾಶವಾಗಲಿಕ್ಕೆ
ಸದ್ಯೋಜಾತಲಿಂಗವು ತನ್ನಲ್ಲಿ ವಿನಾಶವಪ್ಪನು. ॥೬೮॥

೭೨೧
ಸಕಲಕರ್ಮಂಗಳಲ್ಲಿ ಕೂಡಿದ್ದಡೂ
ನಾನಾ ಕರ್ಮಧರ್ಮವನರಿದಿರಬೇಕು.
ನಾನಾ ಕರ್ಮಂಗಳನರಿದಡೂ
ಅಳಿವು ಉಳಿವು ಉಭಯದ ವರ್ಮವನರಿಯಬೇಕು.
ವರ್ಮವನರಿದಡೂ ಅಂತಿಂತೆನ್ನದೆ ಸುಮ್ಮನಿರಬೇಕು.
ಸುಳುಹು ಸೂಕ್ಷ್ಮನಾಶನವಾಗಿ
ಸದ್ಯೋಜಾತಲಿಂಗದಲ್ಲಿ ವಿನಾಶನವಾಗಬೇಕು . ॥೬೯॥

೭೨೨
ಗುರುವೆಂಬುದ ಪ್ರಮಾಣಿಸಿದ ಶಿಷ್ಯನಾದಡೆ
ತನ್ನಯ ಉಭಯದ ಗುರುವ ತಿಂದು ತೇಗಬೇಕು.
ಲಿಂಗಭಕ್ತನಾದಡೆ ಅಂಗ ಲಿಂಗವೆಂಬ ಉಭಯವನೊಡೆದು
ಉಭಯದ ಸಂದಿಯಲ್ಲಿ ಸಿಕ್ಕದೆ ನಿಜಲಿಂಗವಂತನಾಗಬೇಕು.
ಜಂಗಮ ಅಳಿದು ವಿರಕ್ತನಾಗಬಲ್ಲಡೆ ಆ ಗುರು, ಆ ಶಿಷ್ಯ, ಆ ಲಿಂಗ, ಆ ಭಕ್ತನ,
ಈ ಜಂಗಮ, ಈ ವಿರಕ್ತನ ಕೊಂದು ತಿಂದು
ಅಂಗ ನಿರಂಗವಾಗಬಲ್ಲಡೆ ಸದ್ಭಾವಸಂಗಿ, ಷಟ್ಸ್ಥಲಬ್ರಹ್ಮಿ.
ಸರ್ವಾರ್ಪಣ ಅಂತಸ್ಥಲೇಪ, ತದ್ಭಾವ ನಾಶ.
ಈ ಸಂದನಳಿದಲ್ಲಿ ಸದ್ಯೋಜಾತಲಿಂಗದಲ್ಲಿ
ವಿನಾಶವಾದ ನಿರ್ಲೇಪ. ॥೭೦॥

೭೨೩
ನೋಡುವ ಕಣ್ಣ ಕನ್ನಡಿ ನುಂಗಿದ ಮತ್ತೆ,
ನೋಡಿ ನೋಡಿಸಿಕೊಂಬವರಿನ್ನಾರು ಹೇಳಾ.
ಉಂಬ ಬಾಯಿ ಅಡುವ ಮಡಕೆಯಾದಲ್ಲಿ ಬಡಿಸುವರಿನ್ನಾರು ಹೇಳಾ.

ನಿಮ್ಮೊಳಗಾದಲ್ಲಿ ಪೂಜಿಸುವರಿನ್ನಾರು ಹೇಳಾ.
ನೀನೆನ್ನೊಳಗಾದಲ್ಲಿ ನಾನಿದಿರಿಟ್ಟು ಮುಟ್ಟುವ ಠಾವ ತೋರಾ.
ನಾ ನಿನ್ನವನಾಗಿ ಇತ್ತ, ನೀನು ಎನ್ನವನಾಗಿ ಅತ್ತ,
ನನಗೂ ನಿನಗೂ ಮಮತೆ ಬಿಡದಾಗಿ
ನಾನು ನೀನು ತತ್ತುಗೊತ್ತಿನ ಲಕ್ಷಿತರು.
ಇದು ಭಕ್ತಿ ವಿಶ್ವಾಸ ಭೇದ,
ಸದ್ಯೋಜಾತಲಿಂಗವ ಕೂಡಬೇಕಾದ ಕಾರಣ. ॥೭೧॥

೭೨

ಮರನನೇರದೆ ಹಣ್ಣು ಕೊಯ್ಯಬಹುದೆ?
ಕುಸುಮವಿಲ್ಲದೆ ಗಂಧವ ಮುಡಿಯಬಹುದೆ?
ಉಪದೃಷ್ಟವಿಲ್ಲದೆ ನಿಜದೃಷ್ಟವ ಕಾಣಬಹುದೆ?
ಕ್ರೀಶ್ರದ್ಧೆಯಿಲ್ಲದೆ ತ್ರಿವಿಧಕರ್ತೃ ತನಗೆ ಸಾಧ್ಯವಪ್ಪುದೆ?
ಇದು ಕಾರಣ ಗುರುವಿನಲ್ಲಿ ಸದ್ಭಾವ, ಲಿಂಗದಲ್ಲಿ ಮೂರ್ತಿಧ್ಯಾನ,
ಜಂಗಮದಲ್ಲಿ ತ್ರಿವಿಧಮಲದೂರಸ್ಥನಾಗಿಪ್ಪುದು,
ಸದ್ಭಕ್ತನಂಗ, ಚಿದ್ಘನವಸ್ತುವಿನ ಸಂಗ,
ಸದ್ಯೋಜಾತಲಿಂಗಕ್ಕೆ ಸುಸಂಗ. ॥೭೨॥

೭೩

ವೇದವ ಗ್ರಹಿಸಿದೆನೆಂದು ಕರ್ಮವ ಬಿಡಬಹುದೆ?
ಸಕಲಶಾಸ್ತ್ರವ ವೇದಿಸಿದೆನೆಂದು ಪಾಪಪುಣ್ಯವಿಲ್ಲ
ಎಂದು ನಡೆಯಬಹುದೆ?
ಪುರಾಣದ ಪೂರ್ವವ ಬಲ್ಲೆನೆಂದು ನೆಲೆ ಹೊಲೆ ಕುಲ ಛಲ ಒಂದೆನ್ನಬಹುದೆ?
ಮಧುರ ಖಾರ ಕಹಿಯನರಿವನ್ನಕ್ಕ ಕ್ರೀ ಹೇಗೆ ಇದ್ದಿತ್ತು,
ವರ್ತನಶುದ್ಧ ಹಾಗಿರಬೇಕು,
ಸದ್ಯೋಜಾತಲಿಂಗವನರಿವುದಕ್ಕೆ ಭಕ್ತಿಮಾರ್ಗ. ॥೭೩॥

೭೪

ಶರೀರಕ್ಕೆ ರುಜೆ ಬಂದು ತೊಡಕಿದಲ್ಲಿ ರುಜೆಯ ಭೇದವನರಿತು,
ಶರೀರಧರ್ಮವನರಿತು,
ತನುವಿಗೆ ಚಿಕಿತ್ಸೆ, ಆತ್ಮಂಗೆ ಸುಖರೂಪ
ಉಭಯವನರಿದು ಆರೈವ ಕಾರಣ ಪಂಡಿತನಪ್ಪ.
ಇಂತೀ ಭೇದದಂತೆ ಗುರುಚಾರಿತ್ರನಾಗಿ, ಶಿವಲಿಂಗಪೂಜಕನಾಗಿ,

ಚರಸೇವೆಸನ್ನದ್ಧನಾಗಿ,
ಇಂತೀ ಸತ್ಕ್ರಿಗಳಲ್ಲಿ ನಿರ್ಧರವಪ್ಪ ಮಹಾಭಕ್ತನಿಪ್ಪುದೆ
ಸದ್ಯೋಜಾತಲಿಂಗದ ಸೆಜ್ಜಾಗೃಹ. ॥೭೪॥

೭೨೭
ನಾನಾ ಮೂಲಿಕೆ ಪಾಷಾಣಂಗಳಲ್ಲಿ ಪರುಷರಸಸಿದ್ಧಿಯಾದುದಿಲ್ಲವೆ?
ನಾನಾ ವರ್ತನ ಸ್ಥಲಕುಳಂಗಳನರಿದಲ್ಲಿ
ನಿಜವಸ್ತುವಿನ ನಿಜವನರಿತು ಪೂಜಿಸುವಲ್ಲಿ ಕಟ್ಟುಗೊತ್ತಿಗೆ ಬಾರನೆ?
ಇದಕ್ಕೆ ದೃಷ್ಟಿ ನಿಮಿತ್ತ ಶಕುನಂಗಳು, ತಿಥಿವಾರಗಳು, ನಕ್ಷತ್ರಗ್ರಹಬಲಂಗಳು
ನಂಬುಗೆಯಿಂದ, ವಿಶ್ವಾಸದ ಬಲೋತ್ತರದಿಂದ ಸಂಕಲ್ಪಸಿದ್ಧಿಯಾಯಿತ್ತು.
ಇದು ವಿಶ್ವಾಸ ಭೇದ, ಭಕ್ತಿಯ ಶ್ರದ್ಧೆ,
ಸದ್ಯೋಜಾತಲಿಂಗದ ಹೆಚ್ಚುಗೆಯ ಸಂಗ. ॥೭೫॥

೭೨೮
ಅಹಿ ಕ್ರೂರಮೃಗಂಗಳೆಲ್ಲಕ್ಕೂ ಬಾಯಿಕಟ್ಟಿಂದ ಕಚ್ಚವು ಫಲಂಗಳ,
ಹೊಲದಲ್ಲಿದ್ದಡೂ ಆ ಹೊಲದ ಸೀಮೆಯ ಫಲವನೊಲ್ಲದ
ತೆರದಿಂದ ಕಡೆಯೆ ನಿಮ್ಮ ಹೊಲಬಿನ ಹೊಲ?
ಗುರುಭಕ್ತನಾದಡೆ ಗುರು ಆಜ್ಞೆ ತಪ್ಪದೆ,
ಲಿಂಗಭಕ್ತನಾದಡೆ ಅರ್ಚನೆ, ಪೂಜನೆ, ನಿತ್ಯ ನೇಮ ಕೃತ್ಯಂಗಳು ತಪ್ಪದೆ,
ಜಂಗಮಭಕ್ತನಾದಡೆ ಆಪ್ಯಾಯನದ ಅನುವಿಷಯದ ಡಾವರ
ಆಶೆಯ ಪಾಶದ ಪರಿಭ್ರಮಣವನರಿತು,
ಸುಖಿಯಲ್ಲದೆ, ದುಃಖಿಯಲ್ಲದೆ ಬಂದಂತೆ ಬಾಯಿಗರೆಯದೆ,
ಕಂಡುದ ಬೇಡದೆ, ನಿಂದೆಗೆಡೆಗೊಡದೆ ನಿಜಲಿಂಗಾಂಗಿಯನರಿದು,
ಭಕ್ತಿಗೆ ಊಣೆಯವಿಲ್ಲದೆ ಅವರವರ ಒಪ್ಪಕ್ಕೆ ತಕ್ಕ ಚಿತ್ತವಿದ್ದು
ಮಾಡುತ್ತಿಪ್ಪ ಭಕ್ತನ ಬಾಗಿಲೆ
ಸದ್ಯೋಜಾತಲಿಂಗವ ಕಾಬುದಕ್ಕೆ ಕಾಹಿಲ್ಲದ ಪಥ. ॥೭೬॥

೭೨೯
ಎಲ್ಲಾ ಧರೆಯಲ್ಲಿಯೂ ಹೇಮ ಹರಿದ ಮತ್ತೆ
ಅರಿದೊರೆಗಳು ಇರಿದಾಡಲೇತಕ್ಕೆ?
ಎಲ್ಲವೂ ಸತ್ಯಮಯವಾದಲ್ಲಿ
ಅವ ಕೆಟ್ಟನಿವ ಕೆಟ್ಟನೆಂದು ಹೋರಿಯಾಡಲೇತಕ್ಕೆ?
ರತ್ನ ರಜತ ಮೌಕ್ತಿಕ ಹೇಮ ಇವು ಮುಂತಾದ

ಸ್ಥಾವರ ಫಲ ಸಸಿ ವೃಕ್ಷಂಗಳು ಮೊದಲಾದುವೆಲ್ಲವೂ
ತಮ್ಮ ತಮ್ಮ ಸ್ವಸ್ಥಭೂಮಿಗಳಲ್ಲಿ ಅಲ್ಲದೆ ಹುಟ್ಟವಾಗಿ,
ಕುಲವಿಪ್ಪೆಡೆಯಲ್ಲಿ ಆಚಾರ, ಆಚಾರವಿಪ್ಪೆಡೆಯಲ್ಲಿ ನಿಷ್ಠ,
ನಿಷ್ಠ ಇಪ್ಪೆಡೆಯಲ್ಲಿ ನಿಜಲಿಂಗವಸ್ತು,
ವಸ್ತು ನಿಶ್ಚಯವಾದ ಎಡೆಯಲ್ಲಿ ಭಕ್ತಿಯ ಬೆಳಸು,
ಕೊಯ್ದು, ಒಕ್ಕಿ, ತೂರಿ, ಅಳತೆ ಸಂದಿತ್ತು
ಸದ್ಯೋಜಾತಲಿಂಗವೆಂಬ ಕಣಜಘಟದಲ್ಲಿ. ॥೭೭॥

೭೩೦

ಭಕ್ತಂಗೆ ಗುರುಲಿಂಗಜಂಗಮದಲ್ಲಿ ಗುಣದೋಷಂಗಳನರಸದಿಪ್ಪುದು.
ಮಹೇಶ್ವರಂಗೆ ಆಚಾರಕ್ಕೆ ಅಣುಮಾತ್ರದಲ್ಲಿ ತಪ್ಪದೆ
ಕ್ಷಣಮಾತ್ರದಲ್ಲಿ ಸೈರಿಸದಿಪ್ಪುದು.
ಪ್ರಸಾದಿಗೆ ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಸಾದವನರಿದಿಪ್ಪುದು.
ಪ್ರಾಣಲಿಂಗಿಗೆ ಅರ್ಪಿತ ಅವಧಾನಂಗಳಲ್ಲಿ,
ಸುಗುಣ ದುರ್ಗಣ ಗಂಧಂಗಳಲ್ಲಿ
ಮಧುರ ಖಾರ ಲವಣ ಕಹಿ ಮೃದು ಕಠಿಣಂಗಳಲ್ಲಿ
ನಿರೀಕ್ಷಣೆಯಿಂದ ಸೋಂಕುವಲ್ಲಿಯ ಸ್ಪರ್ಶನದಲ್ಲಿಯೆ ಅರಿದರ್ಪಿತ
ಮುಂತಾಗಿ ಸ್ವಾದಿಸಬೇಕು.
ಶರಣನಾದಡೆ ಭೇದಭಾವವಿಲ್ಲದೆ ವಂದನೆ ನಿಂದನೆ ಉಭಯವೆನ್ನದೆ
ಸುಖದುಃಖಂಗಳ ಸರಿಗಂಡು ರಾಗವಿರಾಗನಾಗಿಪ್ಪುದು.
ಐಕ್ಯನಾದಡೆ ಚಿನ್ನದೊಳಗಡಗಿದ ಬಣ್ಣದಂತೆ,
ಸರ್ವವಾದ್ಯದಲ್ಲಿ ಅಡಗಿದ ನಾದದಂತೆ,
ಮಂಜಿನ ರಂಜನೆ ಬಿಸಿಲ ಅಂಗದಲ್ಲಿ ಅಡಗಿದಂತೆ.
ಇದು ಷಡುಸ್ಥಲದ ಒಪ್ಪ
ಸದ್ಯೋಜಾತಲಿಂಗವು ಕ್ರೀಯಲ್ಲಿಪ್ಪ ಭೇದ. ॥೭೮॥

೭೩೧

ಸ್ಥಲವನಂಗೀಕರಿಸಿದಲ್ಲಿ ಸ್ಥಲಂಗಳ ಮೆಟ್ಟಿ ನಡೆವಲ್ಲಿ
ಮೆಟ್ಟಿದ ಹೆಜ್ಜೆಯ ಮೆಟ್ಟಿ ನಡೆವ ಗಾಣದ ಎತ್ತಿನಂತಾಗದೆ,
ಮರೆ ಎಂದಲ್ಲಿ ಕಳಾಸ ನಿಂದಿತ್ತು,
ಸ್ಥಲಂಗಳನಾರೋಪಿಸಿ ಅಭಿಮುಖವಾದಲ್ಲಿ
ಸದ್ಯೋಜಾತಲಿಂಗವ ಕೂಡಿಕೊಂಡಿತ್ತು. ॥೭೯॥

೭೩೨

ಸ್ಥಲವ ಮೆಟ್ಟಿ ನಡೆವಲ್ಲಿ ಪಕ್ವವಾದ ಹಣ್ಣಿನ ತೆರ,
ಹಿಪ್ಪೆ ಬೀಜದ ಮಧ್ಯದಲ್ಲಿ ಇಪ್ಪ ರಸದಂತೆ.
ಬೀಜ ಒಳಗು, ಹಿಪ್ಪೆ ಹೊರಗು,
ರಸ ಮಧ್ಯದಲ್ಲಿಪ್ಪ ಭೇದವ ನೋಡಾ.
ಬೀಜದ ಬಲಿಕೆಯಿಂದ ಹಿಪ್ಪೆ ಬಲಿದು,
ಹಿಪ್ಪೆಯ ಬಲಿಕೆಯಿಂದ ಬೀಜ ನಿಂದು,
ಉಭಯದ ಬಲಿಕೆಯಿಂದ ಮಧುರರಸ ನಿಂದುದ ಕಂಡು
ಹಿಪ್ಪೆ ಬೀಜ ಹೊರಗಾದುದನರಿತು,
ಆ ರಸಪಾನವ ಸ್ವೀಕರಿಸುವಲ್ಲಿ ಜ್ಞಾನದಿಂದ ಒದಗಿದ ಕ್ರೀ,
ಕ್ರೀಯಿಂದ ಒದಗಿದ ಜ್ಞಾನ.
ಇಂತೀ ಭೇದವಲ್ಲದೆ ಮಾತಿಗೆ ಮಾತ ಗಂಟನಿಕ್ಕಿ
ನಿಹಿತ ವರ್ತನವಿಲ್ಲದೆ ಸರ್ವತೂತಾಲಂಬರ ಮಾತು ಸಾಕಂತಿರಲಿ.
ಕ್ರೀಯಲ್ಲಿ ಮಾರ್ಗ, ಭಾವದಲ್ಲಿ ನೆಮ್ಮುಗೆ, ದಿವ್ಯಜ್ಞಾನದಲ್ಲಿ ಕೂಟ.
ಇದು ಸದ್ಯೋಜಾತಲಿಂಗದ ಷಟ್‌ಸ್ಥಲ ಲೇಪದಾಟ. ॥೮೦॥

೭೩೩

ಭಕ್ತಂಗೆ ಭಕ್ತಿಸ್ಥಲ, ವಿರಕ್ತಂಗೆ ಬಿಡುಗಡೆ,
ಈ ಉಭಯ ಕೂಡಿ ಏಕವಾದಲ್ಲಿ ಪರಿಪೂರ್ಣತ್ವ,
ಇಷ್ಟಲ್ಲದೆ ಕೀಳ ನೆನೆದು ಮೇಲೆ ನೋಡಲಿಲ್ಲ.
ಮೇಲೆ ನಿಂದು ಕೀಳ ನೆನೆಯಲಿಲ್ಲ.
ಅದು ಉರಿಯ ಬಾಣದಂತೆ, ಮರೀಚಿಕಾ ಜಲದಂತೆ,
ಸುರಚಾಪದಂತೆ, ಬುದ್ಬುದ ಮಣಿಯಂತೆ ತೋರಿ
ತೋರಿದಲ್ಲಿ ನಾಮನಷ್ಟವಾಗಿ
ಸ್ಥಲಗ್ರಹಿತನ ಭಾವ ಸದ್ಯೋಜಾತಲಿಂಗದ ಕೂಟ. ॥೮೧॥

೭೩೪

ದೃಕ್ಕಿನ ದೃಶ್ಯಕ್ಕೆ ಕಾಬತನಕ ಕಂಡು
ಅಲ್ಲಿಂದಾಚೆ ಏನೂ ಇಲ್ಲಾ ಎಂಬುದು
ದೃಷ್ಟಿಯ ಭೇದವೊ? ಜಗದ ಭೇದವೊ?
ಇಂತೀ ಭೇದವ ತಿಳಿದು ತನ್ನ ದೃಷ್ಟಕ್ಕೆ ತಕ್ಕ ಸ್ಥಲವ ಮೆಟ್ಟಿ,
ಸ್ಥಲಕ್ಕೆ ತಕ್ಕ ಆಚರಣೆಯಲ್ಲಿ ನಿಂದು, ಆ ಆಚರಣೆ ಆದಿಯಾಗಿ
ಅನಾದಿಯಿಂದತ್ತಣವನ ಭೇದಿಸಿ ಹಿಡಿದು
ಸದ್ಯೋಜಾತಲಿಂಗದಲ್ಲಿ ವೇಧಿಸಬೇಕು. ॥೮೨॥

೭೩೫

ಕಾಲಲ್ಲಿ ಮೆಟ್ಟದೆ, ಕೈಯಲ್ಲಿ ಹಿಡಿಯದೆ, ಮರನನೇರಬೇಕು.
ಕಣ್ಣಿನಲ್ಲಿ ನೋಡದೆ, ಬೆರಳಿನಲ್ಲಿ ಹರಿಯದೆ, ಬಾಯಲ್ಲಿ ಮೆಲ್ಲದೆ,
ಹಣ್ಣಿನ ರಸವ ನುಂಗಬೇಕು, ಸದ್ಯೋಜಾತಲಿಂಗದಲ್ಲಿ. ॥೮೩॥

೭೩೬

ಕಾಡೆಮ್ಮೆ ಊರಗೋಣನನೀದು,
ಆ ಊರಗೋಣಂಗೆ ಮೂರು ಬಾಯಿ, ಆರು ಕಾಲು,
ಕೊಂಬು ಎಂಟು, ಕಿವಿ ಹದಿನಾರು,
ನಾಲಗೆ ಇಪ್ಪತ್ತೈದು, ಬಾಲ ಮೂವತ್ತಾರು.
ನೂರರ ಬೆಂಬಳಿಯಲ್ಲಿ ನೋಡುವ ಕಣ್ಣು ಒಂದೆಯಾಯಿತ್ತು.
ಆ ಒಂದು ಕಣ್ಣು ಇಂಗಲಾಗಿ ಕೋಣಂಗೆ ಗ್ರಾಸವಿಲ್ಲದೆ
ಅದು ಅಲ್ಲಿಯೇ ಹೊಂದಿತ್ತು,
ಸದ್ಯೋಜಾತಲಿಂಗದಲ್ಲಿ ನಾಮನಷ್ಟವಾಯಿತ್ತು. ॥೮೪॥

೭೩೭

ಕಾಳಮೇಘನೆಂಬ ಭೂಮಿಯಲ್ಲಿ ಕಾಳರಾತ್ರಿಯೆಂಬ ಏರಿ [ಕಟ್ಟೆ],
ಮಂಜಿನ ನೀರು ತೊರೆಗಟ್ಟಿ ಹಾಯ್ದು ತುಂಬಿತ್ತು.
ಆ ಕೆರೆಗೆ ತೂಬು ಬಿಸಿಲ ಸಂಭ್ರಮದ ಕಲ್ಲು,
ಕಂಜನಾಳದ ನೂಲಿನ ಕಂಬ ಆ ತಲಪಿಂಗೆ.
ಅಂದಿನ ಮುಚ್ಚಳು, ಇಂದಿನ ದ್ವಾರದಲ್ಲಿ ಸೂಸುತ್ತಿರಲಾಗಿ
ಸಾಳಿವನ ಬೆಳೆಯಿತ್ತು,
ಕೊಯ್ದು ಅರಿಯ ಹಾಕಲಾಗಿ
ಒಂದಕ್ಕೆ ಎರಡಾಗಿ ಎರಡಕ್ಕೆ ಮೂರುಗೂಡಿ ಹೊರೆಗಟ್ಟಿತ್ತು.
ಹಾಕುವುದಕ್ಕೆ ಕಳನಿಲ್ಲದೆ, ನೆಡುವುದಕ್ಕೆ ಮೇಟಿಯಿಲ್ಲದೆ
ಒಕ್ಕುವುದಕ್ಕೆ ಎತ್ತಿಲ್ಲದೆ, ಹೊರೆಯೆತ್ತ ಹೋಯಿತೆಂದರಿಯೆ
ನಾ ಹೋದೆ, ಸದ್ಯೋಜಾತಲಿಂಗದಲ್ಲಿಗಾಗಿ. ॥೮೫॥

೭೩೮

ಅರಿದೆನೆಂಬುದೆ ಅಜ್ಞಾನ, ಮರೆದೆನೆಂಬುದೆ ದಿವ್ಯಜ್ಞಾನ.
ಅರಿದೆ ಮರೆದೆನೆಂಬುದ ಹರಿದಾಗಲೆ ಉಪಮಾಪಾತಕ.
ಆ ಪಾತಕದ ಫಲಂಗಳಲ್ಲಿ ಜ್ಞಾನಜ್ಞರುಗಳ ನೋಡಿ, ನಾ ನಾಶವಾದೆ
ಸದ್ಯೋಜಾತಲಿಂಗ ವಿನಾಶವಾಯಿತ್ತು. ॥೮೬॥

೭೩೯
ಕೆಡದ ಒಡವೆಗೆ ಕೆಟ್ಟವ ನೋಡಿ ದೃಷ್ಟವ ಕಂಡ.
ಕಂಡುದ ಕಾಣದುದ ಒಡಗೂಡಿ ಕೆಡಿಸಿ ಮತ್ತೆ ಅರಸಿ,
ಹಿಂಡಿನಲ್ಲಿ ನೋಡಿ, ಹಿಂಡಿನ ಕುರಿ ನುಂಗಿದವೆಂದು
ಒಂದೆ ಕೊರಳಿನಲ್ಲಿ ಅಳುತ್ತಿದ್ದ, ಸದ್ಯೋಜಾತಲಿಂಗ ಕೇಳಬೇಕೆಂದು. ॥೮೭॥

೭೪೦
ಗುರುಭಕ್ತ ಗುರುವಿಲ್ಲದೆ ಶಿಷ್ಯನಾಗಿ,
ಲಿಂಗಭಕ್ತ ಲಿಂಗವಿಲ್ಲದೆ ಲಿಂಗವಂತನಾಗಿ,
ಜಂಗಮಭಕ್ತ ಜಂಗಮವಿಲ್ಲದೆ ಜಂಗಮಕ್ಕಿಕ್ಕಿ ಮುಕ್ತನಾದ.
ಇಂತೀ ಮೂವರ ಮುದ್ದು ಎನಗೆ ಸತ್ತುಹೋಯಿತ್ತಲ್ಲಾ ಎಂದು,
ಬಿಕ್ಕದೆ ಕಣ್ಣನೀರಿಲ್ಲದೆ ಒಂದೆ ಸ್ವರದಲ್ಲಿ ಅಳುತ್ತಿದ್ದ
ಸದ್ಯೋಜಾತಲಿಂಗ ಕೇಳಬೇಕೆಂದು. ॥೮೮॥

೭೪೧
ಕ್ರೀಯ ನುಡಿವಲ್ಲಿ ಸ್ಥಲ, ಸ್ಥಲವ ನುಡಿವಲ್ಲಿ ಆಚರಣೆ,
ಆಚರಣೆ ಆಧರಿಸಿದಲ್ಲಿ ಜ್ಞಾನ, ಜ್ಞಾನವನಾಧರಿಸಿದಲ್ಲಿ ದಿವ್ಯಜ್ಞಾನ,
ದಿವ್ಯಜ್ಞಾನ ಆಧರಿಸಿ ನಿಂದಲ್ಲಿ ಮಹದೊಡಲು ಅದು,
ಮಹಾಮಯ ಲೇಪವಾದಲ್ಲಿ ಅದು ಐಕ್ಯಪದ
ಸದ್ಯೋಜಾತಲಿಂಗದಲ್ಲಿ. ॥೮೯॥

೭೪೨
ಸ್ಥಲವಿವರಂಗಳ ವಿಚಾರಿಸುವಲ್ಲಿ
ಘಟಕ್ಕೆ ಕರ ಚರಣ ನಾಸಿಕ ನಯನ ಕರ್ಣ
ಮುಂತಾದ ಅವಯವಂಗಳೊಳಗಾದ ಭೇದವ
ಘಟ ಗರ್ಭೀಕರಿಸಿಕೊಂಬತೆ
ಆ ಘನವ ಚೇತನ ವಸ್ತು ಹೊತ್ತಾಡುವಂತೆ,
ಇದು ಸ್ಥಲವಿವರ, ಸದ್ಯೋಜಾತಲಿಂಗವನರಿವುದಕ್ಕೆ. ॥೯೦॥

೭೪೩
ಕುಂಭದ ಅಪ್ಪುವಿನ ಸಂಗದಲ್ಲಿ ತಂಡುಲವ ಹಾಕಿ
ಅಗ್ನಿಘಟದಿಂದ ಬೇಯಿಸಲಿಕ್ಕಾಗಿ,
ಒಂದೊಂದು ತಂಡುಲ ಹಿಂಗಿ ಬೆಂದಿತ್ತೆ?

ಆ ಅಪ್ಪು ಬೇರೆ ಬೇರೆ ಸಂಗವ ಮಾಡಿತ್ತೆ?
ಆ ಅಗ್ನಿ ತಂಡುಲಕ್ಕೊಂದೊಂದು ಬಾರಿ ಉರಿಯಿತ್ತೆ?
ಇಂತೀ ವಿವರಂಗಳ ಭೇದವನರಿತು
ಅಂಗದಲ್ಲಿ ಆರು ಸ್ಥಲವನಂಗೀಕರಿಸಿದಲ್ಲಿ
ಬೇರೊಂದೊಂದರಲ್ಲಿ ಹಿಂಗಿ ನೋಡಿಹೆನೆಂದಡೆ
ಮೂರಕ್ಕಾರು, ಆರಕ್ಕೆ, ಮೂವತ್ತಾರು
ಮತ್ತಿವರೊಳಗಾದ ಗುಣ ನಾಮಾತೀತಕ್ಕೆ ಅತೀತವಾಗಿಪ್ಪುದು.
ಇಂತೀ ಸ್ಥಲಂಗಳನಹುದೆಂದೊಪ್ಪದೆ, ಅಲ್ಲಾ ಎಂದು ಬಿಡದೆ,
ಅಲ್ಲಿಯ ಸ್ಥಲವಲ್ಲಿಯೆ ಏಕೀಕರಿಸಿ,
ಅಲ್ಲಿಯ ಭಾವವ ತೋರಿದಲ್ಲಿಯೆ ಲೇಪಮಾಡಿ,
ಹಿಡಿದಡೆ ಹಿಡಿತೆಗೆ ಬಾರದೆ, ಬಿಟ್ಟಡೆ ಹರವರಿಯಲ್ಲಿ ಹರಿಯದೆ,
ವಸ್ತುಕದಲ್ಲಿ ವರ್ಣಕ ತೋರಿ
ಆ ವರ್ಣಕಕ್ಕೆ ವಸ್ತುಕ ಅಧೀನವಾಗಿಪ್ಪ ಉಭಯಸ್ಥಲವನರಿದಲ್ಲಿ
ವಿಶ್ವಸ್ಥಲ ನಾಶವಾಗಿ ಸದ್ಯೋಜಾತಲಿಂಗ ವಿನಾಶನವಾಗಬೇಕು, ||೯೧||

೭೪೪

ರೂಪಿಲ್ಲದ ನಾಮವ ಕರೆದಡೆ ಅದೇತರಿಂದ ಲಕ್ಷಿಸಬಹುದು?
ಇಂತೀ ಸ್ಥಲರೂಪಕನಾಗಿ ಸದ್ಯೋಜಾತಲಿಂಗವನರಿದು
ನಿಃಸ್ಥಲವಾಗಬೇಕು. ||೯೨||

೭೪೫

ಕಡೆಯಾಣಿಗೆ ಒರೆಗಲ್ಲ ಹಿಡಿದು ಪ್ರಮಾಣಿಸಿಹೆನೆನ್ನಬಹುದೆ?
ಇಂತೀ ಕಡೆಯಾಣಿಗೆ ಒಳಗಾದುದಕ್ಕಲ್ಲದೆ
ಪಡಿಪುಚ್ಚ ಪಾಷಾಣ ಪೂರ್ವದಲ್ಲಿ ಸ್ಥಲ, ಉತ್ತರದಲ್ಲಿ ನಿಃಸ್ಥಲ,
ಇಂತೀ ಉಭಯವನರಿವುದು ಮಹಾಸ್ಥಲ.
ಸ್ಥಲವೆಂಬ ಇದಿರು ಮಹದೊಳಗಾದಲ್ಲಿ
ಸದ್ಯೋಜಾತಲಿಂಗವು ಬಟ್ಟಬಯಲಾಯಿತ್ತೆನಲಿಲ್ಲ. ||೯೩||

೭೪೬

ಚಿತ್ರಜ್ಞ ಘಟಲಕ್ಷಣವ ಬರೆಯಬಲ್ಲನಲ್ಲದೆ
ಸಲ್ಲಕ್ಷಣವಪ್ಪ ಆತ್ಮನ ಇರಿಸಬಲ್ಲನೆ?
ಸ್ಥಲದ ಮಾತನಾಡಬಲ್ಲರಲ್ಲದೆ ಸ್ಥಲವ ನಿರ್ಧಾರವಾಗಿ ನಿಲ್ಲಿಸಿ,
ಸ್ಥಲವೇದಿಸಿ ಭೇದಿಸಿ ನಿಶ್ಚಿಂತವಾದಲ್ಲಿ
ಸದ್ಯೋಜಾತಲಿಂಗ ಬಟ್ಟಬಯಲಾಯಿತ್ತೆನಲಿಲ್ಲ. ||೯೪||

೭೪೭

ದ್ವೈತವೆಂದಡೆ ತಾನಿದಿರು ಎಂಬುದು ಎರಡುಂಟಾದುದು.
ಅದ್ವೈತವೆಂದಡೆ ಕಾಣಬಾರದುದ ಕಂಡೆಹೆನೆಂಬುದು.
ಇಂತು ದ್ವೈತ ಅದ್ವೈತಂಗಳಿಂದ
ಕಂಡೆ ಕಾಣಿಸಿಕೊಳ್ಳೆನೆಂಬ ಬಂಧವಿಲ್ಲದೆ
ನಿಜಸಂಗವೆಂಬುದು ತಲೆದೋರದೆ, ಉರಿಕೊಂಡ ಕರ್ಪುರದ ಗಂಧದಂತೆ
ಅಲ್ಲಿಯೆ ಸ್ಥಲಲೇಪ ಲೋಪ,
ಸದ್ಯೋಜಾತಲಿಂಗ ಬಟ್ಟಬಯಲು. ॥೯೫॥

೭೪೮

ತನ್ನನರಿದು ಇದಿರನರಿಯಬೇಕೆಂಬುದು ಪ್ರಮಾಣು.
ಇದಿರ ಗುಣವನರಿತು ತನ್ನ ಗುಣವನರಿದು
ಸಂಪಾದಿಸುವುದು ಅಪ್ರಮಾಣು.
ತನ್ನ ಗುಣವನರಿದು ನಡೆವವರೆಲ್ಲರನು ಕಾಣಬಹುದು.
ಇದಿರ ಗುಣವನರಿತು ತನ್ನ ಗುಣವ ಸಂಬಂಧಿಸಿ
ನಡೆವರೆಲ್ಲರನೂ ಕಾಣಬಾರದು.
ಅದು ನುಡಿದು ನುಡಿಯಿಸಿಕೊಂಬ ಪ್ರತಿಶಬ್ದದಂತೆ.
ತನ್ನ ಗುಣವೇ ತನಗೆ ತಥ್ಯ, ತನ್ನ ಗುಣವೇ ತನಗೆ ಮಿಥ್ಯ.
ಇದಿರ ಗುಣವ ತಾನರಿದು ನಿಲಬಲ್ಲಡೆ
ತನಗೆ ತಥ್ಯವೂ ಇಲ್ಲ ಮಿಥ್ಯವೂ ಇಲ್ಲ.
ಇದು ದ್ವೈತಾದ್ವೈತದ ಭೇದ,
ಸದ್ಯೋಜಾತಲಿಂಗಕ್ಕೆ ಉಭಯಸ್ಥಲ ನಾಶವಿನಾಶ. ॥೯೬॥

೭೪೯

ಶಬ್ದ ರೂಪಿನೊಳಗೆ ಅಡಗುವುದ ಬಲ್ಲಡೆ ದ್ವೈತಿ,
ಆ ರೂಪು ನಿಃಶಬ್ದಕ್ಕೊಡಲಾಗಿ ಮುಗ್ಧವಾದುದ ಬಲ್ಲಡೆ ಅದ್ವೈತಿ.
ಈ ಉಭಯದ ಹೊದ್ದಿಗೆಯ ಹೊದ್ದರೆ ನಿರ್ಧರವಾದಲ್ಲಿ
ಸದ್ಯೋಜಾತಲಿಂಗ ಬಟ್ಟಬಯಲು. ॥೯೭॥

೭೫೦

ಬಂಧಿಸಿ ಘಟವ ಬಿಟ್ಟಿಹೆನೆಂದಡೆ ಅಭಿಸಂಧಿಯಲ್ಲಿ ನೋವುದು ಜೀವ.
ಕಂದದೆ ಕುಂದದೆ ನಿಜದಲ್ಲಿ ಹೊಂದಿಹೆನೆಂದಡೆ
ಸರ್ವೇಂದ್ರಿಯ ಬಂಧುವಿನೊಳಗಿದೆ ಜೀವ.

ಒಂದ ಮರೆದು ಒಂದನರಿದು ಮುಂದಣ ಅಡಿಯ ಮೆಟ್ಟಿಹೆನೆಂದಡೆ
ಸಂದೇಹದ ಸಂದಣಿಗೊಳಗಿದೆ ಜೀವ.
ಗುರುವಿಂದ ಕಂಡೆಹೆನೆಂದಡೆ ಅದು ಧರ್ಮಬೀಜ, ನಾನು ಕರ್ಮಬೀಜ.
ಲಿಂಗದಿಂದ ಕಂಡೆಹೆನೆಂದಡೆ ಚತುರ್ವಿಧಫಲ ಭವಬೀಜ.
ಜ್ಞಾನದಿಂದ ಕಂಡೆಹೆನೆಂದಡೆ ನಾನು ಸಾವಯ, ಅದು ನಿರವಯ.
ಎನಗಿನ್ನೇತರಿಂದ ಕೂಟ? ಈ ಭಕ್ತಿಜಗದಾಟದ ಕಾಟ.
ನಿನ್ನ ಕೂಟವ ಕೂಡಿಹೆನೆಂಬ ಕೋಟಲೆಯ ಬಿಡಿಸಿ
ಎನ್ನಲ್ಲಿ ನೀನು ಅಲೇಖನಾಗು.
ಭಿನ್ನಭಾವವಿಲ್ಲದಂತೆ, ಅನ್ಯ ಅನನ್ಯವೆಂಬುದ ನಿನ್ನ ಭಾವದಲ್ಲಿಯೆ ಮರೆಸಿ
ನಾನುಗೂಡಿ ನೀನು ಬಟ್ಟಬಯಲು, ಸದ್ಯೋಜಾತಲಿಂಗವೆ. ॥೯೮॥

೭೫೧
ಕೈಲಾಸವೆಂಬುದು ಕ್ರಮಕೂಟ, ಮೋಕ್ಷವೆಂಬುದು ಭವದಾಗರ,
ಕಾಯಸಮಾಧಿಯೆಂಬುದು ಪ್ರಪಂಚಿನ ಪುತ್ಥಳಿ.
ಕಾಯ ಜೀವ ಕೂಡಿ ಬಯಲಾಗಿ ಇನ್ನಾವ ಠಾವಿನಲ್ಲಿ ಪೋಗಿ ನಿಲುವುದು?
ತನುವಿನ ಗಂಭೀರವೆಂಬುದ ಮರೆಸಿದೆ, ಸದ್ಗುರುವ ತೋರಿ.
ಸದ್ಗುರುವೆಂಬುದ ಮರೆಸಿದೆ, ನಿಜವಸ್ತು ಶಿಲೆಯ ಮರೆಯಲ್ಲಿದ್ದು.
ಲಿಂಗವೆಂಬುದ ಕುರುಹಿಟ್ಟು ಲಿಂಗವೆಂಬುದ ಮರೆಸಿದೆ,
ತ್ರಿವಿಧ ಬಟ್ಟೆ ಕೆಡುವುದಕ್ಕೆ.
ಜಂಗಮವೆಂಬುದ ತೋರಿ, ಜಂಗಮವೆಂಬುದ ಮರೆಸಿ
ನೀನು ಎಲ್ಲಿ ಅಡಗಿದೆ? ಎಲ್ಲಿ ಉಡುಗಿದೆ?
ಎಲ್ಲಿ ಬೆಂದೆ? ಎಲ್ಲಿ ಬೇಕರಿಗೊಂಡೆ?
ನೀನು ಎಲ್ಲಿ ಹೋದೆ? ಹುಲ್ಲು ಹುಟ್ಟಿದ ಠಾವಿನಲ್ಲಿ ನೀನೆಲ್ಲಿ ಹೋದೆ?
ಅಲ್ಲಿ ನಿನ್ನವರೆಲ್ಲರ ಕಾಣದೆ, ಕಲ್ಲು, ಮಣ್ಣು ನೀರಿನಲ್ಲಿ ನೆರೆದಂತೆ ಬದುಕು,
ನನಗಿಲ್ಲಿಯೇ ಸಾಕು. ನೀ ಕೊಟ್ಟ ಕುರುಹಿನಲ್ಲಿಯೆ ಬಯಲು
ಸದ್ಯೋಜಾತಲಿಂಗವೆಂಬುದು ನಿರಾಲಂಬವಾಯಿತ್ತು. ॥೯೯॥

೭೫೨
ಪ್ರಮೇಯ–ಅಪ್ರಮೇಯ, ಸುರಾಳ–ನಿರಾಳ,
ಶೂನ್ಯ–ನಿಃಶೂನ್ಯ, ವಿರಳ–ಅವಿರಳ, ಅಂಜನ–ನಿರಂಜನ, ಭಾವ–ನಿರ್ಭಾವ,
ಮಹಾಮಹಪ್ರಕಾಶ–ದಿವ್ಯದಿವ್ಯತೇಜಪ್ರಕಾಶ,
ಇಂತೀ ಉಭಯಸಂಪರ್ಕಸಂಯೋಗಿಯಾಗಿ, ತ್ರಿವಿಧಾತ್ಮಕೂಟಸ್ಥನಾಗಿ

ನಿನ್ನಾಟ ಬಟ್ಟಬಯಲಲಿ ದೃಷ್ಟವಾಯಿತ್ತು.
ಸದ್ಯೋಜಾತಲಿಂಗವೆಂಬ ಭಾವ ಶಬ್ದಮುಗ್ಧವಾಯಿತ್ತೆನಲಿಲ್ಲ. ॥೧೦೦॥

ಪರಿಶಿಷ್ಟ

೭೫೩

ಅರಿದರಿದು ಕೊಡುವವನು ತಾನೆ ಲಿಂಗವೊ, ತಾನೆ ಲಿಂಗವ[ಲ್ಲವೋ!]
ಬೇರೆ ಲಿಂಗಕ್ಕೆರವಿಲ್ಲ.
ಲಿಂಗದಂಗ ತಾನಾಗಿ, ಲಿಂಗಕ್ಕೆ ಲಿಂಗವನೆ ಅರ್ಪಿಸಿ,
ಸದ್ಯೋಜಾತಲಿಂಗದಲ್ಲಿ ಜಾತತ್ವವಳಿದು ಅಜಾತನಾದ. ॥೧೦೧॥

೭೫೪

ಇಷ್ಟಲಿಂಗಕ್ಕೆ ದೃಷ್ಟಾರ್ಪಿತ,
ಪ್ರಾಣಲಿಂಗಕ್ಕೆ [ರುಚಿ ಅರ್ಪಿತ]
ಜ್ಞಾನಲಿಂಗಕ್ಕೆ ಪರಮಪರಿಣಾಮವೆ ಅರ್ಪಿತ.
ಇಂತೀ ತ್ರಿವಿಧಾರ್ಪಣದಲ್ಲಿ ಸುಚಿತ್ತನಾಗಿರಬೇಕು,
ಸದ್ಯೋಜಾತಲಿಂಗವನರಿವುದಕ್ಕೆ. ॥೧೦೨॥

೭೫೫

ಉಟ್ಟುಡಿಗೆ ಸಡಿಲಿದಡೆ ಕೆಟ್ಟಾಡಿ ಬಂದು
ಬಟ್ಟೆಯ ಕಾವ ಲೊಟ್ಟಿಗೆಲ್ಲಿಯದಯ್ಯಾ ಲಿಂಗ!
ಗಂಡ ಸತ್ತ ಮುಂಡೆ[ಯವಳಿಗೆ] ಸತ್ತಿಹೆನೆಂಬ
ಭಂಡರ ಮುಖವ ನೋಡಲಾಗದು.
ಇಷ್ಟವು ನಷ್ಟವಾದಡೆ,
ಪ್ರಾಣವ ಬಿಡುವಲ್ಲಿಗೆ ಹೋಗಿ ನಿಕ್ಷೇಪವ ಮಾಡಬಲ್ಲ[ವರಿಗೆ],
ಕುಂದ ನುಡಿವ ಮಿಟ್ಟೆಯ ಭಂಡರಿಗೆ, ಆ ಮೋಕ್ಷ ಮುಮುಕ್ಷುತ್ವವಿಲ್ಲ;
ಮುನ್ನೇನು ಕಟ್ಟಿಕೊಂಡು ಬಂದನೆ! ಇನ್ನೇನು ಭವಿಯಾಗಿ [ನಿಲ್ಲ,
ಸದ್ಯೋ]ಜಾತಲಿಂಗವವರ ಮನವಿದ್ದಲ್ಲಿ ಬೆರೆವ. ॥೧೦೩॥

೭೫೬

ದಾರಿಯಲ್ಲಿ ಬೀದಿಯಲ್ಲಿ ಮನೆಗಳಲ್ಲಿ
ಹೊನ್ನು ಹೆಣ್ಣು ಮಣ್ಣಿನ ಮೇಲಣ ಕಾಮವಿಕಾರ ತೋರಿದಡೆ
ಅದಕ್ಕೇನೂ ಶಂಕೆಯಿಲ್ಲ. ಅದೇನು ಕಾರಣವೆಂದಡೆ:

ಚಿತ್ರದ ಹುಲಿ, ಕನಸಿನ ಹಾವು, ಜಲಮಂಡೂಕ ಕಚ್ಚಿ ಸತ್ತವರುಂಟೆ?
ಇದು ಕಾರಣ ಜಾಗ್ರಸ್ವಪ್ನಸುಷುಪ್ತಿಗಳಲ್ಲಿ ಕಾಮವಿಕಾರ ತೋರಿತ್ತೆಂದು
ಶಸ್ತ್ರ ಸಮಾಧಿ ನೀರು ನೇಣು ವಿಷ ಔಷಧಿಗಳಿಂದ ಘಟವ ಬಿಟ್ಟಡೆ,
ಆತ ಗುರುದ್ರೋಹಿ, ಲಿಂಗದ್ರೋಹಿ, ಜಂಗಮದ್ರೋಹಿ.
ಇದು ಭಕ್ತರಾಚರಣೆ, ವಿರಕ್ತನಿರ್ಣಯ.
ಇಂತಪ್ಪವರಿಗೆ ಸದ್ಯೋಜಾತಲಿಂಗವುಂಟಿಲ್ಲವೆಂದೆನು. ॥೧೦೪॥

*

ಆದಯ್ಯಗಳ ವಚನ

೭೫೭

ಅಂಗದ ಕಳವಳ, ಮನದ ಸಂಚಲ, ಭಾವದ ಭ್ರಾಂತು,
ಅರುವಿನ ಮರಹು, ಭಕ್ತಿಯ ಭಿನ್ನ, ಜ್ಞಾನದ ಕಳಂಕು,
ಪ್ರಾಣನ ಪ್ರಕೃತಿ, ಸ್ಥಾನಮಾನವೆಂಬ ಲಕ್ಷ್ಯ ಇಹಪರಂಗಳ ತೃಷ್ಣೆ,
ಭವರೋಗಂಗಳ ಬಂಧ, ಇಂದ್ರಿಯಂಗಳಿಚ್ಛೆ,
ತಾಪತ್ರಯಂಗಳ ಸುಖದುಃಖ, ಮಲತ್ರಯಂಗಳಾಸೆ,
ಪಂಚಮಲಂಗಳ ಸಂಚ, ಅಷ್ಟಮದಂಗಳ ಘಟ್ಟಿ,
ಷಡೂರ್ಮಿಗಳ ವಿಕಾರ,
ಇಂತಪ್ಪ ಅಖಿಳದೊಳು ಸಿಲುಕದ ಅಕಳಂಕರಪ್ಪ,
ಸಮ್ಯಜ್ಞಾನ, ಸಹಜಸಮಾಧಾನಯೋಗದೊಳಿರ್ಪ,
ಮಹಾಶರಣರ ತೋರಿಸಿ ಬದುಕಿಸಾ,
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಧರ್ಮ ನಿಮ್ಮ ಧರ್ಮ. ॥೧॥

೭೫೮

ಅಂಗದ ಕಳೆ ಲಿಂಗಸಂಗವಾಗಿ, ಅಂಗವೆಂಬ ಶಂಕೆಯ ಭಂಗವ ತೊರೆದು.
ಲಿಂಗಾಂಗಸಂಗವೆಂಬ ಸಂದ ಮೀರಿ,
ಪರಮಪ್ರಕಾಶದಿಂದ ಬೆಳಗುವ ಸ್ವಯಂಜ್ಯೋತಿ ನಿಜದಲ್ಲಿ ನಿಂದು ತನ್ಮಯವಾದ ಪರಮಲಿಂಗಕಾಯರು
ಸಚ್ಚರಿತ್ರ ನಿಶ್ಚಿಂತರು,
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು . ॥೨॥

೭೫೯

ಅಂಗದಂತೆ ಲಿಂಗವಾಗಿರ್ದ ದೇಹ,
ಲಿಂಗದಂತೆ ಅಂಗವಾಗಿರ್ದ ದೇಹ, ಈ ಕಾಯದ್ವಯಂಗಳಿಗೆ

ಅಂಗಕಳಾ ಲಿಂಗಕಳಾ ಪ್ರಭಾವ ಒಂದಾಗಿ,
ತನುವಿನ ಕೈಮುಟ್ಟಿ ಪ್ರಾಣಲಿಂಗ ಜಂಗಮದಾಸೋಹ ಮಾಡುತ್ತಿರಲು,
ಆ ಜಂಗಮದ ಸ್ಥೂಲಪ್ರಾಸಾದವೆ ಬಸವಣ್ಣನ ಸಾಕಾರ.
ಅಂತಪ್ಪ ಸಾಕಾರವನರಿವುತ್ತಿದ್ದರಿವು
ಸೌರಾಷ್ಟ್ರ ಸೋಮೇಶ್ವರಲಿಂಗ ತಾನಾಗಿ,
ನೆನೆವುತ್ತ ನೆನೆವುತ್ತ ನೆನೆಯದಂತಿರ್ದೆನಯ್ಯಾ. ॥೩॥

೭೬೦
ಅಂಗದ ಮೇಲಣ ಲಿಂಗ ಅಂಗದಲ್ಲಿ ಪೂರ್ಣವಾಗಿ
ತನುಗುಣವಳಿಯಿತ್ತು.
ಮನದ ಮೇಲಣ ಲಿಂಗ ಮನದಲ್ಲಿ ಪೂರ್ಣವಾಗಿ
ನೆನಹಿನ ಸಂಕಲ್ಪ ಕೆಟ್ಟಿತ್ತು.
ಪ್ರಾಣದ ಮೇಲಣ ಲಿಂಗ ಪ್ರಾಣದಲ್ಲಿ ಪೂರ್ಣವಾಗಿ
ಪ್ರಾಣನ ಪ್ರಕೃತಿ ನಷ್ಟವಾಯಿತ್ತು.
ಭಕ್ತಿ–ಜ್ಞಾನ ಲಿಂಗಸನ್ನಿಹಿತವಾಗಿರಬಲ್ಲರಾಗಿ
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು ಸ್ವತಂತ್ರರು. ॥೪॥

೭೬೧
ಅಂಗದ ಮೇಲಣ ಲಿಂಗ ಹಿಂಗಿದಾತ ಭವಿ ಎಂಬರು.
ಅಂಗದ ಮೇಲಣ ಲಿಂಗ ಹಿಂಗದಾತನ ಭಕ್ತನೆಂಬರು.
ಅಂಗದೊಳಗೆ ಬೆರಸಿರ್ಪ ಲಿಂಗದ ಹೊಲಬನಾರೂ ಅರಿಯರು.
ಆ ಲಿಂಗವಿಲ್ಲದೆ ಒಂದು ಕ್ಷಣ ಒಂದಂಗ ಸುಳಿವುದೆ?
ಅಂಗದೊಳಗಣ ಲಿಂಗ ಹಿಂಗದೆ ಆರಾಧಿಸಬಲ್ಲಡೆ
ಹಿಂಗುವದು ಭವಮಾಲೆ ಸೌರಾಷ್ಟ್ರ ಸೋಮೇಶ್ವರಾ. ॥೫॥

೭೬೨
ಅಂಗದ ಮೇಲೆ ಶಿವಲಿಂಗಸಾಹಿತ್ಯವಿಲ್ಲದ ಅಂಗ
ಅನೇಕ ಅಘೋರಪಾಪಕ್ಕೆ ಅವಕಾಶವಾಗಿಪ್ಪುದಯ್ಯಾ. ಇದಕ್ಕೆ ಶ್ರುತಿ:
"ಯಾ ತೇ ರುದ್ರ ಶಿವಾ ತನೂರಘೋರಪಾಪಕಾಶಿನೀ"
ಇದು ಕಾರಣ, ಗುರುಕಾರುಣ್ಯವ ಪಡೆದು
ಲಿಂಗಾನುಗ್ರಾಹಕನಾದ ಪ್ರಾಣಲಿಂಗಸಂಬಂಧಿಯೇ ಶಿವೈಕ್ಯನು.
ಅಂತಪ್ಪ ಶಿವೈಕ್ಯಂಗೆ ಅಧರ್ಮವೇ ಧರ್ಮ,

ವಿಷವೇ ಪಥ್ಯ, ಅರಿಯೇ ಮಿತ್ರರು. ಅದೆಂತೆಂದಡೆ:
"ಅರಿರ್ಮಿತ್ರಂ ವಿಷಂ ಪಥ್ಯಂ ಅಧರ್ಮೋ ಧರ್ಮತಾಂ ವ್ರಜೇತ್
ಪೂಜಿತೇ ಪಾರ್ವತೀನಾಥೇ ವಿಪರೀತೇ ವಿಪರ್ಯಯಃ"
ಇಂತೆಂದುದಾಗಿ, ಸೌರಾಷ್ಟ್ರ ಸೋಮೇಶ್ವರನ ಶರಣರಿಗೆ
ಸರಿಯಿಲ್ಲವಾಗಿ ಅಪ್ರತಿಮರು. ॥೬॥

೭೬೩

ಅಂಗದ ಮೇಲೆ ಸಾಕಾರವಿಡಿದು
ಮಂತ್ರಾಹ್ವಾನಂಗಳಿಂದಷ್ಟವಿಧಾರ್ಚನೆ ಷೋಡಶೋಪಚರಿಯಂಗಳಿಂ
ವ್ಯಾಪಿಸಿಕೊಂಬುದೆ ಇಷ್ಟಲಿಂಗ.
ಆ ಇಷ್ಟಲಿಂಗಕ್ಕೆ ಆಶ್ರಯವಾಗಿ ಚತುರ್ದಶೇಂದ್ರಿಯಂಗಳಲ್ಲಿ ತನ್ಮುಖವಾಗಿ
ಸರ್ವೇಂದ್ರಿಯಂಗಳಿಗೆ ಚೈತನ್ಯವಾಗಿ
ಪ್ರಾಣನಲ್ಲಿ ಪರಿಪೂರ್ಣನಾಗಿಪ್ಪುದೇ ಪ್ರಾಣಲಿಂಗ.
ಆ ಪ್ರಾಣಲಿಂಗಕ್ಕೆ ಆದಿಯಾಗಿ ಭಾವಭ್ರಮೆಗಳು ನಷ್ಟವಾಗಿ
ಅನುಭಾವದಲ್ಲಿ ಲೀನವಾಗಿ
ಭಾವ ಸದ್ಭಾವ ನಿರ್ಭಾವವೆಂಬ ಭಾವತ್ರಯಂಗಳಲ್ಲಿ ಭರಿತವಾಗಿ
ಭಾವ ಬ್ರಹ್ಮವೆಂಬ ಭೇದವಿಲ್ಲದೆ
ಸನ್ನಿಹಿತಭಾವದಿಂದಿಪ್ಪುದೇ ಭಾವಲಿಂಗ.
ಇಂತೀ ಮೂರು ಲಿಂಗದ ಮೂಲ,
ಆರು ಲಿಂಗದ ಅಂತ್ಯವನೊಳಕೊಂಡು
ಮಾರ್ಗಕ್ರೀ ನಿಃಕ್ರೀಯಾಗಿ, ಧ್ಯಾನ ನಷ್ಟವಾಗಿ,
ಮಂತ್ರ ಗೋಪ್ಯವಾಗಿ, ಜ್ಞಾನ ಶೂನ್ಯವಾಗಿ, ಭಾವ ದಿಗಂಬರವಾಗಿ,
ಘನಕ್ಕೆ ಘನವಾದ ಪರಬ್ರಹ್ಮವು ತಾನೆ ಸೌರಾಷ್ಟ್ರ ಸೋಮೇಶ್ವರ. ॥೭॥

೭೬೪

ಅಂಗದಲ್ಲಿ ಲಿಂಗವಿರಲು ಎನ್ನ ತನು ನಿರ್ಮಲವಾಯಿತ್ತು,
ಮನದಲ್ಲಿ ಅರಿವಿರಲು ಎನ್ನ ಮನ ನಿರ್ಮಲವಾಯಿತ್ತು,
ಪ್ರಾಣದಲ್ಲಿ ಪ್ರಸಾದವಿರಲು ಎನ್ನ ಪ್ರಾಣ ನಿರ್ಮಲವಾಯಿತ್ತು.
ಪಂಚೇಂದ್ರಿಯಂಗಳಲ್ಲಿ ಪಂಚಲಿಂಗವೆಡೆಗೊಂಡಿರಲು
ಇಂದ್ರಿಯಂಗಳು ನಿರ್ಮಲವಾದವು.
ಸೌರಾಷ್ಟ್ರ ಸೋಮೇಶ್ವರನ ಶರಣರ ಸಂಗದಿಂದ
ಶಿವಪ್ರಸಾದ ದೊರೆಕೊಂಡಿತ್ತಾಗಿ ಸರ್ವಾಂಗಲಿಂಗವಾಯಿತ್ತು. ॥೮॥

೭೬೫
ಅಂಗದಾಸೆಯುಳ್ಳನ್ನಕ್ಕ ಭಯ ಬಿಡದು ನೋಡಾ ಅಯ್ಯಾ.
ಜೀವನ ಭ್ರಾಂತುಳ್ಳನ್ನಕ್ಕ ಪ್ರಕೃತಿ ಹಿಂಗದು ನೋಡಾ ಅಯ್ಯಾ.
ಮನದ ಸಂಚಲ ಉಳ್ಳನ್ನಕ್ಕ ಕರ್ಮವಳಿಯದು ನೋಡಾ ಅಯ್ಯಾ.
ಕಾಮಾದಿ ಭೋಗಂಗಳುಳ್ಳನ್ನಕ್ಕ ಪುಣ್ಯಪಾಪಂಗಳು ತೊಲಗವು
ನೋಡಾ ಅಯ್ಯಾ.
ಇಹಪರಂಗಳ ಸಾರುವನ್ನಕ್ಕ ಭವ ಹಿಂಗದು ನೋಡಾ ಅಯ್ಯಾ.
ಆನೆಂಬುದುಳ್ಳನ್ನಕ್ಕ ನೀನೆಂಬುದು ಬಿಡದು ನೋಡಾ ಅಯ್ಯಾ.
ಸೌರಾಷ್ಟ್ರ ಸೋಮೇಶ್ವರಾ,
ತಾನೆಂಬನ್ನಕ್ಕ ಲಿಂಗಸಾಹಿತ್ಯವಿಲ್ಲ ನೋಡಾ ಅಯ್ಯಾ. ॥೯॥

೭೬೬
ಅಂಗಲಿಂಗ ಮನಲಿಂಗ ಪ್ರಾಣಲಿಂಗ ಭಾವಲಿಂಗ
ಜ್ಞಾತೃ ಜ್ಞಾನ ಜ್ಞೇಯ ಲಿಂಗ. ಇದಕ್ಕೆ ಶ್ರುತಿ:
"ಓಮಿದಂ ದೇವಾನಾಮಿದಂ ಸರ್ವಾನಾಮಿದಂ ಆತ್ಮಮಯಂ ದೇವಾಃ
ಓಂ ಚ ಮೇ ಶರಶ್ಚ ಮೇ ಭಯಂಚ ಮೇ ವಚಶ್ಚ ಮೇ
ಶ್ವಸನಂಚ ಮೇ ಶಿಖರಂಚ ಮೇ ಶೈಲಂಚ ಮೇ ವ್ರೀಹಿಶ್ಚ ಮೇ
ತಿಲಂಚ ಮೇ ಹೇಮಂಚ ಮೇ ವಿದುಂಚ ಮೇ ಪೂಷಂಚ ಮೇ
ತೃಣಂಚ ಮೇ ಧಾತೃಂಚ ಮೇ ಭೋಕ್ತೃಂಚ ಮೇ ಜ್ಞಾತೃಂಚ ಮೇ
ಜ್ಞೇಯಂಚ ಮೇ ದೇಹಶ್ಚ ಮೇ ಆತ್ಮಂಚ ಮೇ ಅಖಿಲಂಚ ಮೇ
ಇತ್ಯನ್ಯೋನ್ಯಂ ಉಪಯುಕ್ತೇ ವ್ಯತಿರಿಕ್ತಂ ತಸ್ಮೈ ತೇ ನಮಃ"
ಇಂತೆಂದುದಾಗಿ,
ಶಿವ ಸರ್ವಾವಯವವಾದ ಸರ್ವಾಂಗಲಿಂಗಿಗಳನೆನಗೊಮ್ಮೆ
ತೋರಿಸಾ, ಸೌರಾಷ್ಟ್ರ ಸೋಮೇಶ್ವರಾ. ॥೧೦॥

೭೬೭
ಅಂಗಲಿಂಗರತಿಯಿಂದ ಆಯತವಾಯಿತ್ತು,
ಪ್ರಾಣಲಿಂಗರತಿಯಿಂದ ಸ್ವಾಯತವಾಯಿತ್ತು,
ಭಾವಲಿಂಗರತಿಯಿಂದ ಸನ್ನಿಹಿತವಾಯಿತ್ತು.
ಇಂತು ಆಯತ ಸ್ವಾಯತ ಸನ್ನಿಹಿತ
ಇಂತೀ ತ್ರಿವಿಧವೊಂದಾದ ಬಳಿಕ
ಕೊಟ್ಟುಕೊಂಬ ಉಪಚರಿಯಕ್ಕೆ ಇಂಬಿಲ್ಲ,
ಸೌರಾಷ್ಟ್ರ ಸೋಮೇಶ್ವರಲಿಂಗಕ್ಕೆ. ॥೧೧॥

೭೬೮

ಅಂಗ ಲಿಂಗವಾದಡದ್ಭುತಕ್ಕಾಳಪ್ಪುದೆ?
ಮನ ಲಿಂಗವಾದರೆ ನಿಚ್ಚನಿಚ್ಚ ಲಯವಪ್ಪುದೆ?
ಪ್ರಾಣ ಲಿಂಗವಾದಡೆ ಪ್ರಕೃತಿಯ ತಳೆವುದೆ?
ಅರಿವು ಲಿಂಗವಾದರೆ ಮರಹಿಂಗೊಳಗಹುದೆ?
ಭಾವ ಲಿಂಗವಾದಡೆ ಸಕಲವಿಷಯಂಗಳಿಗೆ ಭ್ರಮಿಸುವುದೆ?
ಜ್ಞಾತೃ ಜ್ಞಾನ ಜ್ಞೇಯ ಲಿಂಗವಾದರೆ
ಅರಿವುದೇನು ಅರಿಹಿಕೊಂಬುದೇನು?
ಇವು ತಾ ತಮ್ಮಂತೆ,
ಸೌರಾಷ್ಟ್ರ ಸೋಮೇಶ್ವರಲಿಂಗ ಮುನ್ನಿನಂತೆ. ॥೧೨॥

೭೬೯

ಅಂಗವು ಲಿಂಗವೇಧೆಯಾದ ಬಳಿಕ
ಅಂಗವೆಲ್ಲವೂ ನಷ್ಟವಾಗಿ ಲಿಂಗತನ್ಮಯವಾಗಿಪ್ಪುದಾಗಿ,
ದಿಟದಿಂದಿಪ್ಪ ಸಜ್ಜನಕ್ಕೆ ಬೇರೆ ಅಂಗವುಂಟೆ ಲಿಂಗವಲ್ಲದೆ?
ಇದು ಕಾರಣ,
ಸೌರಾಷ್ಟ್ರ ಸೋಮೇಶ್ವರನ ಶರಣರು ನಿರ್ದೇಹಿಗಳು. ॥೧೩॥

೭೭೦

ಅಂಗವೆಂಬ ಅಂಗನೆ ಆತ್ಮನೆಂಬ ಪುರುಷನನಪ್ಪಿ
ಮುಂಡೆತನವಿಲ್ಲದೆಯಿಪ್ಪ ಭೇದವ ತಿಳಿದು ನೋಡಿರಣ್ಣಾ.
ಕುಂಟಣಿಯಾದ ಒಡಹುಟ್ಟಿದ ಮನ ನಪುಂಸಕನಾದ ಕಾರಣ
ಲಿಂಗಸಂಗಿಯಲ್ಲದೆ ಹೋದ ಕೇಳಿರಣ್ಣಾ.
ಆತ್ಮನು ಪುರುಷನಾದಡೂ ಲಿಂಗವ
ಕೂಡುವ ಭರದಿಂದ ಸತಿಯಾಗಬಲ್ಲ. ಶರಣಸತಿ ಲಿಂಗಪತಿಯೆಂಬುದುಂಟಾಗಿ,
ಶಿವಜ್ಞಾನವೆಂಬ ಸಖಿಯ ಕೈವಿಡಿದು
ಸೌರಾಷ್ಟ್ರ ಸೋಮೇಶ್ವರಲಿಂಗವ ಕೂಡಿ ಸುಖಿಯಾದನು. ॥೧೪॥

೭೭೧

ಅಂಗವೆ ಲಿಂಗ, ಲಿಂಗವೆ ಅಂಗವೆಂದೆಂಬರು.
ಅಂಗವು ಲಿಂಗವೆ? ಲಿಂಗಕ್ಕೆ ಅಂಗವುಂಟೆ?
ಅದು ತಾ ನಾಮ ರೂಪು ಕ್ರಿಯೆ ಇಲ್ಲವಾಗಿ.

ಮಾತು ಮನ ನಿಲುಕದ ಲಿಂಗವು
ಅಂಗವಪ್ಪುದು ಮಿಥ್ಯ ಕಾಣಾ, ಸೌರಾಷ್ಟ್ರ ಸೋಮೇಶ್ವರಾ. ॥೧೫॥

೭೭೨

ಅಂಗಸುಖಿಗೆ ಲಿಂಗಸುಖವಳವಡದು,
ಲಿಂಗಸುಖಿಗೆ ಅಂಗಸುಖವಿಂಬುಗೊಡದು.
ವಾಗಾದ್ವೈತ, ಕ್ರಿಯಾದ್ವೈತ, ಭಾವಾದ್ವೈತ
ಇಂತೀ ತ್ರಿವಿಧಾದ್ವೈತ ಲಿಂಗಸುಖಸಾಹಿತ್ಯವಾದಲ್ಲಿ,
ನರಕವಿಲ್ಲ, ಸ್ವರ್ಗವಿಲ್ಲ, ಕರ್ಮವಿಲ್ಲ, ಭವವಿಲ್ಲ, ಮರಣವಿಲ್ಲ, ಫಲವಿಲ್ಲ,
ಪದವಿಲ್ಲ, ಇಹವಿಲ್ಲ, ಪರವಿಲ್ಲ.
ಸೌರಾಷ್ಟ್ರ ಸೋಮೇಶ್ವರಾ, ನೀ ಸಾಕ್ಷಿಯಾಗಿ
ಅಂಗಸುಖಿಗೆ ಲಿಂಗಸುಖ ದೊರಕೊಳ್ಳದು. ॥೧೬॥

೭೭೩

ಅಂಗೈಯೊಳಗಣ ಹಂಸೆ ಹಾಲನೊಲ್ಲದೆ ನೀರ ಕುಡಿಯಿತ್ತು.
ನೀರು ಬಾಯಾರಿ ನೀರಡಿಸಿ ಅರಕೆಗೊಂಡಿತ್ತು.
ಅರಗಿನ ಮಾಡ ಉರಿಯುಂಡು ಗರಿಗತವಾಯಿತ್ತು.
ಕರ್ಪುರದ ಮಾಡ ಅಗ್ನಿಯನೊಳಕೊಂಡು ಉರಿಯದು ನೋಡಾ,
ಸೌರಾಷ್ಟ್ರ ಸೋಮೇಶ್ವರಾ. ॥೧೭॥

೭೭೪

ಅಂತರಂಗದ ಆತ್ಮಜ್ಯೋತಿ ಬಹಿರಂಗವ
ಮುಟ್ಟಿ ಮುಟ್ಟದು ನೋಡಾ.
ಓದುವಾದಿಂಗೆ ನಿಲುಕದು, ಶ್ರುತಿಸ್ಮೃತಿಗಳಿಗೆ ಅಳವಡದು ನೋಡಯ್ಯಾ.
ಸೌರಾಷ್ಟ್ರ ಸೋಮೇಶ್ವರಲಿಂಗದ
ಅನುಸಂಧಾನದಲ್ಲಿ ನಿಂದುದು ನೋಡಾ. ॥೧೮॥

೭೭೫

ಅಂದಿನವರು! ಇಂದಿನವರು! ಎಂಬ ಸಂದೇಹಿಗಳಿಗೆ
ಸಂದೇಹ ಮುಂದುಗೊಂಡಿಪ್ಪುದು ನೋಡ!
ಅಂದೊಂದು ಪರಿ, ಇಂದೊಂದು ಪರಿಯೆ?
ಗುರುಲಿಂಗಜಂಗಮ ಅಂದೊಂದು ಪರಿ, ಇಂದೊಂದು ಪರಿಯೆ?
ಪಾದೋದಕ ಪ್ರಸಾದ ಅಂದೊಂದು ಪರಿ, ಇಂದೊಂದು ಪರಿಯೆ?

ಶರಣಲಿಂಗಸಂಬಂಧ ಅಂದೊಂದು ಪರಿ, ಇಂದೊಂದು ಪರಿಯೆ?
ಅರಿವು ಆಚರಣೆ ಅಂದೊಂದು ಪರಿ, ಇಂದೊಂದು ಪರಿಯೆ?
ಸ್ಥಲಕುಲಂಗಳು ಅಂದೊಂದು ಪರಿ, ಇಂದೊಂದು ಪರಿಯೆ?
ಸೌರಾಷ್ಟ್ರ ಸೋಮೇಶ್ವರಲಿಂಗವು ಅಂದೊಂದು ಪರಿ,
ಇಂದೊಂದು ಪರಿಯೆ? ॥೧೯॥

೭೭೬

ಅಕಲ್ಪಿತ ಲಿಂಗವು ಕಲ್ಪಿತಕ್ಕೆ ಬಂದು,
ತ್ರಿವಿಧಭೇದದಿಂದನ್ಯವಿಲ್ಲೆನಿಸಿ, ತ್ರಿಗುಣವೆಂಬ ತ್ರಿಪಾದಮಯನಾಗಿ,
ತ್ರಿಪಾದದಲ್ಲಿ ಹೊಂದದೆ ತ್ರಿವಿಧಕ್ಕತೀತವಾಗಿಹುದೆಂಬುದಕ್ಕೆ ಶ್ರುತಿ:
'ತ್ರಿಪಾದಸ್ಯಾಮೃತಂ ದಿವಿ ತ್ರಿಪಾದೂರ್ಧ್ವಮಕಲ್ಪಯೇತ್'
ಎಂದುದಾಗಿ,
ಸೌರಾಷ್ಟ್ರ ಸೋಮೇಶ್ವರಲಿಂಗವು ಕಲ್ಪಿತಕ್ಕೆ ಅತ್ತತ್ತಲೆ. ॥೨೦॥

೭೭೭

ಅಖಂಡಿತನಾದ ಬ್ರಹ್ಮ ಸೂಕ್ಷ್ಮ ಸುನಾದದ ಬೆಳಗು,
ಸುಜ್ಞಾನಪ್ರಭೆಯನೊಡಗೂಡಿ ಅತರ್ಕ್ಯವಾಯಿತ್ತು.
ಕಡೆಮೊದಲಿಲ್ಲದರಿವು ಸೌರಾಷ್ಟ್ರ ಸೋಮೇಶ್ವರಲಿಂಗವ ತೋರಿ,
ಜನನಮರಣವ ಬಿಡಿಸಿತ್ತು. ॥೨೧॥

೭೭೮

ಅಗಣಿತನದ್ವಯನನುಪಮನಪ್ಪ
ಅಭವಂಗೆ ಭವರಹಿತನಾಗಿ ಭಕ್ತಿಯ ಮಾಡಬೇಕಲ್ಲದೆ,
ತಾನು ಭವದೊಳ್ಬಿರ್ದು, ಬಂಧನಕ್ಕೊಳಗಾಗಿ, ಮರ್ತ್ಯರಿಗೆ ತೊತ್ತಾಗಿ,
ಮಾಯಾಪಾಶದ ಕಾಲಕಣ್ಣಿಯೊಳು ಸಿಕ್ಕಿ, ಕಾಮಂಗೆ ಗುರಿಯಾಗಿ,
ಕಾಲಂಗೆ ಕೈವಶವಾಗಿ, ಮಾಡುವ ಭಕ್ತಿಗೆ ನಾಚರು ನೋಡಾ.
ಸೊಣಗನ ಹಿಂದೆ ಸೊಣಗ ಹರಿದಂತಾಯಿತ್ತಯ್ಯಾ,
ಸೌರಾಷ್ಟ್ರ ಸೋಮೇಶ್ವರಾ. ॥೨೨॥

೭೭೯

ಅಜಕಲ್ಪನೆಗೊಳಗಾದ ಊರೊಳಗೆ
ಮುನ್ನೂರು ಅರುವತ್ತು ಮಂದಿ ಅಸಾಸುರರು
ನಿಚ್ಚ ನಿಚ್ಚ ಊರಿಗುಪಟಳ ಮಾಡುತ್ತಿರ್ದರಲ್ಲಯ್ಯಾ.

ಅಚ್ಯುತನ ಆಜ್ಞೆಯಲ್ಲಿ ಅಡಗಿದ ಕಪಿಯೊಳಗೆ ಬಾವನ್ನವೀರರು ಮುಳುಗಿ
ಬಂಧಮೋಕ್ಷಂಗಳ ಬಗೆವುತಿರ್ದರಲ್ಲಯ್ಯಾ.
ಮೇಲೆ ರುದ್ರನೂಳಿಗದ ದಾಳಿ ಹತ್ತಿ ಘೋಳಿಟ್ಟು ಹಾಳಾಯಿತಲ್ಲಾ,
ಮೂರು ಲೋಕವೆಲ್ಲ.
ಇಂತೀ ಮೂವರ ಮುಂದುಗೆಡಿಸಿ, ಅಯಿವತ್ತಿಬ್ಬರನಣಕಿಸಿ
ಮೂನ್ನೂರ ಅರುವತ್ತು ಮಂದಿ ಅಸಾಸುರರನಡಿಗದ್ದಿದ ಸ್ವತಂತ್ರರು
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು. ॥೨೩॥

೭೮೦

ಅಜಾಂಡ ಪಿಂಡಾಂಡ ಚಿದ್ಬ್ರಾಂಡವೆಂಬ ತ್ರಿಭಾಂಡದೊಳಗೆ
ಸುರರು ನರರು ಮುಕ್ತರೆಂಬವರೆಲ್ಲಾ ಅಡಗಿದರಾಗಿ,
ಅಖಂಡಿತ ಪರಿಪೂರ್ಣಭಾಂಡವೆ ತಾನೆಂದರಿದರಿವೇ ತಾನಾಗಿ
ಸೌರಾಷ್ಟ್ರ ಸೋಮೇಶ್ವರಲಿಂಗನೆಂಬ ಲಿಂಗ ಬೇರಿಲ್ಲ. ॥೨೪॥

೭೮೧

ಅತರ್ಕ್ಯ ಅಪ್ರಮಾಣ ಅನಾಮಯ ಅನುಪಮ ಸರ್ವಗತ
ಸರ್ವಜ್ಞ ಸರ್ವೇಶ್ವರನಪ್ಪ ಪರಶಿವನು ಜಗತ್‌ಸೃಷ್ಟ್ಯರ್ಥವಾಗಿ ಸಮಸ್ತತತ್ವಂಗಳುತ್ಪತ್ತಿಗೆ ಮೂಲಿಗನಾಗಿ,
ತನ್ನಿಚ್ಛೆಯ ನೆನಹೆಂಬ ಚಿಂತಾಶಕ್ತಿಯ ಸಹಸ್ರದೊಳೊಂದಂಶದಲ್ಲಿ
ಕುಂಡಲಿನಿಯಪ್ಪ ಪರೆ ಜನಿಸಿತ್ತು.
ಆ ಪರಶಿವನಪ್ಪ ನಿಷ್ಕಲಬ್ರಹ್ಮವು ಈ ಕುಂಡಲಿನಿಯು
[ತಾದಾತ್ಮ್ಯ]ದಿಂ ಭಿನ್ನವಿಲ್ಲದಿಹುದೆ ಸಕಲ ನಿಷ್ಕಲವಪ್ಪ ಸದಾಶಿವನು.
ಆ ಸದಾಶಿವನು ತಾನೆ ಸಾದಾಖ್ಯದಿಂ ಪಂಚಬ್ರಹ್ಮಮೂರ್ತಿಯಾದುದು.
ಎಂತೆಂದೊಡೆ:
ಆ ಕುಂಡಲಿನಿಯಪ್ಪ ಪರೆಯ ಸಹಸ್ರದೊಳೊಂದಂಶದಲ್ಲಿ ಆದಿಶಕ್ತಿ ಜನಿಸಿತ್ತು.
ಆದಿಶಕ್ತಿಯ ಸಹಸ್ರದೊಳೊಂದಂಶದಲ್ಲಿ ಇಚ್ಛಾಶಕ್ತಿ ಜನಿಸಿತ್ತು.
ಇಚ್ಛಾಶಕ್ತಿಯ ಸಹಸ್ರದೊಳೊಂದಂಶದಲ್ಲಿ ಜ್ಞಾನಶಕ್ತಿ ಜನಿಸಿತ್ತು.
ಜ್ಞಾನಶಕ್ತಿಯ ಸಹಸ್ರದೊಳೊಂದಂಶದಲ್ಲಿ ಕ್ರಿಯಾಶಕ್ತಿ ಜನಿಸಿತ್ತು.
ಆ ನಿಷ್ಕಲವಪ್ಪ ಶಿವನ ನಿಷ್ಕಲೆಯಪ್ಪ ಕುಂಡಲಿನಿಯಪ್ಪ ಪರೆಯ
ಹತ್ತರೊಳೊಂದಂಶದಲ್ಲಿ ಶಿವಸಾದಾಖ್ಯ ಜನಿಸಿತ್ತು.
ಆದಿಶಕ್ತಿಯ ಹತ್ತರೊಳೊಂದಂಶದಲ್ಲಿ ಅಮೂರ್ತಿಸಾದಾಖ್ಯ ಜನಿಸಿತ್ತು.
ಇಚ್ಛಾಶಕ್ತಿಯ ಹತ್ತರೊಳೊಂದಂಶದಲ್ಲಿ ಮೂರ್ತಿಸಾದಾಖ್ಯ ಜನಿಸಿತ್ತು.
ಜ್ಞಾನಶಕ್ತಿಯ ಹತ್ತರೊಳೊಂದಂಶದಲ್ಲಿ ಕರ್ತೃಸಾದಾಖ್ಯ ಜನಿಸಿತ್ತು.
ಕ್ರಿಯಾಶಕ್ತಿಯ ಹತ್ತರೊಳೊಂದಂಶದಲ್ಲಿ ಕರ್ಮಸಾದಾಖ್ಯ ಜನಿಸಿತ್ತು.

ಆ ಕರ್ಮಸಾದಾಖ್ಯವಪ್ಪ ಮಾಹೇಶ್ವರನು ಸಕಲಸ್ವರೂಪದಿಂ
ಸೋಮಧರ ಮೊದಲಾದ ಲಿಂಗೋದ್ಭವ ಕಡೆಯಾದ
ಪಂಚವಿಂಶತಿಲೀಲೆಯ ತಾಳ್ದ ಸಕಲವಪ್ಪ ಮಾಹೇಶ್ವರನು,
ಸಕಲನಿಷ್ಕಲವಪ್ಪ ಸದಾಶಿವನು,
ನಿಷ್ಕಲವಪ್ಪ ಶಿವನೊಬ್ಬನಲ್ಲದೆ ಬೇರಲ್ಲವೆಂಬುದಕ್ಕೆ
'ತತ್ಪರಂ ಬ್ರಹ್ಮೇತಿ, ಸ ಏಕೋ ರುದ್ರಸ ಈಶಾನಸ್ಸ ಭಗವಾನ್ ಶ್ರುತಿಃ
ಸ ಮಹೇಶ್ವರಸ್ಸ ಮಹಾದೇವ ಇತಿ' ಇಂತೆಂದುದಾಗಿ,
ಏಕಮೇವ ಅದ್ವಿತೀಯನಪ್ಪ ಸೋಮಧರನು,
ಉಮಾಸಹವಾದ ಸೋಮನಿಂದ ವಾಯು, ಅಗ್ನಿ, ಪೃಥ್ವಿ, ರವಿ
ಮೊದಲಾದ ಅಷ್ಟ ಮೂರ್ತಿಗಳು
ದೇವರ್ಕಳು ಸುರಪ ಹರಿವಿರಿಂಚಿಗಳು ಜನಿಸಿದುದಕ್ಕೆ ಶ್ರುತಿ:
"ಸೋಮಃ ಪವತೇ ಜನಿತಾ ಮತೀನಾಂ ಜನಿತಾ ದಿವೋ ಜನಿತಾ
ಪೃಥಿವ್ಯಾರ್ಜನಿತಾಗ್ನಿ ಸೂರ್ಯಸ್ಯ ಜನಿತೇಂದ್ರಸ್ಯ ಜನಿತಾಥ ವಿಷ್ಣೋಃ"
ಎಂದುದಾಗಿ,
"ತನ್ಮಹೇಶ್ವರಕೋಟ್ಯಂಶ ಬ್ರಹ್ಮವಿಷ್ಣುಸಮುದ್ಭವಂ
ಋಷಯಃ ಕೃತವೋ ಕೋಟಿರ್ನಿಮಿಷೇಣ ಸಮುದ್ಭವಂ" ಎಂದುದಾಗಿ,
ಅಷ್ಟತನುವಿನೊಳಗಾದ ಜಗದ ರಚನೆ ಆರಿಂದ ರಚಿಸಿತ್ತು?
ಅಧಿಕಾರ ಲಯ ಭೋಗಕ್ಕೆ ಅವನೊರ್ವ ಕರ್ತನು.
ಸೃಷ್ಟಿ, ಸ್ಥಿತಿ, ಸಂಹೃತಿ ತಿರೋಧಾನಾನುಗ್ರಹವಾವನಿಂದಹುದು;
ಸರ್ವಜ್ಞತ್ವ ಕರ್ತೃತ್ವ ಅನಾದಿಬೋಧತ್ವ ಸ್ವತಂತ್ರತ್ವ
ನಿತ್ಯತ್ವ ಅಲುಪ್ತಶಕ್ತಿತ್ವವಾವಗುಂಟು,
ಆ ಶಿವನೆ ಘೃತಕಾಠಿಣ್ಯದಂತೆ, ನೀರಾಲಿಕಲ್ಲಂತೆ,
ಸಕಲ ಸಕಲನಿಷ್ಕಲ ನಿಷ್ಕಲವಾದವನು,
ಸೌರಾಷ್ಟ್ರ ಸೋಮೇಶ್ವರಲಿಂಗನೊಬ್ಬನೆ ಕಾಣಿರೆ. ॥೨೫॥

೭೮೨

ಅತ್ಯತಿಷ್ಠದ್ದಶಾಂಗುಲವೆಂದೆಂಬಿರಿ,
ಅತ್ಯವಾವುದು? ತಿಷ್ಠವಾವುದು? ದಶಾಂಗುಲವಾವುದು?
ಬಲ್ಲಡೆ ನೀವು ಹೇಳಿರೇ.
ವಾಙ್ಮನಾತೀತವೆಂದೆಂಬಿರಿ,
ವಾಗಾವುದು? ಮನವಾವುದು? ಅತೀತವಾವುದು?
ಬಲ್ಲಡೆ ನೀವು ಹೇಳಿರೇ.
ಲಿಂಗಸಂಗಸಯಸುಖವೆಂದೆಂಬಿರಿ,

ಲಿಂಗವಾವುದು? ಸಂಗವಾವುದು? ಸಯಸುಖವಾವುದು?
ಬಲ್ಲಡೆ ನೀವು ಹೇಳಿರೇ.
ಅನುಭಾವಗೋಷ್ಠಿಯ ಪ್ರಸಂಗದಿಂದ
ಅನುವಿದು ಭಾವವಿದು ಗೋಷ್ಠಿಯಿದು
ಪರವಿದು ಸಂಗವಿದೆಂದರಿತು,
ಶ್ರುತಿಜ್ಞಾನ ಮತಿಜ್ಞಾನ ಸಮ್ಯಜ್ಞಾನ ಪೈಶಾಚಿಕಜ್ಞಾನಂಗಳನತಿಗಳೆದು,
ಶಿವಜ್ಞಾನ ಸಯಜ್ಞಾನ ಸಮ್ಯಜ್ಞಾನ
ಅವಧಿಜ್ಞಾನ ಪರಮಜ್ಞಾನದಿಂ ಪರವಶವಾಗಿಪ್ಪುದೆ
ಕೇವಲಜ್ಞಾನದ ನಿರ್ಲೇಪ ಕಾಣಾ, ಸೌರಾಷ್ಟ್ರ ಸೋಮೇಶ್ವರಾ. ॥೨೬॥

೭೮೩
ಅದ್ವೈತನ ಹಸ್ತದಲ್ಲಿ ಅಪ್ರತಿಮನೆಂಬ ಲಿಂಗವಿದ್ದಿತ್ತು,
ಅಖಂಡಿತವೆಂಬ ಪೂಜೆಯಾಯಿತ್ತು,
ಅನಾಕುಳವೆಂಬ ಭಕ್ತಿ ದೊರೆಕೊಂಡು
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ ಅಭಿನ್ನವಾಯಿತ್ತು. ॥೨೭॥

೭೮೪
ಅದ್ವೈತವನೋದಿ ಎರಡಳಿದೆವೆಂಬ ಅಣ್ಣಗಳು ನೀವು ಕೇಳಿರೆ.
ಅದ್ವೈತಿಯಾದಡೆ ತನುವಿಕಾರ, ಮನದ ಸಂಚಲ,
ಭಾವದ ಭ್ರಾಂತು, ಅರಿವಿನ ಮರಹು,
ಇಂತೀ ಚತುರ್ವಿಧಂಗಳಲ್ಲಿ ವಿಧಿನಿಷೇಧಂಗಳಳಿದು,
ಚಿದ್ಬ್ರಹ್ಮದೊಳವಿರಳಾತ್ಮಕವಾದುದು ಅದ್ವೈತ.
ಅಂತಪ್ಪ ವಿಧಿನಿಷೇಧಂಗಳು ಹಿಂಗದೆ, ಲಿಂಗವನರಿಯದೆ,
ವಾಗದ್ವೈತದಿಂದ ನುಡಿದು ಅದ್ವೈತಿ ಎನಿಸಿಕೊಂಬುದೆ ದ್ವೈತ.
ಇಂತಪ್ಪ ದ್ವೈತಾದ್ವೈತಂಗಳಿಗೆ ಸಿಲುಕದ,
ಹರಿಹರಬ್ರಹ್ಮಾದಿಗಳರಿಯದ
ವೇದಶಾಸ್ತ್ರ ಆಗಮ ಪುರಾಣ ಇತಿಹಾಸ ರಹಸ್ಯಛಂದಸ್ಸು
ಅಲಂಕಾರ ನಿಘಂಟು ಶಬ್ದತರ್ಕಂಗಳೆಂಬ ಕುತರ್ಕಂಗಳಿಗೆ ನಿಲುಕದ,
ನಿತ್ಯನಿಜೈಕ್ಯ ನಿರುಪಮಸುಖಿಯಾಗಿ, ತಾನಿದಿರೆಂಬ ಭಿನ್ನಭಾವವಿಲ್ಲದ
ಸ್ವಯಾದ್ವೈತಿ ತಾನೆ ಸೌರಾಷ್ಟ್ರ ಸೋಮೇಶ್ವರ. ॥೨೮॥

೭೮೫
ಅಧೋಮುಖದಷ್ಟದಳಕಮಲದಲ್ಲಿ
ಹಂಸಗತಿ ಮನದ ನಡೆವಳಿಯಿಂದ ದಿಗ್ವಳಯದ ಅಷ್ಟಗುಣಯುಕ್ತವಾಗಿಹನು.

ಇದಲ್ಲದೆ ಮತ್ತೆಯು ನಿಧನ ನಿದ್ರೆ ಚಿಂತೆ ಲಜ್ಜೆ ಕ್ಷುಧೆ
ತೃಷೆ ವಿಷಯ ಆಧಿವ್ಯಾಧಿದ್ಯೂತೋದ್ಯೋಗ ದಾಹ
ಶೋಷ ರತಿ ಸ್ವೇದ ಕೋಪ ಶೋಕ ಉದ್ಭ್ರಮೆ ಭಯ ಎಂಬ
ಹದಿನೆಂಟು ದೋಷಾವರಣನಾಗಿ ಅಜ್ಞಾನದಿಂ ತಿರುಗುವ ಜೀವನು
ಶ್ರುತಗುರು ಸ್ವಾನುಭಾವದಿಂ
ಪರಮನ ಗತಿಯನರಿತು ತನ್ನ ಗತಿಯ ಮರೆದು,
ದಶವಾಯುವ ದೆಸೆಗೆ ಹರಿಯದೆ,
ಮಧ್ಯನಾಳದಲ್ಲಿ ನಿಂದ ಮರುವಾಳ ಮರೆದು
ಸೌರಾಷ್ಟ್ರ ಸೋಮೇಶ್ವರಲಿಂಗದ ಬೆಳಗಿನೊಳಗೆ
ಬೆರಸಿ ಬೇರಿಲ್ಲದ ಶಿಖಿಕರ್ಪುರದಂತಾಯಿತ್ತು. ॥೨೯॥

೭೮೬

ಅಧೋಮುಖವಾಗಿಪ್ಪ ಹೃದಯಕಮಲವನೂರ್ಧ್ವಮುಖವ ಮಾಡಿ,
ಮೇಲಿಪ್ಪ ಚೌದಳವ ಮುಟ್ಟದೆ, ಎಂಟೆಸಳನೊಂದೆ ಎಸಳ ಮಾಡಿ,
ಅಂತರಾತ್ಮನು ಪರಮಾತ್ಮನ ಸಂಗವ ಮಾಡುವಲ್ಲಿ
ಅಷ್ಟಾದಶದೋಷವಿರಹಿತನಾಗಿ, ಒಂದೆಸಳ ಸುಜ್ಞಾನಮಧ್ಯದಲ್ಲಿ
ಸೌರಾಷ್ಟ್ರ ಸೋಮೇಶ್ವರಲಿಂಗವನರಸಿ ಬೆರಸಬಲ್ಲ. ॥೩೦॥

೭೮೭

ಅನವರತ ಲಿಂಗಭಾವದಲ್ಲಿ ನೆನಹು ನೆಲೆಗೊಂಡು, ಬಿಡುವಡಗಿ,
ಪಂಚಾವಸ್ಥೆಯಲ್ಲಿ, ಎಲ್ಲಾ ವೇಳೆಯಲ್ಲಿ,
ನಿಮ್ಮ ಅರಿವು ಮರೆಯದ ಘನಪರಿಣಾಮದ ಸುಯಿಧಾನಿ
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ. ॥೩೧॥

೭೮೮

ಅನಾದಿಯ ಲಿಂಗವ ಕಂಡು, ಆದಿಯ ಪ್ರಸಾದ ಕೊಂಡು,
ಆ ಪ್ರಸಾದವಪ್ಪ ಪರಿಣಾಮದಲ್ಲಿ ಬೆಳಗುತಿರ್ಪನಯ್ಯಾ,
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ. ॥೩೨॥

೭೮೯

ಅನುಭಾವ ಸಾಹಿತ್ಯವಾದ ಬಳಿಕ ಅನುಭವಿಸಲೆಲ್ಲಿಯದೊ?
ಸಂಚಿತ ಪ್ರಾರಬ್ಧ ಆಗಾಮಿಯ ಅದ್ವೈತ ಸಾಹಿತ್ಯವಾದ ಬಳಿಕ
ಸಂದೇಹ ಭ್ರಾಂತಿಯೆಲ್ಲಿಯದೊ?

ಉಂಟು ಇಲ್ಲವೆಂಬ ಪ್ರಸಾದ ಸಾಹಿತ್ಯವಾದ ಬಳಿಕ
ಭೋಗ ಉಪಭೋಗಂಗಳೆಲ್ಲಿಯವೋ?
ಅಷ್ಟಭೋಗಂಗಳು ಸೌರಾಷ್ಟ್ರ ಸೋಮೇಶ್ವರ ಸಾಹಿತ್ಯವಾದ ಬಳಿಕ
ಮಲ-ಮಾಯಾ-ಕರ್ಮ-ತಿರೋಧಾನವೆಂಬ
ಚತುರ್ವಿಧಪಾಶಂಗಳೆಲ್ಲಿಯವೊ? ॥೩೩॥

೭೯೦

ಅಯ್ಯಾ, ತನುವಿದ್ದಂತೆ
ಮರಣ ಶೋಕ ಭಯಂಗಳೆಂತುತ್ತಾರವಹವೆಂದರಿಯೆನಯ್ಯಾ.
ಅಯ್ಯಾ, ಮನವಿದ್ದಂತೆ ಮಲ, ಮದ, ಮಾಯೆ,
ಕರ್ಮಂಗಳೆಂತು ಹರಿವವೆಂದರಿಯೆನಯ್ಯಾ.
ಅಯ್ಯಾ, ನಿಮ್ಮ ನೋಡುವ ಜ್ಞಾನಕಂಗಳಿಗೆ
ವಿವೇಕಾಂಜನಸಿದ್ಧಿ ಎಂತಹುದೆಂದರಿಯೆನಯ್ಯಾ.
ಅಯ್ಯಾ, ನಿಮ್ಮನರುಹಿ ಎನ್ನ ಮರಹಿಸಯ್ಯಾ
ಸೌರಾಷ್ಟ್ರ ಸೋಮೇಶ್ವರಾ. ॥೩೪॥

೭೯೧

ಅಯ್ಯಾ, ನಿಮ್ಮನೆನ್ನ ಕರಸ್ಥಲದಲ್ಲಿ ಧರಿಸಿದಡೆ
ನೀವೆನ್ನ ಮನಸ್ಥಲವನೆಡೆಗೊಂಡುದ ನಾನೇನೆಂಬೆನಯ್ಯಾ?
ಅಯ್ಯಾ, ನಿಮ್ಮನೆನ್ನ ಪಂಚಮುಖದಲ್ಲಿ ಧರಿಸಿದಡೆ
ನೀವೆನ್ನ ಸರ್ವಾಂಗವನವಗ್ರಹಿಸಿಕೊಂಡುದ ನಾನೇನೆಂಬೆನಯ್ಯಾ?
ಅಯ್ಯಾ, ನಿಮ್ಮನೆನ್ನ ಅರಿವಿನಲ್ಲಿ ಬೈಚಿಟ್ಟಡೆ
ನೀವೆನ್ನ ನಿರ್ಭಾವದಲ್ಲಿ ನೆಲೆಗೊಂಡುದ ನಾನೇನೆಂಬೆನಯ್ಯಾ?
ಸೌರಾಷ್ಟ್ರ ಸೋಮೇಶ್ವರಾ,
ನಿಮ್ಮ ಮುಟ್ಟಿ ಹಮ್ಮುಗೆಟ್ಟುದ ನಾನೇನೆಂಬೆನಯ್ಯಾ? ॥೩೫॥

೭೯೨

ಅಯ್ಯಾ, ನಿಶೆಯ ಮೊತ್ತ ಸವಿತನ ಕಣ್ಗೆ ತಮವನೀಯಬಲ್ಲುದೆ?
ಅಯ್ಯಾ, ಉರಗನ ನೆರವಿ ಗರುಡಂಗೆ ವಿಷವೀಯಬಲ್ಲುದೆ?
ಅಯ್ಯಾ, ಕರಿವಿಂಡು ಕೇಸರಿಗೆ ಭಯವೀಯಬಲ್ಲುದೆ?
ಅಯ್ಯಾ, ತನುಮುಖದಿಂದ್ರಿಯಂಗಳೆಲ್ಲ
ನಿರ್ಭಾವ ಕರಿಗೊಂಡ ನಿಜನಿಷ್ಪತ್ತಿಯನು ಅಳಿಯಬಲ್ಲವೆ ಹೇಳಾ
ಸೌರಾಷ್ಟ್ರ ಸೋಮೇಶ್ವರಾ. ॥೩೬॥

೭೯೩

ಅಯ್ಯಾ, ಹುಲ್ಲುಮೊರಡಿಯೊಳಗೆ ಕಲ್ಪತರುವನರಸುವರೆ?
ಅಯ್ಯಾ, ಹಾವುಮೆಕ್ಕೆಯಲ್ಲಿ ದ್ರಾಕ್ಷಫಳವನರಸುವರೆ?
ಅಯ್ಯಾ, ಗೋರಿಕಲ್ಲುಗಳೊಳಗೆ ಚಿಂತಾಮಣಿಯನರಸುವರೆ?
ಅಯ್ಯಾ, ರೀತಿಕೆಯಲ್ಲಿ ಅಪರಂಜಿಯನರಸುವರೆ?
ಅಯ್ಯಾ, ಅಬಲಲ್ಲಿ ಅರವಿಂದವನರಸುವರೆ?
ಅಯ್ಯಾ, ಎನ್ನೊಳಗದಾವ ಗುಣವನರಸದೆ ನೀನೇ ಕರುಣಿಸಯ್ಯಾ,
ಕಾರುಣ್ಯಮೂರ್ತಿಯೆ ಸೌರಾಷ್ಟ್ರ ಸೋಮೇಶ್ವರಾ . ॥೩೭॥

೭೯೪

ಅರಿವರತು ಅರಿವ ತಿಳಿದು, ಮರಹ ಮರೆದು ಮರಹಳಿದು,
ಕುರುಹೆಂದು ಹೇಳಹೆಸರಿಲ್ಲದೆ
ಗುರುಲಿಂಗಜಂಗಮ ತ್ರಿವಿಧವೊಂದಾದ ಎಡೆಯ ತೋರಿಸಿ ಬದುಕಿಸಾ,
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಧರ್ಮ, ನಿಮ್ಮ ಧರ್ಮ. ॥೩೮॥

೭೯೫

ಅರಿವರತು ಅರಿವುಗೆಟ್ಟಿತ್ತು, ಮರಹಳಿದು ಮರಹುಗೆಟ್ಟಿತ್ತು.
ಜಂಗಮವೆಂದರಿದು ಹಿಂದುಗೆಟ್ಟಿತ್ತು, ಪ್ರಸಾದವೆಂದರಿದು ಮುಂದುಗೆಟ್ಟಿತ್ತು,
ಇಹಪರಂಗಳೆಂಬ ಇದ್ದೆಸೆಗೆಟ್ಟಿತ್ತು.
ಆನೆಂಬುದಿಲ್ಲವಾಗಿ ನೀನೆಂಬುದು ಕೆಟ್ಟಿತ್ತು,
ನೀನೆಂಬುದಿಲ್ಲವಾಗಿ ಆನೆಂಬುದು ಕೆಟ್ಟಿತ್ತು.
ಸೌರಾಷ್ಟ್ರ ಸೋಮೇಶ್ವರನೆನ್ನ ಮನವನಂಗಂಗೊಂಡನಾಗಿ ನೆನಹುಗೆಟ್ಟಿತ್ತು. ॥೩೯॥

೭೯೬

ಅರಿವರತು, ಮರಹರತು, ಕುರುಹಳಿದು,
ನಿರುಗೆಗಂಡು ಬೆರಗುವಡೆದು,
ಹೃದಯಾಕಾಶದ ಬಟ್ಟಬಯಲೊಳಗೆ ಭರಿತವಾಗಿರ್ದ
ಮಹಾಶರಣರ ತೋರಿಸಿ ಬದುಕಿಸಾ,
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಧರ್ಮ, ನಿಮ್ಮ ಧರ್ಮ. ॥೪೦॥

೭೯೭

ಅರಿವಿನ ಕ್ರಿಯೆಯಲ್ಲಿ ತೊಳತೊಳಗಿ ಬೆಳಗುವ
ಲಿಂಗೈಕ್ಯನು ಎಂತಿರ್ಪನೆಂದಡೆ:

ಬಾವನ್ನದೊಳಗಿಪ್ಪ ಸುಗಂಧದಂತೆ,ಮಾಣಿಕ್ಯದೊಳಗಿಪ್ಪ ಸುರಂಗಿನಂತೆ,
ಚಿನ್ನದೊಳಗಿಪ್ಪ ಬಣ್ಣದಂತೆ ಭೇದವಿಲ್ಲದಚಲನಯ್ಯಾ.
ಸಂಪಗೆಯ ಕಂಪುಂಡ ಭ್ರಮರನಂತೆ
ಸೌರಾಷ್ಟ್ರ ಸೋಮೇಶ್ವರಲಿಂಗದ ಪರಮಸುಖದೊಳಗೆ
ಪರವಶನಾದ ಲಿಂಗೈಕ್ಯನು. ॥೪೧॥

೭೯೮
ಅರಿವಿನ ತರಹರದಿಂದ ಭಾವ ಸದ್ಭಾವವನೆಯ್ದಿದ ಶರಣನ
ಭಾವದೊಳಗೆ ಲಿಂಗದೇವ.
ಲಿಂಗದೊಳಗೆ ಸದ್ಭಾವ ಭೇದವಿಲ್ಲದೆ
ಮಾರ್ಗಕ್ರೀ ಮೀರಿದಕ್ರೀಗತೀತನಾದ ಲಿಂಗೈಕ್ಯನ
ಪ್ರಾಣನೊಳಗೆ ಲಿಂಗ, ಲಿಂಗಭಾವದೊಳಗೆ ಪ್ರಾಣ.
ಇಂತೀ ಶಿವಭಾವವೇ ಜೀವವಾಗಿಪ್ಪ ಶರಣಂಗೆ
ಲಿಂಗಮುಖವಾದ ಸತ್ಪಥವಿದೇ ಕಂಡಯ್ಯಾ,
ಸೌರಾಷ್ಟ್ರ ಸೋಮೇಶ್ವರಾ. ॥೪೨॥

೭೯೯
ಅರಿವು ಮರಹಳಿದುದಕ್ಕೇನು ದೃಷ್ಟ? ಭಾವ ಭ್ರಮೆಯಳಿದುದೆ ದೃಷ್ಟ.
ಭಾವ ಭ್ರಮೆಯಳಿದುದಕ್ಕೇನು ದೃಷ್ಟ? ಮನದ ಸಂಚಲವಳಿದುದೆ ದೃಷ್ಟ.
ಮನದ ಸಂಚಲವಳಿದುದಕ್ಕೇನು ದೃಷ್ಟ? ತನುವಿಕಾರವಳಿದುದೆ ದೃಷ್ಟ.
ತನುವಿಕಾರವಳಿವುದಕ್ಕೇನು ದೃಷ್ಟ? ಪರಮಸುಖವಿಂಬುಗೊಂಡುದೆ ದೃಷ್ಟ.
ಪರಮಸುಖವಿಂಬುಗೊಂಡುದಕ್ಕೇನು ದೃಷ್ಟ?
ಸೌರಾಷ್ಟ್ರಸೋಮೇಶ್ವರನೆಂಬ ನಿಜತತ್ವವಂಗವಾದುದೆ ದೃಷ್ಟ. ॥೪೩॥

೮೦೦
ಅರಿವು ಮರಹಳಿದು ನಿಜದಲ್ಲಿ ನಿಂದ ನಿರ್ಧರಂಗೆ
ಬೇರೆ ಸಂಸಾರವುಂಟೆ? ಮತ್ತೊಂದರಲ್ಲಿ ತೊಡಕುಂಟೆ?
ಇಲ್ಲವಾಗಿ ನಿರ್ದೇಶವೆಂಬುದು ಬೇರಿಲ್ಲ.
ತಾನು ತಾನಾದ ಬಳಿಕ ಸೌರಾಷ್ಟ್ರ ಸೋಮೇಶ್ವರಲಿಂಗ ಬೇರಿಲ್ಲ ॥೪೪॥

೮೦೧
ಅರಿವುಳ್ಳವರೆಲ್ಲಾ ಎಡೆಯಲ್ಲಿ ಉಂಟು,
ನಿರಗೆಗಂಡವರಪೂರ್ವವಯ್ಯಾ.

ವಾಕುಪಾಕವಾದವರೆಲ್ಲ ಎಡೆಯೊಳು ಉಂಟು,
ಬೆರಗು ಹತ್ತಿದವರಪೂರ್ವವಯ್ಯಾ.
ಬೆರಗು ಹತ್ತಿದವರೆಲ್ಲಾ ಎಡೆಯೊಳು ಉಂಟು,
ಮನಪಾಕವಾದವರಪೂರ್ವವಯ್ಯಾ.
ಸೌರಾಷ್ಟ್ರ ಸೋಮೇಶ್ವರಲಿಂಗವೆಂಬವರೆಲ್ಲಾ ಎಡೆಯಲುಂಟು,
ಎಂದೆಂದು ತಾನಾದವರಪೂರ್ವವಯ್ಯಾ. ॥೪೫॥

೮೦೨

ಅವಿರಳಾತ್ಮಕನಾಗಿ ನಿಃಕಲಬ್ರಹ್ಮದೊಳೊಡವೆರಸಿ
ಪರಮಜ್ಞಾನ ಇಂಬುಗೊಂಡು
ಪರಮಾಶ್ರಯ ಪರಿಪೂರ್ಣವಾದ, ನಿಜಸುಖದಾಶ್ರಯವಾದ
ಸುಜ್ಞಾನಭರಿತರ ತೋರಿ ಬದುಕಿಸಾ,
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಧರ್ಮ ನಿಮ್ಮ ಧರ್ಮ. ॥೪೬॥

೮೦೩

ಅಷ್ಟಭೋಗಂಗಳ ಕಾಮಿಸಿ,
ತನಗೆಂಬ ಜ್ಞಾನೇಂದ್ರಿಯ ಅಂತಃಕರಣಗಳ ಮುಸುಡುಗುತ್ತಲೀಯದೆ
ಸ್ವಾನುಭಾವರ ಸುಖದೊಳಗಿರಬಲ್ಲಡೆ ಕಕ್ಷಸ್ಥಲದಲ್ಲಿ ಧರಿಸುವುದಯ್ಯಾ.
ಇಂದ್ರಿಯ ನಿರೂಢಿಯ ವಿಕಳದ ಅಪೇಕ್ಷೆಯಿಂ ಕಾಂಚಾಣಕ್ಕೆ ಕೈಯಾನದೆ,
ನಿಚ್ಚಯ ದೃಢಚಿತ್ತದೊಳಿರಬಲ್ಲಡೆ ಕರಸ್ಥಲದಲ್ಲಿ ಧರಿಸುವುದಯ್ಯಾ.
ಅಂಗನೆಯರ ಅಂಗಸುಖದ ವಿರಹಕ್ಕೆ ತನುವನೊಪ್ಪಿಸದೆ
ಲಿಂಗವನಪ್ಪಿ ಪರಮಸುಖದ ಸುಗ್ಗಿಯೊಳಿರಬಲ್ಲಡೆ
ಉರಸ್ಥಲದಲ್ಲಿ ಧರಿಸುವುದಯ್ಯಾ.
ನಿಂದೆ ನಿಷ್ಠುರ ಅನೃತ ಅಸಹ್ಯ ಕುತರ್ಕ ಕುಶಬ್ದವಳಿದು
ಶಿವಾನುಭಾವದ ಸುಖದೊಳಿರಬಲ್ಲಡೆ ಕಂಠಸ್ಥಲದಲ್ಲಿ ಧರಿಸುವುದಯ್ಯಾ.
ಲಿಂಗವಿಹೀನರಾದ ಲೋಕದ ಜಡಮಾನವರಿಗೆ ತಲೆವಾಗದೆ
ಶಿವಲಿಂಗಕ್ಕೆರಗಿರಬಲ್ಲಡೆ ಶಿರದಲ್ಲಿ ಧರಿಸುವುದಯ್ಯಾ.
ಅಂತರ್ಮುಖವಾಗಿ ಶಿವಜ್ಞಾನದಿಂ ಪ್ರಾಣಗುಣವಳಿದು
ಸದಾ ಸನ್ನಿಹಿತದಿಂದೆರಡರಿಯದಿರಬಲ್ಲಡೆ
ಅಮಳೋಕ್ಯದಲ್ಲಿ ಧರಿಸುವುದಯ್ಯಾ.
ಶಿವತತ್ವದ ಮೂಲಜ್ಞಾನಸಂಬಂಧಿಗಳಪ್ಪ
ಶಿವಶರಣರ ಮತವಿಂತಯ್ಯಾ ಸೌರಾಷ್ಟ್ರ ಸೋಮೇಶ್ವರಾ. ॥೪೭॥

೮೦೪

ಅಷ್ಟಭೋಗಂಗಳಭಿಲಾಷೆಯಿಂದಿಪ್ಪ ವೇಷಧಾರಿಗಳಿಗೆ
ಶಿವಜ್ಞಾನ, ಶಿವಯೋಗ, ಶಿವಧ್ಯಾನಂಗಳಿಲ್ಲ ನೋಡಯ್ಯಾ.
ಅಂತಪ್ಪ ಶಿವಜ್ಞಾನ ಶಿವಯೋಗ ಶಿವಧ್ಯಾನಗಳಿಲ್ಲದೆ
ಲಿಂಗವ ಕಾಣಬಾರದು. ಅದಕ್ಕೆ ಶ್ರುತಿ:
'ತೇ ಧ್ಯಾನಯೋಗಾನುಗತಾ ಅಪಶ್ಯನ್ ದೇವಾತ್ಮಶಕ್ತಿಂ ಸ್ವಗುಣೈರ್ನಿಗೂಢಾಂ'
ಇಂತೆಂದುದಾಗಿ, ಸೌರಾಷ್ಟ್ರ ಸೋಮೇಶ್ವರಲಿಂಗವನರಿವಡೆ
ಸ್ವಾನುಭಾವದಿಂದಲ್ಲದರಿಯಬಾರದು. ॥೪೮॥

೮೦೫

ಅಷ್ಟಭೋಗಂಗಳ ಶಕ್ತಿ ಕೆಟ್ಟಲ್ಲಿ ರೋಧಮಲ ನಷ್ಟ.
ಕರ್ಮಸಾಮ್ಯವಾಗಿ ಶಕ್ತಿಪಾಶವಾದಲ್ಲಿ ಬಿಂದುಮಲ ನಷ್ಟ.
ಅಹಂಕಾರವಳಿದಲ್ಲಿ ಕರ್ಮಮಲ ನಷ್ಟ.
ಕಾಯಭಾವವಳಿದಲ್ಲಿ ಮಾಯಾಮಲ ನಷ್ಟ.
ಪರವಸ್ತುವಿನ ಕಳೆ ತನ್ನಲ್ಲಿ ಬೆಳಗಿದ ಆಣವಮಲ ನಷ್ಟ.
ಇಂತೀ ಪಂಚಮಲಂಗಳು ನಷ್ಟವಾದಲ್ಲಿ
ಸೌರಾಷ್ಟ್ರ ಸೋಮೇಶ್ವರಲಿಂಗ ಸಮ್ಯಕ್‌ದೃಷ್ಟ. ॥೪೯॥

೮೦೬

ಅಷ್ಟಾಷಷ್ಟಿ ತೀರ್ಥಂಗಳ ಮೆಟ್ಟಿದವರೆಲ್ಲರೂ ಭಕ್ತರಪ್ಪರೇ?
ಜಪತಪ ನೇಮನಿತ್ಯ ಮಂತ್ರಾರೂಢರೆಲ್ಲಾ ಜಂಗಮವಪ್ಪರೆ?
ವಚನ ಸುಲಕ್ಷಣವನರಿದಿರ್ದವರೆಲ್ಲಾ ಅನುಭಾವಿಗಳಪ್ಪರೆ?
ಅದೆಂತೆಂದಡೆ:
"ಕೇದಾರಸ್ಯೋದಕಂ ಪೀತ್ವಾ ವಾರಾಣಸ್ಯಾಮ್ಮತಿಧ್ರುವಂ
ಶ್ರೀಶೈಲಶಿಖರಂ ದೃಷ್ಟ್ವಾ ಪುನರ್ಜನ್ಮ ನ ವಿದ್ಯತೇ"
ಇಂತೆಂಬ ಶ್ರುತಿಯಂತಿರಲಿ,
"ಪ್ರಾಣಲಿಂಗಮವಿಶ್ವಸ್ಯ ತೀರ್ಥಲಿಂಗಂ ಗತೋ ನರಃ
ಶ್ವಾನಯೋನಿಶತಂ ಗತ್ವಾ ಚಂಡಾಲಗೃಹಮಾವಿಶೇತ್"
ಎಂದುದಾಗಿ, ಇಂತಲ್ಲವಯ್ಯಾ ನಮ್ಮ ಶಿವಭಕ್ತರು.
ಎಂತಿಹರಯ್ಯಾ ಎಂದಡೆ:
ಧ್ಯಾನವೇ ಜಪ, ಮೌನವೇ ತಪ,
ನಿರ್ಭಾವವೇ ನಿಲುವು, ಸದ್ಭಾವವೇ ಪೂಜೆ.
ಇಂತಪ್ಪ ದಾಸೋಹವ ಮಾಡುವ ಸದ್ಭಕ್ತನ ದರುಶನ

ಎಂತಿಹುದಯ್ಯಾ ಎಂದಡೆ:
"ಉಪಪಾತಕ ಕೋಟೀನಿ ಬ್ರಹ್ಮಹತ್ಯಾ ಶತಾನಿ ಚ
ದಹ್ಯಂತ್ಯೇಶೇಷ ಪಾಪಾನಿ ಶಿವಭಕ್ತಸ್ಯ ದರ್ಶನಾತ್"
ಇಂತೆಂದುದಾಗಿ, ಸೌರಾಷ್ಟ್ರ ಸೋಮೇಶ್ವರಾ
ನೀನೊಲಿದ ಶಿವಭಕ್ತರ ಅಂಗಳವೆ ವಾರಣಾಸಿ,
ಮನವೆ ತೀರ್ಥವಯ್ಯಾ. ॥೫೦॥

೮೦೭

ಅಶ್ವತ ಕಂಬಳರ ಕರ್ಣದಲ್ಲಿ ಧರಿಸಿದೆಯಯ್ಯಾ,
ಪಂಚಮುಖದಿಂದ ಪಂಚಮಹಾವೇದಂಗಳನುಸುರಿ
ವೇದಸ್ವರೂಪನಾದೆಯಯ್ಯಾ.
ಶಕ್ತಿಯ ನೆತ್ತಿಯಲ್ಲಿ ಅರ್ಧಾಂಗನಾಲಿಂಗನಾದೆಯಯ್ಯಾ.
ಅಂಧಕಾಸುರನ ಎದೆಯ ಮೆಟ್ಟಿ ನಾಟ್ಯವನಾಡಿದೆಯಯ್ಯಾ.
ಸೌರಾಷ್ಟ್ರ ಸೋಮೇಶ್ವರಾ,
ನಿಮ್ಮ ಪರಿ ಇಂತು, ನಿಮ್ಮ ಶರಣರ ಪರಿ ಇನ್ನೆಂತೊ? . ॥೫೧॥

೮೦೮

ಅಸಮಾನಾಢ್ಯರಪ್ರತಿಮಸ್ವತಂತ್ರ ಸ್ವಲೀಲರಪ್ಪ ಶರಣರೆಂತಿಪ್ಪರಯ್ಯಾ?
ಕಡವರವ ನುಂಗಿದ ಪೊಡವಿಯಂತೆ,
ರತ್ನವ ನುಂಗಿದ ರತ್ನಾಕರನಂತೆ,
ಬೆಳಗ ನುಂಗಿದ ಬಯಲಂತೆ, ಬಣ್ಣವ ನುಂಗಿದ ಚಿನ್ನದಂತೆ,
ತೈಲವ ನುಂಗಿದ ತಿಲದಂತೆ, ಪ್ರಭೆಯ ನುಂಗಿದ ಪಾಷಾಣದಂತೆ,
ವೃಕ್ಷವ ನುಂಗಿದ ಬೀಜದಂತೆ,
ಪ್ರತಿಬಿಂಬವ ನುಂಗಿದ ದರ್ಪಣದಂತಿಪ್ಪರಯ್ಯಾ.
ಸೌರಾಷ್ಟ್ರ ಸೋಮೇಶ್ವರಾ,
ನಿಮ್ಮ ಶರಣರಲ್ಲಿ ನೀವಿಹ ಭೇದವ ನೀವೆ ಬಲ್ಲಿರಿ, ಆನೆತ್ತ ಬಲ್ಲೆನಯ್ಯಾ? ॥೫೨॥

೮೦೯

ಅಸ್ತಿ ಭಾತಿ[ಕ್ರಿ]ಯವೆಂಬ ತ್ರಿವಾಕ್ಯದಿಂದಲ್ಲವಾದುದಲ್ಲ.
ಅಪ್ರಮಾಣ ಅಗೋಚರ ಅತ್ಯತಿಷ್ಠದ್ದಶಾಂಗುಲ
ಅಭೇದ್ಯದಿಂ ನಾಮರೂಪುಗಳುಂಟಾದುದಲ್ಲ.
ಇದು ಕಾರಣ ಸ್ತ್ರೀಯಲ್ಲ ಪುರುಷನಲ್ಲ ನಪುಂಸಕನಲ್ಲ

ಮೂರ್ತನಲ್ಲ ಭಾವಿಯಲ್ಲ ಪ್ರಾಣಿಯಲ್ಲ. ಇದಕ್ಕೆ ಶ್ರುತಿ:
"ನೈವಂಚೋವಾಚಾಸ್ತ್ರೀಯಾನ್ ಭೂಮಾನಚನಸ್ತ್ರೀ
ಪುಮಾನ್ನಪುಮಾನ್ ಪ್ರಮಾನ್ನಪ್ರಮಾನ್
ಭವಾನ್ ಯೇನೇದಂ ವದತಿ ಶತ್ವನಃ ಇತಿ ಬ್ರಹ್ಮಾ"
ಎಂಬ ಉಪನಿಷದುಕ್ತಿಯನರಿದು ಅರಿವೆ ತಾನಾಗಿ,
ಲಿಂಗದಲ್ಲಿ ಸಂದುಭೇದವಿಲ್ಲದೆ ಇಪ್ಪರಯ್ಯಾ
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು. ॥೫೩॥

೬೧೦
ಅಹಂಕಾರ ಮಮಕಾರಂಗಳಲ್ಲಿ ಸಂದು, ತ್ರಿಗುಣದಲ್ಲಿ ಕೂಡಿ,
ತಾಪತ್ರಯಂಗಳಲ್ಲಿ ಬೆಂದು, ಪಂಚಕ್ಲೇಶಂಗಳಿಂದ ಕುಗ್ಗಿ,
ಅರಿಷಡ್ವರ್ಗಂಗಳಲ್ಲಿ ತಗ್ಗಿ, ಸಪ್ತವ್ಯಸನಂಗಳಲ್ಲಿ ಮುಗ್ಗಿ,
ಅಷ್ಟಮದಂಗಳಲ್ಲಿ ನುಗ್ಗಿ, ಅಷ್ಟದಳದ ಗತಿಯಲ್ಲಿ
ದಿನವೊಂದಕ್ಕೆ ಇಪ್ಪತ್ತೊಂದು ಸಾವಿರದರುನೂರು
ಗಂಧಸ್ವರಂಗಳ ಬಳಿವಿಡಿದು ಸುಳಿದು ತಿರು[ಗುವ] ಜೀವನ ಗತಿಗೆಡಿಸಿ
ಸದ್ಭಾವದಿಂದ ಲಿಂಗಸಂಗಿಯಾಗಿರಬಲ್ಲ
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣ. ॥೫೪॥

೬೧೧
ಆಕಾರವಿಡಿದು ಅರ್ಚನೆಯ ಮಾಡಬೇಕಲ್ಲದೆ
ನಿರಾಕಾರವ ನಂಬಲಾಗದಯ್ಯಾ, ಅಲ್ಲಿ ಮತ್ತೊಂದಿಲ್ಲವಾಗಿ.
ನಿಧಾನ ಕೈಸಾರಿದ ಬಳಿಕ ಬಳಸಲರಿಯದೆ ಬಡತನವನನುಭವಿಸಬಹುದೆ?
ಕಂಡು ಕಂಡು ನಂಬಲರಿಯದೆ ಇದ್ದಡೆ
ಆ ಭಕ್ತಿಯ ಬಾಯಲ್ಲಿ ಹುಡಿಯ ಹೊಯ್ದು ಹೋಹನಯ್ಯಾ,
ಸೌರಾಷ್ಟ್ರ ಸೋಮೇಶ್ವರನು. ॥೫೫॥

೬೧೨
ಆಕಾಶದಲಾಡುವ ಹದ್ದನೊಂದು ಸರ್ಪ ನುಂಗಿತ್ತ ಕಂಡೆ.
ಆ ಸರ್ಪ ಕಿಚ್ಚಿನೊಳು ಬಿದ್ದು ನಿಂದುರಿವುದ ಕಂಡೆ.
ಷಣ್ಮುಖನ ಶಿರ ಹರಿದು ಬಯಲಾದುದ ಕಂಡೆ.
ಉರಿ ಕೆಟ್ಟಲ್ಲಿ ಕರಿಯಿಲ್ಲ, ಭಸಿತವಿಲ್ಲ.
ಈ ಪರಿಯ ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರೆ ಬಲ್ಲರು. ॥೫೬॥

೮೧೩

ಆಕಾಶದಲ್ಲಿ ಪಂಚಮಹಾನಾದಂಗಳುಂಟು,
ಆ ಪಂಚಮಹಾನಾದಂಗಳೇ ಪಂಚಮಹಾವೇದಂಗಳು ಕಂಡಿರೇ.
ಇಂತೀ ವೇದ–ನಾದಂಗಳ ಭೇದಿಸಬಲ್ಲಡೆ
ಸೌರಾಷ್ಟ್ರ ಸೋಮೇಶ್ವರಲಿಂಗವೆಂಬೆನು. ॥೫೭॥

೮೧೪

ಆಕೃತಿ ನಿರಾಕೃತಿಗಳೆಂಬ ಆಕೃತಿಯಳಿದು,
ವ್ಯಾಕುಳ ನಿರಾಕುಳಂಗಳಡಗಿ,
ನಿಃಕರಿಸುವುದು ಸ್ವೀಕರಿಸುವುದಲ್ಲದೆ
ಚರಾಚರನಲ್ಲದೆ ಅಖಿಲಾತೀತನಾಗಿ ನಿಂದ ನಿಲುವು,
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣ. ॥೫೮॥

೮೧೫

ಆಚಾರದನುವಳವಟ್ಟು, ಕರಣಂಗಳನುಡುಗಿ,
ತನುವ ಸವೆವುದು ಗುರುವಿನಲ್ಲಿ.
ವ್ರತನೇಮಂಗಳಿಂ ಪಲ್ಲಟವಿಲ್ಲದೆ,
ಮನವ ಸವೆವುದು ಲಿಂಗದಲ್ಲಿ.
ಆಶೆ ರೋಷಗಳಿಲ್ಲದೆ ಆದರಣೆಯಿಂ
ಧನವ ಸವೆವುದು, ಜಂಗಮದಲ್ಲಿ.
ಇಂತೀ ತ್ರಿವಿಧದಲ್ಲಿ ತ್ರಿವಿಧ ಸವೆದು ಪ್ರಳಯಪ್ರಕೃತಿಗೊಳಗಾಗದೆ,
ಸುಜ್ಞಾನಮುಖದಿಂ ಪ್ರಸಾದವ ಹಿಂಗದೆ ಗ್ರಹಿಸಿಪ್ಪ
ಭಕ್ತನನೇನೆಂದುಪಮಿಸುವೆನಯ್ಯಾ, ಸೌರಾಷ್ಟ್ರ ಸೋಮೇಶ್ವರಾ. ॥೫೯॥

೮೧೬

ಆಚಾರಲಿಂಗ ನಾಸ್ತಿಯಾದಲ್ಲದೆ ಭಕ್ತನಲ್ಲ.
ಗುರುಲಿಂಗ ನಾಸ್ತಿಯಾದಲ್ಲದೆ ಮಾಹೇಶ್ವರನಲ್ಲ.
ಶಿವಲಿಂಗ ನಾಸ್ತಿಯಾದಲ್ಲದೆ ಪ್ರಸಾದಿಯಲ್ಲ.
ಜಂಗಮಲಿಂಗ ನಾಸ್ತಿಯಾದಲ್ಲದೆ ಪ್ರಾಣಲಿಂಗಿಯಲ್ಲ.
ಪ್ರಸಾದಲಿಂಗ ನಾಸ್ತಿಯಾದಲ್ಲದೆ ಶರಣನಲ್ಲ,
ಮಹಾಲಿಂಗ ನಾಸ್ತಿಯಾದಲ್ಲದೆ ಐಕ್ಯನಲ್ಲ.
ಇಂತೀ ಷಡಂಗಗಳು ಕೆಟ್ಟಲ್ಲದೆ
ಸೌರಾಷ್ಟ್ರ ಸೋಮೇಶ್ವರನಲ್ಲಿ ಲಿಂಗೈಕ್ಯನಲ್ಲ. ॥೬೦॥

೮೧೭

ಆಡಿನ ತತ್ತಿಯೊಳಗೊಂದು ಹೇರಡವಿಯಿದ್ದಿತ್ತು.
ಆ ಹೇರಡವಿಯೊಳಗೆ ಮೇರುವಿದ್ದಿತ್ತು.
ಆ ಮೇರುವಿನ ಒಡಲಲ್ಲಿ ಚತುರ್ದಶಭುವನ ಸಚರಾಚರಂಗಳೆಲ್ಲಾ ಇದ್ದಿತ್ತು.
ತತ್ತಿ ಒಡೆಯಿತ್ತು ಅಡವಿ ಅಡಗಿತ್ತು.
ಸೌರಾಷ್ಟ್ರ ಸೋಮೇಶ್ವರಲಿಂಗವಿಲ್ಲದಂತಿದ್ದಿತ್ತು. ॥೬೧॥

೮೧೮

ಆತ್ಮತೇಜದಿಂ ತೋರ್ಪ ಚಿದಹಮ್ಮಿನ ಮೂಲಾಹಂಕಾರವೆ
ಕಾಯದ ಮೊದಲಿಂಗೆ ಬೀಜವೆಂಬುದನರಿತು,
ನಾಹಂ ಕೋಹಂ ಸೋಹಂ ಅಳಿದು ಬೀಜ ನಷ್ಟವಾಗಿ,
ವೃಕ್ಷವಡಗಿ ಯಜ್ಞಸೂತ್ರದ ತ್ರಿನಾಡಿಯ ತ್ರಿಸಗ ಹರಿದು,
ಚೈತನ್ಯ ನಿಶ್ಚೈತನ್ಯವಾದಲ್ಲಿ,
ಸೌರಾಷ್ಟ್ರ ಸೋಮೇಶ್ವರಲಿಂಗ ನಿರುತ ಭರಿತ. ॥೬೨॥

೮೧೯

ಆತ್ಮ ತೇಜ, ದೇಹೋ[ಹಂ] ಹಮ್ಮು, ಮನದ ಬಿಮ್ಮು,
ತಥ್ಯ-ಮಿಥ್ಯ, ರಾಗ-ದ್ವೇಷ, ಸುಖ-ದುಃಖಮೋಹಂಗಳಡಗವಯ್ಯಾ.
ಇಂತಿವನಳಿದಾತನ ನೀನೆಂಬೆನಯ್ಯಾ, ಸೌರಾಷ್ಟ್ರ ಸೋಮೇಶ್ವರಾ. ॥೬೩॥

೮೨೦

ಆತ್ಮನೆಂಬ ಅಂಬುಧಿಯಲ್ಲಿ
ನೊರೆ ತೆರೆ ತುಂತುರು ಸಾರ ಬುದ್ಬುದಂಗಳೆಂಬ
ತನು, ಮನ, ಶಬ್ದ, ಸ್ಪರ್ಶ, ರೂಪು, ರಸ, ಗಂಧ,
ಅಹಂಕಾರ, ಮಮಕಾರಂಗಳಾದವಯ್ಯಾ.
ಮನ ನೆನಹಿನಂತೆ ತೋರಿ ಅಡಗುವುದಲ್ಲ,
ಅಡಗಿ ತೋರುವದಲ್ಲ ನೋಡಾ.
ಆತ್ಮನು ಶುಕ್ಲಶೋಣಿತದಿಂ ತನು ಮನವಾದಂದು,
ಆಗಿ ಅವು ಹೋದಂದು ಹೋಹುದಲ್ಲ ನೋಡಾ ಆತ್ಮನು.
ಅಂತಹ ಆತ್ಮನಿಲ್ಲದಿರ್ದಡೆ
ಅನಂತಕೋಟಿ ಬ್ರಹ್ಮಾಂಡ ಪಿಂಡವೆಂಬ ಭಾಂಡಂಗಳಾಗಬಲ್ಲವೆ?
ಅಂತಹ ಆತ್ಮನಿಲ್ಲದಿರ್ದಡೆ ವಿಶ್ವ ಬ್ರಹ್ಮವೆನಿಸುವದೆ?
ಅಂತಹ ಆತ್ಮನಿಲ್ಲದಿರ್ದಡೆ ಮನ ನೆನಹು ಜನಿಸಬಲ್ಲವೆ?
ಅಂತಹ ಆತ್ಮನಿಲ್ಲದಿರ್ದಡೆ ವಿಷಯವ್ಯಸನಂಗಳು ತೋರಬಲ್ಲವೆ?

ಇದು ಕಾರಣ ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ
ಮನದ ನೆನಹೇ ಆತ್ಮನಲ್ಲವಯ್ಯಾ ಮಲ್ಲಿಕಾರ್ಜುನಾ. ॥೬೪॥

೮೨೧

ಆದಿ ಅನಾದಿಯಿಲ್ಲದಂದು, ನಾದ ಬಿಂದು ಕಳೆ ಮೊಳೆದೋರದಂದು,
ಶ್ರುತಿ ಸ್ಮೃತಿಗಳು ತಲೆದೋರದಂದು,
ಚತುರ್ದಶಭುವನಂಗಳ ರಚನೆ ರಚಿಸದಂದು,
ಲಯಭೋಗಾದಿ ಕರಣಂಗಳಲ್ಲಿಯ ತತ್ವಪ್ರಭಾವ ಮೂರ್ತಿಗಳೆಂಬ
ಅರಿವು ಕುರುಹಿಗೆ ಬಾರದಂದು,
ತಿಥಿ, ವಾರ, ನಕ್ಷತ್ರ, ಯೋಗ, ಕರಣಂಗಳೆಂಬ
ಪಂಚಾಂಗ ಲಗ್ನವಿಲ್ಲದಂದು,
ಅನುಪಮ ಅಸಾಧ್ಯ ಅಭೇದ್ಯ ಸೌರಾಷ್ಟ್ರ ಸೋಮೇಶ್ವರಾ
ನಿಮ್ಮ ನಿಜವನಾರು ಬಲ್ಲರಯ್ಯಾ? ॥೬೫॥

೮೨೨

ಆದಿಬಿಂದುವಿನಲ್ಲಿ ಅಖಂಡಿತ ಬಯಲು,
ನಾದ ಸುನಾದ ಮಹಾನಾದ ನಿಃಕಲನಾದತ್ರಯವ ಕೂಡಿದ
ಚಿನ್ಮೂರ್ತಿ ತಾನಾದ ಅಖಂಡಿತ ಪರಿಪೂರ್ಣನಯ್ಯಾ
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣ. ॥೬೬॥

೮೨೩

ಆನೆಂಬ ಹಮ್ಮು, ನೀನೆಂಬ ಚಿದಹಮ್ಮು,
ಬೇರೆಂಬ ದಾಸೋಹಮ್ಮಳಿದ ಮತ್ತೆ ಆನೀನೆಂಬುದಿಲ್ಲ,
ಅರಿವು ಮರವೆಯಿಲ್ಲ, ಬಂಧಮೋಕ್ಷವಿಲ್ಲ,
ಪುಣ್ಯಪಾಪವಿಲ್ಲ, ಇಹಪರವಿಲ್ಲ.
ಇಂತೀ ಚತುರ್ವಿಧಕ್ಕೊಳಗಲ್ಲದ ಹೊರಗಲ್ಲದ
ಸೌರಾಷ್ಟ್ರ ಸೋಮೇಶ್ವರಲಿಂಗವನೇನೆನ್ನಬಹುದು? ॥೬೭॥

೮೨೪

ಆ ಪರಬ್ರಹ್ಮವೆ ಓಂಕಾರವಪ್ಪ ಪ್ರಣವಸ್ವರೂಪ, ಪರಮಾತ್ಮನೆನಿಸಿ
ಪರಶಿವನಾಮದಿಂ ಪರಶಕ್ತಿಸಂಯುಕ್ತವಾಗಿ,
ಅಕಾರ ಉಕಾರ ಮಕಾರವೆಂಬ ಬೀಜಾಕ್ಷರಂಗಳಿಂ ನಾದಬಿಂದುಕಳೆಯಾಗಿ,
ದಶನಾಡಿ ದಶವಾಯು ದಶವಿಧೇಂದ್ರಿಯ ಸಪ್ತಧಾತು

ಷಡುಚಕ್ರ ಷಡುವರ್ಗ ಪಂಚಭೂತ
ಚತುರಂತಃಕರಣ, ತ್ರಿದೋಷಪ್ರಕೃತಿ, ತ್ರಯಾವಸ್ಥೆ,
ಸತ್ವ ರಜ ತಮ, ಅಂಗ ಪ್ರಾಣ, ಅರಿವು ಭಾವ ಜ್ಞಾನ,
ಮೊದಲಾದ ಬಾಹತ್ತರ ನಿಯೋಗಮಂ ತಿಳಿದು
ಭೂಲೋಕ ಭುವರ್ಲೋಕ ಸ್ವರ್ಲೋಕ ಮಹರ್ಲೋಕ
ಜನಲೋಕ ತಪೋಲೋಕ, ಸತ್ಯಲೋಕ,
ಅತಳ, ವಿತಳ, ಸುತಳ, ಮಹಾತಳ, ರಸಾತಳ, ತಳಾತಳ,
ಪಾತಾಳಂಗಳೊಳಗಾದ ಚತುರ್ದಶಭುವನಂಗಳೊಳ ಹೊರಗೆ
ಅಂತರ್ಗತ ಬಹಿರ್ಗತವಾಗಿ,
ನಾದಮಂ ತೋರಿ ಭರ್ಗೋದೇವನೆಂಬ ನಾಮಮಂ ತಳೆದು
ಊರ್ಧ್ವರೇತುವೆನಿಸಿ,
ವಿಶ್ವತೋಮುಖ, ವಿಶ್ವತಶ್ಚಕ್ಷು, ವಿಶ್ವತೋ ಬಾಹು, ವಿಶ್ವತಃಪಾದದಿಂ
ವಿಶ್ವಗರ್ಭೀಕೃತವಾಗಿ, ಉತ್ಪತ್ತ್ಯಸ್ಥಿತಿಲಯಂಗಳನೆಣಿಕೆಗೆಯ್ಯದೆ
ದೇವತಾಂತರದಿಂ ಮಾನಸಾಂತರವನನುಕರಿಸಿ,
ಮಾನಸದಲ್ಲಿ ರವಿಕೋಟಿತೇಜದಿಂ ಸಕಲಪಾಪಾಂಧಕೂಪಮಂ ತೊಳೆದು
ಸುರಕ್ಷಿತದಿಂ ಪ[ರಾ] ಪಶ್ಯಂತಿ ಸುಮಧ್ಯ ವೈಖರಿಯೆಂಬ ಚತುರ್ವಿಧದಿಂ
ದುರಿತ ದುರ್ಮದ ಕಾಲಮೂಲಾದಿಮೂಲಮಂ ಬಗೆಗೊಳ್ಳದೆ,
ಚಿತ್ಸುಧಾಮೃತವೆ ಅಂಗವಾಗಿ ಚಿದರ್ಕಪ್ರಭಾಕರವೆ ಪ್ರಾಣವಾಗಿ,
ಸೌರಾಷ್ಟ್ರ ಸೋಮೇಶ್ವರನಿಂತಿಂತು ಕರ್ತನು-ಭರ್ತನು ತಾನೆ ಆಗಿ,
ಪರಮಸ್ವಯಂಭೂ ಸ್ವತಃಸಿದ್ಧದಿಂ ಸಚ್ಚಿದಾನಂದಸ್ವರೂಪದಿಂ
ನಿತ್ಯಪರಿಪೂರ್ಣತ್ವದಿಂದೆಡದೆರಹಿಲ್ಲದಿರ್ಪನಯ್ಯಾ. ॥೬೮॥

೮೨೫

ಆಯತಲಿಂಗ ಅಂಗದಲ್ಲಿ ವೇಧಿಸಿಕೊಂಡ ಬಳಿಕ
ಘನವೇದ್ಯವು ತಾನೆ, ಬೇರಿಲ್ಲ ಕಾಣಿರೆ.
ಸ್ವಾಯತ ಸನ್ನಿಹಿತವೆಂಬವು ಬೇರಾಗಲರಿಯವಾಗಿ
ಇಷ್ಟಲಿಂಗದಲ್ಲಿ ದೃಷ್ಟವ ಕಾಣಬಲ್ಲಡೆ,
ಸೌರಾಷ್ಟ್ರ ಸೋಮೇಶ್ವರಲಿಂಗವೊಂದೇ, ಬೇರಿಲ್ಲ ಕಾಣಿರೆ. ॥೬೯॥

೮೨೬

ಆಯತ ಸ್ವಾಯತ ಸನ್ನಿಹಿತವೆಂದು ನುಡಿವ
ಅನಾಯತದ ಹೇಸಿಕೆಯನೇನೆಂಬೆನಯ್ಯಾ?
ತನುಗುಣಂಗಳನೊರಸದೆ, ಭೋಗಭೂಷಣಂಗಳನತಿಗಳೆಯದೆ,

ಅನೃತ ಅಸತ್ಯ ಅಸಹ್ಯ ಋಣಸಂಚವಂಚನೆ
ಪರಧನಕ್ಕಳುಪದ ಆಯತ ಅಂಗಕ್ಕಿಲ್ಲ ಮತ್ತೆಂತಯ್ಯಾ?
ಆಯತವು ಮನೋವಿಕಾರವಳಿದು,
ಸರ್ವೇಂದ್ರಿಯಂಗಳಲ್ಲಿ ಸಾವಧಾನಿಯಾಗಿ,
ಅನ್ಯವಿಷಯ ಭಿನ್ನರುಚಿಯ ಮರೆದು,
ಸಕಲಭ್ರಮೆ ನಷ್ಟವಾದ ಸ್ವಾಯತ ಮನಕ್ಕಿಲ್ಲ.
ಮತ್ತೆಂತಯ್ಯಾ ಸ್ವಾಯತವು?
ತನ್ನರಿವಿನ ಕುರುಹನರಿತು ನಿಜಸಾಧ್ಯವಾದ ಸನ್ನಿಹಿತ,
ಸದ್ಭಾವದಲ್ಲಿ ಅಳವಟ್ಟುದಿಲ್ಲವೆ?
ಭಾಜನಕ್ಕೆ ಬರಿಯ ಮುಸುಕಿಟ್ಟು ಆಯತವೆಂದು ನುಡಿವ
ಅನಾಯತದ ನಾಚಿಕೆಯನೇನೆಂಬೆನಯ್ಯಾ,
ಸೌರಾಷ್ಟ್ರ ಸೋಮೇಶ್ವರಾ? ॥೭೦॥

೮೨೭

ಆರು ದರುಶನಂಗಳು ತಮತಮಗೆ ಬೇರೆಬೇರೊಂದರಿಕೆ ಕಲ್ಪಿಸಿಕೊಂಡ,
ಆರರಿಂ ಮೀರಿಪ್ಪ ಅಜಡಾದ್ವೈತವನಾರು ಬಲ್ಲರಯ್ಯಾ?
ಒಂದು ಪಾಷಾಣವ ಸೀಳಿ ಹೋಳುಗುಟ್ಟಿ ತರಿದು
ತೊರೆದು ಕರೆದು ಕಡೆದು ಕಂಡರಿಸಿ
ಪೂಜೆಗೈದರಲ್ಲದೆ ನಿಜಲಿಂಗೈಕ್ಯವನಾರು ಬಲ್ಲರಯ್ಯಾ?
ಸೌರಾಷ್ಟ್ರ ಸೋಮೇಶ್ವರಲಿಂಗದ ತನ್ನೈಕ್ಯ
ಬೊಮ್ಮದನುಸಂಧಾನವೆಂದಾರು ಬಲ್ಲರಯ್ಯಾ? ॥೭೧॥

೮೨೮

ಆರು ಬಣ್ಣದ ಆರು ಲಿಂಗದಲ್ಲಿ
ಮೂರು ಬಣ್ಣದ ಮೂರು ಲಿಂಗವ ಕೂಡಲು,
ನವಲಿಂಗದ ಒಂಬತ್ತು ಬಣ್ಣದಲ್ಲಿ
ಗುರುಲಿಂಗಜಂಗಮಪ್ರಸಾದವೆಂಬ ನಾಲ್ಕು ಬಣ್ಣವ ಕೂಡಿದ
ಹದಿಮೂರು ಬಣ್ಣವ ಕ್ರೀಯೆಂಬ ಕಮ್ಮರನ ಕೈಯಲ್ಲಿ ಕೊಟ್ಟಡೆ,
ವಾಸನೆಯೆಂಬ ಸೀಸವ ಬೆರಸಿದ ನೋಡಾ.
ಕಮ್ಮಾರನ ಬಾಯ ಕುಟ್ಟಿ ಸೆಳೆಯಲಾಗಿ, ಆ ವಾಸನೆ ಅಲ್ಲಿಯೇ ಅಡಗಿ,
ಅಂಗಭವಿ ಲಿಂಗಭವಿಯೆಂಬ ಅಡಗಿದ ಕಾಳಿಕೆಯಳಿದ
ಸ್ವಯಬಣ್ಣದ ಮಿಸುನಿಗೆ ತನುವೆಂಬ ಒರೆಗಲ್ಲ ಹಂಗಿಲ್ಲ,
ಮನವೆಂಬ ಮಚ್ಚದ ಹಂಗಿಲ್ಲ. ಭಾವವೆಂಬ ಹಸ್ತದ ಹಂಗಿಲ್ಲ,

ತಮೋಗುಣವೆಂಬ ಮಯಣದ ಹಂಗಿಲ್ಲ.
ಬೋಧವೆಂಬ ನೇತ್ರದ ಹಂಗಿಲ್ಲ.
ಇಂತಿವರ ಹಂಗು ಹರಿದಲ್ಲಿ ಸೌರಾಷ್ಟ್ರ ಸೋಮೇಶ್ವರಲಿಂಗ
ಪರವಳಿದು ಸಯವಾಯಿತ್ತು. ॥೭೨॥

೮೨೯
ಆಶ್ರಮಿಗಳಿದ್ದು ಅತ್ಯಾಶ್ರಮವ ತಳೆದು
ತತ್ವಜ್ಞಾನಭರಿತ[ವಾ]ಗಿ ನಿಂದುದೆನ್ನ ಇಷ್ಟ.
ಆಣವ ಮಾಯಾ ಕಾರ್ಮಿಕವೆಂಬ ಮಲತ್ರಯವನುಳಿದು
ನಿರ್ಮಲಾಂಗವಾದುದೆನ್ನ ಇಷ್ಟ.
ಅರಿವರತು ಮರಹು ನಷ್ಟವಾಗಿ ಶರಣಸ್ಥಲಕ್ಕೆ ಸಂದು,
ದ್ವಿಕರ್ಮನಷ್ಟವಾಗಿ ನಿಂದುದೆನ್ನ ಇಷ್ಟ.
ಸತ್ಯಜ್ಞಾನಾನಂದ ಶಿವಲಿಂಗಾಂಗಿ
ಸೌರಾಷ್ಟ್ರ ಸೋಮೇಶ್ವರಲಿಂಗವಾದುದೆನ್ನ ಇಷ್ಟ. ॥೭೩॥

೮೩೦
ಆಶ್ರಯನಲ್ಲ ಅನಾಶ್ರಯನಲ್ಲ, ದ್ವೈತಿಯಲ್ಲ ಅದ್ವೈತಿಯಲ್ಲ.
ದೇಹವಿಲ್ಲದ ಲಿಂಗ, ಪ್ರಾಣವಿಲ್ಲದ ಶರಣ, ಉಭಯವಿಲ್ಲದ ಪರಮಾತ್ಮ,
ಪರಮೈಕ್ಯ ನಿರ್ಗಮನಗಮನಿ, ಅರಿವುದಕ್ಕೆ ಒಡಲಿಲ್ಲದ ಭರಿತ,
ಅನುಭಾವಕ್ಕೆ ಬಾರದ ಅಗಣಿತ ಸ್ವತಂತ್ರ,
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲ ಪ್ರತಿರಹಿತ. ॥೭೪॥

೮೩೧
ಇಂದ್ರಿಯದ ಬಾಗಿಲಲ್ಲಿ ಮನವಿಪ್ಪುದು.
ಮನದ ಮುಂಬಾಗಿಲಲ್ಲೇ ಭೋಗಲಿಂಗವಿದ್ದು,
ಅಧಿಕಾರ ಲಯಹೊದ್ದದೆ ಸಕಲಭೋಗಂಗಳ ಭೋಗಿಸಿ
ಪ್ರಸಾದವ ಕರಣಂಗಳಿಗೆ ಕೊಟ್ಟು ಅರುಹಿ,
ಎನ್ನ ಮನವ ತನ್ನತ್ತ ಸೆಳೆದು ಮರಹ ಮಾಣಿಸಿ,
ಕುರುಹಳಿದು ತೆರಹುಗೊಡದ, ಸೌರಾಷ್ಟ್ರ ಸೋಮೇಶ್ವರಲಿಂಗವ ಕಂಡೆ. ॥೭೫॥

೮೩೨
ಇನನ ಕರದಲ್ಲಿ ತಮವಿದ್ದು ಬದುಕಬಲ್ಲುದೆ?
ವಾಯುವಿನ ಹಸ್ತದಲ್ಲಿ ಸೊಡರಿದ್ದು ಬೆಳಗಬಲ್ಲುದೆ?

ಉರಿಯ ಮುಖದಲ್ಲಿ ಕರ್ಪುರವಿದ್ದು ಜೀವಿಸಬಲ್ಲುದೆ?
ಸೌರಾಷ್ಟ್ರ ಸೋಮೇಶ್ವರನ ಶರಣರ ಮುಂದಣ
ಕರಣಮಥನ, ಇಂದ್ರಿಯದಿಚ್ಛೆ,
ತನುಗುಣ, ಮನಗುಣ, ಪ್ರಾಣಗುಣಾದಿಗಳಿರಬಲ್ಲವೆ? ॥೭೬॥

೮೩೩
ಇಲ್ಲವುಂಟೆಂಬ ಶಬ್ದ ನಿಃಶಬ್ದವೆಲ್ಲ ಮಹದಾಕಾಶದಲ್ಲಿಯೇ ಬಯಲಾಯಿತ್ತು.
ಶೂನ್ಯವೆಂಬ ನಾಮರಹಿತನು ನಿಃಶೂನ್ಯವಾದ ಘನಕ್ಕೆ ಗಮನನಲ್ಲ.
ನಿರ್ಗಮನ ಬಯಲ ಭಜಿಸಿ
ಬಯಲ ಮೂರ್ತಿಗಳೆಲ್ಲಾ ಬಯಲಾಗಿ ಹೋದರು.
ಮಹಾಬಯಲಿನ ನಿಲವನರಿದು
ಸೌರಾಷ್ಟ್ರ ಸೋಮೇಶ್ವರಲಿಂಗ ಲಿಂಗೈಕ್ಯವಾದ ಶರಣ. ॥೭೭॥

೮೩೪
ಇಷ್ಟಲಿಂಗಕ್ಕೆ ರೂಪನರ್ಪಿಸಿ, ಪ್ರಾಣಲಿಂಗಕ್ಕೆ ರುಚಿಯುನರ್ಪಿಸಿ,
ತೃಪ್ತಿಲಿಂಗಕ್ಕೆ ಪರಿಣಾಮವನರ್ಪಿಸುವುದಲ್ಲದೆ
ಇಷ್ಟಲಿಂಗಕ್ಕೆ ರುಚಿಯ, ಪ್ರಾಣಲಿಂಗಕ್ಕೆ ಪರಿಣಾಮವ,
ತೃಪ್ತಿಲಿಂಗಕ್ಕೆ ರೂಪವನರ್ಪಿಸುವನರಿವು
ಹೊರಸಿನೆಕ್ಕೆಯ ಶಂಖದ ಮಣಿಯ ಸರಗೊಳಿಸುವನಂತಾಯಿತ್ತು.
ಅಗ್ನಿಯ ಗಾಯವ ತೃಣದಲ್ಲಿ ಮಂತ್ರಿಸುವನಂತಾಯಿತ್ತು.
ಆಕಾಶಕ್ಕೆ ಮಂಜಿನ ಪಟವ ಹೊದಿಸುವನಂತಾಯಿತ್ತು.
ಇದರಂತುವನಾರು ಬಲ್ಲರಯ್ಯಾ,
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರಲ್ಲದೆ? ॥೭೮॥

೮೩೫
ಈ ತಾಮಸ ರುದ್ರತ್ವದಿಂ ಸ್ಥಿರಚಿತ್ತದಿಂ ಸ್ವಯವಾದ ಲಿಂಗವೆಂದಡೆ
ಅಷ್ಟವಿಧಾರ್ಚನೆ ಷೋಡಶೋಪಚರಿಯ ಸಹಮಾನದಿಂ ವೇಧಿಸಿ
ಬಿಡದೊಂದಿಸಿ ಚಿತ್ತಿನ ಸ್ಫುರಣೆಯ ಪ್ರಜ್ಞತ್ವದಿಂ
ಶಿವನಲ್ಲದತಃಪರವಿಲ್ಲವೆಂದರಿತುದಕ್ಕೆ ಶ್ರುತಿ:
“ಇಮಾಂ ರುದ್ರಾಯ ಸ್ಥಿರಧನ್ವಿನೇ ಕ್ಷಿಪ್ರ[ಪ್ರಸಾದಾಯ]
ಸ್ವಧಾಮ್ನೇ[ದಿ]ವೋಧಾಯ ಸಹಮಾನಾಯ ವೇಧಸೇ
ತಿಗ್ಮಾಯುಧಾಯ ಗಿರಃ ಭಾರತ ಶ್ರುಣೋತು ನಃ” ಇಂತೆಂದುದಾಗಿ,

ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ
ಅವಿನಾಭಾವದಿಂದಿಪ್ಪವರಪೂರ್ವವಯ್ಯಾ. ॥೭೯॥

೮೩೬
ಉಂಟಾದುದುಂಟೆ? ಉಂಟಾದುದನಿಲ್ಲವೆಂಬುದು ಮಿಥ್ಯೆ.
ಅದು ತಾ ನಾಮ ರೂಪ ಕ್ರಿಯೆ ಇಲ್ಲವಾಗಿ ಇಲ್ಲ,
ಇಲ್ಲವಾದುದನುಂಟೆಂದಡೆ ಘಟಿಸದು.
ಉಂಟು ಇಲ್ಲವೆಂಬ ಉಳುಮೆಯಿಲ್ಲದೆ ನಿಜ ತಾನೆ,
ಸೌರಾಷ್ಟ್ರ ಸೋಮೇಶ್ವರ. ॥೮೦॥

೮೩೭
ಊರೊಳಗೈವರು ಮಕ್ಕಳು.
ಹಲಬರು ಆಡಹೋಗಿ ಅಡವಿಯ ಹೊಕ್ಕರಲ್ಲಯ್ಯಾ.
ನೋಡಹೋದವರು ಕಣ್ಣುಗೆಟ್ಟು ಕಾಡ ಕೂಡಿದರಲ್ಲಯ್ಯಾ.
ಸೌರಾಷ್ಟ್ರ ಸೋಮೇಶ್ವರನ ನಿಜವನರಿಯದೆ
ವ್ಯರ್ಥರಾದರಲ್ಲಯ್ಯಾ. ॥೮೧॥

೮೩೮
ಎಂತೆಂತು ನೋಡಿದಡಂತಂತು ತೋರ್ಪುದೆಲ್ಲಾ ಜಡದೃಶ್ಯ,
ಇದೆಲ್ಲಾ ಮಾಯೆ ಎಂದು.
ಈ ಮಾಯೆಯ ಗಾಹುಕಂಡಿಯೊಳು ನುಸುಳುವ
ಮಾಯಾವಾದಿಗಳಂತಲ್ಲ ನೋಡಾ.
ಮಾಯೆ ಅನಿರ್ವಾಚ್ಯ, ಹೇಳಬಾರದ ಮಾಯೆಯೆಂದು
ಹೇಳಿಕೊಂಬ ವೇದಾಂತಿಗಳಂತಲ್ಲ ನೋಡಾ,
ಸಿದ್ಧಾಂತಿಗಳಪ್ಪ ಶಿವಶರಣರು.
ಮಾಯೆಯ ಹುಸಿ ಮಾಡಿ
ಸರ್ವಾಂಗಲಿಂಗ ಸೋಂಕಿನಲ್ಲಿ ಲೀಲೆಯಿಂ ಸುಳಿದಾಡುವ ನಿಜಲಿಂಗೈಕ್ಯರಿಗೆ
ಮಿಕ್ಕಿನ ಭವಭಾರಿಗಳನೆಂತು ಸರಿಯೆಂಬೆನಯ್ಯಾ,
ಸೌರಾಷ್ಟ್ರ ಸೋಮೇಶ್ವರಾ. ॥೮೨॥

೮೩೯
ಎಂಬತ್ತುನಾಲ್ಕು ಲಕ್ಷ ಜೀವಜಂತುವಿನೊಳಗಿಪ್ಪ ಆತ್ಮನು
ಏಕಾತ್ಮನೊ, ಹಲವಾತ್ಮನೊ, ಬಲ್ಲಡೆ ನೀವು ಹೇಳಿರೆ?

ಅನಂತಕೋಟಿಬ್ರಹ್ಮಾಂಡದೊಳಗಿಪ್ಪ ಬ್ರಹ್ಮವು
ಏಕಬ್ರಹ್ಮವೊ, ಅನಂತಬ್ರಹ್ಮವೊ, ಬಲ್ಲಡೆ ನೀವು ಹೇಳಿರೆ?
ಬ್ರಹ್ಮಾಂಡವೊಂದು ತತ್ತಿ ಒಡೆದು,
ಬಹಿರಾವರಣವಾದಲ್ಲಿ ಆ ಬ್ರಹ್ಮವು ಹೋಗಿ
ಮತ್ತೊಂದು ಬ್ರಹ್ಮಾಂಡದಲ್ಲಿ ಹೊಕ್ಕುದ ಕಂಡಡೆ,
ಕಂಡು ಬಲ್ಲವರು ನೀವು ಹೇಳಿರೆ.
ಗಂಧರ್ವಪಟ್ಟಣದಲ್ಲಿ ಹುಟ್ಟುವ ಬಹು ಬಣ್ಣವ ಬಲ್ಲರೆ ಬಲ್ಲ.
ಆಕಾಶಕ್ಕಡರಿದ ವಿಹಂಗನ ಮಾರ್ಗವ ಬಲ್ಲರೆ ಬಲ್ಲ.
ಸೌರಾಷ್ಟ್ರ ಸೋಮೇಶ್ವರಲಿಂಗದ ನಿಜವ ಬಲ್ಲರೆ ಬಲ್ಲ. ॥೮೩॥

೮೪೦

ಎಚ್ಚರು, ಕನಸು, ನಿದ್ರೆ, ಮೂರ್ಛೆ, ಅರಿವು, ಮರವೆ,
ಸಂಕಲ್ಪ, ವಿಕಲ್ಪ, ಅಹಂಮಮತೆ ರೂಪ ರುಚಿಯನರಿವುತಿರ್ಪ
ಮನವನರಿಯಬಹುದಲ್ಲದೆ ಅರಿವಿಂಗರಿವಾದಾತ್ಮನ ಅರಿಯಲುಂಟೆ?
ಸರ್ವಸಾಕ್ಷಿಕನಾದ ಆತ್ಮನನರಿವೊಡೆ ಶ್ರುತಿಗತೀತ,
ಬ್ರಹ್ಮವಿಷ್ಣುರುದ್ರಾದಿಗಳಿಗಳವಲ್ಲ,
ಸೌರಾಷ್ಟ್ರ ಸೋಮೇಶ್ವರಲಿಂಗ ಅಸಾಧ್ಯವಾದ ಕಾರಣ. ॥೮೪॥

೮೪೧

ಎತ್ತನೇರಿ ಎತ್ತನರಸುವನಂತೆ, ತಾನಿರ್ದು ತನ್ನನರಸಿ ಕೇಳುವನಂತೆ,
ಹೊತ್ತ ನಿಜವನರಿಯದತ್ತಲಿತ್ತ ಸುತ್ತಿ ಬಳಲುವನಂತೆ,
ಹಿಡಿದಿರ್ದ ಲಿಂಗವ ಕಾಣದೆ ಮೂವಿಧಿಗಾಣ್ಬರನೇನೆಂಬೆನಯ್ಯಾ!
ತನ್ನಲ್ಲಿ ಗುರಲಿಂಗ ಜಂಗಮ ಪ್ರಸಾದ ಒಂದೆಂದು ಅರಿಯದ
ಅಜ್ಞಾನಬದ್ಧರನೆನಗೆ ತೋರದಿರಯ್ಯಾ,
ಸೌರಾಷ್ಟ್ರ ಸೋಮೇಶ್ವರಾ . ॥೮೫॥

೮೪೨

ಎನ್ನಂಗ ಮನ ಪ್ರಾಣ ತ್ರಿವಿಧದಲ್ಲಿ ತ್ರಿವಿಧಲಿಂಗಸನ್ನಿಹಿತವೆಂತೆಂದಡೆ:
ಗುರುಸಂಬಂಧದಿಂದಾದ ಇಷ್ಟಲಿಂಗ,
ಲಿಂಗಸಂಬಂಧದಿಂದಾದ ಪ್ರಾಣಲಿಂಗ,
ಜಂಗಮಸಂಬಂಧದಿಂದಾದ ತೃಪ್ತಿಲಿಂಗ.
ತನುವಿನ ಕೈಯಲ್ಲಿ ಇಷ್ಟಲಿಂಗ,
ಮನದ ಕೈಯಲ್ಲಿ ಪ್ರಾಣಲಿಂಗ,

ಪ್ರಾಣನ ಕೈಯಲ್ಲಿ ತೃಪ್ತಿಲಿಂಗ.
ಇಂತು ಅಂತರಂಗ ಬಹಿರಂಗ ಆತ್ಮಸಂಗದಿಂ ತೆರಹಿಲ್ಲದಿಪ್ಪ
ಗುರುಲಿಂಗಜಂಗಮ ತ್ರಿವಿಧಸಾರಾಯಸಂಪತ್ತು
ಸೌರಾಷ್ಟ್ರ ಸೋಮೇಶ್ವರಾ, ನೀನೊಲಿದ ಶರಣಂಗೆ. ॥೮೬॥

೮೪೩
ಎಲುವಿನ ನಿಲವು ಅಮೇಧ್ಯದಾಗರ ಉಚ್ಛಿಷ್ಟದೊರತೆ
ಮಿದುಳ ಸದನ ಕೀವು ನೆಣದೋವರಿ ಜಂತಿನ ಜನ್ಮಭೂಮಿ
ಕ್ರಿಮಿಯ ಗೂಡು ಶುಕ್ಲದ ಜೀಗೊಳವೆ ರುಧಿರದ ತಾಣ
ಅಡಗಿನಂತರಂಗ ತೊಗಲಬಹಿರಂಗ ರೋಮರಾಜಿಯ ಜಾಳಂದ್ರ
ನರದ ನೇಣಜಂತ್ರ ಆಧಿವ್ಯಾಧಿಯ ವಾಸ
ಇಂತಿದರೊಳಗೆ ನಿನ್ನ ಕುಲಗೋತ್ರಂಗಳಾವುವು ಹೇಳಾ ಎಲೆ ಮರುಳೆ.
ಇದಕ್ಕೆ ಶ್ರುತಿ:
“ಅಂತ್ಯಜಾತಿರ್ದ್ವಿಜಾತಿರ್ವಾ ಏಕಯೋನಿಸಮುದ್ಭವಃ
ಸಪ್ತಧಾತುಮಯಂ ಪಿಂಡಂ ವರ್ಣಾನಾಂ ಕಿಂ ಪ್ರಯೋಜನಂ”
ಇದನರಿತು ಷಡುಭ್ರಮೆಗಳಲ್ಲಿ ಭ್ರಮಿತರನೇನೆಂಬೆನಯ್ಯಾ
ಸೌರಾಷ್ಟ್ರ ಸೋಮೇಶ್ವರಾ? ॥೮೭॥

೮೪೪
ಎಲ್ಲೆಲ್ಲಿ ಸುಳಿದಡೆ ಅಲ್ಲಲ್ಲಿ ಉಪಾಧಿ ಬಿಡದಯ್ಯಾ.
ಈ ಉಪಾಧಿಗೆ ಅಪಾಯವನಿತ್ತು, ನಿರುಪಾಧಿಯಲ್ಲಿ ನಿಲಿಸಯ್ಯಾ.
ಎಲ್ಲಾ ಬಯಕೆಯರತ ಬಟ್ಟೆಯ ತೋರಯ್ಯಾ.
ಸಹಜ ಸಮ್ಯಕ್ ಪದವನಿತ್ತು ಸಲಹಯ್ಯಾ,
ಸೌರಾಷ್ಟ್ರ ಸೋಮೇಶ್ವರಾ. ॥೮೮॥

೮೪೫
ಏಕಮುಖದ ರುದ್ರಾಕ್ಷಿಯೊಂದನೆ ಶಿಖಿಯಲ್ಲಿ ಧರಿಸುವುದಯ್ಯಾ.
ದ್ವಿತ್ರಿದ್ವಾದಶ ಮುಖದ ಮೂರು ಮಣಿಯ ಮೂರ್ಧ್ನಿಯಲ್ಲಿ
ಧರಿಸುವುದಯ್ಯಾ.
ಏಕಾದಶಮುಖದ ಮೂವತ್ತಾರು ಮಣಿಯ
ಶಿರವ ಬಳಸಿ ಧರಿಸುವುದಯ್ಯಾ.
ಐದು ಏಳು ಹತ್ತುಮುಖದ ರುದ್ರಾಕ್ಷಿಯ
ಒಂದೊಂದು ದ್ವಿಕರ್ಣದಲ್ಲಿ ಧರಿಸುವುದಯ್ಯಾ.
ಷಡಾಷ್ಟಮುಖದ ದ್ವಾತ್ರಿಂಶತ್ ರುದ್ರಾಕ್ಷಿಯ ಕಂಠದಲ್ಲಿ ಧರಿಸುವುದಯ್ಯಾ.

ಚತುರ್ಮುಖದ ಪಂಚಾಶತ್ ರುದ್ರಾಕ್ಷಿಯ ಉರಮಾಲೆಯಾಗಿ ಧರಿಸುವುದಯ್ಯಾ.
ತ್ರಿದಶಮುಖದ ದ್ವಾತ್ರಿಂಶ ರುದ್ರಾಕ್ಷಿಯ ದ್ವಿಬಾಹುಗಳಲ್ಲಿ ಧರಿಸುವುದಯ್ಯಾ.
ನವಮುಖದ ಚತುರ್ವಿಂಶ ರುದ್ರಾಕ್ಷಿಯ ದ್ವಿಮಣಿಬಂಧದಲ್ಲಿ ಧರಿಸುವುದಯ್ಯಾ.
ಚತುರ್ದಶಮುಖದ ರುದ್ರಾಕ್ಷಿಯ ಅಷ್ಟೋತ್ತರಶತವ
ಉಪವೀತದಂತೆ ಧರಿಸುವುದಯ್ಯಾ.
ಇಂತರಿದು ಧರಿಸಿದ ಶಿವಮಾಹೇಶ್ವರನ ಹೆಜ್ಜೆಹೆಜ್ಜೆಗೆ
ಅಶ್ವಮೇಧಯಾಗದ ಫಲ ತಪ್ಪದಯ್ಯಾ ಸೌರಾಷ್ಟ್ರ ಸೋಮೇಶ್ವರಾ. ॥೮೯॥

೮೪೬

ಏಕಾಕಾರ ಲೋಕಾಕಾರ ನೀನಾಗಿ ತೋರ್ಪೆಯಯ್ಯಾ ಸದ್ಭಾವಿಗಳಿಗೆ.
ಏಕಾಕಾರವೆ ಹುಸಿ, ಲೋಕಾಕಾರವೆ ದಿಟವಾಗಿ ತೋರ್ಪೆಯಯ್ಯಾ ಭಾವಭ್ರಮಿತರಿಗೆ.
ಏಕಾಕಾರ ಲೋಕಾಕಾರ ಸರ್ವಾಕಾರವಾಗಿ ತೋರ್ಪೆಯಯ್ಯಾ ನಿರ್ಭಾವರಿಗೆ.
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ನಿಜದಾಕಾರ
ನೀವಾಗಿರ್ಪಿರಯ್ಯಾ ಭಾವೈಕ್ಯವಾದ ಮಹಂತರಿಗೆ. ॥೯೦॥

೮೪೭

ಏಕೋತ್ತರದಲ್ಲಿ ಎಚ್ಚತ್ತಡೇನಯ್ಯಾ,
ಏಕೋದೇವನ ನೆನಹು ನೆಲೆಗೊಳ್ಳದನ್ನಕ್ಕ?
ಅನುಭಾವದಲ್ಲಿ ಅಭ್ಯಾಸಿಯಾದಡೇನಯ್ಯಾ,
ಸ್ವಯಾನುಭಾವ ಸನ್ನಿಹಿತವಾಗದನ್ನಕ್ಕ?
ತತ್ವಾರ್ಥಿಯಾದಡೇನಯ್ಯಾ, ಮಿಥ್ಯಾರ್ಥವ ದಾಂಟದನ್ನಕ್ಕ?
ಅರಿವನರಿತಡೇನಯ್ಯಾ,
ಚಿದಹಂ ಎಂಬ ಮರವೆ ಸೋಂಕುವ ತೆರನ ತಿಳಿಯದನ್ನಕ್ಕ?
ಸೌರಾಷ್ಟ್ರ ಸೋಮೇಶ್ವರಾ ಎಂದಡೇನಯ್ಯಾ
ನಿಂದ ಭೇದವ ಭೇದಿಸದನ್ನಕ್ಕ? ॥೯೧॥

೮೪೮

ಏಳು ನೆಲೆಯ ಕರುಮಾಡದುಪ್ಪರಿಗೆಯೊಳಗೆ,
ಒಂದೆ ಮುತ್ತಿನ ನೆಲೆಗಟ್ಟಿನ ಮೇಲೆ,
ಭಿತ್ತಿ ಇಲ್ಲದ ರತ್ನದ ಹೊದಿಕೆಯ ಮೇಲಿಪ್ಪ ಕಳಸವ
ಕಂಡವರಾರನೂ ಕಾಣೆ.
ಸೌರಾಷ್ಟ್ರ ಸೋಮೇಶ್ವರಲಿಂಗವ ಹಿಡಿದು
ನಿಲಲರಿಯದೇರಿದವರು ಜಾರಿ ಬಿದ್ದು ಸೂರೆವೋದರು ಕಾಲಂಗೆ. ॥೯೨॥

೮೪೯
ಒಂದು ಕಪಿಗೆ ಹತ್ತು ಮುಖ,
ಆ ಹತ್ತು ಮುಖದಲ್ಲಿ ಹತ್ತು ಮರದ ಹತ್ತುಹಣ್ಣಯೆತ್ತೆತ್ತಿ ತಿನುತಿದ್ದಿತಯ್ಯಾ.
ಆ ಹಣ್ಣಿನ ವಿಷಯವು ತಲೆಗೇರಿ ಮೂರು ಲೋಕವೆಲ್ಲಾ ಉರಿವುತ್ತಿದೆ.
ಈ ಪರಿಯ ಪರಿಹರಿಸುವಡೆ ಹರಿಬ್ರಹ್ಮಾದಿಗಳಿಗಳವಲ್ಲ ನೋಡಯ್ಯಾ.
ಅಗ್ನಿಯ ಘುಟಿಕೆಯ ನುಂಗಲು ಉರಿಕೆಟ್ಟು
ಸೌರಾಷ್ಟ್ರ ಸೋಮೇಶ್ವರಲಿಂಗ ಸಾಧ್ಯವಾಯಿತ್ತು. ||೯೩||

೮೫೦
ಒಡಲೋಪಾದಿಯಿಂದ ತನುವ ಹೊರೆವವನಲ್ಲ.
ಶಿವಪ್ರಸಾದವಲ್ಲದನ್ಯವ ಭೋಗಿಸ.
ಗುರುಕುರುಣವಿಡಿದಿಪ್ಪನಾಗಿ ಜನ್ಮಜಾಡ್ಯ ಸೂತಕಪಾತಕಂಗಳಿಲ್ಲ.
ಜಂಗಮಲಿಂಗದ ತೃಪ್ತಿಯಿಂದ ತನ್ನ ತಾ ಹಾರಿ,
ಸಂಸಾರಕುಲಗಿರಿಯ ದಾಂಟಿ
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ ಭಾವಶುದ್ಧಿಯಿಂದಿಪ್ಪನಯ್ಯಾ. ||೯೪||

೮೫೧
ಒಬ್ಬನಿಗೆ ರೂಹಿಲ್ಲ, ಒಬ್ಬನಿಗೆ ರೂಹುಂಟು,
ಒಬ್ಬನ ರೂಹು ಹೋಗುತ್ತ ಬರುತ್ತದೆ.
ಈ ಮೂವರನೊಂದೆಡೆಗೆ ತಂದಡೆ ಏನಹರೆಂಬುದ ನೋಡಿಕೊಳ್ಳಿರಣ್ಣಾ.
ಕಂಡಡೆ ಉಣಲಿಲ್ಲ, ಕಾಣದಿರ್ದಡೆ ಉಣದಿರಲಿಲ್ಲ.
ಇದೇನು ಸೋಜಿಗವಯ್ಯಾ, ಸೌರಾಷ್ಟ್ರ ಸೋಮೇಶ್ವರಾ. ||೯೫||

೮೫೨
ಕಂಗಳ ಬೆಳಗು ತವೆಯುಡುಗಿ ತೊಳತೊಳಗಿ ಬೆಳಗುತಿರ್ದಿತ್ತಯ್ಯಾ.
ಸುನಾದ ಮಹಾನಾದಂಗಳು ಸುಸರವಾಗಿ ಸೂಚಿಸುತಿರ್ದಿತ್ತಯ್ಯಾ.
ಸುಜ್ಞಾನಭರಿತವೆ ಚಿದಂಬರದ ಚಿತ್ತಚಿತ್ತು ತಾನಾಗಿರ್ದಿತ್ತಯ್ಯಾ.
ಸತ್ತು ಸತ್ತು ಸದಾ ಸತ್ತು ಸೌರಾಷ್ಟ್ರ ಸೋಮೇಶ್ವರಲಿಂಗ
ತಾನಾಗಿರ್ದನಯ್ಯಾ. ||೯೬||

೮೫೩
ಕಂಗಳ ಜೆಳಗು ದೃಕ್ಕಿಂಗೆ ದೃಷ್ಟವಾಗದೆ?
ಮನದ ಒಂಬಟು ಅರಿವಿಂಗೆ ವೇದ್ಯವಾಗದೆ?

ಆತ್ಮಜ್ಯೋತಿ ಭಾವಸ್ಫಟಿಕಘಟದೊಳಗೆ
ಪ್ರಜ್ವಲಿಸಿ ತೊಳತೊಳಗಿ ಬೆಳಗುತಿಪ್ಪುದನರಿಯಾ,
ಸೌರಾಷ್ಟ್ರ ಸೋಮೇಶ್ವರಲಿಂಗವ
ಬಲ್ಲೆನೆಂಬುದು ಬರಿಯ ಮಾತು. ॥೯೭॥

೮೫೪
ಕಂಡುದ ಕಂಡು ಕೈಕೊಂಬರಲ್ಲದೆ,
ಕಾಣದುದ ಕಂಡು ಕೈಕೊಂಬುವರಿಲ್ಲ ನೋಡಯ್ಯಾ.
ಹಿಡಿದವರ ಕಂಡು ಹಿಡಿವರೈಸಬಲ್ಲದೆ
ಹಿಡಿಯೊಡೆದು ಹೋದುದನಾರೂ ಹಿಡಿವರಿಲ್ಲಯ್ಯಾ.
ಪೂಜಿಸುವರ ಕಂಡು ಪೂಜೆಗೆಯ್ವರಲ್ಲದೆ
ಪೂಜೆರಹಿತವಾದ ಪೂಜ್ಯನನಾರೂ ಪೂಜಿಸುವರಿಲ್ಲ ನೋಡಯ್ಯಾ.
ರೂಪನರ್ಪಿಸುವರಲ್ಲದೆ ರುಚಿಯನರ್ಪಿಸುವರಿಲ್ಲಯ್ಯಾ.
ಇದರಂತುವನಾರು ಬಲ್ಲರಯ್ಯಾ,
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರಲ್ಲದೆ? ॥೯೮॥

೮೫೫
ಕಂಡೆ ಕಾಣೆನೆಂಬುದು ಕಂಗಳ ಭ್ರಮೆ,
ಕೂಡಿದೆನಗಲಿದೆನೆಂಬುದು ಕಾಯ ಭ್ರಮೆ,
ಅರಿದೆ ಮರೆದೆನೆಂಬುದು ಚಿದೋಹಂ ಭ್ರಮೆ,
ಓದು ವೇದಂಗಳ ಜಿನುಗು ಉದುಮನದ ಭ್ರಮೆ,
ಇಹ ಪರಂಗಳನಾಸೆಗೆಯ್ವುದು ಜೀವ ಭ್ರಮೆ,
ಸೌರಾಷ್ಟ್ರ ಸೋಮೇಶ್ವರನೆಂಬುದು ಸಕಲಭ್ರಮೆ. ॥೯೯॥

೮೫೬
ಕಟ್ಟಣೆಯೊಳಗಣ ಕಾಂಸ್ಯಕದಂತೆ, ಅಣಿಯೊಳಗಣ ಕೇಣದಂತೆ,
ಚಿನ್ನದೊಳಗಣ ಬಣ್ಣದಂತೆ, ಪಟದೊಳಗಣ ತಂತುವಿನಂತೆ,
ಎನ್ನಲ್ಲಿ ಭಿನ್ನವಿಲ್ಲದಿದ್ದೆಯಲ್ಲಾ ಸೌರಾಷ್ಟ್ರ ಸೋಮೇಶ್ವರಾ. ॥೧೦೦॥

೮೫೭
ಕಡಲೊಳಗಣ ವಡಬ ಹೊದ್ದಿಯೂ ಹೊದ್ದದಂತೆ,
ಇಂದುಕಾಂತದೊಳಗೆ ಬಿಂದುವಿದ್ದಿಲ್ಲದಂತೆ,
ದರ್ಪಣದೊಳಗಣ ಪ್ರತಿಬಿಂಬ ಮುಟ್ಟಿಯೂ ಮುಟ್ಟದಂತೆ,

ಸರ್ವಸಾಕ್ಷಿಕನಾದ ಸೌರಾಷ್ಟ್ರ ಸೋಮೇಶ್ವರನು
ಪಿಂಡದೊಳಗಡಗಿ ಇಲ್ಲದಂತಿಪ್ಪನಯ್ಯಾ. ॥೧೦೧॥

೮೫೮

ಕಡವರವಿರ್ದು ಬಡತನವೇಕೊ?
ಮರುಜವಣಿಯಿರ್ದು ಮರಣವಾಗಲೇಕೊ?
ಅಗ್ನಿಸ್ತಂಭವಿರ್ದು ತನು ಹೊತ್ತಿ ಉರಿಯಲೇಕೊ?
ಅಮೃತಸಾಗರದಲ್ಲಿರ್ದು ಆಪ್ಯಾಯನವೇಕೊ?
ಪರಮಜ್ಞಾನವಿರ್ದು ಪರ ಇಹದ ಪರಿಭವವೇಕೊ?
ಸೌರಾಷ್ಟ್ರ ಸೋಮೇಶ್ವರಲಿಂಗವಿರ್ದು ಮುಕ್ತಿಕಾಮಿತವೇಕೊ? ॥೧೦೨॥

೮೫೯

ಕಣ್ಣು ತನ್ನ ತಾ ಕಾಣಲರಿಯದಂತೆ,
ಹಣ್ಣು ತನ್ನ ರುಚಿಯ ತಾನರಿಯದಂತೆ,
ಉರಿ ತನ್ನ ಉಷ್ಣವ ತಾನರಿಯದಂತೆ,
ಬಯಲು ತನ್ನ ತೆರಪ ತಾನರಿಯದಂತೆ,
ಲಿಂಗೈಕ್ಯ ತನ್ನೊಳಗಳ ಲಿಂಗವ ತಾನರಿಯದಂತೆ,
ನಾ ಸತ್ತನೆಂಬ ಹೆಣನಿಲ್ಲವಾಗಿ.
ತನ್ನ ಮರೆದು ಲಿಂಗವ [ಮ]ರೆದ ಲಿಂಗೈಕ್ಯರು
ಸೌರಾಷ್ಟ್ರ ಸೋಮೇಶ್ವರನಲ್ಲಿ, ಅನುಭಾವವ ಮಾಡಲಿಲ್ಲ;
ನುಡಿದು ಹೇಳಲಿಲ್ಲ; ನಡೆದು ತೋರಲಿಲ್ಲ. ॥೧೦೩॥

೮೬೦

ಕತ್ತೆಯ ಗರ್ಭದಿಂದ ಪ್ರಸೂತವಾದ ಎತ್ತು
ಹುಲ್ಲು ತಿನ್ನದು, ನೀರ ಕುಡಿಯದು,
ಇರ್ದಲ್ಲಿ ಇರದು, ಹೋದತ್ತ ಹೋಗದು.
ಇದೇನು ಸೋಜಿಗ ಬಲ್ಲರೆ ಹೇಳಿರಣ್ಣಾ,
ಎತ್ತ ಬಿಟ್ಟಿತ್ತು, ಸತ್ತನೊಳಕೊಂಡು
ಮುತ್ತನುಗುಳಿ ಹೋಯಿತ್ತು.
ಇದೇನು ವಿಪರೀತ, ಬಲ್ಲರೆ ಹೇಳಿರಣ್ಣಾ,
ಎತ್ತು ಕೆಟ್ಟಿತ್ತು, ಅರಸುವರ ಕಾಣೆನಣ್ಣಾ.
ಸೌರಾಷ್ಟ್ರ ಸೋಮೇಶ್ವರಲಿಂಗದೊಡಗೂಡಿ,
ಎತ್ತೆತ್ತ ಪೋಯಿತ್ತೆಂದರಿಯೆನಣ್ಣಾ. ॥೧೦೪॥

೮೬೧

ಕನಸಿಂಗೆ ಕಲ್ಪನೆಯಿಲ್ಲ, ನೆನಹಿಂಗೆ ಸೂತಕವಿಲ್ಲ,
ಮನಸಿಂಗೆ ಪಾತಕವಿಲ್ಲ, ಕಾಯಕ್ಕೆ ಬಂಧವಿಲ್ಲ,
ಜೀವಂಗೆ ಮೋಕ್ಷವಿಲ್ಲ.
ಇಲ್ಲದ ಜಗ ಇಲ್ಲವೆಯಿಂದ ತೋರುವುದು, ಅಡಗುವುದು.
ತೋರದೆ ಅಡಗದೆ ಇಪ್ಪ
ಮಹಾಘನ ಸೌರಾಷ್ಟ್ರ ಸೋಮೇಶ್ವರಲಿಂಗವದೇ ಕಂಡಾ. ॥೧೦೫॥

೮೬೨

ಕರಸ್ಥಲದಲ್ಲಿ ಲಿಂಗವಿರಲು ಆ ಹಸ್ತವೇ ಕೈಲಾಸ, ಆ ಲಿಂಗವೇ ಶಿವನು.
ಇದು ಕಾರಣ ಇಲ್ಲಿಯೇ ಕೈಲಾಸ.
ಇದಲ್ಲದೆ ಬೇರೆ ಬೆಳ್ಳಿಯ ಬೆಟ್ಟವೇ ಕೈಲಾಸವೆಂದು,
ಅಲ್ಲಿಪ್ಪ ರುದ್ರನೇ ಶಿವನೆಂದು,
ಕೈಲಾಸಕ್ಕೆ ಹೋದಹೆ ಬಂದಹೆನೆಂಬ ಭ್ರಾಂತು ಬೇಡ ಕೇಳಿರಣ್ಣಾ.
ಕಾಯದ ಅನುಗ್ರಹಲಿಂಗದಲ್ಲಿ ಶ್ರದ್ಧೆ ಇಲ್ಲದೆ ಇರಲು
ಇನ್ನೆಲ್ಲಿಯ ನಂಬುಗೆಯಯ್ಯಾ?
ಅಲ್ಲಲ್ಲಿಗೆ ಹರಿಹಂಚಾಗಿ ಕೆಡಬೇಡ ಕೇಳಿರಣ್ಣಾ.
ಅಂಗದೊಳಗೆ ಲಿಂಗಾಂಗ ಸಂಗವನರಿತು
ಒಳಹೊರಗು ಒಂದೇಯಾಗಿ
ಶಿಖಿಕರ್ಪುರ ಸಂಗದಲ್ಲಿ ಕರ್ಪುರ ಉರಿಯಾಗಿಪ್ಪಂತೆ,
ಸರ್ವಾಂಗದಲ್ಲಿ ಲಿಂಗಸೋಂಕಿ
ಅಂಗಭಾವವಳಿದು, ಲಿಂಗಭಾವ ತನ್ಮಯವಾಗಿಪ್ಪ
ತದ್ಗತಸುಖ ಉಪಮಾತೀತವಯ್ಯಾ, ಸೌರಾಷ್ಟ್ರ ಸೋಮೇಶ್ವರಾ. ॥೧೦೬॥

೮೬೩

ಕರ್ಮಮಲಮಾಯೆಗಳಿಲ್ಲದ, ಈಷಣತ್ರಯಂಗಳಿಗೆ ಸಲ್ಲದ,
ಷಡುಮಿತ್ರರಿಗೆ ನಿಲುಕದ, ತಾಪತ್ರಯಂಗಳಿಗೆ ತಲ್ಲಣಿಸದ,
ಆಶೆಯಾಮಿಷ ತಾಮಸಂಗಳು ಹೊದ್ದದ,
ನಿಸ್ಸೀಮಗುರುವಿನಂಘ್ರಿವಿಡಿದು ಗುರುಕಾರುಣ್ಯವ ಪಡೆದು
ಜನ್ಮಜರಾಮರಣ ವೃಂದಂಗಳ ಕಳೆದೆನಯ್ಯಾ,
ಸೌರಾಷ್ಟ್ರ ಸೋಮೇಶ್ವರನೆಂಬ ಗುರುವೇಧೆಯಿಂದಯ್ಯಾ. ॥೧೦೭॥

೮೬೪

ಕರ್ಮವಶದಿಂದುದಯಿಸಿದ ಶರೀರವ
ಕರ್ಮದ್ವಯಂಗಳಲ್ಲಿ ಲೇಪವಾಗದೆ
ನೀರ ತಾವರೆಯಂತೆ ನಿರ್ಲೇಪವಾದುದಕ್ಕೆ ಶ್ರುತಿ:
"ಯಥಾ ಪುಷ್ಕರಪರ್ಣಂ ಆಪೋ ನ ಶ್ಲಿಷ್ಯತಿ
ಏವಮೇನಂ ವಿಪಾಪಕರ್ಮ ನ ಶ್ಲಿಷ್ಯತಿ"
ಇಂತೆಂದುದಾಗಿ,
ಜ್ಯೋತಿಷ್ಟೋಮ ಬ್ರಹ್ಮಹತ್ಯೆ ಮೊದಲಾದ
ಸಂಚಿತ ಪ್ರಾರಬ್ಧ ಆಗಾಮಿರಹಿತರು.
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು. ॥೧೦೮॥

೮೬೫

ಕಲ್ಲಿನಲ್ಲಿ ಕನಕ ಒಗೆದಡೆ ಕನಕ ಕಲ್ಲಿಂಗೆ ಕಿಂಕರನಪ್ಪುದೆ?
ಶುಕ್ತಿಯಲ್ಲಿ ಮೌಕ್ತಿಕ ಒಗೆದಡೆಮೌಕ್ತಿಕ ಶುಕ್ತಿಗೆ ಕಿಂಕರನಪ್ಪುದೆ?
ಧರೆಯಲ್ಲಿ ಸುರತರು ಒಗೆದಡೆ ಸುರತರು ಧರೆಗೆ ಕಿಂಕರನಪ್ಪುದೆ?
ಜನನಿಯುದರದಲ್ಲಿ ಘನಶರಣ ಒಗೆದಡೆ
ಜನನಿ ಜನಕಂಗೆ ಕಿಂಕರನಪ್ಪ[ನೆ]?
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು
ಸ್ವತಂತ್ರಶೀಲರಗ್ರಗಣ್ಯರು. ॥೧೦೯॥

೮೬೬

ಕಳವು ಪಾರದ್ವಾರ ಜೀವಹಿಂಸೆಯೆಂಬಿವನತ್ತತ್ತಲೆ ಕೆಡೆನೂಂಕಿ
ಕ್ರೋಧ, ಲೋಭ, ಚಿತ್ತದಲ್ಲಿ ಮೊಳೆಯದೆ,
ಕಪಟ ಕಳವಳ ಬುದ್ಧಿಯಲ್ಲಿ ಬೆಳೆಯದೆ,
ಕುಂದು ನಿಂದೆಗಳಿಂದ ಕೆಡೆನುಡಿವ ವಾಕು ಮನದಲ್ಲಿ ಪಲ್ಲವಿಸದೆ,
ಮದ ಮತ್ಸರ ಅಹಂಕಾರದಲ್ಲಿ ಮುಗುಳೊತ್ತದೆ,
ಪ್ರಕೃತಿ ವಿಕೃತಿ ಭ್ರಾಂತು ಭಾವದಲ್ಲಿ ಫಲಿಸದೆ,
ಸುಜ್ಞಾನದಿಂದ ಧರ್ಮಾಧರ್ಮಂಗಳ ವರ್ಮನರಿತು
ಮನಕ್ಕೆ ಮನಸ್ಸಾಕ್ಷಿಯಾಗಿ,
ಸದ್ವರ್ತನೆ ಸಮತೆ ಸಾರಹೃದಯ ಅನಿಂದೆ ಅನುಬಂಧ ಅಕಪಟ
ಪಟುತರವಾಗಿ ಸಟೆಯುಳಿದು ದಿಟಘಟಿಸಿ ನಿಜ ನಿರುಗೆಯಾದಲ್ಲಿ
ಸೌರಾಷ್ಟ್ರ ಸೋಮೇಶ್ವರನೆಡೆಬಿಡವಿಲ್ಲದಿಪ್ಪನು. ॥೧೧೦॥

೮೬೭
ಕಾಮಂಗೆ ಕೈತಲೆಗೊಟ್ಟ ಕೈವಾರಿಗಳಿಗೆಲ್ಲಿಯದೊ, ಕೈವಲ್ಯ ಪದವಿ?
ಕಾಲಂಗೆ ಕಾಯವನೊಪ್ಪಿಸಿಕೊಟ್ಟ ಕಾಮುಕರಿಗೆಲ್ಲಿಯದೊ,
ಕೈಲಾಸದ ಬಟ್ಟೆ?
ಕರ್ಮಕಪಟದ ಕಮ್ಮರಿಯೊಳು ಸಿಲುಕಿ ಕಳವಳಿಸುತಿರ್ಪ
ಕರ್ಮಕಾಂಡಿಗಳಿಗೆಲ್ಲಿಯದೊ, ಸ್ವರ್ಗಾಪವರ್ಗ?
ಸೌರಾಷ್ಟ್ರ ಸೋಮೇಶ್ವ[ರ] ಲಿಂಗದ ನಿಜವನರಿಯದ
ಕುಜನರಿಗೆಲ್ಲಿಯದೊ ನಿತ್ಯಾನಂದ ನಿಜಸುಖ? ॥೧೧೧॥

೮೬೮
ಕಾಮದ ಸೀಮೆಯ ಕಳೆಯದನ್ನಕ್ಕ, ಕೋಪದ ಕೂಪ ಹೂಳದನ್ನಕ್ಕ,
ಲೋಭದ ಲಾಭ ಕ್ಷಯಿಸದನ್ನಕ್ಕ, ಮೋಹದ ಗಾಯ ನಂದದನ್ನಕ್ಕ,
ಮದದುನ್ಮದ ಕೆದರದನ್ನಕ್ಕ, ಮಚ್ಚರದ ಕೆಚ್ಚು ಬಿಚ್ಚದನ್ನಕ್ಕ,
ಅರಿಗಳಾರತವಡಗಿ ನಿರುತವಾಗದನ್ನಕ್ಕ,
ಸೌರಾಷ್ಟ್ರ ಸೋಮೇಶ್ವರಲಿಂಗವೆಂತು ಸಾಧ್ಯವಪ್ಪುದಯ್ಯಾ? ॥೧೧೨॥

೮೬೯
ಕಾಮಧೇನು ಕಾಮಿಸಿದಲ್ಲದೆ ಈಯಲರಿಯದು,
ಕಲ್ಪವೃಕ್ಷ ಕಲ್ಪಿಸಿದಲ್ಲದೆ ಈಯಲರಿಯದು,
ಚಿಂತಾಮಣಿ ಚಿಂತಿಸಿದಲ್ಲದೆ ಈಯಲರಿಯದು,
ತವನಿಧಿ ತೆಗೆದಲ್ಲದೆ ಈಯಲರಿಯದು,
ನವನಿಧಿ ಬಯಸಿದಲ್ಲದೆ ಕೊಡಲರಿಯದು,
ಕಾಮಿಸದೆ ಕಲ್ಪಿಸದೆ ಚಿಂತಿಸದೆ [ತೆಗೆಯದೆ] ಬಯಸದೆ
ಎನ್ನನೀವುದಕ್ಕೆ ಮುನ್ನವೆ ತನ್ನನಿತ್ತ
ಸೌರಾಷ್ಟ್ರ ಸೋಮೇಶ್ವರಲಿಂಗವ ಕಂಡೆ. ॥೧೧೩॥

೮೭೦
ಕಾಮಿತವಿಲ್ಲ ಕಲ್ಪಿತವಿಲ್ಲ ನಾಮಸೀಮೆಯೆಂಬುದಿಲ್ಲ.
ಭಾವಿಸಲಿಲ್ಲ ಲಕ್ಷಿಸಲಿಲ್ಲ ರೂಹಿಸಲಿಲ್ಲ.
ವಾಙ್ಮನಾತೀತವೆಂದಲ್ಲಿ ನೆನೆಯಲಿಲ್ಲ.
ಅತ್ಯತಿಷ್ಠದ್ದಶಾಂಗುಲವೆಂದಲ್ಲಿ ಲಕ್ಷಿಸಲಿಲ್ಲ.
ಸರ್ವಗೌಪ್ಯ ಮಹಾದೇವಾಯೆಂದಲ್ಲಿ ರೂಹಿಸಲಿಲ್ಲ.

ಇಲ್ಲ ಇಲ್ಲ ಎನಲಿಲ್ಲ ಅಲ್ಲಿಯೇ ನಿರ್ಲೇಪವಾದ
ಸೌರಾಷ್ಟ್ರ ಸೋಮೇಶ್ವರಲಿಂಗವ ಕಂಡಾ. ॥೧೧೪॥

೮೭೧
ಕಾಯದ ಅವಗುಣಂಗಳ ಕಾಣದೆ ವಾಯಕ್ಕೆ ವಾಯುವ ನುಡಿವ
ವಾಯುಪ್ರಾಣಿಗಳಿಗೆ ಕಾಣಬಹುದೆ ಪರಮಾತ್ಮನಿರವು?
ಹುಲುಮೊರಡಿಯಲ್ಲಿ ಕಲ್ಪತರುವ ಕಂಡೆಹೆನೆಂದು
ಕಳವಳಿಸಿ ಬಳಲುವನಂತೆ,
ಗೋರಿಕಲ್ಲೊಳಗೆ ಚಿಂತಾಮಣಿಯನರಸಿ ಬೆರಟುಗೊಂಡವನಂತೆ,
ಕಂಗಳಯ್ಯಂಗೆ ಮಣಿಮುಕುರನ ತೋರೆ ಕಾಣ್ಬನೆ ತನ್ನ ಪ್ರತ್ಯಂಗವ?
ತಮ್ಮಲ್ಲಿರ್ದಾತ್ಮನ ತಾವರಿಯದವರು
ನಿಮ್ಮನೆತ್ತ ಬಲ್ಲರಯ್ಯಾ ಸೌರಾಷ್ಟ್ರ ಸೋಮೇಶ್ವರಾ? ॥೧೧೫॥

೮೭೨
ಕಾಯದ ಕೈಮುಟ್ಟದೆ, ಜೀವದ ಕೈಮುಟ್ಟದೆ,
ಮನದ ಕೈಮುಟ್ಟದೆ, ಭಾವದ ಕೈಮುಟ್ಟದೆ, ಸಾವಧಾನದ ಕೈಮುಟ್ಟದೆ,
ಅರ್ಪಿಸಿಕೊಳ್ಳದೆ, ಅನರ್ಪಿತವ ಮುಟ್ಟದೆ,
ಲಿಂಗಮುಟ್ಟಿಬಂದ ಪ್ರಸಾದವ ಸೇವಿಸಿಪ್ಪ
ಶರಣಂಗೆ ಶರಣೆಂಬೆನಯ್ಯಾ ಸೌರಾಷ್ಟ್ರ ಸೋಮೇಶ್ವರಾ. ॥೧೧೬॥

೮೭೩
ಕಾಯದ ಕೈಮುಟ್ಟಿ ಲಿಂಗಕ್ಕರ್ಪಿಸಿದೆನೆಂದಡೆ ಅನರ್ಪಿತ,
ಅಂಗದೊಳಗೆ ಲಿಂಗ ತನ್ಮಯನಾಗಿ ಪ್ರಾಣಾನುಪ್ರಪಂಚ ಮರೆದಿರಲು,
ಆ ಅಂಗವೇ ಲಿಂಗಕ್ಕರ್ಪಿತವಾಗಿ ಪ್ರಸಾದಕಾಯವಪ್ಪುದು.
ಇಂತಾದ ಬಳಿಕ ಅಂಗ ಸೋಂಕಿಲ್ಲದೆ ಲಿಂಗ ಸೋಂಕಾಗಿರ್ಪುದಾಗಿ
ಅರಿದು ಮರೆದು ಅರ್ಪಿತ ಅನರ್ಪಿತವೆಂಬ ಭ್ರಾಂತು ಸೂತಕವಿಲ್ಲ.
ನಿಭ್ರಾಂತ, ನಿಸ್ಸಂದೇಹಿ, ಸೌರಾಷ್ಟ್ರ ಸೋಮೇಶ್ವರ ಲಿಂಗವಲ್ಲದನ್ನ
ಸೊಗಸದ ಪ್ರಸಾದಿ. ॥೧೧೭॥

೮೭೪
ಕಾಯದ ಗತಿಯಿಲ್ಲ, ನಡೆವವನಲ್ಲ.
ಅಕಾಯಚರಿತ್ರನು, ಅನುಪಮಲಿಂಗೈಕ್ಯನು.
ಕುಲ, ಛಲ, ವಿದ್ಯಾಮದ, ಮೋಹ, ಬಲುವಿಡಿಯ.

ನಿರಹಂಕಾರವಿಡಿದು, ನಿರಂಗ ಸುಜ್ಞಾನ ಒಡಲಾ[ಗಿ]
ಭರಿತಪ್ರಸಾದವಲ್ಲದನ್ಯವನರಿಯ. ಇದಕ್ಕೆ ಶ್ರುತಿ:
"ರುಚಿರೂಪಂ ನಚಾಜ್ಞಾನಂ ಅರ್ಪಿತಾನರ್ಪಿತಂ ತಥಾ
ಯಥಾ ವರ್ತೇತ ಯಸ್ಯಾಪಿ ಶಿವೇನ ಸಹ ಮೋದತೇ"
ಎಂದುದಾಗಿ
ಅಂಗರುಚಿಯ ಹಂಗು ಹಿಂಗಿ, ಲಿಂಗರುಚಿಯ ಸಂಗವಾದ ಸುಸಂಗಿ
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣ. ॥೧೧೮॥

೮೭೫

ಕಾಯದ ಜನನಸ್ಥಾನ ಅಷ್ಟತನುವಿನ ಕೊನೆಯ ಮೊನೆಯಲ್ಲಿ,
ವಾ[ಕಿ]ನ ಜನನಸ್ಥಾನ ಮನದ ಕೊನೆಯ ಮೊನೆಯಲ್ಲಿ,
ಮನದ ಜನನಸ್ಥಾನ ಚಿತ್ತಿನ ಕೊನೆಯ ಮೊನೆಯಲ್ಲಿ,
ಚಿತ್ತಿನ ಜನನಸ್ಥಾನ ಆತ್ಮನ ಕೊನೆಯ ಮೊನೆಯಲ್ಲಿ,
ಸೌರಾಷ್ಟ್ರ ಸೋಮೇಶ್ವರನ ಜನನಸ್ಥಾನ,
'ಸರ್ವಂ ಖಲ್ವಿದಂ ಬ್ರಹ್ಮ' ಎಂಬಲ್ಲಿ. ॥೧೧೯॥

೮೭೬

ಕಾಯವೆ ಜೀವವೊ? ಜೀವವೆ ಕಾಯವೊ?
ಕಾಯವಳಿದಲ್ಲಿ ಜೀವವಳಿವುದೊ ಉಳಿವುದೊ? ಬಲ್ಲವರು ನೀವು ಹೇಳಿರೆ!
ಪ್ರಾಣವು ಲಿಂಗವು ಬೇರಿಪ್ಪುದೊ? ಬೆರಸಿಪ್ಪುದೊ? ಬಲ್ಲಡೆ ನೀವು ಹೇಳಿರೆ!
ಪ್ರಾಣಲಿಂಗ ಲಿಂಗಪ್ರಾಣವೆಂಬ ಸಂದು ಸಂಶಯವಳಿದು, ಶುದ್ಧವಿದ್ಯಾತೀತ ನೀನೇ.
ನಿಜನಿರ್ಣಯ ನಿಃಪತಿಯಾಗಿ, ಕಾಯ ಜೀವದ ಭೇದವಳಿದು,
ಜೀವ ಪರಮನೆಂಬುಭಯವಳಿದುಳಿದು,
ಒಳ ಹೊರಗೆಂಬ ಕುಳವಳಿದಾತ ನೀನೇ
ಸೌರಾಷ್ಟ್ರ ಸೋಮೇಶ್ವರಾ. ॥೧೨೦॥

೮೭೭

ಕಾಯವೆಂಬ ಕಲ್ಲಮೇಲೆ ಮನವೆಂಬ ಮಚ್ಚವ
ಸದ್ಭಾವವೆಂಬ ಹಸ್ತದಿಂ ಪಿಡಿದೊರೆದು,
ಪರಬ್ರಹ್ಮದ ಬಣ್ಣಕ್ಕೆ ಅದ್ವೈತದ ಅಣಿಯನಿಟ್ಟು,
ನಿರ್ಧರಿಸಿದ ನಿಜಬಣ್ಣವ ನಿಜದಿಂ ಕಂಡು ಇಹುದಿಲ್ಲ.
ಬಹುದು ಬಾರದೆಂಬ ಬಹು ಬಣ್ಣದ ಬಳಕೆಯಳಿದ ಸಹಜ ನೀನೆ,
ಸೌರಾಷ್ಟ್ರ ಸೋಮೇಶ್ವರಾ. ॥೧೨೧॥

೮೭೮
ಕಾಯದಲ್ಲಿ ಜೀವಪ್ರಚ್ಛನ್ನವೆಂದಡೆ
ಸರ್ವಾಂಗಕ್ಕೆ ಚೇತನವಾಗಿಪ್ಪುದಾಗಿ ಪ್ರಚ್ಛನ್ನವಲ್ಲ.
ಜಗದಲ್ಲಿ ಜೀವ ಪರಿಪೂರ್ಣವೆಂದಡೆ 'ಯದ್ದೃಷ್ಟಂ ತನ್ನಷ್ಟ' ವೆಂದುದಾಗಿ,
ಕಾಯದಿಂ ಜೀವ ತೊಲಗುವ ದೆಸೆಯಿಂ ಪರಿಪೂರ್ಣವಲ್ಲ.
ಇದಕ್ಕೆ ಶ್ರುತಿ:
"ಕಾಯಮಾಕಾರಯುಕ್ತಂತು ಜೀವೋ ರೂಪವಿವರ್ಜಿತಃ
ಕಾಯಜೀವದ್ವಯೈರ್ಯುಕ್ತಂ ನ ಧ್ರುವಂ ಪರಮೇಶ್ವರಿ"
ಇಂತೆಂದುದಾಗಿ,
ಜೀವಂಗೆ ಜೀವವಾದಾತ್ಮನೆ ಪರಮಾತ್ಮನೆಂಬ
ಉಪಮೆಗುಪಮಾತೀತ, ಭಾವಕ್ಕೆ ಭಾವಾತೀತ,
ಅರುವಿಂಗೆ ಅಗೋಚರ, ಅತರ್ಕ್ಯನಗಣಿತನಪ್ರಮೇಯ ನಿತ್ಯನಿರಂಜನ ನೀನೆ,
ಸೌರಾಷ್ಟ್ರ ಸೋಮೇಶ್ವರಾ. ॥೧೨೨॥

೮೭೯
ಕಾಲ ಕರ್ಮ ಬಿಂದು ಮಾಯೆ ಜೀವ ಪ್ರಕೃತಿ
ಮಲ ರೋಧನ ಕಳವು ಹಿಂಸೆ ತೃಷೆ ನಿದ್ರೆ ವ್ಯಸನಕ್ಕೆ
ಕ್ಲೇಶ ಕಾಮಾದಿಗಳುಳ್ಳನ್ನಕ್ಕರ ಏಕ ಭಾಜನವೆಲ್ಲಿಯದೊ?
ಇವೆಲ್ಲವ ಕಳೆದುಳಿದಲ್ಲಿ ಸೌರಾಷ್ಟ್ರ ಸೋಮೇಶ್ವರಲಿಂಗದೊಡನೆ
ಏಕಭಾಜನ ದೊರೆಕೊಂಬುದು. ॥೧೨೩॥

೮೮೦
ಕಾಷ್ಠದೊಳಗೆ ಅಗ್ನಿ ಇಪ್ಪಂತೆ, ಹಾಲೊಳಗೆ ತುಪ್ಪವಿದ್ದಂತೆ,
ತನುವಿನಲ್ಲಿ ಚೇತನವಿಪ್ಪಂತೆ,
ಪಿಂಡದಲ್ಲಿ ಘನಲಿಂಗ ಪೂರ್ಣವಾಗಿಪ್ಪನಾಗಿ ಇಹಪರನಾಸ್ತಿ.
ಇಹಪರನಾಸ್ತಿಯಾಗಿ, ನಿರ್ವಯಲನೈದಿಪ್ಪನಯ್ಯಾ,
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ. ॥೧೨೪॥

೮೮೧
ಕಾಳ ರಕ್ಕಸಿಗೆ ಮೂರು ಬೆನ್ನು, ಐದು ಬಸುರು,
ಆರು ಕಣ್ಣು, ಏಳು ಮೊಲೆ, ಎಂಟು ಭುಜ,
ಹತ್ತು ತೋಳು, ಹದಿನಾರು ಪಾದ, ಹದಿನೆಂಟು ತಲೆ,
ಮೂವತ್ತಾರು ಬಾಯಿ, ಐವತ್ತೆರಡು ನಾಲಗೆ,

ಅರುವತ್ತುನಾಲ್ಕು ಕೋರೆದಾಡೆ.
ಈ ಪರಿಯಲ್ಲಿ ಜಗವೆಲ್ಲವನಗಿದಗಿದು ಉಗುಳುತ್ತಿರ್ದಳಯ್ಯಾ,
ಸೌರಾಷ್ಟ್ರ ಸೋಮೇಶ್ವರಾ, ನೀ ಮುಟ್ಟೆ ಬಟ್ಟಬಯಲಾದಳು. ॥೧೨೫॥

೮೮೨

ಕಿಗ್ಗೊಂಬಿನ ಕಪಿ ಅಗ್ಗೊಂಬಿನ ಕಪಿಯನಣಕಿಸಲು
ಕಿಗ್ಗೊಂಬಿನ ಕಪಿ ಅದೇ ಕೊಂಬಿಗೆ ಬಿದ್ದಿತ್ತು,
ಅಗ್ಗೊಂಬಿನ ಕಪಿ ಆಕಾಶಕ್ಕೆದ್ದಿತ್ತು.
ಬಿದ್ದ ಕಪಿ ಬಯಲಾಯಿತ್ತು, ಎದ್ದ ಕಪಿ ನಿರ್ವಯಲಾಯಿತ್ತು.
ಸೌರಾಷ್ಟ್ರ ಸೋಮೇಶ್ವರನೆಂಬ ನಾಮ ನಿರ್ನಾಮವಾಯಿತ್ತು. ॥೧೨೬॥

೮೮೩

ಕುಂಜರನ ಪಂಜರವೆ ಸಂಜೀವನವಾದವರೆಲ್ಲರೂ ಭಕ್ತರೆಂತಪ್ಪರಯ್ಯಾ?
ಮುಪ್ಪುರದಲ್ಲಿ ಮುಳುಗಿದವರೆಲ್ಲರೂ ಯುಕ್ತರೆಂತಪ್ಪರಯ್ಯಾ?
ಭೂತಭವಿಷದ್ವರ್ತಮಾನಕ್ಕೆ ಸಿಲುಕಿದವರೆಲ್ಲರೂ ವಿರಕ್ತರೆಂತಪ್ಪರಯ್ಯಾ?
ಇಂತಪ್ಪವರು ನಮ್ಮ ಸೌರಾಷ್ಟ್ರ ಸೋಮೇಶ್ವರಲಿಂಗಕ್ಕೆ
ಸಲ್ಲದೆ ಹೋದರು. ॥೧೨೭॥

೮೮೪

ಕುಂಡಲಿಯ ಮುಖದಲ್ಲಿ ಪ್ರಾಣನಿವಾಸಿಯಾಗಿಪ್ಪ
ಪಶ್ಚಿಮದ್ವಾರದ ಬ್ರಹ್ಮವಿಷ್ಣುರುದ್ರರ
ಅಧೋನಾಳ ಮಧ್ಯನಾಳ ಊರ್ಧ್ವನಾಳಮಂ ಕಳೆದು,
ಶೂನ್ಯಸ್ಥಾನದ ಹೂವಿನ ಪರಿಮಳದ ಚಿತ್ತದಾಂಬುವ ಧರಿಸಿ,
ಮನಮಗ್ನನಾಗಿ, ಪ್ರಾಣಲಿಂಗವೆಂಬ ಸಂದು ನಷ್ಟವಾದಿರವ
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣ ಬಲ್ಲ. ॥೧೨೮॥

೮೮೫

ಕುರುಹಿಲ್ಲದ ಠಾವ ನೋಡುವ ಪರಿಯೆಂತೊ,
ನೋಡಲಿಲ್ಲದ ಠಾವ ಹೇಳುವ ಪರಿಯೆಂತೊ,
ಹೇಳಲಿಲ್ಲದ ಠಾವ ಕೇಳುವ ಪರಿಯೆಂತೊ,
ಜೀವ ಮನಸ್ಸೆಂದೆರಡ ನುಡಿಯಬೇಡ,
ನೆನೆವ ಮನವು ತಾನೆ ಜೀವ ಕಾಣಿರೇ.
ಕಾಯಜೀವದುಭಯ ಕುಳದ ಹೆಸರಿಟ್ಟು ತೋರುವುದು

ಕಾಯಕ್ಕೊ? ಜೀವಕ್ಕೊ?
ಹೆಸರಾ[ವ] ಎಡೆಯಲ್ಲಿ ಅಡಗಿತ್ತು? ಬಲ್ಲಡೆ ನೀವು ಹೇಳಿರೇ.
ಈ ಪರಿಯಲ್ಲದೆ ನಾಮಕ್ಕೆ ಸೀಮೆ ಇಲ್ಲ, ಆತ್ಮಂಗೆ ರೂಹಿಲ್ಲ.
ನಿಃಕಳಂಕಶಾಂತಮಲ್ಲಿಕಾರ್ಜುನದೇವರೆಂಬ
ನಾಮ ಕಳಂಕ ಸೌರಾಷ್ಟ್ರ ಸೋಮೇಶ್ವರಾ. ॥೧೨೯॥

೮೮೬

ಕುರುಹಿಲ್ಲದ ಠಾವಿನಲ್ಲಿ ತೆರಹಿಲ್ಲದಾತ್ಮಂಗೆ
ಬರಿಯ ನಾಮವ ಸೈತಿಟ್ಟು ಕುರುಹದೇನು ಹೇಳಾ?
ನಾಮವುಳ್ಳೆಡೆಯಲ್ಲಿ ಸೀಮೆ, ಸೀಮೆಯುಳ್ಳೆಡೆಯಲ್ಲಿ ನಾಮ
ಹೋಹೋ, ತಿಳಿದು ನೋಡಿರೇ.
ಹಮ್ಮು ಜಡನರಿವು ಮರವೆಯನೆಯ್ದಿಪ್ಪುದು ಮನ.
ತನು, ಮನ, ಕರಣ, ಭಾವಕ್ಕಾಧಾರವಾಗಿಪ್ಪುದಾತ್ಮ.
ಇನಕಿರಣ ಇನನಪ್ಪುದೆ? ವಾಯು ತಾನೇ ಆಕಾಶವೇ?
ಧೂಮ್ರ ತಾನೇ ಅಗ್ನಿಯೆ? ನೆನೆವ ಮನವು ತಾನೇ ಜೀವನೆ?
ಇಂತಲ್ಲ ನೋಡಾ, ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ
ಮನವೇ ಆತ್ಮನಲ್ಲವಯ್ಯಾ ಮಲ್ಲಿಕಾರ್ಜುನ. ॥೧೩೦॥

೮೮೭

ಕೂಳ ಪ್ರಸಾದವೆಂದು ನುಡಿವ ಜಾಳು ಮಾತ ಕೇಳಿ,
ಕೂಳಿಂಗೆ ಆಳಾಗಿ ಬೇಳಾದ ಬೇಳುವೆಯಲಾಳಿದವಂಗೇಕೊ
ಗುರುಲಿಂಗಜಂಗಮಪ್ರಸಾದದ ನೆನಹು?
ಪ್ರಸಾದದಲ್ಲಿ ಪ್ರಸನ್ನವಾದ
ಪ್ರಸಾದಲಿಂಗಪ್ರಸನ್ನತೆಯ ಪ್ರಸಾದದಿಂದ ಜನಿಸಿದಾತ ಜಂಗಮ.
ಆ ಜಂಗಮಮುಖದಿಂದ ತೋರಿತ್ತು ಪ್ರಸಾದ.
ಇದು ಕಾರಣ ಗುರುವಿಂಗೂ ಜಂಗಮಪ್ರಸಾದ,
ಲಿಂಗಕ್ಕೂ ಜಂಗಮಪ್ರಸಾದ,
ಚತುರ್ದಶಭುವನಕ್ಕೂ ಜಂಗಮಪ್ರಸಾದ. ಇದಕ್ಕೆ ಶ್ರುತಿ:
"ಗುರುಣಾ ಲಿಂಗಸಂಬಂಧಃ ತಲ್ಲಿಂಗಂ ಜಂಗಮಸ್ಥಿತಂ
ಜಂಗಮಸ್ಯ ಪ್ರಸಾದೇನ ತ್ರೈಲೋಕ್ಯಮುಪಜೀವಿತಂ"
ಇಂತೆಂದುದಾಗಿ
ಪ್ರಸಾದವನರಿತು ಪ್ರಸಾದವೆ ಪ್ರಾಣವಾಗಿರಬಲ್ಲಡೆ
ಸೌರಾಷ್ಟ್ರ ಸೋಮೇಶ್ವರಲಿಂಗವೆಂಬೆನು. ॥೧೩೧॥

೭೭೭
ಕೃಶ ಮಧ್ಯ ಸ್ಥೂಲ, ಹ್ರಸ್ವ ದೀರ್ಘವಪ್ಪ ಬಹುಘಟದಂಬುವಿನಲ್ಲಿ
ಇನಬಿಂಬ ಪ್ರತಿಬಿಂಬಿಸುತ್ತಿರಲು
ಅದು ಒಂದು ಬಿಂಬವೊ, ಬಹುಬಿಂಬವೊ?
ಅಂಗ ಪ್ರತ್ಯಂಗ ನಿಚಯಂಗಳಲ್ಲಿ ಚೇತನಿಸುವ ಚೈತನ್ಯಾತ್ಮಕನು
ಏಕಾತ್ಮನೊ, ಹಲವಾತ್ಮನೊ?
ತತ್ವಪರಿಜ್ಞಾನದಿಂ ತಿಳಿದುನೋಡಲು ವಿಶ್ವಾವಕಾಶವಾಗಿಪ್ಪ ಆತ್ಮನು
ಹೋಗುವ ಹೊರಡುವ ಠಾವಿನ್ನಾವುದೊ?
ಹೋಗಲಿಲ್ಲ ಬರಲಿಲ್ಲದಾತ್ಮನ ಹೋಯಿತ್ತು ಬಂದಿತ್ತೆಂಬ
ಲೀಲೆವಾರ್ತೆಯನೇನೆಂಬೆನಯ್ಯಾ ಸೌರಾಷ್ಟ್ರ ಸೋಮೇಶ್ವರಾ. ॥೧೩೨॥

೭೭೮
ಕೆಲರು ಚತುರ್ವೇದಭಾರಕರಾದರು, ಕೆಲರು ಆಗಮಂಗಳಲ್ಲಿ ಸವೆದರು,
ಕೆಲರು ಷಟ್‌ತರ್ಕಂಗಳಲ್ಲಿ ಮೋಹಿಸಿದರು, ಅಲ್ಲದೆ ತಾರಕಬ್ರಹ್ಮವನರಿತುದಿಲ್ಲ.
ಅದೆಂತೆಂದೊಡೆ:
"ಕೇಚಿದಾಗಮಜಾಲೇಷು ಕೇಚಿನ್ನಿಗಮಸಂಚಯೇ
ಕೇಚಿತ್ತರ್ಕೇಣ ಮುದ್ಯಂತಿ ನೈವ ಜಾನಂತಿ ತಾರಕಂ"
ಎಂದುದಾಗಿ
ಜ್ಞಾನಾಜ್ಞಾನದ ಮಧ್ಯದಲ್ಲಿ ಕರ್ಮಬಲದಲ್ಲಿ ಹುಟ್ಟಿದ
ಚೌರಾಶಿ ಜೀವರಾಶಿಗಳಲ್ಲಿಲ್ಲ.
ಪಂಚೇಂದ್ರಿಯಪ್ರೀತಿಯಿಂದ ನಡೆವ ಪ್ರಾಣಿಗಳೆಲ್ಲರು
ಲಿಂಗವನರಿಯದೆ ಕಾಲಚಕ್ರ ಕರ್ಮಚಕ್ರ ಪ್ರಳಯಚಕ್ರಕ್ಕೊಳಗಾದರು.
ಸೌರಾಷ್ಟ್ರ ಸೋಮೇಶ್ವರಲಿಂಗವ ಪೂಜಿಸಬಂದು,
ಲಿಂಗವ ಮರೆದ ಕಾರಣ. ॥೧೩೩॥

೭೯೦
ಕೊಡಗೂಸಿಂಗೆ ಕಡುಬೇನೆಯಾದುದ ಕಂಡೆ,
ಹಡೆದಿರ್ದ ಶಿಶುವ ಕೊಡಗೂಸು ನುಂಗಿತ್ತ ಕಂಡೆ,
ಹಿಡಿದಿರ್ದ ಕೋಳಿ ಒಡನುಂಬುದ ಕಂಡೆ,
ಒಡನಿರ್ದನಿಲ ಬಿಡುಮುತ್ತಾದುದ ಕಂಡೆ,
ಕೊಡನೊಳಗೊಂದು ಕಡೆಯಿಲ್ಲದ ರತ್ನವ ಕಂಡೆ,
ಸೌರಾಷ್ಟ್ರ ಸೋಮೇಶ್ವರನನೆಡೆವಿಡಲಿಲ್ಲದಿರ್ಪ ಬೆಡಗ ಕಂಡೆ. ॥೧೩೪॥

೮೯೧

ಕೋಣನೊಂದು ಕುದುರೆಯ ನುಂಗಿತ್ತು.
ಇರುಹೆ ಒಂದಾನೆಯ ನುಂಗಿತ್ತು.
ಬಲ್ಲುಕನನಲ್ಲವೆನಿಸಿತ್ತು, [ಕ]ಟ್ಟಿದ ಪಕ್ಷಿ ನೆರೆ ಪಾರಿತ್ತು ಗಗನಕ್ಕೆ.
ಚಿದಾಕಾಶವೆ ತಾನಾಗಿ, ಬಿಂದ್ವಾಕಾಶವನೊಡೆಯಿತ್ತು.
ದೃಷ್ಟಾಕಾಶವ ನಷ್ಟಂಗೈಯಿತ್ತು, ಭಿನ್ನಾಕಾಶವನೊಡಗೂಡಿತ್ತು,
ಮಹದಾಕಾಶವನೊಳಕೊಂಡಿತ್ತು.
ಸೌರಾಷ್ಟ್ರ ಸೋಮೇಶ್ವರನೆಂಬ ನಿಜದಾಕಾಶದಲ್ಲಿ ನಿಂದು
ನಾಮರೂಪು ನಷ್ಟವಾಯಿತ್ತು. ॥೧೩೫॥

೮೯೨

ಕ್ಷೀರಸಮುದ್ರದಲ್ಲಿ ಬೆರಸಿದ ಜಲವೆಲ್ಲ ಕ್ಷೀರವಾಗಿಪ್ಪುದೆಂತಂತೆ
ಮನ ನಿಮ್ಮಲ್ಲಿ ಬೆರಸಿದ ಬಳಿಕ ಅಹಂಕಾರವಿಲ್ಲ.
ಅಹಂಕಾರವಿಲ್ಲಾಗಿ ಪ್ರಾಣ ನಿಮ್ಮಲ್ಲಿ ಸಂಚಿತ.
ಇಂತಾದ ಬಳಿಕ ಅಂಗವೆಂಬುದಿಲ್ಲ,
ಸೌರಾಷ್ಟ್ರ ಸೋಮೇಶ್ವರಲಿಂಗವಲ್ಲದೆ ಮತ್ತೇನೂ ಇಲ್ಲ. ॥೧೩೬॥

೮೯೩

ಖಂಡಿತವಳಿದು ಇಂದ್ರಿಯಂಗಳು ಅಖಂಡಿತವಾದವಯ್ಯಾ.
ಖಂಡಿತವಳಿದು ತನ್ಮಾತ್ರೆಗಳು ಅಖಂಡಿತವಾದವಯ್ಯಾ.
ಖಂಡಿತವಳಿದು ಭೌತಿಕಂಗಳು ಅಖಂಡಿತವಾದವಯ್ಯಾ.
ಪಂಚಭೂತಮಯವಾದ ಬ್ರಹ್ಮಾಂಡ
ಶರಣನ ಅಂಗದಲ್ಲಿ ಪಂಚಬ್ರಹ್ಮವಾಯಿತ್ತಾಗಿ, ಇಷ್ಟ ಅಖಂಡಿತವಾಗಿ
ಸೌರಾಷ್ಟ್ರ ಸೋಮೇಶ್ವರನ ಶರಣರು ಅಖಂಡಿತರಯ್ಯಾ. ॥೧೩೭॥

೮೯೪

ಖ್ಯಾತಿಗೆ ಜೋತು, ಲಾಭಕ್ಕೆ ಲೋಭಿಸಿ,
ಪೂಜೆಯ ಮಾಜದೆ ರಾಜದ್ವಾರದಲ್ಲಿ ಸುಳಿದು
ಬಳಲುವ ಹಿರಿಯರೆಲ್ಲರೂ ಇತ್ತಿತ್ತಲಲ್ಲದೆ ಅತ್ತತ್ತಲೆಲ್ಲಿಯದೋ?
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ ತಲ್ಲೀಯವಾದ
ಶರಣರತ್ತತ್ತಲಲ್ಲದೆ ಇತ್ತಿತ್ತಲೆಂತಿಹರೋ. ॥೧೩೮॥

೮೯೫

ಗಂಧಘ್ರಾಣ ಆಚಾರಲಿಂಗಸಹಿತ ಲಿಂಗಾರ್ಪಿತ,
ಜಿಹ್ವೆರಸ ಗುರುಲಿಂಗಸಹಿತ ಲಿಂಗಾರ್ಪಿತ,
ನೇತ್ರರೂಪ ಶಿವಲಿಂಗಸಹಿತ ಲಿಂಗಾರ್ಪಿತ,
ತ್ವಕ್ಕುಸ್ಪರುಶನ ಜಂಗಮಲಿಂಗಸಹಿತ ಲಿಂಗಾರ್ಪಿತ,
ಶ್ರೋತ್ರಶಬ್ದ ಪ್ರಸಾದಲಿಂಗಸಹಿತ ಲಿಂಗಾರ್ಪಿತ,
ಆತ್ಮತೃಪ್ತಿ ಮಹಾಲಿಂಗಸಹಿತ ಲಿಂಗಾರ್ಪಿತ.
ಇದಕ್ಕೆ ಶ್ರುತಿ:
“ಲಿಂಗದೃಷ್ಟ್ಯಾ ನಿರೀಕ್ಷರ ಸ್ಯಾತ್ ಲಿಂಗಹಸ್ತೇನ ಸ್ಪರ್ಶನಂ
ಲಿಂಗಜಿಹ್ವಾರಸಾಸ್ವಾದೋ ಲಿಂಗಘ್ರಾಣೇನ ಘ್ರಾತಿತೇ
ಲಿಂಗಶ್ರೋತ್ರೇಣ ಶ್ರವಣಂ ಲಿಂಗಾಸ್ಯೇನೋಕ್ತಿರುಚ್ಯತೇ
ಲಿಂಗೇನಾನುಗತಂ ಸರ್ವಂ ಇತ್ಯೇತತ್ಸಹ ಭಾಜನಂ”
ಇಂತೆಂದುದಾಗಿ, ಷಡುಸ್ಥಲಬ್ರಹ್ಮ ಲಿಂಗಾಂಗದಿಂ
ಸೌರಾಷ್ಟ್ರ ಸೋಮೇಶ್ವರನೆಂಬ ಲಿಂಗ [ಅಂ]ಗವನೊಳಕೊಂಡಿತ್ತಾಗಿ
ಅಂಗವೇ ಲಿಂಗವಾಯಿತ್ತು ನೋಡಾ. ॥೧೩೯॥

೮೯೬

ಗಗನದ ಪುತ್ಥಳಿ ಬಯಲ ಬಣ್ಣವನುಟ್ಟು,
ಅಂಜನದ ತಿಲಕವನ್ನಿಟ್ಟು, ಬ್ರಹ್ಮ ವಿಷ್ಣು ರುದ್ರರನಲಂಕರಿಸಿಕೊಂಡು
ತ್ರಿಜಗದೊಳಗೆ ತನ್ಮಯವಾಗಿ ಸುಳಿಯಿತ್ತು ನೋಡಾ.
ಇಂತಿದನರಿಯದೆ ಜಗದೊಳಗಣ ಹಿರಿಯರೆಲ್ಲಾ
ಬರುಸೂರೆಹೋದರು.
ಮಾತಿನ ಜಾಣರೆಲ್ಲಾ ನಿಜಗೆಟ್ಟರು.
ಇದನರಿತು ಉಟ್ಟುದ ಹರಿದು, ಇಟ್ಟುದ ಸುಟ್ಟು,
ತೊಟ್ಟುದ ತೊಡದು, ಉಲುಮೆಯನುಸುರಲೊಲ್ಲದೆ,
ಶಬ್ದಮುಗ್ಧವಾದ ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣ. ॥೧೪೦॥

೮೯೭

ಗತಿಗೆಟ್ಟು, ಮತಿಯ ಹಂಗ ಮರೆದು,
ಕಾಮಿಸಿ ಕಲ್ಪಿಸಿ, ಭಾವಿಸುವ ಭಂಗಹಿಂಗಿ, ಭಾವಕಲ್ಪನೆಯ ಮೀರಿ,
ಭಾವಭೇದವಳಿದು ನಿರ್ಭಾವಪದದಲ್ಲಿ ನಿಂದುದು
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ
ಭೇದವಳಿದು ಅವಿರಳ ಶರಣನ ಇರವು. ॥೧೪೧॥

೬೯೮
ಗರುಡನನುರಗನ ಬಾಣದಿಂ ಪರಿಹರಿಸುವೆನೆಂಬವನಂತೆ,
ಅರಗಿನ ಪುತ್ಥಳಿಯನುರಿಯ ಕರುಮಾಡದಲ್ಲಿರಿಸುವವನಂತೆ,
ಮಂಜಿನ ಮನುಜಂಗೆ ಬಿಸಿಲ ಹೊದಿಕೆಯ ಹೊದಿಸುವವನಂತೆ,
ಸುರತಸಂಗದಿಂದುರವಣಿಪ ಮೋಹದಜ್ಞತೆಯಿಂ
ಪರಕೆ ಪರವಾದ ಪರಬ್ರಹ್ಮವನರಿವೆನೆಂಬ ಪರಿಭವಾತ್ಮರಿಗೆಲ್ಲಿಯದೊ?
ಸೌರಾಷ್ಟ್ರ ಸೋಮೇಶ್ವರನೆಂಬ ಲಿಂಗವು. ॥೧೪೨॥

೬೯೯
ಗಾಳಿಯ ನಾರಿನಲ್ಲಿ ಬೆಟ್ಟ ಕಟ್ಟುವಡೆಯಿತ್ತ ಕಂಡೆ.
ಆ ಬೆಟ್ಟವೊಂದು ಮಾನದೊಳಗಡಕವಾದುದ ಕಂಡೆ.
ಆ ಮಾನದೊಳಗೆ ಎಂಟು ಮಂದಿ ಹಿರಿಯರ ಕಂಡೆ.
ಅವರ ಗುಹ್ಯದಲ್ಲಿ ನರರು ಸುರರು ನೆರೆದಿಪ್ಪುದ ಕಂಡು,
ಬೆರಗಾದೆನಯ್ಯಾ, ಸೌರಾಷ್ಟ್ರ ಸೋಮೇಶ್ವರಾ. ॥೧೪೩॥

೭೦೦
ಗುರುಕರುಣವೆಂಬ ಪಾದೋದಕದಲ್ಲಿ ನಾಂದು ನಾಂದು,
ನಿಃಕ್ರೀಯಾಯಿತ್ತಯ್ಯಾ.
ಇಂತು ನಿರ್ಮಲನಾಗಿ ಲಿಂಗಕ್ಕೆ ಮಜ್ಜನಕ್ಕೆರದು
ಲಿಂಗೋದಕವಾಯಿತ್ತು.
ಲಿಂಗಸೋಂಕಿನಿಂದ ಪಾದೋದಕವಾಯಿತ್ತು.
ಲಿಂಗಾರ್ಪಿತದಿಂದ ಪ್ರಸಾದೋದಕವಾಯಿತ್ತು.
ಲಿಂಗೋದಕ ಮಜ್ಜನದಲ್ಲಿ
ಪಾದೋದಕ ಕರಚರಣಮುಖ ಪ್ರಕ್ಷಾಲನದಲ್ಲಿ
ಪ್ರಸಾದೋದಕ ಲಿಂಗಭೋಗೋಪಭೋಗದಲ್ಲಿ.
ಇಂತೀ ತ್ರಿವಿಧೋದಕದ ಪರಿಯನರಿತು
ಲಿಂಗಭೋಗೋಪಭೋಗದಲ್ಲಿ ಭೋಗಿಸಬಲ್ಲರೆ
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣ. ॥೧೪೪॥

೭೦೧
ಗುರುಕರಾಬ್ಜದಿಂದ ಉದಯಿಸಿದ ಶಿಷ್ಯನು
ಬೀಜವೃಕ್ಷದಂತೆ ಅನ್ಯವಲ್ಲದಿಪ್ಪನಾಗಿ,
ಗುರು ತಾನಾದ ಶಿಷ್ಯನು ಗುರುತನದ ಹಮ್ಮಿಲ್ಲದೆ

ಆ ಶಿಷ್ಯನಾಗಿ ನಿಂದ ಸಹಜನಯ್ಯಾ.
ಸೌರಾಷ್ಟ್ರ ಸೋಮೇಶ್ವರಲಿಂಗದ
ಪ್ರಸಾದಸಾಧ್ಯವಾಯಿತ್ತಾಗಿ ಅಭೇದ್ಯನಯ್ಯಾ. ॥೧೪೫॥

೯೦೨
ಗುರುಕಾರುಣ್ಯವ ಪಡೆದು ಲಿಂಗಾನುಗ್ರಾಹಕನಾಗಿ
ಅಂಗ ಲಿಂಗ ವೇಧೆಯಿಂದಿರಲು ಆ ಇಷ್ಟಲಿಂಗಕ್ಕೆ ಅಂಗವೇ ಅರ್ಪಿತ.
ಮತ್ತಾ ಇಷ್ಟಲಿಂಗಕ್ಕೆ ಮನಕ್ಕೆ ವೇದ್ಯವಾಗಿ
ಪ್ರಾಣನಲ್ಲಿ ಪ್ರವೇಶವಾಗಿ ಲಿಂಗವೇ ಪ್ರಾಣವಾಗಿರಲು
ಆ ಪ್ರಾಣಲಿಂಗಕ್ಕೆ ಮನವೇ ಅರ್ಪಿತ.
ಇಷ್ಟ ಪ್ರಾಣ ಸಂಗ ಸಂಯೋಗ ಸಮರಸಾನುಭಾವ ಲಿಂಗದನುವರಿತು,
ಅರಿಕೆಯರತ ಅರುವಿನ ತೃಪ್ತಿಯೇ ಭಾವಲಿಂಗಾರ್ಪಿತ.
ಇದಕ್ಕೆ ಶ್ರುತಿ:
"ಇಷ್ಟಲಿಂಗಾರ್ಪಿತಂ ಚಾಂಗಂ ಪ್ರಾಣಲಿಂಗಾರ್ಪಿತಂ ಮನಃ
ಭಾವಲಿಂಗಾರ್ಪಿತಾ ತೃಪ್ತಿರಿತಿ ಭೇದೋ ವರಾನನೇ"
ಇಂತೆಂದುದಾಗಿ,
ಇಷ್ಟ ಪ್ರಾಣ ತೃಪ್ತಿ ಸಮರಸಾದ್ವೈತವಾದಲ್ಲಿ
ಸೌರಾಷ್ಟ್ರ ಸೋಮೇಶ್ವರಲಿಂಗ ಸನ್ನಿಹಿತ. ॥೧೪೬॥

೯೦೩
ಗುರುಕಾರುಣ್ಯ ವೇದ್ಯವಾದ ಬಳಿಕ ಜನನ ಸೂತಕವಿಲ್ಲ,
ಘನಲಿಂಗಸಂಗದಲ್ಲಿ ಮನವು ನಿವಾಸಿಯಾದ ಬಳಿಕ ಜಾತಿಸೂತಕವಿಲ್ಲ,
ತತ್ವಪರಿಜ್ಞಾನದಿಂ ತನ್ನ ತಾನರಿದ ಬಳಿಕ ಪ್ರೇತಸೂತಕವಿಲ್ಲ.
ಸರ್ವೇಂದ್ರಿಯಂಗಳಲ್ಲಿ ಸೌರಾಷ್ಟ್ರ ಸೋಮೇಶ್ವರಲಿಂಗ ಸನ್ಮತವಾದ ಬಳಿಕ
ಜಡದುಃಖಕರ್ಮ ಸಂಕಲ್ಪವಿಕಲ್ಪಂಗಳಿನಿತು
ನಾನಾ ಸೂತಕಂಗಳೇನೂ ಇಲ್ಲ ನೋಡಯ್ಯಾ. ॥೧೪೭॥

೯೦೪
ಗುರುಲಿಂಗಜಂಗಮ ಒಂದಾದ ಕ್ರಿಯೆಯಲ್ಲಿ ನಿಂದ
ಪ್ರಕಾಶಂಗೆ ಆವ ಸಂದೇಹವಿಲ್ಲ.
ಆವ ವಿಷಯಂಗಳೊಳಗೆ ಮನವಿಹುದು ಆ ರೂಪ ತಾನಾಗಿಹುದಾಗಿ
ಸೌರಾಷ್ಟ್ರ ಸೋಮೇಶ್ವರಲಿಂಗದ ವಿಷಯದೊಳಿಪ್ಪ ಮನ
ತದ್ರೂಪ ತ[ಲ್ಲೀ]ಯ . ॥೧೪೮॥

೯೦೫

ಗುರುಲಿಂಗದ ದೃಷ್ಟಿಯಲ್ಲಿ ದೃಷ್ಟಿನಟ್ಟು, ಕಂಗಳು ಕರಗಿ,
ಅವಗ್ರಹಿಸಿ ಬೆರಸಿ ಶಿವಜ್ಞಾನಾನುಭಾವದಲ್ಲಿ ಮನ ಕರಗಿ,
ಮನ, ಕಂಗಳು ಏಕರಸವಾಗಿ
ಸೌರಾಷ್ಟ್ರ ಸೋಮೇಶ್ವರನ
ಕರುಣ ಪಾದೋದಕದೊಳಗೆ ಬೆರಸಿತ್ತು. ॥೧೪೯॥

೯೦೬

ಗುರುವಿಡಿದು ಲಿಂಗವಾವುದೆಂದರಿಯಬೇಕು,
ಲಿಂಗವಿಡಿದು ಜಂಗಮವಾವುದೆಂದರಿಯಬೇಕು,
ಜಂಗಮವಿಡಿದು ಪ್ರಸಾದವಾವುದೆಂದರಿಯಬೇಕು,
ಪ್ರಸಾದವಿಡಿದು ಪರಮಪರಿಣಾಮವೆಡೆಗೊಳ್ಳಬೇಕು.
ಅಂತಪ್ಪ ಪರಮಪರಿಣಾಮವೆ ಪರಬ್ರಹ್ಮವೆಂದರಿತಲ್ಲಿ,
ಸೌರಾಷ್ಟ್ರ ಸೋಮೇಶ್ವರಲಿಂಗ ಸನ್ನಿಹಿತ. ॥೧೫೦॥

೯೦೭

ಗುರುವಿನಂತರಂಗದೊಳಗೆ ಶಿಷ್ಯ, ಶಿಷ್ಯನಂತರಂಗದೊಳಗೆ ಗುರು.
ಈ ಗುರುಶಿಷ್ಯಸಂಬಂಧ ಶರೀರಪ್ರಾಣದಂತೆ ಭಿನ್ನವಿಲ್ಲದೆ,
ಗುರುವೆಂಬ ಭಾವ ತೋರದಿರ್ದಡೆ ಆತ ಶಿಷ್ಯ.
ಶಿಷ್ಯನೆಂಬ ಭಾವ ತೋರದಿರ್ದಡೆ ಆತ ಗುರು.
ಇಂತು ಭಾವ ಭೇದಗಟ್ಟಿರಲು
ಮೌನಮುದ್ರೆಯಿಂದುಪದೇಶವ ಮಾಡಿದ ಗುರುಸೇವೆಯಿಂ
ತತ್‌ಶಿಷ್ಯನ ಸಂಶಯ ವಿಚ್ಛಿನ್ನವಾಗಿ,
ಉಪಮಾತೀತವಾದ ಉಪದೇಶದಿಂ
ಲಿಂಗಸೇವ್ಯದಲ್ಲಿ ತನ್ನಂಗವ ಮರೆದಿಪ್ಪ
ಸುಖವನುಪಮಿಸಬಾರದಯ್ಯಾ, ಸೌರಾಷ್ಟ್ರ ಸೋಮೇಶ್ವರಾ. ॥೧೫೧॥

೯೦೮

ಗುರುವಿನಲ್ಲಿ ಗುಣವನರಸಲಿಲ್ಲ, ಲಿಂಗದಲ್ಲಿ ಲಕ್ಷಣವನರಸಲಿಲ್ಲ,
ಜಂಗಮದಲ್ಲಿ ಕುಲವನರಸಲಿಲ್ಲ, ಪಾದೋದಕದಲ್ಲಿ ಶುದ್ಧವನರಸಲಿಲ್ಲ,
ಪ್ರಸಾದದಲ್ಲಿ ರುಚಿಯನರಸಲಿಲ್ಲ.
ಸೌರಾಷ್ಟ್ರ ಸೋಮೇಶ್ವರನ ಶರಣರಲ್ಲಿ ಮತ್ತೇನನೂ ಅರಸಲಿಲ್ಲ. ॥೧೫೨॥

೯೦೯

ಗುರುವೆ ಅಂಗ, ಲಿಂಗವೆ ಮನ, ಜಂಗಮವೇ ಪ್ರಾಣವಯ್ಯಾ.
ನಾದವೆ ಗುರು, ಬಿಂದುವೆ ಲಿಂಗ, ಕಳೆಯೆ ಜಂಗಮವಯ್ಯಾ.
ಇದಕ್ಕೆ ಶ್ರುತಿ:
"ನಾದಂ ಗುರುಮುಖಂಚೈವ ಬಿಂದುಂ ಲಿಂಗಮುಖಂ ತಥಾ
ಕಲಾಂ ಚರಮುಖಂ ಜ್ಞಾತ್ವಾ ಗುರುರ್ಲಿಂಗಂತು ಜಂಗಮಃ"
ಇಂತೆಂದುದಾಗಿ ಪ್ರಸಾದಕಿನ್ನೇವೆ?
ಗುರುವೆ ಲಿಂಗ, ಲಿಂಗವೆ ಜಂಗಮ, ಜಂಗಮವೆ ಪ್ರಸಾದ,
ಪ್ರಸಾದವೆ ಪರಿಪೂರ್ಣವಾದಡೆ
ಸೌರಾಷ್ಟ್ರ ಸೋಮೇಶ್ವರನೆಂಬ ಲಿಂಗವು ತಾನೆ. ॥೧೫೩॥

೯೧೦

ಗೊತ್ತ ಮೆಟ್ಟಿ ದಾಂಟಿ ಹುಟ್ಟದೆ ಹೋದ ಪರಿಯ ನೋಡಾ.
ಕತ್ತಲೆ ಬೆಳಗನೊತ್ತರಿಸಿ ಹತ್ತೆ ಸಾರಿನಿಂದ ಪರಿಯ ನೋಡಾ.
ಒತ್ತಿವಿಡಿದ ಅಸುರನ ನೆತ್ತಿಯನೊಡೆದು,
ಮುತ್ತ ಸರಗೋದ ಪರಿಯ ನೋಡಾ.
ಸೌರಾಷ್ಟ್ರ ಸೋಮೇಶ್ವರ ಲಿಂಗದೊಡನಾಡಿ
ಹೊಡೆಯ ಕೊಯ್ದು ಪರಿಯ ನೋಡಾ. ॥೧೫೪॥

೯೧೧

ಘಟಜಲ ಬಾಹ್ಯಾಗ್ನಿಯ ಉಷ್ಣ ಸೋಂಕಿ ಉಷ್ಣೋದಕವಾದಂತೆ,
ತಿಲಕುಸುಮಸಂಗದಿಂದ ಕುಸುಮಸಾರ ತಿಲಸಾರಕ್ಕೆ ವೇಧಿಸಿದಂತೆ.
ಅಂಗಲಿಂಗಸಂಗದಿಂದ ಪ್ರಾಣಲಿಂಗ ವೇದ್ಯವಾಯಿತ್ತು ನೋಡಾ.
ಇಷ್ಟಪ್ರಾಣ ಸಮರಸಾದ್ವೈತವಾದುದೆ ತೃಪ್ತಿ.
ಇದು ಕಾರಣ ಸಗುಣಕ್ಕೆ ಸಗುಣಬ್ರಹ್ಮವಾಗಿ,
ಎನ್ನಂಗ ಪ್ರಾಣ ಮನ ಭಾವ ಕರಣಂಗಳೊಳಹೊರಗೆ
ತೆರಹಿಲ್ಲದಿದ್ದೆಯಲ್ಲಾ, ಸೌರಾಷ್ಟ್ರ ಸೋಮೇಶ್ವರಾ. ॥೧೫೫॥

೯೧೨

ಘಟವ ಮಾಡಿದ ಕುಲಾಲನು ಆ ಘಟದೊಳಿಪ್ಪುದಿಲ್ಲವೆಂತತಂತೆ,
ಬೆಳಸ ಬಿತ್ತಿದವನು ಆ ಬೆಳೆಯೊಳಿಪ್ಪುದಿಲ್ಲವೆಂತತಂತೆ,
ರಥವ ಮಾಡಿದ ರಥಿಕ ತಾ ಆ ರಥದೊಳಿಪ್ಪುದಿಲ್ಲವೆಂತತಂತೆ,
ಸರ್ವವನಾಡಿಸುವ ಶರ್ವನು ಯಂತ್ರ ಯಂತ್ರಿಯಂತಿರ್ಪನಾಗಿ

ಸರ್ವರೂ ಶಿವನೆಂಬ ಅಜ್ಞಾನಿಗಳ ಮೆಚ್ಚುವನೆ?
ನಮ್ಮ ಸೌರಾಷ್ಟ್ರ ಸೋಮೇಶ್ವರ. ॥೧೫೬॥

೯೧೩

ಘಟಾಕಾಶ ಮಠಾಕಾಶ ಬಿಂದ್ವಾಕಾಶ ಭಿನ್ನಾಕಾಶ
ಮಹದಾಕಾಶ ನಿಜದಾಕಾಶ ಚೈತನ್ಯಾತ್ಮನಾತ್ಮಚೈತನ್ಯವೆಂದಡೆ
ಒಂದೆಂದರಿತರಿತು ಮರೆಮಾಡಿ ಹುಸಿ ಎಂಬ ಪರಿಯ ನೋಡಾ.
ಗರುಡಿ ಚೋರನಂತೆ ಘಟಾಕಾಶ ಘಟವಿದ್ದಲ್ಲಿ ಇದ್ದು,
ಘಟವಳಿದಲ್ಲಿ ಘಟಾಕಾಶವಳಿಯದಂತೆ.
ಮಠಾಕಾಶ ಮಠವಿದ್ದಲ್ಲಿ ಇದ್ದು, ಮಠ ಬಿಚ್ಚಿದಲ್ಲಿ ಮಠಾಕಾಶ ಬಿಚ್ಚದಂತೆ.
ಬಿಂದ್ವಾಕಾಶ ಬಿಂದುವಿದ್ದಲ್ಲಿ ಇದ್ದು,
ಬಿಂದು ನಷ್ಟವಾದಲ್ಲಿ ಬಿಂದ್ವಾಕಾಶ ನಷ್ಟವಾಗದಂತೆ.
ಭಿನ್ನಾಕಾಶ ಪೃಥ್ವಿಯಿದ್ದಲ್ಲಿ ಇದ್ದು,
ಪೃಥ್ವಿ ಭಿನ್ನವಾದಲ್ಲಿ ಭಿನ್ನಾಕಾಶ ಭಿನ್ನವಾಗದಂತೆ.
ಮಹದಾಕಾಶವೇ ನಿಜದಾಕಾಶ.
ಆ ನಿಜದಾಕಾಶವೇ ನಿರ್ಧರವಹ ಹಾಂಗೆ.
ಇದೇ ಆತ್ಮನ ಮರ್ಮ ನೋಡಾ.
ಆದಿ ಅನಾದಿ ಇಲ್ಲದಂದು, ನಾದಬಿಂದುಕಳೆ ಮೊಳೆದೋರದಂದು,
ಇದು ಒಂದೆಂದರಿತು ಉಂಟಿಲ್ಲವೆಂಬ
ಗೆಲ್ಲಸೋಲದ ಮಾತಿನ ಮಾಲೆಯ ತೊಡಿಗೆಯಳಿದಂದು
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ
ಆನೆಂಬುದು ನೀನೆಂಬುದೊಂದೇ ಕಾಣಾ ಮಲ್ಲಿಕಾರ್ಜುನಾ. ॥೧೫೭॥

೯೧೪

ಘಟಾಕಾಶ ಮಹದಾಕಾಶದ ಪರಿಯಲ್ಲವೆಂಬಿರಿ.
ಸಿಡಿಲು ಮಿಂಚು ಮಹದಾಕಾಶದಲ್ಲಿಯೇ ಲೀಯ.
ನಡೆವುದು ನುಡಿವುದು ಘಟಾಕಾಶದಲ್ಲಿಯೇ ಲೀಯ.
ಶಬ್ದ ನಿಶ್ಶಬ್ದವೆಂದೇನೋ?
ಚೈತನ್ಯಾತ್ಮಕವೆಂದಡೂ ಆತ್ಮಚೈತನ್ಯವೆಂದಡೂ
ನಾಮವೆಂದಡೆ ರೂಪು, ರೂಪೆಂದಡೆ ನಾಮ,
ನಾಮ ಏಕಸ್ವರೂಪವೆಂದರಿಯದೆ
ಕಂಗಳಯ್ಯಗಳು ಕಂಡೆವೆಂಬ ಕಳವಳದಂತೆ,
ಮರೆದೊರಗಿದವರು ಒರಗಿದಾಗ ಸುಖಿಸಿದೆವೆಂಬ ಮಾತಿನಂತೆ,
ಇಲ್ಲದುದನುಂಟೆಂದು ನೆನೆವನಂತೆ,

ನಿಃಕಳಂಕ ಶಾಂತಮಲ್ಲಿಕಾರ್ಜುನದೇವಯ್ಯ ಕೇಳಿದ ಮಾತ್ರದಲ್ಲಿ
ಮಗ್ನವಾದವರಂತೆ ಸೌರಾಷ್ಟ್ರ ಸೋಮೇಶ್ವರಾ. ॥೧೫೮॥

೯೧೫
ಘನಕ್ಕೆ ಘನ ಮಹಾಘನ.
ಆದಿಮಧ್ಯಾಂತರಹಿತವಾದ ನಿರಂಜನಕ್ಕೆ ಕುರುಹಿಲ್ಲ,
ಕುರುಹಿಲ್ಲಾಗಿ ಮರಹಿಲ್ಲ, ತೆರಹಿಲ್ಲಾಗಿ ಮರಹಿಲ್ಲ,
ಮರಹಿಲ್ಲಾಗಿ ಚಿದಖಂಡ ಚಿಲ್ಲಿಂಗ
ಸೌರಾಷ್ಟ್ರ ಸೋಮೇಶ್ವರನು ನಿರಾಶ್ರಯನಾಗಿ,
ಕೂಡಲಿಲ್ಲ ಅಗಲಲಿಲ್ಲದೆ ನಿಂದ, ಸಹಜ. ॥೧೫೯॥

೯೧೬
ಘನಲಿಂಗದಲ್ಲಿ ಮನ ನಟ್ಟು, ಭಾವ ಬೆರಸಿ,
ಉನ್ಮಿಷ ನಿಮಿಷಂಗಳಡಗಿ ತನು ಬೆರಗುವಟ್ಟು,
ನಿಂದ ಸುಖದ ಮುದ್ರೆಯ ಮುದ್ರಿಸಿದ ಬೆಡಗಿನ ಭೇದ,
ಸೌರಾಷ್ಟ್ರ ಸೋಮೇಶ್ವರಾ ನೀನೆ ಅಯ್ಯಾ. ॥೧೬೦॥

೯೧೭
ಘೋರಘೋರವಪ್ಪ ಮುಖ್ಯನರಕ ಒಂದು ಕೋಟಿ.
ಅದರ ಕೆಳಗಣ ಪ್ರಧಾನನರಕ ಹದಿನೈದು ಕೋಟಿ.
ಅವರ ಕೆಳಗಣ ನಾಯಕನರಕ ಇಪ್ಪತ್ತೆಂಟು ಕೋಟಿ.
ಅವರ ಕೆಳಗಣ ಪರಿವಾರನರಕ ಅನಂತಕೋಟಿ.
ಇದರೊಳಗಣ ಕುಂಭಿಯ ಪಾತಕ
ನಾಲ್ವತ್ತೆಂಟು ಸಾವಿರಗಾವುದು ವಿಸ್ತೀರ್ಣ.
ವೈತಾರಣಿಯೆಂಬತ್ತಾರು ಸಾವಿರ ಗಾವುದ,
ಕಟ್ಟಕಡೆ[ಯೆ]ಕ್ಕಲನರಕಕ್ಕೆ ಎಂದೂ ಪರಿಹಾರವಿಲ್ಲ.
ಹೊಕ್ಕವರು ಹೊರವಡಲಿಲ್ಲದ ನಿತ್ಯನರಕ,
ಇಂತಪ್ಪ ಘೋರಮಾಲೆಯ ಖಂಡಿಸುವಡೆ
ಪಂಚಾಕ್ಷರಿಯಲ್ಲದಿಲ್ಲ ಕಾಣಿರಣ್ಣಾ!
ಪಾಪವ ಪರಿಹರಿಸುವೊಡೆ ಪಂಚಾವರಣನಪ್ಪ ಪಂಚಮುಖವೆ
ಪಂಚಾಕ್ಷರವೆಂದರಿದು ಪಂಚಾಕ್ಷರವ ಜಪಿಸಿರಣ್ಣಾ.
ಮತ್ತಿಲ್ಲ ಮತ್ತಿಲ್ಲ ಸೌರಾಷ್ಟ್ರ ಸೋಮೇಶ್ವರಲಿಂಗವ
ಮೊರೆಹೊಕ್ಕು ಸುಖಿಯಾಗಿರಣ್ಣಾ. ॥೧೬೧॥

೯೧೮
ಚಕ್ರೋದ್ಧರಣದ ಬಹಿರಾವರಣದ ತಮೋಗುಣದಲ್ಲಿ ಏಕಾಕ್ಷರವದೆ,
ತೃತೀಯಾವರಣದಲ್ಲಿ ಸತ್ವಗುಣದಲ್ಲಿ ನಾಲ್ಕಕ್ಷರವವೆ,
ಇಂತೀ ಪಂಚಾಕ್ಷರವೆ ಶಿವನ ಪಂಚಮುಖದಲ್ಲಿ ಅವೆ.
ಅಂಗೋದ್ಧರಣದ ಬಹಿರಂಗದಲ್ಲಿ ಅವೆ,
ಲಿಂಗೋದ್ಧರಣದ ಅಂತರಂಗದಲ್ಲಿ ಅವೆ,
ಲಿಂಗಾಂಗಸಂಗದಿಂದೊಳಹೊರಗೆ ತೆರಹಿಲ್ಲದವೆ.
ತವರ್ಗದ ಕಡೆಯಿಲ್ಲದೆ, ಪವರ್ಗದಂತ್ಯದಲ್ಲಿದೆ,
ಶವರ್ಗದ ಮೊದಲಲ್ಲದೆ, ಯವರ್ಗದ ತುದಿಮೊದಲಲ್ಲವೆ.
ಸೌರಾಷ್ಟ್ರ ಸೋಮೇಶ್ವರಲಿಂಗವಿದೆ,
ಅರಿತು ಜಪಿಸಿರಯ್ಯಾ ಪಂಚಾಕ್ಷರವ. ॥೧೬೨॥

೯೧೯
ಚತುರ್ದಶಭುವನವನಗ್ನಿ ಕೊಂಡಡೆ, ಇದ ಕಂಡು ಬೆರಗಾದೆ.
ನವಖಂಡಪೃಥ್ವಿಯನಗ್ನಿ ಕೊಂಡಡೆ, ಇದ ಕಂಡು ಬೆರಗಾದೆ.
ಪಂಚಾಶತ್ಕೋಟಿ ವಿಸ್ತೀರ್ಣವನಗ್ನಿ ಕೊಂಡಡೆ, ಇದ ಕಂಡು ಬೆರಗಾದೆ.
ಸೌರಾಷ್ಟ್ರ ಸೋಮೇಶ್ವರಲಿಂಗವನಗ್ನಿ ಕೊಂಡಡೆ
ಇದ ಕಂಡು ಬೆರಗಾದೆ. ॥೧೬೩॥

೯೨೦
ಚರಪಾದೋದಕದಿಂದ ಲಿಂಗಾಂಗಗಳಿಗೆ ಮಜ್ಜನವ ಮಾಡುವುದೆ ಆಚಾರ,
ಆಪ್ಯಾಯನೋದಕವಾಗಿ ಕೊಟ್ಟುದಕವನೆ ಪಾನವ ಮಾಡುವುದೆ ಆಚಾರ,
ಪ್ರಸಾದೋದಕವನು ಆಯತ ಸ್ವಾಯತ ಅವಧಾನದಿಂದ
ಅರ್ಪಿತವ ಮಾಡುವುದೆ ಆಚಾರ.
ಇಂತೀ ತ್ರಿವಿಧೋದಕದಿಂದ ಪರಮಪದವೆಂದಾಚರಿಸುವಂಗೆ
ಆ ಜಂಗಮಪ್ರಸಾದಾರ್ಪಿತದಿಂದವೆ
ನಿಜಲಿಂಗೈಕ್ಯವಪ್ಪುದು ತಪ್ಪದು ಕಾಣಾ ಸೌರಾಷ್ಟ್ರಸೋಮೇಶ್ವರಾ. ॥೧೬೪॥

೯೨೧
ಚರಿಸಿ ವರ್ತಿಸುವುದೆ ಆಚಾರವಾದ ಕಾರಣ,
ಇಡಾಪಿಂಗಳನಾಡಿಯಂ ರೇಚಕಪೂರಕಂಗಳು ಚರಿಸಿ
ವರ್ತಿಸುವ ದೆಸೆಯಿಂ
ನಾಸಿಕಕ್ಕೆ ಆಚಾರಲಿಂಗವಾಗಬೇಕಾಯಿತ್ತು.

ಮಂತ್ರಮೂರ್ತಿಯೆ ಗುರುವಾದ ಕಾರಣ,
ಷಡಕ್ಷರವೆ ಷಡುರುಚಿಯಾಗಿ ತೋರಿಹುದಾಗಿ
ಅಂತಪ್ಪ ಷಡುರುಚಿ ಜಿಹ್ವೆಯ ಮುಖಕ್ಕೆ ಸಲುವ ದೆಸೆಯಿಂ
ಜಿಹ್ವೆಗೆ ಗುರುಲಿಂಗವಾಗಬೇಕಾಯಿತ್ತು.
ಸ್ವಯಂಪ್ರಕಾಶವೆ ಶಿವನಾದ ಕಾರಣ,
ಆ ಮಹಾಪ್ರಕಾಶವೆ ನೇತ್ರಂಗಳೊಳು ನೆಲೆಗೊಂಡು,
ಸಕಲಪದಾರ್ಥಂಗಳ ಕಾಣಿಸಿ ತೋರ್ಪ ದೆಸೆಯಿಂ
ನೇತ್ರಕ್ಕೆ ಶಿವಲಿಂಗವಾಗಬೇಕಾಯಿತ್ತು.
ಚರವೆ ಜಂಗಮವಾದ ಕಾರಣ, ತ್ವಕ್ಕು ಸರ್ವಾಂಗದಲ್ಲಿ ನೆಲೆಗೊಂಡು,
ಅಲ್ಲಿಗಲ್ಲಿ ಪರುಶನವನರಿವುತ್ತಿಹ ದೆಸೆಯಿಂ
ತ್ವಕ್ಕಿಂಗೆ ಜಂಗಮಲಿಂಗವಾಗಬೇಕಾಯಿತ್ತು.
ನಾದ ಸುನಾದ ಮಹಾನಾದವೆ ಪ್ರಸಾದವಾದ ಕಾರಣ,
ಪ್ರಸಾದವಪ್ಪ ಶಬ್ದಶ್ರೋತ್ರಮುಖಕ್ಕೆ ಸಲುವ ದೆಸೆಯಿಂ
ಶ್ರೋತ್ರಕ್ಕೆ ಪ್ರಸಾದಲಿಂಗವಾಗಬೇಕಾಯಿತ್ತು.
ಇಂತೀ ಪಂಚೇಂದ್ರಿಯಕ್ಕೆ ಪಂಚಲಿಂಗಂಗಳಾಗಬೇಕಾಯಿತ್ತು.
ಆತ್ಮನು ನಿರವಯ ನಿರ್ಗುಣ ನಿಃಕಲ ನಿರ್ಭಿನ್ನ ನಿರುಪಮ್ಯನಾದ ದೆಸೆಯಿಂ
ಗೋಪ್ಯವಾದ ಆತ್ಮಂಗೆ ಘನಕ್ಕೆ ಘನತೆಯುಳ್ಳ
ಮಹಾಲಿಂಗವಾಗಬೇಕಾಯಿತ್ತು.
ಇಂತೀ ಷಡುಸ್ಥಲಂಗಳಾದ ದೆಸೆಯಿಂದ
ಸೌರಾಷ್ಟ್ರ ಸೋಮೇಶ್ವರನೋರ್ವ
ಷಡುಲಿಂಗವಾಗಬೇಕಾಯಿತ್ತಯ್ಯಾ. ॥೧೬೫॥

೯೨೨
ಚಿದ್ಬ್ರಹ್ಮಾಂಡವೆಂಬ ಭಾಂಡದಲ್ಲಿ
ಅನಂತ ವಿಚಿತ್ರಭುವನಂಗಳಡಗಿಪ್ಪವಯ್ಯಾ.
"ಆಲಯಃ ಸರ್ವಭೂತಾನಾಂ ಲಯನಾಲ್ಲಿಂಗಮುಚ್ಚ್ಯತೇ"
ಎಂದುದಾಗಿ, ಅನಂತಕೋಟಿ ಬ್ರಹ್ಮಾಂಡಗಳು
ನಿಮ್ಮ ರೋಮಕೂಪದೊಳಗೆ ಅಡಗಿಪ್ಪವೆಂದಡೆ
ಬ್ರಹ್ಮ ವಿಷ್ಣು ರುದ್ರ ಇವರೆಲ್ಲ ಒಂದು ಬ್ರಹ್ಮಾಂಡದೊಳಗಣ ಬಾಲಕರು.
ಇವರೆತ್ತ ಬಲ್ಲರೋ ಲಿಂಗದ ನಿಜವ!
ಅಪ್ರಮಾಣವಗೋಚರ ಮಹಾಂತ, ನಿಮ್ಮ ನಿಜದೊಳಗನಾರು ಬಲ್ಲರಯ್ಯಾ
ಸೌರಾಷ್ಟ್ರ ಸೋಮೇಶ್ವರಾ! ॥೧೬೬॥

೬೨೩
ಚೈತನ್ಯಕ್ಕೆ ಚೈತನ್ಯ ನೀನಾಗಿ
ನಿನ್ನೊಳಗೆ ಪ್ರಾಣ, ಪ್ರಾಣದೊಳಗೆ ನೀನಿಪ್ಪ ಭೇದವ
ನಿಮ್ಮ ಜ್ಞಾನದಿಂದವೆ ಕಂಡು, ನೀನಾನೆಂಬ ಭೇದವ ಮರೆದು
ನಿಜಲಿಂಗ ಪ್ರಾಣಸಂಗ ಸುಖಿಯಾಗಿಪ್ಪ ಶರಣರ
ನಾನೇನೆಂಬೆನಯ್ಯಾ ಸೌರಾಷ್ಟ್ರ ಸೋಮೇಶ್ವರಾ! ॥೧೬೭॥

೬೨೪
ಚೈತನ್ಯಾತ್ಮಕವಪ್ಪ ನಾದಬಿಂದುವಿನೊಳಡಗಿಪ್ಪ
ಭೇದವ ಭೇದಿಸಲರಿಯದೆ ಭೇದವಾದದಿಂ ತಿಳಿದು
ಕಾಯಜೀವದ ಹೊಲಿಗೆಯ ಹೊಲ[ಬ]ನರಿಯದೆ
ನೆಲೆಗೆಟ್ಟಾತ್ಮನರಿವ ಅರಿವಿಂಗೆಳತಟವಾಯಿತ್ತು. ಅದೆಂತೆಂದಡೆ, ಶ್ರುತಿ:
"ಅಂಗಭೇದವಿಮೂಢಜ್ಞಃ ಆತ್ಮಜ್ಞಾನವಿವರ್ಜಿತಃ
ಆತ್ಮಭೇದಮಹಾಪ್ರಾಜ್ಞಃ ಪರಮಾತ್ಮೇತ್ಯುದಾಹೃತಃ"
ಇಂತೆಂದುದಾಗಿ, ಆತ್ಮದೃಕ್ಕಿಂದಾತ್ಮನ ಭೇದಿಸಬಲ್ಲಡೆ
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ
ಮನವಾತ್ಮನ ತಿಳಿಯಬಪ್ಪುದಯ್ಯಾ ಮಲ್ಲಿಕಾರ್ಜುನಾ. ॥೧೬೮॥

೬೨೫
ಚೌಷಷ್ಟಿವಿದ್ಯೆಗಳ ಕಲಿತಡೇನೊ? ಅಷ್ಟಾಷಷ್ಟಿಕ್ಷೇತ್ರಂಗಳ ಮೆಟ್ಟಿದಡೇನೊ?
ಬಿಟ್ಟಡೇನೊ? ಕಟ್ಟಿದಡೇನೊ? ಅರಿವಿನಾಚಾರ ಕರಿಗೊಳ್ಳದನ್ನಕ್ಕ.
ಘನಲಿಂಗದ ಬೆಳಗು ಸ್ವಯವಾದ ಶರಣಂಗಲ್ಲದೆ
ಸೌರಾಷ್ಟ್ರ ಸೋಮೇಶ್ವರಲಿಂಗಸುಖವೆಡೆಗೊಳ್ಳದು. ॥೧೬೯॥

೬೨೬
ಜಗತ್ಪ್ರಪಂಚ ಮಾಡಿ, ಆ ಜಗದಲ್ಲಿ
ಜೀವ ರೂಪಿಂದ ಬಳಿಸಂದನೆಂದು ಹೇಳುವ ಶ್ರುತಿಯಂತಿರಲಿ,
ಜೀವನೆ ಶಿವನಾದಡೆ ಶೋಕ ಮೋಹ ಋಣ ರೋಗ ಪುಣ್ಯ ಪಾಪ
ಕಾಲ ಕಲ್ಪಿತ ಪ್ರಳಯ ಪ್ರಕೃತಿ ಸಂಸಾರಪಾಶಬದ್ಧವುಂಟೆ?
ಇವೆಲ್ಲವೂ ಜೀವಂಗಲ್ಲದೆ ಶಿವಂಗಿಲ್ಲವಾಗಿ
ತ್ರಿಗುಣರಹಿತ ಸೌರಾಷ್ಟ್ರ ಸೋಮೇಶ್ವರನು. ॥೧೭೦॥

೬೨೭

ಜಗದಗಲದ ಬಲೆಯನಗಲಬಲ್ಲರ ಕಾಣೆ,
ಮುಗಿಲುದ್ದದಂಬರವನುಗಿಯಬಲ್ಲರ ಕಾಣೆ,
ಹಗಲಿರುಳ ಸೀಮೆಯ ಮಿಗೆ ಮೀರುವರ ಕಾಣೆ,
ತೆಗೆದಿಪ್ಪ ಶುನಕನ ಬಗೆಯ ಬಲ್ಲವರ ಕಾಣೆ.
ಅಗಡಾನೆ ಬಿಗಿದು ಬಲ್ಪಿಡಿಯಿತ್ತಲ್ಲಾ ಜಗವೆಲ್ಲವ.
ಸೌರಾಷ್ಟ್ರ ಸೋಮೇಶ್ವರನ ನಿಜವನರಿಯದೆ
ಮುಳುಗಿದರಲ್ಲಾ ಮುಪ್ಪುರದಲ್ಲಿ. ॥೧೭೧॥

೬೨೮

ಜಗಭರಿತಲಿಂಗ ಶರಣಭರಿತಲಿಂಗ ನಾಮರಹಿತಲಿಂಗ:
ಜಗಭರಿತಲಿಂಗವೆಂದು, 'ಸರ್ವಂ ಖಲ್ವಿದಂ ಬ್ರಹ್ಮ' ವೆಂಬವಿಶ್ವಬ್ರಹ್ಮ.
ಶರಣಭರಿತಲಿಂಗವೆಂದು, 'ಏಕ ಏವ ದೇವೋ ನ ದ್ವಿತೀಯಃ' ವೆಂಬ ತಾರಕಬ್ರಹ್ಮ.
ನಾಮರಹಿತಲಿಂಗವೆಂದು, 'ಚಕಿತಮಭಿಧತ್ತೇ ಶ್ರುತಿರಪಿ' ಯೆಂಬ ಪರಬ್ರಹ್ಮ.
ಇಂತೀ ತ್ರಿವಿಧಬ್ರಹ್ಮ ಏಕಬ್ರಹ್ಮ ನೀನೇ
ಸೌರಾಷ್ಟ್ರ ಸೋಮೇಶ್ವರಾ. ॥೧೭೨॥

೬೨೯

[1]ಜಪತಪ[1] ನೇಮವಲ್ಲ, ಮಂತ್ರತಂತ್ರ ನೇಮವಲ್ಲ,
ಧೂಪದೀಪಾರತಿ ನೇಮವಲ್ಲ,
ಪರಧನ, ಪರಸ್ತ್ರೀ, ಪರದೈವಂಗಳಿಗೆರಗದಿಪ್ಪುದೆ ನೇಮ.
[2]ಸೌರಾಷ್ಟ್ರ ಸೋಮೇಶ್ವರಲಿಂಗವಲ್ಲಿದ್ದ ಕಾರಣ[2] ನಿತ್ಯನೇಮ. ॥೧೭೩॥

೬೩೦

ಜಿಹ್ವೆ ಗುಹ್ಯೇಂದ್ರಿಯದಿಚ್ಛೆಯುಳ್ಳನ್ನಕ್ಕ ಜಂಗಮವಲ್ಲ,
ಪುತ್ರ ಮಿತ್ರ ಕಳತ್ರದಲ್ಲಿಯ ಮೋಹವುಳ್ಳನ್ನಕ್ಕ ಭಕ್ತನಲ್ಲ,
ಮಾತಿನ ಮಾಲೆಯ ಹೆಚ್ಚು ಕುಂದಿನ
ಹೋರಟೆಯುಳ್ಳನ್ನಕ್ಕ ಅದ್ವೈತಿಯಲ್ಲ,
ಅಂಗ ಪ್ರಾಣದಾಶೆಯುಳ್ಳನ್ನಕ್ಕ ನಿಸ್ಪೃಹನಲ್ಲ.
ಸೌರಾಷ್ಟ್ರ ಸೋಮೇಶ್ವರಲಿಂಗವನರಿಯದನ್ನಕ್ಕ
ಸ್ವಯಾನುಭವಿಯಲ್ಲ. ॥೧೭೪॥

೧-೧ ಅರ್ಚನೆ ಪೂಜನೆ(ಸತ್ಯಕ್ಕ) ೨-೨ ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ(ಸತ್ಯಕ್ಕ)

೯೩೧
ಜೀವಂಗೆ ಜೀವವಾದಾತನೆ ಪರಮಾತ್ಮನು, ಪರಬ್ರಹ್ಮವು.
ಉಪಮೆಗೆ ಉಪಮಾತೀತ, ಭಾವಕ್ಕೆ ಭಾವಾತೀತ,
ಅರಿವಿಂಗೆ ಅಗೋಚರ ಅತರ್ಕ್ಯನಗಣಿತನಪ್ರಮೇಯ
ನಿತ್ಯನಿರಂಜನ ನೀನೇ ಸೌರಾಷ್ಟ್ರ ಸೋಮೇಶ್ವರಾ. ॥೧೭೫॥

೯೩೨
ಜೀವಭಾವದ ಹಂಸ ಜಪದಲ್ಲಿ ದ್ವಾದಶಾಂತ ಕೂಡಿ ಶಿವಜಪವಾಯಿತ್ತು.
ಆ ಶಿವಜಪದಲ್ಲಿಯೇ ಪ್ರಣವವಡಕವಾಗಿಪ್ಪುದು. ಇದಕ್ಕೆ ಶ್ರುತಿ:
"ತದ್ಯೋ ಹಂಸಃ ಸೋಹಂ ಯೋಸೌಸೋಹಂ"
ಆ ಪ್ರಣವದ ನಿರಾಳದಾದಿಬಿಂದು,
ಆ ಬಿಂದುವಿನ ಸ್ವಯಂಪ್ರಕಾಶಲಿಂಗವೇ ತಾವಾಗಿಪ್ಪರಯ್ಯಾ,
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು. ॥೧೭೬॥

೯೩೩
ಜ್ಞಾತೃಸ್ವರೂಪದಿಂದರುಹಿಸುವ ಬುದ್ಧಿ,
ಜ್ಞಾನಸ್ವರೂಪದಿಂದರಿವ ಚಕ್ಷುರಾದಿಂದ್ರಿಯ,
[ಜ್ಞೇಯ] ಸ್ವರೂಪದಿಂದರುಹಿಸಿಕೊಂಬ
ವಿಷಯಂಗಳಿಗೊಳಗಹುದೆ ಆ ಪರಬ್ರಹ್ಮವು?
ಇಂತೀ ತ್ರಿಪುಟಿರಹಿತವಾದರಿವನರಿತಲ್ಲದೆ
ಸೌರಾಷ್ಟ್ರ ಸೋಮೇಶ್ವರಲಿಂಗವನರಿಯಬಾರದು. ॥೧೭೭॥

೯೩೪
ಜ್ಞಾನಕಾಯಂಗೆ ಬರುಕಾಯವಿಲ್ಲ,
ಅರುಹಿನ ಮುಂದಣ ಕುರುಹು ಅರುವನವಗ್ರಹಿಸಿ
ಜ್ಞಾನ ನಿಃಪತಿಯಾಯಿತ್ತು.
ಸೌರಾಷ್ಟ್ರ ಸೋಮೇಶ್ವರಲಿಂಗವೆಂಬ ಕುರುಹ ಮರೆದ ಕಾರಣ.
ನಿಶ್ಶೂನ್ಯ ನಿರ್ಗಮನವಾಯಿತ್ತು. ॥೧೭೮॥

೯೩೫
ಟಿಕ್ಕೆಯೊಳಗೆ ಮಾಣಿಕ್ಯ ಉಂಟೆ ಅಯ್ಯಾ?
ರಾಮಠದಲ್ಲಿ ಮೃಗನಾಭಿಯುಂಟೆ ಅಯ್ಯಾ?
ಕಲ್ಲಮೊರಡಿಯೊಳಗೆ ಚಿಲುಮೆಯಗ್ಗವಣಿಯುಂಟೆ ಅಯ್ಯಾ?

ಸರ್ವ ದುರ್ಗುಣಿಯಾನು, ಎನ್ನಲ್ಲಿ ಆವ ಗುಣವನರಸುವಿರಿ?
ನೀನೇ ಕೃಪೆ ಮಾಡಯ್ಯಾ, ಸದ್ಗುರುವೆ ಸೌರಾಷ್ಟ್ರ ಸೋಮೇಶ್ವರಾ ॥೧೭೯॥

೯೩೬

ಟಿಕ್ಕೆಯಲ್ಲಿ ಮಾಣಿಕವನರಸಲುಂಟೆ?
ರೀತಿಕೆಯಲ್ಲಿ ಸುವರ್ಣವನರಸಲುಂಟೆ?
ರಾಮಠದಲ್ಲಿ ಮೃಗನಾಭಿಯನರಸಲುಂಟೆ?
ಅಬಲಲ್ಲಿ ಪದ್ಮಪತ್ರವನರಸಲುಂಟೆ?
ಹಾವುಮೆಕ್ಕೆಯಲ್ಲಿ ದ್ರಾಕ್ಷಾಫಲವನರಸಲುಂಟೆ?
ಹೆಮ್ಮರದಲ್ಲಿ ಸುಗಂಧವನರಸಲುಂಟೆ?
ಅಂಗಭೇದ ವಿಮೂಢರಲ್ಲಿ ಆತ್ಮಜ್ಞಾನವನರಸಲುಂಟೆ?
ದೂರಶ್ರವಣ ದೂರದೃಷ್ಟಿಯವರಲ್ಲಿ ಸಮ್ಯಕ್‌ದೃಕ್ಕನರಸಲುಂಟೆ?
ಸಮ್ಯಕ್‌ಜ್ಞಾನವಿಲ್ಲದವರಲ್ಲಿ ಲಿಂಗವನರಸಲುಂಟೆ?
ಸೌರಾಷ್ಟ್ರ ಸೋಮೇಶ್ವರನ ನಿಜವನರಿಯದವರಲ್ಲಿ
ನಿಜಸುಖವನರಸಲುಂಟೆ? ॥೧೮೦॥

೯೩೭

ತತ್ವಮೂವತ್ತಾರ ಮೀರಿ ನಾದಬಿಂದುಕಳಾತೀತನಾದ ಶಿವನು ಜಗನ್ಮಯನಾದ.
ಆಗಿಯೂ ಜಗದ ಸ್ಥಿತಿಗತಿ ತನಗಿಲ್ಲವದೆಂತೆಂದಡೆ:
"ಏಕ ಏವ ಹಿ ಭೂತಾತ್ಮಾ ಭೂತೇಷು ಸುವ್ಯವಸ್ಥಿತಃ
ಏಕಧಾ ಬಹುಧಾ ಚೈವ ದೃಶ್ಯತೇ ಜಲಚಂದ್ರವತ್" ಎಂದುದಾಗಿ,
ಜಲದೊಳಗೆ ಸೂರ್ಯನ ಪ್ರತಿಬಿಂಬ ವಿಕಾರಿಸುತಿರ್ದಡೇನು?
ಆ ವಿಕಾರ ಜಲಕ್ಕಲ್ಲದೆ ಸೂರ್ಯಂಗಿಲ್ಲದಂತಿಪ್ಪನಯ್ಯಾ
ಸೌರಾಷ್ಟ್ರ ಸೋಮೇಶ್ವರಾ. ॥೧೮೧॥

೯೩೮

ತನಗೊಬ್ಬರು ಮುನಿದರು ತಾನಾರಿಗೂ ಮುನಿಯಲಾಗದು.
ಮನೆಯ ಕಿಚ್ಚು ಮೊದಲೊಮ್ಮೆ ಮನೆಯ ಸುಡುವಂತೆ
ತನ್ನ ಕೋಪ ತನ್ನನೆ ಸುಡುವುದು ನೋಡಯ್ಯ.
ಸವಿಮಾತುಗಳು ಬೇಗದಿಂದ ಆ ಕ್ರೋಧವ [ಗೆಲಿದಿರ್ಪುದು] ಸಾಕ್ಷಿ:
"ಸಶ್ರುತಃ ಸಾತ್ವಿಕೋ ವಿದ್ವಾನ್ ಸ ತಪಸ್ವೀ ಜಿತೇಂದ್ರಿಯಃ
ಯೇನ ಶಾಂತೇನ ಖಡ್ಗೇನ ಕ್ರೋಧಶತ್ರುರ್ನಿಪಾದಿತಃ"
ಇಂತೆಂದುದಾಗಿ, ಆ ಕ್ರೋಧ ದುರ್ಜನರ ಗೆಲುವುದು.

ಇಂತೀ ಸೋತುದಕ್ಕೆ ಸೋತವರ ಕೂಡೆ ಎತ್ತಣ ವಿರೋಧವಯ್ಯ?
ಸೌರಾಷ್ಟ್ರ ಸೋಮೇಶ್ವರನ ಶರಣರು
ಸಚರಾಚರಪ್ರಾಣಿಗಳಲ್ಲಿ ವಿರೋಧವಿಲ್ಲದಿರಬೇಕು. ॥೧೮೨॥

೯೩೯
ತನ್ನ ತಾನರಿವುದೇನೋ, ತನ್ನ ತಾ ಮರೆವುದು ಮತ್ತದೇನೋ?
ಅರಿವುದು ಒಂದೆ, ತನ್ನನರಿಯಲುಂಟೆ?
ಅರಿವು ತಾನೆ ತನ್ನ ಮರೆಯಲುಂಟೆ?
ಆ ಅರಿವು ತಾನೆಂದರಿತಂಗೆ ಮೂರಿಲ್ಲ ಆರಿಲ್ಲ, ಎಂಟಿಲ್ಲ ಹದಿನೆಂಟಿಲ್ಲ.
ಮುಸಿ ತನ್ನ ಭ್ರಾಮಕದಿಂದ ತೋರಿತ್ತು ನೋಡಾ.
ಸೌರಾಷ್ಟ್ರ ಸೋಮೇಶ್ವರಲಿಂಗವಿಪ್ಪುದಕ್ಕೆ ಇದು ಚಿಹ್ನ. ॥೧೮೩॥

೯೪೦
ತನ್ನನೆ ಅರ್ಪಿಸಿಹ ಶರಣಂಗೆ ಲಿಂಗವೆಂದೂ ಭಿನ್ನವಿಲ್ಲ ನೋಡಯ್ಯಾ.
ಇಂತಪ್ಪ ಶರಣನು ಎಲ್ಲಾ ಸಕಾಯ ಸಹ ಮರಳಿಯೂ
ಲಿಂಗ ಸಹಭೋಜನವ ಮಾಡುವ. ಇದಕ್ಕೆ ಶ್ರುತಿ:
"ಪರಮಂ ಬ್ರಹ್ಮವೇದಸ್ಯೋಶ್ನುತೇ ಸರ್ವಾನ್ ಕಾಮಾನ್ ಸಹಬ್ರಹ್ಮಣಾವಿಪಶ್ಚಿತಾ"
ಇಂತೆಂದುದಾಗಿ,
ಸೌರಾಷ್ಟ್ರ ಸೋಮೇಶ್ವರನ ಶರಣರಿಗೆ
ಲಿಂಗದೊಡನೆ ಸಹಭೋಜನವಯ್ಯಾ. ॥೧೮೪॥

೯೪೧
ತನು ಒದಗಿದಲ್ಲಿ ಮನವಾಯಿತ್ತು, ಮನ ವೇಧಿಸಿ ಭಾವವಾಯಿತ್ತು,
ಭಾವ ವೇಧಿಸಿ ಜ್ಞಾನವಾಯಿತ್ತು, ಜ್ಞಾನ ವೇಧಿಸಿ ಲಿಂಗವಾಯಿತ್ತು,
ಲಿಂಗ ವೇಧಿಸಿ ಪರಿಪೂರ್ಣವಾಯಿತ್ತು,
ಸೌರಾಷ್ಟ್ರ ಸೋಮೇಶ್ವರ ಎಂಬ ನುಡಿಗೆಡೆ ಇಲ್ಲವಾಯಿತ್ತು. ॥೧೮೫॥

೯೪೨
ತನುಕರಣ ಭುವನಭೋಗಂಗಳ ಶಕ್ತಿಯುಳ್ಳನ್ನಕ್ಕ
ರೋಷದ ಪಾಶ ಬಿಡದು ನೋಡಯ್ಯಾ.
ಕರ್ಮಕ್ಷಯವಾಗದೆ ಜನ್ಮಜರಾಮರಣಂಗಳುಳ್ಳನ್ನಕ್ಕ
ಬಿಂದುಪಾಶ ಬಿಡದು ನೋಡಯ್ಯಾ.
ಅಭಿಮಾನವೆರಸಿ ಆನೆಂಬಹಂಕಾರವುಳ್ಳನ್ನಕ್ಕ

ಕರ್ಮಪಾಶ ಬಿಡದು ನೋಡಯ್ಯಾ.
ಕಾಯಭಾವವುಳ್ಳನ್ನಕ್ಕ ಮಾಯಾಪಾಶ ಬಿಡದು ನೋಡಯ್ಯಾ.
ಪರಮಶಿವನ ಸ್ವಯಂಪ್ರಕಾಶ ಕಾಣಿಸದನ್ನಕ್ಕ
ಮಲಪಾಶ ಬಿಡದು ನೋಡಯ್ಯಾ.
ಇಂತೀ ಪಂಚಪಾಶಪ್ರಪಂಚುಳ್ಳನ್ನಕ್ಕ ಸೌರಾಷ್ಟ್ರಸೋಮೇಶ್ವರಲಿಂಗವ ಕೂಡಿ
ತಾನಾಗಬಾರದು ವಾಗದ್ವೈತಿಗಳಿಗೆ. ॥೧೮೬॥

೯೪೩

ತನುಗುಣ ಮನಗುಣ ಪ್ರಾಣಗುಣಾದಿಗಳಲ್ಲಿ ಹುದುಗಿದಡೆ,
ಪಂಚೇಂದ್ರಿಯ ಅರಿಷಡ್ವರ್ಗಂಗಳೊಳು ಮನ ಕೂರ್ತು ಬೆರಸಿದಲ್ಲಿ,
ಆ ಮನದ ಹಸ್ತದಲ್ಲಿ ಲಿಂಗವಿಲ್ಲ.
ಲಿಂಗವಿಲ್ಲವಾಗಿ ಭಕ್ತಿಯಿಲ್ಲ, ಭಕ್ತಿಯಿಲ್ಲವಾಗಿ ವಿವೇಕವಿಲ್ಲ,
ವಿವೇಕವಿಲ್ಲವಾಗಿ ಅರಿವಿಲ್ಲ, ಅರಿವಿಲ್ಲವಾಗಿ ಸುಜ್ಞಾನವಿಲ್ಲ,
ಸುಜ್ಞಾನವಿಲ್ಲವಾಗಿ ಪರಮಾರ್ಥ ಘಟಿಸದು.
ಇವೆಲ್ಲವ ಕಳೆದುಳಿದಲ್ಲಿ ಮನದ ಹಸ್ತದಲ್ಲಿ ಲಿಂಗವಿದ್ದಿತ್ತು,
ಲಿಂಗದಲ್ಲಿ ಮನ ಸಂದಿತ್ತು,
ಮನ ಸಂದಲ್ಲಿ ಸೌರಾಷ್ಟ್ರ ಸೋಮೇಶ್ವರ ಸ್ವಸ್ಥಿರವಾದನು. ॥೧೮೭॥

೯೪೪

ತನುಗುಣ ಮನಗುಣ ಪ್ರಾಣಗುಣಾದಿಗಳು ಹುಸಿಯೆಂಬ
ಜ್ಞಾನವೇ ಮೂಲದ್ರವ್ಯವಾಗಿ
"ಆತ್ಮಾವ್ಯಾರೇ ದೃಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ"
ಇಂತೆಂಬ ಮಂತ್ರಾರ್ಥವ ಮೀರಿ
"ನಮೋ ಹಿರಣ್ಯಬಾಹವೇ ಹಿರಣ್ಯವರ್ಣಾಯ ಹಿರಣ್ಯರೂಪಾಯ
ಹಿರಣ್ಯಪತಯೇ ಅಂಬಿಕಾಪತಯೇ ಉಮಾಪತಯೇ
ಪಶುಪತಯೇ ನಮೋ ನಮಃ"
ಇಂತೆಂಬ ಶ್ರುತ್ಯರ್ಥವೇ ಪರಮಾರ್ಥವಾಗಿ
ಸೌರಾಷ್ಟ್ರ ಸೋಮೇಶ್ವರಲಿಂಗದರ್ಥ ಸದರ್ಥವಾಯಿತ್ತು. ॥೧೮೮॥

೯೪೫

ತನುಗುಣವಳಿದಲ್ಲಿ ತ್ಯಾಗಾಂಗ,
ಲಿಂಗದೊಡನೆ ಸಕಲಭೋಗಂಗಳ ಭೋಗಿಸುವಲ್ಲಿ ಭೋಗಾಂಗ,
ನಿಜದಲ್ಲಿ ಬೆರಸಿದಲ್ಲಿ ಯೋಗಾಂಗ.

ಇಂತೀ ತ್ರಿವಿಧದಲ್ಲಿಯೆ ಶಿವಯೋಗಾಂಗ.
ಇದಲ್ಲದನ್ಯಯೋಗಂಗಳೆಲ್ಲಾ ವಿಯೋಗಂಗಳಯ್ಯಾ
ಸೌರಾಷ್ಟ್ರ ಸೋಮೇಶ್ವರಾ. ॥೧೮೯॥

೯೪೬
ತನುಗುಣವಳಿದಾತನಲ್ಲದೆ ಭಕ್ತನಲ್ಲ,
ಮನೋಗುಣವಳಿದಾತನಲ್ಲದೆ ಮಹೇಶ್ವರನಲ್ಲ
ಪ್ರಕೃತಿಗುಣರಹಿತನಾದಾತನಲ್ಲದೆ ಪ್ರಸಾದಿಯಲ್ಲ,
ಪ್ರಾಣಗುಣವನಳಿದಾತನಲ್ಲದೆ ಪ್ರಾಣಲಿಂಗಿಯಲ್ಲ,
ಶಬ್ದದುದ್ದೇಶವಳಿದಾತನಲ್ಲದೆ ಶರಣನಲ್ಲ,
ಆತ್ಮನ ನೆಲೆಯನರಿದಾತನಲ್ಲದೆ ಐಕ್ಯನಲ್ಲ.
ಇಂತೀ ಷಡಂಗಕ್ಕೆ ಅತೀತವಾದಲ್ಲದೆ
ಸೌರಾಷ್ಟ್ರ ಸೋಮೇಶ್ವರಲಿಂಗ ಸನ್ನಿಹಿತನಲ್ಲ. ॥೧೯೦॥

೯೪೭
ತನುಗುಣವಿರಹಿತ ಗಮನರಹಿತ ಅನುಪಮಜ್ಞಾನಸನ್ನಿಹಿತ ಶರಣ,
ನೋಡಿದುದೆಲ್ಲವೂ ಪ್ರಸಾದ, ನುಡಿದುದೆಲ್ಲವೂ ಪ್ರಸಾದ,
ಸೋಂಕಿದುದೆಲ್ಲವೂ ಪ್ರಸಾದವಯ್ಯಾ,
ಸೌರಾಷ್ಟ್ರ ಸೋಮೇಶ್ವರಲಿಂಗದ ಪ್ರಸಾದಿಗೆ. ॥೧೯೧॥

೯೪೮
ತನುಭಾವವಳಿದು ಲಿಂಗಾನುಭಾವದಲ್ಲಿ ನಿಲಲರಿಯದೆ
ದೇಹೋಹಂ ಎಂದು
ಅಜಡವಪ್ಪ ಶಿವನನರಿಯದೆ,
ಜಡವಪ್ಪ ತನುಕರಣಭೋಗಭುವನಂಗಳನೆ ಕಂಡು
ಭಾವ ಭ್ರಮೆಗೊಂಡುದಕ್ಕೆ ಶ್ರುತಿ:
"ಅತೋ ದೃಶ್ಯಮಿದಂ ಭ್ರಾಂತಂ ದೇಹ್ಯೋಹಂಭಾವಜಡತಾ"
ಎಂದುದಾಗಿ, ಇಂತಪ್ಪ ಶಿವಜ್ಞಾನವಿಹೀನರು
ಸೌರಾಷ್ಟ್ರ ಸೋಮೇಶ್ವರಲಿಂಗಕ್ಕೆ ಸಲ್ಲದೆ ಹೋದರು. ॥೧೯೨॥

೯೪೯
ತನುಮನಧನ ತನ್ನವೆಂಬ ಬಳಕೆಯಳಿದು,
ಹಿಡಿವಲ್ಲಿ ಬಿಡುವಲ್ಲಿ ತಾನೆಂಬ ಭಾವ ತಲೆದೋರದೆ,

ಶಿವನೆ ಸ್ವಾಮಿಯೆಂದು ಒಡೆಯರೊಡವೆಯ ಒಡೆಯರಿಗೊಪ್ಪಿಸುವಾಳಿನಂತೆ
ತನುಮನಧನವ ಗುರುಲಿಂಗಜಂಗಮಕ್ಕೆ ಜ್ಞಾನದ ಕರದಲ್ಲಿ ನೀಡಿ,
ಲಿಂಗದಲ್ಲಿ ಏನೊಂದುವ ಬಯಸದೆ, ನಿರುಪಾಧಿಕ ದಾಸೋಹಿ ತಾನಾಗಿ,
ಖ್ಯಾತಿಲಾಭದ ಪೂಜೆಯ ಹೊಗದೆ,
ಶಿವಶರಣರಲ್ಲಿ ಗೆಲ್ಲವಳಿದು ಸೋಲವಳವಟ್ಟು,
ಹಮ್ಮಳಿದು ವಿನಯಗುಂದದೆ
ಅಂಗಭೀತಿ ಮಾನಭೀತಿ ಪ್ರಾಣಭೀತಿಯ ಬಿಟ್ಟು, ನಿರ್ಭೀತಿಯಳವಟ್ಟು
ಆನು ನಿಮ್ಮೊಳು ಎರಡಳಿದಿರ್ಪಂತಿರಿಸಯ್ಯಾ
ಸೌರಾಷ್ಟ್ರ ಸೋಮೇಶ್ವರಾ. ॥೧೯೩॥

೯೩೦
ತನು ಮನ ಧನದ ಲೋಭ ಎನಗೇಕೋ?
ಅರ್ಥಪ್ರಾಣ ಅಭಿಮಾನಂಗಳ ತಾತ್ಪರ್ಯ ಎನಗೇಕೋ?
ಪುತ್ರ ಮಿತ್ರ ಕಳತ್ರ ಭೃತ್ಯ ಭ್ರಾತ್ರಾದಿಗಳ ಹಂಗು ಎನಗೇಕೋ?
ಸೌರಾಷ್ಟ್ರ ಸೋಮೇಶ್ವರಾ,
ನಿನಗೆ ಎನ್ನ ಹಂಗಿಲ್ಲವಾಗಿ, ಎನಗಿವರ ಹಂಗಿಲ್ಲ. ॥೧೯೪॥

೯೩೧
ತನು ಮನ ನೆನಹು, ಹಲವು ನೆನಹಾಗಿ ಜನಿಸಬಲ್ಲವೆ ಆತ್ಮನಿಲ್ಲದಿರಲು?
ಉರಿಯಂತಲ್ಲ, ಹಿರಿದಪ್ಪ ನೆಳಲಂತಲ್ಲ, ಜಗದಂತಲ್ಲ, ಮುಗಿಲಂತಲ್ಲ.
ಇರುಹೆ ಮೊದಲಾದ ಎಂಬತ್ತುನಾಲ್ಕು ಲಕ್ಷ ಜೀವಜಂತುಗಳಂತಲ್ಲ.
ಇವ ಬಿಟ್ಟು ಬೇರೊಂದೆಡೆಯಲಿಪ್ಪುದಲ್ಲ.
ತೆರಹಿಲ್ಲದಾತ್ಮಂಗೆ ಕುರುಹೊಂದಿಲ್ಲವಾಗಿ
ತೋರಲಿಲ್ಲದಾತ್ಮನ ಬೀರಲಿಲ್ಲಾರಿಗೂ.
ನಿಶ್ಶಬ್ದದಿಂ ಶಬ್ದ ಜನಿಸಿ, ಆ ಶಬ್ದ ನಿಶ್ಶಬ್ದದಲ್ಲಿಯೇ ಲಯವಪ್ಪಂತೆ.
ಮಾನವಾತ್ಮನ ತಿಳಿವರಿವೆ ತಿಳಿವು.
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ
ತನ್ನ ತಾನೇ ತನ್ನಿಂ ತನ್ನ ಬೆ[ಳೆ]ಯಬೇಕಯ್ಯಾ ಮಲ್ಲಿಕಾರ್ಜುನಾ. ॥೧೯೫॥

೯೩೨
ತನು ಮಾಯೆ, ತನುವಿಂಗೆ ಮನ ಮಾಯೆ,
ಮನಕ್ಕೆ ನೆನಹು ಮಾಯೆ, ನೆನಹಿಂಗೆ ಅರಿವು ಮಾಯೆ,
ಅರಿವಿಂಗೆ ಕುರುಹು ಮಾಯೆ.

ಇದನರಿಯದೆ ಹರಿಹರಬ್ರಹ್ಮಾದಿಗಳೆಲ್ಲರೂ
ಮಾಯೆಯ ಕಾಲ ಸರಗಾಲೆಗಳಾದರು.
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಮಾಯೆ
ದೇವದಾನವಮಾನವರಿಗೆ ದಸರಿದೊಡಕಾಗಿ ಕಾಡಿತ್ತು. ॥೧೯೬॥

೯೫೩
ತನುಮುಟ್ಟಿ ಮನಮುಟ್ಟದೆ ಒಂದೊಂದನೆ ನೆನೆದು
ಮುಟ್ಟಿಮುಟ್ಟಿ ಅರ್ಪಿಸಿ ಪ್ರಸಾದವಾಯಿತ್ತೆಂದು
ಕೊಳ್ಳಬಹುದೆ ಅನರ್ಪಿತವ?
'ಅರ್ಪಿತಾನರ್ಪಿತಂ ನಾಸ್ತಿ ಇತಿ ಭೇದಂ ಸಮರ್ಪಿತಂ'
ಎಂಬ ಈ ಸಕೀಲಸಂಬಂಧವನರಿತು ಅರ್ಪಿಸಿಕೊಳ್ಳದೆ,
ಅನರ್ಪಿತವ ಮುಟ್ಟದೆ, ರೂಪು ರುಚಿಯ ಹೊರದೆ,
ಸಂಗಸುಖದ ಸೋಂಕು ತನುವ ಸೋಂಕದ ಮುನ್ನವೆ,
ಷಡುರಸಾದಿಗಳು ಮನವ ಸೋಂಕದ ಮುನ್ನವೆ,
ಪರಿಪೂರ್ಣಭಾವಿ ತಾನಾಗಿ ಲಿಂಗಭಾವವಂಗವಾದಲ್ಲದೆ
ಸೌರಾಷ್ಟ್ರ ಸೋಮೇಶ್ವರಲಿಂಗದ ಪ್ರಸಾದ ದೊರಕೊಳ್ಳದು. ॥೧೯೭॥

೯೫೪
ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ,
ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷೆ,
ವಿಷಯಂಗಳಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ,
ಜ್ಞಾನದಲ್ಲಿ ಪರಮಾನಂದವೆಡೆಗೊಂಡ ಬಳಿಕ
ಸೌರಾಷ್ಟ್ರ ಸೋಮೇಶ್ವರನೆಂಬ ಲಿಂಗವು ಬೇರಿಲ್ಲ ಕಾಣಿರೆ. ॥೧೯೮॥

೯೫೫
ತನುವಿನಿಂ ಮನ ಜನಿಸಿ,
ಮನದಿಂ ಹಲವು ನೆನಹುಗಳು ಜನಿಸಿದವಲ್ಲದೆ,
ಅವನಿಲ್ಲದಷ್ಟಪುತ್ರರೆಂದೇನು? ನಡೆ ನುಡಿಯೊಳಗಲ್ಲವೆ ಎನುಹಿರಿ,
ಉರಿಯ ಕಾರಣವೊ?
ಹಿರಿದಪ್ಪ ನೆಳಲು ಮಾತ್ರದಿಂದ ತೋರುವದೊ?
ವ್ಯೋಮದಂಥಾದಲ್ಲ, ಸೀಮೆ ಮುನ್ನಲಿಲ್ಲ.
ನೇಮಿಸುವ ಪರಿಯದೆಂತೊ?
ನಾಮವಿಟ್ಟರಿಯದ ಮುನ್ನ ಅರಿಯಲಿಲ್ಲ,

ಹೇಳಲಿಲ್ಲದುದ ಮುನ್ನ ಕೇಳಲಿಲ್ಲ.
ಪಂಚಾಂಗ ಮಧ್ಯದಲ್ಲಿಪ್ಪ ಮನವಲ್ಲ.
ವಾಙ್ಮನಕ್ಕಗೋಚರವೆಂದ ಬಳಿಕ ನಾಮವಿಡಲಿಲ್ಲ ಕಾಣಾ,
ನಿಃಕಳಂಕ ಶಾಂತಮಲ್ಲಿಕಾರ್ಜುನ ದೇವರೆಂಬ ನಾಮ
ನಿಶ್ಶಬ್ದದಲ್ಲಿಯರಿ[ಯೆ] ಕಾಣಾ, ಸೌರಾಷ್ಟ್ರ ಸೋಮೇಶ್ವರಾ. ॥೧೯೯॥

೯೫೬

ತನುವೆಂಬ ಮನೆಗೆ ಅಸ್ಥಿಯ ಗಳು, ನರದ ಭೀಮಗಟ್ಟು,
ಮೂರುವರೆಕೋಟಿ ರೋಮಂಗಳ ಹೊದಿಕೆ,
ಮಾಂಸದ ಭಿತ್ತಿಗೆ, ಶುಕ್ಲದ ನೆಲಗಟ್ಟು,
ರಕ್ತದ ಸಾರಣೆ, ಮಜ್ಜೆಯ ಕಾರಣೆ,
ನೇತ್ರ ಶ್ರೋತ್ರ ಘ್ರಾಣ ಗುದ ಗುಹ್ಯವೆಂಬವೇ ಗವಾಕ್ಷ,
ಬಾಯ ಬಾಗಿಲಿಗೆ ಅಧರದ ತಾರುಗದ, ದಂತದ ಅಗುಳಿ,
ಇಂತಪ್ಪ ಗೃಹಕ್ಕೆ ದ್ರವ್ಯವಾವದೆಂದಡೆ:
ಕಫ ಪೈತ್ಯವೆಂಬ ಸಯದಾನ, ಸ್ವೇದವೆಂಬ ಅಗ್ಘವಣಿ,
ಅನ್ನಪಾನಂಗಳೆಂಬ ಕಟ್ಟಿಗೆ, ಉದರಾಗ್ನಿಯಿಂ ಪಾಕವಾಗುತ್ತಂ ಇರಲು,
ಅನುಭವಿಸುವ ಜೀವನು ಮಲಮೂತ್ರವೆಂಬ ವಿತ್ತ
ಇಪ್ಪತ್ತೆರಡು ಸಾವಿರನಾಳದಿಂ ಪ್ರಯವಪ್ಪುದು.
ನಿಲಯಾಧಿಪನೆಂಬ ಜೀವಂಗೆ ಮನವೆಂಬ ಸತಿ
ತನ್ಮಾತ್ರೆಗಳೆಂಬ ಸುತರು
ಇಂತಪ್ಪ ಸಂಸಾರಸಾಮಗ್ರಿಯಿಂ ಜೀವಿಸುತ್ತಿರಲು,
ಕಾಲಚಕ್ರಂಗಳು ತಿರುಗಲೊಡನೆ ಜ್ಞಾನಾಗ್ನಿಯಿಂ ಮನೆ ಬೆಂದು,
ಎಲ್ಲರು ಪ್ರಳಯಕ್ಕೊಳಗಾದರು.
ಆನೊಬ್ಬನೆ ಲಿಂಗಸಂಗಿಯಾಗಿ ಉಳಿದೆ ನೋಡಯ್ಯಾ,
ಸೌರಾಷ್ಟ್ರ ಸೋಮೇಶ್ವರಾ. ॥೨೦೦॥

೯೫೭

ತನು ಸೋಂಕಿ ಅರ್ಪಿಸುವುದೇ ಸಂದೇಹ,
ಮನ ಸೋಂಕಿ ಅರ್ಪಿಸುವುದೇ ಸಂಕಲ್ಪ,
ಭಾವ ಸೋಂಕದ ಮುನ್ನವೆ ಲಿಂಗ ಸೋಂಕಿ ಬಂದುದೇ ಅಚ್ಚಪ್ರಸಾದವಯ್ಯಾ!
ಇಂತಪ್ಪ ಪ್ರಸಾದಗ್ರಾಹಿಗಳನೆನಗೊಮ್ಮೆ ತೋರಿಸಾ
ಸೌರಾಷ್ಟ್ರ ಸೋಮೇಶ್ವರಾ. ॥೨೦೧॥

೯೫೮

ತಮೋಗುಣವೆಂಬ ಮಯಣದಲ್ಲಿ ರಜೋಗುಣವೆಂಬ ರಜವನೆತ್ತಿ
ಸತ್ವಗುಣವೆಂಬ ಹಸ್ತದಿಂ ಪಿಡಿದು, ಬೋಧವೆಂಬ ನೇತ್ರದಿಂ ಕಂಡು,
ಮಾಯಾ ಜೀವರ ಎರಡೊರೆಗೆ ಸರಿಯೆಂದು ಕಳೆದು,
ತ್ರಿವಿಧಾಹಂಕಾರದಲ್ಲಿಯ ತಾಮಸಾಹಂಕಾರವಪ್ಪ ಮಯಣವ
ಶಿವಜ್ಞಾನದಿಂ ಕರಗಿಸಿ, ರಾಜಸಾಹಂಕಾರವಪ್ಪ ರಜವ ತೆಗೆದು,
ಸಾತ್ವಿಕದಲ್ಲಿ ನಿಂದ ದ್ರವ್ಯವ ಸೌರಾಷ್ಟ್ರ ಸೋಮೇಶ್ವರಂಗಿತ್ತು,
ಮೂಲಾಹಂಕಾರ ನಷ್ಟವಾಯಿತ್ತು. ॥೨೦೨॥

೯೫೯

ತಲೆಯಿಲ್ಲದ ಕಾಗೆ ನೆಲದಲ್ಲಿ ನಡೆಯಿತ್ತು.
ಹುಲಿ ನಲಿದು ಗಿಲಿಗಿಲಿಸಿ ಗೆಜ್ಜೆಗಟ್ಟಿ ಒಲೆದಾಡಿತ್ತು.
ಬಲುಹೆನಿಸಿದ ಕರಡಿ ಹಾಡಿ ಹರಸಿ ಬೆಳೆಯಿತ್ತು.
ಕಾಳರಕ್ಕಸಿಯ ಮಗುವು ಚಂದ್ರಸೂರ್ಯರ ರಾಟಾಳದ
ಹುರಿಯೊಳಗೆ ತಿರಿಗಿತ್ತು.
ಕಳವಳಿಸುವ ಕಪಿಯ ಭೂತ ಹೊಡೆದು,
ಚೇಳೂರೆ ಗಾಳಿಯೊಳು ಸಿಕ್ಕಿ, ಸೌರಾಷ್ಟ್ರ ಸೋಮೇಶ್ವರನ ಕಾಣದೆ
ಕನ್ನಡಕದ ಕಣ್ಣಿನಂತೆ ಕಣ್ಣೆನಿಸಿ ಕಣ್ಣುಗೆಟ್ಟಿತ್ತು. ॥೨೦೩॥

೯೬೦

ತಳದಲೊಂದು ಕೋಲ ಕುಳಿ ಮಾಡಿ,
ಮೇಲೊಂದು ಕೋಲ ಮೊನೆ ಮಾಡಿ
[ಮಥಿ]ಸಲು ಅಗ್ನಿ ದೃಷ್ಟವಾಗಿ ಕಾಣಿಸಿಕೊಂಬಂತೆ,
ಆತ್ಮನ ಸತಿಗೋಲಮಾಡಿ, ಪ್ರಣವವ [ಪ]ತಿಗೋಲ ಮಾಡಿ,
ಪ್ರಣವಾತ್ಮಕನು ಶಿವಧ್ಯಾನದಿಂ ಮಥಿಸಲು
ಆ ಧ್ಯಾನಪರ್ದಣದಲ್ಲಿ ಶಿವನು ಗೂಢವಿಲ್ಲದೆ ಕಾಣಿಸಿಕೊಂಬನು.
ಇದಕ್ಕೆ ಶ್ರುತಿ:
"ಆತ್ಮಾನಮರಣಿಂ ಕೃತ್ವಾ ಪ್ರಣವಂ ಚೋತ್ತರಾರಣಿಂ
ಧ್ಯಾನನಿರ್ಮಥನಾಭ್ಯಾಸಾತ್ಪಾಶಂ ದಹತಿ ಪಂಡಿತಃ"
ಎಂದುದಾಗಿ
ಶಿವಧ್ಯಾನದಿಂ ಸೌರಾಷ್ಟ್ರ ಸೋಮೇಶ್ವರಲಿಂಗವ
ಕಾಂಬುದಕ್ಕಿದೇ ಬಟ್ಟೆ ಕಂಡಯ್ಯಾ! ॥೨೦೪॥

೯೬೧
ತಾನು ತನ್ನನರಿಯದ ಮುನ್ನ, ತನ್ಮಯವಾದರಿವು ತನ್ನನರಿವಲ್ಲಿ,
ಆ ಅರಿವು ತನ್ಮಯವೆಂದರಿತರಿವು ಮರೆಯದಂತೆ
ಮುನ್ನಿನರಿವೆ ಕರಿಗೊಂಡು
ಇನ್ನು ಅರಿಯಲಿಲ್ಲದರಿವು, ನೀನೆ ಸೌರಾಷ್ಟ್ರ ಸೋಮೇಶ್ವರಾ. ॥೨೦೫॥

೯೬೨
ತಾನೆ ಶಿವನೆಂದು ಕುರುಹ ತೋರುವ ಹಾಂಗೆ
ಮರ್ತ್ಯದಲ್ಲಿ ಸುಳಿದನಲ್ಲದೆ ಕುರುಹುಂಟೆ ಶರಣಂಗೆ?
ಮತ್ತೊಮ್ಮೆ ಅರಿವು ಮರಹುಂಟೆ ಶರಣಂಗೆ?
ಬಿಚ್ಚಿ ಬೇರಿಲ್ಲದ, ಬೆರಸಿ ಒಂದಲ್ಲದ ದ್ವಂದ್ವರಹಿತ
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ. ॥೨೦೬॥

೯೬೩
ತಿಳಿದ ತಿಳಿಗೊಳದ ತಳಿತ ತಾವರೆಯರಳ ತಂಡುಲದ ರುಚಿಯ
ಕಳಹಂಸೆ ಬಯಸುವಂತೆ,
ಒಡನಿರ್ದ ನೀರುಗಾಗೆ ತಾನೆತ್ತ ಬಲ್ಲುದೊ?
ಸುಧಾಕಿರಣನಿಂ ಬೆಳಗಿದ ಬೆಳುದಿಂಗಳ ರುಚಿಯ
ಚಕೋರ ಬಲ್ಲುದಲ್ಲದೆ,
ಒಡನಿರ್ದ ಕಾಕೋಳಿ ತಾನೆತ್ತ ಬಲ್ಲುದೊ?
ಕಾರ್ಗಾಲ ಮುಂಬನಿಯ ಸುಖವ
ಚಾದಗೆ ಬಲ್ಲುದಲ್ಲದೆ,
ಅಡವಿಯಲ್ಲಿರ್ದ ಕೊಕ್ಕರ ತಾನೆತ್ತ ಬಲ್ಲುದೊ?
ಸೌರಾಷ್ಟ್ರ ಸೋಮೇಶ್ವರನ ಶರಣರ ಇರವ
ಮಹಾನುಭಾವಿಗಳು ಬಲ್ಲರಲ್ಲದೆ,
ಒಡನಿರ್ದ ಜಡಮತಿಯ ಮಾನವರು ತಾವೆತ್ತ ಬಲ್ಲರೊ? ॥೨೦೭॥

೯೬೪
ತಿಳಿದ ತಿಳಿಗೊಳದ ತಳಿತ ತಾವರೆಯರಳ ತಂಡುಲದ ರುಚಿಯ
ಕಳಹಂಸೆ ಬಯಸುವಂತೆ,
ಸುಧಾಕಿರಣನಿಂ ಬೆಳಗಿದ ಬೆಳುದಿಂಗಳ ರುಚಿಯ
ಚಕೋರ ಬಯಸುವಂತೆ,
ಆನು ನಿಮ್ಮ ಶರಣರ ಬರವ ಹಾರಿ ಹಂಬಲಿಸುತ್ತಿದ್ದೇನೆ.

ಕರುಣಿಸಯ್ಯಾ, ಎಲೆ ಸೌರಾಷ್ಟ್ರ ಸೋಮೇಶ್ವರಾ
ನಿಮ್ಮ ಧರ್ಮ, ನಿಮ್ಮ ಧರ್ಮ. ॥೨೦೮॥

೯೬೫

ತೀರ್ಥಯಾತ್ರೆಯ ಮಾಡಿ ಪಾಪವ ಕಳೆದಿಹೆನೆಂಬ
ಯಾತನೆ ಬೇಡ ಕೇಳಿರಣ್ಣಾ,
ಅನಂತಕರ್ಮವೆಲ್ಲ ಒಬ್ಬ ಶಿವಭಕ್ತನ ದರುಶನಸ್ಪರ್ಶನದಿಂದ ಕೆಡುವವು.
ಅದೆಂತೆಂದಡೆ:
"ಉಪಪಾತಕಕೋಟೀನಿ ಬ್ರಹ್ಮಹತ್ಯಾ ಶತಾನ್ಯಪಿ
ಮಹಾಪಾಪಶ್ಚ ನಶ್ಯಂತಿ ಲಿಂಗಭಕ್ತಸ್ಯ ದರ್ಶನಾತ್" ಎಂದುದಾಗಿ,
ಅದೇನು ಕಾರಣವೆಂದಡೆ
ಆ ಭಕ್ತನಲ್ಲಿ ಸೌರಾಷ್ಟ್ರ ಸೋಮೇಶ್ವರಲಿಂಗವಿಪ್ಪುದಾಗಿ
ಹೋಹವಯ್ಯಾ ಹುಲ್ಲಿನಲ್ಲಿ ತೊಡೆದು. ॥೨೦೯॥

೯೬೬

ತೆರಹಿಲ್ಲದ ಘನ ತನು ಮನ ಮಹವ ಮೀರಿತ್ತು,
ಭಾ[ವಾ]ಭಾವವ ಮೀರಿತ್ತು.
ಅರಿವ[ರ]ತುದಾಗಿ ನಿಜವನರಿಯದು, ನಿರ್ಣಯವನರಿಯದು.
ಸೌರಾಷ್ಟ್ರ ಸೋಮೇಶ್ವರಲಿಂಗದ ನಿಜ ತಾನಾಗಿ
ಒಂದೆರಡೆಂಬ ಭಾವಾಭಾವ ನಷ್ಟವಾಯಿತ್ತು. ॥೨೧೦॥

೯೬೭

ತೆರೆಯಡಗಿದ ಸಾಗರದೊಳಗೆ ಆಕಾಶ ಬಿಂಬಿಸೆ
ಅಂಬರ ಜಲವನೊಳಕೊಂಡಂತೆ,
ದಿನಮಣಿ ಮಣಿಮುಕುರದಲ್ಲಿ ಹೊಳೆಯಲು
ಮುಕುರವೇ ರವಿಯಾಗಿಪ್ಪಂತೆ,
ಗುರುಶಿಷ್ಯ ಸಂಬಂಧ ಅಭಿನ್ನಸೇವ್ಯವಾದ ಬಳಿಕ
ಗುರುವೆಂದೆನಲುಂಟೆ ಶಿಷ್ಯಂಗೆ? ಶಿಷ್ಯನೆನಲುಂಟೆ ಗುರುವಿಂಗೆ?
ಇಂತು ಉಭಯನಾಸ್ತಿಯಾದ ಉಪದೇಶ
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ ಸ್ವಯವಾಯಿತ್ತು. ॥೨೧೧॥

೯೭೮
ತ್ರಿಪುರಸಂಹಾರವ ಮಾಡುವಲ್ಲಿ, ಶಿವನ ಉನ್ಮಿಷೋನ್ಮೀಲದೃಷ್ಟಿಯಿಂ
ಪುಳಕಬಿಂದು ಕಾಶ್ಯಪಿಯ ಮೇಲೆ ಬೀಳಲುಣ್ಮಿದ ರುದ್ರಾಕ್ಷಿ
ಸರ್ವಕಾರಣಾಧಿಕ್ಯವೆಂಬುದನರಿತು
ರುದ್ರಾಕ್ಷಿಯ ಧರಿಸಿದಾತನೇ ಸರ್ವಥಾ ರುದ್ರನಪ್ಪುದು ತಪ್ಪದು.
ಇದಕ್ಕೆ ಶ್ರುತಿ:
"ಪುರಾ ತ್ರಿಪುರವಧಾಯೋನ್ಮೀಲಿತಾಕ್ಷೋಡೀಹಂ
ತೇಭ್ಯೋ ಜಲಬಿಂದವೋ ಭೂಮೌ ಪತಿತಾಸ್ತೇ
ರುದ್ರಾಕ್ಷಾಃ ಜಾತಾಃ ಸರ್ವಾನುಗ್ರಹಾರ್ಥಾಯ
ಅತ ಏವ ರುದ್ರಾಕ್ಷಧಾರಣಾತ್ ರುದ್ರಃ"
ಎಂದುದಾಗಿ, ಇಂತಪ್ಪ ರುದ್ರಾಕ್ಷಿಯಂ ಧರಿಸಿದಾತ
ಸೌರಾಷ್ಟ್ರ ಸೋಮೇಶ್ವರಲಿಂಗವಲ್ಲದೆ ಬೇರೆ ಅಲ್ಲ. ॥೨೧೨॥

೯೭೯
ದಕ್ಷಿಣದ್ವಾರದ ವೃಕ್ಷದ ತಂಪಿನಲ್ಲಿ ಸ್ವಯಂಜ್ಯೋತಿ ಉರಿವುದ ಕಂಡೆ.
ದೀಪ ಕೆಟ್ಟು ವೃಕ್ಷವಳಿದು ದಕ್ಷಿಣದ್ವಾರವ ದಾಂಟಿ
ಉತ್ತರದ್ವಾರದ ಬಾಗಿಲ ಬಿಯ್ಯಗ ತೆಗೆದಲ್ಲಿ,
ನಾದಮೂರುತಿಲಿಂಗವ ಕಂಡೆ.
ಮುಟ್ಟಿ ಪೂಜಿಸಿ ಹೋದಾತನ ನೆಟ್ಟನೆ ನುಂಗಿ,
ತಾ ಬಟ್ಟಬಯಲಾಯಿತ್ತು ನೋಡಾ,
ಸೌರಾಷ್ಟ್ರ ಸೋಮೇಶ್ವರನೆಂಬ ಲಿಂಗವು. ॥೨೧೩॥

೯೮೦
ದಿವಾರಾತ್ರಿಯ ಮಧ್ಯದಲ್ಲಿ ಕತ್ತಲೆ ಬೆಳಗು ತಳೆದಿಪ್ಪ ಬಯಲು
ಶ್ವೇತವೊ ಕಪೋತವೊ, ಬಲ್ಲಡೆ ನೀವು ಹೇಳಿರೆ.
ತನುಮನದ ಮಧ್ಯದಲ್ಲಿ ಕರಣೇಂದ್ರಿಯಂಗಳ ತಳೆದಿಪ್ಪ ಆತ್ಮನು
ಶ್ವೇತವೊ ಪೀತವೊ, ಬಲ್ಲಡೆ ನೀವು ಹೇಳಿರೆ.
ಸ್ವಯ ಪರದ ಮಧ್ಯದಲ್ಲಿ ನಿಜವ ತಳೆದಿಪ್ಪ
ಸೌರಾಷ್ಟ್ರ ಸೋಮೇಶ್ವರಲಿಂಗ
ಶ್ವೇತವೊ ಪೀತವೊ, ಬಲ್ಲಡೆ ನೀವು ಹೇಳಿರೆ. ॥೨೧೪॥

೯೮೧
ದೇವದೇಹಿಕ ಭಕ್ತನಾಗಿ:
ಶ್ರೋತ್ರವ ಲಿಂಗಕ್ಕೆ ಕೇಳಲಿತ್ತು

ಪ್ರಸಾದಶ್ರೋತ್ರದಲ್ಲಿ ಕೇಳುವನಾ ಶರಣನು.
ತ್ವಕ್ಕು ಲಿಂಗಕ್ಕೆ ಸೋಂಕಲಿತ್ತು
ಪ್ರಸಾದತ್ವಕ್ಕಿನಲ್ಲಿ ಸೋಂಕುವನಾ ಶರಣನು.
ನೇತ್ರವ ಲಿಂಗಕ್ಕೆ ನೋಡಲಿತ್ತು
ಪ್ರಸಾದನೇತ್ರದಲ್ಲಿ ನೋಡುವನಾ ಶರಣನು.
ಜಿಹ್ವೆಯ ಲಿಂಗಕ್ಕೆ ರುಚಿಸಲಿತ್ತು
ಪ್ರಸಾದಜಿಹ್ವೆಯಲ್ಲಿ ರುಚಿಸುವನಾ ಶರಣನು.
ಘ್ರಾಣವ ಲಿಂಗಕ್ಕೆ ಘ್ರಾಣಿಸಲಿತ್ತು
ಪ್ರಸಾದಘ್ರಾಣದಲ್ಲಿ ವಾಸಿಸುವನಾ ಶರಣನು.
ಮನವ ಲಿಂಗಕ್ಕೆ ನೆನೆಯಲಿತ್ತು
ಪ್ರಸಾದಮನದಲ್ಲಿ ನೆನೆವನಾ ಶರಣನು.
ಇದು ಕಾರಣ, ಸೌರಾಷ್ಟ್ರ ಸೋಮೇಶ್ವರನ ಶರಣಂಗೆ
ಪ್ರಸಾದವಲ್ಲದಿಲ್ಲವಯ್ಯಾ. ॥೨೧೫॥

೯೭೨

ದೇಶ ಉಪ-ದೇಶವಾಗದನ್ನಕ್ಕ,
ಜೀವ ಉಪ-ಜೀವವಾಗದನ್ನಕ್ಕ,
ಕರಣಂಗಳು ಉಪ-ಕರಣಂಗಳಾಗದನ್ನಕ್ಕ,
ನಯನಂಗಳು ಉಪ-ನಯನಂಗಳಾಗದನ್ನಕ್ಕ,
ಭೋಗಂಗಳು ಉಪಭೋಗಂಗಳಾಗದನ್ನಕ್ಕ
ಅಂಗ ಪ್ರಾಣ ಮನ ಭಾವ ಕರಣಂಗಳಲ್ಲಿ ಭರಿತವೆಂತಿಪ್ಪೆಯಯ್ಯಾ?
ಸೌರಾಷ್ಟ್ರ ಸೋಮೇಶ್ವರಾ,
ನೀನು ಒಲಿ ಒಲಿಯೆಂದರೆಂತೊಲಿವೆಯಯ್ಯಾ. ॥೨೧೬॥

೯೭೩

ದೇಹ ಪ್ರಾಣದಂತೆ ಕೂಡಿದ ಭಕ್ತ ಜಂಗಮ[ದ]
ಉಭಯದನುವನೇನೆಂಬೆನಯ್ಯಾ,
ಅಂಗದೊಳಗೆ ಅನುಭಾವಸಾಹಿತ್ಯ, ಆಚಾರಲಿಂಗಸಂಬಂಧ.
ಚಿದಂಗದೊಳಗೆ ಸ್ವಾನುಭಾವ ಸಮ್ಯಕ್‌ಜ್ಞಾನದುದಯ, ಪ್ರಾಣಲಿಂಗಸಂಬಂಧ.
ಇಂತೀ ಉಭಯದನುವನಾನೇನೆಂಬೆನಯ್ಯಾ.
ಅರಿವಿನೊಳಗನುಭವ, ಅನುಭವದೊಳಗರಿವಿಪ್ಪಂತೆ
ಭಕ್ತನೊಳಗೆ ಜಂಗಮ, ಜಂಗಮದೊಳಗೆ ಭಕ್ತ.

ಇಂತೀ ಭಕ್ತ ಜಂಗಮದ ಸಕೀಲಸಂಬಂಧವ
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರೇ ಬಲ್ಲರು. ॥೨೧೭॥

೯೭೪
ದೇಹಾಭಿಮಾನವಳಿದು,
ಪರಶಿವಜ್ಞಾನವು ಸ್ವಾನುಭಾವಜ್ಞಾನವು ಒಂದೆಯಾಗಿ,
ಭಿನ್ನಜ್ಞಾನದ ಬನ್ನವಳಿದು ಅವಿರಳಜ್ಞಾನವಳವಟ್ಟಲ್ಲಿ,
ಮನವೆಲ್ಲೆಲ್ಲಿಗೆಯ್ದಿದರಲ್ಲಲ್ಲಿಯೇ
ಶಿವನ ಸ್ವಯವದೆಂತೆಂದಡೆ, ಇದಕ್ಕೆ ಶ್ರುತಿ:
“ದೇಹಾಭಿಮಾನೇ ಗಲಿತೇ ವಿಜ್ಞಾತೇಚ ಪದೇ ಶಿವೇ
ಯತ್ರ ಯತ್ರ ಮನೋ ಯಾತಿ ತತ್ರ ತತ್ರ ಶಿವಃ ಸ್ವಯಂ”
ಎಂದುದಾಗಿ, ಇದು ಕಾರಣ ಸೌರಾಷ್ಟ್ರ ಸೋಮೇಶ್ವರನ ಶರಣರು
ಸಚ್ಚಿದಾನಂದಭರಿತರು. ॥೨೧೮॥

೯೭೫
ದೇಹಾರ್ಥಪ್ರಾಣಾಭಿಮಾನಕ್ಕೆ
ಶ್ರೀಗುರು ಕರ್ತನಾಗಿ ತಾನು ಭೃತ್ಯನಾಗಿ
ಒಂದು ನಿಮಿಷ ತ್ರಿಕರಣಶುದ್ಧನಾಗಿ
ಗುರುಸೇವೆಯ ಮಾಡುವ ಶಿಷ್ಯಂಗೆ ಗುರುವುಂಟು,
ಗುರುವುಂಟಾಗಿ ಲಿಂಗವುಂಟು,
ಲಿಂಗವುಂಟಾಗಿ ಜಂಗಮವುಂಟು.
ಜಂಗಮವುಂಟಾಗಿ ಪ್ರಸಾದವುಂಟು,
ಇಂತು ಗುರುಚರಲಿಂಗಪ್ರಸಾದ ಒಂದೇಯಾಗಿ ಸೇವಿಸಬಲ್ಲನಾ[ಗೆ]
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ ನಿತ್ಯಮುಕ್ತಿ. ॥೨೧೯॥

೯೭೬
ದೇಹಿಯಲ್ಲ ನಿರ್ದೇಹಿಯಲ್ಲ ನಿತ್ಯ, ಫಲಪದವ ಮೀರಿದ ಸ್ವತಂತ್ರ,
ಆಗುಹೋಗಿಲ್ಲದ ಭರಿತ, ಅಚಲಲಿಂಗ ಸನ್ನಿಹಿತ,
ನಿಜನಿಂದ ಘನತೇಜ. ಹೆಸರಿಡಬಾರದ ಹಿರಿಯನಯ್ಯಾ,
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ. ॥೨೨೦॥

೯೭೭

ದೇಹೇಂದ್ರಿಯ ಕರಣ ಜೀವ ಭಾವ ಅರಿವು
ಶಬ್ದ ಸ್ಪರುಶ ರೂಪ ರಸ ಗಂಧ
ಸ್ರುಕ್ ಚಂದನ ವನಿತಾದಿ ಅಷ್ಟಭೋಗಂಗಳು
ಲಿಂಗದಲ್ಲಿ ಮನಮುಟ್ಟಿ ನಟ್ಟಿರಲು ಅದೆ ಅರ್ಪಿತ.
ಅಂಗ ಲಿಂಗಾರ್ಪಿತವಾಗಿ ಪರಿಣಾಮ ಪ್ರಸಾದ ಸಾಹಿತ್ಯವಾಗಿ
ಸೌರಾಷ್ಟ್ರಸೋಮೇಶ್ವರಾ ನಿಮ್ಮ ಶರಣಂಗೆ. ॥೨೨೧॥

೯೭೮

ದ್ವೈತಾದ್ವೈತದ ಬಳಿವಿಡಿದರಸುವನಲ್ಲ.
ಅರಿವ ಮುಂದಿಟ್ಟುಕೊಂಡು, ಜ್ಞಾನದ ಮಾತ ಜಿನುಗಿ,
ಕುರುಹ ತೋರಿ, ತಿರುಗುವ ಉಪಾಧಿಕನಲ್ಲ.
ತ್ರಿಪುಟಿಸಂಕಲ್ಪ ಮೀರಿ "ದಾಸೋಹಂ ಸೋಹಂ ಹಂಸಃ"
ಎಂಬ ಬಳಲಿಕೆಯಳಿದು,
ತಾ ಬೈಚಿಟ್ಟ ಬಯ್ಕೆಯ ತಾನೆ ಕಂಡಂತೆ .
ತಾನೇ ತನ್ನ ನಿಜ ನಿಧಾನಗಂಡ ನಿಜಸುಖಿ,
ಸ್ವಾನುಭಾವಭರಿತ ಸ್ವತಂತ್ರ ನಿತ್ಯಮುಕ್ತ,
ಸೌರಾಷ್ಟ್ರ ಸೋಮೇಶ್ವರಲಿಂಗ ತಾನಾದ ಶರಣ. ॥೨೨೨॥

೯೭೯

ಧರೆಯಾಕಾಶವಿಲ್ಲದಂದು, ಅಂದೇನೊ ಅಂದೇನೊ!
ಎಂಬತ್ತುನಾಲ್ಕು ಲಕ್ಷ ಜೀವಜಂತುಗಳಿಲ್ಲದಂದು,
ಅಂದೇನೊ ಅಂದೇನೊ!
ಸಚರಾಚರಂಗಳು ರಚಿಸದಂದು, ಅಂದೇನೊ ಅಂದೇನೊ!
ಇಹಪರಂಗಳಿಲ್ಲದಂದು, ಅಂದೇನೊ ಅಂದೇನೊ!
ಸ್ವರ್ಗನರಕಾದಿಗಳಿಲ್ಲದಂದು, ಅಂದೇನೊ ಅಂದೇನೊ!
ಸುರಾಳನಿರಾಳಗಳಿಲ್ಲದಂದು, ಅಂದೇನೊ ಅಂದೇನೊ!
ಸೌರಾಷ್ಟ್ರ ಸೋಮೇಶ್ವರಾ, ಆನೂ ನೀನೂ ಇಲ್ಲದಂದು
ಅಂದೇನೊ ಅಂದೇನೊ!! ॥೨೨೩॥

೯೮೦

ಧರ್ಮಾರ್ಥಕಾಮಮೋಕ್ಷಂಗಳ ಕಾಮಿಸಿ
ಗುರುಲಿಂಗಜಂಗಮಕ್ಕೆ ಹೊನ್ನು ಹೆಣ್ಣು ಮಣ್ಣು

ವಸ್ತ್ರಾಭರಣಂಗಳನಿತ್ತ ಭಕ್ತಂಗೆ ಕಾಮಿತಫಲವಪ್ಪುದು ತಪ್ಪದಯ್ಯಾ.
ಸೌರಾಷ್ಟ್ರ ಸೋಮೇಶ್ವರನೇ ಸಾಕ್ಷಿಯಾಗಿ. ॥೨೨೪॥

೯೮೧
ನಟ್ಟಡವಿಯಲ್ಲಿ ಕೆಂಡದ ಮಳೆ ಕರೆದು
ಊರಡವಿಯನೊಂದಾಗಿ ಸುಟ್ಟಿತ್ತು ನೋಡಾ.
ಊರೈವರನಾರೈವರ ಮೂಗು ಹೋಯಿತ್ತು ನೋಡಾ.
ಹೋಗದ ಊರಿನ ಬಾರದ ದಾರಿಯ ಕಂಡು ಸುಖಿಯಾದೆನಯ್ಯಾ
ಸೌರಾಷ್ಟ್ರ ಸೋಮೇಶ್ವರಾ. ॥೨೨೫॥

೯೮೨
ನಾದಬ್ರಹ್ಮ ನಾದಾತೀತಬ್ರಹ್ಮ ಶಬ್ದಬ್ರಹ್ಮ ನಿಶ್ಯಬ್ದಬ್ರಹ್ಮ
ವಿಶ್ವಬ್ರಹ್ಮ ಏಕಬ್ರಹ್ಮ ಸರ್ವಂ ಖಲ್ವಿದಂ ಬ್ರಹ್ಮ. ಇದಕ್ಕೆ ಶ್ರುತಿ:
"ನಾದಬ್ರಹ್ಮಮಯೋ ದೇವೋ ನಾದಾತೀತಂತು ತತ್ಪದಂ
ಶಬ್ದಬ್ರಹ್ಮಮಯಂ ಸರ್ವಂ ನಿಶ್ಯಬ್ದಾ ಬ್ರಹ್ಮವೇದಿನಃ
ವಿಶ್ವಬ್ರಹ್ಮಪ್ರವರ್ತಂತೇ ಏಕಂ ಬ್ರಹ್ಮ ಚ ಸುಧ್ರುವಂ
ಸರ್ವಂ ಖಲ್ವಿದಂ ಬ್ರಹ್ಮ ಸರ್ವಾತೀತೋ ಮಹಾಪ್ರಭುಃ"
ಇಂತೆಂದುದಾಗಿ ಒಂದಹುದು ಒಂದನಲ್ಲವೆಂದಡೆ,
ಶಿರ ತನ್ನದು ದೇಹ ಮತ್ತೊಬ್ಬರದೆಂದಡೆ,ಮೆಚ್ಚುವರೆ ಶಿವಜ್ಞಾನಿಗಳು?
ಸೌರಾಷ್ಟ್ರ ಸೋಮೇಶ್ವರಲಿಂಗವನಹುದಲ್ಲವೆಂಬರೆ ಬಲ್ಲವರು? ॥೨೨೬॥

೯೮೩
ನಾದಬಿಂದುಕಳೆಯ ಸಂದನರಿತು
ಪಿಂಡಜ್ಞಾನಿಯಾಗಿ ಸ್ವಾನುಭಾವವುದಯಿಸಿ ಅನಾದಿಸಿದ್ಧನಾದ,
ತನ್ನ ತಾನೇ ಕಂಡು,
ಚಿದ್ವಪುಷಲಿಂಗ ಆದಿಬಿಂದುವಿನೊಳು ನಿಂದು
ಮರೆದ ಮಹಿಮನಲ್ಲಿ ಭೇದವಿಲ್ಲದಪ್ರತಿಮರು,
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು. ॥೨೨೭॥

೯೮೪
ನಾದವೇ ಲಿಂಗ, ಬಿಂದುವೇ ಪೀಠವಾಗಿ
ಶಿವಶಕ್ತಿಸಂಪುಟವಾದ ಪಂಚಮದ ಕರ್ಮೇಶ
ಲಿಂಗನಿರ್ವಯಲ ಪಿಂಡ, ಅಂಗವೆಂಬ ಪಿಂಡ ತದ್ರೂಪವನೆಯ್ದಿ

ಪರಿಪೂರ್ಣ ಪಿಂಡಾಕಾಶರೂಪ ತಾನಾಗಿ
ನುಡಿಗೆಡೆ ಇಲ್ಲ[ದೆ] ನಿಂದ ನಿರವಯ ಘನತೇಜ
ಅಹೋ ಜ್ಯೋತಿಯಂತೆ ಇರ್ದುಯಿಲ್ಲದ ಬೆಡಗಿನ ಭೇದವ
ನಿಮ್ಮಲ್ಲಿಯೇ ಕಂಡೆನಯ್ಯಾ, ಸೌರಾಷ್ಟ್ರ ಸೋಮೇಶ್ವರಾ. ॥೨೨೮॥

೯೮೫
ನಾಲ್ಕು ವೇದಂಗಳುಪಮೆ, ಹದಿನಾರು ಶಾಸ್ತ್ರಂಗಳುಪಮೆ,
ಹದಿನೆಂಟು ಪೌರಾಣ, ಇಪ್ಪತ್ತೆಂಟು ದಿವ್ಯಾಗಮಂಗಳುಪಮೆ,
ಮೂವತ್ತೆರಡುಪನಿಷತ್ತುಗಳುಪಮೆ,
ಏಳುಕೋಟಿ ಮಹಾಮಂತ್ರಂಗಳುಪಮೆ,
ಅನೇಕ ಶಬ್ದ, ಅನೇಕ ಶಾಸ್ತ್ರ, ಅನೇಕ ತರ್ಕವ್ಯಾಕರಣಂಗಳೆಲ್ಲಾ ಉಪಮೆ,
ಅನೇಕ ಮಂತ್ರ ತಂತ್ರ ಯಂತ್ರಸಿದ್ಧಿ ಬದ್ಧಂಗಳೆಲ್ಲಾ ಉಪಮೆ,
ಚೌಷಷ್ಠಿವಿದ್ಯಂಗಳುಪಮೆ, ಕಾಣದ ಕಾಂಬುದುಪಮೆ,
ಕೇಳದ್ದ ಕೇಳುವುದುಪಮೆ, ಅಸಾಧ್ಯವ ಸಾಧಿಸುವುದುಪಮೆ,
ಅಭೇದ್ಯವ ಭೇದಿಸುವುದುಪಮೆ,
ಉಪಮೆ ನಿಃಸ್ಥಲವಾಗಿ ಉಪಮಾಬಂಧನ ಮೀರಿ
ಉಪಮೆ ನಿರುಪಮೆಗಳೆಂಬ ಜಿಗುಡಿನ ಜಿಡ್ಡುಗಳಚಿ
ತರಂಗ ನಿಸ್ತರಂಗಗಳೆಂಬ ಭಾವದ ಸೂತಕವಳಿದು,
ಸೌರಾಷ್ಟ್ರ ಸೋಮೇಶ್ವರನ ನಿಜವನರಿಯದ ಉಪಮಾಬದ್ಧರು,
ಉಪಮೆಯಿಂದುಪಮಿಸಿ ಉಪಮೆ[ಯಿಂ]ದಿಪ್ಪರಯ್ಯಾ. ॥೨೨೯॥

೯೮೬
ನಾಲ್ಕುವೇದ, ಹದಿನಾರು ಶಾಸ್ತ್ರ, ಹದಿನೆಂಟು ಪುರಾಣ,
ಇಪ್ಪತ್ತೆಂಟು ಆಗಮ, ಮೂವತ್ತೆರಡು ಉಪನಿಷತ್ತುಗಳೆಲ್ಲವೂ
ಪಂಚಾಕ್ಷರದ ಸ್ವರೂಪವನರಿಯದೆ ನಿಂದವು.
ಏಳುಕೋಟಿ ಮಹಾಮಂತ್ರಂಗಳಿಗೆ ತಾನೆ ಮೂಲಮಂತ್ರವಾಗಿ
ಸುರತಿಗೆ ಅಣಿಮಾದಿಯ ಕೊಟ್ಟು, ಶರಣರಿಗೆ ತ್ರಿಣಯನ ಕೊಟ್ಟುದು
ಈ ಪಂಚಾಕ್ಷರ ಪ್ರಣವದೊಳಡಕವಾದ ಪಂಚಾಕ್ಷರವನರಿತಲ್ಲಿ
ಸೌರಾಷ್ಟ್ರ ಸೋಮೇಶ್ವರಲಿಂಗಸಂಜ್ಞೆಯ
ವರ್ಣವೆನ್ನ ಸರ್ವಾಂಗದಲ್ಲಡಗಿದವಯ್ಯಾ. ॥೨೩೦॥

೯೮೭
ನಾಸಿಕಾಗ್ರ ಭ್ರೂನಿಟಿಲ ಮಧ್ಯದೊಳ್ಪ್ರಜ್ವಲಿಸಿ ಬೆಳಗಿದ ಸ್ವಯಂಪ್ರಕಾಶಲಿಂಗಕ್ಕೆ
ಆಕಾಶದಿಂದೊಸರ್ದ ಅಗ್ಗವಣಿಯಿಂ ಮಜ್ಜನಂ ಮಾಡಿ,

ಸ್ವಯಾನುಭಾವದಿಂ ಸವೆದ ನಿಜತತ್ವದ ಗಂಧವನಿತ್ತು,
ಪಕ್ಷಾಪಕ್ಷಂಗಳಳಿದ ಅಕ್ಷಯದ ಅಕ್ಷತೆಯಂ ಧರಿಸಿ,
ನೆನಹು ನಿರ್ವಾಣವಾದ ಮನೋಲಯವೆಂಬ ಪುಷ್ಪವನರ್ಪಿಸಿ,
ಭಾವನಿರ್ಭಾವಂಗಳ ಸುಳುಹು ನಷ್ಟವಾದ ಸದ್ಭಾವದ ಧೂಪವನಿಕ್ಕಿ,
ಸಮ್ಯಜ್ಞಾನದಿಂ ಪ್ರಕಾಶಿಸಿ ತೋರ್ಪ ದೀಪಮಂ ಬೆಳಗಿ,
ಬ್ರಹ್ಮರಂಧ್ರದಿಂದೊಸರ್ದು ಪರಿತಪ್ಪ
ಪರಮಾಮೃತವನಾರೋಗಣೆಯನವಧರಿಸಿ,
ಉಲುಹಡಗಿದ ನಿಃಶಬ್ದವೆಂಬ ತಾಂಬೂಲವನ್ನಿತ್ತು,
ಇಂತಪ್ಪ ಅಷ್ಟವಿಧಾರ್ಚನೆಯಿಂದರ್ಚಿಸಿ
ಪರಮಪರಿಣಾಮವಿಂಬುಗೊಂಡ
ಪರಮಪ್ರಸಾದವನವಗ್ರಹಿಸಿ ಪರಮಸುಖಿಯಾಗಿಪ್ಪ
ಮಹಾಶರಣರ ತೋರಿ ಬದುಕಿಸಾ, ಸೌರಾಷ್ಟ್ರ ಸೋಮೇಶ್ವರಾ. ॥೨೩೧॥

೯೮೮
ನಿಜಸುಖದ ಸಂಗದಿಂದ ನೆನಹಳಿದು,
ಶಿವಾನುಭಾವದ ಸುಖದಲ್ಲಿ ಪ್ರಾಣವಡಗಿ,
ತೃಪ್ತಿಯಾಗಿ ನಿಂದ ನಿಲುವಿನ ನಿರ್ಣಯವೆ
ಸೌರಾಷ್ಟ್ರ ಸೋಮೇಶ್ವರಲಿಂಗಕ್ಕೆ ಓಗರವಾಯಿತ್ತು. ॥೨೩೨॥

೯೮೯
ನಿಮ್ಮ ನೆನಹಿನ ಪಂಚಾಕ್ಷರವೆಂಬ ಪಂಚಾಮೃತದಿಂ ಮಜ್ಜನಕ್ಕೆರದು,
ಶ್ರದ್ಧೆ ನಿಷ್ಠೆ ಅವಧಾನವೆಂಬ ಗಂಧಾಕ್ಷತೆ ಪುಷ್ಪವನಿತ್ತು,
ಮೂಲದ ಜ್ವಾಲೆಯಲ್ಲಿ ಉಸುರ ನುಂಗಿದ ಧೂಪವನಿಕ್ಕಿ,
ಸುಮನೋಜ್ಯೋತಿಯ ನಿವಾಳಿಯನೆತ್ತಿ,
ಆನಂದ ಅಮೃತದಾರೋಗಣೆ, ಸಮತೆಯ ವೀಳೆಯವಿತ್ತು,
ಪರಮೇಶ್ವರನ ಪ್ರಸನ್ನಪ್ರಸಾದಕ್ಕೆ ಮುಯ್ಯಾಂತಿರ್ದೆನಯ್ಯಾ,
ಸೌರಾಷ್ಟ್ರ ಸೋಮೇಶ್ವರಾ. ॥೨೩೩॥

೯೯೦
ನಿರಿಂದ್ರಿಯನಾದ ಶಿವನು ತಾನೇ ದೇವದೇಹಿಕ ಭಕ್ತನಾಗಿ
"ಅನ್ಯಪೂಜಾವಿನಿರ್ಮುಕ್ತೋ ಭಕ್ತೋ ಜಂಗಮಪೂಜಕಃ"
ಅನ್ಯಪೂಜೆಯಂ ಬಿಟ್ಟು ಜಂಗಮಲಿಂಗವನೆ ಪೂಜಿಸುವಂಥ ಭಕ್ತ
ಲಿಂಗೇಂದ್ರಿಯ ಮುಖದಿಂದವೇ ಸಕಲಭೋಗಂಗಳ ಭೋಗಿಸುವನು. ಅದೆಂತೆಂದಡೆ:
ಜ್ಯೋತಿಯ ಮುಖದಲ್ಲಿ ರಜ್ಜು ತೈಲವನವಗ್ರಹಿಸುವಂತೆ,

ಸಕಲದ್ರವ್ಯಂಗಳ ಅಗ್ನಿಯ ಮುಖದಲ್ಲಿ ನಿರ್ಜರರು ತೃಪ್ತಿಯನೆಯ್ದುವಂತೆ,
ಸದ್ಭಕ್ತರ ಹೃದಯದಲ್ಲಿ ತೃಪ್ತಿಯನೆಯ್ದಿಪ್ಪನು ಶಿವನು.
ಇದು ಕಾರಣ ಶಿವಭಕ್ತನಿರ್ದುದೆ ಅವಿಮುಕ್ತಕ್ಷೇತ್ರ,
ಆತನ ಶಿರವೆ ಶ್ರೀಪರ್ವತ, ಭಾಳವೇ ಕೇತಾರ,
ಭ್ರೂಮಧ್ಯವೇ ವಾರಣಾಸಿ, ನೇತ್ರವೇ ಪ್ರಯಾಗ,
ಸರ್ವೇಂದ್ರಿಯಂಗಳೇ ಸರ್ವತೀರ್ಥಂಗಳು,
ಪಾದವೇ ಅಷ್ಟಾಷಷ್ಟಿಕ್ಷೇತ್ರಂಗಳು,
ಇಂತಪ್ಪ ಪವಿತ್ರಗಾತ್ರನ ಕಾಯವೇ ಕೈಲಾಸ.
ಇಂತಪ್ಪ ಸದ್ಭಕ್ತನನೆನಗೆ ತೋರಿಸಿ ಬದುಕಿಸಾ
ಸೌರಾಷ್ಟ್ರ ಸೋಮೇಶ್ವರಾ. ॥೨೩೪॥

೯೯೧

ನಿಷ್ಕಲ ಷಟ್‌ಸ್ಥಲಲಿಂಗದ ಮೂಲಾಂಕುರವೆನಿಸುವ ಪರಮ ಕಳೆ,
ಆ ಪರಮ ಕಳೆಯ ಪರಬ್ರಹ್ಮ ಪರಂಜ್ಯೋತಿ
ಪರಾತ್ಪರ ಪರತತ್ವ ಪರಮಾತ್ಮ ಪರಮಜ್ಞಾನ
ಪರಮಚೈತನ್ಯ ನಿಷ್ಕಲ ಚರವೆನಿಸುವ ಪರವಸ್ತು ಅದೆಂತೆಂದಡೆ:
"ವಾಚಾತೀತಂ ಮನೋತೀತಂ ಭಾವಾತೀತಂ ಚ ತತ್ಪರಂ
ಜ್ಞಾನಾತೀತಂ ನಿರಂಜನಂ ನಿಃಕಲಾಃ ಸೂಕ್ಷ್ಮಭಾವತಃ"
ಇಂತೆಂದುದಾಗಿ, ನಿರವಯವಹ ಚರಲಿಂಗದ
ಚೈತನ್ಯವೆಂಬ ಪ್ರಸನ್ನಪ್ರಸಾದಮಂ ಇಷ್ಟಲಿಂಗಕ್ಕೆ ಕಳಾಸಾನ್ನಿಧ್ಯವಂ ಮಾಡಿ
ಆ ಚರಲಿಂಗದ ಸಮರಸ ಚರಣಾಂಬುವಿಂ ಮಜ್ಜನಕ್ಕೆರೆದು
ನಿಜಲಿಂಗೈಕ್ಯವನೆಯ್ದಲರಿಯರು. ಅದೆಂತೆಂದಡೆ:
"[illegible]ಸ್ತಪೀಯೋರೇ ನಿಜಮಿಷ್ಟಲಿಂಗಂ ವಿನ್ಯಸ್ಯ ತಲ್ಲೀನ ಮನಃಪ್ರಚಾರಃ
[illegible]ಹ್ಯಕ್ರಿಯಾಸಂಕುಲನಿಃಸ್ಪೃಹಾತ್ಮಾ ಸಂಪೂಜಯತ್ಯಂಗ ಸ ವೀರಶೈವಃ"
ಆವನಾನೋರ್ವನು ಕರಪೀಠದಲ್ಲಿ
ತನ್ನ ಶ್ರೀಗುರು ಕೊಟ್ಟ ಪ್ರಾಣಲಿಂಗವನ್ನು ಇರಿಸಿ,
ಆ ಶಿವಲಿಂಗದಲ್ಲಿ ಮನವನೆಯ್ದಿದ ಮನಃಸಂಚಾರವುಳ್ಳಾತನಾಗಿ,
ಹೊರಗಣ ಕ್ರಿಯಾಸಮೂಹದಲ್ಲಿ ಬಯಕೆಯಳಿದು ಬುದ್ಧಿಯುಳ್ಳಾತನಾಗಿ
ತನ್ನ ಪ್ರಾಣಲಿಂಗಮಂ ಪೂಜಿಸುತ್ತಿಹನು.
ಆ ಪ್ರಾಣಲಿಂಗಾರ್ಚಕನಾದ ಲಿಂಗಾಂಗಸಂಬಂಧಿಯೇ
ವೀರಶೈವನೆಂದರಿವುದು. ಅದೆಂತೆಂದಡೆ:
ಕಂಡವರ ಕಂಡು ತೀರ್ಥದಲ್ಲಿ ಮಂಡೆಯ ಬೋಳಿಸಿಕೊಂಬ
ಭಂಡರ ಮೆಚ್ಚುವರೆ ಸೌರಾಷ್ಟ್ರಸೋಮೇಶ್ವರಾ? ನಿಮ್ಮ ಶರಣರು. ॥೨೩೫॥

೯೯೨
ನೀರಮೇಲೆ ಒಂದು ನಟ್ಟ ಕಂಬವಿದ್ದಿತ್ತು.
ಕಂಬದ ತುದಿಯಲ್ಲಿ ದೇಗುಲವಿದ್ದಿತ್ತು.
ದೇಗುಲದ ಕೋಣೆಯಲ್ಲಿ ದೇವರಿದ್ದಿತ್ತು.
ದೇವರ ದೇಗುಲವ ಅರಿದ ತಲೆ ನುಂಗಿ ಅಸುಗಳೆಯಿತ್ತು.
ಸೌರಾಷ್ಟ್ರ ಸೋಮೇಶ್ವರಾ, ಇದೇನು ಚೋದ್ಯವೊ! ॥೨೩೬॥

೯೯೩
ನೀರು ನೀರ ಕೂಡಿದಂತೆ, ಕ್ಷೀರ ಕ್ಷೀರ ಬೆರಸಿದಂತೆ
ಸುಜ್ಞಾನಗುರುಪಾದೋದಕಾನಂದದೊಳಗೆ ಪ್ರಜ್ಞಾನಶರಣ,
ಆನಂದಭಕ್ತಿಯಿಂದ ಸಮರಸವಾದ ಪರಮಸುಖದೊಳಗೆ
ಎರಡರಿಯದ ಮೌನಿ, ನಿಜಭರಿತ ನಿರಾಳ
ಸೌರಾಷ್ಟ್ರ ಸೋಮೇಶ್ವರನ ಶರಣ. ॥೨೩೭॥

೯೯೪
ನೆಣದ ಕೊಣ, ರಕ್ತದ ಹುತ್ತ, ಕೀವಿನ ಬಾವಿ, ರೋಮದ ಸೀಮೆ,
ತ್ವಕ್ಕಿನಿಕ್ಕೆ, ಮಾಂಸದ ವಾಸ, ಕರುಳ ತಿರುಳು, ನರದ ಕರವತಿಗೆ,
ಮಲಮೂತ್ರಂಗಳ ನೆಲೆವನೆ, ಕ್ರಿಮಿಯ ಸಮಯ,
ಕೀಟಕದ ಕೊಟಾರ, ಶುಕ್ಲದ ಸಾಕಾರ,
ಎಲುವಿನ ಬಲುಹಿಂದಿಪ್ಪ ಈ ಕಾಯ ಹೇಯ.
ತೋರಿ ಹಾರುವ ಅದೃಶ್ಯ ದೃಶ್ಯವೀ ದೇಹ
ತನ್ನದೆಂದು ನಚ್ಚಿ ಮಚ್ಚಿ ಹೆಚ್ಚಿ ಬೆಚ್ಚಿ
ಕೆಚ್ಚುಗೊಂಡೊಚ್ಚತವೋದ ಮನಕ್ಕೆ ಇನ್ನಾವುದು ಗತಿಯೊ?
ಸೌರಾಷ್ಟ್ರ ಸೋಮೇಶ್ವರಾ ಇಂತು ಭವಕ್ಕೆ ಮಾರುವೋದವರು
ನಿಮ್ಮ ನೆನೆವುದೇ ಹುಸಿಯಯ್ಯಾ. ॥೨೩೮॥

೯೯೫
ನೆಲದ ಮೇಲಣ ನಿಧಾನವ ಕಂಡವರಲ್ಲದೆ
ಆಕಾಶದೊಳಗೆ ಹೂಳಿರ್ದ ನಿಕ್ಷೇಪವ ಕಂಡವರಾರನೂ ಕಾಣೆ.
ಖೇಚರಿಯ ಮುದ್ರೆಯಿಂದ ಗಗನದ ನಿಧಿಯನೆ ಕಂಡು,
ಆ ನಿಧಿಯೊಳಗೆ ನಿಧಾನವಾಗಿರಬಲ್ಲಡೆ
ಸೌರಾಷ್ಟ್ರ ಸೋಮೇಶ್ವರಲಿಂಗ ಬೇರಿಲ್ಲ ಕಾಣಿರೆ. ॥೨೩೯॥

೯೯೬
ನೆಳಲಂತೆ ಮಾಯಾತಂತ್ರಿಯಲ್ಲ. ಆಕಾಶದಂತೆ ಶೂನ್ಯವಾದುದಲ್ಲ.
ಯೋಗಿಗಳಂತೆ ಭ್ರೂನಿಟಲಮಧ್ಯದಲ್ಲಿ ಕಂಡೆನೆಂಬ ಸೊರಹಲ್ಲ.
ವರ್ಣಾತೀತ ವೇದಾತೀತ ಭಾವಾತೀತವೆಂಬುದೇ ಪರಬ್ರಹ್ಮ ನೋಡಾ.
ವ್ಯಾಪಕ ಸಗುಣನ ವಸ್ತು ಸಾಂಚಲ್ಯ ರೂಪು ರುಚಿಯ
ವಿಜ್ಞಾನಿಯ ಸುತ್ತಿಪ್ಪುದು ಮನ, ಅಂತದಕ್ಕೆ ಸಾಕ್ಷಿಕನಾಗಿಪ್ಪುದಾತ್ಮ.
ಇದು ಕಾರಣ, ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ
ಮನವಾತ್ಮನ ತಿಳಿದು ನೋಡಯ್ಯಾ. ॥೨೪೦॥

೯೯೭
ನೆಳಲ ನುಡಿಸಿಹೆನೆಂದು ಬಳಲುವನಂತೆ,
ಆಕಾಶವನಳೆತಕ್ಕೆ ತಂದಿಹೆನೆಂಬ ಪಂಡಿತನಂತೆ,
ಆತ್ಮಸ್ವರೂಪವ ವರ್ಣದಿಂ ಕಂಡಿಹೆನೆಂಬ ಯೋಗಿಯಂತೆ,
ವರ್ಣಾತೀತ ವೇದಾತೀತವೆಂಬ ಮಾತು ಹುಸಿಯಪ್ಪಡೆ
ನಿಃಕಳಂಕ ಶಾಂತಮಲ್ಲಿಕಾರ್ಜುನನೆಂಬ ಲಿಂಗದಲ್ಲಿಯೇ
ಸೌರಾಷ್ಟ್ರ ಸೋಮೇಶ್ವರನೆಂಬ ಲಿಂಗದಲ್ಲಿಯೇ ಕಾಣಿರೇ. ॥೨೪೧॥

೯೯೮
ನೇತ್ರಂಗಳ ಮುಚ್ಚಿ ರೂಹಿಲ್ಲದ ನಿಲವ ಕಾಣಬೇಕು.
ಶ್ರೋತ್ರಂಗಳ ಮುಚ್ಚಿ ಶಬ್ದವಿಲ್ಲದ ನಾದವ ಕೇಳಬೇಕು.
ಜಿಹ್ವೆಯ ಮುಚ್ಚಿ ಸ್ವಾದುವಿಲ್ಲದ ರುಚಿಯನರಿಯಬೇಕು.
ನಾಸಿಕವ ಮುಚ್ಚಿ ಉಸಿರ ನುಂಗಿದ ಪರಿಮಳವನರಿಯಬೇಕು.
ಅಂಗವ ಮುಚ್ಚಿ ಲಿಂಗಸಂಗ ಸಮಸುಖವನರಿಯಬೇಕು.
ಸೌರಾಷ್ಟ್ರ ಸೋಮೇಶ್ವರವಿಡಿದು, ಪಂಚೇಂದ್ರಿಯಂಗಳಳಿದು
ಲಿಂಗೇಂದ್ರಿಯಗಳಾಗಬೇಕು. ।೨೪೨॥

೯೯೯
ಪಂಚತತ್ವಂಗಳುವಿಡಿದಾಡುವ
ಚತುರ್ದಶೇಂದ್ರಿಯ ವಿಕಾರಂಗಳು ತಾನಲ್ಲ, ತನ್ನವಲ್ಲ.
ತನುವುಂಟೆಂದಡೆ ಅಹಮ್ಮಾದಿಗೆ ಸಂದು,
ಬಂಧಮೋಕ್ಷಂಗಳಿಗೊಳಗಾಯಿತ್ತು ನೋಡಾ.
ಕುರುಹಿಲ್ಲದ ಲಿಂಗ ಅರಿವಿನೊಳು ಬಳಿಸಂದಡೆ

ಅರಿವು ಕುರುಹು ತೆರಹಿಲ್ಲದೆ ನಿಂದ ನಿಲವು
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ನಿಜ ತಾನಾದ ಶರಣ. ॥೨೪೩॥

೧೦೦೦
ಪಂಚಬ್ರಹ್ಮದಿಂದಾದುದಲ್ಲ. ಸಂಚಿತ, ಪ್ರಾರಬ್ಧ, ಆಗಾಮಿಯನುಳ್ಳುದಲ್ಲ.
ಸಚ್ಚಿದಾನಂದಮಯವಾದಾತ್ಮನನಿಂತೀ ಪರಿಯಲ್ಲಿ
ತಿಳಿದು ನೋಡಯ್ಯಾ.
ತಾ ಹುಟ್ಟಿ ತಮ್ಮವ್ವೆಯ ಬಂಜೆ ಎಂಬವನಂತೆ,
ಹೊತ್ತುದ ಹುಸಿ ಮಾಡುವ ಪರಿಯ ನೋಡಾ.
ಅವನಿಲ್ಲದಷ್ಟಪುತ್ರರುಂಟೆ? ಸೌರಾಷ್ಟ್ರ ಸೋಮೇಶ್ವರಲಿಂಗವಿಲ್ಲದಿರಲು
ಆನೂ ನೀನೂ ಉಂಟೆ ಹೇಳಾ, ಮಲ್ಲಿಕಾರ್ಜುನಾ? ॥೨೪೪॥

೧೦೦೧
ಪಂಚಬ್ರಹ್ಮದಿಂದುದಯಿಸಿದ
ನಂದೆ ಭದ್ರೆ ಸುರಭಿ ಸುಶೀಲೆ ಸುಮನೆ ಎಂಬ ಪಂಚಗೋವುಗಳಿಂ
ಭೂತಿ ಭಸಿತ ಭಸ್ಮ ಕ್ಷಾರ ರಕ್ಷೆಯಿಂದ ಪಂಚನಾಮವಾಯಿತ್ತು.
ಅದೆಂತೆಂದಡೆ:
ಶಿವಜ್ಞಾನಸುಖದ ಮಹದೈಶ್ವರ್ಯರೂಪದಿಂ ಭೂತಿಯಾಯಿತ್ತು.
ಸಕಲಕಾಮಂಗಳ ಬಯಕೆಯ ಸುಟ್ಟು
ನಿಃಕಾಮರೂಪದಿಂ ಭಸಿತವಾಯಿತ್ತು.
ಪೂರ್ವಕರ್ಮಗಳನುರುಪಿ ನಿಃಕರ್ಮರೂಪದಿಂ ಭಸ್ಮವಾಯಿತ್ತು.
ಮಲಮಾಯೆಯ ಕಳೆವುದರಿಂ ಕ್ಷಾರವಾಯಿತ್ತು.
ಭೂತಪ್ರೇತಪಿಶಾಚಂಗಳ ಹೊದ್ದಲೀಯದಿರ್ಪುದರಿಂ ರಕ್ಷೆಯಾಯಿತ್ತು.
ಇಂತಪ್ಪ ವಿಭೂತಿಯ ಮಹಾತ್ಮೆಯನರಿತು,
ನೀನೊಲಿದ ವಿಭೂತಿಯ ಆನು ಧರಿಸಿ ಬದುಕಿದೆನಯ್ಯಾ
ಸೌರಾಷ್ಟ್ರ ಸೋಮೇಶ್ವರಾ. ॥೨೪೫॥

೧೦೦೨
ಪಂಚಬ್ರಹ್ಮದಿಂದೊಗೆದ ಪಂಚಭೂತಾಂಶದ
ಪಂಚೇಂದ್ರಿಯಂಗಳಲ್ಲಿ ಪಂಚಲಿಂಗಂಗಳಳವಟ್ಟು,
ಪಂಚವಿಷಯಂಗಳು ಲಿಂಗಸಂಗವ ಮಾಡಿದ ಕಾರಣ
ಮಲ ಕರ್ಮ ಮೊದಲಾದ ಸರ್ವಸೂತಕ ನಿವೃತ್ತಿಯಾಗಿ
ಸೌರಾಷ್ಟ್ರ ಸೋಮೇಶ್ವರಲಿಂಗಕ್ಕೆ ತೃಪ್ತಿಯಾಯಿತ್ತು. ॥೨೪೬॥

೧೧೦೩

ಪಂಚೇಂದ್ರಿಯಂಗಳು ಲಿಂಗಮುಖವಾಗಿ ನಿಂದು,
ಮನಸಹಿತ ಪಂಚವಿಷಯಂಗಳಂಶದ ಸಕಲಸುಖಂಗಳು
ಲಿಂಗಾರ್ಪಿತದಿಂದ ಚರಿಸುತ್ತ, ಬೇರೆ ಮತ್ತೊಂದು ದೆಸೆಯಿಲ್ಲದೆ ನಿಂದುವು,
ಸೌರಾಷ್ಟ್ರ ಸೋಮೇಶ್ವರಲಿಂಗನಿವಾಸಿಯಾದ ಶರಣಂಗೆ. ||೨೪೭||

೧೧೦೪

ಪತಿವ್ರತೆಯಾದಡೆ ಅನ್ಯಪುರುಷರ ಸಂಗವೇತಕ್ಕೆ?
ಲಿಂಗಸಂಗಿಯಾದಡೆ ಅನ್ಯಸಂಗವೇತಕ್ಕೆ?
ಈ, ಕಂಡ ಕಂಡವರ ಹಿಂದೆ ಹರಿವ ಚಾಂಡಾಲಗಿತ್ತಿಯಂತೆ
ಒಬ್ಬರ ಕೈವಿಡಿದು, ಒಬ್ಬರಿಗೆ ಮಾತಕೊಟ್ಟು,
ಮತ್ತೊಬ್ಬರಿಗೆ ಸನ್ನೆಮಾಡುವ ಬೋಸರಗಿತ್ತಿಯಂತೆ
ಪ್ರಾಣಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಹರಿಸಿ ಹೊಡೆವಡಲೇತಕ್ಕೆ?
ಇದು ಕಾರಣ ಸೌರಾಷ್ಟ್ರ ಸೋಮೇಶ್ವರಾ,
ಇಂತಪ್ಪ ಪಾಪಿಗಳ ನುಡಿಸಿದಡೆ ಅಘೋರನರಕ ತಪ್ಪದಯ್ಯಾ .||೨೪೮||

೧೧೦೫

ಪರತತ್ವ ಪರಬ್ರಹ್ಮ ಪರಶಿವನಪ್ಪ ಮಂತ್ರಮೂರ್ತಿ ಸದ್ಗುರು ಕಣ್ಣಮುಂದಿರಲು
ಸದಾ ಗುರುಸೇವೆಯಳವಟ್ಟು ಗುರು ಶುಶ್ರೂಷೆಯ ಮಾಡುವ ಶಿಷ್ಯಂಗೆ
ಆ ಸದ್ಗುರು ಸೇವೆಯೇ ಚತುರ್ವಿಧ ಫಲ.
ಗುರುಸೇವೆಯೇ ಅಷ್ಟಮಹದೈಶ್ವರ್ಯ,
ಗುರುಸೇವೆಯೇ ಅಷ್ಟಭೋಗಂಗಳ ಅನು.
ಇದು ಕಾರಣ ಸದ್ಗುರುಸೇವೆಯೇ ಸದ್ಯೋನ್ಮುಕ್ತಿ
ಸೌರಾಷ್ಟ್ರ ಸೋಮೇಶ್ವರಾ. ||೨೪೯||

೧೧೦೬

ಪರದಿಂದಾದ ಅಪರಸ್ವರೂಪಂಗೆ ಉಪಾಧಿಯೆಂಬುದಿಲ್ಲ.
ಸಂಸಾರವಿಲ್ಲ ಸ್ಮೃತಿ ಮೃತಿ ಇಲ್ಲವಾಗಿ ಒಳಗಿಲ್ಲ ಹೊರಗಿಲ್ಲ.
ಸ್ವಯಭರಿತನಾಗಿ ತಾನು ತಾನಾಗಿ ನಿಂದ ಸಹಜಂಗೆ
ಸೌರಾಷ್ಟ್ರ ಸೋಮೇಶ್ವರಲಿಂಗ ಬೇರಿಲ್ಲ. ||೨೫೦||

೧೦೦೭
ಪರಬ್ರಹ್ಮಸ್ವರೂಪನಾದ ಪರಾತ್ಮನೆ ಸರ್ವಾತ್ಮನು.
ಪರಮಾತ್ಮನೆ ಅಂತರಂಗಬಹಿರಂಗಭರಿತ.
ನಿಶ್ಚಿಂತ ನಿರ್ಮಾಯ ನಿರಾವರಣ ಸರ್ವಗತ ಸರ್ವಜ್ಞ
ಅಪ್ರಮಾಣ ಅಗೋಚರ ಸೌರಾಷ್ಟ್ರ ಸೋಮೇಶ್ವರಲಿಂಗವು ತಾನೆ. ॥೨೫೧॥

೧೦೦೮
ಪರಮಜ್ಞಾನಕ್ಕೆ ಕರ್ತೃವಾದ ಸದಾಶಿವನೆ ಜೀವಭಾವದಿಂ
ಪ್ರಪಂಚಿನ ಘಟದಿಂದ್ಯೆದನುವಪ್ಪ
ಪಂಚೇಂದ್ರಿಯಗಳ ಪಂಚವಿಷಯಂಗಳನರಿತರ್ಪಿಸಿ ತೃಪ್ತಿಯನೆಯ್ದಿ,
ಆ ಜೀವನು ಅಂಡಜ ಸ್ವೇದಜ ಉದ್ಭಿಜ ಜರಾಯುಜಂಗಳೆಂಬ
ಚತುರ್ವಿಧವರ್ಗಂಗಳೊಳು ಚತುರ್ದಶಭುವನದೊಳುದಯಿಸಿ,
ಸ್ತ್ರೀ[ಪುಂನ]ಪುಂಸಕಾದಿಯಿಂ ಜನಿಸಿ,
ಪುತ್ರ ಪೌತ್ರಂಗಳಿಂ ದೃಶ್ಯಮಾಗಿ ಯಸ್ಯ ಏವಂ
ಆ ಮುನ್ನಿನ ಪರಮಜ್ಞಾನದಿಂದ ಜೀವನು ಸದಾಶಿವನಾದುದಕ್ಕೆ ಶ್ರುತಿ:
"ಯಥಾ ಖಲು ವೈ ಧೇನುಂ ತೀರ್ಥೇ ತರ್ಪಯತಿ
ಏವಮಗ್ನಿ ಹೋತ್ರೀ ಯಜಮಾನಂ ತರ್ಪಯತಿ
ಯಸ್ಯ ಪ್ರಜಯಾ ಪಶುಭಿಃ ಪ್ರತುಷ್ಯತಿ ಸುವರ್ಗಂ ಲೋಕಂ
ಪ್ರಜಾನಾತಿ ಪಶ್ಯತಿ ಪುತ್ರ ಪೌತ್ರಂ
ಪ್ರವ್ರಜಯಾ ಪಶುಭಿರ್ಮಿಥುನ್ಯೆರ್ಜಾಯತೇ ಯಸ್ಯೇನಂ
ವಿದುಷೋ[S]ಗ್ನಿಹೋತ್ರಂ ಯ ಏವಂ ವೇದ"
ಇಂತೆಂದುದಾಗಿ, ಸೌರಾಷ್ಟ್ರ ಸೋಮೇಶ್ವರಲಿಂಗ
ಶಿವನಾಗಬಲ್ಲ ಜಗವಾಗಬಲ್ಲ ಜೀವವಾಗಬಲ್ಲನಯ್ಯಾ. ॥೨೫೨॥

೧೦೦೯
ಪರಶಿವನೆ ಅಪ[ರ]ಸ್ವರೂಪನಾಗಿ
ಗುರುಸಾಂಪ್ರದಾಯಕನಾದನಾ ಸದ್ಗುರು, ಸರ್ವಕಾರಣನು.
ಭೋಗಮೋಕ್ಷೋಪಾಯವನೀವ ನಿತ್ಯನು.
ಆ ಸದ್ಗುರುವೆ ಪಂಚಸಂಜ್ಞೆಯೆನಿಸುವ ಪರಬ್ರಹ್ಮಸ್ವರೂಪನು ತಾನೆ,
ಸೌರಾಷ್ಟ್ರ ಸೋಮೇಶ್ವರನು ಶಿಷ್ಯಕಾರಣನು. ॥೨೫೩॥

೧೦೧೦
ಪರಸತಿಗಳುಪುವ ಪಾರದ್ವಾರಿಯರಿವು ಪರವಕ್ಕು ಕಾಣಿಭೋ.
ಭ್ರೂಣಹತ್ಯಕರ್ಮಿಯ ಶಿವಜ್ಞಾನ ಸ್ವಯವಲ್ಲ ಕಾಣಿಭೋ.
ಸ್ತ್ರೀ ಬಾಲ ಘಾತಕಂಗೆ ನಿಜಭಾವ ತಾನೆ ಭ್ರಮೆಯಕ್ಕು ಕಾಣಿಭೋ.
ಕ್ಷಣಕ್ಕೊಂದು ಬಗೆವ ಕ್ಷಣಿಕ ಚಿತ್ತರಿಗೆ
ಬ್ರಹ್ಮಾನುಸಂಧಾನದನುವೆಯ್ದದು ಕಾಣಿಭೋ. ಇದಕ್ಕೆ ಶ್ರುತಿ:
"ಪರದಾರೋ ಪರದ್ವಾರೀ ಭ್ರೂಣಹತ್ಯಾತಿ ಕರ್ಮಣಾ
ಸ್ತ್ರೀಬಾಲಘಾತಕೋ ಯಶ್ಚದೇವ್ಯೋ ಗಚ್ಛನ್ನಗಚ್ಛತಿ"
ಇಂತೆಂದುದಾಗಿ, ಇಂತಿವರೊಳಗೊಂದುಳ್ಳವರು
ಸೌರಾಷ್ಟ್ರ ಸೋಮೇಶ್ವರಲಿಂಗಕ್ಕೆ ಸಲ್ಲರು ಕಾಣಿಭೋ. ॥೨೫೪॥

೧೦೧೧
ಪರಿಪೂರ್ಣ ಪರತತ್ವದಿಂದೊದಗಿದ ಆನಂದಭರಿತ
ಪ್ರತ್ಯಕ್ಷಪರಮಾರ್ಥನಯ್ಯಾ.
ಆಗುಹೋಗಿಲ್ಲದಸಾಧ್ಯವನೇನೆಂದುಪಮಿಸಬಹುದು?
ಅಪ್ರತಿಮ ಸ್ವತಂತ್ರ ನಿರಾಳಭರಿತ ಸೌರಾಷ್ಟ್ರ ಸೋಮೇಶ್ವರನ ಶರಣ
ನಿಜನಿಂದ ಸಹಜನಯ್ಯಾ. ॥೨೫೫॥

೧೦೧೨
ಪರಿಯಾಣವೇ ಭಾಜನವೆಂಬರು. ಪರಿಯಾಣ ಭಾಜನವೇ? ಅಲ್ಲ.
ಘನಲಿಂಗಕ್ಕೆ ಶುದ್ಧ ನಿರ್ಮಲವಾದ ಸಕಲಕರಣಂಗಳೇ ಭಾಜನ.
ನಿಜಾನಂದವೇ ಭೋಜನ. ಪರಿಣಾಮವೇ ಪ್ರಸಾದ.
ಇಂತಿವರಲ್ಲಿ ನಿರುತನಾಗಿರಬಲ್ಲ
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣ. ॥೨೫೬॥

೧೦೧೩
ಪಾತಾಳದಿಂ ಕೆಳಗೆ ಪಾದ, ಸತ್ಯಲೋಕದಿಂ ಮೇಲೆ ಉತ್ತಮಾಂಗ,
ಬ್ರಹ್ಮಾಂಡವೇ ಮುಕುಟ, ಗಗನವೇ ಮುಖ,
ಚಂದ್ರಾರ್ಕಾಗ್ನಿಗಳೇ ನೇತ್ರ, ದಶದಿಕ್ಕುಗಳೇ ಬಾಹುಗಳು,
ಮಹದಾಕಾಶವೇ ಶರೀರ, ತರುಗಳೇ ತನೂರುಹ,
ಶೂನ್ಯವೇ ಕರಸ್ಥಲದ ಲಿಂಗ, ನಕ್ಷತ್ರವೇ ಪುಷ್ಪ,
ನಿತ್ಯವೇ ಪೂಜೆ, ಮೇಘವೇ ಜಡೆ, ಬೆಳ್ದಿಂಗಳೇ ವಿಭೂತಿ,
ಪರ್ವತಂಗಳೇ ರುದ್ರಾಕ್ಷಿಗಳು, ಪಂಚಬ್ರಹ್ಮವೇ ಪಂಚಾಕ್ಷರ,

ತತ್ವಂಗಳೇ ಜಪಮಾಲೆ, ಮೇರುವೇ ದಂಡಕೋಲು,
ಸಮುದ್ರವೇ ಕಮಂಡಲು, ಶೇಷನೇ ಕಟಿಸೂತ್ರ, ಜಗವೇ ಕಂಥೆ.
ಅನಂತವೇ ಕೌಪೀನ, ತ್ರಿಗುಣವೊಂದಾದುದೇ ಖರ್ಪರ,
ಚತುರ್ಯುಗವೇ ಗಮನ, ಮಿಂಚೇ ಅಂಗರುಚಿ, ಸಿಡಿಲೇ ಧ್ವನಿ,
ವೇದಾಗಮವೇ ವಾಕ್ಯ, ಜ್ಞಾನಮುದ್ರೆಯೇ ಉಪದೇಶ,
ಪೃಥ್ವಿಯೇ ಸಿಂಹಾಸನ, ದಿವಾರಾತ್ರಿಯೇ ಅರಮನೆ,
ಶಿವಜ್ಞಾನವೇ ಐಶ್ವರ್ಯ, ನಿರಾಳವೇ ತೃಪ್ತಿ.
ಇಂತಪ್ಪ ಚೈತನ್ಯಜಂಗಮಕ್ಕೆ ಆನು ನಮೋ ನಮೋ ಎನುತಿರ್ದೆನಯ್ಯಾ
ಸೌರಾಷ್ಟ್ರ ಸೋಮೇಶ್ವರಾ. ॥೨೫೭॥

೧೦೧೪
ಪಿಂಡಪ್ರಸಾದಿಗಳ ಕಂಡುಬಲ್ಲೆ, ಇಂದ್ರಿಯಪ್ರಸಾದಿಗಳ ಕಂಡುಬಲ್ಲೆ,
ಕರಣಪ್ರಸಾದಿಗಳ ಕಂಡುಬಲ್ಲೆ, ಕಾಯಪ್ರಸಾದಿಗಳ ಕಂಡುಬಲ್ಲೆ,
ಜೀವಪ್ರಸಾದಿಗಳ ಕಂಡುಬಲ್ಲೆ, ಭಾವಪ್ರಸಾದಿಗಳ ಕಂಡುಬಲ್ಲೆ,
ಲಿಂಗಪ್ರಸಾದಿಗಳಪೂರ್ವವಯ್ಯಾ.
ಭೋಗಲಿಂಗಕ್ಕೆ ಭೋಗವನಿತ್ತು ಭೋಗಿಸಬಲ್ಲನು,
ಅಚ್ಚಲಿಂಗಪ್ರಸಾದಿ ಸೌರಾಷ್ಟ್ರ ಸೋಮೇಶ್ವರಲಿಂಗವ
ಭೋಗಸಹಿತ ಬೆರೆವ ಪ್ರಸಾದಿ. ॥೨೫೮॥

೧೦೧೫
ಪುತ್ರೇಷಣ ವಿತ್ತೇಷಣ ದಾರೇಷಣಂಗಳೆಂಬ ಈಷಣತ್ರಯವನುಳಿದು
ಅಸಿ ಮಸಿ ಕೃಷಿ ವಾಣಿಜ್ಯಗಳೆಂಬ ವ್ಯಾಪಾರ ಪಾರಂಗತನಾಗಿ
ಸಂಸಾರ ಸ್ಪೃಹೆಯನುಳಿದು ನಿಸ್ಪೃಹನಾಗಿ,
ರಕ್ತ ಅನುರಕ್ತ ಅತಿರಕ್ತವೆಂಬ ರಕ್ತತ್ರಯಗೆಟ್ಟು ವಿರಕ್ತನಾಗಿ,
ಸಗುಣದಲ್ಲಿ ಸಲ್ಲದೆ ನಿರ್ಗುಣದಲ್ಲಿ ನಿಲ್ಲದೆ
ಸಗುಣ ನಿರ್ಗುಣಕ್ಕುಪಮಾತೀತವಾದ ಶಿವಲಿಂಗಾಂಗಿ
ಸೌರಾಷ್ಟ್ರ ಸೋಮೇಶ್ವರಲಿಂಗವಾದುದೆನ್ನ ಇಷ್ಟ. ॥೨೫೯॥

೧೦೧೬
ಪೃಥ್ವಿ ಅಪ್ಪು ತೇಜ ವಾಯು ಆಕಾಶ ಆತ್ಮ
ಮೊದಲಾದ ಷಡುಸ್ಥಲಂಗಳ ವಿವರವೆಂತೆಂದಡೆ:
ಪೃಥ್ವಿ ಭಕ್ತ, ಅಪ್ಪು ಮಾಹೇಶ್ವರ, ಅಗ್ನಿ ಪ್ರಸಾದಿ,
ವಾಯು ಪ್ರಾಣಲಿಂಗಿ, ಆಕಾಶ ಶರಣ, ಆತ್ಮನೈಕ್ಯ. ಇದಕ್ಕೆ ಶ್ರುತಿ:

“ಸದ್ಯೋಜಾತಂ ತಥಾ ಭಕ್ತಂ ವಾಮದೇವಂ ಮಹೇಶ್ವರಂ
ಪ್ರಸಾದಿನಮಘೋರಂಚ ಪುರುಷಂ ಪ್ರಾಣಲಿಂಗಿನಂ
ಈಶಾನಂ ಶರಣಂ ವಿಂದ್ಯಾದೈಕ್ಯಮಾತ್ಮಮಯಂ ತಥಾ
ಷಡಂಗಂ ಲಿಂಗಮೂಲಂ ಹಿ ದೇವದ್ಯೆಹಿಕ ಭಕ್ತಯೋಃ”
ಇಂತೆಂದುದಾಗಿ, ಷಡಂಗಕ್ಕೆ ಲಿಂಗಂಗಳಾವಾವೆಂದಡೆ:
ಭಕ್ತಂಗೆ ಆಚಾರಲಿಂಗ, ಮಾಹೇಶ್ವರಂಗೆ ಗುರುಲಿಂಗ,
ಪ್ರಸಾದಿಗೆ ಶಿವಲಿಂಗ, ಪ್ರಾಣಲಿಂಗಿಗೆ ಜಂಗಮಲಿಂಗ,
ಶರಣಂಗೆ ಪ್ರಸಾದಲಿಂಗ, ಐಕ್ಯಂಗೆ ಮಹಾಲಿಂಗ.
ಇಂತೀ ಷಡ್ವಿಧಲಿಂಗಂಗಳಿಗೆ ಕಳೆಯಾವಾವೆಂದಡೆ:
ಆಚಾರಲಿಂಗಕ್ಕೆ ನಿವೃತ್ತಿಕಳೆ, ಗುರುಲಿಂಗಕ್ಕೆ ಪ್ರತಿಷ್ಠಾಕಳೆ,
ಶಿವಲಿಂಗಕ್ಕೆ ವಿದ್ಯಾಕಳೆ, ಜಂಗಮಲಿಂಗಕ್ಕೆ ಶಾಂತಿಕಳೆ,
ಪ್ರಸಾದಲಿಂಗಕ್ಕೆ ಶಾಂತ್ಯತೀತ ಕಳೆ, ಮಹಾಲಿಂಗಕ್ಕೆ ಶಾಂತ್ಯತೀತೋತ್ತರಕಳೆ.
ಇಂತೀ ಷಡ್ವಿಧಲಿಂಗಂಗಳಿಗೆ ಮುಖಂಗಳಾವಾವೆಂದಡೆ:
ಆಚಾರಲಿಂಗಕ್ಕೆ ನಾಸಿಕ ಮುಖ, ಗುರುಲಿಂಗಕ್ಕೆ ಜಿಹ್ವೆ ಮುಖ,
ಶಿವಲಿಂಗಕ್ಕೆ ನೇತ್ರ ಮುಖ, ಜಂಗಮಲಿಂಗಕ್ಕೆ ತ್ವಕ್ಕು ಮುಖ,
ಪ್ರಸಾದಲಿಂಗಕ್ಕೆ ಶ್ರೋತ್ರಮುಖ, ಮಹಾಲಿಂಗಕ್ಕೆ ಹೃನ್ಮುಖ.
ಇಂತೀ ಷಡ್ವಿಧಲಿಂಗಂಗಳಿಗೆ ಹಸ್ತಂಗಳಾವಾವೆಂದಡೆ:
ಆಚಾರಲಿಂಗಕ್ಕೆ ಸುಚಿತ್ತ ಹಸ್ತ, ಗುರುಲಿಂಗಕ್ಕೆ ಸುಬುದ್ಧಿ ಹಸ್ತ,
ಶಿವಲಿಂಗಕ್ಕೆ ನಿರಹಂಕಾರ ಹಸ್ತ, ಜಂಗಮಲಿಂಗಕ್ಕೆ ಸುಮನ ಹಸ್ತ,
ಪ್ರಸಾದಲಿಂಗಕ್ಕೆ ಸುಜ್ಞಾನ ಹಸ್ತ, ಮಹಾಲಿಂಗಕ್ಕೆ ಸದ್ಭಾವ ಹಸ್ತ.
ಇಂತೀ ಷಡ್ವಿಧ ಲಿಂಗಂಗಳಿಗೆ ತೃಪ್ತಿಯಾವಾವೆಂದಡೆ:
ಆಚಾರಲಿಂಗಕ್ಕೆ ಗಂಧತೃಪ್ತಿ, ಗುರುಲಿಂಗಕ್ಕೆ ರಸತೃಪ್ತಿ,
ಶಿವಲಿಂಗಕ್ಕೆ ರೂಪತೃಪ್ತಿ, ಜಂಗಮಲಿಂಗಕ್ಕೆ ಸ್ಪರುಶನ ತೃಪ್ತಿ,
ಪ್ರಸಾದಲಿಂಗಕ್ಕೆ ಶಬ್ದತೃಪ್ತಿ,
ಮಹಾಲಿಂಗಕ್ಕೆ ಪಂಚೇಂದ್ರಿಯ ಪ್ರೀತಿಯೇ ತೃಪ್ತಿ.
ಇಂತೀ ಷಡ್ವಿಧಲಿಂಗಂಗಳಿಗೆ ಶಕ್ತಿಗಳಾವಾವೆಂದಡೆ:
ಆಚಾರಲಿಂಗಕ್ಕೆ ಕ್ರಿಯಾಶಕ್ತಿ, ಗುರುಲಿಂಗಕ್ಕೆ ಜ್ಞಾನಶಕ್ತಿ,
ಶಿವಲಿಂಗಕ್ಕೆ ಇಚ್ಛಾಶಕ್ತಿ, ಜಂಗಮಲಿಂಗಕ್ಕೆ ಆದಿಶಕ್ತಿ,
ಪ್ರಸಾದಲಿಂಗಕ್ಕೆ ಪರಾಶಕ್ತಿ, ಮಹಾಲಿಂಗಕ್ಕೆ ಚಿಚ್ಛಕ್ತಿ.
ಇಂತೀ ಷಡ್ವಿಧಲಿಂಗಂಗಳಿಗೆ ಭಕ್ತಿ ಯಾವಾವೆಂದಡೆ:
ಆಚಾರಲಿಂಗಕ್ಕೆ ಶ್ರದ್ಧಾಭಕ್ತಿ, ಗುರುಲಿಂಗಕ್ಕೆ ನಿಷ್ಠಾಭಕ್ತಿ,
ಶಿವಲಿಂಗಕ್ಕೆ ಅವಧಾನಭಕ್ತಿ, ಜಂಗಮಲಿಂಗಕ್ಕೆ ಅನುಭಾವಭಕ್ತಿ,
ಪ್ರಸಾದಲಿಂಗಕ್ಕೆ ಆನಂದಭಕ್ತಿ, ಮಹಾಲಿಂಗಕ್ಕೆ ಸಮರಸಭಕ್ತಿ.

ಇಂತೀ ಷಡ್ವಿಧಲಿಂಗಂಗಳಿಗೆ ವಿಷಯಂಗಳಾವಾವೆಂದಡೆ:
ಎಳಸುವುದು ಆಚಾರಲಿಂಗದ ವಿಷಯ,
ಎಳಸಿ ಮೋಹಿಸುವುದು ಗುರುಲಿಂಗದ ವಿಷಯ,
ಮೋಹಿಸಿ ಕೂಡುವುದು ಶಿವಲಿಂಗದ ವಿಷಯ,
ಕೂಡಿ ಸುಖಂಬಡುವುದು ಜಂಗಮಲಿಂಗದ ವಿಷಯ,
ಸುಖಂಬಡೆದು ಪರಿಣಾಮತೆಯನೆಯಿದೂದು
ಪ್ರಸಾದಲಿಂಗದ ವಿಷಯ,
ಪರಿಣಾಮತೆಯನೆಯ್ದಿ ನಿಶ್ಚಯಬಡೆವುದು ಮಹಾಲಿಂಗದ ವಿಷಯ.
ಇನ್ನು ಆಚಾರಲಿಂಗದಲ್ಲಿಯ ಮಿಶ್ರಾರ್ಪಣದ ವಿವರವೆಂತೆಂದಡೆ:
ಬೇರು ಗೆಡ್ಡೆ ಗೆಣಸು ಮೊದಲಾದವರಲ್ಲಿಯ ಗಂಧವನರಿವುದು
ಆಚಾರಲಿಂಗದಲ್ಲಿಯ ಆಚಾರಲಿಂಗ.
ಮರ ತಿಗುಡು ಹಗಿನ ಮೊದಲಾದವರಲ್ಲಿಯ ಗಂಧವನರಿವುದು
ಆಚಾರಲಿಂಗದಲ್ಲಿಯ ಗುರುಲಿಂಗ.
ಚಿಗುರು ತಳಿರು ಪತ್ರೆ ಮೊದಲಾದವರಲ್ಲಿಯ ಗಂಧವನರಿವುದು
ಆಚಾರಲಿಂಗದಲ್ಲಿಯ ಶಿವಲಿಂಗ.
ನನೆ ಮೊಗ್ಗೆ ಅರಳು ಮೊದಲಾದವರಲ್ಲಿಯ ಗಂಧವನರಿವುದು
ಆಚಾರಲಿಂಗದಲ್ಲಿಯ ಜಂಗಮಲಿಂಗ.
ಕಾಯಿ ದೋರೆ ಹಣ್ಣು ಮೊದಲಾದವರಲ್ಲಿಯ ಗಂಧವನರಿವುದು
ಆಚಾರಲಿಂಗದಲ್ಲಿಯ ಪ್ರಸಾದಲಿಂಗ.
ಇಂತಿವರಲ್ಲಿಯ ಗಂಧತೃಪ್ತಿಯನರಿವುದು,
ಆಚಾರಲಿಂಗದಲ್ಲಿಯ ಮಹಾಲಿಂಗ.
ಇನ್ನು ಗುರುಲಿಂಗದಲ್ಲಿಯ ಮಿಶ್ರಾರ್ಪಣದ ವಿವರವೆಂತೆಂದಡೆ:
ಮಧುರವಾದ ರುಚಿಯನರಿವುದು ಗುರುಲಿಂಗದಲ್ಲಿಯ ಆಚಾರಲಿಂಗ,
ಒಗರವಾದ ರುಚಿಯನರಿವುದು ಗುರುಲಿಂಗದಲ್ಲಿಯ ಗುರುಲಿಂಗ,
ಖಾರವಾದ ರುಚಿಯನರಿವುದು ಗುರುಲಿಂಗದಲ್ಲಿಯ ಶಿವಲಿಂಗ,
ಆಮ್ರವಾದ ರುಚಿಯನರಿವುದು ಗುರುಲಿಂಗದಲ್ಲಿಯ ಜಂಗಮಲಿಂಗ,
ಕಹಿಯಾದ ರುಚಿಯನರಿವುದು ಗುರುಲಿಂಗದಲ್ಲಿಯ ಪ್ರಸಾದಲಿಂಗ,
ಲವಣವಾದ ರುಚಿಯನರಿವುದು ಗುರುಲಿಂಗದಲ್ಲಿಯ ಮಹಾಲಿಂಗ.
ಇನ್ನು ಶಿವಲಿಂಗದಲ್ಲಿಯ ಮಿಶ್ರಾರ್ಪಣದ ವಿವರವೆಂತೆಂದಡೆ:
ಪೀತವರ್ಣವಾದ ರೂಪನರಿವುದು ಶಿವಲಿಂಗದಲ್ಲಿಯ ಆಚಾರಲಿಂಗ,
ಶ್ವೇತವರ್ಣವಾದ ರೂಪನರಿವುದು ಶಿವಲಿಂಗದಲ್ಲಿಯ ಗುರುಲಿಂಗ,
ಹರಿತವರ್ಣವಾದ ರೂಪನರಿವುದು ಶಿವಲಿಂಗದಲ್ಲಿಯ ಶಿವಲಿಂಗ,
ಮಾಂಜಿಷ್ಟವರ್ಣವಾದ ರೂಪನರಿವುದು

ಶಿವಲಿಂಗದಲ್ಲಿಯ ಜಂಗಮಲಿಂಗ,
ಕಪೋತವರ್ಣವಾದ ರೂಪನರಿವುದು ಶಿವಲಿಂಗದಲ್ಲಿಯ ಪ್ರಸಾದಲಿಂಗ,
ಇಂತಿವರ ಸಂಪರ್ಕಸಂಯೋಗವರ್ಣವಾದ ರೂಪನರಿವುದು
ಶಿವಲಿಂಗದಲ್ಲಿಯ ಮಹಾಲಿಂಗ.
ಇನ್ನು ಜಂಗಮದಲ್ಲಿಯ ಮಿಶ್ರಾರ್ಪಣದ ವಿವರವೆಂತೆಂದಡೆ:
ಕಠಿಣವಾದ ಸ್ಪರುಶನವನರಿವುದು ಜಂಗಮಲಿಂಗದಲ್ಲಿಯ ಆಚಾರಲಿಂಗ,
ಮೃದುವಾದ ಸ್ಪರುಶನವನರಿವುದು ಜಂಗಮಲಿಂಗದಲ್ಲಿಯ ಗುರುಲಿಂಗ,
ಉಷ್ಣವಾದ ಸ್ಪರುಶನವನರಿವುದು ಜಂಗಮಲಿಂಗದಲ್ಲಿಯ ಶಿವಲಿಂಗ,
ಶೈತ್ಯವಾದ ಸ್ಪರುಶನವನರಿವುದು ಜಂಗಮಲಿಂಗದಲ್ಲಿಯ ಜಂಗಮಲಿಂಗ,
ಇಂತೀ ಪರುಶನ ನಾಲ್ಕರ ಮಿಶ್ರಸ್ಪರುಶನವನರಿವುದು
ಜಂಗಮಲಿಂಗದಲ್ಲಿಯ ಪ್ರಸಾದಲಿಂಗ,
ಸ್ಪರುಶನೇಂದ್ರಿಯ ತೃಪ್ತಿಯನರಿವುದು ಜಂಗಮಲಿಂಗದಲ್ಲಿಯ ಮಹಾಲಿಂಗ.
ಇನ್ನು ಪ್ರಸಾದಲಿಂಗದಲ್ಲಿಯ ಮಿಶ್ರಾರ್ಪಣದ ವಿವರವೆಂತೆಂದಡೆ:
ಘಂಟೆ ಜಯಘಂಟೆ ತಾಳ ಕೌಸಾಳ ಮೊದಲಾದ ವಾದ್ಯವನರಿವುದು
ಪ್ರಸಾದಲಿಂಗದಲ್ಲಿಯ ಆಚಾರಲಿಂಗ,
ವೀಣೆ ರುದ್ರವೀಣೆ ತುಂಬುರುವೀಣೆ ಕಿನ್ನರವೀಣೆ ಕೈಲಾಸವೀಣೆ
ಮೊದಲಾದ ತಂತಿಕಟ್ಟಿ ನುಡಿವ ವಾದ್ಯವನರಿವುದು
ಪ್ರಸಾದಲಿಂಗದಲ್ಲಿಯ ಗುರುಲಿಂಗ,
ಪಟಹ ಪಡ ಡಕ್ಕೆ ಡಿಂಡಿಮ ಆವುಜ ಪಟಾವುಜ ಮೃದಂಗ ಮುರಜ ಭೇರಿ
ಮೊದಲಾದ ವಾದ್ಯವನರಿವುದು ಪ್ರಸಾದಲಿಂಗದಲ್ಲಿಯ ಶಿವಲಿಂಗ,
ಕಹಳೆ ಹೆಗ್ಗಹಳೆ ಶಂಖ ವಾಂಸ ನಾಗಸರ ಉಪಾಂಗ ಮೊದಲಾದ
ವಾದ್ಯವನರಿವುದು ಪ್ರಸಾದಲಿಂಗದಲ್ಲಿಯ ಜಂಗಮಲಿಂಗ,
ಸಂಗೀತ ಸಾಹಿತ್ಯ ಶಬ್ದಾರ್ಥ ಮೊದಲಾದ ವಾದ್ಯವನರಿವುದು
ಪ್ರಸಾದಲಿಂಗದಲ್ಲಿಯ ಪ್ರಸಾದಲಿಂಗ,
ಪಂಚಮಹಾವಾದ್ಯಂಗಳ ತೃಪ್ತಿಯನರಿವುದು
ಪ್ರಸಾದಲಿಂಗದಲ್ಲಿಯ ಮಹಾಲಿಂಗ.
ಇನ್ನು ಮಹಾಲಿಂಗದಲ್ಲಿಯ ಮಿಶ್ರಾರ್ಪಣದ ವಿವರವೆಂತೆಂದಡೆ:
ಆಚಾರಲಿಂಗದಲ್ಲಿಯ ಮಿಶ್ರಾರ್ಪಣದ ತೃಪ್ತಿಯನರಿವುದು
ಮಹಾಲಿಂಗದಲ್ಲಿಯ ಆಚಾರಲಿಂಗ,
ಗುರುಲಿಂಗದಲ್ಲಿಯ ಮಿಶ್ರಾರ್ಪಣದ ತೃಪ್ತಿಯನರಿವುದು
ಮಹಾಲಿಂಗದಲ್ಲಿಯ ಗುರುಲಿಂಗ,
ಶಿವಲಿಂಗದಲ್ಲಿಯ ಮಿಶ್ರಾರ್ಪಣದ ತೃಪ್ತಿಯನರಿವುದು
ಮಹಾಲಿಂಗದಲ್ಲಿಯ ಶಿವಲಿಂಗ,

ಜಂಗಮಲಿಂಗದಲ್ಲಿಯ ಮಿಶ್ರಾರ್ಪಣದ ತೃಪ್ತಿಯನರಿವುದು
ಮಹಾಲಿಂಗದಲ್ಲಿಯ ಜಂಗಮಲಿಂಗ,
ಪ್ರಸಾದಲಿಂಗದಲ್ಲಿಯ ಮಿಶ್ರಾರ್ಪಣದ ತೃಪ್ತಿಯನರಿವುದು
ಮಹಾಲಿಂಗದಲ್ಲಿಯ ಪ್ರಸಾದಲಿಂಗ,
ಅವಿರಳಭಾವ ಭಾವೈಕ್ಯ ನಿರ್ದೇಶನತೃಪ್ತಿಯನರಿವುದು
ಮಹಾಲಿಂಗದಲ್ಲಿಯ ಮಹಾಲಿಂಗ.
ಇನ್ನು ಆಚಾರಲಿಂಗ ಮೋಹಿತನಾದಡೆ
ಸತಿ ಸುತ ಬಾಂಧವರಲ್ಲಿಯ ಮೋಹವಿಲ್ಲದಿರಬೇಕು.
ಆಚಾರಲಿಂಗ ಭಕ್ತನಾದಡೆ ಸ್ವಯ ಕಾಯಕದಲ್ಲಿರಬೇಕು.
ಆಚಾರಲಿಂಗ ವೀರನಾದಡೆ ಪೂರ್ವವನಳಿದು ಪುನರ್ಜಾತನಾಗಬೇಕು.
ಆಚಾರಲಿಂಗ ಪ್ರಾಣಿಯಾದಡೆ ಭವಿಗಳಿಗೆ ತಲೆವಾಗದಿರಬೇಕು.
ಆಚಾರಲಿಂಗ ಪ್ರಸಾದಿಯಾದಡೆ ಜಿಹ್ವೆ ಲಂಪಟವಿಲ್ಲದಿರಬೇಕು.
ಆಚಾರಲಿಂಗ ತೃಪ್ತನಾದಡೆ ಭಕ್ತಕಾಯ ಮಮಕಾಯನಾಗಿರಬೇಕು.
ಇನ್ನು ಗುರುಲಿಂಗ ಮೋಹಿತನಾದಡೆ ತನುಗುಣ ನಾಸ್ತಿಯಾಗಿರಬೇಕು.
ಗುರುಲಿಂಗ ಭಕ್ತನಾದಡೆ ತನು ಗುರುವಿನಲ್ಲಿ ಸವೆಯಬೇಕು.
ಗುರುಲಿಂಗ ವೀರನಾದಡೆ ಭವರೋಗಂಗಳಿಲ್ಲದಿರಬೇಕು.
ಗುರುಲಿಂಗ ಪ್ರಾಣಿಯಾದಡೆ ಪ್ರಕೃತಿಗುಣರಹಿತನಾಗಿರಬೇಕು.
ಗುರುಲಿಂಗ ಪ್ರಸಾದಿಯಾದಡೆ ಗುರುಪ್ರಸಾದವನಲ್ಲದೆ ಸ್ವೀಕರಿಸದಿರಬೇಕು.
ಗುರುಲಿಂಗ ತೃಪ್ತನಾದಡೆ ಅರಸುವ ಅರಕೆಯಿಲ್ಲದಿರಬೇಕು.
ಇನ್ನು ಶಿವಲಿಂಗ ಮೋಹಿತನಾದಡೆ ಮನಗುಣ ನಾಸ್ತಿಯಾಗಿರಬೇಕು.
ಶಿವಲಿಂಗ ಭಕ್ತನಾದಡೆ ಲಿಂಗದ ಏಕೋಗ್ರಾಹಕತ್ವವಳವಟ್ಟಿರಬೇಕು.
ಶಿವಲಿಂಗ ವೀರನಾದಡೆ ಕಾಲಕರ್ಮಾದಿಗಳಿಗಳುಕದಿರಬೇಕು.
ಶಿವಲಿಂಗ ಪ್ರಾಣಿಯಾದಡೆ ಜನನಮರಣಂಗಳಿಗೊಳಗಾಗದಿರಬೇಕು.
ಶಿವಲಿಂಗ ಪ್ರಸಾದಿಯಾದಡೆ ಶಿವಪ್ರಸಾದವನಲ್ಲದೆ ಸ್ವೀಕರಿಸದಿರಬೇಕು.
ಶಿವಲಿಂಗ ತೃಪ್ತನಾದಡೆ ದ್ವೈತಾದ್ವೈತವಳಿದಿರಬೇಕು.
ಇನ್ನು ಜಂಗಮಲಿಂಗ ಮೋಹಿತನಾದಡೆ ಪ್ರಾಣಗುಣನಾಸ್ತಿಯಾಗಿರಬೇಕು.
ಜಂಗಮಲಿಂಗ ಭಕ್ತನಾದಡೆ ಜಂಗಮದಲ್ಲಿ
ಧನಮನವ ಮುಟ್ಟಿ ಸವೆಯಬೇಕು.
ಜಂಗಮಲಿಂಗ ವೀರನಾದಡೆ ಭಯಭಂಗವಿಲ್ಲದಿರಬೇಕು.
ಜಂಗಮಲಿಂಗಪ್ರಾಣಿಯಾದಡೆ ತಥ್ಯಮಿಥ್ಯರಾಗದ್ವೇಷಂಗಳಿಲ್ಲದಿರಬೇಕು.
ಜಂಗಮಲಿಂಗಪ್ರಸಾದಿಯಾದಡೆ ಭೋಗಭೂಷಣಂಗಳಾಸೆಯಿಲ್ಲದಿರಬೇಕು.
ಜಂಗಮಲಿಂಗ ತೃಪ್ತನಾದಡೆ ದೇಹೋಹಮ್ಮಿಲ್ಲದಿರಬೇಕು.
ಇನ್ನು ಪ್ರಸಾದಲಿಂಗಮೋಹಿತನಾದಡೆ

ಶಬ್ದಜಾಲಂಗಳಿಗೆ ಕಿವಿಯೊಡ್ಡದಿರಬೇಕು.
ಪ್ರಸಾದಲಿಂಗ ಭಕ್ತನಾದಡೆ ದಾಸೋಹಮ್ಮಿಲ್ಲದಿರಬೇಕು.
ಪ್ರಸಾದಲಿಂಗ ವೀರನಾದಡೆ ಚಿದಹಮ್ಮಿಲ್ಲದಿರಬೇಕು.
ಪ್ರಸಾದಲಿಂಗ ಪ್ರಾಣಿಯಾದಡೆ ಪ್ರಾಣಲಿಂಗದೊಳಭಿನ್ನನಾಗಿರಬೇಕು.
ಪ್ರಸಾದಲಿಂಗ ಪ್ರಸಾದಿಯಾದಡೆ ಪ್ರಸಾದಪ್ರಸನ್ನನಾಗಿರಬೇಕು.
ಪ್ರಸಾದಲಿಂಗ ತೃಪ್ತನಾದಡೆ ಇಂದ್ರಿಯಂಗಳಿಚ್ಛೆಯಿಲ್ಲದಿರಬೇಕು.
ಇನ್ನು ಮಹಾಲಿಂಗ ಮೋಹಿತನಾದಡೆ
ಅಣಿಮಾದಿ ಅಷ್ಟಮಹದೈಶ್ವರ್ಯಂಗಳ ಬಯಸದಿರಬೇಕು.
ಮಹಾಲಿಂಗ ಭಕ್ತನಾದಡೆ ಅಷ್ಟಮಹಾಸಿದ್ಧಿಗಳ ನೆನೆಯದಿರಬೇಕು.
ಮಹಾಲಿಂಗ ವೀರನಾದಡೆ ಚತುರ್ವಿಧ ಪದವಿಯ ಹಾರದಿರಬೇಕು.
ಮಹಾಲಿಂಗ ಪ್ರಾಣಿಯಾದಡೆ ಇಹಪರಂಗಳಾಸೆ ಇಲ್ಲದಿರಬೇಕು.
ಮಹಾಲಿಂಗ ಪ್ರಸಾದಿಯಾದಡೆ
ಅರಿವು ಮರಹಳಿದು ಚಿಲ್ಲಿಂಗಸಂಗಿಯಾಗಿರಬೇಕು.
ಮಹಾಲಿಂಗ ತೃಪ್ತನಾದಡೆ ಭಾವಸದ್ಭಾವನಿರ್ಭಾವನಳಿದು ಭಾವೈಕ್ಯವಾಗಿ
ತಾನಿದಿರೆಂಬ ಭಿನ್ನಭಾವ ತೋರದಿರಬೇಕು.
ಇಂತೀ ನೂರೆಂಟು ಸ್ಥಲದಲ್ಲಿ ನಿಪುಣನಾಗಿ
ಮಿಶ್ರಷಡ್ವಿಧಸ್ಥಲ ಷಡುಸ್ಥಲ ತ್ರಿಸ್ಥಲ ಏಕಸ್ಥಲವಾಗಿ ಸ್ಥಲ ನಿಃಸ್ಥಲವನೆಯ್ದಿ
ಸೌರಾಷ್ಟ್ರ ಸೋಮೇಶ್ವರಲಿಂಗ ತಾನು ತಾನಾಗಿರಬೇಕಯ್ಯಾ. ॥೨೬೦॥

೧೦೧೭

ಪೃಥ್ವಿಯ ಕಠಿಣವಳಿದ ಭಕ್ತಂಗೆ ಜಾಗ್ರಾವಸ್ಥೆಯಿಲ್ಲ.
ಅಪ್ಪುವಿನ ಮೃದುವಳಿದ ಮಾಹೇಶ್ವರಂಗೆ ಸ್ವಪ್ನಾವಸ್ಥೆಯಿಲ್ಲ.
ಅಗ್ನಿಯ ಉಷ್ಣವಳಿದ ಪ್ರಸಾದಿಗೆ ಸುಷುಪ್ತ್ಯವಸ್ಥೆಯಿಲ್ಲ.
ವಾಯುವಿನ ಗಮನವಳಿದ ಪ್ರಾಣಲಿಂಗಿಗೆ ತುರೀಯಾವಸ್ಥೆಯಿಲ್ಲ.
ಆಕಾಶದ ಶಬ್ದಗುಣವಳಿದ ಶರಣಂಗೆ ತುರೀಯಾತೀತ ನಿರವಸ್ಥೆಯಿಲ್ಲ.
ಆತ್ಮತೇಜದ ಮೂಲಾಹಂಕಾರವಳಿದ ಐಕ್ಯಂಗೆ ಇನಿತೆನಿತೇನೂ ಇಲ್ಲ.
ಸೌರಾಷ್ಟ್ರ ಸೋಮೇಶ್ವರನಂಗಂಗೊಂಡ
ಸುರಾಳ ನಿರಾಳ ನಿರವಯ ಧ್ಯಾನಾತೀತ
ಮನಾತೀತ ಭಾವಾತೀತ ಜ್ಞಾನಾತೀತ ಅಗೋಚರ ಅತ್ಯತಿಷ್ಠದ್ದಶಾಂಗುಲಂ. ॥೨೬೧॥

೧೦೧೮

ಪೃಥ್ವಿಯ ಕೂಡಿ ನೆಲನಹನಲ್ಲ, ಅಪ್ಪುವ ಕೂಡಿ ಜಲವಹನಲ್ಲ,
ಅಗ್ನಿಯ ಕೂಡಿ ಕಿಚ್ಚಿನಹನಲ್ಲ, ವಾಯುವ ಕೂಡಿ ಗಾಳಿಯಹನಲ್ಲ,
ಆಕಾಶವ ಕೂಡಿ ಬಯಲಹನಲ್ಲ,

ಆತ್ಮನ ಗೂಡಿ ಭವಕರ್ಮಿಯಹನಲ್ಲ.
ಲಿಂಗವ ಕೂಡಿ ಲಿಂಗವಹನು
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ. ॥೨೬೨॥

೧೦೧೯
ಪೃಥ್ವಿಯ ಪೂರ್ವಾಶ್ರಯವಳಿದ ಭಕ್ತಂಗೆ ಆಚಾರಲಿಂಗಸಾಹಿತ್ಯ,
ಅಪ್ಪುವಿನ ಪೂರ್ವಾಶ್ರಯವಳಿದ ಮಾಹೇಶ್ವರಂಗೆ ಗುರುಲಿಂಗಸಾಹಿತ್ಯ,
ಅಗ್ನಿಯ ಪೂರ್ವಾಶ್ರಯವಳಿದ ಪ್ರಸಾದಿಗೆ ಶಿವಲಿಂಗಸಾಹಿತ್ಯ,
ವಾಯುವಿನ ಪೂರ್ವಾಶ್ರಯವಳಿದ ಪ್ರಾಣಲಿಂಗಿಗೆ ಜಂಗಮಲಿಂಗಸಾಹಿತ್ಯ,
ಆಕಾಶದ ಪೂರ್ವಾಶ್ರಯವಳಿದ ಶರಣಂಗೆ ಪ್ರಸಾದಲಿಂಗಸಾಹಿತ್ಯ,
ಆತ್ಮನ ಪೂರ್ವಾಶ್ರಯವಳಿದ ಐಕ್ಯಂಗೆ ಮಹಾಲಿಂಗಸಾಹಿತ್ಯ,
ಇಂತೀ ಷಡಂಗಗಳ ಪೂರ್ವಾಶ್ರಯವಳಿದ ನಿರಾಳಂಗೆ
ಸೌರಾಷ್ಟ್ರ ಸೋಮೇಶ್ವರಲಿಂಗ ಒಮ್ಮುಖ. ॥೨೬೩॥

೧೦೨೦
ಪ್ರಣವಾಂಕುರದಿಂ ತೋರಿತ್ತು ಚಿತ್ತು, ಆ ಚಿತ್ತುವಿಂ ಕಾಣಿಸಿತ್ತು ಮಹವು,
ಆ ಮಹವೆ ವಾಚಸ್ಪತಿಯಾಗಿ ವೇದಾಂತ ವೇದ್ಯವಾಯಿತ್ತು.
ಅದು ತಾನೆ ಪರಮಜ್ಞಾನಸ್ವಯದಿಂ
ಸಮ್ಯಕ್ ಪರಬ್ರಹ್ಮ ಸ್ವಸುಖವೆಂದುದಾಗಿ, ಇದಕ್ಕೆ ಶ್ರುತಿ:
"ಓಂ ಅಗ್ನಯೇ ಸಮಿಧಮಾರುಹಂ ಬೃಹತೇ ಜಾತವೇದಸ್ಸೇತಯಾ
ತ್ವಮಗ್ನೇ ವರ್ಧಸ್ವ ಸಮಿಧಾ ಬ್ರಹ್ಮಣಾ ವಯಂ ಸ್ವಯಮಿತಿ"
ಇಂತೆಂದುದಾಗಿ.
ಸೌರಾಷ್ಟ್ರ ಸೋಮೇಶ್ವರಲಿಂಗ, ಸ್ವಯಸುಖವಪೂರ್ವವಯ್ಯಾ. ॥೨೬೪॥

೧೦೨೧
ಪ್ರತಿಯಿಲ್ಲದ ಲಿಂಗದಲ್ಲಿ ಪ್ರತಿರಹಿತವಾದ ಮಹಿಮನಿಗೆ
ಅತಿಶಯವೊಂದಿಲ್ಲಾಗಿ ಸಂಸ್ಮೃತಿ ವಿಸ್ಮೃತಿಗಳಿಲ್ಲ.
ಸೂಕ್ಷ್ಮಾಸೂಕ್ಷ್ಮವಿಲ್ಲ ಯೋಗವಿಯೋಗವಿಲ್ಲ.
ಅಭೇದ್ಯ ಚಿತ್ರಕಾಶಂಗೆ ಒಳಹೊರಗಿಲ್ಲ,
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣಂಗೆ. ॥೨೬೫॥

೧೦೨೨
ಪ್ರಸಾದ ಪ್ರಸಾದವೆಂಬರು, ಪ್ರಸಾದವಾವುದೆಂದರಿಯರು.
ಅನ್ನವೆ ಪ್ರಸಾದವೆಂದು ಕೊಡುವಾತ ಶರಣನಲ್ಲ.

ಅನ್ನವೆ ಪ್ರಸಾದವೆಂದು ಕೊಂಬಾತ ಭಕ್ತನಲ್ಲ. ಅದೆಂತೆಂದಡೆ:
“ಅನ್ನಮಾಹಾರೇತ್ಸರ್ವಮನ್ನಮುತ್ಪತ್ತಿಹೇತವೇ
ಅನ್ನಮಾಭ್ಯಂತರಂ ಪ್ರಾಣಂ ಸರ್ವಮನ್ನಮಯಂ ಜಗತ್”
ಇಂತೆಂದುದಾಗಿ,
ಅನ್ನ ಜೀವಕ್ಕೆ ಆಧಾರ, ಅನ್ನವೇ ಸರ್ವಜನಕ್ಕೆ ಸನ್ಮತ.
ಇದು ಕಾರಣ, ಅನ್ನವೇ ಪ್ರಸಾದವಲ್ಲ.
ಶರಣನಪ್ಪ ಸದ್ಗುರುಸ್ವಾಮಿ ನೆತ್ತಿಯಲ್ಲಿರ್ದ ಉತ್ತಮಪ್ರಸಾದವನರು[ಹಿ]
ಬ್ರಹ್ಮರಂಧ್ರದಲ್ಲಿ ಪ್ರಕಾಶಿಸುತಿರ್ಪ
ಮಹಾಲಿಂಗದೊಳುಬ್ಬಿದ ಪರಮಾಮೃತವೆ ಪ್ರಸಾದ.
ಅಂತಪ್ಪ ಪ್ರಸಾದಗ್ರಾಹಕತ್ವವೆಂತಪ್ಪುದೆಂದಡೆ,
ಅಂಗವ ಮರೆದು ಮನಮಗ್ನವಾಗಿ ಉಚ್ಛ್ವಾಸ ನಿಶ್ವಾಸಂಗಳಡಗಿ,
ಪ್ರಾಣನು ಪ್ರಸಾದದೊಳ್ಮುಳುಗಿ ಪರಮಕಾಷ್ಠೆಯನೆಯ್ದಿ ನಿಂದಾತನೆ,
ಸೌರಾಷ್ಟ್ರ ಸೋಮೇಶ್ವರನಲ್ಲಿ ಮಹಾಪ್ರಸಾದಿ ಎನಿಸಿಕೊಂಬನು. ॥೨೬೬॥

೧೦೨೩
ಪ್ರಸಾದವೇ ಪರಮಜ್ಞಾನ, ಪ್ರಸಾದವೇ ಪರಾಪರ,
ಪ್ರಸಾದವೇ ಪರಬ್ರಹ್ಮ, ಪ್ರಸಾದವೇ ಪರಮಾನಂದ,
ಪ್ರಸಾದವೇ ಗುರು, ಪ್ರಸಾದವೇ ಲಿಂಗ, ಪ್ರಸಾದವೇ ಜಂಗಮ,
ಪ್ರಸಾದವೇ ಪರಿಪೂರ್ಣ,
ಸೌರಾಷ್ಟ್ರ ಸೋಮೇಶ್ವರಲಿಂಗದ ಪ್ರಸನ್ನತೆಯೆ ಪ್ರಸಾದ.
ಇಂತಪ್ಪ ಪ್ರಸಾದದ ಮಹಾತ್ಮೆಗೆ
ಆನು ನಮೋ ನಮೋಯೆನುತಿರ್ದೆನು. ॥೨೬೭॥

೧೦೨೪
ಪ್ರಾಣದ ಮೇಲೆ ಪ್ರಾಣಲಿಂಗ ಸ್ವಾಯತವಾದ ಬಳಿಕ
ಪ್ರಾಣಗುಣವಳಿದು, ಪ್ರಕೃತಿ ಹಿಂಗಿ,
ದೇಹೇಂದ್ರಿಯ ಕರಣ ಜೀವ ಭಾವ ಅರಿವು
ಶಬ್ದ ಸ್ಪರ್ಶ ರೂಪು ರಸ ಗಂಧ ಸ್ರಕ್ಚಂದನ
ವನಿತಾದಿ ಅಷ್ಟಭೋಗಂಗಳು ಲಿಂಗದಲ್ಲಿ ಮನಮುಟ್ಟಿ ನಟ್ಟಿರಲು
ಅದೇ ಅರ್ಪಿತಾಂಗಲಿಂಗಾರ್ಪಿತವಾಗಿ, ಪರಿಣಾಮಪ್ರಸಾದಸಾಹಿತ್ಯವಯ್ಯಾ
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣಂಗೆ. ॥೨೬೮॥

೧೦೨೫

ಪ್ರಾಣಲಿಂಗಧಾರಣದಲ್ಲಿಯಲ್ಲದೆ
ಪ್ರಾಣವಾಯುಧಾರಣದಲ್ಲಿ ಜೀವದ ಅನಾದಿಕರ್ಮ ಕೆಡದು ನೋಡಯ್ಯಾ.
ಶಿವಾದ್ವೈತಜ್ಞಾನದಲ್ಲಿಯಲ್ಲದೆ
ಆತ್ಮಾದ್ವೈತಜ್ಞಾನದಲ್ಲಿ ಮೂಲ ಅವಿದ್ಯೆ ಕೆಡದು ನೋಡಯ್ಯಾ.
ತನುಭಾವವಳಿದು ಬ್ರಹ್ಮಭಾವ ಕರಿಗೊಂಡಲ್ಲದೆ ಅಷ್ಟಾದಶದೋಷಂಗಳಳಿಯವು.
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ ಅವಿರಳನಾದಲ್ಲದೆ
ನಿತ್ಯಮುಕ್ತಿಯಿಲ್ಲ ನೋಡಯ್ಯಾ. ॥೨೯॥

೧೦೨೬

ಬಂಧಮೋಕ್ಷಂಗಳ ಭ್ರಾಂತನಳಿದು
ಲಿಂಗವೇದಿಯಾದ ಶರಣಂಗೆ ಅಂಗಭಂಗವಿಲ್ಲ,
ಅಂಗಭಂಗವಿಲ್ಲವಾಗಿ ಪ್ರಸಾದಕ್ಕೆ ಹೊರಗಲ್ಲ,
ಪ್ರಸಾದಕ್ಕೆ ಹೊರಗಲ್ಲವಾಗಿ
ಒಳಗೆ ಪ್ರಾಣಲಿಂಗ, ಹೊ[ರಗೆ] ಪ್ರಸಾದವೆಂಬ ಭಂಗಹೊದ್ದದು.
ಷಟ್‌ಸ್ಥಲಜ್ಞಾನದ ವರ್ಮವ ಬಲ್ಲನಾಗಿ
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ ಪ್ರಸಾದಸನ್ನಿಹಿತ. ॥೩೦॥

೧೦೨೭

ಬಟ್ಟಬಯಲ ದೃಷ್ಟಾಕಾಶದಲ್ಲಿ ನಾನೊಂದು ದೃಷ್ಟವ ಕಂಡೆ.
ಹುಟ್ಟಿಹೊಂದದ ಶಿಶುವೊಂದು ಗಟ್ಟಿಗೊಂಡು
ಮುಟ್ಟಲೀಯದಿದಿರಿಟ್ಟು ತೋರಿ, ಹೆಸರಿಟ್ಟು ಕರೆಸಿಕೊಂಡಿತ್ತಿದೇನೊ!
ನೋಡಬಲ್ಲುದು, ನುಡಿಯಲರಿಯದು,
ಕೊಡಬಲ್ಲುದು, ಬೇಡಲರಿಯದು,
ಕೂಡಬಲ್ಲುದು, ಅಗಲಲರಿಯದಿದೇನೊ!
ತಾನೆ ತಾನಾಗಿ ನಾನೆ ತಾನಾಗಿ ತಾನಾಗಿಬ್ಬರೊಂದಾಗಿ,
ಸೌರಾಷ್ಟ್ರ ಸೋಮೇಶ್ವರಾ, ತಾನೊ ನಾನೊ ಏನೆಂದರಿಯೆ. ॥೩೧॥

೧೦೨೮

ಬದ್ಧನಲ್ಲ ಮುಕ್ತನಲ್ಲ, ಎರಡಿಲ್ಲವಾಗಿ ಸಹಜಭರಿತನಯ್ಯಾ.
ಮನ ಭಾವ ಕರಣಂಗಳು ಲಿಂಗವ ಸೋಂಕಿ, ನೆನಹುಗೆಟ್ಟು,
ಸಂದು ನಷ್ಟವಾದ ಅಚಲಲಿಂಗೈಕ್ಯಂಗೆ ಮತ್ತಾವಂಗವೂ ಇಲ್ಲ.

ನಿರಂಜನ ನಿಃಪ್ರಾಣ ಶಿಖಿಕರ್ಪುರಯೋಗದಂತೆ
ಸೌರಾಷ್ಟ್ರ ಸೋಮೇಶ್ವರನಲ್ಲಿ ಲಿಂಗೈಕ್ಯವು. ॥೨೭॥

೧೦೨೯
ಬಲ್ಲೆನೆಂಬುದು ಮಾಯೆ, ಅರಿಯೆನೆಂಬುದು ಮಾಯೆ,
ಒಲ್ಲೆನೆಂಬುದು ಮಾಯೆ, ಒಲಿವೆನೆಂಬುದು ಮಾಯೆ,
ಜೀವವೆಂಬುದು ಮಾಯೆ, ಮುಕ್ತನೆಂಬುದು ಮಾಯೆ,
ಸತಿ ಸುತ ಪಿತ ಮಾತೆಯವರೆಲ್ಲ ಮಾಯೆ,
ಭೃತ್ಯ ಭ್ರಾತಾದಿಗಳವರೆಲ್ಲ ಮಾಯೆ,
ಆನೆಂಬುದು ಮಾಯೆ, ನೀನೆಂಬುದು ಮಾಯೆ,
ಸೌರಾಷ್ಟ್ರ ಸೋಮೇಶ್ವರ ತಾನೆಂಬುದು ಮಾಯೆ. ॥೨೮॥

೧೦೩೦
ಬಸವಣ್ಣನ ಭಕ್ತಿಸ್ಥಲ, ಮಡಿವಾಳ ಮಾಚಣ್ಣನ ಮಾಹೇಶ್ವರಸ್ಥಲ,
ಘಟ್ಟಿವಾಳ ಮುದ್ದಣ್ಣನ ಪ್ರಸಾದಿಸ್ಥಲ, ಚನ್ನಬಸವಣ್ಣನ ಪ್ರಾಣಲಿಂಗಿಸ್ಥಲ,
ಪ್ರಭುವಿನ ಶರಣಸ್ಥಲ, ಸೊಡ್ಡಳ ಬಾಚರಸರ ಐಕ್ಯಸ್ಥಲ,
ಅಜಗಣ್ಣನ ಆರೂಢ, ನಿಜಗುಣನ ಬೆರಗು,
ಅನಿಮಿಷನ ನಿಶ್ಚಲ, ಮಹದೇವಿಯಕ್ಕನ ಜ್ಞಾನ,
ನಿಂಬಿಯಕ್ಕನ ನಿಶ್ಚಯ, ಮುಕ್ತಾಯಕ್ಕನ ಅಕ್ಕರು,
ಸತ್ಯಕ್ಕನ ಯುಕ್ತಿ, ಅಲ್ಲಾಳಿಯಕ್ಕನ ಸಮತೆ,
ರೇವಣಸಿದ್ಧಯ್ಯದೇವರ ನಿಷ್ಠೆ, ಸಿದ್ಧರಾಮತಂದೆಗಳ ಮಹಿಮೆ,
ಮರುಳಸಿದ್ಧಯ್ಯದೇವರ ಅದೃಷ್ಟ ಪ್ರಸಾದನಿಷ್ಠೆ,
ಏಕೋರಾಮಯ್ಯಗಳ ಆಚಾರನಿಷ್ಠೆ, ಪಂಡಿತಾರಾಧ್ಯರ ಸ್ವಯಂಪಾಕ,
ಮುಗ್ಧಸಂಗಯ್ಯ, ಮೈದುನ ರಾಮಣ್ಣ, ಬೇಡರ ಕಣ್ಣಪ್ಪ,
ಕೋಳೂರ ಕೊಡಗೂಸು, ತಿರುನೀಲಕ್ಕರು,
ರುದ್ರಪಶುಪತಿಗಳು, ದೀಪದ ಕಲಿಯಾರ ಮುಗ್ಧಭಕ್ತಿ
ನಿಮ್ಮೊಳೆನಗೆಂದಪ್ಪುದೊ ಸೌರಾಷ್ಟ್ರ ಸೋಮೇಶ್ವರಾ. ॥೨೯॥

೧೦೩೧
ಬಸವಣ್ಣನೆನ್ನ ಅಂಗ, ಮಡಿವಾಳನೆನ್ನ ಮನ,
ಪ್ರಭುವೆನ್ನ ಪ್ರಾಣ, ಚನ್ನಬಸವನೆನ್ನ ಕರಸ್ಥಲದ ಲಿಂಗ,
ಘಟ್ಟಿವಾಳನೆನ್ನ ಭಾವ, ಸೊಡ್ಡಳಬಾಚರಸರೆನ್ನ ಅರಿವು,
ಮಹಾದೇವಿಯಕ್ಕನೆನ್ನ ಜ್ಞಾನ, ಮುಕ್ತಾಯಕ್ಕನೆನ್ನ ಅಕ್ಕರು,

ಸತ್ಯಕ್ಕನೆನ್ನ ಯುಕ್ತಿ, ನಿಂಬಿಯಕ್ಕನೆನ್ನ ನಿಶ್ಚಯ,
ಅಲ್ಲಾಳಿಯಕ್ಕನೆನ್ನ ಸಮತೆ, ಅನಿಮಿಷನೆನ್ನ ನಿಶ್ಚಲ,
ನಿಜಗುಣನೆನ್ನ ಕ್ಷಮೆ, ರೇವಣಸಿದ್ಧಯ್ಯದೇವರೆನ್ನ ನೇತ್ರ,
ಸಿದ್ಧರಾಮತಂದೆಗಳೆನ್ನ ನೇತ್ರದ ದೃಕ್ಕು, ಮರುಳಸಿದ್ಧಯ್ಯದೇವರೆನ್ನ ಶ್ರೋತ್ರ,
ಪಂಡಿತಾರಾಧ್ಯರೆನ್ನ ಜಿಹ್ವೆ, ಏಕೋರಾಮಯ್ಯಗಳೆನ್ನ ನಾಸಿಕ,
ಅಸಂಖ್ಯಾತರೆನ್ನ ಅವಯವಂಗಳು, ಪುರಾತರೆನ್ನ ಪುಣ್ಯದ ಪುಂಜ,
ಏಳುನೂರೆಪ್ಪತ್ತು ಅಮರಗಣಂಗಳೆನ್ನ ಗತಿಮತಿ ಚೈತನ್ಯ,
ಸೌರಾಷ್ಟ್ರ ಸೋಮೇಶ್ವರಾ,
ಆ ನಿಮ್ಮ ಶರಣರ ಪಡಿದೊತ್ತಯ್ಯಾ. ॥೨೭೫॥

೧೦೩೨
ಬಾಣತಿ ರಕ್ಕಸಿಯಾದಡೆ ಮಕ್ಕಳ ಕಾಯುವರಿನ್ನಾರಯ್ಯಾ?
ಸೋಜಿಗದ ಮಾಯೆ ಸಟೆಯಪ್ಪ ಜಗವ ಪಿಡಿದಿರಲು
ಆ ಜಗವನಾ ಮಾಯಾಹಸ್ತದಿಂ ತೊಲಗಿಸುವರಿನ್ನಾರಯ್ಯಾ?
ನಾ ಬಲ್ಲೆ, ನಾ ಹಿರಿಯನೆಂಬವರೆಲ್ಲರು
ಮಾಯೆಯ ಅಣಲೊಳಗೆ ಸಿಕ್ಕಿದರು.
ಹರಿಹರಬ್ರಹ್ಮಾದಿಗಳೆಲ್ಲರೂ ಮಾಯೆಯ ಕೈಯ ಶಿಶುವಾದರಯ್ಯಾ.
ಸೌರಾಷ್ಟ್ರ ಸೋಮೇಶ್ವರಾ,
ನಿನ್ನ ಮಾಯೆ ಅಖಿಳಕ್ಕೆ ತಾನರಸಾದಳಯ್ಯಾ. ॥೨೭೬॥

೧೦೩೩
ಬಾಹಿರವ ಕಳೆದು, ಎಡೆನಾಣ್ಯವನುಳಿದು,
ಹಲವು ನಾಣ್ಯವ ಕಳೆದು, ಸಲುವ ನಾಣ್ಯವ ಹಿಡಿದು ನೋಡುವೆನಯ್ಯಾ.
ತೂಕಗುಂದದ ನೋಟವ ನೋಡುವೆನಯ್ಯಾ.
ಪರಮಜ್ಞಾನ ಕಂಗಳಿಂದಾ ಪರಬ್ರಹ್ಮ ನಿಂದ ನೋಟವ ನೋಡುವೆನಯ್ಯಾ.
ಅದ್ವೈತದ ನಾಣ್ಯವ ಕಣ್ಮುಚ್ಚದ ನೋಟದಿಂ ನೋಡುವೆನಯ್ಯಾ.
ಅನಿಮಿಷದೃಷ್ಟಿಯಲ್ಲಿ ಆ ನಿರಾಳದಿಂದ ನೋಟವ ನೋಡುವೆನಯ್ಯಾ.
ಸೌರಾಷ್ಟ್ರ ಸೋಮೇಶ್ವರಲಿಂಗದ ನಿಜ ನಿಂದ ನೋಟವ
ನೋಡಿ ನೋಡಿ ನಿಬ್ಬೆರಗಾದೆನಯ್ಯಾ. ॥೨೭೭॥

೧೦೩೪
ಬೀಜದೊಳಗಣ ವೃಕ್ಷ, ಅಂಕುರ, ಪಲ್ಲವ, ಪತ್ರ,
ಕುಸುಮ, ಫಲ ಮೈದೋರದಂತೆ,

ಕಾಷ್ಠದೊಳಗಣ ಅಗ್ನಿ ಉರಿ ಉಷ್ಣದೋರದಂತೆ,
ಪತಂಗನ ಕರದೊಳಗಡಗಿಪ್ಪ ಮರೀಚಿ ಪ್ರವಾಹಿಸದಂತೆ,
ಬಿಂದುವಿನೊಳಡಗಿಪ್ಪ ನಾದ ದನಿದೋರದಂತೆ,
ಪಿಂಡ ಬ್ರಹ್ಮಾಂಡಗಳ ಕೂಡಿಪ್ಪ
ಸೌರಾಷ್ಟ್ರ ಸೋಮೇಶ್ವರಲಿಂಗವನಾರೂ ಬೆರಸಬಾರದಯ್ಯಾ. ॥೨೭೮॥

೧೦೩೫
ಬೀಜ ವೃಕ್ಷ ಯೋಗದಂತೆ ಭಕ್ತಸ್ಥಲ,
ಜಲ ಮೌಕ್ತಿಕ ಯೋಗದಂತೆ ಮಾಹೇಶ್ವರಸ್ಥಲ,
ಅನಲ ಕಾಷ್ಠ ಯೋಗದಂತೆ ಪ್ರಸಾದಿಸ್ಥಲ,
ಕೀಟ ಭ್ರಮರ ಯೋಗದಂತೆ ಪ್ರಾಣಲಿಂಗಿಸ್ಥಲ,
ಕರಕ ವಾರಿ ಯೋಗದಂತೆ ಶರಣಸ್ಥಲ,
ಶಿಖಿ ಕರ್ಪುರ ಯೋಗದಂತೆ ಐಕ್ಯಸ್ಥಲ.
ಇಂತು ನಿರ್ಭಾವ ನಿರ್ಭೇದ್ಯವಾದಂಗೆ
ಸೌರಾಷ್ಟ್ರ ಸೋಮೇಶ್ವರನಲ್ಲೆ ಲಿಂಗೈಕ್ಯವು. ॥೨೭೯॥

೧೦೩೬
ಬುದ್ಧಿಯೊಡನೆ ಸಂಬಂಧವಾದ ಪುಣ್ಯಪಾಪ ರೂಪವೆ
ಸಂಚಿತ ಪ್ರಾರಬ್ಧ ಆಗಾಮಿತನದ ವಾಸನೆ.
ಅದುಳ್ಳನ್ನಕ್ಕ ಹುಟ್ಟುಹೊಂದು
ನಟ್ಟುನಿಂದು ಬಿಟ್ಟುತೊಲಗದಿಪ್ಪುದು ನೋಡಯ್ಯಾ.
ಶಿವಪ್ರಸಾದ ಪ್ರಸಾದಿಸಲೊಡನೆ ಕರ್ಮಕ್ಷಯ.
ಆ ಕರ್ಮಕ್ಷಯದೊಡನೆ ಬುದ್ಧಿಯಳಿವು.
ಇಂತು ಬುದ್ಧಿ ಕರ್ಮವೆರಡರ ಅಳಿವು ಶಿಖಿಕರ್ಪುರದಳಿವಿನಂತೆ.
ಅಳಿದ ಸಮನಂತರದಲ್ಲಿ ಮೋಕ್ಷ ಕಾಣಿಸಿಕೊಂಬುದು. ಇದಕ್ಕೆ ಶ್ರುತಿ:
"ತಸ್ಯ ಕರ್ಮಾಣಿ ತಾವದೇವ ಚಿರಂ ಏವಂ ನ ವಿಮೋಕ್ಷ್ಯ ಅಧಸ್ತ್ವಂ ಪಶ್ಯನ್" ಇಂತೆಂದುದಾಗಿ,
ಸೌರಾಷ್ಟ್ರ ಸೋಮೇಶ್ವರಲಿಂಗದ ಪ್ರಸಾದ ಅಪೂರ್ವವಯ್ಯಾ. ॥೨೮೦॥

೧೦೩೭
ಬೆಚ್ಚು ಬೇರಿಲ್ಲದ ಸುಖವಚ್ಚಾದ ಪರಿಯ ನೋಡಾ ಅಯ್ಯಾ.
ಅಂಗವಿಲ್ಲದ ಕೂಟ, ಸಮರಸವಿಲ್ಲದ ಬೇಟ,
ಸಮರತಿಯಿಲ್ಲದಾನಂದ ಸನ್ನಿಹಿತವಾಗಿ,
ಸೌರಾಷ್ಟ್ರ ಸೋಮೇಶ್ವರಲಿಂಗದ ಸಂಗ,
ಏನೂ ಅಲ್ಲದ ನಿಸ್ಸಂಗದ ನಿಜಸುಖವನೇನೆಂಬೆನಯ್ಯಾ. ॥೨೮೧॥

೧೦೩೮

ಬೆಟ್ಟದ ಮೇಲೊಂದು ದಳ್ಳುರಿ ನಿಮುರಿ ಬಳ್ಳಿವರಿದು
ಆಕಾಶಕ್ಕಡರಿ ಜಗದೊಳ್ಪಸರಿಸಿ ಸಪ್ತಸಮುದ್ರಂಗಳ ನುಂಗಿತ್ತು,
ಅಷ್ಟದಿಗುದಂತಿಗಳ ಸುಟ್ಟುರುಪಿತ್ತು, ಪಂಚವಕ್ತ್ರಂಗಳ ಮುಖಗೆಡಿಸಿತ್ತು,
ನವಬ್ರಹ್ಮರ ಸುಳುಹನಾರಡಿಗೊಂಡಿತ್ತು,
ಸಮ್ಯಜ್ಞಾನವಪ್ಪ ದಳ್ಳುರಿ
ಸೌರಾಷ್ಟ್ರ ಸೋಮೇಶ್ವರನ ತೋರಿ ಭವಗೆಡಿಸಿತ್ತು. ॥೨೮೨॥

೧೦೩೯

ಬೇರು ಮೊದಲಾಗಿ ಚರಿಸುವ ವೃಕ್ಷದೊಳಗೆ
ಹತ್ತು ಶಾಖೆಯಲ್ಲಿ ನಾಲ್ಕು ಹಣ್ಣಿಹುದ ಕಂಡೆ.
ಒಂದು ಹಣ್ಣ ಸವಿದಾತ ಯೋಗಿಯಾದ,
ಒಂದು ಹಣ್ಣ ಸವಿದಾತ ಭೋಗಿಯಾದ,
ಒಂದು ಹಣ್ಣ ಸವಿದಾತ ಧರ್ಮಿಯಾದ,
ಮತ್ತೊಂದು ಹಣ್ಣ ಸವಿದಾತನ ಕುರಹ ಕಂಡು ಹೇಳಿರೆ.
ಈ ನಾಲ್ಕು ಹಣ್ಣ ಮೆದ್ದವರ ಕೊರಳಲ್ಲಿ ಬಿತ್ತು ಗಂಟ[ಲೊಳು] ಸಿಕ್ಕಿ,
ಕಾನನದಲ್ಲಿ ತಿರುಗುತಿದ್ದರಯ್ಯಾ.
ಈ ಫಲವ ದಾಂಟಿದವರು ಸೌರಾಷ್ಟ್ರ ಸೋಮೇಶ್ವರಾ ಹುಟ್ಟುಗೆಟ್ಟರು. ॥೨೮೩॥

೧೦೪೦

ಬ್ರಹ್ಮಜ್ಞಾನದಿಂದ ಬ್ರಹ್ಮವನರಿತರಿವು
ಆ ಪರಬ್ರಹ್ಮದೊಡವೆರಸಿ ನಿಂದಿತ್ತು. ಅದೆಂತೆಂದಡೆ:
ಬ್ರಹ್ಮಬ್ರಹ್ಮಾಂಡ ಬೇರಿಲ್ಲದಿಪ್ಪಂತೆ, ಆಕಾಶವನಿಲ ಬೇರಿಲ್ಲದಿಪ್ಪಂತೆ,
ಹಣ್ಣು ರುಚಿ ಬೇರಿಲ್ಲದಿಪ್ಪಂತೆ.
ದ್ವೈತವೆ ಅದ್ವೈತವಾದ ಬಳಿಕ ದ್ವೈತವೆಂದೆನಲುಂಟೆ? ಇಲ್ಲವಾಗಿ.
ಅರಿವು ಮರಹಿಗೆ ತೆರಹಿಲ್ಲದ ಕರಿಗೊಂಡರಿವು ತಾನಾಗಿರಲು
ನಾನಾ ಪರಿಯ ವಿಚಿತ್ರಚಿತ್ರಂಗಳತ್ಯಾಶ್ಚರ್ಯವಪ್ಪಂತೆ ತೋರುತಿರಲು
ಅದು ವಿಪರೀತವೆಂದೆನಲುಂಟೆ?
ಮುನ್ನ ತಾನಾಗಿರ್ದು ಇನ್ನು ಬೇರೆನಲುಂಟೆ? ಇಲ್ಲವಾಗಿ.
ಆದಿಮಧ್ಯಾಂತ ವಿರಹಿತವಾದ ಮಹಾಘನವೆ
ಊಹಿಸಲಿಲ್ಲದ ಉಪಮೆ, ಭಾವಿಸಲಿಲ್ಲದ ಭಾವ,
ಅರಿಯಲಿಲ್ಲದರಿವು ತಾನಾಗಿ,

ಸೌರಾಷ್ಟ್ರ ಸೋಮೇಶ್ವರನೆಂಬ ನುಡಿಯನೊಳಕೊಂಡು ನಿಂದ
ಸಹಜ ಭರಿತವಾಗಿರ್ದಿಲ್ಲದಂತೆ ಇಹ ಭೇದವನೇನೆಂಬೆನಯ್ಯಾ. ॥೨೮೪॥

೧೦೪೧

ಬ್ರಹ್ಮನೆ ಬಟ್ಟಲು ವಿಷ್ಣುವೆ ನೇಣು ರುದ್ರನೆ ತೊಲೆ.
ಈ ಮೂವರು ಕೂಡಿದ ತ್ರಾಸಿನಲ್ಲಿ ಬ್ರಹ್ಮಾಂಡವೆಂಬ ಘಟ್ಟಿಗೆ
ಪಿಂಡವೆಂಬ ಕಟ್ಟಳೆಯನಿಕ್ಕಿ ತೂಗುವೆನಯ್ಯಾ.
ಇಚ್ಛೆ ಜ್ಞಾನ ಕ್ರೀಯಂಗಳೆಂಬ ಶಕ್ತಿತ್ರಯದ
ಮುಳ್ಳು ಸರಿಸವಾಗಿ ತೂಗುವೆನಯ್ಯಾ.
ಚಂದ್ರ ಸೂರ್ಯರೊಂದಾದ ಮಚ್ಚವನೊರೆದು ಪರಾಪರದ ಬಣ್ಣಕ್ಕೆ
ಪ್ರತಿಯಿಲ್ಲದೆ ಪ್ರತಿಯಾಗಿ ಇಂದಿತ್ತು
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರಲ್ಲಿ. ॥೨೮೫॥

೧೦೪೨

ಬ್ರಹ್ಮವೆಂಬ ವೃಕ್ಷದಲ್ಲಿ ಫಲಪತ್ರಕುಸುಮಂಗಳೆಂಬ
ಸಚರಾಚರಂಗಳಷ್ಟಮೂರ್ತಿಗಳಾಗಿ, ಆಗಿ ಆಗಿ ಅಳಿವುತ್ತಿಪ್ಪವಯ್ಯಾ.
ಇದಕ್ಕೆ ಶ್ರುತಿ:
"ಬ್ರಹ್ಮಣೋ ವೃಕ್ಷಾನ್ಮಹತೋ ಪತ್ರಂ ಕುಸುಮಿತಂ ಫಲಂ
ಚರಾಚರಾಷ್ಟಮೂರ್ತಿಂ ಚ ಫಲಿತಂ ಫಲಶೂನ್ಯವತ್"
ಇಂತೆಂದುದಾಗಿ, ಅಷ್ಟಮೂರ್ತಿಗಳು ನಷ್ಟವಾದಲ್ಲಿ
ಸೌರಾಷ್ಟ್ರ ಸೋಮೇಶ್ವರಲಿಂಗ ನಷ್ಟವಾಯಿತ್ತೆಂಬ
ಮಿಟ್ಟಿಯ ಭಂಡರನೇನೆಂಬೆನಯ್ಯಾ. ॥೨೮೬॥

೧೦೪೩

ಬ್ರಹ್ಮಸ್ಥಾನದಲ್ಲಿ ಜ್ಯೋತಿರ್ಲಿಂಗವಿಪ್ಪುದನರಿತು,
ಕ್ರೀವೆರಸಿ ನಿಃಕ್ರೀಯಲ್ಲಿ ನಿಂದು
ಕ್ರಮದಿಂದೂರ್ಧ್ವಕ್ಕೆಯ್ದಲು ಮಹಾಲಿಂಗದ ಬೆಳಗು,
ಪೃಥ್ವಿಯಂ ಮುಸುಕಿ, ಅಪ್ಪುವನೀಂಟಿ, ಅಗ್ನಿಯಂ ದಹಿಸಿ,
ವಾಯುವಂ ನುಂಗಿ, ಆಕಾಶಕ್ಕಳವಲ್ಲದೆ
ಸ್ಥಲನಿಸ್ಥಲವನೆಯ್ದಿ ಶೂನ್ಯಾವಸ್ಥೆಯಲ್ಲಿ ನಿಂದ ನಿಲವ
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರಲ್ಲದೆ
ಅರಿವು ಮರಹನೊಳಕೊಂಡಿಪ್ಪ ಅಜ್ಞಾನಿಗಳೆತ್ತ ಬಲ್ಲರಯ್ಯಾ? ॥೨೮೭॥

೧೦೪೪
ಭಕ್ತನೊಂದು ಕುಲ, ಭವಿಯೊಂದು ಕುಲವೆಂದೆಂಬರು.
ಭಕ್ತಂಗೆ ಕುಲಛಲಂಗಳುಂಟೆ? ಭಕ್ತಂಗೆ ಯಾಚಕತ್ವವುಂಟೆ?
ಭಕ್ತಂಗೆ ಆಶಾಪಾಶಂಗಳುಂಟೆ?
ಭಕ್ತಂಗೆ ಶೋಕ ಮೋಹ ಭಯ ಲಜ್ಜೆ ಸೇವೆ ರೋಷ ಹರುಷ
ಆಧಿವ್ಯಾಧಿ ಆಶೆ ಆಮಿಷ ತಾಮಸಂಗಳುಂಟೆ? ಇಲ್ಲವಾಗಿ,
ಇದಕ್ಕೆ ಶ್ರುತಿ:
"ಯಾಚಕೋ ಲೋಭರಹಿತಃ ಆಶಾಪಾಶಾದಿವರ್ಜಿತಃ
ಶೋಕಮೋಹಭಯತ್ಯಾಗೀ ಮದ್ಭಕ್ತಶ್ಚ ಪ್ರಕೀರ್ತಿತಃ
ಸೇವಕೋ ರೋಷಹರ್ಷೌ ಚ ಆಶಾಯಾಮಿಷತಾಮಸೌ
ಆಧಿವ್ಯಾಧಿ ಗತೋ ದೂರಂ ಮದ್ಭಕ್ತಶ್ಚ ಪ್ರಕೀರ್ತಿತಃ"
ಇಂತೆಂದುದಾಗಿ,
ಸೌರಾಷ್ಟ್ರ ಸೋಮೇಶ್ವರನ ಸಹಜಭಕ್ತಿ ಅಪೂರ್ವವಯ್ಯಾ. ॥೨೮೮॥

೧೦೪೫
ಭಕ್ತಿಯಾಚಾರದ ಪಥವಿಡಿದು ನಲಿನಲಿದುಲಿದಡೂ ಲಿಂಗಸಾಹಿತ್ಯವಿಲ್ಲ.
ಮನವೆ ಲಿಂಗದಲ್ಲಿ ನೆಲೆಗೊಳಿಸುವೆನೆಂದು
ಧ್ಯಾನಮೌನದಲ್ಲಿ ನಿಂತಡೂ ಲಿಂಗಸಾಹಿತ್ಯವಿಲ್ಲ.
ಸರ್ವಪ್ರಪಂಚುಗಳು ವಾಯುವಿಂದ ತೋರುತ್ತಿರಲು
ಆ ಪ್ರಪಂಚನಳಿದು ಲಿಂಗವನೊಡೆವೆರಸುವೆನೆಂದು
ಶ್ವಾಸ ನಿಃಶ್ವಾಸಂಗಳ ಪಿಡಿದು ನಿಲಿಸಿದರೂ ಲಿಂಗಸಾಹಿತ್ಯವಿಲ್ಲ.
ಸದ್ಭಕ್ತಿವೆತ್ತು ಭಾವಪ್ರಸಂಗದಿಂ ಕಂಗಳಂ ಕಳೆದು, ಜಿಹ್ವೆಯಂ ಕೊಯಿದು,
ಶಿರವನರಿದು, ಹಸ್ತವನುತ್ತರಿಸಿತ್ತಡೂ ಲಿಂಗಸಾಹಿತ್ಯವಿಲ್ಲ.
ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ,
ಧ್ಯಾನ, ಧಾರಣ, ಸಮಾಧಿ ಎಂಬ ಅಷ್ಟಾಂಗಯೋಗ ಗಟ್ಟಿಗೊಂಡು,
ಪ್ರಾಣ ಮನ ಪವನ ಹುರಿಗೂಡಿ,
ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೇಯವೆಂಬ
ಷಡಾಧಾರದ ಬಳಿವಿಡಿದು, ನೆತ್ತಿಯಿಂದುತ್ತರಕ್ಕೆ ಉಚ್ಚಳಿಸಿ ಹಾಯಿದು,
ನಡುನೆತ್ತಿ ತೂತಾದಡೂ ಲಿಂಗಸಾಹಿತ್ಯವಿಲ್ಲ.
ಸತ್ಯ, ಸಮತೆ, ಸಮಾಧಾನ, ಸದ್ಭಾವ, ಸವಿರಕ್ತಿಯಿಂದತ್ಯಾನಂದ
ತೋರುತ್ತಿರಲು ಅದು ನೆಲೆಗೊಂಡು ನಿಲ್ಲದಾಗಿ
ಹೇಳದೆ ಬಂದು ಕೇಳದೆ ಹೋಯಿತ್ತು.

ಸೌರಾಷ್ಟ್ರ ಸೋಮೇಶ್ವರನ ನಿಜವನರಿಯದೆ
ಅನುಭವವ ಮಾಡಿ ಫಲವೇನಯ್ಯಾ? ॥೨೮೯॥

೧೦೪೬

ಭಕ್ತಿಯೆಂಬ ಸತಿಯಲ್ಲಿ ಜ್ಞಾನವೆಂಬ ಸುತ ಹುಟ್ಟಲು
ಮಾಯೆಯೆಂಬ ವಾಯು ಮರಣವಾಗಲು
ಶರಣ ಅರಿಕೆಗೆಟ್ಟ ನೋಡಾ.
ಬೋಧಾಪ್ರಕಾಶಸ್ವರೂಪ ತನ್ನಲ್ಲೇ ತಾನು ತದ್ಗತ.
ಸ್ಫಟಿಕದ ಘಟದಂತೆ ಒಳಹೊರಗೆಂಬುದಿಲ್ಲ.
ಉಲುಹಡಗಿ ಶಬ್ದಮುಗ್ಧವಾದ
ಸೌರಾಷ್ಟ್ರಸೋಮೇಶ್ವರಾ ನಿಮ್ಮ ಶರಣ. ॥೨೯೦॥

೧೦೪೭

ಭವಿಯೊಂದು ಕುಲ ಭಕ್ತನೊಂದು ಕುಲವೆಂಬ
ಭಂಗದ ಮಾತ ಕೇಳಲಾಗದು. ಅದೇನು ಕಾರಣವೆಂದಡೆ,
ಭವಿಭಕ್ತಂಗೆ ಸಂಬಂಧ ಉಂಟಾದ ಕಾರಣ. ಇದಕ್ಕೆ ಶ್ರುತಿ:
"ಭಕ್ತಾನಾಂ ಭವಿಸಂಪರ್ಕೋ ಭವೀನಾಂ ಭಕ್ತಸಂಶ್ರಯಃ
ಭವಿಭಕ್ತಾವುಭೌದೇವೀ ಮದ್ಭಕ್ತೌ ಚ ಪ್ರಕೀರ್ತಿತೌ"
ಇಂತೆಂದುದಾಗಿ,
ಶಿವಪ್ರಸಾದ ಭವಿಗೆ, ಭವಿಯ ಪ್ರಸಾದ ಭಕ್ತಂಗೆ.
ಇದು ಕಾರಣ, ಸೌರಾಷ್ಟ್ರ ಸೋಮೇಶ್ವರನಲ್ಲಿ ಭಕ್ತರಾದಡೆ
ಭವಿಯಾಗಿರಬೇಕಯ್ಯಾ. ॥೨೯೧॥

೧೦೪೮

ಭಾನುಮಂಡಲವಂಜುವದೆ ಮಂಜು ಮುಸುಕಿದಡೆ?
ಕಾಲಾಗ್ನಿ ಅರಗಿನ ಬಾಣ [ತಾ]ಗೆ ಪ್ರಳಯವಪ್ಪುದೆ?
ರಣರಂಗಧೀರ ತೃಣಪುರುಷನೊಡನೆ ಹೆಣಗುವನೆ ಸಮರಕ್ಕೆ?
ಶಿವಜ್ಞಾನವಿಹೀನರ ಹೀನೋಕ್ತಿಯೊಡನೆ
ಸೌರಾಷ್ಟ್ರ ಸೋಮೇಶ್ವರನ ಶರಣರು ಪ್ರತಿಪಾದ್ಯರುಂಟೆ? ॥೨೯೨॥

೧೦೪೯

ಭಾವದ ಮುಂದೆ ತೋರುವ ಜ್ಞಾನದ ಕುರುಹಿದೇನೋ!
ಒಳಗೆನ್ನದೆ ಹೊರಗೆನ್ನದೆ ತನ್ನ ತಾನಾಗಿ ನಿಂದಿತ್ತು.

ಅದನರಿಯಲಿಲ್ಲಾಗಿ ಮರೆಯಲಿಲ್ಲ,
ಮರೆಯಲಿಲ್ಲಾಗಿ ಅಗಲಲಿಲ್ಲ, ಅಗಲಲಿಲ್ಲಾಗಿ ಭಾವಕ್ಕೆ ತೆರಹಿಲ್ಲ,
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣಂಗೆ. ॥೨೯೩॥

೧೦೫೦
ಭಾವ ದುರ್ಭಾವ ಅಳಿದು, ಸ್ವಭಾವಿಯಾದ ಸದ್ಭಾವಿಗೆ
ಅಂಗದಲ್ಲಿ ಆಯತ, ಪ್ರಾಣದಲ್ಲಿ ಸ್ವಾಯತ.
ಉಭಯವೈಕ್ಯವಾದಲ್ಲಿ ನಿರ್ಭಾವಿ
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ. ॥೨೯೪॥

೧೦೫೧
ಭಾವಭೇದವಿಲ್ಲದೆ ಬೆರೆಸಿ,
ಮರಳಿ ಹುಟ್ಟಿದ ಭಾವ ನಿರ್ಭಾವವಾಯಿತ್ತಯ್ಯಾ.
ಮನದ ಮುಂದಣ ಘನತೇಜ ಸದ್ಭಾವವ ನುಂಗಿ
ನಿರ್ಭಾವ ನಿಃಪತ್ತಿಯಾಗಿ ಸೌರಾಷ್ಟ್ರ ಸೋಮೇಶ್ವರಾ,
ಲಿಂಗ ಎಂಬ ನಾಮ ನಿರ್ನಾಮವಾಯಿತ್ತು. ॥೨೯೫॥

೧೦೫೨
ಭ್ರಮರ ಸೋಂಕಿದ ಕೀಟ ಭ್ರಮರನಾಗದೆ, ಮರಳಿ ಕೀಟನಪ್ಪುದೆ?
"ಭ್ರಮದ್ಭ್ರಮರಚಿಂತಾಯಾಂ ಕೀಟೋಪಿ ಭ್ರಮರಾಯತೇ"
ಎಂದುದಾಗಿ.
ಅಗ್ನಿ ಸೋಂಕಿದ ಕಾಷ್ಠ ಅಗ್ನಿಯಾಗದೆ, ಮರಳಿ ಕಾಷ್ಠವಪ್ಪುದೆ?
ಭುವನ ಸೋಂಕಿದ ಕರಕ ಭುವನವಾಗದೆ, ಮರಳಿ ಕರಕವಪ್ಪುದೆ?
ಸೌರಾಷ್ಟ್ರ ಸೋಮೇಶ್ವರಲಿಂಗ ಸೋಂಕಿದ ಶರಣರು
ಲಿಂಗವಾಗದೆ ಮರಳಿ ಮನುಜರಪ್ಪರೆ?
'ಯಥಾ ಲಿಂಗಂ ತಥಾ ಶರಣಃ' ಎಂದುದಾಗಿ. ॥೨೯೬॥

೧೦೫೩
ಮಂಡೆ ಬೋಳಾದಡೇನೊ! ಹುಟ್ಟು ಬೋಳಾಗದನ್ನಕ್ಕರ,
ತನು ನಿರ್ವಾಣವಾದಡೇನೊ! ಆಸೆ ನಿರ್ವಾಣವಾಗದನ್ನಕ್ಕರ,
ಇಂದ್ರಿಯ ನಿಗ್ರಹಿಯಾದಡೇನೊ! ಷಟ್ಸ್ಥಲಾನುಗ್ರಹವಾಗದನ್ನಕ್ಕರ,
ಸೌರಾಷ್ಟ್ರ ಸೋಮೇಶ್ವರಲಿಂಗವು ಬರಿದೆ ಒಲಿವನೆ? ॥೨೯೭॥

೧೦೫೪

ಮಧ್ಯನಿರಾಳದಲ್ಲಿ ನಿಂದು, ಊರ್ಧ್ವ ನಿರಾಳವನೆಯ್ದಿದಲ್ಲಿ,
ಕಾಣಲಾಯಿತ್ತು ಒಂದು ಪುತ್ಥಳಿ.
ಮೂರು ಬೆಳಗಿನ ಮಧ್ಯದಲ್ಲಿ ಬೇರೊಂದು ಬೆಳಗು ಮೀರಿ
ತೋರುತ್ತಿದೆ ಈ ಪುತ್ಥಳಿ.
ವಜ್ರದ ಮೈದೊಡುಗೆಯ ತೊಟ್ಟು,
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ ಅವಿರಳವಾಯಿತ್ತು. ॥೨೯೮॥

೧೦೫೫

ಮನದ ನಯನದಿಂದ ಕಂಡು
ಕಾಯಭಾವ ಸ್ಪರ್ಶನ ಹಿಂಗಿ, ಲಿಂಗಸ್ಪರ್ಶನದ ಸಕೀಲವನರಿತು,
ಪ್ರಾಣಸ್ಪರ್ಶನ ಪ್ರಸಾದಸೇವ್ಯ ನಿರುಪಮತೃಪ್ತಿ ತ್ರಿಪುಟಿಸಂಕಲ್ಪದ
ಅರ್ಪಿತವ ಮೀರಿದಚ್ಚಪ್ರಸಾದಗ್ರಾಹಕ
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ. ॥೨೯೯॥

೧೦೫೬

ಮನ ಮುಕ್ತನಾದ ಶರಣ ತಾನೆ ಲಿಂಗವಾಗಿ
ಪ್ರಾಣ ಮುಕ್ತನು ನೋಡಯ್ಯಾ.
ಪ್ರಸಾದಸನ್ನಿಹಿತವಾಗಿ ಕಾಯಮುಕ್ತನು. ಅದೆಂತೆಂದಡೆ:
"ಸ್ವಲಿಂಗೀ ಪ್ರಾಣಮುಕ್ತಸ್ಯಾತ್ ಮನೋಮುಕ್ತಸ್ತು ಜಂಗಮಃ
ಪ್ರಸಾದೀ ಕಾಯಮುಕ್ತಶ್ಚ ತ್ರಿವಿಧಸ್ತತ್ವನಿಶ್ಚಯಃ"
ಎಂದುದಾಗಿ, ಇಂತೀ ತ್ರಿವಿಧಮುಕ್ತನಾಗಿ
ನಿರ್ಮಲ ನಿರ್ಮಾಯ ಸತ್ಯಜ್ಞಾನಾನಂದಭರಿತ
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ. ॥೩೦೦॥

೧೦೫೭

ಮನವೆ ಮಹ, ತನುವೆ ಪೃಥ್ವಿ, ಇನಿತಾವ ಎಡೆಯಲ್ಲಿ ಆತ್ಮನಿಹುದೋ?
ಸಾಗರದ ಹಾಗಲ್ಲ, ಮೇಘದ ಪರ್ಯಾಯವಲ್ಲ,
ನೀನರಿಯದ ತೆರನಲ್ಲ,
ಅದ ಹಿರಿದುಮಾಡಿ ಒರೆಯಲೇಕಯ್ಯಾ?
ನಿಃಕಳಂಕಶಾಂತಮಲ್ಲಿಕಾರ್ಜುನದೇವರಿಲ್ಲವೆಂಬವಂಗೆ ಆತ್ಮನಿಂದೇನು?
ಸೌರಾಷ್ಟ್ರ ಸೋಮೇಶ್ವರಾ, ಮಾತಿಂಗೆ ಮರುಳಾದವರುಂಟೆ. ॥೩೦೧॥

೧೦೫೮
ಮನ ಸೋಂಕಿದ ಸುಖವನೊಂದು ಶ್ರುತಕ್ಕೆ ತಂದಡೆ
ಅದು ಬಹುವಾರ್ತೆಯಾಯಿತ್ತು ನೋಡಾ, ಅಯ್ಯಾ.
ತನುವಿನಲ್ಲಿ ಸೋಂಕಿದ ಸುಖವು ತನಗಲ್ಲದೆ
ಇದಿರಿನ ದೃಕ್ಕಿಗೆ ದೃಶ್ಯವಪ್ಪುದೆ, ಅಯ್ಯಾ?
ತನ್ನಲ್ಲಿ ತಾನು ತದುಗತವಾದ ಶರಣನ ಇರವು
ಉರಿವುಂಡ ಕರ್ಪುರದಂತೆ,
ಬಿಸಿಲುಂಡ ಅರಿಸಿನದಂತೆ, ಕಬ್ಬುನ ಉಂಡ ಉದಕದಂತೆ,
ಆರಿಗೂ ಭೇದಿಸಬಾರದು ಕೇಳಾ, ಅಯ್ಯಾ. ಇದಕ್ಕೆ ಶ್ರುತಿ:
"ಅಗಣಿತಮಪ್ರಮೇಯಮತರ್ಕ್ಯ ನಿರುಪಾಧಿಕಂ
ಅನಾಮಯನಿರಂಜನ್ಯಂ ಅತ್ಯತಿಷ್ಠದ್ದಶಾಂಗುಲಂ"
ಇಂತೆಂದುದಾಗಿ,
ಸೌರಾಷ್ಟ್ರ ಸೋಮೇಶ್ವರಾ, ಶರಣರ ಅಂತಿಂತೆನಬಾರದಯ್ಯಾ. ॥೩೦೨॥

೧೦೫೯
ಮನೋವಾಕ್ಕಾಯದಲ್ಲಿ ಲಿಂಗವ ನಂಬಿ ನಚ್ಚಿ ಒಚ್ಚತವೋಗಿ,
ಸಚ್ಚಿದಾನಂದದಿಂ ಪರವಶನಾಗಿ,
ಲಿಂಗದಂಗದೊಳು ತನ್ನಂಗ, ಲಿಂಗಭಾವದೊಳಗೆ ತನ್ನ ಮನ,
ಪರಬಿಂದು ಪರನಾದದಲ್ಲಿ ವಾಕ್ಕು.
ಇಂತು ತ್ರಿಕರಣಶುದ್ಧನಾಗಿ ಲಿಂಗವನಪ್ಪಿ ಒಪ್ಪವಳಿದು
ಭಾವಭೇದವಿಲ್ಲದಿಪ್ಪಂತಿರಿಸಯ್ಯಾ ಸೌರಾಷ್ಟ್ರ ಸೋಮೇಶ್ವರಾ. ॥೩೦೩॥

೧೦೬೦
ಮರವೆ ಅರಿವಿನ ಮರೆಗೊಂಡು ತಲೆದೋರಿ ಅರಿವೆಂದೆನಿಸಿತ್ತು.
ಅರಿವು ಮರವೆಯ ಮರೆಗೊಂಡು ತಲೆದೋರಿ ಮರಹೆಂದೆನಿಸಿತ್ತು.
ಅರಿವು ಮರವೆಗಳಿಂದರಿತರಿವು ನಿಜವಪ್ಪುದೆ? ಅದು ಹುಸಿ, ಅದೆಂತೆಂದಡೆ:
"ಪ್ರಾಣನಿಲಾಚೇಷ್ಟಮನೋಗಲಿತ್ವಂ ಮನೋಗಲಿತ್ವಾತ್ಕರಣಂ ಪ್ರಕೃತ್ಯಾ"
ಪ್ರಕೃತಿಯಿಂದಂ ಮರೆವರಿವು ತೋರ್ಕುಂ, ಮರೆವರಿವಿನಿಂ ಅನಿತ್ಯಂ.
ಇದು ಕಾರಣ, ಅರಿವಿನ ಮರಹಿನ
ಸಂಚಲದಿಂದರಿಹಿಸಿಕೊಂಡರಿವು ತಾನರಿವಲ್ಲ.
ಅರಿಯದ ಮರೆಯದ ಮರವರಿವಿಂಗೆ
ತೆರಹಿಲ್ಲದ ಬಚ್ಚಬರಿಯರಿವೆ ತಾನಾಗಿ.

ಅರಿವೆಂಬ ಕುರುಹುಗೆಟ್ಟ ಪರಮಸ್ವಯಂಭು ನೀನೆ
ಸೌರಾಷ್ಟ್ರ ಸೋಮೇಶ್ವರಾ. ॥೨೦೪॥

೧೦೬೧
ಮರ್ಕಟ ದರ್ಪಣವ ಹಿಡಿದು ನೋಡಿ ತನ್ನ ಪ್ರತಿಬಿಂಬವ ಕಂಡು
ದರ್ಪಣವ ಮರ್ಕಟವೆಂದು ಬಗೆದೇಡಿಸಲನುಗೆಯ್ವಂತೆ,
ಮನೋವಿಕಾರದಿಂ ಪ್ರಕೃತಿವಿಡಿದು ಚರಿಸುತಿರ್ಪ ಮರ್ತ್ಯದ ಮನುಜರು
ಪ್ರಕೃತಿ ನಿಃಕಂಪನವಾದ ಪರಮಾನುಭಾವಿಗಳಪ್ಪ
ಪರಮಲಿಂಗೈಕ್ಯರ ಅನುವನರಿಯದೆ,
ಬಾಯಿಗೆ ಬಂದಂತೆ ಒಂದೊಂದ ನುಡಿವ
ಮಂದಮತಿಗಳಪ್ಪ ಸಂದೇಹಿಗಳು
ನಿಮ್ಮನೂ ತಮ್ಮನೂ ತಾವೆತ್ತ ಬಲ್ಲರಯ್ಯಾ
ಸೌರಾಷ್ಟ್ರ ಸೋಮೇಶ್ವರಾ. ॥೨೦೫॥

೧೦೬೨
ಮಲಜಲವ ತೊಳೆಯಲುಂಟಲ್ಲದೆ,
ನಿರ್ಮಲಜಲವ ತೊಳೆಯಲುಂಟೆ?
ತವರಾಜ ಹಗಿನಾಗಬಲ್ಲುದೆ? ಮುತ್ತು ನೀರಾಗಬಲ್ಲುದೆ?
ಸಹಸ್ರನಯನ ಚತುರ್ಮುಖ ಅಧೋಕ್ಷಜ ರುದ್ರ ಪದವನತಿಗಳೆದು,
ಭಾವ ಬ್ರಹ್ಮವಾದ ಅಕಾಯಚರಿತಂಗೆ ಪೂರ್ವಕ್ರಿಯಂಗಳುಂಟೆ?
ತನುಗುಣ ಮನಗುಣವಳಿದ ಲಿಂಗದೇಹಿ ನಿರ್ದೇಹಿ,
ಅಪ್ರತಿಮ ನಿತ್ಯಜ್ಯೋತಿಯೊಳಗೆ ನಿಷ್ಪತ್ತಿಯಾದ,
ಸೌರಾಷ್ಟ್ರ ಸೋಮೇಶ್ವರಲಿಂಗದೊಳಿಪ್ಪ ಅಪ್ರತಿಮ ಶರಣ. ॥೨೦೬॥

೧೦೬೩
ಮಹಿಯೆಂಬ ಕುಟ್ಟಿಮದ ದಿಗ್ಭಿತ್ತಿಯ ಮೇಲೆ ಮುಚ್ಚಿದ ಅಂಡಕಟಾಹ
ಅಜನ ತತ್ತಿಯೊಳಗಣ ಪಶುಜೀವರೆಲ್ಲಾ ನೆರೆದು
ಕರ್ಮವೆಂಬುದೊಂದೆ ಬಟ್ಟಲೊಳಗೆ
ಮೋಹ ಮದ ರಾಗ ವಿಷಾದ ತಾಪ ಶಾಪ ವೈಚಿಂತ್ಯವೆಂಬ
ಏಳು ಮಲಂಗಳನೊಂದಾಗಿ ಕಲಸಿ ತಿನ್ನುತ್ತ,
ಮೂರು ಮಲಂಗಳ ಬೇರೆ ಬೇರೆ ಅಗಿಯುತ್ತ,
ವಿಷಯವೆಂಬ ರಸವ ಕುಡಿದು,
ಅಜ್ಞಾನವೆಂಬುದೊಂದೆ ಹಾಸಿಕೆಯಲ್ಲಿ ಮಲಗಿ,

ಮೂರ್ಖೆ ತಿಳಿಯದಿಪ್ಪುದ ಕಂಡು ನಾಚಿತ್ತಯ್ಯಾ ಎನ್ನ ಮನ.
ನಿಮ್ಮ ಅಂತರಂಗವೆಂಬ ಚಿದಂಬರದಲ್ಲಿ ನಿಃಶೂನ್ಯವಾಗಿರಿಸೆನ್ನ
ಸೌರಾಷ್ಟ್ರ ಸೋಮೇಶ್ವರಾ. ॥೩೦೭॥

೧೦೬೪
ಮಾತ ಕಲಿತು ಮಂಡೆಯ ಬೋಳಿಸಿ ವೇಷ ಭಾಷೆಗಳಿಂ
ದೇಶ ಕೋಶ ಭವನಂಗಳ ತೊಳಲಿ ಬಳಲಿ ನಿಂದಡೇನಾಯಿತ್ತೊ,
ಜಟಾಬಂಧದಿಂ ಗಡ್ಡದ ಹಿರಿಯರಪ್ಪೆ ಭೋ!
ನಾವೆಂದು ಬಿಂದು ಬೀಸರವಾಗದಿರ್ದಡೇನಾಯಿತ್ತೊ,
ಹೆಚ್ಚು ಕುಂದು ಬಿಚ್ಚದನ್ನಕ್ಕ.
ತಥ್ಯ-ಮಿಥ್ಯ ರಾಗ-ದ್ವೇಷ ಭಯ-ಮೋಹಂಗಳುಳ್ಳನ್ನಕ್ಕ
ಸೌರಾಷ್ಟ್ರ ಸೋಮೇಶ್ವರಲಿಂಗ ಎಂತು ಸಾಧ್ಯವಪ್ಪುದಯ್ಯಾ. ॥೩೦೮॥

೧೦೬೫
ಮಾಯೆಯಿಂದಾದ ಸಂಸಾರದಡವಿಯೊಳಗೆ
ತಿರುಗಿ ತಿರುಗಿ ಗಾಸಿಯಾಗಿ,
ಈಷಣತ್ರಯವೆಂಬ ಮೋಹಿನಿಯ ಕೈವಶವಾಗಿ,
ಅರಿಗಳೊಡನೆ ಪುದುವಾಳಾಗಿ,
ಆಶೆಯಾಮಿಷತಾಮಸಂಗಳಿಂದ ನೊಂದು, ತಾಪತ್ರಯಗಳಿಂದ ಬೆಂದು,
ಸಂಸಾರ ಸರ್ವಮುಖವಾಗಿ ನುಂಗಿ ಉಗುಳುತ್ತಿರಲೆಂತಕ್ಕೆ,
ನಿಮ್ಮ ನೆನಹೆಂಬ ಕಿಚ್ಚು ಭವಾರಣ್ಯವ ಸುಡಲು,
ಕರ್ಮದ ಕೈಬೆಂದು ಮಾಯಾಪಾಶವುರಿದು,
ಮಲ ನಿರ್ಮಲವಾಗಿ, ಬಿಂದು ಭುವನವ ಹೊದ್ದದೆ,
ತಿರೋಧಾನ ನಿರೋಧಾನವೆಯ್ದಿ,
ನಿಮ್ಮಲ್ಲಿ ಅಚ್ಚೊತ್ತಿದಂತಿರಿಸಯ್ಯಾ ಸೌರಾಷ್ಟ್ರ ಸೋಮೇಶ್ವರಾ. ॥೩೦೯॥

೧೦೬೬
ಮಾಯೆಯೆಂದೇನೊ ಮದವಳಿದಂಗೆ?
ಕಾಯವೆಂದೇನೊ ಕಳವಳವಳಿದಂಗೆ?
ಜೀವವೆಂದೇನೊ ಪ್ರಕೃತಿಯಳಿದಂಗೆ?
ಭಾವವೆಂದೇನೊ ಭ್ರಮೆಯಳಿದಂಗೆ?
ಅರಿವೆಂದೇನೋ ಮರಹಳಿದಂಗೆ?
ತಾನೆಂದೇನೊ ಇದಿರಳಿದಂಗೆ?

ಸೌರಾಷ್ಟ್ರ ಸೋಮೇಶ್ವರಾ,
ತಾನು ತಾನಾದ ಶರಣಂಗೆ ನೀನೆಂದೇನೊ. ॥೩೧೦॥

೧೦೬೭

ಮುಖದಲ್ಲಿ ರುದ್ರನಿಪ್ಪನಯ್ಯಾ, ನಾಭಿಯಲ್ಲಿ ವಿಷ್ಣುವಿಪ್ಪನಯ್ಯಾ,
ಮೂಲದಲ್ಲಿ ಬ್ರಹ್ಮನಿಪ್ಪನಯ್ಯಾ, ಕೇಸರದಲ್ಲಿ ದೇವರ್ಕಳೆಲ್ಲಾ ಇಪ್ಪರಯ್ಯಾ.
ಇಂತು ಪುಣ್ಯವೆ ಪುಂಜವಾಗಿ ಸೌರಾಷ್ಟ್ರ ಸೋಮೇಶ್ವರನ ಬರಿಸುವ
ರುದ್ರಾಕ್ಷಿಯಂ ಧರಿಸಿರಯ್ಯಾ ಭಕ್ತರಪ್ಪವರು. ॥೩೧೧॥

೧೦೬೮

[illegible]ತ್ತು ನೀರೊಳಗೆ ಹುಟ್ಟಿ ಮಗಳಿ ನೀರಾಗದಂತೆ,
[illegible] ಕಾಸಿದ ತುಪ್ಪ ಕ್ಷೀರವಾಗದಂತೆ,
ತೊಟ್ಟುಬಿಟ್ಟ ಹಣ್ಣು ಹೂಮಿಡಿಯಾಗದಂತೆ,
ಸಂಸಾರದಲ್ಲಿ ಹುಟ್ಟಿ ಅದ ಹೊದ್ದದೆ,
ಸ್ವಯಂಪ್ರಕಾಶ ಲಿಂಗದ ಬೆಳಗಿನಲ್ಲಿ ಬೆಳೆದು, ತಲ್ಲೀಯವಾಗಿರ್ದರಯ್ಯಾ
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು. ॥೩೧೨॥

೧೦೬೯

ಮುನ್ನ ಮುನ್ನ ತಾನೆ ಸ್ವಯಂಭು.
ಸೌರಾಷ್ಟ್ರವೆಂಬ ಅಂಗಕ್ಕೆ ಪ್ರಾಣವಾಗಿ, ಸೌರಾಷ್ಟ್ರಪತಿಯಾದ.
ಪಂಚೇಂದ್ರಿಯಂಗಳೆಂಬ ಐಮುಖವಪ್ಪ ಹುಲಿಗೆರೆಯಲ್ಲಿ ನೆಲಸಿ
ಹುಲಿಗೆರೆಯರಸನಾದ,
ಸತ್ಯಸ್ವರೂಪನು ತಾನೆ ಆದ ಕಾರಣ ಸತ್ಯವೆಂಬ ಸೀಮೆಯಲ್ಲಿರ್ಪನಾಗಿ.
ಇದಕ್ಕೆ ಶ್ರುತಿ:
"ತ್ವಂ ಸತ್ಯರೂಪಸ್ತವ ನಾಸ್ತಿ ಸತ್ಯಂ ತ್ವಂ ನಿತ್ಯರೂಪಸ್ತವ ನಾಸ್ತಿ ನಿತ್ಯಂ
ತ್ವಂ ವಿಶ್ವರೂಪಸ್ತವ ನಾಸ್ತಿ ವಿಶ್ವಂ ತ್ವಂ ವಿಶ್ವದೇವಸ್ತವ ನಾಸ್ತಿ ದೇವಃ"
ಇಂತೆಂದುದಾಗಿ,
ಸತ್ಯನೂ ನಿತ್ಯನೂ ಕರ್ತನೂ ದೇವನೂ ತಾನೆಯಾಗಿ
ಸೌರಾಷ್ಟ್ರ ಸೋಮೇಶ್ವರನೆಲ್ಲೆಡೆಯಲೆಡೆದೆರಹಿಲ್ಲ. ॥೩೧೩॥

೧೦೭೦

ಮೂರು ಪಂಚಭೂತದಿಂದ ಗಾರಪ್ಪುದು [ಬೇರೆ] ಮಾಡಿ,
ಮೂರು ಕರ್ಮ ಮೂರು ತಾಪ ಮೂರು ಮಲಂಗಳ ಹಾರ ಹೊಯ್ದು,

ಊರಿದ್ದ ಲಿಂಗವ ತಂದು, ಊರಿ ತೋರಿದನಯ್ಯಾ ಕರಸ್ಥಲದಲ್ಲಿ.
ದೀಕ್ಷಾನ್ವಯವನನ್ವಯಿಸಿದ ಶ್ರೀಗುರು ಸೌರಾಷ್ಟ್ರ ಸೋಮೇಶ್ವರಾ,
ನೀನೆನ್ನ ಉತ್ತಮಾಂಗದಲ್ಲಿ ನೆಲಸಿದೆಯಾಗಿ ಭವ ಹಿಂಗಿತ್ತು. ॥೩೧೪॥

೧೦೭೧
ಯೋಗ ವಿಯೋಗವೆಂಬೆರಡಳಿದು,
ನಿಮ್ಮ ನೆನಹು ಎನ್ನ ಮನದಲ್ಲಿ ನಿಜಯೋಗವಾಗಿ,
ಸಮ್ಯಜ್ಞಾನದಲ್ಲಿ ಪರಮಸುಖವಿಂಬುಗೊಂಡು,
ಸದ್ಭಾವನೆಯೆ ಪ್ರಸನ್ನವಾಗಿ
ಚಿದ್ಬಿಂದುವಿನೊಳು ಪ್ರತಿಬಿಂಬಿಸುತ್ತಿಪ್ಪ ಚಿದ್ಬ್ರಹ್ಮವನೊಳಕೊಂಡ
ಮಹಾಶರಣರ ತೋರಿಸಿ ಬದುಕಿಸಾ,
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಧರ್ಮ ನಿಮ್ಮ ಧರ್ಮ. ॥೩೧೫॥

೧೦೭೨
ರಸವನುಗುಳ್ದು ಕಸವನಗಿವವನಂತೆ,
ಕೈಯ ಪಿಂಡವ ಬಿಟ್ಟು ಒಣಗೈಯ್ಯ ನೆಕ್ಕುವನಂತೆ,
ತಾಯ ಮೊಲೆವಾಲನೊಲ್ಲದೆರೆವಾಲಿಂಗೆಳಸುವನಂತೆ,
ಅಮೃತಾಹಾರ ಮುಂದಿಟ್ಟಿರಲು ಮನ ಹೇವರಿಕೆಯ ಬಿಡದವನಂತೆ,
ದೀಪವ ಹಿಡಿದು ಮುಂದುಗಾಣದಿಹ ಪರಿಯ ನೋಡಾ ಅಯ್ಯಾ.
ತನ್ನಲ್ಲಿ ಗುರುಲಿಂಗಜಂಗಮವಿರಲನ್ಯವಿಟ್ಟರಸುವ ಭಿನ್ನಜ್ಞಾನವ ನೋಡಾ.
ಸೌರಾಷ್ಟ್ರ ಸೋಮೇಶ್ವರಲಿಂಗಸಂಗ ಹಿಂಗದಿರಲು
ವೇಷಭೂಷಣಂಗಳಾಸೆಯ ನೋಡಾ. ॥೩೧೬॥

೧೦೭೩
ರಸವುಂಡ ಅಂಗದಲ್ಲಿ ಆ ರಸ ಅಸಿಧಾರೆ,
ಎಲ್ಲೆಲ್ಲಿ ಮುಟ್ಟಿದರಲ್ಲಲ್ಲಿಗೆ ಬಂದಾನುವಂತೆ,
ಲಿಂಗಗ್ರಾಹಕನಾಗಿ ಮುಖಮುಖದಿಂದ್ರಿಯಂಗಳಲ್ಲಿ
ಲಿಂಗವೇ ಸಕಲಸುಖವನಾಂತು ಭೋಗಿಪ್ಪುದಾಗಿ
ಅರ್ಪಿಸಲಿಲ್ಲದ ಪ್ರಸಾದಿ,
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ. ॥೩೧೭॥

೧೦೭೪
ರಾಗದ್ವೇಷರಹಿತನಾಗಿ ಮೋಹಕ್ಕೆ ಕಾರಣ ಶೋಕ,
ಶೋಕಕ್ಕೆ ಕಾರಣ ಮೋಹನವೆಂದರಿದು

ಸುಖ-ದುಃಖ ಶೋಕ-ಮೋಹಂಗಳ ಸಮಾನಂಗಂಡು,ಇದಕ್ಕೆ ಶ್ರುತಿ:
"ತತ್ರ ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ।" ಎಂದುದಾಗಿ,
ಸೌರಾಷ್ಟ್ರ ಸೋಮೇಶ್ವರನ ಶರಣರು ಷಡೂರ್ಮೆರಹಿತರು. ॥೩೧೮॥

೧೦೭೫
ರೂಪ ರುಚಿ ತೃಪ್ತಿಗಳು ಬೇಸರವಿಲ್ಲದೆ ಇರ್ಪ ಮರ್ಮವನರಿತು,
ಒಡನೊಡನೆ ಒಡಲ ಗುಣಂಗಳನಳಿದು, ಭಾವಲಿಂಗನಿವೇದನದಿಂದ
ತ್ರಿವಿಧಲಿಂಗದಲ್ಲಿ ತೆರಹಿಲ್ಲದರ್ಪಿತ ಸಾವಧಾನ ಸನ್ನಿಹಿತ ಪ್ರಸಾದಿ,
ಸೌರಾಷ್ಟ್ರ ಸೋಮೇಶ್ವರಲಿಂಗದ ಪ್ರಸಾದಿ. ॥೩೧೯।

೧೦೭೬
ಲಿಂಗದ ಸಂಗದಲ್ಲಿಪ್ಪ ಅಂಗ ಹಿಂಗದೆ
ಅಂಗಜನ ಸರಳಿಂಗೆ ಭಂಗವಾಗದ ಅಭಂಗಂಗೆ
ಗಂಗೆ ಗೋದಾವರಿ ತುಂಗಭದ್ರೆಯ ಸಂಗಮದ ಸಂಗದ
ಆಲಿಂಗನದ ಹಂಗು ಸಂಘಟಿಸಲುಂಟೆ?
ಸಂಗ ನಿಸ್ಸಂಗವೆಂಬುಭಯ ಸಂಗವಳಿದ
ನಿರಂಗ ನಿರುಪಾಧಿಕ ನಿರಂಜನ ನಿರಾಶ್ರಯ ನಿರ್ಮಳ ನಿಃಕಲ ನಿಶ್ಚಲ
ನಿರವಯ ನಿರ್ಭಿನ್ನ ನಿರುಪಮ್ಯ ನಿರ್ವಿಕಲ್ಪ ನಿರಹಂಕಾರ
ನಿರಪೇಕ್ಷ ನಿರವಸ್ಥೆ ನಿರ್ಮೋಹಿ ನಿರ್ಮಾಯ
ನಿರಾವರಣ ನಿರಾಲಂಬ ನಿತ್ಯನಿರಾಳ ನಿಃಪ್ರಿಯ
ನೀನೆ ಸೌರಾಷ್ಟ್ರ ಸೋಮೇಶ್ವರಾ. ॥೩೨೦॥

೧೦೭೭
ಲಿಂಗಪ್ರಸಾದ ತನಗಾಗಬೇಕೆಂಬ ಪ್ರಸಾದಿ
ಶಬ್ದ ಸ್ಪರ್ಶ ರೂಪು ರಸ ಗಂಧಂಗಳ
ತನ್ನ ತನುಕರಣಂಗಳ ಮುಟ್ಟಲೀಯದೆ,
ಅಂಗ ಮುಂದಾಗಿ ಮನ ಹಿಂದಾಗಿ ಅಂಗಭಾವವಳಿದು
ಅರ್ಪಿಸಿಕೊಳಬಲ್ಲಡೆ ಪ್ರಸಾದಿ.
ಆ ಪ್ರಸಾದಿಯ ಪರಮಪರಿಣಾಮವೆ ಪ್ರಸಾದ. ಎಂತೆಂದಡೆ:
"ಸೌಖ್ಯಾಶ್ಯತಗುಣಾಧಿಕಂ ಯತ್ಪ್ರಸಾದೀ ಚ ಪ್ರೋಚ್ಯತೇ"
ಎಂದುದಾಗಿ, ಇದೇ ಆದಿಪ್ರಸಾದವಯ್ಯಾ,
ಸೌರಾಷ್ಟ್ರ ಸೋಮೇಶ್ವರಾ ॥೩೨೧॥

೧೦೭೮
ಲಿಂಗವೇ ಪ್ರಾಣವಾಗಿ ಪ್ರಾಣಲಿಂಗವೆಂಬ ಪ್ರಪಂಚನರಿಯನಯ್ಯಾ!
ಘನವೇ ಮನದಲ್ಲಿ ವೇಧಿಸಿ, ಮನ ಲಿಂಗಲೀಯವಾಗಿ
ನೆನಹಿನ ಸಂಕಲ್ಪ ಕ್ರೀನಿಃಷ್ಪತ್ತಿಯಾಗೆ, ಅಂಗಲಿಂಗವೆಂಬ ಭಾವ ಬಗೆಗೆಟ್ಟು,
ಲಿಂಗವೇ ಸರ್ವಾಂಗಮುಖವಾದ ಸೌರಾಷ್ಟ್ರ ಸೋಮೇಶ್ವರಾ,
ನಿಮ್ಮ ಶರಣನ ಸ್ವತಂತ್ರತೆಯ ಗತಿಯ ನೋಡಾ. ॥೩೨೨॥

೧೦೭೯
ಲಿಂಗೋದಕ ಪಾದೋದಕ ಪ್ರಸಾದೋದಕವಾದ ತ್ರಿವಿಧೋದಕದಲ್ಲಿ
ಲಿಂಗೋದಕದಿಂದ ಸಂಚಿತಕರ್ಮವಿಲ್ಲ.
ಪಾದೋದಕದಿಂದ ಪ್ರಾರಬ್ಧಕರ್ಮವಿಲ್ಲ.
ಪ್ರಸಾದೋದಕದಿಂದ ಆಗಾಮಿಕರ್ಮವಿಲ್ಲ.
ಇಂತೀ ತ್ರಿವಿಧೋದಕದಿಂದ ಬ್ರಹ್ಮಹತ್ಯ ಭ್ರೂಣಹತ್ಯ ಪಾಪಪಂಕ
ಪ್ರಕ್ಷಾಲನವಯ್ಯಾ, ಸೌರಾಷ್ಟ್ರ ಸೋಮೇಶ್ವರಾ. ॥೩೨೩॥

೧೦೮೦
ಲಯಭೋಗಾಧಿಕಾರವನುಳ್ಳ ಪರಶಿವನು ತಾನೆ
ತತ್ವಪ್ರಭಾವಮೂರ್ತಿಯೆನಿಸಿನದವ್ಯಯ ಅಪ್ರಮಾಣ
ಅಸಾಧ್ಯ ನಿಷ್ಕಲತತ್ತ್ವವೆ ಪಂಚಸಂಜ್ಞೆಯಿಂದಿಪ್ಪುದು, ಅದೆಂತೆಂದಡೆ:
ಜಗತ್‌ಸೃಷ್ಟಿಗಾದಿ, ಅಷ್ಟತನುಗಳಿಗಾದಿ, ತ್ರಿಮೂರ್ತಿಗಳಿಗಾದಿ,
ಷಟ್ತ್ರಿಂಶತತ್ವಕ್ಕಾದಿ, ಈಶ್ವರ ಸದಾಶಿವಗಾದಿಯಾಗಿಪ್ಪ,
ಮೇಲಣ ಪರತತ್ವವೆ ಪರ ಅನಂತಕೋಟಿಬ್ರಹ್ಮಾಂಡಗಳೊಳಗೆಡವಿಡದೆ
ಚರಾಚರವೆನಿಸುವ ಪ್ರಾಣಿಗಳೊಳಗೆ ಸೂಕ್ಷ್ಮವಾಗಿ,
ವಟವೃಕ್ಷದೊಳಡಗಿಪ್ಪ ಬೀಜದಂತೆ ಗೂಢವಾಗಿ,
ಆರಿಗೂ ಹಡೆಯಬಾರದೆ ವಿಶ್ವಕ್ಕೆ ಕಾರಣವಾಗಿಹುದೆ ಗೂಢ.
ತನ್ನೊಳಗೆ ಶಿವಶಕ್ತಿಗಳ ಶರೀರ ಘಟಿಸಿ
ಚರಾಚರಂಗಳು ಸ್ತ್ರೀಪುಂನಪುಂಸಕವೆಂಬ ಮುದ್ರೆಯಿಂದ
ಬಹುನಾಮಂಗಳಿಂದ ತನ್ನೊಳಗಿಪ್ಪ ಕಾರಣ ಶರೀರಸ್ಥ.
ತನ್ನೊಳಗಿಹ ಮಾಯೆಯಿಂದ
ಜಗತ್‌ಸೃಷ್ಟಿ ಮೊದಲಾದ ಸಕಲಪ್ರಪಂಚ ತೋರಿ,
ಆ ಪ್ರಪಂಚಿಂಗೆ ತಾನೆ ಭೂಮಿಯಾಗಿ, ಎಲ್ಲವ ತನ್ನೊಳಗಿಂಬಿಟ್ಟು,
ತಾನೆನ್ನದ ಅಭಿನ್ನದಿಂದಿಹುದೆ ಲಿಂಗಕ್ಷೇತ್ರ,
ಈಶ್ವರ ಸದಾಶಿವರು ಮೊದಲಾದ ಅನಂತದೇವಾತ್ಮಮೂರ್ತಿಗಳ

ಜನನಂಗಳಾದಿಯಿಂದತ್ತತ್ತಲಿಪ್ಪುದೆ ಅನಾದಿ.
ಇಂತಪ್ಪ ಪಂಚಸಂಜ್ಞೆಯನುಳ್ಳ ಲಿಂಗವನರಿತ ಲಿಂಗೈಕ್ಯಂಗೆ
ನಮೋ ನಮೋ ಎಂಬೆನಯ್ಯಾ, ಸೌರಾಷ್ಟ್ರ ಸೋಮೇಶ್ವರಾ. ॥೩೨೪॥

೧೦೮೧
ವಾಯುವಿನ ಹಸ್ತದಲ್ಲಿ ಸೊಡರಿದ್ದು ಬೆಳಗಬಲ್ಲುದೆ?
ಉರಿಯ ಮುಖದಲ್ಲಿ ಕರ್ಪುರವಿದ್ದು ಜೀವಿಸಬಲ್ಲುದೆ?
ಸೌರಾಷ್ಟ್ರ ಸೋಮೇಶ್ವರನ ಶರಣರ ಮುಂದೆ
ಕರಣಮಥನ ಇಂದ್ರಿಯದಿಚ್ಛೆ ತನುಗುಣ ಮನಗುಣ
ಪ್ರಾಣಗುಣಾದಿಗಳಿರಬಲ್ಲವೆ? ॥೩೨೫॥

೧೦೮೨
ವಿಶ್ವ ತೈಜಸ ಪ್ರಾಜ್ಞವೆಂಬ ಜೀವತ್ರಯವಿಡಿದ
ಸ್ಥೂಲ ಸೂಕ್ಷ್ಮ ಕಾರಣ ತನುವಿನ
ಸುಬುದ್ಧಿ ಸುಮನ ಸದ್ಭಾವವೆಂಬ ಹಸ್ತದಿಂ
ಕರ್ಮ ಭಕ್ತಿ ಜ್ಞಾನ ತತ್ವದಿಂದೊದಗಿದ ಪದಾರ್ಥವ
ಇಷ್ಟ ಪ್ರಾಣ ತೃಪ್ತಿಲಿಂಗಕ್ಕೆ
ಕಾಯಾರ್ಪಣ ಕರಣಾರ್ಪಣ ಭಾವಾರ್ಪಣದಿಂದರ್ಪಿಸಿಕೊಂಬ
ಪ್ರಸಾದ ಪಿಂಡೇಂದ್ರಿಯದ್ವಾರ ಸಂಚಲಕ್ಕವಧಿಯಾಯಿತ್ತು.
ಪಿಂಡ ಬ್ರಹ್ಮಾಂಡವ ಮೀರಿ ತೋರುವ ಮಹಾಘನವೆ ನಿಜವಾಗಿ
ನಿಜವಗಣಿತ ಅನುಪಮ ಅತರ್ಕ್ಯ ಅದ್ವಯಲಿಂಗಕ್ಕೆ ಅರ್ಪಿಸಲೊಂದಿಲ್ಲ,
ಅನರ್ಪಿತ ಹೊದ್ದದಾಗಿ.
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು ಅಚ್ಚ ಪ್ರಸಾದಿಗಳು. ॥೩೨೬॥

೧೦೮೩
ವೀರಶೈವ, ಶುದ್ಧಶೈವವೆಂಬುಭಯ ಪಕ್ಷದ ನಿರ್ಣಯ ನಿಷ್ಪತ್ತಿಯೆಂತೆಂದಡೆ:
ಮಲ ಮಾಯಾ ಮಲಿನವನು
ಶ್ರೀಗುರು ತನ್ನ ಕೃಪಾವಲೋಕನದಿಂದದನಳಿದು,
ನಿರ್ಮಲನಾದ ಶಿಷ್ಯನ ಉತ್ತಮಾಂಗದಲ್ಲಿಹ ಪರಮಚಿತ್ಕಳೆಯನು
ಹಸ್ತಮಸ್ತಕಸಂಯೋಗದ ಬೆಡಗಿನಿಂದ ತೆಗೆದು,
ಆ ಮಹಾಪರಮ ಕಳೆಯನು ಸ್ಥಲದಲ್ಲಿ ಕೂಡಿ,
ಮಹಾಲಿಂಗವೆಂದು ನಾಮಕರಣಮಂ ಮಾಡಿ,
ಶಿಷ್ಯನಂಗದ ಮೇಲೆ ಬಿಜಯಂಗೆಯಿಸಿ,

ಕರ್ಣದ್ವಾರದಲ್ಲಿ ಪ್ರಾಣಂಗೆ ಆ ಮಹಾಲಿಂಗವ ಜಪಿಸುವ
ಪ್ರಣವಪಂಚಾಕ್ಷರಿಯನು ಪ್ರವೇಶವಂ ಮಾಡಿ,
ಅಂಗಪೀಠದಲ್ಲಿರಿಸಿ, ಅಭಿನ್ನ ಪ್ರಕಾಶವಾದ ಪೂಜೆಯ ಮಾಡ ಹೇಳಿದನು,
ಇದೀಗ ವೀರಶೈವದ ಲಕ್ಷಣವೆಂದರಿವುದು.
ಇನ್ನು ಶುದ್ಧಶೈವಂಗೆ ಗುರು ತನ್ನ ನಿರೀಕ್ಷಣ ಮಾತ್ರದಲ್ಲಿ
ಅವನ ಶುದ್ಧಾಂಗನ ಮಾಡಿ,
ಆತನ ಕರ್ಣದ್ವಾರದಲ್ಲಿ ಪಂಚಾಕ್ಷರಿಯನುಪದೇಶವಂ ಮಾಡಿ,
ಸ್ಥಾವರಲಿಂಗಪೂಜಕನಾಗಿರೆಂದು ಲಿಂಗವನು ಕೊಟ್ಟು,
ಭೂಪೀಠದಲ್ಲಿರಿಸಿ ಅರ್ಚನೆ ಪೂಜನೆಯ ಮಾಡೆಂದು ಹೇಳಿದನು.
ಹೇಳಲಿಕ್ಕಾಗಿ ಶುದ್ಧಶೈವನೆ ಪೀಠದಲ್ಲಿರಿಸಿ
ಭಿನ್ನಭಾವಿಯಾಗಿ ಅರ್ಚನೆ ಪೂಜೆನೆಯಂ ಮಾಡುವನು.
ವೀರಶೈವನು ಅಂಗದ ಮೇಲೆ ಧರಿಸಿ ಅಭಿನ್ನಭಾವದಿಂದ
ಅರ್ಚನೆ ಪೂಜನೆಯಂ ಮಾಡುವನು.
ಶುದ್ಧಶೈವಂಗೆ ನೆನಹು, ವೀರಶೈವಂಗೆ ಸಂಗವೆಂತೆಂದಡೆ:
ಅತ್ಯಂತ ಮನೋರಮಣನಪ್ಪಂತಹ ಪುರುಷನ ಒಲುಮೆಯಲ್ಲಿಹ ಸ್ತ್ರೀಗೆ
ನೆನಹಿನ ಸುಖದಿಂದ ಸಂಗಸುಖವು ಅತ್ಯಧಿಕವಪ್ಪಂತೆ
ಶುದ್ಧಶೈವದ ನೆನಹಿಂಗೂ ವೀರಶೈವದಲ್ಲಿಯ ಸಂಗಕ್ಕೂ ಇಷ್ಟಂತರ.
ಆ ಲಿಂಗದಲ್ಲಿ ಶುದ್ಧಶೈವನ ನೆನಹು ನಿಷ್ಪತ್ತಿಯಾದಡೆ ಸಾರೂಪ್ಯನಹನು.
ಆ ಲಿಂಗದಲ್ಲಿ ವೀರಶೈವನ ನೆನಹು ನಿಷ್ಪತ್ತಿಯಾದಡೆ ಸಾಯುಜ್ಯನಹನು.
ಇದು ಕಾರಣ, ಸ್ಥಾವರಲಿಂಗದ ಧ್ಯಾನಕ್ಕೂ
ಪ್ರಾಣಲಿಂಗದ ಸಂಗಕ್ಕೂ ಇಷ್ಟಂತರ.
ಸ್ಥಾವರಲಿಂಗದ ಧ್ಯಾನದಿಂದ ಸಾರೂಪ್ಯಪದವನೈದಿದ ತೆರನೆಂತೆಂದಡೆ:
ಕೀಟನು ಭ್ರಮರಧ್ಯಾನದಿಂದ ಆ ಭ್ರಮರರೂಪಾದಂತೆ
ಶೈವನು ಶಿವಧ್ಯಾನದಿಂದ ಶಿವನ ಸಾರೂಪ್ಯಪದವನೈದಿ
ಇದಿರಿಟ್ಟು ಭಿನ್ನಪದದಲ್ಲಿರುತ್ತಿಹನು.
ಮತ್ತಂ, ವೀರಶೈವನು ಜಂಗಮಾರ್ಚನೆಯಂ ಮಾಡಿ
ಪ್ರಾಣಲಿಂಗಸಂಬಂಧದಿಂ ಸಾಯುಜ್ಯಪದವನೆಯ್ದಿದ ತೆರನೆಂತೆಂದಡೆ:
ಅಗ್ನಿಯ ಸಂಗವ ಮಾಡಿದ ಕರ್ಪುರ ನಾಸ್ತಿಯಾದ ಹಾಂಗೆ,
ಈತನು ಶಿವನಲ್ಲಿ ಸಾಯುಜ್ಯಪದವನೈಯ್ದಿ
ರೂಪನಾಸ್ತಿಯಾಗಿ ಶಿವನೆಯಹನು.
ಇದು ಕಾರಣ, ಶುದ್ಧಶೈವ ವೀರಶೈವದಂತರ ಮಹಾಂತರ,
ಈ ಪ್ರಕಾರ ಕಾಣಾ, ಸೌರಾಷ್ಟ್ರ ಸೋಮೇಶ್ವರಾ. ॥೩೨೭॥

೧೦೮೪

ವೇದಂಗಳ ಹಿಂದೆ ಹರಿಯದಿರು ಹರಿಯದಿರು.
ಶಾಸ್ತ್ರಂಗಳ ಹಿಂದೆ ಸುಳಿಯದಿರು ಸುಳಿಯದಿರು.
ಪುರಾಣಂಗಳ ಹಿಂದೆ ಬಳಸದಿರು ಬಳಸದಿರು.
ಆಗಮಂಗಳ ಹಿಂದೆ ತೊಳಲದಿರು ತೊಳಲದಿರು.
ಸೌರಾಷ್ಟ್ರ ಸೋಮೇಶ್ವರನ ಕೈವಿಡಿದು
ಶಬ್ದಜಾಲಂಗಳಿಗೆ ಬಳಲದಿರು, ಬಳಲದಿರು. ॥೩೨೮॥

೧೦೮೫

ವೇದವಿತ್ತುಗಳು ಅಗ್ನಿಪುರುಷನೆ ದೇವರೆಂಬರಯ್ಯಾ.
ಶಾಸ್ತ್ರವಿತ್ತುಗಳು ಪಾಷಾಣವನೆ ದೇವರೆಂಬರಯ್ಯಾ.
ಆತ್ಮವಿತ್ತುಗಳು ಆತ್ಮನೆ ದೇವರೆಂಬರಯ್ಯಾ.
ಶಬ್ದವಿತ್ತುಗಳು ಸಮಯಂಗಳನೆ ದೇವರೆಂಬರಯ್ಯಾ.
ಇವರೆಲ್ಲರೂ ನಮ್ಮ ಸೌರಾಷ್ಟ್ರ ಸೋಮೇಶ್ವರಲಿಂಗದ ನಿಜವನರಿಯದೆ
ಜವನ ಜಾಡ್ಯಂಗಳಿಂ ಭವಭಾರಿಗಳಾದರಯ್ಯಾ. ॥೩೨೯॥

೧೦೮೬

ವೇದಶಾಸ್ತ್ರಪುರಾಣಂಗಳ ಗತಿಯಲ್ಲಿ ನಡೆದು, ತಪ್ಪಿತ್ತೆಂಬವನಲ್ಲ ಶರಣ.
ಲಿಂಗದ ಹೆಸರ ಹೇಳಿ ಫಲಪದವೆಂಟತೋರಿ ಮಾರುವನಲ್ಲ ಶರಣ.
ಅಚೇತನವ ಚೇತನವೆನಿಸುವ ಪೂರ್ವಕರ್ಮವಿಡಿದು
ಆಚರಿಸುವವನಲ್ಲ ಶರಣ.
ಆರು ಮೂರಕ್ಕೆ ತಂದು, ತ್ರಿವಿಧವನೊಂದು ಮಾಡಿ
ಬಿಚ್ಚಿ ಬೇರಿಲ್ಲದೆ ಬೆರಸಿ, ಒಂದಿಲ್ಲದಿರಬಲ್ಲನಾಗಿ
ತರ್ಕಂಗಳಿಗೆ ಅತರ್ಕ್ಯ,
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ. ॥೩೩೦॥

೧೦೮೭

ವೇದಾಗಮಂಗಳ ದ್ವೈತಾದ್ವೈತದ ಬಗೆಗೆ ನಿಲುಕುವನಲ್ಲ,
ಅತರ್ಕ್ಯನು ಅಖಿಲಾತೀತನು ಚರಾಚರಕ್ಕೆ ಸಿಲುಕುವನಲ್ಲ.
ಅತ್ಯತಿಷ್ಠದ್ದಶಾಂಗುಲನು, ಅಹಂಕಾರವೈದದ ಅನುಪಮನು.
ಸ್ಥಾವರಜಂಗಮವಲ್ಲದ ಭರಿತನು. ಸರ್ವಜ್ಞ ಸರ್ವಕರ್ತೃ
ಸೌರಾಷ್ಟ್ರ ಸೋಮೇಶ್ವರನಲ್ಲಿ ಅವಿರಳನಾದ ಶರಣ. ॥೩೩೧॥

೧೦೮೮
ವೇದಾಗಮಂಗಳು ಹೋದ ಸರಣಿಯಲ್ಲಿ ಹೋದರಲ್ಲದೆ
ದ್ವೈತಾದ್ವೈತಕ್ಕೆ ನಿಲುಕದ ನಿಜವ ಕಂಡವರಾರನೂ ಕಾಣೆ.
ವಾಣಿಯ ಹಂಗಿನಲ್ಲಿ ಉಲಿದುಲಿದು ಹೋದರಲ್ಲದೆ
ಉಲುಹಡಗಿದ ನಿಲವ ಕಂಡವರಾರನೂ ಕಾಣೆ.
ತನು ಕರಣ ಭುವನ ಭೋಗಂಗಳ ಕಂಡಲ್ಲದೆ
ಸೌರಾಷ್ಟ್ರ ಸೋಮೇಶ್ವರಲಿಂಗದುಳುಮೆಯ ಕಂಡು
ಸುಖಿಯಾದವರಾರನೂ ಕಾಣೆ. ॥೩೩೨॥

೧೦೮೯
ವೈದಿಕರಪ್ಪ ವೇದವಿತ್ತುಗಳೊಂದು ಕೋಟಿಗೆ ಅನ್ನವನಿಕ್ಕಿದ ಫಲಕ್ಕೆ
ಕೋಟಿ ಮಿಗಿಲು ಶಿವಶರಣಂಗೆ ಒಂದು ಭಿಕ್ಷವನಿಕ್ಕಿದ ಫಲ.
ಕೋಟಿ ಯಜ್ಞ ಕೋಟಿ ಕನ್ಯಾದಾನದ ಫಲಕ್ಕೆ ಮಿಗಿಲು
ಒಬ್ಬ ಭಸ್ಮಾಂಗಿಯ ಒಂದು ವೇಳೆಯ ತೃಪ್ತಿ. ಅದೆಂತೆಂದೊಡೆ:
"ಕ್ಷೀರಕುಂಭಸಹಸ್ರೇಣ ಘೃತಕುಂಭಶತೇನ ಚ
ಭಸ್ಮಧಾರಿಣಿನಸುಫಭಿಕ್ಷಾತಃ ಕೋಟಿಯಜ್ಞ ಫಲಂ ಭವೇತ್"
ಎಂದುದಾಗಿ, ಚತುರ್ವೇದಿಗಳಿಗೆ ಮೃಷ್ಟಾನ್ನವನಿಕ್ಕೆ
ಅಕ್ಷಪಾದಂಗೆ ಗೋವೇಧೆಯಾಯಿತ್ತು.
ಒಬ್ಬ ಶಿವಗಣನಾಥಂಗೆ ಚೋಳ ದಾಸರು ಉಣಲುಡಲಿತ್ತು,
ಕೈಯೊಡನೆ ಹೊಮ್ಮಳೆ ತವನಿಧಿಯ ಪಡೆದರು. ಇದು ಕಾರಣ,
ನೆಮ್ಮುಗೆವಿಡಿದು ಮಾಡುವ ಭಕ್ತಂಗಿದೆ ಮಾಟವಯ್ಯಾ,
ಸೌರಾಷ್ಟ್ರ ಸೋಮೇಶ್ವರಾ. ॥೩೩೩॥

೧೦೯೦
ವ್ಯಾಪಕಾಕ್ಷರದಲ್ಲಿ ನಾಲ್ಕಕ್ಷರ, ಸ್ಪರ್ಶನಾಕ್ಷರದಲ್ಲಿ ಏಕಾಕ್ಷರ,
ಇಂತೀ ಪಂಚಾಕ್ಷರವೆ ಪಂಚಬ್ರಹ್ಮಸ್ವರೂಪವು
ಶಿವಜ್ಞಾನಕ್ಕೆ ಮೂಲವೆಂದರಿತು,
ಮೂಲಪಂಚಾಕ್ಷರ, ಸ್ಥೂಲಪಂಚಾಕ್ಷರ, ಸೂಕ್ಷ್ಮಪಂಚಾಕ್ಷರ,
ಮಾಯಾಖ್ಯಪಂಚಾಕ್ಷರ, ಪ್ರಸಾದಪಂಚಾಕ್ಷರವೆಂಬ
ಪಂಚಪಂಚಾಕ್ಷರದ ಸ್ವರೂಪನರಿತು ಪಂಚಾಕ್ಷರವ ಜಪಿಸಲು
ಸೌರಾಷ್ಟ್ರ ಸೋಮೇಶ್ವರಲಿಂಗವಪ್ಪುದು ತಪ್ಪದಯ್ಯಾ. ॥೩೩೪॥

೧೯೯೧
ಶಬ್ದಶಾಸ್ತ್ರ ತರ್ಕಾಗಮಂಗಳ ಹೇಳಿ ಕೇಳಿ,
ಕಲಿತುಲಿದವರೆಲ್ಲಾ ವಿದ್ಯಾಗೂಡಾದರಲ್ಲದೆ,
ಲಿಂಗಗೂಡಾದುದಿಲ್ಲ ನೋಡಯ್ಯಾ.
ಕಲಿಕಲಿತು ಉಲಿವ ಅಭ್ಯಾಸದ ಮಾತಿಂಗೆ
ಮರುಳಪ್ಪರೆ ನಮ್ಮ ಶಿವಶರಣರು.
ಆದಿ ಅನಾದಿಗಭೇದ್ಯವಾದ ನಿಜವ ಭೇದಿಸಲರಿತು
ಮನ ಘನದಲ್ಲಿ ನಿವಾಸಿಯಾಗಬೇಕು.
ಮನ ಘನದಲ್ಲಿ ನಿವಾಸಿಯಾಗದೆ
ಸೌರಾಷ್ಟ್ರ ಸೋಮೇಶ್ವರಲಿಂಗವ ಬಲ್ಲೆನೆಂದು ನುಡಿವ
ಬರಿ ಮಾತಿನ ಬಾಯ ಬಣ್ಣದ ಸೊಲ್ಲು,
ಸಲ್ಲದೆ ಹೋಯಿತ್ತು. ॥೩೩೫॥

೧೯೯೨
ಶಬ್ದಶಾಸ್ತ್ರ ಶ್ರುತಿಸ್ಮೃತಿಗೆ ವಾಙ್ಮ[ಹ]ವೊ? ಮಹವೊ?
ಬಲ್ಲಡೆ ನೀವು ಹೇಳಿರೆ.
ಸೌರಾಷ್ಟ್ರ ಸೋಮೇಶ್ವರಲಿಂಗವೆಂಬುದು ಕಲ್ಪನೆಯಿಂ ಕಾಣ್ಬುದು
ಕನಸೊ? ನನಸೊ? ಬಲ್ಲಡೆ ನೀವು ಹೇಳಿರೆ.
ಸೌರಾಷ್ಟ್ರ ಸೋಮೇಶ್ವರಲಿಂಗವೆಂಬುದು
ಸ್ವಯವೊ? ಪರವೊ? ಬಲ್ಲಡೆ ನೀವು ಹೇಳಿರೆ. ॥೩೩೬॥

೧೯೯೩
ಶರೀರಧಾರಕನಾಗಿ ಇಂದ್ರಿಯಂಗಳಿಚ್ಛೆಯಲ್ಲಿ ಸುಳಿವನಲ್ಲ.
ಲಿಂಗದಿಚ್ಛೆ ಎಂದಿಪ್ಪನಾಗಿ ಸಂಕಲ್ಪವಿಕಲ್ಪವ ಹೊದ್ದ.
ನಿಸ್ಸಂದೇಹಿಯಾಗಿ ಸಕಲದೊಡಗೂಡಿರ್ದು ಮಾಯಾಪಾಶರಹಿತ.
ಕರ್ಮದ ಕಟ್ಟ ಹರಿದಲ್ಲಿ ನಿರ್ಮುಕ್ತ.
ಅಚ್ಚ ಸುಖಿ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ . ॥೩೩೭॥

೧೯೯೪
ಶಿವತತ್ವದ ಮೂಲಾಧಾರದ ಜ್ಞಾನಶಕ್ತಿಯೆ ಚಿದ್ವಿಭೂತಿ.
ಈ ಚಿದ್ವಿಭೂತಿ ಎನ್ನಂತರಂಗದಲ್ಲಿ ಲೇಪವಾಗಿ
ತೊಳತೊಳಗಿ ಬೆಳಗುವ ಬೆಳಗಿನಲ್ಲಿಯೇ
ಆನು ನಿಮ್ಮ ಕಂಡು ಬದುಕಿದೆನಯ್ಯಾ
ಸೌರಾಷ್ಟ್ರ ಸೋಮೇಶ್ವರಾ. ॥೩೩೮॥

೧೧೯೫

ಶಿವತತ್ವ ಶಿವಜ್ಞಾನ ಶಿವೈಕ್ಯವಪ್ಪ ತ್ರಿವಿಧವನರಿಯಬಲ್ಲಡೆ
ಅದು ವರ್ಮ, ಅದು ಸಂಬಂಧ.
ಶಿವಾದಿ ಪೃಥ್ವಿಯಂತವಪ್ಪ ತತ್ವಾಧ್ವವನರಿತು
ತತ್ವಜ್ಞಾನಿಯಾಗಬಲ್ಲಡೆ ಅದು ವರ್ಮ, ಅದು ಸಂಬಂಧ.
ಬ್ರಹ್ಮಾನುಸಂಧಾನದಿಂದವಿನಾಭಾವವನೆಯ್ದಿ ಶಿವೈಕ್ಯವಾಗಬಲ್ಲಡೆ
ಸೌರಾಷ್ಟ್ರಸೋಮೇಶ್ವರಲಿಂಗದಲ್ಲಿ ಅದು ವರ್ಮ, ಅದು ಸಂಬಂಧ. ॥೩೩೯॥

೧೧೯೬

ಶಿವಪಥವನರಿದು, ಲಿಂಗನಿಷ್ಠೆಯಿಂದೇಕೋಭಾವ ಬಲಿದು,
ಕರಿಗೊಂಡು, ಘನವೇದ್ಯವಾಗಿ ನಿಂದು, ನಿಜವ ನೆಮ್ಮಿ,
ಸಚ್ಚಿದಾನಂದಸುಖಮಯನಾಗಿ,
ಮಾಯೆ ಕೆಟ್ಟು, ಮರವೆ ಬಿಟ್ಟು, ಮರಣವಳಿಯಬೇಕು.
ಇದಲ್ಲದೆ ಬಿಂದುವಿಂದಾದ ತ್ರಿಬದ್ಧಕ್ರಿಯೆ ಎಂದರಿಯದೆ
ಬಾಹ್ಯಕ್ರೀಯೊಳೊಂದಿದಡೆ,
ಸುರಪ, ಹರಿ, ವಿರಿಂಚಿಗಳಾದಡೂ ಮಾಯೆ ಕೆಡದು,
ಮರವೆ ಬಿಡದು.
ಮೃತ್ಯುವಗಿದು ಕಾಲನ ಬಾಯಿಗೆ ಕೆಡಹದೆ ಮಾಣದಯ್ಯಾ.
ಇದ ಬಲ್ಲೆನಾಗಿ ನಾನೊಲ್ಲೆ, ಸೌರಾಷ್ಟ್ರ ಸೋಮೇಶ್ವರಾ. ॥೩೪೦॥

೧೧೯೭

ಶಿವಭಕ್ತಿಯೆಂಬುದು ಯುಕ್ತಿಯ ಪರಿಯಂತಲ್ಲ, ಸಾಧಕದ ಪರಿಯಂತಲ್ಲ,
ಮೂಗರು ಕಂಡ ಕನಸಿನಂತಿಪ್ಪುದು ಕಾಣಿರೆ.
ಹೇಳಿ ಕೇಳಿ ಮಾಡುವುದು ಯುಕ್ತಿಭಕ್ತಿ.
ಸಾಧಕಾಂಗದಿಂದ ಮಾಡುವುದು ಅಭ್ಯಾಸಭಕ್ತಿ.
ಮನ ಕೂರ್ತು ಮಾಡುವುದು ಮುಕ್ತಿಭಕ್ತಿ.
ಕೇಡಿಲ್ಲದೆ ಮಾಡುವುದು ನಿತ್ಯಭಕ್ತಿ.
ಇದ್ದಂತಿದ್ದು ನಿಜವ ಅಪ್ಪುವುದು ನಿಜಭಕ್ತಿ.
ಈ ನಿಜಭಕ್ತಿಯಲ್ಲಿ ಭರಿತರು
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು. ॥೩೪೧॥

೧೧೯೮

ಶಿವಭಾವದಿಂದ ಆತ್ಮ ಹುಟ್ಟಿ, ಶಿವ ತಾನೆಂಬ
ಉಭಯವನಲಂಕರಿಸಿದನಾಗಿ ಆತ್ಮಂಗೆ ಭಾವವೆಂಬ ಹೆಸರಾಯಿತ್ತು.

ಆತ್ಮ ಬಂದು ಆಕಾಶವ ಕೂಡಿದಲ್ಲಿ ಜ್ಞಾನವೆಂಬ ಹೆಸರಾಯಿತ್ತು.
ಆತ್ಮ ಬಂದು ವಾಯುವ ಕೂಡಿದಲ್ಲಿ [ಮನವೆಂಬ ಹೆಸರಾಯಿತ್ತು]
ಆತ್ಮ ಬಂದು ಅಗ್ನಿಯ ಕೂಡಿದಲ್ಲಿ ಅಹಂಕಾರವೆಂಬ ಹೆಸರಾಯಿತ್ತು.
ಆತ್ಮ ಬಂದು ಅಪ್ಪುವ ಕೂಡಿದಲ್ಲಿ ಬುದ್ಧಿಯೆಂಬ ಹೆಸರಾಯಿತ್ತು.
ಆತ್ಮ ಬಂದು ಪೃಥ್ವಿಯ ಕೂಡಿದಲ್ಲಿ ಚಿತ್ತೆಂಬ ಹೆಸರಾಯಿತ್ತು.
ಚಿತ್ತು ಆಚಾರಲಿಂಗವ ಧರಿಸಿಪ್ಪುದು. ಬುದ್ಧಿ ಗುರುಲಿಂಗವ ಧರಿಸಿಪ್ಪುದು.
ಅಹಂಕಾರ ಶಿವಲಿಂಗವ ಧರಿಸಿಪ್ಪುದು,
ಮನಸ್ಸು ಜಂಗಮಲಿಂಗವ ಧರಿಸಿಪ್ಪುದು.
ಜ್ಞಾನ ಪ್ರಸಾದಲಿಂಗವ ಧರಿಸಿಪ್ಪುದು.
ಭಾವ ಮಹಾಲಿಂಗವ ಧರಿಸಿಪ್ಪುದು.
ಸೌರಾಷ್ಟ್ರ ಸೋಮೇಶ್ವರಲಿಂಗ ತಾನು ತಾನಾಗಿರಬೇಕು. ॥೩೪೨॥

೧೧೯೯

ಶಿವಯೋಗಿಗೆ ಕರ್ಮವಿಲ್ಲ, ಶಿವಶರಣರ ಪಥ ಲಿಂಗಾಧೀನ.
ಮತ್ತಾ ಲಿಂಗವಶನಾಗಿ ಆಯತ ಸ್ವಾಯತದಲ್ಲಿ
ಲಿಂಗಮಯವಾಗಿಪ್ಪ ಶಿವಜ್ಞಾನಿಗಳಿಗೆ ಕರ್ಮವೆಡೆವೋಗಲೆಡೆಯಿಲ್ಲ.
ಹಿಂದಣ ಕರ್ಮ ಜ್ಞಾನಾಗ್ನಿಯಿಂದ ಉರಿದು ಭಸ್ಮವಾಯಿತ್ತು.
ಮುಂದಣ ಕರ್ಮ ನಿಂದೆವಂದಕರಲ್ಲಿ ಅಳಿಯಿತ್ತು,
ಇಂದಿನ ಕರ್ಮ ನಿಸ್ಸಂದೇಹದಲ್ಲಿ ಕೆಟ್ಟಿತ್ತು.
"ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ಮಮ"
ಎಂದುದಾಗಿ, ಸೌರಾಷ್ಟ್ರ ಸೋಮೇಶ್ವರನ ಶರಣರು
ನಿಃಕರ್ಮಿಗಳಾಗಿ ಲಿಂಗಸುಖಿಗಳು. ॥೩೪೩॥

೧೨೦೦

ಶಿವಲಾಂಛನವ ಧರಿಸಿ, ಚರಲಿಂಗಮೂರ್ತಿಯಾದ ಬಳಿಕ
ತ್ರಿಲೋಕಕ್ಕೆ ಕರ್ತುಭಾವದಿಂದಿರಬೇಕಲ್ಲದೆ
ಅಶನದ ಆಪ್ಯಾಯನ ವಿಷಯಂಗಳಿಗೆ
ಕಂಡ ಕಂಡವರ ಕಂಡ ಕಂಡಲ್ಲಿ ಕರೆಕರೆದು ಕರಕರಿಸಿ
ಕಾಂಚಾಣಕ್ಕೆ ಕೈನೀಡುವ ಕಷ್ಟವ ನೋಡಾ.
ಉಪಾಧಿಯಿಂದೊಡಲ ಹೊರೆವ ಪರಿಯ ನೋಡಯ್ಯಾ.
ಇಂತಿವೆಲ್ಲ ಭಂಗವೆಂದರಿತು ಅಭಂಗನಾಗಿರಬೇಕಯ್ಯಾ
ಸೌರಾಷ್ಟ್ರ ಸೋಮೇಶ್ವರಾ. ॥೩೪೪॥

೧೧೦೧
ಶಿವಲಿಂಗಾರ್ಚನಾ ಕ್ರಿಯಾಶಕ್ತಿಗೆ
ಅಭ್ಯಾಸದ ಯೋಗದ ರತಿ ಸರಿಯಲ್ಲ ನೋಡ,
ಯೋಗದ ಬಲದಿಂದ ಸೇವಿಸುವ ಶ್ಲೇಷಾಮೃತವು
ಶಿವಪ್ರಸಾದಾಮೃತಕೆ ಸರಿಯಲ್ಲ ನೋಡ,
ಪ್ರಾಣನ ಬ್ರಹ್ಮರಂಧ್ರದಲ್ಲಿ ಬಿಡುವ ಯೋಗವು
ಪ್ರಾಣಲಿಂಗೈಕ್ಯ ಸಂಬಂಧಸಂಯೋಗಕ್ಕೆ ಸರಿಯಲ್ಲ ನೋಡ.
ಶಿವಾನುಭಾವಕ್ಕೆ ಯೋಗಕ್ಕೆ ಇನಖದ್ಯೋತದಂತರವು ನೋಡಯ್ಯ
ಸೌರಾಷ್ಟ್ರ ಸೋಮೇಶ್ವರಾ. ॥೩೪೫॥

೧೧೦೨
ಶಿಷ್ಣೋದನವ ಲಿಂಗಕ್ಕಿತ್ತು ಪ್ರಸಾದಭೋಗ ಮಾಡುವುದಯ್ಯಾ.
ರಸಾಯನವ ಲಿಂಗಕ್ಕಿತ್ತು, ಪಾನೀಯ ಮಾಡಲಿತ್ತು,
ಪ್ರಸಾದಪಾನೀಯ ಮಾಡುವುದಯ್ಯಾ,
ಸುಗಂಧವ ಲಿಂಗಕ್ಕೆ ಘ್ರಾಣಿಸಲಿತ್ತು, ಪ್ರಸಾದಗಂಧಪ ಘ್ರಾಣಿಸುವುದಯ್ಯಾ. ಇದಕ್ಕೆ ಶ್ರುತಿ:
"ರುದ್ರೇಣಾತ್ತಮಶ್ನಂತಿ ರುದ್ರೇಣ ಪೀತಂ ಪಿಬಂತಿ
ರುದ್ರೇಣ ಘ್ರಾತಂ ಜಿಘ್ನಂತಿ" ಇಂತೆಂದುದಾಗಿ,
ಪಂಚೇಂದ್ರಿಯಮುಖದಲ್ಲಿ ಲಿಂಗಪ್ರಸಾದವಲ್ಲದೆ ಭೋಗಿಸ,
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ. ॥೩೪೬॥

೧೧೦೩
ಶುಕ್ಲಶೋಣಿತದಲ್ಲಿ ಬಲಿದ ಕರುಳು ಕತ್ತಲೆಯಲ್ಲಿ ಬೆಳೆದು,
ಮೂತ್ರನಾಳದಲ್ಲಿಳಿದು, ಕರ್ಮವೆ ಕರ್ತುವಾಗಿ,
ಕಪಟವೆ ಆಶ್ರಯವಾಗಿ, ಕೇವಲಜ್ಞಾನಶೂನ್ಯವಾಗಿ,
ಬರಿಯ ಮಾತ ಬಣ್ಣಿಸಿ, ಬಯಲ ಮಾತ ಕೊಟ್ಟು, ಬಸುರ ಮಾತ ತೆಗೆದು,
ಜಿಹ್ವೆ ಗುಹ್ಯಂಗಳ ಹೊರೆವ ಚೋರವಿದ್ಯಕ್ಕೆ
ನಿಜ ಸಾಧ್ಯವಪ್ಪುದೆ? ಅದು ಹುಸಿ. ಅದೆಂತೆಂದಡೆ:
"ಕರ್ಮಕಾಪಟ್ಯಮಾಶ್ರಿತ್ಯ ನಿರ್ಮಲಜ್ಞಾನವರ್ಜಿತಾಃ
ವಾಗ್ಬ್ರಹ್ಮಣಿ ಪ್ರವರ್ತಂತೇ ಶಿಶ್ನೋದರಪರಾಯಣಾಃ"
ಇಂತೆಂದುದಾಗಿ,
ತ್ರಿಡಂಬಿಂದೊಡಲ ಹೊರೆದು ಕುಟಿಲ ತಮಗಿಲ್ಲೆಂಬ
ಡಂಭಕರನೇನೆಂಬೆನಯ್ಯಾ ಸೌರಾಷ್ಟ್ರ ಸೋಮೇಶ್ವರಾ. ॥೩೪೭॥

೧೧೦೪

ಶುಕ್ಲಕಶೋಣಿತದಿಂದ ತನು ಮನ ಜನಿಸಿತ್ತು.
ತನು ಮನದಿಂದ ನಡೆ ನುಡಿ ಜನಿಸಿತ್ತು.
ನಡೆ ನುಡಿಯಿಂದ ಅಹಂಕಾರ ಮಮಕಾರ ಜನಿಸಿತ್ತು.
ಇವರ ದೆಸೆಯಿಂದ ರಸ, ಗಂಧ, ರೂಪ, ಶಬ್ದ, ಸ್ಪರ್ಶನ ಜನಿಸಿತ್ತು.
ಇವಕ್ಕಾಶ್ರಯವಾಗಿ ಮನವೊಂದಿದ್ದಿತಲ್ಲದೆ
ಆ ಮನವು ಮಹದಲ್ಲಿ ಲಯವಾದಲ್ಲಿ ಆತ್ಮನಾವೆಡೆಯಲ್ಲಿದ್ದಿತ್ತೊ?
ಷಡುವರ್ಣದೊಳಗಲ್ಲ ನಡೆ ನುಡಿ ಚೈತನ್ಯವಲ್ಲ.
ಹಿಡಿತಕ್ಕೆ ಬರಲಿಲ್ಲ ಇನ್ನೆಂತಿಪ್ಪುದೊ?
ದರ್ಪಣದ ಪ್ರತಿಬಿಂಬಕ್ಕೊಂದು ಚೇಷ್ಟೆಯುಂಟೆ?
ನೆಳಲಿಗೊಂದು ಹರಿದಾಟವುಂಟೆ?
ನಿಃಕಳಂಕ ಶಾಂತಮಲ್ಲಿಕಾರ್ಜುನಯ್ಯಾ, ಮನದ ನೆನಹೇ ಆತ್ಮನಲ್ಲದೆ
ಬೇರಾತ್ಮನಿಲ್ಲ ಕಾಣಾ, ಸೌರಾಷ್ಟ್ರ ಸೋಮೇಶ್ವರಾ. ॥೩೪೮॥

೧೧೦೫

ಶುದ್ಧ ಕೇವಲಜ್ಞಾನಸ್ವರೂಪನಾದಾತ ನೀನಯ್ಯಾ.
ಅಖಿಲ ಸ್ಥಾವರಜಂಗಮಂಗಳಲ್ಲಿ ಬೆರಸಿಯೂ ಬೆರಸದಿರ್ಪಾತ ನೀನಯ್ಯಾ.
ಸಕಲ ನಿಃಕಲನಾದಾತ ನೀನಯ್ಯಾ.
ಕೇವಲ ನಿಃಕಲದಂತೆ ನಿರಂಗನಾದಾತ ನೀನಯ್ಯಾ.
ಭವದಾರಣ್ಯವ ತರಿದಾತ ನೀನಯ್ಯಾ.
ಭವರೋಗಕ್ಕೆ ಭೈಷಜ್ಯನಾದಾತ ನೀನಯ್ಯಾ.
ಸಕಲ ಜಗಜ್ಜನದಾಧಾರಾಧೇಯ ಕರ್ತೃವಾದಾತ ನೀನಯ್ಯಾ.
ಇದಕ್ಕೆ ಶ್ರುತಿ:
"ತ್ವಮಗ್ನೇದ್ಯುಭಿಸ್ತ್ವಮಾಶುಶುಕ್ಷಣಿಸ್ತ್ವಮದ್ಭ್ಯಸ್ತ್ವಮಶ್ಮನಸ್ಪರಿ
ತ್ವಂ ವನೇಭ್ಯಸ್ತ್ವಮೋಷಧೀಭ್ಯಸ್ತ್ವಂ ನೃಣಾಂ ನೃಪತೇಜಾಯಸೇ ಶುಚಿಃ"
ಇಂತೆಂದುದಾಗಿ,
ಪರಮನಿರ್ಮಲನಾದಾತ ನೀನೇ ಸೌರಾಷ್ಟ್ರ ಸೋಮೇಶ್ವರಾ. ॥೩೪೯॥

೧೧೦೬

ಶುದ್ಧ ಮಿಶ್ರ ಸಂಕೀರ್ಣ ಪೂರ್ವ ಮಾರ್ಗಶೈವಂಗಳಲ್ಲಿ
ಕರ್ಮಭಕ್ತಿಯಲ್ಲದೆ ನಿರ್ಮಳಸದ್ಭಕ್ತಿಯೆಲ್ಲಿಯದೊ?
ಒಮ್ಮೆ ಧರಿಸಿ ಒಮ್ಮೆ ಇರಿಸಿ, ಶುಚಿಯಾದೆನೆಂದು ಅಶುಚಿಯಾದೆನೆಂದು
ಭವಿಯಾಗುತ್ತೊಮ್ಮೆ, ಭಕ್ತನಾಗುತ್ತೊಮ್ಮೆ

ಒಪ್ಪಚ್ಚಿ ಹೊಲೆ, ಒಪ್ಪಚ್ಚಿ ಕುಲವೆಂದು ತೆರನರಿಯದಿಪ್ಪ
ಬರಿಯ ಶುದ್ಧಶೈವವಂ ಬಿಟ್ಟು,
ಬ್ರಹ್ಮ ವಿಷ್ಣು ರುದ್ರ ಮಾಹೇಶ್ವರರು ಒಂದೆಂದು ನುಡಿವ
ದುಃಕರ್ಮ ಮಿಶ್ರವಂ ಬಿಟ್ಟು,
ಹರನೆ ಹಿರಿಯನೆಂದು ಕಿರಿಯರೆಲ್ಲಾ ದೇವರೆಂದು ನುಡಿದು
ಕಂಡ ಕಂಡವರ್ಗೆ ಹೊಡೆಗೆಡೆವ ವೇಶಿಯ ಸುತನಂತೆ
ಸಂಕೀರ್ಣಕ್ಕೊಳಗಾದ ಸಂಕೀರ್ಣಶೈವಮಂ ನೋಡದೆ,
ದೂರದಿಂ ನಮಿಸಿ ಅರ್ಪಿಸಿ ಶೇಷವನುಣಕರ್ತನಲ್ಲವೆಂದು ದೂರಸ್ಥನಹ
ಪೂರ್ವಶೈವಮಂ ತೊಲಗಿ,
ಅಂಗದಲನವರತ ಲಿಂಗಮಂ ಧರಿಸಿರ್ದು
ದೇಹೇಂದ್ರಿಯ ಮನಃ ಪ್ರಾಣ ಜ್ಞಾನ ಭಾವ ಒಮ್ಮುಖಮಂ ಮಾಡಿ,
ಸದ್ಗುರುಕಾರುಣ್ಯಮಂ ಪಡೆದು,
ಲಿಂಗವೇ ಪತಿ, ಗುರುವೆ ತಂದೆ, ಜಂಗಮವೇ ಲಿಂಗವೆಂದರಿದು,
ದ್ರವ್ಯವೆಂಬುದು ಭೂತರೂಪ,
ಪ್ರಸಾದವೆಂಬುದು ಲಿಂಗರೂಪವೆಂದು ತಿಳಿದು,
ಲಿಂಗದ ಪಾದೋದಕವೇ ಲಿಂಗಕ್ಕೆ ಮಜ್ಜನವಾಗಿ
ಲಿಂಗದ ಪ್ರಸಾದವೇ ಲಿಂಗಕ್ಕೆ ಆರೋಗಣೆಯಾಗಿ
ಲಿಂಗದಿಂದ ನೋಡುತ್ತ ಕೇಳುತ್ತ ರುಚಿಸುತ್ತ
ಮುಟ್ಟುತ್ತ ವಾಸಿಸುತ್ತ ಕೊಡುತ್ತ ಆನಂದಿಸುತ್ತ
ಅಹಂ ಮಮತೆಗೆಟ್ಟು ಸಂದು ಸಂಶಯವರಿತು
ಹಿಂದು ಮುಂದು ಹಾರದಿಪ್ಪುದೆ ವೀರಶೈವ. ಅದೆಂತೆಂದಡೆ:
"ಪಿತಾ ಗುರುಃ ಪತಿರ್ಲಿಂಗಂ, ಸ್ವಲಿಂಗಂ ಜಂಗಮಪ್ರಭುಃ
ತಸ್ಮಾತ್ಸರ್ವಪ್ರಯತ್ನೇನ ತಸ್ಯೈವಾರಾಧನಂ ಕರು
ಸ ಏವ ಸ್ಯಾತ್ಪ್ರಸಾದಸ್ತೇ ಭಕ್ತಿವಿತ್ತಸಮರ್ಪಿತಃ
ತತ್ಪ್ರಸಾದಸ್ತು ಭೋಕ್ತವ್ಯಃ ಭಕ್ತೋವಿಗತಕಲ್ಮಷಃ" ಎಂದುದಾಗಿ,
ಇಂತಲ್ಲದಿರ್ದುದೆ ಇತರ ಶೈವ ಕಾಣಾ,
ಸೌರಾಷ್ಟ್ರ ಸೋಮೇಶ್ವರಾ. ॥೩೫೦॥

೧೧೦೭

ಶುದ್ಧಶೈವದ ನಿರ್ಧರವನರಿವ ಬುದ್ಧಿಯನನುಕರಿ[ಸೆ].
ಆ ಶುದ್ಧಶೈವದ ಪರಿಯೆಂತೆಂದಡೆ:
"ಏಕಮೇವನದ್ವಿತೀಯಂ ಬ್ರಹ್ಮ"ವೆಂಬು[ದ] ಶ್ರುತಿಪ್ರಮಾಣಿಂದರಿದು
ಅಂತಪ್ಪ ಶಿವನಲ್ಲಿ ಏಕನಿಷ್ಠೆಯ ಪಡೆದು

ಆ ಶಿವಂಗೆ ಅರ್ಚನೆ ಪೂಜನೆಯಂ ಮಾಡುವಲ್ಲಿ
ದುರ್ಗಿ, ವಿನಾಯಕ, ಭೈರವ ಮೊದಲಾದ ಪರಿವಾರ ದೇವತೆಗಳನ್ನು
ಏಕಪೀಠದಲ್ಲಿ ಪೂಜೆಯಂ ಮಾಡುವಾತನು
ಅವಿವೇಕದ ಅಪರಾಧಿಯಲ್ಲದೆ ವಿವೇಕವನುಳ್ಳ ಶೈವಸಂಪನ್ನನಲ್ಲ.
ಅದಕ್ಕೆ ದೃಷ್ಟಾಂತವೆಂತೆಂದಡೆ:
ಅರಸು ಕುಳ್ಳಿರುವ ಸಿಂಹಾಸನದಲ್ಲಿ
ಪ್ರಧಾನ ಮೊದಲಾದ ಪರಿವಾರ ಕುಳ್ಳಿರಬಹುದೆ?
ಬಾರದಾಗಿ, ಪರಿವಾರ ದೇವತೆಗಳಿಗೆ ಏಕ ಪೀಠ ಸಲ್ಲದು.
ಮುನ್ನ ಅರುವತ್ತುಮೂವರು ಮೊದಲಾದ ಅಸಂಖ್ಯಾತರೆನಿಪ ಭಕ್ತರುಗಳು
ಶುದ್ಧಶೈವ ವೀರಶೈವದಲ್ಲಿ ನಿಷ್ಠೆಯ ಆಚರಿಸುವಲ್ಲಿ
ಏಕಲಿಂಗದಲ್ಲಿ ನಿಷ್ಠೆ, ಶಿವಭಕ್ತರಲ್ಲಿ ಪ್ರೇಮ,
ಶಿವಲಾಂಛನವ ಧರಿಸಿಪ್ಪ ಜಂಗಮವನು ಶಿವನೆಂದು ಕಂಡು
ಅವರಿಗೆ ತೃಪ್ತಿಪಡಿಸಿದವರಾಗಿ ಚತುರ್ವಿಧವನೆಯ್ದಿದರು.
ಅದೆಂತೆಂದಡೆ:
"ವೃಕ್ಷಸ್ಯ ವದನಂ ಭೂಮಿಃ ಸ್ಥಾವರಸ್ಯ ಚ ಜಂಗಮಃ
ಮಮ ತೃಪ್ತಿರುಮಾದೇವಿ ಜಂಗಮಸ್ಯಾನನಾದ್ಭವಃ ಅಸ್ಯಾರ್ಥ"
ಮರಕ್ಕೆ ಬೇರು ಬಾಯಿ ಹೇಗೆಯಾಯಿತ್ತು
ಹಾಂಗೆ ಲಿಂಗಕ್ಕೆ ಜಂಗಮವೆ ಬಾಯಿಯೆಂದು
ಆವನಾನೊರ್ವನು ಜಂಗಮಕ್ಕೆ ತೃಪ್ತಿಪಡಿಸುತ್ತಂ ಇದ್ದಾನು,
ನಾನು ತೃಪ್ತನು ಕಾಣಾ ಉಮಾದೇವಿ
ಎಂದು ಶಿವನು ಹೇಳಿದನಾಗಿ ಮತ್ತಂ,
"ಶಿವಯೋಗಿಮುಖೇನೈವ ಸಾಕ್ಷಾದ್ಭುಂಕ್ತೇ ಸದಾಶಿವಃ
ಶಿವಯೋಗಿಶರೀರಾನ್ತೇ ನಿತ್ಯಂ ಸನ್ನಿಹಿತಃ ಶಿವಃ"
ಆವನೋರ್ವ ಶಿವಯೋಗಿಗೆ ಆವನೋರ್ವ ಭಕ್ತನು
ತೃಪ್ತಿ ಪಡಿಸುತ್ತಂ ಇದ್ದಾನು, ಅದೇ ಶಿವನ ತೃಪ್ತಿಯೆಂದು ಅರಿವುದು.
ಅದು ಹೇಗೆಂದಡೆ:
ಶಿವಯೋಗಿಯ ಹೃದಯಕಮಲಮಧ್ಯದಲ್ಲಿ
ಶಿವನು ಆವಾಗಲೂ ತೊಲಗದಿಹನಾಗಿ,
ಮತ್ತಾ ಶಿವಂಗೆ ಲಿಂಗ ಒಂದು ಮುಖ, ಜಂಗಮ ಒಂದು ಮುಖ.
ಅದಕ್ಕೆ ಈಶ್ವರ ವಾಕ್ಯ:
"ಯಥಾ ಭೇರುಂಡಪಕ್ಷೀ ತು ದ್ವಿಮುಖಾತ್ ಪರಿಭುಂಜತೇ
ತಥಾ ಭುಂಜಾಮಿ ದ್ವಿಮುಖಾಲ್ಲಿಂಗಜಂಗಮಯೋರಹಂ ಅಸ್ಯಾರ್ಥ"
ಆವುದಾನೊಂದು ಭೇರುಂಡಪಕ್ಷಿ ಎರಡು ಮುಖದಲ್ಲಿ ಆಹಾರವ ಕೊಳಲು

ಒಂದೇ ದೇಹಕ್ಕೆ ತೃಪ್ತಿಯಹ ಹಾಂಗೆ,
ಎನಗುಳ್ಳವು ಲಿಂಗ ಜಂಗಮವೆರಡು ಮುಖ.
ಆ ಎರಡು ಮುಖಕ್ಕೆ ಆವನಾನೋರ್ವನು ನೈವೇದ್ಯವ ನೀಡುತ್ತಂ ಇದ್ದಾನು,
ಅದು ಎನ್ನ ತೃಪ್ತಿಯೆಂದು ಶಿವನು ದೇವಿಯರಿಗೆ ಹೇಳಿದನಾಗಿ
ಇಂತಪ್ಪ ಲಿಂಗಜಂಗಮವೆರಡು ಮುಖವೆ
ಶಿವನ ತೃಪ್ತಿಗೆ ಕಾರಣವೆಂದರಿದು ಆಚರಿಸಿದರಾಗಿ
ವೀರಶೈವಸಂಪನ್ನರು ಮಹಾಲಿಂಗಪದವನೆಯ್ದಿದರು.
ಶುದ್ಧಶೈವಸಂಪನ್ನರುಮಪ್ಪ ಅರುವತ್ತುಮೂವರು ಅಸಂಖ್ಯಾತರು
ಶಿವನಲ್ಲಿ ಚತುರ್ವಿಧ ಪದವಿಯನೆಯ್ದಿ ಸುಖಿಯಾದರು.
ಇದೀಗ ಶುದ್ಧಶೈವದ ಮಾರ್ಗ.
ಈ ಶೈವಸಂಪತ್ತನರಿದಾಚರಿಸಿದವರೆ ಮುಕ್ತರು
ಸೌರಾಷ್ಟ್ರ ಸೋಮೇಶ್ವರಾ. ॥೩೫೧॥

೧೧೦೮
ಶ್ರದ್ಧೆ, ನೈಷ್ಠೆ, ಅವಧಾನ, ಅನುಭಾವ, ಆನಂದ, ಸಮರಸವೆಂಬ
ಆರು ವಿಧದ ಭಕ್ತಿಯ ಆಯಾಯ ಲಿಂಗಂಗಳೊಳೊಂದಿಸಿ
ಶ್ರವಣ ಕೀರ್ತನ ಸ್ಮರಣ ಪಾದಸೇವನ ಪೂಜನ ವಂದನ
ದಾಸ್ಯ ಸಖ್ಯ ಆತ್ಮನಿವೇದನವೆಂಬ ನವವಿಧದ ಭಕ್ತಿರಸದಲ್ಲಿ ಮುಳುಗಿಪ್ಪನು.
ಅದೆಂತೆಂದಡೆ:
"ಶ್ರವಣಂ ಕೀರ್ತನಂ ಶಂಭೋಃ ಸ್ಮರಣಂ ಪಾದಸೇವನಂ
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ"
ಎಂದುದಾಗಿ, ಇಂತಪ್ಪ ಭಕ್ತಿ ಇಲ್ಲದಡೆ
ಸೌರಾಷ್ಟ್ರ ಸೋಮೇಶ್ವರನೆಂತೊಲಿವನಯ್ಯಾ. ॥೩೫೨॥

೧೧೦೯
ಶ್ರಮಿಸಿದುದೆ ಶ್ರಾದ್ಧ, ಪ್ರೇತವಾದುದೆ ಪ್ರೇಧ್ಧ.
ಇಂತೀ ಪ್ರೇಧ್ಧವೆಂಬುದಿಲ್ಲವಾಗಿ ಶ್ರಾಧ್ಧವೆಂಬುದಿಲ್ಲ.
ಶ್ರಾಧ್ಧ ಪ್ರೇಧ್ಧಗಳೆಂಬುದಿಲ್ಲವಾಗಿ ತದ್ದಿನಂಗಳೆಂಬುದಿಲ್ಲ.
ತದ್ದಿನಂಗಳೆಂಬುದಿಲ್ಲವಾಗಿ ಸಂಕಲ್ಪಭುಂಜನೆ ಇಲ್ಲ.
ಅದೇನುಕಾರಣವೆಂದಡೆ,
ಪ್ರಾಣಲಿಂಗಸಂಗದಿಂ ಲಿಂಗಪ್ರಾಣವಾಯಿತ್ತಾಗಿ,
ಶಿವಪ್ರಸಾದಸೇವ್ಯದಿಂ ಪ್ರಸಾದಕಾಯವಾ[ಯಿ]ತ್ತಾಗಿ,
ಇಂತಲ್ಲದೆ, ಅಂಗೋಪಜೀವಿಗಳು ತದ್ದಿನಂಗಳ ಮಾಡುವಲ್ಲಿ

"ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿಧದೇ ಪದಂ
ಸಮೂಳ್ಹಮಸ್ಯ ಪಾಂಸುರೇ"
ಎಂಬ ಮನು ಮಂತ್ರದಿಂ ಸಂಕಲ್ಪಿಸಿಕೊಂಡು,
ಸುರೆ ಮಾಂಸವ ಭುಂಜಿಸುವ ತದ್ದಿನವೆ ದೋಷದಿನ.
ಇದಕ್ಕೆ ಶ್ರುತಿ:
"ತದ್ದಿನಂ ದಿನದೋಷೇಣ ಸುರಾಶೋಣಿತಮಾಂಸಯೋಃ
ಅತಿಸಂಕಲ್ಪ್ಯ ಭುಂಜೀಯಾತ್ ರೌರವಂ ನರಕಂ ವ್ರಜೇತ್"
ಇಂತೆಂದುದಾಗಿ,
ತದ್ದಿನ ಸೇವ್ಯ ರೌರವನರಕ ಸೌರಾಷ್ಟ್ರ ಸೋಮೇಶ್ವರಾ. ॥೩೫೩॥

೧೧೧೦
ಶ್ರೀಗುರು ಕರುಣದಿಂದ ಜ್ಞಾನಮೂರುತಿ ಗುರುವನರಿತ ಬಳಿಕ
ಆ ಗುರುವಿನಲ್ಲಿಯೇ ತದುಗತ ತಲ್ಲೀಯವಾದ.
ಮತ್ತೇನನೂ ಅರಿಯಲಿಲ್ಲ, ಮತ್ತೊಂದ ಮರೆಯಲಿಲ್ಲ.
ಅರಿಯಲು ಮರೆಯಲು ತೆರಹಿಲ್ಲದ ಗುರುವನರಿಯಲಿಲ್ಲವಾಗಿ
ಸೌರಾಷ್ಟ್ರ ಸೋಮೇಶ್ವರಲಿಂಗವ ನೆನೆಯಲಿಲ್ಲ. ॥೩೫೪॥

೧೧೧೧
ಶ್ರೀಗುರುವಿನ ಕರುಣದಿಂದ ಪವಿತ್ರಗಾತ್ರನಾದೆ. ಅದೆಂತೆಂದಡೆ:
ಪೂರ್ವಕರ್ಮದ ದುರ್ಲಿಖಿತವನೊರೆಸಿ
ವಿಭೂತಿಯ ಪಟ್ಟವ ಕಟ್ಟಿದನಯ್ಯಾ ಶ್ರೀಗುರು.
ಎನ್ನಂಗದಲ್ಲಿ ಶಿವಲಿಂಗವ ಹಿಂಗದಂತಿರಿಸಿ
ಭೂತಕಾಯವ ಬಿಡಿಸಿ ಲಿಂಗತನುವ ಮಾಡಿದನಯ್ಯಾ ಶ್ರೀಗುರು.
ಕರ್ಣದಲ್ಲಿ ಪ್ರಣವಪಂಚಾಕ್ಷರವನೊರೆದು,
ಜಪಿಸ ಕಲಿಸಿ, ಮಂತ್ರರೂಪನ ಮಾಡಿದನಯ್ಯಾ ಶ್ರೀಗುರು.
ಸಂಸಾರದ ಅಜ್ಞಾನಜಡವ ಕೆಡಿಸಿ ಶಿವಜ್ಞಾನಾನುಗ್ರಹವ ಮಾಡಿದ,
ಆ ಶಿವಜ್ಞಾನವೆನ್ನ ಸರ್ವಕರ್ಮವನುರುಹಿತ್ತು. ಅದೆಂತೆಂದೊಡೆ:
"ಜ್ಞಾನಾಗ್ನಿಸ್ಸರ್ವಕರ್ಮಾಣಿ ಭಸ್ಮಸಾತ್ಕುರುತೇ[s]ರ್ಜುನ"
ಎಂದುದಾಗಿ, ಶ್ರೀಗುರುವಿನ ಪದಕಮಲದಲ್ಲಿ
ಆನು ಭೃಂಗನಾಗಿದ್ದೆನಯ್ಯಾ ಸೌರಾಷ್ಟ್ರ ಸೋಮೇಶ್ವರಾ. ॥೩೫೫॥

೧೧೧೨
ಶ್ರೀಗುರುವಿನ ಶ್ರೀಚರಣದಲ್ಲಿ ಅರುವತ್ತೆಂಟು
ತೀರ್ಥಗಳು ನೆಲೆಸಿಪ್ಪವಾಗಿ ಎಲ್ಲಾ ತೀರ್ಥಗಳಿಗೆಯೂ

ಗುರುಪಾದತೀರ್ಥವೆ ಅಧಿಕ ನೋಡಾ.
ಗುರುಕರುಣದಿಂದ ದೀಯತೇ ಎಂಬ ಸುಜ್ಞಾನವ ಹಡದು
ಗುರುಪಾದೋದಕದಿಂದ ಕ್ಷೀಯತೇ ಎಂದು
ಮಲತ್ರಯವ ಕ್ಷಯವ ಮಾಡುವುದು.
"ಶೋಷಣಂ ಪಾಪಪಂಕಸ್ಯ ದೀಪನಂ ಜ್ಞಾನ ತೇಜಸಃ
ಗುರುಪಾದೋದಕಂ ಪೀತ್ವಾ ಭವೇತ್ ಸಂಸಾರನಾಶನಂ"
ಇಂತೆಂದುದಾಗಿ, ಗುರುಕರುಣಾಮೃತರಸಪಾದೋದಕದಲ್ಲಿ
ಸುಜ್ಞಾನಾನಂದ ರಸಮಯನಾಗಿ ಬೆರಸಿ ಬೇರಿಲ್ಲದಿರ್ದೆನಯ್ಯಾ
ಸೌರಾಷ್ಟ್ರ ಸೋಮೇಶ್ವರಾ. ॥೩೫೬॥

೧೧೧೩
ಶ್ರೀಗುರು ಸೋಂಕಿದ ಶಿಷ್ಯ ತಾನಾ ಗುರುವಾಗದೆ ಮಾಣನು.
ಅದೆಂತೆಂದಡೆ:
ಜ್ಯೋತಿಯಿಂದಾದ ಜ್ಯೋತಿಯಂತೆ, ಭ್ರಮರನಿಂದ ಕೀಟ ಭ್ರಮರನಾದಂತೆ,
ಶಿಷ್ಯನು ಗುರುವಿ[ಗೆ] ಭೇದವಾಗಿರನು.
ಇಂತಪ್ಪ ಶಿಷ್ಯನು ಸದ್ಗುರುವಿನ ಮೂರ್ತಿಯ ಧ್ಯಾನಿಸಿ,
ಗುರುಪದವ ಪೂಜಿಸಿ, ಗುರುವಾಕ್ಯವೇ ಮಂತ್ರವೆಂದು ನಂಬಿ,
ಗುರುವಿನ ಕೃಪೆಯೇ ಮುಕ್ತಿಯೆಂದು ಅರಿದಿಪ್ಪನು. ಅದೆಂತೆಂದಡೆ:
"ಧ್ಯಾನಮೂಲಂ ಗುರೋರ್ಮೂರ್ತಿಃ ಪೂಜಾಮೂಲಂ ಗುರೋಃ ಪದಂ
ಮಂತ್ರಮೂಲಂ ಗುರೋರ್ವಾಕ್ಯಂ ಮುಕ್ತಿಮೂಲಂ ಗುರೋಃ ಕೃಪಾ"
ಇಂತೆಂದುದಾಗಿ,
ಗುರುವಿನ ಕರುಣದಿಂದ ಷಟ್‌ತ್ರಿಂಶತ್ತತ್ವಂಗಳ ಸ್ವರೂಪವನರಿತು
ತತ್ವಾತೀತವಾದ ಪರವಸ್ತು ವಾಙ್ಮನಾತೀತವಾಗಿ
ತನ್ನ ಭಾವಾಭೀಷ್ಟಲಿಂಗದ ನೆನಹು ಸೋಂಕುಗಳಿಂದ
ಸೌರಾಷ್ಟ್ರ ಸೋಮೇಶ್ವರಲಿಂಗವಪ್ಪುದು ತಪ್ಪದಯ್ಯಾ. ॥೩೫೭॥

೧೧೧೪
ಶ್ರೋತ್ರ, ತ್ವಕ್ಕು, ಚಕ್ಷು, ಜಹ್ವೆ, ಘ್ರಾಣವೆಂಬ ಪಂಚೇಂದ್ರಿಯಂಗಳಲ್ಲಿ
ಪ್ರಸಾದಲಿಂಗ ಜಂಗಮಲಿಂಗ ಶಿವಲಿಂಗ ಗುರುಲಿಂಗ ಆಚಾರಲಿಂಗವೆಂಬ
ಪಂಚಲಿಂಗಗಳು ತಮ್ಮ ತಮ್ಮ ಮುಖದೊಳು ನಿಂದು,
ಸಕಲಭೋಗಂಗಳು ಲಿಂಗಭೋಗಂಗಳಾಗಿ,
ಸರ್ವೇಂದ್ರಿಯಂಗಳು ಲಿಂಗವಶವಾಗಿಪ್ಪರಯ್ಯಾ
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು. ॥೩೫೮॥

೧೧೧೫

ಷಟ್‌ತ್ರಿಂಶತ್ತತ್ವಂಗಳೆ ದೇಹವಾಗಿ ಪರಶಿವನದರ್ಕೆ ದೇಹಿಯಾಗಿರ್ಪನಾಗಿ
ತತ್ವಮಯವಾದ ಭಕ್ತನಂಗದಲ್ಲಿ ಪ್ರಾಣಮಯವಾದ ಶಿವನಿಪ್ಪನಯ್ಯಾ.
ತತ್ವಂಗಳು ಆ ತತ್ವಂಗಳನೆಯ್ದುವಲ್ಲಿ ಭಕ್ತನು ಜ್ಞಾನಕಾಯವಾಗಿಪ್ಪನಯ್ಯಾ.
ಆ ಕಾಯದಲ್ಲಿ ಕಳಾಸ್ವರೂಪವಾಗಿಪ್ಪನಯ್ಯಾ ಶಿವನು.
ಇಂತು ಆವಾಗಲೂ ಅಗಲನಾಗಿ ಭಕ್ತದೇಹಿಕನಯ್ಯಾ.
ನಮ್ಮ ಸೌರಾಷ್ಟ್ರ ಸೋಮೇಶ್ವರನು. ॥೩೫೯॥

೧೧೧೬

ಸಂಯೋಗ ವಿಯೋಗವೆಂಬೆರಡಿಲ್ಲದ ನಿಜವನ್ನಾರಯ್ಯಾ ಬಲ್ಲವರು?
ಅದು ಕೂಡಿ ಬೆರಸದು, ಅದು ಅಗಲಿ ಹಿಂಗದು.
ತೆಗಹಕ್ಕೆ ಬಾರದು, ಮೊಗಹಕ್ಕೆ ಸಿಲುಕದು.
ಸಗುಣ ನಿರ್ಗುಣವೆಂಬ ಬಗೆಗೆಡೆಗುಡದ
ಸೌರಾಷ್ಟ್ರ ಸೋಮೇಶ್ವರಲಿಂಗವನರಿವುದೇನು, ಮರೆವುದೇನು? ॥೩೬೦॥

೧೧೧೭

ಸಂವಿದಾತ್ಮಂಗೆ ಕ್ರಿಯಾಪಾಶ ಘಟಿಸದಾಗಿ
ಅಗ್ನಿಯ ಪುರುಷಂಗೆ ತೃಣದ ಸಂಕೋಲೆಯನಿಕ್ಕಿಹೆನೆಂಬ
ಅರೆ ಮರುಳುಗಳನೇನೆಂಬೆನಯ್ಯಾ!
ಇಟ್ಟಿಯ ಹಣ್ಣಿನಂತೆ ಹೊರಗೆ ಬಟ್ಟಿತ್ತಾದಡೇನಯ್ಯಾ,
ಒಳಗಣ ಕಹಿಯ ಕಳೆಯದನ್ನಕ್ಕ?
ಭಕ್ತಕಾಯ, ಭವಿಮನ ಬಿಡದು.
ಪ್ರಾಣಕ್ಕೆ ಜಂಗಮಲಿಂಗಸಿದ್ಧಿಯಿಲ್ಲದೆ, ಶಿವಲಿಂಗವೆಂತು ಸಾಧ್ಯವಪ್ಪುದಯ್ಯಾ
ಸೌರಾಷ್ಟ್ರ ಸೋಮೇಶ್ವರಾ. ॥೩೬೧॥

೧೧೧೮

ಸಕಲವ್ಯಾಪಾರಂಗಳುಡುಗಿ, ಅಭಕ್ಷಭಕ್ಷಣ ವಿಷಯತದ್ಗತಂಗಳಡಗಿ,
ತಥ್ಯ-ಮಿಥ್ಯ, ರಾಗ-ದ್ವೇಷಂಗಳಳಿದು,
ಸುಖ-ದುಃಖ ಶೋಕ-ಮೋಹಂಗಳ ಕಳೆದು,
ಶಿವಜ್ಞಾನವುಳಿದು, ಅಂಗಲಿಂಗಸಂಬಂಧವಾದುದೆ ಸಹಜ.
ಇದಲ್ಲದುವೆಲ್ಲವೂ ಭ್ರಾಂತು ಕಾಣಾ, ಸೌರಾಷ್ಟ್ರ ಸೋಮೇಶ್ವರಾ. ॥೩೬೨॥

೧೧೧೯
ಸಕಲೇಂದ್ರಿಯಂಗಳಲ್ಲಿ ವಿಕರಿಸುವ ಮನವ ಸೆಳೆದು ನಿಂದಾತ ಸುಖಿ,
ಪಂಚೇಂದ್ರಿಯಂಗಳಿಚ್ಛೆಯೊಳು ಮನಂಗೊಂಡು ಸುಳಿವಾತ ದುಃಖಿ.
ಮನಸ್ಸು ಬಹಿರ್ಮುಖವಾಗಲು ಮಾಯಾಪ್ರಪಂಚಿ,
ಮನವಂತರ್ಮುಖವಾದಡವಿರಳಜ್ಞಾನಿ,
ಮನವು ಮಹದಲ್ಲಿ ನಿಂದಡಾತ ಮುಕ್ತನು.
ಮನೋಲಯವಾದಡೆ
ಸೌರಾಷ್ಟ್ರಸೋಮೇಶ್ವರಲಿಂಗದಲ್ಲಿ ಅಭೇದ್ಯನು. ॥೩೬೩॥

೧೧೨೦
ಸಗುಣನಾಗಬಲ್ಲ ನಿರ್ಗುಣನಾಗಬಲ್ಲ, ಸಗುಣನಿರ್ಗುಣವೆರಡೊಂದಾಗಬಲ್ಲ.
ಅಣುವಾಗಬಲ್ಲ ಮಹತ್ತಾಗಬಲ್ಲ, ಅಣುಮಹತ್ತುಗಳೆರಡೊಂದಾಗಬಲ್ಲ.
ಶಿವನಾಗಬಲ್ಲ ಜೀವವಾಗಬಲ್ಲ, ಶಿವಜೀವಂಗಳೆರಡೊಂದಾಗಬಲ್ಲ.
ಸಕಲನಾಗಬಲ್ಲ ನಿಃಕಲನಾಗಬಲ್ಲ, ಸಕಲನಿಃಕಲವೆರಡೊಂದಾಗಬಲ್ಲ.
ಶೂನ್ಯನಾಗಬಲ್ಲ ನಿಃಶೂನ್ಯನಾಗಬಲ್ಲ, ಶೂನ್ಯನಿಃಶೂನ್ಯವೆರಡೊಂದಾಗಬಲ್ಲ.
ಸೌರಾಷ್ಟ್ರ ಸೋಮೇಶ್ವರಲಿಂಗ, ಸರ್ವನಾಗಬಲ್ಲನೊರ್ವನಾಗಬಲ್ಲ.
ಸರ್ವನೊರ್ವನೆರಡೊಂದಾಗಬಲ್ಲನಯ್ಯಾ. ॥೩೬೪॥

೧೧೨೧
ಸತ್ಯವೆ ಜಲ, ಸಮತೆಯೆ ಗಂಧ, ಅರಿವೆ ಅಕ್ಷತೆ,
ಭಾವ ಕುಸುಮ, ಸ್ವತಂತ್ರ ಧೂಪ, ನಿರಾಳ ದೀಪ,
ಸ್ವಾನುಭಾವ ನೈವೇದ್ಯ, ಸಾಧನಸಾಧ್ಯ ಕರ್ಪುರವೀಳೆಯ.
ಇವೆಲ್ಲವ ನಿಮ್ಮ ಪೂಜೆಗೆಂದೆನ್ನಕರಣಂಗಳು ಪಡೆದಿರಲು
ಹೃದಯಮಧ್ಯದಲ್ಲಿದ್ದು ಗಮ್ಮನೆ ಕೈಕೊಂಡೆಯಲ್ಲಾ
ಸೌರಾಷ್ಟ್ರ ಸೋಮೇಶ್ವರಾ. ॥೩೬೫॥

೧೧೨೨
ಸತ್ಯಶುದ್ಧದಿಂ ಬಂದ ಪದಾರ್ಥವ
ಭಯಭಕ್ತಿಕಿಂಕುರ್ವಾಣದಿಂ ಗುರುಲಿಂಗಕ್ಕೆ
ತನುಮುಟ್ಟಿ ಅರ್ಪಿಸಿಕೊಂಬುದೇ ಶುದ್ಧಪ್ರಸಾದ.
ನಾಮ ರೂಪ ಕ್ರಿಯೆ ಹಂಕೃತಿಯಳಿದು
ಕರ್ಣಾರ್ಪಿತದಿಂ ಶಿವಲಿಂಗಕ್ಕೆ ಮನಮುಟ್ಟಿ ಅರ್ಪಿಸಿಕೊಂಬುದು ಸಿದ್ಧಪ್ರಸಾದ.
ಡಂಬು ಪ್ರಕಟ ಪ್ರಪಂಚು ಅಭ್ರಚ್ಛಾಯೆಯೆಂಬ
ಚತುರ್ವಿಧಂಗಳಳಿದು, ರಿಣಾತುರಿಯ ಮುಕ್ತ್ಯಾತುರಿಯಂಗಳನತಿಗಳೆದು

ಸ್ವಯಾತುರಿಯದಿಂ ಜಂಗಮಲಿಂಗಕ್ಕೆ ತನುಮುಟ್ಟಿ
ಸದ್ಭಾವದಿಂದರ್ಪಿಸಿಕೊಂಬುದು ಪ್ರಸಿದ್ಧಪ್ರಸಾದ.
ಇಂತೀ ತ್ರಿವಿಧಸಂಬಂಧವಾದುದೆ ಅಚ್ಚಪ್ರಸಾದ
ಸೌರಾಷ್ಟ್ರ ಸೋಮೇಶ್ವರಾ. ॥೩೬೬॥

೧೧೨೩
ಸತ್ಯಶುದ್ಧದಿಂ ಬಂದ ಪದಾರ್ಥವ ಶೀಲವ್ರತನೇಮಂಗಳಿಂ
ಗುರುಲಿಂಗಜಂಗಮಕ್ಕೆ ಅರ್ಪಿಸಿದೆವೆಂದೆಂಬಿರಿ,
ಹಾವಿಂಗೆ ಹಾಲನೆರೆದಡೆ ಸರ್ಪಂಗೆ ತೃಪ್ತಿಯಪ್ಪುದೆ?
ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣವ ಮೀರಿ
ಅರ್ಪಿಸುವ ಅರ್ಪಣದೊಳಗಣ ತೃಪ್ತಿಭೇದ ನಿಷ್ಪತಿಯಾದಲ್ಲಿ
ತ್ರಿವಿಧಸಮರ್ಪಣ ಸಂದಿತ್ತು ಸೌರಾಷ್ಟ್ರ ಸೋಮೇಶ್ವರಾ. ॥೩೬೭॥

೧೧೨೪
ಸತ್ಯಸಹಜವುಳ್ಳ ಶಿವಶರಣರ ಕಂಡಲ್ಲಿ ಮನಮಚ್ಚಿ ಹರುಷವಡೆದು,
ಪ್ರೇಮದಿಂದ ಗುರುಚರಲಿಂಗ ಪೂಜೆಯ ಕ್ರಿಯೆಯಲ್ಲಿ
ತನುಮನವಚನ ಬೆರಗಾ[ಗಿ], ಸನ್ಮಾರ್ಗಕ್ರಿಯೆಯಲ್ಲಿಪ್ಪವಂಗೆ ಗುರುವುಂಟು.
ಗುರು ಉಂಟಾಗಿ ಲಿಂಗ ಉಂಟು, ಲಿಂಗ ಉಂಟಾಗಿ ಜಂಗಮ ಉಂಟು.
ಜಂಗಮ ಉಂಟಾಗಿ ಪ್ರಸಾದ ಉಂಟು, ಪ್ರಸಾದ ಉಂಟಾಗಿ ಸದ್ಯೋನ್ಮುಕ್ತಿ.
ಇಂತಲ್ಲದೆ ಭಕ್ತಿಯಿಲ್ಲದವಂಗೆ ಗುರುವಿಲ್ಲ, ಗುರುವಿಲ್ಲದವಂಗೆ ಲಿಂಗವಿಲ್ಲ,
ಲಿಂಗವಿಲ್ಲದವಂಗೆ ಜಂಗಮವಿಲ್ಲ, ಜಂಮವಿಲ್ಲದವಂಗೆ ಪ್ರಸಾದವಿಲ್ಲ,
ಪ್ರಸಾದವಿಲ್ಲದವಂಗೆ ನಿರ್ವಾಣವಿಲ್ಲ.
ಇಂತಾಗಿ ಗೆಲ್ಲತನಕ್ಕೆ ಬಲ್ಲೆವೆಂದು ಹೋರಿ
ಬರಿದಪ್ಪ ದುರಾಚಾರಿಗಳಿಗೆ
ಸೌರಾಷ್ಟ್ರ ಸೋಮೇಶ್ವರಲಿಂಗವಂದೇ ದೂರ. ॥೩೬೮॥

೧೧೨೫
ಸತ್ವರಜತಮೋಗುಣಗಳೆಂಬ ಒಂದೊಂದು
ಗುಣದೊಳಗೊಂದಿ ಕೆಟ್ಟರು ಬ್ರಹ್ಮ, ವಿಷ್ಣು, ರುದ್ರಾದಿಗಳು.
ತ್ರಿಗುಣಕ್ಕೆ ಸಂದ ಮರ್ತ್ಯರ ಹವಣೇನಯ್ಯಾ?
ಮೂಲಹಂಕಾರವನರಿದು ಶಿವದಾಸೋಹಮೆನಲು
ರಾಜಸ ತಾಮಸ ಸಾತ್ವಿಕ ಮೂಲ ಅಹಂಕಾರವಳಿದು

ಭವಹಿಂಗಿ ಸ್ವಯಲಿಂಗಿಯಾದರು
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು. ॥೩೬೯॥

೧೧೨೬
ಸಾಕಾರ ನಿರಾಕಾರದೊಳಗೆ ಚಿದ್ರೂಪವ ತಳೆದ ಮಹಾಮಹಿಮನ ಇರವು:
ಬೆಳುದಿಂಗಳೊಳಗಣ ಅಚ್ಚ ಪಳುಕಿನ ಪರ್ವತ
ಬೆಳುದಿಂಗಳೆಂಬ[ಂ]ತಿರ್ಪಂತೆ,
ಸ್ಫಟಿಕದ ಘಟದೊಳಗಣ ಜ್ಯೋತಿಯಂತೆ ಸದ್ಭಾವಪ್ರಕಾಶಿಸಲು
ಒಳಹೊರಗೆಂಬುದಿಲ್ಲ ಸೌರಾಷ್ಟ್ರ ಸೋಮೇಶ್ವರನ ಶರಣಂಗೆ. ॥೩೭೦॥

೧೧೨೭
ಸಾನುರಾಗ ಸುಸಂಗವಾಗಿ
ಸಾರತ ಸವೆದು ಆರತವಳಿದು ಸಾಕಾರ ಸನ್ಮೂರ್ತಿಯ ಸಂದಿತ್ತು.
ಸಂಸುಖವಾಗಿ ಸಾನಂದ ಸಂವೇದ್ಯವಾದ ಮಹಾಮಹಿಮಂಗೆ
ಇಹಲೋಕ ಪರಲೋಕ ಶಾಂಭವೀಲೋಕವೆಂಬ
ಬಹು ಲೋಕವುಂಟೆ ಹೇಳಾ? ಸೌರಾಷ್ಟ್ರ ಸೋಮೇಶ್ವರಾ. ॥೩೭೧॥

೧೧೨೮
ಸುಜ್ಞಾನಾನುಭವದಿಂ ಭವಿ ಭವವಳಿದುಳಿದ ಶೇಷನು,
ನಿರ್ಮಲ ನಿರ್ಮಾಯನಾಗಿ ಸದ್ಗುರುಪರಶಿವಾನುಗ್ರಹ ಪ್ರಸಾದವ ಪಡೆದು
ನೆನಹಳಿದು ಉಳಿದ ಶೇಷನು,
ಅರಿವಿನ ಸುಖದ ಸವಿಯಲ್ಲೆ ಮೈಮರೆದ
ಘನಪರಿಣಾಮ ನಿಜನಿಂದ ಶೇಷನು.
ಸೌರಾಷ್ಟ್ರ ಸೋಮೇಶ್ವರಲಿಂಗ ಲಿಂಗೈಕ್ಯದನುಪಮ ಶೇಷ
ಪರತತ್ವವ ಬೆರಸಿ ನಿಂದಿತ್ತು. ॥೩೭೨॥

೧೧೨೯
ಸುನಾದ ಮಹಾನಾದಂಗಳು ಸದ್ಭಾವದಲ್ಲಿ ಪ್ರಕಾಶಿಸಲು
ನೈ, ವೈ, ಎಂಬ ದಶನಾದಲಕ್ಷಣವ ಅನುಭೂತ ಭಾವದಿಂದರಿತು,
ಹಂಸನಾದ ದಾಸೋಹಂ ಎಂಬುದ ಮರೆದು
ಸೋಹಂ ಸೋಹಂ ಸೋಹಂ ಎಂದು ಕೂಗುವ ಕೂಗನಾಲಿಸಿ
ಆ ಕೂಗಿನ ಕಡೆಯಲ್ಲಿ ಹವಣಿಲ್ಲದೆ ರೂಹಳಿಯದ ಐಕ್ಯ ತಾನೆ
ಸೌರಾಷ್ಟ್ರ ಸೋಮೇಶ್ವರ. ॥೩೭೩॥

೧೧೩೦
ಸುರರೆಲ್ಲರೂ ಬೆಂದು ಹೋದರು. ಅಸುರರೆಲ್ಲರೂ ಸತ್ತು ಹೋದರು.
ಉರಗಗಳೆಲ್ಲರೂ ಹರಿದು ಹೋದರು. ನರರೆಲ್ಲರೂ ಮುಂದುಗೆಟ್ಟರು.
ಇದು ಕಾರಣ ಸೌರಾಷ್ಟ್ರ ಸೋಮೇಶ್ವರನ ಶರಣರು,
ಲಿಂಗದೇಹಿಗಳಾಗಿ ಹುಟ್ಟುಗೆಟ್ಟರು. ॥೩೭೪॥

೧೧೩೧
ಸುಳಿದಡೆ ಒಡಲಿಲ್ಲ, ನಿಂದಡೆ ನೆಳಲಿಲ್ಲ,
ನಡೆದಡೆ ಗಮನವಿಲ್ಲ, ನುಡಿದಡೆ ಶಬ್ದವಿಲ್ಲ, ದಗ್ಧಪಟನ್ಯಾಯವಾಗಿ.
ಉಂಡಡೆ ಉಪಾಧಿಯಲ್ಲ, ಉಣದಿದ್ದಡೆ ಕಾಂಕ್ಷಿಯಲ್ಲ,
ಯಥಾಲಾಭಸಂತುಷ್ಟನಾಗಿ.
ಸ್ತುತಿಯಿಲ್ಲ ನಿಂದೆಯಿಲ್ಲ ನಂಟಿಲ್ಲ ಹಗೆಯಿಲ್ಲ
ಅರಿವಿಲ್ಲ ಮರಹಿಲ್ಲ ನಾನೆಂಬ ನೆನಹಿಲ್ಲವಾಗಿ.
ಇದಕ್ಕೆ ಶ್ರುತಿ:
"ಯತ್ಪ್ರಾಣೇ ಲಿಂಗಸಂಧಾನಂ ತಲ್ಲಿಂಗಂ ಪ್ರಾಣಸಂಯುತಂ
ಪ್ರಾಣಲಿಂಗದ್ವಯೋರ್ಭೇದೋ ನ ಭೇದಶ್ಚ ನ ಸಂಶಯಃ
ದಗ್ಧಾಂಬರಂ ಹಿ ಕರ್ಮಾಣಿ ಚೇಂದ್ರಿಯಾಣಿ ಮನೋ ವಚಃ
ಭಾವಸದ್ಭಾವನಿರ್ವಾಣಃ ಪರೇ ಯಸ್ಯ ವಿಲೀಯತೇ"
ಇಂತೆಂದುದಾಗಿ,
ಸೌರಾಷ್ಟ್ರಸೋಮೇಶ್ವರನ ಶರಣರು
ಲಿಂಗಪ್ರಾಣಿಗಳಾಗಿ ಅಂಗವ ಮರೆಗೊಂಡು
ಎಂತಿರ್ದಡಂ ಎಂತು ನಡೆದಡಂತೆ ಸಂತ. ॥೩೭೫॥

೧೧೩೨
ಸೂಕರಂಗೆ ಸುಗಂಧ ಸೊಗಸುವುದೆ? ಶುನಕಂಗೆ ಷಡುರಸಾನ್ನ ಸಂಘಟ್ಟವೆ?
ಕತ್ತೆಗೆ ಕರ್ಪುರ ಯೋಗ್ಯವೆ? ಮರ್ಕಟಂಗೆ ಮುಕುರ ಸಾಮ್ಯವೆ?
ದುರ್ವಿಷಯಿಗಳಪ್ಪ ದುರಾತ್ಮರ್ಗೆ
ಸೌರಾಷ್ಟ್ರ ಸೋಮೇಶ್ವರಲಿಂಗ ಸನ್ನಿಹಿತವೆ? ॥೩೭೬॥

೧೧೩೩
ಸೂಕ್ಷ್ಮನಾದದಿಂದತ್ತಣ ಆದಿಬಿಂದುವಿನಲ್ಲಿ ಅರಿವು ರೂಪಾದ
ಅಖಂಡಿತ ನಿರ್ವಯಲು ಚಿತ್‌ಸ್ವರೂಪವ ತಾಳಿ,
ಮಹಾಘನರೂಪವನಡಗಿಸಿದ, ಸ್ವತಂತ್ರ ನಿಃಕಳ ನಿರಂಜನ

ಪರಾ–ಪಶ್ಯಂತಿ–ಸುಮಧ್ಯಮೆ–ವೈಖರಿಗೆ ಮೂಲವಾದ
ಪ್ರಭಾವಶಕ್ತಿಯೊಳಗೆ ತೆರಹಿಲ್ಲದ ಬಯಲು ತಾನಾದ
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ ಭೇದವಳಿದ ಶರಣ. ॥೩೭೭॥

೧೧೩೪
ಸೋಂಕದ ಮುನ್ನವೇ ಸುಯಿಧಾನ ಪ್ರಸಾದಿ.
ಅರ್ಪಿಸದ ಮುನ್ನವೇ ಅವಧಾನ ಪ್ರಸಾದಿ.
ಅರಿವರತು ಭವಗೆಟ್ಟ ಪರಿಣಾಮ ಪ್ರಸಾದಿ.
ನಿಜಗ್ರಾಹಕ ನಿತ್ಯಪ್ರಸಾದಿ.
ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ ಸಮರಸಪ್ರಸಾದಿ. ॥೩೭೮॥

೧೧೩೫
ಸ್ಫಟಿಕದ ಘಟದೊಳಗಣ ಜ್ಯೋತಿಯಂತೆ,
ಒಳಹೊರಗೆ ನೋಡುವಡೆ ಕಾಣಬರುತ್ತಿದೆ.
ನುಡಿಸುವಂಥಾದಲ್ಲ,
ಸಾರಿ ಇದ್ದಿಹುದು, ಮುಟ್ಟುವೊಡೆ ಕೈಗೆ ಸಿಕ್ಕದು.
ಶಾಸ್ತ್ರಸಂಬಂಧದ ಕಲಿಕೆಯೊಳಗಲ್ಲ.
ವ್ಯಕ್ತಾವ್ಯಕ್ತವನೊಳಕೊಂಡು ಬಯಲಸಮಾಧಿಯಲ್ಲಿ ಸಿಲುಕಿತ್ತು,
ಸೌರಾಷ್ಟ್ರ ಸೋಮೇಶ್ವರಲಿಂಗವು ಪ್ರಾಣವಾಗಿ. ॥೩೭೯॥

೧೧೩೬
ಸ್ವಕಾಯದಂತರ್ಗತದಲ್ಲಿ, ಚಿದಾಕಾಶದಲ್ಲಿ
ನಿರ್ಮಲತೆಯಿಂ ಪರಮಹಂಸನು
ಶ್ರದ್ಧೆ ನಿಷ್ಠೆ ಸಾವಧಾನದಿಂದದ್ರಿಜೆಯ ಪತಿಯಪ್ಪ
ಪರಶಿವಲಿಂಗಮಂ ವೇಧಿಸಿ,
ತಿಥಿ ವಾರ ನಕ್ಷತ್ರ ಯೋಗ ಕರಣಂಗಳೆಂಬ ಶಂಕೆಗೆಟ್ಟು,
ಹೃತ್ಕಮಲಮಧ್ಯದಲ್ಲಿ ಮಹಾಪ್ರಕಾಶ ಉದಯಿಸಲು. ಇದಕ್ಕೆ ಶ್ರುತಿ:
"ಹಂಸಃ ಶುಚಿಷದ್ವಸುರಂತರಿಕ ಅಸದ್ಧೋತಾ ವೇದಿಷದತಿಥಿರ್ದುರೋಣಸತ್
ನೃಷದ್ವರಸದೃತಸದ್ಯೋಮಸದಬ್ಜಾಗೋಜಾ ಋತಜಾ ಅದ್ರಿಜಾ ಋತಂ ಬೃಹತ್" ಇಂತೆಂದುದಾಗಿ,
ಸದಾಸದ್ವ್ಯೋಮವ್ಯಕ್ತದಿಂ ಸೌರಾಷ್ಟ್ರ ಸೋಮೇಶ್ವರಲಿಂಗವೇ
ತಾನಾಗಿಪ್ಪರಯ್ಯ ಪರಮಸ್ವಭಾವಿಗಳು. ॥೩೮೦॥

೧೧೩೭

ಹಠಯೋಗ ಲಂಬಿಕಾಯೋಗ ಆತ್ಮಯೋಗ
ಸಿದ್ಧಯೋಗ ಪಿಶಾಚಯೋಗ ಅಷ್ಟಾಂಗಯೋಗಂಗಳೆಂಬ
ಷಡುವಿಧ ಕರ್ಮಯೋಗಂಗಳೊಳು
ಶೋಷಣೆ, ದಾಹನೆ, ಪ್ಲಾವನೆ, ಚಾಲನೆ ಖಾಳಾಪಖಾಳಮಂ ಮಾಡಿ,
ತ್ರಿದೋಷಾದಿಗಳಂ ಪ್ರವರ್ತಿಸಲೀಯದೆ
ಮಲ[ಯೋ]ಗಮಂ ನೆಲೆಗೊಳ್ಳಲೀಯದೆ,
ಗಜಕರಣಂಗಳಿಂ ಪವನಧಾರಣೆಯಿಂ ಕಲ್ಪಯೋಗಂಗಳಿಂ
ಮೂಲಿಕಾಬಂಧದಿಂ ಬಂಧಿಸಿ, ಘಟಮಂ ನಟಿಸುವುದು ಹಠಯೋಗ.
ಪವನಾಭ್ಯಾಸಂಗಳಿಂದಭ್ಯಾಸಯೋಗ,
ಕ್ರಮಕ್ರಮಂಗಳಿಂ ಜಿಹ್ವೆಯಂ ಬೆಳಸಿ
ಹಠಸಮ್ಮಿಶ್ರದಿಂ ಷಡಾಧಾರದ ಪಶ್ಚಿಮಪಥವಿಡಿದು
ಪ್ರಾಣಪವನನ ಮಸ್ತಕಕ್ಕೇರಿಸಿ ಜಿಹ್ವೆಯ ಸುಷುಮ್ನೆಯಲ್ಲಿಟ್ಟು
ಸೋಮಪಾನಮಂ ಸೇವಿಸಿ ಸಪ್ತಸ್ಥಾನ ನವಚಕ್ರದಲ್ಲಿ ನಿಂದು
ಮುಕ್ತ್ಯಂಬಿಕೆಯೊಡಗೂಡುವುದು ಲಂಬಿಕಾಯೋಗ.
ಆತ್ಮನಂ ಭೇದಿಸಿ ಪ್ರಾಣವಾಯು ನಾಡಿಗಳನರಿತು
ಹಿಡಿವ ಭೇದಮಂ ತಿಳಿದು, ತೆಗೆವ ಬಿಗಿವ ಸಂಚಮಂ ಕಂಡು
ಒಡ್ಡಿಯಾಣಬಂಧ ಜಾಳಾಂಧರಬಂಧ
ಠಾಣಿಕಾಮುದ್ರೆ ಭ್ರೂಸಂಕೋಚ ಬ್ರಹ್ಮಸ್ಥಾನದುತ್ತರನಾಡಿಯಿಂದ
ಆತ್ಮನನಾತ್ಮಲಿಂಗದಲ್ಲಿ ಸಂಯೋಗಮಾಡುವದಾತ್ಮಯೋಗ.
ಅಂಜನಾಸಿದ್ಧಿ ಘುಟಿಕಾಸಿದ್ಧಿ ಶರೀರಸಿದ್ಧಿ ಪರಕಾಯಪ್ರವೇಶ
ತ್ರಿಕಾಲಜ್ಞಾನ ದೂರಶ್ರವಣ ದೂರದೃಷ್ಟಿಯೊಳಗಾದ
ಅಷ್ಟಮಹಾಸಿದ್ಧಿಯಂ ಪಡೆದು,
ರಸಸಿದ್ಧಿ ಪಾಷಾಣಸಿದ್ಧಿ ಲೋಹಸಿದ್ಧಿ ವಯಸ್ತಂಭ
ಸ್ವರವಂಚನೆ ಕಾಯವಂಚನೆ
ವೇದಶಾಸ್ತ್ರಸಿದ್ಧಿ ಭರತಸಿದ್ಧಿ ಗಾಂಧರ್ವಸಿದ್ಧಿ ಕಿನ್ನರಸಿದ್ಧಿ
ವಾಚಾಸಿದ್ಧಿ ಖೇಚರತ್ವ ಮಹೇಂದ್ರಜಾಲದೊಳಗಾದ ಚೌಷಷ್ಟಿವಿದ್ಯಾಸಿದ್ಧಿ
ಅಣಿಮಾದಿ ಮಹಿಮಾದಿ ಈಶಿತ್ವ ವಶಿತ್ವ ಪ್ರಾಪ್ತಿ ಪ್ರಾಕಾಮ್ಯವೆಂಬ ಅಷ್ಟೈಶ್ವರ್ಯಸಿದ್ಧಿ
ವ್ಯಾಳಿ ಚರ್ಪಟಿ ಕೋರಾಂಟ ರತ್ನಘೋಷ
ಭೂತನಾಥ ನಾಗಾರ್ಜುನ ಮಚ್ಚೇಂದ್ರ ಗೋರಕ್ಷ
ಮಂಜಿನಾಥ ನವನಾಥಸಿದ್ಧರೊಳಗಾದ ಸಮಸ್ತ ಸಿದ್ಧಿಬುದ್ಧಿಗಳಿಂ
ಲಿಂಗವನರಸಿ ಅಟ್ಟಿಮುಟ್ಟಿ ಹಿಡಿದೆಹೆನೆಂಬುದು ಸಿದ್ಧಯೋಗ.
ಪಿಶಾಚತ್ವದಿಂ ತ್ರಿಭುವನಿಯಂ ಸೇವಿಸಿ ಅಮರೀಗಳಂ ಸೇವಿಸಿ

ಅಮರೀ ಭ್ರಮರಾದೇವಿ ಅಮರೀ ತ್ರಿಪುರಾಂತಕೀ
ಅಮರೀ ಕಾಲಸಂಹಾರೀ ಅಮರೀ ತ್ರೈಲೋಕ್ಯಸಾಧನೀ ಇಂತೆಂಬ ಶ್ರುತಿಗೇಳ್ದು,
ವಜ್ರಿ ಅಮರಿಗಳನಂಗಲೇಪಂ ಮಾಡಿ ಶುಕ್ಲಮಂ ಸೇವಿಸಿ
ಭೂತಸಂಕುಳಂಗಳೊಡನಾಡಿ ಅಜ್ಞಾನವಶದಿಂ
ಲಿಂಗವನೇನೆಂದರಿಯದ ಕ್ಷೀಣವೃತ್ತಿಯ ಪಿಶಾಚತ್ವದಿಂದಿಪ್ಪುದು ಪಿಶಾಚಯೋಗ.
ಹಿಂಸೆಯನುಳಿದ ಶೌಚತ್ವದಿಂ ಬ್ರಹ್ಮಚರ್ಯದಿಂ
ತತ್ವಂಗಳನಾಹ್ವಾನಿಸುತ್ತಿಪ್ಪುದು ಯಮಯೋಗ.
ವಿವೇಕ ವಿಚಾರದಿಂ ತತ್ವಂಗಳನರಿತು ಆಚರಿಸಿ
ಅಡಿಯಿಟ್ಟು ನಡೆವುದು ನಿಯಮಯೋಗ.
ಪದ್ಮಾಸನ ಸಿದ್ಧಾಸನ ಬದ್ಧಾಸನ ವಜ್ರಾಸನ ಮಯೂರಾಸನ ಕೂರ್ಮಾಸನ
ಕುಕ್ಕುಟಾಸನ ಅರ್ಧಾಸನ ವೀರಾಸನ ಶ್ಮಶಾನಾಸನ ಹಸ್ತಾಸನ ಮಸ್ತಕಾಸನ
ಕುಠಾರಾಸನ ಸಿಂಹಾಸನ ಮಧ್ಯಲವಣಿ
ಶಿರೋಲವಣಿಯೊಳಗಾದ ಆಸನಬಂಧಂಗಳಿಂದಾಚರಿಸುವುದಾಸನಯೋಗ.
ತತ್ವ ಮೂವತ್ತಾರಕ್ಕೆ ಪ್ರಣವ ಮೂಲವೆಂದರಿತು
ಷಡಾಧಾರಚಕ್ರಂಗಳ ಅಕ್ಷರವರ್ಣಂಗಳಿಂ ತಿಳಿದು
ಮೇಲಣ ಅಜನಾಳ ಬ್ರಹ್ಮಸ್ಥಾನ ತುರೀಯಾತೀತದ ಓಂಕಾರಮಪ್ಪ
ಪ್ರಣವವನರಿವುದು ಪ್ರಾಣಾಯಾಮಯೋಗ.
ಪ್ರತ್ಯಾಹಾರಯೋಗಕ್ರಮಗಳಿಂದ
ಸತ್ಪ್ರಣವವನಾಹಾರಿಸುವುದು ಪ್ರತ್ಯಾಹಾರಯೋಗ.
ಪ್ರಣವಕ್ಕೆ ಅತೀತವಾದ ಪರಶಿವಮೂರ್ತಿ ಮನದಲ್ಲಿ ಚಿಗುರ್ತು
ಅಂತರಂಗದಲ್ಲಿ ಧ್ಯಾನಾರೂಢನಾಗಿ ಧ್ಯಾನಿಸುವುದು ಧ್ಯಾನಯೋಗ.
ಆ ಪರಶಿವಮೂರ್ತಿಯೆ ಇಷ್ಟಲಿಂಗವೆಂಬ ಭಾವನೆಯಿಂದ
ಅಷ್ಟವಿಧಾರ್ಚನೆ ಷೋಡಶೋಪಚರ್ಯಂಗಳಿಂದಿಷ್ಟಲಿಂಗಧಾರಣದಿಂದ
ಇಪ್ಪುದು ಧಾರಣಯೋಗ.
ಅಪ್ರಶಿಖಾಸ್ಥಾನದಿಂದುತ್ತರವಿಭಾಗೆಯ ಅಜಪೆಯಿಂದತ್ತಣ
ಚಿತ್‌ಪ್ರಭೆಯಿಂದುಜ್ವಳತೇಜ ಸ್ವಯಂಪ್ರಕಾಶ
ದಿವ್ಯತೇಜದಿಂದೊಪ್ಪಿಪ್ಪ ಮಹಾಘನ ಪರವಸ್ತುವನಿದಿರಿಟ್ಟೀಕ್ಷಿಸಿ
ಆ ಮಹಾಪ್ರಕಾಶದಲ್ಲಿ ಒಡಗೂಡಿ ತಾನು ತಾನಾಗಿ
ಜಗದ್ವಿಹರಣೀಯನೇನೆಂದರಿಯದ ಪರಮಕಾಷ್ಠೆಯ
ಸಮಾಧಿಯಲ್ಲಿಪ್ಪುದು ಸಮಾಧಿಯೋಗ.
ಇಂತಪ್ಪ ಅಷ್ಟಾಂಗವೊಳಗಾದ ಷಡುವಿಧಕರ್ಮಯೋಗಂಗಳಂ ಮೆಟ್ಟಿ
ಚತುರ್ವಿಧಪದವಿಯಂ ಹೊದ್ದದೆ, ಫಲಭೋಗಂಗಳಂ ಮುಟ್ಟದೆ,
ಖ್ಯಾತಿ ಲಾಭ ಪೂಜೆಯಂ ತಟ್ಟದೆ,

ಇಹಪರಂಗಳಂ ಸಾರದೆ, ಭವಬಂಧನಕ್ಕೆ ಬಾರದೆ
ಗೆಲ್ಲ ಸೋಲಕ್ಕೆ ಹೋರದೆ, ತನುವಿನಿಚ್ಛೆಯಲ್ಲಿ ಸುಳಿಯದೆ,
ಮನದಿಚ್ಛೆಯಲ್ಲಿ ಹರಿಯದೆ, ಪ್ರಾಣನ ಸುಳುಹಿನಲ್ಲಿ ಸಿಕ್ಕದೆ,
ಪ್ರಕೃತಿವಶಕ್ಕೊಳಗಾಗದೆ, ಇಂದ್ರಿಯಂಗಳಿಗೆ ಮೈಯೊಡ್ಡದೆ,
ಸರ್ವಸಂದೇಹನಿವೃತ್ತಿಯಾಗಿ, ನಿಂದಲ್ಲಿ ನಿರಾಳ, ನಡೆದಲ್ಲಿ ನಿರ್ಗಮನಿ,
ನುಡಿದಲ್ಲಿ ನಿಶ್ಶಬ್ದಿ, ಸುಳಿದಲ್ಲಿ ಒಡಲಿಲ್ಲದುಪಾಧಿಯರತು
ಅಂಗವೆ ಲಿಂಗವಾಗಿ ಲಿಂಗವೆ ಪ್ರಾಣವಾಗಿ
ಪ್ರಾಣವೆ ಪ್ರಸಾದವಾಗಿ, ಪ್ರಸಾದವೆ ಪರಿಪೂರ್ಣವಾಗಿ
ನಿಜಲಿಂಗೈಕ್ಯವಾಗಿ ನಿಜಸುಖಸಂಬಂಧಿಯಾಗಿ
ನಿಜಯೋಗ ಸನ್ನಿಹಿತವಾಗಿ ಕಾಯವಿದ್ದಂತೆ ಬಯಲಾಗಿಪ್ಪರಯ್ಯಾ
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು. ॥೩೮೧॥

೧೧೩೮

ಹಣ ಬಂಗಾರ ವಸ್ತ್ರ ಕಪ್ಪಡ ಬಟ್ಟೆಯಲ್ಲಿ ನೆಟ್ಟನೆ ಬಿದ್ದಿರಲು
ಕಂಡು ಕಾತರಿಸಿ ಕೈಮುಟ್ಟಿ ಎತ್ತದ ಭಾಷೆ, ಕೊಟ್ಟಡೆ ಮುಟ್ಟದ ಭಾಷೆ,
ಪರಧನ ಪರಸತಿಗೆ ಅಳುಪದ ಭಾಷೆ,
ಇಂತಿದಕಳುಪಿದೆನಾದಡೆ ಸೌರಾಷ್ಟ್ರ ಸೋಮೇಶ್ವರಾ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ॥೩೮೨॥

೧೧೩೯

ಹದಿನಾರಂಗುಲದುದ್ದ ಸರ್ಪನ ವಿಷ ಕೆಟ್ಟು,
ಎರಡು ಕಾಲನಾಕಾಶದಲೂರಿ ನಿಂದಿತ್ತು.
ಬಹುಮುಖದ ಪಕ್ಷಿ ಏಕಮುಖವಾಗಿ
ಚಂಚುಪುಟದಲ್ಲಿರ್ದ ರತ್ನಪಕ್ಷಿಯ ನುಂಗಿ ರತ್ನ ಕೆಟ್ಟಿತ್ತು.
ಸೌರಾಷ್ಟ್ರ ಸೋಮೇಶ್ವರನಲ್ಲಿ ಅರಸುವ ಬನ್ನಿರೆ,
ಸುಜ್ಞಾನಭರಿತರು. ॥೩೮೩॥

೧೧೪೦

ಹರಣವಿರ್ದು ಹರಣವಿಲ್ಲ,
ಹರಣ ಲಿಂಗದಲ್ಲಿ ನಿರ್ಯಾಣವಾಯಿತ್ತಾಗಿ.
ಮನವಿರ್ದು ಮನವಿಲ್ಲ, ಮನವು ಮಹದಲ್ಲಿ ಲಯವಾಯಿತ್ತಾಗಿ.
ಜೀವವಿರ್ದು ಜೀವವಿಲ್ಲ, ಜೀವ ಪರಮನಲ್ಲಿ ಐಕ್ಯವಾಯಿತ್ತಾಗಿ.
ಭಾವವಿದ್ದು ಭಾವವಿಲ್ಲ, ಭಾವ ನಿರ್ಭಾವದಲ್ಲಿ ನಿಂದಿತ್ತಾಗಿ.

ಕರಣಂಗಳಿದ್ದು ಕರಣಂಗಳಿಲ್ಲ,
ಕರಣಂಗಳು ಲಿಂಗದ ಕಿರಣಂಗಳೆಯ್ದಿದವಾಗಿ.
ಇಂತು ಸರ್ವವಿದ್ದು ಸರ್ವವಿಲ್ಲ. ಇದು ಕಾರಣ ಸೌರಾಷ್ಟ್ರಸೋಮೇಶ್ವರಾ,
ನಿಮ್ಮ ಶರಣರು ಉಂಡು ಉಪವಾಸಿಗಳು,
ಬಳಸಿ ಬ್ರಹ್ಮಚಾರಿಗಳು. ॥೩೮೪॥

೧೧೪೧

ಹರಿಗೆ ಇಂದ್ರನೀಲಲಿಂಗ, ಬ್ರಹ್ಮಂಗೆ ಶೈಲಲಿಂಗ,
ಶಕ್ರಂಗೆ ಮಣಿಮಯಲಿಂಗ, ಸೂರ್ಯಂಗೆ ತಾಮ್ರಲಿಂಗ,
ಸೋಮಂಗೆ ಮೌಕ್ತಿಕಲಿಂಗ, ಕುಬೇರಂಗೆ ಹೇಮಲಿಂಗ,
ನಾಗರ್ಕಳಿಗೆ ಪವಳದ ಲಿಂಗ, ಅಷ್ಟವಸುಗಳಿಗೆ ಕಂಚಿನ ಲಿಂಗ,
ವರುಣಂಗೆ ರತ್ನದ ಲಿಂಗ, ನೈರುತ್ಯಂಗೆ ಪರುಷದ ಲಿಂಗ,
ವಾಯವ್ಯಗೆ ಹಿತ್ತಾಳಿಯ ಲಿಂಗ, ಕಾಮಂಗೆ ಕುಸುಮ ಲಿಂಗ,
ಋಷಿಗಳಿಗೆ ಪರ್ವತದ ಲಿಂಗ, ಅಸುರರಿಗೆ ಕಬ್ಬುನದ ಲಿಂಗ,
ದಶರಥಗೆ ಸುವರ್ಣದ ಲಿಂಗ, ಅಶ್ವಿನಿಗೆ ಕರಪಾತ್ರೆಯ ಲಿಂಗ,
ಅಂತಕಂಗೆ ಪರಿಪರಿಯ ಲಿಂಗ, ಗಾಯತ್ರಿಗೆ ಮರಕತದ ಲಿಂಗ,
ಚಾಮುಂಡಿಗೆ ವಜ್ರದ ಲಿಂಗ, ಭೂದೇವಿಗೆ ಪಚ್ಚದ ಲಿಂಗ,
ದುರ್ಗಿಗೆ ಕನಕದ ಲಿಂಗ, ಸಪ್ತಮಾತೃಕೆಯರಿಗೆ ಮಳಲ ಲಿಂಗ,
ಇದೆಂತೆಂದಡೆ:
"ಇಂದ್ರನೀಲಮಯಂ ಲಿಂಗಂ ವಿಷ್ಣುಃ ಪೂಜಯತೇ ಸದಾ
ವಿಷ್ಣುತ್ವಂ ಪ್ರಾಪ್ಯತೇ ತೇನ ಸಾದ್ಭುತೈಕಂ ಸನಾತನಂ
ಬ್ರಹ್ಮಾ ಪೂಜಯತೇ ನಿತ್ಯಂ ಲಿಂಗಂ ಶೈಲಮಯಂ ಶುಭಂ
ತಸ್ಯ ಸಂಪೂಜನಾದೇವ ಪ್ರಾಪ್ತಂ ಬ್ರಹ್ಮತ್ವಮುತ್ತಮಂ
ಶಕ್ರೋ[s]ಪಿ ದೇವ ರಾಜೇಂದ್ರೋ ಲಿಂಗಂ ಮೃಣ್ಮಯಂ ಶುಭಂ
ಭಕ್ತ್ಯಾ ಪೂಜಯತೇ ನಿತ್ಯಂ ತೇನ ಶಕ್ರತ್ವಮಾಪ್ನುಯಾತ್
ತಾಮ್ರಲಿಂಗಂ ಸದಾಕಾಲಂ ಭಕ್ತ್ಯಾ ದೇವೋ ದಿವಾಕರಃ
ತ್ರಿಕಾಲಂ ಯಜತೇ ತೇನ ಪ್ರಾಪ್ತಂ ಸೂರ್ಯತ್ವಮುತ್ತಮಂ
ಮುಕ್ತಾಫಲಮಯಂ ಲಿಂಗಂ ಸೋಮಃ ಪೂಜಯತೇ ಸದಾ
ತೇನ ಸೋಮೇನ ಸಂಪ್ರಾಪ್ತಂ ಸೋಮತ್ವಂ ಸತತೋಜ್ವಲಂ
ಲಿಂಗ ಹೇಮಮಯಂ ಕಾಂತಂ ಧನದೋ[s]ರ್ಚಯತೇ ಸದಾ
ತೇನ ಸಾಧನತೋ ದೇವಃ ಧನದತ್ವಮವಾಪ್ತವಾನ್
ವಸವಃ ಕಾಂಸ್ಯಕಂ ಲಿಂಗಂ ಪೂಜ್ಯ ಕಾಮಾನವಾಪ್ನುಯಾತ್
ನಾಗಾಃ ಪ್ರವಾಳಜಂ ಲಿಂಗಂ ಪೂಜ್ಯ ರಾಜ್ಯಾನಿ ಲೇಭಿರೇ

ಲಿಂಗಂ ರತ್ನಮಯಂ ಚಾರು ವರುಣೋಡರ್ಚಯತೇ ಸದಾ
ತೇನ ತದ್ವರುಣತ್ವಂ ಹಿ ಪ್ರಾಪ್ತಂ ಭದ್ರಸಮನ್ವಿತಂ
ಲಿಂಗಮಧ್ಯೇ ಜಗತ್ಸರ್ವಂ ಸರ್ವಂ ಲಿಂಗೇ ಪ್ರತಿಷ್ಠಿತಂ
ತಸ್ಮಾತ್ ಸಂಪೂಜಯೇಲ್ಲಿಂಗಂ ಯದಿ ಚೇತ್ಸಿದ್ಧಿಮಾತ್ಮನಃ
ಏವಂ ದೇವಾಶ್ಚ ಗಂಧರ್ವಾ ಯಕ್ಷೋರಗರಾಕ್ಷಸಾಃ
ಪೂಜಯಂತಿ ಸದಾಕಾಲಮೀಶಾನಂ ಸುರನಾಯಕಂ
ಬ್ರಹ್ಮಾವಿಷ್ಣುಸ್ತಥಾ ಶಕ್ರೋ ಲೋಕಪಾಲಾಶ್ಚ ದೇವತಾಃ
ಲಿಂಗಾರ್ಚನರತಾ ಹ್ಯೇತೇ ಮಾನುಷೇಷು ಚ ಕಾ ಕಥಾ"
ಇಂತೆಂದುದಾಗಿ ಸುರಪ ಹರಿ ವಿರಂಚಿ ಗಂಧರ್ವ ಯಕ್ಷ ರಾಕ್ಷಸ
ಋಷಿ ದೇವತೆಗಳೆಲ್ಲರೂ ಲಿಂಗವ ಪೂಜಿಸಿ
ಇಷ್ಟಕಾಮ್ಯಸಿದ್ಧಿಯ ಪಡೆದು ಭವಭಾರಿಗಳಾದರು.
ಸೌರಾಷ್ಟ್ರ ಸೋಮೇಶ್ವರನ ಶರಣರು ಫಲಪದಂಗಳ ಮೀರಿ
ಅರಿಕೆಯರತು ಬಯಕೆ ಬರತು
ಹುಟ್ಟುಗೆಟ್ಟು ಭವಹಿಂಗಿ ಅಭಂಗರಾದರು. ॥೩೮೫॥

೧೧೪೨
ಹರಿಹರಬ್ರಹ್ಮಾದಿಗಳ ನುಂಗಿತ್ತು ಈ ಮಾಯೆ.
ನವನಾಥಸಿದ್ಧರನಪಹರಿಸಿತ್ತು ಈ ಮಾಯೆ.
ಅರುಹಿರಿಯರನಂಗಂಗೊಂಡಿತ್ತು ಈ ಮಾಯೆ.
ನವಬ್ರಹ್ಮರನಾರಡಿಗೊಂಡಿತ್ತು ಈ ಮಾಯೆ.
ಷಡುದರುಶನಂಗಳ ಶಂಕೆಗಿಕ್ಕಿ ಕಾಡಿತ್ತು ಈ ಮಾಯೆ.
ಹೊನ್ನು ಹೆಣ್ಣು ಮಣ್ಣಾಗಿ ಮೂರು ಲೋಕಂಗಳನಣಲೊಳಗಿಕ್ಕಿ
ಅಗಿಯಿತ್ತು ಈ ಮಾಯೆ.
ಅಖಿಳ ಲೋಕಂಗಳನೊಳಗೊಂಡಿತ್ತು ಈ ಮಾಯೆ.
ಒಂದನೊಳಕೊಂಡಿತ್ತೆ? ಸರ್ವವನೊಳಕೊಂಡಿತ್ತು,
ಸೌರಾಷ್ಟ್ರ ಸೋಮೇಶ್ವರಾ, ನಿನ್ನ ಮಾಯೆ. ॥೩೮೬॥

೧೧೪೩
ಹಲವು ಕರಣಂಗಳೆಂಬ ಹಲವು ಬಣ್ಣದ ಚಿನ್ನವ
ಗುರುಮುಖಾಗ್ನಿಯಿಂದ ಒಮ್ಮುಖಕ್ಕೆ ತಂದು,
ಜ್ಞಾನಾಗ್ನಿಯಿಂ ಪುಟವಿಟ್ಟು, ಕಾಲಕರ್ಮವೆಂಬ ಕಾಳಿಕೆಯಂ ಕಳೆದು,
ವೃತ್ತಿ ಬಗೆಗಳೆಂಬ ಅವಲೋಹವಂ ಬಿಟ್ಟು,
ಅಹಂಕಾರ ಮಮಕಾರಂಗಳೆಂಬ ತೂಕಗುಂದಿ

ಅರಿವೆಂಬ ಮೂಸೆಯೊಳಿಟ್ಟು ಪರಮಜ್ಞಾನದಿಂ ಕರಗಿಸಿ,
ಸುಮನವೆಂಬ ನಿರ್ಮಲೋದಕದಲ್ಲಿ ಢಾಳಿಸಿದ
ಶುದ್ಧಸುವರ್ಣ ಸ್ವಯಂಪ್ರಕಾಶ ನಿರಾಳದ ಬೆಳಗು
ಸೌರಾಷ್ಟ್ರ ಸೋಮೇಶ್ವರನ ಶರಣರಲ್ಲಿ ಸ್ವಯವಾಯಿತ್ತು. ॥೩೮೭॥

೧೧೪೪

ಹಾಲ ಹಿಡಿದು ಬೆಣ್ಣೆಯನರಸಲುಂಟೆ?
ಲಿಂಗವ ಹಿಡಿದು ಪುಣ್ಯತೀರ್ಥಕ್ಕೆ ಹೋಗಲುಂಟೆ?
ಲಿಂಗತೀರ್ಥಪ್ರಸಾದವ ಕೊಂಡು ಅನ್ಯಬೋಧೆ ಅನ್ಯಶಾಸ್ತ್ರಕ್ಕೆ ಹಾರೈಸಲೇಕೆ?
ಇಷ್ಟಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಶರಣೆಂದೆನಾದಡೆ,
ತಡೆಯದೆ ಹುಟ್ಟಿಸುವ ಶ್ವಾನನ ಗರ್ಭದಲ್ಲಿ. ಅದೆಂತೆಂದಡೆ:
"ಇಷ್ಟಲಿಂಗಮವಿಶ್ವಸ್ಯ ತೀರ್ಥಲಿಂಗಂ ತು ಯೋ ಭಜೇತ್
ಶುನಾಂ ಯೋನಿಃ ಶತಂ ಗತ್ವಾ ಚಂಡಾಲಗೃಹಮಾವಿಶೇತ್"
ಎಂದುದಾಗಿ, ಗುರು ಕೊಟ್ಟ ಲಿಂಗದಲ್ಲಿ
ಎಲ್ಲಾ ತೀರ್ಥಂಗಳೂ ಎಲ್ಲಾ ಕ್ಷೇತ್ರಂಗಳೂ ಇದ್ದಾವೆಂದು
ಭಾವಿಸಿ ಮುಕ್ತರಪ್ಪುದಯ್ಯಾ.
ಇಂತಲ್ಲದೆ ಗುರು ಕೊಟ್ಟ ಲಿಂಗವ ಕಿರಿದುಮಾಡಿ,
ತೀರ್ಥಲಿಂಗವ ಹಿರಿದುಮಾಡಿ ಹೋದವಂಗೆ
ಅಘೋರನರಕ ತಪ್ಪದು ಕಾಣಾ, ಸೌರಾಷ್ಟ್ರ ಸೋಮೇಶ್ವರಾ. ॥೩೮೮॥

೧೧೪೫

ಹಿಂದಣ ಕಥೆಯ ಮುಂದೆ ಪೇಳುವ ಕಾವ್ಯವಲ್ಲ.
ಮುಂದಣ ಕಥೆಯನಿಂದು ಹೇಳುವ ನಾಟಕವಲ್ಲ.
ಬಂದ ಶಬ್ದವ ಸಂದಿಲ್ಲದುಸುರುವೆನೆಂಬ ಅಭ್ಯಾಸಿಯಲ್ಲ.
ಛಂದ ವಿಚ್ಛಂದದಯೆಂಬ ಸಂದೇಹಿಯಲ್ಲ.
ಸೌರಾಷ್ಟ್ರ ಸೋಮೇಶ್ವರಾ
ನಿಮ್ಮ ಶರಣರ ಸ್ವಯಾನುಭಾವದ ಪರಿ ಬೇರೆ. ॥೩೮೯॥

೧೧೪೬

ಹಿಂದಣ ಭವವನೊರಸಿ, ಮುಂದಣ ಜನನಕರ್ಮವ ಸಂಹರಿಸಿ
ಮಲ ಮಾಯೆಯ ಶಿಕ್ಷಿಸಿ, ಎನ್ನ ರಕ್ಷಿಸಿದಿರಯ್ಯಾ ಗುರುವೆ.
ಕಬ್ಬುನದ ಗಿರಿಯ ಪರುಷರಸ ಸೋಂಕಿದಂತೆ
ಸೌರಾಷ್ಟ್ರ ಸೋಮೇಶ್ವರನೆಂಬ ಗುರು ಸೋಂಕಲು
ಎನ್ನ ಅವಗುಣಂಗಳರತು ಹೋದವು. ॥೩೯೦॥

೧೧೪೭

ಹಿಡಿದ ವ್ರತವ ಬಿಡುವವನಲ್ಲ, ಲಿಂಗವಲ್ಲದನ್ಯವನೊಲ್ಲ, ಅನ್ಯದೈವಕ್ಕೆರಗ,
ಮರ್ತ್ಯದ ಮನುಜರ ಮನ್ನಿಸ, ಪರಸತಿ ಪರದ್ರವ್ಯವ ಮುಟ್ಟ,
ಕೊಟ್ಟಡೆ ಕೈಕೊಳ್ಳ, ಲಿಂಗನಿಷ್ಠಾಭಕ್ತಿಯ ಹಿಂಗ,
ಕೊಲಬಾರದ ಅರಿಗಳ ಗೆಲುವ ಕಲಿ ತಾನಾಗಿ ಅದೆಂತೆಂದೊಡೆ:
"ಪರಸ್ತ್ರೀಯಂ ಪರಾರ್ಥಂ ಚ ವರ್ಜಯೇತ್ ಭಾವಶುದ್ಧಿಮಾನ್
ಲಿಂಗನಿಷ್ಠಾ ನಿಯುಕ್ತಾತ್ಮಾ ಮಾಹೇಶ್ವರ ಇತಿ ಸ್ಮೃತಃ" ಎಂದುದಾಗಿ,
ಜೀವಭಾವ ಹಿಂಗಿ, ಶಿವಭಾವದಿಂ ಜೀವಿಸಿಪ್ಪನಯ್ಯಾ
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಮಾಹೇಶ್ವರನು. ॥೩೯೧॥

೧೧೪೮

ಹಿಡಿಯದೆ, ಹಿಡಿದುದ ಬಿಡದೆ, ಬಿಟ್ಟುದನಾರೂ ಅರಿಯರಲ್ಲಾ!
ಒಡಲ ಹಮ್ಮು, ಜಾತ್ಯಭಿಮಾನವಡಗಿ
ತೊಡದಿರ್ದ ಭಾವವನಾರೂ ಅರಿಯರಲ್ಲಾ!
ಭಾವ ಭಾವಿಸುತ ನಿರ್ಭಾವವಳವಟ್ಟ ಭೇದವನಾರೂ ಅರಿಯರಲ್ಲಾ!
ಸೌರಾಷ್ಟ್ರ ಸೋಮೇಶ್ವರಲಿಂಗದ
ನಿಜನಿರ್ಣಯವನಾರೂ ಅರಿಯರಲ್ಲಾ. ॥೩೯೨॥

೧೧೪೯

ಹೀನಬುದ್ಧಿಯ ಕರ್ಮದ ಕ್ಷೀಣ ಬಣ್ಣವ ಬಿಟ್ಟು
ಪ್ರಾಣಸಂಗತವಾದ ಧಾತು ಬಣ್ಣವೇಳಕ್ಕೆ
ಜ್ಞಾತೃ ಬಣ್ಣದಾಣಿಯನಿಕ್ಕಿ ಕಳೆದು
ಜ್ಞಾನ ಕರ್ಮದ ಬಣ್ಣ ಹತ್ತಕ್ಕೆ ಜ್ಞೇಯ ಬಣ್ಣವ ಶಕವನಿಕ್ಕಿ ಕಳೆದು
ಕ್ರಿಯಾ ಬಣ್ಣದ ಹಲವು ಬಣ್ಣವ ಕೊಡದೆ
ಶುದ್ಧಾಶುದ್ಧ ಬಣ್ಣಕ್ಕೆ ಮುಖ್ಯ ಬಣ್ಣದಲ್ಲಿ ಚಿದ್ಬಣ್ಣವ ಕೂಡಲು
ಇದಾವ ಬಣ್ಣವೆಂದರಿಯಬಾರದೆ ವರ್ಣಾತೀತವಾಯಿತ್ತು.
ಇದಕ್ಕೆ ಶ್ರುತಿ:
"ವರ್ಣಾತೀತಂ ಮನೋತೀತಂ ಭಾವಾತೀತಂ ತು ತತ್ಪದಂ
ಜ್ಞಾನಾತೀತಂ ನಿರಂಜನಂ ತತ್ಕಲಾ ಸೂಕ್ಷ್ಮಭಾವತಃ"
ಇಂತೆಂದುದಾಗಿ,
ಸೌರಾಷ್ಟ್ರ ಸೋಮೇಶ್ವರ ಲಿಂಗದ ಬಣ್ಣ ಅಂತರ್ಬಾಹ್ಯ
ಗಮ್ಯಾಗಮ್ಯ ಭಾವಾಭಾವತೀತಾತೀತವಲ್ಲದೆ ನಿಂದಿತ್ತು. ॥೩೯೩॥

೧೧೫೦
ಹುಟ್ಟುವುದೇ ಬಂಧ, ಸಾವುದೇ ಮೋಕ್ಷ ಎಂಬ
ಅರೆಮರುಳುಗಳನೇನೆಂಬೆನಯ್ಯಾ.
ಸಾವ ಹುಟ್ಟುವ ಬಂಧದಲ್ಲಿ ಮೋಕ್ಷ ಉಂಟೇ?
ಸಂಚಿತ ಪ್ರಾರಬ್ಧ ಆಗಾಮಿ ಸವೆದು, ಅಷ್ಟಭೋಗಂಗಳು ತೀರಿ,
ಹುಟ್ಟುಹೊಂದು ಬಿಟ್ಟುದೇ ಮೋಕ್ಷ. ಅಂತಪ್ಪ ಮೋಕ್ಷ ಸಿದ್ಧಿಯಪ್ಪಡೆ
ಸೌರಾಷ್ಟ್ರ ಸೋಮೇಶ್ವರಲಿಂಗವ ಕೈವಿಡಿದಲ್ಲದಾಗದು. ॥೫೪॥

೧೧೫೧
ಹುಟ್ಟು ಹೊಂದುಗೆಟ್ಟುದೇ ನಿರ್ವಾಣ.
ಮಲ ಮಾಯಾ ಕರ್ಮಂಗಳಳಿದುದೇ ನಿರ್ವಾಣ.
ಶೋಕ ಮೋಹ ಹಿಂಗಿದುದೇ ನಿರ್ವಾಣ.
ಇಹ ಪರದಾಶೆ ಬಿಟ್ಟುದೇ ನಿರ್ವಾಣ.
ಇಂತಪ್ಪ ನಿರ್ವಾಣ ಸದ್ಯೋನ್ಮುಕ್ತಿ ಸೌರಾಷ್ಟ್ರ ಸೋಮೇಶ್ವರಾ. ॥೫೫॥

೧೧೫೨
ಹುರಿದು ಬಿತ್ತಿದ ಬೀಜ ಮೊಳೆದೋರದಂತೆ
ಜ್ಞಾನಕಾಯಂಗೆ ಬರುಕಾಯವಿಲ್ಲ.
ಅರಿವಿನ ಮುಂದಣ ಕುರುಹು ಅರಿವನವಗ್ರಹಿಸಿ ಜ್ಞಾನನಿಷ್ಪತ್ತಿಯಾಗಿತ್ತು.
ಸೌರಾಷ್ಟ್ರ ಸೋಮೇಶ್ವರಲಿಂಗವೆಂಬ
ಕುರುಹು ಮರೆದ ಕಾರಣ ನಿಃಶೂನ್ಯ ನಿರ್ಗಮನವಾಯಿತ್ತು. ॥೫೬॥

೧೧೫೩
ಹುಸಿಯಿಂದ ಶಿವನ ಮುಕುಟವ ಕಂಡೆನೆಂದು
ಹುಸಿಯಂ ನುಡಿದು ಬ್ರಹ್ಮ ಭ್ರಷ್ಟನಾದ.
ಮುಳ್ಳಿನಲ್ಲಿ ತೊನಚಿಯನಿರಿದು
ಜೀವಹಿಂಸೆಯ ಮಾಡಿದ ಮಾಂಡವ್ಯ ಶೂಲಕ್ಕೆ ಗುರಿಯಾದ.
ಸೋಮಸುತನ ಮಗ ಶೂದ್ರಕವೀರಂಗೆ
ಕಳವು ಹೊದ್ದಿ, ಶಿರಹರಿದು ಕಂಚಿಯಾಲದಲ್ಲಿ ಮೆರೆಯಿತ್ತು.
ಅಕ್ಷಿಪಾದನ ಸ್ತ್ರೀ ಅಹಲ್ಯಾದೇವಿಗೆ ಅಳುಪಿದ ಶಕ್ರನ ಅಂಗ
ಅನಂಗಮುದ್ರೆಯಾಯಿತ್ತು.
ಕಾಂಕ್ಷೆ ಮಾಡಿದ ನಾಗಾರ್ಜುನ ಚಕ್ರದಲ್ಲಿ ಹತವಾದ.
ಇಂತಿವರನಂತರು ಕೆಟ್ಟರು ನೋಡಯ್ಯಾ.

ಸೌರಾಷ್ಟ್ರ ಸೋಮೇಶ್ವರನ ಶರಣರು ದೋಷವಿರಹಿತರಾಗಿ
ಸ್ವರ್ಗ ಅಪವರ್ಗವ ಮೀರಿ ಲಿಂಗದಲ್ಲಿ ಐಕ್ಯರಾದರು. ॥೩೯೭॥

೧೧೫೪
ಹೃದಯದೊಳಗಿಹನ್ನಕ್ಕ ಲಿಂಗಪ್ರಾಣಿ,
ಹೃದಯದಿಂದ ಹೊರಯಕ್ಕೆ ಹೊರವೊಂಟರೆ ಭವಿ.
ಆ ಭವಿಗೆ ಜೀವವೆಲ್ಲ ನಿರ್ಜೀವ, ಆ ಭವಿಗೆ ಉಪದೇಶವಿಲ್ಲ.
ಉಪದೇಶವ ಮಾಡಬಾರದು, ಸತ್ತರೆ ಹೂಳಬಾರದು.
ಹೂಳದಾತನ ಮನೆಯ ಹೊಕ್ಕು ಸುಯಿಧಾನವ ಕೊಂಡರೆ
ಕುಂಭೀಪಾತಕ ನಾಯಕನರಕ ತಪ್ಪದಯ್ಯಾ
ಸೌರಾಷ್ಟ್ರ ಸೋಮೇಶ್ವರಾ. ॥೩೯೮॥

೧೧೫೫
ಹೆಚ್ಚದು-ಕುಂದದು, ಮಚ್ಚದು-ಬೆಚ್ಚದು,
ಬಾಡದು-ಬತ್ತದು, ಕಂದದು-ಕುಂದದು,
ಕರಗದು-ಕೊರಗದೆನ್ನರಿವು
ಸೌರಾಷ್ಟ್ರಸೋಮೇಶ್ವರಲಿಂಗದೊಡಗೂಡಿ ತಾನೆನ್ನದಿದಿರೆನ್ನದು. ॥೩೯೯॥

೧೧೫೬
ಹೊಂಬಣ್ಣವ ಹಿಮ್ಮೆಟ್ಟದೆ ಕಂಡು, ಮುಂಬಣ್ಣವ ಮುಂದರಿತು ಕಂಡು,
ನಿಂದ ಬಣ್ಣವ ನಿಂದಂದಿಗೆ ಕಂಡು,
ಹಲವು ಬಣ್ಣದ ಬಳಕೆಯ ಹೊಲಬುದಪ್ಪಿ,
ಸಂದ ಬಣ್ಣದಲ್ಲಿ ಸಂದಿಲ್ಲದೆ ನಿಂದ ನಿರಾಳ
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು. ॥೪೦೦॥

೧೧೫೭
ಹೊನ್ನು ಹೆಣ್ಣು ಮಣ್ಣು ನಿಮ್ಮ ಸೊಮ್ಮು.
ತನುವೆನಗಿಲ್ಲ ತನುವಿನಲ್ಲಿ ನೀವೆಡೆಗೊಂಡಿಪ್ಪಿರಾಗಿ.
ಮನವೆನಗಿಲ್ಲ ನೆನಹಿನ ಕೊನೆಯಲ್ಲಿ ಬೆಳಗುತಿರ್ಪಿರಾಗಿ.
ಪ್ರಾಣವೆನಗಿಲ್ಲ ನೀವೇ ಪ್ರಾಣವಾಗಿಪ್ಪಿರಾಗಿ.
ಆನೆಂಬ ಭಾವಕ್ಕೆ ತೆರಹಿಲ್ಲದೆ ನಿರಹಂಕಾರದಿಂ
ಮಾಡುವ ನೀಡುವ ಸಂದಳಿದು
ದಾಸೋಹದ ನಿರಹಂಕೃತಿ ನಿಷ್ಪತ್ತಿಯಾಗಿ

[ಸ್ವಾ]ನುಭಾವದ ನಿಜಸುಖದಿಂದೆರಡರಿಯದಿರ್ಪರಯ್ಯಾ,
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು. ॥೪೦೧॥

*

ಆನಂದಯ್ಯಗಳ ವಚನ

೧೧೫೮
ಪಾಷಾಣವ ಹಿಡಿದು ಮಾರಿಯ ಸಂಗವ ಮಾಡುವಿರಿ,
ಘಾಸಿಯಾಗಿ ಜನ್ಮ ಜನ್ಮಕ್ಕೆ [ಬ]ಹಿರಿ
ಈಶನ ಕಂಡೆನೆಂಬುದು ಅಳಿಯಾಸೆ.
ಈ ದೋಷಿಗಳಿಗೆ ಆನಂದಸಿಂಧು ರಾಮೇಶ್ವರ ಹೇಸುವ. ॥೧॥

೧೧೫೯
ರೇತ ರಕ್ತವು ಕೂಡಿದ ಒಡಲು ಭೂತವಿಕಾರದಿಂದ ಚಲಿಸುತ್ತಿಹುದು,
ಕೀಲುದೊತ್ತಿನ ಕೈಯಲಳಿವುದು.
ಇದರ ತೂಳವ ಬಿಟ್ಟಡೆ ಆನಂದಸಿಂಧು
ರಾಮೇಶ್ವರಲಿಂಗದ ನಿಜಪದವಪ್ಪುದು ಕಾಣಿರೇ. ॥೨॥

*

ಆಯ್ದಕ್ಕಿ ಮಾರಯ್ಯಗಳ ವಚನ

೧೧೬೦
ಅಂಧಕಂಗೆ ಜೀವವಿದ್ದಡೆ ಕಣ್ಣಿದ್ದಂತೆ ಕಂಡು ನಡೆಯಬಲ್ಲನೆ?
ನೀ ಸತಿಯಾಗಿ, ನಾ ಪತಿಯಾಗಿ ಉಭಯ ಪ್ರಾಣ ಏಕರೂಪಾಗಿ
ಎನ್ನಂಗದ ಅಂಗನೆ ಅಮರೇಶ್ವರಲಿಂಗವ ತೋರಾ. ॥೧॥

೧೧೬೧
ಅಮೃತದ ಸವಿ ಸ್ವಾದಿಸುವರಿಗಲ್ಲದೆ
ಅಮೃತ ತನ್ನ ತಾ ಸ್ವಾದಿಸದ ಪರಿಯಂತೆ
ನಿತ್ಯತೃಪ್ತಂಗೆ ಆಪ್ಯಾಯನ ಉಂಟೇ ಬಸವಣ್ಣಾ?
ಏಳ್ನೂರೆಪ್ಪತ್ತಮರಗಣಂಗಳ ಕಟ್ಟಳೆಯ
ನೇಮದ ಕಟ್ಟು ನಿನ್ನದು ಬಸವಣ್ಣಾ.
ನಿನಗೆ ಭಾವ ನಿರ್ಭಾವವೆಂಬುದುಂಟೇ ಬಸವಣ್ಣಾ?

ಅಮರೇಶ್ವರಲಿಂಗದಲ್ಲಿ ಸಂಗನಬಸವಣ್ಣಾ,
ನಿನ್ನ ಪಾದಕ್ಕೆ ನಮೋ ನಮೋ ಎಂಬೆನು. ॥೨॥

೧೧೬೨
ಅಹಂಕಾರವರತಲ್ಲದೆ ಗುರುಭಕ್ತನಲ್ಲ,
ಬಯಕೆ ಹಿಂಗಿಯಲ್ಲದೆ ಶಿವಲಿಂಗಪೂಜಕನಲ್ಲ,
ತ್ರಿವಿಧ ಮಲತ್ರಯದ ಬಲುಹುಳ್ಳನ್ನಕ್ಕ ಚರಸೇವಿಯಲ್ಲ.
ಇಂತೀ ಗುಣಂಗಳಲ್ಲಿ ನಿಶ್ಚಯವಾದಲ್ಲದೆ,
ಅಮರೇಶ್ವರಲಿಂಗವನರಿಯಬಾರದು. ॥೩॥

೧೧೬೩
ಒಂದ ಬಿಟ್ಟು ಒಂದ ಕಂಡೆಹೆನೆಂದಡೆ,ಅದು ಕಾಣಬಾರದ ಬಯಲು.
ಒಂದರಲ್ಲಿ ಸಲೆ ಸಂದು ಹಿಂಗದ ಭಾವ ನೆಲೆಗೊಂಡಲ್ಲಿ
ಅಮರೇಶ್ವರಲಿಂಗವು ತಾನೆ. ॥೪॥

೧೧೬೪
ಕಟ್ಟಿಗೆ ಕಸ ನೀರು ತಂದು, ಸತ್ಯರ ಮನೆಯಲ್ಲಿ ಒಕ್ಕುದನೀಸಿಕೊಂಡು,
ತನ್ನ ಕೃತ್ಯ ತಪ್ಪದೆ ಒಕ್ಕುದ ಕೊಂಡು,
ಸತ್ಯನಾಗಿಪ್ಪ ಭಕ್ತನಂಗವೆ ಅದು ಅಮರೇಶ್ವರಲಿಂಗದ ಸಂಗ. ॥೫॥

೧೧೬೫
ಕಾಯಕದಲ್ಲಿ ನಿರತನಾದಡೆ,
ಗುರುದರ್ಶನವಾದಡೂ ಮರೆಯಬೇಕು,
ಲಿಂಗಪೂಜೆಯಾದಡೂ ಮರೆಯಬೇಕು,
ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು.
ಕಾಯಕವೆ ಕೈಲಾಸವಾದ ಕಾರಣ.
ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು. ॥೬॥

೧೧೬೬
ಗಂಗೆವಾಳುಕ ಸಮಾರುದ್ರರೆಲ್ಲರು
ತಾವು ತಾವು ಬಂದಲ್ಲಿಯೆ ಬಟ್ಟೆಯ ಮೆಟ್ಟಿದಂತಾದರು.
ಪ್ರಮಥಗಣಂಗಳೆಲ್ಲರು ಪ್ರಮಾಣಿಸಿದಲ್ಲಿ ಹರಿದರು,
ಎನಗೆ ಕರಿಗೊಂಬ ಅರಿವೆಲ್ಲಿ ಅಮರೇಶ್ವರಲಿಂಗಾ? ॥೭॥

೧೧೬೭

ಗಣಸಮೂಹವೆಂದು ಕೂಡಿ ಮಾಡುವಲ್ಲಿ
ಸಮಯದ ನೋವು ಭೂರಿಗೀಡಾಗಿ,
ಮಾಟದ ಸಂದೇಹವ ಹೊತ್ತು ಮಾತಿಂಗೊಳಗಾದಲ್ಲಿ,
ಭಕ್ತಿಯ ನೀತಿ ಸಿಕ್ಕಿತ್ತು, ಅಮರೇಶ್ವರಲಿಂಗಕ್ಕೆ ದೂರವಾಯಿತ್ತು. ॥೮॥

೧೧೬೮

ಗುರುಪೂಜೆಯ ಮಾಡುವಲ್ಲಿ ಗುರುಪೂಜೆಯಲ್ಲಿಯೇ ಮುಕ್ತರು,
ಲಿಂಗಪೂಜೆಯ ಮಾಡುವಲ್ಲಿ ಲಿಂಗಪೂಜೆಯಲ್ಲಿಯೇ ಮುಕ್ತರು,
ಜಂಗಮಪೂಜೆಯ ಮಾಡುವಲ್ಲಿ ಜಂಗಮಪೂಜೆಯಲ್ಲಿಯೇ ಮುಕ್ತರು.
ಮೂರೊಂದಾಗಲಾಗಿ ಬೇರೊಂದಂಗವಿಲ್ಲ.
ಆಗುಚೇಗೆ ಮೂರರಲ್ಲಿ ಅಡಗಿದ ಮತ್ತೆ
ಅಮರೇಶ್ವರಲಿಂಗವ ಪೂಜಿಸಲಿಲ್ಲ. ॥೯॥

೧೧೬೯

ಗುರುಲಿಂಗಜಂಗಮದಲ್ಲಿ ಬೆರೆಸಿ ದಾಸೋಹವ ಮಾಡುವಲ್ಲಿ,
ಹೆಣ್ಣು ಹೊನ್ನು ಮಣ್ಣು ಇವೇ ಮೂಲ ಮೊದಲು.
ಮಾಟ ಸ್ವಸ್ಥವಾದಲ್ಲಿ ಈ ಮೂರ ಮರೆಯಬೇಕು,
ಅಮರೇಶ್ವರಲಿಂಗವನರಿಯಬೇಕು. ॥೧೦॥

೧೧೭೦

ಗೆಜ್ಜಲು ಮನೆಯ ಮಾಡೆ ಸರ್ಪಂಗಿಂಬಾದಂತೆ,
ನಾನತ್ತಣ ದ್ರವ್ಯವ ತಂದು ಇತ್ತ ಮಾಡಿದಡೆ
ಎನಗಿನ್ನೆತ್ತಣ ಮುಕ್ತಿ ಅಮರೇಶ್ವರಲಿಂಗ. ॥೧೧॥

೧೧೭೧

ಚಂದ್ರಕಾಂತದ ಶಿಲೆಯಲ್ಲಿ ಬಿಂದು ಅಡಗಿಪ್ಪಂತೆ,
ಗೋವುಗಳಲ್ಲಿ ಗೋರೋಚನ ರಂಜಿಸುವಂತೆ,
ಶಿಲೆಕಾಷ್ಠಂಗಳಲ್ಲಿ ಅನಲ ಅಡಗಿಪ್ಪಂತೆ,
ಸತ್ಯರ ಹೃದಯದಲ್ಲಿ ಮೌಕ್ತಿಕದ ಉದಕದಂತೆ
ಭಾವವಿಲ್ಲದೆ ಅಡಗಿದೆಯಲ್ಲಾ ಅಮರೇಶ್ವರಲಿಂಗವೆ. ॥೧೨॥

೧೧೭೨
ತನುವೀವಡೆ ತನುವೆನಗಿಲ್ಲ, ಮನವೀವಡೆ ಮನವೆನಗಿಲ್ಲ,
ಧನವೀವಡೆ ಧನವೆನಗಿಲ್ಲ.
ಇಂತೀ ತನುಮನಧನ ಸಕಲಸಂಪತ್ತುಳ್ಳ
ನಿಮ್ಮ ಶರಣರ ತಪ್ಪಲಕ್ಕಿಯನಾಯ್ದುತಂದು
ಎನ್ನೊಡಲಹೊರೆವನಲ್ಲದೆ
ಅಮರೇಶ್ವರಲಿಂಗಕ್ಕೆ ನೀಡುವ ಬಯಕೆ ಎನಗಿಲ್ಲ
ಸಂಗನಬಸವಣ್ಣಾ. ॥೧೩॥

೧೧೭೩
ತವನಿಧಿಯ ಬೆಳೆವಂಗೆ ಕಣಜದ ಹಂಗುಂಟೆ?
ವಿರಕ್ತಂಗೆ ಆರೈಕೆಗೊಂಬವರುಂಟೆ?
ಕಾಯಕವ ಮಾಡುವ ಭಕ್ತಂಗೆ ಇನ್ನಾರುವ ಕಾಡಲೇತಕ್ಕೆ?
ಆ ಗುಣ ಅಮರೇಶ್ವರಲಿಂಗಕ್ಕೆ ದೂರ. ॥೧೪॥

೧೧೭೪
ತೊಟ್ಟುಬಿಡುವನ್ನಕ್ಕ ಮತ್ತಾ ಬುಡದಾಸೆ ಬೇಕು,
ಮರ್ತ್ಯದ ಹಂಗುಳ್ಳನ್ನಕ್ಕ
ಸತ್ಯಶರಣರ ಸಂಗ, ನಿತ್ಯಜಂಗಮಸೇವೆ ಕೃತ್ಯವಿರಬೇಕು
ಅಮರೇಶ್ವರಲಿಂಗವನರಿವುದಕ್ಕೆ. ॥೧೫॥

೧೧೭೫
ನರನ ಮುಟ್ಟಿ ಓಲೈಸಿದಲ್ಲಿ ಪರಿಪರಿಯ ಪದವಿಗಳುಂಟು.
ಪರಶಿವಮೂರ್ತಿಯನರಿದಲ್ಲಿ ಇಹಪರದಲ್ಲಿ ಪರಮಸುಖವುಂಟು.
ಇದೇ ಪರತತ್ವದ ಇರವು.
ಅಮರೇಶ್ವರಲಿಂಗವ ಬೆರೆಸಬಲ್ಲಡೆ ಇದೇ ಸುಖ. ॥೧೬॥

೧೧೭೬
ನೇಮವ ಮಾಡಿಕೊಂಡು ಭಕ್ತರ ಭವನಂಗಳ ಹೊಕ್ಕು,
ಕಾಯಕ ಸತ್ತು, ಹಣ ಹೊನ್ನ ಬೇಡೆಹೆನೆಂಬುದು ಕಷ್ಟವಲ್ಲವೆ ಸದ್ಭಕ್ತಂಗೆ ?
ಆ ಗುಣ ಅಮರೇಶ್ವರಲಿಂಗಕ್ಕೆ ದೂರ. ॥೧೭॥

೧೧೭೭
ಬೇಡಿ ತಂದು ದಾಸೋಹವ ಮಾಡುವನ್ನಬರ,
ಪಂಗುಳನ ಪಯಣದಂತೆ, ಯಾಚಕತ್ವ ಭಕ್ತಂಗುಂಟೆ?
ಭಕ್ತನಾಗಿ ಹುಟ್ಟಿ ಭಕ್ತರ ಬೇಡಿತಂದು ಮಾಡಿ ಮುಕ್ತಿಯನರಸಲುಂಟೆ?
ಅದು ಅಮರೇಶ್ವರಲಿಂಗವ ಮುಟ್ಟದೆ ಇತ್ತಲೆ ಉಳಿಯಿತ್ತು. ॥೧೮॥

೧೧೭೮
ಭಕ್ತಂಗೆ ಆಗುಚೇಗೆ ಅಹಂಕಾರಕ್ಕೊಳಗಾದಲ್ಲಿಯೆ ಸತ್ಯ ಸದಾಚಾರ ಸಿಕ್ಕಿತ್ತು.
ಅಹಂಕಾರವ ಮರೆದು, ನಿಹಿತಾಚಾರವನರಿದು,
ಅಮರೇಶ್ವರಲಿಂಗವ ಅವಗವಿಸಬೇಕು. ॥೧೯॥

೧೧೭೯
ಭಕ್ತರ ಭಾವದಲ್ಲಿ ಸುಳಿವ ಸುಳುಹು,
ವಿರಕ್ತರ ಜ್ಞಾನದಲ್ಲಿ ಹೊಳೆವ ಕಳೆಯು, ನೀನೆಯಯ್ಯಾ!
ಸೂರ್ಯನ ಬೆಳಗಿನೊಳಗೆ ಸಚರಾಚರಪ್ರಾಣಿಗಳು ಸುಳಿವಂತೆ,
ನಮ್ಮ ಕಟ್ಟಿನ ನೇಮದ ನಿಷ್ಠೆ ನೀನೆಯಯ್ಯಾ.
ಅಮರೇಶ್ವರಲಿಂಗದ ಒಡಲು ಸಂಗನಬಸವಣ್ಣನೆಂಬುದನು
ಮಡಿವಾಳಮಾಚಿತಂದೆಗಳೆ ಬಲ್ಲರು ಕಾಣಾ ಸಂಗನಬಸವಣ್ಣಾ. ॥೨೦॥

೧೧೮೦
ಭಕ್ತರಿಗೆ ಬಡತನವುಂಟೆ? ಸತ್ಯರಿಗೆ ಕರ್ಮವುಂಟೆ?
ಚಿತ್ತ ಮುಟ್ಟಿ ಸೇವೆಯ ಮಾಡುವ ಭಕ್ತಂಗೆ ಮರ್ತ್ಯ ಕೈಲಾಸವೆಂಬುದುಂಟೆ?
ಆತನಿದ್ದುದೆ ಸುಕ್ಷೇತ್ರ,
ಆತನಂಗವೆ ಅಮರೇಶ್ವರಲಿಂಗದ ಸಂಗಸುಖ. ॥೨೧॥

೧೧೮೧
ಮನದಲ್ಲಿ ಹುಟ್ಟಿದ ಅರಿವು ಮಾಡುವ ಮಾಟದಲ್ಲಿ ಕಾಣಬಹುದು,
ಶರಣರ ಸಂಗಕ್ಕೆಳಸಿದ ಚಿತ್ತವ ಅನುಭಾವದಲ್ಲಿ ಕಾಣಬಹುದು.
ಒಳಹೊರಗೆ ತೆರಹಿಲ್ಲದ ಕೂಟ ನಿನ್ನದು.
ಅಮರೇಶ್ವರಲಿಂಗದಲ್ಲಿ ಸಂಗನಬಸವಣ್ಣಾ
ನಿನ್ನ ಪಾದಕ್ಕೆ ನಮೋ ನಮೋ ಎಂಬೆನು. ॥೨೨॥

೧೧೮೨
ಮಲಕ್ಕೆ ಜಲವಲ್ಲದೆ ಅಮಲಕ್ಕೆ ಜಲವುಂಟೆ?
ಅರಿವು ಮಾಡುವ ಭಕ್ತ ಫಲಪದವೆಂಬ ಚಲನೆಗೊಳಗಹನೆ?
ಮಾಡುವ ಮಾಟಂಗಳಲ್ಲಿ ಕಲೆದೋರದಿಪ್ಪುದು,
ಅಮರೇಶ್ವರಲಿಂಗವ ಹಿಂಗದ ಭಾವ. ॥೨೩॥

೧೧೮೩
ವಾರ ತಿಥಿ ಲಗ್ನಂಗಳೆಂದು ಬೇರೊಂದ ಮಾಡುವನ್ನಬರ
ತ್ರಿವಿಧಪೂಜೆ ಕೆಟ್ಟಿತ್ತು.
ಗುರುಲಿಂಗಜಂಗಮದ ಅನುವನರಿತುದೆ ನೇಮ.
ಕಾಲ ಉಚಿತಕ್ಕೆ ಬಂದುದ ಕೂಡಿಕೊಂಬುದೆ ನಿತ್ಯ.
ಈ ಗುಣ ಅಮರೇಶ್ವರಲಿಂಗವ ಕೂಡುವ ಕೂಟ. ॥೨೪॥

೧೧೮೪
ವಿಶ್ವಮಯರೂಪಾಗಿ ಬಂದೆಯಯ್ಯಾ ಭಕ್ತಿಗೆ.
ಎನ್ನ ಮನಕ್ಕೆ ಭಿನ್ನವಿಲ್ಲದೆ ಸಲೆ ಸಂದ ನಿಲವು
ಅಮರೇಶ್ವರಲಿಂಗಕ್ಕೆ ಕೂಟವಾಯಿತ್ತು. ॥೨೫॥

೧೧೮೫
ಶಿವನೆ ಶಿವಭಕ್ತನಾಗಿ ಬಂದ ಲೋಕಹಿತಾರ್ಥ.
ಶಿವನೆ ಶಿವರಹಸ್ಯವ ಬೋಧಿಸಲೆಂದು ಗುರುವಾಗಿ ಬಂದು,
ಲಿಂಗದ ಕಳೆಯನರುಹಿದ ಲೋಕಹಿತಾರ್ಥ.
ಶಿವನೆ ಚರವೇಷದಲ್ಲಿ ಬಂದು,
ಅಂಗ ಮೊದಲು, ಮನವೆ ಕಡೆಯಾದ ಪದಾರ್ಥ
ದಾಸೋಹದಲ್ಲಿ ಸವೆಯಲೆಂದು ಬಂದ ಲೋಕಹಿತಾರ್ಥ.
ಶಿವನೆ ಮಂತ್ರತಂತ್ರಯಂತ್ರೋಪಕರಣವಾಗಿ ಬಂದ ಲೋಕಹಿತಾರ್ಥ.
ಇದರಂಗಸಂಗವ ಲಿಂಗಸಂಗಿಗಳು ಬಲ್ಲರು,
ಅನಂಗಸಂಗಿಗಳೆತ್ತ ಬಲ್ಲರಯ್ಯಾ?
ಅಮರೇಶ್ವರಲಿಂಗದನುವನರಿದ ಸಂಗನಬಸವಣ್ಣಾ. ॥೨೬॥

೧೧೮೬
ಸತ್ಯವೆಂಬ ತಟ್ಟೆಯಲ್ಲಿ, ಚಿತ್ತಶುದ್ಧವೆಂಬ ವಿಭೂತಿಯ ಬೈಚಿಟ್ಟು,
ಸಕಲಸಂಪದ ಪ್ರಮಥರು ಮುಂತಾಗಿ

ಅಮರೇಶ್ವರಲಿಂಗದ ಆಶ್ರಯಕ್ಕೆ ಪ್ರಸಾದವ ಕೊಂಬುದಕ್ಕೆ
ಬಾ ಬಸವಣ್ಣ. ॥೨೭॥

೧೧೮೭
ಸಮಯಕ್ಕೆ ಬಂದೆಹೆನೆಂದು ಕಂದದೆ, ಬಾರೆನೆಂದು ಕುಂದದೆ,
ಈ ಉಭಯದ ಸಂದನಳಿದು ನಿಂದಲ್ಲಿ ಅಮರೇಶ್ವರಲಿಂಗವು ತಾನೆ ॥೨೮॥

೧೧೮೮
ಸ್ಥಾವರದ ಒಡಲಿಗೆ ಕಟ್ಟಿದ ತೊಗಲಿನಂತೆ,
ಆರು ಮುಟ್ಟಿದರು ಮುಟ್ಟಂಗೊಳಗಾಗಿ ತೋರುತ್ತಿಪ್ಪುದು ದನಿ.
ಅದು ಮೂರು ತಂತ್ರದ ಭೇದ.
ಆ ತ್ರಿವಿಧಭೇದವನರಿಯಬಲ್ಲಡೆ, ಅಮರೇಶ್ವರಲಿಂಗವನರಿದುದು. ॥೨೯॥

೧೧೮೯
ಹಮ್ಮುಬಿಮ್ಮುಳಿದ ಅನವರತ ಶಿವ ನೀನು! ಎನ್ನ ಕರಸ್ಥಲದ ಕಳೆ ನೀನು!
ಎನ್ನ ಮನೋಮಧ್ಯದ ಸ್ವಯಂಜ್ಯೋತಿ ನೀನು!
ಅಮರೇಶ್ವರಲಿಂಗದ ಅನುವಿನ ಕಳೆ ನೀನು ಸಂಗನಬಸವಣ್ಣಾ. ॥೩೦॥

೧೧೯೦
ಹಾಗದ ಕಾಯಕವ ಮಾಡಿ, ಹಣ ಅಡ್ಡವ ತಾ ಎಂಬಲ್ಲಿ
ಸತ್ಯದ ಕಾಯಕ ಉಂಟೆ?
ಭಕ್ತರಲ್ಲಿ ಕಾಯಕಕ್ಕೆ ಕಡಿಮೆಯಾಗಿ ತಾ ಎಂಬುದು
ಅಮರೇಶ್ವರಲಿಂಗಕ್ಕೆ ಚಿತ್ತಶುದ್ಧದ ಕಾಯಕ. ॥೩೧॥

*

ಉಗ್ಘಡಿಸುವ ಗಬ್ಬಿದೇವಯ್ಯಗಳ ವಚನ

೧೧೯೧
ಎರಡನರಿವಲ್ಲಿ ಭಂಡಾರಿ ಬಸವಣ್ಣ, ಮೂರನರಿವಲ್ಲಿ ಚೆನ್ನಬಸವಣ್ಣ,
ಒಂದನರಿವಲ್ಲಿ ಪ್ರಭುದೇವರು.
ಇಂತೀ ಉಭಯದ ಸಂಗಂಗಳ ಮರೆದಲ್ಲಿ ನಿಜಗುಣ ನಿಜಸಂಗ.
ಇಂತೀ ಬಂಧಮೋಕ್ಷಕರ್ಮಂಗಳು ಒಂದೂ ಇಲ್ಲದ ಮತ್ತೆ
ಬಾಗಿಲಿಂಗೆ ತಡಹಿಲ್ಲ.

ಎನ್ನ ಮಣಿಹ ಕೆಟ್ಟಿತ್ತು, ಕೂಡಲಸಂಗಮದೇವರಲ್ಲಿ ಬಸವಣ್ಣ
ಎನಗಾ ಮಣಿಹ ಬೇಡಾಯೆಂದ ಕಾರಣ. ॥೧॥

೧೧೯೨
ಒಂದು ಬಾಗಿಲಲ್ಲಿ ಇಬ್ಬರ ತಡೆವೆ, ಎರಡು ಬಾಗಿಲಲ್ಲಿ ಮೂವರ ತಡೆವೆ,
ಆರು ಬಾಗಿಲಲ್ಲಿ ಒಬ್ಬನ ತಡೆವೆ.
ಒಂಬತ್ತು ಬಾಗಿಲಲ್ಲಿ ನಿಂದು ನೋಡಲಾಗಿ
ಕೂಡಲಸಂಗಮದೇವರಲ್ಲಿ ಬಸವಣ್ಣ ಸಾಕ್ಷಿಯಾಗಿ ಎತ್ತಹೋದರೆಂದರಿಯೆ. ॥೨॥

೧೧೯೩
ಓಂಕಾರದಲ್ಲಿ ಉಗ್ಘಡಿಸುತ್ತಿರಲಾಗಿ, ಕೆಲಬಲದವರು ಓಡರಿನ್ನೆಂತೊ?
ಅದು ಎನ್ನಾಜ್ಞೆಯಲ್ಲ; ಎನ್ನೊಡೆಯನ ಹಂದೆತನ.
ಸುಮ್ಮನಿರ್ದಡೆ ಎನ್ನ ಕೇಡು, ಹೇಳಿದಡೆ ಒಡೆಯಂಗೆ ಹಾನಿ.
ಕೂಡಲಸಂಗಮದೇವರಲ್ಲಿ ಬಸವಣ್ಣಾ
ಹಿಂಗದಿರು ನಿನ್ನ ಭೃತ್ಯನೆಂದು. ॥೩॥

೧೧೯೪
ಕಾಲವರ ಕೈಯಲ್ಲಿ ತಡೆವೆ, ಮೇಲವರ ಕೋಲಿನಲ್ಲಿ ನಡೆವೆ,
ಬಳಿಯವರ ಬಾಯ ಹೊಯ್ದು ನಿಲಿಸುವೆ.
ಕೂಡಲಸಂಗಮದೇವರಲ್ಲಿ ಬಸವಣ್ಣನ ಬಲ್ಲವರೊಳಗೆ ಕೂಡಿ,
ಅರಿಯದವರ ಬಾರಕೋಲಿನಲ್ಲಿ ಚರ್ಮವನೆತ್ತಿ
ಊರಿಂದವೆ ಹೊರಡಿಸುವೆನು. ॥೪॥

೧೧೯೫
ಜೀವನ ಬಾಗಿಲಲ್ಲಿ ಭ್ರಮೆಯ ತಡೆದು,
ಆತ್ಮನ ಬಾಗಿಲಲ್ಲಿ ಪ್ರಕೃತಿಯ ತಡೆದು,
ಪರಮನ ಬಾಗಿಲಲ್ಲಿ ಚಿತ್ತವ ತಡೆದು,
ಮಿಕ್ಕಾದ ವಾಯುಗಳ ದೆಸೆಯಿಂದ ಇಂದ್ರಿಯಂಗಳ ತಿಳಿದು,
ಇಂತೀ ಜೀವಾತ್ಮ ಪರಮ ತ್ರಿವಿಧಗುಣಂಗಳು ತಲೆದೋರದೆ
ಕರ್ಮೇಂದ್ರಿಯ ಭಾವೇಂದ್ರಿಯ ಜ್ಞಾನೇಂದ್ರಿಯ
ಇಂತೀ ತ್ರಿವಿಧಸ್ವಾನುಭಾವದಲ್ಲಿ ಅಡಗಿ,
ಓಂಕಾರದ ಉಲುಹು ನಷ್ಟವಾಗಿ,
ಷಡಕ್ಷರ ಪಂಚಾಕ್ಷರ ಮೂಲದ ಉಭಯದ ಮೂಳೆ ಮುರಿದು,

ಐವತ್ತೊಂದು ಭೇದದ ಸೂತಕದ ಸುಳುಹಡಗಿ,
ಹಿಂದುಮುಂದಣ ಎಚ್ಚರಿಕೆ ಸುಮ್ಮುಖ ತಿರುಗಲಾಗೆನುತ್ತಿದ್ದೆನು.
ಕೂಡಲಸಂಗಮದೇವರಲ್ಲಿ ಬಸವಣ್ಣನ ಮುಂದಣ ಎಚ್ಚರಿಕೆ
ಕುಂದದಂತೆ ಉಗ್ಗಡಿಸುತ್ತಿದ್ದೆನು. ॥೫॥

೧೧೯೬
ಜ್ಞಾನ ಬಾ, ಮಾಯೆ ಹೋಗೆಂದು ಕಳುಹುತ್ತಿದ್ದೇನೆ.
ಅರಿವು ಬಾ, ಅಜ್ಞಾನ ಹೋಗೆಂದು ಕಳುಹುತ್ತಿದ್ದೇನೆ.
ನಿಃಕಲ ಬಾ, ಸಕಲ ಹೋಗೆಂದು ಕಳುಹುತ್ತಿದ್ದೇನೆ.
ನಿಃಪ್ರಪಂಚ ಬಾ, ಪ್ರಪಂಚ ಹೋಗೆಂದು ಕಳುಹುತ್ತಿದ್ದೇನೆ.
ಕೂಡಲಸಂಗಮದೇವರಲ್ಲಿ ಬಸವಣ್ಣನ ಬಲ್ಲವರನೊಳಗೆ ಕೂಡಿ
ಅರಿಯದವರ ಹೊರಗೆ ತಡೆವುತ್ತಿದ್ದೇನೆ. ॥೬॥

೧೧೯೭
ಬಹುಜನಂಗಳೆಲ್ಲಾ ಓಲಗವಿಲ್ಲ ಹೋಗಿ, ಸಲುಗೆವಂತರಲ್ಲಲ್ಲಿ ನಿಲ್ಲಿ.
ಏಕಾಂತ ಸಂಬಂಧರು ಹೋಗಿ, ಲೋಕಾಂತ ಭಂಡರು ನಿಲ್ಲಿ.
ಇಂತೀ ಅವರವರ ಸ್ವಸ್ಥಾನಂಗಳ ಸಲುಗೆಯನರಿದು ಬಿಡುತ್ತಿದ್ದೇನೆ,
ಕೂಡಲಸಂಗಮದೇವರಲ್ಲಿ ಬಸವಣ್ಣನ ಕಾಲವೇಳೆಯನರಿದು. ॥೭॥

೧೧೯೮
ಭಕ್ತಿಸ್ಥಲಕ್ಕೆ ಒಬ್ಬ, ಮಾಹೇಶ್ವರಸ್ಥಲಕ್ಕೆ ಇಬ್ಬರು,
ಪ್ರಸಾದಿಸ್ಥಲಕ್ಕೆ ಆತನಳಿಯನಲ್ಲದಿಲ್ಲ,
ಪ್ರಾಣಲಿಂಗಿಸ್ಥಲಕ್ಕೆ ಮೂವರು, ಶರಣಸ್ಥಲಕ್ಕೆ ನಾಲ್ವರು,
ಐಕ್ಯಸ್ಥಲಕ್ಕೆ ಅಕ್ಕನ ತಮ್ಮನಲ್ಲದಿಲ್ಲ.
ಇಂತೀ ಕುರುಹಿನ ಬೆಂಬಳಿಯನರಿದು,
ಬಿಡುವರ ಬಿಟ್ಟು, ತಡೆವರ ತಡೆವುತ್ತಿದ್ದೇನೆ,
ಕೂಡಲಸಂಗಮದೇವರಲ್ಲಿ ಬಸವಣ್ಣನರಿಕೆಯಾಗಿ. ॥೮॥

೧೧೯೯
ಭಾವಭ್ರಮೆವಂತರು ಬಾರದಿರಿ, ಜ್ಞಾನಹೀನರು ಬೇಗ ಹೋಗಿ,
ತ್ರಿವಿಧ ಮಲಕ್ಕೆ ಕಚ್ಚಿಮುಟ್ಟಿ ಹೊಡೆದಾಡುವರತ್ತಲಿರಿ.
ನಿರುತ ಸ್ವಯಾನುಭಾವರು ಬನ್ನಿ, ಪರಬ್ರಹ್ಮಸ್ವರೂಪರು ಬನ್ನಿ,
ಏಕಲಿಂಗನಿಷ್ಠಾಪರರು ದೃಢವಂತರು ಬನ್ನಿ,

ಸನ್ಮಾರ್ಗ ಸತ್ಕ್ರಿಯಾವಂತರು ಬನ್ನಿ,
ಎಂದು ಎನಗೆ ಕೊಟ್ಟ ಕಾಯಕ
ಕೂಡಲಸಂಗಮದೇವರಲ್ಲಿ ಬಸವಣ್ಣ. ॥೯॥

೧೨೦೦
ಮುಂದೆ ತ್ರಿವಿಧ ಮಲವಿದೆ, ಆಸೆಯ ಕುಳಿ ಆಳವಿದೆ,
ಎಡಬಲದಲ್ಲಿ ರೋಷತಾಮಸವೆಂಬ ಹೊಯಿಲು ಹೊಯಿವುತ್ತಿದೆ,
ಅಹಂಕಾರವೆಂಬ ಮೇಲಣ ಕೊಂಬು ತಲೆವಳಸಿ ಹೊಯಿವುತ್ತಿದೆ.
ನಿಂದಡಿಗೆ ಪಾದ ಬಲುಹು ನಿಜ ಎಚ್ಚರಿಕೆ,
ತ್ರಿವಿಧದ ಕತ್ತಲೆಯ ಶೋಧಿಸಿಕೊಳ್ಳಿ.
ಕಾಲವರು ಮೇಲವರು ಒಳ್ಳೆಯವರು. ಇಂತೀ ಬಾಳೇ ಕ್ಷಣ.
ಶರಣರಡಿವಿಡಿದು ಭೇದಿಸಿ ನಡೆ ಎಂದು ಸಾರುತ್ತಿದ್ದೇನೆ,
ಕೂಡಲಸಂಗಮದೇವಪ್ರಿಯ ಬಸವಣ್ಣ ಸಾಕ್ಷಿಯಾಗಿ. ॥೧೦॥

*

ಉಪ್ಪರಗುಡಿಯ ಸೋಮಿದೇವಯ್ಯಗಳ ವಚನ

೧೨೦೧
ಕಾಯಕ್ಕೆ ಕರಣಂಗಳಿಲ್ಲ, ಜೀವಕ್ಕೆ ಇಂದ್ರಿಯಗಳಿಲ್ಲ. ಅದೆಂತೆಂದಡೆ:
ಕಾಯಕ್ಕೂ ಜೀವಕ್ಕೂ ಇಂದ್ರಿಯಂಗಳ ಬೆಂಬಳಿಯಲ್ಲಿ,
ಸಂಗಗುಣದಲ್ಲಿ ಘಟಜೀವದ ಬೆಂಬಳಿಯನರಿದು,
ಸಂಚಿನ ಸಂಬಂಧದಿಂದ ಘಟಕರಚರಣಾದಿಗಳೆಲ್ಲ
ಅವಯವಂಗಳ ಸಂಚಿನ ಭೇದದಿಂದ ಮಿಂಚುವುದನರಿದು
ಅವಗತ ಸಂಚವನರಿದವಂಗೆ ಗಾರುಡೇಶ್ವರಲಿಂಗವು ಸಾಧ್ಯವಲ್ಲ, ॥೧॥

೧೨೦೨
ಕಾಯದ ಸಂಗದಿಂದ ಆತ್ಮನು ಭವಕ್ಕೆ ಬಪ್ಪುದೊ?
ಆತ್ಮನ ಸಂಗದಿಂದ ಕಾಯ ಲಯಕ್ಕೊಳಗಪ್ಪುದೊ?
ಕಾಯ ಜೀವದಿಂದಳಿವೊ? ಜೀವ ಕಾಯದಿಂದಳಿವೋ?
ಅಲ್ಲ, ಉಭಯವೂ ಏಕಸ್ಥದಿಂದ ಪ್ರಳಯವೋ?
ಎಂಬುದ ಅಂತಸ್ಥದಿಂದ ತಿಳಿದು,
ಕಾಯಕ್ಕೂ ಜೀವಕ್ಕೂ ಭೇದವುಂಟೆಂದಡೆ, ಒಂದಬಿಟ್ಟೊಂದು ಇರದು.
ಇಲ್ಲಾ ಎಂದೆಡೆ ಆತ್ಮ ವಾಯುಸ್ವರೂಪ, ಘಟ ಸಾಕಾರಸ್ವರೂಪ,

ಗುಣ–ಗಂಧ, ಕುಸುಮ–ಗಂಧ, ತಿಲ–ಸಾರದ ಸಂಗದಂತೆ.
ಇಂತೀ ಉಭಯಭಾವದ ಭೇದವನರಿದ ಪರಮ[ಸುಖ]
ಗಾರುಡೇಶ್ವರಲಿಂಗವನರಿದವಂಗಲ್ಲದೆ ಸಾಧ್ಯವಲ್ಲ. ॥೨॥

೧೨೦೩
ಕಾಯದಿಂದ ತೋರುವದು ಪ್ರಪಂಚವಲ್ಲ,
ಜೀವದಿಂದ ತೋರುವದು ಪ್ರಪಂಚವಲ್ಲ,
ಅದಂ ತದ್ಭಾವದಿಂದ ತೋರುವದೆ ಪ್ರಪಂಚುಯೆಂಬುದನರಿದು
ಸದ್ಭಾವಕ್ಕೊಡಲೆಂಬುದ ಕಂಡು,
ಅರಿದು ಮರೆದಲ್ಲಿ ನಿಃಪ್ರಪಂಚು, ಅರಿದಲ್ಲಿ ಪ್ರಪಂಚು.
ಉಭಯದ ತೆರದರಿಸಿನ ಕುರುಹುದೋರದೆ
ಅಡಗಿ ನಿಷ್ಪತ್ತಿಯಾದುದು, ಗಾರುಡೇಶ್ವರಲಿಂಗವನರಿದುದು. ॥೩॥

೧೨೦೪
ಕಾಯ ವಸ್ತುವೆಂದಡೆ ನಾನಾ ಮಲಗುಣಂಗಳ ಹೊರೆಯದು.
ಜೀವ ವಸ್ತುವೆಂದಡೆ ತ್ರಿವಿಧಮಲದ ಹೊರೆ.
ಅರಿವು ವಸ್ತುವೆಂದಡೆ ಒಂದು ಕುರುಹಿನ ಹೊರೆಯಲ್ಲಿ ಹೊರೆಯದು.
ಇಂತೀ ಹೊರೆಯ ಹೊರೆಯದೆ, ಪರೀಕ್ಷೆ ವಿದ್ಯನಾಗಿ
ಗಾರುಡೇಶ್ವರಲಿಂಗವನರಿದವಂಗಲ್ಲದೆ ಸಾಧ್ಯವಲ್ಲ. ॥೪॥

೧೨೦೫
ತಾ ದೇವರಾದ ಮತ್ತೆ
ಪೂಜೆಗೊಂಡವರಲ್ಲಿ ಅಡಿಗಡಿಗೆ ಗಡಿತಡಿಗೆ ಬರಲೇತಕ್ಕೆ?
ತಾ ಪರಮನಿರ್ವಾಣದಲ್ಲಿ ತಿರುಗಿ
ಆಡು[ವ]ವರ, [ಕೂ]ಡುವವರ, ಒಳ್ಳಿತ್ತ
ಸಡಗರಿಸಿ ನುಡಿವ[ವ]ರ ಒಡಗೂಡಿ ಬಾಗಿಲು
ಚಾವಡಿಮನೆಯಲ್ಲಿ ನಿಲ್ಲು, ಬಾ–ಹೋಗೆನಿಸಿಕೊಳಲೇತಕ್ಕೆ?
ಅವರನೆಲ್ಲಿ ಕಂಡಲ್ಲಿಯೆ ನೋಡಿ,
ಅವರು ಸಲ್ಲೀಲೆಯಲ್ಲಿ ಮಾಡುವುದ ಕೇಳಿ,
ಅಲ್ಲಿಯೆ ಪರಮಾನಂದದಲ್ಲಿ ಸುಖಿಯಹ ಮಹಾತ್ಮಂಗೆ
ಅಲ್ಲಿಯಿಲ್ಲಿಯೆಂಬ ಭಾವದ ಭ್ರಮೆಯಿಲ್ಲ,
ಗಾರುಡೇಶ್ವರಲಿಂಗವನರಿದ ಶರಣ. ॥೫॥

೧೨೦೬
ದಾಸ–ದುಗ್ಗಳೆಯವರ ತವನಿಧಿಪ್ರಸಾದವ ಕೊಂಡೆನಯ್ಯಾ.
ಸಿರಿಯಾಳ–ಚೆಂಗಳೆಯವರ ಪ್ರಾಣಪ್ರಸಾದವ ಕೊಂಡೆನಯ್ಯಾ.
ಸಿಂಧು–ಬಲ್ಲಾಳವರ ಸಮತಾಪ್ರಸಾದವ ಕೊಂಡೆನಯ್ಯಾ.
ಬಿಬ್ಬಬಾಚಯ್ಯಗಳ ಸಮಯಪ್ರಸಾದವ ಕೊಂಡೆನಯ್ಯಾ.
ಮಹಾದೇವಿಯಕ್ಕಗಳ ಜ್ಞಾನಪ್ರಸಾದವ ಕೊಂಡೆನಯ್ಯಾ.
ನೀಲಲೋಚನೆಯಮ್ಮನವರ ನಿರ್ವಯಲಪ್ರಸಾದವ ಕೊಂಡೆನಯ್ಯಾ.
ಇಂತೀ ಏಳ್ನೂರೆಪ್ಪತ್ತಮರಗಣಂಗಳ
ಒಕ್ಕುಮಿಕ್ಕ ಬಯಲಪ್ರಸಾದವ ಕೊಂಡು ಬದುಕಿದೆನು
ಕಾಣಾ ಗಾರುಡೇಶ್ವರಾ. ॥೬॥

೧೨೦೭
ಧರ್ಮದಿಂದ ಮೋಕ್ಷ,
ಮೋಕ್ಷದಿಂದ ಚತುರ್ವಿಧಫಲಪದಂಗಳೊಳಗೊಂದು.
ಅದು ಜನ್ಮ ಬಹ ಸಂದು.
ಈ ಉಭಯದ ಸಂದನರಿದು, ಕ್ಷುತ್ತಿಂಗೆ ಭಿಕ್ಷ, ಅಂಗಕ್ಕೆ ವಸ್ತ್ರ,
ಕನಕ ಕನ್ನೆ ಭೂದಾನ ಮುಂತಾದ ಧರ್ಮವ ಕರ್ಮಿಗಳಿಗೆ ಕೊಟ್ಟು,
ಧರ್ಮಂಗೆ ತನ್ನ ವರ್ಮವನಿತ್ತು,
ಸುಖಸುಮ್ಮಾನಿಯಂತೆ ಮಾಡಿದಡಂತೆ ಪರಮಸುಖಿ,
ಗಾರುಡೇಶ್ವರಲಿಂಗನರಿದ ಪರಮಪ್ರಕಾಶ. ॥೭॥

೧೨೦೮
ಬೆಳಗು ನಷ್ಟವಾದಲ್ಲಿ ಕಳೆ ಪ್ರಜ್ವಲಿತವಿಲ್ಲ,
ಕ್ರೀ ನಷ್ಟವಾದಲ್ಲಿ ಅರಿವಿನ ತೆರಮಗೊಡಲಿಲ್ಲ.
ಕ್ರೀಯಂಗಕ್ಕೆ, ಅರಿವು ಆತ್ಮಂಗೆ.
ಇಂತೀ ಉಭಯ ಏಕವಾದಲ್ಲಿ ಲಕ್ಷನಿರ್ಲಕ್ಷವಾಗಿ,
ಗಾರುಡೇಶ್ವರಲಿಂಗವು ಗಾರುಡಕ್ಕೆ ಬಾರನು. ॥೮॥

೧೨೦೯
ಮರನುರಿದು ಬೆಂದು ಕರಿಯಾದ ಮತ್ತೆ ಉರಿಗೊಡಲಾದುದ ಕಂಡು,
ಆತ್ಮ ಪರಿಭವಕ್ಕೆ ಬಪ್ಪುದಕ್ಕೆ ಇದೆ ದೃಷ್ಟ.
ಕರಿ ಭಸ್ಮವಾದ ಮತ್ತೆ ಉರಿಗೊಡಲಿಲ್ಲ,
ಅರಿಕೆ ನಿಂದಲ್ಲಿ ಆತ್ಮ ಪರಿಭವಕ್ಕೆ ಬರಲಿಲ್ಲ,

ಉರಿಯೊಳಗೊಡಗೂಡಿದ ತಿಲಸಾರ ತುಪ್ಪ ಮರಳಿ ಅಳೆತಕ್ಕುಂಟೆ?
ವಸ್ತುವಿನಲ್ಲಿ ಕರಿಗೊಂಡ ಚಿತ್ತ, ತ್ರಿವಿಧಮಲಕ್ಕೆ ಹೊರಳಿ ಮರಳುವದೆ?
ಈ ಗುಣ ನಡೆ ನುಡಿ ಸಿದ್ಧಾಂತವಾದವನ ಇರವು,
ಗಾರುಡೇಶ್ವರಲಿಂಗವ ಕೂಡಿದವನ ಕೂಟ. ॥೯॥

೧೨೧೦

ಶಿಖರಶಿವಾಲಯವ ಕಂಡು ಕೈಮುಗಿದಲ್ಲಿ ದೈವ ಒಪ್ಪುಗೊಂಡಿತ್ತು,
ಅದು ತಾನಿ[ತ್ತ] ಆಲಯವಾದ ಕಾರಣ.
ಸಮಯದರ್ಶನಕ್ಕೆ ಇಕ್ಕಿ ಎರೆದಲ್ಲಿ, ಧರ್ಮವೆಂದು ಕೊಟ್ಟುಕೊಂಡಲ್ಲಿ,
ಶಿವನೊಪ್ಪುಗೊಂಬುದೆ ವಿಧ.
ದಿಟವಿರ್ದು ವಿಶ್ವಾಸದಿಂದ ಮಾಡುವ ಭಕ್ತಿ,
ಚತುರ್ವಿಧ ಫಲಪದಂಗಳ ಗೊತ್ತಿನ ಮುಕ್ತಿ.
ಇದು ಸತ್ಕ್ರೀವಂತನ ಚಿತ್ತ,
ಗಾರುಡೇಶ್ವರಲಿಂಗದಲ್ಲಿ ಭಕ್ತಿ[ಯ] ಕ್ರೀ. ॥೧೦॥

೧೨೧೧

ಸರ್ಪನಲ್ಲಿ ವಿಷ ಇದ್ದಿತ್ತೆಂದಡೆ,
ಸರ್ವಾಂಗದಲ್ಲಿ ವಿಷ ತಪ್ಪದಿಪ್ಪುದೆ, ವಿಷವಿಪ್ಪ ಠಾವು ಒಂದಲ್ಲದೆ?
ಪೃಥ್ವಿಯಲ್ಲಿ ನಿಕ್ಷೇಪವಿದ್ದಿತ್ತೆಂದಡೆ,
ಅಲ್ಲಲ್ಲಿ ಎಲ್ಲಾ ಠಾವಿನಲ್ಲಿ ಅಡಗಿಪ್ಪುದೆ?
ಸಮಯಕುಲದಲ್ಲಿ ವಸ್ತು ಪರಿಪೂರ್ಣವೆಂದಡೆ,
ದರ್ಶನಪಾಷಂಡಿಗಳಲ್ಲಿ ವಸ್ತು ಪರಿಪೂರ್ಣನಾಗಿಪ್ಪನೆ?
ಇಪ್ಪ ಸತ್ಯಸನ್ಮುಕ್ತರಲ್ಲಿಯಲ್ಲದೆ, ಪರಮವಿರಕ್ತನಲ್ಲಿಯಲ್ಲದೆ.
ನೆಲದಲ್ಲಿದ್ದ ನಿಧಾನವವನರಿದು ಅಗಿವುದು,
ವಿಷವಿದ್ದ ಬಾಯ ಮುಚ್ಚಿಹಿಡಿವುದು,
ನೆರೆ ವಸ್ತುವಿದ್ದ ಠಾವನರಿದು ಪೂಜಿಸುವುದು.
ಇಂತೀ ಬಯಕೆಗೆ ಬಯಕೆ, ಸಮೂಹಕ್ಕೆ ತ್ರಿವಿಧಮಲ.
ಖ್ಯಾತಿಲಾಭಕ್ಕೆ ಭೂತಹಿತ. ಅರಿವುಳ್ಳವರಲ್ಲಿ ಎರವಿಲ್ಲದ ಕೂಟ.
ಇಂತಿವು ಜಗದಲ್ಲಿ ಅರಿದು ಮಾಡುವನ ಪರಿತೋಷ
ಗಾರುಡೇಶ್ವರಲಿಂಗದಲ್ಲಿ ಎರಡಳಿದವನ ಕೂಟ. ॥೧೧॥

*

ಉರಿಲಿಂಗದೇವರ ವಚನ

೧೨೧೨

ಅಂಗದ ಮೇಲೆ ಲಿಂಗದೇವನಿದ್ದಂತೆ,
ಇತರ ಸ್ಥಾವರಲಿಂಗಕ್ಕೆ ಹೋಗಿ ಹೋಗಿ,
ದೇವರ ಕಂಡೆನೆಂದು ನಲಿದು ಉಲಿವುತಿಪ್ಪ ಸಲೆ ಮನುಜರುಗಳಿಗೆ,
ಉಪದೇಶವ ಮಾಡುವ ಗುರುವಿಂಗೆ,
ಪುಣ್ಯದ ಬಟ್ಟೆಯ ಕೊಡ ಉರಿಲಿಂಗತಂದೆ. ॥೧॥

೧೨೧೩

ಅಂತರಂಗದಲ್ಲಿ ಆವರಿಸಿ, ಬಹಿರಂಗದಲ್ಲಿ ತೋರುವೆ.
ಕಂಗಳ ಕೊನೆಯಲ್ಲಿ ಮೂರುತಿಯಾಗಿ, ಮನದ ಕೊನೆಯಲ್ಲಿ ತೋರುವೆ.
ಎನ್ನ ಬ್ರಹ್ಮರಂಧ್ರದಲ್ಲಿ ತೋರುವ ಪರಂಜ್ಯೋತಿ
ಉರಿಲಿಂಗದೇವ ನೀನಯ್ಯಾ. ॥೨॥

೧೨೧೪

ಅನಂತ ವೇದಶಾಸ್ತ್ರಾಗಮ ಪುರಾಣ ತರ್ಕತಂತ್ರಗಳನು
ಆತ್ಮ ಮಾಡಿದನಲ್ಲದೆ, ಆತ್ಮನನವು ಮಾಡಿದುದಿಲ್ಲ.
ಎನ್ನ ಅಂತರಂಗದ ಅರಿವಿನ ಮೂರ್ತಿ ಉರಿಲಿಂಗದೇವರು
ಸಂಕಲ್ಪಿಸಿ ಆಗೆಂದಡಾದವು. ॥೩॥

೧೨೧೫

ಅರಿದೊಡೆ ಶರಣ, ಮರೆದೊಡೆ ಮಾನವ.
ಪಾತಕನು, ಹೊಲೆಯನು, ನಾನೇತಕ್ಕೆ ಬಾತೆ?
ಹೊತ್ತಿಂಗೊಂದೊಂದು ಪರಿಯ ಗೋಸುಂಬೆಯಂತೆ
ಈಶನ ಶರಣರ ಕಂಡುದಾಸೀನವ ಮಾಡುವ
ದಾಸೋಹವನರಿಯದ ದೂಷಕನು ನಾನಯ್ಯ.
ಏಸು ಬುದ್ಧಿಯ ಹೇಳಿ ಬೇಸತ್ತೆನೀ ಮನಕೆ,
ಈಶ ನೀ ಸಲಹಯ್ಯಾ, ಉರಿಲಿಂಗತಂದೆ. ॥೪॥

೧೨೧೬

ಅವರಾರ ಪರಿಯಲ್ಲ ಎಮ್ಮ ನಲ್ಲನು.
ವಿಶ್ವವೆಲ್ಲವು ಸತಿಯರು, ಸೋಜಿಗದ ಪುರುಷನು.
ಅವರವರ ಪರಿಯಲ್ಲೆ ಅವರವರ ನೆರೆವನು,
ಅವರವರಿಗವರಂತೆ ಸುಖಮಯನು ನೋಡಾ.
ಅವರೆಲ್ಲರ ವಂಚಿಸಿ ಎನ್ನನಗಲದ ಪರಿಯ ನೋಡಾ, ಕೆಳದಿ.
ನೀನೊಳ್ಳಿದಳಾದಡೆ ಮಹಾಮಂತ್ರವ ಜಪಿಸು,
ನಿನ್ನನಗಲನು, ನಿನ್ನಾಣೆ, ಉರಿಲಿಂಗದೇವ, ತನ್ನಾಣೆ ಕೆಳದಿ. ॥೫॥

೧೨೧೭

ಅಷ್ಟವಿಧಾರ್ಚನೆ, ಷೋಡಶೋಪಚಾರ ಬಾಹ್ಯಕ್ರೀಯೆಂಬ
ಭಾವಭ್ರಮಿತರ ಮಾತ ಕೇಳಲಾಗದು.
ಧನವುಳ್ಳಾತನು ಅಷ್ಟಸಂಪದದೈಶ್ವರ್ಯವ ಭೋಗಿಸುವನಲ್ಲದೆ,
ಧನಹೀನ ದಾರಿದ್ರನೇನ ಭೋಗಿಸುವನೋ?
ಲಿಂಗವೂ ಪ್ರಾಣವೂ ಅವಿರಳಾತ್ಮಕವಾಗಿ ಉತ್ಕೃಷ್ಟವಾಗಿದ್ದಲ್ಲಿ,
ಆ ಅಮಳಸೋಂಕು ತುಳುಂಕಿ,
ಬಾಹ್ಯಕ್ರೀಯಾಗಿ ಕರಸ್ಥಲಕ್ಕೆ ಬಂದುದೈಸಲ್ಲದೆ,
ಅದು ಅಂತರಂಗವಲ್ಲ, ಬಹಿರಂಗವಲ್ಲ
ನಮ್ಮ ಉರಿಲಿಂಗದೇವರು. ॥೬॥

೧೨೧೮

ಆತನ ಬಿರುದೆನ್ನ ಉರದಲ್ಲಿ ಇದೆ ಕಂಡಯ್ಯಾ.
ಏಕೆ ಬಂದಿರೋ ಎಲೆ ಅಣ್ಣಗಳಿರಾ. ನಿಮಗಪ್ಪುವುದಕ್ಕೆಡೆಯಿಲ್ಲ.
ನಿಮಗಪ್ಪುವದಕ್ಕಡ್ಡಬಂದಹನೆಮ್ಮ ನಲ್ಲ. ಏಕೆ ಬಂದಿರೋ,
ಉರಿಲಿಂಗದೇವನನಪ್ಪಿ ಸೊಪ್ಪಾದ ಹಿಪ್ಪೆಗೆ. ॥೭॥

೧೨೧೯

ಆದ ಗತಿಯನ್ನನುಭವಿಸುವುದಲ್ಲದೆ
ಹೇಳಬಾರದಾರಿಗೆಯೂ, ನೋಡಯ್ಯಾ.
ಕಾಣಬಾರದಾಂತಗೆ ಸವಿದೋರಬಾರದ ರೂಪ ನೋಡಯ್ಯಾ,
ಹೇಳಬಾರದ ಶಬುದ. ಉರಿಲಿಂಗದೇವಾ,
ನಿಮ್ಮನರಿದ ಸುಖವಿಕ್ಕಬಾರದು ತಕ್ಕವರಿಗಲ್ಲದೆ. ॥೮॥

೧೨೨೦
ಆದಿ-ಅನಾದಿ, ಸಾಕಾರ-ನಿರಾಕಾರ ಎಂಬುವೇನುವಿಲ್ಲದ
ವಾಗತೀತವಾದ ನಿರ್ನಾಮವಸ್ತು ತಾನೆ!
ತನ್ನ ಲೀಲಾವಿಲಾಸದಿಂದಾದ ಪ್ರಭಾವದ ಸ್ಫುರಣವೆ ಮಹಾಪ್ರಕಾಶ.
ಆ ಮಹಾಪ್ರಕಾಶದ ಆವರಣವೆ ನಿಜಾತ್ಮನು.
ಆ ನಿಜಾತ್ಮನೆ ತನ್ನಿಂದಾದ ಸಮಸ್ತವಸ್ತುಗಳೆನಿಪ ತತ್ವಂಗಳಿಗೆ
ತಾನೇ ಕಾರಣವಾದ.
ಇದನರಿಯದೆ ಆತ್ಮಂಗೆ ಅನಾದಿಮಲತನುತ್ವ
ಪಾಶಬಂಧ ಉಂಟೆಂಬರು, ಅದು ಹುಸಿ.
ಆ ಆತ್ಮನು ತನ್ನಿಂದ ಪ್ರವರ್ತಿಸುವ ಮಹದಾದಿ ತತ್ತ್ವಂಗಳಿಗೆ
ತಾನೇ ಮೂಲಾಧಾರವಾದ ಕಾರಣ
ಮೂಲಪ್ರಕೃತಿಸ್ವರೂಪವೆನಿಸಿಕೊಂಬನು.
ಆ ನಿಜಾತ್ಮನಲ್ಲಿ ಅನಾದಿಮಲಪಾಶಂಗಳು ಸತ್ಯವಲ್ಲ.
ಇದು ಕಾರಣ, ಆ ಆತ್ಮನು ಮೇಲಣ ಘನಲಿಂಗವಾದುದು ತಾನೆ,
ಲಯಿಸುವುದಕ್ಕೂ ಗಮಿಸುವುದಕ್ಕೂ ತಾನೆ.
ತಾನಾ ಕಾರಣನಾದನಾಗಿ ಪ್ರತಿಪದಾರ್ಥವಿಲ್ಲ. ಅದೆಂತೆಂದಡೆ:
ಪರಾತ್ಪರತರವಪ್ಪ ಪರಬ್ರಹ್ಮಕ್ಕೆ ಬೆಚ್ಚಿ ಬೇರಾಗದ ಕಾರಣ.
ಅದು ದೀಪ ದೀಪದ ಪ್ರಭೆಯಂತೆ,
ರತ್ನ ರತ್ನದ ಕಾಂತಿಯಂತೆ ಆತ್ಮಲಿಂಗೈಕ್ಯ.
ಇಂತೀ ಸಹಜಸೃಷ್ಟಿಯನರಿಯದೆ "ಅನಾದಿ ಆತ್ಮಂಗೆ ಪಾಶಂಗಳುಂಟು,
ಆತ್ಮ ಪಶು-ಪಾಶ ಮಾಯೆ-ಪತಿ ಶಿವ" ಎಂಬರು!
ಇಂತೀ ತೆರದಲ್ಲಿ ತ್ರಿಪದಾರ್ಥಗಳ ಹೇಳುವರು! ಅದು ಹುಸಿ.
ಸೃಷ್ಟಿ ಮೊದಲು ಐಕ್ಯ ಕಡೆಯಾಗಿ ಅಭೇದವಲ್ಲದೆ ಭೇದವಿಲ್ಲ.
ಇನ್ನು ಅದ್ವೈತಮತದಲ್ಲಿ ವೇದಾಂತಿಯೆಂಬಾತ ನಿಜ ಸೃಷ್ಟಿಯರಿಯ.
ಅದೆಂತೆಂದಡೆ:
'ಶಕ್ತ್ಯಧೀನಂ ಪ್ರಪಂಚಶ್ಚ' ಎಂಬ ಶ್ರುತಿಯನರಿದು!
ಆ ಶಕ್ತಿಯ ಆಧಾರದಲ್ಲಿ ತೋರುವ ತತ್ತ್ವಂಗಳ ಪ್ರವರ್ತನೆ
ವಿಶ್ವವೆನಿಸುವದು.
ಅದನರಿಯದೆ ವೇದಾಂತಿ ದೃಕ್ ದೃಶ್ಯವೆಂಬ,
ದೃಕ್ಕೇ ವಸ್ತುವೆನಿಪಾತ್ಮನೆಂಬ, ದೃಶ್ಯವೆ ಮಾಯೆಯೆಂಬ! ಅದು ಹುಸಿ;
ಆ ಶಕ್ತಿಯ ಆಧಾರದಲ್ಲಿ ತೋರುವ ವಿಶ್ವಪ್ರಪಂಚವು.
ಆ ಪ್ರಪಂಚದ ಮಧ್ಯದಲ್ಲಿ ತೋರುವ ಶಕ್ತಿಯ ಕ್ರಮವೆಂತೆಂದಡೆ:
ಜಲಮಧ್ಯದಲ್ಲಿ ತೋರುವ ಇನಬಿಂಬದಂತೆ ಬಿಂಬಿಸುವುದಾಗಿ!

ಆ ಬಿಂಬವೇ ಜೀವನು, ಆ ಜೀವನೆ ದೃಕ್ಕು,
ಅವನ ಕೈಯಲ್ಲಿ ಕಾಣಿಸಿಕೊಂಬ ವಿಷಯವೆ ಮಾಯೆ.
ಈ ಎರಡರ ವ್ಯವಹಾರ ಆ ಶಕ್ತಿಗೆ ಇಲ್ಲವಾಗಿ,
ದೃಕ್ಕುದೃಶ್ಯವೆಂಬ ವೇದಾಂತಿಯ ಮತವಂತಿರಲಿ.
ಇಂತೀ ದ್ವೈತಾದ್ವೈತದಲ್ಲಿ ಪ್ರವರ್ತಿಸರು ಶಿವಶರಣರು.
ಈ ದ್ವೈತಾದ್ವೈತದಲ್ಲಿ ಪ್ರವರ್ತಿಸುವ ಪ್ರವರ್ತನಕ್ಕೆ ತಾವೆ ಕಾರಣವೆನಿಪ್ಪರು.
ಇಂತೀ ಕಾರಣವೆನಿಸಿರ್ಪ ಶರಣರ ನಿಲವೆಂತುಂಟೆಂದಡೆ:
ಸಕಲವಿಶ್ವವೆ ಸತಿಯರೆನಿಸಿ ತಾನು ತನ್ನ ನಿಜಕ್ಕೆ ಅಂಗನಾಗಿ,
ಆ ನಿಜವೆ ಆತ್ಮಂಗೆ ಅಂಗವಾಗಿ ನಿಂದ ನಿಲವೆ ಪರವಸ್ತುವಿನ ಪ್ರಭಾವ.
ಆ ಪ್ರಭಾವದ ಶರಣನ ನಿಲವೆ
ಉರಿಲಿಂಗದೇವನೆಂಬ ಗಂಡನಾಗಿ ಬಂಧ ತೆಗೆದ. ||೯||

೧೨೨೧
ಇಂಬಿನ ಚುಂಬನ ಅಮೃತಾಹಾರ, ಆಲಿಂಗನವೆ ಆಭರಣ,
ಸೋಂಕೆ ವಸ್ತ್ರ, ನೋಟವೆ ಕೂಟ, ಒಡನಾಟವೆ ಅಷ್ಟಭೋಗವೆನಗೆ.
ಉರಿಲಿಂಗದೇವನ ಕೂಟವೆ ಪರಾಪರ ವಾಙ್ಮನಾತೀತ ಪರಮಸುಖ. ||೧೦||

೧೨೨೨
ಇಬ್ಬರಿಗೊಂದಂಬ ತೊಡುವೆ ಗಡ ಕಾಮಾ.
ಅರಿದರಿದು, ಬಿಲುಗಾರನಹೆಯೊ!
ಎಸೆದಿಬ್ಬರು ಒಂ[ದಾ]ಹರು ಗಡ.
ಇದು ಹೊಸತು, ಚೋದ್ಯವೀ ಸರಳ ಪರಿ ನೋಡಾ!
ಎನಗೆಯೂ ಉರಿಲಿಂಗದೇವಗೆಯೂ ತೊಟ್ಟೆಸು.
ನಾವಿಬ್ಬರೊಂದಾಗೆ ಬಿಲ್ಲಾಳಹೆ, ಎಸೆಯೆಲೋ ಕಾಮಾ. ||೧೧||

೧೨೨೩
ಈ ನಲ್ಲನ ಬೇಟದ ಕೂಟದ ಪರಿಯನು
ಏನೆಂದು ಹೇಳುವೆ? ವಿಪರೀತ ಕೆಳದಿ.
ಪುರುಷ ಶಕ್ತಿಯಾಗಿ, ಶಕ್ತಿ ಪುರುಷನಾಗಿ
ನೆರೆದು ಸುಖಿಸುವನು ಕೇಳಾ ಕೆಳದಿ.
ಅತಿ ಕಾಮಿ ವಿಪರೀತನು ಉರಿಲಿಂಗದೇವನು,
ನೆರೆಯಲು ನೆರೆವುದು ಮನದಿಚ್ಛೆ ಕೆಳದಿ. ||೧೨||

೧೨೨೪
ಉಂಡೆಹೆನೆಂಬಲ್ಲಿ ಅನ್ನವನಿಕ್ಕದೆ ಸತ್ತ ಮತ್ತೆ,
ಅಕ್ಕಿಯ ಹೇರ ಮಸ್ತಕದಲ್ಲಿರಿಸಿ,
ಘಟ್ಟಿ ತುಪ್ಪ ತೋಯ ಉಣ್ಣೆಂದು ಬಿಕ್ಕಿ ಬಿಕ್ಕಿ ಅಳುವನಂತೆ,
ಇವರಚ್ಚುಗದ ಭಕ್ತಿಯ ಕಂಡು ಮೆಚ್ಚನಯ್ಯಾ,
ಎನ್ನ ಉರಿಲಿಂಗತಂದೆ. ॥೧೩॥

೧೨೨೫
ಉರಿಲಿಂಗದೇವ ನಿನ್ನನಗಲದ ಪರಿಯನು ಹೇಳಿಹೆನು,
ಕೇಳಾ ನಿನಗೆ ಸಖಿಯೆ:
ಉರಿಲಿಂಗದೇವ ಎಂಬುದೆ ಮಂತ್ರ ,
ಉರಿಲಿಂಗದೇವ ಎಂಬುದೆ ಯಂತ್ರ ,
ಉರಿಲಿಂಗದೇವ ಎಂಬುದೆ ತಂತ್ರ,
ಉರಿಲಿಂಗದೇವ ಎಂಬುದೆ ವಶ್ಯ.
ಉರಿಲಿಂಗದೇವಾ, ಉರಿಲಿಂಗದೇವಾ, ಎನ್ನುತ್ತಿದ್ದೇನೆ. ॥೧೪॥

೧೨೨೬
ಎನ್ನ ನಲ್ಲನೆನ್ನನೊಲ್ಲದಿರ್ದಡೆ ನಾ ಎಲ್ಲಿ ಅರಸುವೆನವ್ವಾ?
ಗಂಗೆಯ ನೋನೆನು, ಗೌರಿಯ ನೋನೆನು. ಎಲ್ಲಿ ಅರಸುವೆನವ್ವಾ,
ಎನ್ನ ಅಂತರಂಗದ ಆತ್ಮಜ್ಯೋತಿ ಉರಿಲಿಂಗದೇವಾ ಎಂದು
ಇಲ್ಲಿಯೇ ಅರಸುವೆನವ್ವಾ. ॥೧೫॥

೧೨೨೭
ಎಮ್ಮ ನಲ್ಲನ ಕೂಡಿದ ಕೂಟವ ಇದಿರಿಗೆ ಹೇಳಬಾರದವ್ವಾ.
ನೀವೆಲ್ಲಾ ನಿಮ್ಮ ನಲ್ಲನ ಕೂಡಿದ ಸುಖವ ಬಲ್ಲಂತೆ ಹೇಳಿ.
ಉರಿಲಿಂಗದೇವ ಬಂದು ನಿರಿಯ ಸೆರಗ ಸಡಿಲಿಸಲೊಡನೆ
ನಾನೊ ತಾನೊ ಏನೆಂದರಿಯೆನು. ॥೧೬॥

೧೨೨೮
ಎಮ್ಮ ನಲ್ಲನವ್ವಾ, ನಲ್ಲರಿಗೆ ನಲ್ಲನು.
ವಂಚನೆಗೆ ನೆರೆಯನು, ನಿರ್ವಂಚನೆಗೆ ನೆರೆವನು,
ಉರಿಲಿಂಗದೇವನು. ॥೧೭॥

೧೨೨೯
ಎಲ್ಲಾ ಗಣಂಗಳಿಗೆ ಬಿನ್ನಹ:
ನೀವು ಮರ್ತ್ಯಕ್ಕೆ ಬರುವಂದಿಗೆ ದಕ್ಷಿಣದಲ್ಲಿ
ಭಕ್ತಿಗೆ ತವರ್ಮನೆಯಾದೀತು,
ಅನಂತ ಲಿಂಗನಿಷ್ಠೆಗಳಾದಾವು,
ಮಹಾಪವಾಡ ಪುರುಷರು ಹುಟ್ಟ್ಯಾರು,
ನಿಂದೆಯಂ ಮಾಡ್ಯಾರು,
ಅವರಿಗೆ ತೋರಿ ನಮ್ಮ ಪುರಾತರು ಪವಾಡವ ಮೆರೆದಾರು.
ಶಾಂತ ಕಲಿದೇವರು ಸಾಕ್ಷಿಯಾಗಿ ನಮ್ಮ ಪುರಾತರು
ಮರ್ತ್ಯಕ್ಕೆ ಬಂದು ಕಲಿಯ ತೊಳೆದಲ್ಲದೆ ಬಾರರು,
ನಮ್ಮ ಪುರಾತರು ಬರುವಂದಿಗೆ ಮುಚ್ಚಿದ ಕಣ್ಣ ತೆರೆಯಯ್ಯ,
ಕಲಿಯುಗದ ಬೆಳೆಯ ಕೆಡಿಸಯ್ಯ,
ಭಕ್ತಿ ಬೆಳೆಯ ಬೆಳೆಸಯ್ಯ,
ನಮ್ಮ ಉರಿಲಿಂಗದೇವರ ಶರಣರ ಮರ್ತ್ಯಕ್ಕೆ ಬರಿಸಯ್ಯ. ॥೧೮॥

೧೨೩೦
ಒಂದಲ್ಲ ಎರಡಲ್ಲ ಮೂವರು ಹೆಣ್ಣುಗಳ ಮರೆಯಲಿಪ್ಪನ ನೆರೆಯಲೆಂತಹುದು?
ಹೆಣ್ಣಿನ ಮರೆಯ ಹೊಗುವ ನಲ್ಲಗೆ ಮತ್ತೆ ನಾಚಿಕೆಯಿಲ್ಲ ಕೇಳಾ, ಕೆಳದಿ.
ಲೋಗರ ಪತಿಯ ಮರೆಸಿಕೊಂಡಿಪ್ಪ
ಚಂಡಿಯರಿಗೆ ಮತ್ತೆ ನಾಚಿಕೆಯಿಲ್ಲ ಕೇಳಾ.
ಅವದಿರ ಝುಂಕಿಸಿ ತೊಲಗಿಸಿ ಹಿಡಿದಡೆ
ಬಿಡದಿ[ರೆನೆ]ಂದೂ ಉರಿಲಿಂಗದೇವನ. ॥೧೯॥

೧೨೩೧
ಒಬ್ಬನೆ ಗರುವನಿವ, ಒಬ್ಬನೆ ಚೆಲುವನಿವ, ಒಬ್ಬನೆ ಧನಪತಿ ಕೇಳಾ ಕೆಳದಿ,
ಇವಗೆ ಹಿರಿಯರಿಲ್ಲ, ಇವಗೆ ಒಡೆಯರಿಲ್ಲ.
ಇಂತಪ್ಪ ನಲ್ಲನು ಲೇಸು ಕಾಣೆಲಗೆ.
ನಾವೆಲ್ಲಾ ಒಂದಾಗಿ ಹಿಡಿದು ಬಿಡದಿರೆ
ಬಿಡಿಸುವರಿನ್ನಿಲ್ಲ ಉರಿಲಿಂಗದೇವನ. ॥೨೦॥

೧೨೩೨
ಕಾಮನ ಕೊಂದು ಪಟ್ಟಕ್ಕೆ ನಿಂದ ಕಾಮರಾಜರಾಜನು, ರಾಜಾಧಿರಾಜನು.
ಗಂಡರನೆಲ್ಲರ ಹೆಂಡಿರ ಮಾಡಿ ನೆರೆವ ವೈಶಿಕ, ಕಾಮಿನೀ ಕೇಳಾ,

ಇಂತಪ್ಪ ಕಾಮಿ ಎನಗತಿ ಕಾಮಿಸಿ ನೆರೆದು
ಕಾಮಸಿದ್ಧಿಯನೀವನು ಉರಿಲಿಂಗದೇವನು. ॥೨೧॥

೧೨೩೩

ಕಾಮಾ, ನಿನ್ನ ಬಿಲ್ಲಾಳುತನುವನು, ಎಸುಗೆಯನು ನೋಡುವೆನು.
ಕೇಳೆಲವೊ, ಕುಸುಮಶರವನು ತೊಡು ನೀನು,
ಎಸು, ನಿನ್ನೆಸುಗೆಯ ನೋಡುವೆನು ಕೇಳಾ.
ಎನಗೂ ಉರಿಲಿಂಗದೇವಗೂ ತೊಟ್ಟೆಸು,
ಎಸಲು ನೀ ಬಿಲ್ಲಾಳಹೆಯಾ ಕಾಮಾ. ॥೨೨॥

೧೨೩೪

ಕಾಮಿನಿ ಕಾಮನಿಗೆ ಎರಡು ಗುರಿಯೆಂದು
ಸರಳೆಸುಗೆಯ ಮಾಡುವೆ.
ಕಾಮನಲ್ಲೊ [ಅ]ಲ್ಲೊ ಬಿಲ್ಲಾಳೆ!
ಎಸಲು ಎರಡೊಂದಪ್ಪುದು ಗಡ, ಕಾಮಾ
ಎನಗೆ ಉರಿಲಿಂಗದೇವಗೆ ತೊಟ್ಟೆಸು,
ಎರಡೊಂದಾದಡೆ ಬಿಲ್ಲಾಳಹೆ, ಎಸೆಯೊ ನೀನು. ॥೨೩॥

೧೨೩೫

ಕಾಯಕ್ಕೆ ಕಾಯವಾಗಿ ಪ್ರಾಣಕ್ಕೆ ಪ್ರಾಣವಾಗಿ
ಮನಕ್ಕೆ ಮನವಾಗಿ ನೆರೆವ ನೋಡೆಲಗವ್ವಾ,
ನಲ್ಲನ ಬೇಟದ ಕೂಟದ ಸುಖವನೇನೆಂದು ಬಣ್ಣಿಪೆ, ಮಹಾಸುಖವ!
ನಲ್ಲನ ನೋಟದ ಕೂಟದನುವನೇನೆಂದುಪಮಿಸುವೆ, ಮಹಾಘನವ!
ಆನು ತಾನೆಂದು ವಿವರಿಸಬಾರದಂತೆ
ನೆರೆದನು ನೋಡಾ, ಉರಿಲಿಂಗದೇವನು. ॥೨೪॥

೧೨೩೬

ಕಾಯಕ್ಕೆ ಕಾಹ ಕೊಡುವರಲ್ಲದೆ, ಮನಕ್ಕೆ ಕಾಹ ಕೊಡುವರೆ ಕೆಳದಿ?
ಇಂತಪ್ಪ ನಲ್ಲನನೆಲ್ಲಿಯೂ ಕಾಣೆ,
ಇಂತಪ್ಪ ಪುರುಷನನೆಲ್ಲಿಯೂ ಕಾಣೆ,
ಇಂತಪ್ಪ ಚೋದ್ಯವನೆಲ್ಲಿಯೂ ಕಾಣೆ,
ಸದ್ಗುಣದ ಕಾಹನು ಮನಕ್ಕೆ ಕೊಟ್ಟನು,
ಉರಿಲಿಂಗದೇವನು, ಅತಿಚೋದ್ಯವೆನಗೆ. ॥೨೫॥

೧೨೩೭

ಕೂರ್ತಾಗ ಭಕ್ತ, ಮುನಿದಾಗ ಮಾನವ,
ಪಾತಕ ನಾನೇತಕ್ಕೆ ಬಾತೆ?
ಗೋಸುಂಬೆಯಂತೆ ಎನ್ನ ಮನ ಗಳಿಗೆಗೊಂದು ಪರಿ!
ಈಶ್ವರಾ, ನಿಮ್ಮ ಭಕ್ತರ ಉದಾಸೀನವ ಮಾಡಿ
ದಾಸೋಹವಿಲ್ಲದ ಅತಿದೂಷಕ ದ್ರೋಹಿ, ನಾನಯ್ಯಾ!
ಬೇಸತ್ತೆನೀ ಮನಕ್ಕೆ, ಏಸು ಬುದ್ಧಿಯ ಹೇಳಿದಡೂ ಕೇಳದು,
ಈಶಾ, ಸಂತೈಸಯ್ಯಾ, ಉರಿಲಿಂಗದೇವಾ. ॥೨೬॥

೧೨೩೮

ಗಾಡಿಗ ನಲ್ಲನು ಕಾಡಿಹನೆಲಗೆ.
ಕೂಡಿಹನಗಲಿಹ ಕಾಡಿಹನೆನ್ನ ಕೆಳದಿ, ನೀನಿದ ಮಾಣಿಸು.
ಅವನನಗಲದ ವಿರಹಿಯ ಕೂಟದ ಸುಖವನು
ಉರಿಲಿಂಗದೇವನು ಬಲ್ಲನು ಕೆಳದಿ. ॥೨೭॥

೧೨೩೯

ಠಕ್ಕನ ಠಕ್ಕಿಪ ತೆರನನು ಚದುರೆ ಚದುರಿಸದೆ ನೀನುಸುರಾ ಸತ್ಯವ,
ಜಪಿಸಲು ಸಿಕ್ಕುವ ನಲ್ಲನು, ಸತ್ಯ ಸತ್ಯವು ಕೇಳಾ ಕೆಳದಿ.
ಅವನುಂಬಲ್ಲಿ ಉಡುವಲ್ಲಿ ನೇಹವ ಬೆರಸಲು ಸಿಕ್ಕುವ,
ಬಿಡದಿರು ಉರಿಲಿಂಗದೇವನ. ॥೨೮॥

೧೨೪೦

ತೀರ್ಥಯಾತ್ರೆಯಲ್ಲಿ ಕೂಡೆಹೆನೆಂದು
ಏಗೈದು ಹೋಹ ಪರಿಯ ನೋಡಾ, ಅಯ್ಯಾ.
ಮನೆಗೆ ಬಂದ ಜಂಗಮಕ್ಕೆ ಇಲ್ಲಾ ಎಂದು,
ಜಗಜಾತ್ರೆಯಲ್ಲಿ ಅನ್ನವನಿಕ್ಕಿದಡೆ,
ಪುಣ್ಯವೆಂಬ ಅಣ್ಣಗಳಿಗೇಕೆ, ಸದಾಚಾರ ಉರಿಲಿಂಗತಂದೆ? ॥೨೯॥

೧೨೪೧

ನಲ್ಲನ ಕೂಡಿದ ಸುಖದ ಸುಗ್ಗಿಯ ನಾನೇನೆಂಬೆ ಕೇಳಾ ಕೆಳದಿ.
ಸುಖದ ಸವಿ ಸ್ರವಿಸಿ ಹರಿಯಿತ್ತು.
ಹೇಳಲು ನಾಚಿಕೆ, ಕೇಳಲೂ ನಾಚಿಕೆ, ಕೇಳಾ ಕೆಳದಿ.
ಸುಖರಸ ಮಡುಗಟ್ಟಿದಲ್ಲಿ,

ಉರಿಲಿಂಗದೇವನ ಕೂಡಿದ ಸುಖಸಾಗರದಲ್ಲಿ
ಕ್ರೀಡಿಸುತಿರ್ದೆ ಕೆಳದಿ. ॥೩೦॥

೧೨೪೨
ನಲ್ಲನ ಕೂಡುವನ್ನಕ್ಕ ಸುಖದ ಸುಗ್ಗಿಯನೇನೆಂದರಿಯೆ, ಕೇಳಾ ಕೆಳದಿ.
ಸುಖದ ಸವಿಗೆ ಸ್ರವಿಸಿ ಕೂಡಿದೆ ನೋಡವ್ವ,
ತವಕಕ್ಕೆ ತವಕ ಮಿಗೆ ಮೇಲುವರಿದು ಕೂಡಿದಂತೆ
ಕೂಡುವೆನುರಿಲಿಂಗದೇವನ. ॥೩೧॥

೧೨೪೩
ನಲ್ಲನ ಕೂಡುವ ಭರದಲ್ಲಿ ಎನ್ನುವನಿದಿರುವನೇನೆಂದರಿಯೆನು.
ನಲ್ಲನ ಕೂಡುವಾಗಳೂ ಎನ್ನುವ ನಲ್ಲನನೇನೆಂದರಿಯೆನು.
ಉರಿಲಿಂಗದೇವನ ಕೂಡಿದ ಬಳಿಕ
ನಾನೊ ತಾನೊ ಏನೆಂದರಿಯೆನು. ॥೩೨॥

೧೨೪೪
ನಲ್ಲನ ಕೂಡುವ ಸುಖಭೋಗದ್ರವ್ಯವನೆಲ್ಲಿಂದ ತಪ್ಪೆನು ಹೇಳಾ ಕೆಳದಿ?
ನಲ್ಲನ ಬೇಡಲು ನಾಚಿಕೆ ಎನಗೆ, ಮತ್ತೆಲ್ಲಿಯು ನಿಲ್ಲೆನು.
ಕೂಡುವ [ಶಕ್ತಿ]ಯ ತಾನರಿದಿಹನು ಕೇಳಾ ಕೆಳದಿ.
ಹೆಣ್ಣು ಹೆಣ್ಣ ಕೂಡುವ ಸುಖವ ಮಣ್ಣಿನಲ್ಲಿ ನೆರಹುವೆನು,
ಉರಿಲಿಂಗದೇವನ ಕೂಡುವೆನು. ॥೩೩॥

೧೨೪೫
ನಲ್ಲನ ಕೂಡೆಹೆನೆಂದು ನೆನೆವನ್ನಬರ
ತವಕದಿಂದ ಮೇಲುವಾಯ್ದೆ ನೋಡವ್ವಾ,
ಮನದೊಳಗೆ ಮನವಾಗಿ, ಪ್ರಾಣದೊಳಗೆ ಪ್ರಾಣವಾಗಿ,
ಕಾಯದೊಳಗೆ ಕಾಯವಾಗಿ,
ತವಕಕ್ಕೆ ತವಕ ಮಿಗೆ ಮೇಲುವರಿದು ಕೂಡಿದಂತೆ
ಕೂಡುವೆ ಉರಿಲಿಂಗದೇವನ. ॥೩೪॥

೧೨೪೬
ನಲ್ಲನ ರೂಪೆನ್ನ ನೇತ್ರವ ತುಂಬಿತ್ತು,
ನಲ್ಲನ ನುಡಿಯೆನ್ನ ಶ್ರೋತ್ರವ ತುಂಬಿತ್ತು,

ನಲ್ಲನ ಸುಗಂಧವೆನ್ನ ಘ್ರಾಣವ ತುಂಬಿತ್ತು,
ನಲ್ಲನ ಚುಂಬನವೆನ್ನ ಜಿಹ್ವೆಯ ತುಂಬಿತ್ತು,
ನಲ್ಲನ ಆಲಿಂಗನವೆನ್ನ ಅಂತರಂಗ ಬಹಿರಂಗದಲ್ಲಿ.
ನಲ್ಲನ ಪ್ರೇಮವೆನ್ನ ಮನವ ತುಂಬಿತ್ತು,
ಕೂಡಿ ಸುಖಿಯಾದೆ ಉರಿಲಿಂಗದೇವನ. ॥೩೫॥

೧೨೪೭
ನಲ್ಲನೊಲ್ಲನೆಂದು ಮುನಿದು ನಾನಡಗಲು
ಅಡಗುವ ಎಡೆಯೆಲ್ಲಾ ತಾನೆ, ನೋಡೆಲಗವ್ವಾ,
ನಲ್ಲ ನೀನಿಲ್ಲದೆಡೆಯಿಲ್ಲ.
ಅಡಗಲಿಕಂಬಿಲ್ಲಾಗಿ ಮುನಿದು ನಾನೇಗುವೆನು?
ಶರಣುಗತಿವೋಗುವೆನು ಉರಿಲಿಂಗದೇವನ. ॥೩೬॥

೧೨೪೮
ನಲ್ಲ ಮುಳಿದು ಹೋಗುತ್ತ
ಎನ್ನ ಮನವ ನಂಬದೆ ಮೈಗಾಹಾಗಿ ಇರಿಸಿದನು.
ಉರಿಲಿಂಗದೇವನು ತಾ ಬಂದು ನೆರೆವನ್ನಬರ. ॥೩೭॥

೧೨೪೯
ನೀನೇ ಗತಿ ಎನಗಿನ್ನೊಂದರಿಯೆ,
ನೀ ನಡೆಸಲು ನಡೆವೆ, ನೀ ನುಡಿಸಲು ನುಡಿವೆ.
ನೀನಿಲ್ಲದರಿಯೆನು ಕೇಳಾ,
ನೀನೆ ಗತಿ ನೀನೆ ಮತಿ ಎನಗಯ್ಯಾ,
ನಿಮ್ಮಾಣೆ ಉರಿಲಿಂಗದೇವಾ. ॥೩೮॥

೧೨೫೦
ನೆನಹಿನ ನಲ್ಲನು ಮನೆಗೆ ಬಂದಡೆ ನೆನೆವುದಿನ್ನಾರನವ್ವಾ?
ನೆರೆವ ಕ್ರೀಯಲ್ಲಿ ನೆರೆದು, ಸುಖಿಸುವುದಲ್ಲದೆ
ನೆನೆವುದಿನ್ನಾರನವ್ವಾ?
ನೆನಹಿನ ನಲ್ಲ ಉರಿಲಿಂಗದೇವನ ಕಂಡ ಬಳಿಕ
ನೆನವುದಿನ್ನಾರ ಹೇಳವ್ವಾ? ॥೩೯॥

೧೨೫೧
ಮಂಗಳಮಯಲಿಂಗವ ಮನ ಹಿಂಗದೆ ಸುಸಂಗಿಯಾಗಿ,
ಮಹಾಲಿಂಗದ ಪ್ರಸಂಗಿಯಾಗಿ ಇಪ್ಪಾತನ ಅಂಗವೆನಗೆ ಮಂಗಳತರಂಗ.
ಆತನ ಪ್ರಸಂಗದಲ್ಲಿರಿಸಾ, ಉರಿಲಿಂಗದೇವಾ! ॥೪೦॥

೧೨೫೨
ಮಹಾಬೆಳಗಿನ ಲಿಂಗವ ಕೈಯಲ್ಲಿ ಕೊಟ್ಟಡೆ, ಕೊರಳಲ್ಲಿ ಕಟ್ಟಿಕೊಳ್ಳಲೇಕೆ?
ನೋಡುವ ಕಣ್ಣು ಮುಚ್ಚಿದ ಮತ್ತೆ, ತನಗೆ ಎಡೆಯಾಟವುಂಟೆ?
ಲಿಂಗವ ಹಿಂಗದೆ ಅಂಗೈಯಲ್ಲಿ ಕೊಟ್ಟ ಮತ್ತೆ,
ಚಿತ್ತದಲ್ಲಿ ಹಿಂಗದಿರಬೇಕು.
ಉರಿಲಿಂಗತಂದೆಯ ಸಿರಿಯ ಭಾಷೆ. ॥೪೧॥

೧೨೫೩
ಮಾನಸದಲ್ಲಿಪ್ಪನು, ಬುದ್ಧಿಯಲ್ಲಿಗೆ ಹೋಹನು.
ಚಿತ್ತದಲ್ಲಿ ನೆಲೆ ಎಮ್ಮ ನಲ್ಲಗೆ, ಕೇಳವ್ವಾ, ಕೆಳದಿ.
ಅಹಂಕಾರ ಕೂಡಿ ಅಹಂಕಾರದ ನಲ್ಲನ ಪರಿಕರ
ವಿಪರೀತ ಅಹಂಕಾರ.
ಅಹಂಕಾರರೀ ಮತ್ತೆ ಯಾರಲ್ಲಿ ಕೂಡಿ ಸುಖಿಸುವೆ?
ಇವರೆಲ್ಲರ ಮುಂದೆ ತನ್ನ ಹಿಡಿದು ನೆರೆದಡೆ
ಅವರೆನ್ನನೇಗೆಯ್ವರು ಉರಿಲಿಂಗದೇವಾ. ॥೪೨॥

೧೨೫೪
ಲಿಂಗ ಕರಸ್ಥಲಕ್ಕೆ ಬಂದ ಮತ್ತೆ ಕಂಗಳು ತುಂಬಿವರಿಯದಿರ್ದಡೆ,
ಆ ಲಿಂಗಪೂಜೆ ಯಾಕೆ?
ಲಿಂಗ ಜಿಹ್ವೆಯಲ್ಲಿ ನೆನೆವಾಗ ಅಂಗವ ಮರೆಯದಿರ್ದಡೆ
ಆ ಲಿಂಗದ ನೆನಹದೇಕೆ?
ಲಿಂಗವಾರ್ತೆಯ ಕಿವಿತುಂಬ ಕೇಳಿ
ಸರ್ವಾಂಗ ಝೊಂಪಿಸಿ ಮನಮಗ್ನವಾಗಿ ಇರದಿರ್ದಡೆ,
ಉರಿಲಿಂಗತಂದೆಯ ಸಿರಿಯ ನೆನೆಯಲೇಕೆ? ॥೪೩॥

೧೨೫೫
ಲೋಕದಂತೆ ಬಾರರು, ಲೋಕದಂತೆ ಇರರು,
ಲೋಕದಂತೆ ಹೋಗರು, ನೋಡಯ್ಯ.

ಪುಣ್ಯದಂತೆ ಬಪ್ಪರು, ಜ್ಞಾನದಂತೆ ಇಪ್ಪರು,
ಮುಕ್ತಿಯಂತೆ ಹೋಹರು, ನೋಡಯ್ಯಾ.
ಉರಿಲಿಂಗದೇವಾ, ನಿಮ್ಮ ಶರಣರು ಉಪಮಾತೀತರಾಗಿ
ಉಪಮಿಸಬಾರದು. ॥೪೪॥

೧೨೫೬
ಶಿವಶಿವಾ ಮಹಾದೇವಾ, ಉರಿಲಿಂಗದೇವನೆ ಚೆಲುವನು.
ಶಿವಶಿವಾ ಮಹಾದೇವಾ, ಉರಿಲಿಂಗದೇವನೆ ಗರುವನು.
ಶಿವಶಿವಾ ಮಹಾದೇವಾ, ಉರಿಲಿಂಗದೇವನೆ ಹಿರಿಯನು.
ಶಿವಶಿವಾ ಮಹಾದೇವಾ, ಉರಿಲಿಂಗದೇವನೆ ಪುರುಷನು.
ಶಿವಶಿವಾ ಮಹಾದೇವಾ, ಉರಿಲಿಂಗದೇವನೆ ದೇವನು. ॥೪೫॥

೧೨೫೭
ಶ್ರುತಿಭ್ರಾಂತು ನಿರಸನ: ಶಿವಾಗಮಪ್ರತಿಷ್ಠೆ,
ಕುಲಾಭಿಮಾನ ನಿರಸನ: ಶಿವಕುಲಪ್ರತಿಷ್ಠೆ,
ಅನ್ಯದೈವನಿರಸನ: ಏಕೋದೇವಪ್ರತಿಷ್ಠೆ,
ಸ್ಥಾವರನಿರಸನ: ಏಕಲಿಂಗನಿಷ್ಠಾಪ್ರತಿ[ಷ್ಠೆ].
ಪರಮತ ತಿರಸ್ಕಾರ ಸ್ವಮತಸ್ಥಾಪನದಿಂ ಮಾಹೇಶ್ವರನ ನಿಜಸ್ಥಲ.
ಅನಂತ ವೇದಶಾಸ್ತ್ರಪುರಾಣಾಗಮತರ್ಕಂಗಳ
ಆತ್ಮ ಮಾಡಿದನಲ್ಲದೆ ಆತ್ಮನನವು ಮಾಡಿದುದಿಲ್ಲ.
ಎನ್ನಂತರಂಗದ ಅರಿವಿನ ಮೂರ್ತಿಯಾಗಿ
ಎನ್ನ ಉರಿಲಿಂಗದೇವರು ಸಂಕಲ್ಪಿಸಿ ಆಗೆಂದಡಾದವು. ॥೪೬॥

೧೨೫೮
ಸಕಲಶ್ರುತಿಗಳ ಮುಂದಿರ್ದವರ ಸವಿಮಾತಿನ ವಶಕ್ಕೆ ಸಿಕ್ಕದೆ,
ಅತೀತವಾದ ವಸ್ತುವ ಬೇಡಿಕೊಳ್ಳಿರೆ.
ಸಕಲಾತ್ಮರ ಮುಂದಿರ್ದವರ ತರ್ಕಕ್ಕೆ ಉರಿಲಿಂಗವಾಗಿ ಸಿಕ್ಕದೆ
ಅತೀತವಾದ ವಸ್ತುವ ಬೇಡಿಕೊಳ್ಳಿರೆ.
ಇಂತು ಸಕಲಾತ್ಮರ ಹೊಂದಿಯೂ ಹೊಂದದೆ
ನಿತ್ಯಸಿಂಹಾಸನದ ಮೇಲೆ ನಿತ್ಯನಾಗಿರ್ದ
ನಮ್ಮ ಉರಿಲಿಂಗದೇವನ ಬೇಡಿಕೊಳ್ಳಿರೆ. ॥೪೭॥

೧೨೫೯
ಹಾಡುವೆ ನಲ್ಲನ, ಬೇಡುವೆ ನಲ್ಲನ,
ಕೂಡುವೆ ನಲ್ಲನ ನಿಚ್ಚ ನಿಚ್ಚ ನೋಡಾ.
ಅವನೆ ಸಖನೆನಗೆ, ಅವನೆ ಸುಖವೆನಗೆ, ಅವನೆ ಪ್ರಾಣವು ಕೇಳಲೆ ಕೆಳದಿ.
ಉರಿಲಿಂಗದೇವನೆನಗೆ ಸಂಜೀವನ ಕೆಳದಿ. ॥೪೮॥

*

ಉರಿಲಿಂಗಪೆದ್ದಿಗಳ ವಚನ

೧೨೬೦
ಅಂಗದ ಮೇಲೆ ಲಿಂಗಸಂಬಂಧಿಯಾಗಲು
ಸಾಲೋಕ್ಯವೆಂದರೇನೋ?
ಗುರುಲಿಂಗಜಂಗಮಸನ್ನಿಧಿ ದಾಸೋಹದೊಳಗಿರಲು
ಸಾಮೀಪ್ಯವೆಂದರೇನೋ?
ಸರ್ವಾಂಗಮನ ಇಂದ್ರಿಯಂಗಳ ಸಂಗದೊಳಗಿರಲು
ಸಾರೂಪ್ಯವೆಂದರೇನೊ?
ಚತುರ್ದಶಭುವನಂಗಳನೊಳಕೊಂಡ ಮಹಾಘನಲಿಂಗವು
ತನ್ನ ಮನದೊಳಗವಗವಿಸಿ ನೆನವುತ್ತಿರಲು ಸಾಯುಜ್ಯವೆಂದರೇನೊ?
ಇಂತೀ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯವೆಂಬ
ಚತುರ್ವಿಧಪದಂಗಳೆಂದರೇನೊ?
ಎಲೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ,
ನಿಮ್ಮನರಿದ ಶರಣಂಗೆ. ॥೧॥

೧೨೬೧
ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ,
ಮರಳಿ ಅನ್ಯದೈವಂಗಳನಾರಾಧಿಸುವ ಕುನ್ನಿಗಳು ನೀವು ಕೇಳಿಭೋ.
ವಿಷ್ಣುವೇ ದೈವವೆಂದು ಆರಾಧಿಸಿದ ಬಲಿಗೆ ಬಂಧನವಾಯಿತ್ತು.
ವಿಷ್ಣುವೇ ದೈವವೆಂದು ಆರಾಧಿಸಿದ ಕರ್ಣನ ಕವಚ ಹೋಯಿತ್ತು.
ವಿಷ್ಣುವೇ ದೈವವೆಂದು ಆರಾಧಿಸಿದ ನಾಗಾರ್ಜುನನ ಶಿರ ಹೋಯಿತ್ತು.
ಅದಂತಿರಲಿ,
ಬ್ರಾಹ್ಮಣನೇ ದೈವವೆಂದು ಆರಾಧಿಸಿದ ಗೌತಮಂಗೆ ಗೋವಧೆಯಾಯಿತ್ತು.
ಬ್ರಾಹ್ಮಣನೇ ದೈವವೆಂದು ಆರಾಧಿಸಿದ ದಕ್ಷಂಗೆ ಕುರಿದಲೆಯಾಯಿತ್ತು.
ಮೈಲಾರನೇ ದೇವರೆಂದಾರಾಧಿಸಿದಾತನು

ಕೊರಳಲ್ಲಿ ಕವಡೆಯ ಕಟ್ಟಿ, ನಾಯಾಗಿ ಬೊಗಳುತಿರ್ಪ.
ಭೈರವನೇ ದೇವರೆಂದಾರಾಧಿಸಿದಾತನು
ಕೊರಳಲ್ಲಿ ಕವಡೆಯ ಕಟ್ಟಿ, ಕುರುಳ ಬೆರಳ ಕಡಿದಿಕ್ಕಿ, ಬಾಹಿರನಾದನು.
ಮಾಯಿರಾಣಿಯೇ ದೈವವೆಂದು ಆರಾಧಿಸಿದಾತನು
ಕೊರಳಿಗೆ ಕವಡಿಯ ಕಟ್ಟಿ, ತಲೆಯಲ್ಲಿ ಕೆರಹ ಹೊತ್ತು,
ಬೇವಿನ ಸೊಪ್ಪನುಟ್ಟು ಲಜ್ಜೆಯ ನೀಗಿದ.
ಈ ಬಿನುಗು ದೈವಂಗಳ ಭಕ್ತಿ, ಬಣಗು ನಾಯಿ ಒಣಗಿದೆಲುವ ಕಚ್ಚಿಕೊಂಡು
ಕಂಡ ಕಂಡೆಡೆಗೆ ಹರಿದಂತಾಯಿತ್ತು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨॥

೧೨೬೨

ಅಂಗಭಾವ ಹಿಂಗದೆ ಮಜ್ಜನಕ್ಕೆರೆವಿರಿ, ಅರ್ಪಿತವನರಿಯದೆ ಅರ್ಪಿಸುವಿರಿ.
ಅರ್ಪಿತ ಸವೆಯಿತ್ತೆ? ಲಿಂಗ ಸವೆಯಿತ್ತೆ?
"ಕರ್ಮಣಾ ಮನಸಾ ವಾಚಾ ಗುರೂಣಾಂ ಭಕ್ತಿವತ್ಸಲ
ಶರೀರಮರ್ಥಂ ಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್"
ಇಂತೆಂದುದಾಗಿ, ತನುವರ್ಪಿತ ಗುರುವಿಂಗೆ,
ಮನವರ್ಪಿತ ಲಿಂಗಕ್ಕೆ, ಧನವರ್ಪಿತ ಜಂಗಮಕ್ಕೆ.
ಇಂತೀ ತ್ರಿವಿಧಕ್ಕೆ ಅರಿದರ್ಪಿಸಬಲ್ಲಡೆ ಅರ್ಪಿತ.
ಈ ತ್ರಿವಿಧ ಸವೆಯದೆ ಅರ್ಪಿಸುವ ಅರ್ಪಿತವೆಂತೊ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ? ॥೩॥

೧೨೬೩

ಅಂಗೈಯ ಲಿಂಗವ ಕಂಗಳು ತುಂಬಿ ನೋಡಿ ಮನ ಹಾರೈಸಿದಲ್ಲಿ
ಅಂಗೇಂದ್ರಿಯಂಗಳೆಲ್ಲ ಲಿಂಗೇಂದ್ರಿಯಂಗಳಾದವು.
ಅಂಜದಿರು ಮನವೇ, ಲಿಂಗವು ನಿನಗೆ ದೂರನೆಂದು.
ಮನೋಮಧ್ಯದೊಳಿಪ್ಪ, ಅಂಗದ ಕಂಗಳಲಿಪ್ಪ, ಭಾವದ ಪ್ರಾಣದಲ್ಲಿಪ್ಪ.
ಅಂಗಪ್ರಾಣಭಾವ ಸರ್ವಾಂಗಲಿಂಗವಾದ ಬಳಿಕ,
ಲಿಂಗಮಧ್ಯಪ್ರಾಣ, ಪ್ರಾಣಮಧ್ಯಲಿಂಗ.
ಇದು ಕಾರಣ ಉತ್ಪತ್ತಿಸ್ಥಿತಿಲಯವುಂಟೆಂದು ಅಂಜದಿರು.
ಅಂಜಿಕೆ ಇಲ್ಲ, ಅಳುಕಿಲ್ಲ, ಬಂದುದೇ ಲಿಂಗದ ಲೀಲೆ,
ಇದ್ದುದೇ ಲಿಂಗದಾನಂದ, ಭಾವಲೀಯವಾದುದೇ ಲಿಂಗನಿರವಯವು.
ಇದು ಸತ್ಯ, ಶಿವ ಬಲ್ಲ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೪॥

೧೨೬೪

ಅಂಡಜನುದರದಲ್ಲಿ ತಂದಿಕ್ಕಿದಾ ತತ್ತಿ,
ಮುಂದಣಾಧಿಕ್ಯವನರಿಯಬಲ್ಲುದೆ ನೋಡಾ.
ಪಿಂಡಾಧಿಕ್ಯದ ಸಂದಳಿಯದ ಮುನ್ನ ಮುಂದೆ ಬಂದಿಪ್ಪುದು ಅದು ನೋಡಾ.
ಒಬ್ಬ ಹೆಂಗೂಸಿಂಗೆ ಗಂಡು ನಾಲ್ವರು,
ಗರ್ಭಿಣಿಯಾಗದ ಮುನ್ನ ಪ್ರಸೂತೆ,
ಬಂಜೆಯ ಮಕ್ಕಳು ಮೂವರ್ರೈದಾರೆ,
ನಾಲ್ವರ ಮೂಲವರಿಯದ ಕಾರಣ ಧರೆಯ ಮೇಲೆನಿಸಿದವು?
ಉಪಮೆಗುಡದ ಬಣ್ಣ ನೋಡಿ ಸಿಲಿಕಿದ ಕೂಟ
ಉಂಡು ದಣಿಯದ ತೃಪ್ತಿ
[ಘ್ರಾಣೇ]ಂದ್ರಿಯದಲ್ಲಿ ಸವಿದು ಹರಿಯದ ಪರಿಮಳ
ಸಂದು ಸವೆದೊಂದಾದ ಕೂಟ
ನೋಡುವ ನೋಟವರತು ವಾಸಿಸುವ ವಾಸನೆ ಅರತು.
ಆಚಾರ ಪ್ರಾಣವಾಗಿ ಅರಿವರತು
ಮರಹು ನಷ್ಟವಾದಾತನೈಕ್ಯನು.
ಆಚಾರವರತು ಅನಾಚಾರ ನಷ್ಟವಾದಾತನನುಪಮ ಮಹಿಮನು.
ಶುದ್ಧ ಸಿದ್ಧ ಪ್ರಸಿದ್ಧಕ್ಕಾತ ನೆಲೆಮನೆ,
ಆತನ ಮೀರುವದೊಂದೊಡ್ಡವಣೆಯ ಕಾಣೆ.
ಕರುಣಾಮೃತಪೂರ್ಣವಾದ ಕುಂಭಕ್ಕೆ ವಿರಳ ಉಂಟೆ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಯ್ಯನನೊಡಗೂಡಿ
ಸಂದಳಿದ ಶರಣಂಗೆ ಬಳಕೆಯ ಬೇಟದ ಬಣ್ಣ ಉಂಟೆ? ॥೫॥

೧೨೬೫

ಅಂತರಂಗ ಬಹಿರಂಗವೆಂದೆಂಬರು,
ಆವುದು ಮುಂದು ಆವುದು ಹಿಂದೆಂದರಿಯರು.
ಎಳ್ಳೊಳಗಣ ಎಣ್ಣೆ ಕಲ್ಲೊಳಗಣ ಹೇಮ ಹಾಲೊಳಗಣ ತುಪ್ಪ
ಕಾಷ್ಠದೊಳಗಣ ಅಗ್ನಿಯಿಪ್ಪಂತಿಪ್ಪ ಚಿನುಮಯ ಮೂರ್ತಿಯನು
ಶ್ರೀಗುರು ಹಸ್ತಾಬ್ಜಮಂ ಶಿಷ್ಯನ ಮಸ್ತಕದಲ್ಲಿಟ್ಟು
ಆಕರ್ಷಣಂ ಮಾಡಿ ತೆಗೆದು, ತಲ್ಲಿಂಗವನಂಗದಲ್ಲಿ ಸ್ಥಾಪ್ಯವಂ ಮಾಡಿ
ಸುಜ್ಞಾನಕ್ರೀಯ ಉಪದೇಶವಂ ಮಾಡಲು
ಘಟದ ಹೊರಗಿಹ ಅನಲನು ಆ ಘಟವ ಭೇದಿಸಿ
ತಜ್ಜಲವ ಹಿಡಿದು ತೆಗೆದುಕೊಂಬಂತೆ
ಬಾಹ್ಯದಿಂ ಮಾಡುವ ಸತ್ಕ್ರಿಯಾವರ್ತನದಿಂ

ಜೀವ ಶಿವ ಸಂಗವಹ ಬಟ್ಟೆಯನರಿಯದೆ ಹಲವು ಬಟ್ಟೆಯಲ್ಲಿ ಹರಿವರು,
ಅಜ್ಞಾನಸಂಬಂಧಿಗಳು, ಗುರುವಚನಪರಾಙ್ಮುಖರು,
ಕರ್ಮನಿರ್ಮಲವಾಗದ ಜಡರುಗಳು, ಲಿಂಗನಿಷ್ಠಾವಿರಹಿತರು,
ನಿಮ್ಮನೆತ್ತಬಲ್ಲರಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೬॥

೧೨೬೬

ಅಂತರಂಗ ಬಹಿರಂಗ ಪರಮಾಕಾಶದ ಪರಬ್ರಹ್ಮಸ್ಥಾನ :
ಬ್ರಹ್ಮರಂಧ್ರದಲ್ಲಿ ಪರಬ್ರಹ್ಮ ಪರಮಾತ್ಮನು,
ನಿಷ್ಕಳ ನಿರವಯ ನಿರುಪಮ ಶ್ರೀಗುರುಮೂರ್ತಿ ಲಿಂಗಭರಿತವಾಗಿಪ್ಪನು,
'ಶಿವಂ ಪರಮಾಕಾಶಮಧ್ಯೇ ಧ್ರುವಂ ತತ್ವಾಧಿಕಂ' ಎಂದುದಾಗಿ,
ಇದುಕಾರಣ,
ನಾನಾ ವೇದ ಶಾಸ್ತ್ರ ಪುರಾಣ ಆಗಮಂಗಳ ಮತವು, ಇದು ಶ್ರುತವು.
ಭ್ರೂಮಧ್ಯದಲ್ಲಿ ಅಂತರಾತ್ಮನು
ಸಕಲ ನಿಷ್ಕಲ ಪರಂಜ್ಯೋತಿರ್ಲಿಂಗಮೂರ್ತಿಭರಿತವಾಗಿಪ್ಪನು.
'ಪರಾತ್ಪರಂ ಪರಂಜ್ಯೋತಿಭ್ರೂಮಧ್ಯೇ ತು ವ್ಯವಸ್ಥಿತಂ' ಎಂದುದಾಗಿ.
ಹೃದಯಕಮಲಮಧ್ಯದಲ್ಲಿ ಜೀವಾತ್ಮನು
ಕೇವಲ ಸಕಲಜಂಗಮಮೂರ್ತಿ ಲಿಂಗಭರಿತವಾಗಿಪ್ಪನು.
'ಹೃದಯಮಧ್ಯೇ ವಿಶ್ವೇದೇವಾ ಜಾತವೇದಾ ವರೇಣ್ಯಃ' ಎಂದುದಾಗಿ.
ಇಂತು ಪರಬ್ರಹ್ಮ, ಬ್ರಹ್ಮರಂಧ್ರ ಭ್ರೂಮಧ್ಯ ಹೃದಯಸ್ಥಾನದಲ್ಲಿ
ನಿಷ್ಕಲ, ಸಕಲನಿಷ್ಕಲ, ಸಕಲ
ಪರಮಾತ್ಮ ಅಂತರಾತ್ಮ ಜೀವಾತ್ಮನೆಂದೆನಿ[ಸೆ]
ಶ್ರುತ ದೃಷ್ಟ ಅನುಮಾನದಿಂ ಕಂಡು
ವಿನೋದ ಕಾರಣ ಮಾಯಾವಶವಾಗಿ, ಪಂಚಭೂತಂಗಳನ್ನು ಸೃಜಿಸಿ,
ಸಕಲಪ್ರಪಂಚವನೂ ಬೆರಸಿ, ಮಾಯಾಧೀನವಾಗಿ ವಿನೋದಿಸಿ
ಆ ಮಾಯೆಯನೂ ಸಕಲಪ್ರಪಂಚವನೂ ತ್ಯಜಿಸಲಿಕೆ
ಬಹಿರಂಗದಲಿ ಶ್ರೀಗುರುರೂಪಾಗಿ ಬೋಧಿಸಿ
ಪರಮಾತ್ಮನು ಪರಬ್ರಹ್ಮವಾಗಿ ನಿಜಪದವನೈದಿ ಸುಖಿಯಾಗಿಪ್ಪನು.
ಇಂತಹ ಅರಿವೇ ಪರಬ್ರಹ್ಮ, ಮರವೆಯೇ ಮಾಯಾಸಂಬಂಧವಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ . ॥೭॥

೧೨೬೭

ಅಂತ್ಯಜನಾಗಲಿ–ಅಗ್ರಜನಾಗಲಿ, ಮೂರ್ಖನಾಗಲಿ–ಪಂಡಿತನಾಗಲಿ
ಜಪಿಸುವುದು ಶ್ರೀ ಪಂಚಾಕ್ಷರಿಯ.

ಆ ಜಪದಿಂದ ರುದ್ರನಪ್ಪುದು ತಪ್ಪದು. ಅದೆಂತೆಂದಡೆ:ಲೈಂಗೇ
"ಅಂತ್ಯಜೋಪ್ಯಗ್ರಜೋ ವಾಪಿ ಮೂರ್ಖೋ ವಾ ಪಂಡಿತೋಪಿ ವಾ
ಪಂಚಾಕ್ಷರೀಂ ಜಪೇನ್ನಿತ್ಯಂ ಸ ರುದ್ರೋ ನಾತ್ರ ಸಂಶಯಃ"
ಇಂತೆಂದುದಾಗಿ,
ಇದು ಸತ್ಯ, ಇದು ಸತ್ಯ, ಇದು ಸತ್ಯ ಜಪಿಸುವುದು,
ಶಪಥ ಮಾಡಿದೆ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೮॥

೧೨೬೮

ಅಕಟಕಟಾ! ಬೆಡಗು ಬಿನ್ನಾಣ ಒಂದೇ ನೋಡಾ.
ಓಂ ನಮಃ ಶಿವಾಯ, ಓಂ ನಮಃ ಶಿವಾಯ,
ಓಂ ನಮಃ ಶಿವಾಯ, ಎಂಬುದೆ ಯಂತ್ರ.
ಓಂ ನಮಃ ಶಿವಾಯ, ಓಂ ನಮಃ ಶಿವಾಯ,
ಓಂ ನಮಃ ಶಿವಾಯ, ಎಂಬುದೆ ತಂತ್ರ.
ಓಂ ನಮಃ ಶಿವಾಯ, ಓಂ ನಮಃ ಶಿವಾಯ,
ಓಂ ನಮಃ ಶಿವಾಯ, ಎಂಬುದೆ ಮಂತ್ರ.
ಪ್ರಣಮಪಂಚಾಕ್ಷರಿಯ ಮಂತ್ರವನುಚ್ಚರಿಸುವರೆಲ್ಲರೂ
ಅಪ್ರಮಾಣಿಕರು ನೋಡಾ,
ಆ ಪ್ರಣಮ ಪಂಚಾಕ್ಷರ ಮಂತ್ರವ ವಿಶ್ವಾಸದಿಂದವಗ್ರಹಿಸಿ
ಮಂತ್ರಾರ್ಥವ ತಿಳಿದು ಉಚ್ಚರಿಸಲರಿಯದ ಕಾರಣ,
ಮತ್ತೆ ಅಕಾರ ಉಕಾರ ಮಕಾರದ ಮೂಲವಂ ಭೇದಿಸಿ,
ಓಂಕಾರದ ನೆಲೆಯಂ ತಿಳಿದು,
ಆ ಓಂಕಾರದಲ್ಲಿ ಪಂಚವರ್ಣದ ಲಕ್ಷಣವನರಿದು,
ಓಂ ನಮಃ ಶಿವಾಯ, ಓಂ ನಮಃ ಶಿವಾಯ, ಓಂ ನಮಃ ಶಿವಾಯ
ಎಂದು ಸ್ಮರಿಸಬಲ್ಲಡೆ ಇದೆ ಜಪ, ಇದೇ ತಪ, ಇದೇ ಸರ್ವಸಿದ್ಧಿಯಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೯॥

೧೨೬೯

ಅಕಾರ ಉಕಾರ ಮಕಾರಂಗಳು ಪ್ರಕೃತಿಯಲ್ಲಿ ನಾದ ಬಿಂದು ಕಳೆಯಾದವು.
ಅಕಾರ ನಾದ, ಉಕಾರ ಬಿಂದು, ಮಕಾರ ಕಳೆ.
ಅಕಾರ ರುದ್ರ, ಉಕಾರ ಈಶ್ವರ, ಮಕಾರ ಸದಾಶಿವ.
ಅಕಾರ ಉಕಾರ ಮಕಾರಂಗಳಿಗೆ ನಾದ ಬಿಂದು ಕಳೆಯೇ ಆಧಾರ.
ನಾದ ಬಿಂದು ಕಳೆಗಳಿಗೆ ಪ್ರಕೃತಿಯೇ ಆಧಾರ.
ಆ ಪ್ರಾಣಕ್ಕೆ ಲಿಂಗವೇ ಆಧಾರ.

ಅ ಎಂಬಲ್ಲಿ ನಾದವಾಯಿತ್ತು. ಉ ಎಂಬಲ್ಲಿ ನಾದ ಉಳಿದಿತ್ತು.
ಮ ಎಂಬಲ್ಲಿ ಬಿಂದು ಒಂದುಗೂಡಲು ಓಂಕಾರಶಕ್ತಿಯಾಗಿ ತೋರಿತ್ತು.
ಆ ಓಂಕಾರಶಕ್ತಿಯಲ್ಲಿ ನಕಾರ ಮಕಾರ ಶಿಕಾರ ವಕಾರ
ಯಕಾರಗಳೆಂಬ ಪಂಚಾಕ್ಷರಗಳುದಯಿಸಿದವು.
ನಕಾರವೇ ಬ್ರಹ್ಮ, ಮಕಾರವೇ ವಿಷ್ಣು, ಶಿಕಾರವೇ ರುದ್ರ,
ವಕಾರವೇ ಈಶ್ವರ, ಯಕಾರವೇ ಸದಾಶಿವ.
ಈ ಪಂಚ ಶಾಖೆಗಳ ವಕಾರವೇ ದೇವನ ನೆತ್ತಿಯಲ್ಲಿ
ಆ ಓಂಕಾರ ಶಕ್ತಿ ಸ್ವರೂಪಿಯಾಗಿ ಕಾಣಿಸಿತ್ತು.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೦॥

೧೨೭೦

ಅಗ್ನಿಮುಟ್ಟಲು ತೃಣವಗ್ನಿಯಪ್ಪುದು ತಪ್ಪದಯ್ಯ.
ಗುರುಪ್ರಸಾದವಂಗವ ಸೋಂಕಿದಲ್ಲಿ ಸರ್ವಾಂಗ ಗುರುವಪ್ಪುದು ತಪ್ಪದಯ್ಯ.
ಲಿಂಗಪ್ರಸಾದ ಮನವ ಸೋಂಕಿದಲ್ಲಿ ಮನ ಲಿಂಗವಪ್ಪುದು ತಪ್ಪದಯ್ಯ.
ಜಂಗಮಪ್ರಸಾದ ಅರಿವ ಸೋಂಕಿದಲ್ಲಿ
ಅಖಂಡಿತ ಪ್ರಸನ್ನಪ್ರಸಾದವಪ್ಪುದು ತಪ್ಪದಯ್ಯ.
ಶಿವಶಿವಾ, ಪ್ರಸಾದದ ಮಹಿಮೆಯನೇನೆಂದುಪಮಿಸುವೆ?
ಪ್ರಸಾದವೇ ಗುರು, ಪ್ರಸಾದವೇ ಲಿಂಗ, ಪ್ರಸಾದವೇ ಜಂಗಮ,
ಪ್ರಸಾದವೇ ಪರಾತ್ಪರ, ಪ್ರಸಾದವೇ ಪರಮಾನಂದ,
ಪ್ರಸಾದವೇ ಪರಮಾಮೃತ, ಪ್ರಸಾದವೇ ಪರಮಜ್ಞಾನ,
ಪ್ರಸಾದವೇ ವಾಙ್ಮನೋತೀತ, ಪ್ರಸಾದವೇ ನಿತ್ಯಪರಿಪೂರ್ಣ.
ಇಂತಪ್ಪ ಪ್ರಸಾದವ ಕೊಂಡು ಬದುಕಿದೆನಯ್ಯ.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೧॥

೧೨೭೧

ಅಚ್ಚಭವಿತನದಿಂದ ನಿಚ್ಚನರಕಕ್ಕಿಳಿವ
ಕರ್ಮಚಾಂಡಾಲವಿಪ್ರರು ನೀವು ಕೇಳಿರೇ!
ಈಶಭಕ್ತರ ಕಂಡು ದೂಷಿಸಿ ನರಕಕ್ಕಿಳಿವ
ಶಾಪಹತರು ನೀವು ಕೇಳಿರೇ!
ವಿಭೂತಿಯನೊಲ್ಲದೆ ಬಿಳಿಯ ಮಣ್ಣನಿಡುವ
ಶ್ವಪಚರೆಲ್ಲಾ ನೀವು ಕೇಳಿರೇ!
ಹರಿಯೂ ಹರನೂ ಸರಿಯೆಂದು ಗಳುಹುವ
ಮರುಳ ವಿಪ್ರರು ನೀವು ಕೇಳಿರೇ!

ಆದಿಯಲ್ಲಿ ಶ್ರೀವಿಷ್ಣು ಮೇದಿನಿಯರಿಯೆ
ಒಂದು ನಯನವನು ಪುಷ್ಪವಾಗಿತ್ತು ಪಡೆಯನೇ ವೈಕುಂಠವನು?
ವೇದಕ್ಕೆ ನೆಲಗಟ್ಟಾವುದೆಂದು ಬಲ್ಲಡೆ ನೀವು ಹೇಳಿರೆ!
ಬ್ರಾಹ್ಮಣಿಕೆಗೆ ನೆಲೆಗಟ್ಟಾವುದೆಂಬುದು ಬಲ್ಲಡೆ ನೀವು ಹೇಳಿರೆ!
ವೇದಕ್ಕೆ ನೆಲೆಗಟ್ಟು ಓಂಕಾರ, ಬ್ರಾಹ್ಮಣಕ್ಕೆ ನೆಲಗಟ್ಟು ಗಾಯತ್ರೀ.
ಓಂಕಾರವೇನ ಹೇಳಿತ್ತು, ಗಾಯತ್ರಿಯೇನ ಹೇಳಿತ್ತೆಂಬುದ
ತಿಳಿದು ವಿಚಾರಿಸಿಕೊಳ್ಳಿರೇ ಶ್ರುತಿಗಳೊಳಗೆ. ಅದೆಂತೆಂದಡೆ:
'ಓಂಕಾರಪ್ರಭವಾ ವೇದಾ ಓಂಕಾರಪ್ರಭವಾಸ್ಸ್ವರಾಃ
ಓಂಕಾರಪ್ರಭವಂ ಸರ್ವಂ ತ್ರೈಲೋಕ್ಯಂ ಸಚರಾಚರಂ'
ಇನ್ನು ಗಾಯತ್ರಿ:
'ಓಂ ಮಹಃ ಓಂ ಜನಃ ಓಂ ತಪಃ
ಓಂ ಸತ್ಯಂ ಓಂ ತತ್ಸವಿತುರ್ವರೇಣ್ಯಂ
ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್'
ಎಂದು ಶ್ರಾದ್ಧ ತದ್ದಿನ ಪಿತೃಕಾರ್ಯವ ಮಾಡುವಲ್ಲಿ
ವಿಶ್ವದೇವರ ಸ್ಥಾಪನೆಯಂ ಮಾಡುವಿರಿ.
'ವಿಶ್ವದೇವಾಯ ಸ್ವಾಹಾ' ಎಂದು ಅರ್ಚನೆ ವಂದನೆಯಂ ಮಾಡುವಿರಿ.
ಯಥೋಕ್ತವಾಗಲಿ ಯಥಾಕಾಲವಾಗಲೆಂದು ಬೇಡಿಕೊಂಬಿರಿ.
'ಗಯಾಯಾಂ ಶ್ರೀರುದ್ರಪಾದೇ ದತ್ತಮಸ್ತು' ಎಂದೆಂಬಿರಲ್ಲಾ.
'ಗಯಾಯಾಂ ಶ್ರೀವಿಷ್ಣುಪಾದೇ ದತ್ತಮಸ್ತು' ಎಂದೆಂದುಂಟಾದಡೆ ಹೇಳಿರೇ.
ಸತಿಗೆ ಪಿಂಡವ ಕೊಡುವಲ್ಲಿ
'ವಸುರುದ್ರಾದಿತ್ಯರೂಪೇಭ್ಯೋ ಮಧ್ಯಪಿಂಡಸ್ತು ಪುತ್ರದಃ
ವೇದೋಕ್ತರುದ್ರನಿರ್ಮಾಲ್ಯಂ ಉರಸ್ಥಾನ್ಯಪವಿತ್ರಕಂ
ಆದಿಪಿಂಡಾಂತ್ಯಪಿಂಡಂ ಚ ವರ್ಜಯೇತ್ ಸತತಂ ಬುಧಃ'
ಎಂದು ರುದ್ರಪಿಂಡದಿಂದ ಉತ್ಪತ್ಯವಾಗಿ
ಮರಳಿ ಭಕ್ತರ ಜರಿದು ಗಳಹುವಾ ಪಾತಕರೆಲ್ಲರೂ ನೀವು ಕೇಳಿರೇ:
ಭಕ್ತರು ಕೊಂಬುದೇ ಪಾದೋದಕ ಪ್ರಸಾದ, ನೀವು ಉಂಬುದೇ ಭೂತಶೇಷ.
ಅದೆಂತೆಂದೊಡೆ ಮಂತ್ರ:
'ಪ್ರಾಣಾಯ ಸಾಹಾ ಅಪಾನಾಯ ಸ್ವಾಹಾ ವ್ಯಾನಾಯ ಸ್ವಾಹಾ
ಉದಾನಾಯ ಸ್ವಾಹಾ ಸಮನಾಯ ಸ್ವಾಹಾ' ಎಂದು
ಪಂಚಭೂತಕ್ಕೆ ಬಲಿಯನಿಕ್ಕಿ,
ಆ ಭೂತಶೇಷವ ತಿಂಬ ಭೂತಪ್ರಾಣಿಯ
ಲಿಂಗಪ್ರಾಣಿಗೆ ಸರಿಯೆಂಬವನ ಬಾಯಲ್ಲಿ ಕೆರ್ಪನಿಕ್ಕಿ
ಈಶಭಕ್ತಿಯ ಮೆರೆವ ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. ॥೧೨॥

೧೨೭೨
ಅದನದನದತಿಗಳೆದನೆ ಯೋಗಿ,
ಇಹ ಪರವನೆ ಮೀರಿ ನಿಲಬಲ್ಲಾತನೆ ಯೋಗಿ.
'ತತ್ತ್ವಮಸಿ' ವಾಕ್ಯವು ನಿಲುಕದ ಪದವ ಮೀರಿ ನಿಲಬಲ್ಲಾತನೆ ಯೋಗಿ,
ಇದು ತುದಿಪದವು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೩॥

೧೨೭೩
ಅನಂತ ಜನ್ಮಗಳ ಪಾಪಂಗಳು ಸವೆದು ಹೋಗಿ
ಶ್ರೀಗುರುವಿನ ಕರುಣಾಕಟಾಕ್ಷದಿಂದ ಪ್ರಾಣಲಿಂಗೋಪದೇಶವ ಪಡೆದು
ಸದ್ಭಕ್ತರಾಗಿ ಶಿವಲಿಂಗ ದರ್ಶನ ಸ್ಪರ್ಶನವ ಮಾಡಿ
ಆ ಲಿಂಗವನಂಗದಲ್ಲಿ ಧರಿಸಿಕೊಂಡು
ಅಂಗವೇ ಲಿಂಗ ಲಿಂಗವೇ ಅಂಗ, ಪ್ರಾಣವೇ ಲಿಂಗ ಲಿಂಗವೇ ಪ್ರಾಣವಾಗಿ
ಅಂತರಂಗ ಬಹಿರಂಗ ಸರ್ವಾಂಗವೆಲ್ಲವೂ ಲಿಂಗವಾದ ಬಳಿಕ
ಇಂತೀ ಶ್ರೀಗುರು ಕೊಟ್ಟ ಲಿಂಗವ ಬಿಟ್ಟು
ಬೇರೆ ಮತ್ತೆ ಆತ್ಮತತ್ತ್ವವ ವಿಚಾರಿಸಿ ನೋಡಬೇಕೆಂದು
ಪರಮಾತ್ಮನಲ್ಲಿ ಯೋಗವ ಮಾಡಿ ಯೋಗಿಗಳಾಗಿ ಮುಕ್ತರಾದೆವೆಂಬಿರಿ.
ಶಿವಶಿವಾ, ಆತ್ಮನನು ಪರಮಾತ್ಮನನು ಶ್ರೀ ಗುರುಸ್ವಾಮಿ ಒಂದು ಮಾಡಿ
ಇದೇ ನಿನ್ನ ನಿಜತತ್ತ್ವವೆಂದು ಅರುಹ ಹೇಳಿ ತೋರಿಸಿಕೊಟ್ಟ ಬಳಿಕ
ಇಂತಹ ಗುರುಸ್ವಾಮಿಯ ಆಜ್ಞೆಯ ಮೀರಿ
ಲಿಂಗವನರಿಯದೆ ಲಿಂಗಬಾಹಿರರಾದ
ದ್ವಿಜರನು ಯೋಗಿಯನು ಸನ್ಯಾಸಿಯನು ಗುರುವೆಂದು ಭಾವಿಸಬಹುದೆ?
ಶಿವ ಶಿವಾ, ಅದು ಗುರುದ್ರೋಹ.
ಪರಶಿವಮೂರ್ತಿಯಾದ ಗುರುಸ್ವಾಮಿಯು
ಷಡ್ದರ್ಶನಗಳಿಗೂ ಸಮಸ್ತಮತಂಗಳಿಗೂ ಸಮಸ್ತಾಗಮಂಗಳಿಗೆಯೂ
ಶಿವನೊಬ್ಬನೇ ಕರ್ತನೆಂದು, ಶಿವದರ್ಶನವೇ ವಿಶೇಷವೆಂದು, ಅಧಿಕವೆಂದು
ಹೇಳಿ ತೋರಿ ಕೊಟ್ಟ ಬಳಿಕ
ಶೈವವೆಂದು ಶಾಕ್ತೇಯವೆಂದು ವೈಷ್ಣವವೆಂದು
ಗಾಣಪತ್ಯವೆಂದು ಸೌರವೆಂದು ಕಾಪಾಲಿಕವೆಂದು
ಇಂತೀ ಷಡ್ದರ್ಶನಂಗಳಿಗೆಯೂ ಶಿವನೊಬ್ಬನೇ ಕರ್ತ,
ಇಂತೀ ಷಡ್ದರ್ಶನಕ್ಕೆ ಶಿವದರ್ಶನವೇ ಅಧಿಕವೆಂದು,
ಇಂತೀ ಶಿವದರ್ಶನ ಮಾರ್ಗವಿಲ್ಲದೆ ಮುಕ್ತಿಯಿಲ್ಲವೆಂದು,
ಆ ಪರಶಿವನೆಂಬ ಗುರುಮೂರ್ತಿ ಅರುಹಿ ಕಾಣಿಸಿ ಹೇಳಿ
ತೋರಿ ಕೊಟ್ಟ ಬಳಿಕ, ಅದೆಂತೆಂದಡೆ ಶಿವಧರ್ಮೇ_

'ದರ್ಶನ ಷಡ್ವಿಧಂ ಪ್ರೋಕ್ತಂ ಶೈವಂ ಶಾಕ್ತಂ ವೈಷ್ಣವಂ
ಗಾಣಪತ್ಯಂ ಚ ಸೌರಂ ಚ ಕಾಪಾಲಿಕಮಿತಿ ಸ್ಮೃತಮ್'
ಮತ್ತಂ
'ಷಡ್ದರ್ಶನಾದಿ ದೇವೋ ಹಿ ಮಹಾದೇವೋ ನ ಸಂಶಯಃ
ಮಂತ್ರಪೂಜಾದಿ ಭಿನ್ನಾನಾಂ ಮೂಲಂ ಪರಶಿವಸ್ತಥಾ'
ಎಂಬುದಾಗಿ, ಇನ್ನು ವೈಷ್ಣವವೆಂದು ಆತ್ಮಯೋಗವೆಂದು ಶಾಕ್ತಿಕವೆಂದು
ವೈದಿಕವೆಂದು ಇಂತೀ ಭ್ರಾಂತಿನ ದರ್ಶನಮತಂಗಳನು ಕೇಳಿ,
ಅಲ್ಲಿಯ ಧರ್ಮಾರ್ಥರ್ಮಂಗಳನು ಕೇಳಿ,
ಅಲ್ಲಿ ಉಪದೇಶವ ಮಾಡಿಸಿಕೊಳ್ಳಬಹುದೇ?
ಶಿವಶಿವಾ, ಅದು ಗುರುದ್ರೋಹ, ಆ ಶ್ರೀಗುರುವಿನಾಜ್ಞೆಯ ಮೀರದಿರಿ.
ಆ ಪರಶಿವಮೂರ್ತಿತತ್ತ್ವವೇ ಗುರುಸ್ವಾಮಿಯಾಗಿ ಚೆನ್ನಾಗಿ ಅರುಹಿ
ತೋರಿ ಹೇಳಿ ಕೊಟ್ಟನಲ್ಲದೆ, ಆ ಗುರುಸ್ವಾಮಿ ಏನು ತಪ್ಪಿ ಹೇಳಿದುದಿಲ್ಲ.
ಶ್ರುತಿ: "ಏಕೋ ದೇವೋ ನ ದ್ವಿತೀಯಾಯ ತಸ್ಥೇ'
ಎಂದುದಾಗಿ ಶಿವನೊಬ್ಬನೇ ದೈವವೆಂದು ತೋರಿಕೊಟ್ಟ ಶ್ರೀಗುರು.
ಶ್ರುತಿ: "ಏಕೋ ಧ್ಯೇಯಃ' ಎಂದು
ಶಿವನೊಬ್ಬನನ್ನೇ ಧ್ಯಾನಿಸಿ ಪೂಜಿಸೆಂದು ಹೇಳಿ ತೋರಿಕೊಟ್ಟನು ಶ್ರೀಗುರು.
ಶ್ರುತಿ: "ನಿರ್ಮಾಲ್ಯಮೇವ ಭಕ್ಷಯಂತಿ' ಎಂದುದಾಗಿ
ಶಿವಪ್ರಸಾದವನೆ ಗ್ರಹಿಸಿಯೆಂದು ಪ್ರಸಾದವ ಕರುಣಿಸಿದ ಶ್ರೀಗುರು.
ಇಂತಹ ಶ್ರೀಗುರು ಮರುಳನು, ನೀನು ಬುದ್ಧಿವಂತನೇ?
ಕೇಳಾ, ನಿಮ್ಮ ಗುರುವ ಮರುಳ ಮಾಡಿದಿರಿ, ಅದೆಂತೆಂದಡೆ:
ನಿಮ್ಮಿಚ್ಛೆಯಲ್ಲಿಯೇ ಬಂದುದಾಗಿ, ಅದಲ್ಲದೆ ಮತ್ತೆ ಕೇಳು:
ಪೂರ್ವದ ಪುರುಷರು ಮರುಳರು, ನೀನೊಬ್ಬನೇ ಬುದ್ಧಿವಂತ?
ಕೇಳು: ದೂರ್ವಾಸ ಉಪಮನ್ಯು ದಧೀಚಿ ಜಮದಗ್ನಿ ಮಾರ್ಕಂಡೇಯ
ಪರಾಶರ ಮೊದಲಾದ ಋಷಿಗಳೆಲ್ಲ ಶಿವಾರ್ಚನೆಯಂ ಮಾಡಿದರು.
ಬ್ರಹ್ಮವಿಷ್ಣು ಮೊದಲಾದವರೆಲ್ಲರೂ
ಶಿವಲಿಂಗಾರ್ಚನೆಯ ಮಾಡಿದರು, ಕೇಳಿರೇ ನೋಡಿರೇ ದೃಷ್ಟವನು.
ಮತ್ಸ್ಯಕೇಶ್ವರ ಕೂರ್ಮೇಶ್ವರ ವರಾಹೇಶ್ವರ ನಾರಸಿಂಹೇಶ್ವರ ರಾಮೇಶ್ವರ
ಎಂಬ ದಶಾವತಾರಗಳಲ್ಲಿ ಶಿವಲಿಂಗಪ್ರತಿಷ್ಠೆಯಂ ಮಾಡಿ
ಶಿವಲಿಂಗಾರ್ಚನೆಯಂ ಮಾಡಿದರು.
ಅನೇಕ ವೇದಶಾಸ್ತ್ರಾಗಮಪುರಾಣಂಗಳ ಕೇಳಿರೇ ನೋಡಿರೇ.
"ಯಂ ಯಂ ಕಾಮಯತೇ ಕಾಮಂ ತಂ ತಂ ಲಿಂಗಾರ್ಚನಾಲ್ಲಭೇತ್
ನ ಲಿಂಗೇ [ನ] ವಿನಾ ಸಿದ್ಧಿದುರ್ಲಭಂ ಪರಮಂ ಪದಂ" ಮತ್ತಂ
'ಅಸುರಾ ದಾನವಾಶ್ಚೈವ ಪಿಶಾಚೋರಗರಾಕ್ಷಸಾಃ

ಆರಾಧ್ಯಂ ಪರಮಂ ಲಿಂಗಂ ಪ್ರಾಪುಸ್ತೇ ಸಿದ್ಧಿಮುತ್ತಮಾಮ್' ಮತ್ತಂ
'ಅಗ್ನಿಹೋತ್ರಶ್ಚ ವೇದಶ್ಚ ಯಜ್ಞಾಶ್ಚ ಬಹುದಕ್ಷಿಣಾಃ
ಶಿವಲಿಂಗಾರ್ಚನಸ್ಯೈತೇ ಕೋಟ್ಯಂಶೇನಾಪಿ ನೋ ಸಮಾಃ'
ಎಂದುದಾಗಿ, ಇಂತು ಇದು ಮೊದಲಾದ ದೇವಜಾತಿಗಳೆಲ್ಲ
ಶಿವಲಿಂಗಾರ್ಚನೆಯಂ ಮಾಡಿದುದಕ್ಕೆ ದೃಷ್ಟ ನೋಡಿರೇ:
ಕಾಶೀಕ್ಷೇತ್ರದಲ್ಲಿ ಬ್ರಹ್ಮೇಶ್ವರ ಇಂದ್ರೇಶ್ವರ ಯಕ್ಷಸಿದ್ಧೇಶ್ವರ
ಎಂಬ ಲಿಂಗಂಗಳಂ ಪ್ರತಿಷ್ಠಿಸಿ ಶಿವಲಿಂಗಾರ್ಚನೆಯಂ ಮಾಡಿದರು.
ತಾರಕ ರಾವಣಾದಿಗಳೆಲ್ಲ ಶಿವಲಿಂಗಾರ್ಚನೆಯಂ ಮಾಡಿದರು.
ಇಂತಿವರೆಲ್ಲರು ಮರುಳರು, ನೀನೊಬ್ಬನೇ ಬುದ್ಧಿವಂತನೆ?
ಅದು ಕಾರಣ, ಆ ಶ್ರೀಗುರುವಿನಾಜ್ಞೆಯಂ ಮೀರಿ ಕೆಡದಿರಿ ಕೆಡದಿರಿ.
ಆ ಮಹಾ ಶ್ರೀಗುರುವಿನ ವಾಕ್ಯವನೇ ನಂಬಿ,
ಗುರುಲಿಂಗಜಂಗಮವನೊಂದೇಯೆಂದು ನಿಶ್ಚಯಿಸಿ,
ಇದೇ ಅಧಿಕ, ಇದರಿಂದ ಬಿಟ್ಟು ಮತ್ತಾವುದು ಅಧಿಕವಿಲ್ಲ.
ಅಂದು ಗುರುಲಿಂಗಜಂಗಮದಲ್ಲಿಯ ಭಕ್ತಿಯೆ ಭಕ್ತಿ,
ಅರ್ಚನೆಯೇ ಅರ್ಚನೆ, ಆ ಸಂಗವೇ ಶಿವಯೋಗ,
ಇದು ಸತ್ಯ ಶಿವನಾಣೆ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೪॥

೧೨೭೪
ಅನುಭಾವ ಬಲ್ಲೆನೆಂಬಣ್ಣಗಳು ನೀವು ಕೇಳಿರೇ:
'ಅನು'ವೆಂದಡಾವುದು? 'ಭಾವ'ವೆಂದಡಾವುದು?
ಬಲ್ಲರೆ ನೀವು ಹೇಳಿರೆ.
"ಅಮಿತಿ ಬ್ರಹ್ಮ ಸನ್ಮಾತ್ರಂ ನುಕಾರಂ ಜೀವರುಚ್ಯತೇ।"
ಎಂದಾ ಸ್ಥಲಕ್ಕೆ ಸ್ಥಲವಿಡಬಲ್ಲರೆ ಕೇಳಿರೇ.
'ಪ್ರ'ವೆಂದಡಾವುದು? 'ಸಂಗ'ವೆಂದಡಾವುದು ಬಲ್ಲರೆ ನೀವು ಹೇಳಿರೆ.
"ಇಹಲೋಕ ಬಾಹ್ಯಕ್ತಾನಾಂ ಅಂತರಂ ಪರಲೋಕಯೋ
ಇಷ್ಟ ಪ್ರಾಣ ಸಂಯುಕ್ತೇ ಚ ಪ್ರಸಂಗಸ್ಯರುಚೋರ್ಧ್ವಯೇ।"
ಎಂದಾ ಸ್ಥಲಕ್ಕೆ ಸ್ಥಲವಿಡಬಲ್ಲಡಾತನೆ ಪ್ರಸಂಗಿ.
ಗೋಷ್ಠಿಯ ಬಲ್ಲೆನೆಂಬಣ್ಣಗಳು ನೀವು ಕೇಳಿರೇ:
'ಗೋ'ವೆಂದಡಾವುದು, 'ಷ್ಠಿ'ಯೆಂದಡಾವುದು ಬಲ್ಲರೆ ನೀವು ಹೇಳಿರೆ.
"ದಳ ಸಹಸ್ರ ಸಂವೇದೀ ಗೋವಿರ್ಯೋಧಾರಣಂ ಭವೇತ್।
ಗೋವುರ್ಧ್ವೇಷ್ಟಿ ಯತ್ರಸಂಯುಕ್ತಂ ತತ್ರ ಗೋಷ್ಠಿಸ್ಯ ನಿರ್ಣಯಃ
ಎಂದಾ ಸ್ಥಲಕ್ಕೆ ಸ್ಥಲವಿಡಬಲ್ಲಾಡಾತನೆ ಗೋಷ್ಠಿವಂತನು.
ಇದನರಿಯದೆ ವೇದ ಶಾಸ್ತ್ರ ಪುರಾಣಾಗಮಂಗಳ ಕಲಿತು

ಲೋಗರ ಮಚ್ಚಿಸುವ ಇವರೇನು ಹಿರಿಯರು
ಡೊಂಬನೇನು ಕಿರಿಯನೆ?
ಇದರಿಂದ ಓದ ಬಲ್ಲಾತ ವೇದವನರಿಯ,
ವೇದವ ಬಲ್ಲಾತ ಶಾಸ್ತ್ರವನರಿಯ,
ಶಾಸ್ತ್ರ ಬಲ್ಲಾತ ಪುರಾಣವನರಿಯ,
ಆಗಮವ ಬಲ್ಲಾತ ಯೋಗವನರಿಯ,
ಯೋಗವನರಿಯಬಲ್ಲಾತ ಶಬ್ದವನರಿಯ,
ಶಬ್ದವ ಬಲ್ಲಾತ ಸಂಸ್ಕೃತವನರಿಯ,
ಸಂಸ್ಕೃತವ ಬಲ್ಲಾತ ತತ್ವವನರಿಯ,
ತತ್ವವ ಬಲ್ಲಾತ ಪರತತ್ವವನರಿಯ,
ಪರತತ್ವವ ಬಲ್ಲ ಶರಣನೆ ಸರ್ವನೆಲ್ಲ ಬಲ್ಲ ಕಾಣಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೫॥

೧೨೭೫

ಅನುಭಾವಲಿಂಗದ ಮರ್ಮವನರಿವುದರಿದು,
ಲಿಂಗಸಂಜ್ಞೆಯನರಿವುದರಿದು, ಲಿಂಗವೆಂದಾದುದೆಂದರಿವುದರಿದು,
ಲಿಂಗವಂತಹುದಿಂತಹುದೆಂದರಿವುದರಿದು ನೋಡಾ.
ಲಿಂಗದಲ್ಲಿಯೆ ಅಗಮ್ಯವಯ್ಯ.
ಭೂಮಿಯೆ ಪೀಠಿಕೆ, ಆಕಾಶವೆ ಲಿಂಗವೆಂದರಿದಾತನು ಲಿಂಗವನರಿದಾತನಲ್ಲ.
ಲಿಂಗದಲ್ಲಿ[ಯೆ] ಅಗಮ್ಯವಯ್ಯ.
ಲಿಂಗದ ಆದಿ ಬ್ರಹ್ಮ, ಮಧ್ಯ ವಿಷ್ಣು, ಅಂತ್ಯ ರುದ್ರ,
ಇಂತೀ ತ್ರಿಮೂರ್ತಿಲಿಂಗವೆಂದರಿದಾತನು ಲಿಂಗವನರಿದವನಲ್ಲ.
ಲಿಂಗದಲ್ಲಿ[ಯೆ] ಅಗಮ್ಯವಯ್ಯ.
"ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ
ಲಿಂಗಬಾಹ್ಯಾತ್ ಪರಂ ನಾಸ್ತಿ ತಸ್ಮೈ ಶ್ರೀಗುರವೇ ನಮಃ"
ಎಂಬ ಭಾವರಹಿತ ಲಿಂಗವು
"ಬ್ರಹ್ಮ ವಿಷ್ಣ್ವಾದಿದೇವಾನಾಮಪ್ಯಗೋಚರಂ' ಎಂದು
ಇದಂ ಮಾಹೇಶ್ವರಂ ಜ್ಯೋತಿರಾಪಾತಾಲೇ ವ್ಯವಸ್ಥಿತಂ
ಅತೀತಂ ಸತ್ಯಲೋಕಾದೀನನಂತಂ ದಿವ್ಯಮೀಶ್ವರಂ
ಲಲಾಟಲೋಚನಂ ಚಾಂದ್ರೀ ಕಲಾಪಂ ಚತುರ್ದಶಂ
ಅಂತರ್ವರ್ತೇಹ ನಿರ್ದೇಹಂ ಗುರುರೂಪಂ ವ್ಯವಸ್ಥಿತಂ
ಪಾದಭಿನ್ನಂ ಹಿ ಲೋಕೇನ ಮೌಳಿಬ್ರಹ್ಮಾಂಡಭಿತ್ತಯೇ
ಭುಜಪ್ರಾಂತದಿಗಂತಾನಾಂ ಭೂತಾನಾಂ ಪತಯೇ ನಮಃ

ನಾದಲಿಂಗಮಿತಿಜ್ಞೇಯಂ ಬಿಂದುಪೀಠಮುದಾಹೃತಂ
ನಾದಬಿಂದುಯುತಂ ರೂಪಂ ಲಿಂಗಾಕಾರಮಿಹೋಚ್ಯತೇ"
ಎಂಬ ಲಿಂಗಮೆಂದು
"ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ
ತದೇತಲ್ಲಿಂಗಮಿತ್ಯುಕ್ತಂ ಲಿಂಗತತ್ತ್ವಪರಾಯಣೈಃ
ಲಕಾರಂ ಲಯಸಂಪ್ರೋಕ್ತಂ ಗಕಾರಂ ಸೃಷ್ಟಿಮೇವ ಚ
ಲಯಾನಾಂ ಗಮನಶ್ಚೈವ ಲಿಂಗಾಕಾರಮಿಹೋಚ್ಯತೇ"
ಎಂದರಿದಾತನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನೆಂದರಿದ ಶರಣಂಗೆ ಸುಲಭ,
ಮಿಕ್ಕಿನವರಿಗಳಿಗಲಭ್ಯವಯ್ಯಾ. ॥೧೬॥

೧೨೭೬

ಅಮೃತಕ್ಕೆ ಹಸಿವುಂಟೆ? ಜಲಕ್ಕೆ ತೃಷೆಯುಂಟೆ?
ಮಹಾಜ್ಞಾನಸ್ವರೂಪಂಗೆ ವಿಷಯವುಂಟೆ?
ಸದ್ಗುರುಕಾರುಣ್ಯವ ಪಡೆದು ಲಿಂಗಾರ್ಚನೆಯಂ ಮಾಡುವ
ಮಹಾಭಕ್ತಂಗೆ ಬೇರೆ ಮುಕ್ತಿಯ ಬಯಕೆ ಉಂಟೆ?
ಅವರುಗಳಿಗೆ ಅದು ಸ್ವಯಂಭು ಸಹಜಸ್ವಭಾವ.
ಇನ್ನು ತೃಪ್ತಿ ಆಪ್ಯಾಯನ ಅರಸಲುಂಟೆ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೭॥

೧೨೭೭

ಅಮೃತದೊಳಗೆ ಜನಿಸಿ ಅಮೃತದೊಳಗೆ ವರ್ತಿಸುವ
ಅಮೃತದೇಹಿಗೆ ಹಸಿವು ತೃಷೆಯೆ?
ಆ ಅಮೃತವೆ ಆಹಾರ, ಆ ಅಮೃತವೆ ಸೇವನೆ,
ಬೇರೊಂದು ವಸ್ತುವುಂಟೆ? ಇಲ್ಲ. ಅಮೃತವೇ ಸರ್ವಪ್ರಯೋಗಕ್ಕೆ.
ಇದಕ್ಕೆ ಕಟ್ಟಳೆಯುಂಟೆ? ಕಾಲವುಂಟೆ?
ಆಜ್ಞೆ ಉಂಟೆ? ಬೇರೆ ಕರ್ತರುಂಟೆ? ಇಲ್ಲ.
ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ.
ಶ್ರೀಗುರುಲಿಂಗದಲ್ಲಿ ಜನಿಸಿ, ಶಿವಲಿಂಗದಲ್ಲಿ ಬೆಳೆದು
ಜಂಗಮಲಿಂಗದಲ್ಲಿ ವರ್ತಿಸಿ, ಪ್ರಸಾದಲಿಂಗದಲ್ಲಿ ಪರಿಣಾಮಿಸಿ,
ಗುರು ಲಿಂಗ ಜಂಗಮ ಪ್ರಸಾದ ಒಂದೆಂದರಿದು
ಆ ಚತುರ್ವಿಧ ಏಕವಾದ ಲಿಂಗವೇ ಪ್ರಾಣ, ಪ್ರಾಣವೇ ಲಿಂಗ.
ಲಿಂಗವೇ ಅಂಗ, ಅಂಗವೆ ಲಿಂಗವಾದ

ಲಿಂಗಸ್ವಾಯತವಾದ ಲಿಂಗೈಕ್ಯಂಗೆ
ಜಪ ಧ್ಯಾನ ತಪಕ್ಕೆ ಅರ್ಚನೆಗೆ ಪೂಜನೆಗೆ
ಆಗಮವುಂಟೆ? ಕಾಲವುಂಟೆ? ಕರ್ಮವುಂಟೆ? ಕಲ್ಪಿತವುಂಟೆ? ಇಲ್ಲ.
ಸರ್ವವೂ ಲಿಂಗಮಯ.
ಆ ಲಿಂಗವಂತಂಗೆ ನಡೆದುದೇ ಆಗಮ, ಪೂಜಿಸಿದುದೇ ಕಾಲ,
ಮಾಡಿದುದೇ ಕ್ರಿಯೆ, ನುಡಿದುದೇ ಜಪ, ನೆನೆದುದೇ ಧ್ಯಾನ,
ವರ್ತಿಸಿದುದೇ ತಪಸ್ಸು.
ಇದಕ್ಕೆ ಅವಧಿಯುಂಟೆ? ಮೇರೆಯುಂಟೆ? ಇಲ್ಲ.
ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ.
ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ರವಿ, ಶಶಿ, ಆತ್ಮ
ಮನೋವಾಕ್ಕಾಯ ಹೊನ್ನು ಹೆಣ್ಣು ಮಣ್ಣು
ಮೊದಲಾದ ಸರ್ವಪದಾರ್ಥವನರ್ಪಿಸಿ,
ಗುರು ಲಿಂಗ ಜಂಗಮದ ಪ್ರಸನ್ನತೆಯ ಪಡೆದ ಮಹಾಪ್ರಸಾದಿಗೆ
ಸರ್ವವೂ ಪ್ರಸಾದವಲ್ಲದೆ ಮತ್ತೊಂದಿಲ್ಲ.
ಆ ಪ್ರಸಾದಿಗೆ ಪದಾರ್ಥವೆಂಬ ಪ್ರಸಾದವೆಂಬ ಭೇದವುಂಟೆ?
ಅರ್ಪಿತವೆಂಬ ಅನರ್ಪಿತವೆಂಬ ಸಂದೇಹವುಂಟೆ?
ಕೊಡುವಲ್ಲಿ ಕೊಂಬಲ್ಲಿ ಸೀಮೆಯುಂಟೆ?
ನಿಸ್ಸೀಮಪ್ರಸಾದಿಗೆ ಸರ್ವವೂ ಪ್ರಸಾದ.
ಆ ಭೋಗಕ್ಕೆ ಮೇರೆ ಉಂಟೆ? ಅವಧಿಯುಂಟೆ? ಇಲ್ಲ.
ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ.
ವೇದ ಶಾಸ್ತ್ರ ಆಗಮ ಪುರಾಣ ಮೊದಲಾದ ಸರ್ವವಿದ್ಯಂಗಳ
ತಾತ್ಪರ್ಯ ಮರ್ಮ ಕಳೆಗಳನರಿದ ಮಹಾಜ್ಞಾತೃವಿಂಗೆ
ಆ ಮಹಾಜ್ಞಾನವೇ ದೇಹ, ಆ ಮಹಾಜ್ಞೇಯವೇ ಪ್ರಾಣ.
ಈ ಮಹತ್ತಪ್ಪ ಜ್ಞಾತೃ ಜ್ಞಾನ ಜ್ಞೇಯ ಒಂದಾದ
ಮಹಾಬೆಳಗಿನ ಸುಖಸ್ವರೂಪಂಗೆ
ಮರ್ತ್ಯ ಸ್ವರ್ಗ ದೇವಲೋಕವೆಂಬ ಫಲಪದದಾಸೆಯುಂಟೆ? ಇಲ್ಲ.
ನಿರಂತರ ತೇಜೋಮಯ ಸುಖಸ್ವರೂಪನು
ವಿದ್ಯಾಸ್ವರೂಪನು ನಿತ್ಯಾನಂದಸ್ವರೂಪನು.
ಆ ಮಹಾಮಹಿಮನ ಮಹಾಸುಖಕ್ಕೆ ಅವಧಿಯುಂಟೆ? ಮೇರೆಯುಂಟೆ? ಇಲ್ಲ.
ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ.
ಆ ಮಹಾನುಭಾವಿ ತಾನೆ ಕೇವಲ ಜ್ಯೋತಿರ್ಮಯಲಿಂಗವಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೮॥

೧೨೭೮
ಅಮೃತ ಸರ್ವರಿಗೂ ಅಮೃತವಾಗಿಪ್ಪುದಲ್ಲದೆ
ಕೆಲಬರಿಗೆ ಅಮೃತವಾಗಿ ಕೆಲಬರಿಗೆ ವಿಷವಾಗದು ನೋಡಾ.
ಎಂತು ಅಂತೆ,
ಶ್ರೀಗುರು ಸರ್ವರಿಗೆಯೂ ಗುರುವಾಗಿರಬೇಕಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೯॥

೧೨೭೯
ಅಮೃತಸೇವನೆಯಾದ ಬಳಿಕ ಭಿನ್ನರುಚಿಯ ನಿಶ್ಚಯಿಸಲುಂಟೆ?
ಸತ್ಯಶಾಂತಿಜ್ಞಾನವಿಂಬುಗೊಂಡ ಮಹಾಪುರುಷಂಗೆ
ಸುಖದ ಪದವ ನಿಶ್ಚಯಿಸಲುಂಟೆ?
ಸದ್ಗುರುಕಾರುಣ್ಯವ ಪಡೆದ ಮಹಾಭಕ್ತಂಗೆ ಮುಕ್ತಿಯ ನಿಶ್ಚಯಿಸಲುಂಟೆ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೦॥

೧೨೮೦
ಅಯ್ಯಾ, ನಿಮ್ಮ ಶರಣರ ಅನುಭಾವಸಂಗ ಸಾಲೋಕ್ಯಪದವಯ್ಯ.
ಅಯ್ಯಾ, ನಿಮ್ಮ ಅನುಭಾವಿಗಳ
ಮುಖಾವಲೋಕ ಪ್ರಿಯಸಂಭಾಷಣೆ ಸಾಮೀಪ್ಯಪದವಯ್ಯ.
ಶ್ರೀ ವಿಭೂತಿ ರುದ್ರಾಕ್ಷಿಯ ಅವರ ಶ್ರೀಮೂರ್ತಿ ಕಂಡು,
ಮನದಲ್ಲಿ ಧರಿಸಿದಡೆ ಸಾರೂಪ್ಯಪದವಯ್ಯ.
ಅವರ ಶ್ರೀಪಾದಂಗಳಲ್ಲಿ ಎನ್ನ ಶಿರಸ್ಪುರುಶನದಿಂದ
ಸಾಷ್ಟಾಂಗವೆರಗಲು ಸಾಯುಜ್ಯಪದವಯ್ಯ.
ಇಂತು ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯವೆಂಬ
ಚತುರ್ವಿಧಪದ ಎನಗಾಯಿತ್ತಯ್ಯ,
ನಿಮ್ಮನುಭಾವಿಗಳ ಕೃಪೆಯಿಂದ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೧॥

೧೨೮೧
ಅಯ್ಯಾ, ನಿಮ್ಮ ಶರಣರ ಚರಣದ ಭಕ್ತಿಯೇ ಎನಗೆ ಸಾಲೋಕ್ಯಪದವಯ್ಯಾ.
ನಿಮ್ಮ ಶರಣರ ಅರ್ಚನೆ ಪೂಜೆಯೇ ಎನಗೆ ಸಾಮೀಪ್ಯಪದವಯ್ಯಾ.
ಅಯ್ಯಾ, ನಿಮ್ಮ ಗಣಂಗಳ ಧ್ಯಾನವೇ ಎನಗೆ ಸಾರೂಪ್ಯಪದವಯ್ಯಾ.
ಅಯ್ಯಾ, ನಿಮ್ಮ ಪುರಾತನರ ಜ್ಞಾನಾನುಭಾವ ಸಮರಸಾನಂದವೇ
ಎನಗೆ ಸಾಯುಜ್ಯಪದವಯ್ಯಾ.

ಇಂತೀ ಚತುರ್ವಿಧಪದಂಗಳನಲ್ಲದೆ ಅನ್ಯವ ನಾನರಿಯೆನಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೨॥

೧೨೮೨
ಅಯ್ಯಾ, ನೀನು ತತ್ತ್ವಂಗಳ ಮರೆಗೊಂಡಿರ್ಪನ್ನಕ್ಕ,
ನಾನು ಕಾಯವ ಮರೆಗೊಂಡಿರ್ದೆನಯ್ಯಾ.
ಅಯ್ಯಾ, ನೀನು ಶಕ್ತಿಯ ಮರೆಗೊಂಡಿರ್ಪನ್ನಕ್ಕ,
ನಾನು ಆಸೆಯ ಮರೆಯಲ್ಲಿರ್ದೆನಯ್ಯಾ.
ನಿನ್ನ ಬೆಡಗು ಬಿನ್ನಾಣವ ನಾ ಬಲ್ಲೆ, ನನ್ನ ಬೆಡಗು ಬಿನ್ನಾಣವ ನೀ ಬಲ್ಲೆ.
ಮರೆಗೆ ಮರೆಯನೊಡ್ಡಿ ಜಾರಿ ಹೋದೆಯಲ್ಲಾ.
ಈ ಬಿನ್ನಾಣದ ಮರೆಯನು ತೆರೆದು ದರ್ಶನಂ ಮಾಡಿ,
ನಿನ್ನೊಳಗೆ ಎನ್ನನಿರಿಸಿ, ಎನ್ನೊಳಗೆ ನಿನ್ನನಿರಿಸಿ,
ಪ್ರಾಣ ಪ್ರಾಣವ ಸಂಯೋಗವ ಮಾಡಿದೆನು
ಶ್ರೀಗುರು, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೩॥

೧೨೮೩
ಅಯ್ಯಾ, ಪಾದೋದಕವ ಮುಗಿಸಿ ಪ್ರಸಾದವ ಮುಗಿಸಬೇಕಲ್ಲದೆ,
ಪ್ರಸಾದವ ಮುಗಿಸಿ ಪಾದೋದಕವ ಮುಗಿಸಲಾಗದು.
ಪ್ರಸಾದವು ಮುಗಿದ ಮೇಲೆ, ಪ್ರಸಾದೋದಕವಲ್ಲದೆ
ಪಾದೋದಕವೆಲ್ಲುಂಟು ಹೇಳಾ?
ಸಂಬಂಧಾಚರಣೆಗಳ ಮುಖದಿಂದ ಪ್ರಾಣಲಿಂಗಾರ್ಪಿತವಾದ ಮೇಲೆ
ಇಷ್ಟಲಿಂಗಕ್ಕೆ ಪ್ರಸಾದವರ್ಪಿತವಯ್ಯಾ.
ಪಾದೋದಕಸ್ವರೂಪವಾದ ಇಷ್ಟಲಿಂಗಕ್ಕೆ
ಪಾದೋದಕವನರ್ಪಿಸಿ ಕೊಳಬೇಕಯ್ಯ.
ಪ್ರಸಾದಸ್ವರೂಪವಾದ ಪ್ರಾಣಲಿಂಗಕ್ಕೆ
ಪ್ರಸಾದವನರ್ಪಿಸಿ ಕೊಳಬೇಕಯ್ಯ,
ಇಂತು ವಿಚಾರಮುಖದಿಂದ ಪಾದೋದಕ ಪ್ರಸಾದವ
ದಿವಾರಾತ್ರಿಗಳೆನ್ನದೆ [ಕೊಂಡು] ಸಂತೃಪ್ತನಾದಡೆ,
ಪ್ರಸಾದಲಿಂಗಕ್ಕಂಗವಾದ ಅಚ್ಚ ಶಿವಶರಣನೆಂಬೆ ನೋಡಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೪॥

೧೨೮೪
ಅಯ್ಯಾ ಶಿವಷಡಾಕ್ಷರಮಂತ್ರವೆ ಸರ್ವಮಂತ್ರವೆಲ್ಲವಕ್ಕೆ ಮಾತೃಸ್ಥಾನ.
ಅಯ್ಯಾ ಶಿವಷಡಾಕ್ಷರಮಂತ್ರವೆ ಸರ್ವವೆಲ್ಲವಕ್ಕೆ ಉತ್ಪತ್ತಿ ಸ್ಥಿತಿ ಲಯ ಸ್ಥಾನ.

ಅಯ್ಯಾ ಶಿವಷಡಾಕ್ಷರಮಂತ್ರವೆ ಸರ್ವಕಾರಣವೆಲ್ಲವಕ್ಕೆ ಮೂಲ.
ಇದು ಕಾರಣ, ಶಿವಷಡಾಕ್ಷರಮಂತ್ರವ ಸ್ಮರಿಸುವ ಸದ್ಭಕ್ತನೆ ವೇದಾತೀತನು.
ಆ ಸದ್ಭಕ್ತನೆ ಶಾಸ್ತ್ರವಾನ್, ಆ ಮಹಾಮಹಿಮನೆ ಪುರಾಣಿಕನು.
ಆ ಮಹಾಮಹಿಮನೆ ಆಗಮಿಕನು.
ಆ ಮಹಾಮಹಿಮನೆ ಸರ್ವಜ್ಞಾನಿಯಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೫॥

೧೨೮೫
ಅಯ್ಯ, ಹರಿಹರ ಒಂದೆಂಬರು
ಹರಿ ಕರ್ರಗೆ, ಬ್ರಹ್ಮ ಕೆಂಪಗೆ, ಈಶ್ವರ ಧವಳವರ್ಣ,
ಅಲ್ಲಿ ಒಂದೆಂಬೆನೆ? ಒಂದಲ್ಲ,
ಇಟ್ಟುದರೊಳಗೆ ಒಂದೆಂಬೆನೆ?
ಹರಿಗೆ ಮಟ್ಟಿ, ಬ್ರಹ್ಮಗೆ ಚಂದ್ರ, ಈಶ್ವರಂಗೆ ವಿಭೂತಿ.
ಅಲ್ಲಿ ಒಂದೆಂಬೆನೆ. ಒಂದಲ್ಲ.
ಪತ್ರೆಯೊಳಗೆ ಒಂದೆಂಬೆನೆ?
ಹರಿಗೆ ತೊಳಸಿ, ಬ್ರಹ್ಮಗೆ ಮಂಚ್ಯಪತ್ರೆ, ಈಶ್ವರಂಗೆ ಬಿಲ್ವಪತ್ರೆ.
ಅಲ್ಲಿ ಒಂದೆಂಬೆನೆ? ಒಂದಲ್ಲ.
ವಾಹನದಲ್ಲಿ ಒಂದೆಂಬೆನೆ?
ಹರಿಗೆ ಗರುಡ, ಬ್ರಹ್ಮಂಗೆ ಹಂಸೆ, ಈಶ್ವರಂಗೆ ವೃಷಭ.
ಅಲ್ಲಿ ಒಂದೆಂಬೆನೆ? ಒಂದಲ್ಲ.
ಸ್ತ್ರೀಯರೊಳಗೊಂದೆಂಬೆನೆ?
ಹರಿಗೆ ಲಕ್ಷ್ಮೀ, ಬ್ರಹ್ಮಂಗೆ ಸರಸ್ವತಿ, ಈಶ್ವರಂಗೆ ಪಾರ್ವತಾದೇವಿ.
ಅಲ್ಲಿ ಒಂದೆಂಬೆನೆ? ಒಂದಲ್ಲ.
ಹಾಸ್ಯದೊಳಗೊಂದೆಂಬೆನೆ?
ಹರಿಗೆ ಹತ್ತುಭವ, ಬ್ರಹ್ಮಂಗನಂತ ಪ್ರಳಯ,
ಈಶ್ವರಂಗೆ ನಿತ್ಯ ಮೃತ್ಯುಂಜಯ.
ಅದೆಂತೆಂದೊಡೆ:
"ಅಸಂಖ್ಯ ಕೋಟಿ ಬ್ರಹ್ಮನಾಂ। ವಿಷ್ಣು ಕೋಟಿಗತಂ ತಥಾ
ಗಂಗೆವಾಳ ಸಮಾರುದ್ರಂ। ಕಿಂಚಿಧ್ಯಾನ ಮಹೇಶ್ವರಃ"
ಅಲ್ಲಿ ಒಂದೆಂಬೆನೆ? ಒಂದಲ್ಲ
ಇಂತೀ ಹರಿಹರ ಒಂದೆಂಬ ಮರುಳ ವಿಪ್ರರ ಬಾಯಲ್ಲಿ
ದಳದಳನೆ ಬಾಲ್ಪುಳುಗಳು ಸುರಿಯವೆ
ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ॥೨೬॥

೧೨೮೬
ಅರಿದಡೆ ಆತ್ಮನಲ್ಲ, ಅರಿಯದಿದ್ದಡೆ ಆತ್ಮನಲ್ಲ.
ತೋರಿತ್ತಾದಡೆ ವಿಷಯ, ತೋರದಿದ್ದಡೆ ಶೂನ್ಯವೆನಿಸುಗು,
ಬೊಮ್ಮದ ಅರಿವಿನ್ನೆಲ್ಲಿಯದೊ?
ಅರಿವು ತಾನರಿವಾಗಿದ್ದು, ಸ್ವಾನುಭಾವದ ಹೊರೆಯಲ್ಲಿದ್ದು,
ಸನ್ನಿಧಿ, ನಿತ್ಯನಿಜಾನಂದಾತ್ಮ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನೆಂದರಿವುದು . ॥೨೭॥

೧೨೮೭
ಅರಿದು ಮರೆದವನು ಶಿವಭಕ್ತನೆ? ಅಲ್ಲ.
ಶಿವಭಕ್ತನರಿದ ಬಳಿಕ ಮರೆಯನು.
ಅರಿದು ಮರೆದವನು ಮದ್ದಗುಣಿಕೆಯ ಮೆಲಿದವನು.
ಮದಮಧುವ ಸೇವಿಸಿದವನು.
ಅರಿದು ಮರೆದವನು ಅಜ್ಞಾನಿಗಳ ಸಂಗವ ಮಾಡಿದವನು.
ಶ್ವಾನಮೂತ್ರವನುಂಡವನು.
ಅವದಿರುಗಳಿಗೆ ಅರಿವು ಮರವೆ ಸಹಜವಾದ ಕಾರಣ
ಅರಿದವನಲ್ಲ, ಅರಿತು ಮರೆದವನಲ್ಲ ಶಿವಭಕ್ತನು.
ನಂಬುವನಲ್ಲ ನಂಬುಗೆಗೆಡುವನಲ್ಲ ಶಿವಭಕ್ತನು.
ವಿಶ್ವಾಸವ ಮಾಡುವನಲ್ಲ ಅವಿಶ್ವಾಸವ ಮಾಡುವನಲ್ಲ ಶಿವಭಕ್ತನು.
ಮರೆದಡೆ ಮರೆದವರಂತೆ ಅರಿದಡೆ ಶಿವನಂತೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೮॥

೧೨೮೮
ಅರಿದು ಮಾಡದ ಭಕ್ತಿ ಭವಕ್ಕೆ ತಂದಿತ್ತು. ಅದೆಂತೆಂದಡೆ,
ಫಲಭೋಗಂಗಳ ಬಯಸುವನಾಗಿ,
ಫಲವನುಂಡು ಮರಳಿ ಭವಕ್ಕೆ ಬಹನಾಗಿ.
ಇದು ಕಾರಣ,
ಅರಿದು ಮುಕ್ತಿಯ ಹಡೆವಡೆ ಅನುಭವವೇ ಬೇಕು.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೯॥

೧೨೮೯
ಅರಿಯದ ಕಾರಣ ಭವಕ್ಕೆ ಬಂದರು.
ಅರಿವಿಲ್ಲದವಂಗೆ ಆಚಾರವಿಲ್ಲ, ಆಚಾರವಿಲ್ಲದವಂಗೆ ಅರಿವಿಲ್ಲ.

ಅರಿವಿಲ್ಲದವಂಗೆ ಗುರುವಿಲ್ಲ, ಗುರುವಿಲ್ಲದವಂಗೆ ಲಿಂಗವಿಲ್ಲ.
ಲಿಂಗವಿಲ್ಲದವಂಗೆ ಜಂಗಮವಿಲ್ಲ, ಜಂಗಮವಿಲ್ಲದವಂಗೆ ಪ್ರಸಾದವಿಲ್ಲ.
ಪ್ರಸಾದವಿಲ್ಲದವಂಗೆ ಮಹಾಲಿಂಗವಿಲ್ಲವಯ್ಯಾ.
ಈ ಆರು ಸಹಿತ ಆಚಾರ, ಆಚಾರಸಹಿತ ಗುರು,
ಗುರುಸಹಿತ ಲಿಂಗ, ಲಿಂಗಸಹಿತ ಜಂಗಮ,
ಜಂಗಮಸಹಿತ ಪ್ರಸಾದ, ಪ್ರಸಾದಸಹಿತ ಮಹಾಲಿಂಗ.
ಆದಿಲಿಂಗ ಅನಾದಿಶರಣನಾಗಿ ಬಂದು ಷಡುಸ್ಥಲವ ನಡೆದು ತೋರಿದ.
ಅಂತಲ್ಲದೆ ಒಂದೊಂದ ಕಳೆದು ನಡೆದನೆಂದಡೆ
ಸೋಪಾನದ ಕಟ್ಟೆಯ ಕಲ್ಲು ಬಿದ್ದಂತೆ.
ಇದು ಆರಿಗೂ ಅಳವಡದು ಬಸವಣ್ಣಂಗಳವಟ್ಟಿತ್ತು.
ಆ ಬಸವಣ್ಣನ ಭೃತ್ಯನಾಗಿರಿಸಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೦॥

೧೨೬೦
ಅರಿವೇ ತಾನಾಗಿ ತೊಳಗಿ ಬೆಳಗುತ್ತಿಪ್ಪ
ಲಿಂಗೈಕ್ಯನು ಎಂತಿರ್ಪನೆಂದಡೆ:
ಬಾವನ್ನದೊಳಗಿಪ್ಪ ಸುಗಂಧದಂತೆ,
ಮಾಣಿಕ್ಯದೊಳಗಿಪ್ಪ ಸುರಂಗಿನಂತೆ,
ಚಿನ್ನದೊಳಗಿಪ್ಪ ಬಣ್ಣದಂತೆ ಭೇದವಿಲ್ಲದಚಲನಯ್ಯಾ,
ಸಂಪಗೆ ಕಂಪುಂಡ ಭ್ರಮರದಂತೆ
ಸೌರಾಷ್ಟ್ರ ಸೋಮೇಶ್ವರಲಿಂಗದ
ಪರಮಸುಖದೊಳಗೆ ಪರವಶನಾದ ಲಿಂಗೈಕ್ಯನು. ॥೩೧॥

೧೨೬೧
ಅರಿಷಡ್ವರ್ಗದುರವಣಿಗೆಗೊಳಗಾಗನಾಗಿ ಭಕ್ತಕಾಯನಾದ.
ಪಂಚೇಂದ್ರಿಯದ ಬಳಿ ಸಲ್ಲನಾಗಿ ಗುರುಭಕ್ತನಾದ.
ಸಪ್ತಧಾತುವಿನ ಗುಣವಿಡಿಯನಾಗಿ ಸಮಯಾಚಾರಿಯಾದ.
ಅಷ್ಟಮದಗಜದ ಬಟ್ಟೆಯ ಮೆಟ್ಟನಾಗಿ ಆಚಾರವಂತನಾದ.
ಕರ್ಮಕಾಯದಲ್ಲಿ ಬಳಿಸಲ್ಲನಾಗಿ ನಿರ್ಮಲ ನಿತ್ಯಸತ್ಯನಾದ.
ಜ್ಞಾನಕಾಂಡದಲ್ಲಿ ಹೂಣಿಹೊಕ್ಕನಾಗಿ ಸೃಷ್ಟಿಯೊಳಗೆ
ಭಕ್ತಿ ಎಂಬ ಅಚ್ಚಾದ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೨॥

೧೨೯೨
ಅರುಹೆಂಬ ಗುರುವಿನ ಕೈಯಲ್ಲಿ, ವಿರತಿಯೆಂಬ ಶಿವದಾರಮಂ ಕೊಟ್ಟು,
ಸುಮತಿಯೆಂಬ ಸಜ್ಜೆಯಂ ಪವಣಿಸಿ,
ಸಮತೆಯೆಂಬ ಲಿಂಗಸಾಹಿತ್ಯವ ಬಿಜಯಂಗೈಸಿಕೊಂಡು,
ಸರ್ವಜೀವದಯಾಪರನೆಂದು ಲಿಂಗಾರ್ಚನೆಯಂ ಮಾಡುವ ಭಕ್ತನ
ಕರಾಧಾರದ ಲಿಂಗವು ತಪ್ಪಿ ಆಧಾರಸ್ಥಾಪ್ಯವಾದಡೇನು? ಶಂಕೆಗೊಳಲಿಲ್ಲ.
ತೆಗೆದುಕೊಂಡು ಮಜ್ಜನಕ್ಕೆರೆವುದೇ ಸದಾಚಾರ.
ಮುನ್ನ ಶ್ರೀಗುರು ಷಟ್‌ಸ್ಥಲವನು ಅಂತರಂಗದಲ್ಲಿ ನಿಕ್ಷೇಪಿಸಿದನಾಗಿ
ದೃಶ್ಯಕ್ಕೆ ತ್ಯಾಗವಲ್ಲದೆ ಅದೃಶ್ಯಕ್ಕೆ ತ್ಯಾಗವುಂಟೆ? ಇಲ್ಲ.
ಉಂಟೆಂದನಾದಡೆ ಗುರುದ್ರೋಹ.
ಆ ಭಕ್ತನಿಂತವನಂತವನೆಂದು ದೂಷಿಸಿ ನುಡಿದವರಿಗೆ
ಅಘೋರನರಕ ತಪ್ಪದಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೩॥

೧೨೯೩
ಗ್ರಂಥ:
'ಅರ್ಘ್ಯಂ ಪಾದ್ಯಂ ತಥಾಚಮ್ಯಂ ಸ್ನಾನಂ ಪಂಚಾಮೃತಾದಿಭಿಃ
ದರ್ಪಣಂ ಧೂಪದೀಪಂ ಚ ಚಾಮರಂ ಆತಪತ್ರಕಂ
ಗೀತಂ ವಾದ್ಯಂ ತಥಾ ನೃತ್ಯಂ ನಮಸ್ಕಾರಂ ಜಪಂ ತಥಾ
ಪ್ರದಕ್ಷಿಣಂ ಕ್ರಮೇಣೋಕ್ತಂ ಷೋಡಶಸ್ಯೋಪಚಾರಕಂ
ಗಂಧಾಕ್ಷತಂ ಚ ಪುಷ್ಪಂ ಚ ವಸ್ತ್ರಾಭರಣಾನುಲೇಪನಂ
ನೈವೇದ್ಯಂ ಚ ತಾಂಬೂಲಂ ಅರ್ಚನಂ ಚಾಷ್ಟಮಂ ಭವೇತ್'
–ಇಂತು ಅಷ್ಟವಿಧಾರ್ಚನೆ ಷೋಡಶೋಪಚಾರವು.
ಗುರುವಿಂಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ
ಮುಂತಾಗಿ ಮಾಡುವುದು.
ಭಕ್ತಿ ಜ್ಞಾನ ವೈರಾಗ್ಯವಿದೆಂದರಿಯಲು ಮೋಕ್ಷ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೪॥

೧೨೯೪
ಅರ್ಪಿತದ ಮಹಿಮೆಯ ಅನುವ, ಪ್ರಸಾದದ ಮಹಿಮೆಯ
ಆವಂಗಾವಂಗರಿಯಬಾರದು.
ವಿಷ್ಣ್ವಾದಿ ದೇವ ದಾನವ ಮಾನವ, ಋಷಿಜನಂಗಳಿಗೆಯೂ ಅರಿಯಬಾರದು.
ಕಿಂಚಿತ್ತರಿದಡೆಯೂ ಅರ್ಪಿಸಬಾರದು.

ಕಿಂಚಿತ್ ಅರ್ಪಿಸಿದಡೆಯೂ ಪ್ರಸಾದವ ಹಡೆಯಬಾರದು.
ಕಿಂಚಿತ್ ಪ್ರಸಾದವ ಹಡೆದಡೆಯೂ,
ಪ್ರಸಾದವ ಭೋಗಿಸಿ ಪರಿಣಾಮದಿಂ ಮುಕ್ತರಾಗಿರಲರಿಯರು.
ಶಿವ ಶಿವಾ! ಗುರು ಲಿಂಗ ಜಂಗಮಕ್ಕೆ ತನು ಮನ ಧನವನರ್ಪಿಸಲರಿಯರು.
ಗುರು ಲಿಂಗ ಜಂಗಮವನೇಕೀಭವಿಸಿ ಮಹಾಲಿಂಗವನು ನೇತ್ರದಲ್ಲಿ ಧರಿಸಿ,
ನೇತ್ರಲಿಂಗಕ್ಕೆ ನೇತ್ರದ ಕೈಯಲೂ ರೂಪವನರ್ಪಿಸಲರಿಯರು.
ಆ ಮಹಾಲಿಂಗವನು ಶ್ರೋತ್ರದಲ್ಲಿ ಧರಿಸಿ
ಶ್ರೋತ್ರಲಿಂಗಕ್ಕೆ ಶ್ರೋತ್ರದ ಕೈಯಲೂ ಮಹಾಶಬ್ದವನರ್ಪಿಸಲರಿಯರು.
ಆ ಮಹಾಲಿಂಗವನು ಘ್ರಾಣದಲ್ಲಿ ಧರಿಸಿ
ಘ್ರಾಣಲಿಂಗಕ್ಕೆ ಘ್ರಾಣದ ಕೈಯಲೂ ಸುಗಂಧವನರ್ಪಿಸಲರಿಯರು.
ಆ ಮಹಾಲಿಂಗವನು ಜಿಹ್ವೆಯಲ್ಲಿ ಧರಿಸಿ
ಜಿಹ್ವೆಯ ಲಿಂಗಕ್ಕೆ ಜಿಹ್ವೆಯ ಕೈಯಲೂ ಮಹಾರಸವನರ್ಪಿಸಲರಿಯರು.
[ಆ ಮಹಾಲಿಂಗವನು ತ್ವಕ್ಕಿನಲ್ಲಿ ಧರಿಸಿ
ತ್ವಕ್‌ಲಿಂಗಕ್ಕೆ ತ್ವಕ್‌ದ ಕೈಯಲ್ಲಿ ಮಹಾಸ್ಪರ್ಶವನರ್ಪಿಸಲರಿಯರು].
ಆ ಮಹಾಲಿಂಗವನು ಭಾವದಲ್ಲಿ ಧರಿಸಿ
ಭಾವಲಿಂಗಕ್ಕೆ ಭಾವದ ಕೈಯಲೂ ಸರ್ವಸುಖಪರಿಣಾಮ
ಮೊದಲಾದ ಭಾವಾಭಾವ ನಿಷ್ಕಲವಸ್ತುವನರ್ಪಿಸಲರಿಯರು.
ಆ ಮಹಾಲಿಂಗವನು ಮನದಲ್ಲಿ ಧರಿಸಿ
ಮನೋಮಯಲಿಂಗಕ್ಕೆ ಮನದ ಕೈಯಲೂ
ಸಕಲ ನಿಷ್ಕಲಾದಿ ರೂಪವನರ್ಪಿಸಲರಿಯರು.
ಆ ಮಹಾಲಿಂಗವನು ವಾಕ್ಕಿನಲ್ಲಿ ಧರಿಸಿ ವಾಕ್‌ಲಿಂಗಕ್ಕೆ ವಾಕ್ಕಿನ ಕೈಯಲ್ಲೂ
ಪಡಿಪದಾರ್ಥ ಮೊದಲಾದ ಸಕಲದ್ರವ್ಯಂಗಳ
ರುಚಿ ಮೊದಲಾದ ಸುಖವನರ್ಪಿಸಲರಿಯರು.
ಆ ಮಹಾಲಿಂಗವನು ಇಂತು ಮನೋವಾಕ್ಕಾಯವೆಂಬ ತ್ರಿವಿಧದಲ್ಲಿ,
ಏಕಾದಶ ಅರ್ಪಿತ ಸ್ಥಾನವನರಿದು
ಅರ್ಪಿತವಾದ ಏಕಾದಶ ಪ್ರಸಾದವನರಿಯರು.
ಮಹಾರ್ಪಿತವನು ಮಹಾಪ್ರಸಾದವನು ಎಂತೂ ಅರಿಯರು.
'ಪರಂಜ್ಯೋತಿಃ ಪರಂ ತತ್ತ್ವಂ ಪರಾತ್ಪರತರಂ ತಥಾ
ಪರವಸ್ತು ಪ್ರಸಾದಃ ಸ್ಯಾದಪ್ರಮಾಣಂ ಪ್ರಸಾದಕಃ'
ಎಂಬುದನರಿಯರು.
ಪೂಜಕಾ ಬಹವಸ್ಸಂತಿ ಭಕ್ತಾಶ್ಯತಸಹಸ್ರಶಃ
ಮಹಾಪ್ರಸಾದಪಾತ್ರಂ ತು ದ್ವಿತ್ರಾ ವಾ ನೈವ ಪಂಚಷಃ
ಪ್ರಸಾದಂ ಗಿರಿಜಾದೇವಿ ಸಿದ್ಧಕಿನ್ನರಗುಹ್ಯಕಾಃ

ವಿಷ್ಣುಪ್ರಮುಖದೇವಾಶ್ಚ ನ ಜಾನಂತಿ ಶಿವಂಕರಂ,
ಎಂಬ ಪ್ರಸಾದ ಎಲ್ಲರಿಗೆಯೂ ಅಸಾಧ್ಯ. ಅರ್ಪಿತ ಮುನ್ನವೇ ಅಸಾಧ್ಯ.
ಅರ್ಪಿತವೂ ಪ್ರಸಾದವೂ ಚನ್ನಬಸವಣ್ಣಂಗಾಯಿತ್ತು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೫॥

೧೨೯೫
ಅಷ್ಟಾಷಷ್ಠಿತೀರ್ಥಂಗಳ ಮೀಯಲ್ಕೆ
ಆತ ಹಿರಿಯನೇ? ಅಲ್ಲ, ಆತನ ಅಂತಃಕರಣ ಶುದ್ಧವಿಲ್ಲಾಗಿ.
ಸಂಧ್ಯಾ ಸಮಾಧಿ ಜಪ ತಪ ಮಂತ್ರರೂಢನಾಗಿರಲಿಕೆ
ಆತ ಹಿರಿಯನೇ? ಅಲ್ಲ, ಆತನ ಮನ ಶುದ್ಧವಿಲ್ಲಾಗಿ.
ವಚನಾರಂಭದಲ್ಲಿ ನುಡಿಗಲಿತಲ್ಲಿ ಆತನನುಭವಿಯೆ?
[ಅಲ್ಲ], ಆತ ಇದಿರ ಬೋಧಿಸುವ ಭುಂಜಕನಾಗಿ.
ಕೋಪವೇ ರಾಶಿ, ಕುಟಿಲವೇ ಲಚ್ಚಣ,
ಸಟೆಯೇ ಕೊಳಗ, ಮಾಯವೇ ಅಳತೆ,
ಅರಿಷಡ್ವರ್ಗ ಪಂಚೇಂದ್ರಿಯವಿಡಿದಾಡುವನ್ನಕ್ಕ ಭಕ್ತನೇ ? ಭಕ್ತನಲ್ಲ.
ಭಕ್ತನ ನಡೆ ಪಾವನ, ನುಡಿಯೇ ತೀರ್ಥ, ಒಡಲೇ ಕ್ಷೇತ್ರ,
ನಿಮ್ಮ ಶರಣರ ಅಂಗಳವೇ ವಾರಣಾಸಿ,
ಕೇವಲ ದಾಸೋಹವೇ ಕರ್ತವ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೬॥

೧೨೯೬
ಅರ್ಹನ್, ಬುದ್ಧ, ಚಾರ್ವಾಕ, ಮೀಮಾಂಸಕ, ನೀಲಪಟರೆಂಬವರು
ಕಾಯದರುಶನಂಗಳಲ್ಲಿ ದೀಕ್ಷಿತರಾಗಿ
ಸೌರ ಶಾಕ್ತೇಯ ವೈಷ್ಣವ ಗಾಣಾಪತ್ಯ ದರುಶನಂಗಳಂ ಹೊಕ್ಕು,
ಒಡಲ ಮುಡುಹಂ ಸುಟ್ಟು, ಮಟ್ಟಿಯನಿಟ್ಟು
ಉಭಯಗೆಟ್ಟು ಶಿವಧ್ಯಾನವಿಲ್ಲದೆ ನರಕಕ್ಕಿಳಿದು
ಅಧಮರಾಗಿ ಹೋಗಿ ಎಂದು ಹೇಳಿತ್ತೇ ವೇದ?
'ಶಿವಾರ್ಚನವಿಹೀನಂ ತು ಜನ್ಮಮೃತ್ಯೂನ ಮುಂಚತಃ' ಎಂದುದಾಗಿ
ಮರಳಿ ಮರಳಿ ಜನ್ಮಕ್ಕೆ ಬಂದು
ಮಾಡಿದ ಕರ್ಮದಿಂದ ನರಕಕ್ಕಿಳಿದು ಮಗ್ನರಾಗಹೇಳಿತ್ತೇ ವೇದ?
'ಓಂ ಅಪ್ರಶಿಖಾಯಾಂ ತ್ವಾಮಯಾಧನ್ಯ ಜೀವಾಗಮತ್'
ಎಂದು ಹೇಳಿದ ಶ್ರುತ್ಯರ್ಥವನರಿಯದೆ
ಹೋತನಂ ಕೊಂದು ಹೋಮಂಗಿಕ್ಕಿ ಚಾಂಡಾಲರಾಗ ಹೇಳಿತ್ತೇ ವೇದ?
ಶಿವಾರ್ಚಕಪದದ್ವಂದ್ವಯಜನಾದ್ಧಾರಣಾದಪಿ

ಶಿವನಾಮ್ನಸ್ಸದಾಕಾಲಂ ಜಪಾದ್ವಿಪ್ರೋ ಭವಿಷ್ಯತಿ'
ಎಂಬರ್ಥವನರಿದು ಅರಿಯದೆ ನರಕಕ್ಕಿಳಿಯ ಹೇಳಿತ್ತೇ ವೇದ?
'ಏವಂ ರುದ್ರಾಯ ವಿಶ್ವದೇವಾಯ
ರುದ್ರಪಾದಾಯ ದತ್ತಮಸ್ತು' ಎಂದುದಲ್ಲದೆ
'ವಿಷ್ಣುಪಾದಾಯ ದತ್ತಮಸ್ತು' ಎಂದು ಹೇಳುವ ವೇದ ಉಳ್ಳರೆ ಹೇಳಿ?
ಅದಂತಿರಲಿ, ಕಾಶಿಕಾಂಡದಲ್ಲಿ ಹೇಳಿದ ಪುರಾಣಾರ್ಥದ ಹಾಗೆ
ವ್ಯಾಧನ ಕೈಯಿಂದ ವಿಷ್ಣು ಹತವಾದನೆಂದಡೆ ಪರಿಣಾಮಿಸುವರು,
ವೀರಭದ್ರನ ಕೈಯಿಂದ ವಿಷ್ಣು ಹತವಾದನೆಂದಡೆ ಅದು ಮಿಥ್ಯವೆಂಬರು.
ಮಹಾಭಾರತದಲ್ಲಿ ವಿಷ್ಣು ಈಶ್ವರಂಗೆ ಬಿನ್ನಹಂ ಮಾಡಿದುದು:
'ಮನ್ನಾಥೋ ಲೋಕನಾಥಶ್ಚ ಅದ್ಯಕ್ಷರಸಮಾಯುತಃ
ಏಕ ಏವ ಮಹಾದೇವೋ ಮಹೇಶಾನಃ ಪರಸ್ಥಿತಃ
ಈಶ್ವರಸ್ಯ ಸಮೋ ನಾಸ್ತಿ ಬ್ರಹ್ಮಾ ವಿಷ್ಣುಶ್ಚ ಕಿಂಕರಃ
ಶಿವವಾಕ್ಯಸಮೋ ನಾಸ್ತಿ ವೇದಶಾಸ್ತ್ರಾಗಮೇಷು ಚ'
ಎಂಬ ಮಹಾವಿಷ್ಣುವಿನ ಮಹಾಭಾಷ್ಯವ ಕೇಳರಿಯಿರೇ,
ಓದಿದ ವೇದದ ಮಾತು ತಥ್ಯವೇ? ಅಲ್ಲ.
ನಿಮ್ಮಧಿದೇವತೆಯಾಗುತಂ ಇಹ ವಿಷ್ಣುವಿನ ಮಾತು ಮಿಥ್ಯವೆಂದರೆ ಬಿಡಿ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಯ್ಯನಜಾತನೆಂದಿಕ್ಕಿದೆ
ಮುಂಡಿಗೆಯನಾರ್ಪವರೆತ್ತಿಕೊಳ್ಳಿರೆ. ॥೩೭॥

೧೨೯೭

ಆಚಾರಕರ್ಪುರವಳವಟ್ಟಿತ್ತು, ಶಂಕರದಾಸಿಮಯ್ಯಂಗಳಿಗೆ.
ವಿಚಾರಕರ್ಪುರವಳವಟ್ಟಿತ್ತು, ಸಕಳೇಶಮಾದಿರಾಜಯ್ಯಂಗಳಿಗೆ.
ಅವಿಚಾರಕರ್ಪುರವಳವಟ್ಟಿತ್ತು, ಅಲ್ಲಮಪ್ರಭುದೇವರಿಗೆ.
ಇಂತೀ ತ್ರಿವಿಧಕರ್ಪುರವಳವಟ್ಟಿತ್ತು, ನಿಜಗುಣದೇವಂಗೆ.
ಇಂತೀ ನಾಲ್ವರೊಳಡಗಿತ್ತು ಜಂಗಮಸ್ಥಲ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೮॥

೧೨೯೮

ಆಚಾರಕರ್ಪುರ, ವಿಚಾರಕರ್ಪುರ, ಅವಿಚಾರಕರ್ಪುರದ
ನಿರ್ಣಯವಾವುದೆನಲು:
ಅನ್ಯದೈವ ಭವಿಮಿಶ್ರ ಅನಾಚಾರ ಭಕ್ಷಾಭಕ್ಷ ಪೇಯಾಪೇಯ ಅನ್ಯಾಯ
ಇಂತಿವರನುಸರಣಿಗೊಳ್ಳದೆ
ವಿಚಾರಿಸಿ ಭಕ್ತರ ಗೃಹವ ಹೋಗುವುದೀಗ ಆಚಾರಕರ್ಪುರ.

ನಾನಾರೊ? ಎಂದು ವಿಚಾರಿಸಿ
ತನಗೆ ಮುಸುಕಿದ ಮಾಯಾಪಟಲದ ಭ್ರಮೆಯಂ ಪರಿದು
ಶ್ರೀಗುರುವಿನ ಸದ್ಭಾವಜ್ಞಾನಮನಕರಣದಿಂ
ಉದಯಿಸಿದವನಜಾತಸ್ವಯಂಭುವೆಂದರಿದು,
ಆಶೆಯಾಮಿಷ ಕಾಯಗುಣ ಇಂದ್ರಿಯದುರವಣೆ
ಮನೋವಿಕಾರಾದಿಗಳಿಗೆ ಸಿಲ್ಕದೆ,
ಆ ಮನ ಮೊದಲಾದ ಕಾರಣಂಗಳ ತನ್ನರಿವಿನಾಜ್ಞೆಯಿಂ
ಲಿಂಗದಲ್ಲಿ ನೆನಹು ನೆಲೆಗೊಳಿಸಿ, ನೋಟವನಿಮಿಷವೆನಿಸಿ,
ಅನ್ಯನುಡಿ ಅನ್ಯನಡೆಯೆಲ್ಲಮಂ ಮುನ್ನವೆ ತ್ಯಜಿಸಿ,
ಲಿಂಗದ ನಡೆ ನುಡಿ ಚೈತನ್ಯವಳವಟ್ಟು,
ಪರಶಿವನ ಪರತತ್ವವೆ ಪರಮಕರ್ಪರ ವಿಷಯ,
ಶಿಕ್ಷಾದಂಡವೆ ಕಟ್ಟಿಗೆ, ಪಂಚಭೂತಕಾಯವಸುಳಿದ ಅಕಾಯವೆ ಕಂಥೆ,
ಪರಮವೈರಾಗ್ಯವೆ ಯೋಗವಟ್ಟಿಗೆ, ನಿರಾಶಾಪಥವೆ
ಯೋಗವಾವುಗೆ, ನಿಷ್ಕಾಮಿತವೆ ಒಡ್ಯಾಣ. ಬಿಂದುಚಲಿಸಿದ ಸಂಧಾನಗತಿ ನಿಂದು
ಲಿಂಗಸಂಯೋಗದ ಸಮರತಿಯ ಮುಕ್ತ್ಯಂಗನೆಯೆನಿಸುವ
ಚಿಚ್ಛಕ್ತಿಯ ಕೂಟದ ಊರ್ಧ್ವರೇತಸ್ಸಿನ ಪರಮವಿಶ್ರಾಂತಿಯೆ ಕೌಪೀನ,
ಅಪ್ರಮಾಣ ಚಾರಿತ್ರ್ಯವೆ ಆಧಾರಘುಟಿಕೆ,
ಲಿಂಗಗಂಭೀರದ ಮಹದೈಶ್ವರ್ಯವೆ ವಿಭೂತಿ,
ನಿರುಪಾಧಿಕ ತೇಜೋಮಯವಾದ ಮಹಾಲಿಂಗದ ಪ್ರಕಾಶವೆ
ಭಸ್ಮೋದ್ಧೂಳನಾಗಿ,
ಆ ಭಸ್ಮೋದ್ಧೂಳನ ಪ್ರಕಾಶದಿಂ ಅಜ್ಞಾನತಮವಳಿವ ಸುಜ್ಞಾನಕ್ಷೇತ್ರದಲ್ಲಿ ಸುಳಿವ
ಸುಳುಹೆ ದೇಶಾಂತರವಾಗಿ ಚರಿಸುವುದೆಂತೆಂದಡೆ:
'ಜಂಗಮಸ್ಯ ಗೃಹಂ ನಾಸ್ತಿ ಸ ಗಚ್ಛೇತ್ ಭಕ್ತಮಂದಿರಂ
ಯದಿ ಗಚ್ಛೇತ್ ಭವೇರ್ಗೇಹಂ ತದ್ಧಿಗೋಮಾಂಸಭಕ್ಷಣಂ' ಎಂದುದಾಗಿ
ಇಂತೀ ವಿಚಾರದಲ್ಲಿ ಸುಳಿವ ಸುಳುಹೆ ವಿಚಾರಕರ್ಪರ.
'ವೇದಾತೀತಾಗಮಾತೀತಃ ಶಾಸ್ತ್ರಾತೀತೋ ನಿರಾಶ್ರಯಃ
ಆನಂದಾಮೃತಸಂತುಷ್ಟೋ ನಿರ್ಮಮೋ ಜಂಗಮಃ ಸ್ಮೃತಃ'
ಇಂತೆಂದುದಾಗಿ,
ಕಾಯಗುಣವಳಿದು, ಪರಕಾಯಗುಣವುಳಿದು,
ಇಂದ್ರಿಯಗುಣವಳಿದು, ಅತೀಂದ್ರಿಯತ್ವದಲ್ಲಿ ವಿಶ್ರಾಂತಿಯನ್ನೈದಿ,
ಕರಣಗುಣವಳಿದು, ನಿರಾವರಣ ನಿರ್ಮಲ ನಿರ್ವಿಕಾರ
ನಿಜಲಿಂಗದಲ್ಲಿ ನಿಶ್ಚಲಿತನಾಗಿ,
ಜೀವನ ಗುಣವಳಿದು, ಪರಮಾತ್ಮಲಿಂಗದಲ್ಲಿ ಘನಚೈತನ್ಯ ತಲ್ಲೀಯವಾಗಿ,

ತನಗಿದಿರಿಟ್ಟು ತೋರುವ ತೋರಿಕೆಯೆಲ್ಲವೂ
ತಾನಲ್ಲದೇನು ಇಲ್ಲವೆಂದರಿದು,
ಕಾಬವೆಲ್ಲವೂ ಶಿವರೂಪ, ಕೇಳುವವೆಲ್ಲವೂ ಶಿವಾನುಭಾವ,
ನಡೆದುದೆಲ್ಲವೂ ಶಿವಮಾರ್ಗ, ನುಡಿದುದೆಲ್ಲವೂ ಶಿವತತ್ವ,
ಕೊಡುವ ಕೊಂಬೆಡೆಯಲ್ಲಿ ಎಡೆದೆರಪಿಲ್ಲದೆ
ಅಖಂಡಾದ್ವಯ ಪರಿಪೂರ್ಣಚಿದಾನಂದರೂಪ ತಾನೆಂದರಿದು,
ನಿಂದ ನಿಲವೆ ಅವಿಚಾರಕರ್ಪರ. ಅದೆಂತೆಂದಡೆ:
'ಚರಾಚರವಿಹೀನಂ ಚ ಸೀಮಾಸೀಮಾವಿವರ್ಜಿತಂ
ಸಾಕ್ಷಾನ್ ಮುಕ್ತಿಪದಂ ಪ್ರಾಹುರುತ್ತಮಂ ಜಂಗಮಸ್ಥಲಂ'
ಎಂದುದಾಗಿ,
ಶಬ್ದ ಚಲನೆಯಿಲ್ಲದುದೆ ಲಿಂಗವೆಂದರಿದು,
ಬಿಂದು ಚಲನೆಯಿಲ್ಲದುದೆ ಜಂಗಮವೆಂದರಿದು,
ಆ ಬಿಂದುವನೆ ಲಿಂಗಮುಖದಲ್ಲಿ ನಿಲಿಸಿ
ಆ ನಾದವನೆ ಘನಚೈತನ್ಯಜಂಗಮಮುಖದಲ್ಲಿ ನಿಲಿಸಿ,
ಆ ನಾದಬಿಂದುವನೊಂದು ಮಾಡಿ
ನಿಂದ ನಿಲವೆ ಉಪಮಾತೀತವದೆಂತೆಂದಡೆ:
'ನಾದನಿಶ್ಚಲತೋ ಲಿಂಗಂ ಬಿಂದುನಿಶ್ಚಲತೋ ಚರಃ
ನಾದಬಿಂದು ಸಮಾಯುಕ್ತ ಶ್ರೇಷ್ಠಂ ತಲ್ಲಿಂಗಜಂಗಮಂ'
ಎಂದುದಾಗಿ,
'ಮನಶ್ಚಂದಿರ ಇತ್ಯುಕ್ತಂ ಚಕ್ಷುರಾದಿತ್ಯ ಉಚ್ಯತೇ
ಚಂದಿರಾದಿತ್ಯಸಂಯುಕ್ತಂ ಉತ್ತಮಂ ಜಂಗಮಸ್ಥಲಂ'
ಎಂದುದಾಗಿ,
'ಮನಸ್ಥಂ ಮನೋಮಧ್ಯಸ್ಥಂ ಮನೋಮಧ್ಯಸ್ಥ ವರ್ಜಿತಾಃ
ಮನಸಾ ಮನ ಆಲೋಕ್ಯ ಸ್ವಯಂ ಸಿದ್ಧಾ ಸುಯೋಗಿನಃ'
ಇಂತೆಂದುದಾಗಿ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ,
ನಿಮ್ಮ ಶರಣರಜಾತಜನಿತರು, ಅನುಪಮಚರಿತರು. ॥೩೯॥

೧೪೪

ಆತ್ಮಶುದ್ಧಿ: ಗುರು ಹಸ್ತವ ಮಸ್ತಕದಲ್ಲಿ ನ್ಯಸ್ತಮಾಡಿದನಾಗಿ.
ಸ್ಥಾನಶುದ್ಧಿ: ಶಿವಲಿಂಗವಿದ್ದುದೇ ಅವಿಮುಕ್ತಕ್ಷೇತ್ರವಾಗಿ.
ದ್ರವ್ಯಶುದ್ಧಿ: ಶಿವಲಿಂಗಸನ್ನಿಧಿಮಾತ್ರ ಪವಿತ್ರೀಕೃತವಾಗಿ.
ಮಂತ್ರಶುದ್ಧಿ: ಹರಮಂತ್ರಮಯವಾಗಿ

ಅಂಗಶುದ್ಧಿ: ನಿರ್ಮಳ ನಿರುಪಮ ಸತ್ಯ[ಸ್ಯ]ಸತ್ಯ ತಾನಾಗಿ.
ಇಂತು ಪಂಚಶುದ್ಧಿ ಎಂದರಿದು,
ಪ್ರಾಣಲಿಂಗಸಂಬಂಧಿಯಾಗಿಪ್ಪುದೇ ಆಗಮ.
ಬೇರೆ ಆಗಮವಿಲ್ಲ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೪೦॥

೧೩೦೦
'ಆತ್ಮಾಽಹಂ' ಎಂಬರು ತಾವು ಆತ್ಮವಿತ್ತುಗಳೆಲ್ಲ.
ಆತ್ಮನಂಥವನಿಂಥವನೆಂದು ಕಂಡವರುಂಟೆ ಅಯ್ಯ?
'ಆತ್ಮಜ್ಞಾತಾಽಹಂ' ಎಂಬ ಶ್ರುತಿಪ್ರಮಾಣವುಂಟೆ ಅಯ್ಯ?
ಆತ್ಮ ವಾಙ್ಮನಕ್ಕಗೋಚರನಯ್ಯಾ,
ಆತ್ಮ 'ತತ್ತ್ವಮಸಿ' ಎಂಬ ವಾಕ್ಯದಿಂದತ್ತತ್ತಲಯ್ಯಾ.
ಆತ್ಮನ ಕಂಡಿಹೆನೆಂಬ ಅರೆಮರುಳೆ ಕೇಳಾ, ಆತ್ಮನು ತಾನಾದ ವಸ್ತು,
ನೀರು ನೀರ ಕೂಡಿದಂತೆ, ಇಹ ಸಹಜಾತ್ಮನ ಕಾಬಡೆ
ಕಾಯವಿಡಿದು ಕಾಣಬಹುದೆ ಅಯ್ಯಾ?
ಓಂ ಆತ್ಮನು ಪ್ರಾಣೇಶಲಿಂಗ, ಪ್ರಸಾದಕಾಯವೆಂದರಿದಾತನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೪೧॥

೧೩೦೧
ಆದಿಮಧ್ಯ ಅವಸಾನದಲ್ಲಿಯೂ ಎನ್ನನು ಆಶೆಯೇ ಗ್ರಹಿಸುತ್ತಿದೆ.
ಶಿವ ಶಿವಾ, ಆಸೆಯಿಂದ ಘಾಸಿಯಾಗುತ್ತಿದ್ದೇನೆ.
ಶಿವ ಶಿವಾ, ಆ ಹೊನ್ನು ಹೆಣ್ಣು ಮಣ್ಣಿನ ಆಶೆ ಘಾಸಿಮಾಡಿ ಕಾಡುತ್ತಿದೆ.
ಶಿವ ಶಿವಾ, ಈ ಆಶೆಯ ಕೆಡಿಸಿ
ನಿಮ್ಮ ಶ್ರೀಪಾದದಾಸೆಯೆ ನಿವಾಸವಾಗಿರಿಸಯ್ಯಾ ಎನ್ನನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೪೨॥

೧೩೦೨
ಆದಿಲಿಂಗ ಅನಾದಿಶರಣನೆಂಬುದು ತನ್ನಿಂದ ತಾನಾಯಿತ್ತು ಕೇಳಿರಣ್ಣಾ.
ಆದಿ ಕಾಯ, ಅನಾದಿ ಪ್ರಾಣ,
ಈ ಉಭಯದ ಭೇದವ ತಿಳಿದು ವಿಚಾರಿಸಿ ನೋಡಿರಣ್ಣಾ.
ಅಂತು ಅನಾದಿಯ ಪ್ರಸಾದ ಆದಿಗೆ ಸಲುವುದು. ಅದೆಂತೆಂದಡೆ,
'ಅನಾದಿಜಂಗಮಶ್ಚೈವ ಆದಿಲಿಂಗಸ್ಥಲಂ ಭವೇತ್
ಅನಾದೇಶ್ಚ ವಿರೋಧೇನ ತದುಚ್ಛಿಷ್ಟಂ ತು ಕಿಲ್ಬಿಷಂ'
ಇಂತೆಂದುದಾಗಿ,

ಪ್ರಾಣಪ್ರಸಾದವಿರೋಧವಾಗಿ ಪಿಂಡಪ್ರಸಾದವ ಕೊಂಡಡೆ
ಕೊಂಡುದು ಕಿಲ್ಬಿಷ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೪೩॥

೧೩೦೩
ಆದಿಸಿಂಹಾಸನವಾಗಿ, ಫಣಿಭೂಷಣವಾಗಿ,
ಕೂರ್ಮನುತ್ತಮಾಂಗವಾಗಿ, ದಿಕ್ಕರಿಗಳೆಂಟೂ ಪುಷ್ಪವಾಗಿ,
ಹದಿನಾಲ್ಕು ಭುವನದೊಳಗೊಂದಾಗಿ,
ಮೇರುಗಿರಿ ನಾಲ್ಕು ದಿಕ್ಕೂ ಶೃಂಗಾರವಾಗಿ,
ಮೇರು ರುದ್ರನ ಹಾವುಗೆಯಾದ ಪರಿಯೆಂತೊ?
ಹೊತ್ತುದನತಿಗಳೆದು ನಿಜದೊಳಗೆ ನಿಲಬಲ್ಲಡೆ
ನಿರಾಕಾರವ ನಿರ್ಮಿಸಬಾರದು.
ನಿರಾಕಾರವ ನಿಯಮಿಸುವಡೆ ಕರಣಾದಿಕಂಗಳಲ್ಲಿ
ಕಂದೆರೆದಡೆ ಜನನಕ್ಕೆ ದೂರ.
ಆಕಾರದಾಯು ಆಧಾರವಾಯು ಬ್ರಹ್ಮರಂಧ್ರದೊಳಗೆ
ಕಾರಣಪುರುಷ ತಾನಾಗಿದ್ದು, ಆರೈದು ಗಮನಿಸುವನಲ್ಲದೆ
ಕಾಯದಿಚ್ಛೆಗೆ ನಡೆದು ಸ್ಥಿತಿಕಾಲಕ್ಕೆ ಗುರಿಯಹನಲ್ಲ.
ಕಾಯ ಭೋಗಿಸುವ ಭೋಗವ ಭುಂಜಿಸುವನ್ನಕ್ಕರ
ವಾಯುಪ್ರಾಣಿ ಸಾಯದಲ್ಲಾ, ಅದೇನು ಕಾರಣವೆಂದಡೆ
ಕರ್ಪುರದ ಪುತ್ಥಳಿಯ ಕಿಚ್ಚಿನಲ್ಲಿ ಸುಟ್ಟು ಅಸ್ಥಿಯನರಸಲುಂಟೆ?
ಜ್ಞಾನಾಗ್ನಿಯಿಂದ ಪ್ರಾಣಭೋಗ ನಷ್ಟ, ಆಕಾರದ ಪ್ರಾಣದ ಪರಿ ನಷ್ಟ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೪೪॥

೧೩೦೪
ಆಯುಷ್ಯ ಭಾಷೆಯನು ಲಿಂಗವೆ ಕೊಡುವನಯ್ಯಾ.
ಇನ್ನಾರಿಗೂ ಕಕ್ಕುಲತೆ ಬಡದಿರಿ. ಲಿಂಗವು ಕೊಡುವ ಕಂಡಾ!
ಆದಡಿನ್ನು ಮತ್ತಾರಿಂಗೂ ಕಕ್ಕುಲತೆಯಬಡದಿರಿ.
ಲಿಂಗವಂತಂಗೆ ಕಕ್ಕುಲತೆಯಾದಡೆ ಲಿಂಗವಂತನೆನಿಸನು.
ಕಕ್ಕುಲತೆಯಲ್ಲಿ ಅನ್ಯರನಾಸೆಗೈದಡೆ ಲಿಂಗವು ರಕ್ಷಿಸನು, ಶಿವನಾಣೆ.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೪೫॥

೧೩೦೫
ಆಯುಷ್ಯವ ಹಿರಿದಾಗಿ ಕೊಟ್ಟಡೆ, ಲಿಂಗ ಒಲಿದುದಲ್ಲ.
ಭಾಷೆಯ ಹಿರಿದಾಗಿ ಕೊಟ್ಟಡೆ, ಲಿಂಗ ಒಲಿದುದಲ್ಲ.

ಅಷ್ಟಮಹದೈಶ್ವರ್ಯವ ಹಿರಿದಾಗಿ ಕೊಟ್ಟಡೆ
ಲಿಂಗ ಒಲಿದುದಕ್ಕೆ ಕುರುಹಲ್ಲ.
ಕಾಯ ಬೆರಸಿ ಕೈಲಾಸಕ್ಕೆ ಕೊಂಡು ಹೋದರೂ ಲಿಂಗ ಒಲಿದುದಲ್ಲ.
ಇವೆಲ್ಲಾ ಪೂಜಾ ಫಲಂಗಳು, ಕೈಕೂಲಿಕಾರತನವೈಸೆ.
ಲಿಂಗ ಒಲಿದ ಪರಿ:
ಗುರುಲಿಂಗಜಂಗಮ ಒಂದೆಂದು ಅರಿದು ನಿಶ್ಚಯ ಭಾವದಿಂ
ತನು ಮನ ಧನವಲ್ಲಿಯೇ ಅರ್ಪಿಸುವುದು, ಲಿಂಗ ಒಲಿದುದು.
ಕಾಯಭಾವವಳಿದು ಲಿಂಗವೆಂದು ಭಾವಿಸಿ
ಭಾವಸಿದ್ಧಿಯಾದುದು, ಲಿಂಗ ಒಲಿದುದು.
ಲಿಂಗವಲ್ಲದೆ ಇನ್ನಾವುದು ಘನ! ಎಂದರಿದುದೆ, ಲಿಂಗ ಒಲಿದುದು.
ಲಿಂಗವಂತನೆ ಲಿಂಗವೆಂದರಿದುದು, ಲಿಂಗ ಒಲಿದುದು.
ಸದಾಚಾರ ಲಿಂಗ ಒಲಿದುದು. ನಿರ್ವಂಚನೆ ಲಿಂಗ ಒಲಿದುದು.
ಸರ್ವಭೋಗವನು ಲಿಂಗವಂತರಿಗೆ ಭೋಗಿಸಲಿತ್ತು
ಸಮಭೋಗವಲ್ಲದೆ ಲಿಂಗವಂತಗೆ
ವಿಶೇಷ ಭೋಗ ತಾತ್ಪರ್ಯ ಮೋಹವಾಗದಡೆ, ಲಿಂಗ ಒಲಿದುದು.
ಪರಧನ ಪರಸ್ತ್ರೀ ಪರದ್ರವ್ಯ ಪರದೈವದಲ್ಲಿ ವರ್ತಿಸದಿದ್ದಡೆ, ಲಿಂಗ ಒಲಿದುದು.
ಲಿಂಗದಲ್ಲಿ ಭಕ್ತನಲ್ಲಿ ಅವಿನಾಭಾವವಳವಟ್ಟು ಭಾವಶುದ್ಧವಾಗಿ
ಸರ್ವಕ್ರೀ ಲಿಂಗಕ್ರೀಯಾದಡೆ ಲಿಂಗ ಒಲಿದುದು ದೃಷ್ಟವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೪೬॥

೧೩೦೬

ಆವಾವ ದ್ರವ್ಯಪದಾರ್ಥಂಗಳನು ಶಿವಲಿಂಗಕ್ಕರ್ಪಿಸಿ
ಪ್ರಸಾದವಾದಲ್ಲದೆ ಕೊಳ್ಳೆವೆಂಬ ಪ್ರಸಾದಿಗಳಿರಾ
ನೀವು ಅರ್ಪಿಸಿದ ಪರಿಯೆಂತು? ಪ್ರಸಾದವ ಕೊಂಡ ಪರಿಯೆಂತು ಹೇಳಿರೆ?
ರೂಪಾರ್ಪಿತವಾಯಿತ್ತು ನೇತ್ರದಿಂದ,
ಮೃದು, ಕಠಿಣ, ಶೀತೋಷ್ಣಂಗಳು ಅರ್ಪಿತವಾದವು ಸ್ಪರ್ಶನದಿಂದ.
ನೇತ್ರ ಹಸ್ತವೆರಡಿಂದ್ರಿಯಂಗಳಿಂದವೂ ರೂಪ ಸ್ಪರ್ಶನವೆಂಬೆರಡೆ
ವಿಷಯಂಗಳರ್ಪಿತವಾದವು.
ನೀವಾಗಳೇ ಪ್ರಸಾದವಾಯಿತ್ತೆಂದು ಭೋಗಿಸತೊಡಗಿದಿರಿ.
ಇಂತು ದ್ರವ್ಯಂಗಳ ರಸವನೂ, ಗಂಧವನೂ, ಶಬ್ದವನೂ,
ಶ್ರೋತ್ರ, ಘ್ರಾಣ, ಜಿಹ್ವೆಗಳಿಂದ ಮೂರು ವಿಷಯಂಗಳನೂ
ಅರ್ಪಿಸದ ಮುನ್ನ ಪ್ರಸಾದವಾದ ಪರಿ ಎಂತೊ?
ಅರ್ಪಿತವೆಂದನರ್ಪಿತವ ಕೊಂಬ ಪರಿ ಎಂತೊ?

ಪ್ರಸಾದಿಗಳಾದ ಪರಿ ಎಂತೊ ಶಿವ ಶಿವಾ.
ಪಂಚೇಂದ್ರಿಯಂಗಳಿಂದವೂ, ಶಿವಲಿಂಗಪಂಚೇಂದ್ರಿಯ ಮುಖಕ್ಕೆ
ಪಂಚವಿಷಯಂಗಳನೂ ಅರ್ಪಿಸಬೇಕು.
ಅರ್ಪಿಸಿ ಪ್ರಸಾದವ ಕೊಂಡಡೆ ಪ್ರಸಾದಿ.
ಅಲ್ಲದಿರ್ದಡೆ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆ ಅಲ್ಲ.
ಪ್ರಸಾದಿಯಲ್ಲ, ಭಕ್ತಿಯ ಪರಿಯೂ ಅಲ್ಲ.
ಪೂಜಕರೆಂಬೆನೆ ಪೂಜೆಯ ಒಪ್ಪವಲ್ಲ.
ಸಾಧಾರಣ ಪೂಜಕರಪ್ಪರು ಕೇಳಿರಣ್ಣಾ.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನ
ಸಾವಧಾನಾರ್ಪಿತದಲ್ಲಿ ಸ್ವಯವಾಗರಯ್ಯ. ॥೪೭॥

೧೩೦೭

ಆಸರಿನ ಭಕ್ತಜಡರುಗಳು ಬೇಸತ್ತು
ಜಂಗಮಕ್ಕೆರಗಿ ಪಾದಪ್ರಕ್ಷಾಲನೆಯಂ ಮಾಡಿ
ಪಾದೋದಕವ ಧರಿಸುತ್ತಿರ್ಪರು.
ಆವುದು ಕ್ರಮವೆಂದರಿಯರು.
ಅರಿದಡೆ ಪಾದೋದಕ, ಅರಿಯದಿರ್ದಡೆ ಬರಿಯ ನೀರೆಂದರಿಯರು.
ಅರಿದರಿದು ಬರುದೊರೆವೋದರು ಮಾನವರೆಲ್ಲ. ಅರಿವು ಸಾಮಾನ್ಯವೇ?
'ಶಿವಾತ್ಮಕಪದದ್ವಂದ್ವಪ್ರಕ್ಷಾಲನೆ ಜಲಂ ನರಾಃ
ಯೇ ಪಿಬಂತಿ ಪುನಸ್ತನ್ಯಂ ನ ಪಿಬಂತಿ ಕದಾಚನ'
ಇಂತೆಂಬ ವಚನವ ಕೇಳಿ ನಂಬುವುದು
ನಂಬದಿರ್ದಡೆ, ಮುಂದೆ ಭವಘೋರ ನರಕ ತಪ್ಪದು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೪೮॥

೧೩೦೮

ಆಶೆಯುಳ್ಳನ್ನಬರ ಆಶ್ರಯಿಸುವ ಆಶ್ರಯವು
ದಾಸಿಯಿಂದ ಕರಕಷ್ಟ ಕಾಣಿರೊ!
ಆಸೆಯೆ ದಾಸತ್ವ ಕಾಣಿರೊ, ಅಯ್ಯಾ!
ಆ ನಿರಾಶೆಯೆ ಈಶ ಪದ, ಕಾಣಿರಣ್ಣಾ!
ದಾಸತ್ವದ ಈಶತ್ವದ ಅನುವನು ವಿಚಾರಿಸಿ,
ಆಶೆ ಅಡಗಿದಡೆ ಅದೆ ಈಶ ಪದ, ತಪ್ಪದಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೪೯॥

೧೩೦೯

ಆಹ್ವಾನ ವಿಸರ್ಜನೆಗಳ ಮಾಡಲೇಕಯ್ಯ ಶರಣಂಗೆ?
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನೆಂದೆನಿಸಿದ ಬಳಿಕ
ಉಂಟೆ ಲೌಕಿಕರ ಉಪಚಾರಂಗಳು?
ನಿತ್ಯನಿರಂಜನನೈಕ್ಯನೆಂಬ ನಿರೂಪದಲ್ಲಿ ಸ್ವರೂಪ ತಾನಾದ ಬಳಿಕ
ಉಂಟೆ ಲೌಕಿಕರ ತನುವಿನಂತೆ ತನುಗುಣ?
ತನುಗುಣ ನಾಸ್ತಿಯಾದ ಬಳಿಕ, ಉಂಟೆ ತಾಮಸಕ್ಕೆ ಎಡೆ? ಇಲ್ಲ.
ಅದು ಹೇಗೆಂದಡೆ–
ಗುರುಕೃಪಾದೃಷ್ಟಿಯಿಂದ ತಾನೆಯಾದ ಬಳಿಕ
ಇಲ್ಲಿಲ್ಲ ದೇಹಾದಿ ವಿಕಾರಂಗಳು,
ಇಲ್ಲಿಲ್ಲ ಕರಣೇಂದ್ರಿಯಾದಿ ವಿಕಾರಂಗಳು.
ಅದ್ವೈತವ ಮೀರಿದೆ, ಬೊಮ್ಮವ ಸಾರಿದೆ,
ಸಾಕಾರವ ಹರಿದೆನು. [ಇದರಿಂದ] ನೂನ್ಯೈಶ್ವರ್ಯವದುಂಟೆ?
ವಾಙ್ಮಾನಸಜಿಹ್ವೆಗೆ ಅಗೋಚರವಾಗುತಿದ್ದಂತಹ ವಸ್ತುವ ಕಂಡೆ.
ಸಕಲ ಶೂನ್ಯಾತೀತವ ಎಯ್ದಿದೆ, ಸ್ವಾನುಭಾವವನೊಡಗೂಡಿದೆ.
ಮಹಾಲಿಂಗದ ಬಾಧೆ ಬಂದಡೆ ಉಣ್ಣೆನು, ಉಂಡಡೆ ಕಾಣೆ,
ಕಂಡಡೆ ಮುಗಿಲ ಮುಟ್ಟಿದುದರುದ್ದವ ನೋಡಾ.
ಎಂದು ದೀಕ್ಷೆ ಶಿಕ್ಷೆ ಸ್ವಾನುಭಾವವ ಸಂಬಂಧಿಸಿ
ಶುದ್ಧ ನಿಷ್ಕಲವಾದ ಬಳಿಕ ಮರಳಿ ಪ್ರಪಂಚಿನ ಹಂಗುಂಟೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ? ॥೫೦॥

೧೩೧೦

ಇಂತಪ್ಪ ಶಿವಯೋಗಿಯಂ
ಇಂದ್ರಿಯಂಗಳು ಕೂಡಿಯಾಡುವ ಮಾನವನು
ಬಹು ಚೆಚ್ಚೆಯನುಳ್ಳ ವಾನರನಂ ಬಂಧಿಸಿ ತನ್ನಿಚ್ಛೆಯಲಿ ಆಡಿಸುವ
ಯಕ್ಷನ ಹಾಂಗೆ ಉಲಾಯೋಗ ಸ್ಥಾನಂಗಳಲ್ಲಿ ಬ್ರಹ್ಮಾನುಸಂಧಾನದಲ್ಲಿಯುಂ
ಎಲ್ಲಾ ಪದಾರ್ಥಂಗಳು ತಟ್ಟು ಮುಟ್ಟಂಗಳಲ್ಲಿಯವುಬಹುದೆ?
ಸಂಸಾರ ಪ್ರಪಂಚವ ಪರಿಹರಿಸುವೆ ಪರಮಾರ್ಥವ ಕಾಣಬಹುದೆ?
ತೆರೆಯಲ್ಲದೆ ಜಲದ ವರ್ತನೆ ನಡೆವುದೆ?
ಆ ಜಲವನು ಪ್ರಯೋಗಿಸುವಂತೆ ಪರವನು ಪ್ರಯೋಗಿಸುವುದಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೫೧॥

೧೩೧೧
ಇಂದ್ರಿಯಂಗಳಿಗೆ ಪ್ರೇಮದಿಂದಾಡಿ ನುಡಿದು,
ಅವರಿಚ್ಛೆಯ ಬಳಿಸಲುವ ಇಚ್ಛೈಕಪುರುಷರು ಅನೇಕರು.
ಆ ಇಂದ್ರಿಯಂಗಳ ನಂದಿಸಿ, ಲಿಂಗೇಂದ್ರಿಯಂಗಳ ಮಾಡಿ,
ಪಂಚೇಂದ್ರಿಯಂಗಳಲ್ಲಿ ಪಂಚಲಿಂಗಪ್ರತಿಷ್ಠೆಯ ಮಾಡಿ,
ಪಂಚಪ್ರೇಮದಿಂದ ನುಡಿದು,
ಶಿವಜ್ಞಾನಪಥವ ಹತ್ತಿಸುವ ಪುರುಷರದೇ ಮಾರ್ಗ.
ಅವರ ಕಂಡಡೆ ನೀನೆಂಬೆನು ಕಾಣಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೫೨॥

೧೩೧೨
ಇಂದ್ರಿಯ ವಿಷಯ ಕರಣಂಗಳರಿದಾಚಾರದಲ್ಲಿ ವರ್ತಿಸುವ ಪರಿಯೆಂತೆಂದಡೆ:
ಶ್ರೋತ್ರ ತ್ವಕ್ಕು ನೇತ್ರ ಜಿಹ್ವೆ ಘ್ರಾಣ ಈ ಐದು ಜ್ಞಾನೇಂದ್ರಿಯಗಳು.
ಶ್ರೋತ್ರದಲ್ಲಿ ಗುರುವಚನ ಶಿವಾಗಮ
ಪುರಾಣಾದ್ಯರ ವಚನವಲ್ಲದೆ ಕೇಳದಿಹ.
ತ್ವಕ್ಕಿನಲ್ಲಿ ವಿಭೂತಿ ರುದ್ರಾಕ್ಷೆ ಶಿವಲಿಂಗವಲ್ಲದೆ ತಾಳದಿಹ.
ನೇತ್ರದಲ್ಲಿ ಶಿವಲಿಂಗವಲ್ಲದೆ ಅನ್ಯವ ಕಾಣದಿಹ.
ಜಿಹ್ವೆಯಲ್ಲಿ ಶಿವಮಂತ್ರವನಲ್ಲದೆ ಜಪಿಸದಿಹ.
ನಾಸಿಕದಲ್ಲಿ ಶಿವಪ್ರಸಾದವಲ್ಲದೆ ವಾಸಿಸದಿಹ.
ಶಬ್ದ ಸ್ಪರುಷ ರೂಪು ರಸ ಗಂಧ.
ಶಬ್ದ ಗುರು, ಸ್ಪರುಶನ ಲಿಂಗ, ರೂಪು ಶಿವಲಾಂಛನ,
ರಸವೆ ಶಿವಪ್ರಸಾದ, ಗಂಧವೆ ಶಿವಾನುಭಾವ,
ಕರ್ಮೇಂದ್ರಿಯಂಗಳು.
ವಚನ ಗಮನ ಅವಧಾನ ವಿಸರ್ಜನ ಆನಂದ.
ಶಿವಾನುಭಾವವೆಂಬುದೆ ವಚನ,
ಗುರುಮಾರ್ಗದಲ್ಲಿ ಚರಿಸೂದೆ ಗಮನ,
ಸದಾಚಾರದಲ್ಲಿ ಸದ್ಭಕ್ತಿಯ ಹಿಡಿದಿಪ್ಪುದೆ ಅವಧಾನ,
ಅಧೋಗತಿಗಿಳಿವ ಮಾರ್ಗವ ಬಿಟ್ಟಿಹುದೆ ವಿಸರ್ಜನ,
ಶಿವಾನುಭಾವಿಗಳ ತತ್ಸಂಗದಿಂದವನಾನಂದಿಸೂದೆ ಆನಂದ.
ಇನ್ನು ಮನ ಬುದ್ಧಿ ಚಿತ್ತ ಅಹಂಕಾರ ಪಂಚ ಕ್ಲೇಶಂಗಳು.
ಅನ್ನಮಯ ಪ್ರಾಣಮಯ ಮನೋಮಯ
ವಿಜ್ಞಾನಮಯ ಆನಂದಮಯ.
ಅನ್ನಮಯವೆ ಪ್ರಸಾದ, ಪ್ರಾಣಮಯವೆ ಲಿಂಗ, ಮನೋಮಯವೆ ಧ್ಯಾನ,

ವಿಜ್ಞಾನಮಯವೆ ಶಿವಜ್ಞಾನ,
ಆನಂದಮಯವೆ ಚಿದಾನಂದವಾಗಿ
ಇಂತೀ ಸರ್ವ ತತ್ವಂಗಳೆಲ್ಲ ಶಿವತತ್ವವಾಗಿಪ್ಪ ಕಾರಣ,
ಶಿವಶರಣಂಗೆ ಶಿವಧ್ಯಾನವಲ್ಲದೆ ಮತ್ತೊಂದು ಅನ್ಯವಿಲ್ಲಯ್ಯ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೫೩॥

೧೩೧೩
ಇಚ್ಛಾ ಜ್ಞಾನ ಕ್ರಿಯಾ ಶಕ್ತಿ ನಿಮ್ಮಿಚ್ಛೆ ಎಂಬುದಂ ಬಲ್ಲೆ.
ಸರ್ವವೂ ಶಿವನಾಜ್ಞೆಯೆಂಬುದಂ ಬಲ್ಲೆ.
ಸರ್ವವೂ ಶಿವನಾಜ್ಞೆಯೆಂದು ನಿಮ್ಮಡಿಗಳು
ಬೆಸಸಿದ ಸರ್ವಶ್ರುತಿಗಳಂ ಕೇಳಿ ಬಲ್ಲೆನು.
ಈ ಹೀಂಗೆಂದರಿದು ಮನ ಮರಳಿ ಬಿದ್ದು
ಗುರುಲಿಂಗಜಂಗಮಕ್ಕೆ ನಾನೂ ಮಾಡಿದೆನೆಂಬ
ಅವಿಚಾರದ ಮನದ ಮರವೆಯ ನೋಡಾ.
ಇದಿರ ಬೇಡಿದಡೆ ಕೊಡರೆಂಬ ಮನದ ಘಸಣಿಯ ನೋಡಾ.
ಶಿವ ಶಿವ ಮಹಾದೇವ, ಮನೋನಾಥ ಮನೋಮಯ,
ಎನ್ನ ಮನವ ಸಂತವ ಮಾಡಿ
ನಿಮ್ಮಲ್ಲಿ ಬೆರಸು, ಬೆರಸದಿದ್ದಡೆ ನಿಮಗೆ ಮಹಾಗಣಂಗಳಾಣೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೫೪॥

೧೩೧೪
ಇಚ್ಛೆಯರಿದು, ಕಾಲಕಾಲದಲ್ಲೂ ಇಚ್ಛೆಯ ಸಲಿಸಿ,
ನಿರುಪಾಧಿಕ ದಾಸೋಹವ ಮಾಡಿ,
ಶಿವನಾನೆಂಬ ಅಹಂಕಾರವಡಗಿದಡೆ ಭಕ್ತನು.
ಮಹಾವಸ್ತುಗಳ ಆವ ಕಾಲ ಆವ ಹೊತ್ತು
ಆತ ಬೆಸಸಿತ್ತುದ ಮಹಾಪ್ರಸಾದವೆಂದು,
ಪ್ರತ್ಯುತ್ತರವಿಲ್ಲದೆ ಆಜ್ಞೆಯಲ್ಲಿ ನಡೆದು, ಆಜ್ಞೆಯಲ್ಲಿ ನುಡಿದು
ಇರಬಲ್ಲಡೆ ಆತನೇ ಭಕ್ತನು.
ಈ ಸದ್ಭಕ್ತಿ ಬಸವಣ್ಣಂಗಲ್ಲದೆ
ಸರ್ವಬ್ರಹ್ಮಾಂಡದೊಳಗಣ ಸರ್ವಲೋಕದ
ದೇವ ದಾನವ ಮಾನವರಾರಿಗೂ ಅಳವಡದು, ಆರಿಗೂ ಆಗದು.
ಸದ್ಭಕ್ತಿ ಬಸವಣ್ಣಂಗಳವಟ್ಟಿತ್ತು, ಬಸವಣ್ಣನೇ ಭಕ್ತನು,
ಬಸವಣ್ಣನ ನೆನೆವುದೇ ಭಕ್ತಿಯ ಪಥವು,

ಬಸವಣ್ಣನ ನೆನೆವುದೇ ಮುಕ್ತಿಯ ಪಥವು,
ಬಸವಣ್ಣನ ನೆನೆದು ಬದುಕಿದೆನಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೫೫॥

೧೩೧೫
ಇನ್ನು ಮುಕ್ತನೆಂದಡೆ ಮುನ್ನಲೇನು ಬದ್ಧನೇ?
ಮುನ್ನ ಮುನ್ನವೇ ಮುಕ್ತನು.
ಒಂದು ಕಾರಣದಿಂದ ಬದ್ಧನಾದಡೇನು?
ಗುರುಕರುಣದಿಂದ ಮುಕ್ತನು.
ಗುರುಕರುಣದಿಂದ ಗುರುವಾದ ಬಳಿಕ
ಬದ್ಧ-ಮುಕ್ತನೆಂಬ ದಂದುಗದ ನುಡಿ ಹೊದ್ದಲುಂಟೆ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೫೬॥

೧೩೧೬
'ಇಷ್ಟಂ ಪ್ರಾಣಸ್ತಥಾ ಭಾವಸ್ತ್ರಿಧಾ ಏಕಂ' ಎಂದುದಾಗಿ,
ಶ್ರೀಗುರು ಮಾಡಿದ ಕಾರಣ, ಲಿಂಗವೇ ಪ್ರಾಣ, ಪ್ರಾಣವೇ ಲಿಂಗ.
ಅಂತರಂಗ ಬಹಿರಂಗ ಸ್ವಾಯತವಾಗಿ ಧರಿಸಿಕೊಂಡಿಪ್ಪ ಕಾಯವು ಲಿಂಗದ ಕಾಯವು.
ಪ್ರಾಣ ಲಿಂಗವಾದ ಬಳಿಕ ಕಾಯ ಬೇರೆ ಇನ್ನಾರದಯ್ಯಾ?
ಕಾಯ ಲಿಂಗಕಾಯ, ಆ ಕಾಯ ಲಿಂಗವು.
ಇದು ಕಾರಣ, ಭಾವಭೇದವಿಲ್ಲ.
ಲಿಂಗ ಕಾಯ ಒಂದೆಯಾಗಿ ಸರ್ವಾಂಗಲಿಂಗ.
ಕಾಯಕ್ರೀ ಎಲ್ಲವೂ ಲಿಂಗಕ್ರೀ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೫೭॥

೧೩೧೭
ಇಷ್ಟಲಿಂಗಕ್ಕೆ ಕಾಯದ ಕೈಯಿಂದ ಮುಟ್ಟಿ
ಅಷ್ಟವಿಧಾರ್ಚನೆ, ಷೋಡಶೋಪಚಾರ
ಮೈದೋರಿದಲ್ಲದೆ ಆಕಾರನಾಸ್ತಿಯಾಗದು.
ಬೆರಣಿಯಲ್ಲಿ ಅಗ್ನಿ ಮೈದೋರದಿದ್ದಡೆ ಆಕಾರನಾಸ್ತಿಯಾಗದು.
ಲಿಂಗದಲ್ಲಿದ್ದ ಜವನಿಕೆ ಬಗೆದೆಗೆದಡೆ ಕಾಯವಿಲ್ಲದೆ ಪ್ರಾಣದ ಪರಿ ನಷ್ಟ,
ಜ್ಞಾನಾಗ್ನಿಯಿಂದ ಭೋಗ ನಷ್ಟ. ಇದು ಕಾರಣ,
ನಿಮ್ಮ ಶರಣರ ಮರ್ತ್ಯರೆಂದಡೆ ನರಕ ತಪ್ಪದು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೫೮॥

೧೩೧೮
ಈರೇಳು ಭುವನ ಚೌರಾಸಿಲಕ್ಷ ಯೋನಿಮುಖಜೀವರಾಶಿಗಳೊಳಗೆ
ಓರಂತೆ ತೊಳಲುತ್ತಿಪ್ಪ ಹಂಸನ ಗತಿಗೆಡಿಸುವ
ಪರಮ ಪಶುಪಾಶಪತಿ ಜ್ಞಾನದ ಪದವನರುಹುವ
ಗುರುವಿನ ಮಥನವೆ ಗುರುವಿನ ಶೇಷ.
ಹೃತ್ಕುಂಡಲದ್ವಾದಶಾಂತತ್ರಿತತ್ವದ ಮೇಲೆ ತನ್ನ ಜೀವವು
ಶಾಂತ್ಯತೀತವಾದ ತಾನೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ
ಗುರುಭಕ್ತಪ್ರಸಾದಿಯ ಹೊಲಬಿನ ಸಂಗದಿಂದ
ಲಿಂಗಸುಸಂಗವೇದ್ಯ. ॥೫೯॥

೧೩೧೯
ಉದಯದಲ್ಲಿ ಉತ್ಪತ್ತಿ, ಮಧ್ಯಾಹ್ನದಲ್ಲಿ ಸ್ಥಿತಿ,
ಅಸ್ತಮಾನದಲ್ಲಿ ಲಯವಪ್ಪುದು, ಸರ್ವರಿಗೆಯೂ ಈ ವಿಧಿ ನೋಡಾ,
ಇನ್ನೇತಕ್ಕೆ ತೆರಹುಂಟು?
ಮಧ್ಯಾಹ್ನದ ಸ್ಥಿತಿಯಲ್ಲಿ ಸಂಸಾರ ಪ್ರಪಂಚು ಕಾರಣ
ಹೊನ್ನು ಹೆಣ್ಣು ಮಣ್ಣು ಲಾಭನಿಮಿತ್ತ ಆರಂಬ ವ್ಯವಹಾರ ಸೇವೆ
ಇಂತಿವರಲೂ ಅತಿಲಯವಪ್ಪುದು ತಪ್ಪದು.
'ಉದಯೇ ಜನನಂ ನಿತ್ಯಂ ರಾತ್ರೌಚ ಮರಣಂ ತಥಾ
ಅಜ್ಞಾನಂ ಸರ್ವಜಂತೂನಾಂ ತದ್ವಿಧಿಶ್ಚ ಪುನಃ ಪುನಃ'
ಎಂದುದಾಗಿ, ಮರಳಿ ಮರಳಿ ಈ ವಿಧಿ ನೋಡಾ.
ಉತ್ಪತ್ತಿ ಸ್ಥಿತಿ ಲಯವ ಮೀರುವ
ನಿತ್ಯ ಸದ್ಗುರು ಲಿಂಗ ಜಂಗಮ ಪೂಜಾಕ್ರಿಯೆ
'ನಿತ್ಯಂ ಲಿಂಗಾರ್ಚನಂ ಯಸ್ಯ ನಿತ್ಯಂ ಜಂಗಮಪೂಜನಂ
ನಿತ್ಯಂ ಗುರುಪದಧ್ಯಾನಂ ನಿತ್ಯಂ ನಿತ್ಯಂ ನ ಸಂಶಯಃ'
ಇಂತೆಂದುದಾಗಿ,
ತ್ರಿವಿಧಲಿಂಗಾರ್ಚನೆಯಂ ಮಾಡಲು ನಿತ್ಯಪದವಪ್ಪುದು ಸತ್ಯ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೬೦॥

೧೩೨೦
ಎಂಬತ್ತುನಾಲ್ಕು ಲಕ್ಷ ಯೋನಿಯೊಳು ಜನಿಸುವ ಜನನವೆಲ್ಲರಿಗೆಯು.
ಆ ಜನ್ಮಾಂತರದ ಯೋನಿಗಳೊಳು ಜನಿಸದಾತನೆ ಯೋಗಿ.
ಆ ಯೋಗಿ ಜನ್ಮಾಂತರ ಕಳೆದಹನು, ಹೇಗೆಂದಡೆ:
ಶ್ರೀ ಗುರುಕರಪಲ್ಲವದಿಂದ ಬೆಸಲಾಯಿತ್ತಾಗಿ

'ನ ಮುಕ್ತಿರ್ನ ಚ ಧರ್ಮಶ್ಚ ನ ಪುಣ್ಯಂ ಚ ನ ಪಾಪಕಂ
ನ ಕರ್ಮಜನ್ಮ ನೇಚ್ಛಾ ವೈ ಗುರೋಃ ಪಾದನಿರೀಕ್ಷಣಾತ್'
ಎಂದುದಾಗಿ,
ಇಂತು ಯೋನಿಜನ್ಮಾಂತರವ ಕಳೆದ ಶರಣಂಗೆ
ಮತ್ತೆ ಭವಮಾಲೆಯುಂಟೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೬೧॥

೧೩೨೧
ಎನಗಾದ ಮಹಾಪದವನರಿಯದೆ ನಾನು ಬಳಲಿದೆನಯ್ಯಾ,
ಎನ್ನ ಪದವ ಈಗ ಅರಿದೆನು,
ಬಳಲಿಕೆ ಹೋಯಿತ್ತು ಪರಿಣಾಮವಾಯಿತ್ತು.
ಶಿವ ಶಿವಾ, ಶಿವನೆ ಕರ್ತನು, ನಾನು ಭೃತ್ಯನು,
ಮಿಕ್ಕುವೆಲ್ಲಾ ಮಿಥ್ಯವೆಂದರಿದು
ಈ ಮಹಾಜ್ಞಾನಪದಕ್ಕೆ ಈ ಘನತರಸುಖಕ್ಕೆ
ಈ ಮಹಾಪರಿಣಾಮಕ್ಕೆ ಇನ್ನಾವುದೂ ಸರಿಯಲ್ಲ.
ಉಪಮಾತೀತ ವಾಙ್ಮನೋತೀತ ನೀನೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೬೨॥

೧೩೨೨
ಎನಗೆ ನೀನು ಪ್ರಾಣ, ನಿನಗೆ ನಾನು ಪ್ರಾಣ.
ಇನ್ನೇನೋ ಇನ್ನೇನೋ ಹಂಗಿಲ್ಲ, ಹರಿ ಇಲ್ಲ. ಮತ್ತೇನೂ ಪ್ರಪಂಚಿಲ್ಲಾಗಿ,
ನೀ ನಡೆಸಿದಂತೆ ನಡೆದೆ, ನೀ ನುಡಿಸಿದಂತೆ ನುಡಿದೆ,
ನೀ ನೋಡಿಸಿದಂತೆ ನೋಡಿದೆ, ನೀ ಆಡಿಸಿದಂತೆ ಆಡಿದೆ,
ನೀ ಮಾಡಿಸಿದಂತೆ ಮಾಡಿದೆ.
ಈ ಸುಖದುಃಖ ಪುಣ್ಯಪಾಪಕ್ಕೆ ಕಾರಣನು ನೀನೇ ಅಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೬೩॥

೧೩೨೩
ಎನ್ನಂಗದಲ್ಲಿ ನಿನಗೆ ಮಜ್ಜನ,
ಎನ್ನ ಲಲಾಟದಲ್ಲಿ ನಿನಗೆ ಗಂಧಾಕ್ಷತೆ,
ಎನ್ನ ತುರುಬಿನಲ್ಲಿ ನಿನಗೆ ಕುಸುಮಪೂಜೆ.
ಎನ್ನ ನೇತ್ರದಲ್ಲಿ ನಿನಗೆ ನಾನಾರೂಪ ವಿಚಿತ್ರವಿನೋದ,
ಎನ್ನ ಶ್ರೋತ್ರದಲ್ಲಿ ನಿನಗೆ ಪಂಚಮಹಾವಾದ್ಯ ಕೇಳಿಕೆ,

ಎನ್ನ ನಾಸಿಕದಲ್ಲಿ ನಿನಗೆ ಸುಗಂಧ, ಧೂಪಪರಿಮಳ,
ಎನ್ನ ಜಿಹ್ವೆಯಲ್ಲಿ ನಿನಗೆ ಷಡ್ರಸಾನ್ನನೈವೇದ್ಯ,
ಎನ್ನ ತ್ವಕ್ಕಿನಲ್ಲಿ ನಿನಗೆ ವಸ್ತ್ರಾಭರಣಾಲಂಕಾರಪೂಜೆ,
ಎನ್ನ ಸಚ್ಚಿದಾನಂದ ಸಜ್ಜೆಗೃಹದಲ್ಲಿ ನೀನು
ಸ್ಪರ್ಶನಂಗೆಯ್ದು ನೆರೆದಿಪ್ಪೆಯಾಗಿ ನೀ ನಾನೆಂಬೆರಡಳಿದು
ತಾನು ತಾನಾದ ಘನವನೇನೆಂಬೆನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೬೪॥

೧೩೨೪

ಎನ್ನ ಅಂತರಂಗದಲ್ಲಿ ಆವರ್ತಿಸಿ
ಬಹಿರಂಗದಲ್ಲಿ ವರ್ತಿಸಿ ತೋರುವೆಯಯ್ಯಾ.
ಎನ್ನ ಕಂಗಳ ಮೊದಲ-ಕೊನೆಯಲ್ಲಿ ನೀ ತೋರುತ್ತಿಪ್ಪೆಯಯ್ಯಾ.
'ಲಿಂಗಂ ಪ್ರಕಾಶಮವ್ಯಕ್ತಂ ಲಿಂಗಂ ಪ್ರತ್ಯಕ್ಷಗೋಚರಂ
ಲಿಂಗಂ ಪ್ರಸನ್ನರೂಪಂ ಚ ತಲ್ಲಿಂಗಂ ಜ್ಯೋತಿರಾತ್ಮಕಂ'
ಎನ್ನ ಬ್ರಹ್ಮರಂಧ್ರದಲ್ಲಿ ತೋರುವ ಜ್ಯೋತಿ ನೀನೇ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೬೫॥

೧೩೨೫

ಎನ್ನ ಕರಸ್ಥಲದಲ್ಲಿಯ ಲಿಂಗಕ್ಕೆ ಬಂದ ಪದಾರ್ಥಂಗಳನರ್ಪಿಸುವೆನೆ?
ಅರ್ಪಿಸಲಮ್ಮೆ. ಅದೇನು ಕಾರಣವೆಂದಡೆ:
ಎನ್ನ ಕಂಗಳು ಕಂಡವಾಗಿ, ಎನ್ನ ಶ್ರೋತ್ರಗಳು ಕೇಳಿದವಾಗಿ,
ಎನ್ನ ಕೈಗಳು ಮುಟ್ಟಿದವಾಗಿ, ಎನ್ನ ನಾಸಿಕ ವಾಸಿಸಿತ್ತಾಗಿ,
ಎನ್ನ ಜಿಹ್ವೆ ರುಚಿಸಿತ್ತಾಗಿ.
ಇಂತಪ್ಪ ಎನ್ನ ಅಂಜಿಕೆಯ ನಿಮ್ಮ ಶರಣರು ಬಿಡಿಸಿದರಾಗಿ.
ಅದೆಂತೆಂದಡೆ:
ಎನ್ನ ಶ್ರೋತ್ರದಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ,
ಎನ್ನ ನೇತ್ರದಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ,
ಎನ್ನ ತ್ವಕ್ಕಿನಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ,
ಎನ್ನ ಜಿಹ್ವೆಯಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ,
ಎನ್ನ ನಾಸಿಕದಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ,
ಅಲ್ಲಲ್ಲಿ ಅರ್ಪಿತಂಗಳಾಗುತ್ತಿರ್ದವಾಗಿ, ಇನ್ನಂಜೆ ಅಂಜೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೬೬॥

೧೩೨೬

ಎನ್ನ ಗತಿ, ನಿನ್ನ ಗತಿ. ಎನ್ನ ಕೇಳಿಕೆ, ನಿನ್ನ ಕೇಳಿಕೆ.
ಎನ್ನ ನೋಟವೆ, ನಿನ್ನ ನೋಟ. ಎನ್ನಂಗ ಸ್ಪರ್ಶನವೆ, ನಿನ್ನಂಗ ಸ್ಪರ್ಶನ.
ಎನ್ನಂಗ ಸುಖಭೋಗವೆ, ನಿನ್ನಂಗ ಸುಖಭೋಗ.
ನನ್ನೊಳಗೆ ನೀನು, ನಿನ್ನೊಳಗೆ ನಾನು.
ಎನ್ನ ಪ್ರಾಣ ನೀನು, ನಿನ್ನ ಪ್ರಾಣ ನಾನಾದ ಕಾರಣ
ಎನ್ನ ಸೋಂಕಿತ್ತೆಲ್ಲ ನಿನ್ನ ಪೂಜೆಯಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೬೭॥

೧೩೨೭

ಎನ್ನ ನಾನರಿಯದೆ ಪುರಾಕೃತ ಕರ್ಮಫಲದಿಂ ಕರ್ಮವಶನಾಗಿ
ಅಜ್ಞಾನಿಯಾಗಿ ಮಹಾದೀನನಾಗಿದ್ದಲ್ಲಿ
ಪಾಪಪುಣ್ಯ ಸುಖದುಃಖಾದಿಕ್ರಿಯಾಕರ್ಮವೆಲ್ಲವು ಎನ್ನದು, ನಾನೇ ಸಂಸಾರಿ.
ಎನ್ನ ಸಂಸಾರವ ಕೆಡಿಸಿ, ಘೃಣಾಮೂರ್ತಿ ಸದ್ಗುರು ಕೃಪೆಮಾಡಿ
ಪೂರ್ವಜಾತವ ಕಳೆದು ಪುನರ್ಜಾತನ ಮಾಡಿ
ಶಿವಜ್ಞಾನಸಂಪನ್ನನ ಮಾಡೆ ಬದುಕಿದೆನು.
ಎನ್ನ ನಿಜವನರಿದೆನು ನಾನೇ ಗುರುಪುತ್ರನು.
ಕಾಯವು ಪ್ರಸಾದಕಾಯ, ಭಕ್ತಕಾಯನಾಗಿ ಕಾಯಲಿಂಗ,
ಪ್ರಾಣವು ಲಿಂಗಪ್ರಾಣವಾಗಿ ಪ್ರಾಣಲಿಂಗವು,
ಎನ್ನ ಶ್ರೀಗುರುಲಿಂಗ ಎನ್ನ ಜಂಗಮಲಿಂಗವು
ಪ್ರಸಾದ ಲಿಂಗವು ಮಂತ್ರಲಿಂಗವು
ಶ್ರೀವಿಭೂತಿ ಲಿಂಗವು ಮಹಾಜ್ಞಾನ ತಾನೆ ಲಿಂಗವು.
ಸಂಸಾರದಲ್ಲಿ ಕೆಡುವ ಪ್ರಾಣಿಗಳ ಕೆಡದಂತೆ ಮಾಡಿದನು.
ಬೇಡಿತ್ತ ಕೊಡುವ ಲಿಂಗವನು ಬೇಡಿಕೊಳ್ಳಿರೆ.
ಅನಾಥನಾಥನು ಅನಾಥಬಂಧುವು
ವರದಮೂರ್ತಿಯು ದಾನಗುಣಶೀಲನು
ಭಕ್ತದೇಹಿಕ ದೇವನು, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೬೮॥

೧೩೨೮

ಎನ್ನ ಮನಕ್ಕೆ ಮತ್ತೊಂದ ನೆನೆಯಲು ತೆರಹಿಲ್ಲಯ್ಯಾ
ಮಹಾದೇವನು ನೀನು, ಎನ್ನ ಮನವನವಗ್ರಹಿಸಿದೆ.
ಆ ಮನವು ನಿನ್ನನೇ ಅವಗ್ರಹಿಸಿತ್ತಾಗಿ.
ಎನ್ನ ವಾಕ್ಕಿಂಗೆ ಮತ್ತೊಂದ ನುಡಿಯಲು ತೆರಹಿಲ್ಲಯ್ಯಾ

ಮಹಾಮಂತ್ರಮಯ ನೀನು, ಎನ್ನ ವಾಕ್ಕನವಗ್ರಹಿಸಿದೆ.
ಎನ್ನ ಮಂತ್ರ ನಿನ್ನನೇ ಅವಗ್ರಹಿಸಿತ್ತಾಗಿ.
ಎನ್ನ ಕಾಯಕ್ಕೆ ಮತ್ತೊಂದ ಭೋಗಿಸೆ ತೆರಹಿಲ್ಲಯ್ಯ.
ಮಹಾಪ್ರಸಾದರೂಪನು ನೀನು, ಎನ್ನ ಕಾಯವನವಗ್ರಹಿಸಿದೆ,
ಆ ಕಾಯವು ನಿನ್ನನೇ ಅವಗ್ರಹಿಸಿದುದಾಗಿ.
ಇಂತು ಮನೋವಾಕ್ಕಾಯದ ಅಂತರಂಗಬಹಿರಂಗದ
ಒಳಹೊರಗೂ ಸರ್ವಾಂಗಲಿಂಗವಾದ ಕಾರಣ
ಮನೋವಾಕ್ಕಾಯದ ಸ್ಥಿತಿಗತಿ ನೀನೆ ಅಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೯॥

೧೩೨೯

ಎನ್ನ ಸದ್ಗುರುವು ಮಾಡುವ ಗುರುತ್ವ ಉಪಮಾತೀತವಯ್ಯ.
ಅದೆಂತೆಂದಡೆ: ಎನ್ನ ನೇತ್ರದಲ್ಲಿ ತನ್ನ ರೂಪ ತುಂಬಿ,
ಎನ್ನ ನೇತ್ರವನು ಗುರುವು ಮಾಡಿದ.
ಎನ್ನ ಶ್ರೋತ್ರದಲ್ಲಿ ಮಹಾಮಂತ್ರವ ತುಂಬಿ,
ಎನ್ನ ಶ್ರೋತ್ರವನು ಗುರುವು ಮಾಡಿದ.
ಎನ್ನ ಘ್ರಾಣದಲ್ಲಿ ಗುರುಪಾದಪದ್ಮದಲ್ಲಿಹ ಮಹಾಗಂಧವ ತುಂಬಿ
ಎನ್ನ ಘ್ರಾಣವನು ಗುರುವು ಮಾಡಿದ.
ಎನ್ನ ಜಿಹ್ವೆಯಲ್ಲಿ ತನ್ನ ಕರುಣಪ್ರಸಾದವ ತುಂಬಿ,
ಎನ್ನ ಜಿಹ್ವೆಯನು ಗುರುವು ಮಾಡಿದ.
ಎನ್ನ ಕಾಯವನು ಭಕ್ತಕಾಯ ಮಮಕಾಯವೆಂದು ಪ್ರಸಾದಕಾಯವೆಂದೆನಿಸಿ,
ಎನ್ನ ಕಾಯವನು ಗುರುವು ಮಾಡಿದ.
ಎನ್ನ ಪ್ರಾಣದಲ್ಲಿ ಲಿಂಗಪ್ರಾಣಸಂಬಂಧವ ಮಾಡಿ
ಎನ್ನ ಪ್ರಾಣವನು ಗುರುವು ಮಾಡಿದ.
ಇಂತು ಎನ್ನ ಅಂತರಂಗ ಬಹಿರಂಗವನು ಗುರುವು ಮಾಡಿ,
ಸರ್ವಾಂಗವನೂ ಗುಪ್ತವ ಮಾಡಿದ ಮಹಾಶ್ರೀಗುರುವಿಂಗೆ
ನಾನಿನ್ನೇನ ಮಾಡುವೆನಯ್ಯ : ಮಾಡುವೆನಯ್ಯ ಗುರು ಪೂಜೆಯನು
ಆವಾವ ದ್ರವ್ಯಂಗಳನು ಆವಾವ ಪದಾರ್ಥಂಗಳನು,
ಆವಾವ ಪುಷ್ಪಫಲಾದಿಗಳನು ವಿಚಾರಿಸಿ ನೋಡಿದಡೆ
ಅವಾವಕ್ಕು ಗುರುತ್ವವಿಲ್ಲ.
ಸರ್ವದ್ರವ್ಯ ಮೂಲ ಮನ ಸರ್ವಪದಾರ್ಥಮೂಲ ಮನ
ಸರ್ವರಸ ಪುಷ್ಪಫಲಾದಿಗಳೆಲ್ಲವಕ್ಕೆಯು ಮೂಲಿಗ ಮನವು
ಇದು ಕಾರಣ ಸರ್ವಗುರುತ್ವವನುಳ್ಳ ಎನ್ನ ಮನೋವಾಕ್ಕಾಯ

ಸಹಿತವಾಗಿ ಗುರುವಿಂಗಿತ್ತು
ಎನ್ನ ಶಿರವನು ಶ್ರೀಗುರುವಿನ ದರ್ಶನ ಸ್ಪರ್ಶನವ ಮಾಡಿ
ಸುಖಿಯಾಗಿಪ್ಪೆನಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೭೦॥

೧೩೩೦
ಎನ್ನ ಸರ್ವಾಂಗದಲ್ಲಿ ಲಿಂಗವೈದಾನೆ, ಐದಾನೆ,
ಎನ್ನ ಮನವನರಿಯದೆ ಕೆಟ್ಟೆ ಕೆಟ್ಟೆನಯ್ಯಾ.
ಎನ್ನ ಅಂತರಂಗ ಬಹಿರಂಗದಲ್ಲಿ ಲಿಂಗವೈದಾನೆ,
ಮನವನರಿಯದೆ ಕೆಟ್ಟೆ ಕೆಟ್ಟೆ.
ವಿಶ್ವಾಸದಿಂ ಗ್ರಹಿಸಲೊಲ್ಲದೆ ಕೆಟ್ಟೆ ಕೆಟ್ಟೆನಯ್ಯಾ.
ಈ ಮನ ವಿಶ್ವಾಸದಿಂದ ಗ್ರಹಿಸಿದಡೆ ಸತ್ಯನಹೆ ನಿತ್ಯನಹೆ ಮುಕ್ತನಹೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೭೧॥

೧೩೩೧
ಎನ್ನೊಳಗೆ ನೀನು ಪ್ರವೇಶ, ನಿನ್ನೊಳಗೆ ನಾನು ಪ್ರವೇಶ,
ದೇವ ನೀನಿಲ್ಲದಿಲ್ಲ, ಭಕ್ತ ನಾನಲ್ಲದಿಲ್ಲ. ಈ ಪರಿಯ ಮಾಡುವರಿನ್ನಾರು ಹೇಳಾ?
ಎನಗೆ ನೀನೇ ಗತಿ, ನಿನಗೆ ನಾನೇ ಗತಿ
ಇನ್ನೇಕೆ ಜವನಿಕೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೭೨॥

೧೩೩೨
ಎರಡ ನುಡಿದ ವಿಷ್ಣುವೇನಾದ? ಎರಡ ನುಡಿದ ಬ್ರಹ್ಮನೇನಾದ?
ಎರಡ ನುಡಿದ ಇಂದ್ರನೇನಾದ? ಎರಡ ನುಡಿದ ದಕ್ಷನೇನಾದ?
ಎರಡ ನುಡಿದ ವ್ಯಾಸನೇನಾದನೆಂದು,
ಇವರುಗಳು ನುಡಿದ ಪರಿಯನೂ, ಅವರ ಪರಿಯನೂ
ವಿಚಾರಿಸಿ ನೋಡಿದಡೆ, ಶಿವನೇ ಕರ್ತನೆಂದು ನುಡಿದು,
ಮರಳಿ 'ಅಹಂ ಕರ್ತಾ' ಎಂದು ನುಡಿದು ಶಾಸ್ತಿಗೊಳಗಾದರು,
ಮಾನಹಾನಿಯಾದರು ನೋಡಿರೇ.
ವಿಶ್ವವೆಲ್ಲವೂ ಪಶು, ಶಿವನೊಬ್ಬನೇ ಪತಿ
ಸರ್ವವೆಲ್ಲವೂ ಶಕ್ತಿರೂಪ, ಶಿವನೊಬ್ಬನೇ ಪುರುಷನು ಎಂದರಿದು
ಸರ್ವರೂ ಭೃತ್ಯರು, ಶಿವನೊಬ್ಬನೇ ಕರ್ತನೆಂದರಿದು
ಮನ ವಚನ ಒಂದಾಗಿ ನೆನೆವುತ್ತಿಪ್ಪವರು
ಶಿವನೊಂದಾದರಯ್ಯಾ. ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ,
ದೇವನೊಬ್ಬನೆ, ಎರಡಲ್ಲ. ॥೭೩॥

೧೩೩೩

ಎಲ್ಲಾ ವ್ರತಂಗಳಿಗೆ ಮೇಲಾದ ವ್ರತ ವಿಭೂತಿಯ ವ್ರತ.
ಸಕಲ ದುಃಖದುರಿತಗಳ ಪರಿಹಾರವ ಮಾಳ್ಪುದೀ ಭಸ್ಮವ್ರತ.
ತನುಶುದ್ಧತೆ ಮನಶುದ್ಧತೆ, ಶಿವಾತ್ಮೈಕ್ಯಮಾರ್ಗ ಸೋಪಾನಕೆ
ಶ್ರೀವಿಭೂತಿ ಮುಖ್ಯವಯ್ಯ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೭೪॥

೧೩೩೪

'ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ'
ಎಂಬ ಶ್ರುತಿಮತವಿಡಿದು ಏಕಲಿಂಗನಿಷ್ಠಾಪರನಾದನು ಮಾಹೇಶ್ವರನು.
'ಶಿವ ಏಕೋ ಧ್ಯೇಯಃ ಶಿವಂಕರಃ ಸರ್ವಮನ್ಯತ್ಪರಿತ್ಯಾಜ್ಯಂ'
ಎಂಬ ಶ್ರುತಿ ಮತವಿಡಿದು ಅನ್ಯದೈವಂಗಳಂ ಬಿಟ್ಟು
ನಿಮ್ಮನೇ ಧ್ಯಾನಿಸುವನಯ್ಯಾ, ನಿರಂತರ ನಿಮ್ಮ ಮಾಹೇಶ್ವರನು.
'ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್'
ಎಂಬ ಶ್ರುತಿಮತವಿಡಿದು ನಿಮ್ಮನೆ ಉಪಾಸ್ತಿಯ ಮಾಡಿ
ಲಿಂಗಾರ್ಚನೆಯ ಮಾಡುವರಯ್ಯಾ ನಿಮ್ಮ ಮಾಹೇಶ್ವರರು.
ಅದು ಕಾರಣ ನಿಮ್ಮ ಐಕ್ಯವ ನಿಮ್ಮ ಮಾಹೇಶ್ವರನೆ ಬಲ್ಲ.
ನಿಮ್ಮ ಮಾಹೇಶ್ವರಾಧಿಕ್ಯವ ನೀವೇ ಬಲ್ಲಿರಿ.
ಉಳಿದ ದೇವ ದಾನವ ಮಾನವಾದಿಗಳು ಅರಿಯಬಹುದೆ?
ನಿಮ್ಮ ಘನವನು, ನಿಮ್ಮ ಮಾಹೇಶ್ವರರ ಘನವನು
ಶಿವನೆ ಬಲ್ಲ, ಶಿವನ ಮೀರುವ ಪದವುಂಟೆ?
ಸಕಲಬ್ರಹ್ಮಾಂಡವನೂ ಅವಗ್ರಹಿಸಿಕೊಂಡಿಪ್ಪನಾಗಿ ಶಿವನು,
ಆ ಶಿವನನವಗ್ರಹಿಸಿಕೊಂಡಿಪ್ಪರು ಮಾಹೇಶ್ವರರು
ಅಣುಮಹತ್ತಿನೊಳಗೆ ಸಂಪೂರ್ಣರಪ್ಪರು.
'ಅಣೋರಣೀಯಾನ್ಮಹತೋ ಮಹೀಯಾನ್' ಎಂದುದಾಗಿ,
'ಯಥಾ ಶಿವಸ್ತಥಾ ಭಕ್ತಃ' ಎಂದುದಾಗಿ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಯ್ಯನ ಶರಣರ
ಮೀರಿದ ಪದ ಉಂಟಾದರೆ ಬಲ್ಲರೆ ಹೇಳಿ. ॥೭೫॥

೧೩೩೫

ಏಕತತ್ತ್ವ ತ್ರಿತತ್ತ್ವ ಪಂಚತತ್ತ್ವ ಪಂಚವಿಂಶತಿತತ್ತ್ವ ಷಟ್‌ತ್ರಿಂಶತ್ ತತ್ತ್ವ
ಇಂತೀ ತತ್ತ್ವಂಗಳೆಲ್ಲವನೂ ಗರ್ಭೀಕರಿಸಿಕೊಂಡಿಪ್ಪ
ಈ ತತ್ತ್ವಂಗಳೆಲ್ಲವಕ್ಕೆಯೂ ಅಧಿಕವಾಗಿಪ್ಪ ಮಹಾತತ್ತ್ವವೂ
'ನ ಗುರೋರಧಿಕಂ ನ ಗುರೋರಧಿಕಂ' ಎಂದುದಾಗಿ

'ನಾಸ್ತಿ ತತ್ತ್ವಂ ಗುರೋಃ ಪರಂ' ಎಂದುದಾಗಿ
'ಅದ್ವೈತಂ ತ್ರಿಷು ಲೋಕೇಷು ನಾದ್ವೈತಂ ಗುರುಣಾ ಸಹ' ಎಂದುದಾಗಿ
'ಗುರುದೇವೋ ಮಹಾದೇವೋ' ಎಂದುದಾಗಿ
ಶ್ರೀಗುರುತತ್ತ್ವವೇ ಪರತತ್ತ್ವವು.
ಶಿವ ಶಿವಾ ಸಕಲವೇದ ಶಾಸ್ತ್ರ ಪುರಾಣ ಆಗಮ
ಅಷ್ಟಾದಶವಿದ್ಯಂಗಳು ಸರ್ವವಿದ್ಯಂಗಳು
ಸಪ್ತಕೋಟಿಮಹಾಮಂತ್ರಂಗಳು ಉಪಮಂತ್ರಂಗಳು
ಅನಂತಕೋಟಿಗಳನೂ ಗರ್ಭೀಕರಿಸಿಕೊಂಡಿಪ್ಪ
ಇವಕೆ ಮಾತೃಸ್ಥಾನವಾಗಿ,
ಇವಕೆ ಉತ್ಪತ್ತಿ ಸ್ಥಿತಿ ಲಯ ಕಾರಣಂಗಳಿಗೆ ಕಾರಣವಾಗಿಪ್ಪ
ಮಹಾತತ್ತ್ವ ಮಹಾಮಂತ್ರರಾಜನು, ಶ್ರೀಮೂಲಮಂತ್ರವು.
ಈ ಮಹಾತತ್ತ್ವವು ಏಕವಾದ ಮಹಾಲಿಂಗವು.
ಈ ಮಹಾಲಿಂಗವೆ ಅಂಗವಾಗಿಪ್ಪ ಮಹತ್ತಪ್ಪ ಮಹಾಸದ್ಭಕ್ತನು.
ಆತನೇ ತತ್ತ್ವಜ್ಞನು, ಆತನೇ ತತ್ತ್ವಮಯನು, ಆತನೇ ತತ್ತ್ವಮೂರ್ತಿ.
ಈ ಮಹಾಮಂತ್ರ ಮುಖೋದ್ಗತವಾದ ಮಹಾಭಕ್ತನು.
ಆತನೇ ವೇದವಿತ್ತು, ಆತನೇ ಶಾಸ್ತ್ರಜ್ಞನು, ಆತನೇ ಪುರಾಣಿಕನು,
ಆತನೇ ಆಗಮಜ್ಞನು, ಆತನೇ ಸರ್ವಜ್ಞನು.
ಈ ಮಹಾಘನ ಮಹತ್ತನೊಳಕೊಂಡ ಸದ್ಭಕ್ತಂಗೆ
ಇತರ ತತ್ತ್ವಂಗಳನೂ ಇತರ ದೇವತೆಗಳನೂ
ಇತರ ದೇವದಾನವಮಾನವರುಗಳನೂ
ಇತರ ಮಂತ್ರಂಗಳನೂ ಇತರ ಪದಂಗಳನೂ ಸರಿ ಎನಬಹುದೆ?
ಶಿವ ಶಿವಾ ಸರಿ ಎಂದಡೆ ಮಹಾದೋಷವು.
ಈ ಮಹಾಭಕ್ತನೇ ಉಪಮಾತೀತನು ವಾಙ್ಮನೋತೀತನು.
ಈ ಮಹಾದೇವನ ಭಕ್ತನೇ ಮಹಾದೇವನು.
ಈ ಮಹಾಭಕ್ತನ ಪೂಜೆಯೇ ಶಿವಲಿಂಗಪೂಜೆ.
ಈ ಮಹಾಭಕ್ತನ ಪದವೇ ಪರಮಪದವಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೭೬॥

೧೩೩೬

ಏಕಮೂರ್ತಿ ತ್ರಿಧಾ ಭೇದವಾಯಿತ್ತು
ಗುರುಲಿಂಗಜಂಗಮವೆಂಬುದನರಿಯಿರೆ.
ಅರಿದು ಮತ್ತೇಕೆ ಮರೆದಿರಿ?
ಲಿಂಗರೂಪಿನಲ್ಲಿ ಹಿರಿದ ಕೊಟ್ಟು ಜಂಗಮರೂಪಿನಲ್ಲಿ ಕಿರಿದ ಬೇಡಿಕೊಂಡು

ಗುರುರೂಪಿನಲ್ಲಿ ಹಿರಿದು ಪರಿಣಾಮಿಸಿ ಮುಕ್ತಿಯ ಕೊಡುವನು.
ಅಕಟಕಟ ಭಕ್ತಿಯನರಿಯರು, ಮುಕ್ತಿಗೆಟ್ಟಿತ್ತು.
ಕೊಡುವವನು ಶಿವನು, ಶಿವನೆಂದರಿದು ಬದುಕಿರೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೭೭॥

೧೩೩೭
'ಏಕ ಏವ ರುದ್ರೋ ನ ದ್ವಿತೀಯಃ' ನೆಂದು ಶ್ರುತಿ ಸಾರುತ್ತಿರೆ,
ಮರಳಿ ವಿಷ್ಣುವಲ್ಲದೆ ದೈವವಿಲ್ಲವೆಂಬಿರಿ.
ಅಚ್ಯುತಂಗೆ ಭವವುಂಟೆಂಬುದಕ್ಕೆ
ಮತ್ಸ್ಯಕೂರ್ಮವರಾಹನಾರಸಿಂಹಾವತಾರವೆ ಸಾಕ್ಷಿ.
ಹರಿಹರನ ಭೃತ್ಯನೆಂಬುದಕ್ಕೆ ರಾಮೇಶ್ವರಾದಿಯಾದ ಪ್ರತಿಷ್ಠೆಯೇ ಸಾಕ್ಷಿ.
ಇಂತಪ್ಪ ಹರಿಯನು ಹರಂಗೆ ಸರಿಯೆಂದು ನುಡಿವುತ್ತಿಹ
ವಿಪ್ರರ ಬಾಯಲ್ಲಿ ಸುರಿಯವೆ ಬಾಲಹುಳುಗಳು.
ಹರಿಗೆ ಹತ್ತು ಪ್ರಳಯ, ಬ್ರಹ್ಮಂಗೆ ಅನಂತಪ್ರಳಯ.
ನಮ್ಮ ಹರಂಗೆ ಪ್ರಳಯ ಉಂಟಾದರೆ, ಬಲ್ಲರೆ ನೀವು ಹೇಳಿರೆ!
ನಿಮ್ಮ ವೇದದಲ್ಲಿ ಹೇಳಿಸಿರೆ!
ಅರಿಯದಿರ್ದಡೆ ಸತ್ತ ಹಾಂಗೆ ಸುಮ್ಮನಿರಿರೆ. ಇದು ಕಾರಣ
ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರದೇವನೊಬ್ಬನೆ, ಎರಡಿಲ್ಲ. ॥೭೮॥

೧೩೩೮
ಒಂದೇ ವಸ್ತು ತನ್ನ ಲೀಲೆಯಿಂದ ಪರಮಾತ್ಮ ಜೀವಾತ್ಮನಾಯಿತ್ತು.
ಆ ಪರಮಾತ್ಮನೆ ಲಿಂಗ, ಜೀವಾತ್ಮನೆ ಅಂಗ, ಸಂಗವೆ ಏಕಾತ್ಮ.
ತತ್‌ಪದವೆ ಪರಮಾತ್ಮ, ತ್ವಂ ಪದವೆ ಜೀವಾತ್ಮ,
ಅಸಿ ಪದವೆ ತಾದಾತ್ಮ್ಯವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೭೯॥

೧೩೩೯
ಒಳಗೊಂದು ಗಾಲಿ, ಹೊರಗೊಂದು ಗಾಲಿ
ಎರಡಕ್ಕೆ ಹೂಡಿದುದೊಂದು ಹರಿಯಚ್ಚು,
ಮೇಲೆ ಹಾಸಿದ ನೀಳ ಚೌಕದ ಕುರುಗುಣಿಯ ಕೊಂಬಿಂಗೆ ಈಚೆರಡು.
ಏಳು ಹುರಿಯ ಬಲುಮಿಣಿಯಿಂ ಆಳವನಿಕ್ಕಿದ ಕಾಮನ ನೊಗ.
ಆರೆತ್ತು ಹೂಡಿ, ಹಾಸು ದಡಿಕೆ ಒಂದು, ಮೇಲು ದಡಿಕೆ ಎರಡು,
ಒಂದು ದೊಡ್ಡದು, ಒಂದು ಚಿಕ್ಕದು, ಒಂದುರೆ ಚಿಕ್ಕದು,

ಬಂಡಿಯ ಮೇಲೊಬ್ಬ ಮೊದಲೆತ್ತ ಹೊಡೆವ,
ತಲೆಯಾರು ನಡುವಣಾರು ಹೊಡೆವರಿಬ್ಬರು.
ಬಂಡಿ ನಡೆವ ಬಟ್ಟೆಯಯ್ದು, ತುಂಬಿದ ಭಂಡವ್ವೈದು,
ಐದು ಬಟ್ಟೆಯಂ ತಪ್ಪಿಸಿ ಆರು ಬಟ್ಟೆಯಲಿ ನಡೆಸಿ,
ಹೇರಿದ ಭಂಡವನೊಡೆಯಂಗೊಪ್ಪಿಸಲರಿಯದೆ,
ಎಡೆಯ ಕಡಿದು ಭುಂಜಿಸಿ ಒಡೆಯಂಗೆ ದೂರಾಗಿ,
ಬಹುಮುಖದ ದಂಡಣೆಗೊಳಗಾಗಿ ಬಹಳ ಮುಖದಲ್ಲಿ ಬಂದು,
ಹೇರಡವಿಯ ಕಗ್ಗತ್ತಲಲ್ಲಿ ತೊಳಲಿ ಭ್ರಮಿಸುವ ಹೊಲಬರಿಯದೆ
ಹೊಲಬುಗೆಟ್ಟ ಮಲಮಾಯಾದ್ಧಿಕರು
ನಿಮ್ಮನೆತ್ತ ಬಲ್ಲರಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೮೦॥

೧೩೪೦

'ಓಂಕಾರ ಬಿಂದು ಸಂಯುಕ್ತಂ ನಿತ್ಯಂ ಧ್ಯಾಯಂತಿ ಯೋಗಿಯಃ
ಕಾಮದಂ ಮೋಕ್ಷದಂ ಚೈವ ಓಂಕಾರಾಯ ನಮೋ ನಮಃ
ನಮಂತಿ ಋಷಯೋ ದೇವಾ ನಮಂತ್ಯಪ್ಸರಸಾಂಗಣಾಃ
ನಮಂತಿ ದೇವಾ ದೇವೇಶಂ 'ನ' ಕಾರಾಯ ನಮೋ ನಮಃ
ಮಹಾದೇವಂ ಮಹಾತ್ಮಾನಂ ಮಹಾಜ್ಞಾನಪರಾಯಣಂ
ಮಹಾಪಾಪ ಹರಂ ನಿತ್ಯಂ 'ಮ' ಕಾರಾಯ ನಮೋ ನಮಃ
ಶಿವಂ ಶಾಂತಧರಂ ದೇವಂ ಲೋಕಾನುಗ್ರಹ ಕಾರಣಂ
ಶಿವಮೇಕಂ ಪರಬ್ರಹ್ಮ 'ಶಿ'ಕಾರಾಯ ನಮೋ ನಮಃ
ವಾಹನಂ ವೃಷಭೋ ಯಸ್ಯ ವಾಸುಕಿಃ ಕಂಠಭೂಷಣಂ
ವಾಮಶಕ್ತಿಧರಂ ದೇವಂ 'ವ'ಕಾರಾಯ ನಮೋ ನಮಃ
ಯತ್ರ ಯತ್ರ ಸ್ಥಿತೋ ದೇವಃ ಸರ್ವವ್ಯಾಪಿ ಮಹೇಶ್ವರಃ
ಯೋ ಗುರುಃ ಸರ್ವದೇವಾನಾಂ 'ಯ'ಕಾರಾಯ ನಮೋ ನಮಃ'
ವೇದ:
ನಕಾರಾಯ ಮಕಾರಾಯ ಶಿಕಾರಾಯ ತಥೈವ ಚ
ವಕಾರಾಯ ಯಕಾರಾಯ ಓಂಕಾರಾಯ ನಮೋ ನಮಃ
ವೇದಮಾತಾ ಚ ಗಾಯಿತ್ರೀ ಮಂತ್ರಮಾತಾ ಷಡಕ್ಷರೀ
ಸರ್ವದೇವಪಿತಾ ಶಂಭುಃ ಭರ್ಗೋ ದೇವಸ್ಯ ಧೀಮಹಿ
ಷಡಕ್ಷರಮಿದಂ ಪುಣ್ಯಂ ಯಃ ಪಠೀತ್ ಶಿವಸನ್ನಿಧೌ
ಶಿವಲೋಕಮವಾಪ್ನೋತಿ ಶಿವೇನ ಸಹ ಮೋದತೆ
ಓಂ ನಮಃ ಶಿವಾಯ ಓಂ ನಮಃ ಶಿವಾಯ ಓಂ ನಮಃ ಶಿವಾಯ ಎನ್ನದಿರ್ದಡೆ
ಭವಬಂಧನ ಇಹಪರ ಸಂಸಾರಾದಿ ಪ್ರಪಂಚಬಂಧನ ಬಿಡದು.

ಓಂ ನಮಃ ಶಿವಾಯ ಓಂ ನಮಃ ಶಿವಾಯ ಎಂದಡೆ ಮೋಕ್ಷಸಿದ್ಧಿ.
ಸಾಕ್ಷಿ:
ಷಡಕ್ಷರಜಪಾನ್ನಾಸ್ತಿ ಸರ್ವೇಷಾಂ ಬಂಧನಂ ತಥಾ
ತನ್ಮಂತ್ರಂ ಚ ಜಪನ್ ಭಕ್ತ್ಯಾ ಸದ್ಯೋ ಮುಕ್ತೋ ನ ಸಂಶಯಃ
ಎಂಬುದಾಗಿ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಯ್ಯ ಬಂದು
ಮೋಕ್ಷ ತಾನೇ ಓಂ ನಮಃ ಶಿವಾಯ. ॥೮೧॥

೧೩೪೧
ಓಂಕಾರವೆಂಬ ವೃಕ್ಷದಲ್ಲಿ ಋಗ್ವೇದ ಯಜುರ್ವೇದ
ಸಾಮವೇದ ಅಥರ್ವಣವೇದಗಳೆಂಬ ನಾಲ್ಕು ಶಾಖೆಗಳು,
ಅನಂತವೈ ಉಪವೇದಂಗಳೆಂಬ ಉಪಶಾಖೆಗಳು,
ಶಾಸ್ತ್ರಂಗಳೆಂಬ ಅಂಕುರ ಪಲ್ಲವ, ಪುರಾಣಂಗಳೆಂಬ ಪುಷ್ಪ,
ಆಗಮಂಗಳೆಂಬ ಕಾಯಿ ಬಲಿದು, ಶ್ರೀ ಪಂಚಾಕ್ಷರಿ ಎಂಬ ಮಧುರಪಣ್ಣುಗಳು.
ಅಗಣಿತಫಲವನೂ ಅನಂತಕಾಲ ಭೋಗಿಸಲು
ಮತ್ತಂ ಜಿಹ್ವೆಯೊಳಗೆ ಬಂದಿರಲು ಭೋಗಿಸಿ ಸುಖಿಯಹುದಲ್ಲದೆ
ಇದಿರ ವಿದ್ಯೆಗಳೆಂಬ ಸಸಿಯ ಸಾಕಿ ಸಲಹಲುಂಟೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೮೨॥

೧೩೪೨
ಓಂ ನಮಃ ಶಿವಾಯ ಎಂಬುದೆ ಆಚಾರಲಿಂಗ,
ಓಂ ನಮಃ ಶಿವಾಯ ಎಂಬುದೆ ಗುರುಲಿಂಗ,
ಓಂ ನಮಃ ಶಿವಾಯ ಎಂಬುದೆ ಶಿವಲಿಂಗ,
ಓಂ ನಮಃ ಶಿವಾಯ ಎಂಬುದೆ ಚರಲಿಂಗ,
ಓಂ ನಮಃ ಶಿವಾಯ ಎಂಬುದೆ ಪ್ರಸಾದಲಿಂಗ,
ಓಂ ನಮಃ ಶಿವಾಯ ಎಂಬುದೆ ಮಹಾಲಿಂಗ.
ಓಂ ನಮಃ ಶಿವಾಯ ಓಂ ನಮಃ ಶಿವಾಯ ಎಂದೆನಲು
ಪರಶಿವನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೮೩॥

೧೩೪೩
ಓಂ ನಮಃ ಶಿವಾಯ ಓಂ ನಮಃ ಶಿವಾಯ
ಎನ್ನದಿದ್ದಡೆ ಬಂಧನ,
ಓಂ ನಮಃ ಶಿವಾಯ ಓಂ ನಮಃ ಶಿವಾಯ
ಎಂದಡೆ ಮೋಕ್ಷ, ಅದೆಂತೆಂದಡೆ:

‘ಷಡಕ್ಷರಜಪಾನ್ನಾಸ್ತಿ ಸರ್ವೇಷಾಂ ಬಂಧನಂ ತಥಾ
ತನ್ಮಂತ್ರಜಪತೋ ಭಕ್ತ್ಯಾ ಸದ್ಯೋ ಮೋಕ್ಷೋ ನ ಸಂಶಯಃ’
ಎಂದುದಾಗಿ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಯ್ಯಾ,
ಬಂಧನ ಮೋಕ್ಷವು ಓಂ ನಮಃ ಶಿವಾಯ. ॥೮೪॥

೧೩೪೪
ಓಂ ನಮಃ ಶಿವಾಯ ಎಂಬುದೆ ಋಷಿ,
ಓಂ ನಮಃ ಶಿವಾಯ ಎಂಬುದೆ ಮಂತ್ರ,
ಓಂ ನಮಃ ಶಿವಾಯ ಓಂ ನಮಃ ಶಿವಾಯ ಎಂದೆನೆ
ಸದ್ಯೋನ್ಮುಕ್ತಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೮೫॥

೧೩೪೫
ಓಂ ನಮಃ ಶಿವಾಯ, ಓಂ ನಮಃ ಶಿವಾಯ ಎಂಬುದೆ ಛಂದ.
ಓಂ ನಮಃ ಶಿವಾಯ, ಓಂ ನಮಃ ಶಿವಾಯ ಎಂಬುದೆ ಋಷಿ ತಾನು.
ಓಂ ನಮಃ ಶಿವಾಯ, ಓಂ ನಮಃ ಶಿವಾಯ ಎಂಬುದೆ ಅಧಿದೇವತೆ.
ಓಂ ನಮಃ ಶಿವಾಯ, ಓಂ ನಮಃ ಶಿವಾಯ
ಎಂದೆನಲು ಸದ್ಯೋನ್ಮುಕ್ತಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೮೬॥

೧೩೪೬
ಓಂ ನಮಃ ಶಿವಾಯ ಎಂಬುದೆ ವೇದ,
ಓಂ ನಮಃ ಶಿವಾಯ ಎಂಬುದೆ ಶಾಸ್ತ್ರ,
ಓಂ ನಮಃ ಶಿವಾಯ ಎಂಬುದೆ ಪುರಾಣ,
ಓಂ ನಮಃ ಶಿವಾಯ ಎಂಬುದೆ ಆಗಮ,
ಓಂ ನಮಃ ಶಿವಾಯ ಎಂಬುದೆ ಸಕಲಕಲೆ.
ಓಂ ನಮಃ ಶಿವಾಯ, ಓಂ ನಮಃ ಶಿವಾಯ
ಎಂದೆನಲು ಸರ್ವಜ್ಞ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೮೭॥

೧೩೪೭
ಕರಸ್ಥಲದಲ್ಲಿ ಶಿವಲಿಂಗವ ಬಿಜಯಂಗೈಸಿಕೊಂಡು
ಕಣ್ಣ ಮುಚ್ಚಿ, ಬಾಯ ತೆರೆದು, ಅನ್ಯವ ನೆನೆವನ್ನಬರ
ಇನ್ನು ಲಿಂಗದ ಮರ್ಮವನರಿದುದಿಲ್ಲ.
ಉಂಟಾದುದ ಹುಸಿಮಾಡಿ, ಇಲ್ಲದುದ ನೆನೆದಡೆ
ಅದು ಸಹಜವಾಗಬಲ್ಲುದೆ?

ದೇವದೇಹಿಕ ಭಕ್ತ, ಭಕ್ತದೇಹಿಕ ದೇವನೆಂದುದಾಗಿ,
ತನ್ನೊಳಗೆ ಲಿಂಗ, ಲಿಂಗದೊಳಗೆ ತಾನು,
ನೆನೆಯಲಿಲ್ಲ, ನೆನೆಯಿಸಿಕೊಳ್ಳಲಿಲ್ಲವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೮೮॥

೧೩೪೮

ಕರುವಿನ ರೂಪಿಂಗೆ ಒಳಗೊಂದು ಹೊರಗೊಂದಲ್ಲದೆ
ಪರುಷದ ರೂಪಿಂಗೆ ಒಳಗೊಂದು ಹೊರಗೊಂದುಂಟೆ?
ಅಲ್ಲ, ನಿಲ್ಲು, ಮಾಣು, ಪರೀಕ್ಷಿಸಿ ನೋಡಾ.
ಪಂಚಭೂತಸಮ್ಮಿಶ್ರನಾದಡೆ ದೇವ ದಾನವರೊಳಗಾದ
ಪ್ರಕೃತಿಕಾಯವಾದ ತನುವಿಂಗೆ ಒಳಗೊಂದು ಹೊರಗೊಂದು
ಅದೂ ಕ್ರಿಯಾಕರ್ಮ ಬೇರೆ ದ್ವಂದ್ವಗ್ರಸ್ತವಾಗಿಹುದು.
ಆ ಪ್ರಕಾರವಲ್ಲ ನೋಡಾ.
ಗುರುಲಿಂಗಜಂಗಮ ಪ್ರಸನ್ನವಾದ ಪ್ರಸಾದಕಾಯ ಮಹಾಜ್ಞಾನತನು
ಪ್ರಾಣಲಿಂಗ ಸ್ವಾಯತವಾಗಿಪ್ಪ
ಘನತರ ಶಿವಲಿಂಗಮೂರ್ತಿ ಸರ್ವಾಂಗಲಿಂಗ ಮೂರ್ತಿಯ ಪರೀಕ್ಷಿಸಿ ನೋಡಿ,
ಇಂತು ಸದ್ಗುರುಸ್ವಾಮಿ ಪ್ರಾಣಲಿಂಗಪ್ರತಿಷ್ಠೆಯಂ ಎಂದು ಮಾಡಿದನೋ
ಅಂದೇ ಐಕ್ಯನು, ಅಂದೇ ಶರಣನು, ಅಂದೇ ಪ್ರಾಣಲಿಂಗಿ,
ಅಂದೇ ಪ್ರಸಾದಿ, ಅಂದೇ ಮಾಹೇಶ್ವರ, ಅಂದೇ ಭಕ್ತನು.
ಇಂದಿನ್ನಾವುದು ಹೊಸತಲ್ಲ ನೋಡಾ.
ಗುರುಲಿಂಗಜಂಗಮಕ್ಕೆ ತ್ರಿವಿಧಭಕ್ತಿಯ ಮಾಡುತ್ತಿಪ್ಪ ಭಕ್ತನಾಗಿಪ್ಪನು.
ಪರಧನ ಪರಸ್ತ್ರೀ ಪರದೈವಂಗಳ ಬಿಟ್ಟು ಮಾಹೇಶ್ವರನಾಗಿಪ್ಪನು.
'ಕರ್ಮಣಾ ಮನಸಾ ವಾಚಾ ಗುರೂಣಾಂ ಭಕ್ತವತ್ಸಲಃ
ಶರೀರಮರ್ಥಂ ಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್'
ಎಂಬುದನರಿದು, ಈ ತ್ರಿವಿಧವನೂ ಗುರುಲಿಂಗಜಂಗಮಕ್ಕೆ ಅರ್ಪಿಸಿ
ನಿರಂತರ ಪ್ರಸಾದವನವಗ್ರಹಿಸಿ
'ಭಕ್ತಕಾಯ ಮಮಕಾಯ'ವೆಂಬೀ ವಾಕ್ಯದಲೂ
ತನು ಶಿವತನುವೆಂದರಿದು ಸದ್ಗುರು ಪ್ರಾಣಲಿಂಗವನೇಕೀಭವಿಸಿದ
ಲಿಂಗವೇ ಪ್ರಾಣವೆಂಬುದರಿದ ಬಳಿಕ
ಪ್ರಾಣಲಿಂಗವೆಂದರಿದು, ಒಳಗು ಹೊರಗೆಂದರಿಯದೆ
ಸರ್ವಾಂಗಲಿಂಗವೆಂದರಿದು, ಪ್ರಾಣಮಯ ಶಿವನೆಂದರಿದು
ತತ್ವಮಯಶಿವನೆಂದರಿದು
ಸರ್ವಕ್ರಿಯಾಕರ್ಮಂಗಳೆಲ್ಲವನೂ ಶಿವಕ್ರೀ ಎಂದರಿದು
ಕರಣಂಗಳೆಲ್ಲವೂ ಶಿವಕರಣಂಗಳೆಂದರಿದು

ಶಿವಪ್ರೇರಣೆಯಿಂದ ಬಂದ ಪದಾರ್ಥಂಗಳೆಲ್ಲವೂ ಸರ್ವಶುದ್ಧ ಎಂದರಿದು ಶಿವಹಸ್ತದಲ್ಲಿ
ಶಿವಾರ್ಪಿತವಂ ಮಾಡಿ ರೂಪನರ್ಪಿಸಿ
ಶಿವಜಿಹ್ವೆಯಲ್ಲಿ ಶಿವಾರ್ಪಿತವಂ ಮಾಡಿ ರುಚಿಯನರ್ಪಿಸಿ
ಅರ್ಪಿಸಿದೆನೆಂದೆನ್ನದೆ, ಶಿವಕ್ರೀ ಎಂದರಿದು
ಮಹಾಜ್ಞಾನ ಪರಿಣಾಮಪ್ರಸಾದವ ನಿರಂತರ ಗ್ರಹಿಸುವನು.
ಮನೋವಾಕ್ಕಾಯದಲ್ಲಿ ಮಿಥ್ಯವ ಕಳೆದು
ಜಂಗಮಲಿಂಗಕ್ಕೆ ಅಷ್ಟಭೋಗಂಗಳ ಸಲಿಸಿ ಪ್ರಸನ್ನತೆಯಂ ಪಡೆದು
ಪ್ರಸನ್ನಪ್ರಸಾದವ ಪ್ರಸಾದಿಯಾಗಿ ಗ್ರಹಿಸು[ವನು].
ಅಲಸುಗಾರನ ಭಕ್ತಿ ಅದ್ವೈತವೆಂಬ ವಾಕ್ಯಕ್ಕಂಜಿ
ಸರ್ವಕ್ರೀಯಲ್ಲಿ ಎಚ್ಚತ್ತು ನಡೆವನು.
ಪ್ರಾಣ ಲಿಂಗವೆಂದರಿದು, ಪ್ರಾಣಲಿಂಗಿಯಾಗಿ
ಸುಖ ದುಃಖ ಭಯಾದಿ ದ್ವಂದ್ವಕರ್ಮಂಗಳು ನಾಸ್ತಿಯಾಗಿಪ್ಪನು.
ಸರ್ವಕ್ರಿಯಾಕರ್ಮಂಗಳೆಲ್ಲವನೂ
ಲಿಂಗದಲ್ಲಿ ಇರಿಸಿ, ಧರಿಸಿ, ಸುಖಿಸಿ, ಶರಣನಾಗಿಪ್ಪನು.
ಸರ್ವಕ್ರೀಯಲ್ಲಿ ನಡೆದು ತನುಮನಧನವ ಸವೆಸಿ
ಮಹಾಜ್ಞಾನವಳವಟ್ಟು, ನಿಸ್ಸಂಗಿಯಾಗಿ ಸರ್ವಕ್ರೀಯನೇಕೀಭವಿಸಿ
ಕ್ರಿಯಾನಾಸ್ತಿಯಾಗಿ ಐಕ್ಯನಾಗಿಪ್ಪನು.
ಕ್ರಿಯಾಕ್ರಿಯೆ ಅಂದು ಇಂದು ಎಂದೂ ಒಂದೇ ಪರಿಯಯ್ಯಾ.
ಈ ವಿಚಾರ ಒಮ್ಮಿಂದೊಮ್ಮೆ ಅರಿಯಬಾರದು. ಅರಿಯದಿದ್ದರೇನು?
ಬಾಲ್ಯದಲ್ಲಿ ಸತಿಪತಿಗಳೂ ಮಾತಾಪಿತರುಗಳೂ ವಿವಾಹವ ಮಾಡುವಲ್ಲಿ
ಒಮ್ಮಿಂದೊಮ್ಮೆ ಬಾಲಕ್ರಿಯಾಕರ್ಮ ರತಿಸುಖವನರಿಯಬಾರದು.
ಅರಿಯದಿದ್ದರೇನು?
ಬಾಲ್ಯ ಸತಿಪತಿಗಳಲ್ಲಿ ಮುಂದೆ ಯೌವನದಲ್ಲಿ
ಕ್ರಿಯಾಕರ್ಮಕರದಿ ಸುಖವನರಿವಂತೆ
ಶಿವಾಚಾರ ಸರ್ವಕ್ರಿಯಾ ಸಂಪನ್ನತ್ವವನು,
ಮಹಾನುಭಾವರ ಸಂಗದಿಂದಲರಿಯಬಹುದು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೮೯॥

೧೩೪೯

ಕಕ್ಷೆ ಕರಸ್ಥಲ ಉತ್ತಮಾಂಗ ಉರಸ್ಥಲ
ಮೊದಲಾದ ಸ್ಥಾನಂಗಳಂ ಶುದ್ಧವ ಮಾಡಿ,
"ಯಾ ತೇ ರುದ್ರ ಶಿವಾತನೂರಘೋರಾ[s] ಪಾಪಕಾಶಿನೀ"
ಎಂಬ ಶಿವಲಿಂಗಮೂರ್ತಿಯಂ ಸ್ಥಾಪಿಸಿ,

ತತ್‌ಶಿಷ್ಯನ ಶರೀರವೆ ನಡೆದೇವಾಲಯವೆಂಬಂತೆ
ಶ್ರೀಗುರು ಪಾವನವ ಮಾಡಿ ತೋರಿದನಾಗಿ,
ಅಂಗದ ಮೇಲೆ ಲಿಂಗವುಳ್ಳವರ ಕಂಡು ಮರಳಿ ಮಾನವರೆಂದಡೆ
ನಾಯಕನರಕ ತಪ್ಪದಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೯೦॥

೧೩೪೦
ಕಾಮ ಕ್ರೋಧ ಲೋಭ ಮೋಹಾದಿಗಳ ಆಗರವೆನಿಪ ಒಡಲ
ಒಡತಿ ಎಳೆದೊಯ್ಯುತ್ತಿರಲು ವಾಗದ್ವೈತವಾ ಬೊಮ್ಮವೆಂಬೆನು.
ಆಗಳೂ ಇಂದ್ರಿಯಂಗಳ ಬೆನ್ನಲಿ ಹರಿವುತ್ತ
'ಸೋ[s]ಹಂ' ಎಂಬರಿವನರಿಯದೆ
ಶಿವಜ್ಞಾನ ಮೊಗೆಯದೆ ವಾಗದ್ವೈತದಲ್ಲಿ ಹುರುಳಿಲ್ಲ.
ನಂಬು, ಸುಖಸಾರಾಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೯೧॥

೧೩೪೧
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ
ರಾಗ ದ್ವೇಷವೆನಿಪ ಒಡಲಿರೆ,
ರಾಗ ದ್ವೇಷ ಗಮಾನಾಗಮನಂಗಳಿರುತ್ತಿರೆ,
ಬ್ರಹ್ಮವಾನೆಂಬ ಬರಿಯ ವಾಗದ್ವೈತದಲ್ಲಿ ಫಲವಿಲ್ಲ.
ನಂಬು, ಸುಖಸಾಗರವನ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನ. ॥೯೨॥

೧೩೪೨
ಕಾಮಧೇನು ಕಲ್ಪತರು ಚಿಂತಾಮಣಿ ಪರುಷ ಮೊದಲಾದ
ಮಹಾವಸ್ತುಗಳ ಮುಂದಿಟ್ಟುಕೊಂಡು
ಕಾಮಿಸುವ ಮನಸಿನೊಳಗಿರುತ ಇದಾನೆ ಕಾಣಾ,
ಈ ಕೊಡುವ ಗುಣವುಳ್ಳ ಮಹಾಶಿವನು.
ಹಿರಣ್ಯಪತಿ ಹಿರಣ್ಯಬಾಹು
ವರದಹಸ್ತನು ಅಭಯಹಸ್ತನು ಮಹಾದೇವನಿದಾನೆ.
ಒಲಿಯಲರಿಯಿರಿ ಒಲಿಸಲರಿಯಿರಿ,
ಬೇಡಲರಿಯಿರಿ ಕೊಡಲರಿಯಿರಿ, ಕೊಂಡು ಪ್ರಯೋಗಿಸಲರಿಯಿರಿ.
ನೀವು ಕೊಳಲರಿಯಿರಲ್ಲದೆ, ಶಿವನೇನೂ ಕೊಡಲರಿಯನೆ?
ಅಂಗಭೋಗಕ್ಕೆಂದಡೆ ಕೊಡನು, ಲಿಂಗಭೋಗಕ್ಕೆಂದಡೆ ಕೊಡುವನು.
ಇದು ಸತ್ಯ ಶಿವನಾಣೆ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೯೩॥

೧೩೫೩
ಕಾಮಧೇನು ಕಾಮಿಸಿದುದ ಕುಡದಿರ್ದಡೆ
ಆ ಕಾಮಧೇನು ಬಂಜೆ ಆಕಳಿಂದ ಕಷ್ಟ ನೋಡಾ.
ಕಲ್ಪತರು ಕಲ್ಪಿಸಿದುದ ಕುಡದಿರ್ದಡೆ
ಆ ಕಲ್ಪತರು ತರಿತಾರಿ ಬೊಬ್ಬುಲಿಯಿಂದವೂ ಕಷ್ಟ ನೋಡಾ.
ಚಿಂತಾಮಣಿ ಚಿಂತಿಸಿದುದ ಕುಡದಿರ್ದಡೆ
ಆ ಚಿಂತಾಮಣಿ ಗಾಜುಮಣಿಯಿಂದವೂ ಕರಕಷ್ಟ ನೋಡಾ.
ಶ್ರೀಗುರುಕಾರುಣ್ಯವ ಪಡೆದು ಸದ್ಭಕ್ತನಾಗಿ
ಶ್ರೀಗುರುಲಿಂಗಜಂಗಮಕ್ಕೆ ಪ್ರೀತಿಯಿಂದ ದಾಸೋಹವ ಮಾಡದಿರ್ದಡೆ
ಆ ಭಕ್ತನು ಲೋಕದ ಭವಿಗಳಿಂದವೂ ಕರಕಷ್ಟ ನೋಡಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೯೪॥

೧೩೫೪
ಕಾಮವುಳ್ಳಲ್ಲಿ ಭಕ್ತಿ ಇಲ್ಲ, ಕ್ರೋಧವುಳ್ಳಲ್ಲಿ ಭಕ್ತಿ ಇಲ್ಲ,
ಲೋಭವುಳ್ಳಲ್ಲಿ ಭಕ್ತಿ ಇಲ್ಲ, ಮೋಹವುಳ್ಳಲ್ಲಿ ಭಕ್ತಿ ಇಲ್ಲ.
ಮದವುಳ್ಳಲ್ಲಿ ಭಕ್ತಿ ಇಲ್ಲ, ಮತ್ಸರವುಳ್ಳಲ್ಲಿ ಭಕ್ತಿ ಇಲ್ಲವಯ್ಯಾ.
ಮಹಾ ಅರಿಷಡ್ವರ್ಗವುಳ್ಳಲ್ಲಿ ಭಕ್ತಿ ಇಲ್ಲ.
ಇವು ಉಂಟಾಗಿ ಭಕ್ತರೆಂಬರು. ಅದೇಕಯ್ಯ?
ಹಗೆಯ ಸಮೂಹವಿದ್ದಲ್ಲಿ ಕೇಳಿರೆ, ಒಬ್ಬನೆಂತಿಪ್ಪನಯ್ಯಾ?
ಇದು ಕಾರಣ,
ಅರಿಷಡ್ವರ್ಗವುಳ್ಳಲ್ಲಿ ಭಕ್ತಿ ಇಲ್ಲ, ಭಕ್ತಿವುಳ್ಳಲ್ಲಿ ಅರಿಷಡ್ವರ್ಗಗಳಿಲ್ಲ.
ಈ ಅರಿಷಡ್ವರ್ಗವಿಲ್ಲದವನೇ ಭಕ್ತ, ಇಂತಹ ಭಕ್ತದೇಹಿಕ ದೇವನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೯೫॥

೧೩೫೫
ಕಾಮಿಸುವ ವಸ್ತು ಕರಸ್ಥಲಕ್ಕೆ ಬಂದ ಬಳಿಕ
ಕಾಮಿಸಲೇನುಂಟು? ಇನ್ನೇನ ಕಾಮಿಸುವುದಯ್ಯಾ?
'ನಮೋ ಹಿರಣ್ಯಬಾಹವೇ ಸೇನಾನ್ಯೇ ದಿಶಾಂ ಚ ಪತಯೇ ನಮೋ
ನಮೋ ವೃಕ್ಷೇಭ್ಯೋ ಹರಿಕೇಶೇಭ್ಯಃ ಪಶೂನಾಂ ಪತಯೇ ನಮೋ'
ಎಂಬ ವಸ್ತು
'ಓಂ ಯೋ ವೈ ರುದ್ರಸ್ವಭಾವಾನ್ ಅನ್ಯಚ್ಚ ಮೃತಂ' ಎಂಬ ವಸ್ತು,
ಸುಖಸ್ವರೂಪನು ಅಭಯಹಸ್ತನು ಶಾಂತನು ಕರುಣಿ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೯೬॥

೧೩೫೬
ಕುಲಕಷ್ಟಮತಿಹೀನನಿಗೆ ಉಪದೇಶವ ಕೊಡಲಾಗದು
ವಿಭೂತಿಯ ನೀಡಲಾಗದು,
ಕರ್ಣಮಂತ್ರವ ಹೇಳಿ ಲಿಂಗವ ಕಟ್ಟಲಾಗದು.
ಕಟ್ಟಿದರೂ ಹಿಂದಣ ಪೂರ್ವಜನ್ಮವ ಬಿಡದಿದ್ದಡೆ
ಹೊಲೆಯರ ಮನೆಯ ಶ್ವಾನಬಳಗದಂತೆ.
ಕುಲಕಷ್ಟನಾದಡೆಯೂ ಆಗಲಿ
ಉಪದೇಶವ ಕೊಡಲಿ, ವಿಭೂತಿಯ ನೀಡಲಿ
ಕರ್ಣಮಂತ್ರವ ಹೇಳಲಿ, ಲಿಂಗವ ಕಟ್ಟಲಿ,
ಕಟ್ಟಿದಡೆ, ಸ್ವಪ್ನ ಜಾಗ್ರದಲ್ಲಿ ಶಿವಜ್ಞಾನಿಯಾಗಿದ್ದಡೆ
ಲೋಕಕ್ಕೆ ಆತನೇ ಉಪದೇಶಕರ್ತ ಕಾಣಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೯೭॥

೧೩೫೭
ಕೇಳಾ ಹೇಳುವೆನು:
ಮಹಾಘನಲಿಂಗಭಕ್ತನು ಆಚರಿಸುವ ಸದ್ವರ್ತನನಿರ್ಣಯವ,
ಅದು ಪರಶಿವಲಿಂಗದ ನಿತ್ಯಪದದ ಮಾರ್ಗ:
'ಗೌರವಂ ಲೈಂಗಿಕಂ ಚಾರಂ ಪ್ರಸಾದಂ ಚರಣಾಂಬುಕಂ।
ಭೌಕ್ತಿಕಂ ಚ ಮಯಾ ಪ್ರೋಕ್ತಂ ಷಡ್ವಿಧಂ ವ್ರತಮಾಚರೇತ್॥
ಗುರುದೇವಃ ಶಿವಃ ಸಾಕ್ಷಾತ್ ತಚ್ಛಿಷ್ಯೋ ಜ್ಞಾನಸಾರವಿತ್।
ತ್ರಿವಿಧಂ ಹೃದಿ ಸಂಭಾವ್ಯ, ಕೀರ್ತಿತಂ ಗೌರವಂ ವ್ರತಂ॥
ಗುರುಣಾ ಚಾರ್ಪಿತಂ ಲಿಂಗಂ ಪ್ರಾಣಲಿಂಗಂ ಪ್ರಕಥ್ಯತೇ।
ತಥೈವ ಭಾವನಾದ್ವೈತಂ ತದ್ವ್ರತಂ ಲೈಂಗಿಕಂ ಸ್ಮೃತಂ॥
ಗುರುಲಿಂಗಚರಾಧೀನಂ ನಿರ್ಮಾಲ್ಯಂ ಭೋಜನಾದಿಕಂ।
ತಸ್ಯಾನುಭಾವನಂ ದೇವಿ ತತ್ಪರಂ ವ್ರತಮುತ್ತಮಂ॥
ಗುರುಪಾದಾಬ್ಜಸಂಭೂತಂ ಉಜ್ಜಲಂ ಲೋಕಪಾವನಂ॥
ತಜ್ಜಲಸ್ನಾನಪಾನಾದಿ ತದ್ವ್ರತಂ ಚ ಚರಣಾಂಬುಕಂ॥
ಗುರುಲಿಂಗಚರಾಣಾಂ ಚ ಪ್ರಸಾದಂ ಪಾದವಾರುಣಂ।
ಪರ್ಯಾಯಭಜನಂ ಭಕ್ತ್ಯಾ ತದ್ವ್ರತಂ ಸ್ಮೃತಂ॥
ಕ್ರಿಯಾದ್ವೈತಂ ನ ಕರ್ತವ್ಯಂ ಭಾವಾದ್ವೈತಂ ಸಮಾಚರೇತ್।
ಕ್ರಿಯಾಂ ನಿರ್ವಹತೇ ಯಸ್ತು ಭಾವಶುದ್ಧಂ ತು ಶಾಂಕರಿ'॥
ಎಂದುದಾಗಿ,

‘ಪೂಜಿತೈಃ ಶಿವಭಕ್ತೈಶ್ಚ ಪರಕರ್ಮ ಪ್ರಪಂಚಿತಂ।
ಪುಣ್ಯಸ್ಸಶಿವಧರ್ಮಃ ಸ್ಯಾತ್ ವಜ್ರಸ್ರಚಿಸ್ಸಮಬ್ರವೀತ್॥
ಪಾತ್ರಶಾಸನಯೋರ್ಮಧ್ಯೇ ಶಾಸನಂ ತು ವಿಶಿಷ್ಯತೇ।
ತಸ್ಮಾತ್ ಶಾಸನಮೇವಾದೌ ಪೂಜ್ಯತೇ ಚ ಶವೋ ಯಥಾ॥
ಗುಣವತ್ಪಾತ್ರಪ್ರಜಾಯಾಂ ವರಂ ಶಾಸನಪೂಜನಂ।
ಶಾಸನಂ ಪೂಜಾಯೇತ್ತಸ್ಮಾಡವಿಚಾರಂ ಶಿವಾಜ್ಞಯಾ॥
ಸ ನರೋ ಭೃತ್ಯಸದ್ಭಕ್ತಃ ಪತಿಕರ್ಮಾ ಚ ಜಂಗಮಃ।
ರೂಪಂ ಚ ಗುಣಶೀಲಂ ಚ ಅವಿರಂ ಶುಭಂ ಭವೇತ್॥
ಗುಣೋಗುಣಶ್ಚ ರೂಪಂ ಚ ಅರೂಪಂ ಚ ನ ವಿದ್ಯತೇ
ಪಶ್ಯತ್ಯಮೋಹಭಾವೇನ ಸ ನರಃ ಸುಖಮೇಧತೇ
ದುಶ್ಶೀಲಃ ಶೀಲಸರ್ವಜ್ಞಂ ಮೂರ್ಖಭಾವೇನ ಪಶ್ಯತಿ
ಪಶ್ಯಂತಿ ಲಿಂಗಭಾವೇನ ಸದ್ಭಕ್ತಾ ಮೋಕ್ಷಭಾವನಾಃ
ಯಥಾ ಲಿಂಗಂ ತಥಾ ಭಾವಃ ಸತ್ಯಂ ಸತ್ಯಂ ನ ಸಂಶಯಃ
ಯಥಾ ಭಕ್ತಿಸ್ತಥಾ ಸಿದ್ಧಿಃ ಸತ್ಯಂ ಸತ್ಯಂ ನ ಸಂಶಯಃ
ಸತ್ಯಭಾವಿ ಮಹಾಸತ್ಯಂ ಸತ್ಯಂ ಸ್ಯಾಚ್ಚಿವಲಕ್ಷಣಂ
ಮಿಥ್ಯಭಾವೀತ್ವಹಂ ಮಿಥ್ಯಾ ಸತ್ಯಂ ಸ್ಯಾಚ್ಚಿವಲಕ್ಷಣಂ
ದಕ್ಷಿಣೇ ತು ಮಹಾದೇವೇ ಪದಾರ್ಥೇ ಕಿಂ ಪ್ರಯೋಜನಂ
ಅದಕ್ಷೇ ತು ಮಹಾದೇವೇ ಪದಾರ್ಥೇ ಕಿಂ ಪ್ರಯೋಜನಂ
ಅರಿರ್ಮಿತ್ರಂ ವಿಷಂ ಪಥ್ಯಂ ಅಧರ್ಮೋ ಧರ್ಮವದ್ಭವೇತ್
ಪ್ರಸನ್ನ ಏವ ದೇವೇ ತು ವಿಪರೀತಂ ಭವೇದ್ಧ್ರುವಂ
ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಚ್ಯತೆ
ಜಂಗಮಸ್ಯಾವಮಾನೇನ ಸ್ಥಾವರಂ ನಿಷ್ಫಲಂ ಭವೇತ್
ನ ಮೇ ಪ್ರಿಯಶ್ಚತುರ್ವೇದೀ ಮದ್ಭಕ್ತಃ ಶ್ವಪಚೋ[S]ಪಿ ವಾ
ತಸ್ಮೈ ದೇಯಂ ತತೋ ಗ್ರಾಹ್ಯಂ ಸಃ ಪೂಜ್ಯಶ್ಚ ಯಥಾಹ್ಯಹಂ
ಸದ್ಗುರುರ್ಭಾವಲಿಂಗಂ ಚ ತಲ್ಲಿಂಗಂ ಚಿತ್ಸ್ವರೂಪಕಂ
ತದ್ಭಾವಶುದ್ಧಿಸಿದ್ಧಸ್ಯ ಸದ್ಯೋನ್ಮುಕ್ತಿಃ ಸುಖಂ ಭವೇತ್
ಗುರುಃ ಪರಶಿವಶ್ಚೈವ ಜಂಗಮೋ ಲಿಂಗಮೇವ ಚ
ತದ್ಭಾವಶುದ್ಧಿಸಿದ್ಧಸ್ಯ ಸದ್ಯೋನ್ಮುಕ್ತಿಃ ಸುಖಂ ಭವೇತ್
ಲಿಂಗಾಂಗೀ ಗುರುರ್ಲಿಂಗಂ ತ್ರಿವಿಧಂ ಲಿಂಗಮುಚ್ಯತೇ’

....

ತತ್ತ್ವದೀಪಿಕಾಯಾಂ
‘ಪ್ರಸಾದೋ ಮುಕ್ತಿಮೂಲಂ ಚ ತತ್ಪ್ರಸಾದಸ್ತ್ರಿಧಾ ಮತಃ
ಶಿವಃ ಸರ್ವಾಧಿದೇವಃ ಸ್ಯಾತ್ ಸರ್ವಕರ್ಮ ಶಿವಾಜ್ಞಯಾ’

ತತ್ತ್ವದೀಪಿಕಾಯಾಂ
'ಮಾಹೇಶ್ವರಸ್ಯ ಸಂಗಾದ್ಧಿ ಶಿವಯೋಗಂ ಲಭೇನ್ನರಃ
ಪ್ರಸಾದಂ ತ್ರಿವಿಧಂ ಗ್ರಾಹ್ಯಂ ಮಹಾಪಾಪವಿನಾಶಕಂ'
ತತ್ತ್ವದೀಪಿಕಾಯಾಂ
'ಧನಪುತ್ರಕಲತ್ರಾದಿಮೋಹಂ ಸಂತ್ಯಜ್ಯ ಯೋ ನರಃ
ಶಿವಭಾವೇನ ವರ್ತೇತ ಸದ್ಯೋನ್ಮುಕ್ತಸ್ಸುಖೀ ಭವೇತ್
ಪ್ರಾಣಲಿಂಗೇತ್ವವಿಶ್ವಾಸಾತ್ ಭಕ್ತಿಮುಕ್ತಿದ್ವಯಂ ನ ಚ
ಪ್ರಾಣಲಿಂಗಸ್ಯ ವಿಶ್ವಾಸಾತ್ ಸಿದ್ಧಿಃ ಸ್ಯಾತ್ ಭಕ್ತಿಮುಕ್ತಿದಾ
ಪ್ರಾಣಲಿಂಗಮವಿಶ್ವಸ್ಯ ತೀರ್ಥಲಿಂಗಮುಪಾಸತೇ
ಸ ನರಃ ಸ್ವರ್ಗಮಾಪ್ನೋತಿ ಗಣತ್ವಂ ನ ಪ್ರಯುಜ್ಯತೇ
ಪ್ರಾಣಲಿಂಗಸಮಾಯುಕ್ತಃ ಪರಹಸ್ತಸಮರ್ಚನಾತ್
ತತ್ಪೂಜಾ ನಿಷ್ಫಲಾ ದೇವಿ ರೌರವಂ ನರಕಂ ವ್ರಜೇತ್
ಪ್ರಾಣಲಿಂಗಸಮಾಯುಕ್ತಃ ಪರಹಸ್ತೇ ದದಾತಿ ಚೇತ್
ನಿಮಿಷಾರ್ಧವಿಯೋಗೇನ ವಿಶೇಷಂ ಪಾತಕಂ ಭವೇತ್
ಪ್ರಾಣಲಿಂಗಸಮಾಯುಕ್ತ ಏಕಭುಕ್ತೋಪವಾಸತಃ
ಗುರುಲಂಘನಮಾತ್ರೇಣ ಪೂಜಾ ಯಾ ನಿಷ್ಫಲಾ ಭವೇತ್
ಇಷ್ಟಲಿಂಗಂ ಸಮುತ್ಸೃಜ್ಯ ಅನ್ಯಲಿಂಗಸ್ಯ ಪೂಜನಾತ್
ಸ್ವೇಷ್ಟಂ ನ ಲಭತೇ ಮರ್ತ್ಯಃ ಪರಂ ತತ್ತ್ವಂ ನಿಹತ್ಯಸೌ
ಅತ್ಯಂತಮಹಿಮಾರೂಢಂ ಶಿವಮಾಹಾತ್ಮ್ಯವಿಸ್ತರಂ
ಯೋ[S]ಪಿ ದೃಷ್ಟ್ವಾಪ್ಯವಿಶ್ವಾಸೀ ಸ ಭಕ್ತೋ ನರಕಂ ವ್ರಜೇತ್
ಅಥ ಯೋ ಯಾದವಶ್ಚೈವ ರಾಜಾನಶ್ಯವೋ ಗ್ರಹಾ
ನೈವ ಪೀಡ್ಯಸ್ತು ಯತ್ಕೃತ್ವಾ ನರಂ ಹಾರಪರಾಯಣಂ
ಹಿರಣ್ಯರೂಪದೇಹಸ್ತಂ ಹಿರಣ್ಯಪತಿಪ್ರಾಣಿನಾಂ
ಆಶಾದನ್ಯಂ ಹಿರಣ್ಯಂ ಚ ತದ್ದೇಹಂ ಲಿಂಗವರ್ಜಯೇತ್
ಘೃಣಾಮೂರ್ತಿರ್ಮಹಾದೇವೋ ಹಿರಣ್ಯೋದ್ಬಾಹು ಶಂಕರಃ
ವರದಾಭಯ ಮತ್ಸ್ವಾಮಿನ್ ಯೇ ಆಶಾದನ್ಯಂ ವಿವರ್ಜಯೇತ್
ಆಶಾ ಚ ನರಕಂ ಚೈವ ನಿರಾಶಾ ಮುಕ್ತಿರೇವ ಹಿ
ಆಶಾನಿರಾಶಯೋರ್ನಾಸ್ತಿ ತತ್ಸುಖಸ್ಯ ಸಮಂ ಪರಂ'
ಶಿವರಹಸ್ಯೇ
'ಜಪಶ್ರಾಂತಃ ಪುನರ್ಧ್ಯಾಯೇತ್ ಧ್ಯಾನಶ್ರಾಂತಃ ಪುನರ್ಜಪೇತ್
ಜಪಧ್ಯಾನಾದಿಯೋಗೇನ ಶಿವಃ ಕ್ಷಿಪ್ರಂ ಪ್ರಸೀದತಿ
ಗಚ್ಛನ್ ತಿಷ್ಠನ್ ಸ್ವಪನ್ ಜಾಗ್ರನ್ ಉನ್ಮಿಷನ್ ನಿಮಿಷನ್ನಪಿ
ಶುಚಿರ್ವಾಪ್ಯಶುಚಿರ್ವಾಪಿ ಶಿವಂ ಸರ್ವತ್ರ ಚಿಂತಯೇತ್

ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋ[S]ಪಿ ವಾ
ಯಸ್ಸ್ಮರೇತ್ ಸತತಂ ರುದ್ರಂ ಸ ಬಾಹ್ಯಾಭ್ಯಂತರಃ ಶುಚಿಃ
ದುರ್ಲಭಂ ಮಾನುಷಂ ಜನ್ಮ ವಿವೇಕಸ್ತ್ವತಿದುರ್ಲಭಃ
ದುರ್ಲಭಾ ಚ ಶಿವೇ ಭಕ್ತಿಃ ಶಿವಜ್ಞಾನಂ ತು ದುರ್ಲಭಂ
ಇಂದ್ರಿಯಪ್ರೀತಿದಾತಾರಃ ಪುಮಾಂಸೋ ಬಹವಃ ಕಿಲ
ಶಿವಜ್ಞಾನಾರ್ಥದಾತಾರಃ ಪುಮಾಂಸೋ ಲೋಕದುರ್ಲಭಾಃ
ಲಿಂಗಭಕ್ತ್ಯಾ ಮನಃ ಪೂತಂ ಅಂಗಂ ಪೂತಂ ತು ದೇಶಿಕಾತ್
ಭಾವಸ್ತು ಜಂಗಮಾತ್ ಪೂತಸ್ತ್ರಿವಿಧಾ ಭಕ್ತಿರುತ್ತಮಾ
ಅಷ್ಟವಿಧಾರ್ಚನಂ ಲಿಂಗೇ ಅಷ್ಟಭೋಗಸ್ತು ಜಂಗಮೇ
ಲಿಂಗೇ ಷೋಡಶೋಪಚಾರಾಃ ಸರ್ವೇ ತಾತ್ಪರ್ಯಜಂಗಮೇ
ಮನೋ ಲೀನಂ ಮಹಾಲಿಂಗೇ ದ್ರವ್ಯಂ ಲೀನಂ ತು ಜಂಗಮೇ
ತನುರ್ಲೀನೋ ಗುರೌ ಲಿಂಗೇ ಇತಿ ಭಕ್ತಸ್ಯ ವೈ ಧ್ರುವಂ
ಸಕಲಂ ಭಕ್ತರೂಪಂ ಚ ನಿಷ್ಕಲಂ ಶಿವರೂಪಕಂ
ಸಕಲಂ ನಿಷ್ಕಲಂ ಮಿಶ್ರಂ ಚರರೂಪಂ ವಿಧೀಯತೇ
ಸತ್ಕ್ರಿಯಾಂ ಪೂಜಯೇತ್ಪ್ರಾತರ್ಮಧ್ಯಾಹ್ನೇ ಭೋಜನಾವಧಿಂ
ಸಾಯಂಕಾಲೇ ಮಹಾಪೂಜಾಂ ತತ್ಕ್ರಮಸ್ತು ವಿಶಿಷ್ಯತೇ
ಮನಃಪೂತಾರ್ಚನಂ ಭಕ್ತ್ಯಾ ಪ್ರಾತಃಕಾಲವಿಧಿಕ್ರಮಃ
ಸುಜಲಂ ಸುರಸಂ ಚೈವ ಯಥಾಸಂಭವದ್ರವ್ಯಕಂ
ಅರ್ಪಯೇಚ್ಚರಲಿಂಗಾಯ ಮಧ್ಯಾಹ್ನೇ ಪೂಜನಕ್ರಮಃ
ಗಂಧಂ ಪುಷ್ಪಂ ಚ ಕರ್ಪೂರಂ ಚಂದನಂ ಲೇಪನಂ ತಥಾ
ಅರ್ಪಯೇತ್ ಫಲತಾಂಬೂಲಂ ಸಂಧ್ಯಾಪೂಜಾರ್ಚನಾವಿಧಿಕ್ರಮಃ
ಧೂಪಮುಷ್ಣಾಧಿಕಂ ಸರ್ವಂ ಪ್ರಾತಃಕಾಲಾರ್ಚನಾವಿಧಿಃ
ಪೂಜೋಪಚಾರಸ್ಸರ್ವೇಷಾಂ ಶೈತ್ಯಂ ಮಧ್ಯಾಹ್ನಸಂಧಿಷು
ತ್ರಿಸಂಧ್ಯಾ ತ್ರಿಷು ಕಾಲೇಷು ಉಷ್ಣಂ ನೈವೇದ್ಯಮುತ್ತಮಂ
ಯಥಾಸಂಭವಂ ಸಂಧ್ಯಾಯಾಂ ನಾದಾದೀನಿ ವಿಧಿಕ್ರಮಾತ್
ಶರಸಂಯುಕ್ತಪೂಜಾಯಾಂ ಕೇವಲಂ ನರಕಂ ಭವೇತ್
ನಿಶ್ಚಿತಃ ಪೂಜಕಶ್ಚೈವ ಕೇವಲಂ ಮುಕ್ತಿಕಾರಣಂ
ಅಷ್ಟಾದಶಾನಾಂ ಜಾತೀನಾಂ ಶಠಕರ್ಮಸ್ವಭಾವತಃ
ನಿಶ್ಚಿತಾಃ ಕುಲಮರ್ಯಾದಾಃ ಸದ್ಭಕ್ತಾಶ್ಚ ಶಿವಪ್ರಿಯಾಃ
ಲಿಂಗಧಾರೀ ಮಹಾಲಿಂಗಂ ನ ಭೇದೋ ತತ್ರ ದೃಶ್ಯತೇ
ಸದ್ವೈತ್ತೋ ಭೃತ್ಯರೂಪಶ್ಚ ಸತ್ಯಂ ಸತ್ಯಂ ಸಮೋ ನ ಚ
ಕರ್ತೃಭೃತ್ಯಸ್ಯ ಸನ್ಮಾರ್ಗದುರ್ಮಾರ್ಗಸಮಭಾವತಃ
ಅಹಂಕಾರೋ ಮಹಾಪಾಪಂ.....

ಜನ್ಮಾಂತರಸಹಸ್ರೇಷು ತಪೋಧ್ಯಾನಪರಾಯಣೈಃ
ನರಾಣಾಂ ಕ್ಷೀಣಪಾಪಾನಾಂ ಶಿವೇ ಭಕ್ತಿಃ ಪ್ರಜಾಯತೇ
ತತೋ ವಿಷಯವೈರಾಗ್ಯಂ ವೈರಾಗ್ಯಾತ್ ಜ್ಞಾನಸಂಭವಃ
ಜ್ಞಾನೇನ ತು ಪರಾ ಭಕ್ತಿಃ ಪ್ರಸಾದಸ್ತದನಂತರಂ
ಪ್ರಸಾದಾನ್ಮುಚ್ಯತೇ ಜಂತುರ್ಮುಕ್ತಃ ಶಿವಸಮೋ ಭವೇತ್
ಅಸಾರೇ ದಗ್ಧಸಂಸಾರೇ ಸಾರಂ ದೇವಿ ಶಿವಾರ್ಚನಂ
ಸತ್ಯಂ ವಚ್ಮಿ ಹಿತಂ ವಚ್ಮಿ ವಚ್ಮಿ ಪಥ್ಯಂ ಪುನಃ ಪುನಃ
ಉಪಾಧಿಃ ಸ್ಯಾನ್ಮಹಾಭಕ್ತಿರುಪಾಧಿಸ್ಯಾತ್ಪ್ರಸಾದಕಃ
ಉಪಾಧಿಃ ಸ್ಯಾತ್ಕ್ರಿಯಾಸ್ಸರ್ವಾಶ್ಶೈವಸ್ಯಾಸ್ಯಾ[S]ಪ್ರಸಾದತಃ
ನಿರುಪಾಧಿಕಮದ್ಭಕ್ತಿರ್ನಿರುಪಾಧಿಕಪ್ರಸಾದತಃ
ನಿರುಪಾಧಿಕ್ರಿಯಾಸ್ಸರ್ವಾಃ ಶಿವಃ ಶೀಘ್ರಂ ಪ್ರಸೀದತಿ
ದಿನೇ ದಿನೇ ವಿಶೇಷಂ ಚ ಮಾಸೇ ಮಾಸೇ ಮಹಾದ್ಭುತಂ
ವತ್ಸರೇ ವತ್ಸರೇ ಚೋದ್ಯಂ ಸದ್ಭಕ್ತಸ್ಯಾಭಿವರ್ಧನಂ
ದಿನೇ ದಿನೇ ವಿಶೇಷಂ ಚ ಮಾಸೇ ಮಾಸೇ ಹಿ ದೃಶ್ಯತಾಂ
ವತ್ಸರೇ ವತ್ಸರೇ ನಷ್ಟಾ ಮಹಾವಾಸಕ್ರಿಯಾಸ್ತಥಾ
ದಾಸೋ[S]ಹಂ ಚ ಮಹಾಖ್ಯಾತಿರ್ದಾಸೋ[S]ಹಂ ಲಾಭ ಏವ ಚ
ದಾಸೋ[S]ಹಂ ಚ ಮಹತ್ಪೂಜ್ಯಂ ದಾಸೋ[S]ಹಂ ಸತ್ಯಮುಕ್ತಿದಂ
ಸದ್ಭಕ್ತಸಂಗಸಿದ್ಧಿಃ ಸ್ಯಾತ್ ಸರ್ವಸಿದ್ಧಿರ್ನಸಂಶಯಃ
ಭಕ್ತಿರ್ಜ್ಞಾನಂ ಚ ವೈರಾಗ್ಯಂ ವರ್ಧತಾಂ ಚ ದಿನೇ ದಿನೇ
ಮಹತ್ಸುಖಂ ಮಹಾತೋಷೋ ಲಿಂಗಭಕ್ತ್ಯಾ ಯಥಾ ಶಿವೇ
ಪ್ರಾಣಲಿಂಗಪ್ರತೀಕಾರಂ ಕುರ್ವಂತೀಹ ದುರಾತ್ಮನಃ
ಅತ್ಯುಗ್ರನರಕಂ ಯಾಂತಿ ಯುಗಾನಾಂ ಸಪ್ತವಿಂಶತಿ
ಹುತಭುಗ್ವತಿತಾಂಭೋಜಗತಿಃ ಪಾತಕಿನಾಂ ಭವೇತ್'
ಸುಜ್ಞಾನ ಸದ್ಭಕ್ತಿ ಪರಮವೈರಾಗ್ಯಕ್ಕೆ ಶಿವನೊಲಿವನಲ್ಲದೆ
ಸಾಮಾನ್ಯ ತಟ್ಟು ಮುಟ್ಟು ತಾಗು ನಿರೋಧದಲ್ಲಿ ಅನುಸರಿಸಿದಡೆ
ಶಿವ ಮೆಚ್ಚುವನೆ? ಸತ್ಯಶುದ್ಧ ನಿತ್ಯಮುಕ್ತ ಶರಣರು ಮೆಚ್ಚುವರೆ?
ಶಿವನೊಲವು ಶರಣರೊಲವು ಸೂರೆಯೇ?
ದೇವದಾನವ ಮಾನವರಂತೆ ಶಿವನಲ್ಲಿ ಭಕ್ತಿಯನು ಅನುಸರಿಸಿ
ನಡೆವುದು ಭಕ್ತಿಯೇ? ಅಲ್ಲ.
ತಾಮಸ ರಾಜಸ ಉಳ್ಳುದು ಭಕ್ತಿಯ ಕುಳವಲ್ಲ, ಸದ್ಭಕ್ತಿಗೆ ಸಲ್ಲದು.
ಗುರು ಲಿಂಗ ಜಂಗಮಕ್ಕೆ ಮರುಗಿ ತ್ರಿವಿಧಪದಾರ್ಥವ
ಮನೋವಾಕ್ಕಾಯದಲ್ಲಿ ವಂಚನೆಯಿಲ್ಲದೆ
ಮನ ಧನವನರ್ಪಿಸಿ ಮನ ಮುಟ್ಟಿದಡೆ

ಗುರು ಲಿಂಗ ಜಂಗಮದ ಘನಮಹಿಮೆಯ
ವೇದಪುರಾಣಾಗಮಂಗಳಿಂ ಗುರುವಾಕ್ಯದಿಂ
ಪುರಾತನರ ಮತದಿಂದರಿದು ಮರೆವುದು ಜ್ಞಾನವಲ್ಲ.
ಅರಿದು ಮರೆವುದು ಶ್ವಾನಜ್ಞಾನವಲ್ಲದೆ
ಇಂತಪ್ಪ ಅಜ್ಞಾನಕ್ಕೆ ಒಲಿವನೇ ಶಿವನು? ಮೆಚ್ಚುವರೇ ಶರಣರು?
ಶ್ರೀಗುರುಲಿಂಗಜಂಗಮವೊಂದೆಂಬರಿವು
ಕರಿಗೊಂಡು ಸದ್ಭಾವದಿಂ ಭಾವಿಸಿ ಭಾವಶುದ್ಧಿಯಾದುದು ಸುಜ್ಞಾನ.
ಗುರುಲಿಂಗಜಂಗಮದ ಅರ್ಚನೆ ಪೂಜನೆ ಅರ್ಪಿತ
ದಾಸೋಹಕ್ರೀವಿಡಿದು ಸಂಸಾರಕ್ರೀ
ಪರಧನ ಪರಸ್ತ್ರೀ ಅನ್ಯದೈವ ಭವಿಯನು
ಅನುಸರಿಸಿ ಹಿಡಿದುದು ವೈರಾಗ್ಯವೇ? ಅಲ್ಲ, ಅದು ಮರ್ಕಟ ವೈರಾಗ್ಯ.
ಇವ ಬಿಟ್ಟು ಸದ್ಭಕ್ತಿ ಸಮ್ಯಗ್‌ಜ್ಞಾನ ಪರಮವೈರಾಗ್ಯಯುತನಾಗಿ
ಗುರುಲಿಂಗಜಂಗಮಕ್ಕೊಲಿದು ಒಲಿಸುವುದು,
ಸದ್ಭಕ್ತಿಪ್ರಸಾದಮುಕ್ತಿಯ ಹಡೆವುದು.
ಈ ಸತ್ಕ್ರಿಯಾಭಕ್ತಿಯುಳ್ಳಡೆ ಲೇಸು,
ಅಲ್ಲದಿದ್ದಡೆ ಸಾವುದೇ ಲೇಸಯ್ಯ, ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ॥೯೮॥

೧೩೫೮
ಕೇಳಿದಾತ ಶಂಕರದಾಸಿಮಯ್ಯ, ಹೇಳಿದಾತ ಸಕಳೇಶಮಾದಿರಾಜಯ್ಯ,
ಕಂಡಾತನಲ್ಲಮಪ್ರಭು, ಉಂಡಾತ ನಿಜಗುಣನು.
ಇಂತೀ ನಾಲ್ವರ ಕಂಡು ನಾಚಿದಾತನಜಗಣ್ಣನಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೯೯॥

೧೩೫೯
ಕೊಡುವ ಲಿಂಗವನು ಬೇಡಿಕೊಳಲರಿಯದೆ
ಕೊಡದ ಮಾನವರನಾಸೆಗೈದ ಲಿಂಗವಂತನನೇನೆನಬಹುದು?
ಕೊಟ್ಟನು ನೋಡಿರೆ ಲಿಂಗವು,
ಮಾರ್ಕಂಡೇಯಂಗೆ ಮಳೆಯರಾಜಂಗೆ ಆಯುಷ್ಯವ.
ಕೊಟ್ಟನು ನೋಡಿರೆ ಲಿಂಗವು,
ಲಿಂಗವಂತರು ಕುಡ ಹೇಳಿದವರಿಗೆ ಆಯಷ್ಯವ.
ಮುಸುಟೆಯ ಚೌಡಿರಾಯ, ಮಡಿವಾಳ ಮಾಚಿದೇವರು
ಬಸವರಾಜದೇವರು ಹೇಳಿದವರಿಗೆ ಆಯುಷ್ಯವ ಕೊಟ್ಟನು ನೋಡಿರೆ,
ಚೋಳಂಗೆ ಹೊನ್ನಮಳೆಯನೂ, ದಾಸಂಗೆ ತವನಿಧಿಯನೂ

ದೇವದಾನವ ಮಾನವರಿಗೆ ಇಚ್ಛೆಯನರಿದು.
ಬೇಡಿದವರಿಗೆ ಬೇಡಿದ ಪದವ ಕೊಟ್ಟ
ಆಯುಷ್ಯ ಭಾಷೆಯ ಫಲವ ನೋಡಯ್ಯಾ:
ಲಿಂಗವು ಸಾಧ್ಯವಾಯಿತ್ತು:
ಗುರು ಲಿಂಗವೆಂದರಿದು ಲಿಂಗಾರ್ಚನೆಯ ಮಾಡಿದ ಫಲವ ನೋಡಯ್ಯಾ.
ಜಂಗಮ ಸಾಧ್ಯವಾಯಿತ್ತು:
ಲಿಂಗ ಜಂಗಮವೆಂದರಿದು ಜಂಗಮಾರ್ಚನೆಯ ಮಾಡಿದ
ಫಲವ ನೋಡಯ್ಯಾ.
ಪ್ರಸಾದ ಸಾಧ್ಯವಾಯಿತ್ತು:
ಪ್ರಸಾದ ಪ್ರಜ್ಞಾನಪರ ಕೇವಲ ಮುಕ್ತಿಯೆಂದು
ಗ್ರಹಿಸಿದ ಫಲವ ನೋಡಯ್ಯಾ.
ಶ್ರೀಗುರು ಲಿಂಗ ಜಂಗಮ ಒಂದೇ ಎಂದು,
ಪ್ರಸಾದ ಒಂದೇ ಎಂದು ಅರಿದೆನು.
ಇದೇ ಜ್ಞಾನ, ಇದೇ ಮುಕ್ತಿ, ಇದೇ ಪದ, ಇದೇ ಮಹಾಫಲ.
ಇನ್ನು ಮೇಲೆ ಈ ಪದಕ್ಕೆ ಪದ ಉಂಟೇ?
ಈ ಫಲಕ್ಕೆ ಫಲ ಉಂಟೇ? ಇಲ್ಲ. ನಿಮ್ಮಾಣೆ.
ಇದೇ ಮಹತ್ಪರಿಣಾಮವಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೦೦॥

೧೩೬೦
ಕ್ಷುಧೆಯಾರ್ತ ಎತ್ತರಹದಲ್ಲಿ ಇಂಬಿಟ್ಟಡೆ
ಅದಕ್ಕದು ವರ್ಮಕಳೆ, ಅದಕ್ಕದು ಸಂತಾನವೇ ಅಯ್ಯಾ?
ಜಲದ ಬಿಂದುವಿನಲ್ಲಿ ಹುಟ್ಟಿಸಿ ಜಗವ ಲೋಲಾಡಿಸಿದೆಯಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೦೧॥

೧೩೬೧
ಗುರುಕಾರುಣ್ಯವ ಪಡೆದು ಲಿಂಗವೇ ಪ್ರಾಣವಾಗಿ,
ಶ್ರೀಗುರು ಲಿಂಗ ಪ್ರಾಣ ಒಂದಾಗಿ,
ಕರಸ್ಥಲದಲ್ಲಿ ಶ್ರೀಗುರು ಲಿಂಗವನು ಬಿಜಯಂಗೈಸಿ ಕೊಟ್ಟ ಬಳಿಕ
ಲಿಂಗದ ಅಂಗ, ಲಿಂಗದ ನೇತ್ರ, ಲಿಂಗದ ಶ್ರೋತ್ರ
ಲಿಂದ ಘ್ರಾಣ, ಲಿಂಗದ ಜಿಹ್ವೆ, ಲಿಂಗದ ಹಸ್ತ
ಲಿಂಗದ ಪಾದ, ಲಿಂಗದ ಶಿರ, ಲಿಂಗದ ಮನ
ಲಿಂಗದ ಬುದ್ಧಿ, ಲಿಂಗದ ಚಿತ್ತ, ಲಿಂಗದ ಅಹಂಕಾರ.
ಅಂಗತತ್ತ್ವವೆಲ್ಲ ಲಿಂಗತತ್ತ್ವ, ಅಂಗಕ್ರೀಯೆಲ್ಲ ಲಿಂಗಕ್ರೀ.

ಇದು ಕಾರಣ, ಸೋಹಂಕ್ರೀ ಸೋಹಂಭಾವ
ಶ್ರೀಗುರು ಮಾಡಿದ ಕ್ರೀ ಉಪಮಾತೀತ.
ವೇದಶಾಸ್ತ್ರ ಪುರಾಣಾಗಮಂಗಳ ಕ್ರೀಯಲ್ಲ,
ವಿಷ್ಣ್ವಾದಿಗಳ ಹವಣಲ್ಲ, ಲೋಕಾದಿ ಲೋಕಂಗಳ ಪರಿಯಲ್ಲ.
ಇವೆಲ್ಲವ ಮೀರಿದ ವಿಪರೀತ ಮಹಾಘನ ಕ್ರೀಯ
ಶ್ರೀಗುರು ತಾನೆ ಬಲ್ಲನಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೦೨॥

೧೩೬೨

ಗುರುತ್ವವುಳ್ಳ ಮಹದ್ಗುರುವನರಿಯದೆ
ನಾನು ಗುರು ತಾನು ಗುರುವೆಂದು ನುಡಿವಿರಿ.
ಧನದಲ್ಲಿ ಗುರುವೆ? ಮನದಲ್ಲಿ ಗುರುವೆ? ತನುವಿನಲ್ಲಿ ಗುರುವೆ?
ನಿತ್ಯದಲ್ಲಿ ಗುರುವೆ? ವಿದ್ಯೆಯಲ್ಲಿ ಗುರುವೆ? ಭಕ್ತಿಯಲ್ಲಿ ಗುರುವೆ?
ಜ್ಞಾನದಲ್ಲಿ ಗುರುವೆ? ವೈರಾಗ್ಯದಲ್ಲಿ ಗುರುವೆ?
ದೀಕ್ಷೆಯಲ್ಲಿ ಗುರುವೆ? ಶಿಕ್ಷೆಯಲ್ಲಿ ಗುರುವೆ?
ಸ್ವಾನುಭಾವದಲ್ಲಿ ಗುರುವೆ? ಮಾತಾಪಿತರಲ್ಲಿ ಗುರುವೆ?
ದೇವ ದಾನವ ಮಾನವರೆಲ್ಲರು ನೀವೆಲ್ಲರು
ಆವ ಪರಿಯಲ್ಲಿ ಗುರು ಹೇಳಿರಣ್ಣಾ?
ಗುರುವಾರು ಲಘುವಾರೆಂದರಿಯಿರಿ,
ಮನ ಬಂದಂತೆ ನುಡಿದು ಕೆಡುವಿರಾಗಿ.
ಹರಿಬ್ರಹ್ಮರು ಗುರುತ್ವಕ್ಕೆ ಸಂವಾದಿಸಿ
ಮಹದ್ಗುರುವಪ್ಪ ಪರಂಜ್ಯೋತಿರ್ಲಿಂಗದ
ಆದಿಮಧ್ಯಾವಸಾನದ ಕಾಲವನರಿಯದೆ ಲಘುವಾಗಿ ಹೋದರು.
ಮತ್ತಂ ಅಂದೊಮ್ಮೆ ವಿಷ್ಣ್ವಾದಿ ದೇವಜಾತಿಗಳೆಲ್ಲರೂ ನೆರೆದು
ನಾ ಘನ, ತಾ ಘನ, ನಾನು ಗುರು, ತಾನು ಗುರುವೆಂದು
ಮಹಾಸಂವಾದದಿಂದ ಅತಿತರ್ಕವ ಮಾಡಿ
ಗುರುತ್ವವುಳ್ಳ ಪುರುಷನ ನಿಶ್ಚೈಸಲರಿಯದೆ,
ಆ ಸಭಾಮಧ್ಯದಿ ಪರಮಾಕಾಶದಿ
'ಅತ್ಯತಿಷ್ಠದ್ದಶಾಂಗುಲ'ನೆನಿಪ ಮದ್ಗುರುವಪ್ಪ ಮಹಾಲಿಂಗವು
ಇವರುಗಳ ಅಜ್ಞಾನವ ಕಂಡು ಮಹಾವಿಪರೀತಕ್ರೀಯಲ್ಲಿ ನಗುತಿರಲು
ನಮ್ಮೆಲ್ಲರನೂ ನೋಡಿ ನಗುವ ಪುರುಷನಾರು?
ಈ ಪುರುಷನ ನೋಡುವ,
ಈ ಪುರುಷನಿಂದ ನಮ್ಮಲ್ಲಿ
ಆರು ಘನ ಆರು ಗುರುವೆಂದು ಕೇಳುವೆವೆಂದು

ಆ ಮಹಾಪುರುಷನ ಸಮೀಪಕ್ಕೆ
ಅಗ್ನಿ ವಾಯು ಮೊದಲಾಗಿಹ
ದೇವಜಾತಿಗಳೆಲ್ಲರೂ ಪ್ರತ್ಯೇಕರಾಗಿ ಹೋಗಲು,
ಅತ್ಯತಿಷ್ಠದ್ದಶಾಂಗುಲಮಾಗಿರ್ದು
ಇವರುಗಳ ಗುರುತ್ವವೆಲ್ಲವನೂ ಒಂದೇ ತೃಣದಲ್ಲಿ ಮುರಿದು,
ತೃಣದಿಂದವೂ ಕಷ್ಟ ಲಘುತ್ವವ ಮಾಡಿದನು.
ಇದು ಕಾರಣ, ಪರಶಿವನೆ ಮದ್ಗುರು ಕಾಣಿರೆ.
ಧನದಲ್ಲಿ ಗುರುವೆ?
ನೀವೆಲ್ಲರು ಧನದಲ್ಲಿ ಗುರುವೆಂಬಡೆ ನೀವು ಕೇಳಿರೆ,
ಕಾಣಿವುಳ್ಳವಂಗೆ ಶತಸಂಖ್ಯೆ ಉಳ್ಳವನೆ ಗುರು,
ಶತಸಂಖ್ಯೆ ಉಳ್ಳವಂಗೆ ಸಹಸ್ರಸಂಖ್ಯೆ ಉಳ್ಳವನೆ ಗುರು,
ಸಹಸ್ರಸಂಖ್ಯೆ ಉಳ್ಳವಂಗೆ ಮಹದೈಶ್ವರ್ಯ ಉಳ್ಳವನೆ ಗುರು,
ಮಹದೈಶ್ವರ್ಯ ಉಳ್ಳವಂಗೆ
ಕಾಮಧೇನು ಕಲ್ಪವೃಕ್ಷ ಚಿಂತಾಮಣಿ ಮೊದಲಾದ
ಮಹದೈಶ್ವರ್ಯವುಳ್ಳ ಇಂದ್ರನೆ ಗುರು.
ಇಂದ್ರಂಗೆ ಅನೂನೈಶ್ವರ್ಯವನುಳ್ಳ ಬ್ರಹ್ಮನೆ ಗುರು,
ಆ ಬ್ರಹ್ಮಂಗೆ ಐಶ್ವರ್ಯಕ್ಕೆ ಅಧಿದೇವತೆಯಪ್ಪ
ಮಹಾಲಕ್ಷ್ಮಿಯನುಳ್ಳ ವಿಷ್ಣುವೆ ಗುರು,
ಆ ವಿಷ್ಣುವಿಂಗೆ ಅಷ್ಟಮಹದೈಶ್ವರ್ಯವನುಳ್ಳ ರುದ್ರನೆ ಗುರು,
ಆ ರುದ್ರಂಗೆ ಈಶ್ವರನೆ ಗುರು, ಈಶ್ವರಂಗೆ ಸದಾಶಿವನೆ ಗುರು.
'ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಈಶ್ವರಶ್ಚ ಸದಾಶಿವಃ
ಯೇ ತೇ ಗರ್ಭಗತಾ ಯಸ್ಯ ತಸ್ಮೈ ಶ್ರೀಗುರವೇ ನಮಃ'
ಎಂದುದಾಗಿ, ಅಂತಹ ಸದಾಶಿವಂಗೆ
ಎಮ್ಮ ಪರಶಿವಮೂರ್ತಿ ಶ್ರೀಗುರುವೆ ಗುರು ಕಾಣಿರೆ.
ಮನದಲ್ಲಿ ಗುರುವೇ?
ನೀವೆಲ್ಲರು ದುರ್ಮನಸ್ಸಿಗಳು
ಪರಧನ ಪರಸ್ತ್ರೀ ಅನ್ಯದೈವಕ್ಕೆ ಆಸೆ ಮಾಡುವಿರಿ.
ಇಂತಹ ದುರ್ಮನಸ್ಸಿನವರನೂ ಸುಮನವ ಮಾಡಿ
ಸುಜ್ಞಾನಪದವ ತೋರುವ
ಪರಶಿವಮೂರ್ತಿ ಶ್ರೀಗುರುವೆ ಗುರು ಕಾಣಿರೆ.
ತನುವಿನಲ್ಲಿ ಗುರುವೆ?
ಜನನ ಮರಣ ಎಂಬತ್ತುನಾಲ್ಕು ಲಕ್ಷ ಯೋನಿಯಲ್ಲಿ
ಜನಿಸುವ ಅನಿತ್ಯತನು ನಿಮಗೆ.

ಇಂತಪ್ಪ ತನುವನುಳ್ಳವರ
ಪೂರ್ವಜಾತನ ಕಳೆದು, ಶುದ್ಧತನುವ ಮಾಡಿ
ಪಂಚಭೂತತನುವ ಕಳೆದು, ಶುದ್ಧತನುವ ಮಾಡಿ
ಭಕ್ತಕಾಯ ಮಮಕಾಯವೆಂದು ಶಿವನುಡಿದಂತಹ
ಪ್ರಸಾದಕಾಯವ ಮಾಡಿ, ನಿತ್ಯಸುಖದೊಳಿರಿಸಿದ
ಪರಶಿವಮೂರ್ತಿ ಶ್ರೀಗುರುವೇ ಗುರು ಕಾಣಿರೆ.
ವಿದ್ಯೆಯಲ್ಲಿ ಗುರುವೆ?
ನೀವೆಲ್ಲರು ವೇದವ ಬಲ್ಲಡೆ, ಶಾಸ್ತ್ರವನರಿಯರಿ,
ವೇದಶಾಸ್ತ್ರವ ಬಲ್ಲಡೆ, ಪುರಾಣವನರಿಯರಿ,
ವೇದಶಾಸ್ತ್ರಪುರಾಣವ ಬಲ್ಲಡೆ, ಆಗಮವನರಿಯರಿ,
ವೇದಶಾಸ್ತ್ರಪುರಾಣ ಆಗಮನ ಬಲ್ಲಡೆ
ಅವರ ತಾತ್ಪರ್ಯವನರಿಯರಿ,
ಅಷ್ಟಾದಶವಿದ್ಯೆಗಳ ಮರ್ಮವನರಿಯರಿ.
ವೇದಂಗಳು,
'ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ' ಎಂದವು.
ಅದನ್ನರಿಯರಿ ನೀವು, ಅನ್ಯವುಂಟೆಂಬಿರಿ,
'ಶಿವ ಏಕೋ ಧ್ಯೇಯಃ ಶಿವಶಂಕರಃ ಸರ್ವಮನ್ಯತ್ಪರಿತ್ಯಾಜ್ಯಂ' ಎಂದವು,
ನೀವು ಅನ್ಯವ ಧ್ಯಾನಿಸುವಿರಿ, ಅನ್ಯವ ಪೂಜಿಸುವಿರಿ, ವಿದ್ಯೆ ನಿಮಗಿಲ್ಲ,
ನಿಮಗೆ ಹೇಳಿಕೊಡುವ ವ್ಯಾಸಾದಿಗಳಿಗಿಲ್ಲ,
ಅವರಿಗೆ ಅಧಿಕನಾಗಿಹ ವಿಷ್ಣುಬ್ರಹ್ಮಾದಿಗಳಿಗಿಲ್ಲ,
ವೇದಾದಿ ಅಷ್ಟಾದಶವಿದ್ಯೆಗಳ ಶಿವನೆ ಬಲ್ಲನು.
ಸರ್ವವಿದ್ಯೆಗಳನೂ ಶಿವನೇ ಮಾಡಿದನು, ಶಿವನೇ ಕರ್ತನು.
'ಆದಿಕರ್ತಾ ಕವಿಸ್ಸಾಕ್ಷಾತ್ ಶೂಲಪಾಣಿರಿತಿಶ್ರುತಿಃ' ಎಂದುದಾಗಿ.
'ನಮೋ ಮಂತ್ರಿಣೇ ವಾಣಿಜಾಯ ಕಕ್ಷಾಣಾಂ ಕತಯೇ ನಮಃ'
ಎಂದುದಾಗಿ,
'ಈಶಾನಸ್ಸರ್ವವಿದ್ಯಾನಾಂ' ಎಂದುದಾಗಿ,
ವಿದ್ಯಾರೂಪನಪ್ಪ ಎಮ್ಮ ಪರಶಿವಮೂರ್ತಿ ಶ್ರೀಗುರುವೇ
ವಿದ್ಯೆಯಲ್ಲಿ ಗುರು ಕಾಣಿರೆ,
ದೀಕ್ಷೆಯಲ್ಲಿ ಗುರುವೇ?
ನೀವು 'ವರ್ಣಾನಾಂ ಬ್ರಾಹ್ಮಣೋ ಗುರುಃ' ಎಂಬಿರಿ,
ಆ ವಿಷ್ಣುವ ಭಜಿಸಿ ವಿಷ್ಣುವೇ ಗುರುವೆಂಬಿರಿ.
ಅಂತಹ ವಿಷ್ಣುವಿಂಗೆಯೂ ಉಪಮನ್ಯು ಗುರು ಕಾಣಿರೆ.
ಅಂತಹ ಉಪಮನ್ಯು ಮೊದಲಾದ ದೇವಋಷಿ ಬ್ರಹ್ಮಋಷಿ ರಾಜಋಷಿ

ದೇವಜಾತಿ ಮಾನವಜಾತಿಗಳಿಗೆ ಪರಶಿವನಾಚಾರ್ಯನಾಗಿ
ಉಪದೇಶವ ಮಾಡಿದನು.
ವೇದಶಾಸ್ತ್ರ ಆಗಮ ಪುರಾಣಂಗಳಲ್ಲಿ, ವಿಚಾರಿಸಿ ನೋಡಿರೆ.
ಅದು ಕಾರಣ ಮಹಾಚಾರ್ಯನು ಮಹಾದೀಕ್ಷಿತನಪ್ಪ
ಎಮ್ಮ ಪರಶಿವಮೂರ್ತಿ ಮಹಾಸದ್ಗುರುವೇ ಗುರು ಕಾಣಿರೆ.
ಶಿಕ್ಷೆಯಲ್ಲಿ ಗುರುವೇ?
ನಿಮಗೆ ಶಿಕ್ಷಾಸತ್ವವಿಲ್ಲ. ವೀರಭದ್ರ ದೂರ್ವಾಸ ಗೌತಮಾದಿಗಳಿಂ
ನೀವೆಲ್ಲಾ ಶಿಕ್ಷೆಗೊಳಗಾದಿರಿ.
ಶಿಕ್ಷಾಮೂರ್ತಿ ಚರಲಿಂಗವಾಗಿ ಶಿಕ್ಷಿಸಿ ರಕ್ಷಿಸಿದನು ಪರಶಿವನು.
'ಯೇ ರುದ್ರಲೋಕಾದವತೀರ್ಯ ರುದ್ರಾ
ಮಾನುಷ್ಯಮಾಶ್ರಿತ್ಯ ಜಗದ್ಧಿತಾಯ
ಚರಂತಿ ನಾನಾವಿಧಚಾರುಚೇಷ್ಟಾಸ್ತೇಭ್ಯೋ' 'ನಮಸ್ತ್ರ್ಯಂಬಕಪೂಜಕೇಭ್ಯಃ'
ಎಂದುದಾಗಿ,
'ದಂಡಕ್ಷೀರದ್ವಯಂ ಹಸ್ತೇ ಜಂಗಮೋ ಭಕ್ತಿಮಂದಿರಂ
ಅತಿಭಕ್ತ್ಯಾ ಲಿಂಗಸಂತುಷ್ಟಿರಪಹಾಸ್ಯಂ ಯಮದಂಡನಂ'
ಎಂದುದಾಗಿ,
ಶಿಕ್ಷೆಯಲ್ಲಿ ಗುರು ಎಮ್ಮ ಪರಶಿವಮೂರ್ತಿ ಮದ್ಗುರುವೇ ಗುರು ಕಾಣಿರೆ.
ಸ್ವಾನುಭಾವದಲ್ಲಿ ಗುರುವೆ?
ನೀವು ದೇವದಾನವಮಾನವರೆಲ್ಲರು ದೇಹಗುಣವಿಡಿದು
ಮದಾಂಧರಾಗಿ ಸ್ವಾನುಭಾವ[ರಹಿತರಾದಿರಿ].
ಸ್ಕಂದ ನಂದಿ ವೀರಭದ್ರ ಭೃಂಗಿನಾಥ ಬಸವರಾಜ
ಮೊದಲಾದ ಎಮ್ಮ ಮಾಹೇಶ್ವರರೇ ಸ್ವಾನುಭಾವಸಂಪನ್ನರು.
ಇಂತಹ ಮಹಾಮಹೇಶ್ವರರಿಗೆ ಸ್ವಾನುಭಾವವ ಕರುಣಿಸಬಲ್ಲ
ಎಮ್ಮ ಪರಶಿವಮೂರ್ತಿ ಮಹದ್ಗುರು[ವೇ] ಸ್ವಾನುಭಾವದಲ್ಲಿ ಗುರು ಕಾಣಿರೆ.
ಮಾತಾಪಿತರ ಗುರುವೆಂಬಿರಿ,
ಲಘುವಿನಲ್ಲಿ ತಾವೆಲ್ಲರು ಜನಿಸಿದಿರಿ.
ತಮ್ಮ ಸ್ಥಿತಿಯೂ ಲಘು, ಲಘುವಾಗಿ ಲಯವಪ್ಪುದು ಗುರುವೆ? ಅಲ್ಲ.
'ಸೋಮಃ ಪವತೇ ಜನಿತಾ ಮತೀನಾಂ ಜನಿತಾ ದಿವೋ
ಜನಿತಾ ಪೃಥ್ವಿವ್ಯಾ ಜನಿತಾಗ್ನೇರ್ಜನಿತಾ ಸೂರ್ಯಸ್ಯ,
'ಜನಿತೋಥವಿಷ್ಣೋಃ' ಎಂದುದಾಗಿ,
'ಶಿವೋ ಮಮ್ಮೈವ ಪಿತಾ' ಎಂದುದಾಗಿ
ಸರ್ವರಿಗೂ ಮಾತಾಪಿತನಪ್ಪ ಎಮ್ಮ ಪರಶಿವಮೂರ್ತಿ
ಮಹಾಸದ್ಗುರುವೇ ಗುರು ಕಾಣಿರೊ.

ಭಕ್ತಿಯಲ್ಲಿ ಗುರುವೆ?
ನಿಮಗೆ ಲವಲೇಶ ಭಕ್ತಿಯಿಲ್ಲ, ನೀವೆಲ್ಲರು ಉಪಾಧಿಕರು.
ನಿರುಪಾಧಿಕರು ಎಮ್ಮ ಮಹಾಸದ್ಭಕ್ತರು
ತನು ಮನ ಧನವನರ್ಪಿಸಿ ಉಂಡು ಉಣಿಸಿ
ಆಡಿ ಹಾಡಿ ಸುಖಿಯಾದರು ಶರಣರು.
ಇಂತಹ ಶರಣಭರಿತ ಸದಾಶಿವಮೂರ್ತಿ
ಮಹಾಸದ್ಗುರುವೇ ಭಕ್ತಿಯಲ್ಲಿ ಗುರು ಕಾಣಿರೆ.
ಜ್ಞಾನದಲ್ಲಿ ಗುರುವೇ?
ನೀವೆಲ್ಲರು ದೇವದಾನವ ಮಾನವರು ಅಜ್ಞಾನಿಗಳು.
ಜ್ಞಾತೃ ಜ್ಞಾನ ಜ್ಞೇಯವಪ್ಪ ಪರಶಿವಲಿಂಗವನರಿಯದೆ
ಅಹಂಕಾರದಿಂ ಲಘುವಾದಿರಿ.
ಪರಧನ ಪರಸ್ತ್ರೀ ಪರಕ್ಷೇತ್ರಕ್ಕೆ ಆಸೆಮಾಡಿ ಲಘುವಾದಿರಿ.
ನಿರಾಶಸಂಪೂರ್ಣರು ಶಿವಜ್ಞಾನಸಂಪನ್ನರು ಎಮ್ಮ ಮಾಹೇಶ್ವರರು
ಇಂತಹ ಮಾಹೇಶ್ವರರಿಂಗೆ ಶಿವಜ್ಞಾನವ ಕರುಣಿಸುವ
ಎಮ್ಮ ಪರಶಿವಮೂರ್ತಿ ಮಹಾಸದ್ಗುರುವೇ ಗುರು ಕಾಣಿರೆ.
ವೈರಾಗ್ಯದಲ್ಲಿ ಗುರುವೆ?
ನೀವು ಆಶಾಬದ್ಧರು, ನಿರಾಶಾಸಂಪೂರ್ಣರು ಎಮ್ಮ ಸದ್ಭಕ್ತರು.
ಇಂತಹ ಭಕ್ತದೇಹಿಕನಪ್ಪ ದೇವ ಎಮ್ಮ ಪರಶಿವಮೂರ್ತಿ
ಮಹಾಸದ್ಗುರುವೇ ವೈರಾಗ್ಯದಲ್ಲಿ ಗುರು ಕಾಣಿರೆ.
ಇದು ಕಾರಣ,
ನಿತ್ಯದಲ್ಲಿ, ಸತ್ಯದಲ್ಲಿ, ಅಷ್ಟಮಹದೈಶ್ವರ್ಯದಲ್ಲಿ
ದೀಕ್ಷೆಯಲ್ಲಿ, ಸ್ವಾನುಭಾವದಲ್ಲಿ, ಜ್ಞಾನದಲ್ಲಿ
ವಿದ್ಯೆಯಲ್ಲಿ, ಬುದ್ಧಿಯಲ್ಲಿ, ವೈರಾಗ್ಯದಲ್ಲಿ, ಮಾತಾಪಿತರಲ್ಲಿ
ಉಪಮಾತೀತನಪ್ಪ ಎಮ್ಮ ಪರಶಿವಮೂರ್ತಿ
ಮಹಾಸದ್ಗುರುವೇ ಗುರು ಕಾಣಿರೆ.
'ನಾಸ್ತಿ ತತ್ತ್ವಂ ಗುರೋಃ ಪರಂ' ಎಂದುದಾಗಿ,
ಮಹಾಘನತರವಪ್ಪ ಪರಶಿವಮೂರ್ತಿ
ಮಹಾಸದ್ಗುರುವೇ ಗುರು ಕಾಣಿರೆ.
'ಲಲಾಟಲೋಚನಂ ಚಾಂದ್ರೀಂ ಕಲಾಮಪಿ ಚ ದೋರ್ದ್ವಯಂ
ಅಂತರ್ನಿಧಾಯ ವರ್ತೇ[S]ಹಂ ಗುರುರೂಪೋ ಮಹೇಶ್ವರಿ'
ಎಂದುದಾಗಿ ಪರಶಿವನೇ ಗುರು, ಶ್ರೀಗುರುವೇ ಪರಶಿವನು.
ಇಂತಹ ಮಹಾಸದ್ಗುರುವಪ್ಪ ಪರಶಿವಮೂರ್ತಿ
ಕಾರುಣ್ಯವ ಮಾಡಿ, ಸದ್ಭಕ್ತಿಪದವ ತೋರಿದ

ಎಮ್ಮ ಗಣನಾಥದೇವರೇ ಗುರು ಕಾಣಿರೆ.
ಇದು ಕಾರಣ, ಶರಣಮೂರ್ತಿ ಶ್ರೀಗುರು.
ಶ್ರೀಗುರು ಲಿಂಗ ಜಂಗಮ ಒಂದೆಯಾಗಿ
ಶ್ರೀಗುರುವೇ ಗುರು, ಉಳಿದದ್ದೆಲ್ಲಾ ಲಘು.
ಪರಶಿವಲಿಂಗವೇ ಗುರು, ಉಳಿದವೆಲ್ಲವೂ ಲಘು.
ಜಂಗಮವೇ ಗುರು, ಉಳಿದವೆಲ್ಲವೂ ಲಘು.
ಇದನರಿದು ಶ್ರೀಗುರುವನೇ ನಂಬುವುದು.
ತನು ಮನ ಧನವನರ್ಪಿಸುವುದು,
ನಿರ್ವಂಚಕನಾಗಿ ನಿರುಪಾಧಿಕನಾಗಿ ನಿರಾಶಾಸಂಪೂರ್ಣನಾಗಿ,
ಧ್ಯಾನಿಸಿ ಪೂಜಿಸಿ ಸದ್ಭಕ್ತಿಯಿಂ ವರ್ತಿಸಿ
ಪ್ರಸಾದವ ಪಡೆದು ಮುಕ್ತನಪ್ಪುದಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೦೩॥

೧೩೬೩

ಗುರುಲಿಂಗ ಪರಂಜ್ಯೋತಿರ್ಲಿಂಗವೆಂದರಿದವನು ಬಲ್ಲವನು,
ಗುರುಲಿಂಗ ಪ್ರಾಣ ಏಕೀಭವಿಸಿದ ಲಿಂಗ,
ಪರಂಜ್ಯೋತಿರ್ಲಿಂಗವೆಂದರಿದವನು ಬಲ್ಲವನು.
ಈ ಮಹಾವಸ್ತುಗಳನರಿಯದವನು ಅರಿಯದವನು.
ಈ ಮಹಾವಸ್ತುಗಳನರಿಯದವರನು ಅರಿದವನು ಅರಿಯದವನು,
ಅರಿಯದವಂಗೆ ಪೂಜೆ ಎಂತಕ್ಕು? ಪೂಜೆ ಇಲ್ಲದವಂಗೆ ಭಕ್ತಿಯಿಲ್ಲ,
ಭಕ್ತಿ ಇಲ್ಲದವಂಗೆ ಗುರುಲಿಂಗಜಂಗಮಪ್ರಸನ್ನವೆಂತಪ್ಪುದು?
ಪ್ರಸನ್ನತೆಯ ಹಡೆಯದವಂಗೆ ಪ್ರಸಾದವಿಲ್ಲ,
ಪ್ರಸಾದ ಪ್ರಸನ್ನತೆಯ ಹಡೆಯದವಂಗೆ ಮುಕ್ತಿ ಎಂತೂ ಇಲ್ಲ.
ಇದನರಿದರಿವುದು, ಪ್ರಸನ್ನತೆಯಪ್ಪಂತೆ ನಡೆವುದು,
ಪ್ರಸಾದವ ಹಡೆವುದು, ಭೋಗಿಸಿ ಮುಕ್ತರಪ್ಪುದಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೦೪॥

೧೩೬೪

ಗುರು ಲಿಂಗ ಜಂಗಮ ಪ್ರಸಾದ–
ಒಂದೆ ಪರಶಿವಮೂರ್ತಿ[ಯ] ಮಹಾವಸ್ತುಗಳು ಕೇಳಿರಣ್ಣಾ.
ಅರಿದು ಧ್ಯಾನಿಸಿ ಪೂಜಿಸಿ ಸೇವಿಸಿ ಅರ್ಚಿಸಿ ಅರ್ಪಿಸಿ ಧರಿ[ಸೆ]
ಧರ್ಮ ಅರ್ಥ ಕಾಮ ಮೋಕ್ಷ
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ–

ಈ ಚತುರ್ವಿಧಫಲಪದವಿಯ ಕೊಡುವ[ವು].
ಗುರು ಲಿಂಗ ಜಂಗಮ ಪ್ರಸಾದವೆಂದು ನಂಬುವುದು,
ಇದು ಸತ್ಯ, ಶಿವ ಬಲ್ಲ, ಶಿವನಾಣೆ.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೦೫॥

೧೩೬೫

ಗುರುಲಿಂಗಜಂಗಮವೆ ಶಿವನೆಂದು ಅರಿದು ಮರೆವನು ಶಿವಭಕ್ತನೆ? ಅಲ್ಲ,
ಶಿವಭಕ್ತನು ಅರಿದ ಬಳಿಕ ಮರೆಯನು.
ಅರಿದು ಮರೆವನು ಮದ್ದುಕುಣಿಕೆಯ ಕಾಯ ಮೆದ್ದವನು,
ಮದ್ಯ ಮಾಂಸವ ಸೇವಿಸಿದವನು,
ಅರಿದು ಮರೆವವನು ಅಜ್ಞಾನಿಗಳ ಸಂಗವ ಮಾಡಿದವನು,
ಶ್ವಾನನ ಮಿತ್ರನು.
ಅವಂದಿರುಗಳಿಗೆ ಅರಿವು ಮರವೆ ಸಹಜವಾದ ಕಾರಣ
ಅರಿದು ಮರೆವವನಲ್ಲ ಶಿವಭಕ್ತನು,
ಮರೆದು ಅರಿವವನಲ್ಲ ಶಿವಭಕ್ತನು,
ನಂಬಿದವನಲ್ಲ ಶಿವಭಕ್ತನು, ನಂಬಿ ಕೆಡದವನಲ್ಲ ಶಿವಭಕ್ತನು,
ವಿಶ್ವಾಸವ ಮಾಡುವವನಲ್ಲ ಶಿವಭಕ್ತನು,
ಅವಿಶ್ವಾಸ ಮಾಡುವವನಲ್ಲ ಶಿವಭಕ್ತನು.
ಮರೆದಡೆಯು ಮರೆದವನಂತೆ, ಅರಿದಡೆಯು ಶಿವನಂತೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೦೬॥

೧೩೬೬

ಗುರುವ ಕಂಡಲ್ಲಿ ನಿನ್ನನೇ ಕಾಬೆ, ಲಿಂಗವ ಕಂಡಲ್ಲಿ ನಿನ್ನನೇ ಕಾಬೆ,
ಜಂಗಮವ ಕಂಡಲ್ಲಿ ನಿನ್ನನೇ ಕಾಬೆ.
ನಿನ್ನನಲ್ಲದೆ ಮತ್ತೊಂದ ತೋರದಿಹ ಅರಿವು ನೀನೇ ಬಲ್ಲೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೦೭॥

೧೩೬೭

ಗುರುವನರಿವನ್ನಕ್ಕರ ಅಷ್ಟಾದಶ ವಿದ್ಯೆಯನರಿಯಲುಂಟು.
ಓದಲುಂಟು ಕೇಳಲುಂಟು ಹೇಳಲುಂಟು.
ಗುರುಕರುಣದಿಂದ ಗುರುವನರಿದ ಬಳಿಕ, ಗುರುವಲ್ಲದೆ ತಾನಿಲ್ಲ.
ಕೇಳಲಿಲ್ಲ ಹೇಳಲಿಲ್ಲ, ಹೇಳಲಿಲ್ಲಾಗಿ ಅರಿಯಲಿಲ್ಲ.
ಅರಿಯಲಿಲ್ಲದ ಅರಿವನರುಹಿಸಿದ ಗುರುವನರಿಯಲುಂಟೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೦೮॥

೧೩೬೮
ಗುರುವಿನ ಮಹತ್ವವನು, ಶಿಷ್ಯನ ಗುರುತ್ವವನು
ಆರಯ್ಯ ಬಲ್ಲವರು?
ಗುರು ಶಿಷ್ಯನಾದ ಪರಿಯನು, ಶಿಷ್ಯ ಗುರುವಾದ ಪರಿಯನು
ಆರಯ್ಯ ಬಲ್ಲವರು?
ವಾಙ್ಮನೋತೀತ ಉಪಮಿಸಬಾರದ ಘನವು, ಮಹಾಕ್ರೀಯನು.
ಭಕ್ತಿಯಿಂದ ಗುರು-ಭಕ್ತಿವತ್ಸಲನಾಗಿ ಶಿಷ್ಯ, ಗುರುವಾದ ಪರಿ,
ಅದು ಬೀಜವೃಕ್ಷನ್ಯಾಯದಂತೆ ಅವಿನಾಭಾವವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೦೯॥

೧೩೬೯
ಗುರುವೆ ಪರಶಿವನು
ಪರಶಿವನೇ ಶರಣಭರಿತನಾಗಿ ಎಮ್ಮ ಶರಣರೇ ಗುರು.
ಒಂದು ದೀಕ್ಷೆಯಲ್ಲಿ ಗುರುವೆಂದಡೆ,
ನಿಮಗೆಲ್ಲಕೆ ಕರ್ತನಹ ವಿಷ್ಣು ಎಮ್ಮ ಶರಣ
ಉಪಮನ್ಯುವಿನ ಕೈಯಲ್ಲಿ ದೀಕ್ಷೆಯ ಪಡೆದು ಶಿಷ್ಯನಾದನು,
ಅಂತಾಗೆ ಎಮ್ಮ ಶರಣರೆ ಗುರು.
'ಲಿಂಗಿನಾ ಸಹ ವರ್ತಿತ್ವಂ ಲಿಂಗಿನಾ ಸಹ ವಾದಿತಾ
ಲಿಂಗಿನಾ ಸಹ ಚಿಂತಾ ಚ ಲಿಂಗಯೋಗೋ ನ ಸಂಶಯಃ
ಲಿಂಗಾಂಗಿನಾ ಚ ಸಂಗಶ್ಚ ಲಿಂಗಿನಾ ಸಹವಾಸಿತಾ
ಲಿಂಗೇನ ಸಹ ಭುಕ್ತಿಶ್ಚ ಲಿಂಗಯೊಗೋ ನ ಸಂಶಯಃ'
ಒಂದು ದೀಕ್ಷೆಯಲ್ಲಿ ಗುರುವೆ ನೀವು?
ನಿಮಗೆ ಕರ್ತರಹ ವಿಷ್ಣು ಬ್ರಹ್ಮ ಮೊದಲಾದವರನು
ನಮ್ಮ ಶರಣರೆ ಶಿಕ್ಷಿಸಿಕೊಳ್ಳುತಿಹರಾಗಿ
ನಮ್ಮ ಶರಣರೇ ಗುರು ಕಾಣಿರೋ ಸ್ವಾನುಭಾವದಲ್ಲಿ.
ಗುರುವೆ ದೇವ ದಾನವ ಮಾನವರೆಲ್ಲರೂ?
ಪರಸ್ತ್ರೀಯರಿಗೆ ಅಳಪುವುದು ಹಿರಿದು ಗುರುತ್ವವೇ? ಅಲ್ಲ.
ಪರಧನ ಅನ್ಯದೈವ ಉಭಯವಿಜ್ಞಾನ ಅಜ್ಞಾನ,
ದ್ವಂದ್ವಕ್ರಿಯಾ ವರ್ತಿಸುತ್ತಿಹರಾಗಿ.
ಅದು ಕಾರಣ, ಸರ್ವರೂ ಲಘುವಾದರು
ಅನುಭಾವಸಿದ್ಧಿಯಾದ ನಿಮ್ಮ ಶರಣರೇ ಗುರು.
ಶಿವತನು ಲಿಂಗಪ್ರಾಣವಾದ ಬಳಿಕ

ಉತ್ಪತ್ತಿಸ್ಥಿತಿಲಯವೆಂದು ಧ್ಯಾನಿಸುವೆ ಚಿಂತಿಸುವೆ ಅಂಜುವೆ ಮನವೇ
ನೀನೊಂದು ಕ್ರಿಯಾಕರ್ಮ ಉಪಾಧಿಯಿಂದ.
ತ್ರಿವಿಧಕ್ಕೆ ತತ್ಕ್ರಿಯಾಕರ್ಮ ಉಪಾಧಿಯಿಂದ
ಈ ತ್ರಿವಿಧಕ್ಕೆ ತತ್ಕ್ರಿಯಾಕರ್ಮವ ಮಾಡಿ
ಸಂಸಾರವ ಗೆಲಿವೆನೆಂಬೆ ಮನವೆ, ಇದು ಜ್ಞಾನವಲ್ಲ.
ನಿರುಪಾಧಿಕನಾಗಿ ಮಹಾಲಿಂಗ ಕರುಣಿ
ಶ್ರೀಗುರುವಾದ ಲಿಂಗವಾದ ಜಂಗಮವಾದ ಪ್ರಸಾದವಾದ
ಲಿಂಗತನುವಾದ ಲಿಂಗಪ್ರಾಣವಾದ ಲಿಂಗಕ್ರೀಯಾದ.
ಸರ್ವಕ್ರಿಯಾ ಕರ್ಮಂಗಳು ಲಿಂಗಕ್ರಿಯಾಕರ್ಮ,
ಉತ್ಪತ್ತಿಸ್ಥಿತಿಲಯವೆಂಬುದಿಲ್ಲ ಸರ್ವವೂ ಲಿಂಗಸ್ಥಿತಿ,
ದುಶ್ಚಿಂತೆಯ ಬಿಡು ನಿರುಪಾಧಿಕನಾಗು.
ಗುರುಕರುಣಿಸಿದ ಲಿಂಗಕ್ಕೆ ನೀನು ಉಪಾಧಿಕ ಕ್ರೀಯ ಮಾಡದೆ
ಸುಚಿತ್ತದಿಂದ ಮಹಾಲಿಂಗವನು ಧ್ಯಾನಿಸಿ ಪೂಜಿಸಿ ಚಿಂತಿಸಿ
ಅಲ್ಲಿಯೇ ಸುಖಿಯಾಗು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ ರಕ್ಷಿಸುವನು. ॥೧೧೦॥

೧೩೭೦
ಗುರುಸ್ವರೂಪನಾಗಿ ಮಹಾಸ್ಥಾನದಲ್ಲಿರುತ್ತಿದ್ದೆ,
ಲಿಂಗಸ್ವರೂಪನಾಗಿ ಭ್ರೂಮಧ್ಯದಲ್ಲಿರುತ್ತಿದ್ದೆ,
ಜಂಗಮಸ್ವರೂಪನಾಗಿ ಹೃದಯಕಮಲಮಧ್ಯದಲ್ಲಿರುತ್ತಿದ್ದೆ,
ಈ ಪರಿಯಲ್ಲಿ ಅಂತರಂಗದಲ್ಲಿ ಭರಿತನಾಗಿದ್ದೆಯಯ್ಯಾ.
ಬಹಿರಂಗದಲ್ಲಿ, ಶ್ರೀಗುರುಲಿಂಗವಾಗಿ ದೀಕ್ಷಿಸಿ ರಕ್ಷಿಸಿದೆ,
ಶಿವಲಿಂಗವಾಗಿ ಕರಸ್ಥಲದಲ್ಲಿ ಪೂಜೆಗೊಂಡು ರಕ್ಷಿಸಿದೆ,
ಜಂಗಮಲಿಂಗವಾಗಿ ಅವಗುಣಂಗಳೆಲ್ಲವನೂ ಕಳೆದು ಶಿಕ್ಷಿಸಿ ರಕ್ಷಿಸಿದೆ.
ಇಂತೀ ತ್ರಿವಿಧವು ಒಂದೇ ರೂಪಾಗಿ,
ಎನ್ನ ಅಂತರಂಗ ಬಹಿರಂಗ ಭರಿತನಾಗಿ
ಪ್ರಸಾದವ ಕರುಣಿಸಿ ಮುಕ್ತನ ಮಾಡಿದೆಯಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೧೧॥

೧೩೭೧
ಗೃಹ ಗ್ರಾಮ ನಾಡು ದೇಶಂಗಳೆಂಬ ಭೂಮಿಯ
ಆಗು-ಚೇಗೆಯ ರಾಗ-ದ್ವೇಷ,
ಮರಳಿ ಭೂಮಿಯ ಆಶೆ, ಅಲ್ಪಭೂಮಿಯ ಆಶೆ.

ಅಲ್ಪಭೂಮಿ ಅಲ್ಪಂಗಲ್ಲದೆ
ಪಂಚಾಶತಕೋಟಿ ಯೋಜನ ಭೂಮಿಯನೂ
ಒಳಕೊಂಡ ಬ್ರಹ್ಮಾಂಡ ಅಂತಹ ಬ್ರಹ್ಮಾಂಡವನೇಕವನೂ
ಆಭರಣವ ಮಾಡಿಯಿಟ್ಟುಕೊಂಡಿಪ್ಪ,
ಅಂತಹ ಆಭರಣದಿಂದ ಪೂಜೆಗೊಂಡಿಪ್ಪ,
ಲಿಂಗವೇ ಪ್ರಾಣವಾಗಿ ಭೂಮಿಯಲ್ಲಿ ನಿಂದ ಲಿಂಗೈಕ್ಯಂಗೆ
ಭೂಮಿಯ ಚಿಂತೆ ಇನ್ನೆಲ್ಲಿಯದೋ? ಕಾಣೆ.
ಕೋಟಿ ಕ್ಷಿತಿಪರಿಯಂತರ ಧನದಾಗುನಿರೋಧ ಆಗುಚೇಗೆಯನಿರೋಧ
ಸುಖದುಃಖ ತನುಮನಧನಕಾಂಕ್ಷೆ, ಅಲ್ಪಂಗಲ್ಲದೆ
ಮಹಾಲಕ್ಷ್ಮಿಯೊಡೆಯನಾಗಿ, ಮಹದೈಶ್ವರ್ಯಸಂಪನ್ನನಾಗಿ,
ಹಿರಣ್ಯಪತಿಯೇ ಪ್ರಾಣವಾಗಿ, ಹಿರಣ್ಯಪತಿಯೇ ಕಾಯವಾದ
ಮಹಾಲಿಂಗೈಕ್ಯಂಗೆ ಧನದ ಚಿಂತೆ ಇನ್ನೆಲ್ಲಿಯದು?
ಉತ್ತಮ ಮಧ್ಯಮ ಕನಿಷ್ಠ ನಿಕೃಷ್ಟ
ಹಸ್ತಿನಿ ಚಿತ್ತಿನಿ ಶಂಕಿನಿ ಪದ್ಮಿನಿಯರೆಂಬ ನಾಲ್ಕು ತೆರದ ಸ್ತ್ರೀಯರ ಸಂಗ;
ಪಾತರ, ದಾಸಿ, ವೇಶ್ಯಾಗಮನ, ಪರಸ್ತ್ರೀ ಪರಸಂಗ
ಅವಿಚಾರ ಅನ್ಯಜಾತಿಯ ಸಂಗ
ಇವುಗಳಿಗಾಶಿಸುವ ಕ್ರೂರಾತ್ಮಂಗೆ ಹೆಣ್ಣಿನ ಚಿಂತೆಯಲ್ಲದೆ,
ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿಯ ವರ್ತನೆಯ ಮೀರಿ
ಮಹಾಶಕ್ತಿ ತಾನಾಗಿ[ಹ] ಮಹಾಪುರುಷನಲ್ಲಿ
ಮಹಾಸಂಗವಾದ ಮಹಾಶರಣಂಗೆ ಹೆಣ್ಣಿನ ಚಿಂತೆ ಇನ್ನೆಲ್ಲಿಯದೋ?
ವೇದಶಾಸ್ತ್ರ ಪುರಾಣಾಗಮಾದಿಯಾಗಿ
ಅಷ್ಟಾದಶವಿದ್ಯಂಗಳನೋದುವ ಕೇಳುವ ವಿಚಾರಿಸುವ ತಿಳಿವ
ವಿದ್ಯದ ಚಿಂತೆ ಅಲ್ಪಮತಿಯ ಅಲ್ಪಂಗಲ್ಲದೆ
ವಾಗ್ದೇವತೆಗೆ ಅಧಿದೈವಮಪ್ಪ ಮಹಾವಿದ್ಯೆಯೇ ದೇಹವಪ್ಪ
ವಿದ್ಯಾರೂಪ ಮಹಾದೇವನೇ ಪ್ರಾಣವಾಗಿ,
ಮಹಾದೇವನೇ ಕಾಯವಾಗಿ, ಮಹಾದೇವನೇ ಜಿಹ್ವೆಯಾಗಿ,
ಮಹಾದೇವನೇ ಮನವಾಗಿಹ
ಮಹಾಲಿಂಗೈಕ್ಯಂಗೆ ಇನ್ನುಳಿದ ಚಿಂತೆ ಇನ್ನೆಲ್ಲಿಯದೋ ?
ಭಕ್ತಕಾಯ ಶಿವನಾಗಿ ಶಿವನೇ ಪ್ರಾಣವಾಗಿ ನಿಂದ ಸದ್ಭಕ್ತಂಗೆ
ಆವ ಚಿಂತೆಯೂ ಇಲ್ಲ, ಆತ ನಿಶ್ಚಿಂತ, ಪರಮಸುಖಪರಿಣಾಮಿ,
ಸತ್ಯನು ನಿತ್ಯನು, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೧೨॥

೧೩೭೨

ಘನಕ್ಕೆ ಘನ ಮಹಿಮೆಯ ಪಡೆವರೆಲ್ಲರು ರುದ್ರಾಕ್ಷಿಯ ಧರಿಸಿಪ್ಪರು,
ಆ ಮನುಜರು ಮರ್ತ್ಯರಲ್ಲ ನೋಡಿರೆ.
ಮುನ್ನೊಬ್ಬ ವ್ಯಾಧನು ಶ್ವಾನನ ಕೊರಳಲ್ಲಿ ರುದ್ರಾಕ್ಷಿಯ ಕಟ್ಟಲು
ಆ ಶ್ವಾನವು ರುದ್ರಲೋಕಕ್ಕೆ ಐದಿತೆಂಬುದು ಪುರಾಣಸಿದ್ಧ ನೋಡಿರೆ.
ಅದು ಕಾರಣ,
ಶಿಖೆಯಲ್ಲಿ ಒಂದು, ಶಿರದಲ್ಲಿ ಮೂವತ್ತಾರು,
ಗಳದಲ್ಲಿ ಮೂವತ್ತೆರಡು, ಕರ್ಣದ್ವಯದಲ್ಲೆರಡು,
ಹಾರದಲ್ಲಿ ನೂರೆಂಟು, ತೋಳಿನಲ್ಲಿ ಹದಿನಾರು,
ಕರದಲ್ಲಿ ಹನ್ನೆರಡು, ಜಪದಲ್ಲಿ ಇಪ್ಪತ್ತೆಂಟು
ಈ ಕ್ರಮವರಿದು ರುದ್ರಾಕ್ಷಿಯ ಧರಿಸಿದಾತನೇ ರುದ್ರನು,
ಆತನೇ ಸದ್ಯೋನ್ಮುಕ್ತನು,
ಆತನೇ ಇಹಲೋಕ ಪರಲೋಕ ಪೂಜ್ಯನು, ಅಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೧೩॥

೧೩೭೩

ಚರಣ ವಿಶ್ವಂ ಸೂಕ್ತದಲ್ಲಿ–
ಋಗ್ವೇದಕ್ಕೆ ದೇಹ ಉರುವರ್ಣ,
ಅತ್ರಿ ಗೋತ್ರ, ನಿರುತ ಗಾಯತ್ರಿ ಛಂದ,ಅಧಿವೇತೆ ಅಜನು.
ಯಜುರ್ವೇದಕ್ಕೆ ದೇಹ ತಾಮ್ರವರ್ಣ,
ಭಾರದ್ವಾಜ ಗೋತ್ರ, ತ್ರಿಷ್ಟುಪ್ ಛಂದ, ಅಧಿದೇವತೆ ಅಧೋಕ್ಷಜನು.
ಸಾಮವೇದಕ್ಕೆ ದೇಹ ಶ್ವೇತವರ್ಣ,
ಕಾಶ್ಯಪ ಗೋತ್ರ, ಅನುಷ್ಟುಬ್ ಛಂದ. ಅಧಿದೇವತೆ ಭರ್ಗನು.
ಅಥರ್ವಣವೇದಕ್ಕೆ ದೇಹ ಕೃಷ್ಣವರ್ಣ,
ವೈಭಾನು ಗೋತ್ರ, ಅನುಷ್ಟುಬ್ ಛಂದ, ಅಧಿದೇವತೆ ಇಂದ್ರನು.
ಆ ವೇದ ಸಂಭವರಾಗಿ ಆದಿ ವ್ರತಸ್ಥರಾಗಿ ರುದ್ರಾಕ್ಷೆಯಂ ಧರಿಸಿಹರು.
ಸದಾಚಾರವೆಂತೆನಲು ವಿಭೂತಿಯ ಉದ್ಧೂಳಿತವ ಮಾಡಿಕೊಂಡಿಹರು.
ಲಿಂಗಧಾರಕರೆಂಬುದಕ್ಕೆ ಶ್ರುತಿ:
"ಓಂ ಅಯಂ ಮೇ ಹಸ್ತೋ ಭಗವಾನ್।ಅಯಂ ಮೇ ಭಗವತ್ತರಃ।
ಅಯಂ ಮೇ ವಿಶ್ವ ಭೇಷಹಃ। ಅಯಂ ಶಿವಾಭಿಮರ್ಶನಃ।
ಅಯಂ ಮಾತಾ ಅಯಂ ಪಿತಾ। ಅಯಂ ಜೀವಾತುರಾಗಮತ್।
ಇದಂತವಪ್ರಸರ್ಪಣಂ ಸಂಬಂಧವೇಹಿನಿರಿಹಿಃ"
ಎಂದು ತಮ್ಮ ಹಸ್ತವ ತಾವೆ ಹೊಗಳಿಕೊಳ್ಳುತ್ತಿಹವು.

ಶಿವನ ಪಾದೋದಕ ಪ್ರಸಾದವನೆ ಕೊಳ್ಳುತ್ತಿಹವು.
ವೇದಾಂತ ಕಾಮಯೇತಿಯೆನಲು:
"ಓಂ ಶಿವೋಯಾಮ್ಯೆವ ಪಿತರಃ। ಪಿತೃ ದೇವೋಭವ ಪಿತಾಶ್ಚಯಾ॥'
ಎಂದು ಶಿವನು ತಮ್ಮ ಜನಕನೆನುತಿಹವು.
ಆ ಪರಿಯಲು ವೇದಸ್ವಯಂಭುವೆಂದೆಂಬೆನು,
ಆ ಪರಿಯಲು ವೇದವೆ ದೈವವೆಂಬೆನು.
ಶಿವನಲ್ಲಿ ಜನಿಸಿ ಶಿವನ ಭೃತ್ಯರಾಗಿ
ಶಿವನ ಹೊಗಳುವ ವೇದವನೋದಿ
ಆವ ಗತಿಯಾಗಬೇಕೆಂದು ನುಡಿವ ಬ್ರಾಹ್ಮಣಂಗೆ
ಆದಿ ದೈವವಾವುದೆಂದರಿಯಿರಿ,
ಓದಿನ ಗಿಳಿಯಂತಾದಿರಿ ದ್ವಿಜರೆಲ್ಲ.
ಸಾಮದೇವ ಬಿನ್ನೈಸಿದ ಅರ್ಥ ವೇದಾಂತ ಪುರುಷೋಕ್ತಯೆಂದು
ಹರಸಾರಾಯ ಪುರಾಣದೊಳು ವೈದಿಕ
"ಓಂ ನಿನಾಂ ಪ್ರಣಮ್ಯತ। ಸ್ತ್ರೀಣಾಂತಯೋದಿನಾಸ್ವದಂ॥"
ಎಂದು ದೈವ ಈ ತೆರನಾಗಿಹವಲ್ಲಿ ಕೇಳು.
ಇಂದ್ರನೊಕ್ಕಲಿಗ, ಬ್ರಹ್ಮ ವೈಶ್ಯ, ವಿಷ್ಣು ಕ್ಷತ್ರಿಯ,
ರುದ್ರ ಉತ್ತಮದ ಬ್ರಾಹ್ಮಣನೆಂಬುದಕ್ಕೆ ತಾರ್ಕಣೆ ಆವುದೆಂದೊಡೆ:
ಶಿವನನರ್ಚಿಸುವಾತನೆ ದ್ವಿಜನು,
ಉಳಿದ ದ್ವಿಜರೆಲ್ಲ ಅಧಮರೆಂಬುದಕ್ಕೆ ಶ್ರುತಿ:
"ತಥಾ ವಿಪ್ರಸ್ಯ ಸಂಬಂಧಂ। ಶಿವೇನ ಸಹಯುಚ್ಯತೇ
ಶಂಕರಃಸರ್ವದೇವಸ್ತು। ಭೂಷಲಸ್ತು ಪುರಂದಃ।
ಪಿತಾಮಹಾಶ್ಚ ವೈಶಸ್ತು। ಕ್ಷತ್ರಿಯೋ ಪರಮೋ ಹರಿಃ।
ಬ್ರಾಹ್ಮಣೋ ಭಗವಾನ್ ರುದ್ರೋ। ಇಂದ್ರ ಶೂದ್ರೋಪಿ ಜಾಯತೇ।
ಮಹಾಬ್ರಾಹ್ಮಣಮೀಶಾನಾಂ। ಯುಗಳಂವನರಿತರಃ।
ಸದಾಮಹಾತ್ಮಯಾನಂತರ ವಿರೂಪಾಕ್ಷಂ ದ್ವಿಜೋತ್ತಮಃ।"
ಎಂದು ವಿಶ್ವೇಶ್ವರನ ಮುಖವಾಕ್ಯ ತಾನಾಗಿ ಹೇಳುತ್ತಿದೆ.
ಆ ದ್ವಿಜರುಗಳಿಗೆ ಶಿವಜ್ಞಾನವೇಕಿಲ್ಲವೆಂದಡೆ:
ದಧೀಚಿ ಭೃಗು ಗೌತಮ ಅಗಸ್ತ್ಯ ಮೊದಲಾದ ಶಿವಭಕ್ತರ
ನವಯಜ್ಞವ ಮಾಡಿದರಾಗಿ,
ಶಿವಜ್ಞಾನಹೀನರಾದ ಶಾಂಖ್ಯಾಯನ
ವೈಷ್ಣವ ಬ್ರಹ್ಮಯೋಗ ಸೌರ ಗಾಣಾಪತ್ಯ ಮಾಯಾವಾದಿ
ಅರುಹಂತ ಬೌದ್ಧಿಕ ಚಾರ್ವಾಕ ವೈದಿಕ
ಸಕಲರು ನಿಷ್ಕಲರು ಮೀಮಾಂಸಕ ನೀಲಪಟರಾಳಾಗದ

ಪಾಷಂಡಿಗಳಲ್ಲಿ ಹೇಸದೆ ದೀಕ್ಷೆಯಂ ಕೊಂಡು,
ಒಡಲ ಮುಡುಹಂ ಸುಟ್ಟು ಮಟ್ಟೆಯಂ ಇಟ್ಟು,
ಶಿವಸಮಯಮಂ ನಿಂದಿಸಿ ತೀರ್ಥಯಾತ್ರೆಗೆ ಹೋದ ಫಲವಂ
ಮಾರಿಕೊಂಡು ತಿರಿದುಂಡು ಭ್ರಾಂತುಗೆಟ್ಟು
ಶಿವಶರಣರ ನಿಂದಿಸಿ ಪಾಪದಿಂದ ವಿಪ್ರರಧಮ ನರಕಕ್ಕೆ ಇಳಿಯಬೇಕೆಂದು
ಆ ವೇದ ಮುಖ್ಯರು ಶಾಪಮಂ ಕೊಟ್ಟರು
ದ್ವಿಜರ್ಗೆ ವಿಧಿಯಾಯಿತ್ತು ಕಾಣಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೧೪॥

೧೩೭೪
ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ವಾಙ್‌ಮಾನಸಾಗೋಚರವೆಂದು ಹೇಳುತ್ತೈದಾವೆ ವಾಕ್ಯಂಗಳು.
ಅದಂತಿರಲಿ,
ಐತಿಹಾಸಿಕರು ಪೌರಾಣಿಕರು ಆಗಮಿಕರು ಅರಿದರಾದಡೆ
ದೃಶ್ಯನೆಂಬರೆ ಶಿವನನು? ಅದೃಶ್ಯನೆಂಬರೆ ಶಿವನನು?
ವಾಙ್‌ಮಾನಸಾಗೋಚರನೆಂಬರೆ ಶಿವನನು?
'ಅತ್ಯತಿಷ್ಠದ್ದಶಾಂಗುಲಂ ಏಕ ಏವ ಪುರುಷಃ'
ಎಂಬ ಶ್ರುತಿಯಿರಲು ಮತ್ತಚಿತ್ತನೆ ಶರಣನು?
ಅಣುವಿನೊಳಗಣುವಾಗಿ, ಮಹತ್ತಿನೊಳಗೆ ಮಹತ್ತಾಗಿ,
ಇಹಪರವೆಂಬ ಸಂದ ಹರಿದು, ಅಧ್ಯಕ್ಷತನಕ್ಕೆ ಕಾರಣಿಕನಾಗಿ
ಇಹಲೋಕವೆ ಪರ, ಪರವೆ ಇಹಲೋಕ. ಅದು ಹೇಗೆಂದಡೆ:
'ನಿತ್ಯಂ ಲಿಂಗಾರ್ಚನಂ ಯಸ್ಯ ನಿತ್ಯಂ ಜಂಗಮಪೂಜನಂ
ನಿತ್ಯಂ ಗುರುಪದಧ್ಯಾನಂ ನಿತ್ಯಂ [ನಿತ್ಯಂ]ನ ಸಂಶಯಃ'
ಎಂಬ ಆಗಮವಾಕ್ಯವನರಿದು,
ಗುರುವಿಂಗೆ ತನುಮುಟ್ಟಿ, ತ್ರಿವಿಧಲಿಂಗಕ್ಕೆ ಮನಮುಟ್ಟಿ,
ತ್ರಿವಿಧಜಂಗಮಕ್ಕೆ ಧನಮುಟ್ಟಿ, ತ್ರಿವಿಧ ನಿವೇದಿಸಿ,
ಆ ಗುರುವಿಂ ಶುದ್ಧ[ಪ್ರಸಾದವ], ಆ ಲಿಂಗದಿಂ ಸಿದ್ಧಪ್ರಸಾದವ,
ಅ ಜಂಗಮದಿಂ ಪ್ರಸಿದ್ಧ[ಪ್ರಸಾದವ]ನವಗ್ರಹಿಸಿ,
ಈ ಲಿಂಗಾರ್ಚನೆಯ ಸ್ವಾನುಭಾವದಿಂದೇಕವ ಮಾಡಿ ಅರ್ಚಿಸಲಲ್ಲಿ
ಶರಣರು ಸ್ವತಂತ್ರರು.
ಅಂಗದಾಸೆಯಲ್ಲಿ ಹರಿವುದ ಬಿಟ್ಟ ನಿಸ್ಸಂಗಿಗಳು.
ಶ್ರೋತ್ರ ನೇತ್ರ ತ್ವಕ್ಕು ಜಿಹ್ವೆ ಘ್ರಾಣ ಪಂಚೇಂದ್ರಿಯಂಗಳ
ಶಿವನ ಮುಖವೆಂದರಿದು ಅನ್ಯಸಂಗಂಗಳಿಗೆ

ಎಳಸಿ ಬಳಸಿ ಬಣ್ಣಕರಪ್ಪರೆ ಶರಣರು?
'ಲಿಂಗಾರ್ಚನವಿಹೀನಸ್ತು ದ್ವಿಜೋ[s]ಪಿ ಶ್ವಪಚಾಧಮಃ
ಲಿಂಗಾರ್ಚನಪರೋ ನಿತ್ಯಂ ಶ್ವಪಚೋ[s]ಪಿ ದ್ವಿಜೋತ್ತಮಃ'
ಎಂದುದಾಗಿ,
ನಮ್ಮ ಶರಣರಿಗೆ ಸರಿ ಉಂಟೆ ಲೋಕದೊಳಗೆ?
ಶೂನ್ಯವೆನಿಸುವ ವಸ್ತುವ ರೂಹಿಂಗೆ ತಂದು
ನೆರೆದು ತಾನೆ ರೂಪಾಗಬಲ್ಲ ಶರಣನು.
ಆತನ ಮಹಾಮಹಿಮೆಗೆ ನಮೋ ನಮೋ ಎಂಬೆನು ಕಾಣಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೧೫॥

೧೩೭೫
ಜಗವೊಂದೆಸೆ, ತಾನೊಂದೆಸೆ,
ಮತ್ತಾ ಜಗದೊಳಗೆ ತಾ, ತನ್ನೊಳಗೆ ಜಗ.
ಆಗಮವೊಂದೆಸೆ, ತಾನೊಂದೆಸೆ,
ಮತ್ತಾ ಆಗಮದೊಳಗೆ ತಾ, ತನ್ನೊಳಗೆ ಆಗಮ.
ವಿಧಿಯೊಂದೆಸೆ, ತಾನೊಂದೆಸೆ,
ಮತ್ತಾ ವಿಧಿಯೊಳಗೆ ತಾ, ತನ್ನೊಳಗೆ ವಿಧಿ.
ಕ್ರೀಯೊಂದೆಸೆ, ತಾನೊಂದೆಸೆ,
ಮತ್ತಾ ಕ್ರೀಯೊಳಗೆ ತಾ, ತನ್ನೊಳಗೆ ಕ್ರೀ.
ಇಂತೀ ಜಗ, ಆಗಮ, ವಿಧಿ, ಕ್ರೀ ನಿಷೇಧವಾಗಿ,
ಹೊದ್ದಿಯೂ ಹೊದ್ದನು, ನೀರ ತಾವರೆಯಂತೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೧೬॥

೧೩೭೬
ಜನನವೆಲ್ಲರಿಗುಳ್ಳ ಯೋನಿಗಳಲ್ಲಿ ಜನಿಸದೆ
ವಿಚಾರ ವಿಜ್ಞಾನದಿಂದ ವಿಚಾರಿಸಿ
ಶ್ರೀಗುರು ಕರುಣಾಮೃತಸಾಗರದಲ್ಲಿ ಜನಿಸಿದ
ಶಿಷ್ಯನ ಪರಮವಿವೇಕವೆ ವೇದಾದಿವಿದ್ಯೆಗಳ ಸರ್ವಸಾರ.
ಆ ಸರ್ವಸಾರಾಯದ ಸಮರಸಸ್ವರೂಪೆ
'ಓಂ ನಮಃ ಶಿವಾಯ' ಎಂಬ ಮಂತ್ರವೇದ್ಯವಾವುದೆಂದಡೆ:
ಆ ಷಡಕ್ಷರಿಮಂತ್ರವೆ ಷಡಂಗ ಷಟ್ಸ್ಥಲಲಿಂಗ
ಹಸ್ತ ಮುಖ ದ್ರವ್ಯ ಅರ್ಪಣ ಪ್ರಸಾದ ಪ್ರಸಾದಭೋಗ ಸಂತೃಪ್ತಿ.
ಇಂತೀ ಸತ್ಯ ನಿತ್ಯ ನಿರಂಜನ ಸಹಜ ಸನ್ಮಾರ್ಗವ

ಸಾಧಿಸಿದರು ನಮ್ಮ ಪುರಾತನರು.
ಇದನರಿದ ಮಹಾಂತನೆ ವೇದ್ಯನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೧೭॥

೧೩೭೭

ಜನ್ಮದ ಭವಬಂಧನವ ತೊಡೆಯಬಲ್ಲಡೆ ಷಡಕ್ಷರವೇ ಬೀಜಮಂತ್ರ,
ಕಾಲಕರ್ಮದ ದೆಸೆಯನೊರಸಬಲ್ಲಡೆ
ಶಿವನ ತನುಧೂಳಿತಮಪ್ಪ ಶ್ರೀವಿಭೂತಿ,
ಸಟೆ ಕುಹಕ ಪ್ರಪಂಚ ಗೆಲಬಲ್ಲಡೆ ಮಹಂತರ ಸಂಗ,
ಶುಕ್ಲಶೋಣಿತದ ತನುವಿನ ಕಲ್ಮಷವ ತೊಡೆಯಬಲ್ಲಡೆ
ಜಂಗಮದ ಪಾದೋದಕ ಪ್ರಸಾದ,
ಮನ ಬುದ್ಧಿ ಚಿತ್ತ ಅಹಂಕಾರವ ಗೆಲುವಡೆ ಏಕೋಭಾವನಿಷ್ಠೆ.
ಇವು ತಾನೆ ತನ್ನೊಳಗಾಗೆ ಬೇರಾವುದೂ ಘನವಿಲ್ಲ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೧೮॥

೧೩೭೮

ಜನಿತವಿಲ್ಲದ [ಜನಿತ]ನಾದ ಹರನೆ, ನೀನು ನಿರೂಪನು.
ಎನ್ನ ಭಕ್ತರು ರೂಪರುಯೆಂದಹರೆ ಅಲ್ಲಲ್ಲ, ಎನ್ನ ಭಕ್ತರೆ ನಿರೂಪರು.
ಹೆಸರಿಲ್ಲದ ವಸ್ತುವ ತಂದು ಹೆಸರಿಟ್ಟು ಕುರುಹುಗೊಂಡುದಿದೆಂದು
ಅರಿಯಬಾರದಾತನ ತಂದು ಕುರುಹಿಟ್ಟು
ಪಾಲಿಸಿದರಾದ ಕಾರಣ ದೇವನಾದೆ.
ಒಡಲುಗೊಂಡವರ ಜರಿಯಲೇತಕೆ?
ನೀನೊಮ್ಮೆ ಒಡಲುಗೊಂಡು ನೋಡಾ.
ಜಾಗ್ರತ್‌ಸ್ವಪ್ನಸುಷುಪ್ತಿಯಲ್ಲಿ ನಿನ್ನ ಧ್ಯಾನವಲ್ಲದೆ
ಅನ್ಯಧ್ಯಾನವುಂಟೆ ಎನ್ನವರಿಗೆ?
ನಿನ್ನ ಹೊಗಳಿ ಹೊಗಳಲಾರದೆ
ಆ ವೇದಂಗಳು ವಾಙ್ಮನಕ್ಕಗೋಚರನೆಂದವು,
ಕಾಣಬಾರದ ಶೂನ್ಯನೆಂದವು.
ಇಂತೀ ಪರಿಯಲಿ ಶ್ರುತಿಗಳು ಹೊಗಳಿದವು.
'ಯಜ್ಞೇನ ಯಜ್ಞಮಯಜನ್ತ ದೇವಾಃ ತಾನಿ ಧರ್ಮಾಣಿ ಪ್ರಥಮಾನ್ಯಾಸನ್
ತೇ ಹ ನಾಕಂ ಮಹಿಮಾನಸ್ಸಚಂತೇಯತ್ರಪೂರ್ವೇ ಸಾಧ್ಯಾಸ್ಸಂತಿದೇವಾಃ'
ಎಂದವು ಶ್ರುತಿ.
ನಿನ್ನಾಯತವ ಎಮ್ಮ ಶರಣರ್ಕೆ ಬಲ್ಲರು.

ಆಗಮ ಶ್ರುತಿ ಪುರಾಣಂಗಳ ಹಾಂಗೆ
ಶೂನ್ಯವ ಹೇಳುವರೆ ನಿಮ್ಮ ಶರಣರು?
.ನಿತ್ಯನೆಂದು ದಿಟಪುಟ ಮಾಡಿ ಸದ್ಭಕ್ತರ ಹೃದಯ ಮನ ಶಾಸನ
ಮಾಡಬಲ್ಲ ಶರಣರು, ಶಿವಂಗೆ ಜನಕರು ಕಾಣಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೧೯॥

೧೩೭೯

ಜನಿತವಿಲ್ಲದೆ ಜನಿಸಿ ಸ್ವಯವಾದ ಹರನೇ ನೀನು ನಿರೂಪನೇ?
ಜನಿಸಿ ಜನಿತವ ಬಗೆಯರಾಗಿ ಎಮ್ಮ ಪುರಾತನರೇ ನಿರೂಪರು,
ಕುಲದಲ್ಲಿ ಹುಟ್ಟಿ ಕುಲವ ಬೆರೆಸರಾಗಿ ಎಮ್ಮ ಪುರಾತನರೇ ಕುಲಜರು.
ಆದಿಲಿಂಗ ಅನಾದಿಶರಣ.
ಹೆಸರಿಲ್ಲದ ದೆಸೆಗೇಡಿ ಲಿಂಗವ ವಶಕ್ಕೆ ತಂದು
ಹೆಸರಿಟ್ಟು ಕರೆದರೆ ನೀನು ಸುಲಭನೇ? ಅಲ್ಲ.
ನೀನು ಕುಲಗೇಡಿ, ನಿನ್ನನಾರು ಬಲ್ಲರು? ನೀನಗೋಚರ.
ಹರನೇ, ನೀ ಬೇಡಿತ್ತ ಕೊಟ್ಟು ನೀ ಬಂದರೆ ನಿನ್ನನಾಗುಮಾಡಿದರಲ್ಲದೆ
ಎಮ್ಮ ಪುರಾತನರು ನಿಮ್ಮಲ್ಲಿಗೆ ಬಂದು ದೈನ್ಯಬಟ್ಟು ಬೇಡಿದರಲ್ಲೈ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೨೦॥

೧೩೮೦

ಜಲಕುಂಭಚಂದ್ರವತ್ತೆಂಬ ಯಥಾ ನ್ಯಾಯವನರುಹಿಸಿ
ಕುಂಭ ಹಲವಾದಡೆ ಚಂದ್ರನೊಬ್ಬನೊ? ಇಬ್ಬರೊ?
ಬಲ್ಲರೆ, ನೀವು ಹೇಳಿರೆ.
ಆ ಭೂಮಿಯಲ್ಲಿ ಅಡಿಗೊಂದೊಂದು ಸ್ಥಲವಾಗಿ
ಸ್ಥಲಕ್ಕೊಂದು ಬಣ್ಣವಪ್ಪ ಮೃತ್ತಿಕೆಯ ತಂದು ಘಟವಂ ಮಾಡಿ
ಆ ಘಟವ, ಬಹುವಿಧಮಂ ಕೂಡಿ ದಗ್ಧವ ಮಾಡಿ
ಏಕಶಾಯಿಯಂ ಮಾಡೆ, ಉಪಯೋಗಕ್ಕೆ ಸಂದುದೊ ಘಟವು?
ಇಂತೀ ಪರಿಯಲ್ಲಿ ತಿಳಿದು ಕೇಳಿರೆ:
ಇಂತು ಗುರುಕಾರುಣ್ಯವುಳ್ಳ ದೇಹಕ್ಕೆ ವರ್ಣಾಶ್ರಮವನತಿಗಳೆಯದಿದ್ದಡೆ
ಆ ಗುರುಕಾರುಣ್ಯ ತಾನೆಂತಿಪ್ಪುದು ಹೇಳಿರೆ?
ಆ ಗುರುಸ್ವಾಮಿ ಹಸ್ತಮಸ್ತಕಸಂಯೋಗವ ಮಾಡಿ,
ಮಾಂಸಪಿಂಡವ ಕಳೆದು ಮಂತ್ರಪಿಂಡವಂ ಮಾಡಿ,
ವಾಯುಪ್ರಾಣಿಯ ಕಳೆದು ಲಿಂಗಪ್ರಾಣಿಯ ಮಾಡಿದ.
ಶಿವಜನ್ಮಕುಲಯುತರಾಗಿ

ಶಿವನ ಶರಣರು ವಾಙ್ಮಾನಸಾಗೋಚರರೆನ್ನದಿದ್ದಡೆ
ಕುಂಭೀಪಾತಕನಾಯಕನರಕ ತಪ್ಪದು, ಸತ್ಯಸತ್ಯ ಅವರಿಗಿದೇ ಗತಿ.
ಇನ್ನು ಅನಂತಕೋಟಿಬ್ರಹ್ಮಕಲ್ಪ ಉಳ್ಳನ್ನಕ್ಕರ
ಇಹರು ಕಾಣಾ ನರಕದಲ್ಲಿ, ಇದಕಿನ್ನು ಶ್ರುತಿ:
'ಪಾತಕಂತು ಮನುಷ್ಯಾಣಾಂ ತನುಭಾವೇಷು ವರ್ಧನಂ
ಜನ್ಮಕರ್ಮಾಮರಣಾಂತಂ ಅಜಕಲ್ಪಾವಧಿಂ ಭವೇತ್'
ಮುಕ್ತಿ ಎಂಬುದು ಉಂಟಾದುದಕ್ಕೆ ಉಪದೃಷ್ಟವ ಹೇಳಿಹೆನು:
ಹಿಂದೆ ಅರಿಯಿರೆ, ನಿಮ್ಮ ಋಷಿ ಮೂಲಾಂಕುರವನು,
ಉಪದೇಶಗಮ್ಯರಾಗಿ ಅಷ್ಟಾದಶಕುಲಂಗಳನೂ ಏಕವರ್ಣವ ಮಾಡಿರೆ,
ಉಪದೇಶಗಮ್ಯದಿಂದಲೂ
ಇನ್ನರಿದು ಹಡೆದ, ಪದಫಲಾದಿಗಳ ನೋಡಿರೆ.
ಜನ್ಮಕರ್ಮನಿವೃತ್ತಿಯಾಗದೆ ಒಬ್ಬ ಋಷಿಗೆ?
ಜೀವನದ ಮೊದಲಲ್ಲಿ ಅವ ಬೇಡ ಕಾಣಾ.
ಜ್ಞಾನದಿಂದ ಅಂತಂತು ಮಾಡಿದಡೆ,
ಶಿವಭಕ್ತನಿಂದೆಯಿಂದ ಒಂದು ಬ್ರಹ್ಮಕಲ್ಪಪರಿಯಂತರ
ಕುಂಭೀಪಾತಕನಾಯಕನರಕದಲ್ಲಿ ಅಯಿದಾನೆ ಎಂದುದು ಶ್ರುತಿ:
ಲಿಂಗಸ್ಯಾರಾಧನೇ ವಿಘ್ನಂ ಯತ್ಕೃತಂ ಸ್ವಾರ್ಥಕಾರಣಾತ್
ನಿಮೇಷಮಪಿ ತತ್ಪಾಪಂ ಕರೋತಿ ಚ ಕುಲಕ್ಷಯಂ
ಸೂಕರಃ ಕೋಟಿಜನ್ಮಾನಿ ಲಭತೇ ಶತಕೋಟಿಭಿಃ
ಮೃಗಶ್ಚ ಕೋಟಿಜನ್ಮಾನಿ ಶೃಗಾಲಃ ಕೋಟಿಜನ್ಮಭಿಃ
ಅಂಧಶ್ಚ ಲಕ್ಷಜನ್ಮಾನಿ ಕುಬ್ಜಸ್ಸ್ಯಾದಬ್ಜಜನ್ಮಭಿಃ
ಪಂಗುಲಃ ಕೋಟಿಜನ್ಮಾನಿ ಶಿಖಂಡೀ ಜಾಯತೇ ತಥಾ
ಉಲೂಕೋ ವಾಯಸೋ ಗೃಧ್ರಶ್ಶೂಕರೋ ಜಂಬುಕಸ್ತಥಾ
ಮಾರ್ಜಾಲೋ ವಾನರಶ್ಚೈವ ಯುಗಕೋಟಿ ಶತ ನರಃ
ಲಿಂಗಾರ್ಚನರತಂ ವಾಚಾ ಸಕೃಲ್ಲಿಂಗಂ ಚ ದೂಷಯನ್
ಯುಗಕೋಟಿಕ್ರಿಮಿರ್ಭೂತ್ವಾ ವಿಷ್ಟಾಯಾಂ ಜಾಯತೇ ಪುನಃ
ಕೀಟಃ ಪತಂಗೋ ಜಾಯೇತ ಕೃತವೃಶ್ಚಿಕದರ್ದುರಃ
ಜಾಯಂತೇ ಚ ಮ್ರಿಯಂತೇ ಚ ನರಾಸ್ತೇ ನಾಸ್ತಿ ವೈ ಸುಖಂ'
ಇಂತೆಂದುದಾಗಿ–
ಅಂದೊಮ್ಮೆ ಬಂದುದು ದೂರ್ವಾಸನೆಂಬ ಋಷಿಗೆ
ಮರ್ತ್ಯಲೋಕದಲ್ಲಿ ಮಹಾಪವಾದ.
ಅದ ಮರಳಿ ಪರಿಹರಿಸಿಕೊಳನೆ ಮರ್ತ್ಯಲೋಕದಲ್ಲಿ
ಶಿವಾರ್ಚನೆಯಂ ಮಾಡಿ?

ಶಿವಭಕ್ತರಿಗೆ ಮನೋಹರವಂತಹ ಪೂಜೆಯ ಮಾಡಿ
ಆ ಪರಶಿವನ ಘನಲಿಂಗವೆಂದರಿದು ಅರ್ಚಿಸಿ,
ಪರಮಭಕ್ತರ ಪಾದತೀರ್ಥಪ್ರಸಾದದಿಂದ
ಆ ಋಷಿ ಅಮರಕಾಯನೆಂಬ ನಾಮವ ಪಡೆಯನೆ?
ಅಕಾರಾಧ್ಯಕ್ಷರಂಗಳಿಗೆ ನಾಯಕವಂತಹ ಅಕ್ಷರ
ಪಂಚಾಕ್ಷರವೆಂಬುದನರಿದು
ಶಿವನೇ ಸರ್ವದೇವರಿಗೆ ಅಧಿದೈವವೆಂದರಿದು
'ವೇದಶಾಸ್ತ್ರಪುರಾಣಾನಿ ಸ್ಪಷ್ಟಾ ವೇಶ್ಯಾಂಗನಾ ಇವ
ಯಾ ಪುನಶ್ಯಾಂಕರೀ ವಿದ್ಯಾ ಗುಪ್ತಾ ಕುಲವಧೂರಿವ'
ಎಂದುದಾಗಿ:
'ಶಿವಾರ್ಚಕಪದದ್ವಂದ್ವಸ್ಯಾರ್ಚನಾತ್ ಸ್ಮರಣಾದಪಿ
ಕೋಟಿಜನ್ಮಸು ಸೌಖ್ಯಂ ಸ್ಯಾತ್ ಸ ರುದ್ರೋ ನಾತ್ರ ಸಂಶಯಃ'
ಎಂಬರ್ಥವನರಿದು ಆಂಗಿರಸ, ಶಾಂಡಿಲ್ಯ, ವೇದವ್ಯಾಸ,
ವಾಲ್ಮೀಕಿ, ಮಾಂಡವ್ಯ ಮೊದಲಾದ ಋಷಿಗಳೆಲ್ಲರೂ
ಶಿವನಿಂದೆ, ಶಿವಭಕ್ತರ ನಿಂದೆಯ ಮಾಡಿ
ಶಿವನ ಕ್ಷೇತ್ರವಹ ವೇದಾದಿಶಾಸ್ತ್ರಾಗಮಂಗಳಿಗೆ
ಪ್ರತಿಯಿಟ್ಟು ಕರ್ಮಶಾಸ್ತ್ರಂಗಳನೆಸಗಿ, ಅಕ್ಷಯನರಕವನೈದಿರಲಾಗಿ,
ತ್ರ್ಯಕ್ಷನ ಶರಣ ಕೃಪಾವರದಾನಿ ಏಕನಿಷ್ಠ ಪರಮಮಾಹೇಶ್ವರ ಸಾನಂದನು
ಕರುಣದಿಂದಲೆತ್ತನೆ ಅವರೆಲ್ಲರ ನರಕಲೋಕದಿಂದ?
ಇಂತಿವಕ್ಕೆ ಸಾಕ್ಷಿದೃಷ್ಟಾಂತಗ್ರಂಥಗಳ ಪೇಳುವಡೆ,
ಅಂತಹವು ಅನಂತ ಉಂಟು,
ಆಗಮ ಪುರಾಣದಲ್ಲಿ ಅರಿವುಳ್ಳವರು ತಿಳಿದು ನೋಡುವುದು.
ಶಾಪಹತರೆನಿಸುವ ಪಾಪಿಗಳು ಅವ ಮುಚ್ಚಿ ವಿತಥವ ನುಡಿವರು.
ಇದನರಿದು ನಿತ್ಯಸಹಜ ಶಿವಲಿಂಗಾರ್ಚನೆಯಂ ಮಾಡಿ
'ತತ್ವಮಸಿ' ವಾಕ್ಯಂಗಳನರಿದು
'ತತ್ಪದೇನೋಚ್ಯತೇ ಲಿಂಗಂ ತ್ವಂಪದೇನಾಂಗಮುಚ್ಯತೇ
ಲಿಂಗಾಂಗಸಂಗೋ[S]ಸಿಪದಂ ಪರಮಾರ್ಥನಿರೂಪಣೇ'
ಎಂಬುದನರಿದು, ನಿತ್ಯನಿರ್ಮಳಜ್ಞಾನಾನಂದ ಪ್ರಕಾಶವೆಂಬ
ಮಹಾಮನೆಯಲ್ಲಿ ಪರಮಸುಖದಲ್ಲಿ
ಆಕಾರಂಗಳ ಲಯವನು ತಮ್ಮಲ್ಲಿ ಎಯ್ದಿಸಿ
ನಿತ್ಯನಿರ್ಮಲ ಶಿವನ ಪ್ರಸನ್ನ ಪ್ರಸಾದವನೈದಿದ
ಮಹಾನುಭಾವರನೆನಗೆ ತೋರಯ್ಯಾ.

ನಾ ನಿನ್ನನರಿದುದಕ್ಕೆ ಫಲವಿದು, ನೀನೆನ್ನ ನೋಡಿದುದಕ್ಕೆ ಫಲವಿದು.
ಸುಖಸಚ್ಚಿದಾನಂದಸ್ವರೂಪ
ಅನಿತ್ಯವ ಮೀರಿದ ನಿತ್ಯ ನೀನಲ್ಲದೆ ಮತ್ತೊಂದುಂಟೆ?
ಎನಗೆ ನಿನ್ನಂತೆ ನಿರ್ಮಲಜ್ಞಾನಾನಂದಪದವನಿತ್ತು
ಎನ್ನ ನಿನ್ನಂತೆ ಮಾಡಿ ಉದ್ಧರಿಸಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೨೧॥

೧೩೮೧
ಜಗದೊಳಗೆ ಸೂರ್ಯನಂತಿರ್ಪನಯ್ಯ ಶಿವನು.
ಲೋಕಾದಿ ಲೋಕಂಗಳೊಳಗಿರ್ದಡೇನು,
ಜಗದ ಪುಣ್ಯ, ಪಾಪ, ಸ್ವರ್ಗ, ನರಕ, ಬಂಧ,
ಮೋಕ್ಷಕ್ಕೊಳಗಾದಾತನೇ? ಅಲ್ಲ. ಅದೆಂತೆಂದಡೆ:
ಜಲದೊಳಗಣ ಪ್ರಕೃತಿ ವಿಕೃತಿಗಳು ಜಲಕ್ಕಲ್ಲದೆ ಸೂರ್ಯಂಗಿಲ್ಲವಾಗಿ,
ಲೋಕದ ಸ್ಥಿತಿಗತಿ ಲೋಕಕ್ಕಲ್ಲದೆ, ಶಿವನಿಗಿಲ್ಲವಾಗಿ.
ಅನಂತಕೋಟಿ ಬ್ರಹ್ಮಾಂಡಗಳು ತನ್ನ ಒಡಲೊಳಗೆ ಅಡಗಿದವೆಂದಡೆ
ತಾ ಹೊರಗಾಗಿ ಅಡಗಲೆಡೆ ಏನುಂಟು? ಇದು ಕಾರಣ,
ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು
ವಿಶ್ವದೊಳಗೆ ಹೊದ್ದಿಯೂ ಹೊದ್ದದಿರಬಲ್ಲ,
ವಿಶ್ವಾಧಿಪತಿಯಾಗಲೂ ಬಲ್ಲ. ॥೧೨೨॥

೧೩೮೨
ಜಲ ಮಲಿನ[ವಪ್ಪು]ವ ತೊಳೆವಂತೆ,
ಮನದ ತಮಂಧವ ತೊಳೆ[ದು]
ದರ್ಪಣದೊಳಗಣ ಪ್ರತಿಬಿಂಬದಂತೆ ಇಪ್ಪಿರಿಯಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೨೩॥

೧೩೮೩
ಜಾತವೇದಸ್ಸಿನಲ್ಲಿ ಶೋಧಿಸಿ
ಪುಟವಿಟ್ಟ ಬೂದಿಯಂತಾದೆನಯ್ಯಾ ನಿಮ್ಮನಾರಾಧಿಸಿ. ಅದೆಂತೆಂದಡೆ:
'ಜ್ಞಾನಾಗ್ನಿಸ್ಸರ್ವಕರ್ಮಾಣಿ ಭಸ್ಮಸಾತ್ಕುರುತೇ' ಎಂದುದಾಗಿ
ಕಾದ ಲೋಹದ ಮೇಲೆ ಉದಕವನೆರೆದಂತಾದೆನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೨೪॥

೧೩೮೪

ಜಾತಿಬ್ರಾಹ್ಮಣಂಗೆ ಕರಸ್ಥಲದಲ್ಲಿ ಲಿಂಗ,
ಉರಸ್ಥಲದಲ್ಲಿ ರುದ್ರಾಕ್ಷಿಮಾಲೆ, ಉಪನಯನ ನೊಸಲಕಣ್ಣು,
ಕಾವಿಯ ಧೋತ್ರ, ಗಾಯತ್ರಿಮಂತ್ರ,
ಪುರುಷಪ್ರಮಾಣ ದಂಡ, 'ಭವತಿಭಿಕ್ಷಾಂದೇಹಿ'ಯೆಂದು
ಪರಬ್ರಹ್ಮವನಾಚರಿಸಿಕೊಂಡಿಪ್ಪಾತನೆ ಬ್ರಾಹ್ಮಣ.
ಇಂತಲ್ಲದೆ ಮಿಕ್ಕವರೆಲ್ಲ ಶಾಪಹತ ವಿಪ್ರರು ನೀವು ಕೇಳಿರೊ.
ಕೃತಯುಗ ಮೂವತ್ನಾಲ್ಕು ಲಕ್ಷದ ಐವತ್ಮೂರು ಸಾವಿರ
ವರುಷಂಗಳಲ್ಲಿ ಗಜಾಸುರನೆಂಬ ಆನೆಯ ಕೊಂದು
ಹೋಮಕ್ಕಿಕ್ಕಿ ಮಾಂಸವ ತಿನ್ನಹೇಳಿತ್ತೇ ವೇದ?
ಅಹುದು, ತಿನ್ನ ಹೇಳಿತ್ತು. ಅದೆಂತೆಂದಡೆ:
ಕುಲ ಚಲ ಯೌವನ ರೂಪು ವಿದ್ಯಾ ರಾಜ್ಯ ತಪವೆಂಬ
ಅಷ್ಟಮದಂಗಳ ಕೊಲ್ಲ ಹೇಳಿತ್ತಲ್ಲದೆ
ಆನೆಯ ತಿಂಬ ಹೀನ ಹೊಲೆಯರ ಮುಖವ ನೋಡಲಾಗದು.
ತ್ರೇತಾಯುಗದ ಹದಿನೇಳು ಲಕ್ಷದ ಇಪ್ಪತ್ತೆಂಟುಸಾವಿರ ವರುಷಂಗಳಲ್ಲಿ
ಅಶ್ವನೆಂಬ ಕುದುರೆಯ ಕೊಂದು ಹೋಮಕ್ಕಿಕ್ಕಿ
ಮಾಂಸವ ತಿನ್ನಹೇಳಿತ್ತೇ ವೇದ?
ಅಹುದು, ತಿನ್ನಹೇಳಿತ್ತು ವೇದ. ಅದೆಂತೆಂದಡೆ:
ಪ್ರಾಣ ವ್ಯಾನ ಅಪಾನ ಉದಾನ ಸಮಾನ ನಾಗ ಕೂರ್ಮ ಕೃಕರ
ದೇವದತ್ತ ಧನಂಜಯವೆಂಬ ಕುದುರೆಯ ಕೊಂದು ತಿನ್ನ ಹೇಳಿತ್ತಲ್ಲದೆ,
ಕುದುರೆಯ ತಿಂಬ ಜಿನುಗು ಹೊಲೆಯರ ಮುಖವಂ ನೋಡಲಾಗದು.
ದ್ವಾಪರ ಎಂಟು ಲಕ್ಷದ ಐವತ್ನಾಲ್ಕು ಸಾವಿರ ವರುಷಂಗಳಲ್ಲಿ
ಮಹಿಷಾಸುರನೆಂಬ ಕೋಣನ ಕೊಂದು ಹೋಮಕ್ಕಿಕ್ಕಿ
ಮಾಂಸವ ತಿನ್ನ ಹೇಳಿತ್ತೇ ವೇದ?
ಅಹುದು, ತಿನ್ನ ಹೇಳಿತ್ತು. ಅದೆಂತೆಂದಡೆ:
ಜಾತಿ ವರ್ಣ ಆಶ್ರಮ ಕುಲಗೋತ್ರ ನಾಮವೆಂಬ
ಕೋಣನ ಕೊಲ್ಲ ಹೇಳಿತ್ತಲ್ಲದೆ,
ಕೋಣನ ತಿಂಬ ಕುನ್ನಿ ಹೊಲೆಯರ ಮುಖವ ನೋಡಲಾಗದು.
ಕಲಿಯುಗದ ನಾಲ್ಕು ಲಕ್ಷ ಮೂವತ್ತೆರಡು ಸಾವಿರ ವರುಷಂಗಳಲ್ಲಿ
ಮಾಂಸವ ತಿನ್ನ ಹೇಳಿತ್ತೇ ವೇದ?
ಅಹುದು, ತಿನ್ನ ಹೇಳಿತ್ತು, ಅದೆಂತೆಂದಡೆ,
ಮನ ಬುದ್ಧಿ ಚಿತ್ತ ಅಹಂಕಾರವೆಂಬ ಹೋತನ ಕೊಲ್ಲ ಹೇಳಿತ್ತಲ್ಲದೆ,
ಹೋತನ ಕೊಂದು ತಿಂಬ ಹೊಲೆಯರ ಮುಖವ ನೋಡಲಾಗದು.

ಇಂತೀ ನಾಲ್ಕು ಯುಗದಲ್ಲಿ ಮಾಂಸವ ತಿಂಬ
ಅನಾಚಾರಿ ಹೊಲೆಯರ ಮುಖವಂ ನೋಡಲಾಗದು.
ಅಜಂಗೆ ದ್ವಿಜನೆ ಗುರು, ದ್ವಿಜಂಗೆ ಹರಿಯೆ ಗುರು.
ಹರಿ ಹರಿಣಾವತಾರವಾದಲ್ಲಿ ಎರಳೆಯ ತಿಂಬುದಾವಾಚಾರ?
ಹರಿ ಮತ್ಸ್ಯಾವತಾರವಾದಲ್ಲಿ ಮೀನ ತಿಂಬುದಾವಾಚಾರ?
ಇಂತೀ ಹೊನ್ನಗೋವ ತಿಂಬ ಕುನ್ನಿಗಳ ತೋರದಿರಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೨೫॥

೧೩೮೫

ಜ್ಞಾತೃವ ಜ್ಞಾನ ನುಂಗಿ, ಜ್ಞಾನವ ಜ್ಞೇಯ ನುಂಗಿ,
ಜ್ಞೇಯವು ತನ್ನಲೆ ತಾ ವಿಶ್ರಮಿಸಿ,
ಶ್ರವಣ ಮನನ ನಿಧಿಧ್ಯಾಸನದಲ್ಲಿ ತಲ್ಲೀಯವಾಗಿ,
ಸ್ಥೂಲ ಸೂಕ್ಷ್ಮ ಕಾರಣಂಗಳನೇಕೀಭವಿಸಿ,
ಒಂದೇ ಸಂವಿಧಾನವಾಗಿ, ಅನ್ಯಸಂಧಾನವರತು.
ಪರಮಾನಂದವೆ ಆಲಿಂಗನವಾಗಿ, ಆಲಿಂಗನವೇ ಪರಮಾನಂದವಾಗಿ,
ಪ್ರತಿದೋರದ ಅಪ್ರತಿಯಾಗಿ,
ಉರಿಯೊಳು ಬೈಚಿಟ್ಟ ಕರ್ಪುರದಂತಿರ್ದುದೆ ಭಕ್ತಮಾಹೇಶ್ವರೈಕ್ಯ,
ಇಂತಿರ್ದುದೆ ಪ್ರಸಾದಿ ಪ್ರಾಣಲಿಂಗಿಗಳೈಕ್ಯ,
ಇಂತಿರ್ದುದೆ ಶರಣ ಲಿಂಗೈಕ್ಯ,
ಇಂತಿರ್ದುದೆ ಜೀವಪರಮೈಕ್ಯವಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೨೬॥

೧೩೮೬

ಜ್ಞಾ[ತೃ]ವೇ ಗುರು, ಜ್ಞಾನವೇ ಲಿಂಗ, ಜ್ಞೇಯವೇ ಜಂಗಮ.
ಈ ತ್ರಿವಿಧವ ಶ್ರೀಗುರು
ಅಂಗತ್ರಯ, ಮನತ್ರಯ, ಆತ್ಮತ್ರಯದ ಮೇಲೆ ತೋರಿದನಾಗಿ,
ಜ್ಞಾತೃ ಜ್ಞಾನ ಜ್ಞೇಯ ಬೇರಿಲ್ಲದರಿವು ತಾನೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೨೭॥

೧೩೮೭

ಜ್ಞಾನವೇ ಪ್ರಸಾದಕಾಯ, ಜ್ಞೇಯವೇ ಚಿನ್ಮಯಲಿಂಗ,
ಜ್ಞಾನ ಜ್ಞೇಯ ಸಂಪುಟದಿಂದ
ಶರಣನೆನಿಸಿಕೊಂಡ ಜಂಗಮದ ಅಂತರಂಗದಲ್ಲಿಯೂ ನೀನೇ,

ಬಹಿರಂಗದಲ್ಲಿಯೂ ನೀನೇ,
ಎಂತು ನೋಡಿದಡೆ ಶರಣರ ಕಣ್ಣ ಮೊದಲಲ್ಲಿಯೂ ನೀನೇ,
ಶಿವಜ್ಞಾನಸಂಪನ್ನನಾದ ಶರಣಂಗೆ ಆಹ್ವಾನವಿಲ್ಲ, ವಿಸರ್ಜನೆ ಎಂಬುದಿಲ್ಲ.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೨೮॥

೧೩೮೮

ಜ್ಞಾನ ಸದ್ಭಕ್ತಿ ಸನ್ನಿಹಿತವಾಗಿ, ಲಿಂಗ ಮುಂತಾಗಿ ಮಾಡಿದ ಕ್ರೀ ಲಿಂಗಕ್ರೀ.
ಧ್ಯಾನ ಪೂಜೆ ಭಕ್ತಿಯರ್ಪಿತ ಪ್ರಸಾದ ಮುಕ್ತಿ– ಇವೆಲ್ಲವು ತನ್ನೊಳಗೆ,
ಅಜ್ಞಾನ ಅಭಕ್ತಿ ಮರವೆ ಮುಂತಾದ ಕ್ರೀ ಅಂಗಕ್ರೀ, ಅದುಹೊರಗು.
ಇದು ಕಾರಣ, ಜ್ಞಾನ ಸದ್ಭಕ್ತಿ ಸನ್ನಿಹಿತವಾದುದೆ ಮುಕ್ತಿ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೨೯॥

೧೩೮೯

ಜ್ಯೋತಿ ಕರ್ಪುರದ ಸಂಗದಿಂದ ಜ್ಯೋತಿಯಪ್ಪಂತೆ,
ಅಪ್ಪುವಿನ ಸಂಗದಿಂದ ಉಪ್ಪುವಪ್ಪುವಪ್ಪಂತೆ,
ಶ್ರೀಗುರುವಿನ ಸಂಗವ ಶಿಷ್ಯಮಾಡಿ ಶ್ರೀಗುರುವಪ್ಪುದು ತಪ್ಪದು.
ಶಿವನಾಣೆ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೩೦॥

೧೩೯೦

ತಂದೆ–ತಾಯಿ ಸಂಯೋಗಸಂಭೂತನಲ್ಲದವನು,
ಶ್ವೇತ, ಪೀತ, ಕಪೋತ, ಹರೀತ, ಕೃಷ್ಣ
ಮಾಂಜಿಷ್ಟವೆಂಬ ಷಡುವರ್ಣರಹಿತನು,
ಆದಿಮಧ್ಯಾವಸಾನಂಗಳಿಲ್ಲದ ಸ್ವತಂತ್ರಮಹಿಮನು,
ವೇದವಿಂತುಂಟೆಂದು ರೂಹಿಸಬಾರದವನು,
ನಾ ಬಲ್ಲೆನೆಂಬ ಹಿರಿಯರ ಒಗ್ಗೆಗೂ ಮಿಕ್ಕಿಪ್ಪ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೩೧॥

೧೩೯೧

ತತ್ ಪದ ಲಿಂಗವೆಂದರುಹಿ,
ತ್ವಂ ಪದ ಅಂಗವೆಂದರುಹಿ,
ಅಸಿ ಪದ ಪ್ರಾಣವೆಂದರುಹಿ,
ಅಂಗವೇ ಲಿಂಗ, ಲಿಂಗವೇ ಪ್ರಾಣವೆಂದು
ಶ್ರೀಗುರು ಇಷ್ಟಲಿಂಗವ ಕೊಟ್ಟು, ದೃಷ್ಟಲಿಂಗವ ತೋರಿದ ಬಳಿಕ

"ತತ್ತ್ವಮಸಿ" ಪದ ನಿಮ್ಮ ಶರಣರು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೩೨॥

೧೩೩

ತನ್ನ ತಾನರಿಹವೇ ಪರಮಾತ್ಮಯೋಗ,
ತನ್ನ ತಾ ಮರಹವೇ ಮಾಯಾಸಂಬಂಧ.
ಅಂತರಂಗ ಬಹಿರಂಗ ಪರಮಾಕಾಶಮಧ್ಯದಲ್ಲಿ
ಪರಮಾತ್ಮನು ಪರಬ್ರಹ್ಮಸ್ವರೂಪನು,
ನಿತ್ಯ, ನಿರಂಜನ, ಉಪಮಾತೀತ ನಿಷ್ಪತಿ, ಕೇವಲ ನಿಷ್ಕಲಸ್ವರೂಪನು.
ಭ್ರೂಮಧ್ಯದಲ್ಲಿ ಪರಮಾತ್ಮನೇ ಅಂತರಾತ್ಮನೆನಿಸಿ ಸಕಲ ನಿಷ್ಕಲನಾಗಿಪ್ಪ.
ಹೃದಯಸ್ಥಾನದಲ್ಲಿ ಆ ಪರಮಾತ್ಮನೇ ಜೀವಾತ್ಮನಾಗಿ ಕೇವಲ ಸಕಲನಾಗಿಪ್ಪ.
ಬ್ರಹ್ಮರಂಧ್ರಸ್ಥಾನದಲ್ಲಿ ನಿಷ್ಕಳಗುರುಮೂರ್ತಿಲಿಂಗ
ಭ್ರೂಮಧ್ಯದಲ್ಲಿ ಸಕಲನಿಷ್ಕಲ ಪರಂಜ್ಯೋತಿರ್ಲಿಂಗ,
ಹೃದಯಸ್ಥಾನದಲ್ಲಿ ಕೇವಲ ಸಕಲ ಜಂಗಮಲಿಂಗ
ಇಂತು ಪರಮಾತ್ಮನೇ ಪರಬ್ರಹ್ಮ,
ಪರಮಾತ್ಮನೇ ಅಂತರಾತ್ಮ, ಪರಮಾತ್ಮನೇ ಜೀವಾತ್ಮ.
ಬಹಿರಂಗದಲ್ಲಿ ಪರಮಾತ್ಮನೇ ಗುರುಲಿಂಗ,
ಪರಮಾತ್ಮನೇ ಶಿವಲಿಂಗ ಪರಮಾತ್ಮನೇ ಜಂಗಮಲಿಂಗ.
ಇಂತು, ಪರಮಾತ್ಮನೇ ಪರಬ್ರಹ್ಮ, ಪರಮಾತ್ಮನೇ ಸರ್ವಾತ್ಮ,
ಪರಮಾತ್ಮನೇ ಸರ್ವಗತ, ಪರಮಾತ್ಮನೇ ಆತ್ಮಗತ.
ಇದು ಕಾರಣ,
ಪರಮಾತ್ಮನೇ ಅಂತರಂಗ, ಬಹಿರಂಗಭರಿತ ಪ್ರಾಣಲಿಂಗ.
ಇಂತು ಅರಿವುದೇ ಪರಮಾತ್ಮಯೋಗ, ಮರವೇ ಮಾಯಾಸಂಗ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೩೩॥

೧೩೪

ತನು ತನ್ನದಾದಡೆ, ದಾಸೋಹಕ್ಕೆ ಕೊರತೆಯಿಲ್ಲ,
ದಾಸೋಹ ಸಂಪೂರ್ಣ, ದಾಸೋಹವೇ ಮುಕ್ತಿ.
ಮನ ತನ್ನದಾದಡೆ, ಜ್ಞಾನಕ್ಕೆ ಕೊರತೆಯಿಲ್ಲ,
ಜ್ಞಾನ ಸಂಪೂರ್ಣ, ಆ ಜ್ಞಾನವೇ ಮುಕ್ತಿ.
ಧನ ತನ್ನದಾದಡೆ, ಭಕ್ತಿಗೆ ಕೊರತೆಯಿಲ್ಲ,
ಭಕ್ತಿ ಸಂಪೂರ್ಣ, ಭಕ್ತಿಯಲ್ಲಿ ಮುಕ್ತಿ.
ತನುಮನಧನವೊಂದಾಗಿ ತನ್ನದಾದಡೆ

ಗುರುಲಿಂಗಜಂಗಮವೊಂದೆಯಾಗಿ ತಾನಿಪ್ಪನು
ಬೇರೆ ಮುಕ್ತಿ ಎಂತಪ್ಪುದಯ್ಯಾ?
ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ॥೧೨೪॥

೧೩೯೪
ತನು ಮನ ಶುದ್ಧವಾದಡೆ ಸ್ವಲ್ಪದ್ರವ್ಯ ಘನತರವಾಯಿತ್ತು ನೋಡಿರೆ,
ಮೋಳಿಗೆಯ ಮಾರತಂದೆಗೆ, ನುಲಿಯ ಚಂದಯ್ಯಂಗೆ,
ಆಯ್ದಕ್ಕಿಯ ಮಾರಣ್ಣಗಳಿಗೆ.
ತನು ಮನ ಶುದ್ಧವಲ್ಲದಡೆ ಬಹಳತರ ಮಹದೈಶ್ವರ್ಯ ಸ್ವಲ್ಪವಾಗಿ ಕರಗಿ
ಕೆಟ್ಟು ಹೋಗದೆ ರಾವಣಂಗೆ? ಇಂಗಿ ಹೋಗದೆ ದಕ್ಷಂಗೆ?
ಉರಿದು ಉರಿದು ಹೋಗದೆ ತ್ರಿಪುರದಾನವರಿಗೆ?
ಇದನರಿತು ತನು ಮನ ಶುದ್ಧವಾಗಲು
ತೃಣ ಮಹಾಮೇರುಪರ್ವತವಪ್ಪುದಯ್ಯಾ.
ಇಹದಲೂ ಮಹಾಗ್ರಾಸ, ಪರದಲೂ ಮಹಾಮುಕ್ತಿ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೨೫॥

೧೩೯೫
ತಾನಾರೆಂದರಿವುದು ಭಕ್ತಿ. ಭಕ್ತಿಯೆಂಬುದು ಹಿಂದೋ ಮುಂದೋ?
ಗುರುಲಿಂಗ ಜಂಗಮವೆಂದರಿಯದೆ ಮಾಡುವ ಭಕ್ತಿ
ಅದೇ ಅನಾಚಾರ, ಅವರು ಪ್ರಸಾದಕ್ಕೆ ದೂರ.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ,
ನಿಮ್ಮ ಶರಣರಿಗಲ್ಲದಳವಡದು. ॥೧೨೬॥

೧೩೯೬
'ತಾನು ಸಾವ ಕನಸ ಕಂಡಡೆ ಎದ್ದು ಕುಳ್ಳಿರಿ' ಎಂಬ ಲೋಕದ
ನಾಣ್ನುಡಿ ದಿಟ ಲೇಸು.
ಸಾಯಬಹುದೆ ಸತಿಯ ಬಿಟ್ಟು, ಸುತರ ಬಿಟ್ಟು,
ಸಕಲಭೋಗಾದಿ ಕ್ರೀಗಳಂ ಬಿಟ್ಟು?
ಇನ್ನು ದಿಟ ದಿಟ, ಕೃತಯುಗ ತ್ರೇತಾಯುಗ ದ್ವಾಪರಯುಗದಲ್ಲಿ
ಹರಿಶ್ಚಂದ್ರ, ರಾಮ, ರಾವಣಾದಿಗಳು ಸತ್ತರು.
ಕಲಿಯುಗದಲ್ಲಿ ಅನಂತರು ಸತ್ತರು. ನಿನ್ನ ಪಿತೃಪಿತಾಮಹರೂ ಸತ್ತರು.
ನಿನ್ನ ಜೇಷ್ಠಕನಿಷ್ಠರುಗಳೂ ಸತ್ತರು ಕಾಣಾ.
ಹೀಗೆ ಕಂಡು ಕೇಳಿಯೂ ಮರುಳು ಮಾನವಾ,
ಸಾವು ದಿಟವೆಂದರಿ, ಸಂದೇಹ ಬೇಡ.

ಸಾಯಲ್ಕೆ ಮುನ್ನ ಧನ ಕೆಡದ ಹಾಗೆ ಸತ್ಪಾತ್ರಕ್ಕೆ ಮಾಡಿ,
ಮನ ಕೆಡದ ಹಾಗೆ ಶಿವನನ್ನೇ ಧ್ಯಾನಿಸಿ,
ತನು ಕೆಡದ ಹಾಗೆ ಶಿವನನ್ನೇ ಪೂಜಿಸು.
'ಬಾಲಂ ವೃದ್ಧಂ ಮೃತಂ ದೃಷ್ಟ್ವಾ ಮೃತಂ ವಿಷ್ಣ್ವಾದಿದೈವತಂ
ಅಹಂ ಮೃತೋ ನ ಸಂದೇಹೋ ಶೀಘ್ರಂ ತು ಶಿವಪೂಜನಂ'
ಎಂಬುದನರಿದು, ಮರೆಯಬೇಡ.
ಹೆಣ್ಣ ನಚ್ಚಿ, ಅಶುಭವ ಮಚ್ಚಿ, ಮರೆಯಬೇಡ, ಅವಳು ನಿನ್ನ ನಂಬಳು.
ನೀನು ತನು ಮನ ಧನವನಿತ್ತಡೆಯೂ
ಪರಪುರುಷರ ನೆನೆವುದ ಮಾಣಳು. ಅದನು ನೀನೇ ಬಲ್ಲೆ.
ಹೊನ್ನ ನಚ್ಚಿ ಕೆಡದಿರು
ಸತಿಸುತದಾಯಾದ್ಯರಿಂದಂ ರಾಜಾದಿಗಳಿಂದಂ ಕೆಡುವುದು.
ಅಲ್ಲಿ ನೀನು ಸುಯಿಧಾನದಿಂ ರಕ್ಷಿಸಲು
ಧರ್ಮಹೀನನ ಸಾರೆ, ನಿಲ್ಲೆನೆಂದು ನೆಲದಲಡಗಿ ಹೋಗುತ್ತಲಿದೆ,
ನೋಡ ನೋಡಲು,
ಹೋಗದ ಮುನ್ನ ಅರಿವನೆ ಅರಿದು, ಮರೆವನೆ ಮರೆದು
ಮಾಡಿರಯ್ಯಾ, ಶಿವಮಹೇಶ್ವರರಿಗೆ ತನು ಮನ ಧನವುಳ್ಳಲ್ಲಿ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೩೭॥

೧೫೩೭

ತೃಣಾದಿ ವಿಷ್ಣ್ವಂತ್ಯವಾಗಿ ಸರ್ವರ
ಉತ್ಪತ್ತಿಸ್ಥಿತಿಲಯಂಗಳೂ ಶಿವಾಧೀನ.
ಇದನರಿದು ಸುಖಿಯಾಗಿ, ಲಿಂಗವಂತನು
ಲಿಂಗಾರ್ಚನೆಯ ಮಾಡಿ, ಪರಿಣಾಮಿಯಾದಡೆ ಇಹಪರಸಿದ್ಧಿ, ಸದ್ಯೋನ್ಮುಕ್ತನು.
ಈ ವಿಚಾರಜ್ಞಾನವರಿಯದೆ ಮನಭ್ರಮಿಸಿ ಬಳಲಿದಡೆ ಕಾರ್ಯವಿಲ್ಲ.
ಲಿಂಗವು ಮೆಚ್ಚನು, ಲಿಂಗವಂತರೆಂತೂ ಮೆಚ್ಚರು.
ಇದನರಿದು, ಲಿಂಗವ ನಂಬಿ ಬದುಕಿರಯ್ಯಾ ಕೆಡಬೇಡ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೩೮॥

೧೫೩೮

ದಿಟದಿಟ ಈ ಬಂದುತ್ತೆ, ಈ ಬಂದುತ್ತೆ ಸಾವು, ಎನಗಿನ್ನೆಂತಯ್ಯಾ?
ಸ್ಥಿರಾಯುಗಳೆನಿಪ ದೇವಜಾತಿಗಳೆಲ್ಲ ಸತ್ತುದ ಕೇಳುತ್ತಿದ್ದೇನೆ.
ಮತ್ತೆಯೂ ಅರಿದು ಅಧರ್ಮವನೆ ಮಾಡುವೆನು.
ಧರ್ಮವ ಮಾಡೆನು, ದುಷ್ಕರ್ಮಿ ನಾನು, ಎನಗೆಂತಯ್ಯಾ?

ಸುಧರ್ಮಿ ನೀನು, ಭಕ್ತಿಜ್ಞಾನವೈರಾಗ್ಯವ ಬೇಗ ಬೇಗ ಇತ್ತು ಸಲಹಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೩೯॥

೧೪೦

ದೇವ ದಾನವ ಮಾನವ ಋಷಿಜಂಗಳೆಲ್ಲರು
ಮಹಾಲಿಂಗವ ಕಂಡೆಹೆವೆಂದು
ಅನೇಕಕಾಲಂಗಳಲ್ಲಿ ತಪವ ಮಾಡಿ, ಧ್ಯಾನವ ಮಾಡಿ,
ಜಪವ ಮಾಡಿಯೂ ಕಾಣಲರಿಯದೆ ಬಳಲುತ್ತೈದಾರೆ.
ಅವರಲ್ಲಿ ಸಮರ್ಥಪುರುಷರು ಕಂಡಡೆಯೂ ಕಂಡರೇನು ಫಲ?
ಲಿಂಗಕ್ಕೆ ಒಲಿಯರು, ಲಿಂಗವನೊಲಿಸಿಕೊಳಲರಿಯರು,
ಕೂಡಲರಿಯರು.
ಅಲ್ಪಭೋಗಂಗಳನಿಚ್ಛೈಸಿ, ಆ ಭೋಗಪದವ ಪಡೆದು,
ಪುಣ್ಯಪಾಪಂಗಳ ಬಲೆಯೊಳು ಬೀಳುತ್ತಿಹರು.
ಅವರುಗಳ ಪರಿಯಿಲ್ಲ, ಎನಗೆ.
ಶಿವ ಶಿವಾ ಮಹಾದೇವ, ಮಹಾಲಿಂಗನ ಕರುಣವನು ಏನೆಂದುಪಮಿಸಬಹುದು!
ಶ್ರೀಗುರುವಾಗಿ ಕರುಣಿಸಿ ಶ್ರೀಹಸ್ತದಿಂದೆನಗೆ ಜನನವ ಮಾಡಿ
ಮಾತಾಪಿತನು ತಾನೆಯಾದನು.
ಮಹಾದೀಕ್ಷೆಯ ಮಾಡಿ ಶ್ರೀಗುರು ತಾನೆಯಾದನು.
ಮಹಾಮಂತ್ರೋಪದೇಶವ ಮಾಡಿ ಮಂತ್ರರೂಪಾಗಿ
ಕರ್ಣದಲ್ಲಿ ಭರಿತವಾದನು,
ಪ್ರಸಾದರೂಪಾಗಿ ಜಿಹ್ವೆಯಲ್ಲಿ ಭರಿತವಾದನು,
ಮಹಾವಿಭೂತಿಯಾಗಿ ಭಾಳದಲ್ಲಿ ಭರಿತವಾದನು,
ಸರ್ವಾಂಗಭರಿತವಾದನು.
ಮತ್ತೆ ಮತ್ತೆ ಮಹಾಚೋದ್ಯ,
ಶ್ರೀಗುರು ಲಿಂಗಮೂರ್ತಿಯನು ಪ್ರಾಣವನೇಕೀಭವಿಸಿ
ಪ್ರಾಣಲಿಂಗವಾದನಾಗಿ
ಅಂಗದ ಮೇಲೆ ಬಿಜಯಂಗೈದು ಅಂಗಲಿಂಗವಾದನು.
ಮಹಾಲಿಂಗವಾಗಿ ಕರಸ್ಥಲದಲ್ಲಿ ನಿರಂತರ ಪೂಜೆಗೊಳ್ಳುತ್ತಿದ್ದನು,
ಇದು ವಿದಿತ. ಸುಜ್ಞಾನವನೂ ಪ್ರಸಾದವನೂ ಕರುಣಿಸಲೆಂದು
ಶರಣಭರಿತನಾಗಿ ಬಂದು ಕರುಣಿಸಿದನು. ಇಂತು,
ಶ್ರೀಗುರು ಲಿಂಗ ಜಂಗಮರೂಪಾಗಿ ಕರುಣಿಸಿ, ಪ್ರಸನ್ನನಾಗಿ
ಮಹಾಪ್ರಸಾದವ ಕರುಣಿಸಿ, ಪ್ರಸಾದರೂಪವಾಗಿ ಸಲಹಿದನು.

ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ
ಚತುರ್ವಿಧಪದಕ್ಕೆ ಘನಪದದಾಸೋಹದಲ್ಲಿರಿಸಿದನು.
ಸರ್ವಪದ ಮಹಾಪದಕ್ಕೆ ವಿಶೇಷ ಲಿಂಗಪದದಲ್ಲಿರಿಸಿದನು.
ಶಿವ ಶಿವಾ ಮಹಾಪದವ ನಾನೇನೆಂದುಪಮಿಸಲರಿಯೆ.
ಸದ್ಗುರುಕೃಪೆ, ವಾಙ್ಮನೋತೀತ.
ಮಹಾಘನಪರಿಣಾಮಸುಖವನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ ತಾನೆ ಬಲ್ಲ. ॥೧೪೦॥

೧೪೦೦
ದೇವನೊಂದೆ ವಸ್ತು, ಮನವೊಂದೆ ವಸ್ತು.
ಸತ್ಯ, ನಿತ್ಯ, ಸಹಜ, ಉತ್ತಮ ವಸ್ತುವೆ ಉತ್ತಮ ವಸ್ತು.
ಈ ಒಂದನೊಂದು ಮೆಚ್ಚಿ ಒಂದಾದಡೆ
ಇಹ ಪರ ಒಂದು, ದ್ವಂದ್ವವೆಂಬುದಿಲ್ಲ.
ಒಂದೆ ಇದು, ಘನಪರಿಣಾಮ ಮುಕ್ತಿಯಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೪೧॥

೧೪೦೧
ದೇವ, ಮಂಗಳಮಜ್ಜನಮಂ ಮಾಡಲು,
ಶಿವಲಿಂಗೋದಕದಿಂ ಪಾದಾರ್ಚನೆಯಂ ಮಾಡಿ,
ಹೊಂಗಳಸದೊಳಗರ್ಘ್ಯಂಗಳಂ ತುಂಬಿ ಮಧುಪರ್ಕಮಂ ಮಾಡಿ,
ದೇವಾಂಗವಸ್ತ್ರಂಗಳನುಡಿಸಿ, ಷೋಡಶಾಭರಣಂಗಳಂ ತೊಡಿಸಿ,
ದೇವಂಗೆ ಗಂಧಾಕ್ಷತೆ ಪುಷ್ಪಂಗಳಿಂ ಪೂಜೆಯ ಮಾಡಿ,
ಅಗರು ಧೂಪಂಗಳಿಂ ಧೂಪಿಸಿ,
ಮಂಗಳಾಚರಣೆ ಆರೋಗಣೆ ವೀಳೆಯವನಳವಡಿಸಿ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಂಗೆ,
ಗೀತವಾದ್ಯನೃತ್ಯವನಾಡಿ ಮೆಚ್ಚಿಸುವ ಗಣಂಗಳಿಗೆ
ನಮೋ ನಮೋ ಎಂಬೆನು. ॥೧೪೨॥

೧೪೦೨
ದೇವರಾರೋಗಣೆಯಂ ಮಾಡಿಸಿ, ಪ್ರಸನ್ನತ್ವಮಂ ಪಡೆದು
ಪ್ರಸಾದಮಂ ಧರಿಸಿ ಮುಕ್ತರಪ್ಪರಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೪೩॥

೧೪೦೩
ದೇಹವೆಂಬ ಮನೆಯಲ್ಲಿ ಮಹಾಲಿಂಗವೆಂಬರಸು
ಮನವೆಂಬ ಪೀಠದ ಮೇಲೆ ಮೂರ್ತಿಗೊಂಡಿರಲು,
ಅಂತಃಕರಣವೆಂಬ ಪರಿಚಾರಕರುಗಳ ಕೈಯಿಂದ
ಪಂಚೇಂದ್ರಿಯಗಳೆಂಬ ಪರಿಯಾಣದಲ್ಲಿ
ಶಬ್ದ ಸ್ಪರ್ಶ ರೂಪ ರಸ ಗಂಧಂಗಳೆಂಬ
ಪದಾರ್ಥಂಗಳನೆಡೆಮಾಡಿಸಿಕೊಂಡು ಸವಿವುತ್ತಿರಲು
ಆನಂದವೆ ಮಹಾಪ್ರಸಾದವಾಗಿ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು
ಸದಾ ಸನ್ನಿಹಿತ ಕಾಣಿರೆ. ॥೧೪೪॥

೧೪೦೪
ಧರ್ಮದೊಳಗೆ ಶಿವಧರ್ಮವೇ ಧರ್ಮವೆಂದರಿದೆನಾಗಿ,
ಧರ್ಮ ಸಾಧ್ಯವಾಯಿತ್ತೆನಗೆ.
ಗುರುಲಿಂಗಜಂಗಮವ ಪಡೆದೆನಾಗಿ, ಅರ್ಥ ಸಾಧ್ಯವಾಯಿತ್ತೆನಗೆ.
ಶರಣಸತಿ ಲಿಂಗಪತಿ ಎಂದರಿದೆನಾಗಿ, ಕಾಮ ಸಾಧ್ಯವಾಯಿತ್ತೆನಗೆ.
ಮಹಾಪ್ರಸಾದವನಿಂಬುಗೊಂಡು ಧರಿಸಿದೆನಾಗಿ,
ಮೋಕ್ಷ ಸಾಧ್ಯವಾಯಿತ್ತೆನಗೆ.
ಇಂತೀ ಧರ್ಮಾರ್ಥಕಾಮಮೋಕ್ಷಂಗಳೆಂಬ
ಚತುರ್ವಿಧಫಲವೆನಗಾಯಿತ್ತು, ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ . ॥೧೪೫॥

೧೪೦೫
"ನ ಗುರೋರಧಿಕಂ, ನ ಗುರೋರಧಿಕಂ,
ನ ಗುರೋರಧಿಕಂ, ನ ಗುರೋರಧಿಕಂ,
ವಿದಿತಂ ವಿದಿತಂ ವಿದಿತಂ ವಿದಿತಂ ಶಿವಶಾಸನತಃ"
ಎಂದು[ದು] ವಚನ.
ಶ್ರೀಗುರು ಮರ್ತ್ಯಕ್ಕೆ ಬಂದು
ಅಷ್ಟಾದಶಜಾತಿಗಳೊಳಗಿದ್ದರೇನು ಮರ್ತ್ಯನೆ? ಅಲ್ಲ. ಸಾಕ್ಷಿ:
'ಗುರುದೇವೋ ಮಹಾದೇವೋ ಗುರುದೇವಸ್ಸದಾಶಿವಃ
ಗುರುದೇವಾತ್ಪರಂ ನಾಸ್ತಿ ತಸ್ಮೈ ಶ್ರೀಗುರವೇ ನಮಃ' ಎಂದುದಾಗಿ,
'ಲಲಾಟಲೋಚನೇ ಚಾಂದ್ರೀ ಕಲಾಮಪಿ ಚ ದೋರ್ದ್ವಯಂ
ಅಂತರ್ನಿಧಾಯ ವರ್ತೇ[S]ಹಂ ಗುರುರೂಪೋ ಮಹೇಶ್ವರಃ'
ಎಂದುದಾಗಿ, ಶಿವನು ಗುರುರೂಪಾಗಿ ವರ್ತಿಸುತ್ತಿರ್ದನು.
'ಪರಶಿವೋ ಗುರುಮೂರ್ತಿಃ ಶಿಷ್ಯದೀಕ್ಷಾದಿಕಾರಣಾತ್
ಶಿಷ್ಯಾತೀತಂ ಮಹಾಚೋದ್ಯಂ ಚೋದ್ಯರೂಪಾಯ ವೈ ನಮಃ' ಎಂದುದಾಗಿ,

ಶಿಷ್ಯಂಗೆ ದೀಕ್ಷೆಯ ಮಾಡಿ ಕರುಣಿಸ ಬಂದ
ಮಹಾಕರುಣಾಮೂರ್ತಿ ಸದಾಶಿವ ತಾನೆ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. ॥೧೪೬॥

೧೪೦೬

'ನ ಭೂಮಿ ನರವಿಂದಾಪೋನವಹ್ನಿ ಪ್ರಾಣಾನಿಲಂಗನನೋನ ಚ ವಿದ್ಯತೇ
ನಯಾತ್ಮಧ್ಯಕ್ಷಾರಂ ಪರಮಾಕಾಶಮದೇ ಭಾತೀ ತತ್ವರಂ ಬ್ರಹ್ಮಾಂ'
ಎಂದು ಶ್ರುತಿ ಸಾರುತ್ತಿರಲು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನೊಬ್ಬನೆ ದೇವಧ್ಯಾಯನು. ॥೧೪೭॥

೧೪೦೭

ನಾನಾ ಪ್ರಯತ್ನದಿಂದ ಹೊನ್ನನಾರ್ಜಿಸುವಂತೆ,
ನಾನಾ ಪ್ರಯತ್ನದಿಂದ ಹೊನ್ನ ಸುರಕ್ಷಿತವ ಮಾಡುವಂತೆ,
ನಾನಾ ಪ್ರಯತ್ನದಿಂದ ಬೇಡಿದವರಿಗೆ ಕೊಡದೆ
ಲೋಭವ ಮಾಡಿ ಸ್ನೇಹಿಸುವಂತೆ,
ನಾನಾ ವಿಧದಿಂದ ವಿಚಾರಿಸಿ ವಿಚಾರಿಸಲು ಪ್ರಾಣವೇ ಹೊನ್ನೆಂಬಂತೆ,
ನಾನಾ ಪರಿಯಲು ಮನ ಬುದ್ಧಿ ಚಿತ್ತಹಂಕಾರಂಗಳು
ಪಂಚೇಂದ್ರಿಯಂಗಳು ಪ್ರಾಣವನು ಅವಗ್ರಹಿಸಿಕೊಂಡಿಪ್ಪಂತೆ
ಶಿವಲಿಂಗವನು ಅವಗ್ರಹಿಸಿಕೊಂಡಿರಬೇಕು. ಏಕೆ?
ಆ ಹೊನ್ನೇ ಶಿವನಾದ ಕಾರಣ,
'ಓಂ ನಮೋ ಹಿರಣ್ಯಬಾಹವೇ ಸೇನಾನ್ಯೇ
ದಿಶಾಂ ಚ ಪತಯೇ ನಮೋ ನಮೋ ವೃಕ್ಷೇಭ್ಯೋ
ಹರಿಕೇಶೇಭ್ಯಃ ಪಶೂನಾಂ ಪತಯೇ ನಮಃ'
ಎಂದುದಾಗಿ ಶಿವನೇ ಹೊನ್ನು ಕಾಣಿರೋ.
ಶಿವಶಿವಾ ನಾನಾ ಪ್ರಯತ್ನದಿಂದ ಕುಲವುಳ್ಳವರು
ಅತ್ಯಂತ ಯೌವನೆಯಪ್ಪ ಹೆಣ್ಣಿಂಗೆ ಪ್ರಾಣಕ್ಕೆ ಪ್ರಾಣವಪ್ಪಂತೆ,
ಆ ಹೆಣ್ಣಿಂಗೆ ಅಂತಃಕರಣ ಚತುಷ್ಟಯಂಗಳು ಸ್ನೇಹಿಸುವಂತೆ
ಆ ಹೆಣ್ಣು ಪ್ರಾಣವಾಗಿಪ್ಪಂತೆ, ಆ ಲಿಂಗವೇ ಪ್ರಾಣವಾಗಿರಬೇಕು.
ಅದಕ್ಕೆ ಹೆಣ್ಣೇ ಶಿವನಾದ ಕಾರಣ
'ಶಕ್ತ್ಯಾಧಾರೋ ಮಹಾದೇವಃ ಶಕ್ತಿರೂಪಾಯ ವೈ ನಮಃ
ಶಕ್ತಿಃ ಕರ್ಮ ಚ ಕರ್ತಾ ಚ ಮುಕ್ತಿಶಕ್ತ್ಯೈ ನಮೋ ನಮಃ'
ಎಂದುದಾಗಿ–
ಆ ಹೆಣ್ಣು ತಾನೇ ಶಿವನು ಕಾಣಿರೋ.
ನಾನಾ ಪ್ರಯತ್ನದಿಂದ ಮಣ್ಣನಾರ್ಜಿಸುವಂತೆ,

ಆ ಭೂಮಿಯ ಆಗುಚಾಗಿಗೆ
ಅರ್ಥಪ್ರಾಣಾಭಿಮಾನವನಿಕ್ಕಿ ಆ ಭೂಮಿಯ ರಕ್ಷಿಸಿ
ಆ ಭೂಮಿಯ ಸರ್ವಭೋಗೋಪಭೋಗಂಗಳನು
ಭೋಗಿಸಿ ಸುಖಿಸುವಂತೆ, ಶಿವಲಿಂಗದಿಂದ ಭೋಗಿಸಬೇಕು.
ಅದೇಕೆಂದಡೆ– ಭೂಮಿಯೇ ಶಿವನಾದ ಕಾರಣ,
'ಓಂ ಯಜ್ಞಸ್ಯ ರುದ್ರಸ್ಯ ಚಿತ್ಪೃಥಿವ್ಯಾಭೂರ್ಭುವಃ ಸ್ವಃ
ಶಿವಂ ಶಿವೋ ಜನಯತಿ' ಎಂದುದಾಗಿ
ಭೂಮಿಯೇ ಶಿವನು ಕಾಣಿರೋ.
ಸರ್ವಾಧಾರ ಮಹಾದೇವ. ಇದು ಕಾರಣ,
ಹೊನ್ನು ಹೆಣ್ಣು ಮಣ್ಣು ತ್ರಿವಿಧವು ಶಿವನು ಕಾಣಿರೋ.
ಈ ತ್ರಿವಿಧದ ಮರೆಯಲ್ಲಿ ಶಿವನಿಪ್ಪನು ಕಾಣಿರೋ.
ಇದು ಕಾರಣ, ಈ ತ್ರಿವಿಧಕ್ಕೆ ಮಾಡುವ ಸ್ನೇಹ,
ಇಂತೀ ತ್ರಿವಿಧದಲ್ಲಿ ಮಾಡುವ ಲೋಭ,
ಇಂತೀ ತ್ರಿವಿಧಕ್ಕೆ ಮಾಡುವ ತಾತ್ಪರ್ಯವ ಶಿವಲಿಂಗಕ್ಕೆ ಮಾಡಿದಡೆ,
ಶಿವನಲ್ಲಿ ಸಾಯುಜ್ಯನಾಗಿ ಸರ್ವಭೋಗೋಪಭೋಗವ ಭೋಗಿಸಿ
ಪರಮಪರಿಣಾಮ ಸುಖಸ್ವರೂಪನಾಗಿಪ್ಪನಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೪೪॥

೧೪೦೮

ನಾನಾವಿಧದ ಪೂಜೆಗಳ ಪೂಜಿಸಿದವರೆಲ್ಲಾ ಭಕ್ತರೆ, ಹೇಳಿರಣ್ಣಾ.
ವಿಷ್ಣು ಮೊದಲಾದ ದೇವಜಾತಿಗಳು
ತಾರಕ ರಾವಣಾದಿ ದೇವ ದಾನವ ಮಾನವರನೇಕರು
ಮಹಾದೇವನ ಪೂಜಿಸಿ ಫಲದಾಯಕರಾಗಿ ಪದಂಗಳ ಪಡೆದರು.
ಈ ಫಲದಾಯಕರೆಲ್ಲರೂ ಸದ್ಭಕ್ತರಪ್ಪರೆ? ಅಲ್ಲ,
ಅವರೆಲ್ಲರೂ ಉಪಾಧಿಕರು.
ಪರಧನ ಪರಸ್ತ್ರೀ ಪರದೈವವ ಬಿಟ್ಟು,
ಪಂಚೇಂದ್ರಿಯ ಷಡ್ವರ್ಗಂಗಳ ಬಿಟ್ಟು ನಿರುಪಾಧಿಕರಾಗಿ
ನಿರಂತರ ಪೂಜಿಸಿದಡೆ, ಆತನೇ ಸದ್ಭಕ್ತನು,
ಆತನೇ ಮಹಾಮಹಿಮನು, ಆತನೇ ಮಹಾದೇವನಯ್ಯಾ.
ಆ ಭಕ್ತಂಗೆ ಭಕ್ತದೇಹಿಕ ದೇವನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೪೯॥

೧೪೦೯
ನಾನು ಕಾಮಿಸುತ್ತಿಪ್ಪ ವಸ್ತುವಿನಲ್ಲಿ
ಸಾಲೋಕ್ಯವಿದೆ, ಸಾಮೀಪ್ಯವಿದೆ, ಸಾರೂಪ್ಯವಿದೆ, ಸಾಯುಜ್ಯವಿದೆ.
ಧರ್ಮವಿದೆ, ಅರ್ಥವಿದೆ, ಕಾಮವಿದೆ, ಮೋಕ್ಷವಿದೆ.
ನಾನರಸುವ ಬಯಕೆ ಎಲ್ಲವೂ ಇದೆ.
ಎನ್ನ ಧ್ಯಾನ ಜಪತಪದಿಂದ ಸಾಧ್ಯವಪ್ಪ ಸಿದ್ಧಿ ಎಲ್ಲವೂ ಇದೆ ನೋಡಾ.
ಶ್ರೀಗುರುವಿನ ಕಾರುಣ್ಯದಿಂದ ಮಹಾವಸ್ತು ಕರಸ್ಥಲಕ್ಕೆ ಬಂದ ಬಳಿಕ
ಸರ್ವಸುಖಂಗಳೆಲ್ಲವೂ ಇವೆ, ಇವೆ ನೋಡಾ.
ಇನ್ನು ಎನ್ನ ಬಯಲ ಭ್ರಮೆಯೊಳಗೆ ಹೊಗಿಸದಿರಯ್ಯ
ನಿಮ್ಮ ಬೇಡಿಕೊಂಬೆನು, ನಿಮಗೆ ಎನ್ನಾಣೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೫೦॥

೧೪೧೦
ನಾನೊಂದು ಮಾಡೆಹೆನೆಂಬ ಪ್ರತಿಜ್ಞೆ ಎನಗೊಡ್ಡಿ,
ನೀನದ ಕೆಡಿಸಿಹೆನೆಂಬ ಸ್ವತಂತ್ರಿಕೆಯ ನೀ ತಾಳುವೆ.
ನಾ ಮುನ್ನ ಎಲ್ಲಿಯವನು ನೀ ಮಾಡದನ್ನಕ್ಕರ?
ಆನೆಂಬ ಹರಿಬ್ರಹ್ಮಾದಿಗಳ ಚೈತನ್ಯಸ್ವರೂಪ ನೀನವಧಾರು ದೇವಾ,
ಇಚ್ಛಾ ಜ್ಞಾನ ಕ್ರಿಯಾಶಕ್ತಿ ನಿಮ್ಮಿಚ್ಛೆ, ಎನ್ನಿಚ್ಛೆಯೆ?
ಮಾಡಿಕೊಂಡ ಮದುವೆಗೆ ಹಾಡುತ್ತ ಹಂದರವನಿಕ್ಕೆಂಬ
ನಾಡಗಾದೆಯ ಮಾತು ನಿಮಗಾಯಿತ್ತು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೫೧॥

೧೪೧೧
ನಿತ್ಯನಿರಂಜನಪರಂಜ್ಯೋತಿಲಿಂಗವು
ಪ್ರತ್ಯಕ್ಷವಾಗಿ ಎನ್ನ ಕರಸ್ಥಲಕ್ಕೆ ಬಂದಿರಲು
ಮತ್ತೊಂದ ನೆನೆದು ಬದುಕಿಹೆನೆಂಬುದು ಅಜ್ಞಾನ ನೋಡಾ.
ಸತ್ಯವು ಸರ್ವಾಂಗಲಿಂಗವೆಂಬುದನರಿಯದೆ
ಮತ್ತೆ ಕಾಯವೆರಸಿ ಕೈಲಾಸಕ್ಕೆ ಹೋದೆಹೆನೆಂಬ ಬಯಕೆ
ಕ್ರಮವಲ್ಲವಯ್ಯಾ.
ಪಂಚಾಮೃತ ಮುಂದಿರಲು ಹಸಿದೆನೆಂದು
ಲೋಗರ ಮನೆಯಲ್ಲಿ ಅನ್ನವ ಬೇಡಿ ಬಯಸುವರೆ?
ಕಣ್ಣಮುಂದೆ ನಿಧಾನವಿರಲು ಬಳಸಲರಿಯದೆ ಬಡತನದಲ್ಲಿಹರೆ?
ಲಿಂಗವಿಲ್ಲದವರು ಮೊದಲಾಗಿ ಲಿಂಗವ ನೆನೆದು ಬದುಕಿಹೆನೆಂಬರು.
ಕಂಡುಕಂಡು ನಂಬದಿಹುದುಚಿತವೆ?ಮುಂಗೈಯ ಕಂಕಣಕ್ಕೆ ಕನ್ನಡಿಬೇಡ.

ಲಿಂಗವು ಅಂಗದೊಳಗಿರಲು
ಲಿಂಗದ ಪರಿಯ ಅನ್ಯರ ಕೈಯಿಂದ ಕೇಳಬೇಡ.
ಇದನರಿದು ಬೇರೆ ಮತ್ತೆ ಅರಸಲು ಬೇಡ
ಕಾಣಿಸೆಂದು ಮನದಲ್ಲಿ ಮರುಗಬೇಡ
ಮುಂದೆ ಜನ್ಮವುಂಟೆಂದು ಮನಸ್ಸಿನಲ್ಲಿ ನೋಯಬೇಡ.
ಇದು ಕಾರಣ, ತನ್ನ ಕರಸ್ಥಲದಲ್ಲಿದ್ದ ವಸ್ತುವ
ತಾನೆಂದರಿದಡೆ ತಾನೆ ಶಿವನು. ಇದು ಸತ್ಯ, ಶಿವಬಲ್ಲ, ಶಿವನಾಣೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೫೨॥

೧೪೧೨

ನಿಮ್ಮ ಶರಣನು ಲಿಂಗಭರಿತನು,
ವಿಚಾರಿಸಿ, ಅರಿದು, ಧ್ಯಾನದಿಂದ ಜಪಿಸಿ, ಆ ಮಹಾವಸ್ತುವನು ಕಂಡು
ಒಲಿದೊಲಿಸಿ, ಕೂಡಿ ಸುಖಿಸಿಹೆನೆಂಬನ್ನೆವರ
ಶ್ರೀಗುರುಸ್ವಾಮಿಯ ಕರುಣಾಮೃತಸಾಗರ ಮೇರೆವರಿದು
ವಿಚಾರಿಸಿ ಶಿವನಾಯಿತ್ತು, ಅರಿವು ಶಿವನಾಯಿತ್ತು;
ಜ್ಞಾತೃ ಜ್ಞಾನ ಜ್ಞೇಯ ಶಿವನಾಯಿತ್ತು, ಜಪಮಂತ್ರ ಶಿವನಾಯಿತ್ತು,
ಜಪಿಸುವ ಜಿಹ್ವೆ ಶಿವನಾಯಿತ್ತು, ಕಂಡೆಹೆನೆಂಬ ಕಣ್ಣು ಶಿವನಾಯಿತ್ತು.
ಈ ಪರಿ ನೋಡ ನೋಡಲು ಮತ್ತೆ ಚೋದ್ಯ
ಪ್ರಾಣಲಿಂಗವಾಗಿ ಸದ್ಗುರು ತಾನೆ ಕೃಪೆಮಾಡಿ ಕರಸ್ಥಲಕ್ಕೆ ಬಿಜಯಂಗೈದು
ಪ್ರಾಣಲಿಂಗವಾದನು, ಕಾಯಲಿಂಗವಾದನು.
ಮನ ಬುದ್ಧಿ ಚಿತ್ತ ಅಹಂಕಾರ ಜ್ಞಾನ ಭಾವವೆಲ್ಲ ಲಿಂಗವಾಯಿತ್ತು.
ಸರ್ವಾಂಗಲಿಂಗವಾಗಿ ಸಲಹಿದನು.
ಶ್ರೀಗುರುಲಿಂಗವು ಒಲಿದೊಲಿಸಿ ಕೂಡುವ ಪರಿ ಎಂತಯ್ಯಾ?
ಒಲಿಸುವ ಪರಿ ದಾಸೋಹ, ಒಲಿದ ಪರಿ ಪ್ರಸಾದ,
ಕೂಟದ ಪರಿ ನಿರ್ವಂಚಕತ್ವ,
ಒಲಿದೊಲಿಸಿ ಕೂಡಿದ ಪರಿ ಪರಿಣಾಮವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೫೩॥

೧೪೧೩

ನಿರಾಳದ ಅಷ್ಟದಳಕಮಲದೊಳಗೆ ನಿರಂಜನ ಚೌಕಮಧ್ಯ ನೋಡಾ.
ಇದರ ಬೀಜಾಕ್ಷರದ ಭೇದವನರಿಯೆ,
ನಿರಂಜನಪ್ರಣವ, ಅವಾಚ್ಯಪ್ರಣವ, ಕಲಾಪ್ರಣವ,
ಆದಿಪ್ರಣವ, ಅನಾದಿಪ್ರಣವ,

ಜ್ಯೋತಿಃಪ್ರಣವ, ಅಖಂಡಜ್ಯೋತಿಃಪ್ರಣವ, ಅಖಂಡಮಹಾಜ್ಯೋತಿಃಪ್ರಣವ,
ಗೋಳಕಾಕಾರಪ್ರಣವ, ಅಖಂಡಗೋಳಕಾಕಾರಪ್ರಣವ,
ಅಖಂಡಮಹಾಗೋಳಕಾಕಾರಪ್ರಣವ,
ಇಂತೀ ನಿರಾಳದ ಅಷ್ಟ ದಳಕಮಲದೊಳಗೆ ನಿರಂಜನ ಚೌಕ ಮಧ್ಯ ನೋಡಾ.
ಇದರ ಬೀಜಾಕ್ಷರದ ಭೇದವನೆನಗೆ ಕರುಣಿಸಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ||೧೫೪||

೧೪೧೪
ನಿರುಪಾಧಿಕನಾಗಿ, ನಿರ್ವಂಚಕತ್ವದಿಂದ ದಾಸೋಹವ ಮಾಡಿ,
ಪರಿಣಾಮದಿಂದ ನಿತ್ಯದಾಸೋಹಿಯೆನಿಸಿದೊಡೆ,
ಆ ದಾಸೋಹಿಯೆ ಸದ್ಭಕ್ತನು, ಆತನೆ ಮಾಹೇಶ್ವರ,
ಆತನೆ ಪ್ರಸಾದಿ, ಆತನೆ ಪ್ರಾಣಲಿಂಗಿ, ಆತನೆ ಶರಣ, ಆತನೆ ಐಕ್ಯ.
ಆತನೆ ಇಹಲೋಕ [ಪರಲೋಕ] ಪೂಜ್ಯನು, ಆತನೆ ಶ್ರೇಷ್ಠ,
ಆತನೆ ವಿದ್ವಾನ್, ಆತನೆ ಸುಜ್ಞಾನಿ,
ಇನಿತಲ್ಲದೆ ಶ್ರೀಗುರುಲಿಂಗಜಂಗಮ ಒಂದೆಯೆಂದು
ಭಾವಿಸದರ್ಚಿಸದ ವಿಚಾರಿ[ಸದ] ದುರ್ಭಾವಿ ಉಪಾಧಿಕನು, ವಂಚಕನು,
ದಾಸೋಹವ ಮಾಡಲರಿಯದಹಂಕಾರಿ, ಅಭಾಸನು, ಅಪೂಜ್ಯನು.
ಭಕ್ತನಲ್ಲ, ಮಾಹೇಶ್ವರನಲ್ಲ, ಪ್ರಸಾದಿಯಲ್ಲ,
ಪ್ರಾಣಲಿಂಗಿಯಲ್ಲ, ಶರಣನಲ್ಲ, ಐಕ್ಯನಲ್ಲ;
ಆತನೆ ಮೂರ್ಖನು, ಆತನೆ ಅಜ್ಞಾನಿ,ಆತನೇತಕ್ಕೆಯೂ ಬಾತೆಯಯ್ಯಾ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ||೧೫೫||

೧೪೧೫
ನಿಕ್ಷೇಪನಿಧಿಯ ಸಾಧ್ಯವ ಮಾಡಲೆಂದು
ಅಂಜನಕ್ಕೆ ಭಸ್ಮವ ಮಾಡಿ, ಕೃಪಾಮೃತದಿಂ ಮರ್ದಿಸಿ
ಅಂಜನವನಿಕ್ಕಿಕೊಂಡು ನಿಧಾನವ ತೆಗೆದುಕೊಂಡು
ಸರ್ವಭೋಗವ ಮಾಡಬೇಕು.
ಆ ಧನವನೆ ಭಸ್ಮವ ಮಾಡಿದ ಬಳಿಕ
ಆ ಅಂಜನವ ಪ್ರಯೋಗಿಸುವ ಪರಿ ಎಂತಯ್ಯಾ?
ಆ ನಿಧಾನವ ಗ್ರಹಿಸಿಕೊಂಡು ಇರ್ದ ಮಹಾಭೂತವು
ನಾಥನನೇ ಬಲಿಯ ಬೇಡಿದಡೆ,
ಆ ನಿಧಾನವ ತಂದು ಭೋಗಿಸುವವರಿನ್ನಾರಯ್ಯಾ?
ಭಕ್ತಿಯನೂ ಪೂಜೆಯನೂ ಮಾಡಿಸಿಕೊಂಡು

ಪ್ರಸಾದವ ಕರುಣಿಸಿ ಮುಕ್ತಿಯ ಕೊಡುವ
ಶ್ರೀಗುರುಲಿಂಗಜಂಗಮವನೂ ಆಜ್ಞೆಯ ಮಾಡಿ
ಆಯಸಂ ಬಡಿಸಿ, ಅವರನಪಹರಿಸಿ
ದ್ರವ್ಯಮಂ ಕೊಂಡು ಅದಾರಿಗೆ ಭಕ್ತಿಯ ಮಾಡುವದು?
ಅದಾರಿಗೆ ಪೂಜಿಸುವದು? ಅದಾರಿಗೆ ಅರ್ಪಿಸುವದು? ಹೇಳಿರೆ.
ಪೂಜೆಗೊಂಬ ಲಿಂಗವ ಅಪೂಜ್ಯವಾಗಿ ಕಂಡಡೆ
ಆ ಮಹಾಪಾಪಿಗೆ ಸದ್ಯವೇ ನರಕ, ಸಂದೇಹವಿಲ್ಲಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೫೬॥

೧೪೧೬

ನಿಃಕಾಮಿತ ಫಲವ ಕಾಮಿಸುವ ಮಹಾಕಾಮಿಯೆ ಶಿವಭಕ್ತನು,
ಕ್ರೋಧಕ್ಕೆ ಕ್ರೋಧಿಸುವ ಮಹಾಕ್ರೋಧಿಯೆ ಲಿಂಗನಿಷ್ಠಾಪರನು,
ನಿರ್ಲೋಭಕ್ಕೆ ಲೋಭಿಸುವ ಮಹಾಲೋಭಿಯೆ ಲಿಂಗಾವಧಾನಿ.
ನಿರ್ಮೋಹಕ್ಕೆ ಮೋಹಿಸುವ ಮಹಾಮೋಹಿಯೆ ಲಿಂಗಾನುಭಾವಿ.
ಅಷ್ಟಮದಂಗಳೊಡನೆ ಮದೋಹಂ ಎಂಬ
ನಿರ್ಮದಗ್ರಾಹಿಯೆ ಲಿಂಗಾನಂದಸೌಖ್ಯನು.
ಮತ್ಸರಕ್ಕೆ ಮತ್ಸರಿಸುವ ಮಹಾಮತ್ಸರಗ್ರಾಹಕನೆ
ಲಿಂಗಸಮರಸಸಂಬಂಧವೇದ್ಯನು.
ಇಂತೀ ಷಡ್ವರ್ಗಂಗಳಿಗೆ ವೈರಿಯಾಗಿರ್ಪ ಶಿವಭಕ್ತನೆ ಸದ್ಭಕ್ತನು.
ಆ ಭಕ್ತದೇಹಿಕದೇವ
ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು. ॥೧೫೭॥

೧೪೧೭

ನೆಟ್ಟನೆ ಲಿಂಗವ ಕಟ್ಟಿದ ಶಿವಭಕ್ತ
ಶಿವಶಿವಾ! ಹಿಟ್ಟು ಮಟ್ಟಿಯನಿಟ್ಟ ವಿಪ್ರನ ಬಟ್ಟೆಯಲ್ಲಿ
ಕಂಡು ಜೋಹಾರಂಗೆಯ್ದಡೆ ಕಟ್ಟಿದ ಕೆರೆಯನೊಡೆದಂತಾಯಿತ್ತವನ ಭಕ್ತಿ.
ಅದಂತೆಂದೊಡೆ:
"ಬ್ರಹ್ಮಬೀಜ ತೃಣಂ ನಾಸ್ತಿ। ಕೇಶವೋ ಅಧಿದೇವತಾ।
ಗುರುಭ್ರಷ್ಟಚಾಂಡಾಲೋಪಿ। ವಿಪ್ರಶ್ವಾನೋಪಿ ಜಾಯತೇ॥
ಬ್ರಾಹ್ಮಂ ದರ್ಶನಶ್ಚೈವಾ। ಪಾಪಪಂಜಮೇವಚ॥
ಬ್ರಾಹ್ಮಣಂ ವಂದನಶ್ಚೈವಾ। ಕೋಟಿ ಜನ್ಮೇನ ಸೂಕರಾ॥" ಎಂದುದಾಗಿ,
ಮಾತಂಗಿಯ ಮಗ ಹೊಲೆಯ
ರೇಣುಕಾದೇವಿಯ ಮಗ ವಿಪ್ರ,

ಇವರಿಬ್ಬರು ಜಮದಗ್ನಿಗೆ ಹುಟ್ಟಿದ ಕಾರಣ
ಇವರಿಬ್ಬರಿಗೂ ಸಾಕ್ಷಿಗಳು:
ಭಾರದ್ವಾಜ ವಿಶ್ವಾಮಿತ್ರ ಅಗಸ್ತ್ಯ ನಾರದ ಕೌಂಡಲ್ಯ.
ಈ ಐವರ ಸಾಕ್ಷಿಯಲ್ಲಿ 'ನಿಮ್ಮೊಳಗೆ ನೀವು ಸಂವಾದ ಬೇಡಾ' ಎಂದು
ವಿಭಾಗಮಂ ಹಂಚಿಕೊಟ್ಟ ವಿವರಮಂ ಕೇಳಿರಣ್ಣ.
ಊರಹೊರಗಣ ಗೃಹಮಂ ಹೊಲೆಯರಿಗೆ ಕೊಟ್ಟರು;
ಊರೊಳಗಣ ಗೃಹಮಂ ವಿಪ್ರರಿಗೆ ಕೊಟ್ಟರು,
ಸತ್ತ ಕರುವ ಹೊತ್ತು ಹೋಹರ ಹೊಲೆಯರ ಮಾಡಿದರು;
ಜೀವದ ಹಸುವ ಗೋದಾನ ಮುಖದಲ್ಲಿ ತೆಕ್ಕೊಂಬವರ
ವಿಪ್ರರ ಮಾಡಿದರು.
ಇನ್ನು ಕಂಡಲ್ಲಿ ತೊಲಗುವಂತೆ 'ಸಂಬೋಳಿ'ಯೆಂದು
ನಾಮಾಂಕಿತಮಂ ಕೊಟ್ಟು ತೊರೆ ಪತ್ರಮಂ ಬರೆದವರಾಗಿ
ಇದನರಿಯದಿರ್ದಡೆ ಇನ್ನು ಕೇಳಿರಣ್ಣ:
ನಳಚಕ್ರವರ್ತಿ ಪಿಂಡ ಪಿತೃಕಾರ್ಯವ ಮಾಡುವಲ್ಲಿ
ಹೊನ್ನ ಗೋವ ತಂದು ಬಿನ್ನಾಣದಲ್ಲಿ ಕೂಡಿ ದಾನವ ಕೊಟ್ಟಲ್ಲಿ
ಪೂರ್ವಸಂಧಾನ ಸಂಬಂಧದಿಂ ನ್ಯಾಯವನಾಡಿ
ಇತ್ತ ತಾವು ಹಂಚಿಕೊಂಡ ವಿವರಮಂ ಕೇಳಿರಣ್ಣ:
ಕೊಂಬು ಕೊಳಗವ ತೆಗೆದು
ಏಳ್ನೂರೆಪ್ಪತ್ತು ತೂಕ ಚಿನ್ನಮಂ ಹಂಚಿಕೊಂಡರಾಗಿ,
ಉಳಿದ ಕೊಂಬು ಕೊಳಗವ ವಿಪ್ರರು ಎತ್ತಿಕೊಂಡರಾಗಿ.
ಹೊನ್ನ ಗೋವ ನಲಿದು ತಿಂಬ ಕುನ್ನಿಗಳ ಕಂಡು ಕೇಳಿಯು
ಅರಿದು ಮರೆದು ಉತ್ತಮ ಕುಲಜರು ದ್ವಿಜರೆಂದು
ಉಪದೇಶಮಂ ಕೊಂಡು ನಮಸ್ಕರಿಸುವ
ಅಜ್ಞಾನಿ ಹೊಲೆಯರನೇನೆಂಬೆನಯ್ಯ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೫೦॥

೧೪೧೧

ನೆಲನನೊಳಕೊಂಡ ಸಲಿಲ, ಸಲಿಲವನೊಳಕೊಂಡ ಅನಲ,
ಅನಲನನೊಳಕೊಂಡ ಅನಿಲ, ಅನಿಲನನೊಳಕೊಂಡ ಆಕಾಶ,
ಆಕಾಶವನೊಳಕೊಂಡ ಮನ, ಮನವನೊಳಕೊಂಡ ಬುದ್ಧಿ,
ಬುದ್ಧಿಯನೊಳಕೊಂಡ ಪ್ರಕೃತಿ, ಪ್ರಕೃತಿಪುರುಷ ಜಗವೆಲ್ಲನೊಳಕೊಂಡ
ವಿಶುದ್ಧಕಾಯನು ಭಕ್ತದೇಹಿಕದೇವನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೫೧॥

೧೪೮೯
ನೇತ್ರದಲ್ಲಿ ಷಡುವರ್ಣಸಂಬಂಧವಹ
ಪವಿತ್ರ ಅಪವಿತ್ರವ ನೋಡಿ ಅರಿದು ಮಹಾಪವಿತ್ರವ ಮಾಡಿ
ನೇತ್ರದ ಕೈಯಲೂ ಲಿಂಗನೇತ್ರಕ್ಕೆ ಅರ್ಪಿಸುವಲ್ಲಿ ನೇತ್ರೋದಕವು.
ಶ್ರೋತ್ರದಲ್ಲು ಶಬ್ದ ಕುಶಬ್ದವನರಿದು ಮಹಾಶಬ್ದದಲ್ಲು ವರ್ತಿಸಿ
ಶ್ರೋತ್ರದ ಕೈಯಲೂ ಲಿಂಗಶ್ರೋತ್ರಕ್ಕೆ ಅರ್ಪಿಸುವಲ್ಲಿ ಶ್ರೋತ್ರೋದಕವು.
ಘ್ರಾಣದಿಂ ಸುಗಂಧ ದುರ್ಗಂಧವನರಿದು ಮಹಾಗಂಧದಲೂ ವರ್ತಿಸಿ
ಘ್ರಾಣದ ಕೈಯಲೂ ಲಿಂಗಘ್ರಾಣಕ್ಕೆ ಅರ್ಪಿಸುವಲ್ಲಿ ಘ್ರಾಣೋದಕವು.
ಜಿಹ್ವೆಯಿಂ ಮಧುರ ಆಮ್ಲ ಲವಣ ತಿಕ್ತ ಕಟು ಕಷಾಯವೆಂಬ
ಷಡುರುಚಿಯನರಿದು ಮಹಾರುಚಿಯನರಿದು ರುಚಿಮಾಡಿ
ಲಿಂಗಜಿಹ್ವೆಗೆ ಜಿಹ್ವೆಯ ಕೈಯಲೂ ಅರ್ಪಿಸುವಲ್ಲಿ ಜಿಹ್ವೋದಕವು.
ಸ್ಪರುಶನದಿಂ ಶೀತೋಷ್ಣವನರಿದು ಇಚ್ಛೆಯ ಕಾಲವನರಿದು
ಸ್ಪರುಶನದಿಂ ಲಿಂಗಸ್ಪರುಷನಕ್ಕೆ ಅರ್ಪಿತವ ಮಾಡುವಲ್ಲಿ ಸ್ಪರ್ಶನೋದಕವು.
ಸದ್ಭಕ್ತಿಯಿಂ ಪಾದಾರ್ಚನೆಯ ಮಾಡುವಲ್ಲಿ ಪಾದೋದಕವು.
ಮಜ್ಜನಕ್ಕೆರೆವಲ್ಲಿ ಮಜ್ಜನೋದಕವು.
ಆರೋಗಣೆಯಲ್ಲಿ ಆರೋಗಿಸಲಿತ್ತುದು ಅರ್ಪಿತೋದಕವು.
ಆರೋಗಣೆಯಲ್ಲಿ ಮೇಲೆ ಹಸ್ತಕ್ಕೆರೆದುದು ಹಸ್ತೋದಕವು.
ಗುರುಲಿಂಗ ಶಿವಲಿಂಗ ಜಂಗಮಲಿಂಗ ಒಂದೆಂದರಿದು
ಸರ್ವಕ್ರಿಯಾಕರ್ಮಕ್ಕೆ ಲಿಂಗಸಂಬಂಧವ ಮಾಡಿ
ಪ್ರಯೋಗಿಸುವುದು ಲಿಂಗೋದಕವು.
ಈ ದಶೋದಕ ಕ್ರೀಯನರಿದು ವರ್ತಿಸುವುದು
ಆಗಮಾಚಾರ ಕ್ರಿಯಾಸಂಪತ್ತು.
ಅಯ್ವತೊಂದಕ್ಷರದಿಂ ಪುಟ್ಟಿದಂತಹ ವೇದಾದಿವಿದ್ಯಂಗಳು
ಮೊದಲಾದ ಸರ್ವಕ್ರೀ ಕುಶಲಶಬ್ದಂಗಳನೂ
ಶ್ರೋತ್ರದಿಂ ಲಿಂಗಶ್ರೋತ್ರಕ್ಕೆ ಅರ್ಪಿತವ ಮಾಡಿ
ಶಬ್ದಭೋಗವ ಭೋಗಿಸುವರಲ್ಲಿ ಶಬ್ದಪ್ರಸಾದ.
ಮೃದು ಕಠಿಣ ಶೀತೋಷ್ಣಂಗಳನೂ
ಅಷ್ಟತನು ನೆಳಲು ಬಿಸಿಲು ಮೊದಲಾದ ವಸ್ತುಗಳನೂ
ಸ್ಪರುಶನದಿಂ ಲಿಂಗಸ್ಪರುಶನಕ್ಕೆ ಅರ್ಪಿತವ ಮಾಡಿ
ಸ್ಪರುಶನಭೋಗವ ಭೋಗಿಸುವಲ್ಲಿ ಸ್ಪರುಶನ ಪ್ರಸಾದ.
ಶ್ವೇತ ಪೀತ ಹರೀತ ಮಾಂಜಿಷ್ಠ ಕೃಷ್ಣ ಕಪೋತ
ಷಡುವರ್ಣ ಮೊದಲಾದ ಚಿತ್ರವಿಚಿತ್ರವರ್ಣಂಗಳನೆಲ್ಲವನೂ

ನೇತ್ರದಿಂ ಲಿಂಗನೇತ್ರಕ್ಕೆ ಅರ್ಪಿಸಿ ನಿರೀಕ್ಷಿಸಿ
ಅರ್ಪಿಸುವಲ್ಲಿ ರೂಪಪ್ರಸಾದ.
ಸಫಲ ಪಾಕಾದಿಗಳನೂ ಸರ್ವದ್ರವ್ಯಂಗಳನೂ
ಷಡುರುಚಿ ಭಿನ್ನರುಚಿ ಮೂವತ್ತಾರನರಿದು
ಜಿಹ್ವೆಯ ಕೈಯಲೂ ಲಿಂಗಜಿಹ್ವೆಗೆ ಅರ್ಪಿಸಲು ರಸಪ್ರಸಾದ.
ಪುಷ್ಪ ಧೂಪ ನಾನಾ ಸರ್ವಸುಗಂಧವಸ್ತುಗಳನೂ
ಘ್ರಾಣದಿಂ ಲಿಂಗಘ್ರಾಣಕ್ಕೆ ಅರ್ಪಿಸುವುದು
ಸುಗಂಧಭೋಗವ ಭೋಗಿಸುವುದು ಗಂಧಪ್ರಸಾದ.
ಈ ಪಂಚೇಂದ್ರಿಯದ ಕೈಯಲೂ
ಪಂಚವಿಷಯಂಗಳ ಗುಣಂಗಳವಗುಣಂಗಳರಿದು
ಅವಧಾನದಿಂದರ್ಪಿಸಿ ಸರ್ವಭೋಗವ ಭೋಗಿಸುವಲ್ಲಿ ಸನ್ನಿಹಿತಪ್ರಸಾದ.
ಗುರುವಿಗೆ ತನುಮನಧನವನರ್ಪಿಸಿ ಪ್ರಸನ್ನತೆಯ ಪಡೆವಲ್ಲಿ ಶುದ್ಧಪ್ರಸಾದ.
ಲಿಂಗಕ್ಕೆ ತನು ಮನ ಧನವನರ್ಪಿಸಿ ಪ್ರಸನ್ನತೆಯ ಪಡೆವಲ್ಲಿ ಸಿದ್ಧಪ್ರಸಾದ.
ಜಂಗಮಕ್ಕೆ ತನುಮನಧನವನರ್ಪಿಸಿ ಪ್ರಸನ್ನತೆಯ ಪಡೆವಲ್ಲಿ ಪ್ರಸಿದ್ಧಪ್ರಸಾದ.
ಗುರುಲಿಂಗಜಂಗಮಕ್ಕೆ ಸರ್ವಪದಾರ್ಥ ಸರ್ವಭೋಗಂಗಳ ಭೋಗಿಸಲಿತ್ತು
ಶೇಷಪ್ರಸಾದವ ಭೋಗಿಸುವುದು ಪದಾರ್ಥಪ್ರಸಾದ.
ಕಾಮಾದಿ ಸರ್ವಭೋಗಂಗಳನೂ
ಮನ ಬುದ್ಧಿ ಚಿತ್ತ ಅಹಂಕಾರವ ಏಕೀಭವಿಸಿ
ಭಾವಲಿಂಗಕ್ಕೆ ಅರ್ಪಿಸಿ ಭೋಗಿಸುವುದು ಭಾವಪ್ರಸಾದ.
ಪ್ರಾಣಲಿಂಗಕ್ಕೆ ಕಾಯವೆಂಬ ಭಕ್ತನು ಭಿನ್ನದೋರದೆ
ಅವಿನಾಭಾವದಿಂ ಸರ್ವಕ್ರಿಯೆ ಲಿಂಗಕ್ರೀಯಾಗಿ
ಏಕಾದಶಮುಖವರಿದು ಅರ್ಪಿಸಿ
ಲಿಂಗಭೋಗೋಪಭೋಗಿಯಾಗಿಹುದೆ ಏಕಾದಶಪ್ರಸಾದ.
ಇಂತೀ ಏಕಾದಶಪ್ರಸಾದವರಿದು ವರ್ತಿಸುವುದು
ಸಹಜಶಿವಾಗಮಾಚಾರಕ್ರಿಯಾಸಂಪತ್ತು.
ಇವೆಲ್ಲವನು ಮೀರಿ, ಅತ್ಯತಿಷ್ಠದ್ದಶಾಂಗುಲ ಲಿಂಗಕ್ಕೆ ಕಾಯವಾಗಿ
ಆ ಲಿಂಗವೇ ಪ್ರಾಣವಾಗಿಪ್ಪ ಶರಣನು
ವೇದ ಶಾಸ್ತ್ರಾಗಮ ಪುರಾಣಕ್ಕೆ, ದೇವ ದಾನವ ಮಾನವರಿಗೆ
ಅತ್ಯತಿಷ್ಠದ್ದಶಾಂಗುಲವೆನಿಸಿ
'ಲಿಂಗಮಧ್ಯೇ ಶರಣಃ ಶರಣಮಧ್ಯೇ ಲಿಂಗಂ' ಎಂದೆನಿಸಿಪ್ಪ
ಅವಿನಾಭಾವಸರ್ವಾಂಗಲಿಂಗಕ್ರೀಯ ನೀನೇ ಬಲ್ಲೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೬೦॥

೧೪೨೦
ಪಂಕವಿಲ್ಲದ ಕಮಲಕ್ಕೆ ಸುಗಂಧ ಸುಲಲಿತವೆಂತಪ್ಪುದಯ್ಯಾ?
ಹೊನ್ನು ಹೆಣ್ಣು ಮಣ್ಣಿಲ್ಲದೆ ದೇವತಾಯೋಗ್ಯವೆಂತಪ್ಪುದಯ್ಯಾ?
ಕಮಲ ಪಂಕದಲಿ ವರ್ತಿಸಿದಂತೆ ವರ್ತಿಸುತಿಪ್ಪರು ನಿಮ್ಮ ಶರಣರು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೬೧॥

೧೪೨೧
ಪಂಚಗವ್ಯದಿಂದಾದ ಗೋಮಯವಂ ತಂದಾರಿಸಿ
ಪಂಚಾಮೃತಸಂಪರ್ಕದಿಂ ಪಂಚಾಕ್ಷರಿಯ ಮಂತ್ರದಿಂ ಅಭಿವಂದಿಸಿ
ಶಿವನ ವಹ್ನಿಯಲ್ಲಿ ದಹಿಸಿ
ಆ ವಿಭೂತಿಯಂ ಸುಕೃತದಿಂ ತೆಗೆದುಕೊಂಡು
ಎಡದ ಹಸ್ತದೊಳ್ಪಿಡಿದುಕೊಂಡು, ಬಲದ ಹಸ್ತದಿಂ ಮುಚ್ಚಿ
ಜಲಮಿಶ್ರವಂ ಮಾಡಿ, ಲಲಾಟ ಮೊದಲಾಗಿ ದಿವ್ಯಸ್ಥಾನಂಗಳೊಳು ಧರಿಸಿ
ಲಿಂಗಾರ್ಚನೆಯಂ ಮಾಡುವ ಶರಣ, ಆತನೇ ವೇದವಿತ್ತು,
ಆತನೇ ಶಾಸ್ತ್ರಜ್ಞ, ಆತನೇ ಸದ್ಯೋನ್ಮುಕ್ತನಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೬೨॥

೧೪೨೨
ಪಂಚಭೂತದನುವರಿದು
ಸುಸಂಗನಾದಬಳಿಕ ಪಂಚಮುಖನು ಬೇರುಂಟೆ ತನ್ನೊಳಗಲ್ಲದೆ?
ವಂಚನೆಯೊಳು ಪಂಚಬ್ರಹ್ಮವನೋದಿ ಫಲವೇನು?
ಈಚುವೋದ ತೆನೆಯಂತೆ ವಂಚನೆಯಿಲ್ಲದೆ ಸಂಚಿಸಿಕೊಳ್ಳನೆ
ಕಂಚಿಯ ಕೈಲಾಸಕ್ಕೆ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ? ॥೧೬೩॥

೧೪೨೩
ಪಂಚಭೂತವಂಗವಾಗಿಪ್ಪ ಆತ್ಮಂಗೆ
ಪಂಚೇಂದ್ರಿಯಂಗಳೇ ಮುಖಂಗಳು,
ಪಂಚಕರಣಂಗಳೇ ಕೈಗಳು, ಪಂಚವಿಷಯಂಗಳೇ ಪೂಜೆ,
ಪಂಚಪದಾರ್ಥವೇ ಭೋಗ.
ಇದನೆಲ್ಲವ ನಿಜಮೂರ್ತಿಯಪ್ಪ ಘನಕ್ಕೆಯ್ದಿಸಬಲ್ಲಡೆ,
ಆತ ಸರ್ವನಿರ್ವಾಣಿ, ಸಕಲನಿಷ್ಕಲಾತ್ಮಕನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೬೪॥

೧೪೨೪
ಪಂಚಾಕ್ಷರಿಯೆ ಸರ್ವಮಂತ್ರವೆಲ್ಲವಕ್ಕೆಯು,
ಉತ್ಪತ್ತಿ, ಸ್ಥಿತಿ, ಲಯಸ್ಥಾನ, ಸರ್ವಕಾರಣವೆಲ್ಲವಕ್ಕೆಯು ಮೂಲ.
ಅದೆಂತೆಂದಡೆ:
'ಸಪ್ತಕೋಟಿ ಮಹಾಮಂತ್ರಂ ಉಪಮಂತ್ರಸ್ತನೇಕತಃ
ಪಂಚಾಕ್ಷರ ಪ್ರತಿಲೀಯಂತೇ ಪುನಸ್ತಸ್ಯವಸರ್ಗತಃ
ತಸ್ಮಿನ್ ವೇದಶ್ಚ ಶಾಸ್ತ್ರಾಣಿ ಮಂತ್ರೇ ಪಂಚಾಕ್ಷರಿ ಸ್ಥಿತಂ'
ಎಂದುದಾಗಿ, ಇದು ಕಾರಣ
ಶ್ರೀ ಪಂಚಾಕ್ಷರಿಯುಳ್ಳ ಸದ್ಭಕ್ತನೇ ವೇದವಿತ್ತು. ಆತನೇ ಶಾಸ್ತ್ರವಾನ್,
ಆ ಮಹಾಮಹಿಮನೆ ಪುರಾಣಿಕನು, ಆತನೇ ಆಗಮಿಕನು,
ಆತನೇ ಸರ್ವಜ್ಞನಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೬೫॥

೧೪೨೫
ಪದ ಪದವಿಗಳ ವಿಚಾರಿಸಲು
ಸಾಧಾರಣಪ್ರಾಣಿಗಳ ಪದವಿಗಳಿಂದ ಮಾನವಪದ ವಿಶೇಷ,
ಮಾನವರ ಪದವಿಗಳಿಂದ ದೇವಜಾತಿಗಳ ಪದ ವಿಶೇಷ,
ದೇವಜಾತಿಗಳ ಪದವಿಯಿಂದ ಇಂದ್ರಪದ ವಿಶೇಷ,
ಇಂದ್ರಪದವಿಯಿಂದ ಬ್ರಹ್ಮಪದ ವಿಶೇಷ,
ಬ್ರಹ್ಮಪದವಿಯಿಂದ ವಿಷ್ಣುಪದ ವಿಶೇಷ,
ವಿಷ್ಣುಪದವಿಯಿಂದ ರುದ್ರಪದ ವಿಶೇಷ,
ರುದ್ರಪದವಿಯಿಂದ ಲಿಂಗಪದ ವಿಶೇಷ,
'ಲಿಂಗಾಲಿಂಗೀ ತು ಮತ್ಕರ್ತಾ ಲಿಂಗಾಲಿಂಗೀ ಮಮ ಪ್ರಭುಃ
ಲಿಂಗಾಲಿಂಗೀ ಮಮ ಸ್ವಾಮೀ ಲಿಂಗಾಲಿಂಗೀ ಮನೋಹರಃ'
ಇಂತೆಂದುದಾಗಿ ಮಹಾಪದವಿಯಲ್ಲಿರ್ದು,
ಲಿಂಗಭೋಗೋಪಭೋಗವನರಿಯದೆ, ಭೋಗಿಸಲರಿಯದೆ,
ಅಲ್ಪಪದವಿಯಲ್ಲಿರ್ದು ಅಲ್ಪರನಾಶೆಗೈದಡೆ ಜ್ಞಾನಿಯಲ್ಲ, ಭಕ್ತನಲ್ಲ, ಶರಣನಲ್ಲ.
ಅವಂಗೆ ಲಿಂಗವಿಲ್ಲಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೬೬॥

೧೪೨೬
ಪರಬ್ರಹ್ಮನಿಂದ ಜೀವನಾಯಿತ್ತೆಂಬುವನೊಬ್ಬ ವಾದಿ.
ಆತ್ಮನು ಪಶು, ಪಾಶಬದ್ಧನು,
ಅನಾದಿಮಲಯುಕ್ತನೆಂಬುವನೊಬ್ಬ ವಾದಿ.
ಇವರಿಬ್ಬರು ತರ್ಕಕ್ಕೆ ಸಿಲುಕಿ ದುಃಖಕ್ಕೊಳಗಾದರು.
ಅದೆಂತೆಂದಡೆ: ಆತ್ಮನು ಅನಾದಿಮಲಸಂಬಂಧಿಯಾದಡೆ

ಆತ್ಮನ ಸ್ವರೂಪ ಮಲಸ್ವರೂಪ ಬಲ್ಲಡೆ ನೀವು ಹೇಳಿರೋ.
ಅರಿಯದಿರ್ದಡೆ ಕೇಳಿರೋ:
ಪೃಥ್ವಿ ಅಪ್ಪು ಕೂಡಿ ಸ್ಥೂಲತನು, ವಾಯು ತೇಜ ಕೂಡಿ ಸೂಕ್ಷ್ಮತನು,
ಅಂಬರ ಅಹಂಕಾರ ಕೂಡಿ ಕಾರಣತನು.
ಈ ತನುತ್ರಯವಿಲ್ಲದಂದು, ಪಂಚತತ್ತ್ವಂಗಳಶಾಖೆತಲೆದೋರದಂದು,
ಆದಿ-ಅನಾದಿ, ಸ್ವರೂಪ-ನಿರೂಪ, ಹಮ್ಮು-ಬಿಮ್ಮು,
ಯುಗ-ಜುಗ, ಸುರಾಳ-ನಿರಾಳವಿಲ್ಲದಂದು,
ಆತ್ಮನಲ್ಲಿ ಮಲ ಹುದುಗಿರ್ದ ಭೇದವ
ತಿಳಿದು ರೂಹಿಸಿ ಹೇಳಬಲ್ಲಡೆ ಸಿದ್ಧಾಂತಿಯೆಂಬೆ,
ಹಮ್ಮಿದ ಶಿವನೆ ಜೀವನು, ಹಮ್ಮಳಿದ ಜೀವನೆ ಶಿವನಾದಡೆ
ಸೃಷ್ಟಿಸ್ಥಿತಿಸಂಹಾರಂಗಳೇಕಾದವು? ವಾಚ್ಯಾವಾಚ್ಯಂಗಳೇಕಾದವು?
ಸ್ಥಾನಾಸ್ಥಾನಂಗಳೇಕಾದವು? ಪಕ್ಷಾಪಕ್ಷಂಗಳೇಕಾದವು?
ದೇಹಾದೇಹಂಗಳೇಕಾದವು?
ಆದಡಾಗಲಿ ಬ್ರಹ್ಮಕ್ಕೆತಥ್ಯಮಿಥ್ಯ, ರಾಗದ್ವೇಷ, ಹಮ್ಮುಬಿಮ್ಮು, ಮದಮತ್ಸರ,
ನಾ ನೀನೆಂಬ ಭ್ರಾಂತುಸೂತಕವುಂಟೆ? ಅದಲ್ಲ ನಿಲ್ಲು.
ಬ್ರಹ್ಮಕ್ಕೆ ಹಮ್ಮು ಹೋಹ-ಬ್ರಹ್ಮ ಭೇದವ ತಿಳಿದು,
ಸಂಕಲ್ಪ-ವಿಕಲ್ಪವಿಲ್ಲದೆ, ಸ್ತುತಿ-ನಿಂದೆಗಳನರಿಯದೆ,
ಪಕ್ಷಾಪಕ್ಷಂಗಳನರಿದೆ, ಕಾಮ-ನಿಃಕಾಮವಿಲ್ಲದೆ,
ಭೀತಿ-ನಿರ್ಭೀತಿಯಿಲ್ಲದೆ, ನಿರಂಗಸ್ವರೂಪನಾದಡೆ ವೇದಾಂತಿಯೆಂದೆ.
ಈ ಉಭಯ ವಾದ ಹೊದ್ದರು ಶಿವಶರಣರು.
ಆದಿ ಅನಾದಿಯಿಂದತ್ತಲಾದ ಶರಣಲಿಂಗಸಂಬಂಧವನರಿದರಾಗಿ
ಅಭೇದ್ಯರಯ್ಯಾ. ಅದೆಂತೆಂದಡೆ:
ಸತ್ತುವೆನಿಸಿ ಶಬ್ದನಿಃಶಬ್ದಕ್ಕೆ ಬಾರದ ನಿಶ್ಶೂನ್ಯ ಲಿಂಗವೆ ಪ್ರಾಣವಾಗಿ,
ಚಿತ್ತುವೆನಿಸಿ ನಾಮನಿರ್ನಾಮಕ್ಕೆ ಬಾರದ ಸ್ವರೂಪ
ನಿರೂಪವಲ್ಲದ ಶರಣನೆ ಅಂಗವಾಗಿ,
ಈ ಉಭಯ ಸಂಪುಟದಿಂದ ಸಕಲನಿಷ್ಕಲವೆನಿಸಿತ್ತು.
ಈ ಸಕಲ ನಿಷ್ಕಲತತ್ತ್ವವೆ
ತನ್ನ ಶಕ್ತಿಸಮರಸಸಂಭಾಷಣೆಯಿಂದ ಲೀಲೆದೋರಲಾಗಿ
ತಾನೆ ಗುರುವಾದ, ತಾನೆ ಶಿಷ್ಯನಾದ, ತಾನೆ ಲಿಂಗವಾದ,
ತಾನೆ ಜಂಗಮವಾದ, ತಾನೆ ಮಂತ್ರವಾದ, ತಾನೆ ಪ್ರಸಾದವಾದ,
ತಾನೆ ಸರ್ವಚೈತನ್ಯಾತ್ಮಕನಾದ.
ಇಂಥಾ ಭೇದವ ತನ್ನಿಂದ ತಾನೆ ಅರಿದನಾಗಿ
ವೇದಾಂತ ಸಿದ್ಧಾಂತವೆಂಬ ವಾಗ್ಜಾಲವ ನುಡಿಯನು.

ತಾನೆ ಪರಿಪೂರ್ಣನಾಗಿ ತರ್ಕಕ್ಕತರ್ಕ್ಯನು, ಸಾಧ್ಯಕ್ಕಸಾಧ್ಯನು,
ಭೇದ್ಯಕ್ಕಭೇದ್ಯನು,
ಇದು ಕಾರಣ, ದ್ವೈತಾದ್ವೈತವ ಮೀರಿ ನಿಂದ ನಿಜಸುಖಿ
ನಿಮ್ಮ ಶರಣನಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೬೭॥

೧೪೨೭

ಪರಲೋಕದಲ್ಲಿ ಲಾಭವನರಸುವರು
ಇಹಲೋಕದಲ್ಲಿ ಲೋಭವ ಮಾಡದೆ, ಮಾಡಿರೆ ದಾಸೋಹವ.
ಹಲವು ಕಾಲದಿಂದ ನೆಯ್ದ ವಸ್ತ್ರವ ಲೋಭವ ಮಾಡದೆ ಇತ್ತಡೆ
ಶಿವ ಮೆಚ್ಚಿ ತವನಿಧಿಯ ಕೊಡನೆ ದಾಸಮಯ್ಯಂಗೆ?
ದೇವಾಂಗವಸ್ತ್ರವನು ಶಿವಗಣಂಗಳಿಗೆ ತೃಪ್ತಿಬಡಿಸಿದ ಅಮರನೀತಿ
ಶಿವನ ಕೌಪೀನಕ್ಕೆ ತನ್ನ ಗುರಿಯ ಮಾಡಿದಡೆ
ಕಾಯವೆರಸಿ ಕೈಲಾಸಕ್ಕೆ ಹೋಗನೆ? ಇದು ಕಾರಣ,
ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನ ಶರಣರಿಗೆ
ಉಣಲಿಕ್ಕಿ ಉಡಕೊಟ್ಟು ಉಪಚರಿಸಿದಡೆ
ಶಿವನೊಲಿದು ಇತ್ತ ಬಾ ಎಂದೆತ್ತಿಕೊಳ್ಳನೆ? ॥೧೬೮॥

೧೪೨೮

ಪರಶಿವನು ಸುಖಮಯನು, ಸುಖಾತ್ಮನು, ಸುಖಸ್ವರೂಪನು,
ನಿಷ್ಕಳನಿರೂಪನು, ಅಪ್ರಮೇಯನು, ಅನಾಮಯನು,
ಪರಾತ್ಪರನು, ಅತಿಸೂಕ್ಷ್ಮನು, ಮಹಾಸ್ಥೂಲನು.
'ಶಿವಂ ಪರಾತ್ಪರಂ ಸೂಕ್ಷ್ಮಂ ನಿತ್ಯಂ ಸರ್ವಗತಾವ್ಯಯವ್
ನಿಂದಿತಮಾಪಮ್ಯಮಪ್ರಮೇಯಮನಾಮಯಮ್
ಶುದ್ಧತ್ವಾಚ್ಛಿವಮುದ್ದಿಷ್ಟಂ ಪರಾದೂರ್ಧ್ವಂ ಪರಾತ್ಪರಮ್' ಎಂದುದಾಗಿ,
'ಅಣೋರಣೀಯಾನ್ ಮಹತೋ ಮಹೀಯಾನ್' ಎಂದುದಾಗಿ,
ಇಂತಹ ಶಿವನು ಭಕ್ತಕಾಯನಾಗಿ ಭಕ್ತವತ್ಸಲನಾಗಿಪ್ಪ ಕಾಣಿರೋ.
'ಅಕಾಯೋ ಭಕ್ತಕಾಯಸ್ತು ಮಮ ಕಾಯಸ್ತು ಭಕ್ತಿಮಾನ್
ಭಕ್ತಸಂಗವಿಶೇಷಣ ಅವಿಕಾರಂ ಶಿವಾತ್ಮನೋಃ' ಎಂದುದಾಗಿ,
ಸದ್ಭಕ್ತಿಯುಳ್ಳ ಮಹಾಲಿಂಗವಂತಂಗೆ ಪ್ರಾಣವಾಗಿಪ್ಪ ಕಾಣಿರೋ.
'ಲಿಂಗಾಲಿಂಗೀ ಮಮ ಪ್ರಾಣೋ ಲಿಂಗಾಲಿಂಗೀ ಮಮಾತ್ಮಭೂಃ
ಲಿಂಗಾಲಿಂಗೀ ಮಮೋಜ್ಜೀವೀ ಲಿಂಗಾಲಿಂಗೀಚರಕ್ಷಕಃ' ಎಂದುದಾಗಿ,
ಇಂತಹ ಭಕ್ತನ ಜಿಹ್ವೆಯಲ್ಲಿ ಆರೋಗಣೆಯ ಮಾಡಿ ಸುಖಿಸುವನು.
'ನೈವೇದ್ಯಂ ಪುರತೋ ನ್ಯಸ್ತಂ ದರ್ಶನಾತ್ ಸ್ವೀಕೃತಂ ಮಯಾ

ರಸಂ ಭಕ್ತಸ್ಯ ಜಿಹ್ವಯಾ ಆಶ್ನಾಮಿ ಕಮಲೋದ್ಭವ' ಇಂತೆಂದುದಾಗಿ,
ಈ ಪರಿ ಶಿವಂಗೆ ಸದ್ಭಕ್ತನೇ ದೇಹ, ಸದ್ಭಕ್ತನೇ ಪ್ರಾಣ,
ಭಕ್ತನ ಜಿಹ್ವೆಯಲ್ಲಿ ಆರೋಗಿಸುವನು. ಇದು ಕಾರಣ,
ಸದ್ಭಕ್ತಂಗೆ ಮಾಡಿದುದೆಲ್ಲವು ಶಿವಂಗೆ ಮಾಡಿದುದು, ಶಿವಂಗೆ ಪ್ರೀತಿ.
ಇದು ಕಾರಣ, ಸದ್ಭಕ್ತಂಗೆ ಶರಣೆಂದು
ಅರ್ಚಿಸಿ ಪೂಜಿಸಿ ಆರೋಗಿಸಲಿತ್ತು ಪ್ರಸನ್ನತೆಯ ಪಡೆದು
ಆ ಪ್ರಸಾದವಂ ಕೊಂಡು ಪರಿಣಾಮಿಯಪ್ಪುದು
ಸುಖಿಯಪ್ಪುದು ಭಕ್ತನಪ್ಪುದಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೬೯॥

೧೪೨೯

ಪರಶಿವನೇ ಶ್ರೀಗುರು, ಶ್ರೀಗುರುವೇ ಪರಶಿವನು,
ಶ್ರೀಗುರುವೇ ಶಿವಲಿಂಗ, ಆ ಶಿವಲಿಂಗವೇ ಜಂಗಮಲಿಂಗ,
ಆ ಜಂಗಮಲಿಂಗವೆಂದಲ್ಲಿಯೇ ಪ್ರಸಾದಲಿಂಗ,
ಪ್ರಸಾದಲಿಂಗವೆಂದಲ್ಲಿಯೇ ಮುಕ್ತಿ. ಇದು ಸ್ವಭಾವ, ಇದು ಮಹಾಸದ್ಭಾವ.
ಈ ಭಾವವು ಅಣುಮಾತ್ರ ಕಿಂಚಿತ ದುರ್ಭಾವವಾಗಿ ತಪ್ಪಿದಡೆ
ಆ ಕ್ಷಣ ಜಾರಿ ಮೀರಿತ್ತು ಆ ಸಾಧ್ಯ.
ಭಾವ ತಪ್ಪಿದ ಬಳಿಕ ಶಿವನೊಲವು ತಪ್ಪುವುದಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೭೦॥

೧೪೩೦

ಪರಾಂಗನೆಯರ ಅಂಗವ ಹಿಂಗಿಹುದೆ ಶೌಚ.
ಅನ್ಯಾರ್ಜಿತದಲ್ಲಿ ಉದರವ ಹೊರೆಯದಿಹುದೆ ಸ್ನಾನ.
ಮನದ ಮೈಲಿಗೆಯ ಕಳೆವುದೆ ಮಡಿವರ್ಗ.
ಶರಣರಲ್ಲಿ ಮಂಗಳಭಾವದಿರವೆ ಭಸ್ಮಲೇಪನ.
ವಿಶ್ವತೋಮುಖನ ನೋಟಕಾರುಣ್ಯ ತನ್ನ ಮೇಲಿರಲು ರುದ್ರಾಕ್ಷಧಾರಣ.
ಹಿಂಸೆಯ ಮಾಡದಿಹುದೆ ಆತ್ಮಶುದ್ಧಿ.
ನಿರಂಹಕಾರವೆ ಪದ್ಮಾಸನ, ಸುಚಿತ್ತವೆ ದೃಷ್ಟಿ,
ಸತ್ಯವೆ ಲಿಂಗ, ಸಾಹಿತ್ಯವೆ ಅಗ್ಗವಣಿ,
ದಯಾವಾಕ್ಯವೆ ಗಂಧ, ಅಕ್ಷರವಿಚಾರವೆ ಅಕ್ಷತೆ,
ನಿರ್ಮಲವೆ ಪುಷ್ಪ, ನಿಸ್ಸಂದೇಹವೆ ಧೂಪ,
ನಿಸ್ಸಂಕಲ್ಪವೆ ದೀಪ, ನಿಂದೆಯ ಮಾಡದಿಹುದೆ ಜಪ,
ಪರಿಣಾಮವೆ ಆರೋಗಣೆ, ಅಖಂಡಿತವೆ ತಾಂಬೂಲ.
ಇಂತೀ ಇಷ್ಟಲಿಂಗದ ಪೂಜೆಯ ಪರಿಯಲ್ಲಿ
ಪ್ರಾಣಲಿಂಗದ ಪೂಜೆಯ ಮಾಡಲು

ಅಂತರಂಗ ಬಹಿರಂಗ ಸರ್ವಾಂಗಲಿಂಗವಾಗಿರ್ಪುದು.
ಇದು ಸಹಜ, ಸತ್ಯ, ಶಿವನಾಣೆ,
ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ॥೧೭೧॥

೧೪೩೧
ಪರುಷದ ಗೃಹದೊಳಗಿದ್ದು, ತಿರಿವನೆ ಮನೆ ಮನೆಯ?
ತೊರೆಯೊಳಗಿದ್ದವನು, ತೃಷೆಯಾಗಲರಸುವನೆ ಕೆರೆಯುದಕವ?
ಮಂಗಳಲಿಂಗ ಅಂಗದ ಮೇಲೆ ಇದ್ದು, ಅನ್ಯಲಿಂಗಗಳ ನೆನೆವನೆ ನಿಮ್ಮಭಕ್ತನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ? ॥೧೭೨॥

೧೪೩೨
ಪರುಷವು ಪಾಷಾಣದಂತೆ ಇಪ್ಪುದು,
ಆ ಪರುಷವು ಪರುಷವೇದಿಗಳಿಗಲ್ಲದೆ ಅರಿಯಬಾರದು.
ಆ ಪರುಷದ ಫಲಸಿದ್ಧಿ ಪರುಷವೇದಿಗಳಿಗಲ್ಲದೆ ಅಳವಡದು.
ಲಿಂಗವೂ ಲಿಂಗವಂತನಾಗಿ ದೇವದಾನವಮಾನವರೊಳಗಾಗಿ
ಅವರಂತೆ ಇಪ್ಪನು.
ಆ ಲಿಂಗವು ಲಿಂಗವೇದ್ಯಂಗಲ್ಲದೆ ಅರಿಯಬಾರದು.
ಪರುಷವೇದಿ ಪರುಷದ ಫಲಸಿದ್ಧಿಯಿಂದ ಸುಖಿಸುವಂತೆ
ಲಿಂಗವೇದಿ ಲಿಂಗವಂತರ ಸಂಗದಿಂದ ಸುಖಿಸಿ ಮುಕ್ತನಪ್ಪನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೭೩॥

೧೪೩೩
ಪಾಪ ನನ್ನದೆ? ಪುಣ್ಯ ನಿನ್ನದೆ? ಹೇಳಾ ಅಯ್ಯಾ.
ದ್ವಂದ್ವಕರ್ಮ ಎನಗೆ ನಿನಗೆ ಬೇರಾದ ಪರಿ ಎಂತಯ್ಯಾ?
ವಿಚಾರವಾದ ಬಳಿಕ ನಾನು ಲಿಂಗಪ್ರಾಣಿ, ನೀನು ಭಕ್ತಕಾಯನು.
ಇದು ಕಾರಣ ದ್ವಂದ್ವನಾಸ್ತಿ, ದ್ವಂದ್ವಕರ್ಮ ಮುನ್ನವೇ ನಾಸ್ತಿ.
ಇನ್ನು ಭಾವದ ಭೇದವೆಂದಡೆ ನಗೆಗೆಡೆಯಪ್ಪುದು.
ಹೆಚ್ಚು-ಕುಂದು ನನ್ನದಲ್ಲ, ನಿನ್ನದಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೭೪॥

೧೪೩೪
'ಪುಣ್ಯೈರಾಪ್ನೋತಿ ದೇವತ್ವಂ ಪಾಪೈಃ ಸ್ಥಾವರಮೇವ ಚ
ಪುಣ್ಯಪಾಪಸಮಾನೇಭ್ಯೋ ಮಾನುಷಂ ಲಭತೇ ನರಃ'

ಎಂಬುದಾಗಿ,
ದುಃಕರ್ಮ ಫಲಭೋಗರೂಪಮಾದ ವ್ಯಾಧಿ ಕಾಡಿದಲ್ಲದೆ ಬಿಡವು.
ಮರುಳೇ ಶಿವಾಶಿವಾಯೆಂಬ ಮಂತ್ರವ ಮರೆಯದಿರೋ.
ವ್ಯಾಧಿನಾಶ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಯೆಂಬುದ
ಮರೆಯದಿರು ಮರುಳೆ. ॥೧೭೫॥

೧೪೩೫
ಪುಣ್ಯಾಂಗನೆಯ ಸುತಂಗೆ
ಪಿತನುಂಟು, ಪಿತಾಮಹನುಂಟು, ಪ್ರಪಿತಾಮಹನುಂಟು.
ಪಣ್ಯಾಂಗನೆಯ ಸುತಂಗೆ ಪಿತನಿಲ್ಲ, ಮೇಲೇನೂ ಇಲ್ಲ,
ಅವನ ಬದುಕು ನಗೆಗೇಡೆ.
ಭಕ್ತಾಂಗನೆಯ ಸುತನಹ ಸದ್ಭಕ್ತಂಗೆ ಪಿತನು ಗುರು, ಪಿತಾಮಹನು ಜಂಗಮ,
ಪ್ರಪಿತಾಮಹನು ಮಹಾಲಿಂಗ ಉಂಟು ಕೇಳಿರಣ್ಣಾ.
ಅಭಕ್ತಾಂಗನೆಯ ಸುತನಹ ತಾಮಸಭಕ್ತಂಗೆ
ಪಿತನಹ ಗುರುವಿಲ್ಲ, ಪಿತಾಮಹ ಜಂಗಮವಿಲ್ಲ,
ಪ್ರಪಿತಾಮಹ ಮಹಾಲಿಂಗವಿಲ್ಲ.
ಅವನ ಸ್ಥಿತಿ ಗತಿ ನಗೆಗೇಡೆ ಕೇಳಿರಣ್ಣಾ, ಇದು ದೃಷ್ಟ ನೋಡಿರೆ.
ಇದು ಕಾರಣ,
ಭಕ್ತಿಹೀನನಾದ ಅಭಕ್ತಾಂಗನೆಯ ಮಗನ ಸಂಗವ ಬಿಡಿಸಿ
ಸದ್ಭಕ್ತಿ ಸದಾಚಾರಸಂಪನ್ನರಪ್ಪ ಶರಣರ ಸಂಗದಲ್ಲಿರಿಸಯ್ಯಾ,
ನಿಮ್ಮ ಬೇಡಿಕೊಂಬೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ . ॥೧೭೬॥

೧೪೩೬
ಪುತ್ರ ಮಿತ್ರ ಕಳತ್ರಕ್ಕೆ ಸ್ನೇಹಿಸುವಂತೆ
ಶ್ರೀಗುರು ಲಿಂಗ ಜಂಗಮಕ್ಕೆ ಸ್ನೇಹಿಸಬೇಕು.
ಸ್ನೇಹವೇ ಬಾತೆ ಕಾಣಿರೋ, ಲಿಂಗಕ್ಕೆ ಸ್ನೇಹವೇ ಭಕ್ತಿ ಕಾಣಿರೋ,
ಸ್ನೇಹವೇ ಭಕ್ತಿಗೆ ಮೂಲ ಕಾಣಿರೋ,
ಕಣ್ಣಪ್ಪ, ಮಾದಾರ ಚೆನ್ನಯ್ಯ, ಚೋಳಿಯಕ್ಕನ ಸ್ನೇಹವ ನೋಡಿ ಭೋ.
ಅವರಂತೆ ಸ್ನೇಹವ ಮಾಡಲು ಭಕ್ತಿ ಮುಕ್ತಿ ಪರಿಣಾಮ ಮಹಾಸುಖ.
ಆ ಸುಖಸ್ವರೂಪ ತಾನಾಗಿ ಇಪ್ಪನು ಶಿವನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೭೭॥

೧೪೩೭

ಪುರಾಕೃತಪುಣ್ಯಫಲದ ಪರಿಯ ನೋಡಿರೆ!
ಶ್ರೀಗುರು ಲಿಂಗ ಜಂಗಮ ಪ್ರಸಾದವಾಗಿ ಪ್ರತ್ಯಕ್ಷವಾದ!
ಶಿವ ಶಿವಾ, ಗುರುವೆಂಬ ಕಲ್ಪವೃಕ್ಷ, ಲಿಂಗವೆಂಬ ಕಾಮಧೇನು,
ಜಂಗಮವೆಂಬ ಚಿಂತಾಮಣಿ, ಪ್ರಸಾದವೆಂಬ ಮಹಾಮೃತವು.
ಈ ಚತುರ್ವಿಧಪ್ರಸಾದಾಮೃತವ ಭೋಗಿಸದೆ
ಅಜ್ಞಾನಸಂಸಾರವೆಂಬ ಅಂಬಿಲವ ಬಯಸುವರನೇನೆಂಬೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೭೮॥

೧೪೩೮

ಪೃಥ್ವಿ ಅಂಗ, ಚಿತ್ತ ಹಸ್ತ, ನಾಸಿಕ ಮುಖ, ಗಂಧ ಪದಾರ್ಥ,
ಆಚಾರಲಿಂಗಕರ್ಪಿತ ಭಕ್ತ.
ಅಪ್ಪು ಅಂಗ, ಬುದ್ಧಿ ಹಸ್ತ, ಜಿಹ್ವೆ ಮುಖ, ರುಚಿ ಪದಾರ್ಥ,
ಗುರುಲಿಂಗಕರ್ಪಿತ ಮಹೇಶ್ವರ.
ಅನಲ ಅಂಗ, ನಿರಹಂಕಾರ ಹಸ್ತ, ನೇತ್ರ ಮುಖ, ರೂಪ ಪದಾರ್ಥ,
ಶಿವಲಿಂಗಕರ್ಪಿತ ಪ್ರಸಾದಿ.
ಪವನ ಅಂಗ, ಮನ ಹಸ್ತ, ತ್ವಕ್ಕು ಮುಖ, ಸ್ಪರ್ಶ ಪದಾರ್ಥ,
ಜಂಗಮಲಿಂಗಕರ್ಪಿತ ಪ್ರಾಣಲಿಂಗಿ.
ವ್ಯೋಮ ಅಂಗ, ಜ್ಞಾನ ಹಸ್ತ, ಶ್ರೋತ್ರ ಮುಖ, ಶಬ್ದ ಪದಾರ್ಥ,
ಪ್ರಸಾದಲಿಂಗಕರ್ಪಿತ ಶರಣ.
ಹೃದಯ ಅಂಗ, ಭಾವ ಹಸ್ತ, ಅರ್ಥ ಮುಖ, ಪರಿಣಾಮ ಪದಾರ್ಥ,
ಮಹಾಲಿಂಗಕರ್ಪಿತ ಐಕ್ಯ.
ಇಂತೀ ಷಟ್‌ಸ್ಥಲವಳವಟ್ಟಾತನು ಪರಶಕ್ತಿಸ್ವರೂಪನು,
ಆತನು ನಿಜಶಿವಯೋಗಸಂಪನ್ನನು,
ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ॥೧೭೯॥

೧೪೩೯

ಪ್ರಕೃತಿವಿಡಿದಿಹುದು ಪ್ರಾಣ, ಪ್ರಾಣವಿಡಿದಿಹುದು ಜ್ಞಾನ,
ಜ್ಞಾನವಿಡಿದಿಹುದು ಗುರುಲಿಂಗಜಂಗಮ.
ಇಂತಿವರ ಪ್ರಸಾದ ಸಗುಣವೆಂದು ಹಿಡಿದು,
ನಿರ್ಗುಣವೆಂದು ಬಿಡುವ ವ್ರತಗೇಡಿಗಳ ತೋರದಿರು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೮೦॥

೧೪೪೦

ಪ್ರಣವವೆ ಸರ್ವವರ್ಣಂಗಳ ಕಾರ್ಯಕಾರಣವ್ಯಾಪ್ತಿ ಮೂಲವು,
ಪ್ರಣವವೆ ಸರ್ವದೇವತಾಮಯವು,
ಪ್ರಣವವೆ ಸರ್ವಮಂತ್ರಗಳೆಲ್ಲವಕ್ಕೂ ಪ್ರಾಣಕಳೆ.
ಪ್ರಣವವೆ ಸರ್ವದೇವತಾಮಯ ಎಂದುದಾಗಿ
ಸದ್ಗುರುವಿನುಪದೇಶದಿಂದವು ಪ್ರಣವಾಧಿಕವಪ್ಪ
ಮಹಾಮಂತ್ರವ ಜಪಿಸುವ ಸದ್ಭಕ್ತನೆ ದೈವಜ್ಞನು, ಮಂತ್ರಜ್ಞನು.
ಇಂತಪ್ಪ ಸದ್ಭಕ್ತದೇಹಿಕದೇವನಯ್ಯಾ
ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ॥೧೮೧॥

೧೪೪೧

ಪ್ರಥಮದಲ್ಲಿ ಬೀಜವಿಲ್ಲದಿದ್ದಡೆ
ವೃಕ್ಷ ಅಂಕುರ ಪಲ್ಲವ ಶಾಖೆ ಕುಸುಮ ಫಲವೆಲ್ಲಿಯವಯ್ಯಾ?
ಆ ಫಲದ ಮಹಾಮಧುರವೆಲ್ಲಿಯದಯ್ಯಾ?
ಪರಶಿವಲಿಂಗಮೂರ್ತಿ ಪರಮಾತ್ಮ ಬ್ರಹ್ಮ ಬಯಲಾದಡೆ
ನಿಷ್ಕಳತತ್ತ್ವಂಗಳೆಂತಾದವು? ಕೇವಲ ಸಕಲತತ್ತ್ವಂಗಳೆಂತಾದವು?
ತಾನು ಹುಟ್ಟಿ ತಮ್ಮವ್ವೆ ಬಂಜೆ ಎನ್ನಬಹುದೇ?
ಅರಸು ಒಬ್ಬನು ಸ್ವತಂತ್ರನು, ಸರ್ವಕ್ರೀ ವರ್ತಿಸಬಾರದು.
ಪರಶಿವಲಿಂಗಮೂರ್ತಿ ಸರ್ವತತ್ತ್ವಮಯನಪ್ಪ,
ಸರ್ವಕಾರಣಕ್ಕೆ ಕಾರಣನಪ್ಪ.
ತನ್ನ ವಿನೋದಕ್ಕೆ ಪಂಚಭೂತಂಗಳನೂ ಇಚ್ಛಾಜ್ಞಾನ ಕ್ರಿಯಾಶಕ್ತಿಗಳನೂ
ಬ್ರಹ್ಮವಿಷ್ಣಾದಿಗಳನೂ, ಅಷ್ಟಾದಶವಿದ್ಯಂಗಳನೂ ಮಾಡಿ
ಉತ್ಪತ್ತಿ ಸ್ಥಿತಿಯನೂ ನೋಡಿ, ವಿನೋದಿಸಿ
ಮಹಾಲೀಲೆಯಿಂ ಸಂಹರಿಸಿ ಪರಮಸುಖಿಯಾಗಿಪ್ಪನು.
ಮತ್ತೆ 'ಯಥಾಪೂರ್ವಮಕಲ್ಪಯತ್' ಎಂದುದಾಗಿ
ಮರಳಿ ವಿನೋದಿಸುತಿರ್ಪನು.
ಪರಶಿವಲಿಂಗಮೂರ್ತಿಪರಮಾತ್ಮನಲ್ಲಿ ಪರಬ್ರಹ್ಮ ಬಯಲಾದಡೆ
ಗುರುವೆಂತಾದ, ಜಂಗಮವೆಂತಾದ ಹೇಳಿರೆ ?
ಅಂತರಂಗ ಬಹಿರಂಗ ಪರಮಾಕಾಶಮಧ್ಯದಲ್ಲಿ ನಿಷ್ಕಳನು
'ಶಿವಂ ಪರಾತ್ಪರಂ ಶೂನ್ಯಂ' ಎಂದುದಾಗಿ
'ಶಿವಂ ಪರಮಾಕಾಶಮಧ್ಯೇ ಧ್ರುವಂ' ಎಂದುದಾಗಿ
ಶ್ರೀಗುರುಮೂರ್ತಿಯಾಗಿಪ್ಪನು.
ಭ್ರೂಮಧ್ಯದಲ್ಲಿ ಪರಂಜ್ಯೋತಿರ್ಲಿಂಗಮೂರ್ತಿಯಾಗಿಪ್ಪನು.

'ಪರಾತ್ಪರಂ ಪರಂಜ್ಯೋತಿ ಭ್ರೂಮಧ್ಯೇ ತು ವ್ಯವಸ್ಥಿತಂ' ಎಂದುದಾಗಿ.
ಹೃದಯಸ್ಥಾನದಲ್ಲಿ ಪ್ರಾಣಲಿಂಗವು ಜಂಗಮಲಿಂಗವಾಗಿ
ಸಕಲವ್ಯಾಪಾರನಾಗಿಪ್ಪನು.
'ಹೃದಯಸ್ಯ ಮಧ್ಯೇ ವಿಶ್ವೇದೇವಾ ಜಾತವೇದಾ ವರೇಣ್ಯಃ'
ಬ್ರಹ್ಮರಂಧ್ರದಲ್ಲಿ ಲಿಂಗಮೂರ್ತಿ ಪರಮಾತ್ಮ,
ಭ್ರೂಮಧ್ಯದಲ್ಲಿ ಲಿಂಗಮೂರ್ತಿ ಅಂತರಾತ್ಮ,
ಹೃದಯದಲ್ಲಿ ಜಂಗಮಮೂರ್ತಿ ಜೀವಾತ್ಮ,
ಬಹಿರಂಗದಲ್ಲಿ ದೀಕ್ಷೆಗೆ ಗುರು, ಪೂಜೆಗೆ ಲಿಂಗ, ಶಿಕ್ಷೆಗೆ ಜಂಗಮ.
'ಏಕಮೂರ್ತಿಸ್ತ್ರಿಧಾ ಭೇದಃ' ಎಂದುದಾಗಿ
ಅಂತರಂಗ ಬಹಿರಂಗ ಸಕಲ ನಿಷ್ಕಲವೆಲ್ಲವೂ ಏಕೀಭವಿಸಿ
'ಇಷ್ಟಂ ಪ್ರಾಣಸ್ತಥಾ' ಎಂದುದಾಗಿ
ಲಿಂಗವಾಗಿ ಪೂಜೆಗೊಳ್ಳುತ್ತಿದ್ದಾನು. ಇದು ಕಾರಣ,
ಸಕಲತತ್ತ್ವಸರ್ವಕಾರಣವಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೮೨॥

೧೪೪೨

ಪ್ರಸಾದ ಪ್ರಸಾದವೆನುತಿಪ್ಪಿರಿ. ಪ್ರಸಾದವೆಂತಿಪ್ಪುದು? ಪ್ರಸಾದಿಯೆಂತಿಪ್ಪ?
ಪ್ರಸಾದಗ್ರಾಹಕ ಎಂತಿರಬೇಕು ಎಂದರಿಯದೆ
ಪ್ರಸಾದವೆಂದು ಇಕ್ಕಿಹೆವೆಂಬರು, ಕೊಂಡೆಹೆವೆಂಬರು.
ಕೊಂಡು ನಗೆಗೆಡೆಯಾಗುತಿಪ್ಪರಯ್ಯಾ.
ಪ್ರಸಾದ ಪರಾಪರವಾದುದು,
ಶಾಂತನಾಗಿ, ಸತ್ಯನಾಗಿ, ಪ್ರಸನ್ನವಾಗಿಹುದು ಪ್ರಸಾದಿ.
'ಕರ್ಮಣಾ ಮನಸಾ ವಾಚಾ ಗುರುಭಕ್ತಿವಿಚಕ್ಷಣಃ
ಶರೀರಂ ಪ್ರಾಣಮರ್ಥಂ ಚ ಸದ್ಗುರುಭ್ಯೋ ನಿವೇದಯೇತ್' ಎಂದು
ದೀಕ್ಷಾಮೂರ್ತಿ ಪರಶಿವಗುರುಲಿಂಗಕ್ಕೆ
ತನುಮನಧನವನರ್ಪಿಸುವುದು.
ಪೂಜಾಕಾರಮೂರ್ತಿ ಪರಮಗುರುಮಹಾಲಿಂಗಕ್ಕೆ
ತನುಮನಧನವರ್ಪಿಸಿ,
ಶಿಕ್ಷಾಮೂರ್ತಿ ಪರಮಗುರುಜಂಗಮಲಿಂಗಕ್ಕೆ
ತನು ಮನ ಧನವನರ್ಪಿಸಿ, ಪ್ರಸನ್ನಪ್ರಸಾದವ ಪಡೆದು ಭೋಗಿಸಿ,
ಆ ಪ್ರಸಾದವ ಶುದ್ಧವ ಮಾಡಿ ನಿಲಿಸಿ,
ಶಾಂತನಾಗಿ, ನಿತ್ಯನಾಗಿ, ಪ್ರಸನ್ನಮೂರ್ತಿಯಾಗಿಪ್ಪ
ಆ ಪ್ರಸಾದಿಯೇ ಪ್ರಸಾದಗ್ರಾಹಕ.
ಆ ಪ್ರಸಾದಿಯೇ ಗುರುವೆಂದು, ಆ ಪ್ರಸಾದಿಯೇ ಲಿಂಗವೆಂದು,

ಆ ಪ್ರಸಾದಿಯೇ ಜಂಗಮವೆಂದು, ತನುಮನಧನದಲ್ಲಿ ವಂಚನೆ ಇಲ್ಲದೆ
ಕೇವಲ ವಿಶ್ವಾಸದಿಂದ ನಂಬಿ ಪ್ರಸಾದವ ಗ್ರಹಿಸುವುದು. ಇದುಕಾರಣ,
ಪ್ರಸಾದಗ್ರಾಹಕನ ಪರಿಯೆಂಬ ಭಾವ ಹಿಂಗದೆ
ಇಕ್ಕುವ ಪರಿಯ ನೋಡಾ. ಇದು ಕಾರಣ.
ಮಹಾನುಭಾವರ ಸಂಗದಿಂದ ಅರಿಯಬಹುದಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೮೩॥

೧೪೪೩

ಪ್ರಸಾದವೆಂದು ಪ್ರಸಾದಿಗಳೆಂದು,
ಪ್ರಸಾದವ ಕೊಂಡೆನೆಂದು ನುಡಿವುತ್ತಿರ್ಪರು.
ಇನ್ನೆಂತಯ್ಯಾ ಶಿವಶಿವಾ! ಅರ್ಪಿತವಿಲ್ಲದೆ ಪ್ರಸಾದವಾದ ಪರಿಯೆಂತಯ್ಯಾ?
ಆವಾವ ಪದಾರ್ಥಂಗಳನು ಆವಾವ ದ್ರವ್ಯಂಗಳನು
ಎಹಗೆಹಗರ್ಪಿಸಿದಿರಿ, ಹೇಳಿರಣ್ಣಾ?
ಪ್ರಸಾದವೇ ಹೇಂಗಾದುದು ಹೇಳಿರೆ?
ಶಬ್ದ ಸ್ಪರ್ಶ ರೂಪ ರಸ ಗಂಧಂಗಳನು
ಎಹಗೆಹಗೆ ಅರ್ಪಿಸುವಿರಿ ಹೇಳಿರೆ? ಅದು ಹೇಂಗರ್ಪಿಸಬಹುದು?
ಪ್ರಸಾದವಲ್ಲದೆ ಕೊಳ್ಳೆನೆಂಬವರಿಗೆ ಅರ್ಪಿಸುವದಂತಿರಲಿ,
ಮುನ್ನಿನ ಪ್ರಸಾದಿಗೆ ಅನರ್ಪಿತವ ನೆನೆವ ಪರಿಯೆಂತೊ?
ಅನರ್ಪಿತವ ನೋಡುವ ಪರಿಯೆಂತೋ?
ಅನರ್ಪಿತವ ಕೇಳುವ ಪರಿಯೆಂತೊ?
ಅನರ್ಪಿತವ ವಾಸಿಸುವ ಪರಿಯೆಂತೊ?
ಅನರ್ಪಿತವ ರುಚಿಸುವ ಪರಿಯೆಂತೊ?
ಅನರ್ಪಿತವ ಸ್ಪರ್ಶಿಸುವ ಪರಿಯೆಂತೊ?
ನೆನೆಯಬಾರದು, ನೋಡಬಾರದು, ಕೇಳಬಾರದು,
ವಾಸಿಸಬಾರದು, ರುಚಿಸಬಾರದು, ಮುಟ್ಟಬಾರದು,
ಶಿವಶಿವಾ, ತೊಡಕು ಬಂದಿತ್ತಲ್ಲಾ! ಅನರ್ಪಿತವ ಕೊಳಬಾರದು.
'ಸರ್ವಂ ಚ ತೃಣಕಾಷ್ಠಂ ಚ ಭಕ್ಷ್ಯಂ ಭೋಜ್ಯಾನುಲೇಪನಂ
ಶಿವಾರ್ಪಿತಂ ವಿನಾ ಭುಂಜೇ ಭುಕ್ತಂ ಸದ್ಯೋ[s]ಪಿ ಕಿಲ್ಬಿಷಂ'
_ಎಂದುದಾಗಿ, ಅರ್ಪಿಸಿದ ಪ್ರಸಾದವ ಕೊಳ್ಳಲೇ ಬೇಕು. ಇನ್ನೆಂತಯ್ಯಾ?
ಆವನಾನೊಬ್ಬ ಪ್ರಸಾದಿಗೆ ಅನರ್ಪಿತವ ನೆನೆಯಬಾರದು.
ಅರ್ಪಿಸುವ ಪರಿ ಇನ್ನೆಂತಯ್ಯಾ, ವರ್ಮ ಜ್ಞಾನವಾಗದನ್ನಕ್ಕ?
ಭಾವಶುದ್ಧವಾಗದನ್ನಕ್ಕ? ಆ ಲಿಂಗವಂತನು ಲಿಂಗಪ್ರಾಣಿಯಾಗದನ್ನಕ್ಕ?
ಮಹಾನುಭಾವರ ಸಂಗವಿಲ್ಲದನ್ನಕ್ಕ?

ಇದು ಕಾರಣವಾಗಿ, ವರ್ಮಜ್ಞನಾಗಿ, ಭಾವಶುದ್ಧವಾಗಿ, ಲಿಂಗಪ್ರಾಣಿಯಾಗಿ,
ಮಹಾನುಭಾವರ ಸಂಗದಿಂದರಿದು ಅರ್ಪಿಸಿದ ಪ್ರಸಾದವ ಕೊಂಡು
ಮುಕ್ತರಪ್ಪುದಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೮೪॥

೧೪೪೪

ಪ್ರಾಣಲಿಂಗ, ಲಿಂಗಪ್ರಾಣ
'ಇಷ್ಟಂ ಪ್ರಾಣಸ್ತಥಾ ಭಾವಸ್ತ್ರಿಧಾ ಚೈಕಂ' ಎಂದುದಾಗಿ
ಪಂಚಭೂತಕಾಯವಳಿದು ಪ್ರಸಾದಕಾಯವ ಮಾಡಿ
ಭಕ್ತದೇಹಿಕನೆನಿಸಿದನು.
ಈ ಸತ್ಕ್ರೀಯನು ಶ್ರೀಗುರು ಕರುಣಿಸಿ ಮಾಡಿದನಾಗಿ
ಪ್ರಾಣಲಿಂಗ, ಕಾಯಭಕ್ತನು ಇದು ಸ್ವಭಾವ.
ದಾಸೋಹಿಯಾಗಿ ಅರ್ಚನೆ ಪೂಜನೆ ಸರ್ವದ್ರವ್ಯ
ಸಕಲಭೋಗವನೂ ಅರ್ಪಿತವ ಮಾಡುತ್ತಿಹನು, ಪ್ರಸಾದವ ಭೋಗಿಸುತ್ತಿಹನು.
ಸತ್ಕ್ರೀಯಲ್ಲಿ ಲಿಂಗಕ್ಕೆ ಕಾಯಶೂನ್ಯನಾಗಿ
ಭಕ್ತಕಾಯ ಮಮಕಾಯನೆಂದು ಅವಗ್ರಹಿಸಿಕೊಂಡ ಭಕ್ತಂಗೆ
ಬೇರೆ ಪ್ರಾಣವಿಲ್ಲಾಗಿ ಪ್ರಾಣವೆಂದು ಅವಗ್ರಹಿಸಿಕೊಂಡ.
ಇಂತಹ ಪ್ರಾಣಲಿಂಗವು, ಕಾಯಭಕ್ತನು ತನ್ನೊಳಗೆ ತಾನೇ ಐಕ್ಯವಾಯಿತ್ತು.
ಭಕ್ತನೇ ಲಿಂಗ, ಲಿಂಗವೇ ಭಕ್ತನು,
ದಾಸೋಹಕ್ರೀಯೇ ಸೋಹಕ್ರೀ, ಸೋಹಕ್ರೀಯೇ ದಾಸೋಹಕ್ರೀ.
ಈ ಕ್ರೀಯನು ಅದ್ವೈತವೆನ್ನಿ, ಸೋಹವೆನ್ನಿ, ದಾಸೋಹವೆನ್ನಿ.
ಬಲ್ಲವರುಗಳು ಬಲ್ಲಂತೆ ನಿಮ್ಮ ನಿಮ್ಮ ಅರಿವಿನ ಹವಣಿಂಗೆ ನುಡಿಯಿರಿ.
ಆ ಲಿಂಗಾಯತವ, ಆ ಲಿಂಗದ ಮರ್ಮವ
ಅರ್ಪಿತದ ಮರ್ಮವ, ಪ್ರಸಾದದ ಮಹಿಮೆಯ
ಮಹಾಪರಿಣಾಮದ ಕ್ರೀಯು ಸಾಮಾನ್ಯರಿಗೆ ಅರಿಯಬಾರದು.
ಈ ಮಹಾ ಕ್ರೀ ವಾಙ್ಮನೋತೀತ.
ಈ ಮಹಾಕುಳವ ಮಹಾನುಭಾವರೇ ಬಲ್ಲರು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೮೫॥

೧೪೪೫

ಪ್ರಾಣ ಲಿಂಗಸಂಬಂಧಿ, [ಲಿಂಗವೂ ಪ್ರಾಣಸಂಬಂಧಿ].
ಕಾಯ ಲಿಂಗಸಂಬಂಧಿ, ಲಿಂಗವೂ ಕಾಯ ಸಂಬಂಧಿ.
ಈ ಸತ್ಕ್ರಿಯಾ ಸಂಬಂಧವ ಶ್ರೀಗುರು ಮಾಡಿದನಾಗಿ

ಲಿಂಗವಂತನು ಮುಟ್ಟಿತ್ತೆ ಅರ್ಪಿತ, ಕೊಂಡುದೆ ಪ್ರಸಾದ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೮೬॥

೧೪೪೬

ಪ್ರಾಣಲಿಂಗಸಂಬಂಧಿಯಾಗಿ, ಅಂಗಲಿಂಗಸಂಬಂಧಿಯಾಗಿ,
ಕರಸ್ಥಲದಲ್ಲಿ ಲಿಂಗವ ಬಿಜಯಂಗೈಸಿಕೊಟ್ಟು,
ಶ್ರೀಗುರು ರಕ್ಷಿಸಿದ ಬಳಿಕ, ಲಿಂಗವೇ ಪ್ರಾಣ, ಪ್ರಾಣವೇ ಲಿಂಗ,
ಲಿಂಗವೇ ಅಂಗ, ಅಂಗವೇ ಲಿಂಗ.
ಇಂತು ಅಂತರಂಗ ಬಹಿರಂಗ ಲಿಂಗವಾಗಿ
ಸರ್ವಾಂಗ ಲಿಂಗವಾದ ಬಳಿಕ
ಲಿಂಗದ ನಡೆ, ಲಿಂಗದ ನುಡಿ,
ಪಂಚೇಂದ್ರಿಯಗಳೆಲ್ಲವೂ ಲಿಂಗೇಂದ್ರಿಯಂಗಳು.
ಅಂತಃಕರಣ ಚತುಷ್ಟಯಂಗಳು ಲಿಂಗಕರಣಂಗಳು.
ವರ್ತಕ ನಿವರ್ತಕ ಇದು ಸಹಜ ಸತ್ಯ ಪ್ರಾಣಲಿಂಗಸಂಬಂಧಿ,
ಅನ್ಯವರ್ತಕ ವರ್ತಿಸಿದಡೆ ಪ್ರಾಣಲಿಂಗಸಂಬಂಧಿಯಲ್ಲ,
ಅವನು ಪೂಜಕರಂತೆ ಪೂಜ್ಯಕನಪ್ಪನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೮೭॥

೧೪೪೭

ಪ್ರಾಣಲಿಂಗ ಸಂಬಂಧಿಯಾದ ಸದ್ಭಕ್ತನು
ಏಕಭುಕ್ತೋಪವಾಸಂ ಮಾಡಲಾಗದು.
ಅದೆಂತೆಂದಡೆ: ದೇವರಾರೋಗಣೆ ತಪ್ಪುವುದು,
ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರೀ ತಪ್ಪುವುದು,
ಶ್ರೀಗುರುವಾಜ್ಞೆ ತಪ್ಪುವುದು.
ತನಗೆ ಪ್ರಸಾದವಿಲ್ಲವಾಗಿ ಮುಕ್ತಿಯಿಲ್ಲ.
ದೋಷಕಾರಿಯಪ್ಪನು ಕೇಳಿರಣ್ಣಾ.
'ಪ್ರಾಣಲಿಂಗಸಮಾಯುಕ್ತಾ ಏಕಭುಕ್ತೋಪವಾಸಿನಃ
ಪ್ರಸಾದೋ ನಿಷ್ಫಲಶ್ಚೈವ ರೌರವಂ ನರಕಂ ಭವೇತ್'
ಎಂದುದಾಗಿ,
ಇದು ಕಾರಣ, ನಿತ್ಯನೈಮಿತ್ತಿಕ ಪಂಚಪರ್ವ ವಿಶೇಷತಿಥಿಗಳಲ್ಲಿ
ಆವ ದಿನದಲ್ಲಿಯೂ ಒಂದೆಯೆಂದು
ಅಷ್ಟವಿಧಾರ್ಚನೆ ಷೋಡಶೋಪಚಾರವೆ ಕರ್ತವ್ಯವೆಂದು
ದೇವರಾರೋಗಣೆಯ ಮಾಡಿಸಿ, ಪ್ರಸನ್ನತ್ವವ ಪಡೆದು

ಪ್ರಸಾದವ ಗ್ರಹಿಸಿ ಮುಕ್ತರಪ್ಪುದು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೮೮॥

೧೪೪೮
ಪ್ರಾಣಲಿಂಗ ಸ್ವಾಯತವಾದ ಶಿವಭಕ್ತಂಗೆ,
ಸದ್ಭಕ್ತಿಮಾರ್ಗವು ಕ್ರೀ ನೋಡಾ.
ಲೋಕಾಚಾರವ ಮಾಡಲಾಗದು,
ಲೋಕದ ಬಳಕೆಯ ಬಳಸಲಾಗದು.
ಲೋಕ ಲೌಕಿಕರಲ್ಲಿ ವರ್ತಿಸಲಾಗದು,
ಲೋಕಾಚಾರವೆಲ್ಲವನು ಬಿಡಬೇಕು.
'ಲೋಕಾಚಾರನಿಬಂಧೇನ ಲೋಕಾಲೋಕವಿವರ್ಜಿತಂ
ಲೋಕಾಚಾರಂ ಪರಿತ್ಯಜ್ಯ ಪ್ರಾಣಲಿಂಗಸ್ಥಲಂ ಭವೇತ್'
ಎಂದುದಾಗಿ,
ಲೋಕಾಚಾರವ ತ್ಯಜಿಸಿ, ಶಿವಾಚಾರ ಸನ್ಮಾರ್ಗದಲ್ಲಿ
ಪಂಚಾಚಾರ ನಿಯತಾತ್ಮನಾದ ಸದ್ಭಕ್ತನೆ ಪ್ರಾಣಲಿಂಗಿ.
ಆ ಸದಾಚಾರವೆ ಸರ್ವಾಂಗಲಿಂಗವಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೮೯॥

೧೪೪೯
'ಬಸವ, ಬಸವ, ಬಸವ' ಎನುತಿರ್ಪವರೆಲ್ಲರು
ಬಸವನ ಘನವನಾರೂ ಅರಿಯರಲ್ಲ!
ಅನಾದಿ ಪರಶಿವನಲ್ಲಿ ಅಂತರ್ಗತಮಾಗಿರ್ದ
ಮಹಾಪ್ರಕಾಶವೆ ಬಹಿಷ್ಕರಿಸಿತ್ತು.
ಆ ಚಿತ್ತೇ ಚಿದಂಗ ಬಸವ, ಆ ಚಿದಂಗ ಬಸವನಿಂದುದಯಿಸಿದ
ಚಿದ್ವಿಭೂತಿಯನೊಲಿದು ಧರಿಸಿದ ಶರಣರೆಲ್ಲರು
ಜ್ಯೋತಿರ್ಮಯಲಿಂಗವಪ್ಪುದು ತಪ್ಪದು ಕಾಣಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೯೦॥

೧೪೫೦
ಬಹಿರಂಗದಲ್ಲಿ ಶಿವಲಿಂಗ, ಅಂತರಂಗದಲ್ಲಿ ಅನ್ಯದೈವ,
ಬಹಿರಂಗದಲ್ಲಿ ಲಿಂಗಕ್ರೀ, ಅಂತರಂಗದಲ್ಲಿ ಅನ್ಯಕ್ರೀ,
ಬಹಿರಂಗದಲ್ಲಿ ಭಕ್ತರು, ಅಂತರಂಗದಲ್ಲಿ ಭವಿಗಳು.
ಇಂತಿವರುಗಳ ಭಕ್ತರೆಂಬೆನೆ? ಎನಬಾರದು,

ನಿಮ್ಮ ಪೂಜಿಸಿಹರಾಗಿ ಭಕ್ತರೆಂಬೆನೆ? ಸದಾಚಾರಕ್ಕೆ ಸಲ್ಲರು.
ಲಿಂಗವಂತರು ಮೆಚ್ಚರು. ಈ ಉಭಯ ಸಂಕೀರ್ಣವ ನೀನೆ ಬಲ್ಲೆ.
ಎನ್ನ ಮನವಿಡಿಯದು, ಎನಗಿನ್ನಾವುದು ಬುದ್ಧಿ ಎಂಬುದ
ವಿಚಾರಿಸಿ ಕರುಣಿಸಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೮೯೧॥

೧೪೫೧
ಬಳ್ಳ ಬೇವಿನಕೊರಡು ಆಡಿನಹಿಕ್ಕೆ ಲಿಂಗವೆ?
ಸದ್ಭಾವದಿಂ ಭಾವಿಸಿ ಲಿಂಗವ ಮಾಡಿ ಸದ್ಭಕ್ತರಾದರು ಪುರಾತನರು.
ಕೇವಲ ಪರಶಿವಮೂರ್ತಿಲಿಂಗವು.
ಶ್ರೀಗುರು ಪರಶಿವನು, ಲಿಂಗವು ಪರಶಿವನು, ಜಂಗಮವು ಪರಶಿವನು,
ದಿಟವ ಸಟೆಮಾಡಿ ನರಕಕ್ಕಿಳಿಯದಿರಿ, ಅಭಕ್ತರಾಗದಿರಿ.
ಇವಂದಿರಂತಿರಲಿ ತಮ್ಮ ಬಲ್ಲಂತಾಗಲಿ.
ಮನವೇ ನಾ ನಿಮ್ಮ ಬೇಡಿಕೊಂಬೆನು ನಂಬು ಕಂಡಾ.
ಸದ್ಭಾವದಿಂ ಲಿಂಗವ ನಂಬಲು ಭಕ್ತಿ ಸದ್ಭಕ್ತಿ
ಕೇವಲ ಮುಕ್ತಿಯಪ್ಪುದು ನೆರೆ ನಂಬು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೮೯೨॥

೧೪೫೨
ಬೆಡಗಿನಲಿಪ್ಪ ಅಗ್ನಿ ಮೈದೋರದಿದ್ದಲ್ಲಿ ಆಕಾರ ನಾಸ್ತಿಯಾಗದು.
ಇಷ್ಟಲಿಂಗಕ್ಕೆ ಕಾಯದ ಕೈ ಮುಟ್ಟಿ ಮಾಡುವ
ಅಷ್ಟವಿಧಾರ್ಚನೆ ಷೋಡಶೋಪಚರ್ಯದಿಂದ
ಬೆಡಗಿನಲಿಪ್ಪ ಜ್ಞಾನಾಗ್ನಿ ಮೈದೋರದಲ್ಲಿ ಆಕಾರನಾಸ್ತಿಯಾಯಿತ್ತು.
ಅಂಗದ ಮೇಲಣ ಲಿಂಗದ ಜವನಿಕೆ ಬಗೆದಗೆದಡೆ
ಕಾಯದ ಪರಿ ನಷ್ಟ, ಜ್ಞಾನಾಗ್ನಿಯಿಂದ ಪ್ರಾಣನ ಭೋಗ ನಷ್ಟ.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನ ಪೂಜಿಸುವ ಶರಣನ
ಮರ್ತ್ಯಜನೆಂದಡೆ ನಾಯಕ ನರಕ. ॥೮೯೩॥

೧೪೫೩
ಬ್ರಹ್ಮದೇವರಾದರೆ ತಾನೇರುವ ಹಂಸೆಯಿಂದಲಿ ಬಿತ್ತಿ ಬೆಳೆದು
ಅದರ ಕ್ಷೀರಪ್ರಸಾದದಿಂದ ತೃಪ್ತನಾಗಿ
ಅದರ ಮೂತ್ರ ಹಿಕ್ಕೆಯಿಂದ ಪವಿತ್ರ ಪಾವನನಾಗನೇತಕ್ಕೆ?
ವಿಷ್ಣು ತಾ ದೈವನಾದರೆ ತಾನೇರುವ ಗರುಡನಿಂದ ಬಿತ್ತಿ ಬೆಳೆದು
ಅದರ ಕ್ಷೀರ ಪ್ರಸಾದದಿಂದ ತೃಪ್ತನಾಗಿ

ಅದರ ಮೂತ್ರ ಹಿಕ್ಕೆಯಿಂದ ಪವಿತ್ರ ಪಾವನನಾಗನೇತಕ್ಕೆ?
ವಿನಾಯಕ ಭೈರವ ಮೈಲಾರ ಜಿನ ಇವರು ದೇವರಾದರೆ
ತಾವು ಏರುವ ಇಲಿ ಚೇಳು ಕುದುರೆ ಕತ್ತೆಗಳಲ್ಲಿ ಬಿತ್ತಿ ಬೆಳೆದು
ಅವರ ಕ್ಷೀರ ಪ್ರಸಾದದಿಂದ ತೃಪ್ತರಾಗಿ
ಅವರ ಮೂತ್ರದಿಂದ ಪವಿತ್ರರಾಗರೇತಕ್ಕೆ?
ಅಯ್ಯಾ, ಇಂತೀ ಭೇದವನರಿಯದ ಅವಿಚಾರಿ ಹೀನರ ಮಾತದಂತಿರಲಿ,
ಬ್ರಹ್ಮರು ಇಂದ್ರ ದಿಕ್ಪಾಲಕರು ಮುಂತಾಗಿ ಸಮಸ್ತದೇವರ್ಕಳೆಲ್ಲ
ಕೊಂಬುದು ಉಂಬುದು ಗೋ ವೃಷಭನ ಅಮೃತ ಪ್ರಸಾದ,
ಆ ಗೋಮಯದಿಂದ ಪಾವನ ಶುದ್ಧ
ಆ ಮೂತ್ರದಿಂದ ಪವಿತ್ರ ಪಾವನ ಶುದ್ಧರಯ್ಯ.
ಆ ವೃಷಭನ ವಿಭೂತಿಯಿಂದ ಸಮಸ್ತದೇವತಾದಿಗಳು
ಸರ್ವಮುನಿಜನಂಗಳೆಲ್ಲ ಧರಿಸಿ ಬ್ರಹ್ಮತ್ವಂ ಪಡೆದು
ಮುಕ್ತಿಫಲಪದವಾಯಿತ್ತು, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೯೪॥

೧೪೫೪
ಬ್ರಹ್ಮ ವಿಷ್ಣು ಮೊದಲಾದ ದೇವ ದಾನವ ಮಾನವರೆಲ್ಲರನೂ
ಆಸೆ ಘಾಸಿಮಾಡಿ ಕಾಡಿತ್ತು.
ಮಹತ್ತಪ್ಪ ವ್ರತನಿಯಮ ಗುರುತ್ವ ಉಳ್ಳವರನೂ
ಕೆಡಿಸಿ ಲಘುಮಾಡಿ ನಗೆಗೇಡಮಾಡಿತ್ತು.
ಈ ಸಾಮರ್ಥ್ಯವುಳ್ಳ ಪುರುಷರನು ಗಾಸಿಮಾಡಿ ಸೋಲಿಸಿ
ತಾನು ಗೆಲ್ಲುವ ಸಾಮರ್ಥ್ಯವುಳ್ಳ ಆಸೆ ಇದೇನೋ!
ಎಂದು ವಿಚಾರಿಸಲು, ಶಿವಸಂಬಂಧಿ ಆಸೆಗೆ ಆಸಕ್ತನಾದಡೆ
ಶಿವನಾಜ್ಞೆಯಿಂದ ಕಾಡುವುದು,
ಶಿವನೊಲಿದವರ ಹೊದ್ದಲಮ್ಮದಯ್ಯಾ
ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ॥೯೫॥

೧೪೫೫
ಬ್ರಹ್ಮವೆಂಬುದನರಿದ ಬಳಿಕ
ಅಷ್ಟಾದಶ ವಿದ್ಯವ ನೋಡುವ ಕೇಳುವ ಆಯಸವಿನ್ನದೇತಕಯ್ಯಾ?
ಶ್ರೀಗುರುವನರಿದ ಬಳಿಕ ಮೇಲೆ ಬಯಸುವಾಯಸವದೇತಕಯ್ಯಾ?
ಮನವೇ ಮಹಾವಸ್ತುವನರಿದ ಬಳಿಕ ಅಜ್ಞಾನಪ್ರಂಪಚು ಏತಕಯ್ಯಾ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೯೬॥

೧೪೫೬
ಬ್ರಹ್ಮಸೃಷ್ಟಿ ಪಂಚಭೂತ ಸಮ್ಮಿಶ್ರದಿಂದಾದ ಕಾಯವು ಭೂತಕಾಯವು.
ವಾಯುಪ್ರಾಣಿಗೆ ಉತ್ಪತ್ತಿಸ್ಥಿತಿಲಯ ಕಾರಣಕಾಯವು.
ಈ ಪರಿಯ ಉತ್ಪತ್ತಿಯು ದೇವದಾನವ
ಮಾನವರಿಗೆಯೂ ಒಂದೇ ಪರಿ.
ಶ್ರೀಗುರುವಿನ ಸೃಷ್ಟಿಯಿಂದಲೂ, ಮಹಾಪ್ರಸಾದದಿಂದಲೂ
ಮಹಾಮಂತ್ರಸಮ್ಮಿಶ್ರದಿಂದಾದ ಕಾಯವು ಪ್ರಸಾದಕಾಯವು.
ಮಹಾಮಂತ್ರಪಿಂಡವು ಭಕ್ತಿಕಾಯವು.
ಲಿಂಗಪ್ರಾಣಿಗೆ ಉತ್ಪತ್ತಿಸ್ಥಿತಿಲಯವಿಲ್ಲ. ಸತ್ಯನು ಸದ್ಯೋನ್ಮುಕ್ತನು.
ಈ ಪರಿಯ ಶ್ರೀಗುರುಕಾರುಣ್ಯವ ಪಡೆದ ಮಹಾತ್ಮರಿಗೆ ಒಂದೇ ಪರಿ.
ಶ್ರೀಗುರುವಿನ ಕಾರುಣ್ಯದ ಪರಿ ಶಿವಭಕ್ತನ ಇರವಿನ ಪರಿ ಇಂತುಟಯ್ಯಾ.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ,
ನಿಮ್ಮ ಶರಣರಿಗೆ ಲೋಕದ ಮಾನವರು ಸರಿ ಎಂದಡೆ
ನಾಯಕನರಕ ತಪ್ಪದು. ॥೯೬೭॥

೧೪೫೭
ಬ್ರಹ್ಮಾಬ್ರಹ್ಮರಿಲ್ಲದಂದು, ವಿಷ್ಣುಮಾಯೆ, ಜಗಮಾಯೆಯಿಲ್ಲದಂದು,
ಸೃಷ್ಟಿಯಸೃಷ್ಟಿ ಇಲ್ಲದಂದು, ಕಾಳಿಂಗ ಕರಿಕಂಠರಿಲ್ಲದಂದು,
ಉಮೆಯ ಕಲ್ಯಾಣವಿಲ್ಲದಂದು, ದ್ವಾದಶಾದಿತ್ಯರಿಲ್ಲದಂದು,
ನಂದಿಕೇಶ್ವರ ದಂಡನಾಥರಿಲ್ಲದಂದು, ವಿಷವನಮೃತ ಮಾಡದಂದು,
ಲಿಂಗಸ್ಥಲ, ಜಂಗಮಸ್ಥಲ, ಪ್ರಸಾದಿಸ್ಥಲವಿಲ್ಲದಂದು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.
ನಿಮ್ಮ ನಿಲವನಾರು ಬಲ್ಲರು? ॥೯೬೮॥

೧೪೫೮
ಭಕ್ತಕಾಯ ಮಮಕಾಯ ಕಂಡಾ ಲಿಂಗವು,
ಲಿಂಗವಂತಂಗೆ ಏಕಿನ್ನು ಬೇರೆ ಚಿಂತೆ?
ಲಿಂಗವಂತಂಗೆ ಗುರು ಲಿಂಗ ಪ್ರಾಣ ಏಕವಾಗಿ, ಪ್ರಾಣಲಿಂಗವಾಗಿ
ಅಂತರಂಗ ಬಹಿರಂಗಭರಿತನಾಗಿ, ಪ್ರಾಣಲಿಂಗವಾಗಿ
ಅಂಗದ ಮೇಲೆ ಲಿಂಗಸ್ವಾಯತವಾಗಿ ನಿರಂತರ ಇಪ್ಪ ಕಂಡಾ.
ಏಕಿನ್ನು ಬೇರೆ ಅನ್ಯರಾಸೆ!
ಲಿಂಗವಂತರು ಲಿಂಗವನೇ ಚಿಂತಿಸುವುದು, ಲಿಂಗವನೇ ಆಸೆಗೈವುದು,
ಲಿಂಗವನೇ ಕೊಂಬುದು, ಲಿಂಗವಂತರಿಗೆ ಕೊಡುವುದು.

ಲಿಂಗವಂತಂಗೆ ಅನುವಿದು, ಆಯತವಿದು,
ಬುದ್ಧಿಯಿದು, ಸಿದ್ಧಿಯಿದು, ಮುಕ್ತಿಯಿದು, ಯುಕ್ತಿಯಿದು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೧೯೯॥

೧೪೫೯

'ಭಕ್ತಕಾಯ ಮಮಕಾಯ' ಎಂಬ ವಾಕ್ಯದಲ್ಲಿ ಕಾಯಲಿಂಗವೆಂದರಿದಿಪ್ಪ,
ಗುರು ಲಿಂಗಪ್ರಾಣವ ಮಾಡಿದನಾಗಿ ಲಿಂಗಪ್ರಾಣವೆಂದರಿದಿಪ್ಪ,
ಸರ್ವಕ್ರೀ ಲಿಂಗಕ್ರೀ ಎಂದರಿದಿಪ್ಪನಯ್ಯಾ.
ಎರಡೆಂದು ಭಾವಿಸ, ಒಂದೆಂದು ನಡೆಯ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೦೦॥

೧೪೬೦

ಭಕ್ತಂಗಾಗಲಿ ಜಂಗಮಕ್ಕಾಗಲಿ ಸಹಪಜ್ತೆ ಶಿವಭೋಜನದಲ್ಲಿ
ಮನವೆರಕದಿಂದ ಸಂಪ್ರೀತಿಯಿಂದ ಪಾದೋದಕ ಪ್ರಸಾದವಿಲ್ಲದೆ
ಭೋಜನವ ಮಾಡಲು ವಿಪ್ರಭೋಜನವಾಯಿತ್ತಾಗಿ,
[ಕೆ]ಟ್ಟ ಸೂಕರನ ಬಸುರಲಿ ಬಪ್ಪುದು ತಪ್ಪದು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೦೧॥

೧೪೬೧

ಭಕ್ತನು ರುದ್ರಗಣಂಗಳ ಮಠಕ್ಕೆ ಬಂದಡೆ ಭೃತ್ಯನಾಗಿರಬೇಕು.
ಕರ್ತನಾಗಿ ಕಾಲತೊಳೆಯಿಸಿಕೊಂಡಡೆ
ಹಿಂದೆಮಾಡಿದ ಭಕ್ತಿ ಹಾನಿಯಪ್ಪುದು.
ಲಕ್ಷಗಾವುದ ಹೋಗಿಯಾದಡೂ
ಭಕ್ತನು ಗಣಂಗಳ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿ
ಗುರುಲಿಂಗಜಂಗಮಕ್ಕೆ ಅರ್ಥಪ್ರಾಣಾಭಿಮಾನವ ಕೊಟ್ಟು
ಅಹಂಕಾರವಳಿದಿಹ ಪುರಾತನರು ಮೆಟ್ಟುವ ಪಾದರಕ್ಷೆಗಳ
ಮಸ್ತಕದ ಮೇಲಿರಿಸಿಕೊಂಡು,
ಕೃತಾರ್ಥನಪ್ಪುದಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೦೨॥

೧೪೬೨

ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ
ಶರಣನೈಕ್ಯನೆಂಬ ಭೇದ ಸಂದಿಲ್ಲದೊಂದಾಗಿ ಹೇಳುವೆನು:

ಭಕ್ತನೆಂಬಾತ ತನುಗುಣನಾಸ್ತಿಯಾಗಿ
ಕಾಯದ ಕ[ರ]ಂಗಳಿಂದ ಬಂದ ಪದಾರ್ಥವ
ಸೂಕ್ಷ್ಮಕರದಲ್ಲಿ ರೂಪಿಂಗರ್ಪಿಸಿ ರುಚಿಯ ನಿರೂಪಿಂಗರ್ಪಿಸುವ ಭೇದ:
'ಅಂಗಾನಾಂ ಲಿಂಗಸಂಬಂಧೋ ಅಂಗಭಾವವಿಮುಕ್ತಯೇ
ಅಂಗಲಿಂಗಸಮಾಯುಕ್ತೋ ಜೀವೋ ಲಿಂಗಂ ಸದಾಶಿವಃ
ಲಿಂಗಸಂಗಸ್ಯ ಮಾತ್ರೇಣ ಮನಃಪ್ರಾಪ್ನೋತಿ ಲಿಂಗತಾಂ
ಲಿಂಗಾರ್ಪಣಮಿದಂ ದೇವಿ ಪ್ರಾಣಲಿಂಗಾರ್ಚನಂ ಸದಾ
ಲಿಂಗಪ್ರಸಾದಂ ಭುಂಜೀಯಾತ್ ಕೇವಲಂ ಜ್ಯೋತಿರೂಪವತ್
ಅಸಂಸ್ಕಾರಿಕೃತಾ ಪೂಜಾ ಪ್ರಸಾದೋ ನಿಷ್ಫಲೋ ಭವೇತ್'
ಎಂದುದಾಗಿ,
ಇಂತು ವರ್ಮಸಕೀಲಂಗಳನರಿದು ತಾತ್ಪರ್ಯವರ್ಮ ಕಳೆಗಳನರಿದು
ಶಿವಲಿಂಗಾರ್ಚನೆಯಂ ಮಾಡಲಾಗಿ ಆತನೀಗ ಲಿಂಗಭಕ್ತ.
ಇನ್ನು ಮಾಹೇಶ್ವರಾದಿಭೇದಂಗಳಂ ಪೇಳ್ವೆ:
[ಎನ್ನ] ಕಂಗಳು ಭಕ್ತ, ಎನ್ನ ಕಿವಿಗಳು ಭಕ್ತ,
ಎನ್ನ ನಾಸಿಕ ಭಕ್ತ, ಎನ್ನ ಇವು ಮೊದಲಾದ
ಕರಚರಣಾದ್ಯವಯವಂಗಳೆಲ್ಲವನೂ ಸದ್ಗುರುಸ್ವಾಮಿ ಭಕ್ತನ ಮಾಡಿದನಾಗಿ
ಮನವ ಬಯಲನೈದಿಸಿದನಾಗಿ ಬಾಹ್ಯಕರದರ್ಪಣೆಯಂ ತ್ಯಜಿಸಿ
ಸೂಕ್ಷ್ಮಮನದ ಕರದಿಂದ ಬಂದ ಪದಾರ್ಥದ ಪೂರ್ವಾಶ್ರಯವ ಕಳೆದು
ರುಚಿಪದಾರ್ಥದ ನಿರೂಪ ಲಿಂಗಕ್ಕೆ
ಅನಾಹತಕಾಯದ ಕರದಿಂದ ನಿರಂತರ ಅರ್ಪಿಸಿ
ಮನ ಆನಂದವನೈದಲಾಗಿ ಮಾಹೇಶ್ವರ.
'ಪ್ರಾಣೀ ತು ಲಿಂಗಸಂಬಂಧೀ ಪ್ರಾಣಲಿಂಗೀ ಪ್ರಕೀರ್ತಿತಃ
ಸದಾಚಾರಮಿದಜ್ಞೇಯಂ ಪ್ರಾಣಲಿಂಗಪ್ರಸಾದತಃ'
ಪ್ರಾಣ ಪರಿಣಾಮ ಈ ಗುಣ ಅಳವಟ್ಟುದಾಗಿ ಪ್ರಸಾದಿ [ಪ್ರಾಣಲಿಂಗಿ]ಸ್ಥಲ:
'ಆಚಾರಲಿಂಗಸಂಬಂಧಂ ಪ್ರಾಣಮೇವ ಪ್ರಕೀರ್ತಿತಂ
ಇದಂ ಜ್ಞಾನಂ ತು ಭುಂಜೀಯಾತ್ ಪದಮೇವ ಪದಂ ಶ್ರುಣು
ದ್ವಯಮೇವಮಿದಂ ದೇವಿ ವಿಶೇಷಂ ಭಕ್ತಿಬುದ್ಧಿಮಾನ್'
ಶರಣಸ್ಥಲ[ದೈ]ಕ್ಯಮಂ ಪೇಳ್ವೆ :
ಅರಿವರಿತು ಮರಹು ನಷ್ಟವಾದಲ್ಲಿ ಆಚಾರಪ್ರಾಣ ಭಕ್ತ,
ಆಚಾರವರಿತು ಅನಾಚಾರವ ನಷ್ಟವಾದಲ್ಲಿ ಮಾಹೇಶ್ವರ,
ಕ್ರಿಯಾಕಾರವರಿತು ನಿಷ್ಕಳ ನೆಲೆಗೊಂಡಲ್ಲಿ ಪ್ರಸಾದಿ,
ಸಕಲಶೂನ್ಯವಾಗಿ ನಿಷ್ಕಳ ನೆಲೆಗೊಂಡಲ್ಲಿ ಪ್ರಾಣಲಿಂಗಿ,

ಸ್ವಾನುಭಾವ ಸಂಬಂಧಿಸಿ ಅವಧಾನ ತಾನೆ ಗುರುವಾದಲ್ಲಿ ಶರಣ,
ಆಚಾರಪ್ರಾಣವಾಗಿ ಬಾಹ್ಯಪೂಜೆಯನರಿದು
ಮನದ ಕರದಲ್ಲಿ ಇಷ್ಟಲಿಂಗಾರ್ಚನೆಯಂ ಮಾಡಬಲ್ಲಡೆ ಐಕ್ಯ.
ಷಡುಸ್ಥಲಾಧಿಕಾರಮಂ ಪೇಳ್ವೆ :
'ಲಿಂಗಾರ್ಚನಮಿದಂ ದೇವಿ ನ ಕುರ್ಯಾರ್ದ್ವರ್ಣಮೋಹಿತಃ
ಅಸಂಸ್ಕಾರಿಕೃತಾ ಪೂಜಾ ಸಾ ಪೂಜಾ ನಿಷ್ಫಲಾ ಭವೇತ್'
ಅಂಗಾಂಗಲಿಂಗಸಂಬಂಧಿಯಾದ ಶರಣರು,
ಅನಾಹತಶೂನ್ಯರಾದವರಲ್ಲದೆ,
ಬದ್ಧದ್ವೇಷಿಗಳು, ಬಧಿರಹೃದಯರು, ಅಜ್ಞಾನವರ್ಧನರು
ಕೇವಲ ತಾತ್ಪರ್ಯವರ್ಮ ಕಳೆಗಳ
ಸದಾ ಸುಚಿತ್ತ ಸದಾ ಸ್ವಾನುಭಾವ ಸಂಬಂಧಿಗಳ
ಮಹಾನಿಲವನೆತ್ತಬಲ್ಲರಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೦೩॥

೧೪೬೩
ಭಕ್ತರಲ್ಲದವರನಾಸೆಗೈದಡೆ ಕಕ್ಕುಲತೆಯಲ್ಲದೆ ಕಾರ್ಯವಲ್ಲ.
ಆಸೆಗೈದಡೆ, ಆಸೆಗೈವುದು ಭಕ್ತರನು.
ಆಸೆಗೈದು ಬಂದ ಶಿವಂಗೆ
ಸುತನ ಕೊಟ್ಟರು, ಧನವ ಕೊಟ್ಟರು,ಮನವ ಕೊಟ್ಟರು,ಅಸುವ ಕೊಟ್ಟರು.
ಶರಣನ ಪರಿ ಯಾವ ಲೋಕದೊಳಗೂ ಇಲ್ಲ.
ಶರಣಭರಿತಲಿಂಗವಾಗಿ ಬೇಡಿದ್ದ ಕೊಡುವರಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೦೪॥

೧೪೬೪
ಭಕ್ತಿ ಭಕ್ತಿಯೆಂಬರು: ಭಕ್ತಿ ಹಿಂದೊ ಮುಂದೊ ಬಲ್ಲಡೆ ನೀವು ಹೇಳಿರೆ.
ಗುರುಲಿಂಗಜಂಗಮ ಒಂದೆ ಎಂದರಿಯದೆ,
ಮಾಡುವ ಭಕ್ತಿ ಅದೆ ಅನಾಚಾರ.
ಅವರು ಪ್ರಸಾದಕ್ಕೆ ದೂರ. ಅದಲ್ಲ ನಿಲ್ಲು ಮಾಣು.
ಜಂಗಮವಿರಹಿತವಾದ ಭಕ್ತಿ ಇಲ್ಲ.
ಭಕ್ತಂಗಾದಡೂ ಜಂಗಮವೆ ಬೇಕು, ಜಂಗಮಕ್ಕಾದಡೂ ಜಂಗಮವೆ ಬೇಕು.
ಇದು ಕಾರಣ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ,
ಭಕ್ತಿಸ್ಥಲ ನಿಮ್ಮ ಶರಣರಿಗಲ್ಲದಳವಡದು. ॥೨೦೫॥

೧೪೬೫

ಭಕ್ತಿಭಾಂಡದ ಶಿವಭಕ್ತರ ನಿಷೇಧವ ಮಾಡುವ
ಕರ್ಮಭಾಂಡದ ದ್ವಿಜರು ನೀವು ಕೇಳಿಭೋ :
'ಸತ್ಯಂ ಭೋ ಬ್ರೂತ ಪಂಚಪ್ರಾಣ ಇಂದ್ರಿಯನಿಗ್ರಹ'ಮೆಂದೋದಿ
ಗುದ್ದಿ ಗುದ್ದಿ ಹೋತನ ತಿಂಬುದಾವಾಚಾರವೊ?
'ಪಿತಾಮಹಶ್ಚ ವೈಶ್ಯಸ್ತು ಕ್ಷತ್ರಿಯೋ ಪರಯೋ ಹರಿಃ
ಬ್ರಾಹ್ಮಣೋ ಭಗವಾನ್ ರುದ್ರಃ ಸರ್ವೇಷ್ವ್ಯುತ್ತಮೋತ್ತಮಃ'
ಎಂಬ ಶ್ರುತಿಯ ನೋಡಿ,
ತಮ್ಮ ಕುಲದೈವವಹ ಬ್ರಾಹ್ಮಣನಹ ರುದ್ರನ ನಿಂದಿಸಿ,
ತಮಗಿಂದ ಕೀಳುಜಾತಿಯಹ ಕ್ಷತ್ರಿಯ ಹರಿಯ ಆರಾಧಿಸುವ
ಕುಲಹೀನರು ನೀವು ಕೇಳಿಭೋ :
'ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ದ್ವಿಜ ಉಚ್ಯತೇ
ವೇದಾಭ್ಯಾಸೇನ ವಿಪ್ರಸ್ತು ಬ್ರಹ್ಮಣಾ ಚರಂತೀತಿ ಬ್ರಾಹ್ಮಣಃ'
ಎಂಬ ಶ್ರುತಿಯನೋದಿ,
ಪರಬ್ರಹ್ಮನಂತಹ ಶಿವಲಿಂಗಪೂಜೆಯನಾಚರಿಸಿ ಬ್ರಾಹ್ಮಣತ್ವವನೈ[ದದೆ]
ಶತಯಾಗಂಗಳ ಮಾಡಿ ಶೂದ್ರನಹ ಇಂದ್ರತ್ವವ ಬಯಸುವ
ಅಧಮರು ನಿವು ಕೇಳಿಭೋ :
'ಜನ್ಮನಾ ಜಾಯತೇ ಶೂದ್ರಃ ಮಾತಾ ಸಾ ಪ್ರಥಮಂ ಶೂದ್ರಾಣಿ
ನಚೋಪದೇಶಃ ಗಾಯತ್ರೀ ನ ಚ ಮೌಂಜೀ ನ ಚ ಕ್ರಿಯಾ' ಎಂದುದಾಗಿ,
ದೀಕ್ಷೆಯಿಲ್ಲದೆ ಸತಿಶೂದ್ರಗಿತ್ತಿಗೆ ಹುಟ್ಟಿದವನೊಡನುಂಬ
ಅನಾಚಾರಿಗೆ ಎಲ್ಲಿಯದೊ ಬ್ರಾಹ್ಮಣತ್ವ?
ಆವ ಜಾತಿಯವನಾದರೇನು ಶಿವಭಕ್ತನೇ ಬ್ರಾಹ್ಮಣ. ಅದಕ್ಕೆ ಸಾಕ್ಷಿ :
'ತಪಸಾ ಬ್ರಾಹ್ಮಣೋ[ऽ]ಭವತ್ ಸಾಂಖ್ಯಾಯನ ಮಹಾಮುನಿಃ
ತಪಸಾ ಬ್ರಾಹ್ಮಣೋ[ऽ]ಭವತ್ ಗೌತಮಸ್ತು ಮಹಾಮುನಿಃ
ಜಾತಿಂ ನ ಕಾರಯೇತ್ತೇಷು ಶ್ರೇಷ್ಠಾಃ ಸಮಭವಂಸ್ತತಃ
ತಜ್ಜಾತಿರಭವತ್ತೇನ' ಎಂದುದಾಗಿ,
ತಮ್ಮ ತಮ್ಮ ಗೋತ್ರಂಗಳೆ ಸಾಕ್ಷಿಯಾಗಿ ಸಾರುತ್ತಿರಲು
ಕುಭ್ರಮೆಯಾತಕ್ಕೆ?
'ಶ್ವಪಚೋ[ऽ]ಪಿ ಮುನಿಶ್ರೇಷ್ಠಃ ಶಿವಭಕ್ತಿಸಮನ್ವಿತಃ
ಶಿವಭಕ್ತಿವಿಹೀನಸ್ತು ಶ್ವಪಚೋ[ऽ]ಪಿ ದ್ವಿಜಾಧಮಃ' ಎಂದುದಾಗಿ
ಶಿವಭಕ್ತನೆ ಕುಲಜ, ಶಿವಭಕ್ತಿ ಇಲ್ಲದವನೆ ಶ್ವಪಚನೆಂದರಿಯದ
ಅಜ್ಞಾನಿಗಳು ನೀವು ಕೇಳಿಭೋ!
'ಏಕ ಏವ ರುದ್ರೋ ನ ದ್ವಿತೀಯಾಯತಸ್ಥೇ' ಎಂದು

ವೇದವನೋದಿ 'ಪಶುಪತಯೇ ನಮಃ' ಎಂದಾ ರುದ್ರವನೋದಿ
ಶಿವನೆ ಪತಿ ಮಿಕ್ಕಿನ ದೈವಂಗಳೆಲ್ಲ ಪಶುಗಳೆಂಬುದ ತಿಳಿದು
ಮತ್ತೆಯೂ ಈ ದ್ವಿಜರು ಕಾಣಲರಿಯರು.
ಹರಿಹರನೊಂದೆಯೆಂಬ ನರಗುರಿಗಳು ನೀವು ಕೇಳಿಭೋ!
ಪಾರಾಶ[ರ] ಪುರಾಣೇ :
'ಆದೌ ರುದ್ರಾಂಗಮುತ್ಪತ್ತಿಃ ಮುಖೇ ಬ್ರಾಹ್ಮಣವೀಶ್ವರಃ
ವಿಷ್ಣುಂ ಕ್ಷತ್ರಿಯಮಿತ್ಯಾಹುರ್ಬಾಹುನಾ ಚ ಅವಸ್ಥಿತಃ
ವೈಶ್ಯಶ್ಚ ಬ್ರಹ್ಮಾ ಇತ್ಯಾಹುಃ ಲಿಂಗಾದೇವ ಅವಸ್ಥಿತಃ
ಸುರಪೋ ಶೂದ್ರಯಿತ್ಯಾಹುಃ ದೇವಪಾದಾದವಿಸ್ಥಿತಃ' ಎಂದುದಾಗಿ,
ರುದ್ರನ ಮುಖದಲ್ಲಿ ಹುಟ್ಟಿದವನೆ ಬ್ರಾಹ್ಮಣ,
ಮಿಕ್ಕಾದ ವಿಪ್ರರೆಲ್ಲರು ಋಷಿಗೋತ್ರದಲ್ಲಿ ಹುಟ್ಟಿದರು.
ಆ ಋಷಿಮೂಲದ ವಿಪ್ರರೆಲ್ಲರು ಅಧಮಜಾತಿ.
ಅಧಮಜಾತಿಯಾದರೇನು?
ರುದ್ರಭಕ್ತರಾದ ಕಾರಣ ಬ್ರಾಹ್ಮಣರಾದರು.
ಈ ವರ್ಮವನರಿಯದ ಚಾಂಡಾಲ ವಿಪ್ರರ್ಗೇನೂ ಸಂಬಂಧವಿಲ್ಲ.
ಕಾಕ ರುದ್ರನ ಮುಖದಲ್ಲಿ ಉದ್ಭವವೆಂಬುದಕ್ಕೆ
'ಶ್ವಾನಸೂಕರರೂಪೇ ಪ್ರೇತಪಿಂಡ ಪ್ರದಾನತಃ
ಪ್ರೇತತ್ವಂ ಚ ಸದಾ ಸ್ಯಾತ್ ತಥಾ ಧರ್ಮೇಣ ಲುಪ್ಯತೇ'
ಎಂದುದಾಗಿ ಆಗಮಾರ್ಥವನರಿಯದೆ,
ಪ್ರೇತಪಿಂಡವನಿಕ್ಕುವ ಪಾತಕರು,
[ಪ್ರಾಣಾಯ ಸ್ವಾಹಾ] ಅಪಾನಾಯ ಸ್ವಾಹಾ, ವ್ಯಾನಾಯ ಸ್ವಾಹಾ
ಉದಾನಾಯ ಸ್ವಾಹಾ, ಸಮಾನಾಯ ಸ್ವಾಹಾ' ಎಂದು
ಭೂತಬಲಿಯ ಬೆಕ್ಕು ನಾಯಿಗೆ ಹಾಕಿ
ಮಿಕ್ಕ ಭೂತಶೇಷವ ಕೊಂಬ ಅಕುಲಜರು, ನೀವು ಕೇಳಿಭೋ!
'ವಸುರೂಪೋ ಮಧ್ಯಪಿಂಡಃ ಪುತ್ರಪೌತ್ರಪ್ರವರ್ಧನಃ' ಎಂದು,
ರುದ್ರಪ್ರಸಾದವನೆ ಕೊಂಡು ರುದ್ರಪಿಂಡದಿಂದ ಹುಟ್ಟಿ,
ದೀಕ್ಷಾಕಾಲದಲ್ಲಿ ಭಸಿತವ ಧರಿಸಿ,
ಬ್ರಹ್ಮಕಪಾಲಪಾತ್ರೆಯಂ ಪಿಡಿದು, ಪಲಾಶಕಂಕಾಳದಂಡಮಂ ಪಿಡಿದು,
'ಭವತೀ ಭಿಕ್ಷಾಂ ದೇಹಿ'ಯೆಂದು ಭಿಕ್ಷಮಂ ಬೇಡಿ
ಪಿತೃಕಾರ್ಯದಲ್ಲಿ 'ವಿಶ್ವೇ ದೇವಾಂ ಸ್ತರ್ಪಯಾಮಿ'ಯೆಂದರ್ಚಿಸಿ,
ಮರಣಕಾಲದಲ್ಲಿ ರುದ್ರಭೂಮಿಯಲ್ಲಿ ರುದ್ರಾಗ್ನಿಯಿಂದ
ದಹನ ರುದ್ರವಾಹನದ ಬಾಲವಿಡಿದು ಸ್ವರ್ಗವನೆಯ್ದಿದರು,
ರುದ್ರಭಕ್ತಿವಿರುದ್ಧ ವಿಚಾರಹೀನರು.

'ತ್ರ್ಯಯುಕ್ಷಂ ಜಮದಗ್ನೇಃ ಕಶ್ಯಪಸ್ಯ ತ್ರಿಯಾಯುಷಂ,
ಅಗಸ್ತ್ಯಸ್ಯ ತ್ರಿಯಾಯುಷಂನತನ್ಮೇಡಿಸ್ತುಫತ್ರಿಯಾ ಶತಸಯುಷಂ' ಎಂದು
ಸಕಲಋಷಿಗಳು ಶ್ರೀ ವಿಭೂತಿಯನು ಧರಿಸಿ,
ಬಹಳಾಯುಷ್ಯಮಂ ಪಡೆದರೆಂದು
ಮತ್ತೆಯು ಯಜುಸ್ಸಿನಲ್ಲಿ ದೀಕ್ಷೆಯನೈದಲ್ಲಿ,
'ಭೂತಿವಾಂಶ್ಚ ಪ್ರಿಯಂ ಹೋತವ್ಯಂ'ಯೆಂದು,
ಶ್ರೀವಿಭೂತಿಯನೆ ಧರಿಸಹೇಳಿತ್ತು ವೇದವು.
'ಗೋಪೀ ಮಲಿನಧಾರೀ ತು ಶಿವಂ ಸ್ಪೃಶತಿ ಯೋ ದ್ವಿಜಃ
ತದ್ಯೆಕವಿಂಶತಿಕುಲಂ ಸಾಕ್ಷಾತ್ತು ನರಕಂ ವ್ರಜೇತ್ ' ಎಂದು,
ಗೋಪಿ ಮಲಿನ ಚಂದನವನಿಟ್ಟು, ಪಾತಕರು[ವ] ಶಿವಲಿಂಗ ಮುಟ್ಟಿದರೆ
ತಮ್ಮಿಪ್ಪತ್ತೊಂದು ಕುಲಸಹಿತ ಕೇಡಿಲ್ಲದ ನರಕದಲ್ಲಿ ಬೀಳುವರೆಂದರಿಯದೆ
ಮಟ್ಟಿಯನಿಟ್ಟ ಭ್ರಷ್ಟರು,
ಮತ್ಸ್ಯ ಕೂರ್ಮ ವರಾಹ ನಾರಸಿಂಹ ಈ ನಾಲ್ಕೂ ಅವತಾರದಲ್ಲಿ
ನೀರಿಂದ ಬಲಿ ಧಾರೆಯನೆರೆದನೆಂಬುದನರಿದು,
ವಿಷ್ಣುವಿನ ಪಾದದಲ್ಲಿ ಗಂಗೆ ಹುಟ್ಟಿತೆಂಬ ವಿಚಾರಹೀನರು
'ವಿಯದ್ವಿಷ್ಣುಪದಂ ಪ್ರೋಕ್ತಂ ಪುಂಸ್ಯಾಕಾಶವಿಹಾಯಸೀ
ವಿಹಾಯಸೋ[s]ಪಿನಾಕೋ[s]ಪಿ ದ್ಯುರಪಿ ಸ್ಯಾತ್ತಿದವ್ಯಯಂ' ಎಂದು
ನಿಘಂಟಿನಲ್ಲಿ ಆಕಾಶದ ಹೆಸರು ವಿಷ್ಣುಪದಿ,
ಆಕಾಶಗಂಗೆ ಮುನ್ನಲುಂಟೆಂಬುದನರಿತು,
ವಿಷ್ಣುವಿನ ಕಾಲಲ್ಲಿ ಗಂಗೆ ಹುಟ್ಟಿತೆಂಬ ದುಷ್ಟರು,
ವೇದಕ್ಕೆ ನೆಲೆಗಟ್ಟು ಓಂಕಾರ, ಬ್ರಾಹ್ಮಣಕ್ಕೆ ನೆಲೆಗಟ್ಟು ಗಾಯತ್ರಿಯಲ್ಲಿ
ಶಿವನೆ ದೈವವೆಂದಿತ್ತು.
'ಓಂ ಭೂಃ ಓಂ ಭುವಃ ಓಂ ಸುವಃ ಓಂ ಮಹಃ ಓಂ ಜನಃ
ಓಂ ತಪಃ ಓಂ ಸತ್ಯಂ ಓಂ ತತ್ಸವಿತುರ್ವರೇಣ್ಯಂ
ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್'
ಹರ ಹರಿಭಕ್ತನೆಂದೆನಿಸುವ ವಿಚಾರಹೀನರು ನೀವು ಕೇಳಿಭೋ!
ಹರಿ ಶಿವನ ಭಕ್ತನೆಂಬುವದಕ್ಕೆ ಸಾವಿರಕಮಲ ಕೊರತೆಗೆ
ತನ್ನ ನಯನ ಕಮಲಮಂ ಕಳೆದು ಶಿವನಂಘ್ರಿಗರ್ಪಿಸಿ,
ಚಕ್ರಮಂ ಪಡೆದನೆಂದು ಮಹಿಮದಲ್ಲಿ
'ಹರಿಸ್ತೇ ಸಾಹಸ್ರಂ ಕಮಲಬಲಿಯಾಧಾಯ ಪದಯೋಃ' ಎಂದೋದಿ
ಮರೆದ ಮತಿಭ್ರಷ್ಟರು ನೀವು ಕೇಳಿಭೋ!
ಹರನೆ ಕರ್ತ, ಹರಿಯೆ ಭೃತ್ಯನೆಂಬುದಕ್ಕೆ
ರಾಮಪ್ರತಿಷ್ಠೆ ಶಿವಲಿಂಗ[ದ] ಮೂರ್ತಿಗಳಿಂ ಕಾಣಿರೆ,
ಕಂಡು ತಿಳಿಯಲರಿಯದ ಹುಲುಮನುಜರು

ಶ್ರೀರಾಮನ ಗುರು ವಶಿಷ್ಠ
ಹಂಪೆಯಲ್ಲಿ ವಿರೂಪಾಕ್ಷಲಿಂಗನ ಭಕ್ತನೆಂದರಿದು,
ಕೃಷ್ಣಾವಿಷ್ಣುವಿನ ಗುರು ಉಪಮನ್ಯು
ಅಹಿಪುರದಲ್ಲಿ ಸೋಮೇಶ್ವರಲಿಂಗನ ಭೃತ್ಯನೆಂಬುದನರಿದು,
ಇಂತು ಭೃತ್ಯನ ಶಿಷ್ಯಂಗೆ ಕರ್ತನ ಸರಿಯೆಂಬ
ಕರ್ಮಚಂಡಾಲರು ನೀವು ಕೇಳಿಭೋ!
'ಅಸಂಖ್ಯಕೋಟಿಬ್ರಹ್ಮಾಣಾಂ ಕೋಟಿವಿಷ್ಣುಗಣಂ ತತಃ
ಗಂಗಾವಾಲುಕ ಸಮೌ ಹೇತೌ ಕಿಂಚಿದಜ್ಞಾಃ ನ ಮಹೇಶ್ವರಾತ್'
ಎಂದು ರುದ್ರನ ಎವೆಯಾಡುವನಿತಕ್ಕೆ ಲೆಕ್ಕವಿಲ್ಲದ ಕೋಟಿ
ಬ್ರಹ್ಮವಿಷ್ಣುರು ಸತ್ತುಹೋದರೆಂದು ಓದಿ ತಿಳಿದುಇಂಥ ಹುಲುದೈವಂಗಳ
'ಮೃತ್ಯುಂಜಯಃ ನಿತ್ಯಃ ಏಕೋ ದೇವಃ ನದ್ವಿತೀಯಃ'
ಎಂದೆನಿಸುವ ಶಿವಗೆ ಸರಿಯೆಂದೆನಿಸುವ ಭವಿವಿಪ್ರರಿಗೆ
ತಾವು ಓದುವ ವೇದಾಗಮಂಗಳು ತಮಗೆ ಹಗೆಯಾಗಿ
ನಡೆಯೊಂದು ಪರಿ ನುಡಿಯೊಂದು ಪರಿ ಆಗಿಹುದು.
ಅದೆಂತೆಂದರೆ: ಗೌತಮ ದಧೀಚಿ ಭೃಗುವಾದಿಯಾಗಿ ಹಿರಿಯರುಗಳೇ
ಶಾಪದಿಂದ ಶಾಪಹತರಾಗಿ ಶಿವದ್ರೋಹಿಗಳಾಗಿ
ನರಕಕ್ಕಿಳಿವ ಚಾಂಡಾಲರಿಂದ ವಿಪ್ರರ ಸತ್ಪಾತ್ರರೆಂದಾರಾಧಿಸುವರ
ನರಕದ ಕುಳಿಯೊಳು ಮೆಟ್ಟಿ ನರಕಾಗ್ನಿಯಿಂದ ಸುಡುತಿರ್ಪ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. ॥೨೦೬॥

೧೪೬೬
ಭಕ್ತಸ್ಥಲ ಸಾಧ್ಯವಾಯಿತ್ತು ಸಂಗನಬಸವರಾಜದೇವರಿಗೆ.
ಮಾಹೇಶ್ವರಸ್ಥಲ ಸಾಧ್ಯವಾಯಿತ್ತು ಮಡಿವಾಳಮಾಚಿತಂದೆಗಳಿಗೆ.
ಪ್ರಸಾದಿಸ್ಥಲ ಸಾಧ್ಯವಾಯಿತ್ತು ಬಿಬ್ಬಿಬಾಚಯ್ಯಗಳಿಗೆ.
ಪ್ರಾಣಲಿಂಗಿಸ್ಥಲ ಸಾಧ್ಯವಾಯಿತ್ತು ಅನಿಮಿಷದೇವರಿಗೆ.
ಶರಣಸ್ಥಲ ಸಾಧ್ಯವಾಯಿತ್ತು ಅಲ್ಲಮಪ್ರಭುದೇವರಿಗೆ.
ಐಕ್ಯಸ್ಥಲ ಸಾಧ್ಯವಾಯಿತ್ತು ಅಜಗಣ್ಣಗಳಿಗೆ.
ಸರ್ವಾಚಾರಸ್ಥಲ ಸಾಧ್ಯವಾಯಿತ್ತು ಚೆನ್ನಬಸವಯ್ಯಗಳಿಗೆ.
ಎನಗೆ ಷಟಸ್ಥಲಸರ್ವಾಚಾರವೆ ಸಾಧ್ಯವಾಗಿ
ಇಂತಿವರ ನೆನೆದು ಶುದ್ಧನಾದೆನು ಕಾಣಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೦೭॥

೧೪೬೭
ಭವಿತನಕ್ಕೆ ಹೇಸಿ ಭಕ್ತನಾಗಬೇಕೆಂಬಾತನು ಸದ್ಗುರುವನರಸಿಕೊಂಡು ಬಂದು,
ಅವನ ಕಾರುಣ್ಯದಿಂದ ಮುಕ್ತಿಯಂ ಪಡೆದೆನೆಂದು

ಆ ಶ್ರೀಸದ್ಗುರುವಿಗೆ ದಂಡಪ್ರಣಾಮವಂ ಮಾಡಿ
ಭಯಭಕ್ತಿಯಿಂದ ಕರಂಗಳಂ ಮುಗಿದು ನಿಂದಿರ್ದು,
ಎಲೆ ದೇವಾ, ಎನ್ನ ಭವಿತನವಂ ಹಿಂಗಿಸಿ
ನಿಮ್ಮ ಕಾರುಣ್ಯದಿಂದ ಎನ್ನ ಭಕ್ತನಂ ಮಾಡುವುದೆಂದು
ಶ್ರೀಗುರುವಿಂಗೆ ಬಿನ್ನಹಂ ಮಾಡಲು,
ಆ ಶ್ರೀಗುರುವು ಅಂತಪ್ಪ ಭಯಭಕ್ತಿ ಕಿಂಕರತೆಯೊಳಿಪ್ಪ ಶಿಷ್ಯನಂ ಕಂಡು,
ತಮ್ಮ ಕೃಪಾವಲೋಕನದಿಂ ನೋಡಿ,
ಆ ಭವಿಯ ಪೂರ್ವಾಶ್ರಯಮಂ ಕಳೆದು, ಪುನರ್ಜಾತನಂ ಮಾಡಿ
ಆತನ ಅಂಗದ ಮೇಲೆ ಲಿಂಗಪ್ರತಿಷ್ಠೆಯ ಮಾಡುವ ಕ್ರಮವೆಂತೆಂದಡೆ:
'ಜ್ವಲತ್ಕಾಲಾನಲಾಭಾಸಾ ತಟಿತ್‌ಕೋಟಿಸಮಪ್ರಭಾ
ತಸ್ಯೋರ್ಧ್ವೆ ತು ಶಿಖಾ ಸೂಕ್ಷ್ಮಾ ಚಿದ್ರೂಪಾ ಪರಮಾ ಕಲಾ
ಯಾ ಕಲಾ ಪರಮಾ ಸೂಕ್ಷ್ಮಾ ತತ್ತ್ವಾನಾಂ ಬೋಧಿನೀ ಪರಾ
ತಾಮಾಕರ್ಷ್ಯ ಯಥಾನ್ಯಾಯಂ ಲಿಂಗೇ ಸಮುಪವೇಶಯೇತ್
ಪ್ರಾಣಪ್ರತಿಷ್ಠಾಮಂತ್ರಂ ಚ ಮೂಲಮಂತ್ರಂ ಪಠೇದಪಿ
ಅಥಾಸ್ಮಿನ್ ಸಂಸ್ಕೃತೇ ಲಿಂಗೇ ಸುಸ್ಥಿರೋ ಭವ ಸರ್ವದಾ'
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೦೮॥

೧೪೬೮
ಮಜ್ಜನಕ್ಕೆರೆವ ಶರಣರ ಮಹಿಮೆಯನೇನೆಂಬೆನು!
ಆವ ಪದಾರ್ಥವೇನಾದಡೆ ಲಿಂಗಕ್ಕೆ ಬಂದಲ್ಲದೊಲ್ಲನು,
ಲಿಂಗಾನುಗ್ರಹದಿ ಅನಿಮಿಷನಾಗಿಪ್ಪ ಮಹಿಮನು,
ನಾಲ್ಕು ವೇದ ಹದಿನಾರು ಶಾಸ್ತ್ರಕ್ಕೆ ಅಗಮ್ಯ ಅಗೋಚರನು,
ಶರಣನುಸಾರಾಯಸಂಪನ್ನನು,
ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ॥೨೦೯॥

೧೪೬೯
ಮಣ್ಣ ಬೆಲ್ಲವ ಮಾಡಿ, ಮಗುವಿನ ಕೈಯಲ್ಲಿ ಕೊಟ್ಟು,
ಊರ ತಿರುಗುವ ತುಡುಗುಣಿಯಂತೆ.
ಪ್ರಾಣಲಿಂಗವನರುಹುವ
ಜ್ಞಾನಗುರುವಿನ ಕೈಯ ದೀಕ್ಷೆಯ ಪಡೆಯಲರಿಯದೆ,
ಇಷ್ಟಲಿಂಗವನೊಬ್ಬ ಭ್ರಷ್ಟನ ಕೈಯಲೀಸಿಕೊಂಡು,
ಅಲ್ಲಿ ಭಜಿಸಿ ಭ್ರಾಂತುಗೊಂಬ ಮಿಟ್ಟಿಯ ಭಂಡರನೇನೆಂಬೆ ಹೇಳಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೧೦॥

೧೪೭೦
ಮದ್ಗುರುವೆ ಸದ್ಗುರುವೆ ತ್ರಿಜಗದ್ಗುರುವೆ
ಶಿವಂಗೆ ಮಾತೆಯಾದ ಮನೋರಥವೀವ ಮಹದ್ಗುರುವೆ
ಶಿವ ಇವ ಉಪಮಾತೀತನೆ
'ಮನ್ನಾಥಃ ಶ್ರೀಜಗನ್ನಾಥೋ ಮದ್ಗುರುಃ ಶ್ರೀಜಗದ್ಗುರುಃ
ಮಮಾತ್ಮಾ ಸರ್ವಭೂತಾತ್ಮಾ ತಸ್ಮೈ ಶ್ರೀಗುರವೇ ನಮಃ' ಎಂದುದಾಗಿ,
ಶ್ರೀಗುರುವೆ, ನಿನ್ನ ನಿರೀಕ್ಷಣೆಮಾತ್ರದಲ್ಲಿ ಸಕಲಯೋನಿಜರು ಪಶುಪಾಶಹರರು,
ಪಶುರ್ನಾಥಃ ಶಿವಸ್ತಸ್ಮಾತ್ ಪಶೂನಾಂ ಪತಿರಿತ್ಯಭೂತ್' ಎಂದುದಾಗಿ
'ಪಶುಪಾಶವಿನಿರ್ಮುಕ್ತೈಗುರೋರಾಜ್ಞಾಂ ನಿರೀಕ್ಷಯೇತ್'
ಸಂಸ್ಕಾರಿಗಳಿಗಲ್ಲದೆ ಅಪ್ಪುದೆ ನಿನ್ನ ನಿರೀಕ್ಷಣೆ?
ಹೋಹುದೆ ಅವನ ಭವಪಾಶವು?
"ಅಣುರೇಣುತೃಣಕಾಷ್ಠ ಶಿಲಾಗುಲ್ಮಲತಾವಳಿ
ಭೂತೋಯಾನಲಮರುದಾಕಾಶಸ್ಥಃ"
"ಏಕ ಏವ ನ ದ್ವಿತೀಯಾವಸ್ಥೇ"
ಎಂದುದಾಗಿ, ಇದು ಕಾರಣ, ಪರಿಪೂರ್ಣ ಶಿವನು.
ಅದು ಹೇಗೆಂದಡೆ :
ಘಟದೊಳಗೆ ಇದ್ದ ಜಲಕ್ಕೆ ಉಷ್ಣವಿಸೆ ಆ ಜಲವು ತದ್ರೂಪವಹಂಗೆ
ಸದ್ಗುರುಸ್ವಾಮಿ ಅಂಗಲಿಂಗವ ಸಂಬಂಧಮಾಡಿದ ಬಳಿಕ
ಪ್ರಾಣಲಿಂಗಸಂಬಂಧವಾದ ಭೇದ :
'ಸ್ವಾನುಭಾವೇ ತು ಸಂಬಂಧಿ ಕ್ರಿಯಾಲಿಂಗಸ್ಯ ಪೂಜನಂ
ನಿಷ್ಕ್ರಿಯಂ ಪ್ರಾಣಲಿಂಗಂ ತು ಕ್ರಿಯಾಲಿಂಗಸ್ಯ ಪೂಜನಂ
ಬಾಹ್ಯಲಿಂಗಾರ್ಚನಂ ಯತ್ ಸ್ಯಾತ್ ತತ್ ಕ್ರಿಯಾಲಿಂಗಪೂಜನಂ'
ಎಂದುದಾಗಿ, ಕ್ರಿಯಾಕಾರದಿಂ ಗುರು ತೋರಿದ ಲಿಂಗದಿಂದ
ಸ್ವಾನುಭಾವಲಿಂಗವ ಕಂಡರಿತು ಬದುಕಿದೆನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೧೧॥

೧೪೭೧
ಮನದಲ್ಲಿ ಮಹವನರಿದು ಮನನಿರ್ದೇಶವಾಗಿ
ದೇಶಾಂತರಿಯಾಗದೆ, ಮನ ವಿಕಳವಾಗಿ ಹೊರಹೊಂಟುದು ವೇಷಾಂತರವಯ್ಯಾ.
ಕಂಡವರ ಕಾಡಿ, ನಿಂದವರ ಬೇಡಿ, [ಜಾತಿ ಎನ್ನದೆ] ಅಜಾತಿ ಎನ್ನದೆ,
ಆಚಾರವೆನ್ನದೆ, ಅನಾಚಾರವೆನ್ನದೆ, ತಿರಿದುಂಡು
ವೇಷಡಂಭಕತ್ವದಿಂ ಲಾಂಛನವ ಹೊತ್ತು ಕಂಡಲ್ಲಿ ಲಜ್ಜೆಗೆಡುವುದು
ತನ್ನ ಮುನ್ನಿನ ದುಷ್ಕೃತಪೂರ್ವಕರ್ಮದಫಲವಯ್ಯ. ಮತ್ತೆಂತೆಂದಡೆ:

ಮನ ನಿರ್ವಾಣವಾಗಿ ವಿವೇಕಜ್ಞಾನಪರಮಾರ್ಥದಲ್ಲಿ ಪರಿಣಾಮಿಯಾಗಿ
ಸುಳಿದು ಸೂತಕಿಯಲ್ಲದೆ, ನಿಂದು ಬದ್ಧನಲ್ಲದೆ,
ಸುಜ್ಞಾನದಲ್ಲಿ ಸುಳಿದು, ನಿರ್ಮಲದಲ್ಲಿ ನಿಂದವರು
ಅವರು ಪರದೇಶಾಂತರಿಗಳು, ಅವರು ನಿಜನಿವಾಸಿಗಳು,
ಅವರುಗಳಿಗೆ ನಮೋ ಎಂಬೆ, ಉರಿಲಿಂಗಿಪೆದ್ದಿಪ್ರಿಯವಿಶ್ವೇಶ್ವರಾ. ॥೨೧೨॥

೧೪೭೨

ಮನ ಮುಟ್ಟದು, ಬುದ್ಧಿ ಒಂದಾಗದು, ಚಿತ್ತವಿಡಿಯದು,
ಅಹಂಕಾರವನುಭವಿಸದು, ಸ್ನೇಹ ಪರಿಣಾಮಿಸದು,
ಭಕುತಿ ಎಂತೊ, ಮಾಟವೆಂತೊ, ಕೂಟವೆಂತೊ?
ನಿಮ್ಮ ಭಕ್ತಿ ಬಯಲನಪ್ಪುವಂತೆ, ಸಮುದ್ರವನೀಸಾಡುವಂತೆ ಪೂರೈಸದು.
ಭಕ್ತ್ಯಂಗನೆಯ ರತಿಸುಖವಿಲ್ಲ, ಮೇಲೆ ಫಲಭೋಗವೆಂತೂ ಇಲ್ಲ.
ಅಂತಃಕರಣವೇಕೀಭವಿಸಿ,
ಸಮರಸದಲ್ಲಿ ನಿಂದ ಸ್ನೇಹದ ಮಾಟವೆ ಶಿವನ ಕೂಟ.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನಲ್ಲಿ ಇದೆ ಭಕ್ತಿರತಿ. ॥೨೧೩॥

೧೪೭೩

ಮನವೇ, ನಿನ್ನ ನೆನಹು ಸಿದ್ಧಿಯಾದುದಲ್ಲಾ,
ಪರಶಿವನೇ ಶ್ರೀಗುರುರೂಪಾಗಿ ನಿನ್ನ ಮನಕ್ಕೆ ಬಂದನು.
ಬುದ್ಧಿಯೇ ನಿನ್ನ ಬುದ್ಧಿ ಸುಬುದ್ಧಿಯಾದುದಲ್ಲಾ,
ಶ್ರೀಗುರುವೇ ಶಿವ[ಲಿಂಗ]ರೂಪಾಗಿ ನಿನ್ನ ಬುದ್ಧಿಗೆ ಬಂದನು.
ಚಿತ್ತವೇ ನೀ ನಿನ್ನ ಚಿತ್ತ ನಿಶ್ಚಿಂತವಾದುದಲ್ಲಾ,
ಶಿವಲಿಂಗವೇ ಜಂಗಮರೂಪಾಗಿ ನಿನ್ನ ಚಿತ್ತಕ್ಕೆ ಬಂದನು.
ಅಹಂಕಾರವೇ, ನಿನ್ನಹಂಕಾರ ನಿಜವಾದುದಲ್ಲಾ,
ಶ್ರೀ ಗುರು ಲಿಂಗ ಜಂಗಮ ತ್ರಿವಿಧವು ಏಕೀಭವಿಸಿ
ನಿನಗೆ ಪ್ರಸನ್ನಪ್ರಸಾದವ ಕರುಣಿಸಿದನು.
ಆ ಪ್ರಸಾದ ಲಿಂಗಸ್ವಾಯತವಾಗಿ
ನಿಮಗೆ ನಾಲ್ವರಿಗೂ ಪರಿಣಾಮವಾಯಿತ್ತು ಕಾಣಾ.
ಪ್ರಾಣವು ನಿನಗೆ ಲಿಂಗಪ್ರಾಣವಾದುದಲ್ಲಾ,
ನಮ್ಮೆಲ್ಲರನೂ ಗರ್ಭೀಕರಿಸಿಕೊಂಡಿಪ್ಪ ಅಂಗವೇ ಲಿಂಗವಾದುದಲ್ಲಾ.
ಪ್ರಾಣವೇ ನಿನ್ನ ಸಂಗದಿಂದ ನಿನ್ನನಾಶ್ರಯಿಸಿಕೊಂಡಿಪ್ಪ
ಸರ್ವತತ್ತ್ವಂಗಳೂ ಸರ್ವಪಂಚಾಧಿಕಾರಿಗಳೂ

ಸರ್ವಯೋಗಿಗಳೆಲ್ಲ ಶಿವಪದಂಗಳ ಪಡೆದರಲ್ಲಾ.
ಅಹಂಗೆ ಅಹುದು ಕಾಣಾ, ಪ್ರಾಣವೇ ಇದು ದಿಟ,
ನೀನೇ ಮಗುಳೆ ಮಹಾಬಂಧುವಾಗಿ
ನಿನಗೊಂದು ಏಕಾಂತವ ಹೇಳುವೆನು ಕೇಳು.
ನಾನು ನೀನು ಅನೇಕ ಕಲ್ಪಂಗಳಲ್ಲಿಯೂ
ಅನೇಕ ಯೋನಿಗಳಲ್ಲಿಯೂ ಜನಿಸಿ
ಸ್ಥಿತಿ ಲಯಂಗಳನೂ ಅನುಭವಿಸಿ, ಪಾಪಪುಣ್ಯಂಗಳನುಂಡುದ ಬಲ್ಲೆ.
ಅವೆಲ್ಲವನೂ ಕಳೆದುಳಿದು,
ಶ್ರೀಗುರುವಿನ ಕರುಣ ಮೇರೆವರಿದು ಮಹಾಪದವಾಯಿತ್ತು.
ಶ್ರೀಗುರುವಿನ ಹಸ್ತದಲ್ಲಿ ಜನನವಾಯಿತ್ತು.
ಶ್ರೀಗುರುವಿನ ಕರುಣವಾಯಿತ್ತು. ಶಿವಲಿಂಗ ಸ್ವಾಯತವಾಯಿತ್ತು.
ಜಂಗಮವೆಂದರಿದು ಜ್ಞಾನವಾಯಿತ್ತು.
ಶ್ರೀಗುರು ಲಿಂಗ ಜಂಗಮದಿಂದ ಪ್ರಸಾದವ ಪಡೆದು
ಪ್ರಸಾದವನು ಗ್ರಹಿಸಿ ಶಿವಮಹಾಮುಕ್ತಿಪದವಾಯಿತ್ತು.
ಇನ್ನೊಂದ ನಾ ನಿಮ್ಮ ಬೇಡಿಕೊಂಬೆನು :
ಮಾಯಾಂಗನೆ ಆಸೆ ಮಾಡಿಕೊಂಡು ಬಂದಹಳು,
ಅವರಿಬ್ಬರೂ ಹೋಗಲೀಸದಿರಿ,
ನಿಮಗೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನಾಣೆ
ಎನಗೆಯೂ ಅದೇ ಆಣೆ. ॥೨೧೪॥

೧೪೭೪

'ಮನೋವಾಕ್ಕಾಯಮೇಕಸ್ಯ ಗುರುಶ್ಚರಃ ಶಿವಸ್ತಥಾ'
ಶ್ರೀಗುರುಪೂಜೆಯ ಬೊಟ್ಟಿನಷ್ಟು ವಿಭೂತಿಯನಿಟ್ಟಡೆ
ಬೆಟ್ಟದಷ್ಟು ಪಾಪ ಹರಿವುದು.
ನೆಟ್ಟನೆಯರಿದು ಸರ್ವಾಂಗದಲ್ಲಿ ಭಸ್ಮವ ಧರಿಸಿದ ಶರಣಂಗೆ
ಮುಂದೆ ಹುಟ್ಟಲು ಹೊಂದಲು ಇಲ್ಲ ನೋಡಾ.
ಅಷ್ಟಾಷಷ್ಠಿತೀರ್ಥವಂ ಮಿಂದ ಫಲ
ಒಂದು ದಿನದ ಭಸ್ಮಸ್ನಾನಕ್ಕೆ ಸರಿಬಾರದು.
ಮುನ್ನ ಆದಿಯ ಋಷಿಜನಂಗಳು ಭಸ್ಮಸ್ನಾನದಿಂದ ಕೃತಕೃತ್ಯರಾದರು.
ಇದು ಕಾರಣ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನಲ್ಲಿ
ಭಸ್ಮಸ್ನಾನದಿಂದ ಕೃತಕೃತ್ಯರಾದರು ನೋಡಾ. ॥೨೧೫॥

೧೪೭೫
ಮಹಾಜ್ಯೋತಿಯು ಸೋಂಕಿದ ಉತ್ತಮಾಧಮತೃಣ ಮೊದಲಾದವೆಲ್ಲವೂ
ಮಹಾಜ್ಯೋತಿಯಪ್ಪವು ತಪ್ಪದು, ನೋಡಿರೇ ದೃಷ್ಟವ,
ಮತ್ತಂತಿಂತೆಂದುಪಮಿಸಲುಂಟೇ?
ಪರಂಜ್ಯೋತಿ ಸದ್ಗುರುಲಿಂಗವು ಸೋಂಕಿದ ಸದ್‌ಭಕ್ತನ
ಅಂತರಂಗ ಬಹಿರಂಗಸರ್ವಾಂಗ ಪರಂಜ್ಯೋತಿರ್ಲಿಂಗವು,
ಮತ್ತೆ, ದೇಹವೆಂದು ಪ್ರಾಣವೆಂದು
ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ
ಆಜ್ಞೆ ಬ್ರಹ್ಮರಂಧ್ರವೆಂದು
ವರ್ಣ ದಳ ಛಾಯೆ ಅಧಿದೇವತೆಯೆಂದು ವಿವರಿಸಿ ನುಡಿಯಲುಂಟೆ?
ಪಂಚಭೌತಿಕದ ತನುವಿನಂತೆ ಪಂಚವಿಂಶತಿ ತತ್ತ್ವವನು
ಸಂಬಂಧಿಸಿ ನುಡಿಯಲುಂಟೇ,
ಕೇವಲ ಜ್ಯೋತಿರ್ಮಯ ಲಿಂಗತನುವಿಂಗೆ?
ಸದ್ಭಕ್ತನ ಅಂಗ ಲಿಂಗ, ಮನ ಲಿಂಗ, ಪ್ರಾಣ ಲಿಂಗ, ಭಾವ ಲಿಂಗ,
ಪಂಚವಿಶಂತಿ ತತ್ತ್ವಂಗಳೆಲ್ಲವೂ ಲಿಂಗತತ್ವ,
ಇದು ಕಾರಣ, ಲಿಂಗವಂತನ ತನು
ಸರ್ವಾಂಗಲಿಂಗವೆಂಬುದಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೧೬॥

೧೪೭೬
ಮಹಾರಾಜನನೆಲ್ಲರೂ ಬಲ್ಲರು. ಆ ರಾಜನು ಆರನೂ ಅರಿಯನು.
ಅರಿಯನಾಗಿ ಪದವಿಲ್ಲ ಫಲವಿಲ್ಲ ಭೋಗವಿಲ್ಲ ಪರಿಣಾಮವಿಲ್ಲ.
ಮಹಾರಾಜಾಧಿರಾಜ ಶಿವನನೆಲ್ಲರೂ ಬಲ್ಲರು
.ಆ ಶಿವನು [ಆರನೂ] ಅರಿಯನು,
ಅರಿಯನಾಗಿ ಪದವಿಲ್ಲ ಭೋಗವಿಲ್ಲ ಪರಿಣಾಮವಿಲ್ಲ.
ಇದು ಕಾರಣ, ಶಿವನನರಿದ ಸದ್ಭಕ್ತರ ಸಂಗದಿಂದ
ಆ ಮಹಾಶಿವನು ತನ್ನನು ಅರಿವಂತೆ ಮಾಡಿಕೊಂಡನಾಗಿ
ಪದ ಫಲ ಭೋಗ ಪರಿಣಾಮ ಮತ್ತೆ ಉಂಟೇ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೧೭॥

೧೪೭೭
ಮಹಾಸ್ಥಾನದಲ್ಲಿ ಗುರುಸ್ವರೂಪನಾಗಿರುತಿರ್ದೆ,
ಭ್ರೂಮಧ್ಯಸ್ಥಾನದಲ್ಲಿ ಲಿಂಗಸ್ವರೂಪನಾಗಿರುತಿರ್ದೆ,
ಹೃದಯಕಮಲದಲ್ಲಿ ಜಂಗಮಸ್ವರೂಪನಾಗಿರುತಿರ್ದೆ,

ಈ ಪರಿಯಲ್ಲಿ ಅಂತರಂಗ ಬಹಿರಂಗ ಭರಿತನಾಗಿರ್ದೆಯಯ್ಯಾ.
ಇನ್ನು ಬಹಿರಂಗದಲ್ಲಿ ಶ್ರೀಗುರುಲಿಂಗವಾಗಿ ದೀಕ್ಷಿಸಿ ರಕ್ಷಿಸಿದೆ,
ಶಿವಲಿಂಗವಾಗಿ ಕರಸ್ಥಲದಲ್ಲಿ ಪೂಜೆಗೊಂಡು ರಕ್ಷಿಸಿದೆ,
ಜಂಗಮಲಿಂಗವಾಗಿ ಎನ್ನವಗುಣಗಳನೆಲ್ಲವ ಕಳೆದು ರಕ್ಷಿಸಿದೆ.
ಇಂತು ತ್ರಿವಿಧಲಿಂಗವು ಒಂದೆಯಾಗಿ ಅಂತರಂಗ ಬಹಿರಂಗ ಭರಿತ
ಮಹಾಪ್ರಸಾದವ ಕರುಣಿಸಿ ಮುಕ್ತನ ಮಾಡಿದೆಯಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೧೮॥

೧೪೭೮
ಮಾತಂಗ ಪಾರಮೇಶ್ವರೇ:
'ಪ್ರೇರನ ಪ್ರೇರಕಃ ಶ್ರೀಮಾನ್ ದ್ವಯರೂಪಿ ಸುಮಂತ್ರರಾಟ್
ಅನುಗ್ರಹಂ ವಿನಾ ಸತ್ಯ ಅನುಗ್ರಾಹತ್ಮಾ ಕುತಃ।
ಕಾರುಣ್ಯತ್ವೇನ ಯೋ ಯಸ್ಮಾದಾತ್ಮಯೋಗಸ್ಸುದುರ್ಲಭಃ'
ಎಂದುದಾಗಿ, ಶಿವಲಿಂಗಧಾರಣೆ ಮಾಡಬೇಕೆಂದು[ದು]ಶ್ರುತಿ.
ಶಿವಶಿವಾ! ಶಿವಲಿಂಗವೆ ಧರಿಸಬೇಕೆಂದುದಥರ್ವಣ
"ತದಂತ ಗ್ರಹಣಾತ್"
ಎಂಬ ಶ್ರುತಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೧೯॥

೧೪೭೯
ಮಾತಾಪಿತಸಂಯೋಗಸಂಭೂತನಲ್ಲದವನು
ಶ್ವೇತ ಪೀತ ಹರಿತ ಕಪೋತ ಮಾಂಜಿಷ್ಠ ಗೌರ
ಇಂತು ಷಡುವರ್ಣರಹಿತನಯ್ಯಾ.
ಆದಿ ಮಧ್ಯ ಅವಸಾನವೆಂಬುದಿಲ್ಲದವನ
ವೇದವೆಂತುಂಟೆಂದು ನಿರೂಪಿಸಲುಬಾರದು ಅಯ್ಯಾ.
ಇವರೆಲ್ಲರೊಳಹೊರಗೆ ತಾನಿಲ್ಲದಿಲ್ಲದವನ
ನಾ ಬಲ್ಲೆನೆಂಬ ಹಿರಿಯರ ಟಿಪ್ಪಣ ಮಿಕ್ಕುವು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ಭಕ್ತಿಗಮ್ಯನು. ॥೨೨೦।

೧೪೮೦
ಮೂರು ಮಲ ಮೊದಲಾದ ಸಂಸಾರ ಸಂಗವ ಬಿಟ್ಟು,
ಮೂರು ಬಾಳಿನ ಭೇದವ ತಿಳಿದು, [ಅಂಗಲಿಂ]ಗ ಸಂಬಂಧವನರಿದು,
ಅಂಗ ಲಿಂಗ ಪ್ರಮಾಣವ ಕಂಡು,
ಅಂಗಕ್ಕೊಂದು ಕಾಶಾಂಬರದ ಕೌಪು ಕಪ್ಪಡಕಂಬಳಿಯ ಕಟ್ಟಿಹೊದ್ದು,

ಲಿಂಗಕ್ಕೊಂದು ಶಿವದಾರ ಸೆಜ್ಜೆಸಿಂಹಾಸನವನಿಕ್ಕಿ, ಮೇಲುವಸ್ತ್ರವ ಕಟ್ಟಿ,
ಶ್ರೀ ರುದ್ರಾಕ್ಷಿ ಭಸ್ಮಾಧಾರವನಳವಡಿಸಿಕೊಂಡು,
ಶಿವಮಂತ್ರ ಸಂಬಂಧಿ[ಯಾ]ಗಿ, ತ್ರಿಕಾಲಲಿಂಗಾರ್ಚನೆಯಂ ಮಾಡಿ,
ಲಿಂಗಭಕ್ತರ ಮನೆಗೆ ಹೋಗಿ, 'ಲಿಂಗಾರ್ಪಿತ ಭಿಕ್ಷಾ'ಯೆಂದು ಬೇಡಿ,
ಲಿಂಗಾಣತಿಯಿಂದ ಬಂದ [ಪದಾರ್ಥವ]
ಕರಪಾತ್ರೆಯ ನಿರುತತ್ವದಿಂ ಕೈಕೊಂಡು ಭೋಗಿಸುವಲ್ಲಿ,
ಲಿಂಗದ ವಸ್ತ್ರವ ಬಿಟ್ಟು ಕಟ್ಟಿ,
ಲಿಂಗನಿರೀಕ್ಷಣೆಯಿಂದ ಲಿಂಗಾರ್ಪಣ ಪ್ರಸಾದಭೋಗ.
ಲಿಂಗದ ಅತ್ಯಾಶ್ರಮವನಾಶ್ರೈಸಿ, ಲಿಂಗಧ್ಯಾನದಲ್ಲಿ ಲಿಂಗಪರಿಣಾಮಿಯಾಗಿ,
ಸದಾಕಾಲ ಸನ್ನಿಹಿತನಾಗಿಪ್ಪ ವಿರಕ್ತನಾದ
ಪರಜ್ಞಾನಿಯೆಂದಡೆ ಜನ್ಮಪವಿತ್ರ.
ಭಿಕ್ಷವ ನೀಡಿದಡೆ ಮಹಾಪುಣ್ಯ,
ಆತನ ದಿವ್ಯೋಪದೇಶವ ಕೇಳಿ ನಡೆದವರಿಗೆ ಜೀವನ್ಮುಕ್ತಿ,
ಆ ಮಹಾ[ಮಹಿಮ] ಮಾಡಿದುದು ಬ್ರಹ್ಮಾರ್ಪಣ. ಇದು ಸತ್ಯ,
ಶಿವ ಬಲ್ಲ ಶಿವನಾಣೆ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೨೧॥

೧೪೮೧

ಮೃಗಾದಿಗಳಂತೆ [ಆಚರಿಸಿದಡೇನು?] ದಾನಾದಿಗಳ ಕೊಟ್ಟಡೇನು?
ಕ್ಷತ್ರಿಯರಂತೆ. ಅದೆಂತೆಂದಡೆ, ಶಿವನ ವಾಕ್ಯ:
'ಪಯೋಹಾರೀ ತು ಮಾರ್ಜಾಲೋ ನಗ್ನೋ ಮುಗ್ಧಃ ಪಿಶಾಚವತ್
ನಿತ್ಯಸ್ನಾನಶ್ಚ ಕಾಕಶ್ಚ ವಾಲ್ಮೀಕಾಃ ಸರ್ಪಜಾತಯಃ
ತೃಣಂ ಭಕ್ಷಂತಿ ಪಶವಃ ವನವಾಸಿಮೃಗಾಸ್ತಥಾ
[ಮಾ]ಸ್ತು ಚೈತಾನಿ ಕಾರ್ಯಾಣಿ ನ ಕರೋತಿ ಹಿ ಪಾರ್ವತಿ'
ಎಂದುದಾಗಿ, ಆವ ಸಿದ್ಧಿಗಳಿಂದಲೂ ಫಲವಿಲ್ಲ,
ಏನನೋದಿ ಏನ ಕೇಳಿ ಏನ ಹೇಳಿಯೂ ಫಲವಿಲ್ಲ,
ಇವು ಭಕ್ತಿಯೊಳಗಲ್ಲ, ಮುಕ್ತಿಗೆ ಸಲ್ಲವು.
ಇದನರಿದು ಆವನಾನೊಬ್ಬನು ಲಿಂಗವನರಿತು ಲಿಂಗಾರ್ಚನೆಯಂ ಮಾಡಿ,
ಗುರುಲಿಂಗಜಂಗಮಕ್ಕೆ ತನುಮನಧನವ ಸವೆಸಿದಡೆ
ಅದೇ ಚೆಲ್ವ ಭಕ್ತಿ, ಅದೇ ಚೆಲ್ವ ಮುಕ್ತಿ, ಅದೇ ಸರ್ವಸಿದ್ಧಿ.
ಅದೇ ಸರ್ವಕಾರಣವಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ॥೨೨೨॥

೧೪೮೨
'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ'
ಎಂದೆನಿಸುವ ಲಿಂಗವು,
'ಅತ್ಯತಿಷ್ಠದ್ದಶಾಂಗುಲಂ' ಎಂದೆನಿಸುವ ಲಿಂಗವು,
'ಚಕಿತಮಭಿದತ್ತೇ' ಎಂದೆನಿಸುವ ಲಿಂಗವು,
'ಅಣೋರಣೀಯಾನ್ ಮಹತೋ ಮಹೀಯಾನ್' ಎಂದೆನಿಸುವ ಲಿಂಗವು,
'ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಃ'
ಎಂದೆನಿಸುವ ಲಿಂಗವು,
'ಏಕಮೂರ್ತಿಸ್ತ್ರಿಧಾಭೇದಾಃ' ಎಂದೆನಿಸಿ ಶ್ರೀಗುರುಲಿಂಗಜಂಗಮರೂಪಾಗಿ,
'ಇಷ್ಟಂ ಪ್ರಾಣಸ್ತಥಾ ಭಾವಸ್ತ್ರಿಧಾ ಚೈಕಂ ವರಾನನೇ' ಎಂದುದಾಗಿ
ತ್ರಿವಿಧ ಏಕೀಭವಿಸಿ ಲಿಂಗರೂಪಾಗಿ,
ಎನ್ನ ಕರಸ್ಥಲಕ್ಕೆ ಬಂದು ಕರತಳಾಮಳಕದಂತೆ ತೋರುವೆ.
ಆಹಾ! ಎನ್ನ ಸತ್ಯವೆ, ಆಹಾ! ಎನ್ನ ನಿತ್ಯವೆ,
ಆಹಾ! ಎನ್ನ ಪುಣ್ಯವೇ, ಆಹಾ! ಎನ್ನ ಭಾಗ್ಯವೇ,
ಶಿವ ಶಿವ ಮಹಾದೇವ! ನೀನೇ ಬಲ್ಲೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೨೩॥

೧೪೮೩
'ಯಥಾ ಬೀಜಂ ತಥಾ[ಽ]ಂಕುರಂ' ಎಂಬ ವಾಕ್ಯ ತಪ್ಪದು,
ಕಲ್ಪವೃಕ್ಷದ ಬೀಜದಿಂದಾದ ಸಸಿ, ಕಲ್ಪವೃಕ್ಷವಪ್ಪುದು ತಪ್ಪದು,
ದಿಟದಿಟ ತಪ್ಪದು ನೋಡಾ.
ಕಾಮಧೇನುವಿನ ಶಿಶು ಕಾಮಧೇನುವಪ್ಪುದು ತಪ್ಪದು,
ದಿಟದಿಟ ನೋಡಾ.
ಸದ್ಗುರುವಿನಿಂದಾದ ಶಿಷ್ಯನು ಸದ್ಗುರುವಪ್ಪುದು ತಪ್ಪದು,
ದಿಟದಿಟ ನೋಡಾ.
'ಯಥಾ ಬೀಜಂ ತಥಾಂಕುರಂ' ಎಂಬ ವಾಕ್ಯ ತಪ್ಪದು,
ಶಿವನೇ ಬಲ್ಲನು, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೨೪॥

೧೪೮೪
ಯೋಗಾಭ್ಯಾಸ ಯೋಗಾಭ್ಯಾಸವೆಂದೆಂಬಿರಿ,
ಯೋಗವು ಅಭ್ಯಾಸವೆ? ಅಭ್ಯಾಸವು ಯೋಗವೆ ಅಯ್ಯಾ?
ಯೋಗಾಭ್ಯಾಸವೆಂಬನ್ನಕ್ಕ ತಾನಾ ಯೋಗಿಯೆ ಅಯ್ಯಾ?
ಯೋಗವ ನುಡಿವರೆ ಅಯ್ಯಾ?

ಗುರುಮತದಿಂ ಭಾವಿಸಲು ಸರ್ವವೂ ಪರಬ್ರಹ್ಮ,
ಶ್ರೀಗುರುವಿನ ಶ್ರೀಪಾದಧ್ಯಾನವೇ ಯೋಗ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೨೫॥

೧೪೮೫
ರತ್ನಂಗಳೊಳಗೆ ಚಿಂತಾಮಣಿಮಹಾರತ್ನವೆಂತು ಪೂಜ್ಯವಾಗಿ ಒಪ್ಪುವುದು,
ಧೇನುಗಳೊಳಗೆ ಕಾಮಧೇನುವೆಂತು ಪೂಜ್ಯವಾಗಿ ಒಪ್ಪುವುದು,
ಅಂತೆ, ಕಾಣಿರೆ ತತ್ವಂಗಳೊಳಗೆ ಶ್ರೀಗುರುತತ್ವವೆ ಪೂಜ್ಯವು.
ಶ್ರೀಗುರುತತ್ವವೆ ಒಪ್ಪುವುದಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೨೬॥

೧೪೮೬
ರಾವಣ ಪಡೆದ ಲಿಂಗ ಚಂದ್ರಾಯುಧ ಪಾರ್ವತಿ ಗಜಮುಖ[ರ]
ಹರಿಯಜರು ಬಿಡಿಸಿದರೆಂದೆಂಬರು, ಸ್ವಾಮಿಭೃತ್ಯ ನ್ಯಾಯಕ್ಕದೇನು ಚೋದ್ಯ!
ಹರಿಯಜರು ಹರನ ಕೊಲ್ಲುವೆನೆಂದಸುರನ,
ಹೆಣ್ಣು ರೂಪಾಗಿ ಅವನ ಕೈಯಿಂದಲವನ ಸುಟ್ಟು,
ಇವರು ಮೊದಲಾದ ಶಿವದ್ರೋಹಿಗಳ ಹರಿ ಸಂಹರಿಸಿದರೇನು?
ದೈತ್ಯರಂ ಗೆಲುವ ಸಾಹಸಮಂ ಶಿವನು
ತನ್ನ ಭೃತ್ಯರ ಸಾಹಸಮಂ ಮೆರೆಸುವ ವಿನೋದವಲ್ಲದೆ
ಶಿವನ ಕೃಪೆಯಿಂದ ಪಡೆದುಮಾಡುವ ಸ್ವಾಮಿಭೃತ್ಯನ್ಯಾಯಕ್ಕದೇನು ಚೋದ್ಯ!
ಬಲೆಯೊಳಗೆ ಸಿಡಿಲುವಕ್ಕಿ ಬಿದ್ದರೆ ಬೇಂಟೆಕಾರಗೆ ಸಾಧ್ಯವಾಗಬಲ್ಲುದೆ?
ಮರಣವಿರಹಿತ ಶಿವನ ಕೊಲಬಲ್ಲವರುಂಟೆ?
ಸರ್ವಜ್ಞ ಶಿವನ ಸತಿಯ ಮತ್ತೊಬ್ಬರಾಳುವರುಂಟೆ?
ಸೂತ್ರಕನಾಡಿಸುವಂತೆ ಆಡುವ ಬೊಂಬೆ ಆ ಸೂತ್ರಕನ ಕೊಲಬಲ್ಲವೆ?
ಆ ಸೂತ್ರಧಾರಕನ ಸತಿಯ ಬಂದು ಬೊಂಬೆಯಾಳಬಲ್ಲುದೆ?
ಮತ್ತೊಂದು ಬೊಂಬೆ ಬುದ್ಧಿಯಿಂದ ಸೆಳೆದುಕೊಳಬಲ್ಲುದೆ?
ಅದು ಕಾರಣ, ಬ್ರಹ್ಮನಿಂದಲಾಯಿತ್ತು! ವಿಷ್ಣುವಿಂದಲಾಯಿತ್ತು!
ಮತ್ತೆ ಕೆಲವು ದೈವಗಳಿಂದವಾಯಿತ್ತೆಂಬ ಅಜ್ಞಾನಿಗಳ ಮಾತಂತಿರಲಿ,
ಬ್ರಹ್ಮವಿಷ್ಣುಗಳು ಸ್ವತಂತ್ರರಾದರೆ ಬ್ರಹ್ಮನ ತಲೆ ಹೋಗಲೇತಕ್ಕೆ?
ಸರಸ್ವತಿಯ ಮೂಗು ಹೋಗಲೇತಕ್ಕೆ?
ಬ್ರಹ್ಮನ ಮಗ ಸನತ್ಕುಮಾರ ಒಂಟೆಯಾಗಲೇತಕ್ಕೆ?
ಹರಿಯ ಮಗ ಕಾಮನುರಿದು ಹೋಗಲೇತಕ್ಕೆ?
ನಾರಸಿಂಹನು [ವ]ಧೆಗೆ ಒಳಗಾಗಲೇತಕ್ಕೆ?
ಕೃಷ್ಣನ ಹದಿನಾರು ಸಾವಿರ ಸ್ತ್ರೀಯರ ಮೇಲೆ ಬೇಡರು ನೆರೆಯಲೇತಕ್ಕೆ?

ಕಾಳುಬೇಡನೆಚ್ಚಂಬು ತಾಗಿ ಕೃಷ್ಣ ಗೋಳುಗುಟ್ಟಿ ಸಾಯಲೇತಕ್ಕೆ?
ಅದು ಕಾರಣ, ನಮ್ಮ ಶಿವನು ಆಡಿಸಿದಂತೆಯಾಡಿ,
ಹುಟ್ಟೆಂದರೆ ಹುಟ್ಟಿ, ನಡೆಯೆಂದರೆ ನಡೆದು,
ನುಡಿಯೆಂದರೆ ನುಡಿದು, ಸಾಯೆಂದರೆ ಸತ್ತು,
ಕೆಡಹಿದಂತೆ ಬಿದ್ದಿಹ ತೃಣಗೊಂಬೆಗಳಿಗುಂಟೆ ಸ್ವತಂತ್ರ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೨೭॥

೧೪೮೭

ರುದ್ರಪಿಂಡದಲ್ಲಿ ಉತ್ಪತ್ತಿ, ರುದ್ರವಾಹನನ ಮುಖದಲ್ಲಿ ಸ್ತುತಿ,
ನಂದಿಮುಖದಿಂದ ಶುಚಿ
ಪಂಚಶಿಖಿ ಉದ್ಧೂಳಿತ ಅಗ್ನಿಕಾರ್ಯನೆವದಿಂದ
ವಿಭೂತಿಯ ಧರಿಸಿದಿರಿ, ಇದ್ದಿದ್ದೇನ ನೆನೆದಿರಿ.
ಎಡೆಯಂತರದಲ್ಲಿ ಮಲಿನವ ಧರಿಸಿ ಹೆಡ್ಡರಾದಿರಿ,
ಅರಿದು ಬರಿದೆ ಬರಿದೊರೆವೋದಿರಿ,
ಶ್ವಾನಜ್ಞಾನಿಗಳಾದಿರಿ, ಕೆಟ್ಟರಯ್ಯೋ ದ್ವಿಜರು.
ತದ್ದಿನಂಗಳ ಮಾಡುವಲ್ಲಿ ಪಿತೃಗಳನ್ನುದ್ಧರಿಸುವಲ್ಲಿ
'ಶ್ರೀ ರುದ್ರಪಾದೇ ದತ್ತಮಸ್ತು' ಎಂಬಿರಿ.
'ಏಕ ಏವ ರುದ್ರಃ' ಎಂದು ಅಧ್ಯಾಯಂಗಳಲ್ಲಿ ಹೇಳುವಿರಿ
ನಿಮಗಿಂದ ನಾವು ಬುದ್ಧಿವಂತರೇ?
ದಧೀಚಿ ಗೌತಮಾದಿಗಳ ಶಾಪವ ಹೊತ್ತಿರಿ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೨೮॥

೧೪೮೮

ಲಘು ಗುರುವಪ್ಪನೆ? ಗುರು ಲಘುವಪ್ಪನೆ? ಆಗದಾಗದು.
ಗುರು ಗುರುವೆ, ಲಘು ಲಘುವೆ.
ಶ್ರೀಗುರು ಲಘುವರ್ತನದಲ್ಲಿ ವರ್ತಿಸಿದಡೆ ಆಗದು ಆಚಾರ.
ಶ್ರೀಗುರು ಲಿಂಗಜಂಗಮಪ್ರಸಾದವನು
ತಾನೆ ಲಘುಮಾಡಿ ಲಘುವಾದನಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೨೯॥

೧೪೮೯

ಲಿಂಗಕ್ಕೆಯೂ ತನಗೆಯೂ ಭಿನ್ನಭಾವವಿಲ್ಲೆಂಬರು,
ಲಿಂಗಕ್ಕೆಯೂ ತನಗೆಯೂ ಭಾಜನವೆರಡೆಂಬರು.

ಬಂದಿತ್ತು ನೋಡಾ ತೊಡಕು.
ಭಾಜನವೆರಡೆಂಬ ಮಾತೆರಡು, ಮಾತೆರಡಾದವಾಗಿ ಅಂಗವೆರಡಹುದು,
ಅಂಗವೆರಡಿಪ್ಪಾತಂಗೆ ಲಿಂಗವಿಲ್ಲೆಂದೆನಿಸಿತ್ತು.
ಲಿಂಗವಿಲ್ಲದಾತನು ಭವಿ ಎಂದೆನಿಸುವನು.
ಇದು ಕಾರಣ, ಲಿಂಗದಲ್ಲಿ ಅವಿರಳವಾಗಿ
ಅಂಗಗುಣಭಂಗವ ಕಳೆದು, ನಿರ್ಭಿನ್ನ ಮತನಾಗಿ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನಲ್ಲಿ,
ಏಕಭಾಜನ ಸಮನಿಸಿತಯ್ಯ. ॥೨೩೦॥

೧೪೯೦

ಲಿಂಗದಲ್ಲಿ ಮನ ಲೀಯವಾಗಿ, ಜಂಗಮದಲ್ಲಿ ಧನ ಲೀಯವಾಗಿ,
ಸದ್ಗುರುಲಿಂಗದಲ್ಲಿ ತನು ಲೀಯವಾಗಿ ಹೊಗಲು
ಭಕ್ತ ಲಿಂಗದೊಳಗೆ, ಲಿಂಗ ಭಕ್ತನೊಳಗೆ.
ವಂಚನೆಯಿಲ್ಲದ ದಾಸೋಹ ಕೇವಲ ಮುಕ್ತಿ,
ಇದುಸತ್ಯ ನಿತ್ಯ ಶಿವಬಲ್ಲನಯ್ಯಾ, ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ॥೨೩೧॥

೧೪೯೧

ಲಿಂಗದ ಮರ್ಮವನರಿವುದರಿದು, ಲಿಂಗದ ಸಂಜ್ಞೆಯ[ನ]ರಿವುದರಿದು,
ಲಿಂಗವಂತಹದಿಂತಹದೆಂದರಿವುದರಿದು ನೋಡಾ.
ಲಿಂಗದಲ್ಲಿಯೇ ಆಗಮವಯ್ಯ,
ಭೂಮಿಯೇ ಪೀಠಿಕೆ, ಆಕಾಶವೇ ಲಿಂಗವೆಂದರಿದಾತನು
ಲಿಂಗವನರಿದವನಲ್ಲ.
ಲಿಂಗದಲ್ಲಿಯೇ ಆಗಮವಯ್ಯ,
ಲಿಂಗದಾದಿ ಬ್ರಹ್ಮ, ಮಧ್ಯ ವಿಷ್ಣು, ಅಂತ್ಯ ರುದ್ರ
ಇಂತು ತ್ರೈಲಿಂಗವೆಂದರಿದಾತನು ಲಿಂಗವನರಿದವನಲ್ಲ.
ಲಿಂಗದಲ್ಲಿಯೇ ಆಗಮವಯ್ಯಾ,
'ಲಿಂಗಮಧ್ಯೇ ಜಗತ್ಸರ್ವಂ' ಎಂಬ ಭಾವಭರಿತಲಿಂಗ
'ಬ್ರಹ್ಮವಿಷ್ಣಾದಿದೇವನಾಮಪ್ಯಗೋಚರಂ' ಎಂದು,
'ಮಾಹೇಶ್ವರಜ್ಯೋತಿರಿದಮಾಪಾತಾಲೇ ವ್ಯವಸ್ಥಿತಂ
ಅತೀತಂ ಸತ್ಯಲೋಕಾಧೀನನಂತಂ ದಿವ್ಯಮೀಶ್ವರಂ'
ಇಂತಾದನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು
ಎಂದರಿದ ಶರಣಂಗೆ ಸುಲಭ, ಮಿಕ್ಕಿದವರ್ಗೆ ಅಸುಲಭ. ॥೨೩೨॥

೧೪೯೨
ಲಿಂಗದೇವನ ನಂಬಿದವಂಗೆ ಜ್ಞಾನವಿದೆ,
ಅಷ್ಟಮಹದೈಶ್ವರ್ಯ ಲಿಂಗಭೋಗ ಆವುದೂ ಕೊರತೆ ಇಲ್ಲ.
ಸುಖಪರಿಣಾಮಿ, ಆ ಮಹಿಮಂಗೆ ಮಾನವರಾರೂ ಪಡಿಯಲ್ಲ.
ಲಿಂಗದೇವನ ನಂಬದವಂಗೆ ಜ್ಞಾನವಿಲ್ಲ,
ಐಶ್ವರ್ಯ ಭೋಗ ಆವುದೂ ಇಲ್ಲ, ಇಹಪರವಿಲ್ಲ.
ಇದನರಿದು ತನ್ನ ತಾನು ವಿಚಾರಿಸಿಕೊಂಬುದಯ್ಯಾ.
ಲಿಂಗವ ನಂಬಿದಡೆ ಸರ್ವಸಿದ್ಧಿ, ಲಿಂಗವ ನಂಬದಿರ್ದಡೆ ನಾಯಕನರಕ.
ಇನ್ನಾದಡೂ ನಂಬಿ ಬದುಕಿ, ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ॥೨೩೩॥

೧೪೯೩
ಲಿಂಗದೊಡನೆ ಸಹಭೋಜನ ಮಾಡುವ
ಸದ್ಭಕ್ತನ ಆಚರಣೆ ಕ್ರಿಯೆಗಳೆಂತುಂಟಯ್ಯಾ ಎಂದಡೆ:
ಲಿಂಗ ಜಂಗಮದ ಕುಂದು ನಿಂದೆಯಂ ಕೇಳಲಾಗದು,
ಕೇಳಿದಡೆ ಆ ನಿಂದಕನಂ ಕೊಲುವುದು,
ಕೊಲಲಾರದಿರ್ದಡೆ ತನ್ನ ತಾನಿರಿದುಕೊಂಡು ಸಾವುದು,
ಸಾಯಲಾರದಿರ್ದಡೆ ಅವನ ಬಯ್ವುದು.
ತನ್ನ ಅರ್ಥಪ್ರಾಣಾಭಿಮಾನವು ಶಿವಾರ್ಪಣವಾಯಿತ್ತೆಂದು
ಮನದಲ್ಲಿ ಸಂತೋಷವ ತಾಳಿದಡೆ ಪ್ರಸಾದವುಂಟು.
ಇಂತಲ್ಲದೆ ಮನದಲ್ಲಿ ನೋವ ತಾಳಿದಡೆ ಆಚಾರಭ್ರಷ್ಟನು.
ಎನ್ನ ಮನೆ, ಎನ್ನ ಧನ, ಎನ್ನ ಸತಿಯೆಂಬನ್ನಕ್ಕರ
ಅವನು ಭವಿಯ ಸಮಾನ.
ಭಕ್ತನಲ್ಲ, ಪ್ರಸಾದಿಯಲ್ಲ, ಶೀಲವಂತನಲ್ಲ.
ಅವನಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ,
ಪಾದತೀರ್ಥವಿಲ್ಲ, ಪ್ರಸಾದ ಮುನ್ನವೇ ಇಲ್ಲ.
ಅವನಿಗೆ ಕುಂಭೀಪಾತಕನಾಯಕನರಕ ತಪ್ಪದು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೩೪॥

೧೪೯೪
ಲಿಂಗಪ್ರಸಾದವಂ ಚೆಲ್ಲಿ, ಜಂಗಮಪ್ರಸಾದದ ಸುಯಿಧಾನಿಯೆಂಬ
ಅಂಗಹೀನ ಮೂಕೊರೆಯ ಹೊಲೆಯನ ಮುಖವ ನೋಡಲಾಗದು!
ಅದೇನು ಕಾರಣವೆಂದಡೆ :

ಗುರುವಾವುದು? ಲಿಂಗವಾವುದು? ಜಂಗಮವಾವುದು?
ಇಂತೀ ತ್ರಿವಿಧವು ಒಂದಾದ ಕಾರಣ
'ಏಕಮೂರ್ತಿಸ್ತ್ರಯೋ ಭಾಗಃ ಗುರುಲಿಂಗಂತು ಜಂಗಮಃ
ಜಂಗಮಶ್ಚ ಗುರುರ್ಲಿಂಗಂ ತ್ರಿವಿಧಂ ಲಿಂಗಮುಚ್ಯತೇ'
ಎಂದುದಾಗಿ, ಒಂದಬಿಟ್ಟೊಂದ ಹಿಡಿದ ಸಂದೇಹಿ ಹೊಲೆಯನ ಕಂಡರೆ
ಹಂದಿ ನಾಯ ಬಸುರಲ್ಲಿ ಹಾಕದೆ ಬಿಡುವನೇ?
ನಮ್ಮ [ಉರಿಲಿಂಗಪೆದ್ದಿಪ್ರಿ]ಯ ವಿಶ್ವೇಶ್ವರ. ॥೨೩೫॥

೧೪೯೫

ಲಿಂಗಪ್ರಸಾದದಲ್ಲಿ ಸುಯಿಧಾನಿಯಾಗದವರಲ್ಲಿ
ಜಂಗಮವೆಂದು ಪ್ರಸಾದವ ಕೊಳ್ಳಲಾಗದು.ಅದೇನು ಕಾರಣವೆಂದಡೆ:
ತಾನುಂಬುವುದು ಎಂಜಲು, ಪರರಿಗಿಕ್ಕುವುದು ಪ್ರಸಾದವೆ?
ಬಿಡು ಬಿಡು, ಸುಡು ಸುಡು, ಈ ಕಷ್ಟದ ನುಡಿಯ ಕೇಳಲಾಗದು.
ಪರುಷ ನಿರ್ಮಲವಾದಲ್ಲದೆ,
ಅದು ಲೋಹದ ದುರ್ಗುಣವ ಕೆಡಿಸಲರಿಯದು.
ಜಂಗಮನಾಗಿಯಲ್ಲದೆ ತಾ ಭಕ್ತನಾಗಲರಿಯ.
ಮಡಿಯರ್ಥ, ಮೈಲಿಗೆಯರ್ಥವಾದಡೆ
ಕೆಡಹಿ ನಾಯಕ ನರಕದಲ್ಲಿಕ್ಕುದೆ ಬಿಡುವನೆ
ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ? ॥೨೩೬॥

೧೪೯೬

ಲಿಂಗ ಪ್ರಾಣ, ಪ್ರಾಣ ಲಿಂಗ. ಆ ಮಹಾಲಿಂಗಕ್ಕೆ ಕಾಯವೆ ಭಕ್ತನು,
'ಭಕ್ತಕಾಯ ಮಮಕಾಯ'ಎಂದುದಾಗಿ
ಆ ಪ್ರಾಣ ಲಿಂಗವು, ಕಾಯ ಭಕ್ತನು.
ಆ ಲಿಂಗಕ್ಕೆ ಆ ಭಕ್ತನು ದಾಸೋಹವ ಮಾಡಿದಡೆ
ಭಿನ್ನ ಭೇದವೆ? ಅಲ್ಲ, ಸ್ವಭಾವ ನೈಜ.
ಅಂಗಕ್ರೀಯೆಲ್ಲ ಲಿಂಗಕ್ರೀ, ಲಿಂಗಕ್ರೀಯೆಲ್ಲ ಅಂಗಕ್ರೀ.
ಕೈಕಲಸಿದಡೆ ಬಾಯಿಗೆ, ಹಾಂಗೆ ಸರ್ವಾಂಗ ಲಿಂಗಕ್ಕೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೩೭॥

೧೪೯೭

ಲಿಂಗಭರಿತ ಶರಣ, ಶರಣಭರಿತ ಲಿಂಗವದೆಂತೆಂದಡೆ:
'ಶರಣಮಧ್ಯೇ ತು ಲಿಂಗಂ ಸ್ಯಾತ್ ಲಿಂಗಮಧ್ಯೇ ತು ಶರಣಃ'

ಎಂದುದಾಗಿ,
ಶರಣ ಬೇರೆಯೆ? ಲಿಂಗ ಬೇರೆಯೆ? ಶಿವ ಶಿವಾ ಒಂದೇ ಕಾಣಿರಣ್ಣಾ.
ಶರಣಕ್ರೀ ಎಲ್ಲವೂ ಲಿಂಗಕ್ರೀ, [ಲಿಂಗಕ್ರೀ] ಎಲ್ಲವೂ ಶರಣಕ್ರೀ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೩೮॥

೧೪೯೮

ಲಿಂಗ ಲಿಂಗಿಗಳ ದರ್ಶನ: ಸಾಲೋಕ್ಯಪದ.
ಲಿಂಗ ಲಿಂಗಿಗಳ ಸ್ನೇಹ ನಿರಂತರ ಸ್ನೇಹಸಂಗ: ಸಾಮಿಪ್ಯಪದ.
ಲಿಂಗ ಲಿಂಗಿಗಳ ಸಂಗ ಹಿಂಗದೆ,
ಮನೋವಾಕ್ಕಾಯದಲ್ಲಿ ವಂಚನೆಯಿಲ್ಲದೆ
ತನುಮನಧನವನರ್ಪಿಸಿ ಲಿಂಗಭರಿತ ಶರಣಮೂರ್ತಿಯನು
ಕಂಗಳಲ್ಲಿ ಮನದಲ್ಲಿ ಹೃದಯದಲ್ಲಿ ಭರಿತನಾಗಿ
ಮೂರ್ತಿಗೊಳಿಸುವುದು: ಸಾರೂಪ್ಯಪದ.
ಲಿಂಗ ಲಿಂಗಿಗಳ ಶ್ರೀಪಾದಪದ್ಮದಲ್ಲಿ, ಮನೋವಾಕ್ಕಾಯದಲ್ಲಿ
ನಿರಂತರ ಐಕ್ಯನಾಗಲು ಸಾಯುಜ್ಯಪದವಯ್ಯಾ.
ಇದೇ ಚತುರ್ವಿಧಪದ, ಇದೇ ಚತುರ್ವಿಧಪದಕ್ಕೆ ವಿಶೇಷಪದ.
'ಸಾಲೋಕ್ಯಂ ಚ ತು ಸಾಮಿಪ್ಯಂ ಸಾರೂಪ್ಯಂ ಚ ಸಾಯುಜ್ಯತಾ
ತತ್ಪದೇಭ್ಯೋ ವಿಶೇಷಶ್ಚ ಶಿವದಾಸೋಹ ಉತ್ತಮಃ'
ಎಂದುದಾಗಿ, ಇತರ ಪದವ ನಿಶ್ಚೈಸಲು
'ಸಾಲೋಕ್ಯಂ ಚ ತು ಸಾಮಿಪ್ಯಂ ಸಾರೂಪ್ಯಂ ಚ ಸಾಯುಜ್ಯತಾ
ಸಕೃತಾಪೇಕ್ಷಿಭಕ್ತಾನಾಂ ನಾಸ್ತಿ ಲಿಂಗಂ ಗುರೋಃ ಪರು'
ಎಂದುದಾಗಿ, ಇತರ ಪದವ ಬಯಸದಿರಿ.
ಮಹಾಪದ ಚತುರ್ವಿಧಪದಕ್ಕೆ ವಿಶೇಷಃ.
ಶರಣರಿಗೆ ಶರಣೆಂಬುದೇ ಪದ ಕಾಣಿರಣ್ಣಾ,
ಶರಣೆನ್ನದೆ ಪದವ ಬಯಸಿದ ದಕ್ಷ ನಾರಸಿಂಹಾದಿಗಳು ಕೆಟ್ಟರು,
ಶರಣೆಂದು ಮಹಾಪದವ ಪಡೆದರು.
ಶರಣರಿಗೆ ಶರಣೆನ್ನದೆ ನಂಬಿಯಣ್ಣನು ಶರಣರಿಗೆ ಹೊರಗಾಗಿ
ಅರಿದು ಸದ್ಭಕ್ತಿಯಿಂ ಶರಣೆಂದು ಶರಣರೊಳಗಾದನು,
ಇಹಪರಭೋಗವನು ವಿಶೇಷವಾಗಿ ಹಡೆದನು.
ಶರಣರಿಗೆ ಶರಣೆನ್ನದೆ ಕೆಟ್ಟರು ಕಾಲ, ಕಾಮ, ಇಂದ್ರ
ಮೊದಲಾದವರನೇಕರು. ಅವರಂತಾಗದಿರಿ.
ಶರಣರಿಗೆ ಶರಣೆನ್ನಿ, ಇದೇ ಭಕ್ತಿ, ಇದೇ ಮುಕ್ತಿ.
ಶರಣರಿಗೆ ಶರಣೆನ್ನದೆ,

ಭಕ್ತಿಯೆಂದಡೆ ಮುಕ್ತಿಯೆಂದಡೆ ಪದವ ಬಯಸಿದಡೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಲಿಂಗವು ನಗುವು ನಗುವನು,
ನಾಯಕನರಕದಲ್ಲಿಕ್ಕುವನಯ್ಯಾ. ॥೨೩೯॥

೧೪೯೯

ಲಿಂಗವಂತಂಗೆ ಲಿಂಗವು ಮಾಡಿದ ಪದವನು ಲಿಂಗವಂತರೆ ಬಲ್ಲರು.
ಕೇವಲ ಸಾಕ್ಷಾತ್ಪರವಸ್ತುವನು ಕರಸ್ಥಲದಲ್ಲಿ ಮೂರ್ತಿಯಾಗಿ
ಬಿಜಯಂಗೈಸಿ ಕೊಟ್ಟನಾಗಿ ಸಾಲೋಕ್ಯಪದ.
ಅಂಗದ ಮೇಲೆ ನಿರಂತರ ಪೂಜೆಗೊಳ್ಳುತ್ತಿಹನಾಗಿ ಸಾಮೀಪ್ಯಪದ.
ಸದ್ಭಕ್ತರೂಪ ಮಾಡಿದವನಾಗಿ ಸಾರೂಪ್ಯಪದ.
ಪ್ರಾಣಲಿಂಗವ ಮಾಡಿ ಅವಿನಾಭಾವವ ಮಾಡಿದನಾಗಿ ಸಾಯುಜ್ಯಪದ.
ಇಂತೀ ಚತುರ್ವಿಧ ಪದವಾಯಿತ್ತು.
'ಲಿಂಗಮಧ್ಯೇ ಶರಣಂ ಶರಣಮಧ್ಯೇ ಲಿಂಗಂ' ಎಂಬುದಾಗಿ
ಸರ್ವಭೋಗಂಗಳನೂ ಸಹವಾಗಿ ಭೋಗಿಸಿ
ಪ್ರಸಾದವನಿಕ್ಕಿ ಸಲಹಿದನಾಗಿ ಸದ್ಯೋನ್ಮುಕ್ತನು, ಸರ್ವಾಂಗಲಿಂಗವು.
ಈ ತಾತ್ಪರ್ಯದ ಮರ್ಮವನು ಲೋಕದ ಜಡಜೀವಿಗಳೆತ್ತ ಬಲ್ಲರಯ್ಯಾ?
ಬಲ್ಲಡೆ, ಲಿಂಗಾನುಭಾವಿಗಳೇ ಬಲ್ಲರಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೪೦॥

೧೫೦೦

ಲಿಂಗವಂತನು ಕೇವಲ ಲಿಂಗಮೂರ್ತಿ.
ಲಿಂಗಾರ್ಚನೆಯಂ ಮಾಡಿ, ಲಿಂಗಪ್ರಸಾದವ ಧರಿಸಿ,
ಲಿಂಗವಂತರಲ್ಲಿ ವರ್ತಿಸಿ, ಸರ್ವವೂ ಲಿಂಗಕ್ರೀಯಾಗಿದ್ದು
ಲಿಂಗವಿಲ್ಲದವರಲ್ಲಿ ಧನದ ಕೊಳುಕೊಡೆ ಮನದ ಕೊಳುಕೊಡೆ
ತನುವಿನ ಕೊಳುಕೊಡೆಯನೂ ಮಾಡಿದಡೆ
ನಾಚದೆ ಶಿವಾಚಾರ? ನಾಚದೇ ಪ್ರಸಾದ? ನಾಚರೆ ಲಿಂಗವಂತರು.
ಸುಡು, ಸುಡು, ಕಡು ಕಷ್ಟ, ಅವರನು ಬಿಡು ಬಿಡು.
ಆ ತನುವನು ಲಿಂಗವಂತರಲ್ಲಿಯೇ ಸರ್ವಕ್ರೀಯ ವರ್ತಿಸುವುದು.
ತನಗೆ ಇಚ್ಛೈಸಿತ್ತ ಕೊಂಡುಕೊಂಬುದು, ಅವರು ಇಚ್ಛೈಸಿತ್ತ ಕೊಡುವುದು,
ಅವರಲ್ಲಿಯೆ ಅನುಭವವನಾಸೆಗೈವುದು.
ಅ[ನ್ಯ]ರ ವಿಚಾರದಲ್ಲಿ ನಡೆದು ನರಕಕ್ಕಿಳಿಯಲಾಗದು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೪೧॥

೧೫೦೧
ಲಿಂಗವಂತನು ಲಿಂಗವಂತಂಗೆ
ಅಣುಮಾತ್ರ ಅವಮಾನವ ಮಾಡಿದಡೆ ಮನ ನೋವುದಯ್ಯಾ.
ಲಿಂಗವಂತನು ಶುಚಿ ಸತ್ಯನು ಶಾಂತನು ಲಿಂಗಸುಖಿ,
ಲಿಂಗದಲ್ಲಿ ತನುಮನಧನ ಬೆರಸಿಪ್ಪುದಾಗಿ, ಲಿಂಗವೂ ಒಲಿವುದಯ್ಯಾ.
ಬಳಿಕ ಮಹಾಪರ್ವತಪ್ರಮಾಣ ಸತ್ಕಾರವ ಮಾಡಿದರೂ
ನೋವು ಮಾಣದು, ಶಿವನೊಲವು ತಪ್ಪದು.
ಹಿಂದೆ ವಿಷ್ಣು, ಬ್ರಹ್ಮ, ಇಂದ್ರ, ದಕ್ಷನು
ಅವಮಾನವ ಮಾಡಿ ದೋಷಿಗಳಾದರು.
ಇದನರಿದು ತನು ಮನ ಧನದಲ್ಲಿ ವಂಚನೆಯಿಲ್ಲದೆ
ಭಯಭಕ್ತಿಯಿಂದರಿದು ನಡೆದು ಸುಖಸಂಗತಾತ್ಪರ್ಯ
ಸಹಜವಿಡಿದಿಪ್ಪುದಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೪೨॥

೧೫೦೨
ಲಿಂಗವಂತನು ಲಿಂಗವಂತರಲ್ಲಿಯೇ ಸಂಗವ ಮಾಡುವುದು,
ಲಿಂಗಬಾಹ್ಯರ ಸಂಗವ ಮಾಡಲಾಗದು.
ಸ್ತ್ರೀ ಪುತ್ರರು ಮೊದಲಾದವರ ಕೂಡ
ಲಿಂಗವಿಲ್ಲದವರೊಡನೆ ಸಂಗವ ಮಾಡಲಾಗದು. ಅದೆಂತೆಂದಡೆ :
'ಶಿವಲಿಂಗಾಂಗಸಂಪನ್ನೋ ಲಿಂಗಬಾಹ್ಯಸತೀಸುತಾನ್
ಆಲಿಂಗ್ಯ ಚುಂಬನಂ ಕೃತ್ವಾ ರೌರವಂ ನರಕಂ ವ್ರಜೇತ್'
ಎಂದುದಾಗಿ, ಮತ್ತೆಯೂ–
'ಲಿಂಗೀ ಲಿಂಗಿ ಸಹಾವಾಸೀ ಲಿಂಗಿನಾ ಸಹ ವರ್ತಯೇತ್
ಲಿಂಗಿನಾ ಸಹ ಭುಂಜಿತ ಲಿಂಗಯೋಗೋ ನ ಸಂಶಯಃ'
ಎಂದುದಾಗಿ ಲಿಂಗವಂತನು ಲಿಂಗವಂತರಲ್ಲಿಯೇ
ಸಂಗವ ಮಾಡುವುದು ಶಿವಪಥವಯ್ಯಾ.
ಲಿಂಗವಿಲ್ಲದವರೊಡನೆ ಸಂಗವ ಮಾಡುವುದು ಮಹಾಪಾತಕವಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೪೩॥

೧೫೦೩
ಲಿಂಗವಂತನು ಲಿಂಗವಂತರೊಡನೆ ಸತ್ಯವ ನುಡಿವುದು, ಸಹಜದಲ್ಲಿ ನಡೆವುದು,
ಪ್ರೇಮದಲ್ಲಿ ಸಂಗವ ಮಾಡುವುದು.
ಈ ಕ್ರೀ ಇಹಪರ ಸಿದ್ಧಿ, ಲಿಂಗವನರಿವುದಕ್ಕೆ ದೃಷ್ಟ,
ಲಿಂಗಾರ್ಚನೆಯೇ ಕ್ರೀ, ಲಿಂಗ ಒಲಿದುದಕ್ಕೆ ಚಿಹ್ನ, ಇದು ನಿತ್ಯ.

ಲಿಂಗವಂತನು ಲಿಂಗವಂತರೊಡನೆ
ಹೇಮದಾಸೆಗೆ ಪ್ರೇಮಗುಂದಿ ನುಡಿಯಲಾಗದು,
ಅಸತ್ಯವ ನುಡಿಯಲಾಗದು,
ಕ್ರೋಧಿಸಿ ನುಡಿಯಲಾಗದು, ವಂಚಿಸಿ ನುಡಿಯಲಾಗದು,
ವೇದಶಾಸ್ತ್ರ ಆಗಮ ಪುರಾಣ ಪುರಾತನರ ಚರಿತ್ರವನರಿಯದೆ
ಆದಿ ಮಧ್ಯ ಪರಿಪಕ್ವತೆಯನರಿಯದೆ,
ತರ್ಕಿಸಿ ನುಡಿಯಲಾಗದು, ದುಶ್ಚರಿತ್ರದಲ್ಲಿ ನಡೆಯಲಾಗದು.
ಅಜ್ಞಾನಕ್ರೀಯಲ್ಲಿ ವರ್ತಿಸಿ ನಡೆಯಲು ಇಹಪರವಿಲ್ಲ,
ಲಿಂಗವನರಿಯಬಾರದು, ಲಿಂಗವಂತರನೆಂತೂ ಅರಿಯಬಾರದು.
ಅರಿಯದವಂಗೆ ಪೂಜಿಸಲೆಂತಹುದು?
ಪೂಜೆ ಇಲ್ಲದವಂಗೆ ಭಕ್ತಿ ಎಂತಹುದು?
ಭಕ್ತಿ ಇಲ್ಲದವಂಗೆ ಪ್ರಸಾದವೆಂತಹುದು?
ಪ್ರಸಾದವಿಲ್ಲದವಂಗೆ ಮುಕ್ತಿ ಎಂತಹುದು?
ಇದನರಿದು, ಲಿಂಗವಂತನು ಲಿಂಗವಂತರಲ್ಲಿ
ಸತ್ಯಸಂಭಾಷಣೆ ಯೋಗವಾದಡೆ ಕೇವಲ ಮುಕ್ತಿ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೪೪॥

೧೫೦೪

ಲಿಂಗವಂತನು ಲಿಂಗವಿಲ್ಲದರ ಬಯಸಿದಡೆ ಆತಂಗೆ ಲಿಂಗವಿಲ್ಲ,
ಲಿಂಗವಿಲ್ಲದವನು ಆರಿಗೂ ಬಾತೆ ಅಲ್ಲ.
ಬಾತೆ ಅಲ್ಲದವಂಗೆ ಆರೂ ಸ್ನೇಹಿಸರು, ಆರು ಏನನೂ ಕೊಡರು.
ಇದು ಕಾರಣ, ದುರಾಶೆಯಂ ಬಿಟ್ಟು ನಿರಾಶೆಯಾಗಿ
ಲಿಂಗವನಾಶ್ರೈಸಿದಡೆ ಪ್ರಸಾದವಪ್ಪುದು.
ಪ್ರಸಾದದಿಂದಿಹಪರ ಸಿದ್ಧಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೪೫॥

೧೫೦೫

ಲಿಂಗವಂತರ ಲಿಂಗವೆಂಬುದೇ ಶೀಲ,
ಲಿಂಗವಂತರ ರಾಣಿವಾಸವ ಲಿಂಗದ ರಾಣಿವಾಸವೆಂಬುದೇ ಶೀಲ,
ಲಿಂಗವಂತರ ಅರ್ಥ ಪ್ರಾಣ ಅಭಿಮಾನಕ್ಕೆ ತಪ್ಪದಿಪ್ಪುದೇ ಶೀಲ,
ಲಿಂಗವಂತರ ಪಾದೋದಕ ಪ್ರಸಾದ ಸೇವನೆಯ ಮಾಡುವುದೇ
ಮಹಾಶೀಲವಯ್ಯಾ,
ಇಂತಪ್ಪ ಶೀಲ ಸುಶೀಲದೊಳಗಾದ ಶೀಲವೇ ಶೀಲ.
ಈ ಕ್ರೀಯನರಿದು ನಂಬಿ ಭಯಭಕ್ತಿಯಿಂ

ತನು ಮನ ಧನದಲ್ಲಿ ದುರ್ಭಾವ ಹುಟ್ಟದೆ,
ಸ್ವಭಾವ ಸದ್ಭಾವದಿಂ ಏಕಭಾವವಾದಡೆ, ಆತನೇ ಸದ್ಭಕ್ತನು.
ಅಂತಹ ಸದ್ಭಕ್ತದೇಹಿಕದೇವನಾಗಿಪ್ಪನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೪೬॥

೧೫೦೬
ಲಿಂಗವಂತ ಲಿಂಗವಂತ ಎಂಬಿರಿ,
ಎಂತು ಲಿಂಗವಂತರಾದಿರೋ, ಅನ್ಯದೈವದ ಭಜನೆ ಮಾಣದನ್ನಕ್ಕ?
ಭವಿಗಳ ಸಂಗವ ಮಾಣದನ್ನಕ್ಕ, ಎಂತು ಲಿಂಗವಂತರಾದಿರೋ ನೀವು?
ಅದೆಂತೆಂದಡೆ,
'ಶಿವಾಚಾರಸಮಾಯುಕ್ತಃ ಅನ್ಯದೈವಸ್ಯ ಪೂಜನಾತ್
ಶ್ವಾನಯೋನಿಶತಂ ಗತ್ವಾ ಚಂಡಾಲಗೃಹಮಾವಿಶೇತ್
ಅಶನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ'
ಇಂತೆಂದುದಾಗಿ, ಅನ್ಯದೈವ ಭವಿವುಳ್ಳನಕ,
ನೀವು ಲಿಂಗವಂತರೆಂದಿರೋ, ಮರುಳುಗಳಿರಾ?
ಇದನರಿತು ಭಕ್ತಿಪಥವ ಸೇರದಿರ್ದಡೆ,
ನೀವೆಂದೆಂದಿಗೂ ಭವಭವದ ಲೆಂಕರು.
ಇದು ಕಾರಣ, ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಲಿಂಗ
ಮುನ್ನವೇ ದೂರವಯ್ಯ. ॥೨೪೭॥

೧೫೦೭
ಲಿಂಗವಂತನು ಲಿಂಗಾಚಾರಿ ಸದಾಚಾರಿ ಭೃತ್ಯಾಚಾರಿಯೆನಿಸಿದಡೆ
ಲಿಂಗವನೊಲಿಸಬಹುದು.
ಲಿಂಗದ ನಚ್ಚು, ಲಿಂಗವಂತರ ಮೆಚ್ಚು. ಇದು ಸತ್ಯ ಮುಕ್ತಿ ಕೇಳಿರಣ್ಣಾ.
ಲಿಂಗವಂತನು ಪರಧನ, ಪರಸ್ತ್ರೀ, ಪರದೈವಕ್ಕಳುಪಿ ಅಲ್ಲಿಯೇ [ವರ್ತಿಸಿ]
ಮಾಹೇಶ್ವರಶೋಭೆಯಂ ಮಾಡಿಹೆನೆಂಬ,
ಮತ್ತೆ ಲಿಂಗಾರ್ಚನೆಯಂ ಮಾಡಿಹೆನೆಂಬ,
ಲಿಂಗವನೊಲಿಸಿಹೆನೆಂಬ, ಲಿಂಗವಂತರಲ್ಲಿ ಸಲುವೆನೆಂಬ,
ಲಿಂಗವೇನು ತೊತ್ತಿನ ಮುನಿಸೆ?
ವೇಶ್ಯೆಯ ಸರಸವೇ? ವೈತಾಳಿಕನ ಕಲಹವೆ?
ತಪ್ಪಿ ನಡೆದು, ತಪ್ಪಿ ನುಡಿದು, ತಪ್ಪಿ ಕೂಡಿ
ಮರಳಿ ಮರಳಿ ಪ್ರಯೋಗಿಸುವಂತಾಗಿ, ಅಂತಲ್ಲ ಕೇಳಿರಣ್ಣಾ.

ಪತಿವ್ರತೆಯು ಸತ್ಪುರುಷನ ಕೂಡಿದಂತೆ,
ಸಜ್ಜನಮಿತ್ರರ ಸಂಗದಂತೆ, ಮಹಾಜ್ಞಾನಿಗಳ ಅರಿವಿನಂತೆ,
ಶುದ್ಧವಾದುದನೇ ಕೂಡಿಕೊಂಡಿಪ್ಪ, ಶುದ್ಧವಿಲ್ಲದುದನೇ ಬಿಡುವ.
ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು
ಅಣುಮಾತ್ರ ತಪ್ಪ, ಕ್ಷಣಮಾತ್ರ ಸೈರಿಸ. ॥೨೪೪॥

೧೫೦೪
ಲಿಂಗವಂತನು ಲಿಂಗಾಚಾರ,
ಸದಾಚಾರ, ಭೃತ್ಯಚಾರ, ಗಣಾಚಾರ, ಶಿವಾಚಾರ,
ಸರ್ವಾಚಾರಸಂಪನ್ನನೆನಿಸಿಕೊಳಬಹುದಲ್ಲದೆ
ಭಕ್ತನೆನಿಸಿಕೊಳಬಾರದು.
ಅನೇಕ ವ್ರತನಿಯಮಂಗಳ ಹಿಡಿದು ನಡೆದು
ವ್ರತಸ್ಥನೆನಿಸಿಕೊಳಬಹುದಲ್ಲದೆ ಭಕ್ತನೆನಿಸಿಕೊಳಬಾರದು.
ಕರುಣಿ ಶಾಂತ ನಿಸ್ಪೃಹನೆನಿಸಿಕೊಳಬಹುದಲ್ಲದೆ
ಭಕ್ತನೆನಿಸಿಕೊಳಬಾರದು.
ತನುವ ಕೊಟ್ಟು, ಮನವ ಕೊಟ್ಟು, ಧನವ ಕೊಟ್ಟು
ದಾತೃವೆನಿಸಿಕೊಳಬಹುದಲ್ಲದೆ, ಭಕ್ತನೆನಿಸಿಕೊಳಬಾರದು.
'ಏಕ ಮೂರ್ತಿಸ್ತ್ರಿಧಾ ಭೇದಾ' ಎಂಬ ಕ್ರಿಯೆಯಲ್ಲಿ
ಶ್ರೀಗುರುಲಿಂಗಜಂಗಮವೊಂದೆಯೆಂದು
ಸದ್ಭಾವದಿಂ ತ್ರಿವಿಧದಲ್ಲಿ, ಆ ಮುಖವೊಂದೊಂದರಲ್ಲಿ
ತ್ರಿವಿಧವನೂ ಏಕೀಭವಿಸಿ ಕಂಡು, ಕಾಲಕರ್ಮಕಲ್ಪಿತ ಉಪಾಧಿರಹಿತನಾಗಿ
ಆ ವಸ್ತುಗಳ ಮನೋವಾಕ್ಕಾಯದಲ್ಲಿ ಇಚ್ಛೈಸುತ್ತಂ
ತನ್ನ ಮನೋವಾಕ್ಕಾಯದಲ್ಲಿ ತಡವಿಲ್ಲದೆ [ನೆಲೆಗೊಳಿಸಬೇಕು],
'ನ ಗುರೋರಧಿಕಂ' 'ಗುರುಣಾ ದೀಯತೇ ಲಿಂಗಂ
'ಗುರುಃ ಪಿತಾ ಗುರುರ್ಮಾತಾ', ಎಂದುದಾಗಿ,
'ದೀಕ್ಷಾಮೂರ್ತಿರ್ಗುರುರ್ಲಿಗಂ ಪೂಜಾಮೂರ್ತಿಸ್ಸದಾಶಿವಃ
ಶಿಕ್ಷಾಮೂರ್ತಿಶ್ಚರಸ್ತಸ್ಮಾತ್ ಏವಂ ಭೇದತ್ರಯೋ ಭವೇತ್'
'ದೀಕ್ಷಾ ಪೂಜಾ ಚ ಶಿಕ್ಷಾ ಚ ಸರ್ವಕರ್ತಾ ಚ ಜಂಗಮಃ'
ಎಂದುದಾಗಿ, 'ಭಕ್ತ್ಯಾಪೂಜಾಂ ಅಹಂ ಕರ್ತಾ'
'ನಿಷ್ಪ್ರಪಂಚೋ ನಿರಾಮಯಃ' ಎಂದುದಾಗಿ,
'ಪ್ರಪಂಚಯುಕ್ತೋ ದಾಸೋಹೀ ನಿಷ್ಪ್ರಪಂಚೋ ಹಿ ಜಂಗಮಃ
ಪ್ರಪಂಚಯುಕ್ತೋ ಭಕ್ತಸ್ಸ್ಯಾತ್ ನಿಷ್ಪ್ರಪಂಚೋ ಹಿ ಜಂಗಮಃ'
ಎಂದುದಾಗಿ,

‘ಸರ್ವಶಕ್ತಿಮಯಃ ಪ್ರೋಕ್ತಃ ಪುರುಷ ಏಕಶ್ಶಿವಸ್ತಥಾ
ಭಕ್ತಿಪ್ರಸನ್ನಸ್ಸರ್ವೇಷಾಂ ಯಥಾ ಭಕ್ತಿಸ್ತಥಾ ಶಿವಃ
ಸಕಲಶ್ಶಕ್ತಿರೂಪಶ್ಚ ಶಿವ ಏಕೋ ನಿಷ್ಕಲಸ್ತಥಾ
ಶಕ್ತ್ಯಧೀನಃ ಪ್ರಪಂಚಸ್ಸ್ಯಾದ್ಯಥಾಭಕ್ತಿಸ್ಸ್ತಥಾ ಶಿವಃ
ಗುರುಣಾ ಭಾವಿತಂ ಲಿಂಗಂ ಏಕಮೇವಾದ್ವಿತೀಯಕಂ
ತಲ್ಲಿಂಗಸ್ಯ ಪ್ರಭಾ ಲಿಂಗಂ ಸರ್ವಲಿಂಗಂ ನ ಸಂಶಯಃ’
‘ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ’ ಎಂದುದಾಗಿ,
‘ಏವ ಏಕೋ ಧ್ಯೇಯಃ’ ಎಂದುದಾಗಿ,
‘ಅಣೋರಣೀಯಾನ್ಮಹತೋ ಮಹೀಯಾನ್’ ಎಂದುದಾಗಿ,
‘ಸರ್ವಶಕ್ತಿಮಯಂ ಪ್ರೋಕ್ತಂ ಪುರುಷಮೇಕಂ ಶಿವಸ್ತಥಾ
ಯಥಾ ಶಕ್ತಿಶ್ಚ ಸಂಯೋಗಂ ತಥಾ ತತ್ತ್ವಂ ಪರಶ್ಶಿವಃ’
‘ಸರ್ವೇಷಾಂ ಶಕ್ತಿರೂಪಂ ಚ ಪುರುಷಾದ್ವೈತಂ ಪರಶಿವಃ’
‘ಯಥಾಶಕ್ತಿಸ್ಸ್ತಥಾ ಪುರುಷ ಏಕ ರುದ್ರ ಇತಿ ಸ್ಮೃತಃ’ ಎಂದುದಾಗಿ,
‘ಯಸ್ಯ ಚಿತ್ತಂ ಶಿವೇ ಲೀನಂ ತಸ್ಯ ಜಾತ್ಯಾದಿ ನ ಸ್ಮರೇತ್
ಶಿವಲಿಂಗೇ ಶಿಲಾಬುದ್ಧಿಂ ಕುರ್ವಾಣ ಇವ ಪಾತಕೀ
ಸತ್ಯಭಾವಿ ಮಹತ್ಸತ್ಯಂ ಸತ್ಯಂ ಸ್ಯಾಚ್ಚಿವಲಕ್ಷಣಂ
ನಿತ್ಯಭಾವಿ ಮಹನ್ನಿತ್ಯಂ ಸತ್ಯಂ ಸ್ಯಾಚ್ಚಿವಲಕ್ಷಣಂ
ನಾನಾರೂಪಧರೋ ದೇವೋ ನಾನಾರೂಪಸಮನ್ವಿತಃ
ನಾನಾಚಿಹ್ನಸಮೋಪೇತೋ ನಾನಾಲೀಲಾಧರೋ ಹರಃ
ವೇದಾತೀತಂ ಮನೋತೀತಮಾಗಮಾತೀತಮಾರ್ಗಿಕಂ
ಶಾಸ್ತ್ರಾತೀತಂ ಮಹಾಶಾಸ್ತ್ರೀ ತತ್ಸ್ಯಾಜ್ಜಂಗಮಲಕ್ಷಣಂ
ಲಿಂಗಧಾರೀ ಮಹಾಲಿಂಗೀ ಲಿಂಗಧ್ಯಾನೀ ನಿರಂತರಂ
ಲಿಂಗಾಲಿಂಗೀ ಮಹತ್ಸಂಗೀ ತತ್ಸ್ಯಾಜ್ಜಂಗಮಲಕ್ಷಣಂ
ಜಂಗಮೋ ಜಂಗಮಂ ದಃಷ್ಟ್ವಾ ನಮಸ್ಕಾರಂ ತು ಸಂಭ್ರಮಾತ್
ಆಲಿಂಗನಂ ಮಹಾಪ್ರೀತ್ಯಾ ಕುರ್ಯಾಜ್ಜಂಗಮಲಕ್ಷಣಂ
ಭೃತ್ಯಪೂಜಾರ್ಹಕರ್ತಾ ಚ ದೀಕ್ಷಾಮೂರ್ತಿರ್ಮಹಾಪ್ರಭುಃ
ಶಿಕ್ಷಾಮೂರ್ತಿರ್ಮಹಾಕರ್ತಾ ತತ್ಸ್ಯಾಜ್ಜಂಗಮಲಕ್ಷಣಂ
ಸರ್ವಸಂಗಪರಿತ್ಯಾಗೀ ಲಿಂಗಸಂಗೀ ನಿರಂತರಂ
ದ್ವಂದ್ವೇ ತು ಸಮದೃಷ್ಟಿಸ್ಸ್ಯಾತ್ ತತ್ಸ್ಯಾಜ್ಜಂಗಮಲಕ್ಷಣಂ
ಘೃಣಾದೃಷ್ಟಿರ್ಘೃಣಾವಾಕ್ಯಂ ಘೃಣಾಮೂರ್ತಿರ್ನಿರಂತರಂ
ಕ್ರಿಯಾಕರ್ಮಸು ವಿಜ್ಞಶ್ಚ ಶಿಕ್ಷಾಚಾರ್ಯ ಇತಿ ಸ್ಮೃತಃ
ಮೂರ್ತಿಶ್ಚ ಲಿಂಗಮೂರ್ತಿಶ್ಚ ಸುಶೀಲಂ ಲಿಂಗಶೀಲವತ್
ಗುಣಂ ಸರ್ವಸ್ಯ ಲಿಂಗಸ್ಯ ತತ್ಸ್ಯಾಜ್ಜಂಗಮಲಕ್ಷಣಂ’ ಎಂದುದಾಗಿ,

'ಹನ್ಯಾತ್‌ಕ್ರುದ್ಧೋಪಿ ಚಾಕಾಶಂ ಕ್ಷುಧಾರ್ತಾ ಖಾದಯೇತ್ತುಷಂ
ತ್ಯಕ್ತ್ವಾ ಲಿಂಗಾರ್ಚನಂ ಮೂಢೋ ಮುಕ್ತ್ಯರ್ಥೀ ತ್ರಿತಯಂ ವೃಥಾ
ಶ್ವಪಚೋಪಿ ಮುನಿಶ್ರೇಷಃ ಶಿವಭಕ್ತೋ ದ್ವಿಜಾಧಿಕಃ
ಶಿವಭಕ್ತಿವಿಹೀನಸ್ತು ದ್ವಿಜೋಪಿ ಶ್ವಪಚಾಧಮಃ
ಸ ಲಿಂಗೀ ಸರ್ವದೈವಜ್ಞೋ ಯಸ್ಸ ಚಾಂಡಾಲವದ್ಭುವಿ
ಲಿಂಗಾರ್ಚಕಸ್ತು ಶ್ವಪಚೋ ದ್ವಿಜಕೋಟ್ಯಾ ವಿಶಿಷ್ಯತೇ' ಶಿವಧರ್ಮೇ,
ಉಪನೀತಸಹಸ್ರೇಭ್ಯೋ ಬ್ರಹ್ಮಚಾರೀ ವಿಶಿಷ್ಯತೇ
ಬ್ರಹ್ಮಚಾರಿಸಹಸ್ರೇಭ್ಯೋ ವೇದಾಧ್ಯಾಯೀ ವಿಶಿಷ್ಯತೇ
ವೇದಾಧ್ಯಾಯಿಸಹಸ್ರೇಭ್ಯಸ್ಸಾಗ್ನಿಹೋತ್ರೀ ವಿಶಿಷ್ಯತೇ
ಅಗ್ನಿಹೋತ್ರಿಸಹಸ್ರೇಭ್ಯೋ ಯಜ್ಞಯಾಜೀ ವಿಶಿಷ್ಯತೇ
ಯಜ್ಞಯಾಜಿಸಹಸ್ರೇಭ್ಯಃ ಸತ್ರಯಾಜೀ ವಿಶಿಷ್ಯತೇ
ಸತ್ರಯಾಜಿಸಹಸ್ರೇಭ್ಯಃ ಸರ್ವವಿದ್ಯಾರ್ಥಪಾರಗಃ
ಸರ್ವವಿದ್ಯಾರ್ಥವಿತ್ಕೋಟ್ಯಾ ಶಿವಭಕ್ತೋ ವಿಶಿಷ್ಯತೇ' ಎಂದುದಾಗಿ,
'ನಿಕೃಷ್ಟಾಚಾರಜನ್ಮಾನೋ ವಿರುದ್ಧಾಲೋಕವೃತ್ತಿಷು
ಕೋಟಿಭ್ಯೋ ವೇದವಿದುಷಾಂ ಶ್ರೇಷ್ಠಾ ಮದ್ಭಾವಭಾವಿತಾಃ'
ಎಂದುದಾಗಿ, ದೇಶಾಂತರ ಸಂಹಿತೆಯಲ್ಲಿ:
'ಕ್ರಿಮಿಕೀಟಪತಂಗೇಭ್ಯಃ ಪಶವಃ ಪ್ರಜ್ಞಯಾಧಿಕಾಃ
ಪಶುಭ್ಯೋಪಿ ನರಾಶ್ರೇಷ್ಠಾಸ್ತೇಷು ಶ್ರೇಷ್ಠಾ ದ್ವಿಜಾತಯಃ
ದ್ವಿಜಾತಿಷ್ವಧಿಕಾ ವಿಪ್ರಾ ವಿಪ್ರೇಷು ಕ್ರತುಬುದ್ಧಯಃ
ಕ್ರತುಬುದ್ಧಿಷು ಕರ್ತಾರಸ್ತೇಭ್ಯಃ ಸನ್ಯಾಸಿನೋಧಿಕಾಃ
ತೇಭ್ಯೋ ವಿಜ್ಞಾನಿನಃ ಶ್ರೇಷ್ಠಾಸ್ತೇಷು ಶಂಕರಪೂಜಕಾಃ
ತೇಷು ಶ್ರೇಷ್ಠಾ ಮಹಾಭಾಗಾ ಮಮ ಲಿಂಗಾಂಗಸಂಗಿನಃ
ಲಿಂಗಾಂಗಸಂಗಿಷ್ವಧಿಕಃ ಷಟ್‌ಸ್ಥಲಜ್ಞಾನವಾನ್ಸುಮಾನ್
ತಸ್ಮಾದಪ್ಯಧಿಕೋ ನಾಸ್ತಿ ತ್ರಿಷು ಲೋಕೇಷು ಸರ್ವದಾ' ಎಂದುದಾಗಿ,
'ಭೋಗಮೂರ್ತಿರ್ಮಹಾಲಿಂಗಂ ಜಂಗಮಶ್ಚ ನ ಸಂಶಯಃ
ಜಂಗಮೋ ಲಿಂಗರೂಪಂ ಚ ಸತ್ಯಂ ಸತ್ಯಂ ನ ಸಂಶಯಃ
ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ
ಜಂಗಮಸ್ಯಾವಮಾನೇನ ಸ್ಥಾವರಂ ನಿಷ್ಫಲಂ ಭವೇತ್
ಆಚಾರಶ್ಚ ಗುರುರ್ಲಿಂಗಂ ಜಂಗಮಶ್ಚ ಪ್ರಸಾದಕಃ
ಪಂಚವಕ್ತ್ರಸಮಾಯುಕ್ತಂ ಮಹಾಲಿಂಗಸ್ಯ ಲಕ್ಷಣಂ
ಜಂಗಮೋ ಲಿಂಗಮಾಚಾರೋ ಮಹಾಲಿಂಗಂ ಗುರುಸ್ತಥಾ
ಪಂಚವಕ್ತ್ರಸಮಾಯುಕ್ತಃ ಪ್ರಸಾದೋ ಲಿಂಗಲಕ್ಷಣಂ
ಆಚಾರೋ ಗುರುಲಿಂಗಂ ಚ ಮಹಾಲಿಂಗಪ್ರಸಾದಕಂ

ಪಂಚವಕ್ತ್ರಸಮಾಯುಕ್ತಂ ಸತ್ಯಂ ಜಂಗಮಲಕ್ಷಣಂ
ಪ್ರಸಾದೋ ಜಂಗಮಶ್ಚೈವ ಆಚಾರೋ ಗುರುದೇವ ಚ
ಮಹಾಲಿಂಗಸಮಾಯುಕ್ತಂ ಶಿವಲಿಂಗಸ್ಯ ಲಕ್ಷಣಂ
ಜ್ಞಾನಾಚಾರೋ ಮಹಾಲಿಂಗಂ ಶಿವಲಿಂಗಂ ಚ ಜಂಗಮಃ
ಪಂಚವಕ್ತ್ರಸಮಾಯುಕ್ತಂ ಇತ್ಯೇತೇ ಗುರುಲಕ್ಷಣಂ
ಮಹಾಲಿಂಗಂ ಪ್ರಸಾದಶ್ಚ ಜಂಗಮೋ ಗುರುಲಿಂಗಕಂ
ಪಂಚವಕ್ತ್ರಸಮಾಯುಕ್ತ ಆಚಾರೋ ಲಿಂಗಲಕ್ಷಣಂ
ಅಂಗಮಾಚಾರಮಾಶ್ರಿತ್ಯ ಆಚಾರಃ ಪ್ರಾಣಮಾಶ್ರಿತಃ
ತತ್ಪ್ರಾಣೋ ಶಿವಲಿಂಗ ಚ ತಲ್ಲಿಂಗಂ ಜಂಗಮಾಶ್ರಿತಂ' ಇಂತೆಂದುದಾಗಿ,
ಕ್ಷಣದಲ್ಲಿ ಅರಿ ಲಿಂಗವನು, ಕ್ಷಣಾರ್ಧದಲ್ಲಿ ಲಿಂಗವೂ ನಿನ್ನರಿವ.
ಕ್ಷಣಾರ್ಧದಲ್ಲಿ ಅರಿ ಭಕ್ತಕಾಯನೆಂದು.
ಪ್ರಾಣಲಿಂಗವೆಂದರಿದು ಲಿಂಗವನು ಒಂದು ಕ್ಷಣದಲ್ಲಿ ಮರೆದಡೆ,
ಕ್ಷಣಾರ್ಧದಲ್ಲಿ ಮರೆದಡೆ, ನಿನ್ನನೂ ಅಜ್ಞಾನಿಯ ಮಾಡಿ
ಆಯಸಂ ಬಡಿಸಿ ಆಸೆಗೆ ಒಪ್ಪಿಸಿ ಘಾಸಿಮಾಡದೆ ಬಿಡನು ಲಿಂಗವು.
ಕ್ಷಣಾರ್ಧದಲ್ಲಿ ಸರ್ವಪ್ರಪಂಚವೆಲ್ಲವನೂ ಮರೆದು
ನಿತ್ಯವಾಗಿ ಲಿಂಗವನರಿ ಮನವೆ.
ನಿರಂತರ ಲಿಂಗದಲ್ಲಿದ್ದು ಲಿಂಗವ ಹಾ[ಡೆ] ಸುಖಿಯಪ್ಪೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನೆ ಸಾಕ್ಷಿ. ॥೨೪೯॥

೧೫೦೯
ಲಿಂಗವ ನಂಬಿ ಲಿಂಗಾರ್ಚನೆಯ ಮಾಡಿ
ಲಿಂಗವಾದರು ಅಸಂಖ್ಯಾತಪುರಾತನರು.
ಲಿಂಗವ ನಂಬದೆ ಅಂಗದಿಚ್ಛೆಯ ನಡೆದು ಭಂಗಿತರಾದರು
ದೇವದಾನವಮಾನವರನೇಕರು, ಇದು ದೃಷ್ಟ. ಇಷ್ಟಾನಿಷ್ಟವಿದೆ.
ಅನಿಷ್ಟವ ಬಿಟ್ಟು ಇಷ್ಟವ ಹಿಡಿದು ಬದುಕಿರಯ್ಯಾ ಕೆಡಬೇಡ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೫೦॥

೧೫೧೦
ಲಿಂಗವನರಿದು ಲಿಂಗಾರ್ಚನೆಯ ಮಾಡಿ
ಗುರು ಲಿಂಗ ಜಂಗಮಕ್ಕೆ, ತನು ಮನ ಧನವ ನಿವೇದಿಸಿ
ಲಿಂಗವನಲ್ಲದೆ ಅನ್ಯವನರಿಯದಿಪ್ಪ ಮಹಾಮಹಿಮನು.
ಆತನ ನುಡಿಯೇ ವೇದ, ಆತನ ನಡೆಯೇ ಆಗಮ,
ಆತ ಮಾಡಿತ್ತೇ ಶಾಸ್ತ್ರ, ಆತ ಹೇಳಿತ್ತೇ ಪುರಾಣ,

ಆತನಿದ್ದುದೇ ದೇವಲೋಕ.
ಆತನುಪಮಾತೀತನು, ಆತನ ದರ್ಶನ ಸ್ಪರ್ಶನದಿಂದ ಪಾಪಕ್ಷಯ.
ಆತನ ಪಾದೋದಕಸೇವನೆಯೊಳೆಲ್ಲರು ಜೀವನ್ಮುಕ್ತರು ಕೇಳಿರಣ್ಣ.
ಆ ಮಹಾಮಹಿಮನ
ಶ್ರುತ ದೃಷ್ಟ ಅನುಮಾನದಿಂದ ವಿಚಾರಿಸಿ ನೋಡಿರಣ್ಣ,
ಬಸವರಾಜದೇವರು ಮೊದಲಾದ ಪುರಾತನರ ಚರಿತ್ರವನು.
ಅವರು ಲಿಂಗವನರಿದು ಲಿಂಗಾರ್ಚನೆಯ ಮಾಡಿ
ಗುರು ಲಿಂಗ ಜಂಗಮಕ್ಕೆ ತನು ಮನ ಧನವನರ್ಪಿಸಿ ಅಹುದೆನಿಸಿಕೊಂಡರಲ್ಲವೆ?
ಇದನರಿತು ಆವನಾನೊಬ್ಬನು ಅಷ್ಟಾದಶವಿದ್ಯೆ
ಪುರಾಣವನೋದಿ ಕೇಳಿ ಹೇಳಿದರೇನೋ ಗಿಣಿ ಓದಿದಂತೆ?
ಸರ್ವಸಂಗಪರಿತ್ಯಾಗಿಯಾಗಿ
ಅರಣ್ಯದೊಳಗಿದ್ದಡೇನು, ವನಚರವ್ಯಾಧನಂತೆ?
ಭೂಪ್ರದಕ್ಷಿಣೆ ಮಾಡಿ ಬಂದಡೇನು, ಮೃಗದಂತೆ?
ಅಶನವ ಬಿಟ್ಟಡೇನು, ಪರಾಕಿಯಂತೆ?
ವಿಷಯವ ಬಿಟ್ಟಡೇನು, ಅಶಕ್ತನಪುಂಸಕನಂತೆ?
ನಿದ್ರೆಯ ಬಿಟ್ಟಡೇನು, ಜಾರಚೋರನಂತೆ?
ಸಾಮರ್ಥ್ಯಪುರುಷರೆನಿಸಿ ಖೇಚರತ್ವದಲ್ಲಿದ್ದಡೇನು, ಪಕ್ಷಿಗಳಂತೆ?
ಜಲದಲ್ಲಿ ಚರಿಸಿ ಸಮುದ್ರಲಂಘನೆಯ ಮಾಡಿದಡೇನು, ಮತ್ಸ್ಯಾದಿಗಳಂತೆ?
ದಾನಾದಿಗಳ ಮಾಡಿದಡೇನು, ಕ್ಷತ್ರಿಯನಂತೆ?
ಏನ ಮಾಡಿದಡೇನು? ಏನ ಕೇಳಿದಡೇನು?
ಸಾಮರ್ಥ್ಯಪುರುಷರೆನಿಸಿಕೊಂಡರೇನು? ಫಲವಿಲ್ಲ,
ಭಕ್ತಿಗೆ ಸಲ್ಲದು, ಮುಕ್ತಿಗೆ ಸಲ್ಲದು.
ಇದನರಿದು ಶಿವಲಿಂಗಾರ್ಚನೆಯ ಮಾಡುವುದು.
ಗುರು ಲಿಂಗ ಜಂಗಮಕ್ಕೆ ತನು ಮನ ಧನವ ನಿವೇದಿಸುವುದು.
ನಿವೇದಿಸಿದಡೆ ಸರ್ವಸಿದ್ಧಿಯಹುದು. ಸಕಲಲೋಕಕ್ಕೆ ಪೂಜ್ಯನಹ,
ಇದೇ [ಸ]ಲುವ ಯುಕ್ತಿ, ಇದೆ ಸದ್ಭಕ್ತಿ, ಇದೇ ಕೇವಲ ಮುಕ್ತಿ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೫೧॥

೧೫೧೧
ಲಿಂಗವನರಿದ ಲಿಂಗವಂತನು ಸರ್ವಾಂಗಲಿಂಗಮೂರ್ತಿ.
ಆತನ ನುಡಿಯೆ ವೇದ,
ಆತನ ನಡೆಯೆ ಶಾಸ್ತ್ರ ಪುರಾಣ ಆಗಮ ಚರಿತ್ರವು.
ಆ ಮಹಾಮಹಿಮನ ನುಡಿಯಲ್ಲಿ ತರ್ಕವ ಮಾಡಲಾಗದು.

ನಡೆಯಲ್ಲಿ ನಾಸ್ತಿಕವ ಮಾಡಿದಡೆ ನರಕ ತಪ್ಪದಯ್ಯಾ.
ಲಿಂಗವನರಿದ ಮಹಾಮಹಿಮಂಗೆ ನಮೋ ನಮೋ ಎಂಬೆನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೫೨॥

೧೫೧೨

ಲಿಂಗವನರಿಯರು ಲಿಂಗದ ಮುಖವನರಿಯರು.
ಪೂಜಿಸಲರಿಯರು ಅರ್ಚಿಸಲರಿಯರು ಅರ್ಪಿಸಲರಿಯರು.
ನಾನೇ ಭಕ್ತನು ನಾನೇ ಮಾಹೇಶ್ವರನು ನಾನೇ ಪ್ರಸಾದಿಯೆಂಬರು.
ಶಿವಾಚಾರಪರಾಙ್ಮುಖರು ನೋಡಾ.
ಶಿವ ಶಿವಾ, ಪ್ರಾಣಲಿಂಗಿ ಐಕ್ಯನೆಂಬುದು ಮಹಾಕ್ರೀ.
ಅದನೆಂತೂ ಅರಿಯರು.
ಗುರು ಲಿಂಗ ಜಂಗಮ ಒಂದೆಂಬುದನೂ
ವೇದ ಶಾಸ್ತ್ರ ಆಗಮ ಪುರಾಣ ಪುರಾತನರ ನಡೆ ನುಡಿಯಿಂದರಿದು
ಕ್ರೀಯನರಿದು ಕಾಲವನರಿದು
ಮನ ವಂಚನೆಯಿಲ್ಲದೆ ಶಿವಲಿಂಗವ ಪೂಜಿಸಬೇಕು, ಸದ್ಭಕ್ತಿಯಿಂ ಭಕ್ತನಾಗಿ.
'ನ ಗುರೋರಧಿಕಂ ನ ಗುರೋರಧಿಕಂ' ಎಂಬುದನರಿದು
ಪರಧನ ಪರಸ್ತ್ರೀ ಪರದೈವವ ತ್ಯಜಿಸಿ
ತನು ಮನ ಧನದಲ್ಲಿ ವಂಚನೆಯಿಲ್ಲದೆ ಮನೋವಾಕ್ಕಾಯಶುದ್ಧನಾಗಿ
ಅಷ್ಟವಿಧಾರ್ಚನೆ ಷೋಡಶೋಪಚಾರದಿಂ ಅರ್ಚಿಸಬೇಕು
ಶ್ರೀಗುರುಲಿಂಗಕ್ಕೆ ಮಾಹೇಶ್ವರನಾಗಿ.
ಜಂಗಮ ಪರಶಿವನೆಂದರಿದು ಭೋಗಮೂರ್ತಿ ಎಂದರಿದು
ಮನೋವಾಕ್ಕಾಯಶುದ್ಧನಾಗಿ ಧನವಂಚನೆಯಿಲ್ಲದೆ
ಸರ್ವಪದಾರ್ಥ ಸರ್ವಭೋಗಂಗಳನರ್ಪಿಸಿ
ಜಂಗಮಲಿಂಗಾರ್ಚನೆಯಂ ಮಾಡಿ ಜಂಗಮಪ್ರಸಾದವಂ ಪಡೆದು
ಪ್ರಸಾದವ ಭೋಗಿಸಿ ಪ್ರಸಾದಿಯಾಗಿ
ಜಂಗಮಲಿಂಗಾರ್ಚನೆಯಂ ಮಾಡುವುದಯ್ಯಾ ಪ್ರಸಾದಿಯಾಗಿ.
ಇಂತು ಭಕ್ತ ಮಾಹೇಶ್ವರ ಪ್ರಸಾದಿ ತನುವಿಡಿದು
'ಏಕ ಮೂರ್ತಿಸ್ತ್ರಿಧಾ ಭೇದಾಃ' ಎಂಬುದನರಿದು
ಕ್ರಿಯೆಯಲ್ಲಿ ಕ್ರಿಯೆಯನರಿದು
ತನುವಿಡಿದು ಸಕಲನಾಗಿ ನಡೆವ ಸ್ಥಲ ಈ ಮೂರು
ಪ್ರಾಣಲಿಂಗಿ ಶರಣನೈಕ್ಯನೆಂಬುದು ಇವು ಮೂರುಸ್ಥಲ.
ಮನವಿಡಿದು ನಡೆವುದು ನಿಷ್ಕಲಸ್ಥಲವನೊಂದುಮಾಡಿ
ಏಕೀಭವಿಸಿ ನಡೆವುದು. ಇವು ಮೂರುಸ್ಥಲಕ್ಕೆ ನಿಷ್ಕ್ರಿಯಾಸಂಬಂಧ.

ಈ ಮಹಾಪರ್ವವನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ
ನಿಮ್ಮ ಶರಣರೇ ಬಲ್ಲರು, ವಾಙ್ಮನೋತೀತರು
ಉಪಮಾತೀತರು, ಘನ ಮಹಾ[ಕ್ರೀಯರು]. ॥೨೫೩॥

೧೫೧೩
ಲಿಂಗವಿದ್ದುದೇ ಕೈಲಾಸ, ಲಿಂಗವಿದ್ದುದೇ ಕಾಶೀಕ್ಷೇತ್ರ,
ಲಿಂಗವಿದ್ದುದೇ ಅಷ್ಟಾಷಷ್ಟಿಮುಕ್ತಿಕ್ಷೇತ್ರ ಕಾಣಿರಣ್ಣಾ.
ಇದು ಕಾರಣ, ಲಿಂಗವಿದ್ದ ಠಾವ ಕೇಳಿರೆ:
ಲಿಂಗವಿದ್ದ ಠಾವು, ಭಕ್ತಕಾಯ ಮಮಕಾಯವೆಂದುದಾಗಿ
ಭಕ್ತನ ಕಾಯ ಲಿಂಗಕಾಯ,
'ಲಿಂಗಾಲಿಂಗೀಮಹಜ್ಜೀವಿ' ಎಂದುದಾಗಿ
ಲಿಂಗವಂತನೇ ಲಿಂಗಪ್ರಾಣಿ ಕಾಣಿರಣ್ಣಾ.
ಇಂತೆಂದುದಾಗಿ,
ಶಿವಭಕ್ತನ ಸಂಗ ಲಿಂಗಸಂಗ, ಶಿವಭಕ್ತನ ಪಾದವೇ ಮುಕ್ತಿ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೫೪॥

೧೫೧೪
ಲಿಂಗವು ಕೊಟ್ಟ ಆಯುಷ್ಯದಲ್ಲಿ ನಿಮಿಷಾರ್ಧ ನಿಮಿಷಾರ್ಧ ಹೆಚ್ಚಿಸಬಾರದು,
ನಿಮಿಷಾರ್ಧ ಕುಂದಿಸಬಾರದು.
ಶಿವಲಿಂಗವು ಕೊಟ್ಟ ಭಾಷೆಯಲ್ಲಿ
ಕಾಣಿಯ ಕುಂದಿಸಬಾರದು, ಕಾಣಿಯ ಹೆಚ್ಚಿಸಬಾರದು.
ಹರಿಬ್ರಹ್ಮಾದಿಗಳಿಗೂ ತೃಣದಂತಪ್ಪ ಕಾರ್ಯವ ಮಾಡಬಾರದು.
ಉತ್ಪತ್ತಿ ಸ್ಥಿತಿ ಲಯಕ್ಕೆ ಶಿವನೆ ಕರ್ತನು, ಮತ್ತಾರೂ ಇಲ್ಲ.
ಇದನರಿದು ಇನ್ನೇಕನ್ಯರಾಸೆ ಮಾಡದಿರು.
ಅನ್ಯರು ಆಯುಷ್ಯ [ಭವಿಷ್ಯ] ಭೋಗಾದಿಭೋಗಂಗಳ
ಕೊಟ್ಟರೆಂಬ ಸಂತೋಷ ಬೇಡ, ಕೊಡರೆಂಬ ಕ್ಲೇಶ ಬೇಡ.
ಶಿವಾಧೀನವೆಂಬುದನರಿದು,
'ತೇನ ವಿನಾ ತೃಣಾಗ್ರಮಪಿ ನ ಚಲತಿ'
ಎಂಬುದನರಿದು ಪರಿಣಾಮಿಸು.
ಪರಿಣಾಮದಿಂ ಲಿಂಗವನರ್ಚಿಸು ಪೂಜಿಸು.
ಕೇವಲ ವಿಶ್ವಾಸಂ ಮಾಡಿದಡೆ ಬೇಡಿತ್ತ ಕೊಡುವ
ಇಹಪರ ಸಿದ್ಧಿ, ನೆರೆ ನಂಬು ನಂಬು ಮನವೇ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೫೫॥

೧೫೧೫
ಲಿಂಗವು ಸರ್ವಾಂಗದಲ್ಲಿ ಭರಿತವಾಗಿರಲು
ಮನ ಅರಿಯದು, ತನು ಸೋಂಕದು,
ಜ್ಞಾನ ಕಾಣಿಸದು, ಭಾವ ಮುಟ್ಟದು.
ಶಿವಶಿವಾ ವಿಶ್ವಾಸದಿಂ ಗ್ರಹಿಸಿ ಹಿಡಿಯದೆ ಕೆಟ್ಟೆ.
ಅಂತರಂಗ ಬಹಿರಂಗ ಭರಿತವಾಗಿ ಲಿಂಗವಿದಾನೆ ಇದಾನೆ.
ಮನವೇ, ನಿಮಿಷದಲಿ ವಿಶ್ವಾಸದಿಂ ಗ್ರಹಿಸಿದಡೆ
ಸತ್ಯನಪ್ಪೆ ನಿತ್ಯನಪ್ಪೆ ಮುಕ್ತನಪ್ಪೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೫೬॥

೧೫೧೬
ಲಿಂಗವೆಂಬುದು ಪರಶಕ್ತಿಯುತ ಪರಶಿವನ ನಿಜದೇಹ,
ಲಿಂಗವೆಂಬುದು ಪರಶಿವನ ಘನತೇಜ,
ಲಿಂಗವೆಂಬುದು ಪರಶಿವನ ನಿರತಿಶಯಾನಂದಸುಖವು,
ಲಿಂಗವೆಂಬುದು ಪರಶಿವನ ಪರಮಜ್ಞಾನ,
ಲಿಂಗವೆಂಬುದು ಷಡಧ್ವಮಯ ಜಗಜ್ಜನ್ಮಭೂಮಿ,
ಲಿಂಗವೆಂಬುದು ಅಖಂಡಿತವೇದ ಪಂಚಸಂಜ್ಞೆ,
ಲಿಂಗವೆಂಬುದು ತಾ ಹರಿಬ್ರಹ್ಮರ ನಡುಮನೆಗಳ ಜ್ಯೋತಿರ್ಲಿಂಗ,
'ಅಖಿಲಾರ್ಣವ ಲಯಾನಾಂ ಲಿಂಗಂ ಮುಖ್ಯಂ ಪರಂ ತಥಾ
ಪರಂ ಗೂಢಂ ಶರೀರಸ್ಥಂ ಲಿಂಗಕ್ಷೇತ್ರಮನಾದಿವತ್
ಯದಾದ್ಯಮೈಶ್ವರಂ ತೇಜಸ್ತಲ್ಲಿಂಗಂ ಪಂಚಸಂಜ್ಞಕಂ'
ಎಂದಿದು ಲಿಂಗದ ಮರ್ಮ.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ ಲಿಂಗದೊಳಿದ
ತಿಳಿಯಬಲ್ಲವನೇ ಬಲ್ಲವನು. ॥೨೫೭॥

೧೫೧೭
ಲಿಂಗವೇ ಪ್ರಾಣ, ಪ್ರಾಣವೇ ಲಿಂಗವಾದ ಪ್ರಾಣಲಿಂಗಿಯ ಪ್ರಾಣಲಿಂಗಕ್ಕೆ,
ಧ್ಯಾನಾಮೃತ ಪಂಚಾಕ್ಷರಂಗಳ ಪಂಚಾಮೃತದಿಂ ಮಜ್ಜನಕ್ಕೆರೆದು,
ಆ ಲಿಂಗಕ್ಕೆ ಮನವೇ ಪುಷ್ಪ, ಬುದ್ಧಿಯೆ ಗಂಧ, ಚಿತ್ತವೇ ನೈವೇದ್ಯ.
ಅಹಂಕಾರವಳಿದ ನಿರಹಂಕಾರದ ಆರೋಗಣೆಯ ಮಾಡಿಸಿ,
ಪರಿಣಾಮದ ವೀಳ್ಯವನಿತ್ತು, ಸ್ನೇಹದಿಂದ ವಂದನೆಯಂ ಮಾಡಿ,
ಆ ಪ್ರಾಣಲಿಂಗಕ್ಕೆ ಬಹಿರಂಗದ ಪೂಜೆಯ ಪರಿಯಲಿ
ಅಂತರಂಗದ ಪೂಜೆಯ ಮಾಡುವುದು.
ಬಹಿರಂಗದ ಪೂಜೆಯ ಪ್ರಾಣಲಿಂಗಕ್ಕೆ

ಅಂತರಂಗದ ವಸ್ತುಗಳೆಲ್ಲವನ್ನು ತಂದು,
ಬಹಿರಂಗದ ವಸ್ತುವಿನಲ್ಲಿ ಕೂಡಿ,
ಅಂತರ್ಬಹಿರುಭಯ ಲಿಂಗಾರ್ಚನೆಯ ಮಾಡಲು,
ಅಂತರಂಗ ಬಹಿರಂಗ ಭರಿತನಾಗಿಪ್ಪನಾ ಶಿವನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೫೮॥

೧೫೧೮

ಲಿಂಗಾರ್ಚನೆಯ ಮಾಡಿ, ಪ್ರಸಾದವ ಪಡೆದು, ಪ್ರಸಾದವ ಭೋಗಿಸುವುದು.
ಅಲ್ಲಲ್ಲಿಗೆ ಹೋಗಿ ತೊಳಲಿ, ಬಳಲಿ, ಕಲ್ಲು ತಾಗಿದ ಮಿಟ್ಟೆಯ[ವೊ]ಲಾಗದೆ
ಎಲೆ ಎಲೆ ಜಡಜೀವನೆ ಮತ್ತೆಲ್ಲಿಯೂ ಅರಸ[ದಿರು].
ದೇವರೆಂಬ ಬಲ್ಲಹನ ಬಿಟ್ಟು ಕಟಕವಿಹುದೆ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನ
ಶ್ರೀಪಾದದಲ್ಲರಸಿಕೊ ದೇವರೆಂಬವರನು. ॥೨೫೯॥

೧೫೧೯

ಲಿಂಗಾರ್ಪಿತವ ಮಾಡಿ ಪ್ರಸಾದವನಲ್ಲದೆ ಭೋಗಿಸೆನೆಂಬ
ಪ್ರಸಾದಿಗಳಿಗೆ ಇನ್ನೆಂತಯ್ಯಾ?
ಅನರ್ಪಿತಭೋಗವು ಸಂಭವಿಸಿ ದೋಷವೇ ಪ್ರಾಪ್ತಿಯಾದ
ಪರಿಯ ನೋಡಾ.
ಅದೆಂತೋ ಅನರ್ಪಿತವ ಮನದಲ್ಲಿ ನೆನೆಯಬಹುದು?
ಅದೆಂತೋ ಅನರ್ಪಿತವ ಪಂಚೇಂದ್ರಿಯಗಳಲ್ಲಿ ಮುಟ್ಟಬಹುದು?
ಅಕಟಕಟಾ, ಅರ್ಪಿತವಿಲ್ಲದೆ ಸರ್ವವಸ್ತುವ ಅಂಗವಿಸಿ ಭೋಗಿಸಬಹುದೆ?
ಅಂಗ ಲಿಂಗವಾಗಿ ಲಿಂಗ ಪ್ರಾಣವಾಗಿ
ಪ್ರಾಣ ಮನವಾಗಿ ಮನವು ಲಿಂಗಸ್ವಾಯತವಾಗಿ
ಭಾವಶುದ್ಧವಾಗೆ ಮನವೇ ಲಿಂಗವು.
ಲಿಂಗ ಮುಂದು ಮನ ಹಿಂದಾಗಿ ಸರ್ವಕ್ರೀಯ ವರ್ತಿಸುವುದು,
ಈ ಕ್ರೀ ಸರ್ವಾರ್ಪಿತ.
ಇದು ತಾತ್ಪರ್ಯ ಕಳೆ, ಇದೇ ಅರ್ಪಿತಕ್ಕೆ ಜೀವ ಕಳೆ,
ಇಂತಹ ಮಹಿಮೆಗೆ ಸರ್ವಪ್ರಸಾದ, ಅದು:
ಪಂಚೇಂದ್ರಿಯವೆಲ್ಲವು ಲಿಂಗಾರ್ಪಿತ,
ಆತನ ಭೋಗವೆಲ್ಲವೂ ಪ್ರಸಾದಭೋಗ, ಆತನು ಸದ್ಯೋನ್ಮುಕ್ತನಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೬೦॥

೧೫೨೦
'ಲಿಂಗಿನಾ ಸಹವರ್ತಿತ್ವಂ ಲಿಂಗಿನಾ ಸಹ ವಾದಿತಾ
ಲಿಂಗಿನಾ ಸಹಚಿಂತಾ ಚ ಲಿಂಗಯೋಗೋ ನ ಸಂಶಯಃ'
ಶಿವಲಿಂಗದ ಮಹಾತ್ಮೆಯನು ಶಿವಲಿಂಗದ ಮರ್ಮವನು
ಶಿವಲಿಂಗದ ನಿಶ್ಚಯವನು ಇದಾರಯ್ಯ ಬಲ್ಲವರು?
ಆರಯ್ಯ ಅರಿವವರು, ಶ್ರೀಗುರು ಕರುಣಿಸಿ ತೋರಿ ಕೊಡದನ್ನಬರ?
'ಸರ್ವೈಶ್ವರ್ಯಸಂಪನ್ನಃ ಸರ್ವೇಶತ್ವಸಮಾಯುತಃ' ಎಂದುದಾಗಿ,
'ಅಣೋರಣೀಯಾನ್ ಮಹತೋ ಮಹಿಮಾನ್' ಎಂದುದಾಗಿ,
'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ'
ಎಂದುದಾಗಿ, ವೇದಪುರುಷರಿಗೂ ಅರಿಯಬಾರದು,
ಅರಿಯಬಾರದ ವಸ್ತುವ ಕಾಣಿಸಬಾರದು,
ಕಾಣಿಸಬಾರದ ವಸ್ತುವ ರೂಪಿಸಲೆಂತೂ ಬಾರದು,
ರೂಪಿಸಬಾರದ ವಸ್ತುವ ಪೂಜಿಸಲೆಂತೂ ಬಾರದು.
ಪೂಜೆಯಿಲ್ಲಾಗಿ ಭಕ್ತಿ ಇಲ್ಲ, ಭಕ್ತಿ ಇಲ್ಲಾಗಿ ಪ್ರಸಾದವಿಲ್ಲ,
ಪ್ರಸಾದವಿಲ್ಲಾಗಿ ಮುಕ್ತಿ ಇಲ್ಲ,
ಮುಕ್ತಿ ಇಲ್ಲಾಗಿ ದೇವದಾನವಮಾನವರೆಲ್ಲರೂ ಕೆಡುವರು.
ಕೆಡುವವರನು ಕೆಡದಂತೆ ಮಾಡಿ ರಕ್ಷಿಸಿದನು
ಸದ್ಗುರು ಮದ್ಗುರು ಶ್ರೀಗುರು.
'ನ ಗುರೋರಧಿಕಂ ನ ಗುರೋರಧಿಕಂ' ಎಂದುದಾಗಿ,
ಮಹಾಗುರು ಶಾಂತಮೂರ್ತಿ ಕೃಪಾಮೂರ್ತಿ ದಯಾಮೂರ್ತಿ
ಲಿಂಗಪ್ರತಿಷ್ಠೆಯ ಮಾಡಿದನು. ಅದೆಂತೆನಲು ಕೇಳಿರೆ :
'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಸಹ
ನಾದಬಿಂದುಕಳಾತೀತಂ ಗುರುಣಾ ಲಿಂಗಮುದ್ಭವಂ'
ಎಂದುದಾಗಿ,
'ಸದ್ಗುರೋರ್ಭಾವಲಿಂಗಂ ತು ಸರ್ವಬ್ರಹ್ಮಾಂಡಗಂ ಶಿವಂ
ಸರ್ವಲೋಕಸ್ಯ ತ್ರಾಣತ್ವಾತ್ ಮುಕ್ತಿಕ್ಷೇತ್ರಂ ತದುಚ್ಯತೇ'
ಎಂದುದಾಗಿ, 'ಗುರುಣಾ ದೀಯತೇ ಲಿಂಗಂ'
ಸರ್ವಲೋಕಕ್ಕೆಯೂ ಸರ್ವರಿಗೆಯೂ
ಲಿಂಗಪ್ರತಿಷ್ಠೆಯಂ ಮಾಡಿಕೊಟ್ಟನು.
'ಅರೂಪೇ ಭಾವನಂ ನಾಸ್ತಿ ಯದ್ದೃಶ್ಯಂ ತದ್ವಿನಶ್ಯತಿ
ಅದೃಶ್ಯಸ್ಯ ತು ರೂಪತ್ವೇ ಸಾದಾಖ್ಯಮಿತಿ ಕಥ್ಯತೇ'
ಎಂದುದಾಗಿ, ನಿಷ್ಕಳರೂಪ ನಿರವಯ ಧ್ಯಾನಪೂಜೆಗೆ ಅನುವಲ್ಲ.
ಸಕಲತತ್ತ್ವ ಸಾಮಾನ್ಯವೆಂದು 'ಸಕಲಂ ನಿಷ್ಕಲಂ ಲಿಂಗಂ' ಎಂದುದಾಗಿ,

'ಲಿಂಗಂ ತಾಪತ್ರಯಹರಂ' ಎಂದುದಾಗಿ,
'ಲಿಂಗಂ ದಾರಿದ್ರ್ಯನಾಶನಂ' ಎಂದುದಾಗಿ,
'ಲಿಂಗಂ ಪ್ರಸಾದರೂಪಂ ಚ ಲಿಂಗಂ ಸರ್ವಾರ್ಥಸಾಧನಂ'
ಎಂದುದಾಗಿ,
'ಲಿಂಗಂ ಪರಂಜ್ಯೋತಿಃ ಲಿಂಗಂ ಪರಬ್ರಹ್ಮಂ' ಎಂದುದಾಗಿ,
ಲಿಂಗವನು ಪೂಜಿಸಿ ಭಕ್ತಿಪ್ರಸಾದ ಮುಕ್ತಿಯ ಪಡೆಯಲೆಂದು
ಮಹಾದಾನಿ ಗುರುಲಿಂಗವು ಲಿಂಗಪ್ರತಿಷ್ಠೆಯಂ ಮಾಡಿಕೊಟ್ಟನು.
'ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಈಶ್ವರಶ್ಚ ಸದಾಶಿವಃ
ಸರ್ವೇ ಲಿಂಗಾರ್ಚನಂ ಕೃತ್ವಾ ಜಾತಾಸ್ತೇ ಲಿಂಗಪೂಜಕಾಃ
ಗೌರೀಪತಿರುಮಾನಾಥೋ ಅಂಬಿಕಾಪಾರ್ವತೀ ಪತಿಃ
ಗಂಗಾಪತಿರ್ಮಹಾದೇವೋ ಸತತಂ ಲಿಂಗಪೂಜಕಾಃ'ಎಂದುದಾಗಿ,
ಈ ಮಹಾಪುರುಷರಪ್ಪ ದೇವಗಣ ರುದ್ರಗಣ ಪ್ರಮಥಗಣಂಗಳು
ಬ್ರಹ್ಮವಿಷ್ಣ್ವಾದಿ ದೇವದಾನವಮಾನವರುಗಳು
ಮಹಾಲಿಂಗವ ಧ್ಯಾನಿಸಿ ಪೂಜಿಸಿ ಪರಮಸುಖ ಪರಿಣಾಮವ
ಪಡೆಯಲೆಂದು ಮಾಡಿದನು ಕೇವಲ ಸದ್ಭಕ್ತಜನಕ್ಕೆ.
'ಇಷ್ಟಂ ಪ್ರಾಣಸ್ತಥಾ ಭಾವಸ್ತ್ರಿಧಾ ಏಕಂ' ಎಂದುದಾಗಿ,
ಆ ಸದ್ಗುರು, ಆ ಪರಶಿವನನು ಆ ಸತ್ಪ್ರಾಣವನು ಏಕೀಭವಿಸಿ
ಸದ್ಭಾವದಿಂ ಲಿಂಗಪ್ರತಿಷ್ಠೆಯ ಮಾಡಿ
ಪ್ರಾಣಲಿಂಗವಾಗಿ ಕರಸ್ಥಲದಲ್ಲಿ ಬಿಜಯಂಗೈದು
ಅಂತರಂಗ ಬಹಿರಂಗಭರಿತನಾಗಿ ಪೂಜೆಗೊಳಲೆಂದು ಕರುಣಿಸಿದನು.
'ಏಕಮೂರ್ತಿಸ್ತ್ರಿಧಾ ಭೇದೋ' ಎಂದುದಾಗಿ,
ಶ್ರೀಗುರುಲಿಂಗ ಪರಶಿವಲಿಂಗ ಜಂಗಮಲಿಂಗ ಒಂದೇ;
'ದೇಶಿಕಶ್ಚರಲಿಂಗೇ ಚ ತ್ರಿವಿಧಂ ಲಿಂಗಮುಚ್ಯತೇ' ಎಂದುದಾಗಿ,
ಲಿಂಗದ ಮರ್ಮವನು, ಲಿಂಗದ ಸಂಜ್ಞೆಯನು,
ಲಿಂಗದ ನಿಶ್ಚಯವನು
ಆದಿಯಲ್ಲೂ ಧ್ಯಾನ ಪೂಜೆಯ ಮಾಡಿದವರನೂ
ಭಕ್ತಿಪ್ರಸಾದ ಮುಕ್ತಿಯ ಪಡೆದವರನೂ
ವೇದ ಶಾಸ್ತ್ರ ಪುರಾಣ ಆಗಮಂಗಳು ಹೇಳುತ್ತಿವೆ,
ಶಿವನ ವಾಕ್ಯಂಗಳಿವೆ.
ಇದು ನಿಶ್ಚಯ, ಮನವೇ ನಂಬು ಕೆಡಬೇಡ.
ಮಹಾಸದ್ಭಕ್ತರನೂ ನಂಬುವುದು,
ಶಿವಲಿಂಗಾರ್ಚನೆಯ ನಿರಂತರ ಮಾಡುವುದು,
ಇದು ನಿಶ್ಚಯ, ಶಿವನು ಬಲ್ಲನಯ್ಯಾ.

ಈ ಕ್ರೀಯಲ್ಲಿ ಲಿಂಗವನರಿದು ವಿಶ್ವಾಸಂ ಮಾಡಿ
ಕೇವಲ ಸದ್ಭಕ್ತಿಯಿಂದ ಪೂಜಿಸುವುದು
ನಿರ್ವಂಚಕತ್ವದಿಂದ ತನು ಮನ ಧನವನರ್ಪಿಸುವುದು,
ಕ್ರೀಯರಿದು ಮರ್ಮವರಿದು ಸದ್ಭಾವದಿಂ ಲಿಂಗಾರ್ಚನೆಯಂ
ಮಾಡುವುದಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೬೧॥

೧೫೨೧
ಲೋಕದ ಜಡಜೀವಿಗಳಿಗೆ
ಚಿದ್ವಿಭೂತಿರುದ್ರಾಕ್ಷಿಮಂತ್ರವ ಹೇಳುವನೊಬ್ಬ
ಗಣದ್ರೋಹಿ ನೋಡ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೬೨॥

೧೫೨೨
ಲೋಕಹಿತಾರ್ಥವಾಗಿ, ಪ್ರಾಣಿಗಳೆಲ್ಲ ಕೆಟ್ಟಪರೆಂದು
ಶರಣ ಲಿಂಗವಾಗಿ, ಲಿಂಗಭರಿತಶರಣನಾಗಿ ಬದುಕಿಸಿದನು ಕೇಳಿರಣ್ಣಾ.
'ಯೇ ರುದ್ರಲೋಕಾದವತೀರ್ಯ ರುದ್ರಾ ಮಾನುಷ್ಯಮಾಶ್ರಿತ್ಯ ಜಗದ್ಧಿತಾಯ
ಚರಂತಿ ನಾನಾವಿಧಚಾರುಚೇಷ್ಟಾಸ್ತೇಭ್ಯೋ ನಮಸ್ತ್ರ್ಯಂಬಕಪೂಜಕೇಭ್ಯಃ' ಎಂದುದಾಗಿ,
ಶರಣರೂಪಾಗಿ ಬಂದು ಶ್ರೀಮೂರ್ತಿಯ ತೋರಿ
ಪಾಪವ ಕಳೆದನು.
'ಉಪಪಾತಕಕೋಟೀನಾಂ ಬ್ರಹ್ಮಹತ್ಯಶತಾನಿ ಚ
ದಹಂತ್ಯಶೇಷಪಾಪಾನಿ ಶಿವಭಕ್ತಸ್ಯ ದರ್ಶನಾತ್'
ಭಕ್ತಜನಂಗಳ ಕೂಡೆ ಸಂಭಾಷಣೆಯ ಮಾಡಿ
ಮಹಾಪಾತಕಂಗಳ ಕಳೆದನು.
'ಮಹಾಪಾತಕಕೋಟಿಘ್ನಃ ಶ್ವಪಚೋ[ऽ]ಪಿ ಲಿಂಗಪೂಜಕಃ
ತತ್ಸಂಭಾಷಣಾನ್ಮುಕ್ತಿರ್ಗಣಮುಖ್ಯಗಣೇಶ್ವರಃ'
ಶ್ರೀಗುರುಮೂರ್ತಿಯ ತೋರಿ ಸಂಭಾಷಣೆಯಂ ಮಾಡಿ
ಪಾದೋದಕ ಪ್ರಸಾದವನಿತ್ತು ಸಲಹಿ ರಕ್ಷಿಸಲು ಬಂದನು ಕಾಣಿರಣ್ಣಾ.
ಇದನರಿಯದೆ, ಶರಣರು ದ್ರವ್ಯಾರ್ಥಿಗಳಾಗಿ ಬಂದರೆಂಬಿರಿ,
ನಾನು ಮಾಡಿದೆನು ಶರಣರು ಮಾಡಿಸಿಕೊಂಡಹರೆಂದೆಂಬಿರಿ,
ಉಂಟೆಂದಿರಿ, ಇಲ್ಲೆಂದಿರಿ,
ಈ ಪರಿ ಅಜ್ಞಾನದಲ್ಲಿ ಕಂಡು, ನುಡಿದು, ದೋಷಿಗಳಹಿರಿ.
ಶರಣರ ಶಿವನೆಂದು ನಂಬಿಮಾಡಲು
ಸಿರಿಯಾಳನು ಮಗನ ಕೊಟ್ಟಡೆ ಕೈಲಾಸವ ಕೊಟ್ಟನು.
ದಾಸ ವಸ್ತ್ರನಿತ್ತಡೆ ಮಹಾವಸ್ತು ತವನಿಧಿಯ ಕೊಟ್ಟನು.

ಬಲ್ಲಾಳ ವಧುವನಿತ್ತಡೆ, ತನ್ನನೇ ಕೊಟ್ಟನು.
ಈ ಪರಿ ಅಣುವಿಂಗೆ ಅಣು, ಮಹತ್ತಿಂಗೆ ಮಹತ್ತವನೆ ಕೊಟ್ಟನು.
'ಸಕೃತ್ ಲಿಂಗಾರ್ಚಕೇ ದತ್ವಾ ಸುವರ್ಣಂ ಚಾಣುಮಾತ್ರಕಂ
ದೇವಸಂಪೂಜ್ಯಮಾನೇಷು ಗಣಮುಖ್ಯೋ ಗಣೇಶ್ವರಃ'
ಭಕ್ತಿಯಿಂ ನಂಬಿ ಮಾಡಿರೆ, ದುಭಾರ್ವಿಸಿ ಕೆಡಬೇಡ.
ಶರಣರೇ ಶಿವನೆಂದು ನಂಬಿ ಮಾಡಿರಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನ ಕೂಡುವುದಯ್ಯಾ. ॥೨೬೩॥

೧೫೨೩
ವಂಚಿಸುವ ಸತಿ ಸುತ ಬಂಧು ಮೊದಲಾದ ಲೋಕವ ನಂಬಿ,
ನಿರ್ವಂಚಕರಪ್ಪ ಗುರು ಲಿಂಗ ಜಂಗಮರ ವಂಚಿಸಿ
ನರಕಕ್ಕಿಳಿವರನೇನೆಂಬೆನಯ್ಯಾ? ಅಕಟಕಟಾ,
ಈ ಹೀಂಗೆ ಶಿವಾಚಾರ? ಈ ಹೀಂಗೆ ಭೃತ್ಯಾಚಾರ?
ಭಕ್ತಿ ಮುಕ್ತಿಯನರಿಯದೆ ಹೋದರು.
ತನು ಮನ ಧನ ಕೆಟ್ಟುಹೋಹುದೆಂಬ ಯುಕ್ತಿಯನರಿಯಿರಿ.
ಇದನರಿದು, ವಂಚಿಸುವವರನೆ ವಂಚಿಸಿ
ನಿರ್ವಂಚಕರಾಗಿ ಗುರು ಲಿಂಗ ಜಂಗಮಕ್ಕೆ ದಾಸೋಹವ ಮಾಡಲು
ತನು ಕೆಡದು, ಮನ ಕೆಡದು, ಧನ ಕೆಡದು.
ಮುಕ್ತಿಯುಂಟು ಭಕ್ತಿಯುಂಟು, ಇದು ಸತ್ಯ ಶಿವ ಬಲ್ಲ, ಶಿವನಾಣೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೬೪॥

೧೫೨೪
ವಟಬೀಜವು ವಟವೃಕ್ಷಕೋಟಿಯನೊಳಕೊಂಡಿಪ್ಪಂತೆ,
ಸಟೆಯಿಂದಲಾದಜಾಂಡಕೋಟಿಯನೊಳಕೊಂಡಿಹ ಲಿಂಗವೆ,
'ಅಯಂ ಮೇ ಹಸ್ತೋ ಭಗವಾನ್' ಎಂದೆನಿಸುವ ಲಿಂಗವೆ,
'ಚಕಿತಮಭಿದತ್ತೇ ಶ್ರುತಿರಪಿ' ಎಂದೆನಿಸುವ ಲಿಂಗವೆ,
ಎನ್ನ ಕರಸ್ಥಲಕ್ಕೆ ಬಂದು ಸೂಕ್ಷ್ಮವಾದೆ
ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ॥೨೬೫॥

೧೫೨೫
ವಟಬೀಜ ವಟವೃಕ್ಷಕೋಟಿಯ ನುಂಗಿಪ್ಪಂತೆ
ಸಟೆಯಿಂದಾದ ಅಜಾಂಡ ಬ್ರಹ್ಮಾಂಡ ಕೋಟಿಗಳ ನುಂಗಿಪ್ಪ ಲಿಂಗವೇ,
ದಿಟಮುಟವಾಗಿ ಕಣ್ಣುಮನಕರಸ್ಥಲಕ್ಕೆ ಪ್ರಕಾಶವಾದೆ.

ಮಝು ಭಾಪು ಮಝು ಭಾಪು ಲಿಂಗವೇ
'ನ ಚ ರೇಣುರ್ನಚಾಕ್ಷುಷಂ' ಎಂದೆನಿಸುವ ಲಿಂಗವೇ,
ನಿಮ್ಮ ಮುಟ್ಟಿ ಉತ್ಪತ್ತಿಸ್ಥಿತಿಲಯಕ್ಕೆ ಹೊರಗಾದೆನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೬೬॥

೧೫೨೬

ವಶಿಷ್ಠಗೋತ್ರದಲ್ಲಿ ಹುಟ್ಟಿದವನು ವಶಿಷ್ಠಗೋತ್ರದವನೆಂಬಂತೆ,
ಭಾರದ್ವಾಜಗೋತ್ರದಲ್ಲಿ ಹುಟ್ಟಿದವನು ಭಾರದ್ವಾಜಗೋತ್ರದವನೆಂಬಂತೆ,
ಕಾಶ್ಯಪಗೋತ್ರದಲ್ಲಿ ಹುಟ್ಟಿದವನು ಕಾಶ್ಯಪಗೋತ್ರದವನೆಂಬಂತೆ,
ವಿಶ್ವಾಮಿತ್ರಗೋತ್ರದಲ್ಲಿ ಹುಟ್ಟಿದವನು ವಿಶ್ವಾಮಿತ್ರಗೋತ್ರದವನೆಂಬಂತೆ
ಆ ಪರಿ ಆವಾವ ಗೋತ್ರದಲ್ಲಿ ಆವಾವ ಋಷಿಗಳ ವಂಶದಲ್ಲಿ ಜನಿಸಿದವನು
ಆ ಗೋತ್ರ, ಆ ಸಂತತಿ, ಆ ಸುತನು
ಎಂಬುದು ಉಪಚರ್ಯವೆ? ಅಸತ್ಯವೇ ಹೇಳಿರಣ್ಣಾ?
ಅದು ತಾತ್ಪರ್ಯ, ಅದು ಸತ್ಯ.
ಆ ಪರಿ ಬ್ರಾಹ್ಮಣನ ಮಗ ಬ್ರಾಹ್ಮಣನು, ಕ್ಷತ್ರಿಯನ ಮಗ ಕ್ಷತ್ರಿಯನು,
ವೈಶ್ಯನ ಮಗ ವೈಶ್ಯನು, ಶೂದ್ರನ ಮಗ ಶೂದ್ರನು, ಆ ಪರಿ ತಪ್ಪದು.
ದಿಟ ದಿಟ ವಿಚಾರಿಸಿ ನೋಡಿರೆ. ಅದು ಹೇಗೆಂದಡೆ ಶ್ರುತಿ:
'ಮಹಾಬ್ರಾಹ್ಮಣಮೀಶಾನಂ' ಎಂದುದಾಗಿ
ಮತ್ತಂ 'ವಿರೂಪಾಕ್ಷಂ ದ್ವಿಜೋತ್ತಮಂ' ಎಂದುದಾಗಿ
ಮಹಾಬ್ರಾಹ್ಮಣನೇ ಮಹಾದೇವನು.
ಇದಕ್ಕೆ ಮತ್ತೆ ಶಿವರಹಸ್ಯದಲ್ಲಿ
'ಗುರುದೇವೋ ಮಹಾದೇವೋ ಗುರುದೇವಸ್ಸದಾಶಿವಃ
ಗುರುದೇವಃ ಪರಂ ತತ್ತ್ವಂ ತಸ್ಮೈ ಶ್ರೀಗುರವೇ ನಮಃ'
ಎಂದುದಾಗಿ,
ಮಹಾದೇವನೇ ಶ್ರೀಗುರು ಕಾಣಿರಣ್ಣಾ.
ಆ ಶ್ರೀಗುರುವಿನ ಕರಕಮಲದಲ್ಲಿ ಉದ್ಭವಿಸಿದ
ತಚ್ಛಿಷ್ಯನೇ ಮಹಾಬ್ರಾಹ್ಮಣನು, ಇಂತೆಂಬುದು ಹುಸಿಯಲ್ಲ.
ಜಾತಿ ಅಜಾತಿ ಎಂದು ಅಷ್ಟಾದಶಜಾತಿಯೊಳಗೆ ಇಕ್ಕಲಾಗದು.
ಅಷ್ಟಾದಶಜಾತಿಯೊಳಗೊಂದೂ ಭಾವಿಸಲಾಗದು.
ಆ ಮಹಿಮನೇ ಸತ್ಕುಲಜನು. ಇದಕ್ಕೆ ಮತ್ತಂ
'ಬ್ರಹ್ಮಣಾ ಚರತೀ ಬ್ರಾಹ್ಮಣಃ' ಎಂದುದಾಗಿ
ಆ ಮಹಾಮಹಿಮನು ಬ್ರಹ್ಮವ ಆಚರಿಸುವನಾಗಿ ಬ್ರಾಹ್ಮಣ.
ಮತ್ತಂ ಕೂರ್ಮಪುರಾಣದಲ್ಲಿ

‘ಸ ಏವ ಭಸ್ಮಜ್ಯೋತಿಃ’ ಎಂದುದಾಗಿ
ವಿಭೂತಿಯ ಧರಿಸಿಪ್ಪವನಾಗಿ ಆ ಮಹಾತ್ಮನೇ ಜ್ಯೋತಿರ್ಲಿಂಗವು.
ಮತ್ತಂ ಶಿವಧರ್ಮದಲ್ಲಿ
‘ರುದ್ರಾಕ್ಷಂ ಧಾರಯೇನ್ನಿತ್ಯಂ ರುದ್ರಸ್ಸಾಕ್ಷಾದಿವ ಸ್ಮೃತಃ’ ಎಂದುದಾಗಿ
ರುದ್ರಾಕ್ಷಿಯಂ ಧರಿಸಿಪ್ಪವನಾಗಿ ಆ ಮಹಾಮಹಿಮನೇ ರುದ್ರನು.
ಮತ್ತಂ ಕಾಳಿಕಾಗಮದಲ್ಲಿ
‘ತಸ್ಮಿನ್ವೇದಾಶ್ಚ ಶಾಸ್ತ್ರಾಣಿ ಮಂತ್ರಃ ಪಂಚಾಕ್ಷರೀ ತಥಾ’ ಎಂದುದಾಗಿ,
ಶ್ರೀ ಪಂಚಾಕ್ಷರಿಯ ಜಪಿಸುವನಾಗಿ ಆ ಮಹಿಮನೇ ವೇದವಿದ ಶಾಸ್ತ್ರಜ್ಞನು.
ಮತ್ತಂ ಲೈಂಗ್ಯೇ
‘ಮೂಢನಾಮಪ್ಯಯುಕ್ತಾನಾಂ ಪಾಪಿನಾಂ ಚಾಭಿಚಾರಿಣಾಂ
ಯಮಲೋಕೋ ನ ವಿದ್ಯೇತ ಸದಾ ವೈ ಲಿಂಗಧಾರಣಾತ್’ ಎಂದುದಾಗಿ
ಲಿಂಗವ ಧರಿಸಿಪ್ಪನಾಗಿ ಆ ಮಹಾಮಹಿಮನೇ ಲಿಂಗದೇಹಿ,
ಲಿಂಗಕಾಯನು, ಲಿಂಗಪ್ರಾಣನು
ಶಿವಲಿಂಗಾರ್ಚನೆಯಂ ಮಾಡುವನಾಗಿ, ಆ ಮಹಾಮಹಿಮನೇ ಶಿವನು.
ಮತ್ತಂ ಆದಿತ್ಯಪುರಾಣೇ
‘ಅಕೃತ್ವಾ ಪೂಜನಂ ಶಂಭೋರ್ಯೋ ಭುಂಕ್ತೇ ಪಾಪಕೃದ್ದ್ವಿಜಃ
ಕುಣಪಂ ಚ ಮಲಂ ಚೈವ ಸಮಶ್ನಾತಿ ದಿನೇ ದಿನೇ’ ಎಂದುದಾಗಿ
ಶಿವಲಿಂಗಕ್ಕೆ ಅರ್ಪಿಸದೇ ಕೊಳ್ಳನಾಗಿ ಆ ಮಹಾಮಹಿಮನೇ ರುದ್ರನು.
ಮತ್ತಂ ಶಾಂಕರಸಂಹಿತೆಯಲ್ಲಿ
‘ತಿಲಷೋಡಶಭಾಗಂ ತು ತೃಣಾಗ್ರಾಂಬುಕಣೋಪಮಂ
ಪಾದೋದಕಪ್ರಸಾದಾನಾಂ ಸೇವನಾನ್ ಮೋಕ್ಷಮಾಪ್ನುಯಾತ್’
ಎಂದುದಾಗಿ, ಪಾದೋದಕ ಪ್ರಸಾದವಂ ಕೊಂಬನಾಗಿ
ಆ ಮಹಾತ್ಮನು ತಾನೇ ಲಿಂಗೈಕ್ಯನು.
ಇನ್ನು ನಾನಾವೇದಶಾಸ್ತ್ರಪುರಾಣಾಗಮಂಗಳ ಸಮ್ಮತ
ದೃಷ್ಟವಾಕ್ಯಂಗಳನು ವಿಚಾರಿಸಿ ನೋಡಿದಡೆಯೂ
ಶಿವಭಕ್ತನೇ ಕುಲಜನು, ಶಿವಭಕ್ತನೇ ಉತ್ತಮನು.
ಇಂತಹ ಶಿವಭಕ್ತನನು ಜಾತಿವಿಜಾತಿ ಎಂದು ಭಾವಿಸಿದಡೆ,
‘ಮರ್ತ್ಯನೆಂದು ಭಾವಿಸಿದಡೆ ನರಕ ತಪ್ಪದು.
ವಶಿಷ್ಠ ಪುರಾಣದಲ್ಲಿ ಕೇಳಿರೆ:
ಮರ್ತ್ಯವನ್ಮನುತೇ ಯಸ್ತು ಶಿವಷ್ಠಂ ದ್ವಿಜಂ ನರಃ
ಕುಂಭೀಪಾಕೇ ತು ಪತತಿ ನರಕೇ ಕಾಲಮಕ್ಷಯಂ’
ಎಂದುದಾಗಿ ಇದು ಕಾರಣ
ಅಷ್ಟಾದಶವಿದ್ಯಂಗಳನು ವಿಚಾರಿಸಿ ತಿಳಿದು ನೋಡಿದಡೆ

ಋಷಿಪುತ್ರನ ಋಷಿ ಎಂಬಂತೆ ಶ್ರೀಗುರುಪುತ್ರನನು
ಶ್ರೀಗುರು ಎಂಬುದಯ್ಯಾ.
ಆ ಮಹಾಮಹಿಮನ ದರ್ಶನವ ಮಾಡಿ ಪಾದೋದಕ ಪ್ರಸಾದವ
ಕೊಂಡು ಮುಕ್ತರಪ್ಪುದಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೬೭॥

೧೫೨೭

'ವಿತ್ತಂ ಚ ರಾಜವಿತ್ತಂ ಚ ಕಾಮಿನೀ ಕಾಮಕಾವಶಾ
ಪೃಥಿವೀ ವೀರಭೋಜ್ಯಾ ಚ ಸ್ವಧನಂ ಧರ್ಮ ಏವ ಚ'
ಎಂಬುದನರಿದು,
ಮಾಡಿ ಮಾಡಿ, ಮಾಹೇಶ್ವರರಿಗೆ ಧನ ಕೆಡದ ಹಾಂಗೆ.
'ಅಧರ್ಮಾತ್ ಜಾಯತೇ ಕಾಮಃ ಕ್ರೋಧೋ[s] ಧರ್ಮಾಚ್ಚ ಜಾಯತೇ
ಧರ್ಮಾತ್ ಸಂಜಾಯತೇ ಮೋಕ್ಷಃ ತಸ್ಮಾದ್ಧರ್ಮಂ ಸಮಾಚರೇತ್'
ಎಂಬುದನರಿದು,
ಮಾಡಿ ಮಾಡಿ, ಮಾಹೇಶ್ವರರಿಗೆ ಧನ ಕೆಡದ ಹಾಂಗೆ.
'ಕ್ಷಣಂ ಚಿತ್ತಂ ಕ್ಷಣಂ ವಿತ್ತಂ ಕ್ಷಣಂ ಜೀವನಮೇವ ಚ
ಯಮಸ್ಯ ಕರುಣೋ ನಾಸ್ತಿ ಧರ್ಮಸ್ಯ ತ್ವರಿತಾ ಗತಿಃ'
ಎಂಬುದನರಿದು, ಮಾಡಿ ಮಾಡಿ, ಮಾಹೇಶ್ವರರಿಗೆ.
ಇಂತು, ನಾನಾ ವೇದ ಶಾಸ್ತ್ರ ಪುರಾಣಾಗಮಂಗಳಲ್ಲಿ
ವಿಚಾರಿಸಿ ನೋಡಿದರೆ
ಸತ್ಪಾತ್ರಕ್ಕೆ ಮಾಡಿ ಧನ ಕೆಡದ ಹಾಂಗೆ.
ಪಾತ್ರಪರೀಕ್ಷೆಗಳಲ್ಲಿ ಸತ್ಪಾತ್ರರು ಮಾಹೇಶ್ವರರು.
ಅಲ್ಲಿ ಪ್ರೇಮ ಪ್ರೀತಿ ಕಿಂಕರತೆಯಿಂದ
ದಾಸೋಹವ ಮಾಡಿ ಬದುಕಿರೆ.
'ನ ಮೇ ಪ್ರಿಯಶ್ಚತುರ್ವೇದೀ ಮದ್ಭಕ್ತ ಶ್ವಪಚೋಪಿ ವಾ
ತಸ್ಮೈ ದೇಯಂ ತತೋ ಗ್ರಾಹ್ಯಂ ಯಥಾ ಪೂಜ್ಯಸ್ತಥಾಹಿ ಸಃ'
ಎಂಬುದನರಿದು, ಮಾಡಿ ಮಾಡಿ, ಮಾಹೇಶ್ವರರಿಗೆ.
'ನಿಕೃಷ್ಟಚಾರಜನ್ಮಾನೋ ವಿರುದ್ಧಾ ಲೋಕವೃತ್ತಿಷು
ಕೋಟಿಭ್ಯೋ ವೇದವಿದುಷಾಂ ಶ್ರೇಷ್ಠಾ ಮದ್ಭಾವಭಾವಿತಾಃ'
ಎಂಬುದನರಿದು, ಮಾಡಿ ಮಾಡಿ, ಮಾಹೇಶ್ವರರಿಗೆ.
'ಚತುರ್ವೇದಧರೋ ವಿಪ್ರಃ ಶಿವಭಕ್ತಿವಿವರ್ಜಿತಃ
ದುಷ್ಟಚಾಂಡಾಲಭಾಂಡಸ್ಥಂ ಯಥಾ ಭಾಗೀರಥೀಜಲಂ
ಚುರ್ವೇದಧರೋ ವಿಪ್ರಃ ಶಿವದೀಕ್ಷಾವಿವರ್ಜಿತಃ

ತಸ್ಯ ಭೋಜನದಾನೇನ ದಾತಾ ಚ ನರಕಂ ವ್ರಜೇತ್
ಚತುರ್ವೇದಧರೋ ವಿಪ್ರಃ ಸರ್ವಶಾಸ್ತ್ರವಿಶಾರದಃ
ಶಿವಜ್ಞಾನಂ [ನ]ಜಾನಾತಿ ದರ್ವೀ ಪಾಕರಸಂ ಯಥಾ'
ಎಂಬುದನರಿದು, ಮಾಡಿ ಮಾಡಿ, ಮಾಹೇಶ್ವರರಿಗೆ.
ಇಂತು ನಾನಾವೇದಶಾಸ್ತ್ರಪುರಾಣಾಗಮಂಗಳಲ್ಲಿ
ವಿಚಾರಿಸಿ ನೋಡಿ, ಮಾಡಿ ಮಾಡಿ, ಮಾಹೇಶ್ವರರಿಗೆ.
ಫಲವ ಬಯಸಲು ಫಲವಹುದು.
ಮುಕ್ತಿಯ ಬಯಸಲು ಮುಕ್ತಿಯಹುದು.
'ಅನಿಮಿತ್ತಂ ನಿಮಿತ್ತಂ ಚ ಉಪಾಧಿರ್ನಿರುಪಾಧಿಕಂ
ದಾಸೋಹಯುಕ್ತ ಕರ್ಮಾ ಚ ಯಥಾ ಕರ್ಮ ತಥಾ ಫಲಂ'
ಎಂಬುದನರಿದು, ಮಾಡಿ ಮಾಡಿ, ಮಾಹೇಶ್ವರರಿಗೆ.
'ಅನಾದರಾದಹಂಕಾರಾತ್ ಮೋಹಾದ್ಭೀತಿರುಪಾಧಿಕಾ
ಕೀರ್ತಿಶ್ಚ ಷಡ್ಗುಣೋ ನಾಸ್ತಿ ದಾಸೋಹಶ್ಚ ಸ್ವಯಂ ಶಿವಃ'
ಎಂಬುದನರಿದು, ಮಾಡಿಮಾಡಿ, ಮಾಹೇಶ್ವರರಿಗೆ ಕೆಡಬೇಡ ಕೆಡಬೇಡ.
'ಸಾಲೋಕ್ಯಾದಪಿ ಸಾಮೀಪ್ಯಾತ್ ಸಾರೂಪ್ಯಾಚ್ಚ ಸಾಯುಜ್ಯಕಾತ್
ಶಿವತತ್ತ್ವಾದ್ವಿಶೇಷಶ್ಚ ಸ್ವಯಂ ದಾಸೋಹ ಉತ್ತಮಃ' ಎಂಬುದನರಿದು,
ಮಾಡಿ ಮಾಡಿ, ಮಾಹೇಶ್ವರರಿಗೆ.
'ಸಕೃಲ್ಲಿಂಗಾರ್ಚಕೇ ದತ್ವಾ ವಸ್ತ್ರಮಾತ್ರಂ ಯಥೇಪ್ಸಿತಂ
ಏಕತಂತ್ರಂ ಲಭೇದ್ರಾಜ್ಯಂ ಶಿವಸಾಯುಜ್ಯಮಾಪ್ನುಯಾತ್
ಸಕೃಲ್ಲಿಂಗಾರ್ಚಕೇ ದತ್ವಾ ಗೋಷ್ಪದಂ ಭೂಮಿಮಾತ್ರಕಂ
ಭೂಲೋಕಾಧಿಪತಿರ್ಭೂತ್ವಾ ಶಿವೇನ ಸಹ ಮೋದತೇ
ಸಕೃಲ್ಲಿಂಗಾರ್ಚಕೇ ದತ್ವಾ ಸುವರ್ಣಂ ಚಾಣುಮಾತ್ರಕಂ
ದೇವೈಶ್ಚ ಪೂಜ್ಯಮಾನಸ್ತು ಗಣಮುಖ್ಯೋ ಗಣೇಶ್ವರಃ
ಸಕೃಲ್ಲಿಂಗಾರ್ಚಕೇ ದತ್ವಾ ಭಿಕ್ಷಾಮಾತ್ರಂ ಚ ಸಾದರಂ
ಪದ್ಮಾನಿ ದಶಸಾಹಸ್ರಂ ಪಿತೄಣಾಂ ದತ್ತಮಕ್ಷಯಂ'
ಎಂಬುದನರಿದು, ಮಾಡಿ ಮಾಡಿ, ಮಾಹೇಶ್ವರರಿಗೆ. ಸಾವು, ದಿಟದಿಟ.
ದಾಸೋಹವ ಮಾಡಲು ತನು ಕೆಡದ ಹಾಂಗೆ
'ಸತ್ಪಾತ್ರದತ್ತವಿತ್ತಂ ಚ ತದ್ದಾನಾದಸುಖಂ ಭವೇತ್
ಅಪಾತ್ರದತ್ತವಿತ್ತಂ ಚ ತದ್ದಾನಾದಸುಖಂ ಭವೇತ್'
ಎಂಬುದನರಿದುದಕ್ಕೆ ಸತ್ಪಾತ್ರವಾವುದೆಂದಡೆ:
'ಕಿಂಚಿದ್ವೇದಮಯಂ ಪಾತ್ರಂ ಕಿಂಚಿತ್ಪಾತ್ರಂ ತಪೋಮಯಂ
ಆಗಮಿಷ್ಯತಿ ಯತ್ಪಾತ್ರಂ ತತ್ಪಾತ್ರಂ ತಾರಯಿಷ್ಯತಿ
ಸರ್ವೇಷಾಮೇವ ಪಾತ್ರಾಣಮತಿಪಾತ್ರಂ ಮಹೇಶ್ವರಃ'

ಎಂಬುದನರಿದು, ಮಾಡಿ ಮಾಡಿ, ಮಾಹೇಶ್ವರರಿಗೆ,
'ನಿತ್ಯಂ ಲಿಂಗಾರ್ಚನಂ ಯಸ್ಯ ನಿತ್ಯಂ ಜಂಗಮಪೂಜನಂ
ನಿತ್ಯಂ ಗುರುಪದಧ್ಯಾನಂ ನಿತ್ಯಂ ನಿತ್ಯಂ ಸಂಶಯಃ'
ಇಂತೆಂದುದಾಗಿ, ಅರಿವನೇ ಅರಿದು, ಮರವೆಯನೇ ಮರೆದು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನ[ನ]ರಿದು,
ಪೂಜಿಸಲು ಇಹಪರಸಿದ್ಧಿ ಸದ್ಯೋನ್ಮುಕ್ತಿ ಕೇಳಿರಣ್ಣಾ. ॥೨೬೮॥

೧೫೨೮

ವಿಶ್ವಾಸವೆ ಭಕ್ತಿ, ಗುರುಲಿಂಗಜಂಗಮವೊಂದೆಂದರಿವುದೆ ಜ್ಞಾನ,
ತ್ರಿವಿಧದಲ್ಲಿ ನಿರ್ವಂಚನೆಯೆ ವೈರಾಗ್ಯ, ಪ್ರಸಾದವೆ ಮುಕ್ತಿ.
ಇದು ಸತ್ಯ, ಶಿವ ಬಲ್ಲ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೬೯॥

೧೫೨೯

ವೇದಂಗಳು ದೈವವೆಂಬ ವಿಪ್ರರಂತಹ ಮರುಳರುಂಟೇ ತ್ರಿಜಗದಲ್ಲಿ?
ವೇದವೆಂಬುದೊಂದು ಸ್ವಾಧಕ ಸಂಪತ್ತು.
ವೇದಂಗಳು ಶ್ವೇತ, ಅಗಸ್ತ್ಯ, ವಿಶ್ವಾಮಿತ್ರಮುನಿಗಳಿಂದಾದವು.
ಶಬ್ದಗಾಂಭೀರ್ಯ ಶ್ರುತಿಕೋಟಿ ಚರಣಕಮಲನೆಂಬ
ಲಿಂಗದ ಕೈಯಲ್ಲಿ ಕಲಿತ ವೇದಂಗಳು
ಅಜ್ಞಾನಸಂಗವಾಗಿ ಅಗೋಚರವಾಗಿ ನುಡಿದವು.
ಋಗ್ವೇದ–'ನಾಹಂಕಾರೋ ಬ್ರಹ್ಮತೇಜಃ' ಎಂದುದಾಗಿ,
ಯಜುರ್ವೇದ–'ನಾಹಂಕಾರೋ ಲಕ್ಷ್ಮೀಪತಿರ್ವಿಷ್ಣುತೇಜಃ' ಎಂದುದಾಗಿ,
ಸಾಮವೇದ–'ನಾಹಂ ದೇವೋ ರುದ್ರತೇಜಃ' ಎಂದುದಾಗಿ,
ಅಥರ್ವಣವೇದ–'ನಾಹಂ ಸ್ಥಲಂ' ಎಂದುದಾಗಿ
ಕುಲಮದದಿಂದ ಬ್ರಹ್ಮ ಕೆಟ್ಟ, ಬಲಮದದಿಂದ ವಿಷ್ಣು ಕೆಟ್ಟ,
ದೈವಮದದಿಂದ ರುದ್ರ ಕೆಟ್ಟ, ಛಲಮದದಿಂದ ಇಂದ್ರ ಕೆಟ್ಟ,
ಇಂತೀ ನಾಲ್ಕು ಶ್ರುತಿಗಳು ತಮ್ಮ ಗರ್ವದಿಂದ
ನೂಂಕಿಸಿಕೊಂಡವು, ಶಿವನ ಅರಮನೆಯ ಬಾಗಿಲಲ್ಲಿ.
ಮತ್ತಾ ಚತುರ್ವೇದಂಗಳು ಬಂದು, ಲಿಂಗವ ಚತುರ್ದಿಶೆಯಲ್ಲಿ ಓಲೈಸಿ,
ಕೈಮುಗಿದುಕೊಂಡು ಹೊಗಳುತ್ತಿದ್ದವು. ಅದೆಂತೆಂದಡೆ ಶ್ರುತಿ,
'ಓಂ ಜಯತತ್ವಾನಾಂ ಪುರುಷಮೇರು ಕಾಮ್ಯಾನಾಂ
ಪುಣ್ಯಜಪಧ್ಯಾನಾನಾಂ ಸರ್ವಜನ್ಮವಿನಾಶಿನಾಂ
ಆದಿ ಅನಾದಿ ಪಿತ್ರೂಣಾಂ ಅಜಕೋಟಿಸಹಸ್ರವಂದ್ಯಾನಾಂ
ದೇವಕೋಟಿಚರಣಕಮಲಾನಾಂ' ಎಂದು

ವೇದಂಗಳು ದೇವರ ಚರಣದ ಕುರುಹ ಕಾಣವು.
ಆದಿಯಲ್ಲಿ ನಮ್ಮ ಪುರಾತನರು ವೇದವನೋದಿದರೆ? ಇಲ್ಲ.
ಕಲ್ಲಿಲಿಟ್ಟರು, ಕಾಲಿಲೊದೆದರು,
ಬಿಲ್ವಪತ್ರದ ಮರದ ಕೆಳಗೆ ಲಿಂಗವಂ ಪುಟ್ಟಿಸಿ ನಿಷ್ಠೆಯ ಪಡೆದರು.
ಮನೆಯ ಬಾಗಿಲ ಕಾಯಿಸಿಕೊಂಡರು,
ಆಡಿಸಿದರು, ಅಡಗಿಸಿದರು,
ಓಡಿದ ಲಿಂಗವಂ ತಂದು ಪ್ರತಿಷ್ಠೆಯಂ ಮಾಡಿದರು.
ಇಂತಪ್ಪ ದೃಷ್ಟವ ಸಾಧಿಸಿದರು ನಮ್ಮ ಪುರಾತನರು.
ನಿಮ್ಮವರು ವೇದವನೋದಿದರೆಂಬುದನರಿದು,
ಅವರನೊಲ್ಲದೆ ಬಿಟ್ಟ ಕಾಣಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೭೦॥

೧೫೪೦
ವೇದಮಾರ್ಗವ ಮೀರಿದರು ಮಹಾವೇದಿಗಳು ಲಿಂಗವಂತರು,
ಆ ಲಿಂಗವಂತರ ಮಹಾವೇದಮಾರ್ಗವ ಲಿಂಗವೇ ಬಲ್ಲನಯ್ಯಾ.
ಶಾಸ್ತ್ರಮಾರ್ಗವ ಮೀರಿದರು ಮಹಾಶಾಸ್ತ್ರಜ್ಞರು ಲಿಂಗವಂತರು.
ಆ ಲಿಂಗವಂತರ ಮಹಾಶಾಸ್ತ್ರಮಾರ್ಗವ ಲಿಂಗವೇ ಬಲ್ಲನಯ್ಯಾ.
ಆಗಮಕ್ರೀಯ ಮೀರಿದರು ಮಹಾ ಆಗಮಿಕರು ಲಿಂಗವಂತರು,
ಲಿಂಗವಂತರ ಮಹಾ ಆಗಮಕ್ರೀಯ ಲಿಂಗವೇ ಬಲ್ಲನಯ್ಯಾ.
ಪುರಾಣದ ಪರಿಯ ಮೀರಿದರು ಮಹಾಪುರಾಣಿಕರು ಲಿಂಗವಂತರು,
ಆ ಲಿಂಗವಂತರ ಪುರಾಣದ ಪರಿಯ ಆ ಲಿಂಗವೇ ಬಲ್ಲನಯ್ಯಾ.
ದೇವ ದಾನವಮಾನವರಿಗೆಯೂ ಅರಿಯಬಾರದು.
'ವೇದಶಾಸ್ತ್ರಪುರಾಣಾನಿ ಸ್ಪಷ್ಟಂ ವೇಶ್ಯಾಂಗನಾ ಇವ
ಯಾ ಪುನಶ್ಯಾಂಕರೀ ವಿದ್ಯಾ ಗುಪ್ತಾ ಕುಲವಧೂರಿವ' ಎಂದುದಾಗಿ,
ಆರಿಗೆಯೂ ಅರಿಯಬಾರದು.
ಲಿಂಗವಂತರು ಉಪಮಾತೀತರು, ವಾಙ್ಮನೋತೀತರು,
ಆರ ಪರಿಯೂ ಇಲ್ಲ.
'ಸ್ವೇಚ್ಛಾವಿಗ್ರಹೇಣೈವ ಸ್ವೇಚ್ಛಾಚಾರಗಣೇಶ್ವರಾಃ
ಶಿವೇನ ಸಹ ತೇ ಭುಜ್‌ತ್ವಾ ಭಕ್ತಾ ಯಾಂತಿ ಶಿವಂ ಪದಂ
ಲೋಕಾಚಾರನಿಬಂಧೇನ ಲೋಕಾಲೋಕವಿವರ್ಜಿತಾಃ
ಲೋಕಾಚಾರಂ ಪರಿತ್ಯಜ್ಯ ಪ್ರಾಣಲಿಂಗಪ್ರಸಾದಿನಃ' ಎಂದುದಾಗಿ,
ಈ ಲೋಕದ ಮಾರ್ಗವ ನಡೆಯರು, ಲೋಕದ ಮಾರ್ಗವ ನುಡಿಯರು.
ಲಿಂಗವಂತರ ನಡೆ ನುಡಿ ಆಚಾರ ಅನುಭವ ಆಯತ ಬೇರೆ ಕಾಣಿರಣ್ಣಾ.
ಶ್ರೀಗುರುಲಿಂಗದಿಂದಲುದಯಿಸಿ ಪ್ರಾಣಲಿಂಗಸಂಬಂಧಿಗಳಾದ

ಮಹಾಲಿಂಗವಂತರಿಗೆ ಪ್ರಾಣಲಿಂಗ, ಕಾಯಲಿಂಗ
ಭಕ್ತಕಾಯ ಮಮಕಾಯವಾಗಿ ದೇಹಾದಿ ತತ್ತ್ವವೆಲ್ಲಾ ಶಿವತತ್ತ್ವ, ಇದು ಕಾರಣ,
ಸರ್ವಾಂಗಲಿಂಗಮಹಾಮಹಿಮ ಲಿಂಗವಂತರ ಕ್ರೀಯೆಲ್ಲವೂ ಲಿಂಗಕ್ರೀ.
ಮುಟ್ಟಿದುದೆಲ್ಲಾ ಅರ್ಪಿತ, ಕೊಂಡುದೆಲ್ಲಾ ಪ್ರಸಾದ.
ಸದ್ಯೋನ್ಮುಕ್ತರು, ಸರ್ವಾಂಗಲಿಂಗವಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೭೧॥

೧೫೩೧
ವೇದವನೋದಿ ಕೇಳಿ
ವೇದದ ವರ್ಮವನರಿದ ಫಲ ದಾಸೋಹವಯ್ಯಾ.
ಶಾಸ್ತ್ರವನೋದಿ ಕೇಳಿ
ಶಾಸ್ತ್ರದ ವರ್ಮವನರಿದ ಫಲ ದಾಸೋಹವಯ್ಯಾ.
ಪುರಾಣವನೋದಿ ಕೇಳಿ
ಪುರಾಣದ ವರ್ಮವನರಿದ ಫಲ ದಾಸೋಹವಯ್ಯಾ.
ಆಗಮವನೋದಿ ಕೇಳಿ
ಆಗಮದ ವರ್ಮವನರಿದ ಫಲ ದಾಸೋಹವಯ್ಯಾ.
ಪುರಾತನರ ಗೀತ ವಚನ ಪ್ರಸಂಗಾನುಭವದಲ್ಲಿ ದೃಷ್ಟಫಲ
ದಾಸೋಹವಯ್ಯಾ.
ವೇದಶಾಸ್ತ್ರ ಪುರಾಣ ಆಗಮ ಪುರಾತನರ ಗೀತದ ವಚನ ಪ್ರಸಂಗವನರಿದು
ದಾಸೋಹವಿಲ್ಲದಿದ್ದಡೆ ಆ ಓದು ಗಿಳಿ ಓದಿದಂತೆ.
ಆ ಕೇಳುವೆ, ಮರುಳ ಕೇಳುವೆಯಂತೆ.
ಅವನೇತಕ್ಕೂ ಬಾತೆಯಲ್ಲಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೭೨॥

೧೫೩೨
ವೇದವನೋದಿ ಕೇಳಿದಡೇನು? ವೇದಜ್ಞನಪ್ಪನಲ್ಲದೆ ಭಕ್ತನಲ್ಲ.
ಶಾಸ್ತ್ರಗಳನೋದಿ ಕೇಳಿದಡೇನು? ಮಹಾಶಾಸ್ತ್ರಜ್ಞನಪ್ಪನಲ್ಲದೆ ಭಕ್ತನಲ್ಲ.
ಪುರಾಣವನೋದಿ ಕೇಳಿದಡೇನು? ಪುರಾಣಿಕನಪ್ಪನಲ್ಲದೆ ಭಕ್ತನಲ್ಲ.
ಆಗಮಂಗಳನೋದಿ ಕೇಳಿದಡೇನು? ಆಗಮಿಕನಪ್ಪನಲ್ಲದೆ ಭಕ್ತನಲ್ಲ.
ಇಂತೀ ಸರ್ವವಿದ್ಯೆಂಗಳನೋದಿ ಕೇಳಿದಡೇನು?
ಇದಿರ ಬೋಧಿಸಿ ಉದರವ ಹೊರೆವ
ಉದರಪೋಷಕನಪ್ಪನಲ್ಲದೆ ಭಕ್ತನಲ್ಲ.
ಯಮಬಾಧೆಗಂಜಿ ಧರ್ಮವ ಮಾಡಿದಡೆ

ಧರ್ಮಿಯಪ್ಪನಲ್ಲದೆ ಭಕ್ತನಲ್ಲ. ಸ್ವರ್ಗಭೋಗಿಯಪ್ಪನಲ್ಲದೆ ಭಕ್ತನಲ್ಲ.
ಇದು ಕಾರಣ,
ಶ್ರೀಗುರು ಲಿಂಗ ಜಂಗಮಕ್ಕೆ ತನು ಮನ ಧನವನರ್ಪಿಸುವ ಭಕ್ತಿವುಳ್ಳಡೆ
ಭಕ್ತದೇಹಿಕ ದೇವ ಪರಶಿವನು,
'ಭಕ್ತಕಾಯ ಮಮಕಾಯ' ಎಂದುದಾಗಿ.
'ಲಿಂಗಾಲಿಂಗೀ ಮಹಾಜೀವೀ' ಎಂದುದಾಗಿ
ಇಂತಪ್ಪ ಮಹಾಭಕ್ತಿಯುಳ್ಳ ಭಕ್ತನ ಸತ್ಯನೆಂಬೆ, ಮುಕ್ತನೆಂಬೆ,
ಜಂಗಮವೆಂಬೆ, ಪ್ರಸಾದಿಯೆಂಬೆ, ಪರಮಸುಖಿಯೆಂಬೆನು.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೭೩॥

೧೫೩೩
ವೇದವಾಕ್ಯ ವಿಚಾರಕ್ಕೆ ಬೀಜ,
ಶಾಸ್ತ್ರವಾಕ್ಯ ಸಂದೇಹಕ್ಕೆ ಬೀಜ,
ಪುರಾಣವಾಕ್ಯ ಪುಣ್ಯಕ್ಕೆ ಬೀಜ,
ಭಕ್ತಿಯ ಫಲ ಭವಕ್ಕೆ ಭೀಜ,
ಏಕೋಭಾವನಿಷ್ಠೆ ಸಮ್ಯಕ್‌ಜ್ಞಾನಕ್ಕೆ ಬೀಜ,
ಸಮ್ಯಕ್‌ಜ್ಞಾನ ಅದ್ವೈತಕ್ಕೆ ಬೀಜ,
ಅದ್ವೈತ ಅರಿವಿಂಗೆ ಬೀಜ.
ಅರಿವನಾರಡಿಗೊಂಡು ಕುರುಹಿಲ್ಲದ ಲಿಂಗದಲ್ಲಿ
ತೆರಹಿಲ್ಲದಿಪ್ಪಂದವನರಿಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೭೪॥

೧೫೩೪
ವೇದವಾವುದು? ವೇದ್ಯವಾವುದು? ಎಂದು ಭೇದವನರಿದಾತ ಕೃತಾರ್ಥನು.
ವೇದವೆಂಬುದಿದುವೆಂದು ವೇದಿಸಿದರು ನಮ್ಮ ಪುರಾತನರು:
ವೇದ್ಯ? 'ಓಂ ನಮಃ ಶಿವಾಯ' ಎಂಬ ಮಂತ್ರ.
ವೇದ್ಯರು? ನಮ್ಮ ಶರಣರು, ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ॥೨೭೫॥

೧೫೩೫
ವೇದಶಾಸ್ತ್ರಪುರಾಣಾಗಮಗ್ರಂಥಂಗಳ
ನೋಡಿದವರೆಲ್ಲರೇನು ಹಿರಿಯರೆಂಬೆನೆ? ಅಲ್ಲಲ್ಲ,. ನಿಲ್ಲು, ಮಾಣು.
ಅವರೇ ಹಿರಿಯರಾದಡೆ, [ನಟ್ಟುವೆ], ಗಳೆಯಾಟ,
ಮಿಣಿಯಾಟ, ಅದೃಶ್ಯಕರಣ, ಅಗ್ನಿಸ್ತಂಭ, ಆಕರ್ಷಣ,

ಚೌಷಷ್ಠಿಕಲಾವಿದ್ಯೆಯ ಸಾಧಿಸಿದ ಡೊಂಬನೇನು ಕಿರಿಯನೇ?
ಇದು ಹಿರಿದು ಕಿರಿದಿನ ಪರಿಯಲ್ಲ.
ಹಿರಿದು ಕಿರಿದಿನ ಪರಿ ಬೇರೆ ಕಾಣಿರಣ್ಣಾ.
ಇದು ಉದರಪೋಷಣವಿದ್ಯೆ ಎನಿಸುವುದು.
ಅವರನೆಂತು ಸರಿ ಎಂಬೆನಯ್ಯ, ಲಿಂಗವಂತಂಗೆ?
ಇದು ಕಾರಣ, ಗುಣ, ಜ್ಞಾನ, ಧರ್ಮ, ಆಚಾರ,
ಶೀಲ ಸಾಧಿಸಿದಾತನೇ ಹಿರಿಯ ಕಾಣಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೭೬॥

೧೫೩೬

ವೇದಶಾಸ್ತ್ರಾಗಮಪುರಾಣಿಯಾದವರಿಂದತ್ತತ್ತ ನೀನು.
ನಾದ ಬಿಂದು ಕಳಾತೀತ ಮೂರು ದೇವರರುವಿಂಗತ್ತತ್ತಗೋಚರ.
ಭೇದಿಸುವ ಭೇದಕರಿಗಭೇದ್ಯನು,
ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ. ॥೨೭೭॥

೧೫೩೭

ವೇದಾದಿ ಅಷ್ಟಾದಶವಿದ್ಯೆಗಳ ಸರ್ವಮಂತ್ರಗಳ
ಮೂಲವು ಶ್ರೀಪಂಚಾಕ್ಷರಿ.
ಶಿವಾದಿಸರ್ವತತ್ತ್ವ ಮೂಲವು,
ಶ್ರೀಗುರುಲಿಂಗಜಂಗಮ ಪ್ರಾಣಸರ್ವಮೂಲವು,
ಶ್ರೀಗುರು ಕರುಣಿಸಿದ ಮಹಾಲಿಂಗದೀಕ್ಷೆ ಶಿಕ್ಷೆ
ಸರ್ವಭೋಗಾದಿ ಭೋಗಂಗಳೆಲ್ಲವಕ್ಕೆಯು
ಶಿವನ ಸಾಕಾರಮೂರ್ತಿ ಮೂಲವು,
ಜಂಗಮ ಕೇವಲ ಮುಕ್ತಿಮೂಲವು,
ದಾಸೋಹ ಜ್ಞಾನಮೂಲವು,
ಶಿವನಾಣೆ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೭೮॥

೧೫೩೮

ವ್ಯಾಸಾದಿಗಳಂತೆ ಶ್ವಾನಜ್ಞಾನಿಗಳಪ್ಪರೆ ಸತ್ಯಶುದ್ಧಶರಣರು?
'ನ ದೇವಃ ಕೇಶವಾತ್ಪರಂ' ಎಂದ ವ್ಯಾಸ,
ತನ್ನ ತೋಳುಗಳನೆರಡನು ಹೋಗವೊಡನೆ
ಹಿಡಿಯರೆ ಅಂದು ಆಕಾಶಗಣಂಗಳು?
ಮರಳಿ ಈಶ್ವರನಲ್ಲದೆ ದೈವವಿಲ್ಲೆಂದು

ಶ್ರುತ್ಯರ್ಥವನರಿದು ದೇವಾರ್ಚನೆಯಂ ಮಾಡಲಾಗಿ
ಆ ವ್ಯಾಸನ ಎರಡು ಕರಂಗಳು ಬಂದು,
ಅಶೇಷವಹಂತಹ ಚರ್ಮ
ಈಶ್ವರನ ಆಲಯದ ಮುಂದೆ ಧ್ವಜಪತಾಕೆಗಳಾಗದೆ?
ಈರೇಳು ಲೋಕವು ಅರಿಯೆ.
ಅನಂತಪುರಾಣಾಗಮಗಳಲ್ಲಿ ಕೇಳಿರೆ:
ಈಶ್ವರಾರ್ಚನೆಯ ಮಾಡಿ ಮರಳಿ ವಿತಥವಾಗಿ
ಪರದಾರಕಿಚ್ಛೈಸಿದಡೆ ಇವಂಗಿದೆ ಪ್ರಿಯವೆಂದು
ಆ ಇಂದ್ರನ ಮೈಯೆಲ್ಲಾ ಅನಂಗನಹಂತಹ ಅಂಗವಾಗದೆ?
ಈರೇಳು ಭುವನವರಿಯೆ.
ಮರಳಿ ಈಶ್ವರಾರ್ಚನೆಯ ಮಾಡಲು
ಆ ಅಂಗದ ಯೋನಿ[ಕೂ]ಪೆಲ್ಲಾ ನಯನಂಗಳಾಗವೆ ಇಂದ್ರಂಗೆ?
ಇದನರಿದು ಶಿವಾರ್ಚನೆಯಂ ಮಾಡಿ
ಶಿವನವರಿಗೆ ಧನಸಹಿತ ತ್ರಿವಿಧವ ನಿವೇದಿಸುವುದು
ಶಿವಾಚಾರ ಕೇಳಿರಣ್ಣಾ. ಅರಿದರಿದು ಬರಿದೊರೆ ಹೋಗಬೇಡ.
ಋಷಿಗಳ ಶಿವಾರ್ಚನೆಯ ವಿಶೇಷವಹಂತಹ
ಫಲವ ಕೇಳಿರಣ್ಣಾ:
ಕೀಳುಗುಲದ ಋಷಿಗಳ ಕುಲನಾಮಂಗಳ ತೊಡೆದು
ಮೇಲುಗುಲನಾಮವ ಕೇಳಿರಣ್ಣಾ. ಅದು ಹೇಗೆಂದಡೆ:
ಮುಖದಿಂದುತ್ಪತ್ಯವಾದ ಬ್ರಾಹ್ಮಣನು
ಆ ಋಷಿಗಳ ಶಾಖೆಯಾದನು, ಅವರ ಗೋತ್ರವಾದನು.
ಶಿವಾಚಾರ ವಿಶೇಷವೊ? ಕುಲ ವಿಶೇಷವೊ? ಹೇಳಿರಣ್ಣಾ.
'ವರ್ಣಾನಾಂ ಬ್ರಾಹ್ಮಣೋ ಗುರುಃ'
ಎಂಬ ಕ್ರೂರಹೃದಯರ ಮಾತ ಕೇಳಲಾಗದು.
ಹೋಹೋ ಶಿವನ ಮುಖದಿಂದ ಹುಟ್ಟಿ
ಉತ್ತಮವಹಂತಹ ಬ್ರಾಹ್ಮಣಧರ್ಮದಲ್ಲಿ ಜನಿಸಿದಂತಹ ವರ್ಣಿಗಳು
ಕ್ಷತ್ರಿಯನ ಭಜಿಸ ಹೇಳಿತ್ತೆ ಈ ವೇದ?
'ಶಿವ ಏಕೋ ಧ್ಯೇಯಃ ಶಿವಂಕರಃ ಸರ್ವಮನ್ಯತ್ಪರಿತ್ಯಜೇತ್' ಎಂದುದಾಗಿ–
ಶಿವನನೆ ಧ್ಯಾನಿಸಿ, ಇತರ ದೇವತೆಗಳ ಬಿಡಹೇಳಿತ್ತಲ್ಲವೆ? ಅದಂತಿರಲಿ,
ಬಡಗಿ ಮಾಚಲದೇವಿಯ ಕುಲಜೆಯ ಮಾಡಿಹೆವೆಂದು
ಸತ್ತ ಕಪಿಲೆಯ ಕಡಿದು ಹಂಚಿ ತಿನ್ನ ಹೇಳಿತ್ತೆ ವೇದ? ಆಗದು ಆವದಿರ ಸಂಗ.
ಅಧಮರ ವರ್ಣಾಶ್ರಮಹೀನರ
ಕರ್ಮವ ಕಳೆದೆಹೆವೆಂದು ದತ್ತಪುತ್ರರಾಗಿ

ಹೊರಸಿ[ನಡಿ]ಯಲಿ ನುಸುಳ ಹೇಳಿತ್ತೇ ಆ ವೇದ? ಅದಂತಿರಲಿ,
ಭುಂಜಿಸಿ ಮುಕ್ತಿಯನಿತ್ತಿಹೆವೆಂದಡೆ,
ಹಲ ಕೆಲ ಕಾಲ ವಂದಿಸಿದ ಗೌತಮಂಗೆ
ಬಾರದೆ ಅಂದು ಗೋವಧೆ ? ಅದಂತಿರಲಿ
ಬ್ರಾಹ್ಮಣರೆ ದೈವವೆಂದು ದಾನಾದಿಗಳ ಮಾಡಿದ
ಕರ್ಣನ ಶಿರಕವಚ ಹೋಗದೆ ಜಗವರಿಯೆ?
ವಿಷ್ಣುದೈವವೆಂದರ್ಚಿಸಿದ ಬಲಿ ಬಂಧನಕ್ಕೆ ಬಾರನೆ ಮೂಜಗವರಿಯೆ?
ಶಿಬಿಯ ಮಾಂಸವ ಕೊಂಡು ಇತ್ತ ಮುಕ್ತಿಯ ಕೇಳಿರಣ್ಣಾ.
ಅವಂಗೆ ಬಂದ ವಿಧಿಯ ಹೇಳಲಾಗದು. ಅದಂತಿರಲಿ,
ಶಿವನ ಭಕ್ತರಿಗೆ ಪರಮಾಣುವಿನಷ್ಟು ಕಾಂಚನವನೀಯೆ
ಅಣಿಮಾದ್ಯಷ್ಟಮಹದೈಶ್ವರ್ಯವನೀವರು, ಮೇಲೆ ಮುಕ್ತಿಯಹುದು.
'ಸಕೃತ್ ಲಿಂಗಾರ್ಚಕೇ ದತ್ವಾ ಸುವರ್ಣಂ ಚಾಣುಮಾತ್ರಕಂ
ಭೂಲೋಕಾಧಿಪತಿರ್ಭೂತ್ವಾ ಶಿವ ಸಾಯುಜ್ಯಮಾಪ್ನುಯಾತ್'
ಎಂದುದಾಗಿ, ಅದಲ್ಲದೆ ಮತ್ತೆ ದಾನಪರಿಗ್ರಹಂಗಳಂ ಕೊಂಡ
ಕೆಲಬರ ಮುಕ್ತರ ಮಾಡಿ ಶಿವಲೋಕಕ್ಕೆ
ಕೊಂಡೊಯ್ದುದುಂಟಾದಡೆ ಹೇಳಿರಣ್ಣಾ?
'ನಿತ್ಯಂ ಲಿಂಗಾರ್ಚನಂ ಯಸ್ಯ ನಿತ್ಯಂ ಜಂಗಮಪೂಜನಂ
ನಿತ್ಯಂ ಗುರುಪದಧ್ಯಾನಂ ನಿತ್ಯಂ ನಿತ್ಯಂ ನ ಸಂಶಯಃ'
ಇದು ಕಾರಣ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಯ್ಯನ
ಶರಣಮಹಾತ್ಮೆಯನ್ನು ಯಜುರ್ವೇದ ಸಾಕ್ಷಿಯಾಗಿ ಪೇ[ಳ]ವೆ
ಕಾಶಿಯ ಕಾಂಡದಲ್ಲಿ. ॥೨೭೯॥

೧೫೩೯

ಶರಣನ ಇಂದ್ರಿಯ ಕರಣಂಗಳು ಶಿವಾಚಾರದಲ್ಲಿ
ವರ್ತಿಸುವ ಪರಿಯೆಂತೆಂದಡೆ:
ಶ್ರೋತ್ರ ತ್ವಕ್ಕು ನೇತ್ರ ಜಿಹ್ವೆ ಘ್ರಾಣ ಇಂತಿವು ಪಂಚಜ್ಞಾನೇಂದ್ರಿಯಂಗಳು,
ಇವಕ್ಕೆ ವಿವರ:
ಶ್ರೋತ್ರದಲ್ಲಿ ಗುರುವಚನ, ಶಿವಾಗಮ, ಶಿವಪುರಾಣ,
ಆದ್ಯರ ವಚನವಲ್ಲದೆ ಅನ್ಯವ ಕೇಳದಿಹ.
ತ್ವಕ್ಕಿನಲ್ಲಿ ಶ್ರೀವಿಭೂತಿ ರುದ್ರಾಕ್ಷಿ ಶಿವಲಿಂಗವಲ್ಲದೆ
ಅನ್ಯವ ಧರಿಸದಿಹ.
ನೇತ್ರದಲ್ಲಿ ಶಿವಲಿಂಗವಲ್ಲದೆ ಅನ್ಯವ ನೋಡದಿಹ.
ಜಿಹ್ವೆಯಲ್ಲಿ ಶಿವಮಂತ್ರವಲ್ಲದೆ ಅನ್ಯವ ಸ್ಮರಿಸದಿಹ.

ಘ್ರಾಣದಲ್ಲಿ ಶಿವಪ್ರಸಾದವಲ್ಲದೆ ಅನ್ಯವ ವಾಸಿಸದಿಹ.
ಇನ್ನು ಶಬ್ದ ಸ್ಪರ್ಶ ರೂಪ ರಸ ಗಂಧ ಇಂತಿವು
ಪಂಚವಿಷಯಂಗಳು, ಇವಕ್ಕೆ ವಿವರ:
ಶಬ್ದವೆ ಗುರು, ಸ್ಪರ್ಶವೆ ಲಿಂಗ, ರೂಪೆ ಶಿವಲಾಂಛನ,
ರಸವೆ ಶಿವಪ್ರಸಾದ, ಗಂಧವೆ ಶಿವಾನುಭಾವ,
ಇನ್ನು ವಾಕು, ಪಾಣಿ, ಪಾದ, ಪಾಯು, ಗುಹ್ಯ ಇಂತಿವು
ಪಂಚಕರ್ಮೇಂದ್ರಿಯಂಗಳು. ಇವಕ್ಕೆ ವಿವರ:
ಶಿವಯೆಂಬುದೆ ವಾಕು, ಶಿವಾಚಾರಸದ್ಭಕ್ತಿವಿಡಿವುದೆ ಪಾಣಿ,
ಗುರುಮಾರ್ಗಾಚಾರದಲ್ಲಿ ಆಚರಿಸುವುದೆ ಪಾದ,
ಅಧೋಗತಿಗಿಳಿವ ಮಾರ್ಗವ ಬಿಡುವುದೆ ಪಾಯು,
ಶಿವಾನುಭಾವಿಗಳ ಸತ್ಸಂಗದಲ್ಲಿ ಆನಂದಿಸುವುದೆ ಗುಹ್ಯ.
ಇನ್ನು ಜ್ಞಾನ ಮನ ಬುದ್ಧಿ ಚಿತ್ತ ಅಹಂಕಾರ ಇಂತಿವು
ಪಂಚಕರಣಂಗಳು, ಇವಕ್ಕೆ ವಿವರ:
ಶಿವಜ್ಞಾನವೆ ಜ್ಞಾನ, ಶಿವಧ್ಯಾನವೆ ಮನ,
ಶಿವಶರಣರಲ್ಲಿ ವಂಚನೆಯಿಲ್ಲದಿಹುದೆ ಬುದ್ಧಿ, ಶಿವದಾಸೋಹವೆ ಚಿತ್ತ,
ಶಿವೋಹಂ ಭಾವವೆ ಅಹಂಕಾರ.
ಇನ್ನು ಅನ್ನಮಯ ಪ್ರಾಣಮಯ ಮನೋಮಯ ವಿಜ್ಞಾನಮಯ
ಆನಂದಮಯ ಇಂತಿವು ಪಂಚಕೋಶಂಗಳು. ಇವಕ್ಕೆ ವಿವರ:
ಅನ್ನಮಯವೆ ಪ್ರಸಾದ, ಪ್ರಾಣಮಯವೆ ಲಿಂಗ,
ಮನೋಮಯವೆ ಶಿವಧ್ಯಾನ, ವಿಜ್ಞಾನಮಯವೆ ಶಿವಜ್ಞಾನ,
ಆನಂದಮಯವೆ ಶಿವಾನಂದಮಯವಾಗಿರ್ಪುದು,
ಇಂತಿ ಸರ್ವತತ್ವಂಗಳೆಲ್ಲವು ಲಿಂಗತತ್ವಂಗಳಾದ ಕಾರಣ
ಶಿವಶರಣಂಗೆ ಶಿವಧ್ಯಾನವಲ್ಲದೆ ಮತ್ತೊಂದ ಧ್ಯಾನವಿಲ್ಲವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೮೦॥

೧೫೪೦
ಶರಣರ ಕೂಡೆ ನುಡಿ ದಿಟವಲ್ಲ, ಮೇಲೆ ಇನ್ನೇನಾದೀತು?
ತನು ಸವೆಯದು, ಮನ ಸವೆಯದು, ಧನ ಸವೆಯದು,
ಸತ್ಯದ ನುಡಿ ಸಾಧ್ಯವಾಗದು.
ಕೇಳಿ ಕೇಳಿ, ಮೇಲೆ ಇನ್ನೇನಾದೀತು?
ಪುರಾತರ ಚರಿತ್ರವನರಿದು, ಅಸತ್ಯಕ್ಕೆ ಲಿಂಗ ಒಲಿಯನೆಂಬುದನರಿದು
ಅಸತ್ಯವನು [ನೀಗಿಸಿ] ವಾಙ್ಮನಪ್ರಾಣಾಧಿನಾಥ ಶರಣರಲ್ಲಿ
ಸತ್ಯ ಸಂಭಾಷಣೆಯ ಕರುಣಿಸುವುದು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೮೧॥

೧೫೪೧

ಶರಣರಲ್ಲದವರನಾಸೆಗೈದಡೆ ಕಕ್ಕುಲತೆಯಪ್ಪುದಲ್ಲದೆ ಕಾರ್ಯವಿಲ್ಲ,
ಆಸೆಗೈದಡೆ ನಿರಾಸೆಯಪ್ಪುದು.
ಶರಣರನಾಸೆಗೈದು ಬಂದ ಶಿವಶರಣಂಗೆ ಸತಿಯ ಕೊಟ್ಟರು,
ಸುತನ ಕೊಟ್ಟರು, ಧನವ ಕೊಟ್ಟರು,
ಅಸುವ ಕೊಟ್ಟರು, ಮನವ ಕೊಟ್ಟರು,
ಶರಣರ ಪರಿ ಆವ ಲೋಕದೊಳಗಿಲ್ಲ.
ಶರಣಭರಿತಲಿಂಗವಾಗಿ ಬೇಡಿತ್ತ ಕೊಡುವರಯ್ಯಾ ಶರಣರು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೮೨॥

೧೫೪೨

ಶರಣರ ಸಂಗ ಸಾಲೋಕ್ಯಪದವಯ್ಯಾ.
ಗಣಂಗಳ ಮುಖಾವಲೋಕನ ಪ್ರಿಯಸಂಭಾಷಣೆ
ಸಾಮೀಪ್ಯಪದವಯ್ಯ.
ಶ್ರೀವಿಭೂತಿ ರುದ್ರಾಕ್ಷಿ ಪ್ರಮಥರ ಶ್ರೀಮೂರ್ತಿಯ ಕಂಡು
ಮನದಲ್ಲಿ ಧರಿಸಿದಡೆ, ಸಾರೂಪ್ಯಪದವಯ್ಯಾ.
ಪುರಾತನರ ಶ್ರೀಪಾದಂಗಳಲ್ಲಿ ಎನ್ನ ಶಿರಸ್ಪರ್ಶನದಿಂದ
ಸಾಷ್ಟಾಂಗವೆರಗಲು, ಸಾಯುಜ್ಯಪದವಯ್ಯಾ.
ಇಂತೀ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯವೆಂಬ
ಚತುರ್ವಿಧಪದವೆನಗಾಯಿತ್ತಯ್ಯಾ ನಿಮ್ಮ ಗಣಂಗಳ ಕರುಣದಿಂದ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೮೩॥

೧೫೪೩

ಶರಣಲಿಂಗಸಂಬಂಧಿಯಾದಾತನು ತನ್ನಂಗದ ಲಿಂಗದಲ್ಲಿ
ಗೋಳಕ ಕಟಿ ಭಿನ್ನವಾದಲ್ಲಿ ಒಡನೆ ಪ್ರಾಣವಂ ಬಿಡು[ವುದ]ಲ್ಲದೆ
ಬಂಧಿಸಿ ಧರಿಸಿಕೊಂಡನಾದಡೆ,
ಜನ್ಮಜನ್ಮಾಂತರ ಸೂಕರನ ಬಸುರಲ್ಲಿ ಬಪ್ಪುದು ತಪ್ಪದು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೮೪॥

೧೫೪೪

ಶಿವ ಜಗವಾಗ ಬಲ್ಲ, ಶಿವ ಜಗವಾಗದಿರಲೂ ಬಲ್ಲ.
ಶಿವ ರೂಪಾಗ ಬಲ್ಲ, ಶಿವ ರೂಪಾಗದಿರಲೂ ಬಲ್ಲ.
ಶಿವ ಅಜಾಂಡಕೋಟಿಗಳ ಮಾಡಬಲ್ಲ, ಮಾಡದಿರಲೂ ಬಲ್ಲ.

ಶಿವ ಕೆಡಿಸಬಲ್ಲ, ಕೆಡಿಸದಿರಲೂ ಬಲ್ಲ.
ಶಿವ ಜಂಗಮವಾಗಿ ಪೂಜಿಸಬಲ್ಲ.
ಶಿವ ಲಿಂಗವಾಗಿ ತಾನೇ ಪೂಜೆಯ ಕೊಳಲೂ ಬಲ್ಲ.
ಶಿವ ಹೊರಗಾಗಿ ಮತ್ತನ್ಯವಿಲ್ಲವೆಂಬ ವೇದ ಉಂಟೇ?
ಎಂದಡೆ ಉಂಟು. ಅಥರ್ವವೇದ:
'ಶಿವೋ ಉಮಾ ಪಿತರೌ' ಎಂದುದಾಗಿ
ದೇವನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು,
ನಮಗೆಲ್ಲ ಮಾತಾಪಿತನು. ॥೨೮೫॥

೧೫೪೫

ಶಿವ ತನ್ನ ವಿನೋದಕ್ಕೆ ರಚಿಸಿದನು, ಅನಂತ ವಿಶ್ವವನು.
ರಚಿಸಿದವನು ವಿಶ್ವಕ್ಕೆ ಹೊರಗಾಗಿರ್ದನೆ? ಇಲ್ಲ.
ವಿಶ್ವಮಯ ತಾನಾದನು, ವಿಶ್ವವೆಲ್ಲವೂ ತಾನಾದಡೆ
ವಿಶ್ವದುತ್ಪತ್ತಿಸ್ಥಿತಿಲಯಕ್ಕೊಳಗಾದನೇ? ಇಲ್ಲ.
ಅದೇನು ಕಾರಣವೆಂದಡೆ;
ಅಜಾತನಾಗಿ ಉತ್ಪತ್ತಿ ಇಲ್ಲ, ಕರ್ಮರಹಿತನಾಗಿ ಸ್ಥಿತಿಗೊಳಗಲ್ಲ.
ಮರಣರಹಿತನಾಗಿ ಲಯಕ್ಕೊಳಗಲ್ಲ,
ಇಂತೀ ಗುಣತ್ರಯಂಗಳ ಹೊದ್ದಲರಿಯ.
ತಾನಲ್ಲದೆ ವಿಶ್ವಕ್ಕಾಧಾರವಿಲ್ಲಾಗಿ ದೂರಸ್ಥನಲ್ಲ.
ತನ್ನಲ್ಲಿ ತಾನಲ್ಲದ ಅನ್ಯವು ತೋರಲರಿಯದಾಗಿ, ಇದಿರಿಲ್ಲ.
ಇದಿರಿಲ್ಲಾಗಿ ವಿಶ್ವಮಯ ತಾನಾದುದೇ ಸತ್ಯ.
ಅರಸು ಕಾಲಾಳಾಗಬಲ್ಲ ತನ್ನ ವಿನೋದಕ್ಕೆ, ಮರಳಿ ಅರಸಾಗಬಲ್ಲ.
ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು,
ಜಗವಾಗಲೂ ಬಲ್ಲ, ಜಗವಾಗದಿರಲೂ ಬಲ್ಲನಯ್ಯ. ॥೨೮೬॥

೧೫೪೬

ಶಿವನು ನರಕಾಯವ ತೊಟ್ಟು ಗುರುರೂಪಾಗಿ ಮರ್ತ್ಯಕ್ಕೆ ಬಂದು
ಅಷ್ಟಾದಶಜಾತಿಯೊಳಗಿದ್ದಡೇನು ಮರ್ತ್ಯನೇ? ಅಲ್ಲ.
ಅದೆಂತೆಂದಡೆ: ಶಿವರಹಸ್ಯೇ
'ಗುರುದೇವೋ ಮಹಾದೇವೋ ಗುರುದೇವಸ್ಸದಾಶಿವಃ
ಗುರುದೇವಾತ್ಪರಂ ನಾಸ್ತಿ ತಸ್ಮೈ ಶ್ರೀಗುರವೇ ನಮಃ'
ಎಂದುದಾಗಿ, ಮಹಾದೇವನು ತಾನೇ–
'ಲಲಾಟಲೋಚನಂ ಚಾಂದ್ರೀಕಲಾಮಪಿ ಚ ದೋರ್ದ್ವಯು

ಅಂತರ್ನಿಧಾಯ ವರ್ತೇ[s]ಹಂ ಗುರುರೂಪೋ ಮಹೇಶ್ವರಿ' ಎಂದುದಾಗಿ,
ಶಿವನು ಗುರುರೂಪಾಗಿ ವರ್ತಿಸುತ್ತಿಹನು.
'ಪರಶಿವೋ ಗುರುಮೂರ್ತಿಶ್ಶಿಷ್ಯದೀಕ್ಷಾದಿಕಾರಣಾತ್
ಶಿಷ್ಯಾತೀತಂ ಮಹಾಚೋದ್ಯಂ ಚೋದ್ಯರೂಪಾಯ ವೈ ನಮಃ' ಎಂದುದಾಗಿ,
ಶಿಷ್ಯಂಗೆ ಕರುಣಿಸಿ ದೀಕ್ಷೆಯಂ ಮಾಡಬೇಕೆಂದು ಬಂದನಯ್ಯಾ,
ಮಹಾಕಾರುಣ್ಯಮೂರ್ತಿ ಪರಮಶಿವನು ತಾನೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೮೭॥

೧೫೪೭

ಶಿವನು ಸರ್ವಗತನು, ಸಕಲಬ್ರಹ್ಮಾಂಡಗಳಿಗೆಲ್ಲ ಸಕಲನೆಂದು ಹೇಳಿತ್ತು ಶ್ರುತಿ.
'ವಿಶ್ವತಶ್ಚಕ್ಷುರುತ ವಿಶ್ವಾಧಿಕೋ ರುದ್ರೋ
ಮಹಾಋಷಿಸ್ಸರ್ವೋ ಹಿ ರುದ್ರಃ' ಎಂದು ಶ್ರುತಿ
ಸಕಲಜೀವಚೈತನ್ಯ ಶಿವನೆಂದು ಹೇಳಿತ್ತು,
ಇಂತಪ್ಪ ಶಿವಲಿಂಗಾರ್ಚನೆಯ ಮಾಡುವ
ಸದ್ಭಕ್ತರ ಶ್ರೀಮೂರ್ತಿಗಿನ್ನು ಸರಿ ಉಂಟೆ?
'ವಾಚಾತೀತಂ ಮನೋತೀತಂ ಭಾವಾತೀತಂ ಪರಂ ಶಿವಂ
ಸರ್ವಶೂನ್ಯಂ ನಿರಾಕಾರಂ ನಿತ್ಯಂ ತತ್ಪರಮಂ ಪದಂ'
ಇಂತಪ್ಪ ಶರಣರ ಕಂಡಡೆ ಕರ್ಮಕ್ಷಯ,
ನೋಡಿ ನುಡಿಸಿ ಏಕರಾತ್ರಿ ಸಂಭಾಷಣೆಯ ಮಾಡಿದಡೆ
ಜನ್ಮಕರ್ಮನಿವೃತ್ತಿ, ಜೀವನ್ಮುಕ್ತನಹನು ಇದು ಸತ್ಯ ಕೇಳಿರಣ್ಣಾ.
'ದರ್ಶನಾತ್ ಶಿವಭಕ್ತಾನಾಂ ಸಕೃತ್ಸಂಭಾಷಣಾದಪಿ
ಅತಿರಾತ್ರಸ್ಯ ಯಜ್ಞಸ್ಯ ಫಲಂ ಭವತಿ ನಾರದ'
ಎಂದು ನಾರದೀಯ ಬೋಧೆಯಲ್ಲಿ ಈಶ್ವರನು ಹೇಳಿಹನು.
ಇಂತಪ್ಪ ಈಶ್ವರನ ಕಾಣವು ವೇದಂಗಳು.
ಇಂತು ವೇದಕ್ಕತೀತವಹಂತಹ ಶಿವಶರಣರ
ಮಹಾತ್ಮೆಯ ಹೊಗಳಲಿಕ್ಕೆ ವೇದಕ್ಕಳವಲ್ಲ,
ಮಂದಮತಿ ಮಾನವರ ಮಾತದಂತಿರಲಿ.
ಶಿವಶರಣರ ಮಹಾಮಹಿಮೆಗೆ ನಮೋ ನಮೋ ಎನುತಿಪ್ಪೆ ಕಾಣಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೮೮॥

೧೫೪೮

ಶಿವನೆ, ನಿಮ್ಮ ನಾ ಬಲ್ಲೆನು.
'ಗುರುದೇವೋ ಮಹಾದೇವೋ' ಎಂದುದಾಗಿ

ಶ್ರೀಗುರು ರೂಪಾಗಿ ಬಂದು ದೀಕ್ಷೆಯಂ ಮಾಡಿ
ಶಿವಲಿಂಗವ ಬಿಜಯಂಗೈಸಿ ಕೊಟ್ಟಿರಿ, ಜಂಗಮವ ತೋರಿದಿರಿ.
ಇದು ಕಾರಣ, ನಿಮ್ಮ ನಾ ಬಲ್ಲೆನು, ಎನ್ನನೂ ನೀವು ಬಲ್ಲಿರಿ.
ನಿಮ್ಮ ಶಿಶುವೆಂದು ಕರುಣಿಸಿ ಪ್ರಸಾದವನಿಕ್ಕಿ ರಕ್ಷಿಸಿದಿರಿ.
ಇದು ಕಾರಣದಿಂದವೂ ನಿಮ್ಮ ನಾ ಬಲ್ಲೆನು, ಎನ್ನನೂ ನೀವು ಬಲ್ಲಿರಿ.
ಮತ್ತೆ ಮರೆಮಾಡಿ,
ಜ್ಞಾನವನೂ ಅಜ್ಞಾನವನೂ, ಭಕ್ತಿಯನೂ ಅಭಕ್ತಿಯನೂ
ಸುಖವನೂ ದುಃಖವನೂ ಒಡ್ಡಿ ಕಾಡಿದಿರಯ್ಯಾ.
ಇವೆಲ್ಲವಕ್ಕೆಯೂ ನೀವೆ ಕಾರಣ.
ಇದು ಕಾರಣ, ನಿಮ್ಮ ಬೇರಬಲ್ಲವರಿಗೆ ಎಲೆಯ ತೋರಿ
ಆಳವಾಡಿ ಕಾಡುವರೆ? ಕಾಡದಿರಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೮೯॥

೧೩೪೯
'ಶಿವಂ ಪರಾತ್ಪರಂ ಸೂಕ್ಷ್ಮಂ ನಿತ್ಯಂ ಸರ್ವಗತಾವ್ಯಯಮ್
ಅನಿಂದಿತಮನೌಪಮ್ಯಮಪ್ರಮೇಯಮನಾಮಯಮ್'
ಎಂದು ವೇದಾಗಮಗಳು ಹೇಳಿದ ಹಾಗೆ
ಶಿವಶಿವಾ ಹರಹರಾ ಎಂದೆನ್ನದೆ
ಭೃಗು ಶಾಪದಿಂದ ಭವಕ್ಕೆ ಬಂದು ಸತ್ತು ಕೆಟ್ಟು ಹೋದ.
ದಶರಥರಾಯನು ನಾಚಿಕೆಯಿಲ್ಲದೆ
ರಾಮ ರಾಮ ಎಂದು ನೆನೆದರೂ, ಆ ರಾಮ,
ರಾವಣನ ಕೊಂದ ಬ್ರಹ್ಮಹತ್ಯಾದೋಷಕ್ಕೆ
ಅನೇಕ ಶಿವಲಿಂಗಗಳ ಪ್ರತಿಷ್ಠೆಯ ಮಾಡಿ ಪೂಜಿಸಿದ.
ಹರಿಯು ಆ ಮಹಾಲಿಂಗವ ನೆನೆವುದಕ್ಕೆ
ನಾಲಗೆ ಮೂಗನಂಜುತ್ತ ಇಹನು.
ಕೃಷ್ಣನ ಅಂಗಾಲಕಣ್ಣ ಬೇಡನೆಚ್ಚು ಕೊಂದನೆಂದರೆ,
ನಾಚದೆ ಪರಿಣಮಿಸುತ್ತಿಹರು.
ನಾರಸಿಂಹನವತಾರವ ಶರಭರುದ್ರ ತೀರ್ಚಿಸಿದನೆಂದರೆ ಉರಿದೇಳುತ್ತಿಹರು.
ಹರಿ ಗೋವಳರೊಡನುಂಡಯೆಂದರೆ ಪರಿಣಮಿಸಿ ಸಂತೋಷವಹರು.
ಆ ಹರಿ ರಾಮೇಶ್ವರದೇವರ ಪ್ರಸಾದವ ಕೊಂಡನೆಂದರೆ
ಅವಮಾನಿಸುತ್ತಿಹರು.
ಸತ್ತು ಕೆಟ್ಟು ಹುಟ್ಟಿದ ಅಜ್ಞಾನಿ ವಸುದೇವನ ಮಗ
ಹರಿಯೆಂದರೆ ನಲಿದುಬ್ಬುವರು.

ಆ ಹರಿ ಮಹಾದೇವನ ಮಗನೆಂದರೆ ಸಿಡಿಮಿಡಿಗೊಂಬರು.
ಹಲವು ಗಂಡರ ನೆರೆದ ಕುಂತಿಯ ಕಾಲಿಗೆ
ಹರಿ ಎರಗಿದನೆಂದರೆ ನಲಿದುಬ್ಬಿ ಕೊಂಡಾಡುವರು.
ಆ ಹರಿ ಕಾಮಿತಫಲದಾಯ[ಕ]ನಾದ ಶಿವನ ಶ್ರೀಪಾದಕ್ಕೆ
ನಯನಕಮಲಮನರ್ಪಿಸಿ ಚಕ್ರಮಂ ಪಿಡಿದನೆಂದರೆ
ಚಿಂತಿಸಿ [ಕರ]ಕರಸುತ್ತಿಹರು.
ದ್ವಾರವತಿ ನೀರಿಲಿ ನೆರೆದಾಗ, ಕೃಷ್ಣನ ಹದಿನಾರುಸಾವಿರ ಸ್ತ್ರೀಯರಂ
ಹೊಲೆಬೇಡರು ಸೆರೆಯನೊಯ್ದುದಕ್ಕಾಗಿ
ಹೀನಜಾತಿಯ ಬಸುರಲ್ಲಿ ಉತ್ತಮಸ್ತ್ರೀಯರು
ಹುಟ್ಟುವರೆಂದು ನಲಿದಾಡುವರು.
ಮಹಾಲಕ್ಷ್ಮಿ ಸರ್ವರೊಡೆಯ ಶಿವನ ದಾಸಿಯೆಂದರೆ
ಅಲಗು ತಾಕಿದಂತೆ ನೋವುತಿಹರು.
ಶಿವಲಿಂಗವ ತಪಧ್ಯಾನದಿಂದರ್ಚಿಸಿ ಪೂಜಿಸಿ ಪಡೆದರು
ಏಕಾದಶರುದ್ರರಾದಿಯಾದ ರುದ್ರಗಣಂಗಳು.
ಬ್ರಹ್ಮವಿಷ್ಣುರುಗಳು ಇಂದ್ರಾದಿ ದಿಕ್ಪಾಲರು ರವಿಚಂದ್ರಾದಿಗಳು
ಶಿವನ ಪೂಜಿಸಿ ಕಾಮಿತಫಲಪದವಿಯ ಪಡೆದರಯ್ಯ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೯೦॥

೧೫೫೦

ಶಿವನೇ ದೈವ, ಶಿವಭಕ್ತನೇ ಕುಲಜ, ಷಡಕ್ಷರವೇ ಮಂತ್ರ,
ಕೊಲ್ಲದಿರ್ಪುದೇ ಧರ್ಮ, ಅಧರ್ಮದಿಂದ ಬಂದುದ ಒಲ್ಲದಿಪ್ಪುದೇ ನೇಮ,
ಆಶೆ ಇಲ್ಲದಿಪ್ಪುದೇ ತಪ, ರೋಷವಿಲ್ಲದಿಪ್ಪುದೇ ಜಪ,
ವಂಚನೆ ಇಲ್ಲದಿಪ್ಪುದೇ ಭಕ್ತಿ, ಹೆಚ್ಚು ಕುಂದಿಲ್ಲದಿಪ್ಪುದೇ ಸಮಯಾಚಾರ.
ಇದು ಸತ್ಯ, ಶಿವಬಲ್ಲ, ಶಿವನಾಣೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೯೧॥

೧೫೫೧

ಶಿವಭಕ್ತನ ಕಂಡಲ್ಲಿ ಪಾಪ ಕೆಡುವುದು
'ಉಪಪಾತಕ ಕೋಟೀನಾಂ ಬ್ರಹ್ಮಹತ್ಯಶತಾನಿ ಚ
ದಹತ್ಯಶೇಷಪಾಪಾನಿ ಶಿವಭಕ್ತಸ್ಯ ದರ್ಶನಂ'
ಎಂದು, ಪ್ರಿಯಸಂಭಾಷಣೆಯಿಂದ ಕಾಮಿತ ಫಲವಪ್ಪುದು.
ಆ ಪ್ರಸಾದಮಹಿಮನ ಪ್ರಸಾದದಿಂದ ಕೇವಲ ಮುಕ್ತಿಯಪ್ಪುದು.
ಇದು ಸತ್ಯ, ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೯೨॥

೧೫೫೨
ಶಿವಭಕ್ತನೆ ಕುಲಜ, ಅಧಮದೈವಕ್ಕೆರಗುವನೆ ಅಕ್ಕುಲಜ.
ಪಟ್ಟಕ್ಕೆ ಯೋಗವಾದವನೆ ರಾಯ.
ರಣವಿಜಯನೆ ಕ್ಷತ್ರಿಯ, ವ್ಯವಹಾರಿಯೆ ವೈಶ್ಯ, ಆರಂಬವ ಮಾಡುವವನೆ ಶೂದ್ರ
ಶಿವಾಗಮದಲ್ಲಿಹಾತನೆ ಬ್ರಾಹ್ಮಣ, ಶಿವಭಕ್ತಿಹೀನನೆ ಶ್ವಪಚ.
"ಸತ್ಕುಲಂ ದುಃಕುಲಂ ವಾಪಿ ಶಿವಭಕ್ತಿ ಸಮೇಳನಂ
ತಪಸಾ ಬ್ರಾಹ್ಮಣೋ ಭೂತ್ವ ತಸ್ಯ ಜಾತೀ ನಕಾರಯೇತ್"
ಎಂದುದಾಗಿ, ಆವ ಜಾತಿಯಾದಡು ಆಗಲಿ ಶಿವಭಕ್ತನೆ ಬ್ರಾಹ್ಮಣ. ಅದೆಂತೆಂದೊಡೆ:
ಸಾಂಖ್ಯ ಶ್ವಪಚ, ವಾಲ್ಮೀಕಿ ಬೇಡ,
ವ್ಯಾಸ ಕಬ್ಬಲಿಗ, ಅಗಸ್ತ್ಯ ಕುಂಭಜ,
ಕೌಂಡಿಲ್ಯ ನಾಯಿಂದ, ದಧೀಚಿ ಕಂಚಗಾರ,
ಕಾಶ್ಯಪ ಕಮ್ಮಾರ, ದೂರ್ವಾಸ ಮುಚ್ಚಿಗ,
ವಶಿಷ್ಠ ವೇಶ್ಯೆಯ ಮಗ, ಶುನಕಮುನಿ ನಾಯಮಗ,
ಗಾರ್ಗ್ಯ ಕತ್ತೆಯ ಮಗ, ಗೌತಮ ಮೊಲದ ಮಗ,
ಮಾಂಡವ್ಯ ಕಪ್ಪೆಯ ಮಗ, ಶೃಂಗಮುನಿ ಹುಲ್ಲೆಯ ಮಗ,
ತೃಣಬಿಂದುಮುನಿ ತೃಣದ ಮಗ, ನಾರದ ಅಸಗ,
ಮಾರ್ಕಂಡೇಯ ಹೊಲತಿಯ ಮಗ, ಮಾತಂಗ ಹೊಲೆಯ,
ಭಾರದ್ವಾಜ ಮುನಿಜಗವರಿಯೆ ಮಾದಗಿತ್ತಿಯ ಮಗ,
ಇಂತೀ ಮಹಾಮುನಿಜನಂಗಳೆಲ್ಲ
ವಿಭೂತಿ ರುದ್ರಾಕ್ಷೀಯಂ ಧರಿಸಿ, ಪಂಚಾಕ್ಷರಿಯಂ ಜಪಿಸಿ,
ಶಿವಲಿಂಗಭಕ್ತರಾದ ಕಾರಣ ಪೂರ್ವಗುಣವಳಿದು ಬ್ರಾಹ್ಮಣರಾದರು.
ಶಿವಭಕ್ತಿಯಿಲ್ಲದ ವಿಪ್ರ ಶ್ವಪಚಗಿಂದ ಅಧಮ.
ಅದೆಂತೆದೊಡೆ:
ನಳಚಕ್ರವರ್ತಿ ಹೊನ್ನ ಗೋದಾನವಂ ಕೊಡುವಲ್ಲಿ
ವಿಪ್ರರೆಲ್ಲಾ ಗೋವ ಕಡಿದು ವಿಭಾಗವ ಮಾಡಿಕೊಂಬೂದ
ಶ್ವಪಚರು ಕೇಳಿ ಓಡಿ ಬಂದು,
ಸತ್ತುದು ನಮಗೆ ಸಲುವದು, ಸಾಯದುದು ನಿಮಗೆ ಸಲುವದು
ಎಂದು ನ್ಯಾಯವಿಚಾರದಲ್ಲಿ ಶ್ವಪಚರು ಕೊಂಡೊಯ್ಯುತ್ತಿರಲು
ಮಾತಂಗಿಯ ಗರ್ಭಸಂಭವರೆಂಬ ಶ್ರುತಿಯ ವಿಪ್ರರು ತಿಳಿದು ನೋಡಿ
ಮಾತಂಗಿಯ ಮಕ್ಕಳು ಶ್ವಪಚರು,
ರೇಣುಕಾದೇವಿಯ ಮಕ್ಕಳು ವಿಪ್ರರು.
ವಿಪ್ರರು ಶ್ವಪಚರು [ಜಮದಗ್ನಿಗೆ ಹುಟ್ಟಿದ ಕಾರಣ
ತಮತಮಗೆ ದಾಯಾದ್ಯಭಾಗ ಸಲ್ವುದು–

ಎಂದು ಕೋಡು ಕೊಳಗ ಬಾಲವ ವಿಭಾಗವ ಮಾಡಿಕೊಂಡ ಕಾರಣ ಕರ್ಮಚಾಂಡಾಲರಾದರು.
"ಜಾತಿಚಾಂಡಾಲಕಾನಂದಂ ದೋಷಂ ತತ್ರ ನವಿದ್ಯತೇ
ಕರ್ಮಚಾಂಡಲ ವಿಪ್ರಣಾಂ। ನರಕೆ ಕಾಲಮಕ್ಷಯಂ"
ಎಂದು ಸತ್ತ ಪಶುವ ತಿಂಬ ಹೊಲೆಯಂಗೆ ದೋಷವಿಲ್ಲ.
ಗುದ್ದಿ ಗುದ್ದಿ ಬಾಧಿಸಿ ಹೋತ ಕೊಂದು ತಿಂದು
ಸುರೆಯಂ ಕುಡಿದ ಶ್ವಪಚರಿಗಿಂದ ಅಧಮ ಪಾತಕರಾದ ವಿಪ್ರರು
ಶಿವಭಕ್ತರ ಕುಲವ ಜರೆಯಲುಂಟೆ?
ರೋಮಜ ಮೊದಲಾದ ಮುನಿಜನಂಗಳು
ಹರಿ ಬ್ರಹ್ಮೇಂದ್ರಾದಿ ದೇವಗಣಂಗಳು
ಶಿವಲಿಂಗ ಪ್ರಸಾದವ ಕೊಂಡು ಉತ್ತಮ ಪುರುಷರಾದರು.
ಇವರೆಲ್ಲರಿಗೆಯೂ ಶಿವಭಕ್ತನೆ ಅಧಿಕವೆಂದು
ಶಿವನು ಚೆನ್ನಯ್ಯನ ಪ್ರಸಾದವ ಕೊಂಡನಯ್ಯ.
ನಿಮ್ಮನರ್ಚಿಸಲು ಸಾವಿರ ಹಸ್ತವನುಳ್ಳ ಬಾಣಂಗೆ ತೀರದು,
ನಿಮ್ಮನರ್ಚಿಸಲು ಸಾವಿರ ನೇತ್ರವುಳ್ಳ ಶಕ್ತಿಗೆ ನಿರೀಕ್ಷಿಸಬಾರದು.
ನಿಮ್ಮಂಪ್ರಿಯ ಕೀರ್ತಿಯ ಸಾವಿರ ಜಿಹ್ವೆಯುಳ್ಳ ಫಣಿ ಕೀರ್ತಿಸಲಾರಂ
ಮಹಾಘನವೆಂತೋ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೯೩॥

೧೫೫೩
ಶಿವಭಕ್ತರ ಮಠವಲ್ಲದೆ ಒಲ್ಲೆನೆಂದು ಅರಸಿಕೊಂಡು ಹೋದಲ್ಲಿ,
ಆ ಭಕ್ತರು ಕಾಣುತ್ತ ಆದರಣೆಯಿಂದ ಸಾಷ್ಟಾಂಗವೆರಗಿ
ಶರಣೆಂದು ಪಾದಾರ್ಚನೆಯಂ ಮಾಡಿ, ವಿಭೂತಿಯಂ ಕೊಟ್ಟು,
'ನಿಮ್ಮ ಲಿಂಗದ ಆಳಿವನು ದೇವಾ' ಎಂದು ಬಿನ್ನೈಸಿದಲ್ಲಿ,
ಭಕ್ತರ ನಡೆ ಭಕ್ತರ ನುಡಿಯ ವಿಚಾರಿಸಿದಡೆ ಪ್ರಥಮಪಾತಕ,
ಭಾಂಡ ಭಾಜನದ ಶುದ್ಧಿಯನರಸಿದಡೆ ಎರಡನೆಯ ಪಾತಕ,
ಜಲಶುದ್ಧಿಯನರಸಿದಡೆ ಮೂರನೆಯ ಪಾತಕ,
ವಾಕ್‌ಶುದ್ಧಿಯನರಸಿದಡೆ ನಾಲ್ಕನೆಯ ಪಾತಕ,
ಆ ಭಕ್ತರ ಹಸ್ತ ಮುಟ್ಟಲಾಗದೆಂದಡೆ ಐದನೆಯ ಪಾತಕ.
ಇಂತೀ ಪಂಚಮಹಾಪಾತಕಕ್ಕೆ ಗುರಿಯಾದವರು
ನಿಮ್ಮನೆತ್ತ ಬಲ್ಲರಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೯೪॥

೧೫೫೪
ಶಿವಲಿಂಗದ ಮಹಾತ್ಮೆಯನು, ಶಿವಲಿಂಗದ ವರ್ಮವನು
ಶಿವಲಿಂಗದ ನಿಶ್ಚಯವನು ಅದಾರಯ್ಯಾ ಬಲ್ಲವರು?

ಅದಾರಯ್ಯಾ ಅರಿದವರು, ಶ್ರೀಗುರು ತೋರಿ ಕೊಡದನ್ನಕ್ಕರ?
'ಸರ್ವೈಶ್ವರ್ಯಸಂಪನ್ನಂ ಮಧ್ಯಧ್ರುವತತ್ವಾಧಿಕಂ' ಎಂದುದಾಗಿ
'ಅಣೋರಣೀಯಾನ್ ಮಹತೋ ಮಹೀಯಾನ್' ಎಂದುದಾಗಿ
'ಯತೋ ವಾಚೋ ನಿವರ್ತಂತೇ' ಎಂದುದಾಗಿ,
'ಅತ್ಯತಿಷ್ಠದ್ದಶಾಂಗುಲಮ್' ಎಂದುದಾಗಿ,
ಈ ಪ್ರಕಾರದಲ್ಲಿ ವೇದಾಗಮಂಗಳು ಸಾರುತ್ತಿರಲು,
ಲಿಂಗವನು ಹರಿಬ್ರಹ್ಮಾದಿ ದೇವದಾನವ ಮಾನವರಿಗೆಯು ಅರಿಯಬಾರದು.
'ಚಕಿತಮಭಿದತ್ತೇ ಶ್ರುತಿರಪಿ' ಎಂದುದಾಗಿ
ವೇದ ಪುರುಷರಿಗೆಯು ಅರಿಯಬಾರದು.
ಅರಿಯಬಾರದ ವಸ್ತುವ ರೂಪಿಸಲೆಂತೂ ಬಾರದು.
ರೂಪಿಸಬಾರದ ವಸ್ತುವ ಪೂಜಿಸಲೆಂತುಬಹುದು?
ಪೂಜೆಗಿಲ್ಲವಾಗಿ ಭಕ್ತಿಗಿಲ್ಲ, ಭಕ್ತಿಗಿಲ್ಲವಾಗಿ ಪ್ರಸಾದಕ್ಕಿಲ್ಲ, ಪ್ರಸಾದಕ್ಕಿಲ್ಲವಾಗಿ ಮುಕ್ತಿಗಿಲ್ಲ.
ಮುಕ್ತಿಗಿಲ್ಲದೆ ದೇವದಾನವ ಮಾನವರೆಲ್ಲರು ಕೆಡುವರು ಕೆಡುವರು.
ಕೆಡದಂತೆ ಮಾಡಿ ರಕ್ಷಿಸಿದನು ಸದ್ಗುರು, ಮಹಾಗುರು, ಶ್ರೀಗುರು.
'ನ ಗುರೋರಧಿಕಂ' ಎಂದುದಾಗಿ ಮಹಾಗುರು ಶಾಂತಮೂರ್ತಿ
ಕೃಪಾಮೂರ್ತಿ ಲಿಂಗಪ್ರತಿಷ್ಠೆಯಂ ಮಾಡಿದನು. ಅದೆಂತೆನಲು ಕೇಳಿರೆ:
'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ
ನಾದಬಿಂದುಕಲಾತೀತಂ ಗುರುಣಾ ಲಿಂಗಮುದ್ಭವಂ' ಎಂದುದಾಗಿ,
'ಸದ್ಗರೋರ್ಲಿಂಗಭಾವಂ ಚ ಸರ್ವ ಬ್ರಹ್ಮಾಂಡವಾಸಿನಾಂ
ಸರ್ವಲೋಕಸ್ಯ ವಾಸಸ್ಯ ಮುಕ್ತಿಕ್ಷೇತ್ರ ಸುವಾಸಿನಾಂ' ಎಂದುದಾಗಿ,
ಸದ್ಗುರೋರ್ದೀಯತೇ ಲಿಂಗಂ ಸದ್ಗುರೋರ್ದೀಯತೇ ಕ್ರಿಯಾ
'ಸದ್ಗುರೋರ್ದೀಯತೇ ಮಂತ್ರಂ ಸದ್ಗುರುಸ್ಸರ್ವಕಾರಣಂ' ಎಂದುದಾಗಿ,
ಸರ್ವಲೋಕಕ್ಕೆಯು ಸರ್ವರಿಗೆಯು ಲಿಂಗಪ್ರತಿಷ್ಠೆಯಂ ಮಾಡಿಕೊಟ್ಟನು.
'ಅರೂಪೇ ಭಾವನೋ ನಾಸ್ತಿ ಯದೃಷ್ಟಂ ತದ್ವಿನಶ್ಯತಿ
ದೃಶ್ಯಾದೃಶ್ಯ ಸ್ವರೂಪತ್ವಂ ತಥಾಪ್ಯೇವಂ ಸದಾಭ್ಯಸೇತ್' ಎಂದುದಾಗಿ,
ನಿಃಕಲ ಅರೂಪ ನಿರವಯ ಧ್ಯಾನಪೂಜೆಗನುವಲ್ಲ,
ಸಕಲ ತತ್ವಸಾಮಾನ್ಯನೆಂದು ಸಕಲನಿಷ್ಕಲವನೊಂದಡಗಿ ಮಾಡಿದನು.
'ಲಿಂಗಂ ತಾಪತ್ರಯಹರಂ ಲಿಂಗಂ ದಾರಿದ್ರ್ಯನಾಶನಂ
ಲಿಂಗಂ ಪಾಪವಿನಾಶಂ ಚ ಲಿಂಗಂ ಸರ್ವತ್ರ ಸಾಧನಂ' ಎಂದುದಾಗಿ,
ಲಿಂಗವು ಪರಂಜ್ಯೋತಿ ಲಿಂಗವು ಪರಬ್ರಹ್ಮವೆಂದು ಲಿಂಗವನೆ ಪೂಜಿಸಿ,
ಭಕ್ತಿಪ್ರಸಾದ ಮುಕ್ತಿಯ ಪಡೆಯಲೆಂದು
ಮಹಾಘನ ಗುರು ಲಿಂಗಪ್ರತಿಷ್ಠೆಯ ಮಾಡಿ ತೋರಿಕೊಟ್ಟನು.
ಅದೆಂತೆಂದಡೆ–

'ಬ್ರಹ್ಮಾವಿಷ್ಣುಶ್ಚ ರುದ್ರಶ್ಚ ಈಶ್ವರಶ್ಚ ಸದಾಶಿವಃ
ಸರ್ವೇ ಲಿಂಗಾರ್ಚನಾರತಾ ಜಾತಾಸ್ತೇ ಲಿಂಗಪೂಜಕಾಃ' ಮತ್ತಂ–
'ಗೌರೀಪತಿರುಮಾನಾಥೋ ಅಂಬಿಕಾ ಪಾರ್ವತೀಪತಿಃ
ಗಂಗಾಪತಿರ್ಮಹಾದೇವೋ ಸತತಂ ಲಿಂಗಪೂಜಕಾಃ' ಎಂದುದಾಗಿ,
ಈ ಮಹಾಪುರುಷರಪ್ಪ ದೇವಗಣ ರುದ್ರಗಣ ಪ್ರಮಥಗಣಂಗಳು
ವಿಷ್ಣ್ವಾದಿ ದೇವದಾನವ ಮಾನವಾದಿಗಳು
ಮಹಾಲಿಂಗವನೆ ಧ್ಯಾನಿಸಿ, ಪೂಜಿಸಿ,
ಪರಮಸುಖ ಪರಿಣಾಮವ ಹಡೆದರೆಂದು ಮಾಡಿದನು,
ಕೇವಲ ಸದ್ಭಕ್ತ ಜನಂಗಳಿಗೆ. ಅದೆಂತೆಂದಡೆ–
'ಇಷ್ಟಂ ಪ್ರಾಣಂ ತಥಾ ಭಾವಂ ತ್ರಿಧಾ ಏಕಂ ವರಾನನೇ' ಎಂದುದಾಗಿ,
ಆ ಸದ್ಗುರು ಆ ಪರಶಿವನನು ತತ್ಪ್ರಾಣವನು
ಏಕೀಭವಿಸಿ ಸದ್ಭಾವದಿಂ ಲಿಂಗಪ್ರತಿಷ್ಠೆಯಂ ಮಾಡಿ,
ಲಿಂಗವಾಗಿ ಕರಸ್ಥಲದಲ್ಲಿ ಬಿಜಯಂಗೈದು,
ಅಂತರಂಗ ಬಹಿರಂಗ ಭರಿತನಾಗಿ ಪೂಜೆಗೊಳಲೆಂದು ಕರುಣಿಸಿದನು.
ಮತ್ತಂ 'ಏಕಮೂರ್ತಿಸ್ತ್ರಿಧಾ ಭೇದಃ' ಎಂದುದಾಗಿ,
ಗುರುಲಿಂಗ ಜಂಗಮಲಿಂಗ ಪರಶಿವಲಿಂಗ ಒಂದೆ.
'ದೇಶಿಕಶ್ಚರಲಿಂಗಂ ಚ ತ್ರಿವಿಧಂ ಲಿಂಗಮುಚ್ಯತೇ' ಎಂದುದಾಗಿ,
ಲಿಂಗದ ವರ್ಮವನು ಲಿಂಗದ ಸ್ವರೂಪವನು ಲಿಂಗದ ನಿಶ್ಚಯವನು
ಆದಿಯಲ್ಲು ಧ್ಯಾನಪೂಜೆಯ ಮಾಡಿದವರನು,
ಭಕ್ತಿಪ್ರಸಾದ ಮುಕ್ತಿಯ ಪಡೆದವರನು
ವೇದ ಶಾಸ್ತ್ರ ಪುರಾಣಾಗಮಂಗಳು ಹೇಳುತ್ತಿವೆ.
ಶಿವನ ವಾಕ್ಯಂಗಳಿಗಿದೆ ದಿಟ.
ಮನವೆ ನಂಬು, ಕೆಡಬೇಡ ಕೆಡಬೇಡ,
ಮಹಾಸದ್ಭಕ್ತರ ನಂಬುವುದು,
ಶಿವಲಿಂಗಾರ್ಚನೆಯ ನಿರಂತರ ಮಾಡುವುದು.
ಇದು ನಿಶ್ಚಯವು ಶಿವನು ಬಲ್ಲನಯ್ಯ.
ಈ ಕ್ರಿಯೆಯಲ್ಲಿ ಲಿಂಗಜಂಗಮನರಿತು, ವಿಶ್ವಾಸಮಂ ಮಾಡಿ,
ಕೇವಲ ಸದ್ಭಕ್ತಿ ಕ್ರೀಯನರಿದು, ವರ್ಮವನರಿದು,
ಸದ್ಭಾವದಿಂದ ಲಿಂಗಾರ್ಚನೆಯಂ ಮಾಡುವುದಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೯೫॥

೧೫೫೫
ಶಿವಲಿಂಗಧಾರಣವ ಮಾಡಬೇಕೆಂದುದು ಶ್ರುತಿ.
ಶಿವಶಿವಾ! ಶಿವಲಿಂಗವನೆ ಧರಿಸಬೇಕೆಂದುದಥರ್ವಣಾ.

‘ತದಂತರ್ ಗ್ರಹಣಾ’ಯೆಂಬ ಶ್ರುತಿ.
ಉರಿಲಿಂಗಫೆದ್ದಿಪ್ರಿಯ ವಿಶ್ವೇಶ್ವರಾ,
ಲಿಂಗವನೆ ಧರಿಸೆಂದು, ಶಿವಲಿಂಗಧಾರಣವೆ ಪಥವೆಂದುದಥರ್ವಣಾ. ॥೨೯೬॥

೧೫೫೬
ಶಿವಶರಣರಿಗೆ ಶರಣೆನ್ನದೆ
ಅಹಂಕಾರದಿಂದ ನಾರಸಿಂಹ ಶಿರವ ಹೋಗಾಡಿಕೊಂಡ.
ಶಿವಶರಣರಿಗೆ ಶರಣೆನ್ನದೆ
ಅಹಂಕಾರದಿಂದ ದಕ್ಷ ಶಿರವ ಹೋಗಾಡಿಕೊಂಡ.
ಶಿವಶರಣರಿಗೆ ಶರಣೆನ್ನದೆ
ಅಹಂಕರಿಸಿ ಇಂದ್ರ ಮಹದೈಶ್ವರ್ಯವ ಹೋಗಾಡಿಕೊಂಡ.
ಇವರುಗಳು ಶಿವಶರಣರಿಗೆ ಶರಣೆನ್ನದೆ
ಅಹಂಕರಿಸಿ ಅನೇಕ ಪರಿಯಲ್ಲಿ ಭಂಗಿತರಾದರು.
ಅರಿದು ಅಹಂಕಾರವಡಗಿ ಶರಣರಿಗೆ ಶರಣೆಂದು
ಮರಳಿ ನಿಜಪದಂಗಳ ಪಡೆದು ಭಕ್ತರಾದರು.
ಇದನರಿದು ಅಹಂಕರಿಸಿ ಕೆಡದೆ, ಶಿವಶರಣರಿಗೆ ಶರಣೆಂದು
ಭಕ್ತಿಯನೂ ಮಹಾಪದವನೂ ಮುಕ್ತಿಯನೂ ಹಡೆವುದಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೨೯೭॥

೧೫೫೭
ಶಿವ ಶಿವ! ಪರಶಿವಮೂರ್ತಿ ಮಹಾಲಿಂಗವು
ಕರುಣಿಸಿದ ಕರುಣದಿಂದ ನಾನಂಜೆ ಅಂಜೆನು.
ವಾಙ್ಮನೋತೀತವು ಲಿಂಗವಾಗಿ
ಅಂಗದ ಮೇಲೆ ನಿರಂತರವಾಗಿ ಸನ್ನಿಹಿತವಾಗಿ
ಅಂಗಲಿಂಗ ಗುರುಲಿಂಗ ಏಕವಾಗಿ
[ಪ್ರಾ]ಣಲಿಂಗವಾದನಾಗಿ [ಪ್ರಾ]ಣಲಿಂಗ.
ಜಿಹ್ವೆಯಲ್ಲಿ ಮಂತ್ರಮಯ ಗುರುಲಿಂಗವಾಗಿ
ಬಿಜಯಂಗೈದನಾಗಿ ಜಿಹ್ವೆಲಿಂಗ.
ಕಂಗಳಲ್ಲಿ ಶಿವಲಿಂಗಮೂರ್ತಿಯಂ ತುಂಬಿದನಾಗಿ ಕಂಗಳುಲಿಂಗ.
ತ್ವಕ್ಕಿನಲ್ಲಿ ಜಂಗಮಲಿಂಗಮೂರ್ತಿಯಂ ತುಂಬಿದನಾಗಿ ತ್ವಕ್ಕುಲಿಂಗ.
ಕಿವಿಗಳಲ್ಲಿ ಲಿಂಗಮಹಾತ್ಮೆಯ ಶ್ರುತಿ ಪುರಾಣ
ಪುರಾತರ ವಚನಂಗಳ ತುಂಬಿದನಾಗಿ ಶ್ರೋತ್ರಲಿಂಗವು.
ಶಿವನ ಶ್ರೀಪಾದಕಮಲಪ್ರಸಾದವ
ವಾಸಿಸುವಂತೆ ಮಾಡಿದನಾಗಿ ಘ್ರಾಣಲಿಂಗವು.

ಲಿಂಗವ ನಿರಂತರ ಸ್ಪರ್ಶವ ಮಾಡುವಂತೆ
ಮಾಡಿದನಾಗಿ ಹಸ್ತಲಿಂಗವಾದವು.
ಲಿಂಗವನೆ ಭಾವಿಸುವಂತೆ ಮಾಡಿದನಾಗಿ ಭಾವಲಿಂಗವು.
ಮನದಲ್ಲಿ ನೆನಹು ಭರಿತವಾಗಿ ಮನಲಿಂಗವು.
ಸುವಿಚಾರ ಸಂಪೂರ್ಣವ ಗ್ರಹಿಸಿತ್ತಾಗಿ ಬುದ್ಧಿಲಿಂಗವು.
ನಿಶ್ಚಯಪದವ ಹಿಡಿಯಿತ್ತಾಗಿ ಅಹಂಕಾರಲಿಂಗವು.
ನಿರಂತರ ಮರೆಯದಂತೆ ಮಾಡಿದನಾಗಿ ಚಿತ್ತಲಿಂಗವು.
ಇಂತು ಅಂತರಂಗ ಬಹಿರಂಗ ಲಿಂಗ, ಸರ್ವಾಂಗಲಿಂಗವ ಮಾಡಿ,
ಸದ್ಗುರು ಲಿಂಗವಾಗಿ ಜಂಗಮಲಿಂಗವಾಗಿ
ಪ್ರಾಣಲಿಂಗವಾಗಿ ಪ್ರಸಾದಲಿಂಗವಾಗಿ ಪ್ರಸಾದವನಿಕ್ಕಿ ಸಲಹಿದನು.
ಈ ಮಹಾಘನಪರಿಣಾಮವ ಶಿವ ಶಿವ! ನೀನೇ ಬಲ್ಲೆ
ಶಿವ ಶಿವ! ಮಹಾದೇವ, ಶಿವ ಶಿವ! ಮಹಾದೇವ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ ನೀನೇ ಬಲ್ಲೆ. ॥೨೯೮॥

೧೫೫೮

ಶಿವ ಶಿವ! ಮಹಾದೇವ,
ಎನ್ನ ಗುಣಾವಗುಣವರಿಯದೆ ಇದಿರ ಗುಣವ ವಿಚಾರಿಸುವೆ.
ಅವರು ವಂಚಿಸಿಹರೆಂದು ಕೊಡರೆಂದು ನಿಂದಿಸಿಹರೆಂದು,
ಮಾತಾಪಿತ ಸತಿಸುತರುಗಳಿಗೆ ಸ್ನೇಹಿಸಿಹರೆಂದು,
ಶಿವ ಶಿವಾ! ಬುದ್ಧಿಯನರಿಯದೆ
ನಾ ನಿಮಗೆ ವಂಚನೆಯಿಲ್ಲದೆ ಒಲಿದೆನಾದಡೆ ನೀವೆನಗೆ ಒಳ್ಳಿದರು.
'ಸತ್ಯಭಾವಿ ಮಹತ್ಸತ್ಯಂ' ಎಂಬುದಾಗಿ,
ನಿಮ್ಮಡಿಗಳ ಸ್ನೇಹಿತರು, ಎನಗೆ ಒಳ್ಳಿದರು.
ಸ್ನೇಹ ತಾತ್ಪರ್ಯವ ಮಾಡಿ ಬೇಡಿತ್ತನಿತ್ತು ದೇವಾ ಎನುತಿಪ್ಪರು.
ಒಳ್ಳಿತ್ತು ಹೊಲ್ಲೆಹ ಎನ್ನಲ್ಲಿ, ಇದಿರಿಂಗೆ ಅದು ಸ್ವಭಾವ ಗುಣ.
ಎನ್ನ ದುರ್ಗುಣಂಗಳ ಕಳೆದು ಸದ್ಗುಣವ ಮಾಡಿ
ನಿನ್ನೊಳಗುಮಾಡಿಕೊಳ್ಳಯ್ಯಾ,
ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ॥೨೯೯॥

೧೫೫೯

ಶಿವ ಶಿವ! ಮಹಾದೇವ ಶಿವನೇ
ನೀನು ಸರ್ವಜ್ಞನಾಗಿ ಎನ್ನನೂ ನೀನು ಬಲ್ಲೆ.
ಈ ಪರಿಯನು ಹರಿಬ್ರಹ್ಮದೇವದಾನವಮಾನವರು

ಅರಿಯದೆ ಭ್ರಮಿಸುತ್ತಮಿಪ್ಪರು.
ಈ ವಿಧಿಯನು ತಾತ್ಪರ್ಯವೆಂದರಿದೆನಾಗಿ
ಸದ್ಯೋನ್ಮುಕ್ತನು, ನಿರಂತರ ಪರಿಣಾಮಿ, ಪರಮಸುಖಸ್ವರೂ[ಪಿ]
ನಾನೇ ಅಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೦೦॥

೧೫೬೦
ಶಿವ ಶಿವ! ಮಾಹೇಶ್ವರರ ಮಹಾತ್ಮೆಯನೇನೆಂದುಪಮಿಸಬಹುದಯ್ಯಾ,
ವಾಙ್ಮನೋತೀತರು.
ಕೋಟಿ ಕೋಟಿಯಾಯುಷ್ಯ ಕೋಟಿ ಕೋಟಿ ಜಿಹ್ವೆಯುಳ್ಳರೆಯೂ
ಸ್ತುತಿಸಲರಿಯದು.
'ಶಂಭೋರ್ಮಾಹಾತ್ಮ್ಯಮಣುಪ್ರಮಾಣಜಾನಂತಃ'
ಎಂದು ಲಿಂಗದ ಮಹಾತ್ಮೆಯನು ಅಣುಪ್ರಮಾಣವೂ ಅರಿಯಬಾರದೆಂದಡೆ
ಲಿಂಗವಂತರ ಮಹಾತ್ಮೆಯನೇನೆಂದುಪಮಿಸಬಹುದಯ್ಯಾ!
'ಲಿಂಗಾಲಿಂಗೀ ಮಹಜ್ಜೀವೀ ಲಿಂಗಾಲಿಂಗೀ ತು ರಕ್ಷಕಃ
ಲಿಂಗಾಲಿಂಗೀ ಮಮ ಸ್ವಾಮೀ ಲಿಂಗಾಲಿಂಗೀ ಮನೋಹರಃ'
ಈ ಪರಿ ದೇಹಲಿಂಗಕ್ಕೆ ಪ್ರಾಣಲಿಂಗಕ್ಕೆ ತಾನಾಗಿಹ
ಲಿಂಗವಂತನ ಮಹಾತ್ಮೆಯನೇನೆಂದುಪಮಿಸಬಹುದಯ್ಯಾ!
ಶಿವನೇ ಬಲ್ಲ, ಶಿವನೇ ಬಲ್ಲ.
'ಮದ್ಭಕ್ತಜನಮಾಹಾತ್ಮ್ಯಂ ಕೋ ವಾ ಜಾನಾತಿ ತತ್ತ್ವತಃ
ಜಾನೇ[S]ಹಂ ತ್ವಂ ತು ಜಾನಾಸಿ ನಂದೀ ಜಾನಾತಿ ವಾ ಗುಹಃ'
ಶಿವನು, ನಂದೀಶ್ವರ, ಗುಹನು ಇವರೇ ಬಲ್ಲರು.
ಸಜ್ಜನಶುದ್ಧಶಿವಾಚಾರಸಂಪನ್ನರಪ್ಪ ನಮ್ಮ ಸದ್ಭಕ್ತರೇ ಬಲ್ಲರು.
ಸಾಮಾನ್ಯ ತರದ ದೇವದಾನವ ಮಾನವರಿಗೆಯೂ ಅರಿಯಬಾರದು.
ಅದೆಂತೆನಲು ಕೇಳಿರೆ:
ಬ್ರಹ್ಮ ವಿಷ್ಣು ಇಂದ್ರ ಚಂದ್ರ ರವಿ ಕಾಮ ದಕ್ಷ
ಮೊದಲಾದ ದೇವಜಾತಿಗಳು, ತಾರಕ ರಾವಣಾದಿ ದಾನವರು,
ವ್ಯಾಸಋಷಿಯರುಗಳು, ದಕ್ಷಾಧ್ವರಕ್ಕೆ ಬಂದ ಋಷಿಗಳನೇಕರು
ವೇದಶಾಸ್ತ್ರಪುರಾಣ ಆಗಮಾದಿಯಾದ ಅಷ್ಟಾದಶವಿದ್ಯಂಗಳನೂ ಓದಿ ಕೇಳಿ
ತಮ್ಮನು ಕೇಳಿದವರಿಗೆಯೂ ಹೇಳಿ, ಸರ್ವಜ್ಞರೆನಿಸಿಕೊಂಡರು.
ಮಹದೈಶ್ವರ್ಯಸಂಪನ್ನರಾಗಿ ಮದಂಗಳು ಹೆಚ್ಚಿ
ಶಿವನನು ಮರೆದರು.
'ಅಹಂ ಬ್ರಹ್ಮ' ಎಂದು ಪರಧನ ಪರಸ್ತ್ರೀಯರಿಗೆ ಅಳುಪಿದರು.
ಶಿವಮಾಹೇಶ್ವರನಿಂದೆಯಂ ಮಾಡಿದರು.

ಈ ಪರಿಯಲೂ ತಪ್ಪಿ ನಡೆದು, ತಪ್ಪಿ ನುಡಿದು
ಹಸ್ತಚ್ಛೇದನ ಶಿರಚ್ಛೇದನವ ಮಾಡಿಕೊಂಡು ಹೋದರು.
ಅನೇಕ ಪರಿಯಲೂ ಭಂಗಿತರಾದರು. ಮಾನಹಾನಿ ಹೊಂದಿದರು,
ಕಷ್ಟಜನ್ಮಂಗಳಲ್ಲಿ ಜನಿಸಿದರು.
ಮರಳಿ ಮತ್ತೆ ಅರಿದು ಶಿವಾರಾಧನೆಯ ಮಾಡಿ, ಶಿವಸ್ತೋತ್ರಮಂ ಮಾಡಿ
ಮಾಹೇಶ್ವರರ ಪೂಜಿಸಿ, ಮರಳಿ ನಿಜಪದಂಗಳ ಹಡೆದರು.
ಈ ಪರಿಯ, ಅರಿವು ಮರವೆಯುಳ್ಳ ದ್ವಂದ್ವಗ್ರಸ್ತರು ಬಲ್ಲರೆ?
ಮಾಹೇಶ್ವರರ ಮಹಾತ್ಮೆಯ ನಮ್ಮ ಸದ್ಭಕ್ತರೇ ಬಲ್ಲರು.
ಅದೆಂತೆಂದಡೆ ಕೇಳಿರೆ:
ವೇದಾದಿ ಅಷ್ಟದಶ ವಿದ್ಯಾ ಪರಿಚಿತರು,
ಅಂತಾಗಿ ಎಮ್ಮ ಮಾಹೇಶ್ವರರೇ ಬಲ್ಲರು.
ಉಳಿದ ದೇವ ದಾನವ ಮಾನವರುಗಳಿಗೆಯೂ ಅರಿಯಬಾರದು.
ಅಂತಪ್ಪವರಿಗೆ ಆ ವಿಧಿ.
ಇನ್ನು ಅಲ್ಪಾಯುಷ್ಯರಪ್ಪ ಮನುಷ್ಯರುಗಳಿಗೆ
ವೇದಶಾಸ್ತ್ರ ಪುರಾಣಂಗಳ ಬಹಳ ಓದಲಿಕೆ ತೆರಹಿಲ್ಲ.
ಕಿಂಚಿತ್ತೋದಿದರೂ ಕೇಳಿದರೂ ಇಲ್ಲ, ಮಹಾಜ್ಞಾನಿಗಳ ಸಂಗವಿಲ್ಲ.
ಅಹಂಕಾರಿಗಳು ಮದಾಂಧರು ಶಾಪಹತರು ಜಡಜೀವಿಗಳು
ಎಂತರಿಯಬಹುದಯ್ಯಾ.
ಶಿವಮಾಹೇಶ್ವರರ ಮಹಿಮೆಯನರಿಯದ ದೋಷಿಗಳ ಕೂಡೆ ಸಂವಾದಿಸಲುಂಟೆ?
ಅವರುಗಳ ಮನದನುವರಿತು, ಅರಿವಿನ ಹವಣಿಂದರಿದು,
ಅವಾಚಕವಾಗಿಪ್ಪುದಲ್ಲದೆ ಆ ಪಾಪಿಗಳ ನೋಡಲಾಗದು, ನುಡಿಸಲಾಗದು,
ಸಮಾನದಲ್ಲಿ ಕುಳ್ಳಿರ್ದು ತರ್ಕಿಸಲಾಗದು.
ಶಿವಜ್ಞಾನವಿಲ್ಲದವರ ಕೂಡೆ ನುಡಿಯಲು ತೆರಹುಂಟೆ ಶಿವಮಾಹೇಶ್ವರಂಗೆ?
[ಅವರು] ಶಿವಲಿಂಗಾರ್ಚನೆಯಂ ಮಾಡಿ
ಮಹಾನುಭಾವರ ಸಂಗದಲ್ಲಿ ಅನುಭಾವಸಂಗದಲ್ಲಿಹರಲ್ಲದೆ
ಕೇಳಿರಣ್ಣಾ, ದೇವದಾನವ ಮಾನವರ ಪರಿಯಲ್ಲ.
ಎಮ್ಮ ಮಾಹೇಶ್ವರರು ಸರ್ವಾಚಾರಸಂಪನ್ನರು ಸರ್ವವಿದ್ಯಾಪರೀಕ್ಷಿತರು,
ತಾತ್ಪರ್ಯಕಳಾಗ್ರಾಹಿಗಳು, ವಿಶ್ವಾಧಿಕರು,
ಎಮ್ಮ ಮಾಹೇಶ್ವರರು ಪರಧನ ಪರಸ್ತ್ರೀಯನೊಲ್ಲರು,
ಸತ್ಯರು ನಿತ್ಯರು ನಿರುಪಾಧಿಕರು ನಿರಾಶಾಸಂಪೂರ್ಣರು ಪರಿಣಾಮಿಗಳು.
ಅವರ ಸಂಗದಿಂದ ಗುರುಸಿದ್ಧಿ ಲಿಂಗಸಿದ್ಧಿ ಜಂಗಮಸಿದ್ಧಿ
ಪರಸಿದ್ಧಿ ಪದಸಿದ್ಧಿ ಸರ್ವಸಿದ್ಧಿ ಮಹಾಸಿದ್ಧಿ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೦೧॥

೧೫೬೧

ಶಿವಶಿವಾ! ನೀನೆನ್ನ ಮನವ ನೋಡಿಹೆನೆಂಬೆ. ಎನ್ನ ಗುಣಾವಗುಣವ ಹಿಡಿವೆ.
ಮನವಾರು? ನೀನಾರು? ಎಂಬುದನರಿಯಾ.
ನೀನರಿಯದಿದ್ದಡೆ ನಾನರಿಯೆನೆ? ನಾನರಿಯದಿದ್ದಡೆ ನೀನರಿಯಾ?
ಎಂದೆನಗೆ ನೀನು ಪ್ರಾಣಲಿಂಗವಾದೆ, ಅಂದೇ ಲಿಂಗಪ್ರಾಣಿಯಾದೆನು ನಾನು.
ಇನ್ನು ಮನಸಿನ್ನಾರದು ಹೇಳಾ?
ಅದು ಕಾರಣ ದ್ವಂದ್ವಕರ್ಮ ಮುನ್ನವೇ ನಾಸ್ತಿ.
ಇದನು ಶ್ರೀಗುರು ಲಿಂಗ ಜಂಗಮದ ಪ್ರಸಾದವೆಂದ ಶಾಸ್ತ್ರಪುರಾಣಾಗಮಂಗಳು
ಈಸ ಬಲ್ಲುದನಾ ತೋರಲೇಕಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೦೨॥

೧೫೬೨

ಶಿವ ಶಿವಾ, ಬಸವಣ್ಣನೇ ಗುರುತತ್ತ್ವವುಳ್ಳ ಮಹಾವಸ್ತುವಾಗಿ
ಶ್ರೀಗುರುಲಿಂಗವೂ ಬಸವಣ್ಣನೇ.
ಶಿವಸುಖಸಂಪನ್ನನಾಗಿ ಶಿವಲಿಂಗವೂ ಬಸವಣ್ಣನೇ.
ಜಂಗಮಪ್ರಾಣಿಯಾಗಿ, ಜಂಗಮಲಿಂಗವೂ ಬಸವಣ್ಣನೇ.
ಪ್ರಸಾದಗ್ರಾಹಕನಾಗಿ, ಪ್ರಸಾದಲಿಂಗವೂ ಬಸವಣ್ಣನೇ.
ಭಾವಶುದ್ಧವುಳ್ಳ ಮಹಾನುಭಾವಿಯಾಗಿ, ಭಾವಲಿಂಗವೂ ಬಸವಣ್ಣನೇ.
ಪಂಚಾಚಾರ ನಿಯತಾತ್ಮನಾಗಿ, ಆಚಾರಲಿಂಗವೂ ಬಸವಣ್ಣನೇ.
ಗುರುಲಿಂಗಜಂಗಮಕ್ಕೆ, ಎನಗೆ ಇಷ್ಟವಾಗಿ, ಇಷ್ಟಲಿಂಗವೂ ಬಸವಣ್ಣನೇ.
ಇಂತೀ ಚತುರ್ವಿಧ ಪ್ರಾಣವಾಗಿ, ಪ್ರಾಣಲಿಂಗವೂ ಬಸವಣ್ಣನೇ.
ಮಹಾಮಹಿಮನೂ ಬಸವಣ್ಣನೇ.
ಮಹಾವಸ್ತುವ ಗರ್ಭೀಕರಿಸಿಕೊಂಡಿಪ್ಪಾತನೂ ಬಸವಣ್ಣನೇ.
ಮಹಾಸತ್ಯನೂ ಬಸವಣ್ಣನೇ, ಮಹಾನಿತ್ಯನೂ ಬಸವಣ್ಣನೇ.
ಮಹಾಶಾಂತನೂ ಬಸವಣ್ಣನೇ, ಮಹಾಸುಖಿಯೂ ಬಸವಣ್ಣನೇ.
ಮಹಾಪರಿಣಾಮಿಯೂ ಬಸವಣ್ಣನೇ, ಮಹಾಲಿಂಗವೂ ಬಸವಣ್ಣನೇ.
ಇಂತೀ ನವವಿಧಲಿಂಗವೂ ಬಸವಣ್ಣನೇ.
ಇಂತಿವನೆಲ್ಲವನೊಳಕೊಂಡು ಎನ್ನ ಕರಸ್ಥಲಕ್ಕೆ ಬಂದು
ಎನಗೆ ಪ್ರಸಾದವನಿಕ್ಕಿ ಸಲಹಿದನಯ್ಯಾ ಬಸವಣ್ಣನು.
ಇದು ಕಾರಣ, ಅನವರತ ನಾನು ಬಸವಾ, ಬಸವಾ, ಬಸವಯ್ಯಾ,
ಬಸವ ಗುರುವೇ, ಬಸವಲಿಂಗವೇ, ಬಸವ ತಂದೆಯೇ
ಬಸವಪ್ರಭುವೇ ನಮೋ ನಮೋ ಎನುತಿರ್ದೆನಯ್ಯಾ.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೦೩॥

೧೫೬೩
ಶಿವ ಶಿವಾ, ಲಿಂಗವಂತರ ಚಿತ್ತಕ್ಕೆ, ಲಿಂಗದ ಚಿತ್ತಕ್ಕೆ
ಬಹಹಾಂಗೆ ನುಡಿದು ನಡೆದು
ಸದ್ಭಕ್ತಿಯ ಮಾಡಿ ಸದ್ಭಕ್ತರೆನಿಸಿಕೊಳ್ಳಿರೆ, ಮೂಕರಾಗಿಯಿರದೆ.
ಹಿಡಿವುದ ಹಿಡಿಯದೆ, ಬಿಡುವುದ ಬಿಡದೆ ನಗೆಗೆಡೆಯಾದಿರಿ,
ಅಭಕ್ತರಾದಿರಿ, ನರಕಕ್ಕೆ ಹೋದಿರಿ.
ಹಿಡಿವುದಾವುದೆಂದಡೆ:
ಗುರುಲಿಂಗಜಂಗಮ ಒಂದೆಂದು ನಂಬಿ
ಲಿಂಗವಿದ್ದುದೆಲ್ಲಾಲಿಂಗವೆಂದು ನಂಬಿ
ತನು ಮನ ಧನ ವಂಚನೆಯಿಲ್ಲದೆ ಅರ್ಪಿಸಿ
ಶ್ರೀಗುರುಲಿಂಗಜಂಗಮದ ಶ್ರೀಪಾದವನು
ತನು ಮನ ಧನದಲ್ಲಿ ಹಿಡಿವುದು.
ಪರಸ್ತ್ರೀ ಪರಧನ ಪರದೈವವನು, ಮನೋವಾಕ್ಕಾಯದಲ್ಲಿ
ಅಣುರೇಣು ಮಾತ್ರ ಆಸೆದೋರದೆ ಬಿಡುವುದು.
ಇವ ಬಿಟ್ಟು ನಡೆ[ದುದೆ] ನಡೆ, ಇವ ಬಿಟ್ಟೆನೆಂಬ ಸತ್ಯದ ನುಡಿಯೇ ನುಡಿ.
ಇದೇ ಆಚಾರ, ಇದೇ ವ್ರತ, ಇದೇ ಶೀಲ
ಇದೇ ಭಕ್ತಿಯ ಕುಳ, ಇದೇ ಶಿವಭಕ್ತಿಸ್ಥಳ,
ಇದೇ ಸತ್ಕ್ರಿಯಾ, ಈ ಸತ್ಕ್ರಿಯೆಯಲ್ಲಿ ನಡೆದಾತನೇ ಭಕ್ತನು.
ಆತನೇ ಮುಕ್ತನಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೦೪॥

೧೫೬೪
ಶಿವಾಚಾರ ಶಿವಕಾರ್ಯಕ್ಕೆ ವಕ್ರವಾದವರ,
ಗುರುಲಿಂಗಜಂಗಮವ ನಿಂದಿಸಿ ನುಡಿದವರ,
ಬಾಯ ಸೀಳಿ ನಾಲಗೆಯ ಕಿತ್ತು ಕೊಲುವೆನು. ಅದೆಂತೆಂದಡೆ:
'ಯೋ ವಾಪ್ಯುತ್ಪಾಟಯೇಜ್ಜಿಹ್ವಾಂ ಶಿವನಿಂದಾರತಸ್ಯ ತು
ತ್ರಿಸಪ್ತಕುಲಮುದ್ಧರೇತ್ ಶಿವಲೋಕೇ ಮಹೀಯತೇ'
ಎಂದುದಾಗಿ, ಮತ್ತಂ
ಶಿವಭಕ್ತನಿಂದೆಯನು ಎನ್ನ ಕಿವಿಯಲ್ಲಿ ಕೇಳಿ,
ಆ ನಿಂದಕರ ಕೊಲ್ಲುವೆನು, ಅಲ್ಲದಿರ್ದಡೆ ನಾನು ಸಾವೆನು.
ಅದೆಂತೆಂದಡೆ:
'ಶ್ರುತ್ವಾ ನಿಂದಾಂ ಶಿವಸ್ಯಾಥ ತತ್‌ಕ್ಷಣಾದ್ದೇಹಮುತ್ಸೃಜೇತ್
ತಸ್ಯ ದೇಹನಿಹಂತಾ ಚೇತ್ ರುದ್ರಲೋಕಂ ಸ ಗಚ್ಛತಿ' ಎಂದುದಾಗಿ,

ಇದನರಿತು ಶಿವನಿಂದಕರ ಸಂಹರಿಸಿದಲ್ಲದೆ
ಎನಗೆಸಂತೋಷವಿಲ್ಲವಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೦೫॥

೧೫೬೫
ಶಿಷ್ಯನ ಗುರುತ್ವವನು, ಗುರುವಿನ ಮಹತ್ವವನು,
ಗುರು ಶಿಷ್ಯನಾದ ಪರಿಯನು,
ಶಿಷ್ಯ ಗುರುವಾದ ಪರಿಯನು, ಆರಯ್ಯ ಬಲ್ಲವರು?
ವಾಙ್ಮನೋತೀತ ಉಪಮಿಸಬಾರದು ಮಹಾಕ್ರೀಯನು.
ಭಕ್ತಿಯಿಂದ ಗುರು ಭಕ್ತ ವತ್ಸಲನಾಗಿ ಶಿಷ್ಯನಾದ ಪರಿ
ಬೀಜವೃಕ್ಷನ್ಯಾಯದಂತೆ ಅವಿನಾಭಾವವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೦೬॥

೧೫೬೬
ಶೀಲ ಸಮಾನವಿಲ್ಲೆಂದು ಅಲಿಂಗವಂತರ ಮಗಳಿಗೆ
ಉದ್ದೇಶದಿಂದ ಲಿಂಗಸ್ವಾಯತವ ಮಾಡಲು ಆಚಾರವಲ್ಲ.
ಅದೇನು ಕಾರಣವೆಂದಡೆ, ಅದು ಶಿವಾಚಾರಕ್ಕೆ ಸಲ್ಲದಾಗಿ,
ಮುಂದೆ ಗುರೂಪದೇಶಕ್ಕೆ ದೂರವಾಗಿ.
ಚಿತ್ತಶುದ್ಧದಿಂದ ಸತ್ಯಸದಾಚಾರವ ಬಯಸಿ ಬಂದು ಕೇಳಿದಡೆ
ತನ್ನ ಕೈಯ ಧನವ ವೆಚ್ಚಿಸಿ
ಗುರುದೀಕ್ಷೆ ಲಿಂಗಸ್ವಾಯತವ ಮಾಡಿಸುವುದು ಸದಾಚಾರ.
ಈ ಗುಣವುಳ್ಳಾತನೇ ಲಿಂಗದ ವರ್ಮಿಗನು,
ಆತನೇ ಲಿಂಗದಾತ್ಮ, ಆತನೇ ಲಿಂಗಸನ್ನಿಹಿತನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೦೭॥

೧೫೬೭
ಶ್ರೀಗಂಧದ ತರು ಕಾಮರನಾದುದುಂಟೆ?
ಹೇಮದ ಪರ್ವತ ಹುಲುಮೊರಡಿಯಾದುದುಂಟೆ?
ಮಹಾಸಿಂಹ ಹುಲುಮೃಗವಾದುದುಂಟೆ?
ಜ್ಞಾನಿ ಅಜ್ಞಾನಿಯಾದುದುಂಟೆ? ವಿರಕ್ತ ಸಂಸಾರಿಯಾದುದುಂಟೆ?
ಲಿಂಗವೆ ತಾನೆಂದರಿದ ಶರಣಂಗೆ
ಬೇರೆ ಅಂಗೇಂದ್ರಿಯಂಗಳ ವಿಕಾರವೆಂಬುದುಂಟೆ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೦೮॥

೧೫೬೮
ಶ್ರೀಗುರು ಕರುಣಿಸಿ ಪ್ರಾಣಲಿಂಗಸಂಬಂಧವ ಮಾ[ಡೆ],
ಸದ್ಭಕ್ತನೆನಿಸಿದ ಬಳಿಕ ಇನ್ನೇನೆಂದುಪಮಿಸಬಹುದಯ್ಯಾ,
ಈ ಮಹಾಪಥವನು?
'ಅಕಾಯೋ ಭಕ್ತಕಾಯಸ್ತು ಮಮಕಾಯಸ್ತು ಭಕ್ತಿಮಾನ್'
ಎಂದುದಾಗಿ ಲಿಂಗಕಾಯ.
'ಲಿಂಗಾಂಗೀ ಮಹಜ್ಜೀವೋ' ಎಂದುದಾಗಿ ಲಿಂಗಪ್ರಾಣಿ.
ಇದು ಕಾರಣ,
ಕಾಯ ಲಿಂಗ, ಪ್ರಾಣ ಲಿಂಗ, ಅಂತರಂಗ ಬಹಿರಂಗ ಸರ್ವಾಂಗಲಿಂಗ,
ಲಿಂಗವಂತನ ಕ್ರೀ ಎಲ್ಲವೂ ಲಿಂಗಕ್ರೀ. ಲಿಂಗ ಮಾಡಿತ್ತೇ ಅರ್ಪಿತ,
ಲಿಂಗವಂತನ ಆರೋಗಣೆ ಲಿಂಗದಾರೋಗಣೆ.
ಈ ಮಹಾಜ್ಞಾನದ ಪರಿಣಾಮವೇ ಪ್ರಸಾದ, ಇದ್ದುದೇ ದೇವಲೋಕ.
ಈ ಮಹಾಕ್ರೀಯ ಲಿಂಗಾಯತದ ಲಿಂಗವಂತರೆ ಬಲ್ಲರು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೦೯॥

೧೫೬೯
ಶ್ರೀಗುರುಕಾರುಣ್ಯವ ಪಡೆದು ಲಿಂಗಸ್ವಾಯತವಾದ ಬಳಿಕ
ಸರ್ವಾಂಗಲಿಂಗಮೂರ್ತಿ ಪರಶಿವನು.
ಇನ್ನು ಮತ್ತೆ ಸಾಮಾನ್ಯಕ್ರೀಯ ವರ್ತಿಸುವ
ಅಜ್ಞಾನಿಗಳನು ಏನೆಂದೆನ್ನಬಹುದಯ್ಯಾ?
ಹೃದಯ ಭ್ರೂಮಧ್ಯ ಬ್ರಹ್ಮರಂಧ್ರದಲ್ಲಿ ಶಿವನಿಪ್ಪನು.
ಇಡಾ ಪಿಂಗಲಾ ಸುಷುಮ್ನಾ ನಾಡಿಯಲ್ಲಿ
ಪ್ರಾಣವಾಯುಗಳಡಸಿಕೊಂಡು ಹೋಗಿ
ಕೂಡಿ ಒಂದಪ್ಪ ಆಯಸವ ನೋಡಾ.
ಬಹಿರಂಗದಲ್ಲಿ ಮುಕ್ತಿಕ್ಷೇತ್ರಂಗಳ ಹೊಕ್ಕು
ಲಿಂಗದರ್ಶನ ಸ್ಪರ್ಶನಯುಕ್ತರ ಆಯಸವ ನೋಡಾ.
ಶಿವ ಶಿವ ಶ್ರೀಗುರು ಸಾಮಾನ್ಯವೇ? ಸಾಮಾನ್ಯವಾಗಿ ಕಾಣಲಹುದೆ?
ಇಹಿಂಗೆ ಜ್ಞಾನ? ಈ ಪರಿಯ ಕೇಳುವುದೆ?
ಅದೃಷ್ಟವ ದೃಷ್ಟಮಾಡಿ ಕೊಟ್ಟನು ಶ್ರೀಗುರು.
ಅಪವಿತ್ರೋದಕ, ಗಂಗೆಯ ಕೂಡಿ ಗಂಗೆಯಾಯಿತ್ತು ನೋಡಿರಿ,
ಕಾಷ್ಠ, ಅಗ್ನಿಯ ಕೂಡಿ ಅಗ್ನಿಯಾಯಿತ್ತು ನೋಡಿರಿ,
ಸದ್ಭಕ್ತನು ಲಿಂಗವ ಕೂಡಿ ಲಿಂಗವಾದನು.
'ನಗರೀನಿರ್ಜರಾದ್ಯಂಬು ಗಂಗಾಂ ಪ್ರಾಪ್ಯ ಯಥಾ ತಥಾ

ದೀಕ್ಷಾಯೋಗಾತ್ತಥಾ ಶಿಷ್ಯಃ ಶೂದ್ರೋ[S]ಪಿ ಶಿವತಾಂ ವ್ರಜೇತ್
ಭಕ್ತದೇಹೀ ಮಹಾದೇವೋ ತದ್ದೇಹೋ ಲಿಂಗಮೇವ ಚ
ಅಂತರ್ಬಹಿಶ್ಚ ಲಿಂಗಂ ಚ ಸರ್ವಾಂಗಂ ಲಿಂಗಮೇವ ಚ'
ಇಂತೆಂದುದಾಗಿ, ಇನ್ನು ಸಂದೇಹ ಬೇಡ.
ಶ್ರೀಗುರುಕಾರುಣ್ಯದಿಂದ ಲಿಂಗವ ಧರಿಸಿ
ಲಿಂಗಾರ್ಚನೆಯ ಮಾಡಿ ಸರ್ವಾಂಗಲಿಂಗವಾಗಿಪ್ಪುದಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೧೦॥

೧೫೭೦
ಶ್ರೀಗುರುಪ್ರೇಮವಿಲ್ಲದೆ ಲಿಂಗಾರ್ಚನೆಯ ಮಾಡಿದಡೆ
ಅದು ಲಿಂಗಾರ್ಚನೆಯಲ್ಲ.
ಜಂಗಮಪ್ರೇಮವಿಲ್ಲದೆ ಲಿಂಗಾರ್ಚನೆಯ ಮಾಡಿದಡೆ
ಅದು ಲಿಂಗಾರ್ಚನೆಯಲ್ಲ.
ಶಿವಲಿಂಗಪ್ರೇಮವಿಲ್ಲದೆ ಲಿಂಗಾರ್ಚನೆಯ ಮಾಡಿದಡೆ
ಅದು ಲಿಂಗಾರ್ಚನೆಯಲ್ಲ.
ಅರ್ಪಿತವನರಿತು, ಅರ್ಪಿಸಿ ಪ್ರಸನ್ನತೆಯ ಹಡೆದು
ಪ್ರಸಾದವ ಗ್ರಹಿಸದೆ ಲಿಂಗಾರ್ಚನೆಯ ಮಾಡಿದಡೆ
ಅದು ಲಿಂಗಾರ್ಚನೆಯಲ್ಲ.
ಸರ್ವಾಚಾರಸಂಪತ್ತಿಲ್ಲದೆ ಲಿಂಗಾರ್ಚನೆಯ ಮಾಡಿದಡೆ
ಅದು ಲಿಂಗಾರ್ಚನೆಯಲ್ಲ.
ವಿಚಾರಜ್ಞಾನ ಸುಜ್ಞಾನ ಮಹಾಜ್ಞಾನವೆಂಬ
ಪರಿಯನರಿಯದೆ ಲಿಂಗಾರ್ಚನೆಯ ಮಾಡಿದಡೆ
ಅದು ಲಿಂಗಾರ್ಚನೆಯಲ್ಲ. ಪ್ರಸಾದವ ಹಡೆದು ಮುಕ್ತನಲ್ಲ
'ಪೂಜಕಾ ಬಹವಸ್ಸಂತಿ ಭಕ್ತಾಶ್ಚ ಲಕ್ಷಮೇವ ಚ
ಮತ್ಪ್ರಸಾದಧರಾ ದೇವಿ ದ್ವೌ ತ್ರಯೋ ದ[ಶ]ಪಂಚಕಃ'
ಇಂತು ಪೂಜಕರಪ್ಪರು.
ಬೆಟ್ಟವನೆಚ್ಚ ಕೋಲ್ತಪ್ಪದಂತೆ, ಪೂಜೆಯ ಫಲವುಂಟು.
ಸಜ್ಜನಸದ್ಭಕ್ತಿಶಿವಾಚಾರ ಸಂಪತ್ತಿಗೆ ಸಲ್ಲದು.
ಇದನರಿದು ಶ್ರೀಗುರುಲಿಂಗ ಶಿವಲಿಂಗ ಜಂಗಮಲಿಂಗದಲ್ಲಿ
ಅತ್ಯಂತ ಪ್ರೇಮಿಯಾಗಿ,
ಆವಾವ ವಸ್ತು ತನಗೆ ಪ್ರೇಮವಾದುದನಿತ್ತು
ಪ್ರಸಾದಿಯಾಗಿ, ಶಿವಲಿಂಗಾರ್ಚನೆಯಂ ಮಾಡಿದಡೆ
ಸರ್ವಲೋಕಕ್ಕೆ ಪೂಜ್ಯನಪ್ಪನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೧೧॥

೧೫೭೧

ಶ್ರೀಗುರು ಮಾಡಿದ ಗುರುತ್ವ ಉಪಮಾತೀತವು.
ನೇತ್ರದಲ್ಲಿ ತನ್ನ ರೂಪ ತುಂಬಿ ನೇತ್ರವ ಗುರು ಮಾಡಿದನು.
ಶ್ರೋತ್ರದಲ್ಲಿ ಮಹಾಮಂತ್ರವ ತುಂಬಿ ಶ್ರೋತ್ರವ ಗುರು ಮಾಡಿದನು.
ಘ್ರಾಣದಲ್ಲಿ ಮಹಾಗಂಧವ ತುಂಬಿ ಘ್ರಾಣವ ಗುರು ಮಾಡಿದನು.
ಜಿಹ್ವೆಯಲ್ಲಿ ಕರುಣಪ್ರಸಾದವ ತುಂಬಿ ಜಿಹ್ವೆಯ ಗುರು ಮಾಡಿದನು.
ಕಾಯವ ಮಹಾಕಾಯವೆನಿಸಿ, ಪ್ರಸಾದಕಾಯವೆನಿಸಿ,
ಕಾಯವ ಗುರು ಮಾಡಿದನು.
ಪ್ರಾಣವನು ಲಿಂಗಪ್ರಾಣಸಂಬಂಧವ ಮಾಡಿ
ಪ್ರಾಣವ ಗುರು ಮಾಡಿದನು.
ಇಂತು ಅಂತರಂಗ ಬಹಿರಂಗವನು ಗುರು ಮಾಡಿದನು.
ಸರ್ವಾಂಗವನು ಗುರುವ ಮಾಡಿದ ಗುರುವಿಂಗೆ
ನಾನಿನ್ನೇನ ಮಾಡುವೆನಯ್ಯಾ?
ಗುರುಪೂಜೆಗನುವಾದ ದ್ರವ್ಯಂಗಳನೂ, ಆವಾವ ಪದಾರ್ಥಂಗಳನೂ
ಆವಾವ ಪುಷ್ಪಫಲಾದಿಗಳನೂ
ವಿಚಾರಿಸಿ ನೋಡಿದಡೆ ಆವುವು ಗುರುತ್ವವಿಲ್ಲ.
ಸರ್ವದ್ರವ್ಯಮೂಲವೂ ಸರ್ವಪದಾರ್ಥಮೂಲವೂ
ಸರ್ವರಸಪುಷ್ಪಫಲಾದಿಗಳಿಗೆ ಎಲ್ಲದಕ್ಕೂ
ಮೂಲಿಗ ಮನವು ಗುರುತ್ವವನ್ನುಳ್ಳದ್ದು.
ತನ್ನ ಮನೋವಾಕ್ ಸಹಿತ ಕಾಯವನೂ ಸದ್ಗುರುವಿಂಗಿತ್ತು
ಶ್ರೀಗುರು ದರ್ಶನ ಸ್ಪರ್ಶನ ಮಾಡಿ ಸುಖಿಯಪ್ಪೆ ನಾನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೧೨॥

೧೫೭೨

ಶ್ರೀಗುರುಲಿಂಗ ಸಾಕ್ಷಾತ್ಪರಶಿವಲಿಂಗ ತಾನೆ.
'ಗುರುದೇವೋ ಮಹಾದೇವೋ' ಎಂದುದಾಗಿ
ಆ ಶ್ರೀಗುರು ಹರಿಬ್ರಹ್ಮಾದಿ ದೇವದಾನವ ಮಾನವರಿಗೆಲ್ಲಾ
ಗುರು ಕಾಣಿಭೋ.
ಸರ್ವಋಷಿಜನಂಗಳಿಗೆಲ್ಲಾ ಗುರು ಕಾಣಿಭೋ.
ಇವರೆಲ್ಲರಿಗೂ ಗುರುವಾಗಿ ಇರಬೇಕು,
ಕೆಲಂಬರಿಗೆ ಲಘುವಾಗಿ ಇರಬಾರದು.
ಬಲ್ಲವಂಗೆ ಗುರು, ಅರಿಯದವಂಗೆ ಲಘುವಾಗಿರಲಾಗದು.
ಇಷ್ಟಂಗೆ ಗುರು, ಅನಿಷ್ಟಂಗೆ ಲಘುವಾಗಿರಲಾಗದು.

ಸರ್ವರಿಗೂ ಸಮಾನವಾಗಿರಬೇಕು ಕಾಣಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೧೩॥

೧೫೭೩
ಶ್ರೀಗುರುಲಿಂಗಜಂಗಮಕ್ಕೆ ತನುಮನಧನವನು
ವಂಚನೆಯಿಲ್ಲದೆ ಸದ್ಭಕ್ತಿಯಿಂದ ಅರ್ಪಿಸಿ ದಾಸೋಹಿಯಾದಡೆ ಸದ್ಭಕ್ತನು.
ಆ ಸದ್ಭಕ್ತನ 'ಭಕ್ತಕಾಯ ಮಮಕಾಯ' ಎಂಬ
ಶಿವವಾಕ್ಯದಿಂದ ಅದು ಶಿವನ ತನು.
'ಯತೋ ವಾಚೋ ನಿವರ್ತಂತೇ' ಎಂಬ ಲಿಂಗವನು
ಶ್ರೀಗುರು ಕಣ್ಗೆ ಗೋಚರವ ಮಾಡಿ
ಕರಸ್ಥಳದಲ್ಲಿ ಬಿಜಯಂಗೈಸಿಕೊಟ್ಟ ಬಳಿಕ ಲಿಂಗಪ್ರಾಣಿ ಶಿವತನುವಾಯಿತ್ತು.
ಶಿವಜ್ಞಾನಸದ್ಭಕ್ತಿಸಂಪೂರ್ಣವಾದಡೆ ಸರ್ವಾಂಗಲಿಂಗ,
ಆ ಅಂಗಗುಣವೆಲ್ಲ ಲಿಂಗಗುಣ,
ಪಂಚೇಂದ್ರಿಯಂಗಳು ಲಿಂಗೇಂದ್ರಿಯಂಗಳು,
ಆ ಮಹಾಸದ್ಭಕ್ತನ ಕ್ರೀ ಲಿಂಗಕ್ರೀ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೧೪॥

೧೫೭೪
ಶ್ರೀಗುರು ಲಿಂಗ ಜಂಗಮ ಒಂದೆ ಎಂಬುದು,
ಸದ್ಭಾವದಿಂ ಭಾವಿಸಿದುದಕ್ಕೆ ದೃಷ್ಟ: ಸದ್ಗುರುಕಾರುಣ್ಯವ ಪಡೆಹ,
ಸದ್ಗುರುಕಾರುಣ್ಯವ ಪಡೆದುದಕ್ಕೆ ದೃಷ್ಟ:
ಲಿಂಗವನರಿದು ಲಿಂಗಾರ್ಚನೆಯಂ ಮಾಡುಹ,
ಲಿಂಗವನರಿದುದಕ್ಕೆ ದೃಷ್ಟ: ಜಂಗಮವನರಿಹ,
ಜಂಗಮವನರಿದುದಕ್ಕೆ ದೃಷ್ಟ: ಸತ್ಯಪ್ರೇಮಿಯಾಗಿಹ,
ಸತ್ಯಪ್ರೇಮಿಯಾದುದಕ್ಕೆ ದೃಷ್ಟ: ಪ್ರಸಾದವ ಪಡೆಹ,
ಪ್ರಸಾದವ ಪಡೆದುದಕ್ಕೆ ದೃಷ್ಟ: ಪ್ರಸಾದವ ಧರಿಸಿ ಶಾಂತಿಯಾಗಿರುಹ,
ಶಾಂತನಾದುದಕ್ಕೆ ದೃಷ್ಟ: ಪರಿಣಾಮವ ನೆಲೆಗೊಳುಹ,
ಪರಿಣಾಮಿಯಾದುದಕ್ಕೆ ದೃಷ್ಟ: ಶ್ರೀಗುರು ಲಿಂಗ ಜಂಗಮಕ್ಕೆ
ತನು ಮನ ಧನವನರ್ಪಿಸುಹ,
ತನುಮನಧನವನರ್ಪಿಸಿದುದಕ್ಕೆ ದೃಷ್ಟ: ಅಹಂಕಾರ ಅಡಗುಹ,
ಅಹಂಕಾರ ಅಡಗಿದುದಕ್ಕೆ ದೃಷ್ಟ: ತಾನೆಂಬುದಳಿದು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನಲ್ಲಿ ತಾನೆ ದಿಟ,
ಮಿಕ್ಕವೆಲ್ಲಾ ಸಟೆಯೆಂದರಿವುದು. ॥೩೧೫॥

೧೫೭೫

ಶ್ರೀಗುರು ಲಿಂಗ ಜಂಗಮ ತ್ರಿವಿಧವೆಂದು ನಾನರಿವಂದು
ಗುರುವೆ ಸ್ವಾನುಭಾವಲಿಂಗವಾದಂದು
'ಸ್ವಾನುಭಾವಲಿಂಗಂ ಪ್ರಕೀರ್ತಿತಂ' ಎಂದುದಾಗಿ
ಆ ಲಿಂಗ ಪ್ರಸಾದವಾದಂದು ಅರಿದೆನು, ಮಹಾವಸ್ತುವ.
ಆ ವಸ್ತು ವಾಙ್ಮನಸಗೋಚರವಪ್ಪ ಒಂದು ಚರವಾಗಿ
ದೀಕ್ಷೆಯೆಂದಡೂ ತಾನೆ, ಶಿಕ್ಷೆಯೆಂದಡೂ ತಾನೆ
ಸ್ವಾನುಭಾವವೆಂದಡೂ ತಾನೆ, ಸಕಲ ನಿಷ್ಕಲವೆಂದಡೂ ತಾನೆ
ಅಣು ಮಹತ್ತೆಂದಡೂ ತಾನೆ, ಮಹತ್ ಅಣುವೆಂದಡೂ ತಾನೆ
ಧಿಕ್ಕರಿಸಿದ ಅಣುಗಳೊಳಗೆ ಸ್ವಾನುಭಾವಸಾಕ್ಷಿಕಮಪ್ಪ
ಮಹತ್ತಿನೊಳಗೆ ಸಾಕ್ಷಿಕ ನೋಡಾ.
ಇಂತಿವರೊಳಗೆ ಅವಿರಳವಾಗಿ, ತನ್ನ ಪರಿ ಬೇರಾದ ಘನವನೊಡಗೂಡಿದ,
ಮಹ ಮಹತ್ತನೊಡಗೂಡಿದ, ಜ್ಯೋತಿ ಜ್ಯೋತಿಯನೊಡಗೂಡಿದ,
ದೀಪ್ತಿ ದೀಪ್ತಿಯನೊಡಗೂಡಿದ ವಸ್ತುವೆ
'ಇದಂ ವಸ್ತು ಶಿವಸ್ಸಾಕ್ಷಾತ್ ಶಿವನಾಮ್ನಾ ವಿಧೀಯತೇ
ಸರ್ವವಸ್ತುಮಯೋ ದೇವಃ ಸಕಲೋ ನಿಷ್ಕಲೋ ಭವೇತ್'
ಎಂದುದಾಗಿ,
'ಮನೋತೀತೋ ಮಹಾದೇವೋ ವಾಚಾತೀತಸ್ಸದಾಶಿವಃ'
ಎಂದುದಾಗಿ, ಶಿವನು ಸರ್ವಗತನು.
ಇಂತಪ್ಪ ವಸ್ತುವ ತಂದು ಶ್ರೀಗುರು[ಅಂಗ]ವೆಂಬ ಸುಕ್ಷೇತ್ರದಲ್ಲಿ
ಲಿಂಗವೆಂಬ ಮಹವ ಬಿತ್ತಿ, ಶಿಷ್ಯನೆಂಬ ಅತಿರಸಮಹಾಜಲವನೆರೆದು
ಫಲ ಫಲಿತವಾದಡೆ ಇದೇ ಗುರು.
ಗುರುವಿಂಗೊಂದನರ್ಪಿಸುವೆ, ಲಿಂಗಕ್ಕೊಂದ ಬೇರುಸಹಿತ ಕೊಡುವೆ.
ಆ ಫಲವ ಜಂಗಮಕ್ಕಿತ್ತಲ್ಲಿ ಪದವಿಲ್ಲ ಪದಾರ್ಥವಿಲ್ಲ.
ಚತುರ್ವಿಧದ ಹಂಗುಹರಿದು, ಮತ್ತೆಂದಿಗೂ
ಪದ ಫಲಾದಿಗಳಿಗೆ ಬಯಸದಿ[ಪ್ಪೆ]. ಅದು ಹೇಗೆಂದಡೆ:
'ದಗ್ಧಸ್ಯ ದಹನಂ ನಾಸ್ತಿ ಪಾಕಸ್ಯ ಪಚನಂ ಯಥಾ
ಜ್ಞಾನಾಗ್ನಿದಹನಂ ನಾಸ್ತಿ ನ ಚ ತತ್ರ ಕ್ರಿಯಾಧಿಕಾ'
ಎಂದುದಾಗಿ,
ಇಂತಪ್ಪ ಮಹಾವಸ್ತುಗಳಿಗೆ ಮುಂದೊಂದರಿದಪ್ಪ ಅಧಿಕವಿಲ್ಲ ಕಾಣಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೧೬॥

೧೫೭೬
ಶ್ರೀಗುರುಲಿಂಗದಲ್ಲಿ ಬಸವಣ್ಣನ ಕಂಡೆನು,
ಬಸವಣ್ಣನಲ್ಲಿ ಶ್ರೀಗುರುಲಿಂಗವ ಕಂಡೆನು.
ಶಿವಲಿಂಗದಲ್ಲಿ ಬಸವಣ್ಣನ ಕಂಡೆನು, ಬಸವಣ್ಣನಲ್ಲಿ ಶಿವಲಿಂಗವ ಕಂಡೆನು.
ಜಂಗಮಲಿಂಗದಲ್ಲಿ ಬಸವಣ್ಣನ ಕಂಡೆನು.
ಬಸವಣ್ಣನಲ್ಲಿ ಜಂಗಮಲಿಂಗವ ಕಂಡೆನು.
ಪ್ರಸಾದದಲ್ಲಿ ಬಸವಣ್ಣನ ಕಂಡೆನು, ಬಸವಣ್ಣನಲ್ಲಿ ಪ್ರಸಾದವ ಕಂಡೆನು.
ಈ ಚತುರ್ವಿಧದಲ್ಲಿ ಬಸವಣ್ಣನ ಕಂಡೆನು,
ಬಸವಣ್ಣನಲ್ಲಿ ಚತುರ್ವಿಧವ ಕಂಡೆನು.
ಇಂತಹ ಮಹಾಮಹಿಮರುಂಟೆ?
ಶಿವ ಶಿವಾ, ಮಹಾದೇವಾ, ಇಂತಹ ಸದ್ಭಕ್ತರುಂಟೆ?
ಇದು ಕಾರಣ, ಶ್ರೀಗುರುಲಿಂಗವೂ ಬಸವಣ್ಣನೇ,
ಶಿವಲಿಂಗವೂ ಬಸವಣ್ಣನೇ, ಜಂಗಮಲಿಂಗವೂ ಬಸವಣ್ಣನೇ,
ಪ್ರಸಾದಲಿಂಗವೂ ಬಸವಣ್ಣನೇ.
ಇಷ್ಟಲಿಂಗವೂ ಬಸವಣ್ಣನೇ, ಪ್ರಾಣಲಿಂಗವೂ ಬಸವಣ್ಣನೇ,
ಭಾವಲಿಂಗವೂ ಬಸವಣ್ಣನೇ,
ಆಚಾರಲಿಂಗವೂ ಬಸವಣ್ಣನೇ, ಮಹಾಲಿಂಗವೂ
ಎನಗೆ ಬಸವಣ್ಣನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೧೭॥

೧೫೭೭
ಶ್ರೀಗುರುವಿನಲ್ಲಿ ಸಕಲಮಾಹೇಶ್ವರರಲ್ಲಿ,
ಅನುಕೂಲವ ನುಡಿಯದೆ ಪ್ರತಿಭಟಿಸಿ ನುಡಿಯಲಾಗದು.
ನುಡಿದಡೆ ಅದು ಶ್ರದ್ಧೆಯಲ್ಲ. ಶ್ರದ್ಧೆಯಿಲ್ಲದವರ ಶಿವನೊಲ್ಲನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೧೮॥

೧೫೭೮
ಶ್ರೀಗುರುವೇ ಪರಶಿವಲಿಂಗ,
ಪರಶಿವಲಿಂಗವೇ ಜಂಗಮ, ಜಂಗಮವೇ ಪರಶಿವಲಿಂಗ.
ಗುರು ಲಿಂಗ ಜಂಗಮ ತ್ರಿವಿಧವೂ ಪರಶಿವಲಿಂಗವೆಂದರಿದು
ಮನೋವಾಕ್ಕಾಯವನೊಂದು ಮಾಡಿ ತನುಮನಧನವನೊಂದು ಮಾಡಿ
ಆ ಒಂದು ಮಾಡಿದ ಮನವನೂ,
ಆ ತ್ರಿವಿಧವನೊಂದುಮಾಡಿದ ಪರಶಿವಲಿಂಗದಲ್ಲಿ ಅರ್ಪಿಸಲು
ಆ ಲಿಂಗಪ್ರಸನ್ನವೇ ಪ್ರಸಾದ, ಆ ಪ್ರಸಾದವೇ ಪರಶಿವಲಿಂಗ.

ಇಂತು ಬೀಜ–ವೃಕ್ಷ, ಪುಷ್ಪ–ಫಲ ಒಂದೇ.
'ಬೀಜವೃಕ್ಷಯಥಾನ್ಯಾಯ' ವೆಂದುದಾಗಿ
ಪರಶಿವನು ಭಕ್ತಜನಂಗಳ ರಕ್ಷಿಸಲೋಸುಗ[ರ]
ದೇವದಾನವ ಮಾನವರಿಗೆ ಕೃಪೆಮಾಡಿ
ದೀಕ್ಷೆಯ ಮಾಡಲೋಸುಗರ, ಬಹುವಿಧದಲ್ಲಿ ಶ್ರೀಗುರುರೂಪಾದನು.
ಆದರೆ ಶ್ರೀಗುರು ಒಂದೇ ವಸ್ತು, ಪರಶಿವನು.
'ಸ್ಥಾವರಂ ಜಂಗಮಾಧಾರಂ' ಎಂದುದಾಗಿ,
ಪರಶಿವನು ಶಕ್ತಿವಿನೋದಕಾರಣ ಸದ್ಭಕ್ತಜನಂಗಳಿಗೆ ಪ್ರಸನ್ನವಾಗಲೋಸುಗರ,
ದೇವ ದಾನವ ಮಾನವರಲ್ಲಿ ವಿನೋದಿಸಿ
ಉತ್ಪತ್ತಿಸ್ಥಿತಿಲಯವ ಮಾಡಲೋಸುಗರ, ಅನೇಕತತ್ತ್ವರೂಪಾದನು.
ಸರ್ವತತ್ತ್ವರೂಪ ಪರಶಿವನೊಂದೇ ವಸ್ತು,
'ತತ್ತ್ವಂ ವಸ್ತುಕಂ' ಎಂದುದಾಗಿ,
'ನಾನಾರೂಪಧರಂ ದೇವಂ' ಎಂದುದಾಗಿ, ಪರಶಿವನೊಂದೇ ವಸ್ತು.
ಸರ್ವಲೋಕವ ರಕ್ಷಿಸಲೋಸುಗರ,
ತನು ಮನ ಧನವನೂ ತನ್ನಲ್ಲಿಗೆ ತೆಗೆದುಕೊಂಡು
ಪಾದೋದಕ ಪ್ರಸಾದವನಿತ್ತು ರಕ್ಷಿಸಲೋಸುಗರ,
ನಾನಾರೂಪ ಬಹುವಿಧಶೀಲದಿಂ ಜಂಗಮರೂಪಾದನು.
'ದಂಡಕ್ಷೀರದ್ವಯಂ ಹಸ್ತೇ' ಎಂದುದಾಗಿ, ಪರಶಿವನೊಂದೇ ವಸ್ತು.
'ಯೇ ರುದ್ರಲೋಕಾದವತೀರ್ಯ ರುದ್ರಾ' ಎಂದುದಾಗಿ,
ಜಂಗಮ ಪರಶಿವನೂ ಒಂದೇ ವಸ್ತು. ಪರಶಿವನ ಪ್ರಸನ್ನವೇ ಪ್ರಸಾದ,
ಗುರುಲಿಂಗಜಂಗಮ ತ್ರಿವಿಧಲಿಂಗದಲ್ಲಿ
ತನು ಮನ ಧನವನೂ ಸರ್ವಪದಾರ್ಥ ಸರ್ವದ್ರವ್ಯವನೂ
ನೇತ್ರದ ಕೈಯಲೂ ಘ್ರಾಣದ ಕೈಯಲೂ ಜಿಹ್ವೆಯ ಕೈಯಲೂ
ಪರುಷಭಾವ ಮನ ವಾಕ್ಕಿನ ಕೈಯಲೂ
ಈ ಪ್ರಕಾರದಿಂದೆಲ್ಲಾ ತೆರದಲ್ಲಿ ಸಕಲನಿಷ್ಕಲವನೆಲ್ಲವನೂ ಅರ್ಪಿಸಿದಲ್ಲಿ
ಆ ಪರಶಿವನು ಅನೇಕ ವಿಧದಲ್ಲಿ, ಅನೇಕ ಮುಖದಲ್ಲಿ,
ಅರ್ಪಿತವ ಕೈಕೊಂಡು ಪ್ರಸನ್ನವಾಗಲು, ಸದ್ಭಕ್ತಂಗೆ ಬಹುವಿಧ:
ಗುರುಮುಖದಲ್ಲಿ ಶುದ್ಧಪ್ರಸಾದ, ಲಿಂಗಮುಖದಲ್ಲಿ ಸಿದ್ಧಪ್ರಸಾದ,
ಜಂಗಮಮುಖದಲ್ಲಿ ಪ್ರಸಿದ್ಧಪ್ರಸಾದ.
ಗುರುಮುಖದಲ್ಲಿ ನೇತ್ರಪ್ರಸಾದ, ಶ್ರೋತ್ರ ಪ್ರಸಾದ, ಘ್ರಾಣ ಪ್ರಸಾದ,
ಜಿಹ್ವೆ ಪ್ರಸಾದ, ಪರುಶನ ಪ್ರಸಾದ, ಭಾವ ಪ್ರಸಾದ,
ಮನ ಪ್ರಸಾದ, ವಾಕ್ ಪ್ರಸಾದ, ಕಾಯ ಪ್ರಸಾದ.
ಇವುವಿಡಿದು ನಡೆವುವು ತ್ರಿವಿಧಸಂಪತ್ತುಗಳು.

ಭಕ್ತ ಮಹೇಶ್ವರ ಪ್ರಸಾದಿ ಮನವಿಡಿದು ನಡೆವುವು ತ್ರಿವಿಧಸಂಪತ್ತುಗಳು.
ಪ್ರಾಣಲಿಂಗಿ ಶರಣನೈಕ್ಯವಾಗಿ ನಡೆದರಯ್ಯಾ ಕ್ರಿಯಾನುಭಾವವಿಡಿದು.
'ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ
ಜಂಗಮಸ್ಯಾವಮಾನೇನ ಸ್ಥಾವರಂ ನಿಷ್ಫಲಂ ಭವೇತ್'
ಈ ಭೇದವನು ಭೇದಿಸಬಲ್ಲಡೆ ಇಂದೇ ಇಹವಿಲ್ಲ ಪರವಿಲ್ಲ.
ಈ ಒಂದೇ ನಾನಾವಿಧಪ್ರಸಾದ.
ಅನೇಕವಿಧದಿಂ ಪ್ರಸನ್ನನಾಗಲು ಪ್ರಸಾದ ಒಂದೇ ವಸ್ತು ಪರಶಿವನು.
ಇದು ಕಾರಣ,
ಶ್ರೀಗುರು ಪರಶಿವನು ಜಂಗಮವು ಪ್ರಸಾದವು ಒಂದೇ ಕಾಣಿರಣ್ಣಾ.
ಈ ಚತುಷ್ಟವನು ವೇದ ಶಾಸ್ತ್ರ ಆಗಮ ಪುರಾಣದಿಂ
ವಿಚಾರಿಸಲು ಒಂದೇ ವಸ್ತು.
ಆ ವಿಚಾರವ ನಂಬದೇ ಕೆಡಬೇಡ.
ಜಂಗಮವೆಯಿದು 'ಸ ಭಗವಾನ್ ಯಸ್ಯ ಸರ್ವೇ' ಎಂದುದಾಗಿ
'ಸರ್ವಕಾರಣಕಾರಣಾತ್' ಎಂದು ಪರಶಿವಲಿಂಗವಲ್ಲದೆ ಇಲ್ಲ.
ಆತನ ಪ್ರಸನ್ನವೇ ಪ್ರಸಾದ, ಆ ಪ್ರಸಾದವೇ ಮುಕ್ತಿ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೧೯॥

೧೫೭೮

ಶ್ರೀಗುರು ಶಿಷ್ಯಂಗೆ ಮಂತ್ರವ ಮೂರ್ತಿಗೊಳಿಸಬೇಕಾಗಿ,
ಪೃಥ್ವಿಯ ಮೇಲಣ ಕಣಿಯ ತಂದು, ಇಷ್ಟಲಿಂಗಮಂ ಮಾಡಿ,
ಶಿಷ್ಯನ ತನುವಿನ ಮೇಲೆ ಧರಿಸಿದ ಲಿಂಗವು
ಅವತಳವಾಗಿ ಭೂಮಿಯಲ್ಲಿ ಸಿಂಹಾಸನಂಗೊಂಡಿತ್ತೆಂದು
ಸಮಾಧಿಯ ಹೋಗುವರಯ್ಯಾ.
ಲಿಂಗಕ್ಕೆ ಅವತಳವಾದಡೆ, ಭೂಮಿ ತಾಳಬಲ್ಲುದೆ?
ಮಾರಾಂತನ ಗೆಲಿವೆನೆಂದು ಗರಡಿಯ ಹೊಕ್ಕು
ಕಠಾರಿಯ ಕೋಲ [ತ]ಳೆದುಕೊಂಡು,
ಸಾಧನೆಯ ಮಾಡುವಲ್ಲಿ ಕೈತಪ್ಪಿ ಕೋಲು ನೆಲಕ್ಕೆ ಬಿದ್ದಡೆ,
ಆ ಕೋಲ ಬಿಟ್ಟು ಸಾಧನೆಯಂ ಬಿಟ್ಟು ಕಳೆವರೇ ಅಯ್ಯ?
ತಟ್ಟಿ ಮುಟ್ಟಿ ಹಳಚುವಲ್ಲಿ
ಅಲಗು ಬಿದ್ದಡೆ ಭಂಗವಲ್ಲದೆ ಕೋಲು ಬಿದ್ದಡೆ ಭಂಗವೇ ಅಯ್ಯ?
ಆ ಕೋಲ [ತ]ಳೆದುಕೊಂಡು ಸಾಧನೆಯಂ ಮಾಡುವದೇ ಕರ್ತವ್ಯ.
ಆ ಲಿಂಗ ಹುಸಿ ಎಂದಡೇನಯ್ಯ?

ಶ್ರೀ ವಿಭೂತಿವೀಳೆಯಕ್ಕೆ ಸಾಕ್ಷಿಯಾಗಿ ಬಂದ ಶಿವಗಣಂಗಳು ಹುಸಿಯೇ?
ಆ ಗಣಂಗಳು ಹುಸಿಯಾದಡೆ, ಕರ್ಣಮಂತ್ರ ಹುಸಿಯೇ?
ಆ ಕರ್ಣಮಂತ್ರ ಹುಸಿಯಾದಡೆ, ಶ್ರೀಗುರುಲಿಂಗವು ಹುಸಿಯೇ?
ಶ್ರೀಗುರುಲಿಂಗ ಹುಸಿಯಾದಡೆ, ಜಂಗಮಲಿಂಗ ಹುಸಿಯೇ?
ಆ ಜಂಗಮಲಿಂಗ ಹುಸಿಯಾದಡೆ, ಪಾದತೀರ್ಥ ಪ್ರಸಾದ ಹುಸಿಯೇ?
ಇಂತೀ ಷಟ್‌ಸ್ಥಲವ ತುಚ್ಛವ ಮಾಡಿ,
ಗುರೂಪದೇಶವ ಹೀನವ ಮಾಡಿ, ಸಮಾಧಿಯ ಹೊಗುವ
ಪಂಚಮಹಾಪಾತಕರ ಮುಖವ ನೋಡಲಾಗದು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೨೦॥

೧೫೮೦
ಶ್ರೀಮತ್ಪಂಚಾಕ್ಷರಿಯ ಉಚ್ಚರಣದ ವಿಶ್ವಾಸದಿಂದ
ಉಪಮನ್ಯುವಿಂಗೆ ಶಿವಜ್ಞಾನ ಸಿದ್ಧಿಸಿತ್ತು.
ಶ್ರೀಮತ್ಪಂಚಾಕ್ಷರಿಯ ಉಚ್ಚರಣದ ವಿಶ್ವಾಸದ ಸಾಧನದಿಂದ
ವಸಿಷ್ಠ, ವಾಮದೇವ ಮೊದಲಾದ ಸಮಸ್ತಋಷಿಗಳಿಗೆ
ಹಿರಿದಪ್ಪ ಪಾಪದೋಷವು ಹರಿದಿತ್ತು.
ಶ್ರೀಮತ್ಪಂಚಾಕ್ಷರಿಯ ಉಚ್ಚರಣದ ವಿಶ್ವಾಸದ ಸಾಧನದಿಂದ
ಬ್ರಹ್ಮವಿಷ್ಣ್ವಾದಿಗಳಿಗೆ ಜಗತ್ಸೃಷ್ಟಿರಕ್ಷಾಪತಿತ್ವ ಸಾಧ್ಯವಾಯಿತ್ತು.
ಅದೆಂತೆಂದಡೆ: ಬ್ರಹ್ಮಾಂಡಪುರಾಣದಲ್ಲಿ,
'ಉಪಮನ್ಯುಃ ಪುರಾ ಯೋಗೀ ಮಂತ್ರೇಣಾನೇನ ಸಿದ್ಧಿಮಾನ್
ಲಬ್ಧವಾನ್ಪರಮೇಶತ್ವಂ ಶೈವಶಾಸ್ತ್ರ ಪ್ರವಕ್ತೃತಾಂ'
ಮತ್ತಂ, ವಿಷ್ಣುಪುರಾಣದಲ್ಲಿ,
'ವಸಿಷ್ಠವಾಮದೇವಾದ್ಯಾ ಮುನಯೋ ಮುಕ್ತಕಿಲ್ಬಿಷಾಃ
ಮಂತ್ರೇಣಾನೇನ ಸಂಸಿದ್ಧಾ ಮಹಾತೇಜಸ್ವಿನೋ[s]ಭವನ್'
ಎಂದುದಾಗಿ, ಮತ್ತಂ ಕೂರ್ಮಪುರಾಣದಲ್ಲಿ,
'ಬ್ರಹ್ಮಾದೀನಾಂ ಚ ದೇವಾನಾಂ ಜಗತ್ಸೃಷ್ಟ್ಯರ್ಥಕಾರಣಂ
ಮಂತ್ರಸ್ಯಾಸ್ಯೈವ ಮಹಾತ್ಮ್ಯಾತ್ಸಾಮರ್ಥ್ಯಮುಪಜಾಯತೇ'
ಎಂದುದಾಗಿ, ಇಂತಪ್ಪ ಪುರಾಣವಾಕ್ಯಂಗಳನರಿದು ವಿಪ್ರರೆಲ್ಲರು
ಶ್ರೀ ಪಂಚಾಕ್ಷರಿಯ ಜಪಿಸಿರೋ, ಜಪಿಸಿರೋ.
ಮಂತ್ರಂಗಳುಂಟೆಂದು ಕೆಡಬೇಡಿ ಕೆಡಬೇಡಿ.
ಮರೆಯದಿರಿ, ಮಹತ್ತಪ್ಪ ಪದವಿಯ ಪಡೆವಡೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರದೇವರ ದಿವ್ಯನಾಮವನು. ॥೩೨೧॥

೧೫೮೧
ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ,
ಶಬ್ದ ಸ್ಪರ್ಶ, ರೂಪ, ರಸ, ಗಂಧ,
ಆಕಾಶ, ವಾಯು, ಅಗ್ನಿ, ಸಲಿಲ, ಭೂಮಿ.
ಈ ಸಕಲ ಕಾರಣ ಪ್ರಾಪ್ಯಸ್ವರೂಪನಾಗಿ,
"ಸಾಮವೇದಾಶ್ರಯೋ ಪುರುಷಃ"
"ಸ್ವಯಂಜ್ಯೋತಿರಸ್ಮಿನ್ ಮಾನುಷತ್ವಂ ಉಪೇತ್ಯ"
ಎಂಬ ಶ್ರುತಿಗೆ ಅಪ್ರತಿಮಮೇಯನಾಗಿ ಮೀರಿದ
ನಿತ್ಯ ಶುದ್ಧ ಪ್ರಬುದ್ಧ ಬೋಧ ವೇದ್ಯ ಸಂವಿದ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. ॥೩೨೨॥

೧೫೮೨
ಸಕಲಜನರು ಹೇಸಿದ ಉದಾನವ ಶ್ವಾನ ಭುಂಜಿಸಿ
ತನ್ನ ಹೊಟ್ಟೆಯ ಹೊರೆವುದಲ್ಲದೆ.
ತನ್ನ ತಾ ಹೇಸಿದ ಉದಾನವ ಮುಟ್ಟದು ನೋಡಾ.
ಶ್ವಾನಗಿಂದವೂ ಕಡೆಯೆ?
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ,
ಮರಳಿ ಭವಿಯ ಬೆರಸಿದಡೆ ಅವ ಭಕ್ತನಲ್ಲ, ಅವ ಶ್ವಾನನಿಂದ ಕರಕಷ್ಟ.
ಇದು ನೀನೊಲಿದ ಶರಣಂಗಲ್ಲದೆ ಎಲ್ಲರಿಗೇಕಹುದು ಹೇಳಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೨೩॥

೧೫೮೩
ಸಕಲವ ಪೂಜಿಸಿಹೆನೆಂಬವಂಗೆ,
ಸಕಲವನು ಲಿಂಗದಲ್ಲಿಯೇ ಪೂಜಿಸಬೇಕು.
ನಿಷ್ಕಲವ ಪೂಜಿಸಿಹೆನೆಂಬವಂಗೆ,
ನಿಷ್ಕಲವನು ಲಿಂಗದಲ್ಲಿಯೇ ಪೂಜಿಸಬೇಕು.
ಅದೆಂತೆಂದಡೆ:
ಸಕಲನಿಷ್ಕಲಾತ್ಮನು, ಸಕಲನಿಷ್ಕಲಾತೀತನು
ಲಿಂಗಾರ್ಚನೆಯಿಂದ ಪರ ಒಂದು ಇಲ್ಲಾಗಿ
ಒಳಹೊರಗೆಂಬ ಭಾವ ಅಳಿದುಳಿದ ಶರಣನ
ಅಂತರಂಗ ಬಹಿರಂಗಭರಿತನಾಗಿಹನು ಶಿವನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೨೪॥

೧೫೮೪

ಸಕಲವೆಂದು ನಿಃಕಲವೆಂದು ಸಂಪಾದಿಸುವ ಷಡ್ದರ್ಶನಂಗಳು
ಸಮಸ್ತ ಮತಂಗಳು ಪರವಸ್ತುವನರಿಯದೆ
ಸಂಕಲ್ಪ ಸಂಶಯವೆಂದು ದೂರವಾದರು ನೋಡಾ. ಅದೆಂತೆಂದೊಡೆ:
ಶೈವ ಕುರುಹಿಟ್ಟು ಒಂದು ಲಕ್ಷ್ಯವ ಅಲ್ಲಿಯೆ ಮಗ್ನವಾದ.
ಸಾಕ್ಷಿ:
"ವಿಶ್ವಾದ್ಯದಿತ್ಕೃತು ಶೂಲಪಾಣಿ
ರಿತ್ಯಸ್ಯಂ ಸದ್ಯ ವಾಮಘೋರ ಪರತದಿಶಾನ
ಸ್ವಶಕ್ತಿಮಾತ್ರಂ ಯದ್ದೇವಾ ಹೃದಯೇ ಪೂರ್ಣಂ
ವಿಂತಿದುತ ಮನನಾ ದೇವತಾ ಮರ್ಹಣಿ ಮಂಗಳಂ
ಶಿವಂ ರುದ್ರಂ ಏಕಂ ವಸ್ತು॥"
ಎಂಬ ಶೈವನ ಸಂಪ್ರದಾಯ ಸಂಪತ್ತು ಅದಂತಿರಲಿ.
ಇನ್ನು ವೈಷ್ಣವ ಕುರುಹಿಟ್ಟು ಒಂದು ಲಕ್ಷ್ಯ ಅಲ್ಲಿಯೆ ಮನಮಗ್ನನಾದ
"ಯದ್ಯ ಮಾಯೇವ ಹದಂ ಮಧ್ಯತ್ವಸ್ಮಿನ್।
ತೇನೋ ಮಾಯಾಮಯಂ ಮನೋಹತಂ ಬ್ರಹ್ಮ ವಿಶ್ವರೂಪೋತಯಾಮಿ॥"
ಎಂಬ ವೈಷ್ಣುವಿನ ಸಂಪ್ರದಾಯ ಸಂಪತ್ತು ಅದಂತಿರಲಿ.
ಇನ್ನು ಸಾಂಖ್ಯನೊಂದು ಲಕ್ಷ್ಯವ ಕುರುಹಿಟ್ಟಲ್ಲಿಯೆ ಮಗ್ನನಾದ.
"ಯಸ್ಮಾಯೇಚತಿ ಶೃತ್ವಾಯೇನಂ ವಿನಿಯ್ಯಾತಸ್ತಿಶ್ಚಬ್ದಂ
ತತ್ವಮಸಾರ್ಥ್ಯಕೌಚಾಯಮಂತಿ ಪರಮಶ್ಯಮಿ ತಿಷ್ಟಂ
ಸಮಂ ಸಹ ಸಂಪಶ್ಯಂ ಐನಿತ್ಯಂ ಮಹಂಸಯೇವಾ॥"
ಎಂಬ ಸಾಂಖ್ಯನ ಸಂಪ್ರದಾಯ ಸಂಪತ್ತು ಅದಂತಿರಲಿ.
ಇನ್ನು ಗಾಣಪತ್ಯ ಒಂದು ಲಕ್ಷ್ಯವ ಕುರುಹಿಟ್ಟು ಅಲ್ಲಿಯೆ ಮಗ್ನನಾದ.
"ಆತ್ಮಯೇವತಿ ಮಾಯಕ ಕರ್ಮ ಕರೋತಿ ತಸ್ಯ ಹಿಮಕ್ಷತಮಘಮಸಿತಂ।
ಯದ್ಯರೂಪಂ ಏಷಾತ್। ನಿರ್ಮಾಲ್ಯ ನೀರಹಂ"
ನಿರ್ವಾಣ ನಿಜಂ ಸ್ಯಾತ್। ಪ್ರಸಾದೋದನ್ಯಮಂತಿಃ"
ಎಂಬ ಗಾಣಪತ್ಯನ ಸಂಪ್ರದಾಯ ಸಂಪತ್ತು ಅದಂತಿರಲಿ.
ಇನ್ನು ಸೌರನ ಒಂದು ಲಕ್ಷ್ಯವ ಕುರುಹಿಟ್ಟು ಅಲ್ಲಿಯೆ ಮಗ್ನನಾದ
ಅದುನ್ವಂ ಸಂತಿ ಸಮುದಂ ಸಮಿತಂ ನ್ಯಸ್ತ
ಯಸ್ಯ ವಾಚ್ಯಂ ಪ್ರವಿಸ್ಥಂ ಪ್ರಸ್ಫುರಾದಿ ಆದ್ಯಮಾನ
ಸಾಮಾಯನಾಶ ನಿರತಿಶಯ ನಿಜಂ ನಿತ್ಯಾತ್ಮಾತಿಯವಸ್ತು॥"
ಎಂಬ ಸೌರನ ಸಂಪ್ರದಾಯ ಸಂಪತ್ತು ಅದಂತಿರಲಿ.
ಇನ್ನು ಕಾಪಾಲಿಕ ಒಂದು ಲಕ್ಷ್ಯವ ಕುರುಹಿಟ್ಟು ಅಲ್ಲಿಯೇ ಮಗ್ನನಾದ.
"ಪಿಂಡೇಬ್ಲೂ ಅನ್ನ ಪಾನ್ಯಹಿತಂ

ತಮ ಅರ್ಕ ಸೋಮನಾತ್ಮಾ ಕಳೇವರೇಸ್ಸಿಧ್ಯಂ
ದ್ಯತ್ವಾಚಕ್ರೇಷಟ್ ದಿಶಾಮಗಹಿತಂ
ಆದ್ಯಮಾಯಾತೀತಂ ನಾಥಾಯೇ ಭಯಂಕರಂ ಮಹತ್॥"
ಎಂಬ ಕಾಪಾಲಿಕನ ಸಂಪ್ರದಾಯ ಸಂಪತ್ತು ಅದಂತಿರಲಿ.
ಇನ್ನು ವೇದಾಂತಿಯೆಂಬಾತನು ಒಂದು ಲಕ್ಷ್ಯವ ಕುರುಹಿಟ್ಟು
ಅಲ್ಲಿಯೆ ಮಗ್ನನಾದ
"ತಾಮಸನಾತ್ಮೋ ಜಡಃ ಕೃತಿದೋಷೇತನ್ಮಯ ಪಾಶೋಸ್ಥ।
ವಿದಂ ನಾಶೇತಿ ಮಾರ್ಗೇ ಚಿದಾಕಾಶೇ ನಿಭಾಶ್ಚಂ ಸೂಕ್ಷ್ಮಕಳಾಬ್ರಹಂ"
ಎಂಬ ವೇದಾಂತಿಯ ಕರ್ತವ್ಯ ಅದಂತಿರಲಿ.
ಇನ್ನು ಆತ್ಮಯೋಗಿಯೆಂಬಾತ ಒಂದು ಲಕ್ಷ್ಯವ ಕುರುಹಿಟ್ಟು
ಅಲ್ಲಿಯೆ ಮಗ್ನನಾದ.
"ದೇಹಸ್ಯ ದೇಹಿ ದೇಹೋಹಂ ದೇಹಂ ದೇಹ ಮಹಾತ್ಮೋ।
ಚೈತನ್ಯ ಸ್ವಯಂನ್ಮೇನಾ ಬಿಂದೇ ಕಳಾಯ ಕರಣಂ ಪ್ರಭಾತೇಂದ್ರಿಯ
ಸಾಕ್ಷಿ ಜ್ಯೋತಿಯಸ್ಯನ್ ತರ್ಜ್ಯದೌನಾಸ್ತಿ ಆತ್ಮ"
ಎಂಬ ಆತ್ಮಯೋಗಿಯ ಮಾತದಂತಿರಲಿ.
ಇನ್ನು ಬೌದ್ಧನೆಂಬಾತ ಒಂದು ಲಕ್ಷ್ಯ ಕುರುಹಿಟ್ಟು ಅಲ್ಲಿಯೆ ಮಗ್ನನಾದ.
"ಕುರುಷ್ಯ ದೇಹೋ ಅಹಿಂಸಸ್ಯ ಕಾಯೋನಾತ್ಮಂ
ತನ್ನಾತ್ಮ ಲಕ್ಷಣೇ ಲಕ್ಷಂ ಭಾಗಂ ದೇಹಸ್ಯ
ದೌಮಾತ್ರತ್ರಯಸ್ಮಿಗ್ಮಂ ಪೂರ್ಣಂ ದ್ರುತ್ಯದೃತಿತಂರ್ಧ್ಮಭಾತಿ"
ಎಂಬ ಬುದ್ಧನ ವಿವೇಕ ಅದಂತಿರಲಿ.
ಇನ್ನು ಮಾಯಾವಾದಿ ಒಂದು ಲಕ್ಷ್ಯವ ಕುರುಹಿಟ್ಟು ಅಲ್ಲಿಯೆ ಮಗ್ನನಾದ.
"ಪಂಚೌಪ್ರದಾನೇ ಭೋದೇಯೇತ್ಯಸ್ತದೇಹಿ
ಮರ್ಧಯಸ್ಥಂ ಸಯೇವ ಬ್ರಹ್ಮ ಮಾಧವ ರುದ್ರೇಶ್ವರಾ।"
"ಶಿವಸದಾ ಪಂಚಮುಕ್ತಂ ಶಿವಾಯ
ವಿಷ್ಣುರೂಪಾಯ ಶಿವರೂಪಾಯ ವಿಷ್ಣುವೇ
ಶಿವಸ್ಯ ಹೃದಯಂ ವಿಷ್ಣು ವಿಷ್ಣೋಶ್ಚ ಹೃದಯಂ ಶಿವಃ" ಎಂದು
ಶಿವಮಯಂ ವಿಷ್ಣು ಯೇವಂ ವಿಷ್ಣುಮಯಂ ಜಗತ್
ಯೇತೇ ಬ್ರಹ್ಮ ಪಂಚಕಂ ಸ್ಯಾತ್।
ಸಯೇಕಂ ವಿಶ್ವಮಯ ಶಕ್ತಿಯೋ ವಿಶ್ವಂ ವಿಶ್ವಾತ್ಮನೇಕರುದ್ರೋದ್ವಿತೀಯಂ"
ಎಂಬ ಮಾಯಾವಾದಿಯ ಅರಿವು ಅದಂತಿರಲಿ.
ಇನ್ನು ಮಿಮಾಂಸಕನೊಂದು ಲಕ್ಷ್ಯವ ಕುರುಹಿಟ್ಟು ಅಲ್ಲಿಯೆ ಮಗ್ನನಾದ.
"ನಾಸ್ತಿ ದೇಹಿಂ ಕರಣಂ ಖಃ ಮದ್ಯಂನ್ ನ್ಪ
ಸ್ಯಾತ್ಮನಾಯೇಕಂ ಮತ್ಕಂಷರೌ ಸದಾತ್ಮನೇ ನಿತ್ಯಂ ಮಾನ"

ಎಂಬ ಮೀಮಾಂಸಕನ ಬಗೆಯದಂತಿರಲಿ.
ಇನ್ನು ಶೂನ್ಯವಾದಿಯ ಒಂದು ಲಕ್ಷ್ಯವ ಕುರುಹಿಟ್ಟು ಅಲ್ಲಿ ಮಗ್ನನಾದ.
"ದೇಹಾಯಿಂದ್ರಿಯಕರಣಂ ನಾಸ್ತಿ
ಯೇವಂ ನಾಸ್ತಿ ಸ್ವರ್ಗಂ ನಾಸ್ತಿ
ಮಾಯಾಮಯಂ ಜಡಂ ಪ್ರಕೃತಿಯಿತ್ಯದ್ಯೌ ನರಕಃ
ನರಕಂ ಪಾಪಂ ನಾಸ್ತಿ ಯದೋ ಜೀವ ಪ್ರಜ್ಞ ಜ್ಞಾನವಾಸಿ
ಆಕಾಶ ಚಾಯೇ ಯೇಕಮಾಸಾರ್ದಂ ದೃಶ್ಯಂ ಮಿದಂ
ಕೌಳಿಕಂ ಜಡಕರ್ಮದೃತಂ ನಾಸ್ತಿಮಿದಂ ಶೂನ್ಯಂ ನಿತ್ಯಂ ವಸ್ತು"
ಎಂಬ ಶೂನ್ಯವಾದಿಯ ಕರ್ಮ ಅದಂತಿರಲಿ.
ಇಂತೀ ಷಡ್‌ದರ್ಶನ ಷಣ್ಮತಂಗಳ ಬಗೆಯಲ್ಲ
ವೀರಶೈವ ಸಿದ್ಧಾಂತಿಯ ಬಗೆ. ಅದೆಂತೆಂದೊಡೆ:
"ಏಕೋಸ್ವಾ ಶಕ್ತಿ ಭಿನ್ನ ಬಹು ನ ಸ್ಯಾತ್ ವಿವೇಯಾಶಕ್ತಿನಾಸ್ತಿ।
ನಾಸ್ತಿದ್ವಯಂ ಶೂನ್ಯಗರ್ಭೀಕೃತಂ ಮಾತ್ಮವಸು॥"
ಎಂಬ ವೀರಶೈವ ಸಿದ್ಧಾಂತಿಯ ನಿಶ್ಚಯವು.
ಇನ್ನು ಶೈವನೆಂಬವನು ಪಂಚಮುಖ ದಶಭುಜ ಸಕಲಕರ್ತನೆಂಬನು.
"ಶೈವಾಗಮೇ ಮುಖಪಂಚ ದಶಂ ಹಸ್ತಂಮಾಯುಧಂ ಶತ್ರುರೂಪಕಂ।
ಉತ್ಪತ್ತಿ ಸ್ಥಿತಿನಾಶಾದಿ ಕರ್ತವ್ಯಂ ಪರಮೇಶ್ವರಃ"
ಎಂಬನಾಗಿ, ಇದು ಹುಸಿ.
ಇನ್ನು ವೈಷ್ಣುವೆಂಬವನು ವಿಯಜ್ಞಾನವೆಂಬ ಗರುಡನ ಗಮನನಾಗಿ
ಸಮಸ್ತಾನಂದಸ್ವಯ ನಾರಾಯಣ ವಿಶ್ವರೂಪನೆಂಬನು. ವೈಷ್ಣಾಗಮೇ:
"ವಿಯದ್ವಿಷ್ಣುಪದಂ ವಾಪಿ ಸರ್ವಾನಂದಸಯಾಶ್ರಯಂ।
ವಿಶ್ವರೂಪಸ್ಯ ಪುರುಷಂ ನಾರಾಯಣೈವ ವಸ್ತುವತ್॥"
ಎಂಬನಾಗಿ, ಇದು ಹುಸಿ.
ಇನ್ನು ಸಾಂಖ್ಯ ಸರ್ವತಂತ್ರನಾಗಿಹನು.
ಆ ಕರ್ಮತಂತ್ರಕ್ಕೆ ಸಾಕ್ಷಿಯಾದ ಮಂತ್ರಸ್ವರೂಪಾದ ಪಶುಪತಿಯೆಂಬನು.
ಶಾಕ್ತಾ ಗಮೇ:
"ಕರ್ಮತಮತ್ರಸ್ಯ ರೂಪಾಖ್ಯ ತತ್ರೇ ಕರ್ತು ಸಮಾಹಿತಂ
ಸಾಕ್ಷಿರೂಪಾತ್ಮನ್ಯೈವಸ್ತು ಇದಂ ವಸ್ತು ಸುನಿಶ್ಚಯಂ"
ಎಂಬನಾಗಿ, ಇದು ಹುಸಿ.
ಇನ್ನು ಗಾಣಪತ್ಯನೆಂಬವನು ಆತ್ಮನು ಜಡನಾಗಿಹನು.
ಆ ಜಡವಳಿಯಲು ಆತ್ಮನೆ ವಸ್ತುಸರ್ವದೋಷರಹಿತನೆಂಬನು.
ಗಾಣಪತ್ಯಾಗಮೇ:
"ಕರ್ಮಾದಿಜಡದೋಷಾನಾಂ ಜೀವಂ ಪಾಶಾದಿ ಲಕ್ಷಣಃ

ತತ್ ಪಾನಾಶ ನಿರ್ವಾಣಂ ದೋಷಂ ಪಾಶಾದಿ ವಸ್ತುವತ್"
ಎಂಬನಾಗಿ, ಇದು ಹುಸಿ.
ಇನ್ನು ಸೌರನೆಂಬವನು ರೂಪನಲ್ಲ ನಿರೂಪ ನಿರವಯನು. ಸೌರಾಗಮೇ:
"ರೂಪಂ ನಾಸ್ತಿ ನಿರೂಪಃ ಸ್ಯಾತ್ ಸರ್ವಂಕಾರಂ ಚ ನಾಸ್ತಿವತ್
ನಾನಾಶರ್ಯಮಿದಂ ನಾಸ್ತಿ ಕರ್ತಾರಂ ಪರಬ್ರಹ್ಮವತ್"
ಎಂಬನಾಗಿ, ಇದು ಹುಸಿ.
ಇನ್ನು ಕಾಪಾಲಿಕನೆಂಬಾತನು ಆರು ಚಕ್ರದೊಳಗೆ
ತೋರುವ ಛಾಯೆ ವಸ್ತುವೆಂಬನು. ಭೈರವಾಗಮೇ:
"ಷಡುಚಕ್ರ ಭವೇದ್ಯಸ್ತು ಸ್ವರೂಪಂ ಛಾಯಮಾತ್ಮಾನಾ।
ಈವ್ಯಶೈಭೈರವನ್ಯಸ್ತು ವಸ್ತುಮೇವ ನ ಸಂಶಯಃ"
ಎಂಬನಾಗಿ, ಇದು ಹುಸಿ.
ಇನ್ನು ವೇದಾಂತಿಯೆಂಬವನು
ಚಿನ್ಮಾತ್ರನು ಚಿತ್ಸ್ವರೂಪನು ತಾನೆಯೆಂಬನು.
ಯೋಗಶಾಸ್ತ್ರೇ:
"ಅಜಡಾಯ ಅನಂತಾಯ, ಅಸ್ವಪ್ನಾಯ ಮಹಾಮತ್ಯೈಃ
ಯದ್ರೂಪಂಚಿದನಿದ್ರಾಯ ತದ್ರೂಪಂ ಪರಮಾತ್ಮನಾ"
ಎಂಬನಾಗಿ, ಇದು ಹುಸಿ.
ಇನ್ನು ಆತ್ಮಯೋಗಿಯೆಂಬಾತನು
ದೇಹ ನಾನಲ್ಲ. ದೇಹಿ ನಾನಲ್ಲ. ಸಾಕ್ಷಾಜ್ಯೋತಿಯೆ ಆತ್ಮವಸ್ತುಯೆಂಬನು.
ಜ್ಞಾನಕಾಂಡೇ:
"ಜಡೋಯಸ್ಯ ಶರೀರಾಣಾಂ ಜಡಾಜಡಸ್ಯಯಾತ್ಮನಃ
ಅಜಡಃ ಪರಮೇಶಾನಾಂ ಸ್ತ್ರಾಯಂತಾತ್ಮ ಪ್ರಕೀರ್ತಿತಃ"
ಎಂಬನಾಗಿ, ಇದು ಹುಸಿ.
ಇನ್ನು ಬೌದ್ಧನೆಂಬಾತನು ದೇಹ ನಾನಲ್ಲ ದೇಹಿಯಲ್ಲ
ಆತ್ಮನಲ್ಲ ವಸ್ತುವಲ್ಲ ಇಲ್ಲದುದೆಯಿಲ್ಲವೆಂಬನು.
"ದೇಹದೇವಂ ಚ ಆತ್ಮಸ್ಯ ವಸ್ತುಮಂ ಸರ್ವನಾಸ್ತಿವತ್
ತತ್ವಯೋ ನಾಸ್ತಿ ತನ್ನಾಸ್ತಿ ಸರ್ವ ನಾಸ್ತಿ ಮಹಂ ಮಹತ್"
ಎಂಬನಾಗಿ, ಇದು ಹುಸಿ.
ಇನ್ನು ಮಾಯಾವಾದಿಯೆಂಬಾತನು ಪಂಚಬ್ರಹ್ಮವಿಶ್ವಮಯ ವಿಶ್ವನು
ಶಿವವಿಷ್ಣುಶಕ್ತ್ಯಾತ್ಮಕಂ ಸರ್ವಹೃದಯನೆಂಬನು. ಬ್ರಹ್ಮಾಂಡ ಪುರಾಣೇ:
"ಪಂಚಬ್ರಹ್ಮಮಯಂ ವಿಶ್ವಾಪಂಚರೂಹೋ ಸದಾಶಿವಃ
ಶಿವವಿಷ್ಣೋಶ್ಚ ಸಂಬಂಧಂ ಯೇಕಮೇವಾತ್ಮ ಮದವಯಂ"
ಎಂಬನಾಗಿ, ಇದು ಹುಸಿ.

ಇನ್ನು ಮೀಮಾಂಸಕನೆಂಬನು
ದೇಹ ಹುಸಿ ಇಂದ್ರಿಯಂಗಳು ಹುಸಿ, ಕರಣಂಗಳು ಹುಸಿ,
ಇನ್ನೊಂದು ದೇವರಿಲ್ಲ ತಾನೆ ಬ್ರಹ್ಮವೆಂಬನು. ತರ್ಕಾಗಮೇ:
"ದೃಶ್ಯಂ ನಾಸ್ತಿ ವಿಭೋದೇನ ಮನಸೋದೃಶ್ಯಮಾರ್ಜನಂ।
ಸಂಪದಶ್ಚೇತದುತ್ಪನ್ನಂ ಪರಿನಿರ್ವಾಣ ನಿರ್ವಿತ್ರೀ।"
ಎಂಬನಾಗಿ, ಇದು ಹುಸಿ.
ಇನ್ನು ಶೂನ್ಯವಾದಿಯೆಂಬಾತನು
ಆತ್ಮನಲ್ಲ, ಕರಣ ಮನ ಇಂದ್ರಿಯಂಗಳಿಲ್ಲ, ಸ್ವರ್ಗನರಕವಿಲ್ಲ,
ಹಿಂದು ಮುಂದಿಲ್ಲ, ನಾನು ನೀನು ತಾನು ಏನೂ ಇಲ್ಲಯೆಂಬನು.
ಜ್ಞಾನಸಾರೇ "ಅನುತಿಷ್ಠ ಕರ್ಮಾಣಿ ಪರಲೋಕಾನುಸಾದಯೇತ್
ಸರ್ವಲೋಕಶ್ಚಮಾತ್ಮಾನಾಂ ಅನು ತಿಷ್ಟಂ ಕಿಂ ಪ್ರಯೋಜನಂ"
ಎಂಬನಾಗಿ, ಇದು ಹುಸಿ.
ಇಂತೀ ಷಡ್ದರ್ಶನ ಷಡ್ಮತಂಗಳ ಹುಸಿಯೆಂಬ ವೀರಶೈವವೆಂತೆಂಬನೆಂದಡೆ:
ಒಂದೆ ಆಕಾಶ ಘಟಪ್ರಭೇದದಿಂದ ಹಲವಾಕಾಶವಾದ ಹಾಂಗೆ,
ಶಕ್ತಿಯ ಭೇದದಿಂ ಶಿವಜೀವರಾದರು.
ಇದನರಿದು ಆ ಭೇದವಳಿಯಲು ಶಿವ ಜೀವರೊಂದೆಯೆಂಬನು.
ಸ್ಕಂದೇ:
"ನಮಃ ಪದಂ ತತ್ಕಲು ಜೀವವಾಚಿ ಶಿವಃ ಪದಂ ತತ್ಪರಮಾತ್ಮವಾಚಿ
ಅಯೇಚ ತದಾತ್ಮ ಪರಾಚತುರ್ಥಿ ಸೋಹಂ ಪರಬ್ರಹ್ಮಮಯೋಸ್ಮಿಖಾಂಡಂ"
ಎಂಬನಾಗಿ, ಇದು ಭಾವದ ಬಳಕೆಯ ಪರಿಯಲ್ಲ.
ತಾನಾರೋ ತನ್ನ ದೇವರಾರೋ ಎಂಬ ವಿಭೇದವಡಂಗಿದ
ಸುಮ್ಮಾನದ ಸುಖವೆ ಸ್ವಯವಾದ ನಿಜಬ್ರಹ್ಮವು. ಶ್ರುತಿ:
"ವೇದಸ್ಯದ್ಭಾವಾತೀತದಾತ್ಮರೂಪಂ ನಾನ್ಯಂ ತಥೋ ನ ಚಾನ್ಯದಸ್ಥಿ।
ಸ್ವಭಾವ ಸಂವಿತ್ತ್ರತಿಭಾತಿ ಕೇವಲಂ ಗ್ರಾಹ್ಯಂ ಗ್ರಹಿತೇತಿಮೃಶೈವ ಕಲ್ಪನಃ"
ಸ್ಕಂದೇ:
"ಅಸ್ತಿನಾಸ್ತಿದ್ವಯಾತೀತೋ ಅಸ್ತಿನಾಸ್ತಿಸಮಾನ್ವಿತಂ
ಸರ್ವಜ್ಞಃ ಸರ್ವರಹಿತಂ ತತ್ಪದಂ ವಿದ್ಧಿಷಣ್ಮುಖ"
ಇಂತೆಂಬುದೆ ನಿಜ,
ಸಕಲ ನಿಷ್ಕಲ ಶೂನ್ಯ ನಿಃಶೂನ್ಯವೆಂಬ ಬಾಧಕರ ಬಗೆಯಳಿದು
ನಿಂದ ನಿಜದ ನಿಲವೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. ॥೩೨೫॥

೧೫೮೫

ಸಟೆಯ ದಿಟವ ಮಾಡಿ ಕಂಡು, ಸ್ವಭಾವವಾಗಿ ಸದ್ಭಾವದಿಂ ಲಿಂಗವಾಗಿ
ಲಿಂಗವನು ಭಕ್ತಿಯಿಂದ ಪೂಜಿಸಿ ಲಿಂಗದಲ್ಲಿ ವರವ ಪಡೆದು,

ಶಿವಪದವ ಪಡೆದರು ಪುರಾತನರು. ಅದೆಂತೆನಲು ಕೇಳಿರೆ:
ಬಳ್ಳ ಲಿಂಗವೆ? ಅಲ್ಲ, ಅದು ಸಟೆ,
ಸದ್ಭಾವದಿಂ ಲಿಂಗವಾಯಿತ್ತು, ಬಳ್ಳೇಶ್ವರ ಮಲ್ಲಯ್ಯಗಳಿಂದ.
ಆಡಿನ ಹಿಕ್ಕೆ ಲಿಂಗವೆ? ಅಲ್ಲ, ಅದು ಸಟೆ.
ಸದ್ಭಾವದಿಂ ಲಿಂಗವಾಯಿತ್ತು, ಗೊಲ್ಲಾಳರಾಯನಿಂದ.
ನರಮಾಂಸವ ಭಕ್ಷಿಸುವೆನೆಂಬವ ಜಂಗಮವೆ? ಅಲ್ಲ, ಅದು ಸಟೆ.
ಸದ್ಭಾವದಿಂ ಭಾವಿಸೆ ಜಂಗಮವಾಗಿ ಕೇವಲ ಲಿಂಗವಾಯಿತ್ತು ಸಿರಿಯಾಳನಿಂದ.
ಸತ್ತ ಕರುವ ಹೊತ್ತು ಮಾದಾರನಾಗಿ ಬರುವುದು ಜಂಗಮಲಕ್ಷಣವೇ?
ಅಲ್ಲ, ಅದು ಸಟೆ. ಸದ್ಭಾವದಿಂ ಭಾವಿಸೆ ಜಂಗಮ ಲಿಂಗವಾಯಿತ್ತು
ಕೆಂಭಾವಿಯ ಭೋಗಣ್ಣನಿಂದ.
ಡೊಂಬಿತಿ ಗುರುವೆ? ಅಲ್ಲ, ಅದೂ ಸಟೆ.
ಸದ್ಭಾವದಿಂ ಭಾವಿಸೆ ಲಿಂಗವಾಯಿತ್ತು ಗುರುಭಕ್ತಯ್ಯಂಗಳಿಂದ.
ಇಂತು ಸಟೆಯ ದಿಟವ ಮಾಡಿ
ದಿಟವಾದರು, ಸದ್ಭಕ್ತರಾದರು, ಕೇವಲ ಲಿಂಗವ ಮಾಡಿದರು.
ದಿಟ ಶಿವನ ಸಟೆಯ ಮಾಡಿ ಕಂಡು ಸನತ್ಕುಮಾರನೊಂಟೆಯಾದನು.
ದಿಟ ಶಿವನ ಸಟೆಯ ಮಾಡಿ ಕಂಡು
ಬ್ರಹ್ಮ ತನ್ನ ಶಿರವ ಹೋಗಾಡಿಕೊಂಡನು.
ದಿಟ ಶಿವನ ಸಟೆಯ ಮಾಡಿಕಂಡು ದಕ್ಷನು
ತನ್ನ ಶಿರವ ಹೋಗಾಡಿಕೊಂಡನು.
ದಿಟ ಶಿವನ ಸಟೆಯ ಮಾಡಿ ಕಂಡು ನರಸಿಂಹನು ವಧೆಗೊಳಗಾದನು.
ಈ ಮಹಾ ತಪ್ಪುಗಳನ್ನು ಮಾಡಿ ದೋಷಿಗಳಾದರು.
ಮಹಾಲಿಂಗದ ಸದ್ಭಕ್ತರು,
ಮಹಾಶರಣಪ್ಪ ನಂದೀಶ್ವರ ವೀರಭದ್ರ ಮೊದಲಾದ
ಮಹಾಗಣಂಗಳಿಗೆ ಸದ್ಭಕ್ತಿಯ ಮಾಡಿ
ತಪ್ಪ ಪರಿಹರಿಸಿಕೊಂಡು ಸದ್ಭಕ್ತರಾದರು.
ಸಟೆಯ ದಿಟವ ಮಾಡುವ ಶಕ್ತಿಯಿಲ್ಲ ಎಮ್ಮ ಸದ್ಭಕ್ತರಂತೆ.
ಅದಂತಿರಲಿ, ದಿಟವ ಸಟೆಯ ಮಾಡಿ
ದೋಷಿಗಳಾದಿರಿ ಅಭಕ್ತರಂತೆ. ಅದಂತಿರಲಿ,
ಸಟೆಯ ದಿಟವ ಮಾಡಬೇಡ, ದಿಟವ ಸಟೆಯ ಮಾಡಬೇಡ.
ಸಹಜಸ್ವಭಾವ ನಿತ್ಯಸತ್ಯವಹ ತಾತ್ಪರ್ಯವನೆ
ವಿಶ್ವಾಸವ ಮಾಡಿ, ನಂಬಿ ಭಕ್ತಿಯಿಂ ಪೂಜಿಸಿ.
ಅವಿಶ್ವಾಸದಿಂ ಕೆಡಬೇಡ, ಕೆಡಬೇಡ.
ಸಹಜವಹ ದೃಷ್ಟವಹ ಪರಶಿವನು ಶ್ರೀಗುರು.

ವಿಶ್ವಾಸವಂ ಮಾಡಿ ನಂಬಿರಣ್ಣಾ, ಮತ್ತೆಯೂ ನಂಬಿರಣ್ಣಾ.
ಆ ಪರಶಿವನು ಶ್ರೀಗುರುಲಿಂಗವು ಏಕವಾದ ಲಿಂಗವು.
ವಿಶ್ವಾಸವ ಮಾಡಿ ನಂಬಿರಣ್ಣಾ, ಮತ್ತೆಯೂ ನಂಬಿರಣ್ಣಾ.
ಆ ಪರಶಿವಮೂರ್ತಿ ಜಂಗಮವು.
ವಿಶ್ವಾಸವ ಮಾಡಿ ನಂಬಿರಣ್ಣಾ, ಮತ್ತೆಯೂ ನಂಬಿರಣ್ಣಾ.
ಕೇವಲ ವಿಶ್ವಾಸವ ಮಾಡಿ ಪ್ರಸಾದವ ಪಡೆದು ಮುಕ್ತರಾಗಿ, ಇದು ದೃಷ್ಟ.
ಅವಿಶ್ವಾಸದಿ ಕೆಡದಿರಿ ಕೆಡದಿರಿ. ಸರ್ವಸದ್ಭಾವವಿಶ್ವಾಸದಿಂ ಬದುಕಿರಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಲಿಂಗವ ನಂಬಿರಣ್ಣಾ. ॥೩೨೬॥

೧೫೮೬

ಸತ್ಯ ಛಲ ಭಾಷೆಯಿಂ ಸತಿಯಾಗಿರಬಲ್ಲ ಶರಣಂಗೆ ಲಿಂಗವೇ ಪತಿ.
ಗಮನಾಗಮನವರ್ಜಿತ, ಅರಿಷಡ್ವರ್ಗವರ್ಜಿತವ ಮಾಡಿ,
ಮಾಟದೊಳು ಬಹುಭಾಷಿತನಲ್ಲಾಗಿ ಸುಬುದ್ಧಿ.
ಲಿಂಗಪ್ರಾಣಿ ಎನ್ನ ಬಲ್ಲನಾಗಿ ಷಡುರುಚಿ ವಿರೋಧಿ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೨೭।

೧೫೮೭

ಸತ್ಯಸಹಜ ನಿತ್ಯ ಉತ್ತಮ ವಸ್ತು, ನಿಜತತ್ವವೆನಿಸುವ ಶಿವನು ಒಂದೇವಸ್ತು.
ವೇದ, ಶಾಸ್ತ್ರ, ಪುರಾಣ, ಆಗಮ,ಅಷ್ಟಾದಶ ವಿದ್ಯೆಂಗಳು ವಾದಿಸಲು,
ಅಂದೂ ಇಂದೂ ಶಿವತತ್ವ ಒಂದೇ ವಸ್ತುವೆಂದು ನಿರ್ಧರಿಸುವವು.
ಸಕಲ ನಿಃಕಲದೊಳಗೆ ಉತ್ತಮೋತ್ತಮ ವಸ್ತುವೊಂದೇ.
ಇದನರಿದು ನಿಶ್ಚೈಸುವ ವಿವೇಕವುಳ್ಳ ಮನ ಅಂದೂ ಇಂದೂ ಒಂದೇ.
ಇದನೆಂತೂ ನೀವೇ ಬಲ್ಲರಿ.
ಈ ಒಂದೊಂದರಲ್ಲೆ ಒಂದೊಂದ ಮಾಡಲು ಒಂದಲ್ಲದೆ ಮತ್ತೊಂದಿಲ್ಲ.
ಇದಲ್ಲದೆ ಇನ್ನೊಂದುಂಟೆಂಬವಂಗೆ ಎರಡಲ್ಲದೆ ಒಂದಿಲ್ಲ.
ಅವಂಗೆ ಅಧೋಗತಿ, ಅವನಜ್ಞಾನಿ.
ಒಂದೆಂದರಿದವಂಗೆ ಜ್ಞಾನವಿದೆ, ಭಕ್ತಿಯಿದೆ, ಮುಕ್ತಿಯಿದೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೨೮॥

೧೫೮೮

ಸತ್ತ್ರೀಯಿಂದ ಸಕಲಪದಾರ್ಥಂಗಳ ಭಾಜನ ತೀವಿ,
ತನ್ನ ಲಿಂಗಕ್ಕೆ ಕೊಟ್ಟಲ್ಲದೆ ಕೊಳ್ಳೆನೆಂಬ
ಅಚ್ಚ ಪ್ರಸಾದಿಗಳಿಗೆ ಹುಸಿ ಹೊದ್ದಿತಲ್ಲಾ.

ಪೃಥ್ವಿ ಅಪ್ಪು ತೇಜ ವಾಯು ಆಕಾಶ
ಕತ್ತಲೆ ಬಿಸಿಲು ಬೆಳದಿಂಗಳು ಮುಂತಾದ ಪದಾರ್ಥಂಗಳು
ತನ್ನಂಗವ ಸೋಂಕಿ ಅಲ್ಲಿ
ಅರ್ಪಿತವೆಂದು ಕೊಳ್ಳಬಾರದು, ಅನರ್ಪಿತವೆಂದು ಕಳೆಯಬಾರದು.
ಇದು ಕಾರಣವದಂತಿರಲಿ,
ಆವ ವೇಳೆಯಲ್ಲಿ ಆವ ಠಾವಿನಲ್ಲಿ ತನಗೆ ಬೇಕಾದ ಪದಾರ್ಥಂಗಳನು,
ತನ್ನ ಪ್ರಾಣಲಿಂಗವಿರಹಿತವಾಗಿ
ಉಂಡಡೆ ಭವದುಃಖವನುಂಬುದು ತಪ್ಪದಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೨೯॥

೧೫೪೯
ಸತ್ತುರೂಪ ಲಿಂಗ, ಚಿತ್ತುರೂಪ ಜಂಗಮ, ಆನಂದರೂಪ ಪ್ರಸಾದ.
ಇಂತೀ ತ್ರಿವಿಧವಾದ ಅರಿವನು
ಶ್ರೀಗುರು ಇಷ್ಟಲಿಂಗದಲ್ಲಿ ತೋರಿ ಬಿಜಯಂಗೈಸಿ ಕೊಟ್ಟ ಬಳಿಕ,
ಸತ್ತುಚಿತ್ತಾನಂದವೆಂಬ ಬಟ್ಟಬಯಲೇಕಯ್ಯಾ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೩೦॥

೧೫೫೦
ಸದ್ಭಕ್ತನು ತನು ಮನ ಧನ ಪ್ರಾಣಾದಿಗಳನರ್ಪಿಸಿ,
ಸಕಲ ಸಾಕಾರ ದ್ರವ್ಯಾದಿಗಳೆಲ್ಲವೂ ಶಿವನ ಸೊಮ್ಮಾಗಿ,
ಅದೆಂತೆಂದಡೆ ಋಗ್ವೇದ,
'ಶಿವೋ ದಾತಾ ಶಿವೋ ಭೋಕ್ತಾ ಶಿವಸ್ಸರ್ವಮಿದಂ ಜಗತ್
ಶಿವೋ ಯಜತಿ ಸರ್ವತ್ರ ಯಶ್ಶಿವಸ್ಸೋ[s]ಹಮೇವ ಚ' ಎಂದುದಾಗಿ,
ಇದನರಿದು ದಾತೃ ಭೋಕ್ತೃ ಶಿವನೆಂದು,
ಅಹಂ ಮಮತೆಗಳಡಗಿ, ಸ್ವಾನುಭಾವವಳವಟ್ಟು,
ಬಾಗಿಲುಗಾಹಿಯಾಗಿ ದಾಸೋಹಮಂ ಮಾಡುವುದು,
ಇದು ಉತ್ತಮ ಕ್ರಿಯೆಯು.
ಇದು ಲಿಂಗದೊಡನೆ ಹುಟ್ಟಿ, ಲಿಂಗದೊಡನೆ ಬೆಳೆದು,
ಲಿಂಗದೊಡನೆ ಲೀಯವಹ ಮಹಾಲಿಂಗಾಂಗಿಗಲ್ಲದೆ ಸಾಧ್ಯವಾಗದು.
ಇದು ಅಳವಡದಿರ್ದಡೆ ಸದ್ಭಕ್ತನು
ತನು, ಮನ, ಧನ, ಪ್ರಾಣ ಮುಂತಾಗಿ
ವಂಚನೆ ಇಲ್ಲದೆ ಸದ್ಭಕ್ತಿಯಿಂ ದಾಸೋಹಮಂ ಮಾಡುವುದು.
ಇದು ಮಧ್ಯಮ ಕ್ರಿಯೆಯು. ಇದು ಸಾಮಾನ್ಯರಿಗಳವಡದು.
ಇದು ಅಸಾಧ್ಯವು.

ಇದು ಅಳವಡದಿರ್ದಡೆ, ಸದ್ಭಕ್ತನು ತನ್ನ
ತನು ಮನ ಪ್ರಾಣಂಗಳ ಬಳಲಿಸಿ
ತನಗೆ ಪ್ರಿಯವಾದ ಪುತ್ರ ಮಿತ್ರ ಕಳತ್ರಾದಿಗಳಿಗೆ
ಹೇಗೆ ಸಕಲ ದ್ರವ್ಯಂಗಳಂ ಕೊಡುವನೋ
ಹಾಗೆ ಸ್ನೇಹದಿಂದ ದಾಸೋಹವ ಮಾಡುವುದು,
ಇದು ಕನಿಷ್ಠಕ್ರಿಯೆಯು.
ಇದು ಮಹಾಜ್ಞಾನಿಪುರುಷರಿಗಲ್ಲದೆ ಅಳವಡದು.
ಇದು ಅಳವಡದಿರ್ದಡೆ, ಶಕ್ತ್ಯಾನುಸಾರದಿಂ ಮಾಡುವುದು.
ಇದು ನಿಕೃಷ್ಟಕ್ರಿಯೆಯು.
ಅದೆಂತೆಂದಡೆ:
'ಶ್ರೂಯತಾಂ ಧರ್ಮಸರ್ವಸ್ವಂ ಶ್ರುತ್ವಾ ಚೈವಾವಧಾರ್ಯತಾಂ
ಆತ್ಮನಃ ಪ್ರತಿಕೂಲಂ ಚ ಪರೇಷಾಂ ನ ಸಮಾಚರೇತ್' ಎಂದುದಾಗಿ
ಇದನರಿತು ತನ್ನಂತೆ ಭಾವಿಸಿಯಾದಡೂ
'ದಾಸೋಹವ ಮಾಡಿ ಪ್ರಸನ್ನತೆಯ ಪಡೆವುದೇ
ಸದ್ಭಕ್ತನ ಪಥವು ನೋಡಾ.
ಇಂತಪ್ಪ ಉತ್ತಮ ಮಧ್ಯಮ ಕನಿಷ್ಠನಿಕೃಷ್ಟವೆಂಬ
ಈ ನಾಲ್ಕು ಪರ್ಯಾಯದಲ್ಲಾದಡೆಯೂ,
ಒಂದು ಪರ್ಯಾಯದಲ್ಲಿ ಭಾವಿಸಿಕೊಂಡು,
ತನುಮನಧನವನಿತ್ತು ಸ್ನೇಹದಿಂದ ದಾಸೋಹವ ಮಾಡಿ
ಪ್ರಸಾದವ ಪಡೆದು ಭೋಗಿಸಿ, ಭಕ್ತರಾಗಬೇಕು.
ಈ ಪ್ರಕಾರದಿಂದಲ್ಲದೆ, ಮುಕ್ತಿ ಇಲ್ಲ.
ಈ ಚತುರ್ವಿಧ ಕ್ರಿಯೆಗಳೊಳಗೆ
ಆವುದನು ಮಾಡದೆ, ದುಷ್ಕ್ರಿಯೆಯಲ್ಲಿ ವರ್ತಿಸುತ್ತ
ದಾಸೋಹವವಿಲ್ಲದೆ, ತನ್ನೊಡಲನೆ ಹೊರೆದಡೆ
ಅವನು ಸದ್ಭಕ್ತರೊಳಗೆ ಸಲ್ಲ, ಅವಂಗೆ ಪ್ರಸಾದವಿಲ್ಲ.
ಪ್ರಸಾದವಿಲ್ಲಾಗಿ ಮುಕ್ತಿ ಇಲ್ಲ, ಅವನು ಉಭಯಭ್ರಷ್ಟ.
ಇದನರಿತು ತನ್ನಂತೆ ಭಾವಿಸಿ,
ವಿಶ್ವಾಸದಿಂ ದಾಸೋಹವಂ ಮಾಡಲು,
ಇಹಸಿದ್ಧಿ, ಪರಸಿದ್ಧಿ, ಸರ್ವಸಿದ್ಧಿಯಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೩೧॥

೧೫೫೧
ಸದ್ಭಕ್ತಿಯೆ ಆರು ಸ್ಥಲಕ್ಕೆ ಮುಖ್ಯ,
ಸದ್ಭಕ್ತಿಯ ಕೂಡಿಕೊಂಡು ಷಟ್‌ಸ್ಥಲವಿಪ್ಪುದು. ಇದು ಕಾರಣ:

ಸದ್ಭಕ್ತಿಯಿಂ ಲಿಂಗದ-ಲಿಂಗವಂತರ ಸುಖವನು,
ಮಹಿಮೆಯ ಪೂಜೆಯನು ಅರಿದು ಮರೆದು
ವಿಷ್ಣು ಕಷ್ಟಜನ್ಮದಲ್ಲಿ ಬಂದನು.
ಅರಿದು ಮರೆದು ಬ್ರಹ್ಮನು ಘನವೆಂದು ಶಿರವ ಹೋಗಾಡಿಕೊಂಡನು.
ಅರಿದು ಮರೆದು ಇಂದ್ರನು ಭಂಗಿತನಾಗಿ
ಐಶ್ವರ್ಯಮಂ ಹೋಗಾಡಿಕೊಂಡನು.
ಅರಿದು ಮರೆದು ದಕ್ಷನು ಭಂಗಿತನಾಗಿ ಶಿರವ ಹೋಗಾಡಿಕೊಂಡನು.
ಅರಿದು ಮರೆದು ವ್ಯಾಸನು ಹಸ್ತವ ಹೋಗಾಡಿಕೊಂಡನು.
ಈ ದೃಷ್ಟವ ಹಲವು ಪುರಾತನರು ಕೇಳಿರಣ್ಣಾ:
ಅರಿದು ಮರೆಯದೆ ನಂಬಲು ಸಿರಿಯಾಳನಿಗೆ ಶಿವಪದವಾಯಿತ್ತು.
ಅರಿದು ಮರೆಯದೆ ನಂಬಲು ಸಿಂಧುಬಲ್ಲಾಳಂಗೆ ಶಿವಪದವಾಯಿತ್ತು.
ಅರಿದು ಮರೆಯದೆ ನಂಬಲು ನಂಬಿಯಣ್ಣನ ಬೆನ್ನಿಲಿ ಶಿವಬಂದನು.
ಅರಿದು ಮರೆಯದೆ ನಂಬಲು ನಿಂಬವ್ವೆಗೆ ಶಿವಪದವಾಯಿತ್ತು.
ಅರಿದು ಮರೆಯದೆ ನಂಬಲು
ಕೆಂಭಾವಿಯ ಭೋಗಣ್ಣನ ಬೆನ್ನಿಲಿ ಶಿವ ಬಂದನು.
ಅರಿದು ಮರೆಯದೆ ನಂಬಲು ಪುರಾತನರೆಲ್ಲರು ಶಿವಪದಂಗಳ ಪಡೆದರು.
ಇದನು ಶ್ರುತ ದೃಷ್ಟ ಅನುಮಾನದಿಂ ಕೇಳಿ, ನಿಶ್ಚೈಸಿ, ನಂಬಿ.
ಅರಿವಿನ ಹದವಿದು, ಮರವೆಯ ಪರಿಯಿದು.
ಇಷ್ಟವಾದುದ ಹಿಡಿದು ಅನಿಷ್ಟವಾದುದ ಬಿಟ್ಟು,
ಅರಿವು ಸಯವಾಗಲು ಶಿವಪದವಪ್ಪುದು ತಪ್ಪದು, ಶಿವನಾಣೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೩೨॥

೧೫೬೨
ಸದ್ಗುರುವಿನಿಂದ ಮಹತ್ತಪ್ಪ ಮಹಾಲಿಂಗ ಉತ್ಪತ್ತಿ,
'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ
ನಾದಬಿಂದುಕಲಾತೀತಂ ಗುರುಣಾ ಲಿಂಗಮುದ್ಭವಂ' ಎಂದುದಾಗಿ,
ಸದ್ಗುರುವಿನಿಂದವು ಉರಿಲಿಂಗ ಉತ್ಪತ್ತಿ,
ಲಿಂಗದಿಂದವು ಜಂಗಮ ಉತ್ಪತ್ತಿ,
ಜಂಗಮದಿಂದವು ಪ್ರಸಾದೋತ್ಪತ್ತಿ, ಪ್ರಸಾದದಿಂದವು ಭಕ್ತಿ ಉತ್ಪತ್ತಿ,
ಭಕ್ತಿ ಪ್ರಸಾದದಿಂದವೂ ಸಕಲೋತ್ಪತ್ತಿ. ಇದು ಕಾರಣ,
ಪ್ರಸಾದವುಳ್ಳವಂಗೆ ಭಕ್ತಿ ಉಂಟು, ಯುಕ್ತಿಯುಳ್ಳವಂಗೆ ಜಂಗಮ ಉಂಟು,
ಜಂಗಮವುಳ್ಳವಂಗೆ ಲಿಂಗ ಉಂಟು.
ಲಿಂಗವುಳ್ಳವಂಗೆ ಸದ್ಗುರು ಉಂಟು.

ಇದು ಕಾರಣ, ಸದ್ಗುರುವೇ ಕಾರಣವು.
'ಗುರುಣಾ ದೀಯತೇ ಲಿಂಗಂ ಗುರುಣಾ ದೀಯತೇ ಕ್ರಿಯಾ
ಗುರುಣಾ ದೀಯತೇ ಮಂತ್ರಂ ಸದ್ಗುರುಸ್ಸರ್ವಕಾರಣಂ' ಎಂದುದಾಗಿ,
ಸದ್ಗುರುವೆ ಸರ್ವಶ್ರೇಷ್ಠನು,
ಸದ್ಗುರುವೆ ಸರ್ವಪೂಜ್ಯನು, ಸದ್ಗುರುವೆ ಸರ್ವಕಾರಣವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೩೩॥

೧೫೯೩
ಸದ್ಗುರುವೇ ಶಿವಲಿಂಗವು, ಸದ್ಗುರುವೇ ಜಂಗಮಲಿಂಗವು,
ಸದ್ಗುರುವೆ ಪ್ರಸಾದಲಿಂಗವು, ಸದ್ಗುರುವೆ ಸದ್ಭಕ್ತನು,
ಎಂದೆಂಬ ಮಹಾಜ್ಞಾನಜ್ಯೋತಿಪ್ರಕಾಶವಾದ
ಜ್ಯೋತಿರ್ಮಯಲಿಂಗವೇ ಗುರುವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೩೪॥

೧೫೯೪
'ಸದ್ಗುರುಶ್ಶಿವಲಿಂಗಂ ಚ ಜಂಗಮಶ್ಚ ಪ್ರಸಾದಕಂ
ಚತುರ್ವಿಧಃ ಷಡಕ್ಷರೋ ಮಂತ್ರಸ್ಸಾಕ್ಷಾತ್ಪರಶ್ಶಿವಃ'
ಓಂ ನಮಃ ಶಿವಾಯ ಓಂ ನಮಃ ಶಿವಾಯ
ಓಂ ನಮಃ ಶಿವಾಯ ಎಂದೆನ್ನದಿರೆ ಬಂಧನ,
ಓಂ ನಮಃ ಶಿವಾಯ ಎಂದೆನಲು ಮೋಕ್ಷ.
'ಷಡಕ್ಷರಜಪಾನ್ನಾಸ್ತಿ ಸರ್ವೇಷಾಂ ಬಂಧನಂ ತಥಾ
ತನ್ಮಂತ್ರಂ ಚ ಜಪಾನ್ ಭಕ್ತ್ಯಾ ಸದ್ಯೋನ್ಮುಕ್ತೋ ನ ಸಂಶಯಃ'
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೩೫॥

೧೫೯೫
ಸದ್ಯೋಜಾತಮುಖವೇ ಪೃಥ್ವಿ ಎಂದರಿದಲ್ಲಿ
ಸ್ಥಾವರಂಗಳಲ್ಲಿ ಪತ್ರಪುಷ್ಪದ ಹಂಗೇಕೆ?
ವಾಮದೇವಮುಖವೇ ಅಪ್ಪುವೆಂದರಿದಲ್ಲಿ
ಅಗ್ಗವಣಿಯಲ್ಲಿ ಮಜ್ಜನಕ್ಕೆರೆವ ಹಂಗೇಕೆ?
ಅಘೋರಮುಖವೇ ಅಗ್ನಿ ಎಂದರಿದಲ್ಲಿ
ಧೂಪದೀಪಾರತಿಗಳ ಹಂಗೇಕೆ?
ತತ್ಪುರುಷಮುಖವೇ ವಾಯುವೆಂದರಿದಲ್ಲಿ
ಮಂತ್ರತಂತ್ರದ ಹಂಗೇಕೆ?

ಈಶಾನ್ಯಮುಖವೇ ಆಕಾಶವೆಂದರಿದಲ್ಲಿ
ಧ್ಯಾನಮೌನದ ಹಂಗೇಕೆ?
ಇಂತೀ ಪಂಚಬ್ರಹ್ಮವೇ ಪರಬ್ರಹ್ಮವೆಂದರಿದ ಶರಣಂಗೆ
ಸರ್ವ ಉಪಚಾರ ಸಂಕಲ್ಪವೇಕೆ ಹೇಳಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ? ॥೩೩೬॥

೧೫೫೬
ಸದ್ಯೋಜಾತ ವಾಮದೇವ ತತ್ಪುರುಷ ಅಘೋರ ಈಶಾನ್ಯವೆಂಬ
ಪಂಚಬ್ರಹ್ಮವೇ ಮೊದಲಾದ ಪಂಚಮುಖದ ರುದ್ರಾಕ್ಷಿ.
ಆ ರುದ್ರಾಕ್ಷಿಯ ಹಸ್ತ ತೋಳು ಕರ್ಣ ಕಂಠ
ಮಸ್ತಕದಲ್ಲಿ ಧರಿಸಿಪ್ಪ ಶಿವಭಕ್ತನೇ ರುದ್ರನು.
ಆತನ ದರ್ಶನದಿಂದ ಭವರೋಗ ದುರಿತ ಇರಲಮ್ಮವು ನೋಡಾ.
'ಓಂ ಅತ ಏವ ರುದ್ರಾಕ್ಷಧಾರಣಾತ್ ರುದ್ರಃ' ಎಂದುದಾಗಿ
ರುದ್ರಪದವಿಯನೀವ ರುದ್ರಾಕ್ಷಿಯಂ ಧರಿಸಿಪ್ಪ ಭಕ್ತರಿಗೆ
ಶರಣೆಂಬೆನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೩೭॥

೧೫೫೭
ಸಪ್ತವ್ಯಸನಿಗಳಾದವರಿಗೆ ಆ ವ್ಯಸನಿಗಳ ಸಂಗದಿಂದಲ್ಲದೆ
ಆ ವ್ಯಸನಂಗಳು ಸಿದ್ಧಿಸವಯ್ಯಾ.
ಲಿಂಗವ್ಯಸನಿಗಳಿಗೆ ಆ ಲಿಂಗವ್ಯಸನಿಗಳ ಸಂಗದಿಂದಲ್ಲದೆ
ಆ ಲಿಂಗವ್ಯಸನಂಗಳು ಸಿದ್ಧಿಸವಯ್ಯಾ,
ಆ ಲಿಂಗವ್ಯಸನದಿಂದಲ್ಲದೆ ಜಂಗಮವ್ಯಸನ ಸಿದ್ಧಿಸದಯ್ಯಾ.
ಆ ಜಂಗಮವ್ಯಸನದಿಂದಲ್ಲದೆ ಪ್ರಸಾದವ್ಯಸನ ಸಿದ್ಧಿಸದಯ್ಯಾ,
ಆ ಪ್ರಸಾದವ್ಯಸನದಿಂದಲ್ಲದೆ ಮುಕ್ತಿಯಿಲ್ಲವಯ್ಯಾ.
ಇದು ಕಾರಣ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ,
ಲಿಂಗಾನುಭಾವಿಗಳ ಸಂಗವನೆ ಕರುಣಿಸಿ,
ಎನ್ನ ಮುಕ್ತನ ಮಾಡಯ್ಯಾ ನಿಮ್ಮ ಧರ್ಮ. ॥೩೩೮॥

೧೫೫೮
ಸಮ್ಯಜ್ಞಾನ ಸದ್ಭಕ್ತಿ ಸನ್ನಿಹಿತನಾಗಿ,
ಲಿಂಗ ಮುಂತಾಗಿ ಮಾಡಿದ ಕ್ರೀಗಳು ಲಿಂಗಕ್ರೀ.
ಪೂಜೆ, ಧ್ಯಾನ, ಅರ್ಪಿತ, ಪ್ರಸಾದ, ಮುಕ್ತಿ ಇವೆಲ್ಲವು ಲಿಂಗದೊಳಗು.
ಅಜ್ಞಾನ, [ಅ]ಭಕ್ತಿ, ಮರವೆ, ಅಂಗ ಮುಂತಾಗಿ ಮಾಡಿದ ಕ್ರೀಗಳು ಅಂಗಕ್ರೀ,

ಅದು ಹೊರಗು.
ಇದು ಕಾರಣ, ಸಮ್ಯಜ್ಞಾನ ಸದ್ಭಕ್ತಿ ಸನ್ನಿಹಿತವಾದುದೆ ಸದ್ಭಕ್ತಿ.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೩೯॥

೧೫೯೯
ಸರ್ವಗತನಾಗಿ ನೀನೆನ್ನೊಳಗಿಹೆ, ಸರ್ವೇಶ್ವರನಾಗಿ ನೀನೆನಗೊಡೆಯ,
ಸರ್ವಜ್ಞನಾಗಿ ನೀನೆನ್ನ ಬಲ್ಲೆ. ನೀನರಿಯದಿರ್ದಡೆ ನಾನೇನಪ್ಪೆನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ? ॥೩೪೦॥

೧೬೦೦
ಸಾಕಾರವಿಡಿದು ಅರ್ಚನೆ ಪೂಜನೆಯಂ ಮಾಡುವುದಲ್ಲದೆ
ನಿರಾಕಾರವ ನಂಬಲಾಗದು.
ಅಗ್ನಿಯಲ್ಲಿಹ ಗುಣವು ಪ್ರಕಾಶದಲುಂಟೆ?
ಶ್ರೀಗುರು ಕರಸ್ಥಲದಲ್ಲಿ ಬಿಜಯಂಗೈಸಿ ಕೊಟ್ಟ
ಇಷ್ಟಲಿಂಗವಿದ್ದ ಹಾಂಗೆ ವಜ್ರದೊಳಗೆ ಬಯಲನರಸುವರೆ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೪೧॥

೧೬೦೧
ಸಾಕಾರವಿಡಿದು ಪರಬ್ರಹ್ಮ, ನಿರಾಕಾರವಿಡಿದು ಪರಬ್ರಹ್ಮವೆಂಬಿರಿ.
ಪರಬ್ರಹ್ಮವ ನುಡಿವಿರಿ, ಪರಬ್ರಹ್ಮವನರಿದಿಹೆವೆಂಬಿರಿ,
ಅರಿಹಿಸಿಹೆವೆಂಬಿರಿ, ಆನೆ ಪರಬ್ರಹ್ಮವೆಂಬಿರಿ,
ಪರಬ್ರಹ್ಮವನರಿಯದೆ ನುಡಿವಿರಿ,
ಬ್ರಹ್ಮದೊಡಕು ಅರಿದು ಕಂಡಿರಣ್ಣಾ.
ಈ ಬ್ರಹ್ಮದೊಡಕಿಂದ ಮುನ್ನೊಮ್ಮೆ ದೇವಜಾತಿಗಳು ಋಷಿಜನಂಗಳು
ಬ್ರಹ್ಮನನು, ಪರಬ್ರಹ್ಮವ ಬೆಸಗೊಳಲು
ಅಹಂ ಬ್ರಹ್ಮವೆಂದು ತಲೆಯ ಹೋಗಾಡಿಕೊಂಡುದು
ಸರ್ವಪುರಾಣಪ್ರಸಿದ್ಧ,
ಇನ್ನೂ ತಲೆಯ ಮೋಟು ಕಾಣಬರುತ್ತದೆ.
ಬ್ರಹ್ಮನ ಶಿರ ಪರಬ್ರಹ್ಮದ ಕೈಯಲ್ಲಿದೆ.
ಆನೆ ಪರಬ್ರಹ್ಮವೆಂದು ಸನತ್ಕುಮಾರ ಒಟ್ಟೆಯಾದುದು
ಸ್ಕಂದ ಪುರಾಣಪ್ರಸಿದ್ಧ.
ಅವರಂತಾಗದೆ, ಪರಬ್ರಹ್ಮದ ನೆಲೆಯ ಕೇಳಿರಣ್ಣಾ:
ಲಿಂಗವೇ ಪರಬ್ರಹ್ಮವೆಂದು ಅಥರ್ವಣ ಹೇಳುತ್ತದೆ,

'ಏಕೋ ರುದ್ರಸ್ಸ ಈಶಾನಃ ಸ ಭಗವಾನ್ ಸ ಮಹೇಶ್ವರೋ ಮಹಾದೇವ ಇತಿ'
ಈ ಪ್ರಕಾರದಲೆ ಯಜುರ್ವೇದ ಹೇಳುತ್ತಿದ್ದಿತ್ತು.
'ಋತಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣ ಪಿಂಗಲಂ
ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ ನಮಃ'
ಈ ಪ್ರಕಾರದಲ್ಲಿ ಶಿವಸಂಕಲ್ಪೋಪನಿಷತ್ ಹೇಳುತ್ತಿದೆ.
'ಋತಂ ಸತ್ಯಂ ಪರಂ ಬ್ರಹ್ಮಪುರುಷಂ ಕೃಷ್ಣ ಪಿಂಗಲಂ
ಊರ್ಧ್ವರೇತಂ ವಿರೂಪಾಕ್ಷಂ ತನ್ಮೇ ಮನಶ್ಶಿವಸಂಕಲ್ಪಮಸ್ತು'
ಎಂದುದಾಗಿ ಲಿಂಗವೇ ಪರಬ್ರಹ್ಮ.
ಮುನ್ನೊಮ್ಮೆ ಹರಿಬ್ರಹ್ಮರ ಸಂವಾದದಲ್ಲಿ ಉರಿಲಿಂಗ ಉದ್ಭವವಾದಲ್ಲಿ
ಹರಿಬ್ರಹ್ಮಾದಿಗಳು ಸ್ತೋತ್ರವ ಮಾಡಿದರು. ಲೈಂಗ್ಯ ಪುರಾಣದಲ್ಲಿ :
'ಜ್ವಾಲಾಮಾಲಾವೃತಾಂಗಾಯ ಜ್ವಲನಸ್ತಂಭರೂಪಿಣೇ
ನಮಶ್ಶಿವಾಯ ಶಾಂತಾಯ ಬ್ರಹ್ಮಣೇ ಲಿಂಗಮೂರ್ತಯೇ'
ಇದು ಮುನ್ನೊಮ್ಮೆ ಬಹ್ಮಕಾರಣ ಲಿಂಗವೇ ಪರಬ್ರಹ್ಮ,
ಶಿವನೇ ಪರಬ್ರಹ್ಮವೆಂದು ಮತ್ತೆ ಯಜುರ್ವೇದ ನುಡಿಯುತ್ತಿದೆ.
'ಈಶಾನಸ್ಸರ್ವವಿದ್ಯಾನಾಮೀಶ್ವರಸ್ಸರ್ವಭೂತಾನಾಂ ಬ್ರಹ್ಮಾಧಿಪತಿ
ಬ್ರಹ್ಮಣೋ[s]ಧಿಪತಿಬ್ರಹ್ಮಾ ಶಿವೋ ಮೇ[s]ಸ್ತು ಸದಾಶಿವೋಂ'
ಆದಿತ್ಯ ಪುರಾಣದಲೂ ಮಹಾಪುರುಷ ಆದಿತ್ಯ ಹೇಳುತ್ತಿದ್ದಾನೆ:
'ಪರಬ್ರಹ್ಮಾ ಚ ಈಶಾನ ಏಕೋ ರುದ್ರಸ್ಸ ಏವ ಚ
ಭಗವಾನ್ ಮಹೇಶ್ವರಸ್ಸಾಕ್ಷಾನ್ಮಹಾದೇವೋ ನ ಸಂಶಯಃ
ಯಸ್ಯಾಂತಸ್ಥಾನಿ ಭೂತಾನಿ ಯೇನೇದಂ ಧಾರ್ಯತೇ ಜಗತ್
ಬ್ರಹ್ಮೇತಿ ಯಂ ಯಜುರ್ವೇದಾಃ ಸರ್ವೇ ತಂ ಶರಣಂ ವ್ರಜೇತ್'
ಕೂರ್ಮ ಈಶ್ವರಗೀತೆಯಲ್ಲಿ,
'ಅವ್ಯಕ್ತಂ ಕಾರಣಂ ಪ್ರಾಹುರಾನಂದಂ ಜ್ಯೋತಿರಕ್ಷರಂ
ಅಹಮೇವ ಪರಬ್ರಹ್ಮ ಮತ್ತೋ[s]ನ್ಯಂ ಹಿ ನ ವಿದ್ಯತೇ
ಅಹಂ ತತ್ಪರಮಂ ಬ್ರಹ್ಮ ಪರಮಾತ್ಮಾ ಸನಾತನಃ'
ಮಹಾಪುರುಷ ಮನು ಮಾನವಪುರಾಣದಲ್ಲೂ ಹೇಳಿದನು:
'ಋತಂ ಸತ್ಯಂ ಪರಬ್ರಹ್ಮಪುರುಷಂ ಸೋಮವೀಶ್ವರಂ
ಊರ್ಧ್ವರೇತಂ ಸಮುತ್ಪತ್ತಿಸ್ಥಿತಿಸಂಹಾರಕಾರಣಂ
ವಿಶ್ವರೂಪಂ ವಿರೂಪಾಕ್ಷಂ ಚಂದ್ರಮೌಳಿಂ ಘೃಣಾನಿಧಿಂ
ಹಿರಣ್ಯಬಾಹುಮದ್ವಂದ್ವಂ ಹಿರಣ್ಯಪತಿಮೀಶ್ವರಂ
ಅಂಬಿಕಾಯಾಃ ಪತಿಂ ಸಾಕ್ಷಾದುಮಾಯಾಃ ಪತಿಮಕ್ರಿಯಂ
ಪರತತ್ವಂ ಸಮಾಖ್ಯಾತಂ ಶಿವಂ ಧ್ಯಾಯಂತಿ ಸಂತತಂ'
ತೈತ್ತಿರೀಯ ಶ್ರುತಿ,

‘ಸದ್ವಿಪ್ರಾಹಿ.....’ ಎಂದುದಾಗಿ,
ಬಹಳ ಬಹಳ ಚಕ್ಷು, ಬಹಳ ಬಹಳ ಮುಖನು,
ಬಹಳ ಬಹಳ ಬಾಹು, ಬಹಳ ಪಾದನು,
ಇಂತಹ ಬಹಳ ಲಿಂಗವೆ ಬ್ರಹ್ಮ ಕಾಣಿರಣ್ಣಾ.
‘ಅಣೋರಣೀಯಾನ್ ಮಹತೋ ಮಹೀಯಾನ್’ ಎಂದುದಾಗಿ,
ಬಹಳಕ್ಕೆ ಬಹಳ, ಮಹಾಬಹಳ, ಲಿಂಗವೆ ಬಹಳಬ್ರಹ್ಮ ಕಾಣಿರಣ್ಣಾ.
‘ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ
ನಾದಬಿಂದುಕಳಾತೀತಂ ಗುರುಣಾ ಲಿಂಗಮುದ್ಭವಂ’ ಎಂದುದಾಗಿ,
ಮನೋವಾಕ್ಕಾಯ ನಾದಬಿಂದುಕಳೆಗೆ ಅತೀತನಾದ
ಮಹಾಬಹಳ ಲಿಂಗವನು ಶ್ರೀಗುರು ನಿರೂಪಿಸಿ ಕೊಟ್ಟನಾಗಿ
ಈ ಲಿಂಗವೇ ಪರಬ್ರಹ್ಮ ಕಾಣಿರಣ್ಣಾ.
ಇದು ಕಾರಣ, ಪರಬ್ರಹ್ಮಲಿಂಗವೆಂದು ಧ್ಯಾನಿಸಿ ಪೂಜಿಸಿ
ಮಹಾನಂದ ಪರಮುಕ್ತಿಯನೈದಿದರು ಪೂರ್ವದಲ್ಲಿ
ದೇವಜಾತಿಗಳು ಹಲಬರು, ಇದು ಪುರಾಣ ಪ್ರಸಿದ್ಧ.
ಕಲಿಯುಗದಲ್ಲಿ ದೃಷ್ಟ:
ಬಸವರಾಜದೇವರು ಮೊದಲಾದ ಅಸಂಖ್ಯಾತ
ಮಾಹೇಶ್ವರರು ಇದನರಿದು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಲಿಂಗವೆ
ಪರಬ್ರಹ್ಮವೆಂದು ಅರಿದು ಧ್ಯಾನಿಸಿ ಪೂಜಿಸಿ
ಮಹದಾನಂದಮುಕ್ತಿಯನೈದಿದರಣ್ಣಾ. ॥೩೪೨॥

೧೬೦೨

ಸಾಲೋಕ್ಯವೆಂದೇನೋ,
ಅಂಗದ ಮೇಲೆ ಲಿಂಗಸಂಬಂಧವಾಗಿರುತ್ತಿರಲು?
ಸಾಮೀಪ್ಯವೆಂದೇನೋ,
ಗುರುಲಿಂಗಜಂಗಮದಾಸೋಹ ಸನ್ನಿಧಿಯೊಳಿರುತ್ತಿರಲು?
ಸಾರೂಪ್ಯವೆಂದೇನೋ,
ಅನವರತ ಅರ್ಚನೆಯೊಳಿರುತ್ತಿರಲು?
ಸಾಯುಜ್ಯವೆಂದೇನೋ,
ಚತುರ್ದಶಭುವನವನೊಳಕೊಂಡ ಮಹಾಘನವ
ಮನ ಅವಗವಿಸಿ ನೆನೆಯುತ್ತಿರಲು?
ಇಂತೀ ಚತುರ್ವಿಧ ಪದವೆಂಬುದೇನೋ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ, ನಿಮ್ಮನರಿದ ಶರಣಂಗೆ? ॥೩೪೩॥

೧೬೦೩

ಸಾವುದು ದಿಟ ದಿಟ ನೋಡಾ.
ಅದು ಸಟೆಯೆಂದು ನಿತ್ಯವೆಂದನಿತ್ಯವ ನಂಬಿ
ಹೊನ್ನು ಹೆಣ್ಣು ಮಣ್ಣು ನಿನ್ನವೆಂದು ನಂಬಿರಲು
ಅವು ನಿನ್ನ ವಂಚಿಸಿ ಅನ್ಯರಿಗೆ ಹೋದುದನರಿಯಿರಿ.
ಅಯ್ಯೋ! ಅಯ್ಯೋ! ಕೆಡದಿರಿ ಕೆಡದಿರಿ, ಸತ್ಪಾತ್ರಕ್ಕೆ ಸಲಿಸಿ ಬದುಕಿರಯ್ಯಾ.
ಗುರುಲಿಂಗಜಂಗಮಕ್ಕೆ ಸದ್ಭಕ್ತಿಯಿಂ ದಾಸೋಹವಂ ಮಾಡಲು ನಿತ್ಯನು.
ಇದು ಸಟೆಯೆಂದು ನರಕಕ್ಕಿಳಿದು ಕೆಡದಿರಿ ಕೆಡದಿರಿ,
ಇದನರಿದು ಸಟೆಯ ದಿಟವ ಮಾಡದಿರಿ.
ಗುರುಲಿಂಗಜಂಗಮಕ್ಕೆ ದಾಸೋಹವ ಮಾಡುವುದೆ ದಿಟ.
ಇದು ಸತ್ಯ ಇದು ಸತ್ಯ, ಇದೇ ನಿತ್ಯ ಇದೇ ಯುಕ್ತಿ ಇದೇ ಭಕ್ತಿ,
ಇದೇ ಶಕ್ತಿ ಇದೇ ಮುಕ್ತಿ ಇದು ಸತ್ಯ.
ಶಿವ ಬಲ್ಲ, ಶಿವನಾಣೆ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೪೪॥

೧೬೦೪

ಸೂರ್ಯನಿಲ್ಲದೆ ಹಗಲುಂಟೆ ಅಯ್ಯಾ? ದೀಪ ಇಲ್ಲದೆ ಬೆಳಕುಂಟೆ ಅಯ್ಯಾ?
ಪುಷ್ಪವಿಲ್ಲದೆ ಪರಿಮಳವನರಿಯಬಹುದೆ ಅಯ್ಯಾ?
ಸಕಲವಿಲ್ಲದೆ ನಿಷ್ಕಲವ ಕಾಣಬಾರದು.
ಮಹಾಘನ ನಿರಾಳ ಪರಶಿವನಿಂದ ಲಿಂಗವು ತೋರಿತ್ತು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೪೫॥

೧೬೦೫

ಸೂಳೆ ಭಕ್ತೆಯಾದಡೆ ಮಿಂಡಜಂಗಮಕ್ಕಲ್ಲದೆ ಮಾಡಳು.
ಬ್ರಾಹ್ಮಣ ಭಕ್ತನಾದಡೆ ಕುಲಕಂಜಿ ನೆಂಟರು ಇಷ್ಟರಿಗಲ್ಲದೆ ಮಾಡನು.
ಶೂದ್ರ ಭಕ್ತನಾದಡೆ ನಚ್ಚುಮಚ್ಚಿನ ಜಂಗಮಕ್ಕಲ್ಲದೆ ಮಾಡನು.
ಇದಕ್ಕೆ ಶ್ರುತಿ:
"ಓಂ ದಂಡಂ ದ್ವಿಜಂ ಕಿರಾತಂ [ಕುಲ]ತಂತ್ರಂ' ಎಂದುದಾಗಿ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ,
ನಿಸ್ಪೃಹನೆಂಬ ಜಂಗಮಕ್ಕೆ ಮಾಡುವವರಾರನೂ ಕಾಣೆನಯ್ಯಾ. ॥೩೪೬॥

೧೬೦೬

ಸೆಜ್ಜೆ ಶಿವದಾರ ವಸ್ತ್ರದಲ್ಲಿ ಹುದುಗಿಸಿ ಲಿಂಗವ ಧರಿಸಿಕೊಂಡು
ಅಂಗಲಿಂಗಸಾಹಿತ್ಯವಾಗಿ,

ಭಕ್ತರೆಂದು ಮಜ್ಜನಕ್ಕೆರೆವ ಭಂಗಿತರ ಮಾತ ಕೇಳಲಾಗದು. ಬಾಲನುಡಿ.
ತನುಗುಣವಿರಹಿತವಾಗಿ ಮಜ್ಜನಕ್ಕೆರೆಯಲರಿಯರಾಗಿ ಭಕ್ತರೆಷ್ಟೆ.
ಮನವೇ ಸೆಜ್ಜೆ, ನೆನಹೇ ಶಿವದಾರವಾಗಿ, ಸಮತೆಯೇ ಲಿಂಗವಾಗಿ
ತನ್ನ ಮರೆದು ಮಜ್ಜನಕ್ಕೆರೆವರ ಭಕ್ತರೆಂಬೆನಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೪೭॥

೧೬೦೭

ಸೊಡರ ಹಿಡಿದು ಕುಣಿಯಲ್ಲಿ ಬೀಳುವವರ ಕಂಡು,
ವಿಧಿಯ ಕೈಯಲ್ಲು ನಿಸ್ತರಿಸಲಾರೆನಯ್ಯಾ ನಾನು.
ಅಹಂಗಾದೆನಲ್ಲಾ ಎಂಬ ಚಿಂತೆಯ ನಿಸ್ತರಿಸಲಾರೆನಯ್ಯಾ.
ವೇದವೆಂಬ ಮಹಾಜ್ಯೋತಿಯ ಹಿಡಿದು ಶಿವಪಥದಲ್ಲಿ ನಡೆಯಲರಿಯದೆ
ಪಾಪದ ಕುಣಿಯಲ್ಲಿ ಬೀಳುವವರ ಕಂಡು ನಗೆಯಾದುದಯ್ಯಾ.
ಗುರೂಪದೇಶವೆಂಬ ಜ್ಯೋತಿಯ ಹಿಡಿದು,
ಶಿವಪಥದಲ್ಲಿ ನಡೆದು ಪ್ರಸಾದವೆಂಬ ನಿಧಾನವ ಕಂಡುಕೊಂಡು
ಉಂಡು ಪರಿಣಾಮಿಸಿ ಬದುಕಿದೆನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೪೮॥

೧೬೦೮

ಸ್ತನಾಮೃತವ ಸೇವಿಸುವ ಶಿಶು ಸಕ್ಕರೆಯನಿಚ್ಛೈಸುವುದೆ?
ಪರುಷ ದೊರಕೊಂಡ ಪುರುಷನು ಜರಗ ತೊಳೆಯಲಿಚ್ಛೈಸುವನೇ?
ದಾಸೋಹವ ಮಾಡುವ ಭಕ್ತನು ಮುಕ್ತಿಯನಿಚ್ಛೈಸುವನೇ?
ಇವರು ಮೂವರಿಗೆಯೂ ಇನ್ನಾವುದೂ ಇಚ್ಛೆಯಿಲ್ಲ.
ರುಚಿ ಪದಾರ್ಥವಿದ್ದಂತೆ. ಲಿಂಗಪದವು ಸಹಜಸುಖವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೪೯॥

೧೬೦೯

ಸ್ಥಾವರಕ್ಕೆ ಮೊದಲು ವೀರಭದ್ರ ನಂದಿಕೇಶ್ವರ
ದೊಡ್ಡ ದೈವವೆಂಬವರ [ಮುಖವ] ನೋಡಲಾಗದು.
ಅದೇನು ಕಾರಣ, ಶ್ರೀಗುರು ಅನುಗ್ರಹ ಮಾಡುವಲ್ಲಿ
ನಾಲ್ವರಾಚಾರ್ಯರು ಭಕ್ತಗಣಂಗಳ ಸಂತತಿಯ ಮುಂದಿಟ್ಟುಕೊಂಡು
ಪ್ರಾಣಪಿಷ್ಟಲಿಂಗವೆಂದು ಕೊಟ್ಟ ಬಳಿಕ ಸ್ಥಾವರವ ಪೂಜಿಸಲಾಗದು,
ನೆನೆಯಲಾಗದು, ನೋಡಲಾಗದು, ಅದೇನು ಕಾರಣವೆಂದಡೆ:
ಗಣಸಾಕ್ಷಿಯಾಗಿ ಇಷ್ಟಲಿಂಗವ ಕೊಟ್ಟರಲ್ಲದೆ, ಅನ್ಯದೈವದ ಕೊಡಲಿಲ್ಲ.
ತಮ್ಮ ಬ[ಲು]ಮೆಯಿಂದ ವೀರಭದ್ರ, ನಂದಿಕೇಶ್ವರ,

ಮಲ್ಲಿಕಾರ್ಜುನ, ಬಸವಣ್ಣ ದೊಡ್ಡದೈವವೆಂದು ಪೂಜಿಸಿದಡೆ
ತಮ್ಮ ಗುರು ತಲ್ಪಕನಾದ ಕಾರಣ
ಪಂಚಾಚಾರ ಅಷ್ಟಾವರಣ ಇಲ್ಲನಾಗಿ
ಇವರ ಮನೆಯ ವೀರಶೈವ ಭಕ್ತರು ಹೊಗಲಾಗದು.
ಅಥವಾ ಹೊಕ್ಕು ಬಳಕೆಯ ಮಾಡಿದಡೆ
ಇಪ್ಪತ್ತೆಂಟು ಕೋಟಿ ನರಕವನನುಭವಿಸಿ
ಹೊಲೆಯರ ಮ[ನೆ]ಯ ನಾಯಿಯ ಹೊಟ್ಟೆಯಲ್ಲಿ
[ನೂರೆಂಟು ಬಾರಿ] ಬಪ್ಪುದು ತಪ್ಪದು.
ಇದು ಕಾರಣ, ಅವರನೊಲ್ಲೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೫೦॥

೧೬೧೦

ಸ್ವಸ್ತಿ ಸಮಸ್ತ ವಿದ್ಯಾದಿ ಮೂಲವಹ
ಋಕ್‌ಯಜುಸ್ಸಾಮಾಥರ್ವಣದಲ್ಲಿ ಅಂತರ್ಗತವಾಗಿಹ
ಶ್ರೀರುದ್ರ, ಪಂಚಬ್ರಹ್ಮ, ಶ್ವೇತಾಶ್ವತರ, ಬೃಹದಾರಣ್ಯಕ,
ಕೇನ, ಈಶ, ಜಾಬಾಲ, ಗರ್ಭ, ಕಾಲಾಗ್ನಿರುದ್ರ, ವಾಜಸನೇಯ,
ಶಿವಸಂಕಲ್ಪ, ಬ್ರಹ್ಮಬಿಂದು, ಕಾತ್ಯಾಯನ, ಕಣ್ವ
ಇತ್ಯಾದಿ ನಿಖಿಲೋಪನಿಷತ್ತುಗಳನ್ನು ಪ್ರತಿಪಾದಿಸಿ ನೋಡಲು,
ನಿತ್ಯಶುದ್ಧನಿರ್ಮಲ ಪರಶಿವನನ್ನು ಸತ್ಯಶುದ್ಧಶಿವಾಚಾರಸಂಪನ್ನ ಭಕ್ತರನಲ್ಲದೆ
ವಿಸ್ತರಿಸಿ ಸ್ತುತಿಗೈದುದಿಲ್ಲ. ಅದಕ್ಕೆ ಶಪಥ,
ಆ ವೇದಪುರುಷರ ಚಿತ್ತವೇ ಸಾಕ್ಷಿ.
ಶಿವನ ಶರಣರು ವಾಙ್‌ಮಾನಸಾಗೋಚರರು ಎಂದು ಹೇಳುತ್ತಲಿದೆ ಶ್ರುತಿ.
ಅಖಿಲಬ್ರಹ್ಮಾಂಡಂಗಳಿಗೆ ಪಿತಮಾತೆಯಹ ಶಿವನಲ್ಲಿ
ಶಿವನ ಶರಣನು ಅವಿರಳನೆಂಬುದಕ್ಕೆ
'ಯಥಾ ಶಿವಸ್ತಥಾ ಭಕ್ತಃ' ಎಂಬ ವೇದವಾಕ್ಯವೇ ಪ್ರಮಾಣ.
'ನಾಭ್ಯಾ ಅಸೀದಂತರಿಕ್ಷಂ ಶೀರ್ಷ್ಣೋದ್ಯೌಃಸಮವರ್ತತ' ಎಂಬ ಶ್ರುತಿ,
ಸಕಲ ಬ್ರಹ್ಮಾಂಡಕೋಟಿಗಳು ಶಿವನ ನಾಭಿಕೂಪದಲ್ಲಿ
ಅಡಗಿಹವೆಂದು ಹೇಳಿತ್ತು.
'ಭಕ್ತಸ್ಯಹೃತ್ಕಮಲಕರ್ಣಿಕಾಮಧ್ಯಸ್ಥಿತೋ[s] ಹಂ ನಸಂಶಯಃ' ಎಂಬ ಶ್ರುತಿ,
ಅಂತಹ ಶಿವನು ಸದ್ಭಕ್ತನೊಳಗಡಗಿಹನೆಂದು ಹೇಳಿತ್ತು.
'ಅಘೋರೇಭ್ಯೋ[s] ಘೋರೇಭ್ಯೋ ಘೋರಘೋರತರೇಭ್ಯಃ
ಸರ್ವೇಭ್ಯಃ ಸರ್ವಶರ್ವೇರಭ್ಯೋ ನಮಸ್ತೆ ಅಸ್ತು ರುದ್ರರೂಪೇಭ್ಯಃ' ಎಂಬ ಶ್ರುತಿ,
ಶಿವನ ಅಘೋರಮೂರ್ತಿಯ ನಿತ್ಯತೇಜೋಮೂರ್ತಿಯೆಂದು ಹೇಳಿತ್ತು.
'ಜ್ಯೋತಿರ್ಲಿಂಗತ್ವಮೇವಾರ್ಯೆಃ ಲಿಂಗೀ ಚಾಹಂ ಮಹೇಶ್ವರಿ

ತದೇತದವಿಮುಕ್ತಾಖ್ಯಂ ಜ್ಯೋತಿರಾಲೋಕ್ಯತಾಂ ಪ್ರಿಯೇ' ಎಂಬ ವಾಕ್ಯ,
ಶರಣಸತಿ ಲಿಂಗಪತಿಯಹ ಶಿವನ ಶರಣನೇ
ಜ್ಯೋತಿರ್ಲಿಂಗವೆಂದು ಹೇಳಿತ್ತು.
'ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ
ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯ ಮಾಮೃತಾತ್'
ಎಂಬ ಶ್ರುತಿ,
ಶಿವಧ್ಯಾನ ಸ್ತುತಿ ನಿರೀಕ್ಷಣೆ ಪೂಜೆಯಿಂದಲ್ಲದೆ
ಜನ್ಮ ಮೃತ್ಯು ಜರಾ ವ್ಯಾಧಿ ಹಿಂಗಿ
ಪರಮಸುಖ ಪರಮನಿರ್ವಾಣವಾಗದೆಂದು ಹೇಳಿತ್ತು.
'ಅಪವರ್ಗಪದಂ ಯಾತಿ ಶಿವಭಕ್ತೋ ನ ಚಾಪರಃ' ಎಂಬ ವಾಕ್ಯ,
ಮುಕ್ತಿ ಶಿವಭಕ್ತಂಗಲ್ಲದೆ ಮತ್ತೊಬ್ಬರಿಗಿಲ್ಲವೆಂದು ಹೇಳಿತ್ತು.
'ಋತಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣಪಿಂಗಲಂ
ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ತೇ ನಮಃ' ಎಂಬ ಶ್ರುತಿ,
ಪರಬ್ರಹ್ಮವೆಂಬುದು ಶಿವನಲ್ಲದೆ
ಬೇರೆ ಬೇರೆ ಮತ್ತೊಂದು ವಸ್ತುವಿಲ್ಲವೆಂದು ಹೇಳಿತ್ತು.
'ಬ್ರಹ್ಮಣಿ ಚರತಿ ಬ್ರಾಹ್ಮಣಃ' ಎಂಬ ವಾಕ್ಯ,
ಅಂತಹ ಬ್ರಹ್ಮವ ಚಿಂತಿಸಿ ನಿರೀಕ್ಷಿಸಿ ಸ್ತುತಿಸಿ ಪೂಜಿಸಿ
ಪ್ರಸನ್ನಪ್ರಸಾದವ ಪಡೆವ ಸದ್ಭಕ್ತನೇ ಮಹಾಬ್ರಾಹ್ಮಣನೆಂದು ಹೇಳಿತ್ತು.
'ವಿಶ್ವತಶ್ಚಕ್ಷುರುತ ವಿಶ್ವತೋ ಮುಖೋ ವಿಶ್ವತಃ ಪಾತ್
ವಿಶ್ವಾಧಿಕೋ ರುದ್ರೋ ಮಹಾಋಷಿಸ್ಸರ್ವೋ ಹಿರುದ್ರಃ'ಎಂಬ ಶ್ರುತಿ,
ಸಕಲ ಜೀವರ ಶಿವನೆಂದು ಹೇಳಿತ್ತು.
'ಭಕ್ತಸ್ಯ ಚೇತನೋ ಹ್ಯಹಂ' ಎಂಬ ವಾಕ್ಯ,
ಶಿವಭಕ್ತಂಗೆ ನಾನೇ ಚೈತನ್ಯನೆಂದು ಹೇಳಿತ್ತು.
ಇಂತಪ್ಪ ಶಿವಲಿಂಗಾರ್ಚನೆಯ ಮಾಡುವ
ಶಿವಭಕ್ತನ ಶ್ರೀಮೂರ್ತಿಗಿನ್ನು ಸರಿಯುಂಟೆ?
'ವಾಚಾತೀತಂ ಮನೋತೀತಂ ಭಾವಾತೀತಂ ಪರಂ ಶಿವಂ
ಸರ್ವಶೂನ್ಯಂ ನಿರಾಕಾರಂ ನಿತ್ಯತ್ವಂ ಪರಮಂ ಪದಂ'
ಇಂತಪ್ಪ ಶಿವನಲ್ಲಿ ಅವಿನಾಭಾವರಪ್ಪ ಶರಣರ ಕಂಡಡೆ ಕರ್ಮಕ್ಷಯ,
ನೋಡಿದಡೆ ಕಣ್ಗೆ ಮಂಗಳತರ ನಿರುಪಮಸುಖ,
ನುಡಿಸಿದಡೆ ಶಿವರಾತ್ರಿ, ಸಂಭಾಷಣೆ ಮಾಡಿದಡೆ
ಜನ್ಮಕರ್ಮಬಂಧನನಿವೃತ್ತಿ, ಜೀವನ್ಮುಕ್ತನಹ, ಇದು ನಿತ್ಯ ಕೇಳಿರಣ್ಣಾ.
'ದರ್ಶನಾತ್ ಶಿವಭಕ್ತನಾಂ ಸಕೃತ್ಸಂಭಾಷಣಾದಪಿ
ಅತಿರಾತ್ರಸ್ಯ ಯಜ್ಞಸ್ಯ ಫಲಂ ಭವತಿ ನಾರದ'

ಎಂದು ನಾರದಬೋಧೆಯಲ್ಲಿ ಈಶ್ವರ ಹೇಳಿದನು.
ಇಂತಪ್ಪ ಈಶ್ವರನ ಕಾಣವು ವೇದಂಗಳು.
'ಯಜ್ಞೇನ ಯಜ್ಞಮಯಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್' ಎಂದುದಾಗಿ,
ಇಂತು ವೇದಕ್ಕತೀತನಹಂತಹ ಶಿವನ ಶರಣರ
ಮಹಾತ್ಮೆಯ ಹೊಗಳಲ್ಕೆ ವೇದಕ್ಕೆ ವಶವಲ್ಲ,
ಮಂದಮತಿಮಾನವರ ಮಾತಂತಿರಲಿ.
ಶಿವಶರಣರ ಮಹಾಮಹಿಮೆಗೆ ನಮೋ ನಮೋ ಎಂಬೆ ಕಾಣಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೫೧॥

೧೬೧೧
ಸ್ಥೂಲತನು ಸೂಕ್ಷ್ಮತನುವಿಡಿದು ಜಾಗ್ರತೆಯಲ್ಲಿ
ಶ್ರೀಗುರುಲಿಂಗಜಂಗಮದಾಸೋಹವ ಮಾಡದೆ
ಮಾತಿನ ಬ್ರಹ್ಮ ಲಿಂಗವಂತರಿಗೆ ತರ್ಕವೇತಕಯ್ಯಾ?
ಸೂಕ್ಷ್ಮತನುವಿಡಿದು
ಸ್ವಪ್ನದಲ್ಲಿ ಇಷ್ಟಲಿಂಗದಲ್ಲಿ ಪ್ರಾಣವೆಚ್ಚರಿಕೆಯಲ್ಲಿ
ಅರಿವೇ ಲಿಂಗವಲ್ಲದೆ ಬ್ರಹ್ಮವಾವುದಯ್ಯಾ?
ಕಾರಣತನುವಿಡಿದು ಸುಷುಪ್ತಿಯಲ್ಲಿ ತೃಪ್ತಿಲಿಂಗದಲ್ಲಿ ಪ್ರಾಣಲೀಯವಾಗಿ
ಕುರುಹನರಿವನುಳಿದ ಸುಖದರಿವಿನ ಲಿಂಗವನರಿದ ಬಳಿಕ
ನಿರಾಕಾರಬ್ರಹ್ಮವೆಂಬ ನುಡಿಯದೇಕೆ?
ಲಿಂಗಬ್ರಹ್ಮವಾಗಿಪ್ಪರು ನಮ್ಮ ಶರಣರು.
ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ॥೩೫೨॥

೧೬೧೨
ಹರನೆ, ನಿಮ್ಮನು ದುಷ್ಟನಿಗ್ರಹ ಶಿಷ್ಟಪರಿಪಾಲನವಿಚಕ್ಷಣನೆಂದೆಂಬರು.
ನಿಮಗೆ ಅಹಂಕರಿಸಿದ ಬ್ರಹ್ಮವಿಷ್ಣುದಕ್ಷಾದಿಗಳ ಶಿಕ್ಷಿಸಿದಿರಿ.
ನಿಮಗೆರಗದೆ ದುರ್ವೃತ್ತಿಯಿಂದ ನಡೆದ
ಗಜಾಸುರ ವ್ಯಾಘ್ರಾಸುರ ಗುಹ್ಯಾಸುರರುಗಳ ಕೊಂದು ಕಳೆದಿರಿ.
ಇದನರಿದು ಸ್ತೋತ್ರವ ಮಾಡಿದಡೆ ನೀವು ಕರುಣಿಸದೇ ಇಲ್ಲಯ್ಯ.
ಇಂತಹ ಕರ್ತರಿನ್ನುಂಟೆ? ನಿಮ್ಮಂತಹ ಬಲಿಷ್ಠರುಗಳೆಲ್ಲರ ಶಿಕ್ಷಿಸಿದಿರಿ
ಎನ್ನ ಮನವ ಶಿಕ್ಷಿಸಲಾರೆ.
ಶಿವಶಿವಾ, ನಿಮ್ಮಿಂದ ಎನ್ನ ಮನ ಸಾಮರ್ಥ್ಯವುಳ್ಳುದು.
ಎನ್ನಿಂದ ನೀವು ಸಮರ್ಥರಿಲ್ಲದಡೆ,
ಶಿವಭಕ್ತ ಅಪರಾಧಿಗಳ ಶಿಕ್ಷಿಸುವಂತಹ

ಇರಿಭಕ್ತ ಕಾಲಾಗ್ನಿರುದ್ರ ಮಡಿವಾಳ ಮಾಚಯ್ಯಂಗೆ
ಮೊರೆಯಿಟ್ಟು ಕಳೆವೆನು.
ಶಿವಧೋ ಎನ್ನ ಮೊರೆಯ ಕೇಳಿರಣ್ಣಾ.
ಹರನೇ ನೀನು ದುಷ್ಟನಿಗ್ರಹ ಶಿಷ್ಟಪರಿಪಾಲಕನೆಂಬ ಬಿರುದ ಬಿಟ್ಟು ಕಳೆ.
ಬಳಿಕ ನಾ ನಿಮ್ಮ ವರದಹಸ್ತನೆಂಬೆ, ಶಶಿಧರನೆಂಬೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನೆಂಬೆ. ||೩೫೩||

೧೬೧೩

ಹಸಿವು ತೃಷೆ ವಿಷಯ ಕಾಮ ಕ್ರೋಧ ಲೋಭ
ಮೋಹ ಮದ ಮತ್ಸರವಾದಿಯಾದ ತನುಗುಣಂಗಳು
ದೇವ ದಾನವ ಮಾನವರಂತೆ ಆದಡೆ,
ಲಿಂಗವಂತನೆಂಬ ಪರಿಯೆಂತಯ್ಯಾ?
ತನುಗುಣಂಗಳು ಭೂತದೇಹಿಗಳಂತಾದಡೆ
ಲಿಂಗದೇಹಿಕನೆಂಬ ಪರಿಯೆಂತಯ್ಯಾ?
ಲಿಂಗಚಿಹ್ನವಿಲ್ಲದಡೆ ಲಿಂಗದೇಹಿಯೆಂಬ ಪರಿಯೆಂತಯ್ಯಾ?
ಹಸಿವು ತೃಷೆ ವಿಷಯ ವ್ಯಸನವಡಗಿದಡೆ ಲಿಂಗಚಿಹ್ನೆ.
ಕ್ರೋಧ ಲೋಭ ಮೋಹ ಮದ ಮತ್ಸರ
ಇವಾದಿಯಾದ ದೇಹಗುಣಂಗಳಳಿದಡೆ ಲಿಂಗಚಿಹ್ನೆ.
ದೇಹಗುಣಭರಿತನಾಗಿ ಲಿಂಗದೇಹಿ ಎಂದಡೆ,
ಲಿಂಗವಂತರು ನಗುವರಯ್ಯಾ.
ಅಂಗಗುಣವಳಿದು ಗುರುಲಿಂಗಜಂಗಮದಲ್ಲಿ
ತನು ಮನ ಧನ ಲೀಯವಾದಡೆ
ಆತನು ಸರ್ವಾಂಗಲಿಂಗಿಯಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ||೩೫೪||

೧೬೧೪

ಹಿಂದಾದ ದುಃಖವನೂ ಇಂದಾದ ಸುಖವನೂ ಮರೆದೆಯಲ್ಲಾ!
ಯಜಮಾನ, ನೀನು ಮರೆದ ಕಾರಣ ಬಂಧನ ಪ್ರಾಪ್ತಿಯಾಯಿತ್ತಲ್ಲಾ!
ಹೇಮ ಭೂಮಿ ಕಾಮಿನಿ ಎಂಬ ಸಂಕಲೆಯಲ್ಲಿ ಬಂಧಿಸಿದರಲ್ಲಾ!
ಅರಿಷಡ್ವರ್ಗವೆಂಬ ಬಂಧನದಲ್ಲಿ ದಂಡಿಸಿದರಲ್ಲಾ!
ಲಿಂಗವ ಮರೆದಡೆ ಇದೇ ವಿಧಿಯಲಾ!
ಮರೆದಡೆ ಬಂಧನ ಅರಿದಡೆ ಮೋಕ್ಷ.
ಅರಿದ ಯಜಮಾನ ಇನ್ನು ಮರೆಯದಿರು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನ ಪರಿಯನು. ||೩೫೫||

೧೬೧೫

ಹೆಣ್ಣ ಧ್ಯಾನಿಸಿ ನಿಮ್ಮ ಮರೆದೆನಯ್ಯಾ,
ನಾನು ಮರೆದ ಕಾರಣ ನೀನೆನ್ನ ಮರೆದೆ.
ನೀ ಮರೆದ ಕಾರಣ ಹೆಣ್ಣು ಸಾಧ್ಯವಾಗದು.
ನಿನ್ನ ಮೋಹ ತಪ್ಪಿ ಕೆಟ್ಟೆನಯ್ಯಾ.
ಹೊನ್ನು ಹೆಣ್ಣು ಮಣ್ಣು ಎಂಬ ಆಸೆಯೆನ್ನ ಗಾಸಿ ಮಾ[ಡೆ],
ಕೆಟ್ಟೆ ಕೆಟ್ಟೆ ಶಿವಧೋ ಶಿವಧೋ ಮಹಾದೇವ.
ಹೊನ್ನು ಹೆಣ್ಣು ಮಣ್ಣಿಗೆ ಕರ್ತನು ನೀನು.
'ತೇನ ವಿನಾ ತೃಣಾಗ್ರಮಪಿ ನ ಚಲತಿ'
ಎಂಬುದನರಿದೂ, ಮದದಲ್ಲಿದ್ದು ಕೆಟ್ಟೆ.
ಈ ಕೇಡಲ್ಲದೆ ಹಸಿವು ತೃಷೆ ವ್ಯಸನ ವಿಷಯ
ಪಂಚೇಂದ್ರಿಯ ಷಡುವರ್ಗ ನೀನಾಗಿ ಕಾಡುತ್ತಿವೆ.
ಕೆಟ್ಟೆ ಕೆಟ್ಟೆ ಶಿವಧೋ ಮಹಾದೇವ.
ಹೊನ್ನು ಹೆಣ್ಣು ಮಣ್ಣಿನ ಆಶೆಯಿಂದ ಈ ಅವಸ್ಥೆಗೊಳಗಾದೆನು.
ಇನ್ನಿವಕ್ಕಾಶೆಮಾಡೆನು, ನಿಮ್ಮ ಮರೆಯೆನು, ನಿಮ್ಮಾಣೆ.
ಭಕ್ತವತ್ಸಲ, ಭಕ್ತದೇಹಿಕ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೫೬॥

೧೬೧೬

ಹೊನ್ನ ಬಿಟ್ಟು, ಹೆಣ್ಣ ಬಿಟ್ಟು, ಮಣ್ಣ ಬಿಟ್ಟು, ಬ್ರಹ್ಮಚಾರಿಗಳಾಗಬೇಕೆಂದು
ಬಣ್ಣವಿಟ್ಟು ನುಡಿವ ಅಣ್ಣಗಳ ಪರಿಯ ನೋಡಿರೋ.
ಹೆಣ್ಣ ಬಿಟ್ಟಡೆಯೂ ಹೊನ್ನ ಬಿಡರಿ, ಹೊನ್ನ ಬಿಟ್ಟಡೆಯೂ ಮಣ್ಣ ಬಿಡರಿ.
ಒಂದ ಬಿಟ್ಟಡೆಯೂ ಒಂದಬಿಡರಿ. ಬ್ರಹ್ಮಚಾರಿಗಳೆಂತಪ್ಪಿರಿ? ಹೇಳಿರಣ್ಣಾ?
ಹೆಣ್ಣ ಬಿಟ್ಟು ಬ್ರಹ್ಮಚಾರಿಗಳಾಗಬೇಕೆಂದು,
ಅವರೆಂತು ಹೇಳಿದರು? ನೀವೆಂತು ಕೇಳಿದಿರಿ?
ಹೆಣ್ಣನು ಹೆಣ್ಣೆಂದರಿವಿರಿ, ಹೊನ್ನನು ಹೊನ್ನೆಂದರಿವಿರಿ.
ಮಣ್ಣನು ಮಣ್ಣೆಂದರಿವಿರಿ, ಬ್ರಹ್ಮಚಾರಿಗಳೆಂತಪ್ಪಿರಣ್ಣಾ?
ಬಿಟ್ಟಡೆ, ಹೆಣ್ಣು ಹೊನ್ನು ಮಣ್ಣು ಈ ಮೂರನು ಬಿಟ್ಟು
ಜ್ಞಾನದಲ್ಲಿ ಸುಳಿಯಬಲ್ಲಡೆ, ಭವಂ ನಾಸ್ತಿ ತಪ್ಪದು.
ಹಿಡಿದಡೆ ಹೆಣ್ಣು ಮಣ್ಣು ಹೊನ್ನು ಈ ಮೂರನು ಹಿಡಿದು,
ಸದ್ಭಕ್ತಿಯಿಂದ ದಾಸೋಹವ ಮಾಡಬಲ್ಲಡೆ,
ಭವಂ ನಾಸ್ತಿ ತಪ್ಪದು.
ಅದೆಂತೆಂದಡೆ: ವೀರಾಗಮೇ
'ಮಾತರಃ ಪಿತರಶ್ಚೈವ ಸ್ವಪತ್ನೀ ಬಾಲಕಾಸ್ತಥಾ

ಹೇಮ ಭೂಮಿರ್ನಬಂಧಕಾಃ ಪ್ರಜ್ಞಾನಂ ಬ್ರಹ್ಮಚಾರಿಣಾಂ'
ಎಂದುದಾಗಿ,
ಹೆಣ್ಣು, ಹೊನ್ನು, ಮಣ್ಣು ಈ ಮೂರನು ಹಿಡಿದು
ಸದ್ಭಕ್ತಿಯಿಂ ದಾಸೋಹವ ಮಾಡಬಲ್ಲಡೆ ಭವಂ ನಾಸ್ತಿ.
ಅಲ್ಲಿ ಇದ್ದಡೆಯೂ ನೀರ ತಾವರೆಯಂತಿಪ್ಪರು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ, ನಿಮ್ಮ ಶರಣರು. ॥೩೫೭॥

೧೬೧೭

ಹೊನ್ನು, ಹೆಣ್ಣು, ಮಣ್ಣು, ಅನ್ನ, ಉದಕ, ದ್ರವ್ಯಂಗಳು
ಧರ್ಮದಾಸೆಯ ಕಾರಣ, ಅರ್ಥದಾಸೆಯ ಕಾರಣ,
ಕಾಮದಾಸೆಯ ಕಾರಣ, ಮೋಕ್ಷದಾಸೆಯ ಕಾರಣ,
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯದಾಸೆಯ ಕಾರಣ,
ಪಂಚಮಹಾಪಾತಕಂಗಳ ಮಾಡಿದ ದೋಷಂಗಳ ಕಾರಣ,
ಆಧಿಕಾರಣ, ವ್ಯಾಧಿಕಾರಣ, ಕೀರ್ತಿಕಾರಣ, ವಾರ್ತೆಕಾರಣ,
ಸರ್ವವನು ನಿರಂತರ ಕೊಡುವರು.
ನಿಷ್ಕಾರಣವಾಗಿ, ನಿರುಪಾಧಿಕರಾಗಿ, ನಿರಾಶ್ರಿತರಾಗಿ ಶ್ರೀಗುರು ಕಾರಣವಾಗಿ,
ಲಿಂಗಕಾರಣವಾಗಿ, ಜಂಗಮಕಾರಣವಾಗಿ, ಪ್ರಸಾದಕಾರಣವಾಗಿ,
ಈ ನಾಲ್ಕನು ಒಂದುಮಾಡಿ, ಸದ್ಭಕ್ತಿಯಿಂದ ದ್ವಿವಿಧವು ಪರಿಣಾಮಿಸುವಂತೆ,
ಕ್ಷಣಮಾತ್ರದಲ್ಲಿ ಅಣುಮಾತ್ರ ದ್ರವ್ಯವ
ಕೊಡುವವರಾರನು ಕಾಣೆ, ನಿರ್ವಂಚಕರಾಗಿ.
ಆನು ವಂಚಕನು, ಎನಗೆ ಭಕ್ತಿ ಇಲ್ಲ.
ಶಿವ ಶಿವಾ, ಸಂಗನಬಸವಣ್ಣ ನಿರ್ವಂಚಕನು, ನಿರಾಶಾಭರಿತನು,
ಸುಚರಿತ್ರನು, ಸದ್ಭಕ್ತಿಪುರುಷನು, ಮಹಾಪುರುಷನು.
ಎನಗೆ ಮಹಾ ಶ್ರೀಗುರುಲಿಂಗಜಂಗಮಪ್ರಸಾದ.
ಈ ಚತುರ್ವಿಧವು ಬಸವಣ್ಣನು.
ಈ ಬಸವಣ್ಣನ ಭೃತ್ಯರ ಭೃತ್ಯನಾಗಿ ಎನ್ನನಿರಿಸಯ್ಯ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥೩೫೮॥

*

ಉಳಿಯುಮೇಶ್ವರ ಚಿಕ್ಕಣ್ಣಗಳ ವಚನ

೧೬೧೮

ಅಸ್ಥಿ, ಚರ್ಮ, ಮಾಂಸ, ರಕ್ತ, ಖಂಡದ ಚೀಲ
ಬಾ[ತೆ]ಗೆಟ್ಟೊಡಲ ನಾನೆಂತು ಸಲಹುವೆನಯ್ಯಾ?

ಹುರುಳಿಲ್ಲದಿಹ ಸಂಸಾರ
ಎಂದಿಂಗೆ ನಾನಿದ ಹೊತ್ತು ತೊಳಲುವುದ ಬಿಡುವೆನಯ್ಯಾ?
ಎಂದಿಂಗೆ ನಾನಿದರ ಸಂಶಯವನಳಿವೆನಯ್ಯಾ?
ಎಡಹಿ ಕೊಡ ನೀರೊಳಗೆ ಒಡೆದಂತೆ
ಎನ್ನೊಡಲೊಡೆದು ನಿಮ್ಮೊಳೆಂದು ನೆರವೆನೊ ಉಳಿಯುಮೇಶ್ವರಾ ॥೧॥

೧೬೧೯
ಆನು ಭಕ್ತ, ಆನು ಶರಣ, ಆನು ಲಿಂಗೈಕ್ಯನೆಂದೊಡೆ
ಲಿಂಗವು ನಗದೆ?
ಪಂಚೇಂದ್ರಿಯಂಗಳು ನಗವೆ? ಅರಿಷಡ್ವರ್ಗಂಗಳು ನಗವೆ?
ಎನ್ನ ತನುವಿನೊಳಗಣ ಸತ್ವರಜತಮೋ ಗುಣಂಗಳು ನಗವೆ?
ಹೇಳಯ್ಯಾ ಉಳಿಯುಮೇಶ್ವರಾ? ॥೨॥

೧೬೨೦
ಎನ್ನಂತರಂಗದ ಜ್ಯೋತಿಯೆ ಬಸವಣ್ಣನಯ್ಯಾ,
ಎನ್ನ ಬಹಿರಂಗದ ಜ್ಯೋತಿಯೆ ಚೆನ್ನಬಸವಣ್ಣನಯ್ಯಾ,
ಎನ್ನ ಸರ್ವಾಂಗದ ಜ್ಯೋತಿಯೆ ಪ್ರಭುದೇವನಯ್ಯಾ,
ಇಂತಿವರ ಶ್ರೀಪಾದದಲ್ಲಿ ಉರಿ ಕರ್ಪುರ ಸಂಯೋಗದಂತೆ
ಬೆರೆಸಿದೆನಯ್ಯಾ ಉಳಿಯುಮೇಶ್ವರಾ. ॥೩॥

೧೬೨೧
ಎನ್ನ ಮನವ ಮಂಚವ ಮಾಡಿ, ತನುವ ಪಚ್ಚಡಿಸುವೆ ಬಾರಯ್ಯಾ!
ಎನ್ನ ಅಂತರಂಗದಲ್ಲಿಪ್ಪೆ ಬಾರಯ್ಯ! ಎನ್ನ ಬಹಿರಂಗದಲ್ಲಿಪ್ಪೆ ಬಾರಯ್ಯ!
ಎನ್ನ ಶಿವಲಿಂಗದೇವನೆ ಬಾರಯ್ಯ! ಎನ್ನ ಭಕ್ತವತ್ಸಲನೆ ಬಾರಯ್ಯ!
'ಓಂ ನಮಃ ಶಿವಾಯ' ಎಂದು ಕರೆವೆನು
ಉಳಿಯುಮೇಶ್ವರಲಿಂಗವೆ ಬಾರಯ್ಯ! ॥೪॥

೧೬೨೨
ಎಲುವೊಡೆದು, ತನು ಕರಗಿ, ಮನವು ಜಜ್ಜರಂಬೋಗಿ,
ಲಿಂಗದಲ್ಲಿ ನೀರು ನೀರ ಕೂಡಿದಂತಿರಬೇಕು,
ಜಂಗಮದಲ್ಲಿ ವಾರಿಕಲ್ಲಿನಂತೆ ಕರಗಲಿಬೇಕು.
ಸದ್ಗುರುವಿನೊಳು ಬೇರಿಲ್ಲದಂತೆ ಬೆರೆಸಬೇಕು,
ಇಂತೀ ತ್ರಿವಿಧದಲ್ಲಿ ಕೂಡಿದಲ್ಲದೆ ಸುಖವಿಲ್ಲ ನೋಡಾ.
ಇಂತಪ್ಪ ನಿರ್ವಾಣ ನಿಜಪದವೆಂದಪ್ಪುದೋ ಉಳಿಯುಮೇಶ್ವರಾ? ॥೫॥

೧೬೨೩
ಎಲುದೋರೆ ಸರಸವಾಡಲೇನು? ಭೃಂಗೀಶನೆ,
ಸೀಳಿ ಹೊದೆಯಲೇನು? ಗಜಾಸುರನೆ,
ಹೆಣ್ಣ ಲೀಲೆಯಲಾಡಲೇನು? ಅಂಧಕಾಸುರನೆ,
ಮನವನಲ್ಲಾಡಲೇನು? ಸಿರಿಯಾಳನೆ.
[ನೆ]ಣತೃಣದೋಪಾದಿ ನಾನು, ಎನ್ನನಿನಿತು ಬಳಲಿಸುವರೆ?
ಕರುಣಿಸು ಕರುಣಾಕರ ಉಳಿಯುಮೇಶ್ವರಾ. ॥೬॥

೧೬೨೪
ಒಂದು ಯೋನಿಯಲ್ಲಿ ಬಂದ ದುಃಖವ ನಾನು
ಎಂದೆಂದಿಗೂ ಕಳೆಯಲಾರೆ.
ಇನ್ನು ಎಂಬತ್ತುನಾಲ್ಕುಲಕ್ಷವೆಂದರೆ, ನಾನಿನ್ನೇವೆನಯ್ಯಾ?
ಒಂದುವನರಿಯದ ಶಿಶು ನಾ ನೊಂದೆನಯ್ಯಾ!
ಎನ್ನ ಕಂದ ಬಾ ಎಂದು,ಕಂಬನಿಯ ತೊಡೆದೆತ್ತಿ,
ಆನಂದದಿಂದ ಕಣ್ದೆರೆ ಉಳಿಯುಮೇಶ್ವರಾ. ॥೭॥

೧೬೨೫
ತೊರೆಯ ಉದಕವ ಕೊಂಡು, ತರಿದ ಸೊಪ್ಪನೆ ಮೆದ್ದು,
ಇರವು ಲಿಂಗಗೂಡಾಗಿ ಇರಬೇಕು.
ಕೆರೆಯ ನೀರನೆ ಮಿಂದು, ಅರಿವೆಗಪ್ಪಡ ಉಟ್ಟು,
ಇರವು ಲಿಂಗಗೂಡಾಗಿ ಇರಬೇಕು.
ಅರುವೆಲ್ಲವು ಮುಚ್ಚಿ, ಹೆರರಿಗಾಸೆಯ ಮಾಡಿಸಿ,
ಎನ್ನನಿರಿದಿರಿದು ಸುಡುವರೆ ಉಳಿಯುಮೇಶ್ವರಾ. ॥೮॥

೧೬೨೬
ನಂದಿನಾಥ ಭೃಂಗಿನಾಥ ವೀರಭದ್ರ ಗಣಂಗಳೆಲ್ಲಾ ನೀವು ಕೇಳಿರೆ:
ನಿಮ್ಮ ತೊತ್ತು ಬಂದಿದ್ದಾನೆಂದು ನೀವು ಹೇಳಿರೆ,
ನಿಮ್ಮ ಲೆಂಕ ಬಂದಿದ್ದಾನೆಂದು ನೀವು ಹೇಳಿರೆ,
ನಿಮ್ಮ ದಾಸ ಬಂದಿದ್ದಾನೆಂದು ನೀವು ಹೇಳಿರೆ.
ಎನ್ನ ದೇವರು ಉಳಿಯುಮೇಶ್ವರನ ಪಿಂ[ಗದ]
ಚಿಕ್ಕ ಬಂದಿದ್ದಾನೆಂದು ನೀವು ಹೇಳಿರೆ. ॥೯॥

೧೬೨೭
ಪೂರ್ವ ಕರ್ಮವ ಕೆಡಿಸಿದನೆನ್ನ ಗುರು
ಉಭಯ ಕರ್ಮವ ಬಿಡಿಸಿ ತೋರಿದ[ಡೆ] ಅವರಿಂದ ಬದುಕಿದೆನು
ಉಳಿಯುಮೇಶ್ವರ ಲಿಂಗವೆ ಗುರುವಿಂದ ಬದುಕಿದೆನು.
ಸದುಭಕ್ತರವರಿಂದ [ಬದುಕಿದೆನು] ನಿನ್ನ ಹಂಗೇನು. ॥೧೦॥

೧೬೨೮
ಬಸವಣ್ಣನೆ ಎನಗೆ ಗುರುಸ್ವರೂಪನಯ್ಯಾ,
ಚೆನ್ನಬಸವಣ್ಣನೆ ಎನಗೆ ಲಿಂಗಸ್ವರೂಪನಯ್ಯಾ,
ಸಿದ್ಧರಾಮಯ್ಯನೆ ಎನಗೆ ಜಂಗಮಸ್ವರೂಪನಯ್ಯಾ,
ಮರುಳಶಂಕರದೇವರೆ ಎನಗೆ ಪ್ರಸಾದಸ್ವರೂಪನಯ್ಯಾ,
ಪ್ರಭುದೇವರೆ ಎನಗೆ ಜ್ಞಾನಸ್ವರೂಪನಯ್ಯಾ.
ಇಂತಿವರ ಶ್ರೀಪಾದದಲ್ಲಿ ಉರಿಯುಂಡ ಕರ್ಪುರದಂತಡಗಿದೆನಯ್ಯಾ
ಉಳಿಯುಮೇಶ್ವರಾ. ॥೧೧॥

೧೬೨೯
ಮುಂಚಿದೆನಯ್ಯ ಪರಬ್ರಹ್ಮವ
ಮುಂಚಿದೆನಯ್ಯ ಸಾಲೋಕ್ಯ ಸಾಮೀಪ್ಯ [ಸಾರೂಪ್ಯ ಸಾಯುಜ್ಯ ಪದವಿಯ]
ಮುಂಚಿದೆನಯ್ಯ ಉಳಿಯುಮೇಶ್ವರ ಲಿಂಗವೆ
ಇವನೆಲ್ಲ ನಿಮ್ಮಿಂದ ನಾನು. ॥೧೨॥

೧೬೩೦
ವಾರಣಾಸಿ, ಅವಿಮುಕ್ತಿ ಇಲ್ಲಿಯೇ ಇದ್ದಾನೆ.
ಹಿಮದ ಕೇತಾರ, ವಿರೂಪಾಕ್ಷ ಇಲ್ಲಿಯೇ ಇದ್ದಾನೆ.
ಗೋಕರ್ಣ, ಸೇತುರಾಮೇಶ್ವರ ಇಲ್ಲಿಯೇ ಇದ್ದಾನೆ.
ಶ್ರೀಶೈಲ ಮಲ್ಲಿನಾಥ ಇಲ್ಲಿಯೇ ಇದ್ದಾನೆ.
ಸಕಲಲೋಕಪುಣ್ಯಕ್ಷೇತ್ರ ಇಲ್ಲಿಯೇ ಇದ್ದಾನೆ,
ಸಕಲಲಿಂಗ ಉಳಿಯುಮೇಶ್ವರ ತನ್ನಲ್ಲಿ ಇದ್ದಾನೆ. ॥೧೩॥

೧೬೩೧
ಶೈವನೇಮಸ್ತರ ಕೈಯಲುಪದೇಶವಾದೊಡೇನಯ್ಯಾ,
ಅಲ್ಲಿ ಏನೂ ಊನಯವಿಲ್ಲ, ಪಾರಂಪರ್ಯದಲ್ಲಿ ನಡೆದಿತ್ತಾಗಿ.
ನದಿಯ ಮೂಲವನೂ ಗುರುವಿನ ಮೂಲವನೂ ಅರಸುವರೆ?

ಗುರುಲಿಂಗಜಂಗಮ ಸಾಕ್ಷಿಯಾಗಿ
ಷಡಕ್ಷರ ಪ್ರಣವಮಂತ್ರದಿಂ ಲಿಂಗದರ್ಶನವಾಯಿತ್ತಾಗಿ
ಕಳೆಯಬಾರದು, ಬೆರಸಿ ತನ್ನೊಳಗೆ ತಾನಚ್ಯೋತ್ತಿ ಕರಿಗೊಂಡಿತ್ತಾಗಿ.
ಅಂದು ಬಳ್ಳೇಶ್ವರದ ಮಲ್ಲಯ್ಯಗಳು ಬಳ್ಳವ ಲಿಂಗವ ಮಾಡಿದರೆಂದು
ಕಳೆದರೆ ಎಮ್ಮ ಪ್ರಮಥರು?
ಕಾಳಹಸ್ತಿಯಲ್ಲಿ ಕಣ್ಣಪ್ಪದೇವರು
ಸುಜ್ಞಾನಭಕ್ತಿಯಿಂದ ಸ್ಥಾವರವನೆ ಗುರುರೂಪ ಮಾಡಿ
ಪೂಜಿಸಿದರೆಂದು ಕಳೆದರೆ ಎಮ್ಮ ಪುರಾತನರು?
ಅಂದು ಕಲ್ಯಾಣದಲ್ಲಿ ಹುಸಿಯನೆ ದಿಟಮಾಡಿ
ಬದನೆಕಾಯ ಲಿಂಗವ ಮಾಡಿ ಸಲಿಸನೆ ನಮ್ಮ ಬಸವಣ್ಣನು?
ಇವರೆಲ್ಲರೂ ನಿಮ್ಮ ಭಜಿಸಿ ನಿಮ್ಮತ್ತಲಾದರು,
ನಾ ನಿನಗೇನ ಮಾಡಿದೆನಯ್ಯಾ ಉಳಿಯುಮೇಶ್ವರಾ? ॥೧೪॥

೧೬೩೨
ಸತಿಸುತ ಮಾತಾಪಿತರಿಗೆಂದು ಹಡೆದಡೆ ನಿಮ್ಮಾಣೆ ಕಂಡಯ್ಯಾ.
ಮಾನವ ಸೇವೆಯ ಮಾಡಿದಡೆ ನಿಮ್ಮಾಣೆ ಕಂಡಯ್ಯಾ.
ನೀವಲ್ಲದನ್ಯಕ್ಕೆರಗಿದಡೆ, ತನುಮನಧನ ವಂಚನೆಯಾದಡೆ
ಉಳಿಯುಮೇಶ್ವರ ಲಿಂಗವೆ ನಿಮ್ಮಾಣೆ ಕಂಡಯ್ಯಾ ॥೧೫॥

೧೬೩೩
ಹೆಂಡಿರೆನ್ನದೆ, ಮಕ್ಕಳೆನ್ನದೆ, ತೊತ್ತಿರೆನ್ನದೆ, ಬಂಟರೆನ್ನದೆ
ಹಗೆಗಳೆನ್ನದೆ, ಕೆಳೆಯರೆನ್ನದೆ ತಪ್ಪೆನ್ನದಯ್ಯಾ,
ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ತಪ್ಪೆನ್ನದಯ್ಯಾ.
ಉಳಿಯುಮೇಶ್ವರಲಿಂಗವೆ ನೀನಿದ್ದವರ ನೀನೆನ್ನದ ತಪ್ಪೆನ್ನದಯ್ಯಾ ॥೧೬॥

*

ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯಗಳ ವಚನ

೧೬೩೪
ಅಂಗವಿಕಾರ ಸಾಕೇಳಿ, ಬಹುವಿಡಂಗದ ಪ್ರಕೃತಿಯ ಮರೆದೇಳಿ.
ನಿಮ್ಮ ಭಕ್ತಿಮುಕ್ತಿಯ ಲಿಂಗದ ಕೂಟವ ನೆನೆದೇಳಿ.
ನಿಮ್ಮ ಗುರುವಾಜ್ಞೆಯ ನಿಮ್ಮ ವಿರಕ್ತಿ ಅರಿವಿನ ಸಾವಧಾನವನರಿದೇಳಿ.
ಸಾರಿದೆ! ಎವೆ ಹಳಚಿದಡಿಲ್ಲ,
ಶುದ್ಧಸಿದ್ಧಪ್ರಸಿದ್ಧಪ್ರಸನ್ನ ಕುರಂಗೇಶ್ವರಲಿಂಗವ ಕೂಡಬಲ್ಲಡೆ. ॥೧॥

೧೬೩೫
ಆಟವನಾಡಿ ಜವನಿಕೆಯ ಕಟ್ಟಿದ ಮತ್ತೆ ಭಾಷಾಂಗದ ಕ್ರೀಯುಂಟೆ?
ಭಕ್ತಿಯನಾಶ್ರಯಿಸಿ ನಿರ್ಮುಕ್ತನಾದ ಮತ್ತೆ
ಕೈಲಾಸಾದ್ರಿಯ ಆಶೆಯ ಗಾಸಿಯುಂಟೆ?
ಅಳಿವುಳಿವ ತಿಳಿದು ಕಳಿದ ಮತ್ತೆ,
ವಿರಕ್ತಿಯ ತೋರಿ ಕುಳವನರಿಯೆಂದು ಬೆಸಸಲುಂಟೆ?
ಸತ್ತ ಹೆಣಕ್ಕೆ ಎವೆ ಹಳಚುವ ಹೊಳವಳಿಯುಂಟೆ?
ಮತ್ತನಾದಾತ್ಮಂಗೆ ಚಿತ್ತದ ನಳನಳ ಶಬ್ದ[ವಾ]ಹೊತ್ತು ಕೇಳಬಲ್ಲುದೆ?
ಇಂತೀ ಕರ್ಮಕ್ರೀಗಳೆಲ್ಲವೂ ಧರ್ಮದಲ್ಲಿ ನಷ್ಟವಾದ ಮತ್ತೆ
ಸುಳುಹು ಶೂನ್ಯ ಒಳಗುಗೆಟ್ಟಿತ್ತು, ಒಳಗು ತೊಳಗಿ ಬೆಳಗಾಯಿತ್ತು.
ಶುದ್ಧಸಿದ್ಧಪ್ರಸಿದ್ಧಪ್ರಸನ್ನ ಕುರಂಗೇಶ್ವರಲಿಂಗದೊಳಗಾಗಲಾಗಿ. ॥೨॥

೧೬೩೬
ಎನ್ನ ತನು ಬಸವಣ್ಣನ ಶುದ್ಧಪ್ರಸಾದವ ಕೊಂಡಿತ್ತು,
ಎನ್ನ ಮನ ಚೆನ್ನಸಬವಣ್ಣನ ಸಿದ್ಧಪ್ರಸಾದವ ಕೊಂಡಿತ್ತು,
ಎನ್ನ ಪ್ರಾಣ ಪ್ರಭುದೇವರ ಪ್ರಸಿದ್ಧಪ್ರಸಾದವ ಕೊಂಡಿತ್ತು.
ಇಂತೀ ಶುದ್ಧಸಿದ್ಧಪ್ರಸಿದ್ಧಪ್ರಸನ್ನ ಕುರಂಗೇಶ್ವರಾ,
ನಿಮ್ಮ ಶರಣರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. ॥೩॥

೧೬೩೭
ಒಂದರಲ್ಲಿ ಎರಡದೆ, ಎರಡರಲ್ಲಿ ಮೂರದೆ,
ಮೂರರಲ್ಲಿ ನಾಲ್ಕದೆ, ನಾಲ್ಕರಲ್ಲಿ ಐದದೆ, ಐದರಲ್ಲಿ ಆರದೆ,
ಆರರೊಳಗಾದವರಭೇದವ ತಿಳಿದು, ನೂರೊಂದರಲ್ಲಿ ಕಡೆಗಣಿಸಿ ಸಂದು,
ನಿಂದು ನೋಡಿ ನಿಮ್ಮಂಗವ ಕಂಡುಕೊಳ್ಳಿ, ಘನಲಿಂಗಸಂಗವ ಮಾಡಿಕೊಳ್ಳಿ,
ಸಂಗನಬಸವಣ್ಣನ ಬಟ್ಟೆಯ ಹೋಹಂದವ ತಿಳಿದುಕೊಳ್ಳಿ.
ಶಿವಲಿಂಗಾಂಗ ಶರಣರೆಲ್ಲರ ಸಾರುವ ತೊಂಡ ಮುಕ್ತಿ ಭಕ್ತನ ಮಾಡು,
ಶುದ್ಧಸಿದ್ಧಪ್ರಸಿದ್ಧಪ್ರಸನ್ನ ಕುರಂಗೇಶ್ವರಲಿಂಗವ ವೇಧಿಸಿ ಭೇದಿಸಿಕೊಳ್ಳಿ. ॥೪॥

೧೬೩೮
ಜಾಗ್ರದಲ್ಲಿ ನಿಮ್ಮ ದೇವರಿಗೆ ಸಲ್ಲದುದ ಮನ ನೆನೆಯದಿರಿ,
ಕಂಗಳು ತುಂಬಿ ಅಹುದೆಂದು ಒಂದ ನೋಡದಿರಿ,
ಅದು ಜಾಗ್ರದ ಬಯಕೆ, ಸ್ವಪ್ನದ ಕೂಟ, ನಿಜದ ಎಚ್ಚರಿಕೆ.

ಭಕ್ತಿಗುಣವ ತಪ್ಪದಿರಿ,
ಶುದ್ಧಸಿದ್ಧಪ್ರಸಿದ್ಧಪ್ರಸನ್ನ ಕುರಂಗೇಶ್ವರಲಿಂಗವ ಕೂಡಬಲ್ಲಡೆ. ॥೫॥

೧೬೩೯

ದುಃಸ್ವಪ್ನವ ಕಾಣದಿರಿ, ದುರ್ವಿಕಾರದಲ್ಲಿ ಕೂಡದಿರಿ,
ಮನೋವಿಕಾರದಲ್ಲಿ ಹರಿದಾಡದಿರಿ,
ಪಂಚಾಕ್ಷರಿಯ ಜಪಿಸಿ ಷಡಕ್ಷರಿಯ ಸಂಬಂಧಿಸಿಕೊಳ್ಳಿ,
ಮೂಲಮಂತ್ರವನಾತ್ಮಂಗೆ ವೇಧಿಸಿಕೊಳ್ಳಿ.
ಮರೆಯದಿರಿ ಗುರುವಾಜ್ಞೆಯ, ತೊರೆಯದಿರಿ ಶಿವಪೂಜೆಯ,
ಅರಿದು ಮರೆಯದಿರಿ ಚರಸೇವೆಯ. ಇಂತೀ ತ್ರಿಗುಣವ ನೆರೆ ನಂಬಿ,
ಶುದ್ಧಸಿದ್ಧಪ್ರಸಿದ್ಧಪ್ರಸನ್ನ ಕುರಂಗೇಶ್ವರಲಿಂಗವ ಕೂಡಬಲ್ಲಡೆ. ॥೬॥

೧೬೪೦

ನಾಲ್ಕು ಜಾವಕ್ಕೆ ಒಂದು ಜಾವ
ಹಸಿವು ತೃಷೆ ಮಿಕ್ಕಾದ ವಿಷಯದೆಣಿಕೆಗೆ ಸಂದಿತ್ತು.
ಮತ್ತೊಂದು ಜಾವ
ನಿದ್ರೆ, ಸ್ವಪ್ನ, ಕಳವಳ ನಾನಾ ಅವಸ್ಥೆ ಬಿಟ್ಟಿತ್ತು.
ಮತ್ತೊಂದು ಜಾವ
ಅಂಗನೆಯರ ಕುಚ, ಅಧರಚುಂಬನ
ಮಿಕ್ಕಾದ ಬಹುವಿಧ ಅಂಗವಿಕಾರದಲ್ಲಿ ಸತ್ತಿತ್ತು.
ಇನ್ನೊಂದು ಜಾವವಿದೆ:
ನೀವು ನೀವು ಬಂದ ಬಟ್ಟೆಯ ತಿಳಿದು ಮುಂದಳ ಆಗು ಚೇಗೆಯನರಿದು,
ನಿತ್ಯನೇಮವ ವಿಸ್ತರಿಸಿಕೊಂಡು
ನಿಮ್ಮ ಶಿವಾರ್ಚನೆ, ಪೂಜೆ, ಪ್ರಣವದ ಪ್ರಮಥಾಳಿ,
ಭಾವದ ಬಲಿಕೆ, ವಿರಕ್ತಿಯ ಬಿಡುಗಡೆ, ಸದ್ಭಕ್ತಿಯ ಮುಕ್ತಿ,
ಇಂತೀ ಕೃತ್ಯದ ಕಟ್ಟ ತಪ್ಪದಿರಿ.
ಅರುಣೋದಯಕ್ಕೆ ಒಡಲಾಗದ ಮುನ್ನವೆ
ಖಗವಿಹಂಗಾದಿಗಳ ಪಶುಮೃಗನರಕುಲದುಲುಹಿಂಗೆ ಮುನ್ನವೆ
ಧ್ಯಾನಾರೂಢರಾಗಿ,
ಶುದ್ಧಸಿದ್ಧಪ್ರಸಿದ್ಧಪ್ರಸನ್ನ ಕುರಂಗೇಶ್ವರಲಿಂಗವ ಕೂಡಬಲ್ಲಡೆ. ॥೭॥

೧೬೪೧

ನಿತ್ಯನೇಮಿಗಳಿಗೆ ಹಿಂಜಾವವಾಯಿತ್ತು,
ಕೃತ್ಯಪೂಜಕರುಗಳಿಗೆ ತತ್ಕಾಲವಾಯಿತ್ತು.

ಅಂತರಂಗದ ವ್ರತದ ಲಿಂಗಾಂಗಿಗಳು
ನಿಮ್ಮ ಇರವ ಶಿವಲಿಂಗದಲ್ಲಿ ಸಂಬಂಧಿಸಿಕೊಳ್ಳಿ,
ಶುದ್ಧಸಿದ್ಧಪ್ರಸಿದ್ಧಪ್ರಸನ್ನ ಕುರಂಗೇಶ್ವರಲಿಂಗವ ಕೂಡಬಲ್ಲಡೆ. ॥೮॥

೧೬೪೨

ನೇಮವ ಮರೆಯದಿರಿ, ನಿತ್ಯಕೃತ್ಯವ ಚಿತ್ತದಲಿ ಅಚ್ಚೊತ್ತಿದಂತಿರಿಸಿಕೊಳ್ಳಿ.
ಅರುವತ್ತುನಾಲ್ಕು ವ್ರತದೊಳಗಾದ
ನಾನಾ ಭೇದಂಗಳ ಕ್ರೀಯ ಚಿತ್ತಶುದ್ಧವಾಗಿ,
ನಿಮ್ಮ ಆತ್ಮನರಿವಿನ, ನಿಜದರುವಿನ ಕೊನೆಯಲ್ಲಿ ಕುರುಹಿಟ್ಟುಕೊಳ್ಳಿ.
ತ್ರಿವಿಧಸ್ಥಲ ಮುಂತು ಆರುಸ್ಥಲದೊಳಗಾದ
ಮುವತ್ತಾರು ಸ್ಥಲಭೇದವಾದ
ಇಪ್ಪತ್ತೈದು ತತ್ವವ ಕೂಡಿದ ಒಂದರ ಭೇದದಲ್ಲಿ ಸಂದನರಿದುಕೊಳ್ಳಿ
ಸರ್ವಲಿಂಗಾಂಗಿಗಳು.
ಬಂಧಕರ್ಮಮೋಕ್ಷಂಗಳ ಸಂದಿಯ ವಿಚ್ಛಂದವ ಕೇಳಿ ಕಂಡುಕೊಳ್ಳಿ,
ನೀವು ನೀವು ಬಂದ ಮಣಿಹದ ಬೆಂಬಳಿಯ ಕಂಡುಕೊಳ್ಳಿ.
ನಿಮ್ಮ ಜ್ಞಾನ ಕಂಬಳಿಯ ಬೆಂಬಳಿ,
ಶುದ್ಧಸಿದ್ಧಪ್ರಸಿದ್ಧಪ್ರಸನ್ನ ಕುರಂಗೇಶ್ವರಲಿಂಗದಲ್ಲಿಗೆ. ॥೯॥

೧೬೪೩

ಬಕಧ್ಯಾನಿ[ಗೆ] ಜಪಧ್ಯಾನ ಉಂಟೆ?
ಜೂಜುವೇಂಟೆ ಚದುರಂಗ ನೆತ್ತ ಪಗಡೆ ಪಗುಡಿ
ಪರಿಹಾಸಕರ ಕೂಡು ಕೆಲವಂಗೆ ಶಿವಮೂರ್ತಿಧ್ಯಾನ ಉಂಟೆ?
ಕುಕ್ಕುರಂಗೆ ಪಟ್ಟೆಮಂಚ ಸುಪ್ಪತ್ತಿಗೆ ಅಮೃತಾನ್ನವನಿಕ್ಕಿ ಸಲಹಿದಡೂ
ಹಡುಹಿಂಗೆ ಚಿತ್ತವನಿಕ್ಕುವುದೇ ದಿಟ.
ಇಂತೀ ಜಾತಿಮತ್ತರ ಲಕ್ಷಣಭೇದ.
ಇಂತೀ ಗುರುಚರ ಅಜ್ಞಾಪಿಸಿದ ಆಜ್ಞೆಯ ಮೀರಿದವಂಗೆ
ಕುಕ್ಕುರನಿಂದತ್ತಳ ಕಡೆ.
ಗುರುವಾದಡಾಗಲಿ, ಲಿಂಗವಾದಡಾಗಲಿ, ಚರವಾದಡಾಗಲಿ
ವರ್ತನೆ ತಪ್ಪಿ ನಡೆದವಂಗೆ ಭಕ್ತಿವಿರಕ್ತಿ, ಮೋಕ್ಷಮುಮುಕ್ಷತ್ವವಿಲ್ಲ.
ಸಂಗನಬಸವಣ್ಣ ಸಾಕ್ಷಿಯಾಗಿ, ಚನ್ನಬಸವಣ್ಣನರಿಕೆಯಾಗಿ,
ಪ್ರಭು ಸಿದ್ಧರಾಮೇಶ್ವರ ಮರುಳುಶಂಕರ ನಿಜಗುಣ
ಇಂತಿವರೊಳಗಾದ ನಿಜಲಿಂಗಾಂಗಿಗಳು ಮುಂತಾಗಿ
ಎನ್ನ ಕಾಯಕಕ್ಕೆ ಸಾರು ಹೋಗೆಂದಿಕ್ಕಿದ ಕಟ್ಟು.

ನಾ ಭಕ್ತನೆಂದು ನುಡಿದಡೆ ಎನಗೊಂದು ತಪ್ಪಿಲ್ಲ,
ಅದು ನಿಮ್ಮ ಚಿತ್ತದ ಎಚ್ಚರಿಕೆ,
ಶುದ್ಧಸಿದ್ಧಪ್ರಸಿದ್ಧಪ್ರಸನ್ನ ಕುರಂಗೇಶ್ವರಲಿಂಗ ಸಾಕ್ಷಿಯಾಗಿ. ॥೧೦॥

೧೬೪೪
ಸತ್ವಹೀನವಾದ ಮತ್ತೆ ಕಾಲೆರಡು ಕೋಲೊಂದಾಯಿತ್ತು.
ಕೃತ್ಯದ ಹೊತ್ತು ಹೋದ ಮತ್ತೆ
ವ್ಯಾಕುಲದ ಚಿತ್ತವದ ಲಕ್ಷರ, ಬಹುವ್ಯಾಪಾರ ಮೊತ್ತದ ಘಟ,
ಪ್ರಕೃತಿ ಆಶ್ರಯಕ್ಕೆ ಬಂಧನ ಪ್ರಾಪ್ತಿ, ಅಡಗುವ ಕರಂಡ.
ಇದರಂದವ ತಿಳಿದು, ಹಿಂಜಾವಕೆ ಮುನ್ನವೆ ಶಿವಲಿಂಗದರ್ಶನವಾಗಿ
ಶುದ್ಧಸಿದ್ಧಪ್ರಸಿದ್ಧ ಪ್ರಸನ್ನ ಕುರಂಗೇಶ್ವರಲಿಂಗವ ಕೂಡಬಲ್ಲಡೆ. ॥೧೧॥

*

ಎಲೆಗಾರ ಕಾಮಣ್ಣಗಳ ವಚನ

೧೬೪೫
ಎಲೆ ಮಿಗಲು ಆರು ತಿಂಗಳಿರುವುದು.
ವ್ರತ ಹೋಗಲು ಆ ಕ್ಷಣ, ಭ್ರಷ್ಟನೆಂದು ಕೂಡರು.
ಎಲೆ ಹಳದಾದಡೆ ಶಿವಂಗರ್ಪಿತ.
ವ್ರತನಷ್ಟವಾಗಲಾಕ್ಷಣ ಮರಣವಯ್ಯಾ ಆತುರೇಶ್ವರಲಿಂಗವೆ. ॥೧॥

*

ಏಕಾಂತ ರಾಮಿತಂದೆಗಳ ವಚನ

೧೬೪೬
ಅಶನ ವ್ಯಸನ ಸರ್ವವಿಷಯಾದಿಗಳಲ್ಲಿ ಹುಸಿದು,
ಪಿಸುಣತ್ವದಿಂದ ಗಸಣಿಗೊಂಡು,
ಮಾಡಿಸಿಕೊಂಬುದು ಸದ್ಗುರುವಿಗೆ ಸಂಬಂಧವಲ್ಲ.
ತಿಲರಸ–ವಾರಿಯ ಭೇದದಂತೆ, ಮಣಿಯೊಳಗಿದ್ದ ಸೂತ್ರದಂತೆ
ಅಂಗವ ತೀರ್ಚಿ ಪಾಯ್ದು ನಿಂದ ಅಹಿಯ ಅಂಗದಂತೆ
ಗುರುಸ್ಥಲಸಂಬಂಧ,
ಎನ್ನಯ್ಯ ಚೆನ್ನರಾಮೇಶ್ವರಲಿಂಗವನರಿಯಬಲ್ಲಡೆ. ॥೧॥

೧೬೪೭

ಕಲ್ಪಿತಾಂತರವನುಂಬುದು ಕಾಯವೋ? ಜೀವವೋ?
ಜೀವವೆಂದಡೆ ನಿರ್ನಾಮ ಭೇದ, ಕಾಯವೆಂದಡೆ ಮೃತ ಅಚೇತನಘಟ.
ಉಭಯಸಂಗ ಸಂಬಂಧವಾದಲ್ಲಿ ಎನ್ನಯ್ಯ ಚೆನ್ನರಾಮ ಭೇದ. ॥೨॥

೧೬೪೮

ಕಾಯ ಹಲವು ಭೇದಗಳಾಗಿ, ಆತ್ಮನೇಕವೆಂಬುದು ಅದೇತರಮಾತು?
ಬೆಂಕಿಯಿಂದಾದ ಬೆಳಗು ಸುಡಬಲ್ಲುದೆ? ಬೆಂಕಿಯಿಲ್ಲದೆ.
ಹಲವು ಘಟದಲ್ಲಿ ಅವರವರ ಹೊಲಬಿನಲ್ಲಿ ಅನುಭವಿಸುತ್ತ
ಮತ್ತೊಂದರಲ್ಲಿ ಕೂಟಸ್ಥವಪ್ಪ ಸುಖ ಉಂಟೆ?
ಈ ಗುಣ ಎನ್ನಯ್ಯ ಚೆನ್ನರಾಮನನರಿದಲ್ಲಿ. ॥೩॥

೧೬೪೯

ಮನ ಲಿಂಗದಲ್ಲಿ ನಿಂದಿತ್ತೆಂಬಲ್ಲಿ
ಆ ಮನ ಲಿಂಗಕ್ಕೆ ನೆಲೆಯೊ? ಲಿಂಗ ಮನದ ಸಂಗಿಯೊ?
ಎಂಬುದ ತಿಳಿದೆನೆಂಬುದು ಸಂಗವೊ? ನಿಸ್ಸಂಗವೊ?
ಬೀಜದೊಳಗಣ ತಿರುಳು ಭೇದಿಸಿ ಮುಟ್ಟುವಲ್ಲಿ
ಅದು ತನ್ನಯ ಸುನಾದದಿಂದವೊ?
ಅಪ್ಪುವಿನ ಬಿಂದುವಿನ ಭೇದದಿಂದವೊ?
ಈ ಉಭಯ ನೆಲೆ ಘಟಿಸಿದಲ್ಲಿ ಯೋಗಕೂಟ.
ಆತ್ಮಲಿಂಗದ ಭೇದ, ಮುಕ್ತಿಭೇದ ನಿಂದಲ್ಲಿ
ಎನ್ನಯ್ಯ ಚೆನ್ನರಾಮನ ಕೂಟದ ಬೆಳಗು. ॥೪॥

೧೬೫೦

ಮುನ್ನವೆ ಮುನ್ನವೆ ಮೂರರ ಹಂಬಲ ಹರಿದು,
ಚರ ಪರ ವಿರಕ್ತನಾದ ಬಳಿಕ,
ಇನ್ನು ಮೂರರ ಚಿಂತೆಯ ಹಂಬಲೇಕೆ?
ಆವಾವ ಜೀವಂಗಳು ತಮ್ಮ ತಮ್ಮ ಮಲವ ಮುಟ್ಟವು.
ತೊಂಡು ಮಚ್ಚಿದ ಜೀವಧನದಂತೆ
ಊರೂರ ತಪ್ಪಲು ಹರಿದು,
ಜೋಗಿಯ ಕಯ್ಯ ಕೋಡಗದಂತೆ ಅನ್ಯರಿಗೆ ಹಲ್ಲಕಿರಿದು,
ವಿರಕ್ತನೆನಿಸಿಕೊಂಬ ಯುಕ್ತಿಹೀನರ ಕಂಡಡೆ,
ಎನ್ನ ಮನ ನಾಚಿತ್ತು ಚೆನ್ನರಾಮ. ॥೫॥

೧೬೫೧
ಶಿಲೆ ಹಲವು ತೆರದಲ್ಲಿ ಹೊಲಬಿಗರಿಗೆ ಹೊಲಬಾಗಿ
ಒಲವರವಿಲ್ಲದೆ ಅವರ ಭಾವದಲ್ಲಿ ನಿಲ್ಲುವುದು
ಶಿಲೆಯೊ? ಮನವೊ?
ಆ ನಿಜದ ನೆಲೆಯ ತಿಳಿವುದು ದರ್ಪಣದ ತನ್ನೊಪ್ಪದ ಭಾವ,
ಎನ್ನಯ್ಯ ಚೆನ್ನರಾಮನನರಿವಲ್ಲಿ. ॥೬॥

*

ಏಲೇಶ್ವರ ಕೇತಯ್ಯಗಳ ವಚನ

೧೬೫೨
ಅಂಗಕ್ಕೆ ಆಚರಣೆ, ಮನಕ್ಕೆ ನಿರ್ಮಲ ಮನೋಹರವಾಗಿ,
ಸಕಲದ್ರವ್ಯಪದಾರ್ಥಂಗಳ
ಬಾಹ್ಯದಲ್ಲಿ ಕಂಡು, ಅಂತರಂಗದಲ್ಲಿ ಪ್ರಮಾಣಿಸಿ,
ತನ್ನ ಭಾವಕ್ಕೆ ಒಪ್ಪಿದುದ ಒಪ್ಪಿ, ಅಲ್ಲದುದ ಬಿಟ್ಟ ನಿಶ್ಚಯ ನಿಜವ್ರತಾಂಗಿ
ಜಗದ ಹೆಚ್ಚು ಕುಂದಿನವರ ಭಕ್ತರೆಂದು ಒಪ್ಪುವನೆ?
ಏಲೇಶ್ವರಲಿಂಗವಾಯಿತ್ತಾದಡು
ಕಟ್ಟಳೆಯ ವ್ರತಕ್ಕೆ ಕೃತ್ಯದೊಳಗಾಗಿರಬೇಕು. ॥೧॥

೧೬೫೩
ಅಂಗಕ್ಕೆ ಕ್ರೀಯ ಅಂಗೀಕರಿಸಿದಲ್ಲಿ
ಮನಕ್ಕೆ ಮುನ್ನವೆ ವ್ರತವ ಮಾಡಬೇಕು.
ಆ ವ್ರತಕ್ಕೆ ಮುನ್ನವೆ ತಟ್ಟು-ಮುಟ್ಟು ತಾಗು-ಸೋಂಕು ಬಪ್ಪುದನರಿಯಬೇಕು.
ಅವು ಬಂದು ಸೋಂಕಿದ ಮತ್ತೆ ಅಂಗವ ಬಿಟ್ಟೆಹೆನೆಂಬುದೆ ವ್ರತಕ್ಕೆ ಭಂಗ.
ಇಂತೀ ಸಂದು ಸಂಶಯವನರಿಯಬೇಕೆಂದು
ಅಂಗಕ್ಕೆ ಕ್ರೀ, ಆತ್ಮಂಗೆ ಅರಿವಿಂಗೆ ನೆರೆ ವ್ರತವ
ಸೋಂಕಿಂಗೆ ಹೊರಗಾಗಿ ಮಾಡಬೇಕು,
ಏಲೇಶ್ವರಲಿಂಗದಲ್ಲಿ ವ್ರತಸ್ಥನಾಗಬಲ್ಲಡೆ. ॥೨॥

೧೬೫೪
ಅಂಗವಾರು ಗುಣದಲ್ಲಿ ಹರಿದಡೆ, ಲಿಂಗ ಮೂರೆಂದು ಕಂಡಡೆ,
ಆತ್ಮ ಹಲವೆಂದು ನೋವ ಕಂಡಡೆ, ಎನ್ನ ವ್ರತಕ್ಕೆ ಅದೇ ಭಂಗ.
ಒಂದ ದೃಢವೆಂದು ಹಿಡಿದಲ್ಲಿ ನಾನಾ ವ್ರತ ನೇಮ ಅಲ್ಲಿ ಸಂದಿಪ್ಪವು.
ಇದಕ್ಕೆ ಸಂದೇಹವಿಲ್ಲ, ಏಲೇಶ್ವರಲಿಂಗದಾಣತಿ. ॥೩॥

೧೬೫೫

ಅಂಗ ಸರ್ವಾಂಗಭಾವವ ಮುಟ್ಟುವಲ್ಲಿ,
ಆ ಭಾವ ತನ್ನಯ ಕ್ರೀಯ ನಿಬದ್ಧಿಸಿ ಹಿಡಿವಲ್ಲಿ,
ಬಾಹ್ಯದ ಕ್ರೀ, ಅಂತರಂಗದ ಅರಿವು, ಉಭಯ ಏಕ ಸನ್ಮತವಾಗಿ,
ಸರ್ವವ್ಯವಧಾನಂಗಳಲ್ಲಿ ಸರ್ವವ ಹಿಡಿದುಬಿಡುವಲ್ಲಿ,
ತನ್ನ ಕ್ರೀಗೆ ಒಳಗಾದುದ ಒಡಗೂಡುವಲ್ಲಿ,
ಸಹಭೋಜನದ ಸಮವನರಿತು, ಭರಿತಾರ್ಪಣದ ಅರ್ಪಿತವನರಿತು,
ತಾ ಲಕ್ಷಿಸಿದ ವ್ರತದ ಕಟ್ಟಳೆಯ ಕಂಡು
ತನು ಕ್ರೀಯಲ್ಲಿ ಶುದ್ಧವಾಗಿ, ಆತ್ಮ ಅರಿವಿನಲ್ಲಿ ಶುದ್ಧವಾಗಿ,
ಅರಿವು ಆಚಾರದಲ್ಲಿ ಲೀಯವಾಗಿ,
ಆ ಸದ್ಭಾವವೆ ಏಲೇಶ್ವರಲಿಂಗದ ವ್ರತದ ಸಂಬಂಧ. ॥೪॥

೧೬೫೬

ಅಂಧಕ ವ್ರತಿಯಲ್ಲ, ಪಂಗುಳ ಕ್ರೀವಂತನಲ್ಲ, ಕುಟಿಲ ಸದ್ಯೆವಭಕ್ತನಲ್ಲ.
ಇಂತೀ ಗುಣವೆ [ದೃಷ್ಟ], ದೃಷ್ಟದಲ್ಲಿಯೇ ದೃಷ್ಟವ ಕಂಡು,
ಅಂಧಕ, ಪಂಗುಳ, ಕುಟಿಲ ಈ ಮೂರಕ್ಕೆ ವ್ರತದಂಗವೊಂದೂ ಇಲ್ಲ,
ಇದಕ್ಕೆ ಏಲೇಶ್ವರಲಿಂಗವೆ ಸಾಕ್ಷಿ. ॥೫॥

೧೬೫೭

ಅನ್ನ-ಉದಕಕ್ಕೆ, ನನ್ನಿಯ ಮಾತಿಗೆ, ಚೆನ್ನಾಯಿತ್ತು ಒಡೆಯರ ಕಟ್ಟಳೆ.
ಮಿಕ್ಕಾದವಕ್ಕೆ ಗನ್ನವ ಮಾಡಿ-
ಈ ಬಣ್ಣ ಬಚ್ಚಣೆಯ[ಲ್ಲಿ] ನಡೆವ ಕನ್ನಗಳ್ಳರ ಶೀಲ
ಇಲ್ಲಿಗೆ ಅಲ್ಲಿಗೆ ಮತ್ತೆಲ್ಲಿಗೂ ಇಲ್ಲ.
ಏಲೇಶ್ವರಲಿಂಗವು ಅವರವೊಲ್ಲನಾಗಿ. ॥೬॥

೧೬೫೮

ಅನ್ಯರ ದ್ರವ್ಯವ ಅಪಹರಿಸಿಕೊಂಡಲ್ಲಿ ಅದು ತನಗೆ ಅನ್ಯದೈವ.
ತನ್ನ ಕ್ರೀಯಲ್ಲದಲ್ಲಿ ಮನ ಮುಟ್ಟಿ ನೆನೆದಾಗವೆ ಅದು ಅನ್ಯಾಹಾರ.
ಇದಿರ ಉಪಚರಿಯಕ್ಕೆ ನಾನೊಂದು ವ್ರತವ ಹಿಡಿದು
ನಡೆದೆಹೆನೆಂಬುದೆ ಪರಪಾಕದ ಪಾಕುಳ.
ಇಂತಿವರಲ್ಲಿ ಮನ ಹೇಸಿ, ತನು ಕರಗಿ, ಪಕ್ಷಪಾತವೆಂಬ ಪಾತಕವ ಬಿಟ್ಟು,
ನಿಶ್ಚಯದಲ್ಲಿ ನಿಂದ ವ್ರತಾಂಗಲಿಂಗಿ ಮರ್ತ್ಯರ ಸುಗುಣ ದುರ್ಗುಣವನೊಲ್ಲ,
ನಿತ್ಯಾನಿತ್ಯವ ಮುಟ್ಟಿ ಮರ್ತ್ಯರ ಕರ್ಕಶವನೊಲ್ಲ.
ಭಕ್ತಿಯಲ್ಲಿ ತಿಳಿದು, ಜ್ಞಾನದಲ್ಲಿ ನಿಂದು, ವೈರಾಗ್ಯದಲ್ಲಿ ಸಲೆಸಂದು-

ಇಂತೀ ತ್ರಿವಿಧದಲ್ಲಿ ನಿಧಾನಿಸಿ ನಿಂದು,
ಕ್ರೀಯೇ ಘಟವಾಗಿ, ಆಚಾರವೇ ಆತ್ಮವಾಗಿ,
ಅನುಸರಣೆಯಿಲ್ಲದ ನಿಶ್ಚಯವೇ ನಿಜತತ್ವಕೂಟವಾಗಿ
ತೊಳಗಿ ಬೆಳಗುತ್ತಿರಬೇಕು, ಏಲೇಶ್ವರಲಿಂಗದಲ್ಲಿ. ॥೭॥

೧೬೫೯

ಆತ ಅಂಗವ ತೊಟ್ಟಡೇನು? ಪರಾಂಗನೆಯರ ಸೋಂಕ.
ಕರವಿದ್ದಡೇನು? ಮತ್ತೊಂದ ಅಪಹರಿಸಿ ತೆಗೆಯ.
ಕರ್ಣವಿದ್ದಡೇನು? ಮತ್ತೊಂದು ಅನ್ಯಶಬ್ದವ ಕೇಳ.
ಕಣ್ಣಿದ್ದಡೇನು? ಲಿಂಗವಲ್ಲದುದ ನೋಡ
ನಾಸಿಕವಿದ್ದಡೇನು? ಅರ್ಪಿತವಲ್ಲದುದ ವಾಸಿಸ.
ಜಿಹ್ವೆಯಿದ್ದಡೇನು? ಪ್ರಸಾದವಲ್ಲದುದ ಸ್ವೀಕರಿಸ.
ಇಂತಿವೆಲ್ಲರಲ್ಲಿ ಸರ್ವವ್ಯವಧಾನಿಯಾಗಿ
ನಡೆನುಡಿ ಅರಿವು ಶುದ್ಧಾತ್ಮನು ಏಲೇಶ್ವರಲಿಂಗವು ತಾನೆ. ॥೮॥

೧೬೬೦

ಆವ ವ್ರತ ನೇಮವ ಹಿಡಿದಡೂ
ಆ ವ್ರತ ನೇಮದ ಭಾವಶುದ್ಧವಾಗಿರಬೇಕು.
ಅಸಿ ಕೃಷಿ ಯಾಚಕ ವಾಣಿಜ್ಯತ್ವದಿಂದ ಬಂದ ದ್ರವ್ಯಂಗಳಲ್ಲಿ
ಬಾಹ್ಯದ ಬಳಕೆ ಅಂತರಂಗದ ನಿರಿಗೆ
ಉಭಯ ಶುದ್ಧವಾಗಿಪ್ಪ ಭಕ್ತನಂಗವೆ ಏಲೇಶ್ವರಲಿಂಗದಂಗ. ॥೯॥

೧೬೬೧

ಆಳಿಮೇಳ ಚರ್ಚೆಗೊಟ್ಟಿ ಚೌವಟತನಕಾಗಿ ವ್ರತದಾಳಿಯ ಮಾಡಿಕೊಳ್ಳದೆ
ತನುವಿಗೆ ಕಟ್ಟು, ಮನಕ್ಕೆ ವ್ರತ,
ಸರ್ವೇಂದ್ರಿಯ ವಿಸರ್ಜನವಾಗಿ ಮಾಡಿಕೊಂಬುದೆ ಸ್ವಯವ್ರತ.
ಈ ಗುಣ ಏಲೇಶ್ವರಲಿಂಗಕ್ಕೆ ವ್ರತದ ಸುಪಥದ ಪಥ. ॥೧೦॥

೧೬೬೨

ಇಷ್ಟ ಬಿದ್ದಲ್ಲಿ ಎತ್ತಿ ಕಟ್ಟಿಕೊಳಲಾಗದು.
ವ್ರತ ಕೆಟ್ಟುದ ಕಂಡು, ಇನ್ನು ತಪ್ಪೆನೆಂದಡೆ ಒಪ್ಪಿ ಕೂಡಿಕೊಳ್ಳಬಾರದು.
ಸತಿ ಕೆಟ್ಟು ನಡೆದುದ ಕಂಡು
ಹಿಂದಕ್ಕೆ ಮರವೆ, ಮುಂದಕ್ಕೆ ಚಿತ್ತಶುದ್ಧವೆಂದಡೆ.

ಆ ಗುಣ ಶುನಕಸ್ವಪ್ನದಂತೆ.
ಇಂತೀ ಇವ ಕಂಡು ಮತ್ತೆ ಹಿಂಗದಿದ್ದೆನಾದಡೆ
ಇಹಪರಕ್ಕೆ ಹೊರಗು, ಏಲೇಶ್ವರಲಿಂಗಕ್ಕೆ ದೂರ. ॥೧೧॥

೧೬೬೩
ಉಂಡವರ ನೋಡಿ, ತಮ್ಮ ಬಂಧುಗಳ ನೋಡಿ,
ಅವರು ಜಂಗಮವೆಂದು, ತನ್ನ ಸಂದೇಹದ
ಕಟ್ಟಳೆಯವರೆಂದು ಮಾಡುವ ಲಂದಣಿಗರ ಜಗಭಂಡರ ಒಡೆಯರ ಕಟ್ಟಳೆ,
ವ್ರತದಂಗದ ಸಂಗವಲ್ಲ, ಏಲೇಶ್ವರಲಿಂಗಕ್ಕೆ ದೂರ. ॥೧೨॥

೧೬೬೪
ಎಂಬತ್ತನಾಲ್ಕುಲಕ್ಷ ವ್ರತಶೀಲ, ಅರವತ್ತನಾಲ್ಕು ನೇಮ,
ಅರುವತ್ತಾರು ವ್ರತಂಗಳಲ್ಲಿ
ಇವ ಪ್ರಮಾಣಿಸಿ ನಾಮವಿಟ್ಟೆಹೆನೆಂದಡೆ ಎನಗಾಗದು, ಚೆನ್ನಬಸವಣ್ಣಂಗಲ್ಲದೆ.
ಆತ ಜ್ಞಾನಸೂತ್ರಧಾರಿ, ನಾನು ಕ್ರಿಯಾವರ್ತಕ.
ಮಾಡಿಕೊಂಡ ವ್ರತಕ್ಕೆ ಕೇಡು ಬಂದಿಹಿತೆಂದು,
ಬೆನ್ನ ಮತ್ಸ್ಯದ ಹುಣ್ಣಿನ ಪಶುವಿನಂತೆ ಎಲ್ಲಿಯೂ ನುಸುಳಲಮ್ಮೆನು.
ಭಿನ್ನಭಾವದ ಕ್ರೀಯಲ್ಲಿ ನೆಮ್ಮಿದೇನೆ, ಎನಗೆ ಅಭಿನ್ನದ ಠಾವ ಹೇಳಾ,
ಚೆನ್ನಬಸವಣ್ಣಪ್ರಿಯ ಏಲೇಶ್ವರಲಿಂಗವೆ. ॥೧೩॥

೧೬೬೫
ಒಡೆಯರು ಭಕ್ತರಲ್ಲಿ ಕೃಷಿಯಿಲ್ಲದೆ ಬೇಡಿ ತಂದು,
ತನ್ನ ಮಡದಿ ಮಕ್ಕಳ ಹೊರೆದು, ಮಿಕ್ಕಾದುದ ಒಡೆಯರಿಗಿಕ್ಕಿಹೆನೆಂಬ
ಅಡುಗೂಲಿಕಾರನ ಗಂಜಿಗುಡಿಹಿಯ ಭಕ್ತಿ
ತನ್ನ ಸಂಸಾರದ ಅಡಿಗೆಯೊಳಗೆ ಅಡಗಿತ್ತು, ಇದು ಬೆದಕಿದಡೆ ಹುರುಳಿಲ್ಲ.
ನನ್ನಿಯೆತ್ತಿಗೆ ಎನ್ನ ಮಣ್ಣೆತ್ತು ಘನವೆನಬೇಕು,
ಅದು ಭಕ್ತಿಪಕ್ಷದ ಓಸರ. ಬಿಡಲಿಲ್ಲ, ಅರಿದು ಹಿಡಿಯಲಿಲ್ಲ.
ಆ ಅಂಗವ, ಒಡಗೂಡುವ ಶರಣರು ನೀವೆ ಬಲ್ಲಿರಿ.
ಎನಗದು ಸಂಗವಲ್ಲ ಏಲೇಶ್ವರಲಿಂಗಕ್ಕೆ. ॥೧೪॥

೧೬೬೬
ಒಡೆಯರು ಭಕ್ತರಿಗೆ ಸಲುವ ಸಹಪಂಕ್ತಿಯಲ್ಲಿ,
ಗುರು ಅರಸೆಂದು, ತನ್ನ ಪರಿಸ್ಪಂದವೆಂದು

ರಸದ್ರವ್ಯವ ಎಸಕದಿಂದ ಇಕ್ಕಿದಡೆ,
ಅದು ತಾನರಿದು ಕೊಂಡಡೆ ಕಿಸುಕುಳದ ಪಾಕುಳ.
ಅಲ್ಪ ಜಿಹ್ವೆಲಂಪಟಕ್ಕೆ ಸಿಕ್ಕಿ ಸಾವ ಮತ್ಸ್ಯದಂತೆಯಾಗದೆ–
ಈ ಗುಣವ ನಿಶ್ಚಯಿಸಿದಲ್ಲಿ ಏಲೇಶ್ವರಲಿಂಗವನರಿಯಬಲ್ಲ. ॥೧೫॥

೧೬೬೭

ಒಡೆಯರು ಭಕ್ತರು ತಾವೆಂದು ಅಡಿಮೆಟ್ಟಿ ಹೋಹಲ್ಲಿ
ತಡೆಯಿತು ಶಕುನವೆಂದುಳಿದಡೆ,
ಕಾಗೆ ವಿಹಂಗ ಮಾರ್ಜಾಲ ಮರವಕ್ಕಿ ಗರ್ದಭ ಶಶಕ ಶಂಕೆಗಳು
ಮುಂತಾದ ಸಂಕಲ್ಪಕ್ಕೊಳಗಾದಲ್ಲಿ ವ್ರತಕ್ಕೆ ಭಂಗ, ಆಚಾರಕ್ಕೆ ದೂರ.
ಅದೆಂತೆಂದಡೆ:
ಅಂಗಕ್ಕೆ ಆಚಾರವ ಸಂಬಂಧಿಸಿ,
ಮನಕ್ಕೆ ಅರಿವು–ಅರಿವಿಂಗೆ ವ್ರತವ ಮಾಡಿದಲ್ಲಿ,
ಬೇರೊಂದು ಪರಿಹರಿಸುವ ನಿಮಿತ್ತವುಂಟೇ?
ಇಂತೀ ಸತ್ಕ್ರಿಯಾವಂತಗೆ ಕಷ್ಟಜೀವದ ಲಕ್ಷದಲ್ಲಿ ಚಿತ್ತ ಮೆಚ್ಚಿಹನ್ನಕ್ಕ
ಆತನು ಆಚಾರಭ್ರಷ್ಟ, ಏಲೇಶ್ವರಲಿಂಗಕ್ಕೆ ದೂರ. ॥೧೬॥

೧೬೬೮

ಓಗರ ಮೇಲೋಗರವನುಂಬನ್ನಕ್ಕ ಗಡಿತಡಿಯ ಕಾಯಿಸಿ,
ಮತ್ತೊಡೆಯರ ಕರೆಯೆಂದು,
ಮತ್ತೊಡೆಯರು ಬಂದಲ್ಲಿ ಮಡದಿಯರ ಮನೆಯೊಳಗವಿಸಿ,
ತನ್ನ ಬಿಡುಗಡೆಯ ಸ್ತ್ರೀಯರ ಕೈಯಲ್ಲಿ
ಒಡೆಯರ ಪಾದವೆಂದು ಅಡಿಯ ತೊಳೆವುತ್ತ,
ಆ ತೊಳೆದ ನೀರ ತಾ ಕುಡಿವುತ್ತ, ಲಿಂಗಮಜ್ಜನವೆಂದು ಎರೆವುತ್ತ,
ಅವರು ಉಂಡು ಮಿಕ್ಕ ಓಗರವ ಪ್ರಸಾದವೆಂದು
ಲಿಂಗಕ್ಕೆ ತೋರಿ ತಾವು ಭುಂಜಿಸುತ್ತ,
ಇಂತಿವರು ತಮ್ಮ ವ್ರತವ ತಾವರಿಯದೆ,
ತಮ್ಮ ಭಾವವ ತಾವರಿಯದೆ,
ಸುರೆಯ ಕುಡಿದವರಂತೆ, ಮರುಳು ಗ್ರಹ ಹೊಡೆದವರಂತೆ!
ಇಂತೀ ತ್ರಿವಿಧ ಗುಡಿಹಿಯ ಭಕ್ತಿ ಅಸಗ ನೀರಡಿಸಿ ಸತ್ತಂತಾಯಿತ್ತು.
ಆ ಗುಣಕಟ್ಟಳೆ ಏಲೇಶ್ವರಲಿಂಗವ ಮುಟ್ಟದೆ ಇತ್ತಲೆ ಉಳಿಯಿತ್ತು. ॥೧೭॥

೧೬೭೯
ಕ್ರೀಗುಣ ಶುದ್ಧವಾದಲ್ಲಿ ಭಾವಗುಣ ಶುದ್ಧ.
ಆ ಸದ್ಭಾವದ ದೆಸೆಯಿಂದ ವಿಮಲಜ್ಞಾನ.
ಆ ಸುಜ್ಞಾನ ಸೂತ್ರವಾಗಿ ತ್ರಿವಿಧಭೇದವಾಯಿತ್ತು.
ಆ ತ್ರಿವಿಧದ ಸೂತ್ರದಿಂದ ಷಡುಸ್ಥಲವಾಯಿತ್ತು.
ಆ ಷಡುಸ್ಥಲದ ಭಾವಂಗಳೆ ಭಿನ್ನಭಾವವಾಗಿ
ನಾನಾ ಸ್ಥಲಭೇದ ವ್ರತವಾಯಿತ್ತು.
ಆ ವ್ರತದ ಲಕ್ಷಣವನರಿತು
ಆವಾವ ಕ್ರೀಯಲ್ಲಿ ಆವಾವ ಭಾವಶುದ್ಧವಾಗಿ,
ಕೃತ್ಯಕ್ಕೆ ಕಟ್ಟಳೆಯಾಗಿ, ನೇಮಕ್ಕೆ ನಿಶ್ಚಯವಾಗಿ
ವ್ರತದಾಳಿಯ ತಪ್ಪದಿಪ್ಪ ಭಕ್ತನಲ್ಲಿ
ಏಲೇಶ್ವರಲಿಂಗವು ನಿಶ್ಚಯವಾಗಿಪ್ಪನು. ॥೧೮॥

೧೬೮೦
ಕ್ರೀ ನಿಃಕ್ರೀಯೆಂಬ ಉಭಯವಾವುದು?
ತನ್ನನರಿತಲ್ಲಿ ಕ್ರೀ, ತನ್ನ ಮರೆದಲ್ಲಿ ನಿಃಕ್ರೀ.
ನಾನೆಂಬುದುಳ್ಳನ್ನಕ್ಕ ಸರ್ವಕ್ರೀ ಸಂಭ್ರಮಿಸಬೇಕು,
ನಾನೆಂಬುದೇನೂ ತೋರದಲ್ಲಿ ಕ್ರೀಯೆಂಬುದೇನೂ ಇಲ್ಲ.
ಇಂತೀ ಭಾವವ ತಿಳಿದು ನಿಮ್ಮ ನೀವೆ ನೋಡಿಕೊಳ್ಳಿ,
ಜಿಡ್ಡ ಜಿಗುಡೆಂಬ ಸಂದೇಹವ ತಾನುಂಡು ತೇಗಿದಂತೆ.
ಇದಕ್ಕೆ ಸಂದೇಹವಿಲ್ಲ. ಏಲೇಶ್ವರಲಿಂಗವೇ ಸಾಕ್ಷಿ. ॥೧೯॥

೧೬೮೧
ಕ್ರೀಯ ಅನುವನರಿದಾತ ಗುರುವೆಂಬೆ,
ಕ್ರೀಯ ಅನುವನರಿತುದು ಲಿಂಗವೆಂಬೆ,
ಕ್ರೀಯ ಅನುವನರಿದಾತ ಜಂಗಮವೆಂಬೆ.
ಇಂತೀ ತ್ರಿವಿಧಮೂರ್ತಿ ಆಚಾರಕ್ಕೆ ಅನುಕೂಲವಾಗಿ
ಬಂಗಾರದೊಳಗೆ ಬಣ್ಣವಡಗಿದಂತೆ,
ಆ ಬಣ್ಣವೇಧಿಸಿ ಬಂಗಾರವಾದಂತೆ.
ಇಂತು ಆಚಾರಕ್ಕೂ ಅರಿವಿಂಗೂ ಪಡಿಪುಚ್ಚವಿಲ್ಲವಾಗಿ,
ಆಚಾರವೆ ಕುಲ, ಅನಾಚಾರವೇ ಹೊಲೆ.
ಇದಕ್ಕೆ ಒಲವರವಿಲ್ಲ, ಏಲೇಶ್ವರಲಿಂಗವ ಕೇಳಲಿಲ್ಲ. ॥೨೦॥

೧೬೭೨

ಕೀಳು ಲೋಹದ ಮೇಲೆ ಮೇಲು ಚಿನ್ನವ ತೊಡೆದಡೆ,
ಅದು ಸ್ವಯಂಭು ಹೇಮವಪ್ಪುದೆ?
ಹೆಣ್ಣು ಹೊನ್ನು ಮಣ್ಣು ಕುರಿತು ಕುಜಾತಿಗನ್ನಕ್ಕೆ ಶೀಲವಂತನಾದವ
ನನ್ನಿಯ ವ್ರತದ ದೆಸೆಯ ಬಲ್ಲನೆ?
ಇಂತೀ ಗನ್ನರನರಿದು, ಇಂತೀ ನಿಜಪ್ರಸನ್ನರ ಕಂಡು,
ಉಭಯದ ಬಿನ್ನಾಣದ ವ್ರತದ ಬೆಸುಗೆಯ
ತ್ರಿಕರಣಕ್ಕೆ ಅನ್ಯವಿಲ್ಲದೆ ಮಾಡಬೇಕು.
ಏಲೇಶ್ವರಲಿಂಗಕ್ಕೆ ವ್ರತಕ್ಕೆ ಆಚಾರ್ಯನಾಗಬಲ್ಲಡೆ. ॥೨೧॥

೧೬೭೩

ಗುರುಪ್ರಸಾದವ ಕೊಂಬಲ್ಲಿ ಇಹವನರಿಯಬೇಕು,
ಲಿಂಗಪ್ರಸಾದವ ಕೊಂಬಲ್ಲಿ ಪರವನರಿಯಬೇಕು,
ಜಂಗಮಪ್ರಸಾದವ ಕೊಂಬಲ್ಲಿ
ಇಹಪರ ಉಭಯವನರಿತು ಸ್ವೀಕರಿಸಬೇಕು.
ಗಣಪ್ರಸಾದವ ಸಮೂಹದಲ್ಲಿ ಕೊಂಬಲ್ಲಿ,
ರಾಜಸ ತಾಮಸ ಸಾತ್ವಿಕವಂ ಅರಿದು
ಕೊಂಬಲ್ಲಿ ತ್ರಿವಿಧವಂ ಮರೆದು,
ಅಜೀರ್ಣ ಮನ ಮುಂತಾದ ಮಿಕ್ಕಾದ ತೊಡಕಿಂಗೆ ಒಡಲಲ್ಲದೆ,
ವಡಬಾನಳನಂತೆ, ಉರಿಯ ಒಡಲಿನಂತೆ,
ಆಕಾಶವನವಗವಿಸಿದ ಗೋಳಕಾಕಾರದಂತೆ,
ಕುರುಹಿಂಗೆ ಒಡಲಿಲ್ಲದೆ ಕೊಂಡುದು ಗಣಪ್ರಸಾದ.
ಹೀಂಗಲ್ಲದೆ ಹುಲಿ ಹಾಯಿದ ಗೋವ ಹಲವು ನರಿಗಳು ಕೊಂಡು
ತಮ್ಮ ತಮ್ಮ ಹೊಲಗಳಿಗೆ ಹೋದಂತಾಗಬೇಡ.
ಎನಗಿನಿತು ಒಲವರವೆಂದು ನೋಯಬೇಡ.
ಇದು ಏಲೇಶ್ವರಲಿಂಗದ ವ್ರತದಂಗದ ಹೊಲಬಿನ ಹಾದಿ. ॥೨೨॥

೧೬೭೪

ಗುರುಪ್ರಸಾದಿ ಆ ಪ್ರಸಾದವ ಲಿಂಗಕ್ಕೆ ಅರ್ಪಿಸಲಾಗದು,
ಲಿಂಗಪ್ರಸಾದಿ ಆ ಪ್ರಸಾದವ ಜಂಗಮಪ್ರಸಾದದಲ್ಲಿ ಕೂಡಲಾಗದು.
ಇಂತೀ ತ್ರಿವಿಧಪ್ರಸಾದವ ತಾ ಸ್ವೀಕರಿಸುವಲ್ಲಿ
ತನ್ನ ದೃಷ್ಟದ ಇಷ್ಟಕ್ಕೆ ಅರ್ಪಿಸದೆ ಮುಟ್ಟಲಾಗದು.
ಇಂತೀ ಭಾವ ಅಮೃತದಲ್ಲಿ ವಿಷ ಬೆರೆದಂತೆ:

ಅಮೃತವ ಚೆಲ್ಲಬಾರದು, ವಿಷವ ಮುಟ್ಟಬಾರದು.
ಗೋವು ಮಾಣಿಕವ ನುಂಗಿದಂತೆ:
ಗೋವ ಕೊಲ್ಲಬಾರದು, ಮಾಣಿಕವ ಬಿಡಬಾರದು.
ಗೋವು ಸಾಯದೆ ಮಾಣಿಕ ಕೆಡದೆ ಬಹ ಹಾದಿಯ ಬಲ್ಲಡೆ
ಆತ ತ್ರಿವಿಧ ಪ್ರಸಾದಿಯೆಂಬೆ.
ಆ ಗುಣ ಏಲೇಶ್ವರಲಿಂಗಕ್ಕೂ ಅಸಾಧ್ಯ ನೋಡಾ! ॥೨೩॥

೧೬೭೫

ಚಿನ್ನ ಲೋಹಾದಿಗಳು ಕರಗಿ ಒಂದುಗೂಡುವುದಲ್ಲದೆ
ಮಣ್ಣು ಬೆಂದು ಹಿಂಗಿ ಓಡಾದುದು ಸರಿಯಿಂದ ಸಂದುಗೂಡುವುದೆ?
ಅರಿಯದ ಮರವೆಯ ಒಡಗೂಡಬಹುದಲ್ಲದೆ
ಅರಿತು ಹೇಳಿ ಕೇಳಿ ಮತ್ತರಿಯೆನೆಂದು
ಅಹಂಕಾರದಲ್ಲಿ ನುಡಿವವನ ಒಡಗೂಡಬಹುದೆ?
ಇಂತೀ ಗುಣವ ಅರಿದು ಒಪ್ಪಿದಡೆ ಪರಕ್ಕೆ ದೂರ,
ಅಲ್ಲ– ಅಹುದೆಂದಡೆ ಶರಣರ ಗೆಲ್ಲ ಸೋಲದ ಹೋರಾಟ.
ಇಂತಿವರೆಲ್ಲರೂ ಕೂಡಿ ನೊಂದಡೆ ನೋಯಲಿ,
ನಾ ಕೊಂಡ ವ್ರತದಲ್ಲಿಗೆ ತಪ್ಪೆನು. ಇದು ವ್ರತಾಚಾರವ ಬಲ್ಲವರ ಭಾಷೆ.
ಏಲೇಶ್ವರಲಿಂಗವು ಖುಲ್ಲತನವಾದಡೂ ಒಲ್ಲೆನು. ॥೨೪॥

೧೬೭೬

ಜಂಗಮವ ಮುಂದಿಟ್ಟು, ಕೊಟ್ಟು ಕೊಂಡೆಹೆನೆಂಬ
ಸರ್ವಸಮಯಾಚಾರ ಸಂಪತ್ತಿನಿರವು:
ಮಜ್ಜನ ಭೋಜನ ಅಂದಳ ಛತ್ರ ಚಾಮರ ಕರಿ ತುರಗ ದರ್ಪಣ
ಹಲುಕಡ್ಡಿ ನಖಚಣ ಪರಿಮಳ ಗಂಧ ಮೆಟ್ಟಡಿ ತಾಂಬೂಲ ರತ್ನಾಭರಣ
ಮೆತ್ತೆ ಶಯನ ಸ್ತ್ರೀಸಂಸರ್ಗ ಒಡೆಯಂಗೆ ಆಯಿತ್ತೆಂಬುದ ಕೇಳಿ,
ಆ ಒಡೆಯನ ವಾಚಾಪ್ರಸಾದದಿಂದ ಮಹಾಪ್ರಸಾದವೆಂದು
ತನ್ನ ಸ್ವಸ್ತ್ರೀಗೆ ಕೂಟಸ್ಥನಾಗಬೇಕು.
ಇಂತೀ ಭಾವ ಸರ್ವಸಮಯಾಚಾರ.
ಈ ವರ್ತಕದಂಗ ನಿಂದಾತನ ಸಂಗ,
ಏಲೇಶ್ವರದಂಗ ಉಮೇಶ್ವರಲಿಂಗವು ಆ ಭಕ್ತನಂಗ. ॥೨೫॥

೧೬೭೭

ಜಂಗಮಪ್ರಸಾದ ಮುಂತಾಗಿಯಲ್ಲದೆ ಒಲ್ಲೆನೆಂಬ ಭಕ್ತನ ಕಟ್ಟಳೆಯ ವಿವರ:
ಶಿಶು, ಬಂಧುಗಳು, ಚೇಟಿ, ಬೆವಸಾಯವ ಮಾಡುವವರು

ಮುಂತಾದ ಇವರಿಗೆಲ್ಲಕ್ಕೂ
ಒಡೆಯರಿಗೆ ಸಲುವುದಕ್ಕೆ ಮುನ್ನವೆ ಸೀತಾಳ ಶಿವದಾನವೆಂದು ಇಕ್ಕಬಹುದೆ?
ಒಡೆಯರ ಕಟ್ಟಳೆಯ ಠಾವಿನಲ್ಲಿ ನಿಮ್ಮ ಕೃತ್ಯಕ್ಕೆ ನಿಮ್ಮ ಮನವೆ ಸಾಕ್ಷಿ.
ಇದು ದಂಡವಲ್ಲ, ನೀವು ಕೊಂಡ ಅಂಗದ ನೇಮ.
ಇದಕ್ಕೆ ನಿಮ್ಮ ಏಲೇಶ್ವರಲಿಂಗವೆ ಸಾಕ್ಷಿ. ॥೨೬॥

೧೬೭೮
ಜಲ ನೆಲ ಶಿಲೆ ತಾನಾಡುವ ಹೊಲ ಮುಂತಾಗಿ
ಸರ್ವವೆಲ್ಲವು ಲಿಂಗಾಯತಸಂಬಂಧವಾಗಿ,
ಭವಿಸಂಗ, ಭವಿನಿರೀಕ್ಷಣೆ, ಭವಿ ಅಪೇಕ್ಷೆ, ಭವಿದ್ರವ್ಯಂಗಳನೊಲ್ಲದೆ,
ಶಿವನನರಿವರಲ್ಲಿ, ಶಿವನ ಪೂಜೆಯ ಮಾಡುವರಲ್ಲಿ,
ಶಿವಮೂರ್ತಿಧ್ಯಾನದಿಂದ ಶಿವಲಿಂಗಾರ್ಚನೆಯ ಮಾಡುವರಲ್ಲಿ,
ಶಿವಪ್ರಸಾದವ ಕಾಡಿ ಬೇಡಿ ತಂದು ಒಡೆಯನಿಗಿತ್ತು
ಆ ಪ್ರಸಾದವ ಏಲೇಶ್ವರಲಿಂಗಕ್ಕೆ ಕೊಟ್ಟ
ಆ ವ್ರತಭಾವಿಗೆ ನಮೋ ನಮೋ ಎನುತಿದ್ದೆ. ॥೨೭॥

೧೬೭೯
ತಂದೆಯ ಮಗ ಕರೆದು, ಮಗನ ತಂದೆ ಕರೆದು,
ಭಾವನ ಮೈದುನ ಕರೆದು, ಮೈದುನನ ಭಾವ ಕರೆದು,
ತಮ್ಮ ಬಂಧುಗಳ ಜಂಗಮವೆಂದು ಕೂಡಿಕೊಂಡು ಉಂಬ
ಜಗಭಂಡರ ನೇಮ ಸುಸಂಗವಲ್ಲ, ಏಲೇಶ್ವರಲಿಂಗಕ್ಕೆ. ॥೨೮॥

೧೬೮೦
ತನು ಮುಟ್ಟುವುದಕ್ಕೆ ಮುನ್ನವೇ ಮನ ಶೀಲವಾಗಿರಬೇಕು,
ಮನ ಮುಟ್ಟುವುದಕ್ಕೆ ಮುನ್ನವೆ ಅರಿವು ಶೀಲವಾಗಿರಬೇಕು,
ಅಂಗ ಮನ ಅರಿವು ವ್ರತಾಂಗದಲ್ಲಿ ಕರಿಗೊಂಡು
ಆಚಾರಕ್ಕೆ ಅನುಸರಣೆಯಿಲ್ಲದೆ, ಆತ್ಮವ್ರತ ತಪ್ಪಿದಲ್ಲಿ ಓಸರಿಸದೆ,
ಆ ವ್ರತದ ಅರಿವು ಹೆರೆಹಿಂಗದೆ
ಇಪ್ಪಾತನಂಗವೆ ಏಲೇಶ್ವರಲಿಂಗದಂಗ. ॥೨೯॥

೧೬೮೧
ತನುಶೀಲ ಗುರುಭಕ್ತಿ, ಮನಶೀಲ ಲಿಂಗಭಕ್ತಿ,
ಧನಶೀಲ ಜಂಗಮಭಕ್ತಿ, ತ್ರಿವಿಧಶೀಲ ಮಹಾಭಕ್ತಿ.

ಅಂಗ ಮನ ಭಾವ ಕರಣಂಗಳಲ್ಲಿ
ವ್ರತದಂಗವೆ ಪ್ರಾಣವೆಂದು ಇಪ್ಪುದು ಛಲಭಕ್ತಿ.
ಇಂತೀ ಭೇದಭಾವಂಗಳಲ್ಲಿ ಅಣುಮಾತ್ರ ತಪ್ಪ
ಕ್ಷಣಮಾತ್ರ ಸೈರಿಸೆವೆಂಬುದು ನಿಶ್ಚಯಭಕ್ತಿ.
ಇಂತೀ ವರ್ತಕಶುದ್ಧ ಸದ್ಭಕ್ತಂಗೆ ಮರ್ತ್ಯ-ಕೈಲಾಸವೆಂಬ ತತ್ತು ಗೊತ್ತಿಲ್ಲ.
ಆತ ವ್ರತಲಕ್ಷಣಮೂರ್ತಿ, ಏಲೇಶ್ವರಲಿಂಗವು ತಾನೆ. ॥೩೦॥

೧೬೮೨

ತನುಸಂಪಾದನೆಯ ನೇಮ, ಭಾವಸಂಪಾದನೆಯ ನೇಮ,
ಜ್ಞಾನಸಂಪಾದನೆಯ ನೇಮ, ಕ್ರೀಸಂಪಾದನೆಯ ನೇಮ,
ಆಚಾರಸಂಪಾದನೆಯ ನೇಮ, ಸರ್ವಭಾವಸಂಪಾದನೆಯ ನೇಮ,
ಸರ್ವಸ್ಥಲದ ಸಂಪಾದನೆಯ ನೇಮ, ತ್ರಿವಿಧಮಲದ ಸಂಬಂಧ ನೇಮ.
ಇಂತೀ ಕ್ರೀ ಅಂಗಕ್ಕೆ, ಇಂತೀ ಜ್ಞಾನ ಲಿಂಗಕ್ಕೆ.
ಇಂತಿವ ಕಳೆದುಳಿದ ಭಾವ, ವಸ್ತುವಿನಲ್ಲಿ ನಿಶ್ಚಯವಾದ ಶೀಲವಂತಂಗೆ
ಹಿಂಗದೆ ನಮೋ ಎಂದು ಬದುಕಿದೆ ಏಲೇಶ್ವರಲಿಂಗ ಸಹಿತಾಗಿ. ॥೩೧॥

೧೬೮೩

ತಪ್ಪಿ ಇಷ್ಟ ನೆಲಕ್ಕೆ ಬಿದ್ದಲ್ಲಿ
ದೃಷ್ಟದಿಂದ ತನ್ನ ತಾನೆ ಬಂದುದು ಅದು ಏಕಲಿಂಗನಿಷ್ಠೆ.
ವ್ರತಗೆಟ್ಟೆನೆಂಬುದನರಿತು ಆಗವೆ ಪ್ರಾಣವ ಬಿಟ್ಟುದು
ವ್ರತನಿಷ್ಠೆವಂತನ ಭಾವ.
ಇಂತೀ ಉಭಯಕ್ಕೆ ತಟ್ಟುಮುಟ್ಟಿಲ್ಲ,
ಹೀಗಲ್ಲದೆ ಇಷ್ಟವೆಂದೇನು? ವ್ರತಗೆಟ್ಟವನೆಂದೇನು? ಎಂದು
ಘಟ್ಟಿಯತನದಲ್ಲಿ ಹೋರುವ ಮಿಟ್ಟೆಯ ಭಂಡಂಗೆ
ಮತ್ತೆ ಸತ್ಯ ಸದಾಚಾರ ಭಕ್ತಿ ಉಂಟೆ?
ಇಂತಿವರನು ನಾ ಕಂಡು ಗುರುವೆಂದು ವಂದಿಸಿದಡೆ,
ಲಿಂಗವೆಂದು ಪೂಜಿಸಿದಡೆ, ಜಂಗಮವೆಂದು ಶರಣೆಂದಡೆ,
ಎನಗದೆ ಭಂಗ, ಏಲೇಶ್ವರಲಿಂಗ ತಪ್ಪಿದಡೂ ಹೊರಗೆಂಬೆನು. ॥೩೨॥

೧೬೮೪

ತಾ ನೇಮವ ಮಾಡಿಕೊಂಡು
ಕೃಷಿ ಬೇಸಾಯವಿಲ್ಲದೆ ಒಡೆಯರ ಕಟ್ಟಳೆ ಇಷ್ಟು ಅವಧಿಗೊಡಲೆಂದು,
ಹೀಗಲ್ಲದೆ ಎನ್ನ ಒಡಲ ಹೊರೆಯೆನೆಂದು,

ಹೋದ ಹೋದ ಠಾವಿನಲ್ಲಿ ಓಗರವನಿಕ್ಕಿಸುವ
ಲಾಗಿನ ಶೀಲವಂತರ ಮನದಭೇದವ ನೀವೇ ಬಲ್ಲಿರಿ ಏಲೇಶ್ವರಲಿಂಗವೆ. ॥೩೩॥

೧೬೮೫

ತಾವರೆಯ ಎಲೆಯ ಮೇಲಣ ನೀರಿನಂತೆ
ಎನ್ನ ಮನ ಆವ ವ್ರತವನೂ ನೆಮ್ಮದಿದೆ ನೋಡಾ.
ಎನ್ನ ಸಂದೇಹದಿಂದ ಮಹಾವ್ರತಿಗಳ ಸಂಗ ಸುಸಂಗವಾಗದಿದೆ ನೋಡಾ.
ಕ್ರೀಯನರಿಯದು, ಅರಿವ ನೆನೆಯದು,
ಬರುದೊರೆಯೋಹ ಮನಕ್ಕೆ
ಒಂದು ಕುರುಹ ತೋರಾ, ಏಲೇಶ್ವರಲಿಂಗಾ. ॥೩೪॥

೧೬೮೬

ತಾ ಹಿಡಿದ ವ್ರತಕ್ಕೆ ನಿಶ್ಚಯವ ಕಂಡು ನಡೆವಲ್ಲಿ
ಸೋಂಕು ಬಹುದಕ್ಕೆ ಮುನ್ನವೆ ಸುಳುಹನರಿದು,
ತಟ್ಟುಮುಟ್ಟು ಬಹುದಕ್ಕೆ ಮುನ್ನವೆ ಕಟ್ಟಣೆಯ ಮಾಡಿ,
ಮೀರಿ ದೃಷ್ಟದಿಂದ ಶಿವಾಧಿಕ್ಯ ತಪ್ಪಿ ಬಂದಲ್ಲಿ
ತನ್ನ ಕಟ್ಟಳೆಯ ವ್ರತಸ್ಥಭಕ್ತರು ಗಣಂಗಳು ಗುರುಲಿಂಗಜಂಗಮ ಮುಂತಾಗಿ
ಎನ್ನ ವ್ರತದ ದೃಷ್ಟದ ಕಟ್ಟಳೆ ತಪ್ಪಿತ್ತೆಂದು ಮಹಾಪ್ರಮಥರಲ್ಲಿ ತಪ್ಪನೊಪ್ಪಿಸಿ,
ಇನ್ನು ಘಟವಿಪ್ಪುದಿಲ್ಲಾಯೆಂದು ಬೀಳ್ಕೊಂಡು
ಸತ್ಯಕ್ಕೊಪ್ಪಿದಂತೆ ತನ್ನ ಚಿತ್ತವಿದ್ದು
ಪರಿಹರಿಸಿಕೊಂಬುದು ಮರ್ತ್ಯದ ಅನುಸರಣೆ.
ತಪ್ಪಿದಲ್ಲಿಯೆ ಆತ್ಮವಸ್ತುವಿನಲ್ಲಿ ಕೂಡುವುದು ಕಟ್ಟಾಚಾರಿಯ ನೇಮ.
ಇಂತೀ ಉಭಯವ ವಿಚಾರಿಸಿ ನಿಂದ ವ್ರತಕ್ಕೆ ನಿಮ್ಮ ಮನವೆ ಸಾಕ್ಷಿ.
ಆಜ್ಞೆಯ ಮೀರಲಿಲ್ಲ, ಬಂಧನದಲ್ಲಿ ಅಳಿಯಲಿಲ್ಲ.
ನೀವು ನೀವು ಬಂದ ಬಟ್ಟೆಯ ನೀವೆ ನೋಡಿಕೊಳ್ಳಿ.
ಎನ್ನ ಬಟ್ಟೆ, ಏಲೇಶ್ವರಲಿಂಗದ ಗೊತ್ತು,
ಕೆಟ್ಟಿಹಿತೆಂದು ಸೂಚನೆದೋರಿತ್ತು. ॥೩೫॥

೧೬೮೭

ದಾಯಗಾರನ ಶೀಲ, ತ್ರಿವಿಧ ಥಾಳಕನ ಭಕ್ತಿ,
ಶಬರನ ದಯೆ, ಚೋರನ ಲಲ್ಲೆ, ಕಳ್ಳೆಯ ಬಲ್ಲತನ,
ಇವೆಲ್ಲವು ಕಲ್ಲಿಯ ಮಣಿಯಂತೆ ಅಲ್ಲಿಗಲ್ಲಿಗೆ ದಾಯ.
ಇಂತೀ ಕಳ್ಳರ ವ್ರತ ನೇಮ
ಸುಳಿದಲ್ಲಿಯೆ ಕಾಣಬಂದಿತ್ತು ಏಲೇಶ್ವರಲಿಂಗಕ್ಕೆ. ॥೩೬॥

೧೬೭೭

ದೃಷ್ಟಿ ನಟ್ಟು ಚಿತ್ತವೊಪ್ಪಿದಲ್ಲಿ ಬೇರುಂಟೆ ಹಾದರವೆಂಬುದು?
ಆ ಗುಣವ ಕಂಡು ಮನಶಂಕೆದೋರಿದಲ್ಲಿ ನಿಂದೆಗೆ ಬೇರೊಂದೊಡಲುಂಟೆ?
ಇಂತೀ ಉಭಯಭಾವ ತಲೆದೋರಿದಲ್ಲಿ
ಅಂಗಕ್ಕೆ ಆಚಾರವಿಲ್ಲ, ಆತ್ಮಂಗೆ ವ್ರತವಿಲ್ಲ.
ಇಂತೀ ಸಂದೇಹದಲ್ಲಿ ಸಾವವ ಇಹಪರ ಉಭಯಕ್ಕೆ ಹೊರಗು.
ಏಲೇಶ್ವರಲಿಂಗ ಅವರಿಗೆ ಮುನ್ನವೆ ಒಳಗಲ್ಲ. ॥೩೭॥

೧೬೭೮

ಧೂಳು ಪಾವಡ, ಕಂಠ ಪಾವಡ, ಸರ್ವಾಂಗ ಪಾವಡದೊಳಗಾದ,
ಲವಣ ಸಪ್ಪೆವೊಳಗಾದ ನಾನಾ ಶೀಲಸಂಪನ್ನರಿಗೆಲ್ಲಕ್ಕೂ
ಭಾವದ ವ್ರತ ಬೇರುಂಟು, ಸದ್ಭಾವದ ವ್ರತ ಬೇರುಂಟು.
ಪೃಥ್ವಿ ಅಪ್ಪು ತೇಜ ವಾಯು ಆಕಾಶದೊಳಗಾದ ಪಂಚಭೂತಿಕ ತನು
ವ್ರತವ ಅಂಗೀಕರಿಸುವಲ್ಲಿ ತ್ರಿಜಾತಿಭೇದಂಗಳುಂಟು.
ಪೃಥ್ವಿ ಸೋಂಕ ವಿಚಾರಿಸಿ, ಅಪ್ಪು ಸೋಂಕ ವಿಚಾರಿಸಿ,
ತೇಜ ಸೋಂಕ ವಿಚಾರಿಸಿ,
ವಾಯು ಸೋಂಕ ವಿಚಾರಿಸಿ, ಆಕಾಶ ಸೋಂಕ ವಿಚಾರಿಸಿ
–ಇಂತೀ ಪಂಚದೋಷಂಗಳ ಸಂಕಲ್ಪವಿಲ್ಲದಂತೆ
ಲಯ ನಿರ್ಲಯವ ಕಂಡು, ಅಳಿವುಳಿವನರಿದು,
ಅಂಗ ಮನ ಭಾವ ಕರಣಂಗಳನೊಂದುಮಾಡಿ,
ಅರ್ಪಿತವಾದುದ ಕಂಡು, ಅನರ್ಪಿತವಾದುದನರಿತು,
ಚಿತ್ತ ಮುಟ್ಟುವುದಕ್ಕೆ ಮುನ್ನವೆ ಮತ್ತವು ಬಹ ಠಾವ ಕಂಡಲ್ಲಿ,
ಅರ್ಪಿತವನವಗವಿಸಿ ಅನರ್ಪಿತವ ಹೊರತಟ್ಟಿ
ನಿಜನಿಶ್ಚಯವಾದ ಶೀಲ ಅಱುವತ್ತನಾಲ್ಕನೆಯ ವ್ರತ.
ಇವರೊಳಗಾದ ಕ್ರೀಯೆಲ್ಲವು ಸಂಕಲ್ಪದ ಸಂದೇಹ.
ನಿಮ್ಮ ನೀವು ತಿಳಿದುಕೊಳ್ಳಿ.
ಮುಂದಕ್ಕೆ ಏಲೇಶ್ವರದಲ್ಲಿ ರಾಮೇಶ್ವರಲಿಂಗಕ್ಕೆ
ಜಗದ ಲೀಲೆ ಸಂದೇಹವಾಗಿದ್ದಿತ್ತು. ॥೩೮॥

೧೬೮೦

ನಾನಾ ಭಾವದ ವ್ರತಂಗಳನರಿವಲ್ಲಿ ಎಚ್ಚರಿಕೆ ವ್ಯವಧಾನ ಮುಂತಾಗಿ
ತಟ್ಟು–ಮುಟ್ಟು ತಾಗು–ಸೋಂಕುಗಳಲ್ಲಿ ಎಚ್ಚರಿಕೆ ಗುಂದದೆ,
ನಡೆವಲ್ಲಿ, ಒಂದ ಕುರಿತು ನುಡಿವಲ್ಲಿ, ಲಕ್ಷಿಸಿ ಅರಿವಲ್ಲಿ
ಧರೆ ಜಲ ಅನಲ ಅನಿಲಂಗಳಲ್ಲಿ ದೃಕ್ಕು ದೃಶ್ಯ

ಏಕವಾಗಿ ವರ್ತಿಸಿ ನಡೆವುದು ಖಂಡಿತನ ವ್ರತ.
ಆತ ಸಂದೇಹವಿಲ್ಲದ ನಿರಂಗ ಏಲೇಶ್ವರಲಿಂಗವು ತಾನೆ. ॥೩೯॥

೧೬೯೧
ನಾನಾ ಭೇದದ ವ್ರತವ ಸಾಧಿಸಿ ಭೇದಿಸಿ ವೇಧಿಸುವಲ್ಲಿ,
ಬಾಹ್ಯ ಅಂತರಂಗದಲ್ಲಿ ಉಭಯ ಏಕವಾಗಿ,
ಜಾಗ್ರ ಸ್ವಪ್ನ ಸುಷುಪ್ತಿಗಳಲ್ಲಿ ಕೊಂಡ ವ್ರತಕ್ಕೆ ಭಿನ್ನಭಾವವಿಲ್ಲವೆ,
ಎಲ್ಲಾ ಎಚ್ಚರಿಕೆಯಲ್ಲಿ ಬಲ್ಲವನಾಗಿ,
ಅರಿದುದ ಬಿಟ್ಟು ಮರದೆನೆಂದು ಮತ್ತೆ ಅರಿದು ನಡೆದೆಹೆನೆಂಬುದು
ಆ ವ್ರತಕ್ಕೆ ಅದೆ ಮರವೆಯಲ್ಲವೆ?
ಜೇಡನ ಮುಂದಣ ನೇಯಿಗೆಯ ನೂಲೆ? ಸಂಪುಟದ ಲೇಖನವೆ?
ಲೋಹದ ಭಾವವೆ?
ಅದು ಕುಂಭದ ಭಿನ್ನದಂತೆ, ಮೌಕ್ತಿಕದ ಸಂದಿನಂತೆ.
ವ್ರತ ತಪ್ಪಿದಲ್ಲಿಯೆ ತಪ್ಪನೊಪ್ಪಲಿಲ್ಲ,
ಏಲೇಶ್ವರಲಿಂಗವಾದಡೂ ಧಿಕ್ಕರಿಸಿ ಬಿಡುವೆನು. ॥೪೦॥

೧೬೯೨
ನಾನು ಜಂಗಮ ನನಗೆ ಆಚಾರವೇಕೆಂದು
ಮನ ಬಂದಂತೆ ನಡೆವ ಅಜ್ಞಾನಿ ಭಂಡರಿಗೆ
ನಾನು ವಂದಿಸಿದೆನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ.
ಹೊನ್ನು ಹೆಣ್ಣು ಮಣ್ಣು ಬಿಟ್ಟು ನಿರಾಭಾರಿಗಳಾಗಿ,
ಶಿಖೆ ಜಡೆ ಬೋಳು ಮುಂತಾದ ರೂಪ ತಾಳಿ
ಮರಳಿ ಹೊನ್ನಿಂಗೆರಗಿದಡೆ ಜಂಗಮದ್ರೋಹಿ,
ಹೆಣ್ಣಿಂಗೆರಗಿದರೆ ಲಿಂಗದ್ರೋಹಿ, ಮಣ್ಣಿಂಗೆರಗಿದರೆ ಗುರುದ್ರೋಹಿ.
ಇಂತೀ ತ್ರಿವಿಧ ದ್ರೋಹಿಗಳ ಕಂಡು ವಂದಿಸಿದೆನಾದಡೆನಗದೆ ಭಂಗ.
ಅದೆಂತೆಂದೊಡೆ:
“ಮುಂಡೇವ ಶಿವಚಿಹ್ನಾನಿ। ಮುದ್ರಾಪಂಚಕ ಯಥಾ ನ ಚ
ಪ್ರಯತ್ನೇ ತ್ರಿಮಲಂ ಕೃತ್ವಾ ಶಿವದ್ರೋಹಿ ನ ಸಂಶಯಃ’
ಇಂತಪ್ಪ ಭ್ರಷ್ಟರ ಏಲೇಶ್ವರಲಿಂಗವು ಬಲ್ಲನಾಗಿ ಒಲ್ಲನು. ॥೪೧॥

೧೬೯೩
ನೇಮಕ್ಕೆ ತಪ್ಪದ ಗುರು ಎನ್ನವ, ಶೀಲಕ್ಕೆ ತಪ್ಪದ ಲಿಂಗ ಎನ್ನದು,
ವ್ರತಾಚಾರಕ್ಕೆ ತಪ್ಪದ ಜಂಗಮ ಎನ್ನ ಮನೋಮೂರ್ತಿ.

ಹೀಗಲ್ಲದೆ, ಕ್ರೀಗೆ ನಿಲ್ಲದ ಗುರು ಆತ ಭವಭಾರಿ,
ಆಚಾರಕ್ಕೆ ಸಲ್ಲದ ಲಿಂಗ ಅದು ಪಾಷಾಣ.
ಆ ವ್ರತದ ಆಚಾರದ ದೆಸೆಯ ದೂಷಣೆ ಜಂಗಮವೇಷದ ಘಾತಕ.
ಇಂತೀ ಎನ್ನ ವ್ರತಕ್ಕೆ, ಎನ್ನ ಆಚಾರಕ್ಕೆ, ಎನ್ನ ಭಾವಕ್ಕೆ,
ಎನ್ನ ಸಮಕ್ರೀವಂತನಾಗಿ, ಸಮಶೀಲವಂತನಾಗಿ,
ಸಮಭಾವವಂತನಾಗಿ, ಸಮಪಥ ಸತ್ಪಥನಾಗಿ, ಇಪ್ಪಾತನೆ
ಎನ್ನ ತ್ರಿವಿಧಕ್ಕೆ ಒಡೆಯ, ಇತ್ತಳವ.
ಈ ಗುಣಕ್ಕೆ ಒಪ್ಪದೆ ತ್ರಿವಿಧದ ಕಚ್ಚಾಟಕ್ಕೆ ಮಚ್ಚಿಹೋರುವವ, ತ್ರಿವಿಧದತ್ತಳವ.
ಇದಕ್ಕೆ ಎನಗೆ ನಿಶ್ಚಯ. ಎನ್ನ ವ್ರತಾಚಾರಕ್ಕೆ
ಅನುಕೂಲವಾಗದ ಏಲೇಶ್ವರಲಿಂಗವಾಯಿತ್ತಾದಡೂ
ಇಹಪರಕ್ಕೆ ಹೊರಗೆಂದು ಡಂಗುರವಿಕ್ಕಿದೆ. ॥೪೨॥

೧೬೪

ಪರಪಾಕದ್ರವ್ಯವ ಬಿಟ್ಟಲ್ಲಿ ಬಹುಜಲ, ಹರಿವ ಜಲ
ಮುಂತಾದ ಬಹು ನಿರೀಕ್ಷಣೆಯಾದ ಜಲಂಗಳ ಮುಟ್ಟಲಿಲ್ಲ.
ಇಂತೀ ಪಾಕ ತಮ್ಮಾಯತ[ವೆ], ಉದಕ ಅನ್ಯರಾಯತವೆ?
ಮೊಲೆಯ ಮುಚ್ಚಿ ಸೀರೆಯ ತೆರೆದಲ್ಲಿ ಅಪಮಾನವೆಲ್ಲಿ ಅಡಗಿತ್ತು?
ಇಂತೀ ವ್ರತದಂಗವ ನೀವೆ ಬಲ್ಲಿರಿ.
ಇದು ಏಲೇಶ್ವರಲಿಂಗಕ್ಕೆ ಒಪ್ಪದ ಕ್ರೀ. ॥೪೩॥

೧೬೫

ಬಸವೇಶ್ವರಂಗೆ ಸರ್ವಗುಣಶೀಲ, ಚೆನ್ನಬಸವಣ್ಣಂಗೆ ದಿವ್ಯಜ್ಞಾನಗುಣಶೀಲ,
ಪ್ರಭುದೇವರಿಗೆ ಬಸವಣ್ಣ ಚೆನ್ನಬಸವಣ್ಣನ ಉಭಯಗುಣ ಶೀಲ,
ಮಡಿವಾಳಯ್ಯಂಗೆ ವೀರಗುಣ ಶೀಲ, ಅಜಗಣ್ಣಂಗೆ ಐಕ್ಯಗುಣ ಶೀಲ,
ಸಿದ್ಧರಾಮಯ್ಯಂಗೆ ಯೋಗಗುಣ ಶೀಲ, ನಿಜಗುಣಂಗೆ ಆತ್ಮಗುಣ ಶೀಲ,
ಚಂದಯ್ಯಂಗೆ ವೈರಾಗ್ಯಗುಣ ಶೀಲ, ಘಟ್ಟಿವಾಳಂಗೆ ತ್ರಿವಿಧಗುಣ ಶೀಲ,
ಮೋಳಿಗಯ್ಯಂಗೆ ಭೇದಗುಣ ಶೀಲ, ಅಕ್ಕಗಳಿಗೆ ನಿರ್ವಾಣಗುಣ ಶೀಲ,
ಮಿಕ್ಕಾದ ಪ್ರಮಥರಿಗೆಲ್ಲಕ್ಕೂ ಸ್ವತಂತ್ರಗುಣ ಶೀಲ.
ಎನಗೆ ಏಲೇಶ್ವರಲಿಂಗವು ಕೊಟ್ಟುದೊಂದೆ ವಿಶ್ವಾಸಗುಣ ಶೀಲ. ॥೪೪॥

೧೬೬

ಬಾವಿ ಭಾಜನ ಚಿಲುಮೆ ಪರ್ಣ ಫಲ ಸರ್ವಸಯದಾನ ಸಂಗ್ರಹಗಳಲ್ಲಿ
ಲಿಂಗಮುಖವಾಗಿ ತಂದ ಮತ್ತೆ,

ಮನೆಯಲ್ಲಿ ಲಿಂಗಬಾಹ್ಯ ಕಂಡರೆಂದು ಅವರಿಗೆ ಲಿಂಗವ ಕಟ್ಟಬಹುದೆ?
ಆ ಲಿಂಗದ್ರವ್ಯವ ಸೂಸಬಹುದೆ?
ಲಿಂಗಾಂಗಿಗಳು ನೀವೆ ಉಭಯದ ಸಂದ ತಿಳಿದುಕೊಳ್ಳಿ.
ಕಟ್ಟಿದ ಘಟ ತಪ್ಪದಂತೆ, ಲಿಂಗದ್ರವ್ಯ ಸೂಸದಂತೆ,
ಸಂದೇಹದ ಸಂಬಂಧದಲ್ಲಿ ಸಾಯದಂತೆ, ಸುಸಂಗವ ತಿಳಿದುಕೊಳ್ಳಿ
ಏಲೇಶ್ವರಲಿಂಗದಲ್ಲಿ ವ್ರತವನಂಗೀಕರಿಸಬಲ್ಲಡೆ. ॥೪೫॥

೧೬೯೭
ಬೇಡಿ ಮಾಡುವ ಭಕ್ತನ ಇರವೆಂತೆಂದಡೆ:
ಆ ಗಳಿಗೆಯಲ್ಲಿ ಆ ದ್ರವ್ಯ ಸಂದು ಈಗ-ಆಗವೆಂಬ ಬೈಕೆಯ ಮರೆದು,
ಸತಿಸುತರಿಗೆಂದೆನ್ನದೆ,
ಇಂತೀ ಭಕ್ತಿಯೆ ಗತಿಯಾಗಿ, ಸತ್ಯವೆ ಒಡಲಾಗಿ,
ಇಂತೀ ಗುಣದಲ್ಲಿ ನಿತ್ಯ-ಅನಿತ್ಯವ ಅಳಿದು ಮಾಡುವ ಸದ್ಭಕ್ತ
ಬೇಡಿ[ದ]ನೆಂಬ ಭಾವವಿಲ್ಲ.
ಆ ದ್ರವ್ಯ ಏಲೇಶ್ವರಲಿಂಗದ ಬೈಚಿಟ್ಟ ಬಯ್ಕೆ. ॥೪೬॥

೧೬೯೮
ಭಕ್ತಂಗೆ ಗುರುಪ್ರಸಾದ, ಮಾಹೇಶ್ವರಂಗೆ ಲಿಂಗಪ್ರಸಾದ,
ಪ್ರಸಾದಿಗೆ ಜಂಗಮಪ್ರಸಾದ, ಪ್ರಾಣಲಿಂಗಿಗೆ ಜ್ಞಾನಪ್ರಸಾದ,
ಶರಣಂಗೆ ಪ್ರಸನ್ನ ಪ್ರಸಾದ, ಐಕ್ಯಂಗೆ ನಿಜಪ್ರಸಾದ.
ಹೀಂಗಲ್ಲದೆ ರಣದ ವೀರರಂತೆ ಸೂರೆಗೂಳಿನಲ್ಲಿ ಅದಾರ ಪ್ರಸಾದ ಹೇಳಾ?
ತ್ರಿವಿಧಶೇಷಪ್ರಸಾದವ ಕೊಂಬಲ್ಲಿ
ಸಮಯಭೇದವನರಿತು, ಪ್ರಸಾದದ ಕ್ರಮಭೇದವ ಕಂಡು,
ಆಯತ ಸ್ವಾಯತ ಸನ್ನಿಹಿತವೆಂಬ ತ್ರಿವಿಧ ಕ್ರೀಯ
ವಿಚಾರಿಸಿ ನಡೆವುದು ಷಟ್ಸ್ಥಲದ ಕ್ರೀ,
ಆಚಾರಕ್ಕೆ ಇಕ್ಕಿದ ಗೊತ್ತು, ಏಲೇಶ್ವರಲಿಂಗವು ವ್ರತಸ್ಥನಾದಯುಕ್ತಿ. ॥೪೭॥

೧೬೯೯
ಭಕ್ತರಾಶ್ರಯಕ್ಕೆ ಭಕ್ತರು ಹೋಹಲ್ಲಿ ಅವರ ನಿತ್ಯಕೃತ್ಯವ ವಿಚಾರಿಸಿ,
ತಮ್ಮ ನೇಮಕ್ಕೆ ಅವರ ಭಾವವೊಂದಾದಲ್ಲಿ
ತಮ್ಮ ಕೃತ್ಯದ ಒಡೆಯರು ಮುಂತಾಗಿ ಹೋಗಬೇಕಲ್ಲದೆ,
ಆ ಭಕ್ತರ ಆಶ್ರಯಕ್ಕೆ ಒಡೆಯರ ಕಟ್ಟಳೆ ಉಂಟೆಂದು,
ತಮ್ಮ ಒಡೆಯರ ಬಿಟ್ಟು ತುಡುಗುಣಿತನದಲ್ಲಿ ಉಂಬವಂಗೆ
ಇಂತೀ ಬಿಡುಮುಡಿಯ [ಭ]ಂಡರನೊಪ್ಪ ಏಲೇಶ್ವರಲಿಂಗವು. ॥೪೮॥

೧೭೦೦
ಭಕ್ತಿಯಿಂದ ನಡೆದೆಹೆನೆಂಬಲ್ಲಿ ವ್ರತಲಕ್ಷ್ಯವುಂಟು, ಅಲಕ್ಷ್ಯವುಂಟು.
ಮಿಕ್ಕಾದ ಸರ್ವಗುಣಂಗಳಲ್ಲಿ ಹೊತ್ತು ಹೋರಿಹೆನೆಂದಡೆ ಭಕ್ತಿ ಲಕ್ಷಣ.
ವಿಶ್ವಮಯಸತ್ವಕ್ಕೆ ತಕ್ಕ ಸಾಮರ್ಥ್ಯದಲ್ಲಿ
ಚಿತ್ತವೊಪ್ಪಿ ನಡೆವ ಕೃತ್ಯವ ಹೊತ್ತು,
ಆ ಕೃತ್ಯ ತಪ್ಪದೆ ನಿಶ್ಚಯವಾಗಿರಬೇಕು.
ಇದು ಏಲೇಶ್ವರಲಿಂಗಕ್ಕೆ ವ್ರತದ ಗುತ್ತಗೆಯ ನೇಮ. ॥೪೯॥

೧೭೦೧
ಭಾಂಡ ಭಾಜನ ಉಪಕರಣ ವಸ್ತ್ರ ಮುಂತಾದ ಸಕಲದ್ರವ್ಯಂಗಳ
ಮನದ ಕಟ್ಟಿಂಗೆ ತಟ್ಟು-ಮುಟ್ಟನರಿತು
ಅಹುದಾದುದನೊಪ್ಪಿ, ಅಲ್ಲದುದ ಬಿಟ್ಟು,
ಇದಿರು ಮೆಚ್ಚುವಂತೆ ಕಪಟ ಅನುಕರಣೆಗೆ ಒಳಗಾಗದೆ,
ಲಿಂಗ ಮೆಚ್ಚುವಂತೆ, ಶರಣರು ಒಪ್ಪುವಂತೆ
ನಿಂದ ಸದ್ಭಕ್ತನಂಗವೆ ಏಲೇಶ್ವರಲಿಂಗವು. ॥೫೦॥

೧೭೦೨
ಮನಕ್ಕೆ ಬಂದಂತೆ ನೇಮವ ಮಾಡಲಿಲ್ಲ,
ಆರಾರ ಅನುವ ಕಂಡು ಆ ನೇಮವನನುಕರಿಸಲಿಲ್ಲ.
ತಾನಾಚರಿಸುವ ಸತ್ವ, ತಾ ಹಿಡಿದ ವ್ರತನೇಮದ ನಿಶ್ಚಯ.
ಇಷ್ಟನರಿಯದೆ ದೃಷ್ಟವ ಕಂಡು ಗಟ್ಟಿಯತನದಲ್ಲಿ ಹೋರುವ
ಮಿಟ್ಟೆಯ ಭಂಡರನೊಪ್ಪ ಏಲೇಶ್ವರಲಿಂಗವು. ॥೫೧॥

೧೭೦೩
ಮನಕ್ಕೆ ವ್ರತವ ಮಾಡಿ, ತನುವಿಗೆ ಕ್ರೀಯ ಮಾಡಬೇಕು.
ಇಂದ್ರಿಯಂಗಳಿಗೆ ಕಟ್ಟನಿಕ್ಕಿ,
ಆತ್ಮನ ಸಂದೇಹವ ಬಿಡಿಸಿ ಕ್ರೀಯ ಮಾಡಬೇಕು.
ಹೀಂಗಲ್ಲದೆ ವ್ರತಾಚಾರಿಯಲ್ಲ.
ಮನಕ್ಕೆ ಬಂದಂತೆ ಹರಿದು, ಬಾಯಿಗೆ ಬಂದಂತೆ ನುಡಿದು,
ಇಂತೀ ನಾ ವ್ರತಿಯೆಂದರೆ ಮೂಗನರಿಯದೆ ಮಾಣ ಏಲೇಶ್ವರಲಿಂಗನು. ॥೫೨॥

೧೭೦೪
ಮಲವ ಕಳೆವಲ್ಲಿ, ಜಲವ ಬಿಡುವಲ್ಲಿ, ರುಜೆರೋಗಂಗಳು ಬಿಡುವಲ್ಲಿ,
ಸಕಲಸುಖಭೋಗಂಗಳ ಹಿಡಿವಲ್ಲಿ,

ಅಧಮ ವಿಶೇಷವೆಂಬ ಭಾವಂಗಳು ಅಂಗವ ಮುಟ್ಟುವಲ್ಲಿ,
ಅಂಗಕ್ಕೆ ಕಟ್ಟು, ಆತ್ಮಂಗೆ ವ್ರತ,
ಏಲೇಶ್ವರಲಿಂಗದ ಕೂಟ ತಪ್ಪದಿರಬೇಕು ॥೫೩॥

೧೭೦೫
ಮಾಡುವ ಧರ್ಮಕ್ಕೆ ಅಸುರದ ಕರ್ಮವೇತಕ್ಕೆ?
ಭಕ್ತಿಯ ಮಾಡಿ ಸತ್ಯವನಾಚರಿಸಿಹೆನೆಂಬಲ್ಲಿ
ತಾ ಮಾಡುವ ದ್ರವ್ಯಕ್ಕೆ ಆದರಣೆಯಿಂದ ಆದರಿಸಬೇಕು,
ಏಲೇಶ್ವರಲಿಂಗವನರಿವುದಕ್ಕೆ. ॥೫೪॥

೧೭೦೬
ಮೃತ್ತಿಕೆಯ ಲವಣ ಸ್ವಯಂಪಾಕ, ಮಿಕ್ಕಾದ ಲವಣ ಅಪ್ಪುಭೇದ.
ಸಪ್ಪೆಯ ವ್ರತ ನಿಶ್ಚಿಂತ, ಅದು ದೋಷನಾಶನ,
ಇಂತೀ ಉಭಯ ವ್ರತವೆ ಕಟ್ಟು.
ಮಿಕ್ಕಾದ ಅರುವತ್ತೆರಡು ಶೀಲ ಸ್ವತಂತ್ರಸಂಬಂಧ,
ಅವು ಎಂಭತ್ತನಾಲ್ಕು ಲಕ್ಷ ಜೀವ ವ್ರತದ ಸಂಬಂಧ.
ವ್ರತವ ಹಿಡಿದಲ್ಲಿ, ಆ ವ್ರತಕ್ಕೆ ಅನುಸರಣೆ ಬಂದಲ್ಲಿ,
ಬಂದಿತು ಬಾರದೆಂಬ ಸಂದೇಹಕ್ಕೆ ಮುನ್ನವೆ
ಆತ್ಮ ನಿರಂಗವಾಗಬಲ್ಲುದೊಂದೆ ವ್ರತ.
ಮತ್ತೆ ಮಿಕ್ಕಾದವೆಲ್ಲವೂ ಸಂದಣಿಯ ತಗಹು,
ಪರಿಸ್ಪಂದದ ಕೊಳಕು, ಲಂದಣಿಗರ ಬಂಧದ ಮಾತಿನ ಮಾಲೆ.
ಇಂತೀ ಸಂಗ ದುಸ್ಸಂಗವನರಿತು ಹಿಂಗುವದ ಹಿಂಗಿ,
ತನ್ನ ಸಂಗಸುಖಕ್ಕೆ ಬಂದುದ ಕೂಡಿಕೊಂಡು,
ವ್ರತಭಂಗಿತನಲ್ಲದೆ ನಿರುತ ಸ್ವಸಂಗಿಯಾದ ಸರ್ವಾಂಗಸಂಬಂಧ ಶೀಲವಂತಂಗೆ,
ಬೇರೊಂದಿಲ್ಲ, ಏಲೇಶ್ವರಲಿಂಗವು ತಾನೆ. ॥೫೫॥

೧೭೦೭
ಲಿಂಗಭಕ್ತ ಗುರುಪ್ರಸಾದವ ಕೊಳಲಿಲ್ಲ,
ಜಂಗಮಭಕ್ತ ಲಿಂಗಪ್ರಸಾದವ ಕೊಳಲಿಲ್ಲ,
ಮಹಾಭಕ್ತ ಜಂಗಮಪ್ರಸಾದವ ಕೊಳಲಿಲ್ಲ,
ನೇಮದ ಕೃತ್ಯದ ಮಹಾವ್ರತಿ ಗಣಪ್ರಸಾದವ ಕೊಳಲಿಲ್ಲ.
ಅದೆಂತೆಂದಡೆ:
ಗುರುಭಕ್ತಂಗೆ ಗುರುವಿನಲ್ಲಿಯೆ ಮುಕ್ತಿ,

ಲಿಂಗಭಕ್ತಂಗೆ ಲಿಂಗದಲ್ಲಿಯೆ ಮುಕ್ತಿ,
ಜಂಗಮಭಕ್ತಂಗೆ ಜಂಗಮದಲ್ಲಿಯೆ ಮುಕ್ತಿ.
ಮಹಾಮಭಕ್ತಂಗೆ ಶರಣರಲ್ಲಿಯೆ ಮುಕ್ತಿ ಸಂಬಂಧ.
ಇಂತೀ ಸಮಯ [ಗ]ಣಸಮೂಹ ಕೂಡಿದಲ್ಲಿ ಪ್ರಸನ್ನಪ್ರಸಾದವಾಯಿತ್ತು.
ಆ ಮುಕ್ತಿಯೆ ಅವಿಮುಕ್ತಿಕ್ಷೇತ್ರಗಳಾದಲ್ಲಿ ಪ್ರಸನ್ನಪ್ರಸಾದವಾಯಿತ್ತು.
ಆ ಲಿಂಗವ್ರತದಂಗವ ತಾಳಲಾಗಿ
ಏಲೇಶ್ವರಲಿಂಗವು ಸರ್ವಶೀಲವಂತನಾದ. ॥೫೬॥

೧೭೦೮
ವ್ರತವನಂಗೀಕರಿಸಿದ ಮಹಾಭಕ್ತಂಗೆ
ಆತ್ಮತೇಜ ಅಹಂಮಮತೆ ರಾಗದ್ವೇಷಂಗಳುಂಟೆ?
ಗುರುಲಿಂಗಜಂಗಮ ಮಹಾಭಕ್ತರಲ್ಲಿ ಭೃತ್ಯಂಗೆ ಭೃತ್ಯನಾಗಿ,
ವ್ರತಸ್ಥರಲ್ಲಿ, ಮಿಕ್ಕಾದ ಸದ್ಗತಿವಂತರಲ್ಲಿ ಅತಿಶಯವಾಗಿರಬೇಕು,
ಏಲೇಶ್ವರಲಿಂಗವನರಿಯಬಲ್ಲಡೆ. ॥೫೭॥

೧೭೦೯
ವ್ರತಶುದ್ಧವಾಗಿ ನಡೆವಾತನೆ ಎನಗೆ ಅಧೀನದರಸು,
ಪಂಚಾಚಾರ ಶುದ್ಧವಾಗಿ ನಡೆವಾತನೆ ಎನಗೆ ಸದ್ಗುರುಮೂರ್ತಿ,
ಆವಾವ ನೇಮಕ್ಕೂ ಭಾವಶುದ್ಧವಾಗಿ ಇಪ್ಪ ಮಹಾಭಕ್ತನೆ
ಏಲೇಶ್ವರಲಿಂಗವು ತಾನೆ. ॥೫೮॥

೧೭೧೦
ವ್ರತಸಂಬಂಧಭಾವಿ ಒಡೆಯರು ಭಕ್ತರ ಮನೆಗೆ ಒಡಗೂಡಿಹೋಗಿ
ಅವರ ಮಡದಿಯರ ಕಂಡು ಮನವ ಬಿಡೆಯವ ಮಾಡಿದಡೆ,
ಅವರೊಡವೆಗೆ ವಂಚಿಸಿದಡೆ, ಸುಡುವನೊಡಲ.
ಅವ ಮೃಡಭಕ್ತನಲ್ಲ, ಇಹ ಪರಕ್ಕೆ ದೂರ,
ಏಲೇಶ್ವರಲಿಂಗಕ್ಕೆ ಮುನ್ನವೆ ದೂರ. ॥೫೯॥

೧೭೧೧
ವ್ರತಸ್ಥನಾಗಿದ್ದಾತ ಸಮೂಹಪ್ರಸಾದವ ಕೊಳಲಾಗದು. ಅದೆಂತೆಂದಡೆ:
ಬಾಲರು ಭ್ರಾಮಕರು ಚೋರರು ಕಟುಕರು
ಪಾರದ್ವಾರಿಗಳು ಜಾರರು ಪಗುಡಿ ಪರಿಹಾಸಕರು–
ಅವರಲ್ಲಿ ಪ್ರಸಾದದ ನಚ್ಚು ಮಚ್ಚುಂಟೆ?

ಪ್ರಸಾದವ ಕೊಂಬಲ್ಲಿ ಸಮಶೀಲಸಂಪನ್ನರು, ಏಕಲಿಂಗನಿಷ್ಠಾವಂತರು.
ಸರ್ವಾಂಗಲಿಂಗಪರಿಪೂರ್ಣರು, ಪರಮನಿರ್ವಾಣಪರಿಪೂರ್ಣರು.
ಇಂತೀ ಇವರೊಳಗಾದ ಸರ್ವಗುಣಸಂಪನ್ನಂಗೆ ಗಣಪ್ರಸಾದವಲ್ಲದೆ
ಕಾಗೆಯಂತೆ ಕರೆದು, ಕೋಳಿಯಂತೆ ಕೂಗಿ, ಡೊಂಬರಂತೆ ಕೂಡಿ ಆಡಿ,
ಭಂಗ ಹಿಂಗದಿದ್ದಡೆ ಕೊಂಡಾಡುವ ಆ ಲಾಗ ನೋಡಿಕೊಳ್ಳಿ.
ನಿಮ್ಮ ಭಾವಕ್ಕೆ ನಿಮ್ಮ ಭಾವವೆ ದೃಷ್ಟಸತ್ಯ, ಮರೆಯಿಲ್ಲ, ಭಕ್ತಿಗೆ ಇದಿರೆಡೆಯಿಲ್ಲ,
ವ್ರತಗೆಟ್ಟವಂಗೆ ಆಚಾರಭ್ರಷ್ಟಂಗೆ ಕಟ್ಟು ಮೆಟ್ಟ ಮಾಡಲಿಲ್ಲ.
ಇದು ಕಟ್ಟಾಚಾರಿಯ ದೃಷ್ಟ,
ಏಲೇಶ್ವರಲಿಂಗವು ಸರ್ವಶೀಲವಂತನಾದ ಸಂಬಂಧಸಂಪದದಂಗ. ॥೬೦॥

೧೬೧೨

ವ್ರತಸ್ಥನಾಗಿ ಭವಿಗಳ ಕೆಳಗೆ ಬೊಕ್ಕಸ ಭಂಡಾರ ಅಸಿ ಕೃಷಿ ವಾಣಿಜ್ಯ
ಮುಂತಾದ ಕಾಯಕವ ಬಿಟ್ಟು,
ತನ್ನ ಸ್ವಕಾಯಕದಿಂದ ಬಂದು ಒದಗಿದ ದ್ರವ್ಯವ ಒಡೆಯನ ಮುಂದಿಟ್ಟು,
ತಾನೊಡಗೂಡಿಕೊಂಡ ಪ್ರಸಾದಿಯ ಪ್ರಸಾದವ ಎನ್ನೊಡೆಯನ ಮುಂದಿಟ್ಟು
ಏಲೇಶ್ವರಲಿಂಗಕ್ಕೆ ಕೊಡುವೆನು. ॥೬೧॥

೧೬೧೩

ಶಸ್ತ್ರ, ಸಮಾಧಿ, ನೀರು, ನೇಣು, ಮಿಕ್ಕಾದ ವಿಷ ಔಷಧಿಗಳಿಂದ,
ವ್ರತ ತಪ್ಪಿತೆಂದು ಆತ್ಮಘಾತಕವ ಮಾಡಬಹುದೆ?
ವ್ರತ ತಪ್ಪಿತ್ತೆಂದು ತಾನಳಿಯಬಹುದೆ?
ಅರಿವು ತೋರಿದಲ್ಲಿಯೆ ಆ ಘಟವ ಮರೆದು ಲಿಂಗವ ಬೆರೆಸಬೇಕಲ್ಲದೆ.
ಹೀಗಲ್ಲದೆ ಊರೆಲ್ಲರ ಕೂಡಿ ಲಾಗಿಗೆ ಸತ್ತೆಹೆನೆಂದು,
ಬೇಡಾ ಎಂದಡೆ ಉಳಿದೆಹೆನೆಂಬ ವಿದಾಂತರ ಲಾಗಲ್ಲ.
ಬಂಧನವಿಲ್ಲದೆ ಲಿಂಗವ ಒಡಗೂಡಬೇಕು
ಏಲೇಶ್ವರಲಿಂಗದಲ್ಲಿಗಾಗಿ. ॥೬೨॥

೧೬೧೪

ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನಮಪ್ಪ ಪ್ರಸಾದಂಗಳನರಿವಲ್ಲಿ,
ಆಯತ ಸ್ವಾಯತ ಸನ್ನಿಹಿತ ಸಮಯೋಚಿತ ಪ್ರಸಾದವ ಕೊಂಬಲ್ಲಿ,
ಗುರುಭಕ್ತನಾದಲ್ಲಿ ಆ ವಿವರವ ತಿಳಿಯಬೇಕು,
ಲಿಂಗಭಕ್ತನಾದಲ್ಲಿ ಆ ಗುಣವನರಿಯಬೇಕು,
ಜಂಗಮಭಕ್ತನಾದಲ್ಲಿ ಆ ಉಭಯವ ವಿವರಿಸಲಿಲ್ಲ.

ಮಹಾಪ್ರಮಥರಲ್ಲಿ ಪ್ರಸನ್ನವಾಗಲಾಗಿ
ಗುರುಲಿಂಗಜಂಗಮ ಮೂರೊಂದಾಯಿತು.
ಆ ತ್ರಿವಿಧಪ್ರಸಾದವನರಿತು ಗಣಪ್ರಸಾದವ ಕೊಂಬುದು,
ಆ ಗಣ ಸ್ವಸ್ಥವಾಗಿ ಮಹಾಪ್ರಸಾದವಾಯಿತ್ತು.
ಆ ಪ್ರಸಾದವ ಕೊಂಡು ಏಲೇಶ್ವರಲಿಂಗವು ಸರ್ವಶೀಲವಂತನಾದ. ॥೬೩॥

೧೭೧೫
ಸಂಚಿತ ತನುವಿನ ಕ್ರೀ, ಪ್ರಾರಬ್ಧ ಆತ್ಮನ ಕ್ರೀ, ಆಗಾಮಿ ಅರಿವಿನ ಕ್ರೀ.
ಇಂತೀ ತ್ರಿವಿಧಕ್ರೀಯ ನೆರೆ ಅರಿದವಂಗೆ
ಹಿಂದಣ ತಾಗು-ಮುಂದಣ ಸೋಂಕು.
ಮತ್ತೆಲ್ಲಾ ಎಡೆಯಲ್ಲಿ ನಿಂದ ವ್ರತದ ಸಂಬಂಧವ ಬಲ್ಲ
ಆ ವ್ರತ ಅರುವತ್ತೈದನೆಯ ಕ್ರೀ.
ಆ ಭಾವ ಆರೋಪವಾದಲ್ಲಿ ಏಲೇಶ್ವರಲಿಂಗನು ವ್ರತಸ್ಥನಾದ. ॥೬೪॥

೧೭೧೬
ಸಂದೇಹವುಂಟಾದಲ್ಲಿ
ಆ ವ್ರತವ ಶ್ರುತದಲ್ಲಿ ಕೇಳಿ, ದೃಷ್ಟದಲ್ಲಿ ಕಾಣಿಸಿಕೊಂಡು
ಅನುಮಾನದಲ್ಲಿ ಅರಿದು ವಿಚಾರಿಸಿ,
ಮರವೆ ಅಹಂಕಾರದಿಂದ ಬಂದ ಉಭಯವ ತಿಳಿದು
ದೋಷವಿಲ್ಲದಂತೆ ಪರಿದೋಷವ ಕಂಡು,
ಶರಣತತಿ ಮುಂತಾಗಿ ಪ್ರಾಯಶ್ಚಿತ್ತವೆಂಬುದು ವರ್ತಕ ವ್ರತ.
ಇಂತಿವನರಿದು ಅಲ್ಲ-ಅಹುದೆನ್ನದೆ, ಎಲ್ಲರ ಮನಕ್ಕೆ ವಿರೋಧವ ತಾರದೆ,
ಅಲ್ಲಿ ಆತ್ಮನ ಬೆರೆಯದೆ, ಕಲ್ಲಿಯ ಮಧ್ಯದಲ್ಲಿ ಜಾರಿದ ಅಪ್ಪುವಿನಂತೆ
ಉಭಯದಲ್ಲಿಗೆ ಕಾಣಿಸಿಕೊಳ್ಳದ ವ್ರತಾಂಗಿ [ಎ]ಲ್ಲಿಯೂ ನಿಸ್ಸೀಮ.
ಅದು ಅರುವತ್ತಮೂರನೆಯ ಶೀಲ,
ಅರಿಬಿರಿದಿನ ಭಾವ ಏಲೇಶ್ವರಲಿಂಗಕ್ಕೆ. ॥೬೫॥

೧೭೧೭
ಸಕಲ ವ್ರತನೇಮಂಗಳು ಸಂಭವಿಸಿದಲ್ಲಿ,
ಅಪ್ಪುಲವಣ ಮೃತ್ತಿಕೆಲವಣ ಸ್ಥಾವರಲವಣ-
ಇಂತೀ ತ್ರಿವಿಧಲವಣಂಗಳಲ್ಲಿ ಅಧಮ ವಿಶೇಷಂಗಳನರಿದು,
ಹಿಡಿವುದ ಹಿಡಿದು ಬಿಡುವುದ ಬಿಟ್ಟು,
ಅಂಗದ ಕ್ರೀ, ಮನ, ಅಂಗೀಕರಿಸುವ, ವರ್ತನ-
ಈ ತ್ರಿವಿಧಕ್ಕೆ ಲಿಂಗ ಸುಯಿದಾನಿಯಾಗಿರಬೇಕು ಏಲೇಶ್ವರಲಿಂಗಕ್ಕೆ. ॥೬೬॥

೧೭೧೮
ಸತಿ ಸುತ ಪುರುಷರಿಗೆಲ್ಲಕ್ಕೂ ಬೇರೊಂದು ಒಡಲುಳ್ಳನ್ನಕ್ಕ,
ವ್ರತ ಕ್ರೀಭಾವ ಬೇರಾದಲ್ಲಿ ಬೇರೆ ಒಬ್ಬ ಒಡೆಯರ ಕಟ್ಟಣೆ ಬೇಕು.
ಇದು ಸತ್ಪಥಕ್ಕೆ ಎಯ್ದುವ ಹಾದಿ, ವ್ರತಸ್ಥಲದ ಭಕ್ತಿಯುಕ್ತಿ,
ಏಲೇಶ್ವರಲಿಂಗವ ಮುಟ್ಟುವ ಗೊತ್ತು. ॥೬೭॥

೧೭೧೯
ಸದ್ಭಾವವ್ರತಿ, ವೀರವ್ರತಿ, ಧೀರವ್ರತಿ, ದೃಷ್ಟವ್ರತಿ,
ನಿಷ್ಠೆಯವ್ರತಿ, ಸರ್ವಜ್ಞಾನವ್ರತಿ, ಸಂತೋಷವ್ರತಿ,
ಸಂಬಂಧವ್ರತಿ, ಸಂಪದವ್ರತಿ, ಸರ್ವಾಂಗವ್ರತಿ,
ಪರಿಪೂರ್ಣವ್ರತಿ, ಸರ್ವಜೀವದಯಾವ್ರತಿ,
ಸಕಲವ್ರತಿ, ನಿಃಕಲವ್ರತಿ, ಪರವ್ರತಿ, ಪರಬ್ರಹ್ಮವ್ರತಿ,
ಪರತತ್ತ್ವವ್ರತಿ, ಪರವಸ್ತುವ್ರತಿ, ಪಿಂಡವ್ರತಿ, ಪಿಂಡಜ್ಞಾನವ್ರತಿ,
ಸ್ಥೂಲವ್ರತಿ, ಸೂಕ್ಷ್ಮವ್ರತಿ, ಕಾರಣವ್ರತಿ,
ಅಂಗವ್ರತಿ, ಲಿಂಗವ್ರತಿ, ಧನವ್ರತಿ, ಧಾನ್ಯವ್ರತಿ,
ದೃಕ್ಕಿಂಗೊಳಗಾದ, ತನ್ನ ಕ್ರೀಗನುಕೂಲವಾದ
ಸಂಬಂಧವ್ರತಂಗಳ ಆರೋಪಿಸಿ ನಿಂದಲ್ಲಿ
ನಾನಾ ಸಮೂಹದ ಸತ್ಕ್ರೀಗಳನರಿತು,
ರೋಚಕ ಅರೋಚಕ ಮಾರ್ಗ ಅಮಾರ್ಗದ ಉಭಯದ ತತ್ತನರಿದು
ಕ್ರೀಯ ಆದಿಯನರಿದು, ನಿಃಕ್ರೀಯ ನಿಜವ ಭೇದಿಸಿ ಕಂಡು
ಸರ್ವದಯಾಸಂಪನ್ನನಾಗಿ ಸರ್ವಾಂಗಲಿಂಗಿಯಾಗಿ
ಸಕಲವ್ರತಮಹಾರಾಜ್ಯಸ್ಥನಾಗಿ ನಿಂದ ಏಲೇಶ್ವರಲಿಂಗಕ್ಕೆ ನಾನಿಳಿದ ಬಂಟ.
ವ್ರತವನರಿದು ಮರೆದವರ ಸ್ವಪ್ನದಲ್ಲಿ ಕಂಡಡೆ
ಅವರಿಗಿಕ್ಕಿದ ತೊಡರು ಎಲೆದೊಟ್ಟ ನುಂಗಿದೆನು. ॥೬೮॥

೧೭೨೦
ಸರ್ವವ್ಯವಧಾನಂಗಳಲ್ಲಿ ಆವಾವ ವ್ರತಭಾವವ ತಾನಂಗೀಕರಿಸಿದಲ್ಲಿ,
ಒಡೆಯರು ಭಕ್ತರಠಾವಿನಲ್ಲಿ ಊಣೆಯಕ್ಕೆ ಎಡೆಗೊಡದೆ,
ಕ್ರೀ ಮುಂಚು, ಅರಿವ ಆತ್ಮ ಹಿಂಚಾಗಿ, ಓಸರವಿಲ್ಲದ ತ್ರಾಸಿನಂತೆ,
ಹಿಡಿದ ವ್ರತಕ್ಕೆ, ಆಚರಣೆಗೆ, ಒಡಗೂಡುವ ವಸ್ತುವಿಗೆ,
ಬೇರೊಂದೆಡೆಯೆಂದು ಕಲ್ಪಿತ ಹಿಂಗಿದವಂಗೆ,
ಕೊಂಡ ವ್ರತದಲ್ಲಿ ಆತ್ಮ ನಿಂದವಂಗೆ,
ಆತನ ಸಂಗವೆ ಏಲೇಶ್ವರಲಿಂಗದ ಕೂಟ. ॥೬೯॥

೧೭೨೧
ಸರ್ವವ್ರತಸ್ಥರ ನೇಮಸ್ಥಲದ ಕಟ್ಟಳೆ:
ಅಂಗವು ವ್ರತ, ಲಿಂಗವು ವ್ರತ, ಭಾವವು ವ್ರತ.
ಇಂತೀ ತ್ರಿವಿಧವ್ರತವ ಆರೋಗಿಸಿ ನಡೆವಲ್ಲಿ
ಬಾಹ್ಯಕ್ರೀಯಲ್ಲಿ ಲಿಂಗವ ಭಾವಿಸುವಲ್ಲಿ, ದೃಷ್ಟಿ ನಟ್ಟು ನೋಡುವಲ್ಲಿ
ತನ್ನ ವ್ರತದಾಳಿ ಮಿಶ್ರವಿಲ್ಲದೆಯಿಪ್ಪುದು
ಏಲೇಶ್ವರಲಿಂಗದ ವ್ರತದಂಗದ ಭಾವ. ॥೭೦॥

೧೭೨೨
ಸರ್ವಸಮಯಾಚಾರ, ಸಕಲಭೋಗಸಮಯಾಚಾರ,
ಇಂತೀ ಭೇದಂಗಳಲ್ಲಿ ಕೊಡುವ-ಕೊಂಬುದ-ಒಡಗೂಡುವುದ,
ಒಡೆಯಂಗೆ ಕೊಟ್ಟು,
ಅವರ ಅಡಿವಿಡಿದು ಒಡೆಯನ ನಿರೂಪದಿಂದ
ತನ್ನ ಅಡಿಯೆಡೆ ಕೊಡುವ-ಕೊಂಬುವ
ಸುಖಭೋಗಂಗಳು ಮುಂತಾಗಿ
ಇವ ಒಡೆಯಂಗಿತ್ತು ತಾ ಕೊಂಬುದು, ಒಡೆಯರ ಕಟ್ಟಳೆ.
ಹೀಗಲ್ಲದೆ ಹಾಸ ತೆಗೆದ ತುಡುಗುಣಿಯಂತೆ ಕಡಿವಂಗೆ
ಮತ್ತೆ ಒಡೆಯರ ಕಟ್ಟಳೆಯಿಲ್ಲ, ಏಲೇಶ್ವರಲಿಂಗಕ್ಕೆ ದೂರವೆಂಬೆ. ॥೭೧॥

೧೭೨೩
ಸರ್ವಸಮೂಹದಲ್ಲಿ ಏಕಪ್ರಸಾದವ ಕೊಂಬಲ್ಲಿ,
ತಮ್ಮ ಕ್ರೀ ಭಾವ ಅರಿವು ಆಚರಣೆಗೆ ಒಳಗಾಗಿ,
ಅರ್ಥ ಪ್ರಾಣ ಅಭಿಮಾನಂಗಳಲ್ಲಿ ಕಟ್ಟುಮೆಟ್ಟಿಲ್ಲದೆ,
ತಥ್ಯ ಮಿಥ್ಯಾದಿಗಳಿಗೆ ಹೊತ್ತು ಹೋರದೆ, ಏಕಪ್ರಸಾದವ ಕೊಂಡಂತೆ
ಆತ್ಮ ಏಕವಾಗಿಪ್ಪುದು ವಿಹಿತಕ್ರೀ.
ಈ ಗುಣ ಏಲೇಶ್ವರಲಿಂಗನು
ಸರ್ವಶೀಲವಂತನಾಗಿ ಕೊಂಬ ಪ್ರಸಾದ. ॥೭೨॥

೧೭೨೪
ಸರ್ವಾಂಗವಾಡ, ಮುಖವಾಡ, ಆತ್ಮವಾಡ_
ಇಂತೀ ವ್ರತನೇಮದ ಕಟ್ಟಿನಲ್ಲಿ ಇಪ್ಪನಿರವು:
ತನ್ನ ನೇಮಕ್ಕೆ ನೇಮವ ಅಂಗೀಕರಿಸಿದವನಲ್ಲಿ
ಅಂಗಬಂಧವ ತೆಗೆದು ತೋರುವುದು,

ಮುಖಬಂಧವ ತೆಗೆದು ನೋಡುವುದು,
ಆತ್ಮಬಂಧವ ಬಿಟ್ಟು ಮಾತನಾಡುವುದು.
ಇಂತೀ ಭಾಷೆಗೆ ಭಾಷೆ ಒಳಗಾದವನಲ್ಲಿ
ಇದು ನಿಹಿತದ ವ್ರತ ಏಲೇಶ್ವರಲಿಂಗಕ್ಕೆ. ॥೭೩॥

೧೭೨೫
ಹಿಡಿದ ವ್ರತ ಘಟಿಸಿತ್ತೆಂದು
ಮುಂದೆ ಒಂದು ವ್ರತಕ್ಕೆ ಅಡಿಯಿಡುವ ಪರಿಯಿನ್ನೆಂತೊ?
ಆ ವ್ರತ ತನಗೆ ಸಂಭವಿಸಿ ನಿಂದಲ್ಲಿ
ಹೆಣ್ಣಿಗೆ ವಿಷಯ ಹೊನ್ನು ಮಣ್ಣಿಗೆ ಅಪೇಕ್ಷೆ ಮತ್ತೆ,
ಸರ್ವೇಂದ್ರಿಯಂಗಳಲ್ಲಿ ಹಿಂಗಿ ನಿಂದ ವ್ರತದಂಗವಾವುದು?
ತಾ ನಿಂದ ವ್ರತ ಒಂದಂಗದಲ್ಲಿ ಸಲೆ ಸಂದುದು.
ಆ ಭಾವದಲ್ಲಿ ಸರ್ವವ್ರತ ಸಂದಿತ್ತು, ಏಲೇಶ್ವರಲಿಂಗಕ್ಕೆ. ॥೭೪॥

೧೭೨೬
ಹೆಂಡತಿ, ಗಂಡನ ಒಡೆಯರೆಂದು ಕೂಡಿಕೊಂಡು
ಉಂಡೆಹೆನೆಂಬ ಜಗಭಂಡೆಯ ನೋಡಾ.
ಕೂಟಕ್ಕೆ ಪುರುಷನಾಗಿ ನೇಮಕ್ಕೆ ಒಡೆತನವುಂಟೆ?
ಇಂತೀ ಜಾರೆಯ ನೇಮ ಮೂತ್ರದ ದ್ವಾರಕ್ಕೆ ಈಡು.
ಇಂತೀ ಸಂಸಾರದ ಘಾತಕತನದ ವ್ರತ
ಮೀಸಲ ಶುನಕ ಮುಟ್ಟಿದಂತೆ, ಅದು ಏಲೇಶ್ವರಲಿಂಗಕ್ಕೆ ದೂರ. ॥೭೫॥

*

ಒಕ್ಕಲಿಗ ಮುದ್ದಣ್ಣಗಳ ವಚನ

೧೭೨೭
ಅಂಗವೆ ಭೂಮಿಯಾಗಿ, ಲಿಂಗವೆ ಬೆಳೆಯಾಗಿ,
ವಿಶ್ವಾಸವೆಂಬ ಬತ್ತ ಒಲಿದು ಉಂಡು,
ಸುಖಿಯಾಗಿರಬೇಕೆಂದ ಕಾಮಭೀಮ ಜೀವಧನದೊಡೆಯ. ॥೧॥

೧೭೨೮
ಆವ ವರ್ಣವ ಕೂಡಿದಡೂ ಅಪ್ಪುಮಯ ತಪ್ಪದಂತೆ,
ಸರ್ವಗುಣಸಂಪನ್ನನಾದಲ್ಲಿ ಭಕ್ತನೆಂದಡೂ ತಾನಾಗಿ,

ಮಹೇಶ್ವರ[ನೆಂ]ದಡೂ ತಾನಾಗಿ,
ಪ್ರಸಾದಿಯೆಂದಡೂ ತಾನಾಗಿ, ಪ್ರಾಣಲಿಂಗಿಯೆಂದಡೂ ತಾನಾಗಿ,
ಶರಣನೆಂದಡೂ ತಾನಾಗಿ, ಐಕ್ಯನೆಂದಡೂ ತಾನಾಗಿ,
ಒಂದನಹುದು ಒಂದನಲ್ಲಾ ಎನ್ನದೆ
ಕತ್ತಲೆಯಲ್ಲಿ ಹಾಲಕೊಂಡಡೆ ಸಿಹಿ ತಪ್ಪುವುದೆ?
ಸತ್ತು ಚಿತ್ತು ಆನಂದವೆಂಬ ಗೊತ್ತ ಹರಿದವಂಗೆ
ತಟ್ಟು ಮುಟ್ಟು ಹತ್ತುವ ಭಾವ ಒಂದೂ ಇಲ್ಲ
ಕಾಮಭೀಮ ಜೀವಧನದೊಡೆಯ ತಾನು ತಾನೆ. ॥೨॥

೧೭೨೯
ಕುಂಭದ ಮಳೆ ಹೊಯ್ಯಿತ್ತು. ಮೂರಂಗದ ನೇಗಿಲ ತರಿಯಬೇಕು.
ಆರಂಗದ ಭೂಮಿಯಲ್ಲಿ ಅರಸಲಾಗಿ ಒಂದೆ ಮರ ಹುಟ್ಟಿತ್ತು.
ಹುಟ್ಟುವಾಗ ಮರ ಮೂರು ಕವೆ, ಅಲ್ಲಿಂದತ್ತಾರು ಕವೆಯಾಯಿತ್ತು.
ಆ ಆರರ ಮಧ್ಯದಲ್ಲಿ ಮೂವತ್ತಾರು ಕವೆಯಾಯಿತ್ತು.
ಆ ಮೂವತ್ತಾರರ ಮಧ್ಯದಲ್ಲಿ ನೂರೊಂದು ಕೊಂಬೆ ಶಾಖೆಗೂಡಿತ್ತು.
ಆ ಮರನನೇರಿ ಹಿಂದುಮುಂದಣ ಕೊಂಬೆ ಕಳೆದು
ಕೊಡಲಿಯಾಡೋದಕ್ಕೆ ತೆರಪಮಾಡಿ, ನಡುವಣ ಕೊಂಬೆ ಕಡೆವುತ್ತಿರಲಾಗಿ,
ಒಂದು ಹೊಯಿಲಿಗೆ ಇದರಂಗದ ತೊಪ್ಪೆ ಹರಿದು,
ಉಭಯಕ್ಕೆ ದಿಂಡು ಹರಿದು, ತ್ರಿವಿಧಕ್ಕೆ ಗರ್ಭಗೆಚ್ಚು ಖಂಡಿತವಾಯಿತ್ತು.
ಮರ ತಟ್ಟಾರಬೇಕೆಂದು ಇರಿಸಿ ಬಂದೆ,
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ. ॥೩॥

೧೭೩೦
ಕ್ರೋಧ ಬಂದಲ್ಲಿ ಕೊಲ್ಲೆಂಬುದು, ದಯೆ ಬಂದಲ್ಲಿ ಬೇಡಾ ಎಂಬುದು,
ಅದು ಅರಿವೊ? ಅಜ್ಞಾನವೊ? ಬೇರೊಂದು ಹೊಲಬೊ?
ಮಾಡುವ ಕ್ರೀ ಜಡನೆಂಬುದು,
ಕ್ರೀ ಹೊರಗಾದುದು ಅರಿವೆಂಬುದು,
ಅದನರಿವುದು ಅದೇನು ಹೇಳಾ? ಆತ್ಮನರಿವೊ ಅದೇನು ಮರವೆಯೊ?
ತೊಳೆದಡೆ ಮಡಿಯಾಗಿ ಮಾಸಿದಡೆ ಮೈಲಿಗೆಯಾಗಿ
ಪುಸಿಯಹುದೊಂದೊ ಎರಡೊ?
ಅರಿದಡೆ ತಾನೆಂಬ ಮರೆದಡೆ ಜಗವೆಂಬ
ಉಭಯಕ್ಕೊಳಗಾಗದ ಮುನ್ನವೆ ಅರಿ,
ಕಾಮಭೀಮ ಜೀವಧನದೊಡೆಯನ. ॥೪॥

೧೭೩೧
ದೊಡ್ಡವೆರಡು ಕಂಬದ ಮಧ್ಯದಲ್ಲಿ ಚಿಕ್ಕವೆರಡು ಕಂಬ.
ಇಂತೀ ನಾಲ್ಕರ ಮಧ್ಯದ ಮನೆಗೆ
ಅಸ್ಥಿಯ ಗಳು, ನರದ ಕಟ್ಟು, ಮಜ್ಜೆಯ ಸಾರ,
ಮಾಂಸದ ಗೋಡೆ, ಚರ್ಮದ ಹೊದಿಕೆ,
ಶ್ರೋಣಿತದ ಸಾರದ, ಕುಂಭದಿಂದಿಪ್ಪುದೊಂದು
ಚಿತ್ರದ ಮನೆ ನೋಡಯ್ಯಾ.
ಆ ಮನೆಗೊಂಬತ್ತು ಬಾಗಿಲು,
ಇಡಾ ಪಿಂಗಳವೆಂಬ ಗಾಳಿಯ ಬಾದಳ,
ಮೃದು ಕಠಿಣವೆಂಬವೆರಡು ಅಗುಳಿಯ ಭೇದ ನೋಡಾ,
ಇತ್ತಲೆಯ ಮೇಲಿಪ್ಪ ಸುಷುಮ್ನಾನಾಳವ ಮುಚ್ಚಿ,
ದಿವಾರಾತ್ರಿಯೆಂಬ ಅರುಹು ಮರಹಿನ
ಉಭಯವ ಕದಕಿತ್ತು ನೋಡಯ್ಯಾ.
ಮನೆ ನಷ್ಟವಾಗಿ ಹೋದಡೆಯೂ
ಮನೆಯೊಡೆಯ ಮರಳಿ ಮತ್ತೊಂದು ಮನೆಗೆ
ಬಪ್ಪುದು ತಪ್ಪದು ನೋಡಯ್ಯಾ.
ಇಂತಪ್ಪ ಮನೆಗೆನ್ನ ಮರಳಿ ಬಾರದಂತೆ ಮಾಡಯ್ಯಾ,
ಕಾಮಭೀಮ ಜೀವಧನದೊಡೆಯ ನಿಮ್ಮ ಧರ್ಮ ನಿಮ್ಮ ಧರ್ಮ. ॥೫॥

೧೭೩೨
ನೀ ಕೊಟ್ಟ ಭೂಮಿಗೆ ಮುಂದೆ ಕರಲು, ಹಿಂದೆ ಇಗ್ಗರಲು,
ಅಲ್ಲಿಂದ ಆಚೆ ಮಧ್ಯಭೂಮಿ.
ಮೂರು ನೆಲದ ಭೂಮಿಯ ಆರೈದು ಬೆಳೆದೆಹೆನೆಂದಡೆ,
ಇದಾರ ವಶವೂ ಅಲ್ಲ,
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ. ॥೬॥

೧೭೩೩
ಪೂರ್ವಕ್ಕೆ ತಾಳಾಗಿ ಉತ್ತರಕ್ಕೆ ತಲಹಾ ಬಿದ್ದ ಮರನ ತಂದು,
ನಿಬದ್ಧಿಯ ಕಾರುಕನ ಕೈಯಲ್ಲಿ ಸುಬದ್ಧಿಸಿ, ಶುದ್ಧೈಸಿ
ಅನಾದಿಯೆಂಬ ಹುಗಿಲುದೆಗೆದು, ಆದಿಯೆಂಬ ಈಯವನಿಕ್ಕಿ,
ಇಷ್ಟವೆಂಬ ವಿಶ್ವಾಸದ ಮೇಳಿಯಂ ಬೆಟ್ಟಿ,
ಭಾವವೆಂಬ ಜಿಗುಳಿಯನಿಕ್ಕಿ, ಸದ್ಭಾವವೆಂಬ ಗುಳುವ ತೊಡಿಸಿ,
ಸತ್ಕ್ರಿಯೆಯೆಂಬ ಕಣ್ಣಿಯಲ್ಲಿ ನೇಗಿಲ ತೊಡಚಿ,

ಜ್ಞಾನಚಕ್ಷುವೆಂಬ ನೊಗದ ಉಭಯದ ಕೊನೆಯಲ್ಲಿ
ಎಡಗೋಲಿನಲ್ಲಿ ಕಾರಿಯ ಹೂಡಿ, ಬಲಗೋಲಿನಲ್ಲಿ ಬೆಳ್ಳಿಯ ಹೂಡಿ,
ಅಡಿ ಕೆತ್ತುವಂತೆ ಧಾಯೆಂದು ಹೊಡೆಯಲಾಗಿ,
ಭೂಮಿಯೊಡಗೂಡಿ ಸವೆಯಿತ್ತು. ಬಿತ್ತವಟ್ಟಕ್ಕೆ ದಿಕ್ಕಿಲ್ಲ,
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ. ॥೭॥

೧೭೩೪
ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು.
ಕ್ರೀಗೆ ಅರಿವು ಬೇಕೆಂಬಲ್ಲಿ ಉಭಯನರಿದು ಘಟಿಸಬೇಕು.
ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೆ ಮೀರಿದರುಂಟೆ?
ಕ್ರೀಯ ಬಿಡಲಿಲ್ಲ, ಅರಿವ ಮರೆಯಲಿಲ್ಲ.
ಬೆಳೆಯ ಕೊಯಿದ ಮತ್ತೆ, ಹೊಲಕ್ಕೆ ಕಾವಲುಂಟೆ?
ಫಲವ ಹೊತ್ತ ಪೈರಿನಂತೆ, ಪೈರನೊಳಕೊಂಡ ಫಲದಂತೆ,
ಅರಿವು ಆಚರಣೆಯೆಲ್ಲ ನಿಂದು, ಆಚರಣೆ ಅರಿವಿನಲ್ಲಿ ಲೇಪನಾದ ಮತ್ತೆ
ಕಾಮಭೀಮ ಜೀವಧನನೊಡೆಯನೆಂಬುದ ಭಾವಿಸಲಿಲ್ಲ. ॥೮॥

೧೭೩೫
ಭಕ್ತಿಯೆಂಬ ಪೃಥ್ವಿಯಲ್ಲಿ ಗುರೂಪದೇಶವೆಂಬ ನೇಗಿಲಂ ಪಿಡಿದು,
ಅಂತಃಕರಣ ಚತುಷ್ಟಯವೆಂಬ ಪಶುವಂ ಕಟ್ಟಿ
ಓಂಕಾರನಾದವೆಂಬ ಸೆಳೆಕೋಲಂ ಪಿಡಿದು
ಉತ್ತರ ಕ್ರೀಯೆಂಬ ಸಾಲನೆತ್ತಿ
ದುಃಕರ್ಮವೆಂಬ ಕಂಟಕದ ಗುಲ್ಮವಂ ಕಡಿದು
ಅರುಹೆಂಬ ರವಿಯ ಕಿರಣದಿಂದ ಒಣಗಿಸಿ
ಅವಂ ಕೂಡಲೊಟ್ಟಿ, ಜ್ಞಾನಾಗ್ನಿಯೆಂಬ ಅಗ್ನಿಯಿಂದ ಸುಟ್ಟುರುಹಿ
ಆ ಹೊಲನಂ ಹಸಮಾಡಿ, ಬಿತ್ತುವ ಪರಿ ಇನ್ನಾವುದಯ್ಯಾ ಎಂದಡೆ:
ನಾದ, ಬಿಂದು, ಕಳೆ, ಮಳೆಗಾಲದ ಹದಬೆದೆಯನರಿದು
ಸ್ಥೂಲವೆಂಬ ದಿಂಡಿಗೆ ತ್ರಿದೇವರೆಂಬ ತಾಳ ನಟ್ಟು
ಇಡಾಪಿಂಗಳ ಸುಷುಮ್ನಾನಾಳವೆಂಬ ಕೋವಿಗಳ ಜೋಡಿಸಿ,
ಮೇಲೆ ತ್ರಿಕೂಟಸ್ಥಾನವೆಂಬ ಬಟ್ಟಲಂ ಬಲಿದು,
ಕುಂಡಲೀಸರ್ಪನೆಂಬ ಹಗ್ಗವ ಸೇದಿ ಕಟ್ಟಿ, ಹಂಸನೆಂಬ ಎತ್ತಂ ಹೂಡಿ,
ಪ್ರಣವನೆಂಬ ಬೀಜವ ಪಶ್ಚಿಮ ಮುಖಕ್ಕೆ ಬಿತ್ತಿ,
ಸರ್ವಶಾಂತಿ ನಿರ್ಮಲವೆಂಬ ಮೇಘ ಸುರಿಯಲ್ಕೆ
ನೀಲಬ್ರಹ್ಮವೆಂಬ ಸಸಿ ಹುಟ್ಟಿತ್ತು.

ಆ ಸಸಿಯ ಮುಟ್ಟುವ ಸಪ್ತವರ್ಣದ ಸದೆಯ ಕಳೆದು
ಅಷ್ಟವರ್ಣದ ಅಲಬಂ ಕಿತ್ತು, ದಶವಾಯುವೆಂಬ ಕಸಮಂ ತೆಗೆದು,
ಆ ಸಸಿ ಪಸರಿಸಿ ಪ್ರಜ್ವಲಿಸಿ ಫಲಕ್ಕೆ ಬರಲಾಗಿ
ಚತುರ್ವಿಧವೆಂಬ ಮಂಚಿಗೆಯಂ ಮೆಟ್ಟಿ
ಬಾಲಚಂದ್ರನೆಂಬ ಕವಣೆಯಂ ಪಿಡಿದು
ಪ್ರಪಂಚುವೆಂಬ ಹಕ್ಕಿಯಂ ಸೋವಿ
ಆ ಬತ್ತ ಬಲಿದು ನಿಂದಿರಲು,
ಕೊಯ್ವುಂಬ ಪರಿ ಇನ್ನಾವುದಯ್ಯಾ ಎಂದಡೆ:
ಇಷ್ಟವೆಂಬ ಕುಡುಗೋಲಿಗೆ ಪ್ರಣವವೆಂಬ ಹಿಡಿಯಂ ತೊಡಿಸಿ,
ಭಾವವೆಂಬ ಹಸ್ತದಿಂ ಪಿಡಿದು, ಜನನದ ನಿಲವಂ ಕೊಯ್ದು,
ಮರಣದ ಸಿವುಡ ಕಟ್ಟಿ, ಆಕಾಶವೆಂಬ ಬಣವೆಯನೊಟ್ಟಿ
ಉನ್ಮನಿಯೆಂಬ ತೆನೆಯನ್ನರಿದು, ಮನೋರಥವೆಂಬ ಬಂಡಿಯಲ್ಲಿ ಹೇರಿ,
ಮುಕ್ತಿಯೆಂಬ ಕೋಟಾರಕ್ಕೆ ತಂದು,
ಅಷ್ಟಾಂಗಯೋಗವೆಂಬ ಜೀವಧನದಿಂದೊಕ್ಕಿ,
ತಾಪತ್ರಯದ ಮೆಟ್ಟನೇರಿ, ಪಾಪದ ಹೊಟ್ಟ ತೂರಿ,
ಪುಣ್ಯದ ಬೀಜಮಂ [ತ]ಳೆದು
ಷಡುವರ್ಗ ಷಡೂರ್ಮೆಯೆಂಬ ಬೇಗಾರಮಂ ಕಳೆದು
ಅಂಗಜಾಲನ ಕಣ್ಣ[ಮು]ಚ್ಚಿ,
ಚಿತ್ರಗುಪ್ತರೆಂಬ ಕರಣಿಕರ ಸಂಪುಟಕೆ ಬರಿಸದೆ
ಯಮರಾಜನೆಂಬರಸಿಗೆ ಕೋರನಿಕ್ಕದೆ
ಸುಖ ಶಂಕರೋತಿ ಶಂಕರೋತಿ ಎಂಬ ಸಯಿದಾನವನುಂಡು
ಸುಖಿಯಾಗಿಪ್ಪ ಒಕ್ಕಲಮಗನ ತೋರಿ ಬದುಕಿಸಯ್ಯಾ,
ಕಾಮಭೀಮ ಜೀವಧನದೊಡೆಯ ಪ್ರಭುವೆ
ನಿಮ್ಮ ಧರ್ಮ, ನಿಮ್ಮ ಧರ್ಮ. ॥೯॥

೧೭೩೬
ಮೂರಡಿ ಮಣ್ಣಿಗೆ ಆರು ಹೊನ್ನತೆತ್ತು, ಮೀರಿ ಹದಿಕೆಯ ಬೇಡೆನೆಂದು,
ಈ ಗ್ರಾಮದವರ ಮುಂದಿಟ್ಟು ಮೀರಲಿಲ್ಲಾಯೆಂದು ಪಟ್ಟೆಯ ಕೊಟ್ಟು,
ಮತ್ತೂರು ಗೂಡಿ ಹದಿಕೆಯ ಬೇಡಿದಡೆ, ನಾ ಕೊಡಲಿಲ್ಲ.
ನೀ ಕೊಟ್ಟಪಟ್ಟೆ ನಮ್ಮ ನಟ್ಟನಡುಮನೆಯ ಐದುಕಾಲ ನೆಲಹಿನಲ್ಲಿ ಕಟ್ಟಿಯದೆ ಕೋ!
ನೀ ತಪ್ಪಿದಡೆ ನಿನಗೆ ಹೇಳುವ ಒಡೆಯರುಂಟೆ? ನಾನೊಕ್ಕಲು ನೀನೊಡೆಯ.
ಮೀರಿ ಕೊಂಡಿಹೆನೆಂದಡೆ ಮುನ್ನವೇ ಸಿದ್ಧಾಯ ಸೆರೆಗೆ ನಾನೊಳಗು.
ಗುತ್ತಿಗೆಕಾರಂಗೆ ಮತ್ತೆ ಕುಳವುಂಟೆ? ಇನ್ನು ಕೊಟ್ಟೆನಾದೊಡೆ
ಎನ್ನ ಹಟ್ಟಿಕೊಟ್ಟಿಗೆಯೊಡೆಯ ಕಾಮಭೀಮ ಜೀವಧನದಾಣೆ. ॥೧೦॥

೧೭೩೭
ವರುಣನ ಕಿರಣದಿಂದ ಅಪ್ಪುವಿನ ಸಾರ ಪೃಥ್ವಿಯೊಳಡಗಿದ್ದು
ಪೃಥ್ವಿಯ ತಪ್ಪಿಸಿ ತಾನೊಪ್ಪದಲ್ಲಿ ತೆಗೆವಂತೆ,
ಅರಿವು–ಮರವೆ, ಪೃಥ್ವಿ–ಅಪ್ಪುವಿನಂತೆ ಇಪ್ಪ ಭೇದವ ತಾನರಿದು
ಜಡ–ಅಜಡವೆಂಬ ಉಭಯವರಿವುದು
ಸಕಲವೊ? ನಿಃಕಲವೊ? ಬೇರೊಂದು ಹೊಲಬೊ?
ನಿನ್ನೊಲವರವ ನೀನೆ ಬಲ್ಲೆ.
ಕಾಮಭೀಮ ಜೀವಧನದೊಡೆಯ ನಾನೆಂದೂ ಅರಿಯೆ. ॥೧೧॥

೧೭೩೮
ವೇದಶಾಸ್ತ್ರವನೋದುವುದಕ್ಕೆ ಹಾರುವನಲ್ಲ,
ಇರಿದು ಮೆರೆವುದಕ್ಕೆ ಕ್ಷತ್ರಿಯನಲ್ಲ, ವ್ಯವಹರಿಸುವುದಕ್ಕೆ ವೈಶ್ಯನಲ್ಲ.
ಉಳುವ ಒಕ್ಕಲಮಗನ ತಪ್ಪ ನೋಡದೆ ಒಪ್ಪುಗೊಳ್ಳಯ್ಯಾ,
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ. ॥೧೨॥

❖❖

*

ಕಠಿಣಪದ ಕೋಶ

ಅಂಕ–ಯುದ್ಧ, ಯುದ್ಧಭೂಮಿ
ಅಂಜಗ–ಕಾಮ
ಅಂಗಸೋಂಕು–ಇಷ್ಟಲಿಂಗಧಾರಣೆ
ಅಂಗಾಚಾರ–ಅಶುದ್ಧ ಬದುಕು
ಅಂಡಕ–ಮೇಲು ಛಾವಣಿ
ಅಂಡಜ–ತತ್ತಿಯಿಂದ ಹುಟ್ಟಿದ ಪ್ರಾಣಿ
ಅಂದಳ–ಅಂದೋಲಿಕಾ, ಪಲ್ಲಕ್ಕಿ
ಅಂಬಲ–ಅಂಬಲಿ
ಅಂಬರ–ಬಟ್ಟೆ
ಅಂಬುಧಿ–ಸಮುದ್ರ
ಅಡಗ–ಉದ್ಧಟ
ಅಗಲ–ನೈವೇದ್ಯ
ಅಗಲು–ಹರಡು
ಅಗಳ–ಕೋಟೆಯ ಸುತ್ತಲಿನ ಕಂದಕ
ಅಗ್ಗೊಂಬ–ಅಗ್ರಶಾಖೆ
ಅಗ್ನಿಸ್ತಂಭ–ಬೆಂಕಿಯನ್ನು ನಂದಿಸುವ ಮಂತ್ರಶಕ್ತಿ
ಅಘಹರ–ಪಾಪನಾಶಕ
ಅಚ್ಚುಗ–ಹಾಳು, ವ್ಯರ್ಥ
ಅಜ–ಆಡು, ಕುರಿ
ಅಜಕಲ್ಪನೆ–ಅಗಕಲ್ಪ? ಬ್ರಹ್ಮನ ಆಯುಷ್ಯದ ಒಂದು ಪ್ರಮಾಣ
ಆರ್ಜಿಸು–ಗಳಿಸು
ಅಟ್ಟಣೆ–ಅಟ್ಟವಣೆ, ಪುಸ್ತಕವನ್ನಿಡುವ ಪೀಠ
ಅಡರು–ಅಡಕಲೇರಿಸು
ಅಡಗ–ಮಾಂಸ
ಅಡಹು–ಅಡವು, ಆತಂಕ
ಅಡ್ಡ–ಹಾಗಕ್ಕಿಂತ ದೊಡ್ಡ ನಾಣ್ಯ
ಅಡಿಮೆ–ವಶ
ಅಡಿಮೆಟ್ಟಿ–ಹೆಜ್ಜೆ ಇಟ್ಟು
ಅಡಿಮೆಟ್ಟು–ಪಾದದಿಂದ ತುಳಿ
ಅಡಿವಜ್ಜೆ–ಪಾದದ ಹೆಜ್ಜೆ
ಅಡುಗೂಲಿಕಾರ–ಕೂಲಿಯಿಂದ ಅಡಿಗೆ ಮಾಡುವವ
ಅಡುಹ–ಅಡರುವಿಕೆ
ಅಣಲ–ದವಣೆ
ಅಣಿ–ತಕ್ಕತನ
ಅಣ್ಣಿಸು–ಹೊಂದಿಸು
ಅಣುಮಹತ್ತು–ಸೂಕ್ಷ್ಮ ಮತ್ತು ಘನ
ಅಣೋರಣೀಯಾನ್–ಅಣುವಿಗೂ ಅಣುವಾಗಿರುವುದು
ಅತ್ಯತಿಷ್ಠದ್ದಶಾಂಗುಲ–ಹತ್ತು ಬೆರಳಿನಷ್ಟು ಮಿಗಿಲು
ಅತ್ಯಾಹಾರ–ಅತಿ ಆಹಾರ, ಹೀನ ಆಹಾರ
ಅತಿಗಳೆ–ಬಿಡು, ನಿರಾಕರಿಸು
ಅತಿಮಥನ–ಅತಿಯಾದ ಸಂಘರ್ಷ
ಅದ್ದವ–ಮುಳುಗಿದವ
ಅನಂಗಮುದ್ರೆ–ಯೋನಿ
ಅನಲ–ಬೆಂಕಿ
ಅನಿಲ–ಗಾಳಿ
ಅನ್ನಕ–ಅಲ್ಲಿಯವರೆಗೆ
ಅನಾಯತ–ವಿಸ್ತಾರವಿಲ್ಲದ, ಮನಬಂದಂತೆ ನಡೆಯುವ
ಅನ್ಯಾರ್ಜಿತ–ಇನ್ನೊಬ್ಬರ ಗಳಿಕೆ
ಅನಿಮಿಷ–ಮೀನು
ಅನುವಿಷಯ–ವಿಷಯಾನುಸರಣೆ
ಅನುಸರಣೆ–ಸಂಸಾರಲೋಭ?
ಅರ್ತಿಕಾರ–ವಿಲಾಸಿ, ವಿನೋದಿ
ಅಪವರ್ಗ–ಮೋಕ್ಷ
ಅಪ್ರದಕ್ಷಿಣ–ಸುತ್ತುವಿಕೆಯಿಲ್ಲದ
ಅಪೇಯ–ಕುಡಿಯಬಾರದ, ಸ್ವೀಕರಿಸಬಾರದ
ಅಭ್ರಚ್ಛಾಯ–ಮೋಡದ ನೆರಳು

ಅಭೀಪ್ಸ-ಬಯಕೆ
ಅಭಿಸಂಧಿ-ಕೂಟ, ಸೇರಿಕೆ
ಅಮಲೋಕ್ಯ-ದವಡೆ, ಬಾಯಿ
ಅಮೇಧ್ಯ-ಮಲ
ಅಯಸ್ಕಾಂತ-ಸೂಜಿಗಲ್ಲು
ಅರ-ಅರಣ, ಕೊರೆಯುವ ಉಕ್ಕಿನಕಂಬಿ
ಅರತು-ಬತ್ತಿಹೋಗಿ, ನಾಶವಾಗಿ
ಅರಿ-ಗೂಡಿ, ರಾಶಿ
ಅರಿಕೆ-ಜ್ಞಾನ, ತಿಳಿವಳಿಕೆ
ಅರಿದು-ಅಸಾಧ್ಯ
ಅರಿಬಿರುದಿನ-ಅಧಿಕ ಪ್ರಸಿದ್ಧಿಯ
ಅರತು-ಲಕ್ಷ್ಯವಿಲ್ಲದೆ
ಅರಸಿನ-ಅರಸುವಿಕೆಯ?
ಅರುಹಿರಿಯ-ಅಧಿಕ ದೊಡ್ಡವ
ಅ[ರೆ]ಪು-ಅರೆಯುವಿಕೆ, ಸಣ್ಣಮಾಡುವಿಕೆ
ಅರೆ-ಹಾಸಿಗೆ ಕಲ್ಲು
ಅರೋಚಕ-ರುಚಿಯಿಲ್ಲದುದು
ಅಲಗು-ಖಡ್ಗ
ಅಲಬ-ಹೊಲದಲ್ಲಿ ಬೆಳೆವ ಕಸದ ಜಾತಿ
ಅಲರು-ಹೂವು
ಅಲಸುಗಾರ-ಸೋಮಾರಿ
ಅಲೇಖ-ಬರೆಯುವ ತಾಳೆಗರಿ
ಅವಗತ-ದೂರ ಹೋದ
ಅವಗವಿಸು-ಅವಗ್ರಹಿಸು, ಸ್ವೀಕರಿಸು
ಅವಗ್ರಾಹಕ-ಒಳಕೊಳ್ಳುವಂಥದು
ಅವಿದ್ಯೆ-ಅಜ್ಞಾನ, ಮಾಯೆ
ಅವಿಸಿ-ಅಡಗಿಸಿ
ಅವತಳ-ಬೀಳು, ಇಳಿ
ಅವಧಾನಿ-ಜಾಗ್ರತ ವ್ಯಕತಿ, ಜ್ಞನಿ
ಅಶ್ವತ್ಥವೃಕ್ಷ-ಅರಳೆಮರ
ಅಷ್ಟಾಷಷ್ಟಿ-ಅರವತ್ತೆಂಟು
ಅಸಿಧಾರೆ-ಖಡ್ಗದ ಹರಿತ ಭಾಗ
ಅಸಾಸುರ-ದುಷ್ಟರಾಕ್ಷಸ
ಅಸುನಾಥ-ಪ್ರಾಣಲಿಂಗ
ಅರ್ಹನ್-ಜಿನ
ಅಹಿ-ಹಾವು
ಅಳಿಮೇಳ-ಹೀನರ ಮೈತ್ರಿ
ಅಳುಪು-ಆಸೆ
ಆಕರಿ-ಅಕ್ಷರಿ?ಶಿಕ್ಷ
ಆಗು-ಲಾಭ
ಆಢ್ಯ-ಆಡಂಬರ
ಆತ್ಮವಾಡ-ಭವಿಗಳ ಕೂಡ ಮನಸ್ಸು ಬಿಚ್ಚಿ
ಮಾತನಾಡದಿರುವ ವ್ರತ
ಆತ್ಮವಿತ್ತು-ಆತ್ಮಜ್ಞಾನಿ
ಆಧಿ-ಮನೋರೋಗ
ಆಧೇಯ-ಆಧಾರವುಳ್ಳುದು
ಆಪ್ಯಾಯನ-ತೃಪ್ತಿ
ಆಪೋಷನ-ಕುಡಿ, ಸ್ವೀಕರಿಸು
ಆಬಲ-ಆವಲ್, ತಾವರೆ ಜಾತಿಯ ಹೂವು,
ಕೆಂದಾವರೆ
ಆಮ್ರ-ಹುಳಿ
ಆಮ್ಲ-ಹುಳಿ
ಆಯತ-ಯೋಗ್ಯ
ಆರಂಬ-ಕೃಷಿಕಾಯಕ
ಆರಡಿಗೊಳ್ಳು-ಷಟ್‌ಸ್ಥಲಗಳಿಂದ ಜ್ಞಾನವನ್ನು
ಸಂಪಾದಿಸು
ಆರಡಿ-ಆಯಾಸ, ಸೂರೆಹೊಡೆ
ಆರಯ್-ಪೋಷಿಸು, ಆರಯ್ಕೆಮಾಡು
ಆರಿಕೆ-ಯಾರೋ
ಆರೂಢಜ್ಞಾನಿ-ಉತ್ತುಂಗಜ್ಞಾನಿ
ಆರೈಕೆ-ಪರೀಕ್ಷೆ
ಆಲವಟ್ಟ-ಬೀಸಣಿಕೆ
ಆವಂಗ-ಸವಂಗ, ಚಿಲಕತ್ತು
ಆವರ್ತಿಸು-ಮತ್ತೆ ಮತ್ತೆ ಬರು
ಆವರ್ಚಿಸಿ-ಆವರ್ಜಿಸಿ, ಸೆಳೆದುಕಟ್ಟಿ
ಆವುಜ-ಒಂದು ವಾದ್ಯ
ಆಸರ-ಆಸುರ, ಕಷ್ಟ
ಆಹ್ವಾನ-ಆವಾಹನ, ದೇವರನ್ನು ಮಂತ್ರ ಪೂರ್ವಕ
ಬರಮಾಡಿಕೊಳ್ಳುವುದು
ಆಹೊತ್ತು-ಯಾವಾಗಲೂ, ಆಳವಾಡು-
ಹಿಂದೆಮಾಡು
ಆಳಾಪ-ಆಲಾಪ, ಮಾತು
ಆಳಿ-ಸೇವಕತನ, ಸಾಮರ್ಥ್ಯ
ಆಳು-ಮುಳುಗು, ಹೊಂದು
ಇಂದುಕಾಂತ-ಚಂದ್ರಕಾಂತ ಶಿಲೆ
ಇಂಬಿನ-ಇಮ್ಮಿನ, ಸಿಹಿಯಾದ
ಇಗ್ಗರಲು-ಅತಿಯಾದ ಕರಲುಭೂಮಿ
ಇಟ್ಟೆಯ ಹಣ್ಣು-ಒಂದು ಬಗೆಯ ಕಹಿ ಹಣ್ಣು,

ಇತ್ತಲೆ–ಎರಡು ತಲೆ
ಇದಿರ–ಪ್ರತಿ, ಸಮ್ಮುಖ
ಇದಿರು–ಮತ್ತೊಂದು
ಇನಬಿಂಬ–ಸೂರ್ಯಬಿಂಬ
ಈಚು–ಚಕ್ಕಡಿಯ ಈಸು
ಈಚುವೋದ–ಒಣಗಿದ
ಈಯ–(ನೇಗಿಲ)ಈಸು
ಈರೇಳು–ಹದಿನಾಲ್ಕು
ಉಕ್ಕಡ–ಹೆಚ್ಚಾದ
ಉಕ್ಕಳ–ಹೆಚ್ಚಾದ ಉಗಿ–ಸೀಳು
ಉಡೆವುಚ್ಚು–ಬತ್ತಲೆಮಾಡು
ಉಣ್ಮು–ಉಕ್ಕು, ಉಬ್ಬು
ಉತ್ತಮಾಂಗ–ತಲೆ
ಉತ್ತರಕ್ರೀ–ಮುಂದಿನ ಕೆಲಸ
ಉತ್ತಾರ–ದಾಟುವಿಕೆ
ಉದಾನ–ತೇಗುಡರಕೆ
ಉದ್ಧೂಳನ–ಲೇಪನ
ಉದ್ಧೂಳಿತ–ಲೇಪಿತ
ಉನ್ಮಿಷ–ಉನ್ಮೇಷ, ತೆರೆಯುವಿಕೆ
ಉನ್ಮೀಲನ–ತೆರೆಯುವಿಕೆ\
ಉಪಚರಿಯೆ–ತೋರಿಕೆ
ಉಪಮೆ–ಉಪಾಯ
ಉಪವೀತ–ಜನ್ನಿವಾರ
ಉಪಾಧಿ–ಉಪದ್ರವ, ಮೋಸ
ಉಪಾಸ್ತಿ–ಉಪಾಸನೆ, ಸೇವೆ
ಉಭಯಭ್ರಷ್ಟ–ಇಹಪರಗಳಿಗೆ ಹೊರಗು
ಉಮ್ಮಳಿಸು–ಚಿಂತಿಸು
ಉಲಾಯೋಗ–ಯೋಗಿನಿಯರಲ್ಲಿ ಒಬ್ಬಳಾದ ಉತ್ಕಾಳನ್ನು ಕುರಿತು ಯೋಗ?
ಉಲುಮೆ–ಒಲುಮೆ, ಸಂತೋಷ
ಉಳುವ–ಬೆಸಾಯ ಮಾಡುವ
ಊಣೆಯ–ಊನ, ಕೊರತೆ
ಊಷ್ಮ–ಉಷ್ಣ
ಎಂಟು ಕಟ್ಟೆ–ನ್ಯಾಯ ಬಗೆಹರಿಸುವ ಗ್ರಮದ ಎಂಟು ಜನ
ಎಕ್ಕೆ–ಹೊರಸಿನ ಗಳ
ಎಕ್ಕಲಕೊಂಡ–ನರಕದ ಒಂದು ಅಗ್ನಿ ಕುಂಡ
ಎಕ್ಕೆ–ಹೊರಸಿನ ಚೌಕಟ್ಟಿನ ಕೋಲು
ಎಯ್–ಮುಟ್ಟು, ಸೇರು
ಎರವು–ಭೇದಭಾವ
ಎರೆ–ನೀಡು, ಕೊಡು
ಎಸಕ–ಕಾರ್ಯ, ಆಧಿಕ್ಯ
ಎಸವು–ದೊಡ್ಡದಾಗು
ಎಸುಗೆ–ಎಸೆಯುವಿಕೆ
ಎಳತಟ–ಎಳೆದಾಟ
ಎಳಸು–ಆಸೆಮಾಡು
ಐದಾನೆ–ಇದ್ದಾನೆ
ಏಕಭುಕ್ತೋಪವಾಸ–ಒಪ್ಪೊತ್ತು ಊಟ ಮಾಡುವುದು
ಏಡಿಸು–ಅಣಕಿಸು
ಏರಿ–ಕೆರೆಯ ಒಡ್ಡು, ದಿನ್ನೆ
ಏಸು–ಬಾಣಬಿಡು
ಒಗ್ಗು–ಒಳಗಾಗು, ಅಧೀನವಾಗು
ಒಚ್ಚತವೋಗಿ–ವಶವಾಗಿ
ಒಡಲು–ಆಶ್ರಯ
ಒಡ್ಯಾಣ–ನಡುವಿಗೆ ಹಾಕಿಕೊಳ್ಳುವ ಲೋಹದ ಪಟ್ಟಿ, ಡಾಬು
ಒಡೆಬಡಿ–ಒಡೆಯುವ ಹಾಗೆ ಬಡಿ
ಒದಗ–ಒದಗುವಿಕೆ
ಒಬ್ಬುಳಿ–ಗುಂಪು
ಒಲವರ–ಪ್ರೀತಿ, ಪಕ್ಷಪಾತ
ಓಗರ–ಅನ್ನ, ಅಡಿಗೆ
ಓಡು–ಹುರಿಯುವ ಹಂಚು
ಓಡೆ–ದೊಡ್ಡ ಮಣ್ಣಿನ ಪಾತ್ರೆ
ಓರಂತೆ–ಒಂದೇ ಸವನೆ, ಕ್ರಮಬದ್ಧವಾಗಿ
ಓವರಿ–ಓಹರಿ, ಒಳಮನೆ
ಓಸರ–ಓರೆಯಾಗುವಿಕೆ, ಪಕ್ಕಕ್ಕೆ ಸರಿಯುವಿಕೆ
ಕಂಕುಳ–ಬಗಲು
ಕಂಗಳಯ್ಯ–ಕುರುಡ
ಕಂಚುಕೆಖಚಿತ–ಕುಪ್ಪಸಕ್ಕೆ ಜೋಡಿಸಿದ
ಕಂಜನಾಳ–ಕಮಲದ ದೇಟು
ಕಂಟಕ–ಮುಳ್ಳು
ಕಂಠಪಾವಡ–ಕೊಡದ ಮೇಲೆ ವಸ್ತ್ರ ಮುಚ್ಚುವ ಒಂದು ವ್ರತ?
ಕಂಡಹ–ಖಡ್ಗ
ಕಂಡಿ–ಕಿಂಡಿ, ಕಿಡಕಿ
ಕಂಥೆ–ನಿಲುವಂಗಿ ತೇಪೆಗಳ ಅಂಗಿ

ಕಂದೆರೆ–ಕಣ್ಣುತೆರೆ
ಕಂಪಿತ–ಬೀಸಣಿಗೆ
ಕಂಬಳ–ದಿನಗೂಲಿ
ಕಕ್ಷೆ–ಬಗಲು
ಕಟಕ–ರಾಜಧಾನಿ
ಕಟ್ಟಣೆ–ವಿಗ್ರಹ, ಪ್ರತಿಮೆ
ಕಟಿಸೂತ್ರ–ಉಡುದಾರ
ಕಟುಕ–ಉಪ್ಪು
ಕಟುಟಕ–ಕಟ್ಟುಕಥೆ, ಸುಳ್ಳು
ಕಟ್ಟುಮೆಟ್ಟು–ಕಟ್ಟುಪಾಡು, ನಿರ್ಬಂಧ
ಕಡದ–ಕಡೆದ, ಕಂಡರಿಸಿದ
ಕಡವರ–ಬಂಗಾರ
ಕಡವಸ–ಹಾಸುವ ಚರ್ಮ
ಕಡೆಯಾಣಿ–ಶುದ್ಧಬಂಗಾರ
ಕಣಜ–ಧಾನ್ಯದ ರಾಶಿ
ಕಣ್ಣಿ–ಹಗ್ಗ
ಕಣೆ–ಕೋಲು
ಕತ್ತರಿವಾಣಿ–ವಿಷೋದಕ
ಕದಳಿ–ಸಮೂಹ
ಕದ್ದೆಹತನ–ಅಪೇಕ್ಷೆ, ಆತುರ
ಕಪ್ಪಡ–ಬಟ್ಟೆ, ಅರಿವೆ
ಕಪ್ಪರ–ಊಟದ ತಟ್ಟೆ
ಕಪಾಲ–ಶಿವನ ಕೈಯ್ಯಲ್ಲಿರುವ ಬ್ರಹ್ಮನ ತಲೆಬುರುಡೆ
ಕಪಿತ್ಥ–ಬೆಳುವಲ
ಕಪೋತ–ಬೂದು ಬಣ್ಣ
ಕಪೋತಪಕ್ಷಿ–ಪಾರಿವಾಳ
ಕಮಠ–ಆಮೆ
ಕಮಲಲೋಚನ–ವಿಷ್ಣು
ಕಮ್ಮರಿ–ಜಲಪಾತ
ಕಮ್ಮಣ್ಣೆ–ಸುಗಂಧ ತೈಲ
ಕರಂಡ–ಪೆಟ್ಟಿಗೆ
ಕರಕ–ಆಲಿಕಲ್ಲು
ಕರತಳಾಮಳಕ–ಅಂಗೈಮೇಲಿನ ನೆಲ್ಲಿಕಾಯಿಯಷ್ಟು ಸ್ಪಷ್ಟ
ಕರಲು–ಜವುಳು ನೆಲ
ಕರವತಿಗೆ–ಕರಪಾತ್ರೆ, ಕಮಂಡಲು
ಕರಾಧಾರ–ಹಸ್ತವೇ ಆಧಾರವಾಗಿರುವ
ಕರಿಕಂಠ–ವಿಷಧರ ಲೀಲೆಯ ಶಿವ
ಕರಿಗೊಳ್–ಗಟ್ಟಿಗೊಳ್ಳು
ಕವರ–ಕಂಬ
ಕರು–ಎರಕ
ಕರುಮಾಡ–ದೊಡ್ಡಮನೆ
ಕರೆ–ಹಿಂಡುವಿಕೆ
ಕಲ್ಪ–ಸಹಸ್ರಯುಗಗಳ ಕಾಲಾವಧಿ
ಕಲ್ಲಿ–ಬಲೆಯಂತೆ ಹೆಣೆದ ಚೀಲ
ಕವಣೆ–ಕಲ್ಲು ತೂರಿ ಹಕ್ಕಿಯನ್ನು ಓಡಿಸಲು ಬಳಸುವ ಹಗ್ಗದ ಉಪಕರಣ
ಕವಳೀಕರಿಸಿಕೊಳ್ಳು–ಕಬಳೀಕರಿಸಿಕೊಳ್ಳು, ನುಂಗು
ಕವೆ–ಕವಲು
ಕಷ್ಟ–ಹೀನ, ಕೆಳಜಾತಿಯವ
ಕಷಾಯ–ಒಗರು
ಕಳತ್ರ–ಹೆಂಡತಿ
ಕಳಿ–ಪಕ್ವ
ಕಳ್ಳು–ಮದ್ಯ, ಸುರಾ
ಕ್ರಮಕೂಟ–ವಂಶಪರಂಪರೆ?
ಕ್ಷಣಿಕತ್ವ–ಅಲ್ಪತ್ವ
ಕಾಂಸ್ಯಕ–ಕಾಂಸಕ, ಕಂಚು
ಕಾಪುಪ–ರಕ್ಷಕ
ಕಾಮರ–ಸಾಮಾನ್ಯ ಮರ
ಕಾರಣೆ–ನೀರು ತಳಿಯುವುದು
ಕಾರಿ–ಕರಿಯ ಎತ್ತು
ಕಾರುಕ–ಬಡಿಗ
ಕಾಲಾಂತಕ–ಯಮನನ್ನು ಕೊಂದ ಶಿವ
ಕಾಷಾಂಬರ–ಕಾವಿಬಟ್ಟೆ
ಕಾಳಿಂಗ–ಬೇಡ?
ಕಾಳಿಕೆ–ಕಪ್ಪು, ಅವಲೋಹ
ಕಾಳುಮಾತು–ಕೆಟ್ಟಮಾತು
ಕಾಹ–ಕಾಯುವಿಕೆ
ಕಿಸುಕುಳ–ಮಲ, ಕೊಳೆ, ಕ್ಷುದ್ರ
ಕೀಟಕ–ಕೀಟಲೆ ಮಾಡುವವ
ಕುಂಜರ–ಆನೆ
ಕುಂದ–ನಿಂದೆ, ಹೀಯಾಳಿಕೆ
ಕುಂಪಟೆ–ಅಗ್ಗಿಷ್ಟಿಗೆ
ಕುಂಭದ ಮಳೆ–ಕೊಡದಿಂದ ಸುರಿಯುವಂಥ ಮಳೆ
ಕುಂಭಿನಿ–ಭೂಮಿ, ನೆಲ
ಕುಂಭನೀ–ಪಾಪಿಗಳನ್ನು ಸುಡುವ ಒಂದು ನರಕ
ಕುಕ್ಕುಟ–ಕೋಳಿ

ಕುಕ್ಕುರ–ನಾಯಿ
ಕುಕ್ಕೆ–ಕೊಕ್ಕೆ, ಬಾಗಿದ ಮೊಳೆಯ ಉಪಕರಣ
ಕುಟ್ಟಿಮ–ನೆಲಗಟ್ಟು
ಕುಟುಕು–ಗುಟುಕು
ಕುತ್ತ–ನ್ಯೂನ್ಯತೆ, ದೋಷ
ಕುರುಗುಣಿ–ಸಣ್ಣ ಕೋಲು
ಕುರುಹು–ಗುರುತು
ಕುಲಾಲ–ಕುಂಬಾರ
ಕುಳ–ತೆರಿಗೆ, ಸುಂಕ
ಕ್ಷುತ್–ಹಸಿವು
ಕೂರ್–ಒಲಿ, ಪ್ರೀತಿಸು
ಕೂರದಾತ–ಪ್ರೀತಿಯಿಲ್ಲದವ
ಕ್ಷುಧೆ–ಹಸಿವು
ಕೆತ್ತ–ಮುಚ್ಚಿದ
ಕೆಲೆ–ಸಂತೋಷಪಡು
ಕೆಸರುಗಲ್ಲು–ಕೋನಶಿಲೆ
ಕೇಣಸರ–ಹೊಟ್ಟೆಕಿಚ್ಚು
ಕೇಸರ–ಕುಸುರು
ಕೈಪ–ಲಂಗೋಟಿ
ಕೈವಾರಿ–ಶೂರ
ಕೊಂಡ–ತಗ್ಗು
ಕೊಕರ–ಕೊಕ್ಕರೆ, ಬಕಪಕ್ಷಿ
ಕೊಚ್ಚೆ–ಕೆಸರು
ಕೊಟ್ಟ–ಒಂದು ಬಗೆಯ ಪಕ್ಷಿ
ಕೊಟಾರ–ಉಗ್ರಾಣ, ಭಂಡಾರ
ಕೊಲ್ಲಿ–ತುಂಟ
ಕೊಳಕು–ಹೇಸಿಕೆ
ಕೊಳಗ–ಧಾನ್ಯ ಅಳೆಯುವ ಸಾಧನ
ಕೋಟಾರ–ಕಣಜ, ಉಗ್ರಾಣ
ಕೋಟಿಗ–ಪಾತ್ರೆ ಬೆಸೆಯುವವ
ಕೋರ–ಪಾಲು
ಕೋಲು–ಗಾಣ
ಕೋವಿ–ಕೊಳವೆ
ಕೋಳು–ಸೆರೆ
ಕೌಪೀನ–ಲಂಗೋಟಿ
ಕೌಸಾಳ–ಕಂಚಿನ ತಾಳ
ಖಂಡ–ಮಾಂಸ
ಖಂಡನ ಪತ್ರ–ಕತ್ತರಿಸಿದ ಎಲೆ?
ಖಗ–ಪಕ್ಷಿ

ಖದ್ಯೋತ–ಸೂರ್ಯ
ಖರ್ಪರ ತಲೆಬುರುಡೆಯ ಪಾತ್ರೆ
ಗಂಗಳ–ತಟ್ಟೆ
ಗಂಜಳ–ರಾಡಿ
ಗಂಗೆವಾಳುಕರು–ಗಂಗಾತೀರದ ಮಳಲಿನಂತೆ ಅಸಂಖ್ಯಾತ ರುದ್ರಗಣಗಳು
ಗಡಣ–ಗುಂಪು, ಗದ್ದಲ
ಗಣಿ–ಗಣೆ, ಕೋಲು
ಗದಿ–ಹೇಳು, ನುಡಿ
ಗನ್ನ–ಮೋಸ
ಗಮ್ಮನೆ–ಕೂಡಲೇ
ಗರ್ದಭ–ಕತ್ತೆ
ಗರ್ಭಗೆಚ್ಚು–ಮರದ ಮಧ್ಯದ ಕೆಚ್ಚು
ಗರುಡಪತಿ–ವಿಷ್ಣು
ಗರುವ–ಪ್ರತಿಷ್ಠಿತ
ಗರುವಿಕೆ–ದೊಡ್ಡಸ್ತಿಕೆ
ಗಲಗ–ತೆಳ್ಳನೆಯ ಬಿದಿರುಕೋಲು
ಗವಾಕ್ಷ–ಕಿಡಿಕಿ
ಗಸಣಿ–ಯಾತನೆ
ಗಳ–ಕೊರಳು
ಗಳಹು–ಬೊಗಳು
ಗಳು–ಕೋಲು
ಗಣೆಯಾಟ–ಡೊಂಬರಾಟ
ಗಾಡಿಗ–ಗಾಡಿಕಾರ, ಚೆಲುವ
ಗಾಣಪತ್ಯ–ಗಣಪತಿಯ ಉಪಾಸಕ
ಗಾತ್ರ–ಶರೀರ
ಗಾತ್ರದಾನೆ–ಘನವಾದ ಆನೆ?
ಗಾರು–ವ್ಯರ್ಥ, ಒಣಗಿದ
ಗಾವಿಲ–ಗ್ರಾಮೀಣ, ಬುದ್ಧಿಗೇಡಿ
ಗಾಹು–ಪ್ರಭಾವ
ಗಾಹುಕಂಡಿ–ಮೋಸದಿಂದ ನುಸುಳುವ ಮಾರ್ಗ
ಗ್ರಹ–ಭೂತ
ಗ್ರಾಸ–ಆಹಾರ
ಗಿಲಿಗು–ಕಚಗುಳಿ
ಗಿಳಿಲು–ಗಿಣ್ಣಿಲ್, ಸಣ್ಣಪಾತ್ರೆ
ಗುಂಗುರು–ಗುಂಗಾಡು
ಗುಜ್ಜ–ಕುಬ್ಜ, ಹೀನ
ಗುಪ್ಪೆ–ಗುಂಪು
ಗುಲ್ಮ–ಗಿಡಗಂಟೆ

ಗುಳು–ನೇಗಿಲಿನ ಹುಳು
ಗೆಜ್ಜಲು–ಗೆದ್ದಲು ಹುಳು
ಗೊಂದಣ–ಗೊಂದಲ, ಸಮೂಹ
ಗೊತ್ತು–ನೆಲೆ, ಗುರಿ
ಗೋಂಟ–ಮೂಲೆ
ಗೋರಂಜನ–ಆಕಳ ಹೊಟ್ಟೆಯಲ್ಲಿರುವ ಹಳದಿ ದ್ರವ್ಯ
ಗೋರಿಕಲ್ಲು–ಬೆಣಚುಗಲ್ಲು
ಗೋವೇಧೆ–ಗೋಹತ್ಯೆ
ಘಟ–ಕೊಡ, ಶರೀರ
ಘಟ್ಟಿಯತನ–ಗಟ್ಟಿತನ
ಘಸಣಿ–ಗಾಸಿತನ, ಆತಂಕ
ಘಟ–ಶರೀರ
ಘುಟಿಕೆ–ಗುಳಿಗೆ
ಘೃಣಾಮೂರ್ತಿ–ಕರುಣಾಮೂರ್ತಿ
ಚುಂಚುಪುಟ–ಪಕ್ಷಿಯ ಮುಚ್ಚಿದ ಕೊಕ್ಕು
ಚಂಡಿಕಾಕಿರಣ–ಸೂರ್ಯ
ಚಚ್ಚಗೊಟ್ಟೆ–ನಿಂದೆಯ ನುಡಿ
ಚದುರಸ–ಚೌಕಾಕಾರ
ಚಮ್ಮಾವಿಗೆ–ಚರ್ಮದ ಪಾದುಕೆ
ಚಮ್ಮಾಳಿಗೆ–ಚರ್ಮ ಕೊಯ್ಯುವ ಉಪಕರಣ
ಚರ್ಚೆ–ನಿಂದೆ
ಚಲ್ಲವಾಡು–ಸರಸವಾಡು
ಚಾವಟ–ಚೌಟಿ, ಕುಸತಿಯ ಒಂದು ವರಸೆ
ಚಾರ್ವಾಕ–ನಿರೀಶ್ವರವಾದಿ, ನಾಸ್ತಿಕ
ಚಿಕ್ಕಿತ್ತು–ಸಣ್ಣದು
ಚಿಲುಮೆ–ಒರತೆ, ಊಟೆ
ಚೂರ್ಣ–ಸುಣ್ಣ
ಚೂರ್ಣಶಿಲೆ–ಸುಣ್ಣದ ಕಲ್ಲು
ಚೆಂಗು–ನೆಗೆ, ಹಾರು
ಚೆಚ್ಚಿ–ಚೇಷ್ಟೆ?
ಚೇಗು–ಹಾನಿ
ಚೇಟಿ–ದಾಸಿ
ಚೊಕ್ಕಹ–ಯುಕ್ತಿ
ಚೊಲ್ಲೆಹ–ಬಾಲದ ತುದಿ?
ಚೌರಾಸಿ–ಎಂಬತ್ತುನಾಲ್ಕು
ಜಂಗುಳಿ–ಸಾಮಾನ್ಯ, ಕೀಳು
ಜಂಘೆ–ಕೆಳದೊಡೆ
ಜಂತ್ರ–ಯಂತ್ರ
ಜಜ್ಜರಿ–ಜೀರ್ಣ

ಜರಗ–ಚಿನ್ನದ ಕಣ ಬೆರೆತ ಮಣ್ಣು
ಜಲಕುಂಭಚಂದ್ರವತ್–ಕೊಡದ ನೀರಿನಲ್ಲಿ ಚಂದ್ರ ಕಾಣುವಂತೆ
ಜಲತ್ಕಾರವೆಂಬ ಗಡಿಗೆ–ಚಿದ್ಭಾಂಡ
ಜವನಿಕೆ–ಮಾಯೆ, ಪರದೆ
ಜವ್ವಾಜಿ–ಒಂದು ಬಗೆಯ ಸುಗಂಧ ದ್ರವ್ಯ
ಜಾತವೇದ–ಬೆಂಕಿ
ಜಾತಿಗಾರ–ವೇಷಗಾರ
ಜಾಹ್ಯೆ–ನಿದ್ರೆ, ಜಡತೆ
ಜಾಳಂದ್ರ–ಬಲೆಯಂತೆ ಹೆಣೆದ ಕಿಂಡಿ
ಜಾಳಿಸಿ–ಕೊಡವಿ
ಜ್ಞಾನಸಜ್ಞ–ಶ್ರೇಷ್ಠಜ್ಞಾನಿ?
ಜಿಗುಡು–ಜಿಗುಟು ಪದಾರ್ಥ
ಜಿಗುಳಿ–ನೇಗಿಲದ ಒಂದು ಭಾಗ
ಜೀವಧನ–ಆಕಳು
ಜುಗ–ಯುಗ, ಜೋಡು
ಜೋಹಾರ–ನಮಸ್ಕಾರ
ಜ್ಯೋತಿಷ್ಟೋಮ–೧೬ ಜನ ಋತ್ವಿಜರಿಂದ ನಡೆಸುವ ಯಜ್ಞ
ಟಿಕ್ಕೆ–ಗಾಜಿನ ಮಣಿ
ಡಂಬ–ವೇಷಗಾರ
ಡಾಗು–ಲೋಹದ ಮುದ್ರೆ
ಡಾಣೆ–ಗದೆ
ಡಾವರ–ರಭಸ, ಶಕ್ತಿ
ಡಾಳಕ–ಡಾಂಭಿಕ
ಡುಂಡುಕ–ಡುಂಡುಭ, ನೀರಹಾವು
ಡೊಂಕರತ–ಡೊಂಕುಯಿಲ್ಲದ, ನೇರವಾದ
ತಂಡುಲ–ಅಕ್ಕಿ
ತಗಹು–ಮುಸುಕು
ತಟ್ಟಾರು–ಸಂಪೂರ್ಣ ಒಣಗು
ತಡಿ–ತಟ, ದಂಡೆ
ತತ್ತ–ತಳ್ತ, ಹೊಂದಿಕೆ
ತತ್ವಮಸಿ–ಅದುವೇ ನೀನು ಇರುವೆ, ಜೀವನೇ ಶಿವನು
ತತ್ತಾಗಿ–ಹೊಂದಿಕೊಂಡು
ತದ್ದಿನ–ಶ್ರಾದ್ಧ
ತದ್ರೂಪ–ಅದೇ ರೂಪ, ಅದೇ ಆಕಾರ
ತನೂರುಹ–ಕೂದಲು
ತರಹರ–ಶಾಂತಿ, ಸೈರಣೆ

ತರಿ–ಜೋಡಿಸು, ತರಚು, ಜೀರು
ತರಿ–ಕತ್ತರಿಸು
ತಲಪು–ಅಂತ್ಯ
ತಲಹು–ತುದಿ
ತಲೆವಳಸಿ–ತಲೆಸುತ್ತಿ
ತವರಾಜ–ಒಂದು ಬಗೆಯ ಬಿಳಿಯ ಸಕ್ಕರಿ
ತಳಿಗೆ–ಊಟದ ತಟ್ಟೆ
ತಳಿತ–ಅರಳಿದ, ಚಿಗುರಿದ
ತಾರ್ಕಣೆ–ನಿಶ್ಚಯ
ತಾಟಿಸು–ಅಪ್ಪಳಿಸು
ತಾರುಗದ–ತಾರು+ಕದ, ಜೋಡುಕದ
ತಾಳು–ಮರದ ಕಾಂಡ
ತ್ರಾಸು–ಬಂಗಾರ ತೂಗುವ ತಕ್ಕಡಿ
ತಿಕ್ತ–ಕಹಿ
ತಿಗುಡು–ಮರದ ತೊಗಟೆ
ತಿತ್ತಿ–ಚರ್ಮದ ಚೀಲ
ತಿರೋಧಾನ–ಅಡಗಿಸು
ತೀರ್ಪು–ತೀರಿಸು, ಮುಗಿಸು, ಪಾರಾಗು
ತೀತ–ಮೀರಿದ
ತ್ರಿದಂಡ–ಮನ, ವಚನ, ಕಾಯಗಳ ಮೇಲೆ ನಿಗ್ರಹ ಶಕ್ತಿಯುಳ್ಳವ, ಸನ್ಯಾಸಿಗಳಲ್ಲಿ ಒಂದು ವರ್ಗ
ತ್ರಿವಿಧಗುಡಿಹಿ–ಅಜ್ಞಾನಿ
ತುದಿಪದ–ಉತ್ತುಂಗ, ಸಿದ್ಧಿ
ತುರೀಯ–ಆತ್ಮನ ನಾಲ್ಕನೆಯ ಸ್ಥಿತಿ
ತುಷ–ಹೊಟ್ಟು
ತೂಂಬು–ಕೆರೆಯ ಕೋಡಿ
ತೂರ್ಯಾ–ಮೋಕ್ಷ ಪಡೆಯುವ ಸ್ಥಿತಿ
ತೂಳ–ಆತ್ಮಾಸಕ್ತಿ
ತೆಗಹು–ಹಿಂದಕ್ಕೆ ಸೆಳೆಯುವಿಕೆ
ತೆರ–ರೀತಿ, ಮರ್ಮ
ತೆರವು–ವಿಸ್ತಾರ
ತೊಂಡ–ಸೇವಕ
ತೊಟ್ಟು–ತುದಿ
ತೊಟ್ಟುಬಿಡು–ಹಣ್ಣು ಗಿಡದ ಸಂಬಂಧ ಕಳಚಿಕೊಳ್ಳುವುದು
ತೊಡೆಚು–ತೊಡಗಿಸು
ತೊಡರು–ಬಿರುದುಬಾವಲಿ, ಪಾದಪೆಂಡೆ
ತೊಡಿಗೆ–ತೊಡಗುವಿಕೆ
ತೊನಚಿ–ದನಗಳ ಮೈಮೇಲಿನ ತೊನಸಿ
ತೊಪ್ಪೆ–ತೊಗಟೆ
ತೊರೆಪತ್ರ–ತ್ಯಾಗಪತ್ರ
ತೊಳಚಿ–ತುಳಸಿ
ತೊಳಸು–ಸುತ್ತುವರಿ
ತೋಯ–ನೀರು
ತೋಯ–ತೊವ್ವೆ, ರಸರೂಪದ ಅಡಿಗೆ
ತೋಲು–ದೊಡ್ಡ
ಥಟ್ಟು–ತಟ್ಟು, ಗೋಣಿಚೀಲ
ದಂಡಣೆ–ಶಿಕ್ಷೆ
ದಂದುಗ–ಗೊಂದಲ, ವ್ಯಥೆ
ದಂಷ್ಟ್ರ–ಕೋರೆಹಲ್ಲು
ದಗ್ಧ–ಸುಟ್ಟ
ದಗ್ಧಪಟನ್ಯಾಯ–ಸುಡದಂತೆ ತೋರುವ ಸುಟ್ಟ ಅರಿವೆ
ದಡಿಕೆ–ಬಾಸುಳ
ದತ್ತೂರ–ಮದ್ದುಗುಣಿಕೆ
ದರಿಸಿನ–ದರ್ಶನ, ತೋರಿಕೆ
ದವಸ–ಧಾನ್ಯ
ದಸರಿದೊಡಕು–ರೇಶಿಮೆ ಎಳೆಯ ತೊಡಕು
ದಾಡಾಬಂಧ–ದವಡೆ ತೆರೆಯದಂತೆ ಮಂತ್ರದಿಂದ ಬಾಯಿಕಟ್ಟುವುದು
ದಾಯಗಾರ–ಸಮಯಸಾಧಕ
ದಿಂಡೆ–ರಾಕ್ಷಸಿ
ದಿಂಡು–ಕೂರಿಗೆ ಮೊದಲಾದವುಗಳ ಅಡ್ಡವಾಗಿರುವ ಭಾಗ
ದಿಗುದಂತಿ–ದಿಕ್ಕೆಂಬ ಗಜ
ದಿವಾ–ಹಗಲು
ದಿವಾರಾತ್ರಿ–ಹಗಲಿರುಳು
ದುಗ್ಧ–ಹಾಲು
ದುತ್ತುರ–ಮದ್ದುಗುಣಿಕೆ
ದೃಕ್ಕು–ದೃಷ್ಟಿ
ದೃಷ್ಟ–ದೃಷ್ಟಾಂತ, ನಿದರ್ಶನ
ದೂಟಿಸು–ದೂರಮಾಡು
ಧೂಮ್ರ–ಧೂಮ, ಹೊಗೆ
ಧೂಳಪಾವಡ–ವೀರಶೈವರ ಒಂದು ವ್ರತ
ದೇವಾಂಗ–ರೇಶಿಮೆ ಬಟ್ಟೆ
ದೇಹಾರ–ದೇವರ ಪೂಜೆ
ಧೇನು–ಆಕಳು
ಧ್ಯಾಯ–ಧ್ಯಾನಯೋಗ

ನಟ್ಟುವೆ–ನರ್ತನ
ನವನೀತ–ಬೆಣ್ಣೆ
ನ್ಯಸ್ತ–ಇಡಲ್ಪಟ್ಟ
ನಾಡಕೂಟ–ಸಭೆ
ನಾರಿ–ಹಗ್ಗ
ನಾರಿ–ಬಿಲ್ಲಿನ ದಾರ
ನಾರಿವಾಳ–ತೆಂಗು
ನಾಳೀ–ನಾಡಿ?
ನಿಕ್ಷೇಪ–ಹೂಳಿಟ್ಟ, ಹೂಳಿಟ್ಟ ದ್ರವ್ಯ
ನಿಟಿಲ–ಹಣೆ
ನಿತ್ಯನೈಮಿತ್ತಿಕ–ದೈನಂದಿನ ನಿಯಮ
ನಿಧಾನ–ಹೂಳಿಟ್ಟ ದ್ರವ್ಯ
ನಿಬದ್ಧಿ–ಸಂಬಂಧಿಸಿದ
ನಿಮುರಿ–ಚಾಚಿ, ಎದ್ದು
ನಿರವಯ–ನಿರಾಕಾರ, ದೇಹವಿಲ್ಲದುದು
ನಿರಾಳ–ಅವ್ಯಕ್ತ
ನಿರಿಯಾಣ–ನಿರ್ವಾಣ
ನಿರಿಗೆ–ಸೇರುವಿಕೆ, ರೀತಿ
ನಿರುಪಾಧಿಕ–ತೊಂದರೆಯಿಲ್ಲದವ
ನಿರ್ಮಾಲ್ಯ–ಅಪವಿತ್ರ
ನಿಹಿತ–ಯೋಗ್ಯ
ನೀಕರಿಸಿ–ನಿಃಕರಿಸಿ, ತಾತ್ಸಾರ ಮಾಡಿ
ನೀರ–ಸಂತುಷ್ಟ
ನಿಃಪತಿ–ನಿರ್ಣಯ
ನುಲಿ–ತಿರುವು
ನುರ್ಲಿಕಿ–ನುಲಿಕೆ, ನುಲಿ, ಹುರಿಹಗ್ಗ
ನುಲುಹು–ತಿರುವುವಿಕೆ
ನುಸುಳು–ಕಪಟ, ವಂಚನೆ
ನೆಮ್ಮುಗೆ–ಹೊಂದುವಿಕೆ
ನೆಯಿ–ಜಿಡ್ಡು, ಎಣ್ಣೆ
ನೆರವಿ–ಸಮೂಹ
ನೆರಹು–ಕೂಡಿಸು, ಸೇರಿಸು
ನೆಲಹು–ಹಾಲು ಮೊಸರಿನ ಪಾತ್ರೆ ತೂಗು ಬಿಡುವ ಹಗ್ಗದ ಉಪಕರಣ
ನೇತಿಗಳೆ–ಅಲ್ಲಗಳೆ
ನೋನು–ವ್ರತ ಮಾಡು
ಪಂಕ–ಕೆಸರು
ಪಂಗುಳ–ಹೆಳವ
ಪಂಚಗವ್ಯ–೫ ಜಾತಿಯ ಆಕಳುಗಳು
ಪಂಚಪರ್ವ–ಚತುರ್ದಶಿ ಅಷ್ಟಮಿ, ಅಮಾವಾಸ್ಯೆ, ಪೌರ್ಣಮಿ, ಸಂಕ್ರಾಂತಿ ಎಂಬ ೫ ಹಬ್ಬಗಳು
ಪಂಚಮಠ–ಊರಿನ ಐದು ಅಧಿಕೃತ ಮಠಗಳು
ಪಂಚಮಹಾವಾದ್ಯ–ರಾಜರ ಮುಂದೆ ನುಡಿಸುವ ೫ ಬಗೆಯ ವಾದ್ಯಗಳು
ಪಂಥ–ಪ್ರತಿಜ್ಞೆ
ಪಗುಡಿ–ಕುಚೋದ್ಯ, ಹಾಸ್ಯ
ಪಟ್ಟೆ–ಸನ್ನದು, ಸರಕಾರಿ ದಾಖಲು
ಪಡಡಕ್ಕೆ–ಒಂದು ವಾದ್ಯ
ಪಡಿ–ಬಾಗಿಲಿನ ಕದ, ಪ್ರತಿ, ಹೋಲಿಕೆ
ಪಡಿದೊತ್ತು–ಪ್ರತಿತೊತ್ತು, ತೊತ್ತಿನ ತೊತ್ತು
ಪಡಿಪುಚ್ಚ–ಪ್ರತಿಪ್ರಶ್ನೆ
ಪಡಿಹಾರಿಕೆ–ಬಾಗಿಲು ಕಾಯುವಿಕೆ
ಪಡು–ಸೂರ್ಯಾಸ್ತವಾಗು
ಪಡುವ–ಪಶ್ಚಿಮ
ಪಣ್ಯಾಂಗನೆ–ಸೂಳೆ
ಪರ್ಣ–ಎಲೆ
ಪತಂಗ–ಸೂರ್ಯ
ಪದರು–ರೀತಿ, ಮಡಿಕೆ
ಪದ್ಮಪತ್ರ–ಕಮಲ (ದ ದಳ)
ಪನ್ನಗಫಲ–ಪುನ್ನಾಗಫಲ? ಸುರಹೊನ್ನೆಫಲ
ಪರಮಪುರುಷಾರ್ಥ–ಮೋಕ್ಷ
ಪರಾಕು–ಪ್ರಶಂಸೆ
ಪರಾಪರ–ಪರಾತ್ಪರ, ಪವಿತ್ರತಮ
ಪರಿಭವ–ನರಕ, ಅವಮಾನ, ಮುಂದಿನ ಭವ
ಪರಿಸ್ಪಂದ–ಪರಿವಾರ
ಪಸರ–ಅಂಗಡಿ
ಪಾಕುಳ–ಹೊಲಸು
ಪಾಕಿ–ಪಾಗ, ಹಾಗ, ಒಂದು ಸಣ್ಣ ನಾಣ್ಯ
ಪಾದಪ–ಮರ
ಪಾರದ್ವಾರ–ಪರಸ್ತ್ರೀಲಂಪಟತ್ವ
ಪಾರದ್ವಾರಿ–ವ್ಯಭಿಚಾರಿ
ಪಾಷಂಡಿ–ದೈವವಿರೋಧಿ, ನಾಸ್ತಿಕ
ಪಿಪಾಸೆ–ನೀರಡಿಕೆ
ಪಿಪೀಲಿಕಾ–ಇರುಹೆ
ಪಿಸಿತ–ಮಾಂಸ
ಪಿಸುಣ–ಚಾಡಿಕೋರ
ಪೀತ–ಹಳದಿ
ಪೀಳಿಗೆ–ವಂಶ

ಪುಂಜ–ಗಡುತರ, ರಾಶಿ
ಪುದುವಾಳು–ಹೊಂದಿಕೊಂಡು ಬಾಳು
ಪುನುಗು–ಬೆಕ್ಕಿನ ಜಾತಿಯ ಪ್ರಾಣಿಯಿಂದ ಹೊರಡುವ ಸುಗಂಧ ದ್ರವ್ಯ
ಪುರಾಕೃತ–ಹಿಂದೆ ಮಾಡಿದ
ಪುರೆ–ಒಂದು ಬಗೆಯ ಅನುಕರಣ ಶಬ್ದ
ಪುದಿ–ಹುದುಗು, ಸೇರು
ಪುಷ್ಪವಕಾಣು–ಪ್ರತ್ಯಕ್ಷ ಕಾಣು?
ಪೋತರಾಜ–ಮಾರಿದೇವತೆಯ ಮುಂದೆ ಹಲಗೆ ಬಾರಿಸುತ್ತ ಕುಣಿಯುವವ
ಪ್ರಕ್ಷಾಲನೆ–ತೊಳೆಯುವುದು
ಪ್ರತ್ಯಂಗ–ಪ್ರತಿಬಿಂಬ
ಪ್ರಮಾಳ–ಪ್ರಮಾಣ
ಪ್ರಯ–ಪಯಣ, ಹೊರಡು
ಪ್ರಸೂತ–ಹುಟ್ಟಿದ
ಪ್ರೇದ್ದ–ಅಂತ್ಯಕ್ರಿಯಾಕರ್ಮ
ಫಣಿ–ಹಾವು
ಫಲಪದ–ಫಲಸಿದ್ಧಿ, ಲಾಭ
ಬಚ್ಚಣೆ–ಬಣ್ಣಗಾರಿಕೆ?
ಬಟ್ಟಿತ್ತು–ದುಂಡಾದುದು
ಬಡಿಹಾರಿ–ಬಡಿವಾರಿ?
ಬಣಗು–ಕೀಳು, ಅಲ್ಪ
ಬಧಿರ–ಕಿವುಡ, ಶೂನ್ಯ
ಬಯ್ಕೆ–ನಿಧಾನ
ಬರಿದೊರೆ–ಬರುದೊರೆ, ವ್ಯರ್ಥ
ಬರುಸೂರೆ–ವ್ಯರ್ಥ, ಹಾಳಾಗು
ಬಹಿಷ್ಕರಿಸಿ–ಪ್ರಕಟವಾಗಿ
ಬಳ್ಳ–ಅಳೆಯುವ ಸಾಧನ
ಬಾಜಿಸು–ಬಾರಿಸು, ಹೊಡೆ
ಬಾತೆ–ಬಾರ್ತೆ, ಪ್ರಯೋಜನ
ಬಾತೆಗೆಟ್ಟ–ಅಪ್ರಯೋಜಕ
ಬಾದಳ–ಬಾದಣ, ಬೆಳಕಿಂಡಿ
ಬಾಯಾಲು–ಆರ್ತನಾದ
ಬಾವನ್ನವೀರರು–೫೨ ಜನ ವೀರರು
ಬಿಡುಗಡೆಯ ಸ್ತ್ರೀ–ಉಪಪತ್ನಿ
ಬಿಡುಮುಡಿ–ಬಿಚ್ಚಿದ ಮುಡಿ, ಕೊನೆ
ಬಿಡುಮುತ್ತು–ದುಂಡಾದ ಮುತ್ತು
ಬಿಡೆ–ಬಿಡುವಿಕೆ
ಬಿಣ್ಣು–ಪುಷ್ಟತೆ
ಬಿತ್ತಪಟ್ಟ–ಬಿತ್ತುವ ಸ್ಥಳ
ಬಿತ್ತು–ಬೀಜ
ಬಿನ್ನಾಣ–ಚಾಪಲ್ಯ, ವಿಲಾಸ
ಬಿನುಗು–ನೀಚ
ಬಿಸುರಿ–ಹೊಂದಿಕೊಂಡು
ಬೀತ–ಒಡೆದ
ಬುಕ್ಕಹಿಟ್ಟು–ಬುಕೀಟು, ಕುಂಕುಮದಂಥ ವಸ್ತು
ಬುದ್ಧಲಿಕೆ–ತುಪ್ಪ ತುಂಬುವ ಚರ್ಮದ ಚೀಲ
ಬುದ್ಬುದ–ನೀರಗುಳ್ಳೆ
ಬೂರ–ಬೂರದ ಮರ
ಬೆಗಡಿಸು–ಭಯಗೊಳಿಸು
ಬೆಚ್ಚು–ಬೆಸೆ, ಸೇರು
ಬೆಟ್ಟು–ಒತ್ತು
ಬೆಮ್ಮರ–ದೊಡ್ಡಮರ?
ಬೆರಟು–ಕೆದರು
ಬೆಳ್ಳಿ–ಬಿಳಿಯ ಎತ್ತು
ಬೆಳ್ಳಿಗೆ–ಒಂದು ಜಾತಿಯ ಆಕಳು
ಬೇಕರಿ–ಬಹಳ ಕರಿಕಾಗು
ಬೇಗಾರ–ನಿರುಪಯೋಗಿ ವಸ್ತು
ಬೇರು–ಸಂಬಂಧ
ಬೇಳಾದ–ಸುಟ್ಟುಕೊಂಡ
ಬೇಳುಗರೆ–ಭ್ರಮಗೊಳಗಾಗು, ಕಿರುಚು
ಬೈಕೆ–ಮುಚ್ಚಿಟ್ಟ ವಸ್ತು
ಬೊಕ್ಕಣ–(ಕುದುರೆಗೆ ಧಾನ್ಯ ತಿನ್ನಿಸುವ ಚೀಲ)
ಬೊಬ್ಬುಲಿ–ಜಾಲಿಗಿಡ
ಬೋವ–ಸೇವಕ
ಬೋಸರಗಿತ್ತಿ–ವ್ಯಭಿಚಾರಸ್ತ್ರೀ, ಸೂಳೆ
ಬ್ರಹ್ಮೇತಿಕಾರಿ–ಬ್ರಾಹ್ಮಣ ಹತ್ಯೆ ಮಾಡುವವ
ಭಂಗಿ–ಅಮಲು ತರುವ ವಸ್ತು
ಭರಿತಾರ್ಪಣ–ಸೂಕ್ತವಾಗಿ ತುಂಬಿದ ನೈವೇದ್ಯ
ಭರ್ತ–ಪೋಷಕ, ಸಂರಕ್ಷಕ
ಭಾಂಡ–ಅಡಿಗೆ ಮಾಡುವ ಪಾತ್ರೆ
ಭಾಜನ–ಊಟದ ತಟ್ಟೆ
ಭಾಷಾಂಗ–ನಾಟಕದ ಸೂಕ್ತಭಾಷೆ ಹಾಡು
ಭಾಳ–ಹಣೆ
ಭಾಳಾಂಬಕ–ಶಿವ
ಭುಂಜಕ–ಹೊಟ್ಟೆ ಹೊರೆಯಲು ಜೀವಿಸಿದವ
ಭೂತಶೇಷ–ಪಂಚಭೂತಗಳಿಗೆ ನೀಡಿದ ಬಲಿಯ ಶೇಷಾನ್ನ

ಭೂಪುಡಿ–ಮಣ್ಣು
ಭೂರಿಗೀಡಾಗು–ಅತಿಶಯವಾಗು
ಭೇಕ–ಕಪ್ಪೆ
ಭೈಷಜ್ಯ–ಔಷಧ
ಭ್ರಾತ–ಪೋಷಕ, ಒಡೆಯ
ಭ್ರೂ–ಹುಬ್ಬು
ಭ್ರೂಣಹತ್ಯೆ–ಗರ್ಭದೊಳಗಿನ ಶಿಶುವಿನ ನಾಶ
ಭ್ರೂಮಧ್ಯ–ಎರಡು ಹುಬ್ಬುಗಳ ಮಧ್ಯಸ್ಥಾನ
ಮಂಚಿಕೆ–ಹೊಲ ಕಾಯಲು ಹಾಕಿರುವ ಎತ್ತರದ ಅಟ್ಟಣೆ
ಮಂದಿರವಾಡ–ಮನೆ
ಮಂಡುಕ–ಕಪ್ಪೆ
ಮಂತಣದ ಗಿರಿ–ಮಂದರಗಿರಿ
ಮಚ್ಚ–ಒರೆ ಹಚ್ಚುವಿಕೆ, ಕತ್ತರಿಸುವ ಸಾಧನ
ಮಣಿಮುಕುರ–ಮಣಿಖಚಿತ ಕನ್ನಡಿ
ಮಣಿಹ–ಕರ್ತವ್ಯ
ಮತ್ಸ್ಯದು ಹುಣ್ಣು–ಒಂದು ಪ್ರಕಾರದ ಹುಣ್ಣು
ಮದಮಧು–ಮದವನ್ನು ತರಿಸುವ ಜೇನುತುಪ್ಪ
ಮದುವಳಿಗ–ವರ
ಮಯಣ–ಮೇಣ
ಮರೀಚ–ಕಿರಣ
ಮರುವಾಳ–ಪುನರ್ಜನ್ಮ
ಮರೀಚಿಕಾ–ಮೃಗಜಲ
ಮರುಜವಣಿ–ಬದುಕಿಸುವ ಮಣಿ
ಮಲಭಾಂಡಜೀವಿ–ಮಲತ್ರಯದಲ್ಲಿ ತೊಳಲುವ ವ್ಯಕ್ತಿ
ಮಲಯಜ–ಶ್ರೀಗಂಧ
ಮಸುಳು–ವಂಚನೆ
ಮಹಂತು–ಮಹತ್ತು, ಗಣ
ಮಾಂಜಿಷ್ಟ–ಮಾಂಜಿಷ್ಠ, ಕೆಂಪುವರ್ಣ
ಮಾಂದಿರ–ಮಂದವಾದ, ದಟ್ಟವಾದ
ಮಾಜದೆ–ಮರೆಮಾಚದೆ
ಮಾಟ–ಮಾಡುವಿಕೆ
ಮಾನ್ಯ–ಮಾನ್ಯವಾಗಿ ಬಂದ ಭೂಮಿ
ಮಾಯಾವಾದಿ–ಅದ್ವೈತಿ
ಮಾರಾಂತ–ಎದುರಾದ
ಮಾರ್ಜಾಲ–ಬೆಕ್ಕು
ಮಿಂಡಗುದ್ದಲಿ–ಶೆಟ್ಟಿಗಳಲ್ಲಿ ಒಂದು ವರ್ಗ
ಮಿಗು–ಅಧಿಕವಾಗು, ಹದಕ್ಕೆ ಬರು
ಮಿಟ್ಟಿ–ಹಣೆಗೆ ಹಚ್ಚಿಕೊಳ್ಳುವ ಪವಿತ್ರ ಮಟ್ಟು
ಮಿಟ್ಟಿ–ಹೆಂಟೆ
ಮುಂಡಿಗೆ–ಕಟ್ಟಿಗೆಯ ದೊಡ್ಡ ತುಂಡು, ಸಮಸ್ಯೆ, ಸವಾಲು
ಮುಂದಲೆಯ ಕೊಡು–ತಲೆಯ ಮುಂಭಾಗದ ಕೂದಲನ್ನು ಕಿತ್ತಿ ಅರ್ಪಿಸು
ಮುಖವಾಡ–ಭವಿಗಳು ನೋಡಬಾರದೆಂದು ನಂದಿವಿಗ್ರಹ ಮುಖಕ್ಕೆ ಹಾಕಿಕೊಳ್ಳುವ ವ್ರತ
ಮುಚ್ಚಳು–ಬಾಗಿಲ ಫಲಕ
ಮುಡುಹ–ಹೆಗಲು
ಮುದಿಡು–ಮುದ್ದಿಮಾಡು, ಉಡುಗಿಸು
ಮುಯ್ಯಾನು–ಹೆಮ್ಮೆಪಡು
ಮುರುಗು–ಮುರಿಯುವಿಕೆ
ಮುಳ್ಳುಗುತ್ತು–ಮುಳ್ಳನ್ನು ಚುಚ್ಚು
ಮೂಳಿ–ಕಿವಿಯಿಲ್ಲದವಳು
ಮೂರ್ಧ್ನಿ–ತಲೆ
ಮೂವಿಧಿ–ಮೂರು ಪಟ್ಟು ಶನಿಕಾಟ?
ಮೂಷಕ–ಇಲಿ
ಮೂಷಕರು–ಇಲಿಯಂತೆ ಛಿದ್ರಿಸುವವರು
ಮೃಗನಾಭಿ–ಕಸ್ತೂರಿ
ಮೆಟ್ಟು–ತೂರುವುದಕ್ಕಾಗಿ ಮೇಲೆ ನಿಲ್ಲಲು ಉಪಯೋಗಿಸುವ ೩ ಕಾಲಿನ ಸಾಧನ
ಮೆತ್ತೆ–ತಲೆದಿಂಬು
ಮೇಗಾಡಿ–ಮೇಗಡಿ? ಅಡಿಯ ಮೇಲ್ಭಾಗ
ಮೇರಳ–ಮೇಗಣ
ಮೇಲುದ–ಹೊದಿಕೆ
ಮೇಲುವರಿ–ಮೇಲೆ ಧಾವಿಸು
ಮೇಳಿ–ಕೂರಿಗೆ ಇತ್ಯಾದಿಗಳನ್ನು ಹಿಡಿಯಲು ಮಾಡಿದ ಉಪಕರಣ
ಮೈಯಕ್ಕು–ಮೈಗೆ ಒಗ್ಗು
ಮೈವಾಸನ–ಹಾಸಿಗೆ?
ಮೊಗಹ–ಹಾಕುವುದು, ತೆಗಹದ ವಿರುದ್ಧಪದ
ಮೊಗೆ–ತುಂಬು
ಮೋಪುಗಾರ–ಕಟ್ಟಿಗೆ ಕೊರೆಯುವವ?
ಯೋಜನ–ಅಳತೆಯ ಒಂದು ಪ್ರಮಾಣ
ರಜ್ಜು–ದಾರ
ರಾಣಿವಾಸ–ರಾಣಿ, ಶಯ್ಯಾಗೃಹ
ರಾಮಠ–ಇಂಗು, ಹಿಂಗು
ರೀತಿಕೆ–ಹಿತ್ತಾಳೆ, ಕಂಚು

ರೇತ–ಪುರುಷನ ವೀರ್ಯ
ರೋಧನ–ವಿಘ್ನ
ರೋಹ–ಏರುವಿಕೆ
ಲಠಿಂಡ–ನೀಚ, ಜಗಳಗಂಟ
ಲಂದಣಿಗ–ಅಡಿಗೆಯವ
ಲಂಪಟ–ವಿಷಯಾಸಕ್ತ, ಕಾಮುಕ
ಲಚ್ಚಣ–ಧಾನ್ಯ ಅಳೆಯುವ ಸಾಧನ?
ಲಜ್ಜೆ ಮಾರಿ–ನಾಚಿಕೆಗೇಡಿ
ಲಹರಿ–ಕಾಂತಿ
ಲಾಗು–ಚಾಪಲ್ಯ, ಕೌಶಲ
ಲಿಂಗಮುದ್ರೆ–ಲಿಂಗಮುದ್ರೆಯ ಕಲ್ಲು
ಲಿಂಗಾಚಾರ–ಶುದ್ಧಬದುಕು
ಲೀಲೆವಾರ್ತೆ–ಚೇಷ್ಟೆಯ ಸುದ್ದಿ
ಲೆಂಕ–ಯೋಧ
ಲೆಂಗಿ–ತೊತ್ತು
ಲೆಕ್ಕವಟ್ಟಂತೆ–ಲೆಕ್ಕಕ್ಕೆ ತಕ್ಕಂತೆ
ಲೇಪ–ಸೌಂದರ್ಯಕ್ಕಾಗಿ ಲೇಪಿಸು, ಎರಕಹೊಯ್ಯು
ಲೊಟ್ಟಿ–ಪೊಳ್ಳು, ಜೊಳ್ಳು
ಲೋಗರ–ಅನ್ಯರು, ಜನಸಮೂಹ, ಸಾಮಾನ್ಯರು
ವಂಶ–ಬಿದಿರು
ವಟಪತ್ರ–ಆಲದ ಎಲೆ
ವಡಬ–ವಡಬಾಗ್ನಿ, ನೀರ್ಗಿಚ್ಚು
ವನಚರ–ಅರಣ್ಯಸಂಚಾರಿ
ವಪು–ಶರೀರ
ವಮನ–ವಾಂತಿ
ವರುಣ–ಮಳೆಯ ದೇವತೆ
ವರ್ಮ–ಮರ್ಮ
ವಶ್ಯ–ವಶೀಕರಣ ವಿದ್ಯೆ
ವಾಕ ಪಾಕವಾಗು–ಮಾತು ರುಚಿಯಾಗು
ವಾಜಿ–ಕುದುರೆ
ವಾರಿ–ನೀರು
ವಾಮನ–ವಮನ, ವಾಂತಿ
ವಾಯುಪ್ರಾಣಿ–ಭೂತದೇಹಿ
ವಾರಿ–ನೀರು
ವಾರಿಕಲ್ಲು–ಆಣೆಕಲ್ಲು
ವಾಂಸ–ವಂಶ, ಕೊಳಲು
ವಾಳುಕ–ಉಸುಬು
ವಿಕರಿಸು–ವಿಕಾರಗೊಳ್ಳು
ವಿಚ್ಛಂದ–ಕತ್ತರಿಸುವಿಕೆ
ವಿಡಂಗ–ವಿಶೇಷ ವಂಚನೆ
ವಿದಾಂತ–ಡೊಂಬ?
ವಿಧಾತ–ಡೊಂಬ?
ವಿರಳ–ತೂತು
ವಿರಾಳ–ತೂತು
ವಿರಾಳ–ವ್ಯಕ್ತವ್ಯಕ್ತ?
ವಿರಿಂಚಿ–ಬ್ರಹ್ಮ
ವಿಷಜ–ಬಿಸಜ, ಕಮಲ
ವಿಷಧರ–ಸೂರ್ಯ?
ವಿಷ್ಟಿಸು–ಮಲವಿಸರ್ಜಿಸು
ವಿಷ್ಣುಕಾಂತಿ–ವಿಷ್ಣುಕಾಂತಿ ಹೆಸರಿನ ಎಲೆ
ವಿಸರ್ಜನ–ಬಿಡುವಿಕೆ
ವಿಹಂಗ–ಪಕ್ಷಿ
ವೀಸ–ಸಣ್ಣ ನಾಣ್ಯ
ವೆಜ್ಜ–ತೂತು
ವೇಣು–ಬಿದಿರು
ವೇಧಿಸು–ಅಪ್ಪಳಿಸು, ಆವರಿಸು
ವೇಧೆ–ಇಷ್ಟಲಿಂಗದೀಕ್ಷೆ
ವೇಳೆ–ವೇಲಾ, ಮೇರೆ
ವ್ಯವಧಾನ–ವಿರಾಮ
ವ್ರತದಾಳೀ–ವ್ರತ ಧರಿಸುವಿಕೆ
ವ್ರತಭಾವಿ–ವ್ರತಸ್ಥ
ವ್ಯಾಪ್ತಿ–ವ್ಯಾಪಿಸಿಕೊಂಡ ವಿಕಾರಗಳು
ವ್ಯೋಮ–ಆಕಾಶ
ಶಂಖದ ಮಣಿ–ಕಪ್ಪೆಚಿಪ್ಪಿನ ಮಣಿ
ಶಕ–ಶಾಖ? ಕಾವು
ಶರಸಂಧಾನ–ಬಾಣ ಹೂಡುವಿಕೆ
ಶರ್ವ–ಶಿವ
ಶಶಕ–ಮೊಲ
ಶಶಾಂಕ–ಚಂದ್ರ
ಶಶಿಕಾಂತದ ಶಿಲೆ–ಚಂದ್ರಕಾಂತ ಶಿಲೆ
ಶಶಿಶಿಲೆ–ಚಂದ್ರಕಾಂತದ ಶಿಲೆ
ಶಾಪಹತ–ಶಾಪದಿಂದ ಪೀಡಿತನಾದವ
ಶಾಸ್ತ್ರವಿತ್ತು–ಶಾಸ್ತ್ರಬಲ್ಲಿದ
ಶಿಖಿ–ಶಿಖೆ, ಜುಟ್ಟು
ಶಿವದಾನ–ಮಜ್ಜಿಗೆ
ಶಿಷ್ಟೋದನ–ಮಿಕ್ಕ ಅನ್ನ
ಶುಕ್ಲ–ಪುರುಷನ ವೀರ್ಯ
ಶೋಣಿತ–ಸ್ತ್ರೀಯ ರಜಸ್ಸು

ಶೋಣಿತ–ರಕ್ತ
ಶ್ವಪಚ–ನಾಯಿಯ ಮಾಂಸ ತಿನ್ನುವ ಶೂದ್ರ
ಶ್ರಾವಕ–ಜೈನಧರ್ಮೀಯ
ಶ್ರೋತ್ರ–ಕಿವಿ
ಸಂಕುಲ–ಸಮೂಹ
ಸಂಘಟ್ಟ–ಹೊಂದಿಕೆ
ಸಂಘಟ್ಟುವರು–ಗುಂಪು ಮಾಡುವರು
ಸಂಚ–ಉಪಾಯ, ಯುಕ್ತಿ
ಸಂಚಿತ–ಹೂಡಿಹಾಕಲ್ಪಟ್ಟ
ಸಂತ–ಸಂತುಷ್ಟ, ಸಮಾಧಾನಿ
ಸಂಪುಟ–ಪುಸ್ತಕ
ಸಂಬೋಳಿ–ಶೂದ್ರರು ಗ್ರಾಮವನ್ನು ಪ್ರವೇಶಿಸುವಾಗ ಕೂಗುವ ಶಬ್ದ
ಸಂವಿದಾತ್ಮ–ಜ್ಞಾನಿ
ಸಕಟ–ಶಕಟ, ಚಕ್ಕಡಿ
ಸಕಲಾತಿ–ರೇಶಿಮೆ ಬಟ್ಟೆ
ಸಕೀಲ–ರಹಸ್ಯ
ಸದಮದ–ಅತಿಯಾದ ಸೊಕ್ಕು?
ಸದೆ–ಕಸ, ಹುಲ್ಲು
ಸದ್ಯೋನ್ಮುಕ್ತಿ–ತಕ್ಷಣ ಮೋಕ್ಷ
ಸಮಯ–ಸಿದ್ಧಾಂತ
ಸಯದಾನ–ಆಹಾರಧಾನ್ಯ, ರುಚಿಯಾದ ಅಡಿಗೆ
ಸರ–ಸ್ವರ, ಧ್ವನಿ
ಸರಗೋದ–ಸರಮಾಡಿದ
ಸರಳು–ಬಾಣ
ಸರ್ವಾಂಗವಾಡ–ಭವಿಗಳು ನೋಡಬಾರದೆಂದು ದೇಹಕ್ಕೆ ಮುಸುಕು ಹಾಕಿಕೊಳ್ಳುವ ವ್ರತ
ಸಲಾಕಿ–ಬೆತ್ತ, ಕಬ್ಬಿಣದ ಕಂಬಿ
ಸವಿತ–ಸವಿತೃ, ಸೂರ್ಯ
ಸವಿಲೇಪ–ಸವಿಯನ್ನು ಲೇಪಿಸುವಿಕೆ
ಸಾವಯ–ಅವಯವ ಸಹಿತ, ಸರೂಪ
ಸಾರ–ಭೂಮಿಯೊಳಗಿನ ಜೀವಪೋಷಕ ದ್ರವ್ಯ
ಸಾರತ–ಸಂತೋಷ
ಸಾಳಿವನ–ಬತ್ತದ ಸಸಿ
ಸಿದ್ಧಾಯ–ತೆರಿಗೆ
ಸೀತಾಳ–ನೀರು
ಸೀರೆ–ಚೀರ, ಬಟ್ಟೆ
ಸುಕೃತ–ಪುಣ್ಯ
ಸುನಿ–ಶುನಿ, ನಾಯಿ
ಸುರಂಗ–ಒಳ್ಳೆಯ ಬಣ್ಣ
ಸುರಾಳ–ವ್ಯಕ್ತ
ಸುವಿದ್ಯೆ–ಸುಜ್ಞಾನ, ನಿರ್ಮಾತೃತ್ವಯ
ಸುವಿಧಾನ–ಸುಯ್ದಾನ, ಎಚ್ಚರಿಕೆ, ಕಾವಲು
ಸುಷುಪ್ತಿ–ಗಾಢನಿದ್ರೆ
ಸುಸರ–ನೇರ, ಸರಿ
ಸೂರು–ಇಳಿಜಾರು ಚಪ್ಪರ
ಸೂರೆ–ದುಂದು, ಅಪವ್ಯಯ
ಸೆರೆ–ಕಟ್ಟು, ನಿಯಮ
ಸೆಳೆಕೋಲು–ಬಾರಕೋಲು? ಉದ್ದವಾದ ಕೋಲು
ಸೇದು–ಎಳೆ
ಸೈತಿಡು–ವ್ಯವಸ್ಥೆ ಮಾಡು
ಸೊನಗ–ನಾಯಿ
ಸೋವು–ಹೊಡೆ, ಎಬ್ಬಿಸು
ಸೌರ–ಸೂರ್ಯೋಪಾಸಕ
ಸೌರಂಭ–ಸಮಾರಂಭ, ಸಂಭ್ರಮ
ಸ್ರಕ್–ಹೂಮಾಲೆ
ಸ್ರವಿಸು–ಒರಸು, ತಟಕಿಕ್ಕು
ಸ್ಥಿರಾಯು–ಚಿರಂಜೀವಿ
ಸ್ಪ್ರಹೆ–ಆಸೆ, ಮಾತ್ಸರ್ಯ
ಹಂಗ–ಒಂದು ಬಗೆಯ ಹಕ್ಕಿ
ಹಂದೆ–ಹೇಡಿ
ಹಂಸಪತಿ–ಬ್ರಹ್ಮ
ಹಗಿನ–ಗಿಡದ ಅಂಟು
ಹಡವು–ದುರ್ಗಂಧ, ಹೊಲಸು
ಹಡೆ–ಪಡೆ, ದೊರಕಿಸಿಕೊಳ್ಳು
ಹಣ–ಹಾಗಕ್ಕಿಂತ ದೊಡ್ಡ ನಾಣ್ಯ
ಹತ್ತೆ ಸಾರು–ಸಮೀಪ ಬರು
ಹದಿಕೆ–ಪಾಲು?
ಹಮ್ಮು–ಅಹಂ, ಗರ್ವ
ಹರಣ–ಪ್ರಾಣ
ಹರಿ–ತೂತು
ಹರಿತ–ಹಸಿರು
ಹಲ್ಲಣಿಸು–ಧರಿಸು
ಹವಣು–ಮಿತಿ, ಪ್ರಮಾಣ
ಹಳಚು–ಅಪ್ಪಳಿಸು, ತಾಗು
ಹಾಗ–ಸಣ್ಣ ನಾಣ್ಯ
ಹಾವಚೆ–ನೀರಿನಲ್ಲಿ ಬೆಳೆವ ಹಾವಸೆ?

ಹಾವುಗೆ–ಪಾದುಕಾ
ಹಾಸ–ಪಾಶ, ಬಂಧನ
ಹಾಹೆ–ಶರೀರ, ದೇಹ
ಹಾಹೆ–ಗೊಂಬೆ?
ಹಿಡಿ–ಹಿಡಿಕೆ
ಹಿಡಿಯೊಡೆದು–ಕೈತಪ್ಪಿ
ಹಿನ್ನೆ–ಸೂಜಿಯ ಕೆಳಭಾಗ
ಹಿಪ್ಪೆ–ವ್ಯರ್ಥವಸ್ತು
ಹಿರಣ್ಯಪತಿ–ಸಂಪತ್ತಿನ ಒಡೆಯ
ಹಿಳಿಕು–ಬಾಣದ ಹಿಂಭಾಗ
ಹುಗಿಲು–ಕಟ್ಟಿಗೆಯಲ್ಲಿ ತೋಡಿದ ತೂತು
ಹುಡುಕುನೀರು–ಸುಡುನೀರು
ಹುಡುಪ–ಮರವೆ? ತಮೋಗುಣ?
ಹುಲುಬಡುವ–ಪರಬ್ರಹ್ಮಸ್ವರೂಪ
ಹುಲುಮೊರಡಿ–ಸಾಮಾನ್ಯ ಬೆಟ್ಟ
ಹೂಣೆಹೊಗು–ಕಾಳಗದ ಕಣಕ್ಕಿಳಿ
ಹೇರಂಡ–ಔಡಲ
ಹೊಡಗೆಡೆ–ಹೊರಳು, ಬೀಳು
ಹೊಡವಡು–ನಮಸ್ಕರಿಸು
ಹೊಡೆ–ಅದೇ ಆಗ ಹುಟ್ಟಿದ ತೆನೆ
ಹೊಡೆಗಿಚ್ಚು–ಅಪ್ಪಳಿಸುವ ಕಿಚ್ಚು
ಹೊಡೆವಡು–ನಮಸ್ಕರಿಸು
ಹೊಯಿಲು–ಹೊಡೆಯುವಿಕೆ
ಹೊರತಾಯ–ಹೊರಗೆ
ಹೊರತೆ–ಬಾಹ್ಯ
ಹೊರವಂತೆ–ಹೊರೆವಂತೆ, ರಕ್ಷಿಸುವಂತೆ
ಹೊರೆ–ಸಮೀಪ
ಹೊಲಬು–ರೀತಿ
ಹೊಲಬುದಪ್ಪು–ದಾರಿತಪ್ಪು
ಹೊಲ್ಲ–ಕೆಟ್ಟದ್ದು
ಹೊಲ್ಲೆಹ–ಕೆಟ್ಟ
ಹೊಳಚು–ಹೊಳಪಾಗು, ಪ್ರಕಾಶಿಸು
ಹೋರಟೆ–ಹೋರಾಟ
ಹೊಲಬು–ರೀತಿ
ಹೊಳವಳಿ–ತವಕ?
ಹೋಕಿನ ಮಾತು–ವ್ಯರ್ಥ ಮಾತು
ಹೋರು–ಶ್ರಮಪಡು, ಗಾಸಿಯಾಗು
ಹೋರು–ಪ್ರಯತ್ನಿಸು
ಹೋಳು–ಉಪ್ಪಿನ ಕಾಯಿ?

❖❖

*

ವಚನಗಳ ಅಕಾರಾದಿ

ಅರಿವಿನ ಮಾರಿತಂದೆಗಳ ವಚನ

ಅವಸರದ ರೇಕಣ್ಣಗಳ ವಚನ

❖❖

*

ಆಕರ ಗ್ರಂಥಗಳು

ಪ್ರಕಟಿತ

ಅದ್ವೈತಾನಂದದ ವಚನಗಳು
ಸಂ: ಡಾ. ಬಿ.ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೮೩(ಪ್ರ. ಆ.)

ಅನುಭಾವಜ್ಞಾನ ಸಾರಾಮೃತ ಸಂಪಾದನಾಸ್ತೋತ್ರ
ಸಂಪಾದನೆ ಪರ್ವತಾಚಾರ್ಯ
ಸಂ: ಶ್ರೀ ಬಿ.ಆರ್. ಹೂಗಾರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೮೯(ಪ್ರ. ಆ.)

ಅಷ್ಟಾವರಣದ ವಚನಗಳು
ಗುಳಮಲೆಯ ಗುರುಶಾಂತದೇವರು
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೩೮(ಪ್ರ. ಆ.)

ಆಚರಣೆಯ ಸಂಬಂಧದ ವಚನಗಳು
ಸಂಪಾದನೆಯ ಹರತಾಳ ಚೆನ್ನನಂಜಯದೇವರು
ಸಂ: ಪಿ.ಎಂ. ಗಿರಿರಾಜು
ಪ್ರ: ಶರಣಸಂತಾನ ಸಂಪಾದನ, ಶರಣಸಂತಾನ (ತ್ರೈಮಾಸಿಕ) ೪೪೭-ಸಂತೇಪೇಟೆ, ಮೈಸೂರು ೧೯೮೨ (ಪ್ರ.ಆ.)

ಆಚರಣೆಯ ಸಂಬಂಧದ ವಚನಗಳು
ಸಂಪಾದನೆಯ ಸಿದ್ಧವೀರೇಶ್ವರದೇವರು
ಸಂ: ಪಿ.ಎಂ. ಗಿರಿರಾಜು
ಪ್ರ: ಶರಣಸಂತಾನ ಸಂಪಾದನ, ಶರಣಸಂತಾನ (ತ್ರೈಮಾಸಿಕ)೪೪೭-ಸಂತೇಪೇಟೆ, ಮೈಸೂರು ೧೯೮೦ (ಪ್ರ.ಆ.)

ಎಲ್ಲ ಪುರಾತನ ವಚನ
ಕುಂತೂರು ಮಹತ್ತದೇವರು
(ಇದು ವಚನಸಂಕಲನ ಸಂಪುಟ-೨ ಈ ಕೃತಿಯ ಒಂದು ಭಾಗ)
ಸಂ: ಪ್ರೊ. ಜಿ. ಎ. ಶಿವಲಿಂಗಯ್ಯ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೯೦(ಪ್ರ. ಆ.)

ಎಲ್ಲ ಪುರಾತರ ಸ್ತೋತ್ರದ ವಚನಗಳು
ಸಂ: ಡಾ ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೮೮(ಪ್ರ. ಆ.)

ಏಕೋತ್ತರಶತಸ್ಥಲ
ಮಹಾಲಿಂಗದೇವರು
ಸಂ: ಎಸ್.ಎಸ್. ಭೂಸನೂರಮಠ
ಪ್ರ: ಶ್ರೀ ನಿ.ಪ್ರ. ಸ್ವ. ಶಿವಬಸವಮಹಾಸ್ವಾಮಿಗಳು, ರುದ್ರಾಕ್ಷಿಮಠ
ನಾಗನೂರ, ಹನುಮನ ಬೀದಿ ಬೆಳಗಾವಿ ೧೯೮೮ (ಪ್ರ. ಆ.)

ಏಕೋತ್ತರಶತಸ್ಥಲ
ಸಿದ್ಧಲಿಂಗ
ಸಂ: ಫ.ಗು. ಹಳಕಟ್ಟಿ
ಪ್ರ. ಶಿವಾನುಭವ ಗ್ರಂಥಮಾಲೆ. ವಿಜಾಪೂರ ? (ಪ್ರ. ಆ.)

ಗಣಭಾಷಿತ ರತ್ನಮಾಲೆ
ಗುಬ್ಬಿಯ ಮಲ್ಲಣ್ಣ
ಸಂ: ಶ್ರೀ ಪ್ರಭುಸ್ವಾಮಿಗಳು
ಪ್ರ: ಶ್ರೀ ಬಾಲಲೀಲಾ ಮಹಾಸ್ವಾಮಿಶಿವಯೋಗೀಶ್ವರ ಗ್ರಂಥಮಾಲೆ, ೧೯೪೮ (ಪ್ರ.ಆ.)

ಚಿತ್ಕ್ರಿಯಾ ಸಂಗ್ರಹ
ಜಿಗುನಿ ಮರುಳದೇವರು
(ಇದು 'ಜಿಗುನಿ ಮರುಳದೇವರ ಕೃತಿಗಳು' ಈ ಕೃತಿಯ ಒಂದು ಭಾಗ)
ಸಂ: ಡಾ. ಎಸ್. ವಿದ್ಯಾಶಂಕರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೮೩(ಪ್ರ. ಆ.)

ಚಿದ್ಭಸ್ಮಮಣಿಮತ್ರಮಹಾತ್ಮೆಯ ಸ್ಥಲದ ವಚನ
ಜಟಾಶಂಕರದೇವರು
(ಇದು ವಚನ ಸಂಕಲನ ಸಂಪುಟ -೧ ಈ ಕೃತಿಯ ಒಂದು ಭಾಗ)
ಸಂ: ಡಾ ಬಿ.ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೯೦(ಪ್ರ. ಆ.)

ಚಿದೈಶ್ವರ್ಯ ಚಿದಾಭರಣ
ಗುರುಸಿದ್ಧದೇವರು
ಸಂ: ಪಿ.ಎಂ. ಗಿರಿರಾಜು
ಪ್ರ: ಶರಣ ಸಂತಾನ ಸಂಪಾದನ, ಶರಣಸಂತಾನ (ತ್ರೈಮಾಸಿಕ)
೪೪೭–ಸಂತೇಪೇಟೆ, ಮೈಸೂರು, ೧೯೮೫(ಪ್ರ. ಆ.)

ಚೆನ್ನಬಸವೇಶ್ವರದೇವರ ಸ್ತೋತ್ರದ ವಚನಗಳು
ಸಂ: ಜಿ.ಎ. ಶಿವಲಿಂಗಯ್ಯ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೯೧(ಪ್ರ. ಆ.)

ಜಂಗಮಸ್ಥಲದ ಆಚರಣೆಯ ನಿರ್ಣಯದ ವಚನಗಳು
(ಇದು ವಚನ ಸಂಕಲನ ಸಂಪುಟ–೧ ಈ ಕೃತಿಯ ಒಂದು ಭಾಗ)
ಸಂ: ಡಾ. ಬಿ.ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೯೦(ಪ್ರ. ಆ.)

ನಿರಸನದ ವಚನಗಳು
(ಇದು ವಚನ ಸಂಕಲನ ಸಂಪುಟ–೧ ಈ ಕೃತಿಯ ಒಂದು ಭಾಗ)
ಸಂ: ಡಾ ಬಿ.ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೯೦(ಪ್ರ. ಆ.)

ಪರಮಮೂಲಜ್ಞಾನ ಷಟ್‌ಸ್ಥಲ
ಚಿಕ್ಕವೀರಣ್ಣೊಡೆಯ
ಸಂ: ಡಾ. ಎಂ.ಎಸ್. ಸುಂಕಾಪೂರ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೭ (ಪ್ರ. ಆ.)

ಪ್ರಸಾದಿಸ್ಥಲದ ವಚನಗಳು
ಸಂ: ಡಾ. ಎಂ.ಎಸ್. ಸುಂಕಾಪೂರ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೭ (ಪ್ರ. ಆ.)

ಬಸವಸ್ತೋತ್ರದ ವಚನಗಳು-೧
ಬೋಳಬಸವರಾಜದೇವರು
ಸಂ: ಎಂ. ಎಂ. ಕಲಬುರ್ಗಿ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬(ಪ್ರ. ಆ.)

ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ
ಕರಸ್ಥಲದ ಮಲ್ಲಿನಾಥ ಒಡೆಯ
ಸಂ:ಡಾ. ಆರ್.ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೭ (ಪ್ರ. ಆ.)

ಭಕ್ತ್ಯಾನಂದಸುಧಾರ್ಣವ
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೮೫(ಪ್ರ. ಆ.)

ಮಿಶ್ರಸ್ತೋತ್ರದ ವಚನಗಳು
ಸಂಪಾದನೆಯ ಶ್ರೀ ಚೆನ್ನಂಜೇದೇವರು
ಸಂ: ಪ್ರಭುಸ್ವಾಮಿಗಳು ಹೊಸಹಳ್ಳಿ
ಪ್ರ: ಬೂದಿಸ್ವಾಮಿ ಸಂಸ್ಥಾನಮಠ, ಹೊಸಹಳ್ಳಿ

ಮಿಶ್ರಸ್ತೋತ್ರದ ವಚನಗಳು
ಎಳಮಲೆಯ ಗುರುಶಾಂತದೇವರು
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೮೩(ಪ್ರ. ಆ.)

ಲಿಂಗಚಿದಮೃತಬೋಧೆ
ಶಾಂತಬಸವೇಶ್ವರ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫ (ಪ್ರ. ಆ.)

ಲಿಂಗಲೀಲಾವಿಲಾಸ ಚಾರಿತ್ರ
ಕಲ್ಲುಮಠದ ಪ್ರಭುದೇವರು
ಸ: ಸಂ. ಶಿ. ಭೂಸನೂರಮಠ
ಪ್ರ: ಶ್ರೀ ಬಾಲಲೀಲಾ ಮಹಾಂತಶಿವಯೋಗೀಶ್ವರ ಗ್ರಂಥಮಾಲೆ ಮುರಘಾಮಠ, ಧಾರವಾಡ ೧೯೫೬ (ಪ್ರ. ಆ.)

ಲಿಂಗವಿಕಳಾವಸ್ಥೆಯ ವಚನಗಳು
ಎಳಮಲೆಯ ಗುರುಶಾಂತದೇವರು
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೮೩(ಪ್ರ. ಆ.)

ಲಿಂಗಸಾವಧಾನದ ವಚನಗಳು
ಸಣ್ಣ ಬರಹ ಗುರುಬಸವರಾಜದೇವರು
(ಇದು ವಚನ ಸಂಕಲನ ಸಂಪುಟ-೧ ಈ ಕೃತಿಯ ಒಂದು ಭಾಗ)
ಸಂ: ಡಾ. ಬಿ.ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೯೦(ಪ್ರ. ಆ.)

ಲಿಂಗಸ್ತೋತ್ರದ ವಚನಗಳು
ಸಂಪಾದನೆಯ ಸಿದ್ಧವೀರಣ್ಣದೇವರು
ಸಂ: ಶ್ರೀ ವೀರಭದ್ರಪ್ಪ ಕೊಪ್ಪಳ
ಪ್ರ: ಶ್ರೀ ಗುರುಬಸವ ಮಂಟಪ ಟ್ರಸ್ಟ ಕಮೀಟಿ, ಹುಬ್ಬಳ್ಳಿ, ೧೯೬೪ (ಪ್ರ. ಆ.)

ವಚನಸಾರ
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೮೯(ಪ್ರ. ಆ.)

ವಚನಾಮೃತಸಾರ
ಸಂ: ಪ್ರೊ. ಕಾಶಿ ಪುಟ್ಟಸೋಮಾರಾಧ್ಯ
ಡಾ. ವೀರಣ್ಣ ರಾಜೂರ
ಪ್ರ: ಮಂಗಳ ಪ್ರಕಾಶನ, ಕಲ್ಯಾಣನಗರ, ಧಾರವಾಡ, ೧೯೭೯ (ಪ್ರ. ಆ.)

ವಚನೈಕೋತ್ತರ ಶತಸ್ಥಲ
ಚೆನ್ನಬಸವಣ್ಣ
ಸಂ: ಜಿ.ಎ. ಶಿವಲಿಂಗಯ್ಯ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೮೩(ಪ್ರ. ಆ.)

ವಿರತಾಚರಣೆಯ ಶರಣಸಂಬಂಧದ ವಚನಗಳು
ಶಂಕರದೇವರು
ಸಂ: ಪಿ.ಎಂ. ಗಿರಿರಾಜು
ಪ್ರ: ಶರಣಸಂತಾನ ಸಂಪಾದನ, ಶರಣಸಂತಾನ (ತ್ರೈಮಾಸಿಕ) ೪೪೭, ಸಂತೇಪೇಟೆ, ಮೈಸೂರು, ೧೯೭೯ (ಪ್ರ. ಆ.)

ವಿಶೇಷಾನುಭವಷಟ್‌ಸ್ಥಲ
ಚೆನ್ನವೀರಾಚಾರ್ಯ
ಸಂ: ಡಾ. ಆರ್. ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧ (ಪ್ರ. ಆ.)

ವೀರಶೈವ ಚಿಂತಾಮಣಿ
ಮಹದ್ದೇವಯೋಗಿ
ಸಂ: ಡಾ. ಆರ್.ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೭ (ಪ್ರ. ಆ.)

ಶಿವಮಹಿಮಾಸ್ತೋತ್ರದ ವಚನ
ವೀರಸಂಗಯ್ಯ
ಸಂ: ವೀರಣ್ಣ ರಾಜೂರ
ಕರ್ನಾಟಕ ಭಾರತಿ ೧೯-೨, ೧೯೮೬
ಪ್ರ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶಿವಯೋಗ ಚಿಂತಾಮಣಿ
ಜಾಳಿಗೆಕಂತೆ ಸಿದ್ಧಲಿಂಗಶಿವಯೋಗಿ
ಸಂ: ಡಾ. ಉಮಾದೇವಿ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೮೩(ಪ್ರ. ಆ.)

ಶೀಲ ಸಂಪಾದನೆ
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೮೪(ಪ್ರ. ಆ.)

ಶೂನ್ಯ ಸಂಪಾದನೆ
ಶಿವಗಣಪ್ರಸಾದಿ ಮಹಾದೇವಯ್ಯ
ಸಂ: ಆರ್. ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೧ (ಪ್ರ. ಆ.)

ಶೂನ್ಯಸಂಪಾದನೆ
ಗುಮ್ಮಳಾಪುರದ ಸಿದ್ಧಲಿಂಗದೇವರು
ಸಂ: ಡಾ. ಆರ್.ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೨ (ಪ್ರ. ಆ.)

ಶೂನ್ಯಸಂಪಾದನೆ
ಗೂಳೂರು ಸಿದ್ಧವೀರಣ್ಣೊಡೆಯರು
ಸಂ: ಪ್ರೊ. ಸಂ. ಶಿ. ಭೂಸನೂರಮಠ
ಪ್ರ: ರಾವೂರ ಶ್ರೀ ಸಿದ್ಧಲಿಂಗೇಶ್ವರಮಠ ಮತ್ತು ಆದವಾನಿಯ ಕಲ್ಲುಮಠದ ಅಧಿಪತಿಗಳು
೧೯೮೬(ಪ್ರ. ಆ.)

ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತಚಾರಿತ್ರ ಸಂಪಾದನೆಯ ವಚನಗಳು
ಬೋಳಬಸವೇಶ್ವರದೇವರು
ಸಂ: ಪ್ರೊ. ಎಸ್. ಉಮಾಪತಿ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೮೪(ಪ್ರ. ಆ.)

ಷಟ್‌ಸ್ಥಲ ಸ್ತೋತ್ರದ ವಚನಗಳು
ಎಳಮಲೆಯ ಗುರುಶಾಂತದೇವರು
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೮೩(ಪ್ರ. ಆ.)

ಷಟ್ಪ್ರಕಾರ ಸಂಗ್ರಹ
ಶಾಂತದೇವರು
ಸಂ: ಜಿ.ಎ. ಶಿವಲಿಂಗಯ್ಯ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ ೧೯೮೭(ಪ್ರ. ಆ.)

ಸಂಬಂಧಾಚಾರಣೆ ವಚನಗಳು
ಸಂ: ಪಿ.ಎಂ. ಗಿರಿರಾಜು
ಪ್ರ: ಶರಣಸಂತಾನ ಸಂಪಾದನ, ಶರಣ ಸಂತಾನ (ತ್ರೈಮಾಸಿಕ)
೪೪೭-ಸಂತೇಪೇಟ, ಮೈಸೂರು
೧೯೮೬ (ಪ್ರ.ಆ.)

ಸಕಲಪುರಾತನರ ವಚನಗಳು-೧
ಸಂ: ಡಾ. ಆರ್.ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೮ (ಪ್ರ. ಆ.)

ಸಕಲಪುರಾತನರ ವಚನಗಳು-೨
ಸಂ: ಡಾ. ಎಂ.ಎಸ್. ಸುಂಕಾಪೂರ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೬(ಪ್ರ. ಆ.)

ಸಕಲಪುರಾತನರ ವಚನಗಳು-೩
ಸಂ: ಡಾ. ಎಂ. ಎಸ್. ಸುಂಕಾಪೂರ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮ (ಪ್ರ. ಆ.)

ಸಕಲಪುರಾತನರ ಬೆಡಗಿನ ವಚನಗಳು
ಸಿಂಗಳದ ಸಿದ್ಧಬಸವರಾಜದೇವರು
ಸಂ: ಡಾ. ಎಂ.ಎಸ್. ಸುಂಕಾಪೂರ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮ (ಪ್ರ. ಆ.)

ಸುಖಸಂಪಾದನೆ ವಚನಗಳು
ಸಂ: ಡಾ. ಬಿ.ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೮೭(ಪ್ರ. ಆ.)

ಅಪ್ರಕಟಿತ

ಏಕೋತ್ತರ ಶತಸ್ಥಲ ಬೊಲ್ಲಿ
(ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ)

ಏಕೋತ್ತರ ಶತಸ್ಥಲಸಾರಾಮೃತ
ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿ
(ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ)

ಜ್ಞಾನ ಷಟ್ ಸ್ಥಲಸಾರ
ಗುರುಶಂಕರಸ್ವಾಮಿಗಳು
(ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ಹಸ್ತಪ್ರತಿ)

ನಿಷ್ಕಳಲಿಂಗ ಚಿದಾನಂದಲೀಲೆ(ಕಾವ್ಯ)
(ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ)

ಮೋಕ್ಷದರ್ಶನ ಸಂಗ್ರಹ (ಶಾಸ್ತ್ರಕಾವ್ಯ)
(ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ)

ವೀರಶೈವ ಶಿಖಾಮಣಿ (ಶಾಸ್ತ್ರಕಾವ್ಯ)
(ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ)

ವೀರಶೈವಾಭರಣ (ಶಾಸ್ತ್ರಕಾವ್ಯ)
ಗೌರವಾಂಕ
(ಜಿ.ಎ. ಶಿವಲಿಂಗಯ್ಯ ಮೈಸೂರು ಅವರ ಹಸ್ತಪ್ರತಿ)


ಶಿವಾಧಿಕ್ಯ ಪುರಾಣ (ಕಾವ್ಯ)
ಬಸವಲಿಂಗ
(ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ)

ಶೂನ್ಯಸಂಪಾದನೆ
ಹಲಗೆದೇವರು
(ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ)

ಪತ್ರಿಕೆ

ತರಳಬಾಳು: ೧-೨. ೩-೩-
ಪ್ರಬುದ್ಧ ಕರ್ನಾಟಕ: ೫೬-೩,೫೯--೨
ಪ್ರಸಾದ: ೨೪-೭
ಬಸವಪಥ: ೨-೩,೩-೪, ೨-೬ ೩-೫, ೪-೯, ೫-೧, ೭-೫
ಹೇಮಕೂಟ: ೧-೯

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ: 97390 67359